೧೩ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನ ಸಂಪುಟ ೧

ಸಂಪಾದಕ
ಡಾ. ವೀರಣ್ಣ ರಾಜೂರ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಎಂಟು

(ಬಸವೋತ್ತರ ಯುಗ)

೧. ಬಸವಣ್ಣನವರ ವಚನಸಂಪುಟ - ಸಂ . ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ · ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ . ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎಸ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಎಂಟು

(ಬಸವೋತ್ತರ ಯುಗ)

ಸಂಪಾದಕ

**ಡಾ. ವೀರಣ್ಣ ರಾಜೂರ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : ENTU :** Complete Vachanas of 5 Vachanakaras of Post Basaveshvara Period, Ed. by Dr. Veeranna Rajur, Professor, Institute of Kannada Studies, Karnataka University, Dharwad - 580 003 and Published by The Administrative Officer, Kannada Pusthaka Pradhikara (Kannada Book Authority), Pampa Mahakavi Road, Chamarajpet, Bangalore - 560 018

ISBN : 81-7713-098-6

Pp. Lii + 638

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೮೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ
ತ್ವರಿತ ಮುದ್ರಣಾಲಯ
ಆಫ್‌ಸೆಟ್ ಪ್ರಿಂಟರ್ಸ್, ಗದಗ

ಮುದ್ರಣ
**ಸಿದ್ಧೇಶ್ವರ ಪ್ರಿಂಟರ್ಸ್**
೧೭೧, ಕಾಟನ್‌ಪೇಟೆ ಮುಖ್ಯರಸ್ತೆ
ಬೆಂಗಳೂರು - ೫೬೦ ೦೫೩
✆ : ೬೭೦೫೭೯೩

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ

❊

## ಸಂಪಾದಕ ಮಂಡಳಿ


ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

❊

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

❊

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

✲

# ಬಿನ್ನಹ

**ರಾಣಿ ಸತೀಶ್**

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ಪ್ರಕಾಶಕರ ಮಾತು

---

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಅನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■ ■

※

# ಸಂಪಾದಕೀಯ

**ಡಾ. ಎಂ. ಎಂ. ಕಲಬುರ್ಗಿ**
ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪ ದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ಸಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಔಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

# ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎನ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

■■

*

# ಪ್ರಸ್ತಾವನೆ

ಇದು 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಡಿಯಲ್ಲಿ ಸಿದ್ಧಪಡಿಸಿದ ಎಂಟನೆಯ 'ಸಂಕೀರ್ಣ ವಚನಸಂಪುಟ'. ಇದರಲ್ಲಿ ಬಸವೋತ್ತರಯುಗದ ಆರು ಜನ ವಚನಕಾರರ ೧೧೨೬ ವಚನಗಳು ಸಂಗ್ರಹವಾಗಿವೆ.[೧]

| | | |
|---|---|---|
| ೧. | ಬಾಲಸಂಗಯ್ಯ | ೯೨೦ |
| ೨. | ಬೊಮ್ಮಗೊಂಡೇಶ್ವರ | ೧ |
| ೩. | ಭಿಕ್ಷದ ಸಂಗಯ್ಯ | ೧ |
| ೪. | ಮಡಿವಾಳಪ್ಪ | ೭೮ |
| ೫. | ಮುದ್ವೀರಸ್ವಾಮಿ | ೧ |
| ೬. | ಮುಮ್ಮಡಿ ಕಾರ್ಯೇಂದ್ರ | ೧೨೫ |

'ಅಪ್ರಮಾಣ ಕೂಡಲಸಂಗಮದೇವ' ಎಂಬ ಅಂಕಿತದ ವಚನಗಳ ನಿಜಕರ್ತೃ 'ಅಪ್ರಮಾಣದೇವ'ನೆಂಬುದು ಬೆಳಕಿಗೆ ಬಂದುದಲ್ಲದೆ, ಈತನ ೪೦೦ರಷ್ಟು ಹೊಸ ವಚನಗಳು ಪ್ರಥಮ ಬಾರಿಗೆ ಪ್ರಕಟವಾಗುತ್ತಿರುವುದು, ೧೯೦೦ರಷ್ಟು ಹಿಂದೆಯೇ ಅಪೂರ್ಣ ರೂಪದಲ್ಲಿ ಮುದ್ರಣವಾಗಿ ಈಗ ಪ್ರತಿಗಳು ಲಭ್ಯವಿಲ್ಲದೇ ಇರುವ 'ವೇದಸಂಜೀವಿನಿ' ಎಂಬ ವಚನಕೃತಿ ಇಂದು ಸಮಗ್ರವಾಗಿ ಶುದ್ಧರೂಪದಲ್ಲಿ ಹೊರಬರುತ್ತಿರುವುದು, ಬೊಮ್ಮಗೊಂಡೇಶ್ವರ ಎಂಬ ಹೊಸ ವಚನಕಾರನ ಒಂದು ವಚನ ಸೇರಿರುವುದು ಈ ಸಂಪುಟದ ವಿಶೇಷ.

**ಬಾಲಸಂಗಯ್ಯ :**

ಬಾಲಸಂಗಯ್ಯ ಬಸವೋತ್ತರಯುಗದ ಒಬ್ಬ ಮಹತ್ವದ ವಚನಕಾರ. ಈತನ ಹೆಸರು-ಕಾಲ-ಜೀವನಸಂಗತಿಗಳ ಬಗೆಗೆ ಇದುವರೆಗೆ ಸ್ಪಷ್ಟವಾದ ಚಿತ್ರ ಮೂಡಿಲ್ಲ.

೧೮೮೩ರಲ್ಲಿ 'ಶಿಖಾರತ್ನಪ್ರಕಾಶ' ಎಂಬ ಹೆಸರಿನಲ್ಲಿ 'ಅಪ್ರಮಾಣ ಕೂಡಲ ಸಂಗಮದೇವ' ಅಂಕಿತದ ಮೂವತ್ತೈದು ವಚನಗಳಿರುವ ಕೃತಿಯೊಂದು ಪ್ರಕಟ ವಾಗಿದ್ದು, ಅದರ ಕರ್ತೃ 'ಕೂಡಲಸಂಗಮಾವಧೂತ' ಎಂದು ತಿಳಿಸಲಾಗಿದೆ.[೨]

ಕವಿಚರಿತೆಕಾರರು 'ಸರ್ವಾಗಮಶಿಖಾಮಣಿ' ಎಂಬ ಹೆಸರಿನ ಕೃತಿಯನ್ನು ಪರಿಚಯಿಸುತ್ತ ಇದರಲ್ಲಿ 'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ೫೯೦ ವಚನಗಳಿವೆಯೆಂದೂ ಅದರ ಕರ್ತೃವಾರೋ ತಿಳಿಯದೆಂದೂ ಸೂಚಿಸಿದ್ದಾರೆ.[೩]

---

೧. ಈ ಸಂಖ್ಯೆಯಲ್ಲಿ ಐದು ಸ್ವರವಚನಗಳೂ ಸೇರಿವೆ, ಅವುಗಳ ಕರ್ತೃ ಮಡಿವಾಳಪ್ಪ.

೨. ವಚನ ಸಾಹಿತ್ಯದ ಪ್ರಕಟನೆಯ ಇತಿಹಾಸ : ಸಂ. ಡಾ. ಎಂ. ಎಂ. ಕಲಬುರ್ಗಿ,
ಪು : ವೀರಶೈವ ಅಧ್ಯಯನ ಸಂಸ್ಥೆ, ಜ. ತೋಂಟದಾರ್ಯಮಠ, ಗದಗ (೧೯೯೧) ಪು. ೩

೩. ಕರ್ಣಾಟಕ ಕವಿಚರಿತೆ (ಸಂಪುಟ-೨) ಪು. ೫೫೧

೧೯೭೬ರಲ್ಲಿ ಈ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿದ ಡಾ. ಎಂ. ಎಸ್. ಸುಂಕಾಪುರ ಅವರು ಅದರ ಕರ್ತೃವನ್ನು ಕುರಿತು ವಿಚಾರಿಸುತ್ತ ''ಅಪ್ರಮಾಣ ಕೂಡಲಸಂಗಮದೇವ ಎಂಬ ಅಂಕಿತವನ್ನು ಹೊಂದಿದ ವಚನಗಳು 'ಬಾಲಸಂಗಯ್ಯನ ವಚನ'ಗಳೆಂದು ರೂಢಿಪ್ರಸಿದ್ಧವಾಗಿವೆ. ಈ ವಚನಗಳ ಹಸ್ತಪ್ರತಿಯೊಂದರ ಆದಿಯಲ್ಲಿ 'ಬಾಲಸಂಗಯ್ಯನ ವಚನಗಳು' ಎಂದು ಹೇಳಿರುವುದೇ ಈ ರೂಢಿಯ ನುಡಿಗೆ ಮೂಲಾಧಾರ. ಈತನು ತನ್ನ ಕೃತಿಯಲ್ಲಿ ಎಲ್ಲೂ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಅನ್ಯರೂ ಈ ವಿಷಯದ ಮಾತೆತ್ತಿಲ್ಲ. ನಾವು ರೂಢಿಯ ಮಾತನ್ನೇ ನಂಬಿ ಈ ವಚನಗಳಿಗೆ 'ಬಾಲಸಂಗಯ್ಯನ ವಚನಗಳು' ಎಂದು ಕರೆದಿದ್ದೇವೆ'' ಎಂದು ಹೇಳಿದ್ದಾರೆ.[೪] ಈ ಹೇಳಿಕೆಯನ್ನೇ ನಂತರದ ವಿದ್ವಾಂಸರೆಲ್ಲ ನಂಬಿ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಪಿ. ಎಂ. ಗಿರಿರಾಜು ಅವರು ಮಾತ್ರ ತಮ್ಮಲ್ಲಿರುವ ೮೧೫ ವಚನಗಳನ್ನೊಳಗೊಂಡ 'ಸಕಲಾಗಮಶಿಖಾಮಣಿ' ಎಂಬ ಹೆಸರಿನ ಗ್ರಂಥದ ಹಸ್ತಪ್ರತಿಯನ್ನು ಗಮನಿಸಿ, ''ಅಪ್ರಮಾಣ ಕೂಡಲಸಂಗಮದೇವ' ಎಂಬ ಅಂಕಿತ 'ಅಪ್ರಮಾಣದೇವರ'ದೇ ಹೊರತು 'ಬಾಲಸಂಗಯ್ಯ'ನದೆಂಬುದು ನಿರಾಧಾರ'' ಎಂದು ಅಭಿಪ್ರಾಯಪಟ್ಟಿದ್ದಾರೆ.[೫]

ಮೇಲಿನ ಈ ಅಭಿಪ್ರಾಯಗಳಿಂದ 'ಅಪ್ರಮಾಣಕೂಡಲಸಂಗಮದೇವ' ಅಂಕಿತದ ವಚನಗಳ ಕರ್ತೃವಿನ ವಿಷಯದಲ್ಲಿ ಏಕಾಭಿಪ್ರಾಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಂದು ಈ ಕುರಿತು ದೊರಕುವ ನೂತನ ಆಧಾರಾಂಶಗಳ ಹಿನ್ನೆಲೆಯಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಹೀಗೆ ಕಂಡುಕೊಳ್ಳಬಹುದು :

'ಶಿಖಾರತ್ನ ಪ್ರಕಾಶ'ಕ್ಕೆ ಕೊಟ್ಟ 'ಕೂಡಲಸಂಗಮಾವಧೂತ' ಎಂಬುದು ಅದರ ಕರ್ತೃವಿನ ನಿಜನಾಮವಾಗಿರದೆ ಕಲ್ಪಿತ ಹೆಸರಾಗಿರಬೇಕು. ವಚನಗಳ ಅಂಕಿತದ ಮೇಲಿಂದ ಸಂಪಾದಕರು ಹಾಗೆ ಊಹಿಸಿರಬೇಕು. ಇಲ್ಲವೆ ಮೂಲ ಹಸ್ತಪ್ರತಿಯಲ್ಲಿಯೇ ಅದು ತಪ್ಪಾಗಿ ನಮೂದಾಗಿರಬೇಕು. ಇಂಥ ತಪ್ಪು ಉಲ್ಲೇಖಗಳಿಗೆ ಹಸ್ತಪ್ರತಿಗಳಲ್ಲಿ ಅನೇಕ ಉದಾಹರಣೆಗಳು ದೊರಕುತ್ತವೆ.[೬] ಇದು ಕರ್ತೃವಿನ ಹೆಸರಲ್ಲ ಎಂಬುದಕ್ಕೆ ಇನ್ನೂ ಕೆಲವು ಆಧಾರಗಳೆಂದರೆ, ಇದೇ ಕೃತಿಗೆ ಮೈಸೂರು ವಿಶ್ವವಿದ್ಯಾಲಯದ ಒಂದು ಹಸ್ತಪ್ರತಿಯ ಆದಿಯಲ್ಲಿ ''ಅಲ್ಲಮ ಮಹಾಪ್ರಭುಸ್ವಾಮಿಗಳು ನಿರೂಪಿಸಿದ ಸಕಲಾಗಮ ಸಿದ್ಧಾಂತ ಶಿಖಾರತ್ನ ಗ್ರಂಥ'' ಎಂದು ಕರೆದಿದ್ದರೆ,[೭] ಧಾರವಾಡ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ[೮] ಮತ್ತು ಕನ್ನಡ ಅಧ್ಯಯನ ಪೀಠ[೯] ಹಾಗೂ ಹೈದ್ರಾಬಾದಿನ

---

೪. ಬಾಲಸಂಗಯ್ಯನ ವಚನಗಳು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಸ್ತಾವನೆ. ಪು. iii

೫. ಚಿದೈಶ್ವರ್ಯ ಚಿದಾಭರಣ : ಶರಣ ಸಂತಾನ ಪ್ರಕಾಶನ, ಮೈಸೂರು, ಪು. ೨೪೯.

೬. 'ಗುಹೇಶ್ವರ' ಎಂಬ ಅಂಕಿತವಿರುವ ವಚನಗಳಿಗೆ 'ಗುಹೇಶ್ವರಯ್ಯನ ವಚನಗಳು' ಎಂದು, 'ದಾಸಯ್ಯಪ್ರಿಯ ರಾಮನಾಥ' ಎಂಬ ಅಂಕಿತದ ವಚನಗಳಿಗೆ 'ದಾಸಯ್ಯನ ವಚನಗಳು' ಎಂದು ಕರೆದಿರುವುದು ಮತ್ತು 'ನಿರಾಲಂಬಪ್ರಭುದೇವ'ನ ವಚನಗಳಿಗೆ 'ಬಾಲಸಂಗಯ್ಯನ ವಚನಗಳು' ಎಂದು ಕರೆದಿರುವುದು ಇದಕ್ಕೆ ನಿದರ್ಶನ.

೭. ಕೆ. ಬಿ. ೫೦೮

೮. ಕೆ.ಆರ್.ಆಯ್. ಹಸ್ತಪ್ರತಿ ಸೂಚಿ ಸಂ. ೧೨. (೧೯೮೩) ನಂ. ೧೭೫.

೯. ಕಅಪೀ. ತಾಪ್ರ. ೪೩೩/೧೨

ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಪ್ರತಿಗಳಲ್ಲಿ[೧೦] ಕೃರ್ತವಿನ ಹೆಸರನ್ನು ಹೇಳದೇ ಬಿಟ್ಟಿರುವುದು, ಹಾಗೆಯೇ 'ಕೂಡಲಸಂಗಮಾವಧೂತ' ಎಂಬ ಹೆಸರು ವೀರಶೈವಕ್ಕೆ ಹೊಂದಿಕೆಯಾಗದೆ ಇರುವುದು.

ಕವಿಚರಿತೆಕಾರರು ಗಮನಿಸಿದ ಕೃತಿಯ ಆರಂಭದಲ್ಲಿ ಕರ್ತೃವಿನ ಹೆಸರು ಸೂಚಿಸದ ಕಾರಣ ಅವರು ಅದರ ಕರ್ತೃ ಅಜ್ಞಾತವೆಂದು ನಿರ್ಧರಿಸಲು ಕಾರಣವಾಗಿದೆ.

ಡಾ. ಎಂ. ಎಸ್. ಸುಂಕಾಪುರ ಅವರು ''ಒಂದು ಹಸ್ತಪ್ರತಿಯ ಆದಿಯಲ್ಲಿರುವ 'ಬಾಲಸಂಗಯ್ಯನ ವಚನಗಳು' ಎಂಬ ತಲೆಬರಹವನ್ನು ಅನುಸರಿಸಿ ಈ ಕೃತಿಗೆ ಈ ಹೆಸರನ್ನು ಇಡಲಾಗಿದೆ'' ಎಂದು ತಿಳಿಸಿದ್ದಾರೆ. ಅಲ್ಲದೆ ''ಇದು ರೂಢಿಪ್ರಸಿದ್ಧವಾಗಿದೆ ; ಈ ರೂಢಿಯ ಮಾತನ್ನೇ ನಾವು ನಂಬಿ ನಡೆದಿದ್ದೇವೆ'' ಎಂದಿದ್ದಾರೆ. ಆದರೆ ತಾವು ಪರಿಷ್ಕರಣಕ್ಕೆ ಬಳಸಿಕೊಂಡ ಹಸ್ತಪ್ರತಿಗಳ ವಿವರ ಕೊಟ್ಟಿಲ್ಲ. 'ಅರಿಕೆ'ಯಲ್ಲಿ ''ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸಂಗ್ರಹದಲ್ಲಿರುವ ಎರಡು ಹಸ್ತಪ್ರತಿಗಳ ಸಹಾಯದಿಂದ ಈ ಕೃತಿಯನ್ನು ಸಂಶೋಧಿಸಿ ಪ್ರಕಟಿಸಿದ್ದೇವೆ'' ಎಂದಿದ್ದಾರೆ. ಹಸ್ತಪ್ರತಿ ಸಂಖ್ಯೆ ಸೂಚಿಸಿಲ್ಲ. ಪಾಠಾಂತರ ಗುರುತಿಸುವಲ್ಲಿ ಕೊಟ್ಟ ೭೬ ಮತ್ತು ೫೪೬ ಕ್ರಮಾಂಕಿನ ಹಸ್ತಪ್ರತಿಗಳೇ ಅವು ಎಂದು ತಿಳಿದುಕೊಳ್ಳಬೇಕು. ಈ ಎರಡೂ ಹಸ್ತಪ್ರತಿಗಳನ್ನು ಪರಿಶೀಲಿಸಿದರೆ ಒಂದಕ್ಕೆ 'ಸಕಲಾಗಮಶಿಖಾಮಣಿ' ಎಂಬ ತಲೆಬರಹವಿದ್ದರೆ, ಮತ್ತೊಂದಕ್ಕೆ ಯಾವುದೇ ಹೆಸರಿಲ್ಲ. ಹಾಗಾದರೆ ಡಾ. ಸುಂಕಾಪುರ ಅವರು ಗಮನಿಸಿದ– 'ಬಾಲಸಂಗಯ್ಯನ ವಚನಗಳು' ಎಂಬ ತಲೆಬರಹವಿರುವ ಹಸ್ತಪ್ರತಿ ಯಾವುದು ?

ಇಂದು 'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ವಚನಗಳಿರುವ ಅನೇಕ ಕಟ್ಟುಗಳು ಸಿಕ್ಕುತ್ತವೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠವಲ್ಲಿ ಇಂಥ ೧೬ ಹಸ್ತಪ್ರತಿಗಳಿವೆ. ಅವುಗಳನ್ನು ಪರಿಶೀಲಿಸಿದಾಗ ಕೆಲವು ಸ್ವಾರಸ್ಯಕರ ಸಂಗತಿಗಳು ನನ್ನ ಗಮನಕ್ಕೆ ಬಂದು, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ತುಂಬ ಸಹಾಯ ನೀಡಿದವು. ಆ ಕಟ್ಟುಗಳಲ್ಲಿ ಎರಡು ವಿಧಗಳಿವೆ : ಕೆಲವು 'ಸಕಲಾಗಮ ಶಿಖಾಮಣಿ' ಎಂಬ ಹೆಸರನ್ನು ಹೊಂದಿದ್ದರೆ, ಮತ್ತೆ ಕೆಲವು 'ಬಾಲಸಂಗಯ್ಯನ ವಚನಗಳು' ಎಂಬ ಹೆಸರನ್ನು ಪಡೆದಿವೆ. ಬಾಲಸಂಗಯ್ಯನ ವಚನಗಳು ಎಂಬ ಹೆಸರು ಹೊಂದಿದ ಕಟ್ಟುಗಳಲ್ಲಿಯೇ ಮತ್ತೆ ಎರಡು ಬಗೆಗಳು ಕಂಡುಬರುತ್ತವೆ. ಒಂದು ಗುಂಪಿನ ಕಟ್ಟುಗಳಲ್ಲಿ 'ಅಪ್ರಮಾಣ ಕೂಡಲಸಂಗದೇವ' ಇಲ್ಲವೆ 'ಅಪ್ರಮಾಣ ಕೂಡಲಚೆನ್ನಸಂಗಮದೇವ' ಎಂಬ ಅಂಕಿತದ ವಚನಗಳಿದ್ದರೆ, ಇನ್ನೊಂದು ಗುಂಪಿನ ಕಟ್ಟುಗಳಲ್ಲಿ ಇವಕ್ಕೆ ಹೊರತಾದ ಬೇರೆ ಅಂಕಿತದ ವಚನಗಳು ಅಳವಟ್ಟಿವೆ. ಉದಾ : ೨೯೫೯ ನೆಯ ಕಾಗದ ಪ್ರತಿಯಲ್ಲಿ 'ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ' ಅಂಕಿತದ ೧೧ ವಚನಗಳಿಗೆ 'ಬಾಲಸಂಗಯ್ಯನ ವಚನಗಳು' ಎಂದು ಕರೆಯಲಾಗಿದೆ. ಆದರೆ ಇವು ನಿರಾಲಂಬಪ್ರಭುದೇವನ ವಚನಗಳಾಗಿವೆ. ಹಾಗೆಯೇ 'ಶಾಂಭವೀಚಕ್ರನಿರ್ಣಯ' ಎಂಬ 'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬ

---

೧೦. ಉಸ್ಮಾನಿಯಾ ವಿಶ್ವವಿದ್ಯಾಲಯದ ವರ್ಣನಾತ್ಮಕ ಹಸ್ತಪ್ರತಿ ಸೂಚಿ : ಪು. ೧೫೭, ಕ್ರಮಾಂಕ ೧೩೧. ಹಸ್ತಪ್ರತಿ ನಂ. ೧೧೫೮ (೧೯೬೬)

ಅಂಕಿತವಿರುವ ಒಂದು ವಚನದ ಕರ್ತೃ 'ಬಾಲಸಂಗಯ್ಯ' ಎಂದು ೩೭೬೬ ನೆಯ ಕ್ರಮಾಂಕದ ಕಾಗದ ಪ್ರತಿಯಲ್ಲಿ ತಿಳಿಸಲಾಗಿದೆ. ಈ ವಚನದ ಒಡಲಲ್ಲಿ ಕೃತಿಕಾರ ತನ್ನ ಗುರುಪರಂಪರೆಯನ್ನು ಹೇಳಿಕೊಂಡಿದ್ದಾನೆ. ಅದರ ಪ್ರಕಾರ, ಚೆನ್ನ ಸದಾಶಿವ ಯೋಗೀಶ್ವರ ಮೂಲಗುರು. ಅವರ ಶಿಷ್ಯ ಹರದನಹಳ್ಳಿ ಪ್ರಭುಲಿಂಗಸ್ವಾಮಿ, ಅವರ ಶಿಷ್ಯ ನಿಜಾನಂದ ಗುರುಚೆನ್ನಯ್ಯ, ಅವರ ಗುರು ಸಿದ್ಧವೀರೇಶ್ವರದೇವರು, ಅವರ ಕರಕಮಲದಲ್ಲಿ ಉದಯವಾದ ಬಾಲಸಂಗಯ್ಯ ನಾನು ಎಂದು ತಿಳಿದುಬರುತ್ತದೆ. ಇಲ್ಲಿ 'ಬಾಲಸಂಗಯ್ಯ ನಾನು' ಎಂಬ ಹೇಳಿಕೆಯನ್ನು ಎರಡು ರೀತಿಯಲ್ಲಿ ಅರ್ಥೈಸಲು ಬರುತ್ತದೆ. ಒಂದು : 'ಬಾಲ' ಅಂದರೆ 'ಕಂದ', 'ಸಂಗಯ್ಯ' ನಾನು; ಎರಡು: 'ಬಾಲಸಂಗಯ್ಯ' ಎಂಬ ಹೆಸರುಳ್ಳ ನಾನು. ಈ ವಚನ 'ಭಿಕ್ಷದಸಂಗಯ್ಯ'ನ ಹೆಸರಿನಲ್ಲಿ ಈಗಾಗಲೇ ಪ್ರಕಟವಾಗಿದೆ. 'ಬಾಲಸಂಗಯ್ಯನ ವಚನಗಳು' ಹೆಸರಿನ ಈ ಕೃತಿಗಳಲ್ಲಿರುವ ವಚನ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದು ಕಡಿಮೆಯೆಂದರೆ ೧೫, ಹೆಚ್ಚೆಂದರೆ ೩೫ ಮಾತ್ರ. ಇವೆಲ್ಲ ಹೆಚ್ಚಾಗಿ ಕಾಗದಪ್ರತಿಗಳಲ್ಲಿವೆ.

'ಸಕಲಾಗಮ ಶಿಖಾಮಣಿ' ಎಂಬ ಹೆಸರಿನ ಕಟ್ಟುಗಳಲ್ಲಿಯೂ ಎರಡು ಪರಂಪರೆಗಳು ಕಂಡುಬರುತ್ತವೆ. ಒಂದು ಪರಂಪರೆಗೆ ಸೇರಿದ ಕಟ್ಟುಗಳಲ್ಲಿ ೮೧೫ ವಚನಗಳಿದ್ದರೆ, ಮತ್ತೊಂದು ಪರಂಪರೆಯ ಕಟ್ಟುಗಳಲ್ಲಿ ೫೧೪, ೫೧೬, ೫೨೨, ೫೨೩, ೫೬೦, ೫೯೦ ವಚನಗಳಿವೆ. ಇವು ಮೊದಲ ಪರಂಪರೆಯ ಕಟ್ಟುಗಳ ಸಂಗ್ರಹರೂಪವೆನಿಸಿವೆ. ತಾಳೆಗರಿ ಮತ್ತು ಕಾಗದ ಎರಡು ವಿಧದ ಪ್ರತಿಗಳಲ್ಲಿಯೂ ಇವು ದೊರೆಯುತ್ತವೆ. ನಾನು ನೋಡಿದ ಈ ಹೆಸರಿನ ಯಾವುದೇ ಕಟ್ಟಿನ ತಲೆಯಮೇಲೆ, ಕೃತಿಯ ಆರಂಭ ಮತ್ತು ಅಂತ್ಯದಲ್ಲಿ 'ಬಾಲಸಂಗಯ್ಯನ ವಚನಗಳು' ಎಂಬ ಹೆಸರಿಲ್ಲ. ಹಾಗಾದರೆ ಮೊದಲ ಗುಂಪಿನ ಕೃತಿಗಳಿಗೆ 'ಬಾಲಸಂಗಯ್ಯನ ವಚನಗಳು' ಎಂಬ ಹೆಸರು ಬರಲು ಕಾರಣವೇನು ? ಇದಕ್ಕೆ ಪರಿಹಾರವನ್ನು 'ಮುಕ್ತಿಕಂಠಾಭರಣ' ನೀಡುತ್ತದೆ. ಈ ಕೃತಿಯಲ್ಲಿ 'ಬಾಲಸಂಗಯ್ಯ' ಎಂಬ ಹೆಸರಿನಡಿಯಲ್ಲಿ ೨೦ ವಚನಗಳು ಸಂಕಲನಗೊಂಡಿವೆ. ಅವುಗಳ ಅಂಕಿತ 'ಅಗಮ್ಯ ಅಗೋಚಕ ಅಪ್ರಮಾಣ ಕೂಡಲಸಂಗಮದೇವ' ಎಂಗಿದೆ. ಇಲ್ಲಿನ ವಚನಗಳನ್ನೇ ಗುರುಸಿದ್ಧದೇವ ತನ್ನ 'ಚಿದೈಶ್ವರ್ಯ ಚಿದಾಭರಣ'ದಲ್ಲಿ ಸೇರಿಸಿಕೊಂಡಿದ್ದಾನೆ. ಇವೇ ವಚನಗಳಲ್ಲಿ ಕೆಲವನ್ನು ಅಜ್ಞಾತ ಸಂಕಲನಕಾರನ 'ಅದ್ವೈತಾನಂದದ ವಚನಗಳು' ಕೃತಿಯಲ್ಲಿಯೂ ಅಳವಡಿಸಿಕೊಳ್ಳಲಾಗಿದೆ. 'ಶಿಖಾರತ್ನಪ್ರಕಾಶ' ಎಂಬ ಕೃತಿಯಲ್ಲಿಯೂ ಇವೇ ವಚನಗಳಿವೆ.[೧೧] ಇವುಗಳನ್ನೇ ಹಸ್ತಪ್ರತಿಕಾರರು ಪ್ರತ್ಯೇಕಿಸಿ ತೆಗೆದು 'ಬಾಲಸಂಗಯ್ಯನ ವಚನಗಳು' ಎಂಬ ಹೆಸರಿನಡಿಯಲ್ಲಿ ಪ್ರತಿಮಾಡುತ್ತ ಬಂದಿದ್ದಾರೆ. ಹೀಗಾಗಿ ಬಾಲಸಂಗಯ್ಯನ ವಚನಗಳ ಪರಂಪರೆಯೊಂದು ಹಸ್ತಪ್ರತಿಗಳಲ್ಲಿ ಬೆಳೆದು ಬರಲು ಕಾರಣವಾಗಿದೆ. ಹಾಗೇ 'ಸಕಲಾಗಮ ಶಿಖಾಮಣಿ' ಹೆಸರಿನ ಕಟ್ಟುಗಳಲ್ಲಿ 'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ವಚನಗಳಿದ್ದರೂ ಆ ಹಸ್ತಪ್ರತಿಗಳಲ್ಲಿ ಅವುಗಳಿಗೆ 'ಬಾಲಸಂಗಯ್ಯನ ವಚನಗಳು' ಎಂದು ಕರೆಯದೇ ಇದ್ದುದಕ್ಕೆ ಆ ಕಟ್ಟುಗಳ ಪರಂಪರೆಯೊಂದು ಬೇರೆಯಾಗಿಯೇ ಬೆಳೆಯುತ್ತ ಬಂದುದು ಕಾಣುತ್ತದೆ.

೧೧. ಈ ಎರಡು ಕೃತಿಗಳಲ್ಲಿ ಅಂಕಿತದಲ್ಲಿನ 'ಅಗಮ್ಯ ಅಗೋಚರ' ಎಂಬುದನ್ನು ಮಾತ್ರ ಕೈಬಿಡಲಾಗಿದೆ.

ಮುಕ್ತಿಕಂಠಾಭರಣದಲ್ಲಿ ಈ ಬಾಲಸಂಗಯ್ಯನನ್ನು ಬಸವಣ್ಣ ಮತ್ತು ಗಂಗಾಬಿಕೆಯರ ಮಗನೆಂದು ಹೇಳಲಾಗಿದೆ. ಬಸವಣ್ಣನವರ ಮಗ ಬಾಲಸಂಗಯ್ಯ ಚಿಕ್ಕಂದಿನಲ್ಲಿಯೇ ಲಿಂಗೈಕ್ಯನಾದನೆಂಬ ಸಂಗತಿ ವೀರಶೈವ ಕಾವ್ಯ–ಪುರಾಣ–ಚರಿತ್ರೆಗಳಿಂದ ತಿಳಿದುಬರುತ್ತದೆ. ಆದರೆ ಆತ ವಚನರಚನೆ ಮಾಡಿರುವನೆಂಬ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಹೀಗಾಗಿ ಈ ಹೇಳಿಕೆ ನಿರಾಧಾರವೆನಿಸುತ್ತದೆ. ಮುಕ್ತಿಕಂಠಾಭರಣಕಾರ ಕಲ್ಪಿಸಿದ, ಒಂದು ವರ್ಗದ ಹಸ್ತಪ್ರತಿಗಳಲ್ಲಿ ರೂಢಿಗೊಂಡ ಈ ಹೆಸರನ್ನೇ ಡಾ. ಸುಂಕಾಪುರ ಅವರು 'ಸಕಲಾಗಮ ಶಿಖಾಮಣಿ' ಎಂಬ ಕೃತಿಗೂ ಆರೋಪಿಸಿದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಈ ಕೃತಿಯ ಕರ್ತೃ ಬಾಲಸಂಗಯ್ಯ ಅಲ್ಲ; ಅಪ್ರಮಾಣದೇವ. ಈ ಸಂಗತಿಯನ್ನು ವಚನಕಾರನೇ ತನ್ನ ಕೃತಿಯಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಅದನ್ನು ಸಂಪಾದಕರು ಗಮನಿಸದೆ ಹೋಗಿದ್ದಾರೆ. ೮೧೫ ವಚನಗಳಿರುವ ಹಿರಿಯ ಕಟ್ಟಿನ ಎರಡು ವಚನಗಳಲ್ಲಿ (೩೧೫ ಮತ್ತು ೩೨೬) ಹಾಗೂ, ಅದರ ಸಂಗ್ರಹರೂಪದ ಕಿರಿಯ ಕಟ್ಟಿನ ಮೊದಲ ವಚನದಲ್ಲಿ ಆತ ತನ್ನ ಹೆಸರು 'ಅಪ್ರಮಾಣದೇವ' ಎಂದು ಹೇಳಿಕೊಂಡಿದ್ದಾನೆ. ವಚನ ೩೧೫ರಲ್ಲಿ ಶಿಷ್ಯನು ತನ್ನ ಪೂರ್ವಾಪರ ಸಂಬಂಧವನ್ನು ಹೇಳಿಕೊಳ್ಳುವಲ್ಲಿ, ೨೧ ಯುಗದಲ್ಲಿ ತಾನು ಯಾವ ಯಾವ ದೇಹ ಧರಿಸುತ್ತ, ಯಾವ ಯಾವ ಪ್ರಣವವನ್ನು ಧ್ಯಾನಿಸುತ್ತ ಬಂದೆನೆಂಬುದನ್ನು ವಿವರಿಸುತ್ತಬಂದು, ಕೊನೆಯ ನಾಲ್ಕು ಯುಗಗಳಲ್ಲಿ ''ಕೃತಯುಗದಲ್ಲಿ ಅಖಂಡಾತ್ಮಕನೆಂಬ ಗಣೇಶ್ವರನಾಗಿರ್ದಂದು ಅನಾದಿಲಿಂಗವ ಧ್ಯಾನಿಸುತ್ತಿರ್ದೆನು. ತ್ರೇತಾಯುಗದಲ್ಲಿ ಅಚಲಾತ್ಮಕನೆಂಬ ಗಣೇಶ್ವರನಾಗಿರ್ದಂದು ಆದಿಲಿಂಗವ ಧ್ಯಾನಿಸುತ್ತಿರ್ದೆನು. ದ್ವಾಪರಯುಗದಲ್ಲಿ ಅಖಂಡಿತನೆಂಬ ಗಣೇಶ್ವರನಾಗಿರ್ದಂದು ಪ್ರಣವಲಿಂಗವ ಧ್ಯಾನಿಸುತ್ತಿರ್ದೆನು. ಕಲಿಯುಗದಲ್ಲಿ ಅಪ್ರಮಾಣ ಗಣೇಶ್ವರನಾಗಿ ಬಂದು ಅಪ್ರಮಾಣ ಅಗೋಚರಲಿಂಗವ ಧ್ಯಾನಿಸುತ್ತಿರ್ದೆನು'' ಎಂದು ಹೇಳಿಕೊಂಡಿದ್ದಾನೆ. ಲಿಂಗಧಾರಣಸ್ಥಲದ ೩೨೯ನೆಯ ವಚನದಲ್ಲಿಯೂ ಇದೇ ರೀತಿಯ ಹೇಳಿಕೆ ಇದೆ. ಹೀಗೆ ತಮ್ಮ ಪೂರ್ವಭವದ ವಿವರವನ್ನು ಹೇಳಿಕೊಳ್ಳುವ ವಚನಗಳು ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣನವರಲ್ಲಿಯೂ ಕಂಡುಬರುತ್ತವೆ.[೧೨]

ಸಂಗ್ರಹರೂಪದ ಕೃತಿಯ ಮೊದಲ ವಚನದಲ್ಲಿ ''.....ಅಖಂಡ ಜ್ಯೋತಿರ್ಮಯಲಿಂಗ ತಾನೆ ತನ್ನ ಲೀಲಾವಿನೋದಕ್ಕೆ ಅಪ್ರಮಾಣ ಕೂಡಲಸಂಗಯ್ಯನಾಗಿ ಬಿಜಯಂಗೆಯ್ದು ಅಪ್ರಮಾಣದೇವರ ಅಂತರಂಗ ಬಹಿರಂಗ ಸರ್ವಾಂಗವೆಲ್ಲವ ನಿಂಬಿಟ್ಟುಕೊಂಡು ಸ್ಥೂಲ ಸೂಕ್ಷ್ಮ ಕಾರಣ ನಡೆನುಡಿ ಚೈತನ್ಯವೆಲ್ಲ ತಾನೆ ಯಂತ್ರವಾಹಕನಾಗಿ ಆಡಿಸುತ್ತಿರ್ದನು'' ಎಂದು ಹೇಳಲಾಗಿದೆ. ಇಲ್ಲಿ ಬರುವ ಅಪ್ರಮಾಣದೇವರೇ ಈ ಕೃತಿಯ ಕರ್ತೃ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

---

೧೨. ಬಸವಣ್ಣನವರ ವಚನಗಳು : ಡಾ. ಆರ್. ಸಿ. ಹಿರೇಮಠ ವಚನ–೪ ; ಅಲ್ಲಮಪ್ರಭುದೇವರ ವಚನಗಳು : ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ ವಚನ–೮೦೮ ; ಚೆನ್ನಬಸವಣ್ಣನವರ ವಚನಗಳು : ಡಾ. ಆರ್. ಸಿ. ಹಿರೇಮಠ ವಚನ–೧೬

ಈ ಅಪ್ರಮಾಣದೇವ ಯಾರು ? ಈತನ ಕಾಲ–ದೇಶ ಯಾವುದು ? ಜೀವನ ಚರಿತ್ರೆ ಏನು ? ಎಂಬ ಪ್ರಶ್ನೆಗಳಿಗೆ ಇನ್ನು ಉತ್ತರ ಹುಡುಕಲು ಪ್ರಯತ್ನಿಸಬಹುದು. ಕವಿಚರಿತೆಕಾರರು 'ಸರ್ವಾಗಮ ಶಿಖಾಮಣಿ'ಯ ರಚನಾ ಕಾಲ ಸು. ೧೬೦೦ ಎಂದಿದ್ದಾರೆ. ಅವರು ತಮ್ಮ ಈ ನಿರ್ಧಾರಕ್ಕೆ ಆಧಾರಕೊಟ್ಟಿಲ್ಲ. ಡಾ. ಸುಂಕಾಪುರ ಅವರು ಬಾಲಸಂಗಯ್ಯನನ್ನು ತೋಂಟದ ಸಿದ್ಧಲಿಂಗರ ಶಿಷ್ಯ ಬೋಳಬಸವೇಶ್ವರನ ಶಿಷ್ಯನೆಂದು ನಿರ್ಧರಿಸಿ, ತೋಂಟದ ಸಿದ್ಧಲಿಂಗರ ಕಾಲದ (೧೪೭೦) ಆಧಾರದಿಂದ ಈತನ ಕಾಲ ೧೫೫೫ ಎಂದು ಹೇಳಿದ್ದಾರೆ. ಬಾಲಸಂಗಯ್ಯ ಬೋಳ ಬಸವೇಶ್ವರನ ಶಿಷ್ಯ ಎಂದು ನಿರ್ಧರಿಸಲು ಕಾರಣ, ಅವರು ಸಂಪಾದಿಸಿದ ಕೃತಿಯ ೩೨೦ ನೆಯ ವಚನದ ಮಧ್ಯ "ಶ್ರೀ ಶ್ರೀ ಮದ್ಗುರು ಬೋಳಬಸವೇಶ್ವರಾಯ ನಮಃ" ಎಂಬ ಸ್ತುತಿ ಇರುವುದು. ಆದರೆ ಈ ಸ್ತುತಿ ವಚನ ಭಾಗದ ಹೇಳಿಕೆಯಲ್ಲ. ಒಂದು ವಿಷಯದ ವಿವರ ಮುಗಿದ ನಂತರ ಗದ್ಯದಲ್ಲಿ "ಶಿವಶಕ್ತಿರಹಿತವಾದ ಪ್ರಣವವು ಹದಿನಾರನೆಯ ಪ್ರಣವವೆಂದು ನಿರಾಮಯಾತೀತಾಗಮದಲ್ಲಿ ಪಾರ್ವತಾದೇವಿಯರಿಗೆ ಶಿವನು ನಿರೂಪಿಸಿದನೆಂದು ಸದ್ಗುರುಸ್ವಾಮಿ ಶಿಷ್ಯಂಗೆ ನಿರೂಪಿಸಿದನು" ಎಂದು ಹೇಳಿ, ಮುಂದೆ ಇನ್ನೊಂದು ವಿಷಯದ ನಿರೂಪಣೆ ಆರಂಭವಾಗುವುದಕ್ಕಿಂತ ಮೊದಲು ಪ್ರತಿಕಾರ 'ಶ್ರೀ ಶ್ರೀ ಮದ್ಗುರು ಬೋಳಬಸವೇಶ್ವರಾಯ ನಮಃ' ಎಂದು ತನಗಿಷ್ಟವಾದ ವ್ಯಕ್ತಿಯ ಸ್ತುತಿ ಮಾಡಿದ್ದಾನಷ್ಟೇ. ಇದು ವಚನಮಧ್ಯದ ಹೇಳಿಕೆಯಲ್ಲ ಎಂಬುದಕ್ಕೆ ಮತ್ತೊಂದು ಸಬಲ ಕಾರಣವೆಂದರೆ, ಈ ಸ್ತುತಿ ಎಲ್ಲ ಪ್ರತಿಗಳಲ್ಲಿಯೂ ನಿಯತವಾಗಿ ಬಂದಿಲ್ಲ. ಅಲ್ಲದೆ ಇಂಥ ಹೇಳಿಕೆಗಳು ಇದೊಂದು ಕಡೆಯಲ್ಲಿ ಮಾತ್ರವಲ್ಲದೆ ಸ್ಥಲದ ಆರಂಭದಲ್ಲಿ, ಬೇರೆಡೆಗಳಲ್ಲಿ ಬಂದಿರುವುದನ್ನು ಕಾಣುತ್ತೇವೆ. ಹೀಗಾಗಿ ಇದು ಕೃತಿಕಾರನ ಗುರುವಿನ ಹೆಸರಲ್ಲ; ಪ್ರತಿಕಾರನ ಗುರುವಿನ ಇಲ್ಲವೆ ಗೌರವಾನ್ವಿತ ವ್ಯಕ್ತಿಯ ಹೆಸರಾಗಿದೆ ಎಂದು ಹೇಳಬೇಕಾಗುತ್ತದೆ. ಹಾಗೆಯೇ ಈ ಹಿನ್ನೆಲೆಯಲ್ಲಿ ನಿರ್ಧರಿಸಿದ ಕಾಲವೂ ನಿರಾಧಾರ ಎನ್ನಬೇಕಾಗುತ್ತದೆ. ಈ ಕೃತಿಕಾರ ಒಂದು ವೇಳೆ ತೋಂಟದ ಸಿದ್ಧಲಿಂಗರ ಪರಂಪರೆಗೆ ಸೇರಿದವನೇ ಆಗಿದ್ದರೆ ಆರಂಭದಲ್ಲಿ ಆ ಗುರುಪರಂಪರೆ ಹೇಳಿಕೊಳ್ಳುತ್ತಿದ್ದ. ಆದರೆ ಹಾಗೆ ಮಾಡಿಲ್ಲ. ಅದಕ್ಕೆ ಪ್ರತಿಯಾಗಿ ಬಸವ–ಪ್ರಭು–ಚೆನ್ನಬಸವರಂತೆ ತನ್ನ ಪೂರ್ವಭವದ ವಿಚಾರ ತಿಳಿಸಿದ್ದಾನೆ. ಮಾಯಾ ವಿಡಂಬನಸ್ಥಲದ ಒಂದು ವಚನದಲ್ಲಿ "ಎಲ್ಲರೂ ಮಾಯೆಯ ಬಾಯ ತುತ್ತಾದರು. ನಾನು ಮರ್ತ್ಯಕ್ಕೆ ಬಂದು ಪ್ರಭು ಬಸವಣ್ಣ ಮೊದಲಾದ ಅಸಂಖ್ಯಾತ ಗಣಂಗಳ ಪ್ರಸಾದವ ಕೊಂಡೆನಾಗಿ ಮಾಯಾತೀತನಾದೆನು" (ವ. ೩೨೪) ಎಂದು ಹೇಳಿದ್ದಾನೆ. ಇಲ್ಲಿಯೂ ತೋಂಟದ ಸಿದ್ಧಲಿಂಗರ ಹೆಸರನ್ನು ಸೇರಿಸಿಲ್ಲ. ಇದರಿಂದ ಈತ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನೆಂದು ಹೇಳಲು ಯಾವುದೇ ಆಧಾರವಿಲ್ಲವೆನಿಸುತ್ತದೆ.

'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ವಚನಗಳು ಸದ್ಯ ಅದ್ವೈತಾನಂದದ ವಚನಗಳು (೧೬೦೮), ಚಿದೈಶ್ವರ್ಯಚಿದಾಭರಣ (೧೭ ಶ.), ಮುಕ್ತಿಕಂಠಾಭರಣ (೧೭ ಶ.) ಮತ್ತು ಜ್ಞಾನಷಟ್‌ಸ್ಥಲಸಾರ (೧೭ ಶ.) ಎಂಬ ನಾಲ್ಕು ಸಲಕಟ್ಟಿನ ಕೃತಿಗಳಲ್ಲಿ ಎಡೆಪಡೆದಿವೆ. ಈ ಕೃತಿಗಳ ಕರ್ತೃಗಳೆಲ್ಲ ತೋಂಟದ ಸಿದ್ಧಲಿಂಗರ

ಶಿಷ್ಯ ಪರಂಪರೆಗೆ ಸೇರಿದವರು. ಅಪ್ರಮಾಣದೇವ ಈ ಸಂಕಲನಕಾರರಿಗಿಂತ ಪೂರ್ವದಲ್ಲಿದ್ದವನೆಂಬುದು ನಿಸ್ಸಂಶಯ. ಎಷ್ಟು ಪೂರ್ವ ಎಂದರೆ, ತೋಂಟದ ಸಿದ್ಧಲಿಂಗರಿಗಿಂತ ಪೂರ್ವದ ಹಾಗೂ ನೂರೊಂದು ವಿರಕ್ತರ ನಂತರದ ಕಾಲದಲ್ಲಿ ಇದ್ದವನೆಂದು ಹೇಳಬಹುದು.

ಈತನ ಕೃತಿಯಲ್ಲಿ ಹೆಜ್ಜೆಹೆಜ್ಜೆಗೂ 'ಸದ್ಗುರುಸ್ವಾಮಿ' ಎಂಬ ಸಂಬೋಧನೆ ಬರುತ್ತದೆ. ಆದರೆ ಆ ಗುರುವಿನ ಹೆಸರನ್ನು ಎಲ್ಲಿಯೂ ವ್ಯಕ್ತವಾಗಿ ಹೇಳಿಲ್ಲ. ಬಹುಶಃ ಆ ಸದ್ಗುರು ಗುರು–ಲಿಂಗ–ಜಂಗಮ ಎಂಬ ತತ್ವತ್ರಯದಲ್ಲಿ ಬರುವ ಗುರುವಾಗಿರಬೇಕು. ಆ ಗುರುವಿಗೆ ಪ್ರತ್ಯೇಕವಾದ ಅಂಕಿತನಾಮವಿಲ್ಲ. ಇಲ್ಲಿ 'ಅಪ್ರಮಾಣ ಕೂಡಲ ಸಂಗಮದೇವ'ನೆ ಆ ಗುರು. ಅವನ ಮೂಲಕ ಎಲ್ಲ ತತ್ವಗಳನ್ನು ಕೇಳಿ ತಿಳಿದುಕೊಂಡು, ಅವನ ಮಾರ್ಗದರ್ಶನದಂತೆ ನಡೆದು ಅಪ್ರಮಾಣದೇವ ಸಾಧನೆಗೈದು ಸಿದ್ಧಿಯನ್ನು ಪಡೆಯುತ್ತಾನೆ. ಇಷ್ಟಲ್ಲದೆ ಈತನ ಜೀವನಕ್ಕೆ ಸಂಬಂಧಿಸಿ ಮತ್ತಾವ ಸಂಗತಿಗಳೂ ಈಗಿನವುಟ್ಟಿಗೆ ದೊರಕುವುದಿಲ್ಲ. ಈಗ ಈತನ ಕೃತಿಯನ್ನು ಕುರಿತು ವಿವೇಚಿಸಬಹುದು.

**ಸಕಲಾಗಮ ಶಿಖಾಮಣಿ** : ಇದು ಒಂದು ನೂತನ ಸ್ಥಲಕ್ರಮದಿಂದ ಕೂಡಿದ ವಚನ ಸಂಕಲನ. ಇದಕ್ಕೆ 'ಸರ್ವಾಗಮಶಿಖಾಮಣಿ' ಎಂದೂ ಕರೆಯಲಾಗುತ್ತದೆ. ಇದರಲ್ಲಿ ಎರಡು ಪರಂಪರೆಗಳು ತೋರುತ್ತವೆ. ಒಂದು ಪರಂಪರೆಯ ಕಟ್ಟುಗಳಲ್ಲಿ ೮೧೫ ವಚನಗಳಿದ್ದರೆ, ಮತ್ತೊಂದರಲ್ಲಿ ಹೆಚ್ಚಾಗಿ ೫೨೩ ವಚನಗಳಿವೆ. ಕಡಿಮೆ ಸಂಖ್ಯೆಯ ವಚನಗಳಿರುವ ಕಟ್ಟು, ಅಧಿಕ ಸಂಖ್ಯೆಯ ವಚನಗಳಿರುವ ಕಟ್ಟಿನ ಸಂಗ್ರಹ ವಾಗಿರಬೇಕೆಂದು ಹೇಳಬಹುದಾದರೂ ಕಡಿಮೆಸಂಖ್ಯೆಯ ವಚನಗಳಿರುವ ಕಟ್ಟಿನಲ್ಲಿನ– ''ಅನುಭಾವದ ವಚನಗಳು' ಎಂಬ ತಲೆಬರಹದಡಿಯಲ್ಲಿ ಜೋಡಿಸಿದ– ೧೦೦ ವಚನಗಳು ಅಧಿಕ ಸಂಖ್ಯೆಯ ವಚನಗಳುಳ್ಳ ಕಟ್ಟಿನಲ್ಲಿ ಇಲ್ಲದಿರುವುದು ಎರಡೂ ಭಿನ್ನಸಂಪ್ರದಾಯಕ್ಕೆ ಸೇರಿದ ಕೃತಿಗಳೆಂದು ಹೇಳಲು ಮನಸ್ಸಾಗುತ್ತದೆ. ಆದರೆ ಹಿರಿಯ ಗಾತ್ರದ ಕೃತಿಯ ೩೨೭ನೆಯ ವಚನದ ಆರಂಭ ಗದ್ಯದಲ್ಲಿ ಶಿಷ್ಯ ಗುರುವಿನಲ್ಲಿ ಬೇರೆ ಬೇರೆ ವಿಷಯಗಳ ಉತ್ಪತ್ತಿ–ನೆಲೆ–ನಿವೃತ್ತಿಗಳ ರೀತಿಯನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತ ಬಂದು ಕೊನೆಯಲ್ಲಿ 'ವಚನಾನುಭಾವದ ಭೇದವನು ಅರಿಯೆನು ನಿರೂಪಿಸೆಂ'ದು ಪ್ರಾರ್ಥಿಸುತ್ತಾನೆ. ಇಲ್ಲಿ ಆತ 'ಅನುಭಾವದ ವಚನ'ಗಳನ್ನು ಹೇಳಬೇಕೆಂದೇ ಕೇಳಿಕೊಂಡುದು ಸ್ಪಷ್ಟವಿದೆ. ಅಂದರೆ ಮೂಲಕೃತಿಯಲ್ಲಿ ಅವು ಇದ್ದು, ನಂತರದ ಪ್ರತಿಗಳಲ್ಲಿ ಬಿಟ್ಟುಹೋದಂತೆ ತೋರುತ್ತದೆ. ಸಂಗ್ರಹರೂಪದ ಕಟ್ಟುಗಳಲ್ಲಿ ಮಾತ್ರ ಅವು ನಿಯತವಾಗಿ ಉಳಿದುಬಂದಿವೆ. ಇದನ್ನು ಗಮನಿಸಿ ಮೂಲಕರ್ತೃವೇ 'ಸಕಲಾಗಮ ಶಿಖಾಮಣಿ' ಎಂಬ ಹೆಸರಿನಡಿಯಲ್ಲಿ ವಚನಗಳನ್ನು ಬರೆದು ಜೋಡಿಸಿದ, ಅದು ಸಾಕಷ್ಟು ದೀರ್ಘವಾದ ಕಾರಣ ಮುಂದೆ ಬೇರೊಬ್ಬ ಅದನ್ನು ಸಂಗ್ರಹಗೊಳಿಸಿದ ಎಂದು ಹೇಳಬೇಕಾಗುತ್ತದೆ. ಹಿರಿಯ ಗಾತ್ರದ ಕಟ್ಟಿನಲ್ಲಿನ ಇನ್ನೂರ ಇಪ್ಪತ್ನಾಲ್ಕು ಭುವನಗಳ ವಿಸ್ತೀರ್ಣ, ಮಹಾಮೂಲಸ್ವಾಮಿಯ ರೂಪಲಾವಣ್ಯ ವರ್ಣನೆ, ಮುಕ್ತಾಂಗನೆಯ ರೂಪಲಾವಣ್ಯವರ್ಣನೆ, ಪ್ರತಿಯೊಂದು ವಿಷಯದ ಆದಿಯಲ್ಲಿ ಬರುವ ಗದ್ಯ

ಇತ್ಯಾದಿಗಳನ್ನು ಕೈಬಿಟ್ಟು, ಕೆಲವು ದೀರ್ಘವಾದ ತಾತ್ವಿಕ ವಚನಗಳನ್ನು ಸಂಕ್ಷೇಪಗೊಳಿಸಿಕೊಂಡು ಮೂಲದ ಆಶಯಕ್ಕೆ ಭಂಗ ಬರದಂತೆ ಇದನ್ನು ಸಂಗ್ರಹಿಸಲಾಗಿದೆ. ಹೀಗೆ ದೀರ್ಘವಾದ ಕೃತಿಗಳನ್ನು ಓದುಗರ ಅನುಕೂಲಕ್ಕಾಗಿ ಸಂಗ್ರಹಗೊಳಿಸಿದ ಉದಾಹರಣೆಗಳು ಸಾಕಷ್ಟು ಸಿಕ್ಕುತ್ತವೆ. ಶೂನ್ಯಸಂಪಾದನೆಯ ಸಂಗ್ರಹವೆನಿಸಿದ 'ಸಂಪಾದನೆಯ ಸಾರಾಮೃತ,' ಏಕೋತ್ತರಶತಸ್ಥಲದ ಸಂಗ್ರಹವಾದ 'ಏಕೋತ್ತರಶತಸ್ಥಲಸಾರ,' ಪ್ರಸಾದಿಸ್ಥಲದ ವಚನಗಳ ಸಂಗ್ರಹ ರೂಪವಾದ 'ವಚನಸಾರ' ಅಂಥವುಗಳಲ್ಲಿ ಕೆಲವು. ಇದೇ ಮಾದರಿಯಲ್ಲಿ 'ಸಕಲಾಗಮ ಶಿಖಾಮಣಿ'ಯೂ ಸಂಗ್ರಹಗೊಂಡಿದ್ದು, ಇಂದು ಅಂಥ ಕಟ್ಟುಗಳೇ ಅಧಿಕ ಪ್ರಮಾಣ ದಲ್ಲಿ ದೊರೆಯುತ್ತವೆ. ಎರಡೂ ಸಂಪ್ರದಾಯದ ಕಟ್ಟುಗಳು ಸೇರಿ ಈಗ ದೊರೆತ– ಅಪ್ರಮಾಣದೇವನ–ಒಟ್ಟು ವಚನಗಳು ೯೨೦.

ಸಕಲಾಗಮ ಶಿಖಾಮಣಿ ಒಂದು ಶುದ್ಧ ತಾತ್ವಿಕ ಶಾಸ್ತ್ರಕೃತಿ. ಚೆನ್ನಬಸವಾದಿಗಳು ಹೇಳಿದ ವೀರಶೈವ ತತ್ವವನ್ನು ಪ್ರತಿಪಾದಿಸುವುದೇ ಇದರ ಮುಖ್ಯ ಉದ್ದೇಶ. ಆದರೆ ಇಲ್ಲಿ ಭಕ್ತಾದಿ ಐಕ್ಯಾಂತ ಷಟ್‌ಸ್ಥಲಗಳಲ್ಲಿ ವಚನಗಳನ್ನು ವಿಂಗಡಿಸಿ ವಿಷಯವಿವೇಚನೆಗೆ ತೊಡಗದೆ, ಒಂದೊಂದು ತಾತ್ವಿಕ ವಿಷಯಗಳನ್ನು ಕ್ರಮವಾಗಿ ಹೇಳುತ್ತಸಾಗಲಾಗಿದೆ. ಕೃತಿಯು ಸೃಷ್ಟಿಯ ವಿವರ, ಇನ್ನೂರ ಇಪ್ಪತ್ನಾಲ್ಕು ಭುವನಗಳ ವಿಸ್ತೀರ್ಣ, ಅಖಂಡ ಮಹಾಮೂಲಸ್ವಾಮಿಯ ರೂಪ–ಲಾವಣ್ಯ–ಸೌಂದರ್ಯ–ಅಂಗ–ಪ್ರತ್ಯಂಗ– ಸ್ವರೂಪ –ಸ್ವಭಾವಗಳ ವರ್ಣನೆಗಳಿಂದ ಆರಂಭವಾಗಿ, ಮುಂದೆ ಪಿಂಡೋತ್ಪತ್ತಿ, ಪಿಂಡಜ್ಞಾನ, ಸಂಸಾರಹೇಯ, ಮಾಯಾವಿಡಂಬನ, ಗುರುಕರುಣ, ಲಿಂಗಧಾರಣ, ವಿಭೂತಿ, ರುದ್ರಾಕ್ಷಿ, ಲಿಂಗಧಾರಣಮಹಾತ್ಮೆ ಮತ್ತು ಪಂಚಾಕ್ಷರಿಯೆಂಬ ಸ್ಥಲಗಳಲ್ಲಿ ನಡೆದು, ಸಕಲ ತತ್ವಗಳ ಉತ್ಪತ್ತಿ–ನೆಲೆ–ಪರಿಣಾಮ–ನಿವೃತ್ತಿಗಳನ್ನು ತಿಳಿಸುತ್ತ ಐಕ್ಯದತ್ತ ಸಾಗುತ್ತದೆ. ಈ ತತ್ವವಿವರಣೆಯನ್ನು ಬೇರೆ ಬೇರೆ ಆಗಮಗಳ ಮೂಲಕ ಶಿವನು ಪಾರ್ವತಿಗೆ ತಿಳಿಸಿದಂತೆಯೂ, ಅದನ್ನೇ ಸದ್ಗುರುಸ್ವಾಮಿ ಶಿಷ್ಯನಿಗೆ ಬೋಧಿಸಿದಂತೆಯೂ ಹೇಳಲಾಗಿದೆ. ಅಲ್ಲಲ್ಲಿ ನಿಂತು ಶಿಷ್ಯ ತನಗರಿಯದ ವಿಷಯವನ್ನು ಕುರಿತು ಪ್ರಶ್ನಿಸುತ್ತಾನೆ, ಗುರು ಅದಕ್ಕೆ ಉತ್ತರ ಹೇಳುತ್ತ ಸಾಗುತ್ತಾನೆ. ಹೀಗೆ ಗುರುವಿನ ಮುಖಾಂತರ ಎಲ್ಲ ತತ್ವಗಳನ್ನು ತಿಳಿದುಕೊಂಡ ಶಿಷ್ಯ ಕೊನೆಗೆ ನಿರ್ವಾಣ ಪದವಿಯನ್ನು ಪಡೆಯುತ್ತಾನೆ. ಇಲ್ಲಿ ಅಳವಟ್ಟ ಒಟ್ಟು ವಿಷಯಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು :

ಇನ್ನೂರ ಇಪ್ಪತ್ನಾಲ್ಕು ಭುವನಂಗಳು–ಭುವನಾಧಿಪತಿಗಳು–ಭುವನಂಗಳ ವಿಸ್ತೀರ್ಣ, ಅಖಂಡ ಮೂಲಸ್ವಾಮಿಯ ರೂಪು–ಲಾವಣ್ಯ– ಸೌಂದರ್ಯ–ಅಂಗ–ಪ್ರತ್ಯಂಗ ಸ್ವರೂಪ–ಸ್ವಭಾವಗಳ ವರ್ಣನೆ, ನಿರಂಜನಾತೀತಪ್ರಣವ ಮೊದಲಾಗಿ ಬ್ರಹ್ಮಕಡೆಯಾಗಿ ಸೃಷ್ಟಿಮಾರ್ಗದ ವಿವರ, ಲಿಂಗೋತ್ಪತ್ತಿ, ಲಿಂಗಗರ್ಭದಲ್ಲಿ ತತ್ವಂಗಳುತ್ಪತ್ತಿ ವಿಶ್ವಾಧಿಕ ಮಹಾರುದ್ರನುತ್ಪತ್ತಿ, ಬ್ರಹ್ಮಾಂಡ ಕಪಾಲದೊಳಗಣ ಸೃಷ್ಟಿಯ ವಿಸ್ತೀರ್ಣ, ಪಂಚಭೂತಬ್ರಹ್ಮಾಂಡ ಕಪಾಲದುತ್ಪತ್ತಿ, ಅದರಲ್ಲಿ ಚತುರ್ದಶ ಭುವನ –ಸಪ್ತಸಮುದ್ರ– ಸಪ್ತದ್ವೀಪ – ಸಪ್ತಕುಲ ಪರ್ವತ – ಸಮಸ್ತ ಗೃಹರಾಶಿ ತಾರಾಪಥಂಗಳಿಹ ಕ್ರಮ,

ಪಿಂಡ ಉತ್ಪತ್ತಿ, ಶಿಶುಗಳ ಭೇದ, ಸ್ವರಭೇದ, ಕಾಲಭೇದ, ವರ್ಣಭೇದ, ಆಯುಷ್ಯಭೇದ, ಪಿಂಡ ನವಮಾಸ ಬೆಳೆಯುವ ಕ್ರಮ, ಪಿಂಡಕ್ಕೆ ಬ್ರಹ್ಮಾಂಡ ಸಂಬಂಧ, ನಾಡಿಧಾರಣೆ, ವಾಯುಧಾರಣೆ, ಅಗ್ನಿಧಾರಣೆ, ಅಮೃತಧಾರಣೆ, ಆಧಾರಧಾರಣೆ, ನಿರಾಧಾರಧಾರಣೆ, ಗುರುದರ್ಶನ, ಶಿಷ್ಯನ ಪ್ರಳಾಪ, ಗುರುಸ್ತೋತ್ರ, ಶಿಷ್ಯನ ಪೂರ್ವಾಪರ ಸಂಬಂಧ ವಿವರ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯಸ್ಥಲ, ಮಾಯಾವಿಡಂಬನಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಲಿಂಗಧಾರಣಮಹಾತ್ಮೆಯ ಸ್ಥಲ, ಪಂಚಾಕ್ಷರಿಯ ಸ್ಥಲ, ಇಷ್ಟ–ಪ್ರಾಣ–ಭಾವಲಿಂಗದ ಭೇದ, ಅಂಗತ್ರಯಭೇದ, ಪೂಜೆಯಕ್ರಮ, ಷಡುಸ್ಥಲ ಬ್ರಹ್ಮಿಗಳು, ಅರ್ಪಿತಾವಧಾನಭೇದ, ಗುರುಲಿಂಗ–ಶಿವಲಿಂಗ–ಜಂಗಮಲಿಂಗದ ಭೇದ, ತ್ರಿವಿಧಲಿಂಗಪೂಜೆಯಕ್ರಮ, ಅಷ್ಟಾಂಗಯೋಗದ ಭೇದ, ತ್ರಿವಿಧಪ್ರಸಾದ ಭೇದ, ತ್ರಿವಿಧೋದಕ ಕ್ರಮ, ಷಡುಸ್ಥಲಂಗಳ ಭೇದ, ವಿವಿಧ ಪ್ರಣವಂಗಳ ಉತ್ಪತ್ತಿ ಭೇದ, ದಶಚಕ್ರದ ಉತ್ಪತ್ತಿ–ನ್ಯಾಸ–ನಿವೃತ್ತಿ, ನವಪದ್ಮದ ಉತ್ಪತ್ತಿ–ನೆಲೆ–ನಿವೃತ್ತಿ ; ಅಕಾರ ಉಕಾರ ಮಕಾರದುತ್ಪತ್ತಿ ಓಂಕಾರದುತ್ಪತ್ತಿ ಅತಿಸೂಕ್ಷ್ಮಪಂಚಾಕ್ಷರಿಯ ಉತ್ಪತ್ತಿ –ನೆಲೆ–ನಿವೃತ್ತಿ–ಕಾಂತಿ; ಚಿದಾತ್ಮ ಪರಮಾತ್ಮನುತ್ಪತ್ತಿ–ನೆಲೆ–ನಿವೃತ್ತಿ; ಏಕಾಕ್ಷರ, ತ್ರಯಾಕ್ಷರ, ಸಹಸ್ರಾಕ್ಷರದ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧಮುಖಂಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧಭೂತ, ಷಡ್ವಿಧಲಿಂಗ, ಷಡ್ವಿಧಕಲೆ, ಷಡ್ವಿಧಸಾದಾಖ್ಯ, ಷಡ್ವಿಧ ಹಸ್ತಗಳ ಉತ್ಪತ್ತಿ–ನೆಲೆ–ನಿವೃತ್ತಿ ; ನವವಿಧಶಕ್ತಿ, ನವ ಅಧಿದೇವತೆಗಳ ಉತ್ಪತ್ತಿ–ನೆಲೆ–ನಿವೃತ್ತಿ ; ಅಷ್ಟನಾದದ ಉತ್ಪತ್ತಿ–ನೆಲೆ–ನಿವೃತ್ತಿ ; ಷಡ್ವಿಧ ಭಕ್ತಿ, ಷಡ್ವಿಧ ಪರಿಣಾಮದ ಉತ್ಪತ್ತಿ –ನೆಲೆ–ನಿವೃತ್ತಿ; ಚತುರ್ವೇದದುತ್ಪತ್ತಿ–ನೆಲೆ–ನಿವೃತ್ತಿ; ಅಜಪೆ, ಗಾಯತ್ರಿಯ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧ ಚಕ್ರಾರ್ಪಣದ ಭೇದ, ಮಿಶ್ರಾರ್ಪಣ ಷಡುಸ್ಥಲಭೇದ, ಇಷ್ಟ–ಪ್ರಾಣ–ಭಾವಲಿಂಗದ ಭೇದ, ಆತ್ಮನುತ್ಪತ್ತಿ–ನೆಲೆ–ನಿವೃತ್ತಿ ; ಪಂಚಭೂತಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧ ಚಕ್ರಾರ್ಪಣದ ಭೇದ, ಮಿಶ್ರಾರ್ಪಣ ಷಡುಸ್ಥಲಭೇದ, ಇಷ್ಟ–ಪ್ರಾಣ–ಭಾವಲಿಂಗದ ಭೇದ, ಆತ್ಮನುತ್ಪತ್ತಿ–ನೆಲೆ–ನಿವೃತ್ತಿ ; ಪಂಚಭೂತಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡುಸ್ಥಲಗಳ ಉತ್ಪತ್ತಿ–ನೆಲೆ–ನಿವೃತ್ತಿ; ಷಡ್ವಿಧ ಅರ್ಪಿತಾವಧಾನದ ಭೇದ ; ನಿರಾಳದಶಚಕ್ರಂಗಳ ಭೇದ, ನಿರಾಮಯ ಷಟ್‌ಸ್ಥಲದ ಭೇದ, ನಿರಂಜನ ದಶಚಕ್ರಂಗಳ ಭೇದ, ನಿರಾಮಯಾತೀತ ಷಟ್‌ಸ್ಥಲದ ಭೇದ, ಷಟ್‌ಸ್ಥಲ ಬ್ರಹ್ಮದುತ್ಪತ್ಯ, ಅದರಲ್ಲಿ ಮೂವತ್ತಾರು ತತ್ವಂಗಳುತ್ಪತ್ಯ, ಷಡುಶಕ್ತಿಗಳುತ್ಪತ್ಯ, ಷಡಂಗಗಳುತ್ಪತ್ಯ, ಶಿವಶಕ್ತಿಗಳುತ್ಪತ್ಯ ; ದಶ ಅವಸ್ಥೆಗಳ ದರ್ಶನದ ಭೇದ ; ಪಂಚಮಲಗಳ ದರ್ಶನ ; ಷಡಧ್ವದ ಉತ್ಪತ್ಯವರ್ತನ ; ತಾಮಸ ನಿರಸನವಮಾಡಿ ನುಡಿದ ವಚನದ ದರ್ಶನ ಭೇದ ; ತತ್ತ್ವಮಸಿ ಪದಗಳ ಭೇದ, ಅವು ಓಂಕಾರದಲ್ಲಿ ಅಡಗಿಹ ಭೇದ ; ಅವು ಏಕವಾಗಿ ಷಟ್‌ಸ್ಥಲಬ್ರಹ್ಮವಾದ ಭೇದ; ವಚನಾನುಭಾವದ ಭೇದ–ಇವುಗಳನ್ನು ಇಲ್ಲಿ ಸಕ್ರಮವಾಗಿ ವಿವರಿಸಲಾಗಿದೆ.

ತತ್ವವಿವೇಚನೆಯೇ ಈ ಕೃತಿಯ ಮುಖ್ಯ ಗುರಿಯಾಗಿರುವುದರಿಂದ ಭಾವಾಭಿವ್ಯಕ್ತಿಗಾಗಲಿ, ಕಾವ್ಯಾಂಶಕ್ಕಾಗಲಿ ಇಲ್ಲಿ ಎಡೆಯಿಲ್ಲ. ಪಿಂಡದ ಉತ್ಪತ್ತಿಯನ್ನು ಹೇಳುವಲ್ಲಿ,

ಮಗುವಿನ ಜನನಪೂರ್ವದ ಬೆಳವಣಿಗೆಯನ್ನು ತಿಳಿಸುವಲ್ಲಿ, ಅದರ ಬಣ್ಣ, ಆಯುಷ್ಯ ಇತ್ಯಾದಿಗಳನ್ನು ವಿವರಿಸುವಲ್ಲಿ ವೈಜ್ಞಾನಿಕ ದೃಷ್ಟಿ ಒಡೆದು ಕಾಣುತ್ತದೆ. ಈತ ಕೊಡುವ ಷಟ್‌ಸ್ಥಲಗಳ ಸ್ವರೂಪ ವಿವರ ಕೆಳಗಿನಂತಿದೆ :

–ಸದಾಚಾರದಲ್ಲಿ ನಡಹ, ಶಿವನಲ್ಲಿ ಭಕ್ತಿಯಾಗಿಹ, ಲಿಂಗ ಜಂಗಮ ಒಂದೆ ಯೆಂಬ ಬುದ್ಧಿಯಾಗಿಹ, ಲಾಂಛನಧಾರಿಗಳ ಕಂಡಡೆ ವಂದಿಸುವುದೀಗ ಭಕ್ತಸ್ಥಲ ನೋಡಾ.

–ಪರಸ್ತ್ರೀ ಪರಧನದಾಸೆಯ ಬಿಟ್ಟು ಶುದ್ಧವಾಗಿ ಲಿಂಗನಿಷ್ಠೆಯುಳ್ಳುದೀಗ ಮಾಹೇಶ್ವರಸ್ಥಲ ನೋಡಾ.

–ಲಿಂಗಪ್ರಸಾದವ ಲಿಂಗನೆನಹಿನಿಂದ ಭೋಗಿಸುವುದು, ಅನರ್ಪಿತವ ಬಿಡುವುದೀಗ ಪ್ರಸಾದಿಸ್ಥಲ ನೋಡಾ.

–ಪ್ರಾಣವೇ ಲಿಂಗವಾಗಿ, ಲಿಂಗವೇ ಪ್ರಾಣವಾಗಿ ಸುಖದುಃಖ ಭಯವು ತನಗಿಲ್ಲದಿಹುದೀಗ ಪ್ರಾಣಲಿಂಗಿಸ್ಥಲ ನೋಡಾ.

–ಲಿಂಗವೇ ಪತಿಯಾಗಿ ತಾನು ಸತಿಯೆಂಬ ಭಾವದಲ್ಲಿ ಆಚರಿಸಿ, ಪಂಚೇಂದ್ರಿಯ ಸುಖಂಗಳ ಬಯಸದಿಹುದೀಗ ಶರಣಸ್ಥಲ ನೋಡಾ.

–ಕ್ಷುತ್ಪಿಪಾಸೆ ಶೋಕ ಮೋಹ ಜನನ ಮರಣ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಬಿಟ್ಟು ಅಷ್ಟವಿಧಾರ್ಚನೆ ಷೋಡಶೋಪಚಾರವಿಲ್ಲದಿರುವ, ಕ್ಷೀರದೊಳಗಣ ಘೃತದಂತೆ, ತಿಲದೊಳಗಣ ತೈಲದಂತೆ, ಪುಷ್ಪದೊಳಗಣ ಪರಿಮಳದಂತೆ, ಉಪ್ಪು ಉದಕವ ಕೂಡಿದಂತೆ, ವಾರಿಕಲ್ಲು ವಾರಿಯ ಕೂಡಿದಂತೆ, ಕರ್ಪುರವು ಜ್ಯೋತಿಯ ಕೂಡಿದಂತೆ ಮನ ಲಿಂಗದಲ್ಲಿ ಲೀಯವಾಗಿಹುದೀಗ ಐಕ್ಯಸ್ಥಲ ನೋಡಾ,– (೩೬೫ ರಿಂದ ೩೭೦).

ಹೀಗೆ ತಾತ್ವಿಕ ವಿಷಯವನ್ನು ಕೆಲವು ಸಲ ಸರಳವಾಗಿ ನಿರೂಪಿಸಿದರೆ, ಇನ್ನೂ ಕೆಲವು ಸಲ ಕೇವಲ ಸಂಸ್ಕೃತ ಉದ್ಧರಣೆಗಳ ಮಾಲೆಯನ್ನೇ ಕಟ್ಟಿ, ವಿಷಯದ ಗಹನತೆಯನ್ನು ಎತ್ತಿ ತೋರುವುದುಂಟು :

''ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ತಾರಕಸ್ವರೂಪದಲ್ಲಿ–
'ಉದಾತ್ತ ಋಗ್ವೇದೋ ಭವತಿ। ಓಂ ನಕಾರೋ ದೇವತಾ।
ತಾರಕೇ ಚ ಲಯಂ ಪ್ರಾಪ್ತೇ। ಪ್ರಥಮಂ ಪ್ರಣವಾಂಶಕೇ॥'
ಆ ಪ್ರಣವದ ದಂಡಸ್ವರೂಪದಲ್ಲಿ–
'ಅನುದಾತ್ತಶ್ಚ ಯಜುರ್ವೇದಃ ಭವತಿ। ಓಂ ಮಕಾರೋ ದೇವತಾ।
ದಂಡಕೇ ಚ ಲಯಂ ಪ್ರಾಪ್ತೇ। ದ್ವಿತೀಯಂ ಪ್ರಣವಾಂಶಕೇ॥'
ಆ ಪ್ರಣವದ ಕುಂಡಲಾಕಾರದಲ್ಲಿ–
'ಸ್ವರಿತಶ್ಚ ಸಾಮವೇದಾ ಭವತಿ। ಓಂ ಶಕಾರೋ ದೇವತಾ।
ಕುಂಡಲೇ ಚ ಲಯಂ ಪ್ರಾಪ್ತೇ। ತೃತೀಯಂ ಪ್ರಣವಾಂಶಕೇ॥'

ಆ ಪ್ರಣವದ ಅರ್ಧಚಂದ್ರಕದಲ್ಲಿ–
'ಪ್ರಚರಶ್ಚಥರ್ವವೇದಾ ಭವತಿ। ಓಂ ವಕಾರೋ ದೇವತಾ।
ಅರ್ಧಚಂದ್ರೇ ಚ ಲಯಂ ಪ್ರಾಪ್ತೇ। ಚತುರ್ಥಂ ಪ್ರಣವಾಂಶಕೇ ॥'
ಆ ಪ್ರಣವದ ದರ್ಪಣಾಕಾರದಲ್ಲಿ–
'ಗಾಯತ್ರಿಶ್ಚದೋ ಭವತಿ। ಓಂ ಯಕಾರೋ ದೇವತಾ।
ದರ್ಪಣೇ ಚ ಲಯಂ ಪ್ರಾಪ್ತೇ। ಪಂಚಮಂ ಪ್ರಣವಾಂಶಕೇ ॥'
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ–
'ಆತ್ಮಶ್ಚ ಜಪಾ ಭವತಿ। ಓಂ ಪ್ರಣವೋ ದೇವತಾ।
ಜ್ಯೋತಿರೂಪೇ ಚ ಲಯಂ ಪ್ರಾಪ್ತೇ। ಷಷ್ಠಮಂ ಪ್ರಣವಾಂಶಕೇ ॥'
ಇಂತೆಂದುದಾಗಿ, ಅಪ್ರಮಾಣ ಕೂಡಲಸಂಗಮದೇವಾ''.

ಹೀಗೆಯೇ ವಿಭೂತಿ, ರುದ್ರಾಕ್ಷಿ ಮತ್ತು ಪಂಚಾಕ್ಷರೀ ಸ್ಥಲದ ವಚನಗಳು ಹೇರಳ ಸಂಸ್ಕೃತ ಉದ್ಧರಣೆಗಳಿಂದ ಇಡಿಕಿರಿದಿವೆ.

ಅಪ್ರಮಾಣದೇವ ಒಬ್ಬ ಶ್ರೇಷ್ಠ ಪಂಡಿತ; ಅನುಪಮ ಶಾಸ್ತ್ರಾನುಭಾವಿ. ಆತನ ಬಹುಶ್ರುತತ್ವ, ಸಂಗ್ರಹಶಕ್ತಿ, ಶಾಸ್ತ್ರಜ್ಞಾನ ಅಪೂರ್ವವಾದುವು. ಕನ್ನಡ–ಸಂಸ್ಕೃತ ಭಾಷೆಗಳಲ್ಲಿ ಆತನಿಗೆ ಸಮನಾದ ಪರಿಣತಿ, ಪ್ರಭುತ್ವ. ಆತ ಕೊಡುವ ಸಂಸ್ಕೃತ ಉದ್ಧರಣೆ, ಪ್ರಮಾಣ ವಾಕ್ಯಗಳ ಸಂಗ್ರಹದಲ್ಲಿ ನಾವಿದನ್ನು ಕಾಣಬಹುದು. ಆತ ತಾನು ಹೇಳುವ ಪ್ರತಿಯೊಂದು ವಿಷಯಕ್ಕೂ ಪ್ರಮಾಣ ವಾಕ್ಯಗಳನ್ನು ಕೊಡುತ್ತಾನೆ. ಕೆಲವೊಮ್ಮೆ ಮೇಲಿನಂತೆ ಇಡೀ ವಚನವನ್ನೇ ಶ್ಲೋಕಗಳಿಂದ ಹೆಣೆಯುತ್ತಾನೆ. ಹೀಗಾಗಿ ಈ ಕೃತಿಯಲ್ಲಿ ಸಾಕ್ಷಿ ಗ್ರಂಥಗಳಿಲ್ಲದ ವಚನಗಳೇ ಇಲ್ಲವೆಂದರೂ ನಡೆಯುತ್ತದೆ. ಆತ ಆಯ್ದುಕೊಂಡ ಪ್ರಮಾಣ ವಾಕ್ಯಗಳ ಆಕರ ಗ್ರಂಥಗಳನ್ನು ಲೆಕ್ಕಹಾಕಿದರೆ ವಿಸ್ಮಯ ಉಂಟಾಗುತ್ತದೆ. ಸು. ೧೦೦ಕ್ಕೂ ಹೆಚ್ಚು ಕೃತಿಗಳನ್ನು ಆತ ಬಳಸಿಕೊಂಡಿದ್ದಾನೆ. ಅದರಲ್ಲಿ ವೇದ–ಆಗಮ–ಉಪನಿಷತ್ತು–ಪುರಾಣ–ಸಂಹಿತೆ–ಶ್ರುತಿ–ಸ್ಮೃತಿ–ಸೂಕ್ತಿ–ಉವಾಚ–ಸಾರ–ಶಾಖೆ–ಸೂತ್ರ–ಗೃಹ್ಯ–ಸಂವಾದ–ತಂತ್ರ ಮೊದಲಾದವು ಸೇರಿ ಕೊಂಡಿವೆ. ಅವುಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು :

ವೇದ : ಋಗ್ವೇದ, ಯಜುರ್ವೇದ, ಅಥರ್ವಣವೇದ.

ಆಗಮ ಚಕ್ರಾತೀತಾಗಮ, ಚಿತ್ಪಿಂಡಾಗಮ, ಶಿವಲಿಂಗಾಗಮ, ಉತ್ತರ ವಾತುಲಾಗಮ, ಮಹಾಗಮ, ಅತಿಮಹಾಗಮ, ಭೀಮತಂತ್ರಾಗಮ, ಮಹಾವಾತುಲಾಗಮ, ನಿಃಕಲಾತೀತಾಗಮ, ನಿರಾಮಯಾತೀತಾಗಮ, ಚಿತ್ಪ್ರಕಾಶಾಗಮ, ಮಹಾಲಿಂಗಾಗಮ, ಶಿವಪ್ರಕಾಶಾಗಮ, ದಿವ್ಯಾಗಮ, ನಿರಂಜನಾತೀತಾಗಮ, ನಿರಂಜನಾಗಮ, ಮೂಲಾಗಮ, ಅಖಂಡಾ ಗಮ, ವೀರಾಗಮ, ಉತ್ತರ ವೀರಾಗಮ, ಶಿವಾಗಮ.

ಉಪನಿಷತ್ತು: ಪ್ರಣವೋಪನಿಷತ್ತು, ಮಹದೋಂಕಾರೋಪನಿಷತ್ತು, ಜಾಬಾ ಲೋಪನಿಷತ್ತು, ಕಾಲಾಗ್ನಿರುದ್ರೋಪನಿಷತ್ತು, ಓಂಕಾರೋಪನಿಷತ್ತು, ಯಜುರ್ವೇದೋಪನಿಷತ್ತು, ಪ್ರಳಯಕಾಲರುದ್ರೋಪನಿಷತ್ತು,

ಪುರಾಣ : ಶಿವಧರ್ಮಪುರಾಣ, ಮಾನವಪುರಾಣ, ಲೈಂಗ್ಯಪುರಾಣ, ಭವಿಷ್ಯೋತ್ತರ ಪುರಾಣ, ಪರಾಶರಪುರಾಣ, ಬ್ರಹ್ಮಪುರಾಣ, ಆದಿತ್ಯ ಪುರಾಣ, ಸ್ಕಂದ ಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ಬ್ರಹ್ಮಾಂಡಪುರಾಣ, ಪೂರ್ವಪುರಾಣ, ಮಹಾಲಿಂಗಪುರಾಣ.

ಸಂಹಿತೆ : ರುದ್ರಕೋಟಿ ಸಂಹಿತೆ, ಕಾಲಾಗ್ನಿ ರುದ್ರಸಂಹಿತೆ, ಸೂತಸಂಹಿತೆ, ಭೀಮ ಸಂಹಿತ, ಶಿವಧರ್ಮಸಂಹಿತೆ, ಆದಿತ್ಯಸಂಹಿತೆ, ಪ್ರಳಯಕಾಲರುದ್ರ ಸಂಹಿತೆ, ನೀಲಕಂಠಸಂಹಿತೆ.

ಶ್ರುತಿ : ಕಾತ್ಯಾಯಿನಿ ಶ್ರುತಿ, ಅಭಿಮಂತ ಶ್ರುತಿ.

ಸ್ಮೃತಿ : ಕಾತ್ಯಾಯನ ಸ್ಮೃತಿ, ಬೋಧಾಯನ ಸ್ಮೃತಿ, ಲೋಕಾಕ್ಷಿಸ್ಮೃತಿ.

ಸೂಕ್ತಿ : ಪ್ರಣವಾನಂದ ಸೂಕ್ತಿ, ಮಹಾವೇದದ ಪ್ರಣವ ಪುರುಷಸೂಕ್ತಿ.

ಸೂತ್ರ : ಶಿವಧರ್ಮಸೂತ್ರ, ಆದಿತ್ಯಸೂತ್ರ, ಮಹಾಲಿಂಗಸೂತ್ರ, ಶಿವಲಿಂಗ ಸೂತ್ರ.

ಉವಾಚ : ಮಹಾದೇವ ಉವಾಚ, ಈಶ್ವರೋವಾಚ, ಆದಿನಾರಾಯಣ ಉವಾಚ, ಶ್ರೀ ಗರ್ಭ ಉವಾಚ, ಶ್ರೀಮಹಾಭಗವಾನ್ ಉವಾಚ, ವ್ಯಾಸ ಉವಾಚ.

ಸಾರ : ನೀಲಕಂಠೋತ್ತರಸಾರ, ಚಿತ್ರಕಾಶಾಗಮೋತ್ತರ ಸಾರ, ಬ್ರಹ್ಮೋತ್ತರ ಸೂತ್ರಸಾರ, ಅತಿಮಹಾಗಮಸಾರ, ಮೃಗೇಂದ್ರಸಾರ, ನೀಲಕಂಠಸಾರ, ಮಹಾಗಮಸಾರ, ಗೀತಾಸಾರ, ಮಕುಟಾಗಮಸಾರ, ಕ್ರಿಯಾಸಾರ.

ಶಾಖೆ : ಬೋಧಾಯನಶಾಖೆ, ಕಾತ್ಯಾಯನಶಾಖೆ.

ಗೃಹ್ಯ : ಕಾತ್ಯಾಯನ ಗೃಹ್ಯ.

ಸಂವಾದ : ವ್ಯಾಸ ಜೈಮಿನಿ ಸಂವಾದ, ಉಮಾಮಹೇಶ್ವರ ಸಂವಾದ.

ತಂತ್ರ : ವಾತುಲತಂತ್ರ, ಮಹಾವಾತುಲತಂತ್ರ, ನಿರಾಮಯಾತೀತಾಗಮತಂತ್ರ, ಅಖಂಡಾಗಮತಂತ್ರ.

ಇತರ : ಶ್ರೀರುದ್ರ, ಆನಂದ ಭೈರವಿ, ಶಿವಧರ್ಮೋತ್ತರ, ಜ್ಯೋತಿಪ್ರಕಾಶ,

ಇಷ್ಟು ವಿಪುಲವಾಗಿ ವೇದಾಗಮಶಾಸ್ತ್ರ ಪುರಾಣ ಉದ್ಧರಣೆಗಳನ್ನು ಬಳಸಿ ಕೊಂಡಿದ್ದರೂ ಅಪ್ರಮಾಣದೇವನಿಗೆ ಅವೇ ಪರಮ ಶ್ರೇಷ್ಠ ಎಂಬ ಭಾವನೆಯಿಲ್ಲ, ವಚನಾನುಭಾವ ಇವೆಲ್ಲವುಗಳಿಗಿಂತ ಅತೀತವಾದುದೆಂಬುದು ಅವನ ನಿಲುವು. ಅದನ್ನು ಈ ಕೆಳಗಿನ ವಚನ ಸ್ಪಷ್ಟಪಡಿಸುತ್ತದೆ.

''ಈ ವಚನಾನುಭಾವದಲುಳ್ಳರ್ಥವು
ಸಕಲವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯುಂಟು ನೋಡಾ.
ಈ ವಚನಾನುಭಾವದಲ್ಲಿಲ್ಲದರ್ಥವು
ಸಕಲವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯೂ ಇಲ್ಲ ನೋಡಾ.
ಈ ವಚನಾನುಭಾವದ ಅರ್ಥವು

ಸಕಲ ವೇದಾಗಮಶಾಸ್ತ್ರ ಪುರಾಣಂಗಳಿಗೂ ನಿಲುಕದು ನೋಡಾ.
ಈ ವಚನಾನುಭಾವದ ಅರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣತೀತವು ನೋಡಾ
ಅಪ್ರಮಾಣ ಕೂಡಲಸಂಗಮದೇವಾ''. ೩೯೨

ಇದು 'ಸಕಲಾಗಮ ಶಿಖಾಮಣಿ'ಯ ವಚನಗಳ ಮಹತ್ವವನ್ನು ಎತ್ತಿ ತೋರುವ ಹೇಳಿಕೆಯಾಗಿದ್ದರೂ ಇಡೀ ವಚನ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಹಾಗೆಯೇ 'ವೇದ ವಿಪ್ರರ ಬೋಧೆ, ಶಾಸ್ತ್ರ ಸಂತೆಯ ಸುದ್ದಿ, ಪುರಾಣ ಪುಂಡರಗೋಷ್ಠಿ ಎಂಬ ಶರಣರ ವಾಕ್ಯದಿಟ ನೋಡಾ' ಎಂದು ಹೇಳಿ ವೇದಾಗಮ ಪುರಾಣಂಗಳನ್ನು ಓದಿ ಪರಬ್ರಹ್ಮವ ಕಂಡೆನೆಂಬ ಭ್ರಾಂತರನ್ನು ಟೀಕಿಸಿದ್ದಾನೆ :

''ವೇದಾಗಮ ಪುರಾಣಂಗಳನೋದಿ ಕಂಡೆನೆಂಬ ಭ್ರಾಂತರ ನೋಡಾ !
ವೇದಂಗಳನೋದಿ ಕಾಣದೆ ವೇದಾತೀತನೆಂದುದು ನೋಡಾ.
ಆಗಮಂಗಳನೋದಿ ಕಾಣದೆ ಆಗಮಾತೀತನೆಂದುದು ನೋಡಾ.
ಶಾಸ್ತ್ರಂಗಳನೋದಿ ಕಾಣದೆ ಶಾಸ್ತ್ರಾತೀತನೆಂದುದು ನೋಡಾ.
ಪುರಾಣಂಗಳನೋದಿ ಕಾಣದೆ ಪುರಾಣಾತೀತನೆಂದುದು ನೋಡಾ.
ಉಪನಿಷತ್ತುಗಳನೋದಿ ಕಾಣದೆ ಉಪಮಾತೀತನೆಂದುದು ನೋಡಾ.
ಆ ಉಪಮಾತೀತವೆಂಬ ಮಹಾಘನವ
ನಮ್ಮ ಅಪ್ರಮಾಣ ಕೂಡಲಸಂಗನ ಶರಣರು ಬಲ್ಲರು''. ೮೦೧

'ಗುರುಲಿಂಗಜಂಗಮವೆಂದು ಸುಳಿವ ಮಹಾತ್ಮರ ತಾಮಸ ನಿರಸನವ ಮಾಡಿದ ವಚನ' ಮತ್ತು 'ಅನುಭಾವದ ವಚನ'ಗಳಲ್ಲಿ ಭಾವ–ಭಾಷೆ–ನಿರೂಪಣೆಗಳ ಸಾಮರಸ್ಯ–ಸೊಗಸು ಒಡೆದು ತೋರುತ್ತದೆ. ಈ ವಚನಗಳ ಮೇಲೆ ಬಸವಣ್ಣನವರ ವಚನಗಳ ದಟ್ಟವಾದ ಪ್ರಭಾವವಾದುದು ಕಂಡುಬರುತ್ತದೆ. ಇವುಗಳಲ್ಲಿ ಶೀಲ–ನೀತಿ–ಚಾರಿತ್ರ್ಯ ಬೋಧೆ ಅಡಕವಾಗಿದೆ. ಜೊತೆಗೆ ಅವುಗಳನ್ನು ಅನುಸರಿಸದವರ ವಿಡಂಬನೆಯೂ ನಡೆದಿದೆ.

''ಪರಸ್ತ್ರೀ ಪರಾರ್ಥ ಪರಾನ್ನಕ್ಕೆ ಸುಳಿವ ಅಣ್ಣಗಳು ನೀವು ಕೇಳಿರೆ,
ಪರಸ್ತ್ರೀಗೆ ಚಕ್ಷು ದಗ್ಧವಾಗಿರಬೇಕು ಕೇಳಿರಣ್ಣ,
ಪರಾರ್ಥಕ್ಕೆ ಹಸ್ತದಗ್ಧವಾಗಿರಬೇಕು ಕೇಳಿರಣ್ಣ,
ಪರಾನ್ನಕ್ಕೆ ಜಿಹ್ವೆ ದಗ್ಧವಾಗಿರಬೇಕು ಕೇಳಿರಣ್ಣ,
ನಿಂದೆ ಸ್ತುತಿಗೆ ಕಿವುಡನಾಗಿರಬೇಕು ಕೇಳಿರಣ್ಣ,
ಬಯಲ ಬ್ರಹ್ಮವ ನುಡಿವ ತರ್ಕಿಗಳ ಕಂಡಡೆ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು ಶರಣನು ಕೇಳಿರಣ್ಣ,
ಇವರಿಂಗೆ ಭವಂ ನಾಸ್ತಿನೋಡಾ ಅಪ್ರಮಾಣ ಕೂಡಲಸಂಗಮದೇವಾ''. ೮೮೪

ಇದು ಶೀಲಸಂಪಾದನೆಯ ಬೋಧೆ. ಇದನ್ನು ಅನುಸರಿಸದೆ ಇರುವ ಕಪಟ ವೇಷಧಾರಿಗಳಿಗೆ ಒದಗುವ ಸ್ಥಿತಿ ಪಂಚಮಹಾಪಾತಕ :

''ಪರಧನ ಪರಸ್ತ್ರೀ ಪರಾನ್ನದಾಸೆಯ ಬಿಡದೆ,
ನಿಂದೆ ಸ್ತುತಿಗಳೆರಡು ಸಮನಾಗದೆ,
ಮಾಗಿಯ ಕೋಗಿಲೆಯಂತೆ ಮೂಗನಾಗಿರಲರಿಯದೆ,
ಬಯಲಬ್ರಹ್ಮವ ನುಡಿವ ತರ್ಕಿಗಳ ಕೂಡೆ ತರ್ಕವ ಮಾಡಿ
ಶರಣನೆಂದು ಸುಳಿದಡೆ ಪಂಚಮಹಾಪಾತಕ ನೋಡಾ
ಅಪ್ರಮಾಣ ಕೂಡಲಸಂಗಮದೇವಾ''. ೮೮೫

ಶರಣನ ಸ್ವಾನುಭಾವದ ಇರವನ್ನು ಕೆಳಗಿನ ವಚನ ನಿಚ್ಚಳವಾಗಿ ತಿಳಿಸುತ್ತವೆ.

''ಕಣ್ಣಿಲ್ಲದೆ ನೋಡಿ ಕಾಮಿಸುವ ಶರಣ.
ಕಾಲಿಲ್ಲದೆ ಗಮಿಸಿ ಸುಳಿದಾಡುವ ಶರಣ.
ಕೈಯಿಲ್ಲದೆ ಸೋಂಕಿ ಪರಿಣಾಮಿಸುವ ಶರಣ.
ಬಾಯಿಲ್ಲದೆ ರುಚಿಸುವ ನೋಡಾ ಅಪ್ರಮಾಣ ಕೂಡಲಸಂಗಮದೇವಾ''. ೮೬೩
ಅದು ಹೇಗೆ ?
''ಶರಣನ ಸ್ವಾನುಭಾವವೆ ಕಣ್ಣಿಲ್ಲದ ನೋಟ.
ಶರಣನ ಸ್ವಾನುಭಾವವೆ ಕಾಲಿಲ್ಲದ ಗಮನ.
ಶರಣನ ಸ್ವಾನುಭಾವವೆ ಕೈಯಿಲ್ಲದ ಸೋಂಕು.
ಶರಣನ ಸ್ವಾನುಭಾವವೆ ಬಾಯಿಲ್ಲದ ರುಚಿ ನೋಡಾ
ಅಪ್ರಮಾಣ ಕೂಡಲಸಂಗಮದೇವಾ''. ೮೬೪

ಮಹಾಘನದಲ್ಲಿ ಲೀಯವಾದ ಆ ಶರಣನ ನಿಲವನ್ನು–ಐಕ್ಯಸ್ಥಿತಿಯನ್ನು–ವರ್ಣಿಸುವ ರೀತಿ ಸಾಂಪ್ರದಾಯಿಕವಾಗಿದೆ. ಅದರಲ್ಲಿಯ 'ಶ್ಲೋಕದೊಳಗಣ ಅರ್ಥದಂತಿದ್ದುದು' 'ಅರಿವಿನೊಳಡಗಿದ ಅರುವಿನಂತಿದ್ದುದು' ಎಂಬ ಹೋಲಿಕೆಗಳು ಹೊಸತನದಿಂದ ಕೂಡಿವೆ.

ಅಪ್ರಮಾಣದೇವ ಕೆಲವು ಬೆಡಗಿನ ವಚನಗಳನ್ನೂ ಬರೆದಿದ್ದಾನೆ. ಅವು ಸರಳ ಸಂಕೇತಗಳಿಂದ ಕೂಡಿ ಸುಂದರವಾಗಿವೆ :

''ಬಣ್ಣವಿಲ್ಲದ ಪಕ್ಷಿಯು ಬಯಲ ತತ್ತಿಯನಿಕ್ಕಿತ್ತು ನೋಡಾ.
ಆ ಬಯಲ ತತ್ತಿಗೆ ತುಪ್ಪುಳ ಬಾರದೆ
ಹದಿನಾಲ್ಕು ಗಿಣಿಗಳ ಕೂಡಿಯಾಡಿತ್ತು,
ಆ ಬಯಲ ತತ್ತಿಗೆ ಪಕ್ಕ ಬಂದು ಹಾರಿ
ನಮ್ಮ ಅಪ್ರಮಾಣ ಕೂಡಲಸಂಗನ ಕೂಡಿತ್ತು''. ೮೮೭

''ರೂಪಿಲ್ಲದ ಪುಸ್ತಕದ ಬರಹವ
ಕಣ್ಣಿಲ್ಲದ ಕುರುಡನು ಕಂಡು ತೋರಿದನು.
ಬಾಯಿಲ್ಲದ ಮೂಗನು ಓದಿದನು.
ಕಿವಿಯಿಲ್ಲದ ಕಿವುಡ ಕೇಳಿ ಪರಿಣಾಮಿಸಿದ

ತಲೆಯಿಲ್ಲದ ಮೋಟನು ನಿಶ್ಚಯಿಸಿದನೆಂದು
ನೆಲೆಯಿಲ್ಲದವ ಹೇಳಿದ ನೋಡಾ, ಅಪ್ರಮಾಣ ಕೂಡಲಸಂಗಮದೇವಾ''. ೮೯೦

ಸೊಗಸಾದ ರೂಪಕಗಳನ್ನು ಚಿತ್ರಿಸುವ ಕಲಾನೈಪುಣ್ಯವನ್ನೂ ಈತ ಕ್ವಚಿತ್ತಾಗಿ ಕೆಲವು ವಚನಗಳಲ್ಲಿ ತೋರಿದ್ದಾನೆ :

''ಸಮತೆ ಸಮಾಧಾನವೆಂಬ ಭೂಮಿಯ ಮೇಲೆ
ನಿರಂಜನವೆಂಬ ಅಶ್ವಂಗೆ ನಿರಾಳವೆಂಬ ಹಲ್ಲಣವ ಬಿಗಿದು,
ಜ್ಞಾನವೆಂಬ ವಾಘೆಯನಿಕ್ಕಿ, ನಿರಾಮಯವೆಂಬ ರಾವುತನೇರಿ
ಮುನ್ನೂರರುವತ್ತು ಗಾವುದ ದಾಳಿಹೋಗಿ ತಿರುಗಿದ ನೋಡಾ.
ಈ ಅನುಭಾವವ ತಿಳಿದು ಅನುಭವಿಸಬಲ್ಲಾತನೆ ಪರಮಯೋಗಿ ನೋಡಾ
ಅಪ್ರಮಾಣ ಕೂಡಲಸಂಗಮದೇವಾ''. ೮೩೮

''ನಾದವೆಂಬ ಕೆರೆಯೊಳಗೆ ಬಿಂದುವೆಂಬ ಅಮೃತವ ತುಂಬಿ,
ಪಂಚೇಂದ್ರಿಯವೆಂಬ ಗದ್ದೆಗೆ ಕರಣಂಗಳೆಂಬ ಕಾಲುವೆಯ ತಿದ್ದಿ,
ಜಾತಿ ವಿಜಾತಿಯೆಂಬ ಕೆಸರನುತ್ತು
ಪುಣ್ಯ ಪಾಪವೆಂಬ ಕಳೆಯ ಕಿತ್ತು
ಓಂ ನಮಃ ಶಿವಾಯವೆಂಬ ಬೀಜವ ಬಿತ್ತಿ
ಸ್ವಯಂ ಪ್ರಕಾಶವೆಂಬ ಅಗ್ಘವಣಿಯ ಕಟ್ಟಿ,
ಪರಮಾನಂದವೆಂಬ ಬೆಳೆಯಾದವು.
ಆಣವ ಮಾಯಾ ಕಾರ್ಮಿಕವೆಂಬ ಹಂದಿಯ
ಹೊದ್ದಲೀಸದೆ ಹೆಡನೊತ್ತಿದೆನು ನೋಡಾ
ಅಪ್ರಮಾಣ ಕೂಡಲಸಂಗಮದೇವಾ''. ೮೩೪

ಹೀಗೆ ಅಲ್ಲಲ್ಲಿ ಅನುಭಾವ, ಕವಿತ್ವ ಕಣ್ತೆರೆದಿದ್ದರೂ ಶಾಸ್ತ್ರ ಜಡತೆಯೇ ಅಧಿಕವಾಗಿರುವುದರಿಂದ ಇದೊಂದು ಶುದ್ಧಶಾಸ್ತ್ರ ಕೃತಿಗೆ ಯೋಗ್ಯ ಉದಾಹರಣೆ ಎನಿಸಿದೆ. ವ್ಯವಸ್ಥಿತ ತತ್ವನಿರೂಪಣೆ, ಹೇರಳ ಪಾರಿಭಾಷಿಕ ಪದಗಳ ಬಳಕೆ, ವಿಪುಲ ಸಂಸ್ಕೃತ ಉದ್ಧರಣೆಗಳ ಜೋಡಣೆಗಳಿಂದ ಕೂಡಿದ ಈ ಕೃತಿ ವೀರಶೈವ ಶಾಸ್ತ್ರಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಉತ್ತಮ ಕೊಡುಗೆಯಾಗಿದೆ.

## ಬೊಮ್ಮಗೊಂಡೇಶ್ವರ :

ಈತ ೧೫ನೆಯ ಶತಮಾನದ ವಚನಕಾರನೆಂದು ತಿಳಿದುಬರುತ್ತದೆ. ಐದುನೂರಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾನೆಂದು ಹೇಳಲಾಗುತ್ತದೆ. ಬೀದರ ಜಿಲ್ಲೆಯ ಲಾಡಗೇರಿ ಶ್ರೀ ಶಾಂತಲಿಂಗಸ್ವಾಮಿಗಳ ಹತ್ತಿರ ಈ ವಚನಗಳಿರುವ ಹಸ್ತಪ್ರತಿ ಇರುವುದಾಗಿ ತಿಳಿದಿದೆ. ಅದನ್ನು ದೊರಕಿಸಿಕೊಳ್ಳಲು ಎಷ್ಟು ಪ್ರಯತ್ನಿಸಿದರೂ ಸಕಾಲಕ್ಕೆ ಸಾಧ್ಯವಾಗಲಿಲ್ಲ. 'ಇತಿಹಾಸದರ್ಶನ' (೩–೧)ದಲ್ಲಿ ಪ್ರಕಟವಾದ 'ಬಸವಪೂರ್ವದ ಬೀದರ ಜಿಲ್ಲೆಯ ಶಿವಶರಣ ವೀರಸಂಗಯ್ಯ' (ಲೇಖಕರು– ಎಲ್. ಆರ್. ಕುಲಕರ್ಣಿ)

ಎಂಬ ಲೇಖನದಲ್ಲಿ ಉದಾಹರಿಸಿದ ಒಂದು ವಚನ ಮಾತ್ರ ಸದ್ಯ ದೊರೆತಿದ್ದು, ಅದನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. 'ಬಸವಣ್ಣ' ಎಂಬ ಅಂಕಿತವನ್ನು ಹೊಂದಿದ ಅದರಲ್ಲಿ ವೀರಸಂಗಯ್ಯನ ವ್ಯಕ್ತಿತ್ವದ ಬಗೆಗೆ ಕೆಲವು ಸಂಗತಿಗಳನ್ನು ತಿಳಿಸಲಾಗಿದೆ.

**ಭಿಕ್ಷದ ಸಂಗಯ್ಯ :**

'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬ ಅಂಕಿತದಲ್ಲಿ ಈತನ ಒಂದು ವಚನ ಮಾತ್ರ ದೊರೆತಿದ್ದು, ಅದರಲ್ಲಿ ಈತ ತನ್ನ ಗುರುಪರಂಪರೆಯನ್ನು ಹೀಗೆ ಹೇಳಿ ಕೊಂಡಿದ್ದಾನೆ :

''..........ಆ ಶಾಂಭವೀ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ
ನಿರಂಜನ ಪ್ರಣವವೆಂಬ ಮಹಾಲಿಂಗವೆ ನಿರಂಜನಗುರುವಾಗಿ ಬಂದು
ಚೆನ್ನ ಸದಾಶಿವಯೋಗೀಶ್ವರನ ಕರುಣಕಟಾಕ್ಷದಲ್ಲಿ ಉತ್ಪತ್ಯವಾದ
ಪಾರಂಪರವಿಡಿದು ಬಂದ ಶಿಷ್ಯರು–
ಹರದನಹಳ್ಳಿಯ ಪ್ರಭುಲಿಂಗ ಗುರುಸ್ವಾಮಿಗಳು,
ಆ ಪ್ರಭುಲಿಂಗ ಗುರುಸ್ವಾಮಿಗಳ ಶಿಷ್ಯರು
ನಿಜಾನಂದ ಗುರುಚೆನ್ನಯ್ಯನವರು,
ಆ ನಿಜಾನಂದ ಗುರುವಿನ ಗುರು ಸಿದ್ಧವೀರೇಶ್ವರದೇವರು
ಆ ಸಿದ್ಧವೀರೇಶ್ವರದೇವರ ಕರಕಮಲದಲ್ಲಿ ಉದಯವಾದ
ಬಾಲಸಂಗಯ್ಯ ನಾನು.......''

ಇದರಿಂದ 'ಬಾಲಸಂಗಯ್ಯ' ಎಂಬುದು ಈ ವಚನಕರ್ತೃವಿನ ಹೆಸರೆಂದು ಸ್ಪಷ್ಟವಾಗುತ್ತದೆ. ಆದರೆ ಹಸ್ತಪ್ರತಿಗಳಲ್ಲಿ ಇದನ್ನು 'ಭಿಕ್ಷದ ಸಂಗಯ್ಯನ ವಚನ' ಎಂದು ಕರೆಯಲಾಗಿದೆ. ಈಗ ದೊರೆತ ನಾಲ್ಕು ಹಸ್ತಪ್ರತಿಗಳಲ್ಲಿ[೧೪] ಮೂರಕ್ಕೆ ಈ ಹೆಸರಿದ್ದು, ಕನ್ನಡ ಅಧ್ಯಯನಪೀಠದ ಒಂದು ಹಸ್ತಪ್ರತಿಯಲ್ಲಿ ಮಾತ್ರ (ಕಾಪ್ರ. ೩೭೬೬) 'ಬಾಲಸಂಗಯ್ಯಗಳ ವಚನ' ಎಂದು ಸೂಚಿಸಲಾಗಿದೆ. ವಚನಾಂತರ್ಗತ ಗುರುಶಿಷ್ಯ ಪರಂಪರೆಯ ಪ್ರಕಾರ ಇದು ಸರಿ. ಈ ಬಾಲಸಂಗಯ್ಯನಿಗೆ 'ಭಿಕ್ಷದ ಸಂಗಯ್ಯ' ಎಂದು ಕರೆಯಲು ಕಾರಣವೇನೆಂಬುದು ತಿಳಿಯದು. ನಾಲ್ಕರಲ್ಲಿ ಮೂರು ಹಸ್ತಪ್ರತಿಗಳಲ್ಲಿ ಹಾಗೆ ಕರೆದಿರುವುದರಿಂದ ಇದು ಆತನ ಇನ್ನೊಂದು ಹೆಸರಾಗಿರಬೇಕು ಎಂದು ನಂಬಿ ಮುನ್ನಡೆಯಬಹುದು. ಈತ 'ಅಪ್ರಮಾಣ ಕೂಡಲಸಂಗಮದೇವ' ಅಂಕಿತ ಆರೋಪಿತ ಬಾಲಸಂಗಯ್ಯ, ಬಸವಣ್ಣನವರ ಪುತ್ರ ಬಾಲಸಂಗಯ್ಯ ಹಾಗೂ ಕೊಡೇಕಲ್ಲ ಬಸವಣ್ಣನ ಮಗ ಸಂಗಯ್ಯರಿಂದ ಭಿನ್ನ ಎಂಬುದು ಮೇಲಿನ ಗುರುಪರಂಪರೆಯಿಂದ ವ್ಯಕ್ತವಾಗುತ್ತದೆ.

ಬಾಲಸಂಗಯ್ಯ ತಾನು 'ಸಿದ್ಧವೀರೇಶ್ವರದೇವ'ರ ಕರಕಮಲದಲ್ಲಿ ಉದಯವಾದವನೆಂದು ಹೇಳಿಕೊಂಡಿದ್ದಾನೆ. ಈ ಸಿದ್ಧವೀರೇಶ್ವರದೇವ ತೋಂಟದ ಸಿದ್ಧಲಿಂಗರ

---

೧೪ ಶಿವಯೋಗ ಮಂದಿರ, ಗದುಗಿನ ತೋಂಟದಾರ್ಯಮಠ, ಬ್ಯಾಡಗಿ ಮುರುಘಾಮಠ ಮತ್ತು ಧಾರವಾಡ ಕನ್ನಡ ಅಧ್ಯಯನಪೀಠದಲ್ಲಿ ಈ ಹಸ್ತಪ್ರತಿಗಳಿವೆ.

ಪರಂಪರೆಗೆ ಸೇರಿದ ಸಂಪಾದನೆಯ ಸಿದ್ಧವೀರಣ್ಣನಾಗಿರಬೇಕೆಂದು ಊಹಿಸಬಹುದು. ಆದರೆ ಇದುವರೆಗೆ ದೊರೆತ ತೋಂಟದ ಸಿದ್ಧಲಿಂಗರ ಗುರುಶಿಷ್ಯ ಪರಂಪರೆಯಲ್ಲಿ, ಈ ವಚನದಲ್ಲಿ ಹೇಳಿದ ಪರಂಪರೆಯಲ್ಲಿ ಬರುವ ಚೆನ್ನಸದಾಶಿವಯೋಗೀಶ್ವರ, ಹರದನ ಹಳ್ಳಿ ಪ್ರಭುಲಿಂಗಗುರುಸ್ವಾಮಿ, ನಿಜಾನಂದ ಗುರುಚೆನ್ನಯ್ಯ ಎಂಬ ಹೆಸರುಗಳಿಲ್ಲ. 'ಗುರುಚೆನ್ನಯ್ಯ' ಎಂಬುದು ಸಿದ್ಧವೀರಣ್ಣನ ಗುರುವಿನ ಗುರುವಾದ ಸಂಪಾದನೆಯ (ಹರತಾಳ) ಚೆನ್ನಂಜೇದೇವನ ಹೆಸರಾಗಿರಬೇಕೆಂದು ಊಹಿಸಬಹುದೆಂದರೆ, ಇಲ್ಲಿ ಆತನನ್ನು ಸಿದ್ಧವೀರೇಶ್ವರದೇವರ ಶಿಷ್ಯನೆಂದು ಹೇಳಲಾಗಿದೆ. ಹೀಗಾಗಿ ಇವನನ್ನು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿಸುವಲ್ಲಿ ಹಿಂಜರಿಕೆ ಉಂಟಾಗುತ್ತದೆ. ಇದು ಸಿದ್ಧವೀರೇಶ್ವರದೇವರ ಇನ್ನೊಂದು ಶಾಖೆಯಾಗಿರಬಹುದೆ ? ಖಚಿತ ಆಧಾರಗಳಿಲ್ಲದೆ ಸದ್ಯಕ್ಕೆ ಯಾವ ನಿರ್ಧಾರವನ್ನೂ ಕೈಕೊಳ್ಳಲು ಬರುವಂತಿಲ್ಲ. ವಚನದ ವಸ್ತು ಮತ್ತು ನಿರೂಪಣೆಯ ರೀತಿಯ ಮೇಲಿಂದ ಬಾಲಸಂಗಯ್ಯ (ಭಿಕ್ಷದ ಸಂಗಯ್ಯ) ಸು. ೧೭ ಶತಮಾನದಲ್ಲಿ ಇದ್ದವನಾಗಿರಬೇಕೆಂದು ಹೇಳಬಹುದು.

ಈತನ ವಚನಕ್ಕೆ 'ಶಾಂಭವಚಕ್ರನಿರ್ಣಯ' ಎಂದು ಹೆಸರಿಡಲಾಗಿದೆ. ಸುದೀರ್ಘವಾಗಿರುವ ಇದರಲ್ಲಿ ಶಾಂಭವ ಮುದ್ರಾನುಸಂಧಾನದಿಂದ ಮಹಾಲಿಂಗ ದರ್ಶನ ಮಾಡುವ ವಿಧಾನವನ್ನು ತಿಳಿಸಲಾಗಿದೆ. 'ನಿರಂಜನ ಗುರುವೆ ಕೃಪೆಯಿಂದ ತಮ್ಮ ಅಂತರಂಗದಲ್ಲಿರ್ದ ಅತಿ ರಹಸ್ಯವಾದ ಈ ಶಾಂಭವ ಶಿವಯೋಗವೆಂಬ ಮಹಾ ಜ್ಞಾನೋಪದೇಶವನ್ನು ಹರಗುರು ವಾಕ್ಯ ಪ್ರಮಾಣದಿಂದ ತನ್ನ ಹೃದಯ ಕಮಲದಲ್ಲಿ ಕರತಳಾಮಳಕವಾಗಿ ತೋರಿ ; ಆ ಹೃದಯಕಮಲ ಕರ್ಣಿಕಾ ಮಧ್ಯದಲ್ಲಿರ್ಪ ನಿರಂಜನ ಗುರುವೆ ಆ ನಿರಂಜನ ಮಹಾಲಿಂಗವೆಂದರಿದು, ಆ ನಿರಂಜನ ಮಹಾಲಿಂಗವೆ ಸುನಾದ ಬ್ರಹ್ಮವೆಂಬ ಇಷ್ಟಲಿಂಗವೆಂದರಿದು, ಆ ಕರಸ್ಥಲದಲ್ಲಿರ್ಪ ಸುನಾದ ಬ್ರಹ್ಮವೆಂಬ ಇಷ್ಟಲಿಂಗವೆ ತಾನೆಂದರಿದು, ಆ ಲಿಂಗವೇ ಮಂತ್ರ, ಮಂತ್ರವೇ ಲಿಂಗವೆಂದರಿದು ಶಿವಸಮಾಧಿಯ ಜಪವನ್ನು ಜಪಿಸುತ್ತ ಜ್ಯೋತಿರ್ಲಿಂಗದಲ್ಲಿ ಮುಳುಗಾಡುತ್ತ ಇರು' ಎಂದು ಹೇಳಲು, ಅದರಂತೆ ಅನುಸರಿಸಿ ಆ ಆನಂದವನ್ನು ಪಡೆದುದಾಗಿ ತಿಳಿಸುತ್ತಾನೆ.

ಶಿವನಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವುದೇ ಶಾಂಭವಯೋಗ. ಇದರ ಸ್ವರೂಪವನ್ನು ಈ ವಚನ ಹೀಗೆ ತಿಳಿಸುತ್ತದೆ :

''ಬ್ರಹ್ಮರಂಧ್ರದ ಮಧ್ಯದಲ್ಲಿ ಪ್ರಕಾಶಿಸುತ್ತಿರ್ಪುದೊಂದು ಶಿವಚಕ್ರವು. ಆ ಶಿವಚಕ್ರವೇ ಶಿವಲೋಕವೆನಿಸುವುದು. ಆ ಶಿವಲೋಕವೇ ಶಾಂಭವಲೋಕವೆನಿಸುವುದು. ಶಾಂಭವಲೋಕವೇ ಶಾಂಭವಚಕ್ರವೆನಿಸುವುದು. ಆ ಶಾಂಭವಚಕ್ರದಲ್ಲಿ ಆಧಾರಾದಿ ಪಶ್ಚಿಮಾಂತ್ಯವಾದ ನವಚಕ್ರಗಳು ಸಂಬಂಧವಾಗಿರ್ಪುವು''. ಆ ಚಕ್ರಕ್ಕೆ ಸಂಬಂಧವಾದ ದಳ, ಅಕ್ಷರ, ಪ್ರಣವ ಆಕೃತಿಗಳ ವಿವರ ಹೀಗಿದೆ :

೧. ಅಗ್ನಿಮಂಡಲ– ಚತುರ್ದಳಕಮಲ– ನಾಲ್ಕು ಅಕ್ಷರ– ಆಧಾರಚಕ್ರ– ನಕಾರ ಪ್ರಣವ– ತಾರಕಾಕೃತಿ

೨. ಅಗ್ನಿಮಂಡಲ– ಷಡ್ದಳಕಮಲ– ಆರು ಅಕ್ಷರ– ಸ್ವಾಧಿಷ್ಠಾನಚಕ್ರ– ಮಕಾರ ಪ್ರಣವ– ದಂಡಕಾಕೃತಿ

೩. ಸೂರ್ಯಮಂಡಲ– ದಶದಳಕಮಲ– ಹತ್ತು ಅಕ್ಷರ– ಮಣಿಪೂರಕಚಕ್ರ– ಶಿಕಾರ ಪ್ರಣವ– ಕುಂಡಲಾಕೃತಿ.

೪. ಸೂರ್ಯಮಂಡಲ– ದ್ವಾದಶದಳಕಮಲ– ಹನ್ನೆರಡಕ್ಷರ– ಅನಾಹತಚಕ್ರ– ವಕಾರಪ್ರಣವ– ಅರ್ಧಚಂದ್ರಾಕೃತಿ.

೫. ಚಂದ್ರಮಂಡಲ– ಷೋಡಶದಳಕಮಲ– ಹದಿನಾರಕ್ಷರ– ವಿಶುದ್ಧಿಚಕ್ರ– ಯಕಾರಪ್ರಣವ– ದರ್ಪಣಾಕೃತಿ

೬. ಚಂದ್ರಮಂಡಲ– ದ್ವಿದಳಕಮಲ– ಎರಡಕ್ಷರ– ಆಜ್ಞಾಚಕ್ರ– ಓಂಕಾರಪ್ರಣವ– ಜ್ಯೋತಿರಾಕೃತಿ

೭. ತ್ರಿದಳಕಮಲ– ಮೂರಕ್ಷರ– ಶಿಖಾಚಕ್ರ– ಕ್ಷಕಾರಪ್ರಣವ– ಕುಂಡಲಾಕೃತಿ, ಅರ್ಧಚಂದ್ರಾಕೃತಿ.

೮. ಏಕದಳಕಮಲ– ಒಂದಕ್ಷರ– ಪಶ್ಚಿಮಚಕ್ರ– ಹ್ರೂಂಕಾರಪ್ರಣವ– –ದರ್ಪಣಾಕೃತಿ, ಜ್ಯೋತಿರಾಕೃತಿ.

೯. ಸಹಸ್ರದಳಕಮಲ– ಸಹಸ್ರಾಕ್ಷರ– ಬ್ರಹ್ಮಚಕ್ರ– ಹ್ರೀಂಕಾರಪ್ರಣವ– –ತಾರಕಾಕೃತಿ, ದಂಡಕಾಕೃತಿ.

–ಹೀಗೆ ನವಚಕ್ರಗಳ ತನ್ನೊಳಗೆ ಗರ್ಭೀಕರಿಸಿಕೊಂಡು ದಿವ್ಯಪ್ರಕಾಶದೊಡನೆ ಕೂಡಿ ಬೆಳಗುತ್ತಿರ್ಪುದು ಶಾಂಭವಚಕ್ರವು. ಆ ಶಾಂಭವಚಕ್ರದ ಕರ್ಣಿಕಾಮಧ್ಯದಲ್ಲಿ ನಿರಂಜನ ಪ್ರಣವವೆಂಬ ಮಹಾಲಿಂಗವಿರ್ಪುದು. ಆ ಮಹಾಲಿಂಗದರ್ಶನ ಪಡೆಯಲು ಮಾಡುವ ಸಾಧನೆಯೆ ಶಾಂಭವಯೋಗ; ಅದೇ ಶಿವಯೋಗ. ಪದ್ಯದಂತೆ ಆರಂಭವಾಗುವ ಈ ವಚನ ಮುಂದೆ ಗದ್ಯದ ನಡೆಯನ್ನು ಅನುಸರಿಸುತ್ತದೆ.

**ಮಡಿವಾಳಪ್ಪ :**

ಮಡಿವಾಳಪ್ಪ 'ಕಡಕೋಳ ಮಡಿವಾಳಪ್ಪ' 'ಕಡಕೋಳ ಮಡಿವಾಳೇಶ್ವರ' ಎಂದು ಪ್ರಸಿದ್ಧನಾಗಿದ್ದಾನೆ. ೧೮ನೆಯ ಶತಮಾನದಲ್ಲಿ ಆಗಿ ಹೋದ ಈತನ ಜೀವನ ಕುರಿತು ಹೆಚ್ಚು ಸಂಗತಿಗಳು ದೊರಕುತ್ತವೆ.

ಕ್ರಿ.ಶ. ೧೭೮೦ರಿಂದ ೧೮೫೫ ಈತನ ಜೀವಿತ ಕಾಲಾವಧಿ. ತ್ರಿವಿಧದಾಸೋಹ ಮೂರ್ತಿ ಕಲಬುರ್ಗಿ ಶರಣಬಸವೇಶ್ವರರು ಈತನ ಸಮಕಾಲೀನರು. ಜನ್ಮಸ್ಥಳ ಕಲಬುರ್ಗಿ ಜಿಲ್ಲೆ ಅಫಜಲ್ಪುರ ತಾಲೂಕಿನ ಬಿದನೂರ ಗ್ರಾಮ. ತಾಯಿ ಗಂಗಮ್ಮ. ಈಕೆ ಮೂಲತಃ ಇಂಡಿ ತಾಲೂಕ ನಾಗಠಾಣ ಗ್ರಾಮಕ್ಕೆ ಸೇರಿವದಳು. ಗಾಣದ ಕಾಯಕ ಕೈಕೊಂಡಿದ್ದ ಈಕೆ ವಿಧವೆ. ಬರಗಾಲ ಕಾರಣವಾಗಿ ತನ್ನ ಮುದಿತಂದೆಯನ್ನು ಕಟ್ಟಿಕೊಂಡು ಹೊಟ್ಟೆ ಪಾಡಿಗಾಗಿ ಬಿದನೂರಿಗೆ ಬರುತ್ತಾಳೆ. ಅಲ್ಲಿ ಮಡಿವಾಳಪ್ಪನನ್ನು ಮಗುವಾಗಿ ಪಡೆಯುತ್ತಾಳೆ.

ಶಿಶು ಗರ್ಭದಲ್ಲಿರುವಾಗಲೆ ಅದಕ್ಕೆ ಚಿಮಣಗೇರಿಯ ಗುಡ್ಡದ ಮಹಾಂತಸ್ವಾಮಿಗಳ ಕೃಪೆಯಾಗಿರುತ್ತದೆ. ಹುಟ್ಟಿದ ಮಗುವನ್ನು ಮಠಕ್ಕೊಪ್ಪಿಸಲು ಅವರು ತಿಳಿಸಿರುತ್ತಾರೆ. ಅದರಂತೆ ಹನ್ನೆರಡು ವರ್ಷದವನಾಗುತ್ತಲೇ ಮಡಿವಾಳಪ್ಪನನ್ನು ಮಠಕ್ಕೆ ಅರ್ಪಿಸಲು

ಹೋಗುತ್ತಾರೆ. ಅಷ್ಟರಲ್ಲಿ ಸ್ವಾಮಿಗಳು ಲಿಂಗೈಕ್ಯರಾಗಿರುತ್ತಾರೆ. ಅವರ ಶಿಷ್ಯ ಶ್ರೀಗುರು ಬಸವದೇವರು ಮಡಿವಾಳಪ್ಪನಿಗೆ ದೀಕ್ಷೆ ಮಾಡುತ್ತಾರೆ. ಆದರೆ ಅಯ್ಯಾಚಾರದ ದೀಕ್ಷೆಗಾಗಿ ಅರಳಗುಂಡಿಗೆ ಶರಣಬಸವೇಶ್ವರರ ಕಡೆಗೆ ಕಳಿಸುತ್ತಾರೆ. ಅಲ್ಲಿ ವಿಧವೆಯ ಮಗನಿಗೆ ಅಯ್ಯಾಚಾರ ಕೊಡಕೂಡದೆಂದು ಸಂಪ್ರದಾಯ ಶರಣರು ವಿರೋಧಿಸುತ್ತಾರೆ. ಅದೆಲ್ಲವನ್ನೂ ಧೈರ್ಯದಿಂದ ಎದುರಿಸಿ ಶರಣಬಸವೇಶ್ವರರು ಕಲಕೇರಿ ಮರುಳಾರಾಧ್ಯರಿಂದ ಆ ಕಾರ್ಯವನ್ನು ನೆರವೇರಿಸುತ್ತಾರೆ. ಮಡಿವಾಳಪ್ಪ ಅಲ್ಲಿಯೇ ಶಾಸ್ತ್ರಾಧ್ಯಯನ ಮಾಡಿ, ಅನ್ನದಾಸೋಹ, ಜ್ಞಾನದಾಸೋಹಗಳ ಮೂಲಕ ಸಮಾಜಸೇವೆಗೆ ತೊಡಗುತ್ತಾನೆ. ನಿಂದಕರ ಉಪಟಳ ಹೆಚ್ಚಾಗಲು ಗುರುಗಳ ಅಪ್ಪಣೆ ಪಡೆದು ಮತ್ತೆ ಬಿದನೂರಿಗೆ ಬರುತ್ತಾನೆ. ಅಲ್ಲಿಯೂ ನೆಮ್ಮದಿ ದೊರಕದಾದಾಗ, ಗುರುವಿನ ಸ್ಥಾನವಾದ 'ಮಹಾಂತಗುಡ್ಡ'ಕ್ಕೆ ತೆರಳುತ್ತಾನೆ. ಅಲ್ಲಿ ಗುರುಗದ್ದುಗೆಯೆದುರು ಕುಳಿತು ಹನ್ನೆರಡು ವರ್ಷ ಉಗ್ರ ತಪಸ್ಸು ಮಾಡುತ್ತಾನೆ. ಶ್ರೀಶೈಲ ಪರ್ವತಕ್ಕೆ ಹೋಗುವಂತೆ ಕನಸು ಕಂಡು, ಹೋಗಿ ಅಲ್ಲಿಯೂ ಹನ್ನೆರಡು ವರ್ಷ ತಪಸ್ಸು ಮಾಡಿ ಶಿವಸಾಕ್ಷಾತ್ಕಾರ ಪಡೆಯುತ್ತಾನೆ. ಅಲ್ಲಿಂದ ಮರಳಿ ಮತ್ತೆ ಅಳಗುಂಡಿಗೆ ಶರಣರಲ್ಲಿಗೆ ಬರುತ್ತಾನೆ. ತಪಸ್ಸು, ಲೋಕಾನುಭವಗಳಿಂದ ಪಕ್ವವಾದ ಆತ ಈಗ ಮೊದಲಿಗಿಂತಲೂ ಹೆಚ್ಚು ಉತ್ಸಾಹ, ಕ್ರಿಯಾಶೀಲತೆಗಳಿಂದ ಅನ್ನದಾಸೋಹ, ಜ್ಞಾನದಾಸೋಹ ಕಾರ್ಯನಡೆಸಿದನು. ಲೋಕ ಸಂಚಾರ ಕೈಕೊಂಡು ಸಾವಿರಾರು ಪದ್ಯಗಳನ್ನು ಕಟ್ಟಿ, ಹಾಡಿ ಜನಮನದ ಮೈಲಿಗೆಯನ್ನು ತೊಳೆಯಲು ಪ್ರಯತ್ನಿಸಿದ. ಆಗ ಜಾತಿ–ಜನಾಂಗ ಭೇದವಿಲ್ಲದೆ ಅನೇಕ ಜನರು ಆತನಿಗೆ ಶಿಷ್ಯರಾದರು. ಸುರಪುರ ದೊರೆಗಳಿಂದ ಗೌರವಿಸಲ್ಪಟ್ಟನು. ಆ ಭಾಗದಲ್ಲಿ ಈತನ ಹೆಸರಿನಲ್ಲಿ ಅನೇಕ ಮಠಗಳು ನಿರ್ಮಾಣವಾದವು. ಕೊನೆಗಾಲದಲ್ಲಿ ಮಡಿವಾಳಪ್ಪ ಕಡಕೋಳಕ್ಕೆ ಬಂದು ವಾಸವಾದ. ಅಲ್ಲಿ ಮಠ ಕಟ್ಟಿ, ಅದರ ಚರಪಟ್ಟಾಧಿಕಾರಿಯಾಗಿ, ಸಕಲಶಾಸ್ತ್ರ, ಶರಣಸಾಹಿತ್ಯಾಧ್ಯಯನ, ಸ್ವಾನುಭಾವದಿಂದ ಉನ್ನತ ತತ್ವಜ್ಞಾನಿ, ಷಟ್‌ಸ್ಥಲಬ್ರಹ್ಮಿ, ಮಹಾನುಭಾವಿ, ಸಿದ್ಧಪುರುಷನೆನಿಸಿದ. ಹೀಗೆ ಎಪ್ಪತ್ತೈದು ವರ್ಷ ಬದುಕಿ ಕಡಕೋಳದಲ್ಲಿ ಜೀವಂತಸಮಾಧಿ ಹೊಂದಿದನು. ಇದು ಮಡಿವಾಳಪ್ಪನ ಜೀವನದ ಬಗೆಗಿನ ಸ್ಥೂಲ ಚಿತ್ರ.[೧೫]

ಮಡಿವಾಳಪ್ಪ ವಚನಗಳಲ್ಲಿ ತನ್ನ ಗುರುಪರಂಪರೆ, ತನ್ನ ಸ್ನೇಹಿತರು, ವಿರೋಧಿಗಳು, ತಾನು ಗುರುನಿರೂಪದಿಂದ ಆತ್ಮಜ್ಞಾನಿಯಾದ ವಿವರಗಳನ್ನು ಕೊಡುತ್ತಾನೆ. 'ಷಡಾವತಾರ' ಎಂಬ ಸ್ಥಲದೊಳಗಿನ ಆರು ವಚನಗಳು ಆತನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಈ ಸಂಗತಿಗಳನ್ನು ತಿಳಿಸುತ್ತವೆ. ಅದನ್ನು ಹೀಗೆ ಸಂಗ್ರಹಿಸಬಹುದು :

ಶಿವನು ಲೋಕಪಾವನಾರ್ಥವಾಗಿ ಕೊಲ್ಲಿಪಾಕಿ ಸೋಮೇಶ್ವರಲಿಂಗದಲ್ಲಿ ರೇಣುಕಾಖ್ಯನಾಮದಿಂದ ಉದ್ಭವಿಸಿ, ಅರಿಯದೆ ಏಳುನೂರು ವರ್ಷ ಸರ್ವೇಂದ್ರಿಯಗಳ ಶಿಕ್ಷಿಸಿ, ನಿಜತತ್ವ ತಿಳಿಯುವುದಕ್ಕೆ ತನ್ನ ಬಯಸುವವರಿಗೆ ತತ್ವೋಪದೇಶ ಕೈಗೊಳಿಸಿ,

---

೧೫ ವಿವರವಾದ ಚರಿತ್ರೆಗೆ ಡಾ. ಎಂ. ಎಸ್. ಲಠ್ಠೆ ಅವರು ಸಂಪಾದಿಸಿದ 'ಕಡಕೊಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು' ಪ್ರ: ತೋಂಟದಾರ್ಯಮಠ ಗದಗ. ಇದರ ಪ್ರಸ್ತಾವನೆ ನೋಡಿರಿ.

ಸರ್ವತೀರ್ಥ, ಸರ್ವದೇಶ ನೋಡುವುದಕ್ಕೆ ಖೇಚರೀ ಗಮನದಲ್ಲಿ ಸಂಚರಿಸಿ, ಮತ್ತೆ ಆರಿದು ಏಳ್ನೂರು ವರ್ಷ ಲೋಕೋಪಕಾರವಾಗಿ ಸರ್ವಜನ ಅಭೀಷ್ಟೆಯನ್ನು ಸಲಿಸಿ, ಮುನ್ನೂರು ರಾಜಕುಮಾರಿಯರ ಮದುವೆಯಾಗಿ, ಪಡುವಿಡಿ ರುದ್ರಸ್ವಾಮಿಗಳ ಪಡೆದು, ಷಡ್ವಿಧ ಆಚಾರ್ಯರೊಳಗೆ ಪಂಚಾಚಾರ್ಯರನ್ನು ಪ್ರತಿಷ್ಠಿಸಿ, ಪಂಚಬಗೆಯ ನಾಮವನಿಟ್ಟು, ಪಂಚಸಿಂಹಾಸನಕ್ಕೆ ಕರ್ತವ್ಯಮಾಡಿ, ಘನಲಿಂಗ, ಅತೀತ, ಪಟ್ಟ, ಪರದೇಶಿ, ಮಹಾಂತ, ನಿರಂಜನ ಎಂಬ ಆರರೊಳಗೆ ಐದ ಇದಿರಿಟ್ಟು, ರುದ್ರಮುನಿಸ್ವಾಮಿಗಳಿಗೆ ಘನಲಿಂಗಪಟ್ಟವ ಕಟ್ಟಿ, ಅವರ ಪಾದದಲ್ಲಿ ಹಲವು ಶಿಷ್ಯರ ಪಡೆಸಿ, ಮಂತ್ರೋಪದೇಶವ ಕೊಡಿಸಿ, ಭುವನಜನ ಶಿಕ್ಷ ದೀಕ್ಷೋಪದೇಶಕ್ಕೆ ಕರ್ತೃವನ್ನಾಗಿ ಕೈಗೊಡಿಸಿದ. ರುದ್ರಮುನಿಸ್ವಾಮಿ ಬಾಳೇಹಳ್ಳಿ ಸಿಂಹಾಸನಾಧೀಶ್ವರನಾಗಿ ಮುನ್ನಡೆದ. ಅವನ ಶಿಷ್ಯ ಪರಂಪರೆ ಹೀಗಿದೆ :

''...ಬಾಳೇಹಳ್ಳಿ ಸಿಂಹಾಸನಾಧೀಶ ಪಡುವಿಡಿ
ರುದ್ರಮುನಿಸ್ವಾಮಿಗಳ ಕರಕಂಜೋದ್ಭವ
ಚಿಕ್ಕರೇವಣಸಿದ್ಧಸ್ವಾಮಿಗಳು.
ಆ ಚಿಕ್ಕರೇವಣಸಿದ್ಧಸ್ವಾಮಿಗಳ ಶಿಷ್ಯ ಗುರುನಂಜಸ್ವಾಮಿ.
ಆ ಗುರುನಂಜಸ್ವಾಮಿಗಳ ಶಿಷ್ಯ ರಾಚೋಟಿಸ್ವಾಮಿ.
ಆ ರಾಚೋಟಿಸ್ವಾಮಿಗಳ ಶಿಷ್ಯ ನಿಡುಮಾಮಿಡಿ ಕರಿಬಸವಸ್ವಾಮಿ.
ಆ ಕರಿಬಸವಸ್ವಾಮಿಗಳ ಶಿಷ್ಯ ಮಲಘಣ ಶಾಂತಸ್ವಾಮಿಗಳು.
ಆ ಮಲಘಣದ ಶಾಂತಸ್ವಾಮಿಗಳ ಶಿಷ್ಯ ಜಡೆಶಾಂತಸ್ವಾಮಿಗಳು.
ಆ ಜಡೆ ಶಾಂತಸ್ವಾಮಿಗಳ ಶಿಷ್ಯ ಮಹಾಂತಸ್ವಾಮಿಗಳು.
ಆತನ ಶಿಷ್ಯ ಮಡಿವಾಳಸ್ವಾಮಿ ; ಆತನ ಶಿಷ್ಯ ರಾಚೋಟಿಸ್ವಾಮಿಗಳು.
ಆತನ ಶಿಷ್ಯ ಮಹಾಂತಸ್ವಾಮಿ,
ಆತನ ಶಿಷ್ಯ ಅತೀತವ ಕೈಕೊಂಡು ಸರ್ವಕ್ಕೆ ಅತೀತನಾದ
ಚಿಮಣಗೇರಿ ಚೌಡಾಪೂರ ನಡುಸೀಮೆ
ಗುಡ್ಡದ ಯೋಗಿಯೆನಿಸಿದ ಮಹಾಂತಸ್ವಾಮಿಗಳು.
ಆತನ ಶಿಷ್ಯ ಮಡಿವಾಳಸ್ವಾಮಿ, ಆತನ ಶಿಷ್ಯ ಮರಿಸ್ವಾಮಿಗಳು,
ಆತನ ಶಿಷ್ಯ ಗುರುಬಸವದೇವರು, ಆ ಗುರುಬಸವದೇವರ ಕನ್ನೆಶಿಷ್ಯ
ಬಿದನೂರ ಮಡಿವಾಳಾಖ್ಯನು....'' ೪೧

ಹೀಗೆ ಬಾಳೆಹಳ್ಳಿಪೀಠದ ಶಿಷ್ಯ ಪರಂಪರೆಗೆ ತಾನು ಸೇರಿದವನೆಂದು ಹೇಳಿಕೊಂಡ ಮಡಿವಾಳಪ್ಪ, ಇನ್ನೊಂದು ವಚನದಲ್ಲಿ ತನ್ನ ಗುರುವೆ ಬೇರೆ ಬೇರೆ ವ್ಯಕ್ತಿಗಳ ರೂಪದಲ್ಲಿ ಬಂದು ತನ್ನನ್ನು ಹುಟ್ಟಿಸಿ–ಬೆಳೆಸಿ–ಮನ್ನಿಸಿ–ನಿಂದಿಸಿ–ದೀಕ್ಷೆಯಿತ್ತು–ಮೋಕ್ಷದ ಮಾರ್ಗ ವನ್ನು ತೋರಿದನೆಂದು ತಿಳಿಸುತ್ತಾನೆ :

''.....ಎನ್ನ ದೇವರದೇವ ಸರ್ವವು ನೀನೆ ಆಗಿರ್ದು,
ಲಿಂಗವಾದಾತನು ನೀನೇ, ಪರಮಾರಾಧ್ಯನಾದಾತನು ನೀನೆ,

ಗುರುವಾದಾತನು ನೀನೆ, ಅರುವಾದಾತನು ನೀನೆ,
ನೀನಲ್ಲದೆ ಮತ್ತೊಂದು ಬ್ಯಾರೆ ಭಾವಿಸಲುಂಟೆ ?
ಎನ್ನ ಹುಟ್ಟಿಸಿದ ಮಹಾಂತನು ನೀನೆ, ಎನ್ನ ಬೆಳೆಸಿದ ಶರಣಬಸವಪ್ಪನು ನೀನೆ,
ಎನ್ನ ಮನ್ನಿಸಿದ ಘನಸಿದ್ಧಪ್ಪನು ನೀನೆ,
ಎನ್ನ ನಿಂದಿಸಿದ ಹಳಪ್ಯಾಟಿ ಬಸಯ್ಯನು ನೀನೆ,
ಉಣಿಸುವ ಉಡಿಸುವ ಹಾಸುವ ಹೊಚ್ಚುವ
ಮುಚ್ಚುವ ಚುಚ್ಚುವ ಹಳಿವ ಮುಳಿವ ಸರ್ವವೂ
ಎನಗೆ ನೀನಲ್ಲದೆ ಮತ್ತೊಬ್ಬರಿಲ್ಲ......'' ೪೨

ಇಲ್ಲಿ ಬರುವ ವ್ಯಕ್ತಿಗಳು ಮಡಿವಾಳಪ್ಪನ ಜೀವನದಲ್ಲಿ ವಿವಿಧ ಪಾತ್ರಗಳನ್ನಾಡಿದವರೆಂದು ತಿಳಿದುಬರುತ್ತದೆ. ಆದರೂ ಅವರೆಲ್ಲರನ್ನೂ ಗುರುಸ್ವರೂಪದಲ್ಲಿ ಕಂಡುದು ಆತ ಏರಿದ ಆಧ್ಯಾತ್ಮದ ಎತ್ತರವನ್ನು ಎತ್ತಿತೋರಿಸುತ್ತದೆ.

ಮಡಿವಾಳಪ್ಪ ಉನ್ನತ ಅನುಭಾವಿಯಾಗಿ ಉದಾತ್ತ ಸಾಹಿತ್ಯವನ್ನು ಸೃಷ್ಟಿಸಿದ್ದಾನೆ. ಆತನ ಸಾಹಿತ್ಯ ಸ್ವರವಚನ ಮತ್ತು ವಚನ ಎಂಬ ಎರಡು ರೂಪದಲ್ಲಿ ಮೂಡಿಬಂದಿದೆ. ಬಸವಣ್ಣನವರು ಹೇಳಿದಂತೆ ಇದು 'ತಾನು ಒಲಿದಂತೆ ಹಾಡಿದ' ಸಾಹಿತ್ಯ. ಇದಕ್ಕೆ ಪ್ರೇರಣೆ ಗುರುವಿನ ಉಪದೇಶ. ಅದನ್ನು ಮಡಿವಾಳಪ್ಪ ಹೀಗೆ ತಿಳಿಸುತ್ತಾನೆ :

''....ನಿನ್ನ ನೀ ತಿಳಿದು ಹಾಡೆಂದು ಹೇಳಿದಿರಿ.
ನೀನು ಹೇಳಿದುದಕ್ಕೆ ನಾನು ನನ್ನ ಒಬ್ಬುಳಿ ಮಾಡಿ ಏಕಚಿತ್ತಾಗಿ
ಹೊರ ಆಸೆಬಿಟ್ಟು, ಒಳನೋಟವಿಟ್ಟು,
ಹಸಿವೆ ತೃಷೆಗಳು ಸುಟ್ಟು, ನನ್ನನ್ನೇ ನಾ ಕೆಟ್ಟು,
ರತಿ ನಿನ್ನೊಳಗಿಟ್ಟು, ಆತ್ಮಜ್ಞಾನ ಅಳವಟ್ಟು, ಅಹಂ ಬ್ರಹ್ಮವಂ ಬಿಟ್ಟು,
ನೀ ಒಂದು ಮಾಡೆಂದರೆ ನಾ ಒಂಬತ್ತು ಮಾಡಿ ಹುಡುಕಲು,
ಅಲ್ಲಿ ನಿನ್ನ ಬಲ್ಲಾದೆ, ನಿನ್ನ ಬಲ್ಲಲ್ಲಿ ನನ್ನ ಬಲ್ಲಾದೆ.
ನನ್ನ ನಿನ್ನ ಬಲ್ಲಲ್ಲಿ ಸರ್ವವ ಬಲ್ಲಾದೆ.....'' ೪೪

ಹೀಗೆ ಸರ್ವವನ್ನು ಅರಿತು ನುಡಿದ ಈ ಸಾಹಿತ್ಯದಲ್ಲಿ ಲೌಕಿಕ–ಅಧ್ಯಾತ್ಮ– ಅನುಭಾವ ಮುಪ್ಪುರಿಗೊಂಡಿವೆ.

ಮಡಿವಾಳಪ್ಪನ ರಚನೆಗಳಲ್ಲಿ ಸ್ವರವಚನಗಳಿಗೆ ಪ್ರಥಮಸ್ಥಾನ. ಆತ ತನ್ನೊಂದು ಸ್ವರವಚನದಲ್ಲಿ ತಾನು ಹಾಡಿದ ಹಾಡುಗಳ ಸಂಖ್ಯಾವಿವರವನ್ನು ಹೀಗೆ ಕೊಡುತ್ತಾನೆ :

''ಸುಳ್ಳೇ ಇಪ್ಪತ್ತೈದು ನಿಜಪದ
ಸುಳ್ಳೇ ಹತ್ತೊಂಬತ್ತು ವಚನ
ಸುಳ್ಳೇ ಈ ಪರಿವರ್ಧಿನೊಂಬತ್ತೆಂದೆನು ಹಾಡು
ಸುಳ್ಳೇ ಹಾಡ ಸುಳ್ಳೇ ಹಾಡುವದಾಯ್ತು
ಹದಿನೇಳ್ನೂರೈವತ್ತು ಸರ್ವಕ್ಕೆ
ಸುಳ್ಳೇ ತಿಳಿದರೆ ಡುಳ್ಳೆ ಮಾಡಿದೆ ಮಹಾಂತ ಶರಣಾರ್ಥಿ.''

ಇದರಿಂದ ಒಟ್ಟು ಹದಿನೇಳ್ನೂರ ಐವತ್ತು ಹಾಡುಗಳನ್ನು ಬರೆದುದಾಗಿ ತಿಳಿಯುತ್ತದೆ. ಆದರೆ ಈಗ ಸು. ೫೦೦ ರಷ್ಟು ಹಾಡು (ಸ್ವರವಚನ), ೭೩ ವಚನಗಳು ಮಾತ್ರ ದೊರೆತಿವೆ. ಸ್ವರವಚನಗಳು 'ಗುರುಮಹಾಂತ' ಎಂಬ ಅಂಕಿತವನ್ನು ಹೊಂದಿದ್ದರೆ, ವಚನಗಳು 'ನಿರುಪಮ ನಿರಾಳ ಮತ್ಪ್ರಭು ಮಹಾಂತಯೋಗಿ' ಎಂಬ ಅಂಕಿತವನ್ನು ಪಡೆದುಕೊಂಡಿವೆ. ಈ 'ಮಹಾಂತ' ಮಡಿವಾಳಪ್ಪ ಇನ್ನೂ ತಾಯಿಯ ಗರ್ಭದಲ್ಲಿದ್ದಾಗಲೇ ಆಶೀರ್ವದಿಸಿದ ಚಿಮಣಗೇರಿ ಗುಡ್ಡದ ಯೋಗಿಯೆನಿಸಿದ ಮಹಾಂತಸ್ವಾಮಿಗಳಾಗಿದ್ದಾರೆ.

ಮಡಿವಾಳಪ್ಪನ ಹಾಡುಗಳು ಬಿಡಿಬಿಡಿಯಾಗಿ ದೊರೆತರೆ, ವಚನಗಳನ್ನು ಮಾತ್ರ ಒಂದು ಸಂಕಲನದಲ್ಲಿ ಅಳವಡಿಸಿ, ಕರ್ತೃವೇ ಅದಕ್ಕೆ 'ನಿಜಲೀಲಾಮೃತ ವಚನ' ಎಂದು ಹೆಸರಿಟ್ಟಿದ್ದಾನೆ.[೧೬] ಇದು ಒಂದು ಸ್ಥಲಕಟ್ಟಿನ ಕೃತಿ. ಇದರಲ್ಲಿ ೨೦ ಸ್ಥಲ, ೭೩ ವಚನ ೫ ಸ್ವರವಚನ ಇವೆ. ಅವುಗಳ ವಿವರ ಹೀಗಿದೆ :

(೧) ನಿಜಲೀಲಾ – ೩, (೨) ಪರಬ್ರಹ್ಮಸ್ಥಲ–೨, (೩) ಗುರುಸ್ಥಲ–೩, (೪) ಚೆದ್ಬೈಲು–೨, (೫) ನಿಷ್ಕಾರಣಸ್ಥಲ–೨, (೬) ಆದಿಸ್ಥಲ–೧, (೭) ತ್ರಿವಿಧಾತ್ಮಸ್ಥಲ (ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ)–೩, (೮) ಷಟ್‌ಸ್ಥಲ (ಭಕ್ತಸ್ಥಲದಿಂದ ಐಕ್ಯಸ್ಥಲದ ವರೆಗೆ)–೭ (೯) ನಿಜಶರಣನ ಚಾರಿತ್ರ (ಸತ್ಯ, ಸದಾಚಾರ, ಸಮ್ಯಕ್‌ಜ್ಞಾನ)–೪, (೧೦) ತ್ರಿಕಾಲಜ್ಞಾನ ಪದ (ಸೃಷ್ಟಿ, ಸ್ಥಿತಿ, ಲಯ)–೩ ಸ್ವರವಚನ, (೧೧) ನಿಜಶರಣನ ಅನುಭವ–೩, (೧೨) ನಿಜಶರಣನ ನೀತಿ (ಬೆಡಗು)–೨, (೧೩) ನಿಜಶರಣಮುಕ್ತಿ–೩, (೧೪) ಷಡಾವತಾರ [ಸದ್ಯೋಜಾತಮೂರ್ತಿಚರಿತ್ರ (ಕೈಲಾಸ ವಿಲಾಸ), ವಾಮದೇವಮೂರ್ತಿಚರಿತ್ರ (ಭೂವಿಲಾಸ), ಅಘೋರಮೂರ್ತಿಚರಿತ್ರ (ಮದ್ವಿಲಾಸ), ತತ್ಪುರುಷಮೂರ್ತಿಚರಿತ್ರ (ಚಿದ್ವಿಲಾಸ), ಈಶಾನಮೂರ್ತಿಚರಿತ್ರ (ಮಹಾಂತವಿಲಾಸ) ಗುಪ್ತಮೂರ್ತಿಚರಿತ್ರ (ಮುಕ್ತಿವಿಲಾಸ)]–೬, (೧೫) ತ್ರಿಮುಖನ ವಿನೋದ (ಇಷ್ಟಲೀಲಾ, ಪ್ರಾಣಲೀಲಾ, ಭಾವಲೀಲಾ)–೩, (೧೬) ಚಿದ್ಬಯಲಸ್ಥಲ– ಸ್ವರವಚನ (ನುಡಿ–೨೫), (೧೭) ಮಹಾಬಯಲಸ್ಥಲ–೧೯, (೧೮) ನಿರ್ಬಯಲಸ್ಥಲ–೧, (೧೯) ಭಾವನಿರ್ಬಯಲಸ್ಥಲ (ಶರಣಾರ್ಥಿ)– ಸ್ವರವಚನ, (೨೦) ಗಾಳಿಪೂಜೆ–೧, ಹೆಚ್ಚಿನ ವಚನಗಳು–೭.

ವೀರಶೈವ ತತ್ವನಿರೂಪಣೆಯೇ ಈ ಕೃತಿಯ ಮುಖ್ಯ ಗುರಿ. ಅದನ್ನು ಮಡಿವಾಳಪ್ಪ ತನ್ನದೇ ಆದ ನೂತನ ಸ್ಥಲಯೋಜನೆಯಡಿಯಲ್ಲಿ ಸರಳವಾಗಿ ಹೇಳುತ್ತ ಸಾಗಿದ್ದಾನೆ. ನಿರಾಕಾರವಾಗಿದ್ದ ಪರಶಿವನು ನಿಜತೋರಿ ಬ್ರಹ್ಮಾಂಡ ಪಿಂಡಾಂಡಗಳನ್ನು ಸೃಷ್ಟಿಸಿ, ಜೀವಾತ್ಮ ಜನಿಸಿ, ಸಂಸಾರದ ತಾಪತ್ರಯಗಳಲ್ಲಿ ಬಳಲಿ, ಗುರುಕರುಣೆಯಿಂದ ಅಷ್ಟಾವರಣಗಳನ್ನು ಅಳವಡಿಸಿಕೊಂಡು, ಸತ್ಯ–ಸದಾಚಾರ–ಸಮ್ಯಕ್‌ಜ್ಞಾನದಿಂದ ಷಟ್‌ಸ್ಥಲಗಳನ್ನು ಸಾಧಿಸಿ ಸಾಮರಸ್ಯಸ್ಥಿತಿಗೇರುವವರೆಗಿನ ವಿವರಣೆ ಇಲ್ಲಿ ಸ್ಥೂಲವಾಗಿ ಬಂದಿದೆ. ಸ್ಥಲರಹಿತ ಹೆಚ್ಚಿನ ವಚನಗಳಲ್ಲಿ ಪಂಚಸಂಜ್ಞೆಗಳು, ಅವುಗಳಿಗಿರುವ

---

೧೬ ಇದಕ್ಕೆ 'ನಿಜಲೀಲಾನುಭವ' ಎಂದು ಕರೆಯುವುದೂ ಉಂಟು.

ನಾದ–ವರ್ಣ–ವೇದಗಳ ಸಂಬಂಧ, ಅಂತರಂಗ–ಬಹಿರಂಗದ ಅಷ್ಟಾವರಣಗಳು, ಕಲೆ, ಸಾದಾಖ್ಯ, ಷಟ್‌ಸ್ಥಲ ಅಧಿದೇವತೆಗಳ ವರ್ಣನೆಯಿದೆ. ತ್ರಿವಿಧಾತ್ಮಸ್ಥಲ, ಷಡಾವತಾರ, ಮಹಾಬಯಲ ಸ್ಥಲದ ವಚನಗಳು ಮತ್ತು ಹೆಚ್ಚಿನ ವಚನಗಳು ದೀರ್ಘವಾಗಿದ್ದು, ಗದ್ಯಲಕ್ಷಣವನ್ನು ಹೊಂದಿದ್ದರೆ, ಉಳಿದವು ಮುಕ್ತಕಗಳಾಗಿವೆ.

ತತ್ವನಿರೂಪಣೆಯ ಜೊತೆಗೆ ಸಮಾಜವಿಮರ್ಶೆಯೂ ಅಲ್ಲಲ್ಲಿ ಕಂಡುಬರುತ್ತದೆ. 'ಮಹಾಬಯಲಸ್ಥಲ'ದ ಅನೇಕ ವಚನಗಳು ಮಾಂತ್ರಿಕರು, ಸಿದ್ಧರು, ಕಪಟಸನ್ಯಾಸಿಗಳು, ತನ್ನ ತಾನರಿಯದ ತಪಸ್ವಿಗಳನ್ನು ಟೀಕಿಸುತ್ತವೆ. ಅದಕ್ಕೊಂದು ಉದಾಹರಣೆ ಹೀಗಿದೆ :

> ''....ಫಲಪದವಿಯ ಪಡೆವೆವೆಂದು ಹಳ್ಳ ಕೊಳ್ಳ ನದಿತೀರ
> ಅಡವಿ ಅರಣ್ಯ ಗುಡ್ಡ ಗಿರಿ ಗವಿ ವಟವೃಕ್ಷ ಸಂಗಮ
> ಮಠಮಾನ್ಯ ಮೊದಲಾದ ಸುಸ್ಥಳದಲ್ಲಿ ಕುಳಿತು, ನಿದ್ರೆ ಆಹಾರ ತೊರೆದು,
> ಆಸನವ ಬಲಿದು, ಮೌನಮುದ್ರೆಯ ಹಿಡಿದು,
> ವಾತ ಅಂಬು ಪರ್ಣ ಕಲ್ಲು ಮಣ್ಣು ಬೂದಿ ಹುಲ್ಲಿನ ರಸ
> ನೆಲ ಬೇರು ಗಡ್ಡಿ ಮೊದಲಾದ ವಿಹಾರವ ಕೊಂಡು,
> ಮೈಗೆ ಹುತ್ತೇರಿ, ಜಡಿಯಲ್ಲಿ ಆಲವು ಬೆಳೆದು,
> ಗಡ್ಡದೊಳು ಗೀಜಗವು ಮನಿಮಾಡಿರಲು,
> ಮನವಳಿಯದೆ, ಘನವ ತಿಳಿಯದೆ, ತನುವ ಉಳಿಯದೆ
> ಪಂಚೇಂದ್ರಿಯ ಮಿಂಚು ತೊಳಿಯದೆ ಹಳೆ ಹಂಚಾದರೋ.....'' ೬೦

ಸ್ವರವಚನಗಳಲ್ಲಿ ಸಮಾಜ ವಿಡಂಬನೆ ತುಂಬ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ದೇಶಿ ಭಾಷೆಯನ್ನು ನಿರರ್ಗಳವಾಗಿ ಬಳಸಿಕೊಂಡುದು ಈತನ ವಚನಗಳ ಇನ್ನೊಂದು ವೈಶಿಷ್ಟ್ಯ. ಸರಳಪದ–ಸಾಧಿತಪದ–ಸಮಾಸ–ಕೂಡು ನುಡಿ–ನುಡಿಗಟ್ಟು– ಜೋಡುನುಡಿಗಳ ರೂಪದ ಆಡುಭಾಷೆಯನ್ನೇ ಯಥಾವತ್ತಾಗಿ ವಚನಗಳಲ್ಲಿ ಬಳಸಿ, ಜೊತೆಗೆ ಹೇಳುವ ರೀತಿಯಲ್ಲಿಯೂ ಜಾನಪದ ಧಾಟಿಯನ್ನು ಅಳವಡಿಸಿ ಹೊಸ ವಾತಾವರಣವನ್ನುಂಟು ಮಾಡಿದ್ದಾನೆ. ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು. ಬೈಲು, ಬ್ಯಾನಿ, ಒಡ್ಡು, ಬೊಡ್ಡಿ, ಬ್ಯಾರೆ, ಮೆದಿ, ಪುಚ್ಚಿ, ಅರವು, ಜೋಕ, ಹೊಯ್ತ ಕುಣಿ, ಮುಕಳಿ, ತಾಟು, ತಳ್ಳಿ, ವಾರ್ತಿ, ಬಲ್ಲಿ ಹೊಗಸು, ಹೆಡಕು, ಸರಕನೆ, ಜರಕನೆ, ಸಿಗಬೀಳು, ಹಸಗೆಡು, ಕಿಸಬಾಯಿ, ಹಸಿಘಾಯ, ಕಡೆಗಾಣು, ಕಂಬೆಚ್ಚು, ತಗದಿಡು, ಬಡಯೆತ್ತು, ಉಳವಿಡು, ತಲೆಹುಳಕ, ಹಡ್ತಹುಡ್ತಮಾಡು, ಮಸಿಮಣ್ಣಾಗು, ಮಣ್ಣುಗಾಣದೇಹೋಗು, ಹಳೆಹಂಚಾಗು, ಕಚ್ಚಿಗಡಕ, ರಿಣತೀರು, ಕಿಸಬಾಯಿದಾಸ, ಹೆಡಗುಡಿಕಟ್ಟು, ಮಲಕಿನಕೀಲು, ಮಂಗಮತಿ, ಚಿತ್ತಪಟ್ಟಾಗು, ಸಾವು–ಗೀವು, ಶಿವ–ಗಿವ, ಮುಕ್ತಿ–ಗಿಕ್ತಿ ಮಾಂತ–ಗೀಂತ ಇತ್ಯಾದಿ.

'ನಿರಂಜನ ತನಗೆ ತಾನೆ ಸುರಂಜನವ ತೋರಲು ಅಂಗಲಿಂಗವಾಯಿತ್ತು' 'ಅಸ್ತಮಾನದ ಆದಿತ್ಯನಂತೆ ಇರುವುದೇ ಸಮ್ಯಜ್ಞಾನ' 'ನಾ ತಿಳಿದೆ ನೀ ತಿಳಿದೆ ಎಂಬುವುದು ಹೋದರೆ ಶಬ್ದಮುಗ್ಧ' 'ನೀರು ಗಟ್ಟಿಗೊಂಡ ಆಣೆಕಲ್ಲು ನೀರೇ ಆಯಿತಲ್ಲದೆ ಕಲ್ಲಾಗಲಿಲ್ಲ'

'ಸತ್ತವನ ಚಂದ ಇದ್ದವಗಲ್ಲದೆ ಸತ್ತವಗೆಲ್ಲಿಯದೊ ?' 'ಪ್ರೇಮವಿದ್ದರೆ ಕಾಮ ಬಿಡುವುದ್ಯಾಕೆ ? ಕಾಮವಿದ್ದರೆ ಪ್ರೇಮಬಿಡುವುದ್ಯಾಕೆ ?' 'ಕಸ್ತೂರಿಯ ಮೃಗವು ಕಸ್ತೂರಿಯ ಹುಡುಕುತ್ತ ಹೋದರೆ ಕಸ್ತೂರಿಯ ಮೃಗವು ತಾನಲ್ಲದೆ ಕಸ್ತೂರಿಯು ಸಿಗ ಲುಂಟೆ?' 'ಕೊಡಲಿ ಪಿಡಿಯದಲ್ಲದೆ ಕಾಡು ಕಡಿಯದು' ಎಂಬಂತಹ ಸೂತ್ರಬದ್ಧವಾದ ಮಾತುಗಳಲ್ಲಿ ಮಡಿವಾಳಪ್ಪನ ಲೋಕಾನುಭವ, ಕವಿಪ್ರತಿಭೆ ಒಡೆದು ತೋರುತ್ತದೆ.

ಮುದ್ವೀರಸ್ವಾಮಿ :

ಈತನಿಗೆ ಬೆಂಗಳೂರ ಮುದ್ವೀರಸ್ವಾಮಿ, ಮುದ್ವೀರಯೋಗಿ, ಮುದ್ವೀರಾಖ್ಯ ಯೋಗಿ, ಮುದ್ವೀರೇಶ, ಮುದ್ವೀರದೇಶಿಕೋತ್ತಮ ಎಂಬ ನಾಮಾಂತರಗಳಿವೆ.[೧೭] ಈತನನ್ನು ಕುರಿತ ತಾರಾವಳಿಯೊಂದು ಈಚೆಗೆ ಚಿತ್ರದುರ್ಗಮಠದ ಹಸ್ತಪ್ರತಿಯಲ್ಲಿ ದೊರೆತಿದ್ದು[೧೮] ಅದರಲ್ಲಿ ಈತ ಮೊದಲು ಬೆಂಗಳೂರಿನವನಾಗಿದ್ದು ಮುಂದೆ ಹಾಗಲವಾಡಿಗೆ ಹೋಗಿ ಇಮ್ಮಡಿ ಮುದಿಯಪ್ಪನಾಯಕನ ಗುರುವಾಗಿ ಆತನಿಗೆ ತತ್ವಜ್ಞಾನೋಪದೇಶ ಮಾಡಿದಂತೆ ತಿಳಿಸಲಾಗಿದೆ. ಮುದ್ವೀರಸ್ವಾಮಿ ತನ್ನ 'ಶಿವತತ್ವ ಸುಜ್ಞಾನಪ್ರದೀಪಿಕೆ' ಕೃತಿಯನ್ನು ತನ್ನ ಗುರುವಾದ ಮುರಿಗೆಸ್ವಾಮಿಗಳ ಆಜ್ಞಾನುಸಾರ ಬರೆದುದಾಗಿಯೂ, ಅದನ್ನು ಹಾಗಲವಾಡಿ ಇಮ್ಮಡಿ ಮುದಿಯಪ್ಪ ನಾಯಕನಿಗೆ ಹೇಳಿದುದಾಗಿಯೂ, ಅದು ಸೋಸಲೆ ರೇವಣಾರಾಧ್ಯರ ಸಂಸ್ಕೃತ 'ಷಟ್‌ಸ್ಥಲ ಬ್ರಹ್ಮದೀಪಿಕೆ' ಎಂಬ ಕೃತಿಯನ್ನು ಆಧರಿಸಿ ಕನ್ನಡದಲ್ಲಿ ರಚಿಸಿದುದಾಗಿದೆಯೆಂದೂ ತಿಳಿಸುತ್ತಾನೆ. ಇದರಿಂದ ಈತ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವ ನಾಗುತ್ತಾನೆ. ಇಮ್ಮಡಿ ಮುದಿಯಪ್ಪನಾಯಕ, ಮುರಿಗೆ ಶಾಂತವೀರ, ಸೋಸಲೆ ರೇವಣಾರಾಧ್ಯ ಇವರ ಸಂಬಂಧದ ಹಿನ್ನೆಲೆಯಲ್ಲಿ ಈತನ ಕಾಲವನ್ನು ಸು. ೧೭೦೦ರಿಂದ ೧೭೭೦ ಎಂದು ನಿರ್ಧರಿಸಲಾಗಿದೆ.[೧೯]

ಮುದ್ವೀರಸ್ವಾಮಿ ಸ್ವರವಚನ, ವಚನ ಮತ್ತು 'ಶಿವತತ್ವಸುಜ್ಞಾನಪ್ರದೀಪಿಕೆ' ಎಂಬ ಷಟ್ಪದಿ ಕೃತಿಯನ್ನು ಬರೆದಿದ್ದಾನೆ. ಸದ್ಯ ೧೦೮ ಸ್ವರವಚನ, ಒಂದು ವಚನ ದೊರೆತಿವೆ. ಸ್ವರವಚನಗಳಲ್ಲಿ ಈತನ ಅಂಕಿತ 'ಗುರುಸಂಗ' ಎಂದು ಇದ್ದರೆ, ವಚನದಲ್ಲಿ 'ಮುದ್ವೀರಪ್ರಿಯ ಸಂಗಮೇಶ್ವರ' ಎಂದು ಇದೆ.

ಈತನ ವಚನಕ್ಕೆ 'ಶಾಂಭವೀ ನಿರ್ಣಯದ ವಚನ' ಎಂದು ಕರೆಯಲಾಗಿದೆ. ಶಾಂಭವ ಯೋಗದ ಸ್ವರೂಪವನ್ನು ತಿಳಿಸುವುದು ಇದರ ಉದ್ದೇಶ. ಇಲ್ಲಿನ ನಿರೂಪಣೆ ಭಿಕ್ಷದ ಸಂಗಯ್ಯನ ಶಾಂಭವ ಚಕ್ರನಿರ್ಣಯ ಕೃತಿಯಿಂದ ಭಿನ್ನವಾಗಿದೆ. ಆದರೆ ಎರಡರ ಗುರಿ ಒಂದೇ.

---

೧೭ ಕನ್ನಡ ಅಧ್ಯಯನಪೀಠದ ತಾಪ್ರ.೩೧.ಗ.೮೪ ರಲ್ಲಿ ಈತನಿಗೆ 'ಶ್ರೀಮತ್ ಶಾಂಭವಯೋಗಿ ಪರಮ ಸನ್ಮುದ್ವೀರ ಗುರುವರೇಣ್ಯ' ಎಂದು ಕರೆಯಲಾಗಿದೆ.

೧೮. ಈ ವಿಷಯವನ್ನು ನನಗೆ ತಿಳಿಸಿದ ಮಿತ್ರರಾದ ಎಸ್. ಶಿವಣ್ಣನವರಿಗೆ ನಾನು ಉಪಕೃತನಾಗಿದ್ದೇನೆ.

೧೯. ಈತನ ಜೀವನಕ್ಕೆ ಸಂಬಂಧಿಸಿದ ಇನ್ನಷ್ಟು ವಿವರಗಳಿಗಾಗಿ ನಾನು ಸಂಪಾದಿಸಿದ 'ಹಾಲಗವಾಡಿ ಮುದ್ವೀರ ಸ್ವಾಮಿಯ ಸ್ವರವಚನಗಳು' : ತೋಂಟದಾರ್ಯಮಠ ಗದಗ. ಇದರ ಪ್ರಸ್ತಾವನೆ ನೋಡಿರಿ.

ಕಂಗಳಮುಂದಿನ ಬಯಲಿನೊಳಗೊಂದು ಪ್ರಕಾಶಾನ್ವಿತವಾದ ಗಗನಕೋಶಃ ಅಲ್ಲೊಂದು ದಿವ್ಯತರವಾದ ಕಮಲ, ಆ ಕಮಲಮಧ್ಯದಲ್ಲಿ ಅಣವತ್ರಯಾನ್ವಿತವಾದ ಮಹತ್ಕರ್ಣಿಕೆ, ಅದರ ಅಗ್ರದಲ್ಲಿ ನೀಲವಿದ್ರುಮರತ್ನ ಚಂದ್ರಪ್ರಕಾಶದ ದಿವ್ಯ ಸಿಂಹಾಸನ, ಅದರ ಮೇಲೆ ಬೆಳಗುತ್ತಿರ್ಪ ಶಿವಲಿಂಗ. ಆ ಶಿವಲಿಂಗವನ್ನು ಅನುಸಂಧಾನಿಸಿ ಪೂಜಿಸುವ ಕ್ರಮ ಹೇಗೆಂದಡೆ: ಗುರುಕರುಣಕಟಾಕ್ಷವೀಕ್ಷಣ ಬಲದಿಂದ ಕಲ್ಮಶ ಕಂಟಕಾದಿಗಳನ್ನು ತೊಲಗಿಸಿ, ಶಿವಲೋಕದ ಮಾರ್ಗವಿಡಿದು ಹೋಗಿ, ಸಮೀಪಿಸಿ ನಿಂದು ಪರೀಕ್ಷಿಸಿ ನೋಡಲು, ಆ ಶಿವಲೋಕದ ಬಹಿರಾವರಣದಲ್ಲಿ ಮೂವತ್ತೆರಡು ಬಹಿರ್ಮುಖರು (ವಸ್ತುದೇವತೆಗಳು) ಸಂಸ್ಥಿತರಾಗಿದ್ದಾರೆ. ಅವರನ್ನು ಒಡಂಬಡಿಸಿ ಕೊಂಡು, ಅದರಿಂದ ಒಳಗಿರುವ ಸೂರ್ಯವೀಥಿಯಲ್ಲಿ ನಡೆಯಲು, ಅಲ್ಲಿ ಮೂವತ್ತೆರಡು ದಳದಲ್ಲಿ ಎಂಟು ಶೂನ್ಯದಳಗಳನ್ನುಳಿದು ಮಿಕ್ಕ ಇಪ್ಪತ್ತುನಾಲ್ಕು ವಿಕಲಾಕ್ಷರಂಗಳೇ ಅಷ್ಟವಿಧೇಶ್ವರರು, ಅಷ್ಟದಿಕ್ಪಾಲರು, ಅಷ್ಟವಸುಗಳೆನಿಸಿದ್ದಾರೆ. ಅವರಿಗೆ ಅಭಿವಂದಿಸಿ, ಅದರಿಂದೊಳಗಿರುವ ಚಂದ್ರವೀಥಿಯಲ್ಲಿ ನಡೆಯಲು ಅಲ್ಲಿ ಷೋಡಶದಳಗಳಲ್ಲಿರುವ ಷೋಡಶ ಅಕ್ಷರಗಳೇ ಷೋಡಶ ರುದ್ರರಾಗಿಹರು. ಅವರಿಗೆ ಸಾಷ್ಟಾಂಗವೆರಗಿ ಬಿನ್ನವಿಸಿ ಕೊಂಡು, ಅದರೊಳಗಿರುವ ಅಗ್ನಿವೀಥಿಯಲ್ಲಿ ನಡೆಯಲು, ಅಲ್ಲಿ ಅಷ್ಟದಳದಲ್ಲಿರುವ ಅಷ್ಟವ್ಯಾಪಕಾಕ್ಷರಂಗಳೇ ಅಷ್ಟಶಕ್ತಿಯರಾಗಿಹರು. ಅವರ ಪಾದಪದ್ಮಂಗಳಿಗೆ ಎರಗಿ, ಅದರಿಂದೊಳಗಿರ್ಪ ಅತಿ ರಹಸ್ಯವಾದ ಅಂತರ್ಮಂಡಲದೊಳಗೆ ನಡೆಯಲು ಅಲ್ಲಿ ಚತುರ್ದಳದಲ್ಲಿರುವ ಚತುರಕ್ಷರಂಗಳೇ ಚತುಃಶಕ್ತಿಯರಾಗಿದ್ದಾರೆ. ಆ ಪರಶಕ್ತಿಯರ ಪಾದಾರವಿಂದಗಳಿಗೆ ಪೊಡಮಟ್ಟು, ಅವರ ಅಪ್ಪಣೆ ಪಡೆದು ಒಳಪೊಕ್ಕು ನೋಡಲು, ಅಲ್ಲಿ ಶಕ್ತಿಶಿರಾಗ್ರದಲ್ಲಿ ಪಂಚಾಕಾಶ ಷಟ್ಟಾರಕ ತ್ರಿವಿಧಲಿಂಗಾಂಗಗಳೇಕಾಕಾರವಾದ ಪರಬ್ರಹ್ಮವಿರುವುದು. ಅದರ ನೆಲೆಯನ್ನು ತಿಳಿಯುವುದೇ ನಿಜಯೋಗ. ಅದೇ ಶಾಂಭವಯೋಗ. ಹೀಗೆ ಸಕ್ರಮವಾಗಿ ತತ್ವನಿರೂಪಣೆ ಮಾಡುವ ಈ ವಚನ ಗದ್ಯದ ಗತಿಯನ್ನು ಅನುಸರಿಸಿದೆ.

### ಮುಮ್ಮಡಿ ಕಾರ್ಯೇಂದ್ರ :

ಈತ ತನ್ನ ಜೀವನಕ್ಕೆ ಸಂಬಂಧಿಸಿದಂತೆ ತನ್ನ ಕೃತಿ 'ವೇದಸಂಜೀವಿನಿ'ಯ ಆದಿ ಮತ್ತು ಅಂತ್ಯದ ಗದ್ಯದಲ್ಲಿ ಹೀಗೆ ಹೇಳಿಕೊಂಡಿದ್ದಾನೆ: ತಂದೆ ಮಾಸ್ತಿವಂಶದ ಇಮ್ಮಡಿ ಕಾರ್ಯೇಂದ್ರ, ತಾಯಿ ಕುಪ್ಪಮಾಂಬೆ, ಗುರು ದೊಡ್ಡ ದೇಶಿಕಾರ್ಯ. ಈತ ತನ್ನನ್ನು 'ಮುಮ್ಮಡಿ ಕಾರ್ಯ ಕ್ಷಿತೀಂದ್ರ' ಎಂದು ಕರೆದುಕೊಂಡಿರುವುದರಿಂದ ಅರಸುಮನೆತನಕ್ಕೆ ಸೇರಿದವನಾಗಿರಬೇಕು. ಆದರೆ ಅದು ಯಾವುದು ? ಎಲ್ಲಿತ್ತು ? ಎಂಬುದು ಸ್ಪಷ್ಟವಿಲ್ಲ. 'ವೇದಸಂಜೀವಿನಿ'ಯನ್ನು ಸಂಪಾದಿಸಿದ ಹೊಸಮಠದ ಬಸವಲಿಂಗಸ್ವಾಮಿಗಳು ''ಕಾರ್ಯ ಎಂಬ ಸಂಸ್ಥಾನಕ್ಕೆ ಇವರ ವಂಶಜರು ದೊರೆಗಳಾಗಿದ್ದರು. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲಿ 'ಕಾರ್ಯ' ಹೆಸರಿನ ಒಂದು ಗ್ರಾಮವಿದೆ. ಅದು ಪೂರ್ವಕಾಲದಲ್ಲಿ ರಾಜಧಾನಿಯಾಗಿತ್ತೆಂದು ಹೇಳಲು ತಕ್ಕ ಆಧಾರವೇನೂ

ದೊರೆಯಲಿಲ್ಲ''[೨೦] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕವಿಚರಿತ್ರೆಕಾರರು ಈತನ ಕಾಲ ಕ್ರಿ. ಶ. ೧೭೦೦ ಎಂದು ಹೇಳಿದ್ದಾರೆ.[೨೧] ಇಷ್ಟಲ್ಲದೆ ಮತ್ತಾವ ಸಂಗತಿಗಳೂ ಈತನನ್ನು ಕುರಿತು ಸದ್ಯಕ್ಕೆ ದೊರಕುವುದಿಲ್ಲ.

'ವೇದ ಸಂಜೀವಿನಿ' ಕಾರ್ಯೇಂದ್ರನ ಏಕೈಕ ಕೃತಿ. ಇದರಲ್ಲಿ ೧೧ ಅಧ್ಯಾಯ ೧೨೫ ವಚನಗಳಿವೆ.[೨೨] ಗುರು ದೊಡ್ಡದೇಶಿಕೇಂದ್ರ ''ಕನಸಿನಲ್ಲಿ ಬಂದು ಮನಸ್ಸಂತುಷ್ಟಿಯಂ ಮಾಡಿ, ಅಕ್ಷಯಮೋಕ್ಷಪ್ರದಮಪ್ಪ ದೀಕ್ಷೆಯಂ ಕೊಟ್ಟು, ಪರತತ್ವೋಪದೇಶಮಂ ಪಾಲಿಸಿ, ದಯೆಯಿಂ ಲಾಲಿಸಿ, ತನ್ಮಹಿಮೆ ಪ್ರಕಟವಾಗುವಂತು, ಜೀವರ ಪಾಪಮಂ ನೀಗುವಂತು, ಪರತತ್ವವಚನ ಷೋಡಶೋತ್ತರಶತಮಂ ರಚಿಸೆಂದು ನಿರೂಪಿಸಲಾ ದೇಶಿಕನಾಜ್ಞೆಯಂ ಶಿರಸಾವಹಿಸಿ, ತದ್ಧಾರಣಾ ಸಾಮರ್ಥ್ಯದಿಂ ಮಿಸುಕದಿಂತುಸಿರ್ದೆಂ'' ಎಂದು ಹೇಳಿದ್ದಾನೆ. ಹತ್ತನೆಯ ಅಧ್ಯಾಯದ ಅಂತ್ಯಗದ್ಯದಲ್ಲಿ ತನ್ನ ಕೃತಿಯನ್ನು ಕುರಿತು ''......ಮುಮ್ಮಡಿ ಕಾರ್ಯಕ್ಷಿತೀಂದ್ರ ವಿರಚಿತವಮಾದ ರೇವಣಸಿದ್ಧೇಶ್ವರ ಮರುಳ ಸಿದ್ಧೇಶ್ವರೈಕೋರಾಮ ಪಂಡಿತಾರ್ಯಾಲ್ಲಮಪ್ರಭು ಚೆನ್ನಬಸವೇಶ್ವರಾದಿ ಪೂಜ್ಯಪಾದ ವಿರಚಿತ ಸಕಲಗ್ರಂಥ ಸಾರಭೂತಮಾದ ವೀರಶೈವ ಸಿದ್ಧಾಂತ ವೇದಸಂಜೀವಿನಿ....'' ಎಂದು ತಿಳಿಸಿದ್ದಾನೆ. ವಚನಗಳ ಅಂಕಿತ 'ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ'.

ಇದು ಒಂದು ಶುದ್ಧ ತಾತ್ವಿಕ ಕೃತಿ. ವೀರಶೈವತತ್ವ ವೇದಕ್ಕಿಂತಲೂ ಮಿಗಿಲಾದುದು, ವೇದಕ್ಕೆ ಸಂಜೀವಿನಿ ರೀತಿಯಲ್ಲಿರುವುದು ಎಂಬುದು ಕಾರ್ಯೇಂದ್ರನ ನಿಲವು. ಅದನ್ನು ಸಿದ್ಧಮಾಡಿ ತೋರಿಸಲು ಈ ಕೃತಿಯಲ್ಲಿ ಆತ ಪ್ರಯತ್ನಿಸಿದ್ದಾನೆ. ವೀರಶೈವದ ಸೃಷ್ಟಿತತ್ವದಿಂದ ಹಿಡಿದು ಐಕ್ಯತತ್ವದ ವರೆಗಿನ ಸಂಗತಿಗಳೆಲ್ಲ ಇಲ್ಲಿ ವ್ಯವಸ್ಥಿತವಾಗಿ, ಪ್ರಮಾಣಬದ್ಧವಾಗಿ ನಿರೂಪಿಸಲ್ಪಟ್ಟಿವೆ. ಹೀಗಿದ್ದೂ ಸಂಸ್ಕೃತ ಉದ್ಧರಣೆಗಳನ್ನು ಹೆಚ್ಚಾಗಿ ಬಳಸದೇ ಇರುವುದು ಈತನ ವೈಶಿಷ್ಟ್ಯವೆನಿಸಿದೆ. ವಚನಗಳು ತುಂಬ ದೀರ್ಘವಾಗಿದ್ದು ಶಾಸ್ತ್ರಜಡವೆನಿಸಿವೆ. ಹೀಗಾಗಿ ಕಾವ್ಯಾಂಶಕ್ಕೆ ಇಲ್ಲಿ ಅವಕಾಶವಿಲ್ಲ. ಆದರೆ ಆತನ ಕೆಲವು ಹೇಳಿಕೆಗಳು ಸೂತ್ರಬದ್ಧವಾಗಿದ್ದು ಆಕರ್ಷಕವೆನಿಸಿವೆ. ಇಲ್ಲಿ ಕೆಲವನ್ನು ಗಮನಿಸಬಹುದು.

'ಹಮ್ಮಳಿದು ಸುಮ್ಮನೆಯಾದುದೇ ಲಿಂಗೈಕ್ಯ' 'ಶಿವಾಚಾರದಲ್ಲಿ ಲಿಂಗಪರವಶವಾದುದೇ ಲಿಂಗೈಕ್ಯ' 'ಕರಿಯು ನುಂಗಿದ ಕಪಿತ್ಥಫಲದಂತೆ ಹೊರಗೆ ಸಾಕಾರವಾಗಿಯೂ ಒಳಗೆ ನಿರಾಕಾರವಾಗಿಯೂ ಇರ್ಪುದೇ ಭಕ್ತಿಯು, ಉಳಿದುದೆಲ್ಲ ಅಭಕ್ತಿಯು' 'ಜಿಹ್ವೆಯಲ್ಲಿ ಮೃತ್ಯುವೂ ನೇತ್ರದಲ್ಲಿ ಕಾಲನೂ ಇರಲು ಸಾಸಿಕದಲ್ಲಿರ್ಪ ಪ್ರಾಣನಿಗೆ ಬದುಕಲುಂಟೇನಯ್ಯ ?' 'ವರ್ತಮಾನವೇ ಸ್ಥೂಲವು, ಭೂತಕಾಲವೇ ಸೂಕ್ಷ್ಮವು, ಭವಿಷತ್ಕಾಲವೇ ಕಾರಣವು' 'ಸೂರ್ಯನೇ ತೀರ್ಥವು, ಚಂದ್ರನೇ ಪ್ರಸಾದವು', 'ಒಳಗೆ

---

೨೦. ವೇದಸಂಜೀವಿನಿ : ಪ್ರಸ್ತಾವನೆ. ಪು.೨. (ಮೈಸೂರು. ೧೯೦೯).

೨೧. ಕಕಚ. ಪು. ೫೩೧. (ಪ.ಆ.)

೨೨. ಕೃತಿಯಲ್ಲಿ ಕವಿ ೧೧೬ ವಚನಗಳಿವೆ ಎಂದು ಹೇಳಿಕೊಂಡಿದ್ದಾನೆ. ಕೆಳಗಿನ ವಿವರ ನೋಡಿ.

ಪಾಪವೂ ಹೊರಗೆ ಧರ್ಮವೂ ಮನುಷ್ಯರಿಗೆ, ಹೊರಗೆ ಪಾಪವೂ ಒಳಗೆ ಧರ್ಮವೂ ದೇವತೆಗಳಿಗೆ' 'ಬ್ರಹ್ಮಾಂಡವೆ ಸ್ಥಾವರವು, ಪಿಂಡಾಂಡವೆ ಜಂಗಮವು' 'ಸತ್ಯವೇ ಪರಮನು, ಜ್ಞಾನವೇ ಜೀವನು, ಆನಂದವೇ ಶರೀರವು' 'ಪೃಥ್ವಿಯೇ ಶೂದ್ರನು, ಜಲವೇ ವೈಶ್ಯನು, ಅಗ್ನಿಯೇ ಕ್ಷತ್ರಿಯನು ವಾಯುವೇ ಬ್ರಾಹ್ಮಣನು' 'ಹಗಲಿದ್ದಲ್ಲಿ ಕತ್ತಲೆಯಿರ್ಪುದೆ ? ಕತ್ತಲೆಯಿದ್ದಲ್ಲಿ ಹಗಲಿರ್ಪುದೆ ?' 'ಬೀಜದೊಳಗಿಹ ವೃಕ್ಷದ ಫಲವ ಸವಿಯಬಹುದೆ ? ಹಾಲೊಳಗಿರ್ಪ ತುಪ್ಪವು ಅರಸಿದರೆ ಸಿಕ್ಕುವುದೆ ? ಮಳೆವನಿಯೊಳಗಿರ್ಪ ಹುರುಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೆ ? ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ ? ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೆ ?' –ಇಂಥ ಮಾತುಗಳು ಗಹನ ತತ್ವವನ್ನು ಕೇಳುಗನ ಮನದಲ್ಲಿ ಸರಳವಾಗಿ ನಾಟಿಸಲು ಸಹಾಯಕವಾಗಿವೆ.

ಬಸವೇಶ್ವರ, ಚನ್ನಬಸವಣ್ಣ, ಅಲ್ಲಮಪ್ರಭುಗಳನ್ನು ಭಕ್ತ–ಗುರು–ಜಂಗಮಕ್ಕೆ ಅನ್ವಯಿಸಿ ಹೇಳಿದ ಕೆಳಗಿನ ವಚನ ಕಾರ್ಯೇಂದ್ರನ ಸರಳ ನಿರೂಪಣೆಗೆ ಇನ್ನೊಂದು ನಿದರ್ಶನವಾಗಿದೆ:

''ಸತ್ಯಸ್ವರೂಪಮಾದ ಬಸವೇಶ್ವರನೇ ಭಕ್ತನು.
ಜ್ಞಾನಸ್ವರೂಪಮಾದ ಚೆನ್ನಬಸವೇಶ್ವರನೇ ಗುರುವು.
ಆನಂದಸ್ವರೂಪಮಾದ ಅಲ್ಲಮಪ್ರಭುವೇ ಜಂಗಮ.
ಇಂತಪ್ಪ ಗುರು ಜಂಗಮ ಭಕ್ತರೆಂಬ ಮಹಾನದಿಗಳು ತ್ರಿಪಥಗಾಮಿಗಳಾಗಿ
ಮಚ್ಛರೀರವೆಂಬ ಕಾಶೀಕ್ಷೇತ್ರದಲ್ಲಿ ಪರಿದು ಪವಿತ್ರಮಂ ಮಾಡಿ
ನನ್ನ ಹೃದಯವೆಂಬ ಮಣಿಕರ್ಣಿಕಾಸ್ಥಾನದೊಳ್ಮೂರೊಂದಾಗಿ ಕೂಡಲು
ಸತ್ಯವೇ ಕಂಠ, ಜ್ಞಾನವೇ ಗೋಮುಖ, ಆನಂದವೇ ಗೋಳಾಕಾರವಾಗಿರ್ಪ
ಮಹಾಲಿಂಗವೆಂಬ ತ್ರಿವೇಣೀ ಸಂಗಮದಲ್ಲಿ ನಾಂ ಮುಳುಗಿ,
ನಿರ್ವಾಣದಲ್ಲಿ ಮುನ್ನಿನಂತಿರ್ದೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ''. ೮೦

ಪರಿಷ್ಕರಣ :

ಈ ಸಂಪುಟದಲ್ಲಿ ಸೇರಿದ ಬಾಲಸಂಗಯ್ಯನ ವಚನಗಳನ್ನು ಐದು ಹಸ್ತಪ್ರತಿ ಮತ್ತು ಒಂದು ಮುದ್ರಿತ ಕೃತಿಯಿಂದ ಪರಿಷ್ಕರಿಸಲಾಗಿದೆ. ಇದರಲ್ಲಿ ಮೂರು ಹಿರಿಯಗಾತ್ರದ ಕಟ್ಟುಗಳು, ಎರಡು ಅದರ ಸಂಗ್ರಹರೂಪವೆನಿಸಿದ ಕಿರಿಯ ಗಾತ್ರದ ಕಟ್ಟುಗಳು. ಹಿರಿಯ ಗಾತ್ರದ ಕಟ್ಟುಗಳಲ್ಲಿ ಎರಡು ತಾಡೋಲೆಯ ಪ್ರತಿಗಳಾದರೆ, ಒಂದು ಕಾಗದ ಪ್ರತಿ. ಕಿರಿಯ ಗಾತ್ರದ ಕಟ್ಟುಗಳಲ್ಲಿ ಎರಡು ತಾಡೋಲೆ ಪ್ರತಿಗಳು ಮತ್ತು ಡಾ. ಎಂ. ಎಸ್. ಸುಂಕಾಪುರ ಅವರು ಸಂಪಾದಿಸಿದ ಮುದ್ರಿತ ಕೃತಿ. ಇದರಲ್ಲಿ ಕನ್ನಡ ಅಧ್ಯಯನಪೀಠದ ಹಿರಿಯಗಾತ್ರದ ಪ್ರತಿ ಸಮಗ್ರ ಮತ್ತು ಶುದ್ಧವಾಗಿರುವುದರಿಂದ ಅದನ್ನೇ ಮೂಲ ಪ್ರತಿಯಾಗಿ ಇಟ್ಟುಕೊಂಡು, ಗುಲಬರ್ಗಾ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಹಿರಿಯ ಗಾತ್ರದ ಕೃತಿಗಳನ್ನು ಹಾಗೂ ಕನ್ನಡ ಅಧ್ಯಯನಪೀಠದ ಕಿರಿಯ ಗಾತ್ರದ ಎರಡು

ಪ್ರತಿಗಳು ಮತ್ತು ಮುದ್ರಿತಪ್ರತಿಯನ್ನು ವಚನಗಳ ತಿದ್ದುಪಡಿಗೆ ಬಳಸಿಕೊಳ್ಳಲಾಗಿದೆ. ಇದು ಜನಪ್ರಿಯ ಆವೃತ್ತಿಯಾಗಿರುವುದರಿಂದ ಪಾಠಾಂತರ ಗುರುತಿಸಿಲ್ಲ. ಮೂಲ ಕೃತಿಯನ್ನು ಯಥಾ ಸ್ವರೂಪದಲ್ಲಿ ಉಳಿಸಿ ಕೊಂಡು, ಅದರಲ್ಲಿಲ್ಲದ, ಸಂಗ್ರಹ ರೂಪದ ಕಟ್ಟಿನಲ್ಲಿ ಮಾತ್ರ 'ಅನುಭಾವದ ವಚನಗಳು' ಎಂಬ ಶೀರ್ಷಿಕೆಯಡಿಯಲ್ಲಿ ಹೆಚ್ಚಿಗೆ ಇರುವ ೧೦೦ ವಚನಗಳನ್ನು ಪರಿಶಿಷ್ಟ ಒಂದರಲ್ಲಿ ಸಂಗ್ರಹಿಸಿದರೆ, ಅದೇ ಸಂಗ್ರಹರೂಪದ ಕೃತಿಯಲ್ಲಿ ಹಿರಿಯ ಗಾತ್ರದ ಕೃತಿಗಳಲ್ಲಿಯ ವಚನದ ಭಾವವನ್ನು ಒಳಗೊಂಡೂ ಸ್ವತಂತ್ರವೆಂಬಂತೆ ತೋರುವ ೨೭ ವಚನಗಳನ್ನು ಪರಿಶಿಷ್ಟ ಎರಡರಲ್ಲಿ ಕೊಡಲಾಗಿದೆ. ಇಂಥ ವಚನಗಳಲ್ಲಿ ಹಿರಿಯ ಗಾತ್ರದ ಕೃತಿಯಲ್ಲಿನ ದೀರ್ಘ ವಚನಗಳನ್ನು ಸಾರಸಂಗ್ರಹ ಮಾಡಲಾಗಿದೆ. ಅಲ್ಲದೆ ನಾಲ್ಕಾರು ವಚನಗಳನ್ನು ಸೇರಿಸಿ ಒಂದೇ ವಚನ ಮಾಡಿದ್ದೂ ಉಂಟು.

ಹಿರಿಯಗಾತ್ರದ ಮೂಲ ಕಟ್ಟಿನಲ್ಲಿ ವಚನದ ಒಡಲಲ್ಲಿಯೆ ಆಯಾ ವಚನ ಭಾವದ ಸಂಸ್ಕೃತ ಪ್ರಮಾಣಗಳನ್ನು ಸೇರಿಸಿದ್ದರೆ, ಸಂಗ್ರಹರೂಪದ ಕೃತಿಯಲ್ಲಿ ಶ್ಲೋಕಗಳನ್ನು ಪ್ರತ್ಯೇಕಿಸಿ ಅವುಗಳಿಗೂ ವಚನಾಂಕಿತ ಹಾಕಿ ಸ್ವತಂತ್ರ ವಚನ ಎಂಬಂತೆ ಮಾಡಲಾಗಿದೆ. ಅವನ್ನು ವಚನದಲ್ಲಿ ಸೇರಿಸಿದರೆ ಈ ಕೃತಿಯ ವಚನ ಸಂಖ್ಯೆ ಇನ್ನೂ ಕಡಿಮೆಯಾಗುತ್ತದೆ. ಹಿರಿಯ ಗಾತ್ರದ ಕೃತಿಗಳಲ್ಲಿಯೂ ಇಂಥ ಕೆಲವು ಉದಾಹರಣೆಗಳು ದೊರೆಯುತ್ತವೆ. ಅವನ್ನು ಇಲ್ಲಿ ವಚನದೊಡನೆ ಸೇರಿಸಿ ಕೊಡಲಾಗಿದೆ. ಹೀಗಾಗಿ ಮೂಲದಲ್ಲಿ ಅದರ ವಚನ ಸಂಖ್ಯೆ ೮೧೫ ಇದ್ದುದು ೭೯೨ಕ್ಕೆ ಇಳಿದಿದೆ. ಈ ಕೃತಿಯಲ್ಲಿ ವಚನಗಳಷ್ಟೇ ಸಂಖ್ಯೆಯಲ್ಲಿ ಸಂಸ್ಕೃತ ಶ್ಲೋಕಗಳೂ ಬಳಕೆಯಾಗಿವೆ. ಅವುಗಳಲ್ಲಿ ಕೆಲವು ತುಂಬ ವಿಕೃತಗೊಂಡಿವೆ. ಪಂಡಿತರಿಂದಲೂ ತಿದ್ದಲು ಸಾಧ್ಯವಾಗದ ಅಂಥವುಗಳನ್ನು ಹಾಗೇ ಇಟ್ಟು ಪ್ರಶ್ನಾರ್ಥಕ ಚಿಹ್ನೆಯನ್ನು ಕೊಡಲಾಗಿದೆ.

ಭಿಕ್ಷದ ಸಂಗಯ್ಯನ ವಚನವನ್ನು ಎರಡು ಹಸ್ತಪ್ರತಿಗಳಿಂದ ಪರಿಷ್ಕರಿಸಲಾಗಿದೆ. ಒಂದು ಶಿವಯೋಗಮಂದಿರದ ಪ್ರತಿ, ಮತ್ತೊಂದು ಕನ್ನಡ ಅಧ್ಯಯನ ಪೀಠದ ಪ್ರತಿ. ಶಿವಯೋಗಮಂದಿರದ ಪ್ರತಿಯಲ್ಲಿನ ಈ ವಚನವನ್ನು ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿ ಅವರು ಈಗಾಗಲೇ ಹೇಮಕೂಟ (೧–೧೦) ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರ ಜೊತೆಗೆ ಕನ್ನಡ ಅಧ್ಯಯನಪೀಠದ ಕಾಗದ ಹಸ್ತಪ್ರತಿಯಲ್ಲಿನ ವಚನವನ್ನು ಹೋಲಿಸಿ ನೋಡಿ ದೋಷಗಳನ್ನು, ಬಿಟ್ಟುಹೋದ ಭಾಗವನ್ನು ಸರಿಪಡಿಸಿಕೊಳ್ಳಲಾಗಿದೆ.

ಕಡಕೋಳ ಮಡಿವಾಳಪ್ಪನ 'ನಿಜಲೀಲಾಮೃತ ವಚನಗಳು' ಕೃತಿ ಈಗಾಗಲೇ ಹುಬ್ಬಳ್ಳಿ ಮೂರುಸಾವಿರಮಠದಿಂದ ಡಾ. ಎಂ. ಎಸ್. ಲಠ್ಠೆ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಅದರ ಜೊತೆಗೆ ಅವರೇ ಒದಗಿಸಿದ ಒಂದು ಕಾಗದ ಹಸ್ತಪ್ರತಿಯನ್ನೂ ಇಟ್ಟುಕೊಂಡು ಈ ವಚನಗಳನ್ನು ಪರಿಷ್ಕರಿಸಲಾಗಿದೆ. ಹಸ್ತಪ್ರತಿಯಲ್ಲಿ ಪ್ರಕಟವಾದ ಕೃತಿಗಿಂತ ೭ ವಚನಗಳು ಹೆಚ್ಚಿಗಿವೆ. ಅವುಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಮೂಲ ಹಸ್ತಪ್ರತಿಯಲ್ಲಿ ವಚನ ಮತ್ತು ಸ್ವರವಚನಗಳು ಸ್ಥಲಾನುಗುಣವಾಗಿ ಜೋಡಿಸಲ್ಪಟ್ಟಿವೆ. ಡಾ. ಲಠ್ಠೆ ಅವರು ಅವುಗಳನ್ನು ಪ್ರತ್ಯೇಕಿಸಿ, ಸ್ವರವಚನಗಳನ್ನು ಅನುಬಂಧದಲ್ಲಿ

ಕೊಟ್ಟಿದ್ದಾರೆ. ಆದರೆ ಇಲ್ಲಿ ನಾನು ಮೂಲ ಕೃತಿಯ ಸ್ವರೂಪ ಕಾಯ್ದುಕೊಳ್ಳಲೆಂದು ಸ್ವರವಚನಗಳನ್ನು ಕೃತಿಯ ಒಳಗೇ ಸೇರಿಸಿ ಕೊಟ್ಟಿದ್ದೇನೆ. ಮುದ್ವೀರಸ್ವಾಮಿಯ ವಚನ ಒಂದೇ ಹಸ್ತಪ್ರತಿಯಲ್ಲಿ ದೊರೆತಿದ್ದು 'ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು' ಕೃತಿಯಲ್ಲಿ ಪ್ರಕಟವೂ ಆಗಿದ್ದು, ಅಲ್ಲಿಂದ ಅದನ್ನು ಯಥಾವತ್ತಾಗಿ ತೆಗೆದುಕೊಂಡಿದ್ದೇನೆ.

'ವೇದಸಂಜೀವಿನಿ' ಕೃತಿಯ ಪ್ರಾಚೀನ ಹಸ್ತಪ್ರತಿ ನೋಡಲು ದೊರಕಲಿಲ್ಲ. ಹೀಗಾಗಿ ಹೊಸಮಠದ ಬಸವಲಿಂಗಸ್ವಾಮಿಗಳು ೧೯೦೯ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ ಕೃತಿಯನ್ನೇ ಆಧರಿಸಿ ಅದರಲ್ಲಿ ಉಳಿದುಕೊಂಡಿದ್ದ ದೋಷಗಳನ್ನು ಸರಿಪಡಿಸಿ, ಗದ್ಯದಂತೆ ಮುದ್ರಿಸಿದ ವಚನಗಳನ್ನು ಸಾಲುಗಳಾಗಿ ಒಡೆದು ಜೋಡಿಸಲಾಗಿದೆ.

ಇಲ್ಲಿಯ ಎಲ್ಲರ ವಚನಗಳನ್ನು ವಚನಕಾರರು ಬರೆದ ರೂಪದಲ್ಲಿಯೇ ಉಳಿಸಿಕೊಳ್ಳಲು ಪ್ರಯತ್ನಿಸಿರುವುದರಿಂದ ದೇಶೀ ಪದಗಳನ್ನು ತಿದ್ದಿ ಶಿಷ್ಟಗೊಳಿಸಿಲ್ಲ. ಆಭಾಸ, ಅರ್ಥದೋಷ ಪ್ರಸಂಗಗಳಲ್ಲಿ ಮಾತ್ರ ತಿದ್ದುಪಡಿ ಮಾಡಲಾಗಿದೆ.

ಕೃತಜ್ಞತೆಗಳು :

'ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯನ್ನು ಅಂಗೀಕರಿಸಿ ಧನಸಹಾಯ ನೀಡಿದ ಕರ್ನಾಟಕ ಸರಕಾರಕ್ಕೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ಈ ಸಂಪುಟ ಸಿದ್ಧಪಡಿಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೆ, ಈ ಸಂಪುಟಗಳ ಪ್ರಧಾನ ಸಂಪಾದಕರಾಗಿ ದಣಿವರಿಯದೆ ತಾವೂ ಕಾರ್ಯ ಮಾಡುತ್ತ, ನಮ್ಮಿಂದಲೂ ಕಾರ್ಯ ಮಾಡಿಸಿದ ಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಅನಂತ ನಮಸ್ಕಾರಗಳು.

ಈ ಸಂಪುಟ ಸಿದ್ಧಪಡಿಸುವಲ್ಲಿ ನೆರವಾದ ಕೈಗಳು ಅನೇಕ. ಇದರ ಹಸ್ತಪ್ರತಿ ಆಗಲೇ ಮುದ್ರಣಕ್ಕೆ ಸಿದ್ಧವಾದ ನಂತರ ಆಕಸ್ಮಿಕವಾಗಿ ದೊರೆತ ಬಾಲಸಂಗಯ್ಯನ ಹೆಚ್ಚಿನ ವಚನಗಳಿರುವ ಕಟ್ಟಿನಿಂದ ಸು. ೮೦೦ ವಚನಗಳನ್ನು ಬರೆದು ತೆಗೆದು, ಪರಿಷ್ಕರಿಸುವ ಕಾರ್ಯದಲ್ಲಿ ಸತತವಾಗಿ ಒಂದು ತಿಂಗಳ ಕಾಲ ನನ್ನೊಡನೆ ದುಡಿದ ಸ್ನೇಹಿತರಾದ ಬಸವರಾಜ ಹೂಗಾರ, ಬಿ. ಬಿ. ಬಿರಾದರ ಮತ್ತು ಸಂಶೋಧನ ವಿದ್ಯಾರ್ಥಿಮಿತ್ರ ಎಫ್. ಟಿ. ಹಳ್ಳಿಕೇರಿ ಅವರ ಸಹಾಯವನ್ನು ಕೃತಜ್ಞತೆಯಿಂದ ನೆನೆಯಲು ಹೆಮ್ಮೆ ಎನಿಸುತ್ತದೆ. ಯಾವುದೇ ಸಂಪುಟದಲ್ಲಿ ಸೇರದಷ್ಟು ಅಧಿಕ ಸಂಖ್ಯೆಯಲ್ಲಿ ಸೇರಿದ ಈ ಸಂಪುಟದ ಸಂಸ್ಕೃತ ಉದ್ಧರಣೆಗಳನ್ನು ಬೇಸರವಿಲ್ಲದೆ ತಿದ್ದಿ ಸರಿಪಡಿಸಿಕೊಟ್ಟ ಆತ್ಮೀಯರಾದ ಡಾ. ಮಲ್ಲಿಕಾರ್ಜುನ ಪರಡ್ಡಿ ಮತ್ತು ಜಯತೀರ್ಥಾಚಾರ್ಯ ಮಳಗಿ ಅವರಿಗೆ ನಾನು ಉಪಕೃತನಾಗಿದ್ದೇನೆ. ಬಾಲಸಂಗಯ್ಯನ ವಚನಗಳು ಹಸ್ತಪ್ರತಿಗಳನ್ನು ಒದಗಿಸಿದ ಗುಲಬರ್ಗಾ ವಿಶ್ವವಿದ್ಯಾಲಯದ ಡಾ. ಎಂ. ಜಿ. ಬಿರಾದರ ಅವರಿಗೆ, ಬೆಂಗಳೂರು ವಿಶ್ವವಿದ್ಯಾಲಯದ ಎಸ್. ಶಿವಣ್ಣ ಅವರಿಗೆ, ಈ ಯೋಜನೆಯ ಸಹಾಯಕ ಸಂಶೋಧಕರಾಗಿ ನನಗೆ ನಿರಂತರ ನೆರವಾದ ಶ್ರೀಮತಿ ವಿಜಯಶ್ರೀ ಹಿರೇಮಠ,

ವಾಯ್. ಎಂ. ಯಾಕೊಳ್ಳಿ, ಬಿ. ವಿ. ಕೋರಿ ಮತ್ತು ನನ್ನ ಶ್ರೀಮತಿ ಮಂಗಳಾಗೆ, ನಾವು ಕೊಟ್ಟ ತೊಂದರೆಗಳನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಂಡು ಅಚ್ಚುಕಟ್ಟಾಗಿ ಮಾದರಿ ಪ್ರತಿಯನ್ನು ಮುದ್ರಿಸಿಕೊಟ್ಟ ತ್ವರಿತ ಮುದ್ರಣದ ಶ್ರೀ ಫ. ಶಿ. ಭಾಂಡಗೆ ಅವರಿಗೆ ಮತ್ತು ಅವರ ನಿಷ್ಠಾವಂತ ಕೆಲಸಗಾರರಿಗೆ ನನ್ನ ಕೃತಜ್ಞತೆಗಳು.

**ಮರು ಪರಿಷ್ಕರಣ :**

ಈ ಸಂಪುಟದ ಮರುಪರಿಷ್ಕರಣ ಸಂದರ್ಭದಲ್ಲಿ 'ಬೊಮ್ಮಗೊಂಡೇಶ್ವರ' ಎಂಬ ಒಬ್ಬ ನೂತನ ವಚನಕಾರನ ಒಂದು ವಚನವನ್ನು ಹಾಗೂ ಮುಮ್ಮಡಿ ಕಾರ್ಯೇಂದ್ರನ–೧೬ ವಚನಗಳನ್ನು ಹೆಚ್ಚಿಗೆ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಒಟ್ಟು ವಚನಸಂಖ್ಯೆ ೧೧೦೯ ಇದ್ದದ್ದು ೧೧೨೬ಕ್ಕೆ ಏರಿದೆ. ಉಳಿದ ವಚನಗಳಲ್ಲಿ ಉಳಿದಿದ್ದ ಮುದ್ರಣ ದೋಷಗಳನ್ನು ಸರಿಪಡಿಸಿಕೊಳ್ಳಲಾಗಿದೆ. ೩೪೬ನೆಯ ವಚನದ ಬಿಟ್ಟು ಹೋಗಿದ್ದ ಎರಡು ಸಾಲುಗಳನ್ನು ತುಂಬಿಕೊಳ್ಳಲಾಗಿದೆ. ಕೆಲವು ವಚನಗಳ ಸಾಲುಗಳನ್ನು ಮುರಿದು ವಿನ್ಯಾಸ ಸರಿಪಡಿಸಲಾಗಿದೆ. ಭಾವಸಾಮ್ಯವಿದ್ದರೂ ವಚನದ ರಚನೆ, ಜೋಡಿಸಿದ ಸಂದರ್ಭ ಭಿನ್ನವಾಗಿರುವುದರಿಂದ ಹಾಗೇ ಉಳಿಸಿಕೊಳ್ಳಲಾಗಿದೆ. ಹೊಸದಾಗಿ ದೊರೆತ ವಚನಕಾರನ ಪರಿಚಯವನ್ನು ಪ್ರಸ್ತಾವನೆಯಲ್ಲಿ ಅಳವಡಿಸಲಾಗಿದೆ. 'ವೇದಸಂಜೀವಿನಿ'ಯ ಮೂಲ ಹಸ್ತಪ್ರತಿ ದೊರೆತುದರಿಂದ ಮುದ್ರಿತ ಪ್ರತಿಯಲ್ಲಿ ಉಳಿದಿದ್ದ ದೋಷಗಳನ್ನು ಅದರಿಂದ ಸರಿಪಡಿಸಿಕೊಳ್ಳಲಾಗಿದೆ. ಮುದ್ರಿತ ಪ್ರತಿಯಲ್ಲಿ ಇಲ್ಲದೇ ಹೋಗಿದ್ದ ಒಂದು ಅಧ್ಯಾಯದ ೧೬ ವಚನಗಳನ್ನು ಪರಿಷ್ಕರಿಸಿ ಸೇರಿಸಿಕೊಂಡು ಈ ಕೃತಿಯನ್ನು ಸಮಗ್ರಗೊಳಿಸಲಾಗಿದೆ.

ಈ ಆವೃತ್ತಿ ಸಿದ್ಧಪಡಿಸುವಲ್ಲಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನಿತ್ತ ಪೂಜ್ಯ ಗುರುಗಳೂ ಈ ಸಂಪುಟಗಳ ಪ್ರಧಾನ ಸಂಪಾದಕರೂ ಆದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ, ಸಮಿತಿಯ ಎಲ್ಲ ಸದಸ್ಯರಿಗೆ ತಿದ್ದುಪಡಿ ಸೂಚಿಸಿದ ಎಂ. ಚಂದ್ರಪ್ಪ ತುಮಕೂರು, ಕರಡು ತಿದ್ದುವಲ್ಲಿ ಸಹಾಯ ನೀಡಿದ ನನ್ನ ಶ್ರೀಮತಿ ಮಂಗಳಾ ಇವರಿಗೆ ಅನಂತ ಕೃತಜ್ಞತೆಗಳು.

■■ -ವೀರಣ್ಣ ರಾಜೂರ

❊

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ಬಾಲಸಂಗಯ್ಯನ ಸಕಲಾಗಮಶಿಖಾಮಣಿ ೧

೨. ಬೊಮ್ಮಗೊಂಡೇಶ್ವರ ವಚನ ೪೦೧

೩. ಭಿಕ್ಷದ ಸಂಗಯ್ಯನ ವಚನ ೪೦೨

೪. ಮಡಿವಾಳಪ್ಪನ ನಿಜಲೀಲಾಮೃತ ವಚನ ೪೦೭

೫. [illegible]ಪ್ವೀರಸ್ವಾಮಿಯ ಶಾಂಭವೀನಿರ್ಣಯದ ವಚನ ೪೬೨

೬. ಮುಮ್ಮಡಿ ಕಾರ್ಯೇಂದ್ರನ ವೇದಸಂಜೀವಿನಿ ೪೬೫

ಅನುಬಂಧ

ವಚನಗಳ ಅಕಾರಾದಿ ೬೧೩

ಕಠಿಣ ಪದಕೋಶ ೬೩೧

ಆಕರ ಗ್ರಂಥಗಳು ೬೩೭

# ಬಾಲಸಂಗಯ್ಯನ ಸಕಲಾಗಮ ಶಿಖಾಮಣಿ

೧

ಶ್ರೀಮನ್ನಿರಾಳ ನಿರಾಲಂಬ ನಿರಂಜನ ನಿರಾಮಯ ನಿರಾಮಯಾತೀತ
ಪರಮ ಪರಮಾನಂದ ಪರಮಾರ್ಥ ಪರಮೇಶ ಪರಾತ್ಪರ
ಪರಬ್ರಹ್ಮವನುಪಮತೇಜೋಮಯ ಅಗಣಿತ ಅಗೋಚರ
ಅಪ್ರಮೇಯ ಅಖಂಡಪರಿಪೂರ್ಣಚೈತನ್ಯವಪ್ಪ ಸಕಲನಿಃಕಲಾತೀತವಾಗಿಪ್ಪ
ಅಖಂಡ ಜ್ಯೋತಿರ್ಮಯಲಿಂಗ ತಾನೆ ತನ್ನ ಲೀಲಾವಿನೋದಕ್ಕೆ
ಅಪ್ರಮಾಣ ಕೂಡಲಸಂಗಯ್ಯನಾಗಿ ಬಿಜಯಂಗೆಯ್ದು
ಅಂತರಂಗ ಬಹಿರಂಗ ಸರ್ವಾಂಗವೆಲ್ಲವನಿಂಬುಗೊಂಡು
ಸ್ಥೂಲ ಸೂಕ್ಷ್ಮ ಕಾರಣ ನಡೆ ನುಡಿ ಚೈತನ್ಯವೆಲ್ಲ ತಾನೆ
ಯಂತ್ರವಾಹಕನಾಗಿ ಆಡಿಸುತ್ತಿರ್ದನು ನೋಡಾ
ನಮ್ಮ ಅಪ್ರಮಾಣ ಕೂಡಲಸಂಗಮದೇವನು. ॥ ೧ ॥

೨

ಇನ್ನೂರ ಇಪ್ಪತ್ತು ನಾಲ್ಕು ಮಹಾಭುವನಂಗಳ ವಿಸ್ತೀರ್ಣವನು,
ಆ ಭುವನ ಭುವನಂಗಳಲ್ಲಿಹ ಭುವನಾಧಿಪತಿಗಳನು,
ಆ ಭುವನಾಧಿಪತಿಗಳಲ್ಲಿ ಓಲಂಗಗೊಟ್ಟಿಹ
ಬ್ರಹ್ಮಗಣ ವಿಷ್ಣುಗಣ ರುದ್ರಗಣ ದೇವಗಣ ವೇದಗಣ ಮುನಿಗಣಂಗಳು
ಮೊದಲಾಗಿ ಎಲ್ಲಾ ಗಣಂಗಳ ಪ್ರಮಾಣವ ಪ್ರಮಾಣಿಸಿ,

ಮತ್ತಂ, ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ
ಮಹಾಮೂಲಸ್ವಾಮಿಯ ಮೀರಿದ
ಅತಿ ಮೂಲಸ್ವಾಮಿಗತ್ತತ್ತವಾಗಿಹ ಅಖಂಡ ಮಹಾಮೂಲಸ್ವಾಮಿಯ
ರೂಪು–ಲಾವಣ್ಯ–ಸೌಂದರ್ಯ–ಅಂಗ–ಪ್ರತ್ಯಂಗಸ್ವರೂಪಪ್ಪ
ಭಾವಂಗಳ ಹೇಳುತ್ತಿಹೆನು ಚಿತ್ತೈಸುವುದಯ್ಯ ಶರಣಗಣಂಗಳು
ಅಪ್ರಮಾಣ ಕೂಡಲಸಂಗಮದೇವಾ. ॥ ೨ ॥

೩

ಇನ್ನೂರ ಇಪ್ಪತ್ತನಾಲ್ಕು ಭುವನಂಗಳು, ಆ ಭುವನಾಧಿಪತಿಗಳ
ಆ ಭುವನಗಣಂಗಳ ವಿಸ್ತೀರ್ಣವೆಂತೆಂದೊಡೆ:
ಚತುರ್ದಶ ಭುವನಂಗಳ ಸಪ್ತಸಮುದ್ರಂಗಳ
ಸಪ್ತದ್ವೀಪಂಗಳ ಸಪ್ತ ಕುಲಪರ್ವತಂಗಳ
ಸಪ್ತ ಗ್ರಹರಾಶಿ ತಾರಾಪಥಂಗಳನು ಗರ್ಭೀಕರಿಸಿದ ಬ್ರಹ್ಮಾಂಡ
ಅಂಥ ಬ್ರಹ್ಮಾಂಡವ ಸಾವಿರದೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಅನಾಶ್ರಿತವೆಂಬ ಭುವನ.
ಆ ಭುವನದೊಳು ಅನಂಗೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐದುಕೋಟಿ ರುದ್ರ ಬ್ರಹ್ಮ ನಾರಾಯಣರು,
ಐದುಕೋಟಿ ಇಂದ್ರ ಚಂದ್ರಾದಿತ್ಯರು,
ಐದುಕೋಟಿ ವೇದಪುರುಷರು ಮುನೀಂದ್ರರು,
ಮೂವತ್ತಾರುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩ ॥

೪

ಅಂಥ ಬ್ರಹ್ಮಾಂಡವ ಎರಡುಸಾವಿರದ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅನಾಥನೆಂಬ ಭುವನ.
ಆ ಭುವನದೊಳು ನಾದಮೂರ್ತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಹತ್ತುಕೋಟಿ ಬ್ರಹ್ಮ ರುದ್ರ ನಾರಾಯಣರು,
ಹತ್ತುಕೋಟಿ ಇಂದ್ರಚಂದ್ರಾದಿತ್ಯರು,
ಹತ್ತುಕೋಟಿ ವೇದಪುರುಷರು, ಮುನೀಂದ್ರರು,
ಮೂವತ್ತೈದುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೪ ॥

೫

ಅಂಥ ಬ್ರಹ್ಮಾಂಡವ ಮೂರುಸಾವಿರದ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅನಾಥನೆಂಬ ಭುವನ.
ಆ ಭುವನದೊಳು ಕಾಲರುದ್ರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಹದಿನೈದುಕೋಟಿ ನಾರಾಯಣ ಬ್ರಹ್ಮ ರುದ್ರರು,
ಹದಿನೈದುಕೋಟಿ ವೇದಪುರುಷರು, ಮುನೀಂದ್ರರು, ಇಂದ್ರಚಂದ್ರಾದಿತ್ಯರು,
ಮೂವತ್ತಾರುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫ ॥

೬

ಅಂಥ ಬ್ರಹ್ಮಾಂಡವ ನಾಲ್ಕುಸಾವಿರದ ಮೂತ್ತೆಂಟುಕೋಟಿ
ಬ್ರಹ್ಮಾಂಡವನೊಳಕೊಂಡುದೊಂದು ವ್ಯೋಮರೂಪನೆಂಬ ಭುವನ.
ಆ ಭುವನದೊಳು ಪ್ರಳಯಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇಪ್ಪತ್ತುಕೋಟಿ ಇಂದ್ರ ಬ್ರಹ್ಮ ನಾರಾಯಣರು,
ಇಪ್ಪತ್ತುಕೋಟಿ ಚಂದ್ರಾದಿತ್ಯರು ವೇದಪುರುಷರು, ಮುನೀಂದ್ರರು,
ಮೂವತ್ತೇಳುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬ ॥

೭

ಅಂಥ ಬ್ರಹ್ಮಾಂಡವ ಐದುಸಾವಿರದ ನಾಲ್ವತ್ತೆಂಟುಕೋಟಿ
ಬ್ರಹ್ಮಾಂಡವನೊಳಕೊಂಡುದೊಂದು ವ್ಯಾಪಿನಿಯೆಂಬ ಭುವನ.
ಆ ಭುವನದೊಳು ಮಹಾಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇಪ್ಪತ್ತೈದುಕೋಟಿ ರುದ್ರ ಬ್ರಹ್ಮ ನಾರಾಯಣರು,
ಇಪ್ಪತ್ತೈದುಕೋಟಿ ಇಂದ್ರಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು,
ಮೂವತ್ತೆಂಟುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೭ ॥

೮

ಅಂಥ ಬ್ರಹ್ಮಾಂಡವ ಆರುಸಾವಿರದೈವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಊರ್ಧ್ವಗಾಮಿನಿಯೆಂಬ ಭುವನ.
ಆ ಭುವನದೊಳು ಊರ್ಧ್ವಪಾದನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಮೂವತ್ತುಕೋಟಿ ಬ್ರಹ್ಮ ನಾರಾಯಣ ರುದ್ರರು ಇಂದ್ರಚಂದ್ರಾದಿತ್ಯರು,
ಮೂವತ್ತುಕೋಟಿ ವೇದಪುರುಷರು ಮುನೀಂದ್ರರು,
ಮೂವತ್ತೊಂಬತ್ತುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮ ॥

೯

ಅಂಥ ಬ್ರಹ್ಮಾಂಡವ ಏಳುಸಾವಿರದ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮೋಚಿಕಾಯೆಂಬ ಭುವನ,
ಆ ಭುವನದೊಳು ಮೋಹಸಂಹಾರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮೂವತ್ತೈದುಕೋಟಿ ಇಂದ್ರಚಂದ್ರಾದಿತ್ಯರು,
ಮೂವತ್ತೈದುಕೋಟಿ ಬ್ರಹ್ಮನಾರಾಯಣ ರುದ್ರರು,
ಮೂವತ್ತೈದುಕೋಟಿ ವೇದಪುರುಷರು ಮುನೀಂದ್ರರು,
ನಾಲ್ವತ್ತುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯ ॥

೧೦

ಅಂಥ ಬ್ರಹ್ಮಾಂಡವ ಎಂಟುಸಾವಿರದ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ರೋಚಿಕಾಯೆಂಬ ಭುವನ.
ಆ ಭುವನದೊಳು ಭವರೋಗಸಂಹಾರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾಲ್ವತ್ತು ಕೋಟಿ ಬ್ರಹ್ಮ ನಾರಾಯಣ ರುದ್ರರು, ಇಂದ್ರಚಂದ್ರಾದಿತ್ಯರು,
ನಾಲ್ವತ್ತುಕೋಟಿ ವೇದಪುರುಷರು ಮುನೀಂದ್ರರು,
ನಾಲ್ವತ್ತೊಂದುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦ ॥

೧೧

ಅಂಥ ಬ್ರಹ್ಮಾಂಡವ ಒಂಬತ್ತುಸಾವಿರದ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ದೀಪಿಕಾಧಿಕವೆಂಬ ಭುವನ.
ಆ ಭುವನದೊಳು ಏಕಪಾದನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾಲ್ವತ್ತೈದುಕೋಟಿ ರುದ್ರ ಬ್ರಹ್ಮ ನಾರಾಯಣರು,
ನಾಲ್ವತ್ತೈದುಕೋಟಿ ಇಂದ್ರಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು,

ನಾಲ್ವತ್ತೆರಡುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧ ॥

೧೨

ಅಂಥ ಬ್ರಹ್ಮಾಂಡವ ಹತ್ತು ಸಾವಿರದ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಾಂತ್ಯತೀತೆಯೆಂಬ ಭುವನ.
ಆ ಭುವನದೊಳು ದ್ವಿಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐವತ್ತುಕೋಟಿ ಬ್ರಹ್ಮ ನಾರಾಯಣ ರುದ್ರರು,
ಐವತ್ತುಕೋಟಿ ವೇದಪುರುಷರು ಮುನೀಂದ್ರರು ಇಂದ್ರಚಂದ್ರಾದಿತ್ಯರು,
ನಾಲ್ವತ್ತು ಮೂರುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨ ॥

೧೩

ಅಂಥ ಬ್ರಹ್ಮಾಂಡವ ಹನ್ನೊಂದುಸಾವಿರದ ನೂರಾಯೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಾಂತಿಯೆಂಬ ಭುವನ.
ಆ ಭವನದೊಳು ತ್ರಿಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐವತ್ತೈದುಕೋಟಿ ಇಂದ್ರ ಬ್ರಹ್ಮ ರುದ್ರ ನಾರಾಯಣರು,
ಐವತ್ತೈದುಕೋಟಿ ಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು,
ನಾಲ್ವತ್ತು ನಾಲ್ಕುಕೋಟಿ ದೇವರ್ಕಳಿಹರು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೧೩ ॥

೧೪

ಅಂಥ ಬ್ರಹ್ಮಾಂಡವ ಹನ್ನೆರಡುಸಾವಿರದ ನೂರಾಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಿದ್ಯೆಯೆಂಬ ಭುವನ.
ಆ ಭುವನದೊಳು ಅಕ್ಷಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಅರವತ್ತುಕೋಟಿ ರುದ್ರ ನಾರಾಯಣ ಬ್ರಹ್ಮರು, ಇಂದ್ರಚಂದ್ರಾದಿತ್ಯರು,
ಅರವತ್ತುಕೋಟಿ ವೇದಪುರುಷರು ಮುನೀಂದ್ರರು,
ನಾಲ್ವತ್ತೈದುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪ ॥

೧೫

ಅಂಥ ಬ್ರಹ್ಮಾಂಡವ ಹದಿಮೂರುಸಾವಿರದ ನೂರಾಯಿಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರತಿಷ್ಠೆಯೆಂಬ ಭುವನ.

ಆ ಭುವನದೊಳು ಚತುಷ್ಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಅರವತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರು, ಇಂದ್ರ ಚಂದ್ರಾದಿತ್ಯರು,
ಅರವತ್ತೈದುಕೋಟಿ ವೇದಪುರುಷರು, ಮುನೀಂದ್ರರು,
ನಾಲ್ವತ್ತಾರುಕೋಟಿ ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೧೫ ॥

೧೬

ಅಂಥ ಬ್ರಹ್ಮಾಂಡವ ಹದಿನಾಲ್ಕುಸಾವಿರದ ನೂರಾಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಿವೃತ್ತಿಯೆಂಬ ಭುವನ.
ಆ ಭುವನದೊಳು ಪಾದಲೋಚನನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರ ಮೂರ್ತಿಯ ಓಲಗದಲ್ಲಿ
ಎಪ್ಪತ್ತುಕೋಟಿ ಬ್ರಹ್ಮ ನಾರಾಯಣ ರುದ್ರರು,
ಎಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರು,
ಎಪ್ಪತ್ತುಕೋಟಿ ವೇದಪುರುಷರು ಮುನೀಂದ್ರರು
ನಾಲ್ವತ್ತೇಳುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬ ॥

೧೭

ಅಂಥ ಬ್ರಹ್ಮಾಂಡವ ಹದಿನೈದುಸಾವಿರದ ನೂರಾನಾಲ್ವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸದಾಶಿವನೆಂಬ ಭುವನ.
ಆ ಭುವನದೊಳು ಪಂಚಪಾದನೆಂಬ ಮಹಾರುದ್ರಮೂರ್ತಿ ಇಹನು.
ಆ ಮಹಾರುದ್ರಮೂರ್ತಿಯ ಓಲಗದಲ್ಲಿ
ಎಪ್ಪತ್ತೈದುಕೋಟಿ ಇಂದ್ರ ಬ್ರಹ್ಮ ನಾರಾಯಣ ರುದ್ರರು,
ಎಪ್ಪತ್ತೈದುಕೋಟಿ ವೇದಪುರುಷರು, ಮುನೀಂದ್ರರು, ಚಂದ್ರಾದಿತ್ಯರು,
ಎಪ್ಪತ್ತೈದುಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೭ ॥

೧೮

ಅಂಥ ಬ್ರಹ್ಮಾಂಡವ ಹದಿನಾರುಸಾವಿರದ ನೂರಾಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಚಿಂತ್ಯವೆಂಬ ಭುವನ.
ಆ ಭುವನದೊಳು ತ್ರಿಲೋಚನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಬತ್ತು ಕೋಟಿ ರುದ್ರ ಬ್ರಹ್ಮ ನಾರಾಯಣರು,
ಎಂಬತ್ತುಕೋಟಿ ಇಂದ್ರಚಂದ್ರಾದಿತ್ಯರು,

ಎಂಬತ್ತುಕೋಟಿ ವೇದಪುರುಷರು, ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮ ॥

೧೯

ಅಂಥ ಬ್ರಹ್ಮಾಂಡವ ಹದಿನೇಳುಸಾವಿರದ ನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸೂಕ್ಷ್ಮವೆಂಬ ಭುವನ.
ಆ ಭುವನದೊಳು ಶೂನ್ಯಕಾಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಬತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರು,
ಎಂಬತ್ತೈದುಕೋಟಿ ಇಂದ್ರ ಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೧೯ ॥

೨೦

ಅಂಥ ಬ್ರಹ್ಮಾಂಡವ ಹದಿನೆಂಟುಸಾವಿರದ ನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಾಮದೇವವೆಂಬ ಭುವನ.
ಆ ಭುವನದೊಳು ಷಟ್ಪಾದನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ತೊಂಬತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು, ಇಂದ್ರಚಂದ್ರಾದಿತ್ಯರು.
ತೊಂಬತ್ತುಕೋಟಿ ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦ ॥

೨೧

ಅಂಥ ಬ್ರಹ್ಮಾಂಡವ ಹತ್ತೊಂಬತ್ತುಸಾವಿರದ ನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸತ್ಯಾನಂದವೆಂಬ ಭುವನ.
ಆ ಭುವನದೊಳು ಕಾಳಕಂಠನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ತೊಂಬತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರು, ಇಂದ್ರಚಂದ್ರಾದಿತ್ಯರು,
ತೊಂಬತ್ತೈದುಕೋಟಿ ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧ ॥

೨೨

ಅಂಥ ಬ್ರಹ್ಮಾಂಡವ ಇಪ್ಪತ್ತುಸಾವಿರದ ನೂರಾತೊಂಬತ್ತೆಂಟು
ಬ್ರಹ್ಮಾಡವನೊಳಕೊಂಡುದೊಂದು ಸರ್ವೇಶ್ವರನೆಂಬ ಭುವನ.
ಆ ಭುವನದೊಳು ಸರ್ವಗತನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ನೂರುಕೋಟಿ ನಾರಾಯಣ ರುದ್ರ ಬ್ರಹ್ಮರು,
ನೂರುಕೋಟಿ ಇಂದ್ರಚಂದ್ರಾದಿತ್ಯರು,
ನೂರುಕೋಟಿ ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೨೨ ॥

೨೩

ಅಂಥ ಬ್ರಹ್ಮಾಂಡವ ಇಪ್ಪತ್ತೊಂದುಸಾವಿರದ ಇನ್ನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಿವೋತ್ತಮವೆಂಬ ಭುವನ
ಆ ಭುವನದೊಳು ಶಿವಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಐದುಕೋಟಿ ಬ್ರಹ್ಮ ನಾರಾಯಣ ರುದ್ರರು, ಇಂದ್ರಚಂದ್ರಾದಿತ್ಯರು,
ನೂರಾ ಐದುಕೋಟಿ ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೩ ॥

೨೪

ಅಂಥ ಬ್ರಹ್ಮಾಂಡವ ಇಪ್ಪತ್ತೆರಡು ಸಾವಿರದ ಇನ್ನೂರಾಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಿತ್ಯಾನಂದವೆಂಬ ಭುವನ
ಆ ಭುವನದೊಳು ನೀಲಲೋಹಿತನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಹತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು ಇಂದ್ರಚಂದ್ರಾದಿತ್ಯರು,
ನೂರಾಹತ್ತುಕೋಟಿ ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೪ ॥

೨೫

ಅಂಥ ಬ್ರಹ್ಮಾಂಡವ ಇಪ್ಪತ್ತುಮೂರುಸಾವಿರದ ಇನ್ನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕನೇತ್ರವೆಂಬ ಭುವನ.
ಆ ಭುವನದೊಳು ನೀಲಕಂಠನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಹದಿನೈದುಕೋಟಿ ಇಂದ್ರ ಬ್ರಹ್ಮ ನಾರಾಯಣ ರುದ್ರರು.
ನೂರಾಹದಿನೈದುಕೋಟಿ ವೇದಪುರುಷರು,
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೨೫ ॥

೨೬

ಅಂಥ ಬ್ರಹ್ಮಾಂಡವ ಇಪ್ಪತ್ತುನಾಲ್ಕುಸಾವಿರದ ಇನ್ನೂರ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸದಾನಂದವೆಂಬ ಭುವನ.
ಆ ಭುವನದೊಳು ಸಚ್ಚಿದಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಇಪ್ಪತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು,
ನೂರಾ ಇಪ್ಪತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು,
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೬ ॥

೨೭

ಅಂಥ ಬ್ರಹ್ಮಾಂಡವ ಇಪ್ಪತ್ತೈದುಸಾವಿರದ ಇನ್ನೂರನಾಲ್ವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕರುದ್ರವೆಂಬ ಭುವನ.
ಆ ಭುವನದೊಳು ಕಾಲಾಂತಕನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಇಪ್ಪತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರು,
ಇಂದ್ರಚಂದ್ರಾದಿತ್ಯರು,
ನೂರಾ ಇಪ್ಪತ್ತೈದುಕೋಟಿ ವೇದಪುರುಷರು, ಮುನೀಂದ್ರರು,
ದೇವರ್ಕಳಿಹರು ನೋಡಾ,
ಅಪ್ರಮಾಣಕೂಡಸಂಗಮದೇವಾ. ॥ ೨೭ ॥

೨೮

ಅಂಥ ಬ್ರಹ್ಮಾಂಡವ ಇಪ್ಪತ್ತಾರುಸಾವಿರದ ಇನ್ನೂರ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಿಜಾನಂದನೆಂಬ ಭುವನ.
ಆ ಭುವನದೊಳು ನಿತ್ಯಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಮೂವತ್ತುಕೋಟಿ ನಾರಾಯಣ ರುದ್ರ ಬ್ರಹ್ಮರು,
ನೂರಾಮೂವತ್ತುಕೋಟಿ ಇಂದ್ರಚಂದ್ರಾದಿತ್ಯರು, ವೇದಪುರುಷರು,
ಮುನೀಂದ್ರರು, ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮ ॥

೨೯

ಅಂಥ ಬ್ರಹ್ಮಾಂಡವ ಇಪ್ಪತ್ತೇಳುಸಾವಿರದ ಇನ್ನೂರ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತ್ರಿಮೂರ್ತಿಯೆಂಬ ಭುವನ.

ಆ ಭುವನದೊಳು ತ್ರಿಪುರಾಂತಕನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಮೂವತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರು,
ನೂರಾಮೂವತ್ತೈದುಕೋಟಿ ಇಂದ್ರಚಂದ್ರಾದಿತ್ಯರು,
ನೂರಾಮೂವತ್ತೈದುಕೋಟಿ ವೇದಪುರುಷರು ಮುನೀಂದ್ರರು,
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯ ॥

೩೦

ಅಂಥ ಬ್ರಹ್ಮಾಂಡವ ಇಪ್ಪತ್ತೆಂಟುಸಾವಿರದ ಇನ್ನೂರ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶ್ರೀಕಂಠವೆಂಬ ಭುವನ.
ಆ ಭುವನದೊಳು ಶ್ರೀಮಹಾದೇವನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾನಾಲ್ವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು.
ನೂರಾನಾಲ್ವತ್ತುಕೋಟಿ ಇಂದ್ರಚಂದ್ರಾದಿತ್ಯರು, ವೇದಪುರುಷರು,
ಮುನೀಂದ್ರರು, ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೩೦ ॥

೩೧

ಅಂಥ ಬ್ರಹ್ಮಾಂಡವ ಇಪ್ಪತ್ತೊಂಬತ್ತು ಸಾವಿರದ ಇನ್ನೂರ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಿಖಂಡಿಯೆಂಬ ಭುವನ.
ಆ ಭುವನದೊಳು ಸಹಸ್ರಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾನಾಲ್ವತ್ತೈದುಕೋಟಿ
ವಿಷ್ಣು ಬ್ರಹ್ಮ ರುದ್ರಾದಿಗಳು, ಇಂದ್ರಚಂದ್ರಾದಿತ್ಯರು,
ನೂರಾನಾಲ್ವತ್ತೈದುಕೋಟಿ ವೇದಪುರುಷರು,
ಮುನೀಂದ್ರರು, ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೧ ॥

೩೨

ಅಂಥ ಬ್ರಹ್ಮಾಂಡವ ಮೂವತ್ತುಸಾವಿರ ಇನ್ನೂರತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಾಮಜೇಷ್ಠವೆಂಬ ಭುವನ.
ಆ ಭುವನದೊಳು ವಾಮದೇವನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಐವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು, ಇಂದ್ರಚಂದ್ರಾದಿತ್ಯರು.

ನೂರಾಐವತ್ತುಕೋಟಿ ವೇದಪುರುಷರು, ಮುನೀಂದ್ರರು,
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೨ ॥

೩೩

ಅಂಥ ಬ್ರಹ್ಮಾಂಡವ ಮೂವತ್ತೊಂದುಸಾವಿರದ ಮುನ್ನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ರೌದ್ರಿಯೆಂಬ ಭುವನ.
ಆ ಭುವನದೊಳು ಸಹಸ್ರಾಕ್ಷನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾಐವತ್ತೈದು ಕೋಟಿದೇವರ್ಕಳು, ಇಂದ್ರಚಂದ್ರಾದಿತ್ಯರು,
ವೇದಪುರುಷರು, ಮುನೀಂದ್ರರು,
ನೂರಾಐವತ್ತೈದು ಕೋಟಿ ನಾರಾಯಣ ರುದ್ರ ಬ್ರಹ್ಮಾದಿಗಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೩ ॥

೩೪

ಅಂಥ ಬ್ರಹ್ಮಾಂಡವ ಮೂವತ್ತೆರಡು ಸಾವಿರದಮುನ್ನೂರಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕಲವಿಕರಣವೆಂಬ ಭುವನ.
ಆ ಭುವನದೊಳು ಲಲಾಟಲೋಚನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಅರವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರು,
ಇಂದ್ರ ಚಂದ್ರಾದಿತ್ಯರು,
ನೂರಾ ಅರವತ್ತುಕೋಟಿ ವೇದಪುರುಷರು, ಮುನೀಂದ್ರರು,
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೪ ॥

೩೫

ಅಂಥ ಬ್ರಹ್ಮಾಂಡವ ಮೂವತ್ತುಮೂರುಸಾವಿರದ ಮುನ್ನೂರಾಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕಾಳಿಯೆಂಬ ಭುವನ.
ಆ ಭುವನದೊಳು ಕಾಳಕಂಠ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಅರವತ್ತೈದುಕೋಟಿ ದೇವರ್ಕಳು, ಇಂದ್ರಚಂದ್ರಾದಿತ್ಯರು,
ವೇದಪುರುಷರು, ಮುನೀಂದ್ರರು,
ನೂರಾಅರವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೫ ॥

೩೬

ಅಂಥ ಬ್ರಹ್ಮಾಂಡವ ಮೂವತ್ತುನಾಲ್ಕುಸಾವಿರದ
ಮುನ್ನೂರಾಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಬಲವಿಕರಣವೆಂಬ ಭುವನ.
ಆ ಭುವನದೊಳು ಬಾಲೇಂದುವಮೌಳಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಎಪ್ಪತ್ತುಕೋಟಿ ಇಂದ್ರ–ಬ್ರಹ್ಮ–ನಾರಾಯಣ–ರುದ್ರರು,
ನೂರಾ ಎಪ್ಪತ್ತುಕೋಟಿ ಚಂದ್ರಾದಿತ್ಯರು, ವೇದಪುರುಷರು,
ಮುನೀಂದ್ರರು, ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೬ ॥

೩೭

ಅಂಥ ಬ್ರಹ್ಮಾಂಡವ ಮೂವತ್ತೈದುಸಾವಿರದ ಮುನ್ನೂರಾನಾಲ್ವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸರ್ವಭೂತದಮನಿಯೆಂಬ ಭುವನ.
ಆ ಭುವನದೊಳು ಸರ್ವೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾ ಎಪ್ಪತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರು,
ಇಂದ್ರಚಂದ್ರಾದಿತ್ಯರು,
ನೂರಾ ಎಪ್ಪತ್ತೈದುಕೋಟಿ ವೇದಪುರುಷರು,ಮುನೀಂದ್ರರು,
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೭ ॥

೩೮

ಅಂಥ ಬ್ರಹ್ಮಾಂಡವ ಮೂವತ್ತಾರುಸಾವಿರದ ಮುನ್ನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಬಲಪ್ರಮದಿನಿಯೆಂಬ ಭುವನ.
ಆ ಭುವನದೊಳು ಜ್ಯೋತಿರ್ಮಯನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ ನೂರಾ ಎಂಬತ್ತುಕೋಟಿ
ಬ್ರಹ್ಮ ನಾರಾಯಣ ರುದ್ರರು, ವೇದಪುರುಷರು, ಮುನೀಂದ್ರರು,
ನೂರಾ ಎಂಬತ್ತುಕೋಟಿ ಇಂದ್ರಚಂದ್ರಾದಿತ್ಯರು, ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೩೮ ॥

೩೯

ಅಂಥ ಬ್ರಹ್ಮಾಂಡವ ಮೂವತ್ತೇಳುಸಾವಿರದ ಮುನ್ನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮನೋನ್ಮನಿಯೆಂಬ ಭುವನ.
ಆ ಭುವನದೊಳು ಮನೋನ್ಮನಿಜ್ಯೋತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ನೂರಾ ಎಂಬತ್ತೈದುಕೋಟಿ ನಾರಾಯಣ ರುದ್ರ ಬ್ರಹ್ಮರು,
ಇಂದ್ರಚಂದ್ರಾದಿತ್ಯರು,
ವೇದಪುರುಷರು, ಮುನೀಂದ್ರರು, ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೯ ||

೪೦

ಅಂಥ ಬ್ರಹ್ಮಾಂಡವ ಮೂವತ್ತೆಂಟುಸಾವಿರದ ಮುನ್ನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಂಗುಷ್ಠಮಾತ್ರಭುವನಯೆಂಬ ಭುವನ.
ಆ ಭುವನದೊಳು ಅಖಂಡಿತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾತೊಂಬತ್ತುಕೋಟಿ ದೇವರ್ಕಳು, ಇಂದ್ರಚಂದ್ರಾದಿತ್ಯರು,
ವೇದಪುರುಷರು, ಮುನೀಂದ್ರರು,
ನೂರಾತೊಂಬತ್ತುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೦ ||

೪೧

ಅಂಥ ಬ್ರಹ್ಮಾಂಡವ ಮೂವತ್ತೊಂಬತ್ತುಸಾವಿರದ
ಮುನ್ನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹಾಭುವನ.
ಆ ಭುವನದೊಳು ಮಹಾದೇವನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನೂರಾತೊಂಬತ್ತೈದುಕೋಟಿ ಮುನೀಂದ್ರರು, ದೇವರ್ಕಳು, ವೇದಪುರುಷರು,
ನೂರಾತೊಂಬತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರು,
ಇಂದ್ರಚಂದ್ರಾದಿತ್ಯರು ಇಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೧ ||

೪೨

ಅಂಥ ಬ್ರಹ್ಮಾಂಡವ ನಾಲ್ವತ್ತುಸಾವಿರದಮುನ್ನೂರಾತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕಿಶಾನವೆಂಬ ಭುವನ.
ಆ ಭುವನದೊಳು ಏಕರುದ್ರಮಹೇಶ್ವರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರುಕೋಟಿ ಇಂದ್ರ ಬ್ರಹ್ಮ ನಾರಾಯಣ ರುದ್ರರು,
ಇನ್ನೂರುಕೋಟಿ ಚಂದ್ರಾದಿತ್ಯರು ವೇದಪುರುಷರು,
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೨ ||

೪೩

ಅಂಥ ಬ್ರಹ್ಮಾಂಡವ ನಾಲ್ವತ್ತೊಂದುಸಾವಿರದನೂರಾಯೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕವೆಂಬ ಭುವನ.
ಆ ಭುವನದೊಳು ಏಕೀಶನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರ ಐದುಕೋಟಿ ಬ್ರಹ್ಮ ನಾರಾಯಣ ರುದ್ರರು, ಇಂದ್ರಚಂದ್ರಾದಿತ್ಯರು,
ಇನ್ನೂರೈದುಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩ ॥

೪೪

ಅಂಥ ಬ್ರಹ್ಮಾಂಡವ ನಾಲ್ವತ್ತೆರಡುಸಾವಿರದ ನೂರಾಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪಿಂಗಳೇಕ್ಷಣವೆಂಬ ಭುವನ.
ಆ ಭುವನದೊಳು ಮಹದಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾಹತ್ತುಕೋಟಿ ನಾರಾಯಣ ರುದ್ರ ಬ್ರಹ್ಮರು, ಇಂದ್ರಚಂದ್ರಾದಿತ್ಯರು,
ಇನ್ನೂರಾಹತ್ತುಕೋಟಿ ವೇದಪುರುಷರು
ಮುನೀಂದ್ರರು ದೇವರ್ಕಳಿಹರುನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪ ॥

೪೫

ಅಂಥ ಬ್ರಹ್ಮಾಂಡವ ನಾಲ್ವತ್ತುಮೂರುಸಾವಿರದ ನಾನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಉದ್ಭವವೆಂಬ ಭುವನ.
ಆ ಭುವನದೊಳು ಅಜಹರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾಹದಿನೈದುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು,
ಇನ್ನೂರಾ ಹದಿನೈದುಕೋಟಿ ಇಂದ್ರ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೫ ॥

೪೬

ಅಂಥ ಬ್ರಹ್ಮಾಂಡವ ನಾಲ್ವತ್ತುನಾಲ್ಕುಸಾವಿರದ ನಾನೂರಾಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭವವೆಂಬ ಭುವನ.
ಆ ಭುವನದೊಳು ಭವಹರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಇನ್ನೂರಾ ಇಪ್ಪತ್ತುಕ್ಕೋಟಿ ರುದ್ರ ಬ್ರಹ್ಮ ನಾರಾಯಣರು
ಇನ್ನೂರಾ ಇಪ್ಪತ್ತುಕ್ಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೪೬ ॥

೪೭

ಅಂಥ ಬ್ರಹ್ಮಾಂಡವ ನಾಲ್ವತ್ತೈದು ಸಾವಿರದಾ ನಾನೂರನಾಲ್ವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಾಮದೇವವೆಂಬ ಭುವನ.
ಆ ಭುವನದೊಳು ಹರಿಹರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಇಪ್ಪತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರು
ವೇದಪುರುಷರು ಮುನೀಂದ್ರರು ಇಹರು ನೋಡಾ,
ಇನ್ನೂರಾ ಇಪ್ಪತ್ತೈದು ಕೋಟಿ ಇಂದ್ರಚಂದ್ರಾದಿತ್ಯರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೭ ॥

೪೮

ಅಂಥ ಬ್ರಹ್ಮಾಂಡವ ನಾಲ್ವತ್ತಾರುಸಾವಿರದ ನಾನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹಾದೇವವೆಂಬ ಭುವನ.
ಆ ಭುವನದೊಳು ಅನಂತಬ್ರಹ್ಮಾಂಡಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಮೂವತ್ತುಕ್ಕೋಟಿ
ರುದ್ರ–ಬ್ರಹ್ಮ–ನಾರಾಯಣರು, ಇಂದ್ರ–ಚಂದ್ರಾದಿತ್ಯರು,
ಇನ್ನೂರಾಮೂವತ್ತುಕ್ಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೮ ॥

೪೯

ಅಂಥ ಬ್ರಹ್ಮಾಂಡವ ನಾಲ್ವತ್ತೇಳುಸಾವಿರದಾ ನಾನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಿಖೇದವೆಂಬ ಭುವನ.
ಆ ಭುವನದೊಳು ಅನಂತವಿಷ್ಣುಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಮೂವತ್ತೈದುಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು,ಇಂದ್ರಚಂದ್ರಾದಿತ್ಯರು,
ಇನ್ನೂರಾಮೂವತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೯ ॥

೫೦

ಅಂಥ ಬ್ರಹ್ಮಾಂಡವ ನಾಲ್ವತ್ತೆಂಟುಸಾವಿರದಾ ನಾನೂರ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕವೀರವೆಂಬ ಭುವನ.
ಆ ಭುವನದೊಳು ಅನಂತಕೋಟಿ ಇಂದ್ರಸಂಹಾರನೆಂಬ
ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾನಾಲ್ವತ್ತುಕೋಟಿ
ಇಂದ್ರ–ನಾರಾಯಣ–ಬ್ರಹ್ಮ–ರುದ್ರರಿಹರು ನೋಡಾ.
ಇನ್ನೂರಾ ನಾಲ್ವತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೫೦ ॥

೫೧

ಅಂಥ ಬ್ರಹ್ಮಾಂಡವ ನಾಲ್ವತ್ತೊಂಬತ್ತುಸಾವಿರದ ನಾನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪಂಚಾಂತಕವೆಂಬ ಭುವನ.
ಆ ಭುವನದೊಳು ಅನಂತದೇವಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ನಾಲ್ವತ್ತೈದುಕೋಟಿ
ರುದ್ರ–ಬ್ರಹ್ಮ–ನಾರಾಯಣ, ಇಂದ್ರಚಂದ್ರಾದಿತ್ಯರು,
ಇನ್ನೂರಾ ನಾಲ್ವತ್ತೈದುಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೧ ॥

೫೨

ಅಂಥ ಬ್ರಹ್ಮಾಂಡವ ಐವತ್ತುಸಾವಿರದ ನಾನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶೂರವೆಂಬ ಭುವನ.
ಆ ಭುವನದೊಳು ಅನಂತಕಾಲಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾಐವತ್ತುಕೋಟಿ ನಾರಾಯಣ–ರುದ್ರ–ಬ್ರಹ್ಮಾದಿಗಳಿಹರು,
ಇನ್ನೂರಾಐವತ್ತುಕೋಟಿ ಇಂದ್ರಚಂದ್ರಾದಿತ್ಯರು, ವೇದಪುರುಷರು,
ಮುನೀಂದ್ರರು ದೇವರ್ಕಳಿಹರು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೫೨ ॥

೫೩

ಅಂಥ ಬ್ರಹ್ಮಾಂಡವ ಐವತ್ತೊಂದುಸಾವಿರದ ಐದುನೂರಾಯೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸಂವರ್ತವೆಂಬ ಭುವನ.

ಆ ಭುವನದೊಳು ಅನಂತಕಾಮಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಐವತ್ತೈದುಕೋಟಿ
ಬ್ರಹ್ಮ-ನಾರಾಯಣ-ರುದ್ರರು, ಇಂದ್ರಚಂದ್ರಾದಿತ್ಯರಿಹರು ನೋಡಾ.
ಇನ್ನೂರಾಐವತ್ತೈದುಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩ ||

೫೪

ಅಂಥ ಬ್ರಹ್ಮಾಂಡವ ಐವತ್ತೆರಡುಸಾವಿರದ ಐನೂರಾಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜ್ಯೋತಿಯೆಂಬ ಭುವನ.
ಆ ಭುವನದೊಳು ಅನಂತಮಾಯಾಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಅರವತ್ತುಕೋಟಿ
ರುದ್ರ-ಬ್ರಹ್ಮ-ನಾರಾಯಣರು ಇಂದ್ರಚಂದ್ರಾದಿತ್ಯರಿಹರು ನೋಡಾ.
ಇನ್ನೂರಾ ಅರವತ್ತುಕೋಟಿ
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೫೪ ||

೫೫

ಅಂಥ ಬ್ರಹ್ಮಾಂಡವ ಐವತ್ತುಮೂರುಸಾವಿರದ ಐನೂರ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಚಂಡವೆಂಬ ಭುವನ.
ಆ ಭುವನದೊಳು ಭವದೂರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಅರವತ್ತೈದುಕೋಟಿ ಇಂದ್ರಚಂದ್ರಾದಿತ್ಯರಿಹರು,
ಇನ್ನೂರಾ ಅರವತ್ತೈದುಕೋಟಿ ವೇದಪುರುಷರು ಮುನೀಂದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೫ ||

೫೬

ಅಂಥ ಬ್ರಹ್ಮಾಂಡವ ಐವತ್ತುನಾಲ್ಕು ಸಾವಿರದ ಐನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕ್ರೋಧವೆಂಬ ಭುವನ.
ಆ ಭುವನದೊಳು ಜ್ಯೋತಿರ್ಮಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಎಪ್ಪತ್ತುಕೋಟಿ ರುದ್ರ-ಬ್ರಹ್ಮ-ನಾರಾಯಣರಿಹರು.
ಇನ್ನೂರಾ ಎಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರಿಹರು.

ಇನ್ನೂರಾ ಎಪ್ಪತ್ತುಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೬ ॥

೫೭

ಅಂಥ ಬ್ರಹ್ಮಾಂಡವ ಐವತ್ತೈದುಸಾವಿರದ ಐನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅನಂತವೆಂಬ ಭುವನ.
ಆ ಭುವನದೊಳು ಅನಂತಾನಂತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಎಪ್ಪತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಇನ್ನೂರಾ ಎಪ್ಪತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೭ ॥

೫೮

ಅಂಥ ಬ್ರಹ್ಮಾಂಡವ ಐವತ್ತಾರುಸಾವಿರದ ಐನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕನೇತ್ರಕವೆಂಬ ಭುವನ.
ಆ ಭುವನದೊಳು ಹಸ್ತಲೋಚನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಎಂಬತ್ತುಕೋಟಿ ನಾರಾಯಣ ರುದ್ರ ಬ್ರಹ್ಮರಿಹರು ನೋಡಾ.
ಇನ್ನೂರಾ ಎಂಬತ್ತುಕೋಟಿ ಇಂದ್ರಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೮ ॥

೫೯

ಅಂಥ ಬ್ರಹ್ಮಾಂಡವ ಐವತ್ತೇಳುಸಾವಿರದ ಐನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭವ್ಯವೆಂಬ ಭುವನ.
ಆ ಭುವನದೊಳು ನೀಲಲೋಹಿತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ಎಂಬತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಇನ್ನೂರಾ ಎಂಬತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೯ ॥

೬೦

ಅಂಥ ಬ್ರಹ್ಮಾಂಡವ ಐವತ್ತೆಂಟುಸಾವಿರದ ಐನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಂಗಳವೆಂಬ ಭುವನ.

ಆ ಭುವನದೊಳು ಅನಂತಗುಣರೂಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾತೊಂಬತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ಇನ್ನೂರಾತೊಂಬತ್ತುಕೋಟಿ ಇಂದ್ರಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೦ ॥

೬೧

ಅಂಥ ಬ್ರಹ್ಮಾಂಡವ ಐವತ್ತೊಂಬತ್ತುಸಾವಿರದ ಐನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಜವೆಂಬ ಭುವನ.
ಆ ಭುವನದೊಳು ಅಜಕಪಾಲಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಇನ್ನೂರಾ ತೊಂಬತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಇನ್ನೂರಾ ತೊಂಬತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೧ ॥

೬೨

ಅಂಥ ಬ್ರಹ್ಮಾಂಡವ ಅರುವತ್ತುಸಾವಿರದ ಐನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಉಮಾಪತಿಯೆಂಬ ಭುವನ.
ಆ ಭುವನದೊಳು ಉಮಾಸಹಿತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರುಕೋಟಿ ನಾರಾಯಣ–ಬ್ರಹ್ಮ–ರುದ್ರಾದಿಗಳಿಹರು.
ಮುನ್ನೂರುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೨ ॥

೬೩

ಅಂಥ ಬ್ರಹ್ಮಾಂಡವ ಅರವತ್ತೊಂದುಸಾವಿರದ ಆರುನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಏಕಧೀರವೆಂಬ ಭುವನ.
ಆ ಭುವನದೊಳು ಶಿಖಾಗ್ರದೃಷ್ಟಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಐದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಮುನ್ನೂರೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩ ॥

೬೪

ಅಂಥ ಬ್ರಹ್ಮಾಂಡವ ಅರುವತ್ತೆರಡು ಸಾವಿರದ ಆರುನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಚಂಡವೆಂಬ ಭುವನ.
ಆ ಭುವನದೊಳು ಪ್ರಳಯಾಂತಕನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಹತ್ತುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು.
ಮುನ್ನೂರಾ ಹತ್ತುಕೋಟಿ ಇಂದ್ರಚಂದ್ರಾದಿತ್ಯರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ ॥ ೬೪ ॥

೬೫

ಅಂಥ ಬ್ರಹ್ಮಾಂಡವ ಅರವತ್ತುಮೂರುಸಾವಿರದ ಆರುನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಈಶಾನವೆಂಬ ಭುವನ.
ಆ ಭುವನದೊಳು ದೈತ್ಯಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಹದಿನೈದುಕೋಟಿ
ನಾರಾಯಣ ರುದ್ರ ಬ್ರಹ್ಮಾದಿಗಳು ಇಹರು ನೋಡಾ.
ಮುನ್ನೂರಾ ಹದಿನೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫ ॥

೬೬

ಅಂಥ ಬ್ರಹ್ಮಾಂಡವ ಅರವತ್ನಾಲ್ಕು ಸಾವಿರದ ಆರುನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಉಗ್ರವೆಂಬ ಭುವನ.
ಆ ಭುವನದೊಳು ಲೋಕನಾಥನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಇಪ್ಪತ್ತುಕೋಟಿ ನಾರಾಯಣ ರುದ್ರ ಬ್ರಹ್ಮಾದಿಗಳಿಹರು ನೋಡಾ.
ಮುನ್ನೂರಾ ಇಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬ ॥

೬೭

ಅಂಥ ಬ್ರಹ್ಮಾಂಡವ ಅರವತ್ತೈದು ಸಾವಿರದ ಆರುನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭೀಮವೆಂಬ ಭುವನ.
ಆ ಭುವನದೊಳು ಭೀಮೇಶ್ವರನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಇಪ್ಪತ್ತೈದು ಕೋಟಿ ರುದ್ರ–ಬ್ರಹ್ಮ–ನಾರಾಯಣರು,
ಮುನ್ನೂರಾ ಇಪ್ಪತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭ ||

೬೮

ಅಂಥ ಬ್ರಹ್ಮಾಂಡವ ಅರವತ್ತಾರುಸಾವಿರದ ಆರುನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭೌಮವೆಂಬ ಭುವನ.
ಆ ಭುವನದೊಳು ಭುವನಾಧಿಪತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಮೂವತ್ತುಕೋಟಿ ಇಂದ್ರಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರಿಹರು ನೋಡಾ.
ಮುನ್ನೂರಾ ಮೂವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮ ||

೬೯

ಅಂಥ ಬ್ರಹ್ಮಾಂಡವ ಅರವತ್ತೇಳು ಸಾವಿರದ ಆರುನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕಾಮಾರಿಯೆಂಬ ಭುವನ.
ಆ ಭುವನದೊಳು ಜ್ವಾಲಾಮುಖನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಮೂವತ್ತೈದುಕೋಟಿ
ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ಮುನ್ನೂರಾ ಮೂವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೯ ||

೭೦

ಅಂಥ ಬಹ್ಮಾಂಡವ ಅರವತ್ತೆಂಟು ಸಾವಿರದ ಆರುನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವೈಷ್ಣವವೆಂಬ ಭುವನ.
ಆ ಭುವನದೊಳು ವೈಷ್ಣವೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ನಲವತ್ತುಕೋಟಿ ಮುನೀಂದ್ರರು ವೇದಪುರುಷರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಮುನ್ನೂರಾ ನಲವತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೭೦ ||

೭೧

ಅಂಥ ಬ್ರಹ್ಮಾಂಡವ ಅರವತ್ತೊಂಬತ್ತು ಸಾವಿರದ
ಆರುನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಬ್ರಾಹ್ಮಣವೆಂಬ ಭುವನ.
ಆ ಭುವನದೊಳು ಬ್ರಹ್ಮಾಧಿಪತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ನಲವತ್ತೈದುಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ಇಹರು ನೋಡಾ.
ಮೂನ್ನೂರಾ ನಲವತ್ತೈದುಕೋಟಿ
ನಾರಾಯಣರು–ಬ್ರಹ್ಮ–ರುದ್ರಾದಿಗಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೭೧ ॥

೭೨

ಅಂಥ ಬ್ರಹ್ಮಾಂಡವ ಎಪ್ಪತ್ತುಸ್ಸಾವಿರದ ಆರುನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವೈಭವವೆಂಬ ಭುವನ.
ಆ ಭುವನದೊಳು ರಾಮನಾಥನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರೈವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಮೂನ್ನೂರೈವತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೨ ॥

೭೩

ಅಂಥ ಬ್ರಹ್ಮಾಂಡವ ಎಪ್ಪತ್ತೊಂದುಸಾವಿರದ ಏಳುನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಕೃತವೆಂಬ ಭುವನ.
ಆ ಭುವನದೊಳು ಭುವನಾಧಿಪತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮೂನ್ನೂರೈವತ್ತೈದು ಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ಮುನ್ನೂರೈವತ್ತೈದು ಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೩ ॥

೭೪

ಅಂಥ ಬ್ರಹ್ಮಾಂಡವ ಎಪ್ಪತ್ತೆರಡು ಸಾವಿರದಾ ಏಳುನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಕೃತವೆಂಬ ಭುವನ.
ಆ ಭುವನದೊಳು ತ್ರಿಯಂಬಕನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರ ಅರವತ್ತುಕೋಟಿ ನಾರಾಯಣ–ಬ್ರಹ್ಮ
ರುದ್ರಾದಿಗಳಿಹರು ನೋಡಾ.
ಮುನ್ನೂರರವತ್ತು ಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೪ ॥

೭೫

ಅಂಥ ಬ್ರಹ್ಮಾಂಡವ ಎಪ್ಪತ್ತುಮೂರುಸಾವಿರದಾ ಏಳುನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಯಾಮ್ಯವೆಂಬ ಭುವನ.
ಆ ಭುವನದೊಳು ವಜ್ರಕಾಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರರವತ್ತೈದುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು ನೋಡಾ.
ಮೂನ್ನೂರರವತ್ತೈದು ಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೫ ॥

೭೬

ಅಂಥ ಬ್ರಹ್ಮಾಂಡವ ಎಪ್ಪತ್ತುನಾಲ್ಕು ಸಾವಿರದ ಏಳುನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಜೇಷವೆಂಬ ಭುವನ.
ಆ ಭುವನದೊಳು ಕಪಾಲಮಾಲಾಧರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಎಪ್ಪತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು,
ಮುನ್ನೂರಾ ಎಪ್ಪತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೬ ॥

೭೭

ಅಂಥ ಬ್ರಹ್ಮಾಂಡವ ಎಪ್ಪತ್ತೈದುಸಾವಿರದ ಏಳುನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸೌಮ್ಯವೆಂಬ ಭುವನ.
ಆ ಭುವನದೊಳು ಉನ್ಮನಿಜ್ಯೋತಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರ ಎಪ್ಪತ್ತೈದು ಕೋಟಿ
ನಾರಾಯಣ–ರುದ್ರ–ಬ್ರಹ್ಮಾದಿಗಳಿಹರು ನೋಡಾ.
ಮುನ್ನೂರಾ ಎಪ್ಪತ್ತೈದು ಕೋಟಿ ಇಂದ್ರ–ಚಂದ್ರಾದಿತ್ಯರು

ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೭ ॥

೭೮

ಅಂಥ ಬ್ರಹ್ಮಾಂಡವ ಎಪ್ಪತ್ತಾರುಸಾವಿರದಾ ಏಳುನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಇಂದ್ರವೆಂಬ ಭುವನ.
ಆ ಭುವನದೊಳು ಇಂದ್ರಾಧಿಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿ ಓಲಗದಲ್ಲಿ
ಮುನ್ನೂರ ಎಂಬತ್ತುಕೋಟಿ ರುದ್ರ–ನಾರಾಯಣ–ಬ್ರಹ್ಮರಿಹರು.
ಮುನ್ನೂರಾ ಎಂಬತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೮ ॥

೭೯

ಅಂಥ ಬ್ರಹ್ಮಾಂಡವ ಎಪ್ಪತ್ತೇಳು ಸಾವಿರದಾ ಏಳುನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಗಾಂಧರ್ವವೆಂಬ ಭುವನ.
ಆ ಭುವನದೊಳು ಉಗ್ರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ಎಂಬತ್ತೈದುಕೋಟಿ
ವೇದಪುರುಷರು ಮುನೀಂದ್ರರು ದೇವರ್ಕಳು
ಇಂದ್ರಚಂದ್ರಾದಿತ್ಯರಿಹರು ನೋಡಾ.
ಮುನ್ನೂರ ಎಂಬತ್ತೈದು ಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯ ॥

೮೦

ಅಂಥ ಬ್ರಹ್ಮಾಂಡವ ಎಪ್ಪತ್ತೆಂಟು ಸಾವಿರದಾ ಏಳುನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಯಕ್ಷವೆಂಬ ಭುವನ.
ಆ ಭುವನದೊಳು ಶಂಭುವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾತೊಂಬತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಮುನ್ನೂರಾತೊಂಬತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೦ ॥

೮೧

ಅಂಥ ಬ್ರಹ್ಮಾಂಡವ ಎಪ್ಪತ್ತೊಂಬತ್ತು ಸಾವಿರದಾ
ಏಳುನೂರಾ ಎಂಬತ್ತೆಂಟು

ಬ್ರಹ್ಮಾಂಡವನೊಳಕೊಂಡುದೊಂದು ರಾಕ್ಷಸವೆಂಬ ಭುವನ.
ಆ ಭುವನದೊಳು ದೈತ್ಯಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಮುನ್ನೂರಾ ತೊಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೧ ॥

೮೨

ಅಂಥ ಬ್ರಹ್ಮಾಂಡವ ಎಂಬತ್ತುಸಾವಿರದಾ ಏಳುನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪೈಶಾಚಿಕವೆಂಬ ಭುವನ.
ಆ ಭುವನದೊಳು ವಾಮದೇವನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿ ಓಲಗದಲ್ಲಿ
ನಾನೂರುಕೋಟಿ ನಾರಾಯಣ–ಬ್ರಹ್ಮ–ರುದ್ರಾದಿಗಳಿಹರು ನೋಡಾ.
ನಾನೂರುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨ ॥

೮೩

ಅಂಥ ಬ್ರಹ್ಮಾಂಡವ ಎಂಬತ್ತೊಂದುಸಾವಿರದಾ ಎಂಟನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಸ್ಥಲೇಶ್ವರವೆಂಬ ಭುವನ.
ಆ ಭುವನದೊಳು ಜಟಾಜೂಟನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೈದು ಕೋಟಿ ಬ್ರಹ್ಮ–ರುದ್ರ–ನಾರಾಯಣರಿಹರು.
ನಾನೂರೈದುಕೋಟಿ ಇಂದ್ರ–ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೩ ॥

೮೪

ಅಂಥ ಬ್ರಹ್ಮಾಂಡವ ಎಂಬತ್ತೆರಡುಸಾವಿರದಾ ಎಂಟುನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸ್ಥೂಲೇಶ್ವರವೆಂಬ ಭುವನ.
ಆ ಭುವನದೊಳು ಶಾರ್ದೂಲಮುಖನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರಾಹತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ನಾನೂರಾ ಹತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪ ॥

೮೫

ಅಂಥ ಬ್ರಹ್ಮಾಂಡವ ಎಂಬತ್ತೂ್ಮರುಸಾವಿರದಾ ಎಂಟುನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಂಖುಕರ್ಣವೆಂಬ ಭುವನ.
ಆ ಭುವನದೊಳು ಕಾಲಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರ ಹದಿನೈದುಕೋಟಿ ನಾರಾಯಣ ಬ್ರಹ್ಮ ರುದ್ರಾದಿಗಳಿಹರು ನೋಡಾ.
ನಾನೂರ ಹದಿನೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೫ ||

೮೬

ಅಂಥ ಬ್ರಹ್ಮಾಂಡವ ಎಂಬತ್ತುನಾಲ್ಕುಸಾವಿರದಾ
ಎಂಟುನೂರಾಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕಾಳಾಂಜನವೆಂಬ ಭುವನ.
ಆ ಭುವನದೊಳು ಕಾಳಕಂಠನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರಿಪ್ಪತ್ತುಕ್ಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ನಾನೂರಿಪ್ಪತ್ತುಕ್ಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬ ||

೮೭

ಅಂಥ ಬ್ರಹ್ಮಾಂಡವ ಎಂಬತ್ತೈದುಸಾವಿರದಾ ಎಂಟುನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಂಡಲೇಶ್ವರವೆಂಬ ಭುವನ.
ಆ ಭುವನದೊಳು ಮಂಡಲಾಧಿಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರಿಪ್ಪತ್ತೈದುಕೋಟಿ ಬ್ರಹ್ಮ–ನಾರಾಯಣ– ರುದ್ರರಿಹರು ನೋಡಾ.
ನಾನೂರಿಪ್ಪತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭ ||

೮೮

ಅಂಥ ಬ್ರಹ್ಮಾಂಡವ ಎಂಬತ್ತಾರುಸಾವಿರದ ಎಂಟುನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಾಕೋಟವೆಂಬ ಭುವನ.
ಆ ಭುವನದೊಳು ಮಹಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ನಾನೂರಮೂವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ನಾನೂರಮೂವತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೮ ॥

೮೯

ಅಂಥ ಬ್ರಹ್ಮಾಂಡವ ಎಂಬತ್ತೇಳುಸಾವಿರದಾ ಎಂಟುನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ದ್ವಿರಂಡವೆಂಬ ಭುವನ.
ಆ ಭುವನದೊಳು ದ್ವಿರಂಡಭಿನ್ನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರಮೂವತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೯ ॥

೯೦

ಅಂಥ ಬ್ರಹ್ಮಾಂಡವ ಎಂಬತ್ತೆಂಟುಸಾವಿರದ ಎಂಟುನೂರಾ ಎಪ್ಪತ್ತೆಂಟು
ಬ್ರಹ್ಮಾಡವನೊಳಕೊಂಡುದೊಂದು ಭಂಗವೆಂಬ ಭುವನ.
ಆ ಭುವನದೊಳು ಚಕ್ರೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರಾನಲವತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ನಾನೂರಾನಲವತ್ತುಕೋಟಿ ಬ್ರಹ್ಮ–ರುದ್ರ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯೦ ॥

೯೧

ಅಂಥ ಬ್ರಹ್ಮಾಂಡವ ಎಂಬತ್ತೊಂಬತ್ತು ಸಾವಿರದ
ಎಂಟುನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಚಂಡವೆಂಬ ಭುವನ.
ಆ ಭುವನದೊಳು ಪ್ರಚಂಡನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರನಲವತ್ತೈದು ಕೋಟಿ ದೇವರ್ಕಳು ಮುನೀಂದ್ರರು
ವೇದಪುರುಷರು ಇಂದ್ರಚಂದ್ರಾದಿತ್ಯರಿಹರು ನೋಡಾ.
ನಾನೂರನಲವತ್ತೈದು ಕೋಟಿ ಬ್ರಹ್ಮ ನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯೧ ॥

೯೨

ಅಂಥ ಬ್ರಹ್ಮಾಂಡವ ತೊಂಬತ್ತುಸಾವಿರದ ಎಂಟನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸ್ಥಾಣುವೆಂಬ ಭುವನ.
ಆ ಭುವನದೊಳು ಸ್ಥಾಣುನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರ ಐವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ನಾನೂರೈವತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೨ ||

೯೩

ಅಂಥ ಬ್ರಹ್ಮಾಂಡವ ತೊಂಬತ್ತೊಂದುಸಾವಿರದ ಒಂಬತ್ತನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಸ್ವರ್ಣಾಕ್ಷವೆಂಬ ಭುವನ.
ಆ ಭುವನದೊಳು ಅಕ್ಷಮಾಲಾಧರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೈವತ್ತೈದುಕೋಟಿ ನಾರಾಯಣ–ಬ್ರಹ್ಮ–ರುದ್ರಾದಿಗಳಿಹರು.
ನಾನೂರೈವತ್ತೈದುಕೋಟಿ ಇಂದ್ರ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೯೩ ||

೯೪

ಅಂಥ ಬ್ರಹ್ಮಾಂಡವ ತೊಂಬತ್ತೆರಡುಸಾವಿರದ ಒಂಬೈನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭದ್ರಕರ್ಣವೆಂಬ ಭುವನ.
ಆ ಭುವನದೊಳು ಭದ್ರಕಾಳನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರರುವತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ನಾನೂರರುವತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೯೪ ||

೯೫

ಅಂಥ ಬ್ರಹ್ಮಾಂಡವ ತೊಂಬತ್ತು ಮೂರುಸಾವಿರದ
ಒಂಬೈನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹಾಲಯವೆಂಬ ಭುವನ.
ಆ ಭುವನದೊಳು ಮಹಾಭೈರವನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರರುವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ನಾನೂರರುವತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೯೫ ||

೯೬

ಅಂಥ ಬ್ರಹ್ಮಾಂಡವ ತೊಂಬತ್ತಾರುಸಾವಿರದ ಒಂಬೈನೂರಾ ಮೂವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು ಅವಿಮುಕ್ತವೆಂಬ ಭುವನ.
ಆ ಭುವನದೊಳು ಮುಕ್ತಾಂಗನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೆಪ್ಪತ್ತುಕೋಟಿ ಇಂದ್ರ–ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ನಾನೂರೆಪ್ಪತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೬ ||

೯೭

ಅಂಥ ಬ್ರಹ್ಮಾಂಡವ ತೊಂಬತ್ತೈದುಸಾವಿರದ ಒಂಬೈನೂರ ನಲವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು ರುದ್ರಕೋಟಿಯೆಂಬ ಭುವನ.
ಆ ಭುವನದೊಳು ಕೋದಂಡನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೆಪ್ಪತ್ತೈದುಕೋಟಿ ದೇವರ್ಕಳು ಮುನೀಂದ್ರರು ವೇದಪುರುಷರು
ಇಂದ್ರಚಂದ್ರಾದಿತ್ಯರಿಹರು ನೋಡಾ.
ನಾನೂರೆಪ್ಪತ್ತೈದುಕೋಟಿ ನಾರಾಯಣ ರುದ್ರ ಬ್ರಹ್ಮಾದಿಗಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೯೭ ||

೯೮

ಅಂಥ ಬ್ರಹ್ಮಾಂಡವ ತೊಂಬತ್ತಾರುಸಾವಿರದ ಒಂಬೈನೂರಾ ಐವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು ವಸ್ತ್ರಾಪದವೆಂಬ ಭುವನ.
ಆ ಭುವನದೊಳು ಮಹಾಕೋದಂಡನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೆಂಬತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ನಾನೂರೆಂಬತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೮ ||

೯೯

ಅಂಥ ಬ್ರಹ್ಮಾಂಡವ ತೊಂಬತ್ತೇಳುಸಾವಿರದ ಒಂಬೈನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭೀಮೇಶ್ವರವೆಂಬ ಭುವನ.
ಆ ಭುವನದೊಳು ಭೀಮನಾಥನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರೆಂಬತ್ತೈದುಕೋಟಿ
ಬ್ರಹ್ಮ–ನಾರಾಯಣ–ರುದ್ರಾದಿಗಳಿಹರು ನೋಡಾ.
ನಾನುರೆಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೯೯ ॥

೧೦೦

ಅಂಥ ಬ್ರಹ್ಮಾಂಡವ ತೊಂಬತ್ತೆಂಟುಸಾವಿರದ ಒಂಬೈನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹೇಂದ್ರವೆಂಬ ಭುವನ.
ಆ ಭುವನದೊಳು ಮಹೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರತೊಂಬತ್ತುಕೋಟಿ
ನಾರಾಯಣ–ರುದ್ರ–ಬ್ರಹ್ಮಾದಿಗಳಿಹರು ನೋಡಾ.
ನಾನೂರತೊಂಬತ್ತುಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ಇಹರು ನೋಡಾ
ಅಪ್ಪಮಾಣಕೂಡಲಸಂಗಮದೇವಾ. ॥ ೧೦೦ ॥

೧೦೧

ಅಂಥ ಬ್ರಹ್ಮಾಂಡವ ತೊಂಬತ್ತೊಂಬತ್ತುಸಾವಿರದ
ಒಂಬೈನೂರಾಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಟ್ಟಹಾಸವೆಂಬ ಭುವನ.
ಆ ಭುವನದೊಳು ಅಯೋಗನಾಶನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ನಾನೂರತೊಂಬತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ,
ನಾನೂರತೊಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೧ ॥

೧೦೨

ಅಂಥ ಬ್ರಹ್ಮಾಂಡವ ಲಕ್ಷದ ಮೇಲೆ ಒಂಬೈನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಿಧುವೇಶ್ವರವೆಂಬ ಭುವನ.

ಆ ಭುವನದೊಳು ವಿಶ್ವೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಐನೂರುಕೋಟಿ ಇಂದ್ರ–ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೨ ॥

೧೦೩

ಅಂಥ ಬ್ರಹ್ಮಾಂಡವ ಎರಡುಲಕ್ಷದ ಮೇಲೆ ಸಾವಿರದ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಖಲವೆಂಬ ಭುವನ.
ಆ ಭುವನದೊಳು ನಾರಾಯಣಪ್ರಿಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೈದುಕೋಟಿ ವೇದಪುರುಷರು ಮುನೀಂದ್ರರು ದೇವರ್ಕಳು
ಇಂದ್ರಚಂದ್ರಾದಿತ್ಯರಿಹರು ನೋಡಾ.
ಐನೂರೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೩ ॥

೧೦೪

ಅಂಥ ಬ್ರಹ್ಮಾಂಡವ ಮೂರುಲಕ್ಷದ ಮೇಲೆ ಸಾವಿರ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಾಖಲವೆಂಬ ಭುವನ.
ಆ ಭುವನದೊಳು ನಾರಾಯಣಮರ್ದನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಹತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ಐನೂರಹತ್ತುಕೋಟಿ ಇಂದ್ರ–ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೪ ॥

೧೦೫

ಅಂಥ ಬ್ರಹ್ಮಾಂಡವ ನಾಲ್ಕು ಲಕ್ಷದ ಮೇಲೆ ಸಾವಿರದ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕುರುಕ್ಷೇತ್ರವೆಂಬ ಭುವನ.
ಆ ಭುವನದೊಳು ರೌದ್ರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಾ ಹದಿನೈದುಕೋಟಿ ನಾರಾಯಣ–ಬ್ರಹ್ಮ
ರುದ್ರಾದಿಗಳಿಹರು ನೋಡಾ.
ಐನೂರಾ ಹದಿನೈದುಕೋಟಿ ಇಂದ್ರ–ಚಂದ್ರಾದಿತ್ಯರು

ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೫ ॥

೧೦೬

ಅಂಥ ಬ್ರಹ್ಮಾಂಡವ ಐದುಲಕ್ಷದ ಮೇಲೆ ಸಾವಿರದ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭೈರವವೆಂಬ ಭುವನ.
ಆ ಭುವನದೊಳು ಭೈರವಾರಣನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಿಪ್ಪತ್ತುಕೋಟಿ ಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ.
ಐನೂರಿಪ್ಪತ್ತುಕೋಟಿ ಇಂದ್ರ–ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೬ ॥

೧೦೭

ಅಂಥ ಬ್ರಹ್ಮಾಂಡವ ಆರುಲಕ್ಷದ ಮೇಲೆ ಸಾವಿರದ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕೈದಾರವೆಂಬ ಭುವನ.
ಆ ಭುವನದೊಳು ಕಲಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಿಪ್ಪತ್ತೈದುಕೋಟಿ ದೇವರ್ಕಳು ಮುನೀಂದ್ರರು ವೇದಪುರುಷರು
ಚಂದ್ರಾದಿತ್ಯರು ಇಂದ್ರಾದಿಗಳಿಹರು ನೋಡಾ.
ಐನೂರಿಪ್ಪತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೭ ॥

೧೦೮

ಅಂಥ ಬ್ರಹ್ಮಾಂಡವ ಏಳು ಲಕ್ಷದ ಮೇಲೆ ಸಾವಿರದ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹಾಬಲವೆಂಬ ಭುವನ.
ಆ ಭುವನದೊಳು ಮಹಾಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಮೂವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ನೂರಾಮೂವತ್ತುಕೋಟಿ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೮ ॥

೧೦೯

ಅಂಥ ಬ್ರಹ್ಮಾಂಡವ ಎಂಟುಲಕ್ಷದ ಮೇಲೆ ಸಾವಿರದ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಧ್ಯಮೇಶ್ವರನೆಂಬ ಭುವನ.

ಆ ಭುವನದೊಳು ಕಾಲಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರ ಮೂವತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಐನೂರಾ ಮೂವತ್ತೈದುಕೋಟಿ ಚಂದ್ರಾದಿತ್ಯರು ಇಂದ್ರರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೦೯ ॥

೧೧೦

ಅಂಥ ಬ್ರಹ್ಮಾಂಡವ ಒಂಬತ್ತುಲಕ್ಷದ ಮೇಲೆ ಸಾವಿರದ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹೇಂದ್ರಕೇಶ್ವರವೆಂಬ ಭುವನ.
ಆ ಭುವನದೊಳು ಮಹಾಂತಾಕಾಶನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಾನಲವತ್ತುಕೋಟಿನಾರಾಯಣ–ಬ್ರಹ್ಮ–ರುದ್ರಾದಿಗಳಿಹರು ನೋಡಾ.
ಐನೂರಾನಲವತ್ತುಕೋಟಿ ಇಂದ್ರ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೧೧೦ ॥

೧೧೧

ಅಂಥ ಬ್ರಹ್ಮಾಂಡವ ಹತ್ತುಲಕ್ಷದ ಮೇಲೆ ಸಾವಿರದ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜಲಜೇಶ್ವರವೆಂಬ ಭುವನ.
ಆ ಭುವನದೊಳು ಜಗನ್ನಾಥನೆಂಬ ರುದ್ರಮೂರ್ತಿ ಇಹನು
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರನಲವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಐನೂರಾನಲವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೧ ॥

೧೧೨

ಅಂಥ ಬ್ರಹ್ಮಾಂಡವ ಹನ್ನೊಂದು ಲಕ್ಷದ ಮೇಲೆ ಸಾವಿರದ ನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಶ್ರೀಶೈಲವೆಂಬ ಭುವನ.
ಆ ಭುವನದೊಳು ಶೈಲೇಂದ್ರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರಐವತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ಬ್ರಹ್ಮ–ನಾರಾಯಣರು ರುದ್ರಾದಿಗಳಿಹರು ನೋಡಾ.
ಐನೂರೈವತ್ತುಕೋಟಿ ವೇದಪುರುಷರು

ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೨ ॥

೧೧೩

ಅಂಥ ಬ್ರಹ್ಮಾಂಡವ ಹನ್ನೆರಡುಲಕ್ಷದ ಮೇಲೆ ಸಾವಿರದನೂರಾಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಹರಿಶ್ಚಂದ್ರವೆಂಬ ಭುವನ.
ಆ ಭುವನದೊಳು ಹರಿಸಂಹಾರವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೈವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ಐನೂರೈವತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೩ ॥

೧೧೪

ಅಂಥ ಬ್ರಹ್ಮಾಂಡವ ಹದಿಮೂರುಲಕ್ಷದ ಮೇಲೆ ಸಾವಿರದ ನೂರಿಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಕುಲಿಶವೆಂಬ ಭುವನ.
ಆ ಭುವನದೊಳು ಅಚಲನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರರವತ್ತುಕೋಟಿ ಬ್ರಹ್ಮ–ವಿಷ್ಣು–ಇಂದ್ರ–ಚಂದ್ರಾದಿತ್ಯರಿಹರು.
ಐನೂರರವತ್ತುಕೋಟಿ ರುದ್ರರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೪ ॥

೧೧೫

ಅಂಥ ಬ್ರಹ್ಮಾಂಡವ ಹದಿನಾಲ್ಕುಲಕ್ಷದ ಮೇಲೆ
ಸಾವಿರದನೂರಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮುಂಡಿಯೆಂಬ ಭುವನ.
ಆ ಭುವನದೊಳು ರುಂಡಮಾಲಾಧರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರರವತ್ತೈದುಕೋಟಿ ಇಂದ್ರಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ಐನೂರರವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೫ ॥

೧೧೬

ಅಂಥ ಬ್ರಹ್ಮಾಂಡವ ಹದಿನೈದುಲಕ್ಷದ ಮೇಲೆ
ಸಾವಿರದನೂರಾನಲವತ್ತೆಂಟು

ಬ್ರಹ್ಮಾಂಡವನೊಳಕೊಂಡುದೊಂದು ಚಾರುಭೂತಿಯೆಂಬ ಭುವನ.
ಆ ಭುವನದೊಳು ಭಸ್ಮಧರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೆಪ್ಪತ್ತುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು ನೋಡಾ.
ಐನೂರೆಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೬ ॥

೧೧೭

ಅಂಥ ಬ್ರಹ್ಮಾಂಡವ ಹದಿನಾರುಲಕ್ಷದ ಮೇಲೆ ಸಾವಿರದ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಆಷಾಡಿಯೆಂಬ ಭುವನ
ಆ ಭುವನದೊಳು ಲಲಾಟಾಕ್ಷನೆಂಬ ರುದ್ರಮೂರ್ತಿ ಇಹನು
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೆಪ್ಪತ್ತೈದುಕೋಟಿ ವಿಷ್ಣು–ಬ್ರಹ್ಮ–ಇಂದ್ರ–ಚಂದ್ರಾದಿತ್ಯರಿಹರು.
ಐನೂರೆಪ್ಪತ್ತೈದುಕೋಟಿ ರುದ್ರರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೭ ॥

೧೧೮

ಅಂಥ ಬ್ರಹ್ಮಾಂಡವ ಹದಿನೇಳು ಲಕ್ಷದ ಮೇಲೆ ಸಾವಿರದ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತಸ್ಕರವೆಂಬ ಭುವನ
ಆ ಭುವನದೊಳು ಗೋಕರ್ಣನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೆಂಬತ್ತುಕೋಟಿ ವೇದಪುರುಷರು ಮುನೀಂದ್ರರು ಇಂದ್ರಚಂದ್ರಾದಿತ್ಯರು
ದೇವರ್ಕಳಿಹರು ನೋಡಾ.
ಐನೂರೆಂಬತ್ತುಕೋಟಿ ನಾರಾಯಣ–ಬ್ರಹ್ಮರು–ರುದ್ರಾದಿಗಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೮ ॥

೧೧೯

ಅಂಥ ಬ್ರಹ್ಮಾಂಡವ ಹದಿನೆಂಟುಲಕ್ಷದ ಮೇಲೆ
ಸಾವಿರದಿನ್ನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನೈಮಿಷವೆಂಬ ಭುವನ.
ಆ ಭುವನದೊಳು ಶಂಖುಕರ್ಣನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರೆಂಬತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಐನೂರೆಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು

ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೧೯ ॥

೧೨೦

ಅಂಥ ಬ್ರಹ್ಮಾಂಡವ ಹತ್ತೊಂಬತ್ತುಲಕ್ಷದ ಮೇಲೆ
ಸಾವಿರದ ನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಭಾಸವೆಂಬ ಭುವನ.
ಆ ಭುವನದೊಳು ತೇಜೋಮೂರ್ತಿಯೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರ ತೊಂಬತ್ತುಕೋಟಿ ನಾರಾಯಣ–ಬ್ರಹ್ಮ–
ರುದ್ರಾದಿಗಳಿಹರು ನೋಡಾ.
ಐನೂರತೊಂಬತ್ತು ಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೦ ॥

೧೨೧

ಅಂಥ ಬ್ರಹ್ಮಾಂಡವ ಇಪ್ಪತ್ತುಲಕ್ಷದ ಮೇಲೆ ಸಾವಿರದ
ನೂರಾತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅಮರೇಶ್ವರವೆಂಬ ಭುವನ.
ಆ ಭುವನದೊಳು ಅಮರನಾಯಕನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಐನೂರತೊಂಬತ್ತೈದುಕೋಟಿ ಇಂದ್ರ–ಬ್ರಹ್ಮ–ನಾರಾಯಣರಿಹರು.
ಐನೂರತೊಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೧ ॥

೧೨೨

ಅಂಥ ಬ್ರಹ್ಮಾಂಡವ ಇಪ್ಪತ್ತೊಂದುಲಕ್ಷದ ಮೇಲೆ
ಸಾವಿರದಿನ್ನೂರಾಯೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭದ್ರಕಾಳವೆಂಬ ಭುವನ.
ಆ ಭುವನದೊಳು ಮಹಾಕಾಳನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಆರುನೂರುಕೋಟಿ ಇಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೨ ॥

೧೨೩

ಅಂಥ ಬ್ರಹ್ಮಾಂಡವ ಇಪ್ಪತ್ತೆರಡುಲಕ್ಷದ ಮೇಲೆ
ಸಾವಿರದಿನ್ನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವೀರಭದ್ರನೆಂಬ ಭುವನ.
ಆ ಭುವನದೊಳು ಪ್ರಳಯಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರ್ಯೆದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಆರುನೂರ್ಯೆದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೩ ॥

೧೨೪

ಅಂಥ ಬ್ರಹ್ಮಾಂಡವ ಇಪ್ಪತ್ತೂರುಲಕ್ಷದ ಮೇಲೆ
ಸಾವಿರದಿನ್ನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತ್ರಿಲೋಚನವೆಂಬ ಭುವನ.
ಆ ಭುವನದೊಳು ತ್ರಿಕಾಲಾಗ್ನಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ಹತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ಆರುನೂರಾ ಹತ್ತುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೪ ॥

೧೨೫

ಅಂಥ ಬ್ರಹ್ಮಾಂಡವ ಇಪ್ಪತ್ನಾಲ್ಕುಲಕ್ಷದ ಮೇಲೆ
ಸಾವಿರದ ಇನ್ನೂರಾಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಿಷ್ಣುವೆಂಬ ಭುವನ.
ಆ ಭುವನದೊಳು ವಿಮಲೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ಹದಿನೈದುಕೋಟಿನಾರಾಯಣ–ಬ್ರಹ್ಮ–ರುದ್ರಾದಿಗಳಿಹರು,
ಆರುನೂರಾ ಹದಿನೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೫ ॥

೧೨೬

ಅಂಥ ಬ್ರಹ್ಮಾಂಡವ ಇಪ್ಪತ್ತೈದುಲಕ್ಷದ ಮೇಲೆ
ಸಾವಿರದಿನ್ನೂರಾ ನಲವತ್ತೆಂಟು

ಬ್ರಹ್ಮಾಂಡವನೊಳಕೊಂಡುದೊಂದು ಭವವೆಂಬ ಭುವನ.
ಆ ಭುವನದೊಳು ಭವದೂರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಿಪ್ಪತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಆರುನೂರಿಪ್ಪತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೨೬ ||

೧೨೭

ಅಂಥ ಬ್ರಹ್ಮಾಂಡವ ಇಪ್ಪತ್ತಾರುಲಕ್ಷದ ಮೇಲೆ
ಸಾವಿರದಿನ್ನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಿವಾಹವೆಂಬ ಭುವನ.
ಆ ಭುವನದೊಳು ಶತಪಿಂಡನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಿಪ್ಪತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಆರುನೂರಿಪ್ಪತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೧೨೭ ||

೧೨೮

ಅಂಥ ಬ್ರಹ್ಮಾಂಡವ ಇಪ್ಪತ್ತೇಳುಲಕ್ಷದ ಮೇಲೆ
ಸಾವಿರದಿನ್ನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತ್ರಿದಶೇಶ್ವರವೆಂಬ ಭುವನ.
ಆ ಭುವನದೊಳು ಶತಾಕ್ಷನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ಮೂವತ್ತುಕೋಟಿ ನಾರಾಯಣ ರುದ್ರ
ಬ್ರಹ್ಮಾದಿಗಳಿಹರು ನೋಡಾ.
ಆರುನೂರಾ ಮೂವತ್ತುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೨೮ ||

೧೨೯

ಅಂಥ ಬ್ರಹ್ಮಾಂಡವ ಇಪ್ಪತ್ತೆಂಟುಲಕ್ಷದ ಮೇಲೆ
ಸಾವಿರದಿನ್ನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತ್ರಿಯಕ್ಷವೆಂಬ ಭುವನ.

ಆ ಭುವನದೊಳು ಸಹಸ್ರಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ಮೂವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಆರುನೂರಾ ಮೂವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೨೯ ॥

೧೩೦

ಅಂಥ ಬ್ರಹ್ಮಾಂಡವ ಇಪ್ಪತ್ತೊಂದುಲಕ್ಷದ ಮೇಲೆ
ಸಾವಿರದಿನ್ನೂರ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಗಣವೆಂಬ ಭುವನ.
ಆ ಭುವನದೊಳು ಗಣನಾಥನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾನಲವತ್ತು ಕೋಟಿ ದೇವರ್ಕಳು ಇಂದ್ರಚಂದ್ರಾದಿತ್ಯರು
ವೇದಪುರಷರು ಮುನೀಂದ್ರರಿಹರು ನೋಡಾ.
ಆರುನೂರಾ ನಲವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೦ ॥

೧೩೧

ಅಂಥ ಬ್ರಹ್ಮಾಂಡವ ಮೂವತ್ತುಲಕ್ಷದ ಮೇಲೆ
ಸಾವಿರದಿನ್ನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ದೃಕ್ಷವೆಂಬ ಭುವನ.
ಆ ಭುವನದೊಳು ಸಹಸ್ರಪಾದನೆಂಬ ರುದ್ರಮೂರ್ತಿ ಇಹನು
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ನಲವತ್ತೈದುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಆರುನೂರಾ ನಲವತ್ತೈದುಕೋಟಿ ಬ್ರಹ್ಮ–ನಾರಾಯಣ–
ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೧ ॥

೧೩೨

ಅಂಥ ಬ್ರಹ್ಮಾಂಡವ ಮೂವತ್ತೊಂದುಲಕ್ಷದ ಮೇಲೆ
ಸಾವಿರದ ಮುನ್ನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ವಿಭುವೆಂಬ ಭುವನ.
ಆ ಭುವನದೊಳು ಸಹಸ್ರಾಕ್ಷನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೈವತ್ತುಕೋಟಿ ಮುನೀಂದ್ರರು ದೇವರ್ಕಳು
ಇಂದ್ರಚಂದ್ರಾದಿತ್ಯರು ವೇದಪುರುಷರಿಹರು ನೋಡಾ.
ಆರುನೂರೈವತ್ತುಕೋಟಿ ರುದ್ರ-ಬ್ರಹ್ಮ-ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೨ ॥

೧೩೩

ಅಂಥ ಬ್ರಹ್ಮಾಂಡವ ಮೂವತ್ತೆರಡುಲಕ್ಷದ ಮೇಲೆ
ಸಾವಿರದ ಮುನ್ನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶಂಭುವೆಂಬ ಭುವನ.
ಆ ಭುವನದೊಳು ಸ್ವಯಂಭುವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೈವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಆರುನೂರೈವತ್ತೈದುಕೋಟಿ ರುದ್ರ-ಬ್ರಹ್ಮ-ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೩ ॥

೧೩೪

ಅಂಥ ಬ್ರಹ್ಮಾಂಡವ ಮೂವತ್ತು ಮೂರುಲಕ್ಷದ ಮೇಲೆ
ಸಾವಿರದ ಮುನ್ನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ದೌಷ್ಟ್ರಿಯೆಂಬ ಭುವನ.
ಆ ಭುವನದೊಳು ಶಂಭುವೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರರವತ್ತು ಕೋಟಿ ಇಂದ್ರ ಬ್ರಹ್ಮ ನಾರಾಯಣರಿಹರು.
ಆರುನೂರರವತ್ತು ಕೋಟಿ ರುದ್ರರು ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೪ ॥

೧೩೫

ಅಂಥ ಬ್ರಹ್ಮಾಂಡವ ಮೂವತ್ತುನಾಲ್ಕುಲಕ್ಷದ ಮೇಲೆ
ಸಾವಿರದ ಮುನ್ನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಜ್ರವೆಂಬ ಭುವನ.
ಆ ಭುವನದೊಳು ವಜ್ರಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರರವತ್ತೈದುಕೋಟಿ ಬ್ರಹ್ಮ-ನಾರಾಯಣ-ರುದ್ರರಿಹರು.

ಆರುನೂರರವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೫ ॥

೧೩೬

ಅಂಥ ಬ್ರಹ್ಮಾಂಡವ ಮೂವತ್ತೈದುಲಕ್ಷದ ಮೇಲೆ
ಸಾವಿರದ ಮುನ್ನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಫಣೀಶವೆಂಬ ಭುವನ.
ಆ ಭುವನದೊಳು ದಿಗಂಬರನಾಥನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೆಪ್ಪತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಆರುನೂರೆಪ್ಪತ್ತುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೬ ॥

೧೩೭

ಅಂಥ ಬ್ರಹ್ಮಾಂಡವ ಮೂವತ್ತಾರುಲಕ್ಷದ ಮೇಲೆ
ಸಾವಿರದ ಮುನ್ನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಉದಂಬರೀಶವೆಂಬ ಭುವನ.
ಆ ಭುವನದೊಳು ಉಮಾರಹಿತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೆಪ್ಪತ್ತೈದುಕೋಟಿ ನಾರಾಯಣರು
ಬ್ರಹ್ಮ ರುದ್ರಾದಿಗಳಿಹರು ನೋಡಾ.
ಆರುನೂರೆಪ್ಪತ್ತೈದುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೭ ॥

೧೩೮

ಅಂಥ ಬ್ರಹ್ಮಾಂಡವ ಮೂವತ್ತೇಳುಲಕ್ಷದ ಮೇಲೆ
ಸಾವಿರದ ಮುನ್ನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಗ್ರಸನವೆಂಬ ಭುವನ.
ಆ ಭುವನದೊಳು ಸರ್ವಗ್ರಾಸನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೆಂಬತ್ತುಕೋಟಿ ದೇವರ್ಕಳು ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರಿಹರು ನೋಡಾ.

ಆರುನೂರೆಂಬತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೮ ॥

೧೩೯

ಅಂಥ ಬ್ರಹ್ಮಾಂಡವ ಮೂವತ್ತೆಂಟುಲಕ್ಷದ ಮೇಲೆ
ಸಾವಿರದ ಮುನ್ನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಾರುತಾಶನೆಂಬ ಭುವನ.
ಆ ಭುವನದೊಳು ವ್ಯೋಮರೂಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರೆಂಬತ್ತೈದು ಕೋಟಿ ಮುನೀಂದ್ರರು
ದೇವರ್ಕಳು ಇಂದ್ರ ಚಂದ್ರಾದಿತ್ಯರು ವೇದಪುರುಷರು ಇಹರು ನೋಡಾ.
ಆರುನೂರೆಂಬತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೩೯ ॥

೧೪೦

ಅಂಥ ಬ್ರಹ್ಮಾಂಡವ ಮೂವತ್ತೊಂಬತ್ತುಲಕ್ಷದ ಮೇಲೆ
ಸಾವಿರದ ಮುನ್ನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕ್ರತುಮರ್ದನವೆಂಬ ಭುವನ.
ಆ ಭುವನದೊಳು ಅನಂತಲೋಚನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರ ತೊಂಬತ್ತುಕೋಟಿ ಇಂದ್ರ–ಬ್ರಹ್ಮ–ನಾರಾಯಣ–ರುದ್ರರಿಹರು.
ಆರುನೂರ ತೊಂಬತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೦ ॥

೧೪೧

ಅಂಥ ಬ್ರಹ್ಮಾಂಡವ ನಾಲ್ವತ್ತುಲಕ್ಷದ ಮೇಲೆ
ಸಾವಿರದ ಮುನ್ನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಆನಂದವೆಂಬ ಭುವನ.
ಆ ಭುವನದೊಳು ಸದಾನಂದವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಆರುನೂರಾ ತೊಂಬತ್ತೈದುಕೋಟಿ
ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ.
ಆರುನೂರಾ ತೊಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೧ ॥

೧೪೨

ಅಂಥ ಬ್ರಹ್ಮಾಂಡವ ನಾಲ್ವತ್ತೊಂದುಲಕ್ಷದ ಮೇಲೆ
ಸಾವಿರದ ನಾನೂರೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವೃಷಧರವೆಂಬ ಭುವನ.
ಆ ಭುವನದೊಳು ವಿಷಕಂಠನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರುಕೋಟಿ ನಾರಾಯಣ–ಬ್ರಹ್ಮ–ರುದ್ರರಿಹರು ನೋಡಾ.
ಏಳುನೂರುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೨ ॥

೧೪೩

ಅಂಥ ಬ್ರಹ್ಮಾಂಡವ ನಾಲ್ವತ್ತೆರಡುಲಕ್ಷದ ಮೇಲೆ
ಸಾವಿರದ ನಾನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಬಲಿಪ್ರಿಯವೆಂಬ ಭುವನ.
ಆ ಭುವನದೊಳು ಶಂಭುವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರೈದುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಏಳುನೂರೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೩ ॥

೧೪೪

ಅಂಥ ಬ್ರಹ್ಮಾಂಡವ ನಾಲ್ವತ್ತೂರುಲಕ್ಷದ ಮೇಲೆ
ಸಾವಿರದ ನಾನೂರ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭೂತಪಾಲವೆಂಬ ಭುವನ.
ಆ ಭುವನದೊಳು ಭೂತೇಶನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಹತ್ತುಕೋಟಿ ಬ್ರಹ್ಮ–ವಿಷ್ಣು–ರುದ್ರಾದಿಗಳಿಹರು.
ಏಳುನೂರಾ ಹತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೪ ॥

೧೪೫

ಅಂಥ ಬ್ರಹ್ಮಾಂಡವ ನಾಲವತ್ತುನಾಲ್ಕುಲಕ್ಷದ ಮೇಲೆ
ಸಾವಿರದಾ ನಾನೂರಾ ಮೂವತ್ತೆಂಟು

ಬ್ರಹ್ಮಾಂಡವನೊಳಕೊಂಡುದೊಂದು ಜೇಷ್ಠವೆಂಬ ಭುವನ.
ಆ ಭುವನದೊಳು ವಿಶ್ವಮೂಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಹದಿನೈದುಕೋಟಿ
ನಾರಾಯಣ–ಬ್ರಹ್ಮ–ರುದ್ರಾದಿಗಳಿಹರು ನೋಡಾ.
ಏಳುನೂರಾ ಹದಿನೈದುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೫ ॥

೧೪೬

ಅಂಥ ಬ್ರಹ್ಮಾಂಡವ ನಾಲವತ್ತೈದುಲಕ್ಷದ ಮೇಲೆ
ಸಾವಿರದಾ ನಾನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸರ್ವವೆಂಬ ಭುವನ.
ಆ ಭುವನದೊಳು ಸರ್ವೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಿಪ್ಪತ್ತು ಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಏಳುನೂರಿಪ್ಪತ್ತು ಕೋಟಿ ವೇದಪುರುಷರು ಮುನೀಂದ್ರರು
ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೬ ॥

೧೪೭

ಅಂಥ ಬ್ರಹ್ಮಾಂಡವ ನಾಲವತ್ತಾರುಲಕ್ಷದ ಮೇಲೆ
ಸಾವಿರದ ನಾನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸುರೇಶಾನವೆಂಬ ಭುವನ.
ಆ ಭುವನದೊಳು ಸುರೇಂದ್ರಾಧಿಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಿಪ್ಪತ್ತೈದುಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರಿಹರು ನೋಡಾ.
ಏಳುನೂರಿಪ್ಪತ್ತೈದು ಕೋಟಿ ರುದ್ರ ಬ್ರಹ್ಮ ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೭ ॥

೧೪೮

ಅಂಥ ಬ್ರಹ್ಮಾಂಡವ ನಾಲವತ್ತೇಳು ಲಕ್ಷದ ಮೇಲೆ
ಸಾವಿರದಾ ನಾನೂರಾ ಅರವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವೇದಪಾಠಕವೆಂಬ ಭುವನ.
ಆ ಭುವನದೊಳು ವೇದನಾಥನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರ ಮೂವತ್ತುಕೋಟಿ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ಏಳುನೂರ ಮೂವತ್ತುಕೋಟಿ
ಇಂದ್ರ–ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೮ ॥

೧೪೯

ಅಂಥ ಬ್ರಹ್ಮಾಂಡವ ನಾಲವತ್ತೆಂಟುಲಕ್ಷದ ಮೇಲೆ
ಸಾವಿರದಾ ನಾನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜ್ಞಾನಭೂತವೆಂಬ ಭುವನ.
ಆ ಭುವನದೊಳು ಜ್ಞಾನಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳನೂರ ಮೂವತ್ತೈದುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಏಳುನೂರ ಮೂವತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೪೯ ॥

೧೫೦

ಅಂಥ ಬ್ರಹ್ಮಾಂಡವ ನಾಲವತ್ತೊಂಬತ್ತುಲಕ್ಷದ ಮೇಲೆ
ಸಾವಿರದಾ ನಾನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸರ್ವಜ್ಞವೆಂಬ ಭುವನ.
ಆ ಭುವನದೊಳು ಸರ್ವವ್ಯಾಪಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರ ನಲವತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಏಳುನೂರ ನಲವತ್ತುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೦ ॥

೧೫೧

ಅಂಥ ಬ್ರಹ್ಮಾಂಡವ ಐವತ್ತುಲಕ್ಷದ ಮೇಲೆ
ಸಾವಿರದಾ ನಾನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಈಶವೆಂಬ ಭುವನ.
ಆ ಭುವನದೊಳು ಈಶಾನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಏಳುನೂರಾ ನಲವತ್ತೈದುಕೋಟಿ ನಾರಾಯಣ–ಬ್ರಹ್ಮ–ರುದ್ರಾದಿಗಳಿಹರು.
ಏಳುನೂರಾ ನಲವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೧ ॥

೧೫೨

ಅಂಥ ಬ್ರಹ್ಮಾಂಡವ ಐವತ್ತೊಂದುಲಕ್ಷದ ಮೇಲೆ
ಸಾವಿರದಾ ಐನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಸರ್ವವಿದ್ಯಾಧಿಪವೆಂಬ ಭುವನ.
ಆ ಭುವನದೊಳು ಸರ್ವಜ್ಞನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರೈವತ್ತು ಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರಿಹರು ನೋಡಾ.
ಏಳುನೂರೈವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೨ ॥

೧೫೩

ಅಂಥ ಬ್ರಹ್ಮಾಂಡವ ಐವತ್ತೆರಡುಲಕ್ಷದ ಮೇಲೆ
ಸಾವಿರದಾ ಐನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಕಾಮುದವೆಂಬ ಭುವನ.
ಆ ಭುವನದೊಳು ಪ್ರಸಾಥನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಐವತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಏಳುನೂರಾ ಐವತ್ತೈದುಕೋಟಿ ವೇದಪುರುಷರು ಮುನೀಂದ್ರರು
ದೇವರ್ಕಳು ಇಂದ್ರಚಂದ್ರಾದಿತ್ಯರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೩ ॥

೧೫೪

ಅಂಥ ಬ್ರಹ್ಮಾಂಡವ ಐವತ್ತಮೂರುಲಕ್ಷದ ಮೇಲೆ
ಸಾವಿರದಾ ಐನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಸೀದನವೆಂಬ ಭುವನ.
ಆ ಭುವನದೊಳು ಅಖಿಲಾಂಡಕೋಟಿಬ್ರಹ್ಮಾಂಡನಾಯಕನೆಂಬ
ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಅರವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಏಳುನೂರಾ ಅರವತ್ತುಕೋಟಿ ಇಂದ್ರಚಂದ್ರಾದಿತ್ಯರು

ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೪ ॥

೧೫೫

ಅಂಥ ಬ್ರಹ್ಮಾಂಡವ ಐವತ್ತುನಾಲ್ಕುಲಕ್ಷದ ಮೇಲೆ
ಸಾವಿರದ ಐನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶ್ರೀಧರವೆಂಬ ಭುವನ.
ಆ ಭುವನದೊಳು ಅನಂತಗುಣರೂಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಅರವತ್ತೈದುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಏಳುನೂರಾ ಅರವತ್ತೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೫ ॥

೧೫೬

ಅಂಥ ಬ್ರಹ್ಮಾಂಡವ ಐವತ್ತೈದುಲಕ್ಷದ ಮೇಲೆ
ಸಾವಿರದಾ ಐನೂರಾನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಲಕ್ಷ್ಮೀಧರವೆಂಬ ಭುವನ.
ಆ ಭುವನದೊಳು ಗುಣಾತೀತನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಎಪ್ಪತ್ತುಕೋಟಿ ನಾರಾಯಣ–ಬ್ರಹ್ಮ–ರುದ್ರರಿಹರು.
ಏಳುನೂರಾ ಎಪ್ಪತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೬ ॥

೧೫೭

ಅಂಥ ಬ್ರಹ್ಮಾಂಡವ ಐವತ್ತಾರುಲಕ್ಷದ ಮೇಲೆ
ಸಾವಿರದಾ ಐನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜಟಾಧರವೆಂಬ ಭುವನ.
ಆ ಭುವನದೊಳು ಜಟಾಜೂಟನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾ ಎಪ್ಪತ್ತೈದುಕೋಟಿ ಇಂದ್ರ ಬ್ರಹ್ಮ ನಾರಾಯಣ ರುದ್ರರಿಹರು.
ಏಳುನೂರಾ ಎಪ್ಪತ್ತೈದುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೭ ॥

೧೫೮

ಅಂಥ ಬ್ರಹ್ಮಾಂಡವ ಐವತ್ತೇಳುಲಕ್ಷದ ಮೇಲೆ
ಸಾವಿರದಾ ಐನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸೌಮ್ಯದೇಹವೆಂಬ ಭುವನ.
ಆ ಭುವನದೊಳು ಪ್ರಳಯಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರೆಂಬತ್ತು ಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಏಳುನೂರೆಂಬತ್ತು ಕೋಟಿ ಇಂದ್ರ–ಬ್ರಹ್ಮ–ನಾರಾಯಣ
ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೮ ॥

೧೫೯

ಅಂಥ ಬ್ರಹ್ಮಾಂಡವ ಐವತ್ತೆಂಟುಲಕ್ಷದ ಮೇಲೆ
ಸಾವಿರದಾ ಐನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಧನ್ಯರೂಪವೆಂಬ ಭುವನ.
ಆ ಭುವನದೊಳು ಪ್ರಳಯಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರೆಂಬತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಏಳುನೂರೆಂಬತ್ತೈದುಕೋಟಿ ಇಂದ್ರ–ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೫೯ ॥

೧೬೦

ಅಂಥ ಬ್ರಹ್ಮಾಂಡವ ಐವತ್ತೊಂಬತ್ತು ಲಕ್ಷದ ಮೇಲೆ
ಸಾವಿರದಾ ಐನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ನಿಧೀಶವೆಂಬ ಭುವನ.
ಆ ಭುವನದೊಳು ಭೂತೇಶನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳನೂರಾತೊಂಬತ್ತುಕೋಟಿ ಇಂದ್ರ–ಬ್ರಹ್ಮ–ನಾರಾಯಣ–ರುದ್ರರಿಹರು.
ಏಳುನೂರಾತೊಂಬತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬೦ ॥

೧೬೧

ಅಂಥ ಬ್ರಹ್ಮಾಂಡವ ಅರುವತ್ತು ಲಕ್ಷದ ಮೇಲೆ
ಸಾವಿರದಾ ಐನೂರಾತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮೇಘವಾಹನವೆಂಬ ಭುವನ.
ಆ ಭುವನದೊಳು ಚಂಡಮಾರುತನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಏಳುನೂರಾತೊಂಬತ್ತೈದು ಕೋಟಿ
ನಾರಾಯಣ–ರುದ್ರ ಬ್ರಹ್ಮ–ಇಂದ್ರಾದಿಗಳಿಹರು ನೋಡಾ.
ಏಳುನೂರಾ ತೊಂಬತ್ತೈದು ಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೧೬೧ ॥

೧೬೨

ಅಂಥ ಬ್ರಹ್ಮಾಂಡವ ಅರುವತ್ತೊಂದು ಲಕ್ಷದ ಮೇಲೆ
ಸಾವಿರಾದಾ ಆರನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ಕಪರ್ದಿಯೆಂಬ ಭುವನ.
ಆ ಭುವನದೊಳು ಕಾಲನಾಶನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು
ಎಂಟುನೂರುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬೨ ॥

೧೬೩

ಅಂಥ ಬ್ರಹ್ಮಾಂಡವ ಅರುವತ್ತೆರಡು ಲಕ್ಷದ ಮೇಲೆ
ಸಾವಿರದಾ ಆರುನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪಂಚಶಿಖಿಯೆಂಬ ಭುವನ.
ಆ ಭುವನದೊಳು ಪಂಚಭೂತಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರೈದುಕೋಟಿ ನಾರಾಯಣ–ಬ್ರಹ್ಮ–ರುದ್ರರಿಹರು.
ಎಂಟುನೂರೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬೩ ॥

೧೬೪

ಅಂಥ ಬ್ರಹ್ಮಾಂಡವ ಅರುವತ್ಮೂರುಲಕ್ಷದ ಮೇಲೆ
ಸಾವಿರದಾ ಆರುನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪ್ರಪಂಚಾಂತಕವೆಂಬ ಭುವನ.
ಆ ಭುವನದೊಳು ಪಂಚಾನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಹತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಎಂಟುನೂರಾ ಹತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥೧೬೪॥

೧೬೫

ಅಂಥ ಬ್ರಹ್ಮಾಂಡವ ಅರುವತ್ನಾಲ್ಕುಲಕ್ಷದ ಮೇಲೆ
ಸಾವಿರದಾ ಆರುನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಕ್ಷಯಾಂತಕವೆಂಬ ಭುವನ.
ಆ ಭುವನದೊಳು ಶೂಲಪಾಣಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಹದಿನೈದುಕೋಟಿ
ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ಎಂಟುನೂರಾ ಹದಿನೈದುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥೧೬೫॥

೧೬೬

ಅಂಥ ಬ್ರಹ್ಮಾಂಡವ ಅರುವತ್ತೈದುಲಕ್ಷದ ಮೇಲೆ
ಸಾವಿರದಾ ಆರುನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ತಿಕ್ಷುವೆಂಬ ಭುವನ.
ಆ ಭುವನದೊಳು ತ್ರಿಕಾಲಸಂಹಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಿಪ್ಪತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಎಂಟುನೂರಿಪ್ಪತ್ತುಕೋಟಿ
ಇಂದ್ರ–ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥೧೬೬॥

೧೬೭

ಅಂಥ ಬ್ರಹ್ಮಾಂಡವ ಅರುವತ್ತಾರುಲಕ್ಷದ ಮೇಲೆ
ಸಾವಿರದಾ ಆರುನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸುಸೂಕ್ಷ್ಮವೆಂಬ ಭುವನ.
ಆ ಭುವನದೊಳು ಅಷ್ಟತನುಸಂಹಾರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಿಪ್ಪತ್ತೈದುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಎಂಟುನೂರಿಪ್ಪತ್ತೈದುಕೋಟಿ ವೇದಪುರುಷರು
ಇಂದ್ರಚಂದ್ರಾದಿತ್ಯರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬೭ ॥

೧೬೮

ಅಂಥ ಬ್ರಹ್ಮಾಂಡವ ಅರುವತ್ತೇಳು ಲಕ್ಷದ ಮೇಲೆ
ಸಾವಿರದಾ ಆರುನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಾಯುವೇಗವೆಂಬ ಭುವನ.
ಆ ಭುವನದೊಳು ಭೂತನಾಥನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಮೂವತ್ತುಕೋಟಿ ರುದ್ರ–ಬ್ರಹ್ಮ–ನಾರಾಯಣರಿಹರು.
ಎಂಟುನೂರಾ ಮೂವತ್ತುಕೋಟಿ ಇಂದ್ರಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೬೮ ॥

೧೬೯

ಅಂಥ ಬ್ರಹ್ಮಾಂಡವ ಅರುವತ್ತೆಂಟುಲಕ್ಷದ ಮೇಲೆ
ಸಾವಿರದಾ ಆರುನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಲಘುವೆಂಬ ಭುವನ.
ಆ ಭುವನದೊಳು ಅಕ್ಷಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಮೂವತ್ತುಕೋಟಿ ನಾರಾಯಣ ಬ್ರಹ್ಮ ರುದ್ರರಿಹರು.
ಎಂಟುನೂರಾಮೂವತ್ತೈದುಕೋಟಿ ದೇವರ್ಕಳು
ವೇದಪುರುಷರು ಮುನೀಂದ್ರರು ಚಂದ್ರಾದಿತ್ಯರು ಇಂದ್ರರಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೧೬೯ ॥

೧೭೦

ಅಂಥ ಬ್ರಹ್ಮಾಂಡವ ಅರುವತ್ತೊಂಬತ್ತು ಲಕ್ಷದ ಮೇಲೆ
ಸಾವಿರದಾರುನೂರಾ ಎಂಬತ್ತೆಂಟು

ಬ್ರಹ್ಮಾಂಡವನೊಳಕೊಂಡುದೊಂದು ಶೀಘ್ರವೆಂಬ ಭುವನ.
ಆ ಭುವನದೊಳು ಪ್ರಳಯಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ನಲವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಎಂಟುನೂರಾ ನಲವತ್ತುಕೋಟಿ ಇಂದ್ರ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೭೦ ॥

೧೭೧

ಅಂಥ ಬ್ರಹ್ಮಾಂಡವ ಎಪ್ಪತ್ತುಲಕ್ಷದ ಮೇಲೆ
ಸಾವಿರದಾರುನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಸುನಾದವೆಂಬ ಭುವನ.
ಆ ಭುವನದೊಳು ಸಾದಾಂತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ನಲವತ್ತೈದುಕೋಟಿ ಇಂದ್ರ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು.
ಎಂಟುನೂರಾ ನಲವತ್ತೈದುಕೋಟಿ ಬ್ರಹ್ಮನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೭೧ ॥

೧೭೨

ಅಂಥ ಬ್ರಹ್ಮಾಂಡವ ಎಪ್ಪತ್ತೊಂದು ಲಕ್ಷದ ಮೇಲೆ
ಸಾವಿರದಾ ಏಳುನೂರೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮೇಘನಾದವೆಂಬ ಭುವನ.
ಆ ಭುವನದೊಳು ಮೇಘವಾಹನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರೈವತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರ ಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಎಂಟನೂರೈವತ್ತುಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೭೨ ॥

೧೭೩

ಅಂಥ ಬ್ರಹ್ಮಾಂಡವ ಎಪ್ಪತ್ತೆರಡುಲಕ್ಷದ ಮೇಲೆ
ಸಾವಿರದಾ ಏಳುನೂರಾ ಹದಿನೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜ್ವಾಲಾಂತಕವೆಂಬ ಭುವನ.
ಆ ಭುವನದೊಳು ಜ್ವಲತ್ಕಾಲಾನಲಾಭಾಸನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರೈವತ್ತೈದುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಎಂಟುನೂರೈವತ್ತೈದುಕೋಟಿ ವೇದಪುರುಷರು ಮುನೀಂದ್ರರು
ಇಂದ್ರ ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೩ ||

೧೭೪

ಅಂಥ ಬ್ರಹ್ಮಾಂಡವ ಎಪ್ಪತ್ತೊರುಲಕ್ಷದ ಮೇಲೆ
ಸಾವಿರದೇಳುನೂರಾ ಇಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ದೀರ್ಘಬಾಹುವೆಂಬ ಭುವನ.
ಆ ಭುವನದೊಳು ಘಂಟಾಕರ್ಣನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಅರುವತ್ತುಕ್ತೋಟಿ ಬ್ರಹ್ಮ ನಾರಾಯಣ ರುದ್ರರಿಹರು.
ಎಂಟುನೂರಾ ಅರುವತ್ತುಕೋಟಿ ಇಂದ್ರಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೪ ||

೧೭೫

ಅಂಥ ಬ್ರಹ್ಮಾಂಡವ ಎಪ್ಪತ್ತುನಾಲ್ಕುಲಕ್ಷದ ಮೇಲೆ
ಸಾವಿರದೇಳುನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಜಯವೆಂಬ ಭುವನ.
ಆ ಭುವನದೊಳು ಮೃತ್ಯುಂಜಯನೆಂಬ ಮಹಾಕಾಲರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಅರುವತ್ತೈದುಕೋಟಿ ನಾರಾಯಣ–ಬ್ರಹ್ಮ–ರುದ್ರ
ಇಂದ್ರಾದಿಗಳಿಹರು ನೋಡಾ.
ಎಂಟುನೂರಾ ಅರವತ್ತೈದುಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೫ ||

೧೭೬

ಅಂಥ ಬ್ರಹ್ಮಾಂಡವ ಎಪ್ಪತ್ತೈದುಲಕ್ಷದ ಮೇಲೆ
ಸಾವಿರದೇಳುನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಭದ್ರವೆಂಬ ಭುವನ.
ಆ ಭುವನದೊಳು ಭದ್ರಕರ್ಣನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಎಂಟುನೂರಾ ಎಪ್ಪತ್ತುಕೋಟಿ ಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ.
ಎಂಟುನೂರಾ ಎಪ್ಪತ್ತುಕೋಟಿ ರುದ್ರ-ಬ್ರಹ್ಮ-ನಾರಾಯಣ
ಇಂದ್ರಾದಿ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೬ ||

೧೭೭

ಅಂಥ ಬ್ರಹ್ಮಾಂಡವ ಎಪ್ಪತ್ತಾರುಲಕ್ಷದ ಮೇಲೆ
ಸಾವಿರದೇಳುನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಶ್ವೇತಮಹಾಬಲವೆಂಬ ಭುವನ.
ಆ ಭುವನದೊಳು ಗೋಕರ್ಣನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಎಪ್ಪತ್ತೈದುಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಎಂಟುನೂರಾ ಎಪ್ಪತ್ತೈದುಕೋಟಿ ಇಂದ್ರ ಬ್ರಹ್ಮ ನಾರಾಯಣ
ರುದ್ರರಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೧೭೭ ||

೧೭೮

ಅಂಥ ಬ್ರಹ್ಮಾಂಡವ ಎಪ್ಪತ್ತೇಳುಲಕ್ಷದ ಮೇಲೆ
ಸಾವಿರದೇಳುನೂರಾ ಅರುವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಪಾಶಹಸ್ತವೆಂಬ ಭುವನ.
ಆ ಭುವನದೊಳು ಗಜಕರ್ಣನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ಎಂಬತ್ತುಕೋಟಿ ರುದ್ರ-ಬ್ರಹ್ಮ-ನಾರಾಯಣರಿಹರು.
ಎಂಟುನೂರಾ ಎಂಬತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೮ ||

೧೭೯

ಅಂಥ ಬ್ರಹ್ಮಾಂಡವ ಎಪ್ಪತ್ತೆಂಟುಲಕ್ಷದ ಮೇಲೆ
ಸಾವಿರದೇಳುನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಅತಿಬಲವೆಂಬ ಭುವನ.
ಆ ಭುವನದೊಳು ಮಹಾಮುಗುಟನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಎಂಟುನೂರಾ ಎಂಬತ್ತೈದುಕೋಟಿ ಬ್ರಹ್ಮ ಇಂದ್ರ ನಾರಾಯಣ ರುದ್ರರಿಹರು.
ಎಂಟುನೂರಾ ಎಂಬತುತ್ತಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೭೯ ||

೧೮೦

ಅಂಥ ಬ್ರಹ್ಮಾಂಡವ ಎಪ್ಪತ್ತೊಂಬತ್ತುಲಕ್ಷದ ಮೇಲೆ
ಸಾವಿರದೇಳುನೂರಾ ಎಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಮಹಾಬಲವೆಂಬ ಭುವನ.
ಆ ಭುವನದೊಳು ಮಹೇಶ್ವರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾ ತೊಂಬತುತ್ತಕೋಟಿ
ನಾರಾಯಣ ರುದ್ರ ಬ್ರಹ್ಮ ಇಂದ್ರಾದಿಗಳಿಹರು ನೋಡಾ.
ಎಂಟುನೂರಾ ತೊಂಬತುತ್ತಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೮೦ ||

೧೮೧

ಅಂಥ ಬ್ರಹ್ಮಾಂಡವ ಎಂಬತ್ತುಲಕ್ಷದ ಮೇಲೆ
ಸಾವಿರದೇಳುನೂರಾತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ವಾರುಣೇಶವೆಂಬ ಭುವನ.
ಆ ಭುವನದೊಳು ಮಹಾನಂದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಎಂಟುನೂರಾತೊಂಬತ್ತೈದುಕೋಟಿ ರುದ್ರ ಬ್ರಹ್ಮ ಇಂದ್ರ
ನಾರಾಯಣರಿಹರು.
ಎಂಟುನೂರಾತೊಂಬತ್ತೈದುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೧೮೧ ||

೧೮೨

ಅಂಥ ಬ್ರಹ್ಮಾಂಡವ ಎಂಬತ್ತೊಂದುಲಕ್ಷದ ಮೇಲೆ
ಸಾವಿರದೆಂಟುನೂರಾ ಎಂಟು
ಬ್ರಹ್ಮಾಂಡವನೊಳಕೊಂಡುದೊಂದು ದೌಷ್ಟ್ರೇಯವೆಂಬ ಭುವನ.
ಆ ಭುವನದೊಳು ಭುವನೇಶ್ವರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಒಂಬತ್ತುನೂರುಕೋಟಿ ರುದ್ರ ಬ್ರಹ್ಮ ಇಂದ್ರ ನಾರಾಯಣರಿಹರು.
ಒಂಬತ್ತುನೂರುಕೋಟಿ ಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು
ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೨ ॥

೧೮೩

ಅಂಥ ಬ್ರಹ್ಮಾಂಡವ ಎಂಬತ್ತೆರಡು ಲಕ್ಷದ ಮೇಲೆ
ಸಾವಿರದಾಯೆಂಟುನೂರಹದಿನೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಲೋಹಿತವೆಂಬ ಭುವನ.
ಆ ಭುವನದೊಳು ವ್ಯಾಘ್ರಪಾದನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಐದುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಒಂಬತ್ತುನೂರಾ ಐದುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೩ ॥

೧೮೪

ಅಂಥ ಬ್ರಹ್ಮಾಂಡವ ಎಂಬತ್ತುಮೂರುಲಕ್ಷದ ಮೇಲೆ
ಸಾವಿರದ ಎಂಟುನೂರ ಇಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಧೂಮ್ರವೆಂಬ ಭುವನ.
ಆ ಭುವನದೊಳು ಅನುಭಾವಾನಂದನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಹತ್ತುಕೋಟಿ ಬ್ರಹ್ಮ ನಾರಾಯಣ ರುದ್ರರಿಹರು.
ಒಂಬತ್ತುನೂರಾ ಹತ್ತುಕೋಟಿ ಇಂದ್ರಚಂದ್ರಾದಿತ್ಯರು,
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೪ ॥

೧೮೫

ಅಂಥ ಬ್ರಹ್ಮಾಂಡವ ಎಂಬತ್ತುನಾಲ್ಕುಲಕ್ಷದ ಮೇಲೆ
ಸಾವಿರದ ಎಂಟುನೂರಾಮೂವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ವಿರೂಪಾಕ್ಷವೆಂಬ ಭುವನ.
ಆ ಭುವನದೊಳು ನಿರಾಕಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬಯಿನೂರಾಹದಿನೈದುಕೋಟಿ ನಾರಾಯಣ ಬ್ರಹ್ಮ ರುದ್ರಾದಿಗಳಿಹರು.
ಒಂಬಯಿನೂರಾಹದಿನೈದುಕೋಟಿ ವೇದಪುರುಷರು

ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೫ ॥

೧೮೬

ಅಂಥ ಬ್ರಹ್ಮಾಂಡವ ಎಂಬತ್ತೈದುಲಕ್ಷದ ಮೇಲೆ
ಸಾವಿರದ ಎಂಟುನೂರಾನಾಲ್ವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಊರ್ಧ್ವಶೇಷವೆಂಬ ಭುವನ.
ಆ ಭುವನದೊಳು ಊರ್ಧ್ವಪಾದನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬಯಿನೂರಾ ಇಪ್ಪತ್ತುಕ್ಕೋಟಿ ದೇವರ್ಕಳು ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ಇಹರು ನೋಡಾ.
ಒಂಬಯಿನೂರಾ ಇಪ್ಪತ್ತುಕ್ಕೋಟಿ ಬ್ರಹ್ಮ ನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೬ ॥

೧೮೭

ಅಂಥ ಬ್ರಹ್ಮಾಂಡವ ಎಂಬತ್ತಾರುಲಕ್ಷದ ಮೇಲೆ
ಸಾವಿರದ ಎಂಟುನೂರಾ ಐವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಉಭಯನಖವೆಂಬ ಭುವನ.
ಆ ಭುವನದೊಳು ಉಪಮಾತೀತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬಯಿನೂರಾ ಇಪ್ಪತ್ತೈದು ಕೋಟಿ
ಬ್ರಹ್ಮ ನಾರಾಯಣ ರುದ್ರಾದಿಗಳಿಹರು ನೋಡಾ.
ಒಂಬಯಿನೂರಾ ಇಪ್ಪತ್ತೈದು ಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ ॥ ೧೮೭ ॥

೧೮೮

ಅಂಥ ಬ್ರಹ್ಮಾಂಡವ ಎಂಬತ್ತೇಳು ಲಕ್ಷದ ಮೇಲೆ
ಸಾವಿರದ ಎಂಟುನೂರಾ ಅರುವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಕ್ಷರದೃಷ್ಟಿಯೆಂಬ ಭುವನ.
ಆ ಭುವನದೊಳು ಅಷ್ಟಮೂರ್ತಿಯೆ ಪಾದಂಗಳಾಗಿಹ
ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಮೂವತ್ತುಕ್ಕೋಟಿ ನಾರಾಯಣ ರುದ್ರ
ಬ್ರಹ್ಮೇಂದ್ರಾದಿಗಳಿಹರು.

ಒಂಬತ್ತುನೂರಾ ಮೂವತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೮೮ ॥

೧೮೯

ಅಂಥ ಬ್ರಹ್ಮಾಂಡವ ಎಂಬತ್ತೆಂಟು ಲಕ್ಷದ ಮೇಲೆ
ಸಾವಿರದ ಎಂಟುನೂರಾ ಎಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಹಂತವೆಂಬ ಭುವನ.
ಆ ಭುವನದೊಳು ಭೂತನಾಥನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಮೂವತ್ತೈದು ಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಒಂಬತ್ತುನೂರಾ ಮೂವತ್ತೈದು ಕೋಟಿ ಇಂದ್ರ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೧೮೯ ॥

೧೯೦

ಅಂಥ ಬ್ರಹ್ಮಾಂಡವ ಎಂಬತ್ತೊಂಬತ್ತು ಲಕ್ಷದ ಮೇಲೆ
ಸಾವಿರದ ಎಂಟುನೂರಾ ಎಂಬತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಮಾರಣನಿರುತಿಯೆಂಬ ಭುವನ.
ಆ ಭುವನದೊಳು ಮಹಾಭೂತಪ್ರಳಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತು ನೂರಾ ನಾಲ್ವತ್ತು ಕೋಟಿ ಇಂದ್ರ ಬ್ರಹ್ಮ
ನಾರಾಯಣ ರುದ್ರರಿಹರು.
ಒಂಬತ್ತು ನೂರಾ ನಾಲ್ವತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೧೯೦ ॥

೧೯೧

ಅಂಥ ಬ್ರಹ್ಮಾಂಡವ ತೊಂಬತ್ತು ಲಕ್ಷದ ಮೇಲೆ
ಸಾವಿರದ ಎಂಟುನೂರಾ ತೊಂಬತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಧರ್ಮವೆಂಬ ಭುವನ.
ಆ ಭುವನದೊಳು ಧರ್ಮಸ್ವರೂಪನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತು ನೂರಾ ನಾಲ್ವತ್ತೈದು ಕೋಟಿ ದೇವರ್ಕಳು ವೇದಪುರುಷರು
ಇಂದ್ರಚದ್ರಾದಿತ್ಯರು ಇಹರು ನೋಡಾ.
ಒಂಬತ್ತು ನೂರಾ ನಾಲ್ವತ್ತೈದು ಕೋಟಿ

ರುದ್ರ ಬ್ರಹ್ಮ ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೧ ॥

೧೯೨

ಅಂಥ ಬ್ರಹ್ಮಾಂಡವ ತೊಂಬತ್ತೊಂದು ಲಕ್ಷದ ಮೇಲೆ
ಸಾವಿರದ ಒಂಬಯಿನೂರಾಯೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಧರ್ಮಪರೇಣವೆಂಬ ಭುವನ.
ಆ ಭುವನದೊಳು ಧರ್ಮಾಧರ್ಮರಹಿತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಐವತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಒಂಬತ್ತುನೂರಾ ಐವತ್ತುಕೋಟಿ ರುದ್ರ ಬ್ರಹ್ಮ ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೨ ॥

೧೯೩

ಅಂಥ ಬ್ರಹ್ಮಾಂಡವ ತೊಂಬತ್ತೆರಡು ಲಕ್ಷದ ಮೇಲೆ
ಸಾವಿರದ ಒಂಬಯಿನೂರಾ ಹದಿನೆಂಟು ಬ್ರಹ್ಮಾಂಡವನೊಳಕೊಂಡುದೊಂದು
ನಿಯೋಕ್ತ್ಯವೆಂಬ ಭುವನ.
ಆ ಭುವನದೊಳು ಸರ್ವಗತನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಐವತ್ತೈದು ಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಒಂಬತ್ತು ನೂರಾ ಐವತ್ತೈದು ಕೋಟಿ ವೇದಪುರುಷರು ಮುನೀಂದ್ರರು
ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೩ ॥

೧೯೪

ಅಂಥ ಬ್ರಹ್ಮಾಂಡವ ತೊಂಬತ್ತು ಮೂರು ಲಕ್ಷದ ಮೇಲೆ
ಸಾವಿರದ ಒಂಬೈನೂರಾ ಇಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಕರ್ತೃವೆಂಬ ಭುವನ.
ಆ ಭುವನದೊಳು ಮಹಾಭೈರವವೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಅರುವತ್ತು ಕೋಟಿ ಬ್ರಹ್ಮ ನಾರಾಯಣ ರುದ್ರರಿಹರು.
ಒಂಬತ್ತುನೂರಾ ಅರುವತ್ತು ಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೪ ॥

೧೯೫

ಅಂಥ ಬ್ರಹ್ಮಾಂಡವ ತೊಂಬತ್ನಾಲ್ಕು ಲಕ್ಷದ ಮೇಲೆ
ಸಾವಿರದಾ ಒಂಬಯಿನೂರಾ ಮೂವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಹರವೆಂಬ ಭುವನ.
ಆ ಭುವನದೊಳು ಸಂಹಾರತಾಂಡವನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರ ಅರುವತ್ತೈದು ಕೋಟಿ
ನಾರಾಯಣ ರುದ್ರ ಬ್ರಹ್ಮಾದಿಗಳಿಹರು ನೋಡಾ.
ಒಂಬತ್ತುನೂರಾ ಅರುವತ್ತೈದು ಕೋಟಿ ವೇದಪುರುಷರು
ಮುನೀಂದ್ರರು ಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೫ ॥

೧೯೬

ಅಂಥ ಬ್ರಹ್ಮಾಂಡವ ತೊಂಬತ್ತೈದು ಲಕ್ಷದ ಮೇಲೆ
ಸಾವಿರದಾ ಒಂಬಯಿನೂರಾ ನಲವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು
ಮೃತ್ಯುವೆಂಬ ಭುವನ.
ಆ ಭುವನದೊಳು ಮೃತ್ಯುಂಜಯನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಎಪ್ಪತ್ತುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಒಂಬತ್ತುನೂರಾ ಎಪ್ಪತ್ತುಕೋಟಿ
ರುದ್ರ ಬ್ರಹ್ಮ ನಾರಾಯಣ ಇಂದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೬ ॥

೧೯೭

ಅಂಥ ಬ್ರಹ್ಮಾಂಡವ ತೊಂಬತ್ತಾರು ಲಕ್ಷದ ಮೇಲೆ
ಸಾವಿರದಾ ಒಂಬಯಿನೂರಾ ಐವತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು ಯಾಮ್ಯವೆಂಬ ಭುವನ.
ಆ ಭುವನದೊಳು ಅವ್ಯಕ್ತನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಎಪ್ಪತ್ತೈದು ಕೋಟಿ
ದೇವರ್ಕಳು ಮುನೀಂದ್ರರು ಇಂದ್ರ ಚಂದ್ರಾದಿತ್ಯರು
ವೇದಪುರುಷರಿಹರು ನೋಡಾ.
ಒಂಬತ್ತುನೂರಾ ಎಪ್ಪತ್ತೈದು ಕೋಟಿ

ಬ್ರಹ್ಮ ನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೭ ॥

೧೯೮

ಅಂಥ ಬ್ರಹ್ಮಾಂಡವ ತೊಂಬತ್ತೇಳು ಲಕ್ಷದ ಮೇಲೆ
ಸಾವಿರದ ಒಂಬೈನೂರಾ ಅರುವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಕ್ಷಯಾಂತಕವೆಂಬ ಭುವನ.
ಆ ಭುವನದೊಳು ವಿಶ್ವೇಶ್ವರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಎಂಬತ್ತು ಕೋಟಿ ಮುನೀಂದ್ರರು ದೇವರ್ಕಳು
ಇಂದ್ರಚಂದ್ರಾದಿತ್ಯರು ವೇದಪುರುಷರು ಇಹರು ನೋಡಾ.
ಒಂಬತ್ತುನೂರಾ ಎಂಬತ್ತುಕೋಟಿ
ರುದ್ರ–ಬ್ರಹ್ಮ–ನಾರಾಯಣರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೮ ॥

೧೯೯

ಅಂಥ ಬ್ರಹ್ಮಾಂಡವ ತೊಂಬತ್ತೇಳು ಲಕ್ಷದ ಮೇಲೆ
ಸಾವಿರದಾ ಒಂಬಯಿನೂರಾ ಎಪ್ಪತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು
ಭಸ್ಮಾಂತಕವೆಂಬ ಭುವನ.
ಆ ಭುವನದೊಳು ದೇವದೇವನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ಎಂಬತ್ತೈದು ಕೋಟಿ ಬ್ರಹ್ಮ–ನಾರಾಯಣ–ರುದ್ರರಿಹರು.
ಒಂಬತ್ತುನೂರಾ ಎಂಬತ್ತೈದು ಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೧೯೯ ॥

೨೦೦

ಅಂಥ ಬ್ರಹ್ಮಾಂಡವ ತೊಂಬತ್ತೊಂಬತ್ತು ಲಕ್ಷದ ಮೇಲೆ
ಸಾವಿರದಾ ಒಂಬೈನೂರಾ ಎಂಬತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಬಭ್ರುವೆಂಬ ಭುವನ.
ಆ ಭುವನದೊಳು ಜಗದ್ಗುರುವೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಒಂಬತ್ತುನೂರಾ ತೊಂಬತ್ತುಕೋಟಿ
ನಾರಾಯಣ ರುದ್ರ ಬ್ರಹ್ಮರಿಹರು ನೋಡಾ.

ಒಂಬತ್ತುನೂರಾ ತೊಂಬತ್ತುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು
ವೇದಪುರುಷರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೦ ॥

೨೦೧

ಅಂಥ ಬ್ರಹ್ಮಾಂಡವ ಒಂದುಕೋಟಿಯ ಮೇಲೆ
ಸಾವಿರದಾ ಒಂಬೈನೂರಾ ತೊಂಬತ್ತೆಂಟು
ಬ್ರಹ್ಮಾಂಡವನೊಳಕೊಂಡುದೊಂದು
ದಹನವೆಂಬ ಭುವನ.
ಆ ಭುವನದೊಳು ತ್ರಿಕಾಲಾಗ್ನಿಕಾಲನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿ ರುದ್ರ ಬ್ರಹ್ಮ ನಾರಾಯಣರಿಹರು.
ಸಾವಿರಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯ ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೧ ॥

೨೦೨

ಅಂಥ ಬ್ರಹ್ಮಾಂಡವ ಎರಡುಕೋಟಿಯ ಮೇಲೆ
ಎರಡುಸಾವಿರದಾ ಹದಿನೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಜ್ವಲನವೆಂಬ ಭುವನ.
ಆ ಭುವನದೊಳು ಜ್ವಲತ್ಕಾಲಾನಲಾಭಾಸನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಹತ್ತುಕೋಟಿ
ಇಂದ್ರ ನಾರಾಯಣ ಬ್ರಹ್ಮ ರುದ್ರಾದಿಗಳಿಹರು.
ಸಾವಿರಕೋಟಿಯ ಮೇಲೆ ಹತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೨ ॥

೨೦೩

ಅಂಥ ಬ್ರಹ್ಮಾಂಡವ ಮೂರುಕೋಟಿಯ ಮೇಲೆ
ಎರಡುಸಾವಿರದ ಇಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಹರಿಹರವೆಂಬ ಭುವನ.
ಆ ಭುವನದೊಳು ಕರುಣಾಕರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ

ಸಾವಿರಕೋಟಿಯ ಮೇಲೆ ಇಪ್ಪತ್ತುಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ಇಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೦೩ ||

೨೦೪

ಅಂಥ ಬ್ರಹ್ಮಾಂಡವ ನಾಲ್ಕುಕೋಟಿಯ ಮೇಲೆ
ಎರಡುಸಾವಿರದ ಮೂವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಬಾಧಕವೆಂಬ ಭುವನ.
ಆ ಭುವನದೊಳು ಅಘೋರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರ ಕೋಟಿಯ ಮೇಲೆ ಮೂವತ್ತುಕೋಟಿ
ನಾರಾಯಣ ಬ್ರಹ್ಮ ರುದ್ರರಿಹರು.
ಸಾವಿರ ಕೋಟಿಯ ಮೇಲೆ ಮೂವತ್ತು ಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೦೪ ||

೨೦೫

ಅಂಥ ಬ್ರಹ್ಮಾಂಡವ ಐದುಕೋಟಿಯ ಮೇಲೆ
ಎರಡುಸಾವಿರದಾ ಮೂವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಪಿಂಗವೆಂಬ ಭುವನ.
ಆ ಭುವನದೊಳು ಮಹಾಘೋರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ನಾಲ್ವತ್ತುಕೋಟಿ
ಬ್ರಹ್ಮ–ನಾರಾಯಣ–ರುದ್ರರಿಹರು.
ಸಾವಿರಕೋಟಿಯ ಮೇಲೆ ನಾಲ್ವತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೦೫ ||

೨೦೬

ಅಂಥ ಬ್ರಹ್ಮಾಂಡವ ಆರುಕೋಟಿಯ ಮೇಲೆ
ಎರಡು ಸಾವಿರದಾ ನಲವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಹುತಾಶನವೆಂಬ ಭುವನ.
ಆ ಭುವನದೊಳು ಅತಿಮಹಾಘೋರನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಐವತ್ತುಕೋಟಿ
ಬ್ರಹ್ಮ–ನಾರಾಯಣ–ರುದ್ರರಿಹರು.
ಸಾವಿರಕೋಟಿಯ ಮೇಲೆ ಐವತ್ತುಕೋಟಿ ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೨೦೬ ॥

೨೦೭

ಅಂಥ ಬ್ರಹ್ಮಾಂಡವ ಏಳುಕೋಟಿಯ ಮೇಲೆ
ಎರಡುಸಾವಿರದಾ ಐವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಜಯರುದ್ರನೆಂಬ ಭುವನ.
ಆ ಭುವನದೊಳು ಘೋರಘೋರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಅರುವತ್ತುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಸಾವಿರಕೋಟಿಯ ಮೇಲೆ ಅರುವತ್ತುಕೋಟಿ
ರುದ್ರ –ಬ್ರಹ್ಮ –ನಾರಾಯಣರಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೨೦೭ ॥

೨೦೮

ಅಂಥ ಬ್ರಹ್ಮಾಂಡವ ಎಂಟುಕೋಟಿಯ ಮೇಲೆ
ಎರಡುಸಾವಿರದಾ ಅರುವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ತ್ರಿದಶಾಧಿಪವೆಂಬ ಭುವನ.
ಆ ಭುವನದೊಳು ಅಘೋರವೀರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಎಪ್ಪತ್ತುಕೋಟಿ
ರುದ್ರ ಬ್ರಹ್ಮ ನಾರಾಯಣರಿಹರು.
ಸಾವಿರಕೋಟಿಯ ಮೇಲೆ ಎಪ್ಪತ್ತುಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೮ ॥

೨೦೯

ಅಂಥ ಬ್ರಹ್ಮಾಂಡವ ಒಂಬತ್ತುಕೋಟಿಯ ಮೇಲೆ
ಎರಡು ಸಾವಿರದಾ ಎಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಪಿನಾಕಿಯೆಂಬ ಭುವನ.

ಆ ಭುವನದೊಳು ಮಹಾಘೋರವೀರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಎಂಬತ್ತುಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ಎಂಬತ್ತುಕೋಟಿ ವೇದಪುರುಷರು
ಇಂದ್ರಚಂದ್ರಾದಿತ್ಯರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೯ ॥

೨೧೦

ಅಂಥ ಬ್ರಹ್ಮಾಂಡವ ಹತ್ತುಕೋಟಿಯ ಮೇಲೆ
ಎರಡುಸಾವಿರದಾ ಎಂಬತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಶಾಘ್ರವೆಂಬ ಭುವನ.
ಆ ಭುವನದೊಳು ಅತಿಮಹಾವೀರಘೋರನೆಂಬ ರುದ್ರಮೂರ್ತಿ ಇಪನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ತೊಂಬತ್ತೆಂಟುಕೋಟಿ
ರುದ್ರ ನಾರಾಯಣ ಬ್ರಹ್ಮರಿಹರು.
ಸಾವಿರಕೋಟಿಯ ಮೇಲೆ ತೊಂಬತ್ತುಕೋಟಿ ವೇದಪುರುಷರು
ಇಂದ್ರಚಂದ್ರಾದಿತ್ಯರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೦ ॥

೨೧೧

ಅಂಥ ಬ್ರಹ್ಮಾಂಡವ ಇಪ್ಪತ್ತುಕೋಟಿಯ ಮೇಲೆ
ಎರಡುಸಾವಿರದಾ ತೊಂಬತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಅವ್ಯಯವೆಂಬ ಭುವನ.
ಆ ಭುವನದೊಳು ಆದಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ನೂರುಕೋಟಿ
ಇಂದ್ರ ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ನೂರುಕೋಟಿ ಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೧ ॥

೨೧೨

ಅಂಥ ಬ್ರಹ್ಮಾಂಡವ ಮೂವತ್ತುಕೋಟಿಯ ಮೇಲೆ
ಮೂರುಸಾವಿರದಾ ಎಂಟು ಬ್ರಹ್ಮಾಂಡವನೊಳಕೊಂಡುದೊಂದು

ವಿಭೂತಿಯೆಂಬ ಭುವನ.
ಆ ಭುವನದೊಳು ಅನಾದಿಯೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಇನ್ನೂರುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ.
ಸಾವಿರಕೋಟಿಯ ಮೇಲೆ ಇನ್ನೂರು ಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೧೨ ||

೨೧೩

ಅಂಥ ಬ್ರಹ್ಮಾಂಡವ ನಾಲ್ವತ್ತು ಕೋಟಿಯ ಮೇಲೆ
ಮೂರುಸಾವಿರದಾ ಹದಿನೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಪ್ರಮರ್ಧವೆಂಬ ಭುವನ.
ಆ ಭುವನದೊಳು ಜ್യೋತಿಪ್ರಕಾಶನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಮೂನ್ನೂರುಕೋಟಿ
ರುದ್ರ ಬ್ರಹ್ಮ ನಾರಾಯಣರಿಹರು.
ಸಾವಿರಕೋಟಿಯ ಮೇಲೆ ಮೂನ್ನೂರು ಕೋಟಿ ಇಂದ್ರಚಂದ್ರಾದಿತ್ಯರು
ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೨೧೩ ||

೨೧೪

ಅಂಥ ಬ್ರಹ್ಮಾಂಡವ ಐವತ್ತು ಕೋಟಿಯ ಮೇಲೆ
ಮೂರುಸಾವಿರದಾ ಇಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ವಜ್ರದೇಹವೆಂಬ ಭುವನ.
ಆ ಭುವನದೊಳು ವಜ್ರಕಾಯನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ನಾಲ್ಕುನೂರು ಕೋಟಿ
ರುದ್ರ ಬ್ರಹ್ಮ ನಾರಾಯಣರಿಹರು.
ಸಾವಿರಕೋಟಿಯ ಮೇಲೆ ನಾಲ್ಕುನೂರುಕೋಟಿ ವೇದಪುರುಷರು
ಇಂದ್ರಚಂದ್ರಾದಿತ್ಯರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೧೪ ||

೨೧೫

ಅಂಥ ಬ್ರಹ್ಮಾಂಡವ ಅರುವತ್ತುಕೋಟಿಯ ಮೇಲೆ
ಮೂರುಸಾವಿರದಾ ಮೂವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು

ಬುಧವೆಂಬ ಭುವನ.
ಆ ಭುವನದೊಳು ಆಧಾರನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಐದುನೂರುಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ಐನೂರುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೫ ॥

೨೧೬

ಅಂಥ ಬ್ರಹ್ಮಾಂಡವ ಎಪ್ಪತ್ತುಕೋಟಿಯ ಮೇಲೆ
ಮೂರುಸಾವಿರದಾ ನಲವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಅಜಕಪಾಲಯೆಂಬ ಭುವನ.
ಆ ಭುವನದೊಳು ಆದಿಯಾಧಾರನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಆರುನೂರಾ ಅರುವತ್ತುಕೋಟಿ
ನಾರಾಯಣ ರುದ್ರ ಬ್ರಹ್ಮರಿಹರು ನೋಡಾ.
ಸಾವಿರಕೋಟಿಯ ಮೇಲೆ ಆರುನೂರರವತ್ತು ಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೬ ॥

೨೧೭

ಅಂಥ ಬ್ರಹ್ಮಾಂಡವ ಎಂಬತ್ತುಕೋಟಿಯ ಮೇಲೆ
ಮೂರುಸಾವಿರದಾ ಐವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಈಶ್ವರವೆಂಬ ಭುವನ.
ಆ ಭುವನದೊಳು ಸದಾಶಿವನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಹನ್ನೆರಡನೂರಾ ಅರುವತ್ತುಕೋಟಿ
ಬ್ರಹ್ಮ ರುದ್ರ ನಾರಾಯಣರಿಹರು.
ಸಾವಿರಕೋಟಿಯ ಮೇಲೆ ಹನ್ನೆರಡುನೂರಾ ಅರುವತ್ತುಕೋಟಿ
ವೇದಪುರುಷರು ಮುನೀಂದ್ರರು
ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೭ ॥

೨೧೮

ಅಂಥ ಬ್ರಹ್ಮಾಂಡವ ತೊಂಬತ್ತುಕೋಟಿಯ ಮೇಲೆ
ಮೂರುಸಾವಿರದಾ ಅರುವತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ರುದ್ರವೆಂಬ ಭುವನ.
ಆ ಭುವನದೊಳು ಅನಂತಲೋಚನನೆಂಬ ರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಇಪ್ಪತ್ನಾಲ್ಕುನೂರಾ ಅರುವತ್ತುಕೋಟಿ
ರುದ್ರ ಬ್ರಹ್ಮ ನಾರಾಯಣ ಇಂದ್ರರಿಹರು.
ಸಾವಿರಕೋಟಿಯ ಮೇಲೆ ಇಪ್ಪತ್ತುನಾಲ್ಕುನೂರಾ ಅರುವತ್ತುಕೋಟಿ
ಚಂದ್ರಾದಿತ್ಯರು ವೇದಪುರುಷರು ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೮ ॥

೨೧೯

ಅಂಥ ಬ್ರಹ್ಮಾಂಡವ ನೂರುಕೋಟಿಯ ಮೇಲೆ
ಮೂರುಸಾವಿರದಾ ಎಪ್ಪತ್ತೆಂಟು ಬ್ರಹ್ಮಾಂಡವನೊಳಕೊಂಡುದೊಂದು
ವಿಷ್ಣುವೆಂಬ ಭುವನ.
ಆ ಭುವನದೊಳು ಅನಂತಪಾದನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿ ಓಲಗದಲ್ಲಿ
ಸಾವಿರಕೋಟಿಯ ಮೇಲೆ ನಾಲ್ವತ್ತೆಂಟುನೂರಾ ಎಪ್ಪತ್ತೆರಡು ಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ನಾಲ್ವತ್ತೆಂಟುನೂರಾ ಎಪ್ಪತ್ತೆರಡುಕೋಟಿ
ಇಂದ್ರಚಂದ್ರಾದಿತ್ಯರು ವೇದಪುರುಷರು
ಮುನೀಂದ್ರರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೧೯ ॥

೨೨೦

ಅಂಥ ಬ್ರಹ್ಮಾಂಡವ ಇನ್ನೂರು ಕೋಟಿಯ ಮೇಲೆ
ಮೂರುಸಾವಿರದಾ ತೊಂಬತ್ತೆಂಟು ಬ್ರಹ್ಮಾಂಡನೊಳಕೊಂಡುದೊಂದು
ಬ್ರಹ್ಮನೆಂಬ ಭುವನ.
ಆ ಭುವನದೊಳು ವೇದನಾಥನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ತೊಂಬತ್ತುನೂರಾ ನಾಲ್ವತ್ನಾಲ್ಕುಕೋಟಿ
ನಾರಾಯಣ ರುದ್ರ ಬ್ರಹ್ಮರಿಹರು ನೋಡಾ.
ಸಾವಿರ ಕೋಟಿಯ ಮೇಲೆ ತೊಂಬತ್ತುನೂರಾ ನಾಲ್ವತ್ನಾಲ್ಕುಕೋಟಿ
ವೇದಪುರುಷರು ಮುನೀಂದ್ರರು

ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೦ ॥

೨೨೧

ಅಂಥ ಬ್ರಹ್ಮಾಂಡವ ಮುನ್ನೂರುಕೋಟಿಯ ಮೇಲೆ
ನಾಲ್ಕು ಸಾವಿರದಾ ಎಂಟು ಬ್ರಹ್ಮಾಂಡವನೊಳಕೊಂಡುದೊಂದು
ಹಾರ್ತವೆಂಬ ಭುವನ.
ಆ ಭುವನದೊಳು ಆನಂದಬ್ರಹ್ಮನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ನೂರಾತೊಂಬತ್ತೆರಡುಕೋಟಿಯು
ಇನ್ನೂರೆಂಬತ್ತುಕೋಟಿ
ಬ್ರಹ್ಮ ನಾರಾಯಣ ರುದ್ರರಿಹರು.
ಸಾವಿರಕೋಟಿಯ ಮೇಲೆ ನೂರಾತೊಂಬತ್ತೆರಡುಕೋಟಿಯು
ಇನ್ನೂರೆಂಬತ್ತು ಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೧ ॥

೨೨೨

ಅಂಥ ಬ್ರಹ್ಮಾಂಡವ ನಾಲ್ಕುನೂರು ಕೋಟಿಯ ಮೇಲೆ
ನಾಲ್ಕು ಸಾವಿರದಾ ಹದಿನೆಂಟು ಬ್ರಹ್ಮಾಂಡವನೊಳಕೊಂಡುದೊಂದು
ಕೂಷ್ಮಾಂಡವೆಂಬ ಭುವನ
ಆ ಭುವನದೊಳು ಬ್ರಹ್ಮನಾಥನೆಂಬ ಮಹಾರುದ್ರಮೂರ್ತಿ ಇಹನು.
ಆ ರುದ್ರಮೂರ್ತಿಯ ಓಲಗದಲ್ಲಿ
ಸಾವಿರಕೋಟಿಯ ಮೇಲೆ ಮೂನ್ನೂರೆಂಬತ್ತು ನಾಲ್ಕುಕೋಟಿಯ ಮೇಲೆ
ಐನೂರೆಪ್ಪತ್ತಾರುಕೋಟಿ
ನಾರಾಯಣ ಬ್ರಹ್ಮ ರುದ್ರರಿಹರು.
ಸಾವಿರಕೋಟಿಯ ಮೇಲೆ ಮೂನ್ನೂರೆಂಬತ್ತು ನಾಲ್ಕುಕೋಟಿಯ ಮೇಲೆ
ಐನೂರೆಪ್ಪತ್ತಾರುಕೋಟಿ ವೇದಪುರುಷರು
ಮುನೀಂದ್ರರು ಇಂದ್ರಚಂದ್ರಾದಿತ್ಯರು ದೇವರ್ಕಳಿಹರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೨ ॥

೨೨೩

ಅಂಥ ಬ್ರಹ್ಮಾಂಡವ ಅನಂತಕೋಟಿ ಬ್ರಹ್ಮಾಂಡವನೊಳಕೊಂಡುದೊಂದು
ಕಾಲಾಗ್ನಿರುದ್ರವೆಂಬ ಭುವನ.
ಆ ಭವನದೊಳು ಓಂಕಾರನೆಂಬ ರುದ್ರಮೂರ್ತಿ ಇಹನು.

ಆ ರುದ್ರಮೂರ್ತಿಯ ಓಲಗದಲ್ಲಿ
ಅನಂತಕೋಟಿ ರುದ್ರರು ಅನಂತಕೋಟಿ ಬ್ರಹ್ಮರು
ಅನಂತಕೋಟಿ ನಾರಾಯಣರಿಹರು ನೋಡಾ.
ಅನಂತಕೋಟಿ ಇಂದ್ರರು ಅನಂತಕೋಟಿ ಚಂದ್ರರು
ಅನಂತಕೋಟಿ ವೇದಪುರುಷರು ಅನಂತಕೋಟಿ ಮುನೀಂದ್ರರು
ಅನಂತಕೋಟಿ ದೇವರ್ಕಳಿಹರು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೨೨೩ ॥

೨೨೪

ಅಂಥ ಬ್ರಹ್ಮಾಂಡವ ಅನಂತಕೋಟಿಯನೊಳಕೊಂಡ
ಇನ್ನೂರಿಪ್ಪತ್ನಾಲ್ಕು ಮಹಾಭುವನಂಗಳು ಮೊದಲಾಗಿ,
ಅನಂತಕೋಟಿ ಅತಿಮಹಾಭುವನಂಗಳನೊಳಕೊಂಡುದೊಂದು
ಮಹಾಬ್ರಹ್ಮಾಂಡ.
ಅಂಥ ಅನಂತಕೋಟಿ ಮಹಾಬ್ರಹ್ಮಾಂಡವನೊಳಕೊಂಡುದೊಂದು
ಅತಿ ಮಹಾಮೂಲ ಬ್ರಹ್ಮಾಂಡ.
ಅಂಥ ಅನಂತಕೋಟಿ ಅತಿ ಮಹಾಬ್ರಹ್ಮಾಂಡವನೊಳಕೊಂಡುದೊಂದು
ಪರಬ್ರಹ್ಮಾಂಡ.
ಅಂಥ ಅನಂತಕೋಟಿ ಪರಬ್ರಹ್ಮಾಂಡವನೊಳಕೊಂಡುದೊಂದು
ಶಿವ ಬ್ರಹ್ಮಾಂಡ.
ಅಂಥ ಅನಂತಕೋಟಿ ಶಿವಬ್ರಹ್ಮಾಂಡವನೊಳಕೊಂಡುದೊಂದು
ಚಿದ್ಬ್ರಹ್ಮಾಂಡ.
ಅಂಥ ಅನಂತಕೋಟಿ ಚಿದ್ಬ್ರಹ್ಮಾಂಡವನೊಳಕೊಂಡುದೊಂದು
ಚಿದ್ಬಿಂದು.
ಅಂಥ ಚಿದ್ಬಿಂದುವನೊಳಕೊಂಡುದೊಂದು ನಾದಬ್ರಹ್ಮಾಂಡ.
ಅಂಥ ಅನಂತಕೋಟಿ ನಾದಬ್ರಹ್ಮಾಂಡವನೊಳಕೊಂಡುದೊಂದು
ಕಲಾ ಬ್ರಹ್ಮಾಂಡ.
ಅಂಥ ಅನಂತಕೋಟಿ ಕಲಾಬ್ರಹ್ಮಾಂಡವನೊಳಕೊಂಡುದೊಂದು
ಪ್ರಣವಬ್ರಹ್ಮಾಂಡ.
ಅಂಥ ಅನಂತಕೋಟಿ ಪ್ರಣವಬ್ರಹ್ಮಾಂಡವೆ
ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ ಮಹಾಮೂಲಸ್ವಾಮಿ.
ಆ ಮಹಾಮೂಲಸ್ವಾಮಿಯ ಮೀರಿದ ಅತಿಮಹಾಮೂಲಸ್ವಾಮಿಗತ್ತತ್ತವಾದ
ಅಖಂಡ ಮಹಾಮೂಲಸ್ವಾಮಿಯ ರೋಮಕೂಪಂಗಳು ನೋಡಾ.
ಅಂಥ ಅನಂತಕೋಟಿ ಪ್ರಣವಬ್ರಹ್ಮಾಂಡದ ಪ್ರಣವಪ್ರಕಾಶಂಗಳೆ
ಆ ಅಖಂಡಮೂಲಸ್ವಾಮಿಯ ರೋಮಂಗಳು ನೋಡಾ.

ಆ ರೋಮಪ್ರಮಾಣಂಗಳ ಅನಂತಕೋಟಿ ಬ್ರಹ್ಮ ವಿಷ್ಣು ರುದ್ರ ಈಶ್ವರ
ಸದಾಶಿವ ಮೊದಲಾದ ಅನಂತಕೋಟಿ ದೇವರ್ಕಳಿಹರು ನೋಡಾ.
ಅನಂತಕೋಟಿ ವೇದಾಗಮಶಾಸ್ತ್ರಪುರಾಣಂಗಳೆಲ್ಲ
ಅಖಂಡ ಮಹಾಮೂಲಸ್ವಾಮಿಯ ರೋಮಪ್ರಮಾಣಂಗಳ
ಪ್ರಮಾಣಿಸಲರಿಯವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೪ ॥

೨೨೫

ಇನ್ನು ಆದಿಮೂಲ ಅನಾದಿಮೂಲಗಳಿಗತತ್ತ್ವವಾದ
ಮಹಾಮೂಲಸ್ವಾಮಿಯ ಮೀರಿದ ಅತೀತ ಮೂಲಸ್ವಾಮಿಗತತ್ತ್ವವಾಗಿಹ
ಆ ಅಖಂಡ ಮೂಲಸ್ವಾಮಿಯ ರೂಪು, ಲಾವಣ್ಯ, ಸೌಂದರ್ಯ,
ಅಂಗ–ಪ್ರತ್ಯಂಗಸ್ವರೂಪ ಸ್ವಭಾವಗಳೆಂತೆಂದಡೆ :
ಸಹಜ ನಿರಾಲಂಬವಾಗಿಹ, ಮಹಾಘನಕ್ಕೆ ಘನವಹ,
ಮಹಾಘನವಾಗಿಹ ಪ್ರಣವವೆ
ಅಖಂಡಮೂಲಸ್ವಾಮಿಯ ಶಿರಸ್ಸು ನೋಡಾ.
ದಿವ್ಯಾನಂದಪ್ರಣವ ದಿವ್ಯಜ್ಞಾನ ಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಚಕ್ಷು.
ನಿರಾಕಾರಪ್ರಣವ, ನಿರಾಳಪ್ರಣವವೆ
ಆ ಅಖಂಡ ಮೂಲಸ್ವಾಮಿಯ ಪುರ್ಬು.
ಅಚಲಾತೀತ ಪ್ರಣವವೆ
ಆ ಅಖಂಡ ಮೂಲಸ್ವಾಮಿಯ ಹಣೆ ನೋಡಾ.
ಸಹಜ ನಿರಾಲಂಬಪ್ರಣವವೆ
ಆ ಅಖಂಡ ಮೂಲಸ್ವಾಮಿಯ ನಾಸಿಕ.
ನಿರಾಲಂಬಾತೀತ ಪ್ರಣವವೆ
ಆ ಅಖಂಡ ಮೂಲಸ್ವಾಮಿಯ ಉಶ್ವಾಸ–ನಿಶ್ವಾಸಂಗಳು ನೋಡಾ.
ನಿರಾಮಯಪ್ರಣವ ನಿರಾಮಯಾತೀತಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಕರ್ಣ.
ನಿರ್ವಯಲಪ್ರಣವ ನಿರ್ವಯಲಾತೀತಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಗಲ್ಲ ನೋಡಾ.
ಅಮಲಪ್ರಣವ ಅಮಲಾನಂದಪ್ರಣವ ಅಮಲಾತೀತಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಗಡ್ಡ ಮೀಸೆ ಕೋರೆದಾಡೆ ನೋಡಾ.
ನಾದ ಬಿಂದು ಕಲಾತೀತಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ತಾಳೋಷ್ಠಸಂಪುಟ ನೋಡಾ.
ಸಹಜಪ್ರಣವ, ಸಹಜಾನಂದಪ್ರಣವ, ಸಹಜಜ್ಯೋತಿಪ್ರಣವ,

ಅನಂತಪ್ರಣವ, ಆನಂದಪ್ರಣವ, ಆನಂದಜ್ಯೋತಿಪ್ರಣವ,
ಅಖಂಡಪ್ರಣವ, ಅಖಂಡ ಜ್ಯೋತಿಪ್ರಣವ, ಅಖಂಡಾನಂದ
ಮಹಾಜ್ಯೋತಿಪ್ರಣವ, ಚಿತ್ಪ್ರಣವ, ಚಿದಾನಂದಜ್ಯೋತಿಪ್ರಣವ,
ಚಿದ್ವ್ಯೋಮಪ್ರಣವ, ನಿತ್ಯನಿಜಾನಂದಪ್ರಣವ,
ಸಚ್ಚಿದಾನಂದಪ್ರಣವ, ನಿತ್ಯನಿರಾಕಾರಪ್ರಣವ,
ಸಕಲ ನಿಃಕಲಾತೀತಪ್ರಣವವೆಂಬ ಷೋಡಶಪ್ರಣವಂಗಳೆ
ಆ ಅಖಂಡ ಮಹಾಮೂಲಸ್ವಾಮಿಯ ಷೋಡಶದಂತಂಗಳು ನೋಡಾ.
ಆ ಒಂದೊಂದು ದಂತಂಗಳ ಕಾಂತಿಯೆ
ಅನಂತಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿಹುದು ನೋಡಾ.
ಕುಳವಿಲ್ಲದ ನಿರಾಕುಳಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಕೊರಳು.
ಅಪ್ರಮಾಣ ಅಗೋಚರಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಭುಜಂಗಳು ನೋಡಾ.
ಪರಮಪ್ರಣವ, ಪರಮಾನಂದಪ್ರಣವ, ಶಿವಪ್ರಣವ,
ಶಿವಜ್ಯೋತಿಪ್ರಣವ,ಅಚಲಪ್ರಣವ, ಅಚಲಾನಂದಪ್ರಣವಂಗಳೆ
ಆ ಅಖಂಡ ಮಹಾಮೂಲಸ್ವಾಮಿಯ ಹಸ್ತಾಂಗುಲಿ ನಖಂಗಳು ನೋಡಾ.
ಪರಬ್ರಹ್ಮಪ್ರಣವವೆ ಆ ಅಖಂಡ ಮಹಾಮೂಲಸ್ವಾಮಿಯ ಎದೆ.
ನಿರಂಜನ ಜ್ಯೋತಿಪ್ರಣವ ನಿರಂಜನಾನಂದವೆಂಬಪ್ರಣವವೆ
ಆ ಅಖಂಡ ಮೂಲಸ್ವಾಮಿಯ ಸಣ್ಣಕುಚಗಳು ನೋಡಾ.
ನಿರುಪಮಪ್ರಣವ, ನಿರುಪಮಾತೀತಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ದಕ್ಷಿಣ ವಾಮ ಪಾರ್ಶ್ವಂಗಳು.
ಅನಿರ್ವಾಚ್ಯಪ್ರಣವವೆ ಆ ಅಖಂಡ ಮಹಾಮೂಲಸ್ವಾಮಿಯ ಬೆನ್ನು.
ಮಹದಾನಂದಪ್ರಣವವೆ ಆ ಅಖಂಡ ಮಹಾಮೂಲಸ್ವಾಮಿಯ
ಬೆನ್ನಿನೆಲುವು ನೋಡಾ.
ಪಂಚಸಂಜ್ಞೆಯನುಳ್ಳ ಅಖಂಡಗೋಳಕಾರಪ್ರಣವವೆ
ಆ ಅಖಂಡ ಮಹಾಮೂಲಸ್ವಾಮಿಯ ಗರ್ಭ ನೋಡಾ.
ಆ ಗರ್ಭ ಅನಂತಕೋಟಿ ಮಹಾಸೂರ್ಯಚಂದ್ರಾಗ್ನಿ
ಪ್ರಕಾಶವಾಗಿಹುದು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಪ್ರಣವಂಗಳು, ಅನೇಕಕೋಟಿ ತತ್ವಂಗಳು,
ಅನೇಕಕೋಟಿ ಅಕ್ಷರಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಅನಾದಿಪತಿಗಳು,
ಅನೇಕಕೋಟಿ ಅನಾದಿಪಶುಗಳು, ಅನೇಕಕೋಟಿ ಅನಾದಿಪಾಶಂಗಳೆಂಬ
ಅನಾದಿಸಿದ್ಧಾಂತ ಜ್ಞಾನತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಆದಿಪತಿಗಳು, ಅನೇಕಕೋಟಿ ಆದಿಪಶುಗಳು,

ಅನೇಕಕೋಟಿ ಆದಿಪಾಶಂಗಳೆಂಬ
ಆದಿಸಿದ್ಧಾಂತ ಜ್ಞಾನತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಪತಿಗಳು, ಅನೇಕಕೋಟಿ ಪಶುಗಳು,
ಅನೇಕಕೋಟಿ ಪಾಶಂಗಳೆಂಬ ಸಿದ್ಧಾಂತ ಜ್ಞಾನತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಅನಾದಿ ತತ್‌ಪದ,
ಅನೇಕಕೋಟಿ ಅನಾದಿ ತ್ವಂಪದ,
ಅನೇಕಕೋಟಿ ಅನಾದಿ ಅಸಿಪದಂಗಳೆಂಬ
ಅನಾದಿ ವೇದಾಂತಪದತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಆದಿ ತತ್‌ಪದ,
ಅನೇಕಕೋಟಿ ಆದಿ ತ್ವಂಪದ, ಅನೇಕಕೋಟಿ ಆದಿ ಅಸಿಪದಂಗಳೆಂಬ
ಆದಿ ವೇದಾಂತಪದತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ತ್ವಂಪದಂಗಳು,
ಅನೇಕಕೋಟಿ ತತ್ಪದಂಗಳು, ಅನೇಕಕೋಟಿ ಅಸಿಪದಂಗಳೆಂಬ
ವೇದಾಂತ ಪದತ್ರಯಂಗಳಡಗಿಹವು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಅನಾದಿ ಸದಾಶಿವರು,
ಅನೇಕಕೋಟಿ ಅನಾದಿ ಈಶ್ವರರು,
ಅನೇಕಕೋಟಿ ಅನಾದಿ ಮಾಹೇಶ್ವರರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಅನಾದಿಸದಾಶಿವರು,
ಅನೇಕಕೋಟಿ ಅನಾದಿ ಈಶ್ವರರು,
ಅನೇಕಕೋಟಿ ಅನಾದಿ ಮಾಹೇಶ್ವರರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಸದಾಶಿವರು, ಅನೇಕಕೋಟಿ ಈಶ್ವರರು,
ಅನೇಕಕೋಟಿ ಮಾಹೇಶ್ವರರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಬ್ರಹ್ಮರು, ಅನೇಕಕೋಟಿ ಆದಿಬ್ರಹ್ಮರು,
ಅನೇಕಕೋಟಿ ನಾರಾಯಣರು, ಅನೇಕಕೋಟಿ ಆದಿನಾರಾಯಣರು,
ಅನೇಕಕೋಟಿ ರುದ್ರರು, ಅನೇಕಕೋಟಿ ಆದಿರುದ್ರರು
ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಋಷಿಗಳು, ಅನೇಕಕೋಟಿ ಆದಿಋಷಿಗಳು,
ಅನೇಕಕೋಟಿ ಭಾನು, ಅನೇಕಕೋಟಿ ಆದಿಭಾನು,
ಅನೇಕಕೋಟಿ ಚಂದ್ರರು, ಅನೇಕಕೋಟಿ ಆದಿಚಂದ್ರರು
ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಇಂದ್ರರು, ಅನೇಕಕೋಟಿ ಆದಿಮಹೇಂದ್ರರು,
ಅನೇಕಕೋಟಿ ದೇವರ್ಕಳು, ಅನೇಕಕೋಟಿ
ಆದಿದೇವರ್ಕಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಬ್ರಹ್ಮಾಂಡಂಗಳು,

ಅನೇಕಕೋಟಿ ಮಹಾಬ್ರಹ್ಮಾಂಡಂಗಳು,
ಅನೇಕಕೋಟಿ ಆದಿಮಹಾಬ್ರಹ್ಮಾಂಡಂಗಳು ಅಡಗಿಹವು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ ನಡುವೇ
ವ್ಯೋಮಾತೀತಪ್ರಣವವು.
ಆ ಅಖಂಡ ಮಹಾಮೂಲಸ್ವಾಮಿಯ ಕಟಿಸ್ಥಾನವೇ
ಚಿತ್ಕಲಾತೀತಪ್ರಣವ.
ಆ ಅಖಂಡ ಮಹಾಮೂಲಸ್ವಾಮಿಯ ಪಚ್ಚಳವೇ
ಅನಾದಿಪ್ರಣವ ಆದಿಪ್ರಣವ ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ ಉಪಸ್ಥವೇ
ಅನೇಕಕೋಟಿ ಬ್ರಹ್ಮ–ವಿಷ್ಣು–ರುದ್ರ–ಈಶ್ವರ–ಸದಾಶಿವ
ಮೊದಲಾದ ಅನೇಕಕೋಟಿ ದೇವರ್ಕಳಿಗೂ
ಜನನಸ್ಥಲವಾಗಿಹ ನಿರ್ವಾಣಪ್ರಣವ ನೋಡಾ.
ಕಲಾನಂದಪ್ರಣವ ಬ್ರಹ್ಮಾನಂದಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ಒಳದೊಡೆ ನೋಡಾ.
ಚಿಜ್ಜ್ಯೋತಿಪ್ರಣವ, ಪರಂಜ್ಯೋತಿಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ಒಳಪಾದ ಕಂಭಂಗಳು ನೋಡಾ.
ನಿಶ್ಶಬ್ದಪ್ರಣವ, ನಿಶ್ಶಬ್ದಾನಂದಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ಹರಡು ನೋಡಾ.
ಓಂಕಾರಪ್ರಣವ ಮಹದೋಂಕಾರಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ಪಾದಂಗಳು ನೋಡಾ.
ಆ ಓಂಕಾರ ಪ್ರಣವದ ತಾರಕಸ್ವರೂಪ ದಂಡಕಸ್ವರೂಪ
ಕುಂಡಲಾಕಾರ ಅರ್ಧಚಂದ್ರಕ ದರ್ಪಣಾಕಾರ ಜ್ಯೋತಿಸ್ವರೂಪವೆಂಬ
ಪ್ರಣವದತತ್ತ್ವಸ್ಥಾನಂಗಳೇ
ಆ ಅಖಂಡ ಮಹಾಮೂಲಸ್ವಾಮಿಯ ಪದಾಂಗುಲಿಗಳು ನೋಡಾ.
ಆ ಓಂಕಾರಪ್ರಣವದ ಮಹದೋಂಕಾರಪ್ರಣವದ
ಮಹಾಪ್ರಕಾಶವೇ ಆ ಅಖಂಡ ಮಹಾಮೂಲಸ್ವಾಮಿಯ
ಪಾದಾಂಗುಷ್ಠಾಂಗುಲಿಗಳು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ ಸರವೇ ಪರಾತೀತಪ್ರಣವ ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ ಮಾತೇ
ಮಹಾಜ್ಯೋತಿ ಪ್ರಣವಕತತ್ತ್ವವಾಗಿಹ
ಅತಿಮಹಾಜ್ಯೋತಿಪ್ರಣವ ನೋಡಾ.
ಶೂನ್ಯ–ನಿಃಶೂನ್ಯ ಆ ಮಹಾಶೂನ್ಯಕತತ್ತ್ವವಾದ ಮಹದಾನಂದಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ವಪೆ ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯಲ್ಲಿ

ಅನಂತಕೋಟಿ ನಿರಾಳಸ್ವಯಂಭುಲಿಂಗ ಅಡಗಿಹವಾಗಿ
ಆ ನಿರಾಳಸ್ವಯಂಭುಲಿಂಗಂಗಳೇ
ಸ್ಥಾನದಲ್ಲಿ ಧರಿಸಿಹ ಭೂಷಣಂಗಳು ನೋಡಾ.
ಜ್ಞಾನಪ್ರಣವವೇ ಆ ಅಖಂಡ ಮಹಾಮೂಲಸ್ವಾಮಿಯ ತುರುಬು ನೋಡಾ.
ಅನಂತಕೋಟಿ ಪ್ರಣವಂಗಳನೊಳಕೊಂಡಿಹ ಮಹಾಭೂತಪ್ರಣವವೇ
ಆ ಅಖಂಡ ಮಹಾಮೂಲಸ್ವಾಮಿಯ ಶೃಂಗಾರ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೫ ॥

೨೨೬

ಆ ಅಖಂಡ ಮಹಾಮೂಲಸ್ವಾಮಿಯ
ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಂಗಳನರಿಯದೆ
ಅನಂತಕೋಟಿ ಬ್ರಹ್ಮ–ನಾರಾಯಣರಳಿದರು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ
ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಂಗಳನರಿಯದೆ
ಅನಂತಕೋಟಿ ರುದ್ರ–ಈಶ್ವರ–ಸದಾಶಿವ ಮೊದಲಾದ
ಅನಂತಕೋಟಿ ದೇವರ್ಕಳು ಅಳಿದರು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ
ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಂಗಳನರಿಯದೆ
ಅನಂತಕೋಟಿ ವೇದಂಗಳು, ಅನಂತಕೋಟಿ ಮನುಮುನಿಗಳು,
ಅನಂತಕೋಟಿ ಲೋಕಾದಿಲೋಕದವರೆಲ್ಲ ಪ್ರಳಯಕ್ಕೊಳಗಾದರು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ
ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಂಗಳ
ಈ ಲೋಕದ ಜಡರೆತ್ತ ಬಲ್ಲರಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೨೨೬ ॥

೨೨೭

ಆ ಅಖಂಡ ಮಹಾಮೂಲಸ್ವಾಮಿಯ ಸ್ಥಲದ
ವಚನವೆಂತೆಂದೊಡೆ :
ನಿರಂಜನಾತೀತಪ್ರಣವ, ಅವಾಚ್ಯಪ್ರಣವ,
ಕಲಾಪ್ರಣವ, ಅನಾದಿಪ್ರಣವ, ಆದಿಪ್ರಣವ
ಶಿವಪ್ರಣವ, ಶಕ್ತಿಪ್ರಣವ, ಶಿವಶಕ್ತಿರಹಿತವಾಗಿಪ ಮಹಾಪ್ರಣವ
ಮೊದಲಾದ ಅನಂತಕೋಟಿ ಪ್ರಣವಂಗಳಿಲ್ಲದಂದು,
ಚಿತ್ಪ್ರಕಾಶ ಚಿದಾಕಾಶ ಮಹದಾಕಾಶ
ಮಹಾಕಾಶ ಶಿವಾಕಾಶ ಬಿಂದ್ವಾಕಾಶ
ನಾದಾಕಾಶ ಕಲಾಕಾಶ ಪ್ರಣವಾಕಾಶ ಮೊದಲಾಗಿ

ಅನಂತಕೋಟಿ ಮಹಾಪ್ರಣವಾಕಾಶ,
ಅತಿಪ್ರಣವಾಕಾಶ ಅತಿಮಹಾತೀತಪ್ರಣವಾಕಾಶಗಳಿಲ್ಲದಂದು,
ಆದಿ ಅನಾದಿ ಸಂಗತ ಅನಂತ ಅರ್ಭಕ
ತಮಂಧ ತಾರಜ ತಂಡಜ ಭಿನ್ನಜ ಭಿನ್ನಾಯುಕ್ತ
ಅವ್ಯಕ್ತ ಅಮದಾಯುಕ್ತ ಮಣಿರಣ ಮಾನ್ಯರಣ
ವಿಶ್ವಾರಣ ವಿಶ್ವಾವಸು ಅಲಂಕೃತ ಕೃತಯುಗ ತ್ರೇತಾಯುಗ
ದ್ವಾಪರಯುಗ ಕಲಿಯುಗಂಗಳೆಂಬ
ಇಪ್ಪತ್ತೊಂದು ಯುಗ ಮೊದಲಾಗಿ ಅನಂತಕೋಟಿ ಯುಗಂಗಳು
ಅತಿಮಹಾಯುಗಂಗಳು,
ಅತಿಮಹಾತೀತಮಹಾಯುಗಂಗಳಿಲ್ಲದಂದು,
ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ
ಮಹಾಮೂಲಸ್ವಾಮಿಯ ಮೀರಿದ ಅತಿಮಹಾಮೂಲಸ್ವಾಮಿಗತ್ತತ್ತವಾಗಿಹ
ಅಖಂಡ ಮಹಾಮೂಲಸ್ವಾಮಿಯು ಇದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣ ಕೂಡಲಸಂಗಮದೇವಾ. || ೨೨೭ ||

೨೨೮

ಇನ್ನು ನಿರಂಜನಾತೀತಪ್ರಣವ ಮೊದಲಾಗಿ ಬ್ರಹ್ಮ ಕಡೆಯಾಗಿ
ಸೃಷ್ಟಿಮಾರ್ಗವ ಹೇಳುತ್ತಿದ್ದೆನು.
ಅದೆಂತೆಂದೊಡೆ :
ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ
ಮಹಾಮೂಲಸ್ವಾಮಿಯ ಮೀರಿದ
ಅತಿಮಹಾಮೂಲಸ್ವಾಮಿಗತ್ತತ್ತವಾಗಿಹ ಅಖಂಡ ಮಹಾಮೂಲಸ್ವಾಮಿಯ
ನೆನಹುಮಾತ್ರದಲ್ಲಿಯೇ ನಿರಂಜನಾತೀತಪ್ರಣವ ಉತ್ಪತ್ತ್ಯವಾಯಿತ್ತು.
ಆ ನಿರಂಜನಾತೀತಪ್ರಣವದ ನೆನಹುಮಾತ್ರದಲ್ಲಿಯೇ
ನಿರಂಜನಪ್ರಣವ ಉತ್ಪತ್ತ್ಯವಾಯಿತ್ತು.
ಆ ನಿರಂಜನಪ್ರಣವದ ನೆನಹುಮಾತ್ರದಲ್ಲಿಯೇ
ಅವಾಚ್ಯಪ್ರಣವ ಉತ್ಪತ್ತ್ಯವಾಯಿತ್ತು.
ಆ ಅವಾಚ್ಯಪ್ರಣವದ ನೆನಹುಮಾತ್ರದಲ್ಲಿಯೇ
ಕಲಾಪ್ರಣವ ಉತ್ಪತ್ತ್ಯವಾಯಿತ್ತು.
ಆ ಕಲಾಪ್ರಣವದ ನೆನಹುಮಾತ್ರದಲ್ಲಿಯೇ
ಅನಾದಿಪ್ರಣವ ಉತ್ಪತ್ತ್ಯವಾಯಿತ್ತು.
ಆ ಅನಾದಿಪ್ರಣವದ ನೆನಹುಮಾತ್ರದಲ್ಲಿಯೇ
ಅನಾದಿ ಅಕಾರ ಉಕಾರ ಮಕಾರ ಉತ್ಪತ್ತ್ಯವಾಯಿತ್ತು.
ಆ ಅನಾದಿ ಅಕಾರ ಉಕಾರ ಮಕಾರದ ನೆನಹುಮಾತ್ರದಲ್ಲಿಯೇ

ಆದಿಪ್ರಣವ ಉತ್ಪತ್ತ್ಯವಾಯಿತ್ತು
ಆ ಆದಿಪ್ರಣವದ ನೆನಹುಮಾತ್ರದಲ್ಲಿಯೇ
ಆದಿ ಅಕಾರ ಉಕಾರ ಮಕಾರ ಉತ್ಪತ್ತ್ಯವಾಯಿತ್ತು ನೋಡಾ.
ಇದಕ್ಕೆ **ಚಕ್ರಾತೀತಾಗಮೇ :**
''ನಿರಂಜನಾತೀತಚಿಂತಾಯಾಂ ಅನಾದ್ಯೋಂಕಾರ ಸಂಭವಃ ।
ನಿರಂಜನಸ್ಯ ಚಿಂತಾಯಾಂ ಅವಾಚ್ಯಂ ನಾಮ ಜಾಯತೇ ।
ಅವಾಚ್ಯೋಂಕಾರ ಚಿಂತಾಯಾಂ ಕಲಾ ನಾಮ ಸಮುದ್ಭವಃ ।
ಕಲಾಪ್ರಣವಚಿಂತಾಯಾಂ ಅನಾದಿಪ್ರಣವೋ ಭವೇತ್ ॥
ಅನಾದಿಪ್ರಣವ ಚಿಂತಾಯಾಂ ಆದಿ ಮಾತ್ರಸ್ಯ ಸಂಭವಃ ।
ಆದಿ ಮಾತ್ರಸ್ಯ ಚಿಂತಾಯಾಂ ಆದಿ ಪ್ರಣವಸಂಭವಃ ।
ಆದಿಪ್ರಣವಚಿಂತಾಯಾಂ ಅಕ್ಷರತ್ರಯಮುದ್ಗತಂ ॥''
ಇಂತೆಂದು ಗಿ,
ಇದಕ್ಕೆ **ಅಥರ್ವಣವೇದ :**
''ಓಂ ನಿರಂಜನಾತೀತಪ್ರಣವಾಖ್ಯಾ ನಿರಂಜನ ಪ್ರಣವ ಜಾಯತೇ ।
ನಿರಂಜನಪ್ರಣವ ತಗಸ್ಯ ಅವಾಚ್ಯೋಂಕಾರ ಜಾಯತೇ ।
ಅವಾಚ್ಯೋಂಕಾರ ಚಿಂತಾಖ್ಯಾಂ ಕಲಾಪ್ರಣವಸ್ಯ ಜಾಯತೇ ।
ಕಲಾಪ್ರಣವಸ್ಯ ತದಸ್ಯ ಅನಾದ್ಯೋಂಕಾರ ಜಾಯತೇ ।
ಅನಾದ್ಯೋಂಕಾರಚಿಂತಾಯಾಂ ಅನಾದಿತ್ಯಕ್ಷರೋ ಜಾಯತೇ ।
ಅನಾದ್ಯರಕ್ಷರ ಚಿಂತಾಯಾಂ ಆದಿಪ್ರಣವ ಜಾಯತೇ ।
ಆದಿ ಪ್ರಣವಚಿಂತಾಯಾಂ ಅಕ್ಷರತ್ರಯಂ ಜಾಯತೇ ॥''
ಇಂತೆಂದು ಶ್ರುತಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೨೮ ॥

೨೨೯

ಆ ಆದಿ ಪ್ರಣವದ ನೆನಹುಮಾತ್ರದಲ್ಲಿಯೇ
ಆದಿ ಅಕಾರಪ್ರಣವ, ಆದಿ ಉಕಾರಪ್ರಣವ,
ಆದಿ ಮಕಾರಪ್ರಣವ ಉತ್ಪತ್ತ್ಯವಾಯಿತ್ತು ;
ಆದಿ ಅಕಾರಪ್ರಣವ, ಆದಿ ಉಕಾರಪ್ರಣವ,
ಆದಿ ಮಕಾರಪ್ರಣವ–ಈ ಮೂರು ಬೀಜಾಕ್ಷರ.
ಆದಿ ಅಕಾರಪ್ರಣವವೇ ಆದಿನಾದ.
ಆದಿ ಉಕಾರಪ್ರಣವವೇ ಆದಿಬಿಂದು.
ಆದಿ ಮಕಾರಪ್ರಣವವೇ ಆದಿಕಲೆ.
ಆದಿ ಅಕಾರಪ್ರಣವವೇ ನಿರಾಳಾತ್ಮನು.
ಆದಿ ಉಕಾರಪ್ರಣವವೇ ನಿರಂಜನಾತ್ಮನು.

ಆದಿ ಮಕಾರಪ್ರಣವವೇ ನಿರಾಮಯಾತ್ಮನು.
ಇದಕ್ಕೆ ಶ್ರೀ **ಮಹಾದೇವ ಉವಾಚ** :
''ನಾದರೂಪಂ ನಿರಾಲಂಬಂ ಬಿಂದುರೂಪಂ ನಿರಂಜನಂ ।
ನಾದಬಿಂದೂಭಯೋಃ ಕರ್ತಾ ಆದ್ಯಃ ಶಂಭುರ್ನಿರಾಮಯಃ ॥''
ಇಂತೆಂದುದಾಗಿ,
ಆದಿ ಅಕಾರಪ್ರಣವಕ್ಕೆ ಆದಿ ನಾದಪ್ರಣವವೇ ಆಧಾರ.
ಆದಿ ಉಕಾರಪ್ರಣವಕ್ಕೆ ಆದಿಬಿಂದುಪ್ರಣವವೆ ಆಧಾರ.
ಆದಿ ಮಕಾರಪ್ರಣವಕ್ಕೆ ಆದಿ ಕಲಾಪ್ರಣವವೇ ಆಧಾರ.
ಆ ಆದಿನಾದ ಆದಿಬಿಂದು ಆದಿಕಲಾಪ್ರಣವಕ್ಕೆ
ಆದಿ ಪ್ರಕೃತಿಪ್ರಣವವೇ ಆಧಾರ.
ಆ ಆದಿ ಪ್ರಕೃತಿಪ್ರಣವಕ್ಕೆ ಆದಿ ಪ್ರಾಣಮಾತ್ರೆಪ್ರಣವವವೇ ಆಧಾರ.
ಆ ಆದಿ ಪ್ರಾಣಮಾತ್ರೆ ಪ್ರಣವಕ್ಕೆ
ಆ ಅಖಂಡ ಮಹಾಜ್ಯೋತಿರ್ಮಯಲಿಂಗವೇ ಆಧಾರ.
ಅ ಎಂದರೆ ಆ ಆದಿ ಅನಾಹತಪ್ರಣವ,
ಉ ಎಂದರೆ ಆ ಆದಿ ನಾದಪ್ರಣವ ಉಳಿಯಿತ್ತು.
ಆದಿ ಮಾಯೆ ಎಂಬಲ್ಲಿ ಆ ಆದಿ ಬಿಂದು ಬಂದು ಕೂಡಲು
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೨೯ ॥

## ೨೩೦

ಇದಕ್ಕೆ **ಪ್ರಣವೋಪನಿಷತ್ತು** :
ಅಕಾರವೆಂಬ ಪ್ರಣವದಲ್ಲಿ–
''ದಂಡಶ್ಚ ತಾರಕಾಕಾರೋಭವತಿ ಓಂ ನಿರಾಳಾತ್ಮ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ದಶಮಂ ಪ್ರಣವಾಂಶಕೇ ॥''
ಉಕಾರವೆಂಬ ಪ್ರಣವದಲ್ಲಿ–
''ಕುಂಡಲಶ್ಚ ಅರ್ಧಚಂದ್ರೋಭವತಿ ಓಂ ನಿರಂಜನಾತ್ಮಾ ದೇವತಾ
ಉಕಾರೇ ಚ ಲಯಂ ಪ್ರಾಪ್ತೇ ಏಕಮೇವ ಪ್ರಣವಾಂಶಕೇ ॥''
ಮಕಾರವೆಂಬ ಪ್ರಣವದಲ್ಲಿ–
''ದರ್ಪಣಶ್ಚ ಜ್ಯೋತಿರೂಪೋ ಭವತಿ ಓಂ ನಿರಾಮಯಾತ್ಮಾ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ದ್ವಾದಶಂ ಪ್ರಣವಾಂಶಕೇ ॥''
''ಅಕಾರೇ ಚ ಉಕಾರೇ ಚ ಮಕಾರೇ ಚ ನಿರಂಜನಂ ।
ಇದಮೇಕಂ ಸಮುತ್ಪನ್ನಂ ಓಂ ಇತಿ ಜ್ಯೋತಿರೂಪಕಂ ॥
ಪ್ರಥಮಂ ಕಾರಕಾರೂಪಂ ದ್ವಿತೀಯೋ ದಂಡ ಉಚ್ಯತೇ ।
ತೃತೀಯಃ ಕುಂಡಲಾಕಾರಃ ಚತುರ್ಥಶ್ಚಾರ್ಧಚಂದ್ರಕಂ ॥

ಪಂಚಮಂ ದರ್ಪಣಾಕಾರಂ ಷಷ್ಠೋ ಜ್ಯೋತಿಸ್ಸ್ವರೂಪಕಂ ।
ಇತಿ ಪ್ರಣವಃ ವಿಜ್ಞಾತಃ ಏತದ್ಗೋಪಂ ವರಾನನೇ ॥
ಓಂಕಾರಪ್ರಭವೋ ರುದ್ರಃ ಓಂಕಾರ ಪ್ರಭುವೋ ಜಪಃ ।
ಓಂಕಾರಪ್ರಭವೋ ಬ್ರಹ್ಮಾ ಓಂಕಾರ ಪ್ರಭವೋ ಹರಿಃ ॥
ಓಂಕಾರಪ್ರಭವಶ್ಚಂದ್ರಃ ಓಂಕಾರ ಪ್ರಭುವೋ ರವಿಃ ।
ಓಂಕಾರಪ್ರಭವೋ ವೇದಃ ಓಂಕಾರ ಪ್ರಭವಃ ಸ್ವರಃ ॥
ಓಂಕಾರಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಸರ್ವವ್ಯಾಪಕಮೋಂಕಾರಂ ಮಂತ್ರಾಣ್ಯನ್ಯತ್ರನಸೋ ಭವೇತ್ ॥
ಪ್ರಣವೋಹಿಃ ಪರಬ್ರಹ್ಮ ಪ್ರಣವಃ ಪರಮಂ ಪದಂ ।
ಓಂಕಾರಂ ನಾದರೂಪಂ ಚ ಓಂಕಾರಂ ಮಂತ್ರರೂಪಕಂ ।
ಓಂಕಾರಂ ವ್ಯಾಪಿ ಸರ್ವತ್ರ ಓಂಕಾರಂ ಗೋಪ್ಯಮಾನನಂ ।
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೦ ॥

೨೩೧

ಇನ್ನು ಆ ಆದಿ ಉಕಾರ ಪ್ರಣವ, ಆದಿ ಮಕಾರ ಪ್ರಣವ,
ಆದಿ ಅಕಾರಪ್ರಣವ– ಈ ಮೂರು ಪ್ರಣವಂಗಳು ಸಂಯುಕ್ತವಾಗಿ,
ಅಖಂಡ ಮಹಾಜ್ಯೋತಿರ್ಮಯವಾಗಿಹ ಪರಮೋಂಕಾರ ಉತ್ಪತ್ಯವಾಯಿತ್ತು.
ಅದೆಂತೆಂದೊಡೆ :
ಆ ಆದಿ ಉಕಾರಪ್ರಣವ, ಆದಿ ಮಕಾರಪ್ರಣವ,
ಆದಿ ಅಕಾರಪ್ರಣವ–ಈ ಮೂರು ಬೀಜಾಕ್ಷರ.
ಆದಿ ಉಕಾರಪ್ರಣವವೇ ಆದಿ ಬಿಂದುಪ್ರಣವ.
ಆದಿ ಮಕಾರಪ್ರಣವವೇ ಆದಿ ಕಲಾಪ್ರಣವ.
ಆದಿ ಅಕಾರಪ್ರಣವವೇ ಆದಿ ನಾದಪ್ರಣವ.
ಆದಿ ಉಕಾರಪ್ರಣವವೇ ಸ್ವಯಂಭುಲಿಂಗ.
ಆದಿ ಮಕಾರಪ್ರಣವವೇ ಶಿವತತ್ವ.
ಆದಿ ಅಕಾರಪ್ರಣವವೇ ಗುರುತತ್ವ.
ಇದಕ್ಕೆ ಈಶ್ವರ ಉವಾಚ :
''ಅಕಾರಂ ಗುರುತತ್ವಂ ಚ ಉಕಾರಂ ಲಿಂಗತತ್ವಕಂ ।
ಮಕಾರಂ ಶಿವತತ್ವಂ ಚ ಇತಿ ಭೇದೋ ವರಾನನೇ ॥ ''
ಇಂತೆಂದುದಾಗಿ,
ಆ ಆದಿ ಉಕಾರಪ್ರಣವಕ್ಕೆ ಆದಿ ಬಿಂದುಪ್ರಣವವೇ ಆಧಾರ.
ಆದಿ ಮಕಾರಪ್ರಣವಕ್ಕೆ ಆದಿ ಕಲಾಪ್ರಣವವೇ ಆಧಾರ.
ಆದಿ ಅಕಾರಪ್ರಣವಕ್ಕೆ ಆದಿ ನಾದಪ್ರಣವವೇ ಆಧಾರ.

ಆ ಆದಿ ಬಿಂದುಪ್ರಣವ, ಆದಿ ಕಲಾಪ್ರಣವ, ಆದಿ ನಾದಪ್ರಣವಕ್ಕೆ
ಆ ಆದಿ ಪ್ರಕೃತಿಪ್ರಣವಕ್ಕೆ ಆ ಆದಿ ಪ್ರಾಣಮಾತ್ರೆಪ್ರಣವವೆ ಆಧಾರ.
ಆ ಪ್ರಾಣಮಾತ್ರೆಪ್ರಣವಕ್ಕೆ
ಅಖಂಡ ಮಹಾಜ್ಯೋತಿರ್ಮಯ ಲಿಂಗವೇ ಆಧಾರ.
ಉ ಎಂಬ ಆದಿಬಿಂದುಪ್ರಣವವು, ಮ ಎಂಬ ಆದಿಕಲಾಪ್ರಣವವು
[ಅ ಎಂಬ ಆದಿ ನಾದಪ್ರಣವವು] ಸಂಯುಕ್ತವಾಗಿ
ಅಖಂಡ ಮಹಾಜ್ಯೋತಿರ್ಮಯವಾಗಿಹ ಪರಮೋಂಕಾರವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೩೧ ॥

೨೩೨

ಇದಕ್ಕೆ **ಮಹದೋಂಕಾರೋಪನಿಷತ್ತು** :
ಉಕಾರವೆಂಬ ಪ್ರಣವದಲ್ಲಿ–
"ದಂಡಶ್ಚ ತಾರಾಕಾಕಾರೋ ಭವತಿ ಓಂ ಸ್ವಯಂಭುಲಿಂಗ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ಏಕಾದಶಮೇ ಪ್ರಣವಾಂಶಕೇ ॥ "
ಮಕಾರವೆಂಬ ಪ್ರಣವದಲ್ಲಿ–
"ಕುಂಡಲಶ್ಚ ಅರ್ಧಚಂದ್ರೋ ಭವತಿ ಓಂ ಶಿವತತ್ವಂ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ದ್ವಾದಶಂ ಪ್ರಣವಾಂಶಕೇ ॥ "
ಅಕಾರವೆಂಬ ಪ್ರಣವದಲ್ಲಿ–
"ದರ್ಪಣಶ್ಚ ಜ್ಯೋತಿರೂಪೋ ಭವತಿ ಓಂ ಗುರುತತ್ವಂ ದೇವತಾ।
ಅಕಾರೇ ಚ ಲಯಂ ಪ್ರಾಪ್ತೇ ತ್ರಯೋದಶಮೇ ಪ್ರಣವಾಂಶಕೇ ॥"
"ಉಕಾರೇ ಚ ಮಕಾರೇ ಚ ಅಕಾರಂ ಚಾಕ್ಷರತ್ರಯಂ ।
ಅಕಾರಂ ನಾದರೂಪೇಣ ಉಕಾರಂ ಬಿಂದುರುಚ್ಯತೇ ।
ಮಕಾರಂ ಕಲಾ ಚೈವ ನಾದಬಿಂದುಕಲಾತ್ಮನೇ ॥
ನಾದಬಿಂದುಕಲಾಯುಕ್ತೋ ಓಂಕಾರೋ ಪರಮೇಶ್ವರಃ ।
ಪ್ರಣವೋಹಿ ಪರಬ್ರಹ್ಮ ಪ್ರಣವಂ ಪರಮಂ ಪದಂ ॥
ಓಂಕಾರಂ ನಾದರೂಪಂಚ ಓಂಕಾರಂ ಮಂತ್ರರೂಪಕಂ ।
ಓಂಕಾರಂ ವ್ಯಾಪಿ ಸರ್ವತ್ರ ಓಂಕಾರಂ ಗೋಪ್ಯಮಾನನಂ ॥"
ಇಂತೆಂದುದಾಗಿ, ಅಪ್ರಮಾಣ ಕೂಡಲಸಂಗಮದೇವಾ. ॥ ೨೩೨ ॥

೨೩೩

ಇನ್ನು ಆ ಆದಿ ಮಕಾರಪ್ರಣವ, ಆದಿ ಅಕಾರಪ್ರಣವ,
ಆದಿ ಉಕಾರಪ್ರಣವ–ಈ ಮೂರೂ ಪ್ರಣವಂಗಳು ಬೀಜಸಂಯುಕ್ತವಾಗಿ
ಅಖಂಡ ಮಹದೋಂಕಾರವಾಯಿತ್ತು.
ಅದೆಂತೆಂದಡೆ :
ಆ ಆದಿ ಮಕಾರಪ್ರಣವ, ಆದಿ ಅಕಾರಪ್ರಣವ,

ಆದಿ ಉಕಾರಪ್ರಣವ–ಈ ಮೂರೂ ಪ್ರಣವಂಗಳು ಬೀಜಾಕ್ಷರ.
ಆದಿ ಮಕಾರವೇ ಆದಿ ಕಲಾಪ್ರಣವ,
ಆದಿ ಅಕಾರವೆ ಆದಿ ನಾದಪ್ರಣವ.
ಆದಿ ಉಕಾರವೆ ಆದಿ ಬಿಂದುಪ್ರಣವ.
ಆದಿ ಮಕಾರಪ್ರಣವವೇ ಸರ್ವಾತ್ಮನು.
ಆದಿ ಅಕಾರಪ್ರಣವವೇ ಪರಮಾತ್ಮನು.
ಆದಿ ಉಕಾರಪ್ರಣವವೇ ಶಿವಾತ್ಮನು.
**ಇದಕ್ಕೆ ಮಹಾದೇವ ಉವಾಚ:**
''ಅಕಾರಂ ಪರಮಾತ್ಮಾ ಚ ಉಕಾರಃ ಶಿವಾತ್ಮಾ ಭವೇತ್ ।
ಮಕಾರಂ ಸರ್ವಾತ್ಮಾ ಚ ಇತಿ ಭೇದಂ ವರಾನನೇ ॥''
ಇಂತೆಂದುದಾಗಿ,
ಆದಿ ಮಕಾರಕ್ಕೆ ಆದಿ ಕಲಾಪ್ರಣವವೆ ಆಧಾರ.
ಆದಿ ಅಕಾರಕ್ಕೆ ಆದಿ ನಾದಪ್ರಣವವೆ ಆಧಾರ.
ಆದಿ ಉಕಾರಕ್ಕೆ ಆದಿ ಬಿಂದುಪ್ರಣವವೆ ಆಧಾರ.
ಆದಿ ಪ್ರಾಣಮಾತ್ರೆಯಪ್ರಣವಕ್ಕೆ
ಅಖಂಡ ಜ್ಯೋತಿರ್ಮಯಲಿಂಗವೆ ಆಧಾರ.
ಆದಿ ಮ ಎಂದರೆ ಆದಿ ಕಲಾಪ್ರಣವ.
ಆದಿ ಅ ಎಂದರೆ ಆದಿ ನಾದಪ್ರಣವ.
ಆದಿ ಉ ಎಂಬ ಆದಿ ಬಿಂದುಪ್ರಣವದಲ್ಲಿ
ಬಿಂದು ಸಂಯುಕ್ತವಾಗಿ, ಆದಿ 'ಮ' ಎಂಬ ಆದಿ ಮ ನ ಸ ರ
ಪ್ರಣವದಲ್ಲಿ ಬಂದು ಕೂಡಲು ಮಹದೋಂಕಾರವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೩೩ ॥

೨೩೪

**ಇದಕ್ಕೆ ಮಹದೋಂಕಾರೋಪನಿಷತ್ತು :**
ಮಕಾರವೆಂಬ ಪ್ರಣವದಲಿ–
''ದಂಡಶ್ಚ ತಾರಕಾಕಾರೋ ಭವತಿ । ಓಂ ಸಾರ್ವತ್ಮಾ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ಪಂಚದಶಮೋ ಪ್ರಣವಾಂಶಕೇ ॥''
ಅಕಾರವೆಂಬ ಪ್ರಣವದಲ್ಲಿ–
''ಕುಂಡಲಶ್ಚ ಅರ್ಧಚಂದ್ರೋ ಭವತಿ । ಓಂ ಪರಮಾತ್ಮಾ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ಷೋಡಶೇ ಪ್ರಣವಾಂಶಕೇ ॥''
ಉಕಾರವೆಂಬ ಪ್ರಣವದಲ್ಲಿ–
''ಜ್ಯೋತಿಶ್ಚ ದರ್ಪಣಾಕಾರೋ ಭವತಿ । ಓಂ ಶಿವಾತ್ಮಾ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ಸಪ್ತದಶ ಪ್ರಣವಾಂಶಕೇ ॥''

“ಮಕಾರೇ ಚ ಅಕಾರೇಚ ಉಕಾರೇಚ ನಿರಾಮಯಂ ।
ಇದಮೇಕಂ ಸಮುತ್ಪನ್ನಂ ಓಂ ಇತಿ ಜ್ಯೋತಿರೂಪಕಂ ॥
ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡ ಉಚ್ಯತೇ ।
ತೃತೀಯಂ ಕುಂಡಲಾಕಾರಂ ಚತುರ್ಥಂ ಅರ್ಧಚಂದ್ರಕಂ ॥
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿರೂಪಕಂ ।
ಇತಿ ಪ್ರಣವಃ ಜ್ಞೇಯಂ ಏತದ್ಗೋಪ್ಯಂ ವರಾನನೇ ॥
ಓಂಕಾರ ಪ್ರಭವೋ ವೇದಃ ಓಂಕಾರಂ ಪ್ರಭವ ಸ್ವರಃ ।
ಓಂಕಾರಪ್ರಭವಾ ಭೂಃ ಓಂಕಾರಪ್ರಭವಾ ಭುವಃ ॥
ಓಂಕಾರಪ್ರಭವಾ ಸ್ವಹಃ ಓಂಕಾರ ಪ್ರಭವಾ ಮಹಃ ।
ಓಂಕಾರಪ್ರಭವೋ ಜನಃ ಓಂಕಾರ ಪ್ರಭವಂ ತಪಃ ॥
ಓಂಕಾರಪ್ರಭವಂ ಸತ್ಯಂ ಓಂಕಾರ ಪ್ರಭವೋ ರವಿ ಃ ।
ಓಂಕಾರಪ್ರಭವಸ್ಸರ್ವಂ ತ್ರೈಲೋಕ್ಯಂ ಸಚರಾಚರಂ ॥
ಸರ್ವವ್ಯಾಪಕಮೋಂಕಾರಂ ಮಂತ್ರಸ್ಯಾತ್ರ ನ ಸಂಭವೇತ್ ।
ಪ್ರಣವೋಹಿ ಪರಬ್ರಹ್ಮ ಪ್ರಣವಃ ಪರಮಂ ಪದಂ ॥
ಓಂಕಾರಂ ನಾದರೂಪಂ ಚ ಓಂಕಾರಂ ಬಿಂದುರೂಪಕಂ ।
ಓಂಕಾರಂ ಚ ಕಲಾರೂಪಂ ಓಂಕಾರಂ ಮಂತ್ರರೂಪಕಂ ॥
ಓಂಕಾರಂ ವ್ಯಾಪಿ ಸರ್ವತ್ರ ಓಂಕಾರಂ ಗೋಪ್ಯಮಾನನಂ ।
ಇತಿ ಪ್ರಣವಃ ವಿಜ್ಞೇಯಃ ದುರ್ಲಭಂ ಕಮಲಾನನೇ ॥”
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೪ ॥

೨೩೫

ಇನ್ನು ಅಖಂಡಮಹಾಜ್ಯೋತಿಪ್ರಣವದ
ಜ್ಯೋತಿಸ್ವರೂಪದಲ್ಲಿ ಮಕಾರ ಉತ್ಪತ್ಯ.
ಆ ಪ್ರಣವದ ಕುಂಡಲಾಕಾರದಲ್ಲಿ ಅಕಾರ ಉತ್ಪತ್ಯ.
ಆ ಪ್ರಣವದ ತಾರಕಾಸ್ವರೂಪದಲ್ಲಿ ಉಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಚಕ್ರಾತೀತಾಗಮೇ** : ಶ್ರೀ ಮಹಾದೇವ ಉವಾಚ–
“ಓಂಕಾರಂ ಜ್ಯೋತಿರೂಪಂ ಚ ಮಕಾರಂ ಚ ಪ್ರಜಾಯತೇ ।
ಓಂಕಾರಂ ಕುಂಡಲಾಕಾರಂ ಅಕಾರಂ ಚ ಪ್ರಜಾಯತೇ ॥
ಓಂಕಾರಂ ತಾರಕಾರೂಪೇ ಉಕಾರಂ ಚ ಪ್ರಜಾಯತೇ ।
ಇತ್ಯಕ್ಷರತ್ರಯಂ ದೇವಿ ಸ್ಥಾನಸ್ಥಾನೇಷು ಜಾಯತೇ ॥”
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೨೩೫ ॥

೨೩೬

ಇನ್ನು ಲಿಂಗೋತ್ಪತ್ಯವದೆಂತೆಂದಡೆ :
ಆ ಅಖಂಡ ಮಹಾಜ್ಯೋತಿಪ್ರಣಮದ ತಾರಕಸ್ವರೂಪ
ಕುಂಡಲಾಕಾರ ಜ್ಯೋತಿಸ್ವರೂಪದಲ್ಲಿ ಉತ್ಪತ್ಯವಾದ
ಅಕಾರ ಉಕಾರ ಮಕಾರ– ಈ ಮೂರು ಬೀಜಾಕ್ಷರ.
ಅಕಾರವೇ ಶಿವನು, ಉಕಾರವೇ ಶಿವತತ್ವ, ಮಕಾರವೇ ಪರವು.
ಅಕಾರವೇ ನಾದವು, ಉಕಾರವೇ ಬಿಂದು, ಮಕಾರವೇ ಕಲೆ.
ಈ ಆರೂ ನಾಮಂಗಳು ನಿಃಕಲತತ್ವ.
ಆ ಪರಶಿವಶಕ್ತಿಯ ಸಂಕಲ್ಪದಿಂದ ನಾದ–ಬಿಂದು– ಕಲೆಸಂಯುಕ್ತವಾಗಿ
ಅಖಂಡಲಿಂಗವಾಯಿತ್ತು
ಅದಕ್ಕೆ ಕರ ಚರಣ ಅವಯವಂಗಳೆಲ್ಲ ಅಖಂಡಸ್ವರೂಪ.
ಇದಕ್ಕೆ **ಚಿತ್ಪಿಂಡಾಗಮೇ** :
''ಓಂಕಾರ ತಾರಕಾರೂಪಂ ಅಕಾರಂ ಚ ಪ್ರಜಾಯತೇ ।
ಓಂಕಾರಂ ಕುಂಡಲಾಕಾರಂ ಉಕಾರಂ ಚ ಪ್ರಜಾಯತೇ ॥
ಓಂಕಾರಂ ಜ್ಯೋತಿರೂಪಂ ಚ ಮಕಾರಂ ಚ ಪ್ರಜಾಯತೇ ।
ಇತ್ಯಕ್ಷರತ್ರಯಂ ದೇವೀ ಸ್ಥಾನಸ್ಥಾನೇಷು ಜಾಯತೇ ॥
ಅಕಾರೇ ಚ ಉಕಾರೇ ಚ ಮಕಾರೇ  ಚಾಕ್ಷರತ್ರಯಂ ।
ಅಕಾರಂ ನಾದರೂಪೇಣ ಉಕಾರಂ ಬಿಂದುರುಚ್ಯತೇ ॥
ಮಕಾರಂತು ಕಲಾಶ್ಚೈವ ನಾದಬಿಂದುಕಲಾತ್ಮನೇ ।
ನಾದಬಿಂದುಕಲಾಮಧ್ಯೇ ವೇದಲಿಂಗಸಮುದ್ಭವಃ ॥
ಅಖಂಡಗೋಳಕಾಕಾರಂ ವೇದಪಂಚಕಸಂಜ್ಞಕಂ ।
ಅಖಿಲಾರ್ಣವ ಲಯಾನಾಂ ಲಿಂಗಮುಖ್ಯಂ ಪರಂ ತಥಾ ॥
ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ ।
ಯದೀದಮೀಶ್ವರಂ ತೇಜಃ ತಲ್ಲಿಂಗಂ ಪಂಚಸಂಜ್ಞಕಂ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರ ಉವಾಚ** :
''ಅಕಾರೋಕಾರ ಸಂಯೋಗ ತನ್ಮಧ್ಯೇ ಲಿಂಗರೂಪಕಂ ।
ಅವ್ಯಕ್ತಲಿಂಗಮಕಲ್ಪಂ ಗೋಳಕಾಕಾರಸಂಜ್ಞಕಂ ॥
ನಾದೋಲಿಂಗಮಿತಿ ಜ್ಞೇಯಂ ಬಿಂದುಃ ಪಿಂಡಮುದಾಹೃತಂ ।
ನಾದಬಿಂದು ಯುಕ್ತರೂಪಂ ಜಗತ್ಸೃಷ್ಟ್ಯರ್ಥಕಾರಣಂ ॥
ಚಿದ್ವ್ಯೋಮಲಿಂಗಮಿತ್ಯಾಹ ಚಿದ್ಭೂಮಿಸ್ತಸ್ಯ ಪೀಠಿಕಾ ।
ಆಲಯಂ ಸರ್ವಭೂತಾನಾಂ ಲಯನಾಂ ಲಿಂಗಮುಚ್ಯತೇ ॥
ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ  ಚರಾಚರಂ ।
ತದೇಲ್ಲಿಂಗಮಿತ್ಯುಕ್ತಂ ಲಿಂಗತತ್ವಪರಾಯಣೈಃ ॥

ಲಿಂಗಃ ಶಂಭುರಿತಿ ಜ್ಞೇಯಂ ಶಕ್ತಿಃ ಪೀಠಮುದಾಹೃತಂ ।
ಶಿವೇನ ಶಕ್ತಿಸಂಯೋಗಃ ಸೃಷ್ಟಿಸ್ಥಿತಿಲಯಾವಹಃ ॥
ಲಿಂಗೇನ ಜಾಯತೇ ತತ್ರ ಜಗತ್ಸ್ಥಾವರಜಂಗಮಂ ।
ತಸ್ಮಾಲ್ಲಿಂಗೇ ವಿಶೇಕ್ಷೀಣ ಲಿಂಗರೂಪಮುದಾಹೃತಂ ॥
ಅಸಂಖ್ಯಾತಮಹಾವಿಷ್ಣು ಅಸಂಖ್ಯಾತಪಿತಾಮಹಃ ।
ಅಸಂಖ್ಯಾತಾ ಸುರೇಂದ್ರಾಶ್ಚ ಲೀಯಂತೇ ಸರ್ವದೇವತಾಃ ॥
ವಿಷ್ಣು ಸಂಜ್ಞಾ ಅಸಂಖ್ಯಾತಾಃ ಅಸಂಖ್ಯಾತ ಕವಿಕಾಮಃ ।
ಅಸಂಖ್ಯಾ ದೇವಮುನಯೋ ಗಮ್ಯತೇ ಸರ್ವದೇವತಾಃ ॥
ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯಾಹುರ್ಲಿಂಗತತ್ವಪರಾಯಣ್ಯೈಃ ॥''
ಇಂತೆಂದುದಾಗಿ,
ಇದಕ್ಕೆ ಪ್ರಣವಾನಂದ ಸೂಕ್ತಿ : ಶ್ರೀ ಮಹಾದೇವ ಉವಾಚ–
''ಆದಿ ಓಂಕಾರಪೀಠಂ ಚ ಅಕಾರಂ ಕಂಠ ಉಚ್ಯತೇ ।
ಉಕಾರಂ ಗೋಮುಖಂ ಚೈವ ಮಕಾರಂ ವರ್ತುಲಂ ತಥಾ ॥
ನಾದಬಿಂದುಮಹಾತೇಜಂ ನಾದಂ ಅಖಂಡಲಿಂಗಕಃ ।
ಆದಿಮಧ್ಯಾಂತರಹಿತಂ ಅಪ್ರಮೇಯಂ ಅನಾಮಯಂ ॥
ಅಸಂಖ್ಯಾತಸೂರ್ಯಚಂದ್ರಾಗ್ನಿ ಅಸಂಖ್ಯಾತ ತಟಿತ್ಕೋಟಿ ಪ್ರಭಃ ।
ಅವ್ಯಕ್ತಂ ಅಮಲಂ ಶೂನ್ಯಂ ಅಪ್ರಮಾಣಮಗೋಚರಂ ॥
ನಿರ್ನಾಮಂ ನಿರ್ಗುಣಂ ನಿತ್ಯಂ ನಿರಂಜನಂ ನಿರಾಮಯಂ ।
ಇತಿ ಲಿಂಗಸ್ಥಲಂತು ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೬ ॥

೨೩೭

ಇನ್ನು ಲಿಂಗಗರ್ಭದಲ್ಲಿ ಅನೇಕ ಕೋಟಿ ತತ್ವಂಗಳು,
ಅನೇಕ ಕೋಟಿ ಸದಾಶಿವರು, ಅನೇಕ ಕೋಟಿ ಈಶ್ವರರು
ಅಡಗಿಹರು ನೋಡಾ.
ಆ ಲಿಂಗಗರ್ಭದಲ್ಲಿ ಅನೇಕ ಕೋಟಿ ಮಹೇಶ್ವರರು,
ಅನೇಕ ಕೋಟಿ ರುದ್ರರು,
ಅನೇಕ ಕೋಟಿ ವಿಷ್ಣ್ವಾದಿಗಳಡಗಿಹರು ನೋಡಾ.
ಆ ಲಿಂಗಗರ್ಭದಲ್ಲಿ ಅನೇಕ ಕೋಟಿ ಬ್ರಹ್ಮರು,
ಅನೇಕ ಕೋಟಿ ಚಂದ್ರಾದಿತ್ಯರು, ಅನೇಕ ಕೋಟಿ ಋಷಿಗಳಡಗಿಹರು ನೋಡಾ.
ಆ ಲಿಂಗಗರ್ಭದಲ್ಲಿ ಅನೇಕ ಕೋಟಿ ಇಂದ್ರರು,
ಅನೇಕ ಕೋಟಿ ದೇವರ್ಕಳು, ಅನೇಕ ಕೋಟಿ ಬ್ರಹ್ಮಾಂಡಂಗಳಡಗಿ

ಆದಿಮಧ್ಯಾವಸಾನಗಳಿಲ್ಲದೆ ಅಖಂಡ ಪರಿಪೂರ್ಣ
ಗೋಳಕಾಕಾರ ಅಪ್ರಮಾಣ ಅಗೋಚರ ಅಪ್ರಮೇಯ
ಅವ್ಯಕ್ತ ಅನಂತತೇಜ ಅತ್ಯಂತಪ್ರಚಯ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶ
ಅನಂತಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿಹರು ನೋಡಾ.
ಇದಕ್ಕೆ **ಶಿವಧರ್ಮ ಸೂತ್ರೇ:**
''ತತ್ವ ಸಂಜ್ಞಾಃ ಅಸಂಖ್ಯಾತಾಃ ಅಸಂಖ್ಯಾತ ಅಂಬರಂ ತಥಾ ।
ಅಸಂಖ್ಯಾ ದೇವಮುನಯಃ ಲಿಂಗತತ್ವೇ ವಿಲೀಯಂತೇ ॥
ಅಸಂಖ್ಯಾತ ಸೂರ್ಯಚಂದ್ರಾಗ್ನಿ ತಾರಾಖ್ಯ ದೈತ್ಯ ಮಾನವಾಃ ।
ಅಸಂಖ್ಯಾತ ಸುರೇಂದ್ರಾಣಾಂ ಲಿಂಗಗರ್ಭೇ ವಿಲೀಯತೇ ॥
ಅಸಂಖ್ಯಾ ಮಹಾವಿಷ್ಣವಃ ಅಸಂಖ್ಯಾತ ಪಿತಾಮಹಾಃ ।
ಅಸಂಖ್ಯಾತ ಮಹದಾಕಾಶಂ ಲಂಗಗರ್ಭೇ ವಿಲೀಯತೇ ॥''
ಇಂತೆಂದುದಾಗಿ,
ಇದಕ್ಕೆ **ಶಿವಧರ್ಮ ಪುರಾಣೇ :**
''ಕಲ್ಪಾಂತೇ ತಸ್ಯ ದೇವಸ್ಯ ಲೀಯತೇ ಸರ್ವದೇವತಾ ।
ದಕ್ಷಿಣೇ ಲೀಯತೇ ಬ್ರಹ್ಮಾ ವಾಮಭಾಗೇ ಜನಾರ್ಧನಃ ॥
ಹೃದಯೇ ಚೈವ ಗಾಯತ್ರೀ ಸರ್ವದೇವೋತ್ತಮೋತ್ತಮಃ ।
ಲೀಯತೇ ಮೂರ್ಧ್ನಿ ವೈವೇದಾ ಷಡಂಗಪದಕ್ರಮಾತ್ ॥
ಜಠರೇ ಲೀಯತೇ ಸರ್ವಂ ಜಗತ್‌ಸ್ಥಾವರ ಜಂಗಮಂ ॥
ಉತ್ಪಾದ್ಯತೇ ಘನಸಸ್ತಸ್ಮಾತ್ ಬ್ರಹ್ಮಾದ್ಯಂ ಸಚರಾಚರಂ ॥''
ಇಂತೆಂದುದಾಗಿ.
ಇದಕ್ಕೆ **ಶಿವಲಿಂಗಾಗಮೇ :**
''ಚಿದ್ವ್ಯೋಮ ಲಿಂಗಮಿತ್ಯಾಹುಃ ಚಿದ್ಭೂಮಿ ತಸ್ಯ ಪೀಠಿಕಾ ।
ಆಲಯಃ ಸರ್ವದೇವಾನಾಂ ಲಯಾನಾಂ ಲಿಂಗಮುಚ್ಯತೇ ॥
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಉತ್ಪದ್ಯಂತೇ ಪುನಸ್ತಸ್ಮಾತ್ ಬ್ರಹ್ಮಾವಿಷ್ಣಾದಿ ದೇವತಾಃ ॥''
ಇಂತೆಂದುದಾಗಿ,
ಇದಕ್ಕೆ **ಮಕುಟಾಗಮಸಾರೇ :**
''ಆದಿಮಧ್ಯಾಂತ ಶೂನ್ಯಂ ಚ ಶೂನ್ಯ ಶೂನ್ಯಂ ದಶಾದಿಶಂ ।
ಸರ್ವಶೂನ್ಯಂ ನಿರಾಕಾರಂ ನಿರ್ದ್ವಂದ್ವಂ ಪರಮಂ ಪದಂ ॥''
ಇಂತೆಂದುದಾಗಿ,
ಇದಕ್ಕೆ **ಉತ್ತರವಾತುಲಾಗಮೇ :**
''ನ ಭೂಮಿರ್ನಜಲಂ ಚೈವ ನ ತೇಜೋ ನ ಚ ವಾಯುಚ ।
ನಚಾಕಾಶಂ ನ ಸೂರ್ಯಶ್ಚ ನಚ ಚಂದ್ರಮಇಂದ್ರಿಯೋ ।

ನ ಚ ಬ್ರಹ್ಮ ನ ವಿಶ್ವಂ ಚ ನಚೋ ನಕ್ಷತ್ರಕಾರಕಾ ।
ಏಕಮೇವ ಪರಂ ನಾಸ್ತಿ ಅಖಂಡಿತಮಹೋದಯಂ ।
ಸರ್ವಶೂನ್ಯಂ ನಿರಾಲಂಬಂ ಸ್ವಯಂ ಲಿಂಗಮಯಂ ಪರಂ ॥''
ಇಂತೆಂದುದಾಗಿ,
ಇದಕ್ಕೆ **ರುದ್ರಕೋಟಿಸಂಹಿತಾಯಾಂ** :
''ವಾಚಾತೀತಂ ಮನೋತೀತಂ ಭಾವಾತೀತಂ ಪರಂ ಶಿವಂ ।
ಸರ್ವಶೂನ್ಯಂ ನಿರಾಕಾರಂ ಸ್ವಯಂಭುರ್ಲಿಂಗಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ **ಮಹಾಗಮಸಾರೇ** :
''ಊರ್ಧ್ವಶೂನ್ಯಂ ಅಧಃ ಶೂನ್ಯಂ ಮಧ್ಯಶೂನ್ಯಂ ನಿರಾಮಯಂ ।
ಸರ್ವಶೂನ್ಯಂ ನಿರಾಕಾರಂ ಸ್ವಯಂಭುರ್ಲಿಂಗಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ **ಆದಿ ನಾರಾಯಣ ಉವಾಚ** :
''ನಮಸ್ತೇ ಜ್ಞಾನಲಿಂಗಾಯ ಶಿವಲಿಂಗಾಯ ಲಿಂಗಿನೇ ।
ನಮಸ್ತೇ ಗೂಢಲಿಂಗಾಯ ಪರಲಿಂಗಾಯ ಲಿಂಗಿನೇ ॥
ಜಗತ್ಕಾರಣಲಿಂಗಾಯ ಜಗತಾಂ ಪತಯೇ ನಮಃ ।
ಅವಯೋಃ ಪತಯೇ ನಮಃ ನಿತ್ಯಂ ಪತೀನಾಂ ಪತಯೇ ॥
ಅನಾದಿಮಲಸಂಸಾರೇ ರೋಗವೈದ್ಯಾಯ ಶಂಭವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಪ್ರಳಯಾಂಬುಧಿ ಸಂಸ್ಥಾಯ ಪ್ರಳಯೋತ್ಪತ್ಯಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಆದಿಮಧ್ಯಾಂತಶೂನ್ಯಾಯ ಅಂಬರಸ್ಯಾಪಿ ಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ನಿಷ್ಕಳಾಯ ವಿಶುದ್ಧಾಯ ನಿತ್ಯಾನಂದಸ್ಯ ಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ನಿರ್ವಿಕಾರಾಯ ನಿತ್ಯಾಯ ಸತ್ಯಾಯ ಪರಮಾತ್ಮನೇ ।
ನಮಃಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಓಂಕಾರಾಂತಾಯ ಸೂಕ್ಷ್ಮಾಯ ಸ್ತ್ರೀಪುಂಸಾಯಾತ್ಮ ರೂಪಣೇ ।
ನಮಃಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಲೀಲಾತ್ಮಂಚ ದ್ವಯೋರ್ಮಧ್ಯೇ ಕಾಯಾತ್ಮರೂಪಣೇ ।
ನಮಃಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ **ಮಹಾದೇವ ಉವಾಚ** :
''ವಾಚಾತೀತಂ ಮನೋತೀತಂ ವರ್ಣಾತೀತಂ ಪರಂ ಶಿವಂ ।

ಸರ್ವಶೂನ್ಯಂ ನಿರಾಕಾರಂ ನಿರಾಲಂಬಸ್ಯ ಲಿಂಗಯೋಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೭ ॥

೨೩೮

ಇನ್ನು ಅಖಂಡಪರಿಪೂರ್ಣ ಅಪ್ರಮಾಣ ಅಗೋಚರ ಅಪ್ರಮೇಯ
ಅವ್ಯಕ್ತ ಅನಂತತೇಜ ಅನಂತಪ್ರಚಯ ಅನಂತಕೋಟಿ
ಸೂರ್ಯಚಂದ್ರಾಗ್ನಿಪ್ರಕಾಶವಾಗಿಹ
ಮಹಾಘನಲಿಂಗದಲ್ಲಿ ವಿಶ್ವತೋ ಮುಖ, ವಿಶ್ವತೋ ಚಕ್ಷು,
ವಿಶ್ವತೋ ಹಸ್ತ, ವಿಶ್ವತೋ ಪಾದ, ವಿಶ್ವತೋ ಬಾಹುವನುಳ್ಳ
ಅನಾದಿ ಸದಾಶಿವತತ್ವ ಉತ್ಪತ್ಯವಾಯಿತ್ತು.
ಆ ಸದಾಶಿವನ ಈಶಾನಮುಖದಲ್ಲಿ ಆಕಾಶ ಉತ್ಪತ್ಯವಾಯಿತ್ತು.
ಆ ಅನಾದಿ ಶಿವತತ್ವದಿಂದ ಅನೇಕ ಮುಖ, ಅನೇಕ ಚಕ್ಷು,
ಅನೇಕ ಬಾಹು, ಅನೇಕ ಪಾದವನುಳ್ಳ ಅನಾದಿ ಈಶ್ವರತತ್ವ
ಉತ್ಪತ್ಯವಾಯಿತ್ತು.
ಆ ಅನಾದಿ ಈಶ್ವರತತ್ವದಲ್ಲಿ ಸಹಸ್ರ ಶಿರ, ಸಹಸ್ರ ಅಕ್ಷ,
ಸಹಸ್ರ ಬಾಹು, ಸಹಸ್ರ ಪಾದವನುಳ್ಳ
ಅನಾದಿ ಮಹೇಶ್ವರತತ್ವ ಉತ್ಪತ್ಯವಾಯಿತ್ತು.
ಆ ಅನಾದಿ ಮಹೇಶ್ವರತತ್ವದಲ್ಲಿ ತ್ರಿಪಂಚಮುಖ, ತ್ರಿದಶಭುಜ,
ತ್ರಿದಶಪಾದವನುಳ್ಳ ಆದಿ ಸದಾಶಿವ ಉತ್ಪತ್ಯವಾಯಿತ್ತು.
ಆ ಆದಿ ಸದಾಶಿವತತ್ವದಲ್ಲಿ ಷಷ್ಠ ವಕ್ತ್ರ, ದ್ವಾದಶಭುಜ,
ತ್ರಿಪಾದವನುಳ್ಳ ಆದಿ ಈಶ್ವರತತ್ವ ಉತ್ಪತ್ಯವಾಯಿತ್ತು.
ಆ ಆದಿ ಈಶ್ವರತತ್ವದಲ್ಲಿ ಪಂಚವಿಂಶತಿ ಮುಖ,
ಪಂಚದಶಭುಜವನುಳ್ಳ ಸದಾಶಿವತತ್ವ ಉತ್ಪತ್ಯವಾಯಿತ್ತು.
ಇದಕ್ಕೆ ಅತಿ ಮಹಾಗಮೇ :
''ಅಖಂಡಲಿಂಗ ಸಂಭೂತಾ ಅನಾದಿ ಸಾದಾಖ್ಯಸ್ತಥಾ ।
ಅನಾದಿ ವಿಶ್ವತೋಮುಖತತ್ವೇ ಚ ಅನಾದಿ ಈಶ್ವರೋದ್ಭವಃ ॥
ಅನಾದಿ ಈಶ್ವರತತ್ವೇ ಚ ಅನಾದಿ ಮಾಹೇಶ್ವರೋ ಭವೇತ್ ।
ಅನಾದಿ ಮಾಹೇಶ್ವರ ಶಂಭುತೊ ಆದಿ ಸದಾಖ್ಯ ಸ್ತಥಾ ॥
ಆದಿ ಸಾದಾಖ್ಯತತ್ವೇ ಚ ಆದಿ ಈಶ್ವರೋದ್ಭವಂ ।
ಆದಿ ಈಶ್ವರತತ್ವೇ ಚ ಆದಿ ಮಾಹೇಶ್ವರೋ ಭವೇತ್ ॥
ಆದಿ ಮಾಹೇಶ್ವರ ಶಂಭುತೊ ಶಿವಸದಾಶಿವಾಯುಪೋ ।
ಇತಿ ತತ್ವೋದ್ಭವಜ್ಞಾನಂ ದುರ್ಲಭಂ ಕಮಲಾನನೇ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೮ ॥

೨೩೯

ಪಂಚಮುಖ ದಶಭುಜವನುಳ್ಳ ಸದಾಶಿವನ ನಿರ್ಭಾವಮುಖದಲ್ಲಿ
ಆತ್ಮನುತ್ಪತ್ಯವಾಯಿತ್ತು.
ಆ ಸದಾಶಿವನ ಈಶಾನಮುಖದಲ್ಲಿ ಆಕಾಶ ಉತ್ಪತ್ಯವಾಯಿತ್ತು.
ಆ ಸದಾಶಿವನ ತತ್ಪುರುಷಮುಖದಲ್ಲಿ ವಾಯು ಉತ್ಪತ್ಯವಾಯಿತ್ತು.
ಆ ಸದಾಶಿವನ ಅಘೋರಮುಖದಲ್ಲಿ ಅಗ್ನಿ ಉತ್ಪತ್ಯವಾಯಿತ್ತು.
ಆ ಸದಾಶಿವನ ವಾಮದೇವಮುಖದಲ್ಲಿ ಅಪ್ಪು ಉತ್ಪತ್ಯವಾಯಿತ್ತು.
ಆ ಸದಾಶಿವನ ಸದ್ಯೋಜಾತಮುಖದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು.
ಆ ಸದಾಶಿವನ ಮನಸ್ಸಿನಲ್ಲಿ ಚಂದ್ರನುತ್ಪತ್ಯವಾಯಿತ್ತು.
ಆ ಸದಾಶಿವನ ಚಕ್ಷುವಿನಲ್ಲಿ ಸೂರ್ಯನುತ್ಪತ್ಯವಾದನು ನೋಡಾ.
ಇದಕ್ಕೆ **ಈಶ್ವರೋಽವಾಚ** :
''ಸದ್ಯೋಜಾತಸ್ತಥಾಭೂಮಿ ವಾಮದೇವೋದ್ಭವೇ ಜಲಂ ।
ಅಘೋರಾದ್ವಹ್ನಿರಿತ್ಯುಕ್ತಂ ತತ್ಪುರುಷಾದ್ವಾಯುರುಚ್ಯತೇ ॥
ಈಶಾನ್ಯದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ।
ಚಂದ್ರಮಾ ಮನಸೋಃ ಜಾತ ಚಕ್ಷುಃ ಸೂರ್ಯೋ ಅಜಾಯತ ।
ಆತ್ಮಾ ಗುಹ್ಯಮುಖಾಜ್ಜಾತಃ ಇತಿ ಭೇದಂ ವರಾನನೇ ॥''
ಇಂತೆಂದುದಾಗಿ,
ಇದಕ್ಕೆ **ಶ್ರೀಮಹಾದೇವ ಉವಾಚ** :
''ಭೂಜಲಾಗ್ನಿ ಮರುದ್ವ್ಯೋಮ ಭಾಸ್ಕರೋ ಶಶಿಶೇಖರಃ ।
ದಿವಿಪ್ರಕಾಶತೇ ಸೂರ್ಯಃ ರಾತ್ರೌ ಚಂದ್ರಃಪ್ರಕಾಶತೇ ।
ಸರ್ವಚೈತನ್ಯಮಾತ್ಮಾನಂ ಶಿವಾಂಶೋಽಷ್ಟಮೂರ್ತಯಃ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೩೯ ॥

೨೪೦

ಆ ಮಹಾಸದಾಶಿವತತ್ವದಲ್ಲಿ ಸದಾಶಿವನುತ್ಪತ್ಯವಾಗಿ
ಆಕಾಶಕ್ಕೆ ಅಧಿದೇವತೆಯಾಗಿಹನು.
ಆಕಾಶತತ್ವದಲ್ಲಿ ಏಕಶಿರ ದ್ವಿಭುಜ ತ್ರಿನೇತ್ರವನುಳ್ಳ
ಈಶ್ವರತತ್ವ ಉತ್ಪತ್ಯವಾಗಿ ವಾಯುವಿಂಗೆ ಅಧಿದೇವತೆಯಾಗಿಹನು.
ಆ ಈಶ್ವರತತ್ವದಲ್ಲಿ ಪಂಚಮುಖರುದ್ರನುತ್ಪತ್ಯವಾಗಿ
ಅಗ್ನಿಗೆ ಅಧಿದೇವತೆಯಾಗಿಹನು.
ಆ ಪಂಚಮುಖರುದ್ರನಲ್ಲಿ ಸಹಸ್ರಶಿರ ಸಹಸ್ರಾಕ್ಷ ಸಹಸ್ರಬಾಹು
ಸಹಸ್ರಪಾದವನುಳ್ಳ ವಿರಾಟ್‌ಪುರುಷನುತ್ಪತ್ಯವಾದನು.
ಆ ವಿರಾಟ್ಪುರುಷನಲ್ಲಿ ಏಕಶಿರ ದ್ವಿಭುಜವನುಳ್ಳ

ವಿಷ್ಣು ಉತ್ಪತ್ಯವಾಗಿ ಅಪ್ಪುವಿಗೆ ಅಧಿದೇವತೆಯಾಗಿಹನು.
ಆ ವಿಷ್ಣುವಿನಲ್ಲಿ ಚತುರ್ಮುಖಬ್ರಹ್ಮ ಉತ್ಪತ್ಯವಾಗಿ
ಪೃಥ್ವಿಗೆ ಅಧಿದೇವತೆಯಾಗಿಹನು.
ಆ ಬ್ರಹ್ಮನಲ್ಲಿ ಸರ್ವಜೀವಂಗಳುತ್ಪತ್ಯ ನೋಡಾ.
ಇದಕ್ಕೆ **ಕಾಲಾಗ್ನಿರುದ್ರಸಂಹಿತಾಯಾಂ** : ಶ್ರೀ ಮಹಾದೇವ ಉವಾಚ–
''ಪಂಚವಕ್ತ್ರಸದಾಖ್ಯಾನಾಂ ಈಶ್ವರಶ್ಚ ಸಜಾಯತೇ ।
ತಥಾ ಈಶ್ವರತತ್ವೇ ಚ ಕಾಲರುದ್ರ ಸಮುದ್ಭವಃ ।
ಪಂಚವಕ್ತ್ರಃ ಮಹಾರುದ್ರ ವಿರಾಟ್ಪುರುಷ ಜಾಯತೇ ।
ವಿರಾಟ್ಪುರುಷ ಮಹಾತತ್ವೇ ಆದಿ ವಿಷ್ಣುಸಮುದ್ಭವಃ ।
ವಿಷ್ಣುತತ್ವಾತ್‌ಮಹಾದೇವಿ ವಿರಿಂಚಿತತ್ವಃ ಜಾಯತೇ ।
ಚತುರ್ಮುಖಬ್ರಹ್ಮತತ್ವೇ ಸರ್ವಜೀವಸ್ತಥೋಸ್ತಥಾ ।
ಇತಿ ತತ್ತ್ವೋದ್ಭವಂ ಜ್ಞಾನಂ ದುರ್ಲಭಂ ಚ ವರಾನನೇ ॥''
ಇಂತೆಂದುದಾಗಿ,
ಇದಕ್ಕೆ **ಆನಂದಭೈರವಿ** :
''ಪೃಥ್ವೀ ಬ್ರಹ್ಮಾ ಜಲಂ ವಿಷ್ಣುಸ್ತಥಾ ರುದ್ರೋ ಹುತಾಶನಃ ।
ಈಶ್ವರೋ ಪವನೋ ದೇವಾಃ ಆಕಾಶಶ್ಚ ಸದಾಶಿವಃ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರ ಉವಾಚ** :
''ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ ।
ಭೂಮ್ಯಾದಿ ದೈವಮಿತ್ಯುಕ್ತಂ ಇತಿ ಭೇದಂ ವರಾನನೇ ॥''
ಇತೆಂದುದಾಗಿ,
ಅಪ್ರಮಾಣ ಕೂಡಲಸಂಗಮದೇವಾ. ॥ ೨೪೦ ॥

೨೪೧

ಇನ್ನು ವಿಶ್ವಾಧಿಕ ಮಹಾರುದ್ರನುತ್ಪತ್ಯವೆಂತೆಂದಡೆ :
ಅನಂತ ಬ್ರಹ್ಮಾಂಡ ಅನಂತ ಕೋಟಿ ಲೋಕಧರನಾದ
ಪರಾಪರನಾದ ಮಹಾಸದಾಶಿವನಾದವನು ತನ್ನ ನಿಜಜ್ಞಾನ ಹಿರಣ್ಯಗರ್ಭದಲ್ಲಿ
ವಿಶ್ವಾಧಿಕ ಮಹಾರುದ್ರನಂ ನಿರ್ಮಿಸಿ ತನ್ನ ಪಂಚಮುಖದಿಂದ
ಪೃಥ್ವಿ ತೇಜ ವಾಯುವಾಕಾಶವೆಂಬ ಮಹಾಭೂತ ಬ್ರಹ್ಮಾಂಡದೊಳು
ಚತುರ್ದಶ ಭುವನಂಗಳು, ಸಪ್ತಕುಲಪರ್ವತಂಗಳು ಮೊದಲಾದ
ಅನಂತ ಗಿರಿ ಗಹ್ವರಂಗಳಂ, ಸಮಸ್ತಗ್ರಹರಾಶಿ ತಾರಾಪಥಂಗಳಂ
ಗರ್ಭೀಕರಿಸಿಕೊಂಡು ನಿರ್ಮಿಸೆಂದು ಬೆಸನಂ ಕೊಟ್ಟು, ಕಳುಹಲು,
ಮಹಾಪ್ರಸಾದವೆಂದು ಕೈಕೊಂಡು
ಆ ಭೂತಬ್ರಹ್ಮಾಂಡದೊಳು ನಿರ್ಮಿಸಿದನೆಂತೆಂದಡೆ :

ಜಲದ ಮೇಲೆ ಕಮಠನ ನಿರ್ಮಿಸಿದ.
ಆ ಕಮಠನ ಮೇಲೆ ಮಹಾವಾಸುಗಿಯಂ ನಿರ್ಮಿಸಿದ.
ಆ ಮಹಾವಾಸುಗಿಯ ಮೇಲೆ ಅಷ್ಟದಿಗ್ಗಜಂಗಳ ನಿರ್ಮಿಸಿದನು
ಆ ವಿಶ್ವಾಧಿಕ ಮಹಾರುದ್ರನು. ಆ ಅಷ್ಟದಿಗ್ಗಜಂಗಳ ಮೇಲೆ
ಸಕಲವಾದ ಜೀವಂಗಳಿಗೂ ಸಕಲವಾದ ಪದಾರ್ಥಂಗಳಿಗೂ
ಇಹಂತಾಗಿ ಮಹಾಪೃಥ್ವಿಯಂ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಮಹಾಮೇರುಪರ್ವತದ ತಾವರೆಯ ನಡುವಣ ಪೀಠಿಕೆಯ ಕ್ರಮದಲ್ಲಿ
ನಡೆಯ ಪ್ರಮಾಣು ಹದಿನಾರು ಸಾವಿರದ ಯೋಜನ ಪ್ರಮಾಣು.
ಉದ್ದ ಎಂಬತ್ನಾಲ್ಕು ಸಾವಿರ ಯೋಜನದುದ್ದ.
ವಿಸ್ತೀರ್ಣ ಮೂವತ್ತೆರಡು ಸಾವಿರಯೋಜನ ಪ್ರಮಾಣು
ಉಂಟಾಗಿಹಂತಾಗಿ ಮೇರುತನಕ ಸುತಾಳ ತಾಳ,
ಪಂಚಾಶತಕೋಟಿ ಸೋಪಾನಂಗಳುಂಟಾಗಿ ದಿವ್ಯರೂಪಾಗಿ ನಿರ್ಮಿಸಿದನು.
ಆ ಮೇರುವಿನ ಪೂರ್ವದೆಸೆಯಲ್ಲಿ ಪದ್ಮರಾಗವು,
ಆಗ್ನೆಯಲ್ಲಿ ವಜ್ರ, ದಕ್ಷಿಣದಲ್ಲಿ ಮೌಕ್ತಿಕ,
ನೈರುತ್ಯಭಾಗದಲ್ಲಿ ನೀಲ, ಪಶ್ಚಿಮದ ದೆಸೆಯ ವಿಭಾಗದಲ್ಲಿ ವೈಡೂರ್ಯ,
ವಾಯುವ್ಯದಲ್ಲಿ ಚಿಂತಾಮಣಿ, ಉತ್ತರದಲ್ಲಿ ರತ್ನಕನಕ,
ಈಶಾನ್ಯದಲ್ಲಿ ತಾಮ್ರ, ಮೇರುವಿನ ಮಧ್ಯದಲ್ಲಿ ಪುಷ್ಯರಾಗ
ಜ್ಞಾನ ದೃಷ್ಟಿಗಳುಂಟಾಗಿ ಪರಿಪೂರಿತಗಳಿಹಂತಾಗಿ
ಗಿರಿಯ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಮೇರುವಿನ ಮೇಲುಳ್ಳ ವೃಕ್ಷಂಗಳೆಲ್ಲ ಕಲ್ಪವೃಕ್ಷಂಗಳು.
ಆ ಮೇರುವಿನ ಮೇಲುಳ್ಳ ಮೃಗಂಗಳೆಲ್ಲ ಅಚಾಮಚರಿತ್ರಂಗಳು.
ಆ ಮೇರುವಿನ ಮೇಲುಳ್ಳ ಗೋವೆಲ್ಲ ಕಾಮಧೇನುಗಳು.
ಅಲ್ಲಿದ್ದ ಮನುಷ್ಯರೆಲ್ಲ ಪರಮಾತ್ಮರು.
ಅಲ್ಲಿದ್ದ ಸ್ತ್ರೀಯರೆಲ್ಲ ದೇವಸ್ತ್ರೀಯರು.
ಆಹಾರಂಗಳೆಲ್ಲ ಅಮೃತಾಹಾರ, ನೀರೆಲ್ಲ ರಜಸ್ತಳೇಯ ;
ಅಲ್ಲಿಯ ಮಣ್ಣೆಲ್ಲ ಕಸ್ತೂರಿ ಕುಂಕುಮಾದಿಗಳೆನಿಸಿಕೊಂಬುದು.
ಅಲ್ಲಿಯ ಕಾಷ್ಠಂಗಳೆಲ್ಲ ಸುಗಂಧಂಗಳು.
ಆ ಮೇರುವಿನ ದೇವತೆಗಳಿಗೂ ಮುನಿಗಳಿಗೂ ಅನಂತ ಸಿದ್ಧರಿಗೂ
ಅನಂತ ಯೋಗಿಗಳಿಗೂ ಜೋಗಿಗಳಿಗೂ
ಪುರಂಗಳು ಗೃಹಂಗಳು ಗುಡಿಗಳು ಬಿಲದ್ವಾರಂಗಳುಂಟಾಗಿ
ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಮಹಾಮೇರುವಿಗೆ ನಾಲ್ಕು ಬಾಗಿಲು,
ಎಂಟು ಸ್ವರ್ಣಕಂಡಿಗಳು, ಹದಿನಾರು ಮಕರತೋರಣಗಳು,
ಮೂವತ್ತೆರಡು ಸೋಮವೀದಿಗಳು, ಅರವತ್ನಾಲ್ಕು ಸಂದುಗಳುಂಟಾಗಿ

ಸರ್ವಸಂಪೂರ್ಣವಾಗಿ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಮಹಾಮೇರುವಿನ ಮಧ್ಯದಲ್ಲಿ ಶ್ರೀ ಮಹಾದೇವರಿಗೆ
ಶಿವಪುರಮಂ ನಿರ್ಮಿಸಿದನು.
ಪಂಚಸಹಸ್ರಯೋಜನ ಚತುಃಚಕ್ರಾಕಾರವಾಗಿ,
ನವರತ್ನಖಚಿತವಾಗಿ, ಅಷ್ಟದಳವೇಷ್ಟಿತವಾಗಿ,
ಅಷ್ಟಧ್ವಾನಂಗಳುಂಟಾಗಿ, ಶತಸಹಸ್ರಕೋಟಿ ಕನಕಗೃಹಂಗಳುಂಟಾಗಿ.
ಪ್ರಮಥಗಣಂಗಳು, ನಂದಿ, ಮಹಾನಂದಿಕೇಶ್ವರ ಮಹಾಗಣಂಗಳು
ಅಷ್ಟದಿಕ್ಪಾಲರು, ಏಕಾದಶರುದ್ರರು, ದ್ವಾದಶಾದಿತ್ಯರು,
ನವಗ್ರಹಂಗಳು, ಬ್ರಹ್ಮ ವಿಷ್ಣು ನಾರದ ಸುಖದಲ್ಲಿಪ್ಪಂತಾಗಿ
ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಮೇರುವಿನ ಬಲದ ದೆಸೆಯಲ್ಲಿ ಬ್ರಹ್ಮಪುರವು
ತ್ರಿಕೋಣಾಕಾರವಾಗಿ ಅನಿಲಪ್ರಕಾರವೇಷ್ಟಿತವಾಗಿ,
ಅಷ್ಟದ್ವಾರಂಗಳುಂಟಾಗಿ ಐನೂರು ಕೋಟಿ ಕನಕಗೃಹಂಗಳು
ಅಸಂಖ್ಯಾತಕೋಟಿ ಮಹಾಋಷಿಗಳು ಒಡ್ಡೋಲಂಗಗೊಟ್ಟು,
ನಾಲ್ಕು ವೇದಂಗಳು ಮೂರ್ತಿಬಾಂಧವರಾಗಿ
ಸರಸ್ವತಿಸಮೇತವಾಗಿ ಬ್ರಹ್ಮದೇವರು
ಪರಮಾನಂದಸುಖದೊಳಿಪ್ಪಂತಾಗಿ ನಿರ್ಮಿಸಿದನು
ವಿಶ್ವಾಧಿಕಮಹಾರುದ್ರನು.
ಆ ಮೇರುವಿನ ವಾಮಭಾಗದಲ್ಲಿ ವಿಷ್ಣುವಿಂಗೆ ವೈಕುಂಠವೆಂಬ ಪುರ
ಚಕ್ರಾಕಾರವಾಗಿ ಪದ್ಮರಾಗಪ್ರಕಾಶವೇಷ್ಟಿತವಾಗಿ
ಅಷ್ಟದ್ವಾರಂಗಳು ಹತ್ತುನೂರುಕೋಟಿ ಕನಕಗೃಹಂಗಳುಂಟಾಗಿ
ಅನಂತಕೋಟಿ ಶಂಕ ಚಕ್ರ ಗದಾಹಸ್ತನಾಗಿ ವೇದ ಓಲೈಸಲಾಗಿ
ಶ್ರೀಲಕ್ಷ್ಮೀ ಸಮೇತನಾಗಿ ವಿಷ್ಣು ಪರಮಾನಂದಸುಖದಲ್ಲಿಪ್ಪಂತೆ
ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಮೇರುವಿನ ಪೂರ್ವದೆಸೆಯಲ್ಲಿ
ದೇವೇಂದ್ರಂಗೆ ಅಮರಾವತಿಯ ಪುರಮಂ ನಿರ್ಮಿಸಿದನು.
ಆಗ್ನೇಯ ದೆಸೆಯಲ್ಲಿ ಅಗ್ನಿದೇವಂಗೆ ತೇಜೋವತಿಪುರಮಂ ನಿರ್ಮಿಸಿದನು
ವಿಶ್ವಾಧಿಕಮಹಾರುದ್ರನು.
ದಕ್ಷಿಣದಿಶಾಭಾಗದಲ್ಲಿ ಯಮದೇವಂಗೆ
ಸಿಂಹಾವತಿಯ ಪುರಮಂ ನಿರ್ಮಿಸಿದನು.
ನೈಋತ್ಯ ದಿಶಾಭಾಗದಲ್ಲಿ ನೈಋತ್ಯಂಗೆ ಕೃಷ್ಣವತಿಪುರಮಂ ನಿರ್ಮಿಸಿದನು
ವಿಶ್ವಾಧಿಕಮಹಾರುದ್ರನು.
ಪಶ್ಚಿಮ ದಿಶಾಭಾಗದಲ್ಲಿ ವರುಣಂಗೆ ಜಂಜನಿತಪುರಮಂ ನಿರ್ಮಿಸಿದನು.
ವಾಯುವ್ಯದಲ್ಲಿ ವಾಯುವಿಂಗೆ ಗಂಗಾವತಿಯಪುರಮಂ ನಿರ್ಮಿಸಿದನು

ವಿಶ್ವಾಧಿಕಮಹಾರುದ್ರನು.
ಉತ್ತರದೆಶೆಯಲ್ಲಿ ಕುಬೇರಂಗೆ ಅಳಕಾಪುರಮಂ ನಿರ್ಮಿಸಿದನು.
ಈಶಾನ್ಯದಿಶಾಭಾಗದಲ್ಲಿ ಈಶಾನ್ಯದೇವಂಗೆ ಧವಳಾವತಿಪುರಮಂ ಮೊದಲಾಗಿ
ಸಮಸ್ತವಾದ ಪುರಗಳಂ ನಿರ್ಮಿಸಿದನು ವಿಶ್ವಾಧಿಯಕಮಹಾರುದ್ರನು.
ಆ ಮಹಾಮೇರುವಿಂಗೆ ವಳಯಾಕೃತವಾಗಿ
ಲವಣ ಇಕ್ಷು ಸುರೆ ಘೃತ ದಧಿ ಕ್ಷೀರ ಶುದ್ಧಜಲಂಗಳೆಂಬ
ಸಪ್ತಸಮುದ್ರಂಗಳಂ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ಸಮುದ್ರಂಗಳ ನಡುವೆ ಜಂಬೂದ್ವೀಪ, ಪ್ಲಕ್ಷದ್ವೀಪ,
ಶುಕ್ಲದ್ವೀಪ, ಕುಶದ್ವೀಪ, ಶಾಕದ್ವೀಪ, ಶಾಲ್ಮಲೀದ್ವೀಪ,
ಪುಷ್ಕರದ್ವೀಪ, ಕ್ರೌಂಚದ್ವೀಪವೆಂಬ
ಸಪ್ತದ್ವೀಪಂಗಳ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ದ್ವೀಪಂಗಳಿಗೆ ವಳಯಾಕೃತವಾಗಿ
ಮಲಯಜಪರ್ವತ, ನೀಲಪರ್ವತ,
ಶ್ವೇತಪರ್ವತ, ಋಕ್ಷಪರ್ವತ, ರಮ್ಯಪರ್ವತ,
ಉತ್ತರಕುರುಪರ್ವತ, ಸುಗಂಧಪರ್ವತ, ನಿರಾಕಾರಪರ್ವತ,
ಉದಾರಪರ್ವತ, ಮಣಿಶಿಖರಪರ್ವತ, ಅರ್ಧಚಂದ್ರಪರ್ವತ,
ಮಧುರಪರ್ವತ, ಮಣಿನಾಗಪರ್ವತ, ಮೈನಾಕಪರ್ವತ,
ಉದಯಾದ್ರಿಪರ್ವತ, ತ್ರಿಪುರಾಂತಕಪರ್ವತ, ಶ್ರೀರಾಮಪರ್ವತ,
ಮಾಲ್ಯವಂತಪರ್ವತ, ನಿಷಧಪರ್ವತ, ಹೇಮಕೂಟಪರ್ವತ,
ನಿರಾಚಲಪರ್ವತ, ಗಂಧಾಚಲಪರ್ವತ,
ನೀಲಾಚಲಪರ್ವತ, ಮಂದಾಚಲಪರ್ವತ, ಮೇರುಮಂದಿರಪರ್ವತ,
ಶುಬರೀಶ್ವರಪರ್ವತ, ಕುಮುದಉದಯಾದ್ರಿ, ದೇವಕೂಟ, ವಿಂಧ್ಯಾಚಲ,
ಪವನಾಚಲ, ಪರಿಯಾಚಲ, ಚಂದ್ರಾಚಲ, ಧಾರಾಚಲ, ಷಡುಲಕ್ಷ್ಮಿಗಿರಿ,
ಮಾನಸಾಂತಗಿರಿ, ತಮಂಧಗಿರಿ, ಚಂದ್ರಗಿರಿ, ನಾಗಗಿರಿ, ಲಘುಗಿರಿ,
ಮಕರಗಿರಿ, ದ್ರೋಣಗಿರಿ, ಅನಂತವಜ್ರಗಿರಿ, ಕಪಿಲಗಿರಿ, ನೀಲಗಿರಿ,
ಪರಗಿರಿ, ತ್ರಿಪುರಗಿರಿ, ಸಿಂಹಗಿರಿ, ಶ್ರೀಕಂಠಗಿರಿ, ಚಕ್ರವಾಳಗಿರಿಪರ್ವತ,
ಇಂದ್ರಗಿರಿಪರ್ವತ, ಲೋಕಪರ್ವತಂಗಳು ಮೊದಲಾದ
ಪರ್ವತಂಗಳೆಲ್ಲವಂ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಇದಕ್ಕೆ ದೇಶಂಗಳಾಗಬೇಕೆಂದು
ಪಾಂಚಾಲ, ಬರ್ಬರ, ಮತ್ಸ್ಯ, ಮಗಧ, ಮಲೆಯಾಳ,
ತೆಲುಂಗ, ಕಳಿಂಗ, ಕುಕರ, ಕೊಂಕಣ, ತ್ರಿಕರರಾಷ್ಟ್ರ,
ಶ್ವಾಸಿನಿ, ಕಂಠರಹಿತ, ಕುತಿಷ್ಪ, ದಶಾರ್ಣ, ಕುರು,
ಮುಖಸರ, ಕೌಸಯಿವರ್ಣ, ಆವಂತಿ, ಲಾಳ,
ಮಹೇಂದ್ರ, ಪಾಂಡ್ಯ, ಸರ್ವೇಶ್ವರ, ವಿಷ್ಣು

ಶಾಂತಕ, ತುರಾದ್ರ, ಮಗಧಾದ್ರ,
ವಿದೇಹ, ಮಗಧ, ದ್ರವಿಳ, ಕಿರಾಂತ, ಕುಂತಳ, ಕಾಮೀರ, ಗಾಂಧಾರ,
ಕಾಂಭೋಜ, ಕೀಳುಗುಜ್ಜರ, ಅತಿದೃಷ್ಟ, ನೇಪಾಳ, ಬಂಗಾಳ,
ಪುಳಿಂದ್ರ, ಜಾಳೇಂದ್ರ, ಕಲ್ಪರ–ಇಂಥಾ ದೇಶಂಗಳೆಲ್ಲವಂ
ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಇನ್ನು ಭೂಮಿಯಿಂದಂ ಮೇಲೆ ಮೇಘಮಂಡಲ ಮೊದಲಾಗಿ
ಶಿವಾಂಡ ಚಿದ್ಬ್ರಹ್ಮಾಂಡ ಕಡೆಯಾಗಿ ಎಲ್ಲಾ ಲೋಕಂಗಳಂ ನಿರ್ಮಿಸಿ,
ಸಪ್ತಪಾತಾಳವ ನಿರ್ಮಿಸಿದನದೆಂತೆಂದಡೆ:
ಅಲ್ಲಿ ಪೃಥ್ವಿಯ ಕೆಳಗೆ ಶತಕಯೋಜನದಲ್ಲಿ
ಅತಳಲೋಕದಲ್ಲಿ ಇಶಿತಮಂಡಲಮಂ ನಿರ್ಮಿಸಿದನು.
ಅತಳಲೋಕದಿಂದಂ ಕೆಳಗೆ ಕೋಟಿಯೋಜನದುದ್ದದಲ್ಲಿ
ವಿತಳಲೋಕದಲ್ಲಿ ಸ್ವರ್ಣ ನಾಗಮಂಡಲಮಂ ನಿರ್ಮಿಸಿದನು
ವಿಶ್ವಾಧಿಕಮಹಾರುದ್ರನು.
ಆ ವಿತಳಲೋಕದಿಂದಲು ಕೆಳಗೆ ದ್ವಿಕೋಟಿ ಯೋಜನದುದ್ದದಲ್ಲಿ
ಸುತಳತೋಲಕದಲ್ಲಿ ಕೃಷ್ಣನಾಗಮಂಡಲಮಂ ನಿರ್ಮಿಸಿದನು.
ಆ ಸುತಳಲೋಕದಿಂದಲು ಕೆಳಗೆ ರಸಾತಳಲೋಕದಲ್ಲಿ
ರತ್ನನಾಗಮಂಡಲಮಂ ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ರಸಾತಳಲೋಕದಿಂದಲು ಕೆಳಗೆ ಚತುಃಕೋಟಿ ಯೋಜನದುದ್ದದಲ್ಲಿ
ಮಹಾತಳಲೋಕದಿಂದಲು ಕೆಳಗೆ ಶತಕೋಟಿ ಯೋಜನದುದ್ದದಲ್ಲಿ
ಪಾತಾಳಲೋಕದಲ್ಲಿ ಅವಿಷ್ಟಕೆ ಆಧಾರವಾಗಿ ಕಮಠನಂ ನಿರ್ಮಿಸಿದನು
ವಿಶ್ವಾಧಿಕಮಹಾರುದ್ರನು.
ಆ ಕಮಠನ ಮೇಲೆ ಜಲಂಗಳಂ, ಕಮಲಂಗಳಂ,
ಮಹಾಪೃಥ್ವಿಯಂ, ಮೇರುಪರ್ವತ ಸಮಸ್ತದೇವಾಸುರಂಗಳಂ
ಮಹಾಪೃಥ್ವಿಯು ಸಮಸ್ತ ಸಪ್ತಸಮುದ್ರಂಗಳಂ,
ಸಪ್ತದ್ವೀಪಂಗಳಂ ಮೊದಲಾದ ಲೋಕಾದಿಲೋಕ ಪರ್ವತಂಗಳ
ನಿರ್ಮಿಸಿದನು ವಿಶ್ವಾಧಿಕಮಹಾರುದ್ರನು.
ಆ ವಿತಳಲೋಕದಿಂದಲೂ ಕೆಳಗೆ ದ್ವಿಕೋಟಿ ಯೋಜನದುದ್ದದಲ್ಲಿ
ಅತಳ ವಿತಳ ಸುತಳ ರಸಾತಳ ತಳಾತಳ ಮಹಾತಳ ಪಾತಾಳ
ಭೂಲೋಕ, ಭುವರ್ಲೋಕ, ಸ್ವರ್ಲೋಕ,
ಮಹರ್ಲೋಕ, ಜನರ್ಲೋಕ, ತಪರ್ಲೋಕ, ಸತ್ಯರ್ಲೋಕ–ಇಂಥ
ಲೋಕಂಗಳೆಂಬ ಹದಿನಾಲ್ಕು ಲೋಕಂಗಳಂ ನಿರ್ಮಿಸಿ
ಮತ್ತೆ ಸ್ವರ್ಗ–ಮರ್ತ್ಯ–ಪಾತಾಳಗಳ ವಿವರಿಸಿ ನೋಡಿ
ಆ ಲೋಕದವರಿಗೆ ವೇದಶಾಸ್ತ್ರಂಗಳಂ ನಿರ್ಮಿಸಿದನದೆಂತೆಂದಡೆ :
ವೇದ ವೇದಾಂಗ, ಮಂತ್ರಶಾಸ್ತ್ರ, ತರ್ಕಶಾಸ್ತ್ರ, ಯೋಗಶಾಸ್ತ್ರ,

ಜ್ಯೋತಿಷ್ಯಶಾಸ್ತ್ರ, ವೈದ್ಯಶಾಸ್ತ್ರ, ನೀತಿಶಾಸ್ತ್ರ, ಧರ್ಮಶಾಸ್ತ್ರ, ಶಕುನಶಾಸ್ತ್ರ,
ಶಸ್ತ್ರಶಾಸ್ತ್ರ, ಶಿಲ್ಪಶಾಸ್ತ್ರ, ಜಲಶಾಸ್ತ್ರ, ಸಾಮುದ್ರಿಕಶಾಸ್ತ್ರ,
ನೃಪತಿಶಾಸ್ತ್ರ, ಅಂಜನಶಾಸ್ತ್ರ, ರಸವೈದ್ಯಶಾಸ್ತ್ರ, ಬಿಲ್ಲುಶಾಸ್ತ್ರ,
ಗೋಪಶಾಸ್ತ್ರ, ಮನುಷ್ಯಶಾಸ್ತ್ರ, ರಥಿಕಶಾಸ್ತ್ರ, ಅಂಗುಲಿಶಾಸ್ತ್ರ,
ಶ್ರವಣಶಾಸ್ತ್ರ, ಗಂಧಪಾದ್ಯಶಾಸ್ತ್ರ, ಭುಜಗಶಾಸ್ತ್ರ, ಯೋಗಿಣಿಶಾಸ್ತ್ರ,
ಯಕ್ಷಿಣಿಶಾಸ್ತ್ರ, ಶಬ್ದನೀತಿಶಾಸ್ತ್ರ, ಅಲಂಕಾರಶಾಸ್ತ್ರ, ವಿಶ್ವಶಾಸ್ತ್ರ,
ಗಂಡಶಾಸ್ತ್ರ, ವ್ಯಾಧಿಶಾಸ್ತ್ರ, ಯುದ್ಧಶಾಸ್ತ್ರ, ಹಸರಶಾಸ್ತ್ರ,
ಶುಂಭನಶಾಸ್ತ್ರ, ಮುಖಶಾಸ್ತ್ರ, ಬಂಧಶಾಸ್ತ್ರ, ಜಲಸ್ತಂಭಶಾಸ್ತ್ರ,
ಅಗ್ನಿಶಾಸ್ತ್ರ, ಕರ್ಮಶಾಸ್ತ್ರ, ಪುರಾಣಿಕಶಾಸ್ತ್ರ, ಇಂಗಶಾಸ್ತ್ರ,
ವೈದ್ಯಶಾಸ್ತ್ರ, ಇಂದ್ರಜಾಲ, ಮಹೇಂದ್ರಜಾಲ ಶಾಸ್ತ್ರಂಗಳು ಮೊದಲಾದ
ಚೌಷಷ್ಠಿ ವಿದ್ಯಂಗಳ ನಿರ್ಮಿಸಿದನು ನೋಡಾ
[ಅಪ್ರಮಾಣ] ಕೂಡಲಸಂಗಯ್ಯನ ಶರಣ ವಿಶ್ವಾಧಿಕಮಹಾರುದ್ರನು.
|| ೨೪೧ ||

೨೪೨

ಇನ್ನು ಬ್ರಹ್ಮಾಂಡಕಪಾಲದೊಳಗಣ ಸೃಷ್ಟಿಯ ವಿಸ್ತೀರ್ಣವದೆಂತೆಂದಡೆ :
ಆ ಭುವನಂಗಳು ಇಹ ಕ್ರಮವೆಂತೆಂದಡೆ :
ಬ್ರಹ್ಮಾಂಡಕಪಾಲ ಸಹಸ್ರಕೋಟಿ ಯೋಜನ ಪ್ರಮಾಣು.
ಅದರೊಳಗಾಗಿ ಅತಳಲೋಕ ಇಪ್ಪತ್ತೊಂದುಕೋಟಿ ಯೋಜನದಲ್ಲಿ
ಶಿವನ ಆಜ್ಞಾಶಕ್ತಿಯಿಂದ ಆಧಾರಶಕ್ತಿ ಇಹಳು.
ಆ ಆಧಾರಶಕ್ತಿಯ ಉದ್ದ ಗಾತ್ರದೊಳಗಾಗಿ
ಐದು ಸಾವಿರಕೋಟಿ ಯೋಜನದಲ್ಲಿ ವಿತಳಲೋಕವಿಹುದು.
ಆ ವಿತಳಲೋಕ ಆರುಸಾವಿರಕೋಟಿ ಯೋಜನಪ್ರಮಾಣು.
ಆ ವಿತಳಲೋಕದ ಮೇಲೆ ಐದುಸಾವಿರಕೋಟಿ ಯೋಜನದಲ್ಲಿ
ಸುತಳಲೋಕವಿಹುದು.
ಆ ಸುತಳಲೋಕ ಅಗ್ನಿ ಜ್ವಾಲೆಯಾಗಿಹುದು.
ಆ ಸುತಳಲೋಕದೊಳು ಕಾಲಾಗ್ನಿ ರುದ್ರರಿಹರು.
ಆ ಸುತಳಲೋಕದ ಮೇಲೆ ಐದುಸಾವಿರಕೋಟಿಯೋಜನದಲ್ಲಿ
ರಸಾತಳಲೋಕವಿಹುದು.
ಆ ರಸಾತಳಲೋಕ ಬಯಲಾಗಿಹುದು.
ಆ ರಸಾತಳಲೋಕದ ಮೇಲೆ ಐದುಸಾವಿರಕೋಟಿಯೋಜನದಲ್ಲಿ
ತಳಾತಳಲೋಕವಿಹುದು.
ಆ ತಳಾತಳಲೋಕ ಮಹಾಗ್ನಿ ಜ್ವಾಲೆಯಾಗಿಹುದು.
ಆ ತಳಾತಳಲೋಕದ ಮೇಲೆ ಮಹಾತಳಲೋಕವಿಹುದು.

ಆ ಮಹಾತಳಲೋಕದ ಮೇಲೆ ಪಾತಾಳಲೋಕವಿಹುದು.
ಆ ಪಾತಾಳಲೋಕ ಎಂಬತ್ತು ಸಾವಿರ ಕೋಟಿ ಯೋಜನ ಭೂಮಿಯಮೇಲೆ
ಜಲಮಯವಾಗಿಹುದು.
ಆ ಜಲಮಯವಾಗಿಹ ಪಾತಾಳಲೋಕವು
ಆಧಾರಶಕ್ತಿಯ ಆಜ್ಞೆಯಿಂದ ಹದಿನಾರು ದಿಕ್ಕುಗಳಲ್ಲಿಯೂ
ಹದಿನಾರುಮಹಾಭೂತಂಗಳು ಸುತ್ತಿಹವು.
ಹದಿನಾರುಭೂತಗಣಂಗಳ ನಡುವೆ ಕೂರ್ಮಾಂಡನೆಂಬ ಮಹಾಕೂರ್ಮನ
ಅಗಲವದೆಂತೆಂದಡೆ :
ಐದುಸಾವಿರಕೋಟಿ ವಿಸ್ತೀರ್ಣದಗಲ ನೋಡಾ.
ಆ ಕೂರ್ಮಾಂಡನೆಂಬ ಮಹಾಕೂರ್ಮನ ಉದ್ದ
ಹದಿನೆಂಟುಸಾವಿರಕೋಟಿಯೋಜನ ಪರಿಪ್ರಮಾಣುದ್ದದ ಬೆನ್ನ ಮೇಲೆ
ಶತಕೋಟಿಯೋಜನ ಪರಿಪ್ರಮಾಣುದ್ದದ ಭೂಮಿಯ ಮೇಲೆ
ಐನೂರು ಶಿರಸ್ಸನುಳ್ಳ ಶೇಷನು, ನಾಲ್ವತ್ತುಸಾವಿರ ಶೇಷನು
ವಳಯಾಕೃತವಾಗಿ ಸುತ್ತಿರಲು,
ಆ ನಾಲ್ವತ್ತುಸಾವಿರ ಶೇಷನ ಒಳಯಾಕೃತದಲ್ಲಿ,
ಮಧ್ಯದಲ್ಲಿ ಶೇಷಾಹಿಯೆಂಬ ಮಹಾನಾಗ ಇಪ್ಪುದು.
ಆ ಶೇಷಾಹಿಯೆಂಬ ಮಹಾನಾಗವು ಎಂಟುಸಾವಿರಕೋಟಿ
ಯೋಜನಪ್ರಮಾಣು ನೀಳವು.
ಹತ್ತುಸಾವಿರಕೋಟಿ ಸುತ್ತು ವಿಸ್ತೀರ್ಣವು.
ಐದುಸಾವಿರ ಕೋಟಿ ಅಗಲದ ಹೆಡೆಯು.
ಸ್ವರ್ಗ ಜ್ಯೋತಿಪ್ರಕಾಶದ ದೇಹವನುಳ್ಳುದಾಗಿ,
ಸಹಸ್ರ ಶಿರ, ದ್ವಿಸಹಸ್ರಾಕ್ಷವು.
ಆ ಸಹಸ್ರ ಶಿರದಲ್ಲಿ ಮಾಣಿಕ್ಯದ ಬಟ್ಟುಗಳ ಧರಿಸಿಕೊಂಡು
ಮಹಾಗ್ನಿಜ್ವಾಲೆಯನುಳ್ಳ ಮಹಾಶೇಷನಿಹನು.
ಐನೂರು ಶಿರಸ್ಸನುಳ್ಳ ಶೇಷ ನೂರುನಾಲ್ವತ್ತುಸಾವಿರ ಶೇಷನ
ಸುತ್ತುವಳಯಾಕೃತವಾಗಿ ಅಷ್ಟದಿಗ್ಗಜಂಗಳಿಹವು.
ಆ ಅಷ್ಟದಿಗ್ಗಜಂಗಳ ಮೇಲೆ ವಿಸ್ತೀರ್ಣ
ಒಂದೊಂದು ಗಜಂಗಳು ನವಕೋಟಿಯೋಜನಪ್ರಮಾಣದುದ್ದವು,
ಸಾವಿರಕೋಟಿಯೋಜನಪ್ರಮಾಣದಗಲವು,
ಶತಕೋಟಿಸಾವಿರಯೋಜನಪ್ರಮಾಣದ ನೀಳವನುಳ್ಳುದಾಗಿ
ಅಷ್ಟದಿಕ್‌ಮಹಾಗಜಂಗಳಿಹವು.
ಆ ಅಷ್ಟದಿಕ್‌ಮಹಾಗಜಂಗಳು ಆಧಾರವಾಗಿ
ಭೂಲೋಕವಿಹುದು.
ಆ ಭೂಲೋಕ ಮೊದಲಾಗಿ ಕೆಳಗಿನಂಡಬ್ರಹ್ಮಾಂಡಕಪಾಲ ಕಡೆಯಾಗಿ

ಅರುವತ್ತುಸಾವಿರಕೋಟಿಯೋಜನ ಪರಿಪ್ರಮಾಣು.
ಆ ಭುವರ್ಲೋಕವು ಸಾವಿರಕೋಟಿಯೋಜನಪರಿಪ್ರಮಾಣು ಉದ್ದ
ಕಬ್ಬುಣವಾಗಿಹುದು.
ಸಾವಿರಕೋಟಿಯೋಜನಪರಿಪ್ರಮಾಣು ಉದ್ದ ಮಣ್ಣಾಗಿಹುದು.
ಇದು ಮಧ್ಯಭೂಮಿ. ಈ ಮಧ್ಯಭೂಮಿ ಅಜಲಮಯವಾಗಿ
ಉತ್ತರ–ದಕ್ಷಿಣ ಶತಸಹಸ್ರಕೋಟಿಯೋಜನಪರಿಪ್ರಮಾಣು.
ಸುತ್ತ ಅಗಲ ಮುನ್ನೂರರುವತ್ತುಕೋಟಿಯೋಜನಪರಿಪ್ರಮಾಣು.
ದಕ್ಷಿಣ–ಉತ್ತರ ಸಮುದ್ರ ತೊಡಗಿ ಉತ್ತರ ಹಿಮವತ್ಪರ್ವತ.
ಇದಕ್ಕೆ ಹೆಸರು ಭರತವರುಷ.
ಈ ಹಿಮವತ್ಪರ್ವತವು ಉತ್ತರ ದಕ್ಷಿಣ ಇಪ್ಪತ್ತುಸಾವಿರ ಯೋಜನಪ್ರಮಾಣು.
ಕೆಳಗೆ ಮೇಲೆ ಇಪ್ಪತ್ತುಸಾವಿರಯೋಜನಪ್ರಮಾಣು.
ಮೇಲುದ್ದವು ಎಂಬತ್ತೈದುಸಾವಿರಯೋಜನಪ್ರಮಾಣು.
ಉತ್ತರ ಸಮುದ್ರಕ್ಕೆ ದಕ್ಷಿಣ ಉತ್ತರ ಸಾವಿರಕೋಟಿ ಯೋಜನದಲ್ಲಿ
ವಿಂಧ್ಯಪರ್ವತವಿಹುದು.
ಆ ವಿಂಧ್ಯಪರ್ವತದ ಮೇಲುದ್ದವು ತೊಂಬತ್ತೂರುಸಾವಿರ,
ದಕ್ಷಿಣ ಉತ್ತರ ಮೂವತ್ತುಸಾವಿರಯೋಜನಪ್ರಮಾಣು.
ಕೆಳಗು ಮೇಲು ಮೂವತ್ತುಸಾವಿರಯೋಜನಪ್ರಮಾಣು.
ಆ ವಿಂಧ್ಯಪರ್ವತದ ಮೇಲುದ್ದವು
ತೊಂಬತ್ತುನೂರುಸಾವಿರಯೋಜನ ಪ್ರಮಾಣು.
ಪಶ್ಚಿಮದೆಸೆಯ ಸಮುದ್ರದಲ್ಲಿಹ ಅಸ್ತಮಾನಪರ್ವತ.
ಆ ಪರ್ವತ ದಕ್ಷಿಣ–ಉತ್ತರ ಮೂವತ್ತೈದುಸಾವಿರ ಯೋಜನಪ್ರಮಾಣು.
ಆ ಪರ್ವತದ ಕೆಳಗು ಮೇಲು ಮೂವತ್ತೈದುಸಾವಿರ ಯೋಜನಪ್ರಮಾಣು.
ಆ ಪರ್ವತದ ಮೇಲುದ್ದವು ತೊಂಬತ್ತುಸಾವಿರ ಯೋಜನಪ್ರಮಾಣು
ಭೂಮಿಗೆ ನಡುವಾಗಿ ಮಹಾಮೇರುಪರ್ವತವಿಹುದು.
ಆ ಮೇರುಪರ್ವತದ ಉತ್ತರ ದಕ್ಷಿಣ ಹದಿನಾರುಸಾವಿರ
ಯೋಜನಪ್ರಮಾಣು.
ಆ ಮೇರುಪರ್ವತದ ಮೇಲುದ್ದವು ಸಾವಿರಕೋಟಿಯ ಮೇಲೆ
ನೂರುಸಾವಿರದ ಎಂಬತ್ತುನಾಲ್ಕುಸಾವಿರ ಯೋಜನಪ್ರಮಾಣು.
ಭೂಮಿಯಲ್ಲಿ ಹೂಳಿಹುದು
ಎಂಬತ್ತುನಾಲ್ಕುಸಾವಿರಕೋಟಿ ಯೋಜನ ಪ್ರಮಾಣು.
ಆ ಮಹಾಮೇರುವಿನ ಪೂರ್ವದಿಕ್ಕಿನಲ್ಲಿ ಮಂದರಪರ್ವತವಿಹುದು.
ಅಲ್ಲಿಹ ವೃಕ್ಷ ಕದಂಬವೃಕ್ಷ.
ಆ ಮಹಾಮೇರುವಿನ ದಕ್ಷಿಣದಿಕ್ಕಿನಲ್ಲಿ ಗಂಧಮಾದನಪರ್ವತವಿಹುದು.
ಅಲ್ಲಿಹ ವೃಕ್ಷ ಜಂಬೂವೃಕ್ಷ.

ಆ ಮಹಾಮೇರುವಿನ ನೈಋತ್ಯದಿಕ್ಕಿನಲ್ಲಿ ನೀಲಗಿರಿಪರ್ವತವಿಹುದು.
ಅಲ್ಲಿಹ ವೃಕ್ಷ ಭೂದಳವೃಕ್ಷ.
ಆ ಮಹಾಮೇರುವಿನ ಪಶ್ಚಿಮದಿಕ್ಕಿನಲ್ಲಿ ಕಾಶೀಪರ್ವತವಿಹುದು.
ಅಲ್ಲಿಹ ವೃಕ್ಷ ಬಿಲ್ವದ ವೃಕ್ಷ.
ಆ ಮಹಾಮೇರುವಿನ ವಾಯುವ್ಯದಿಕ್ಕಿನಲ್ಲಿ ನೀಲಪರ್ವತವಿಹುದು.
ಅಲ್ಲಿಹ ವೃಕ್ಷ ಬ್ರಹ್ಮವೃಕ್ಷ.
ಆ ಮಹಾಮೇರುವಿನ ಉತ್ತರದಿಕ್ಕಿನಲ್ಲಿ ಮಧುರಾದ್ರಿಪರ್ವತವಿಹುದು.
ಅಲ್ಲಿಹ ವೃಕ್ಷ ವಟವೃಕ್ಷ.
ಆ ಮಹಾಮೇರುವಿನ ಈಶಾನ್ಯದಿಕ್ಕಿನಲ್ಲಿ ಕಪಿಲ ಮಹಾಪರ್ವತವಿಹುದು.
ಅಲ್ಲಿಹ ವೃಕ್ಷ ಶಾಕಾಫಲವೃಕ್ಷ.
ಸಪ್ತಕುಲಪರ್ವತಂಗಳು ಒಂದೊಂದು ಬಗೆ ಹತ್ತುಸಾವಿರ
ಯೋಜನಪ್ರಮಾಣು.
ಆ ಸಪ್ತಕುಲಪರ್ವತಂಗಳೊಂದೊಂದಿಗೆ ಐದುಸಾವಿರ ಯೋಜನಪ್ರಮಾಣು.
ಈ ಸಪ್ತಕುಲಪರ್ವತಂಗಳ ನಡುವೆ ಮಹಾಮೇರುಪರ್ವತವಿಹುದು.
ಆ ಮೇರುಪರ್ವತದ ತುದಿಯಲ್ಲಿ ಪಂಚಸಹಸ್ರಯೋಜನದಗಲ
ಚುತುಃಚಕ್ರಾಕಾರವಾಗಿ
ಅಷ್ಟದಳವೇಷ್ಟಿತವಾಗಿ ಅಷ್ಟಧಾನ್ಯಂಗಳುಂಟಾಗಿಹಂತೆ
ಶತಸಹಸ್ರಕೋಟಿ ಕನಕಗೃಹಂಗಳುಂಟಾಗಿ
ನವರತ್ನಖಚಿತವಾಗಿ ಪ್ರಮಥಗಣಂಗಳು
ನಂದಿ, ಮಹಾನಂದಿಕೇಶ್ವರಗಣಂಗಳು, ಅಷ್ಟದಿಕ್ಪಾಲರು,
ಏಕಾದಶರುದ್ರರು, ದ್ವಾದಶಾದಿತ್ಯರು, ನವಗ್ರಹಂಗಳು,
ಬ್ರಹ್ಮ ವಿಷ್ಣು ನಾರದರಿಂ ಸುಖಂಗಳಲಿಪ್ಪಂತಾಗಿ ಶಿವಪುರವಿಹುದು.
ಆ ಶಿವಪುರದೊಳು ಸಿಂಹಾಸನಾರೂಢನಾಗಿ ಮಹಾರುದ್ರಮೂರ್ತಿ ಇಹನು.
ಆ ಮಹಾರುದ್ರಮೂರ್ತಿಯ ಚಂದ್ರಾದಿತ್ಯರು, ನಕ್ಷತ್ರ ನವಗ್ರಹಂಗಳು
ಮೊದಲಾಗಿ ಎಲ್ಲಾ ದೇವರ್ಕಳು ಪ್ರದಕ್ಷಣಬಹರು.
ಯಕ್ಷ ಕಿನ್ನರ ಗಂಧರ್ವ ಸಿದ್ಧ ವಿದ್ಯಾಧರ
ಬ್ರಹ್ಮ ವಿಷ್ಣು ಇಂದ್ರಾದಿ ದೇವರ್ಕಳೆಲ್ಲರು
ಒಡ್ಡೋಲಗಂಗೊಟ್ಟಿರಲು ಎಲ್ಲ ಲೋಕಕ್ಕೂ ಸಾಕ್ಷೀಭೂತನಾಗಿ
ಆ ಮಹಾರುದ್ರಮೂರ್ತಿ ಇಹನು.
ಆ ಮಹಾಮೇರುವಿನ ದಕ್ಷಿಣದ ಕೆಳಗಣ ಪಾರ್ಶ್ವದಲ್ಲಿ
ಚಿಕ್ಕದೊಂದು ಕೋಡು.
ಆ ಕೋಡಿನಲ್ಲಿ ಕಲ್ಪವೃಕ್ಷವಿಹುದು.
ಆ ದಕ್ಷಿಣ ಕೋಡಿನಲ್ಲಿ ಜಂಬೂವೃಕ್ಷದ ಹಣ್ಣಿನ ರಸ ಸೋರಿ
ಜಾಂಬೋಧಿಯೆಂಬ ಮಹಾನದಿ ಹರಿಯುತ್ತಿಹುದು.

ಆ ನೀರ ಸೇವಿಸಿದವರು ಸ್ವರ್ಣವರ್ಣವಹರು.
ಆ ನೀರು ಹರಿದ ಠಾವೆಲ್ಲ ಸ್ವರ್ಣಬೆಳೆಭೂಮಿ.
ಆ ಭೂಮಿಗೆ ಉತ್ತರ ಪೂರ್ವವಾಗಿ ಶ್ರೀ ಕೈಲಾಸಪರ್ವತವಿಹುದು.
ಆ ಕೈಲಾಸಪರ್ವತ ಏಳು ನೆಲೆಯಾಗಿ
ರತ್ನಮಯವಾಗಿ ಅನಂತ ಕೋಡುಗಳುಂಟಾಗಿಹುದು.
ಆ ಕೈಲಾಸಪರ್ವತವು ಉತ್ತರ ದಕ್ಷಿಣ
ಹದಿನಾರುಸಾವಿರಕೋಟಿಯೋಜನ ಪರಿಪ್ರಮಾಣು.
ಆ ಕೈಲಾಸಪರ್ವತದ ಮೇಲುದ್ದವು ಸಾವಿರಕೋಟಿ
ನೂರುಸಾವಿರದ ಮೇಲೆ ಎಂಬತ್ತುನಾಲ್ಕುಸಾವಿರ ಯೋಜನಪ್ರಮಾಣು.
ಭೂಮಿಯಲ್ಲಿ ಹೂಳಿಹುದು
ಎಂಬತ್ತುನಾಲ್ಕುಸಾವಿರಕೋಟಿ ಯೋಜನ ಪ್ರಮಾಣು.
ಆ ಕೈಲಾಸಪರ್ವತದ ತುದಿಯಲ್ಲಿ
ಶಿವಪುರದ ವಿಸ್ತೀರ್ಣ ಪಂಚಸಹಸ್ರ ಯೋಜನದಗಲ.
ಚತುಷ್ಪ್ರಾಕಾರವಾಗಿ ನವರತ್ನಖಚಿತವಾಗಿ
ಅಷ್ಟದಳವೇಷ್ಟಿತವಾಗಿ ಅಷ್ಟಧಾನ್ಯಂಗಳುಂಟಾಗಿಹಂತೆ
ಶತಸಹಸ್ರಕೋಟಿ ಕನಕಗೃಹಂಗಳುಂಟಾಗಿ
ಪ್ರಮಥಗಣಂಗಳು, ನಂದಿ ಮಹಾನಂದಿಕೇಶ್ವರಗಣಂಗಳು,
ಅಷ್ಟದಿಕ್ಪಾಲರು, ಏಕಾದಶರುದ್ರರು, ದ್ವಾದಶಾದಿತ್ಯರು
ನವಗ್ರಹಂಗಳು, ಬ್ರಹ್ಮ ವಿಷ್ಣು ನಾರದ ಸುಖಂಗಳಲ್ಲಿಪ್ಪಂತಾಗಿ
ಮಹಾಶಿವಪುರವಿಹುದು.
ಆ ಶಿವಪುರದೊಳು ಶ್ರೀಕಂಠನೆಂಬ ಸದಾಶಿವಮೂರ್ತಿ ಇಹನು.
ಆ ಶಿವಪುರದ ಬಾಗಿಲ ಕಾವಲಾಗಿ
ನಂದಿ–ಮಹಾಕಾಳರೆಂಬ ಮಹಾಗಣಂಗಳಿಹರು.
ನಂದಿ–ಮಹಾನಂದಿ–ಅತಿಮಹಾನಂದಿಕೇಶ್ವರರು
ವಿಘ್ನೇಶ್ವರ ಕುಮಾರಸ್ವಾಮಿ ಮಹಾಭೈರವೇಶ್ವರ
ಮಹಾಕಾಳಿ ಮೊದಲಾದ ಅಸಂಖ್ಯಾತ ಮಹಾಗಣಂಗಳು
ಅಷ್ಟದಿಕ್ಪಾಲರು, ಏಕಾದಶರುದ್ರರು, ದ್ವಾದಶಾದಿತ್ಯರು,
ಅಷ್ಟವಶುಗಳು, ನವಗ್ರಹಂಗಳು, ಬ್ರಹ್ಮ, ವಿಷ್ಣು, ರುದ್ರಗಣಂಗಳು,
ಮೂವತ್ತುಮೂರುಕೋಟಿ ದೇವರ್ಕಳು, ನಾಲ್ವತ್ತೆಂಟುಸಾವಿರ ಮುನಿಗಳು,
ಅಷ್ಟದಶ ಗಣಂಗಳು, ಯೋಗೀಶ್ವರರು,
ಯಕ್ಷ ಕಿನ್ನರ ಗರುಡ ಗಂಧರ್ವ ಸಿದ್ಧ ವಿದ್ಯಾಧರರು,
ರಾಕ್ಷಸಗಣ ನಾಗಗಣ ಭೂತಗಣಂಗಳು
ಮೊದಲಾದ ಎಲ್ಲಾ ಗಣಂಗಳ ಸನ್ನಿಧಿಯಲ್ಲಿ ಒಡ್ಡೋಲಗಂಗೊಟ್ಟಿರಲು,
ಚತುರ್ವೇದಂಗಳು ಮೊದಲಾಗಿ ಎಲ್ಲಾ ವೇದಂಗಳು

'ವಿಶ್ವಾಧಿಕೋ ರುದ್ರೋ ಮಹಾಋಷಿ' ಎನಲು
'ಋತಂ ಸತ್ಯಂ ಪರಬ್ರಹ್ಮ' ಎನಲು
'ಅತ್ಯತಿಷ್ಠದ್ದಶಾಂಗುಲಂ' ಎನಲು
'ತತ್ಪರ ಬ್ರಹ್ಮ ವಿಜಾತಿ', ಎನಲು
'ಓಮಿತ್ಯೆಕಾಕ್ಷರ ಬ್ರಹ್ಮ' ಎಂದು ಬೊಬ್ಬಿಟ್ಟು ಸಾರುತ್ತಿರಲು
ತುಂಬುರ ನಾರದರು ಗೀತಮಂ ಪಾಡುತಿರಲು
ನಂದಿ ಮದ್ದಳೆವಾದ್ಯಮಂ ಬಾರಿಸುತ್ತಿರಲು,
ವಿಷ್ಣು ಆವುಜವ ನುಡಿಸಲು, ಬ್ರಹ್ಮ ತಾಳವನೊತ್ತಲು,
ಪಂಚಮಹಾವಾದ್ಯಂಗಳು ಮೊಳಗುತ್ತಿರಲು
ಭೃಂಗೀಶ್ವರ ಮಹಾನಾಟ್ಯವನಾಡಲು
ಉಮಾಮಹೇಶ್ವರಿಯೊಡನೆ ಪರಮೇಶ್ವರನು
ಸಿಂಹಾಸನಾರೂಢನಾಗಿ ಕುಳ್ಳಿರ್ದು
ಭೃಂಗೀಶ್ವರನ ಮಹಾನಾಟ್ಯವ ತಮ್ಮ ಲೀಲಾವಿನೋದದಲ್ಲಿ ನೋಡುತ್ತ
ಶ್ರೀ ಕೈಲಾಸಪರ್ವತದಲ್ಲಿ ಇರುತ್ತಿರ್ದನು.
ಈ ಭೂಮಿಗೆ ದಕ್ಷಿಣ ಪೂರ್ವದಲ್ಲಿ ಆದಿಯ ಮಹಾದ್ರಿಪರ್ವತವಿಹುದು.
ಆ ಆದಿಯ ಮಹಾದ್ರಿಪರ್ವತದಲ್ಲಿ ಅಗಸ್ತ್ಯಮಹಾಮುನಿ ಇಹನು.
ಈ ಭೂಮಿ ಒಂಬತ್ತು ತುಂಡಾಗಿಹುದು.
ಒಂಬತ್ತು ತುಂಡಾದ ಅಂತರಾಳವೆಲ್ಲವು ಜಲಮಯವಾಗಿ
ಹೊರಗೆ ಬಿರಿದುದ್ದವಾಗಿ ಬೆಳೆಯಲು
ನವಖಂಡಪೃಥ್ವಿಯೆಂದು ಹೆಸರಾಯಿತ್ತು.
ಈ ಭೂಮಿ ಜಂಬೂದ್ವೀಪ.
ಈ ಭೂಮಿಗೆ ಜನನ ಲವಣಸಮುದ್ರ.
ಆ ಜಂಬೂದ್ವೀಪ ಲವಣಸಮುದ್ರದ ವಿಸ್ತೀರ್ಣ:
ಆ ಜಂಬೂದ್ವೀಪದ ಅಗಲ ಶತಕೋಟಿಯೋಜನಪ್ರಮಾಣು.
ಆ ಜಂಬೂದ್ವೀಪ ವಳಯಾಕೃತವಾಗಿ ಸುತ್ತಿಕೊಂಡು
ಶತಕೋಟಿಯೋಜನಪರಿಪ್ರಮಾಣದಗಲವಾಗಿ ಲವಣಸಮುದ್ರವಿಹುದು.
ಅದರಿಂದಾಚೆ ಪ್ಲಕ್ಷದ್ವೀಪ.
ಅದರಗಲ ಇನ್ನೂರುಕೋಟಿಯೋಜನಪ್ರಮಾಣು.
ಅದರಿಂದಾಚೆ ಇಕ್ಷುಸಮುದ್ರ.
ಅದರಗಲ ಇನ್ನೂರುಕೋಟಿಯೋಜನಪ್ರಮಾಣು.
ಅದರಿಂದಾಚೆ ಕುಶದ್ವೀಪ.
ಅದರಗಲ ನಾನೂರುಕೋಟಿಯೋಜನಪ್ರಮಾಣು.
ಅದರಿಂದಾಚೆ ಸುರೆಯ ಸಮುದ್ರ.
ಅದರಗಲ ನಾನೂರುಕೋಟಿ ಯೋಜನ ಪ್ರಮಾಣು.

ಅದರಿಂದಾಚೆ ಶಾಕದ್ವೀಪ.
ಅದರಗಲ ಎಂಟುನೂರುಕೋಟಿ ಯೋಜನ ಪರಿಪ್ರಮಾಣು.
ಅದರಿಂದಾಚೆ ಘೃತಸಮುದ್ರ,
ಅದರಗಲ ಎಂಟುನೂರುಕೋಟಿ ಯೋಜನ ಪರಿಪ್ರಮಾಣು.
ಅದರಿಂದಾಚೆ ಸಾಲ್ಮಲೀದ್ವೀಪ.
ಅದರಗಲ ಸಾವಿರದಾರು ನೂರು ಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ಕ್ಷೀರಸಮುದ್ರ.
ಅದರಗಲ ಸಾವಿರದಾರುನೂರುಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ಪುಸ್ಕರದ್ವೀಪ.
ಅದರಗಲ ಮೂರುಸಾವಿರಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ದಧಿಸಮುದ್ರ.
ಅದರಗಲ ಮೂರುಸಾವಿರದಿನ್ನೂರುಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ಕೌಂಚದ್ವೀಪ.
ಅದರಗಲ ಆರುಸಾವಿರದ ನಾನೂರುಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ಸ್ವಾದೋದಕಸಮುದ್ರ.
ಅದರಗಲ ಆರುಸಾವಿರದ ನಾನೂರುಕೋಟಿ ಯೋಜನ ಪ್ರಮಾಣು.
ಅದರಿಂದಾಚೆ ಸ್ವರ್ಣಬೆಳೆಯಭೂಮಿ.
ಅದರಗಲ ಹನ್ನೆರಡುಸಾವಿರಕೋಟಿಯೋಜನ ಪ್ರಮಾಣು.
ಅದರಿಂದಾಚೆಯಲಿ ಚಕ್ರವಾಳಗಿರಿ.
ಅದರಗಲ ಇಪ್ಪತ್ತೈದುಸಾವಿರಕೋಟಿ ಯೋಜನ ಪ್ರಮಾಣು.
ಈ ಸಪ್ತಸಮುದ್ರಂಗಳು ಸಪ್ತದ್ವೀಪಂಗಳು ಹೊರಗೆ ಬಿರಿದು ಬೆಳೆಯಲು
ಸಪ್ತಸಮುದ್ರಂಗಳು, ದೆಸೆಗಳು ಕೂಡಿ ಮೇಳೈಸಲು
ನಾಲ್ವತ್ತೊಂಬತ್ತುಸಾವಿರಕೋಟಿ ಯೋಜನ ಪ್ರಮಾಣಿನ ಮೇಲೆ
ತೊಂಬತ್ತು ಸಾವಿರದೈವತುಕ್ಕೋಟಿಯ ಮಧ್ಯಭೂಮಿ ಯೋಜನ
ಪ್ರಮಾಣುಮಂ ಕೂಡಿ ನೂರುಸಾವಿರಕೋಟಿ ಯೋಜನ ಪ್ರಮಾಣು.
ಈ ಭೂಮಿಗೂ ಚಕ್ರವಾಳಗಿರಿಗೂ
ಹೊರಗೆ ಕಾವಲಾಗಿ ಅಷ್ಟದಿಕ್ಪಾಲರಿಹರು.
ಮೇರು ಮಂದರ ಕೈಲಾಸ ಗಂಧಮಾದನ ವಿಂಧ್ಯ ಹಿಮಾಲಯ
ನಿಷಧ ಚಿತ್ರಕೂಟವೆಂಬ ಅಷ್ಟಕುಲಪರ್ವತಂಗಳ ತಪ್ಪಲಲ್ಲಿ
ಅನಂತವಾಸುಗಿ ಕಶ್ಚ ಕರ್ಕಾಟಕ ಪರ ಮಹಾಪರ
ಶಂಕವಾಲಿ ಕುಳಿಕನೆಂಬ ಅಷ್ಟಮಹಾಗಣಂಗಳಿಹವು.
ಈಶಾನಮುಖದಲ್ಲಿ ವಡಬಮುಖಾಗ್ನಿ ಇಹುದು.
ಉತ್ತರದೆಸೆಯಲ್ಲಿ ಕ್ಷೀರಸಮುದ್ರದೊಳು ವಿಷ್ಣು
ಅನಂತಶಯನದಲ್ಲಿ ತಮೋಗುಣಯುಕ್ತನಾಗಿ ನಿದ್ರಾಲಂಬಿಯಾಗಿಹನು.

ಈ ಭೂಮಿಗೆ ದಕ್ಷಿಣದೆಸೆಯಾಗಿ ಉತ್ತರ ಪರಿಯಂತರ
ಬ್ರಹ್ಮ ಮಹೇಶ್ವರಿ ಕೌಮಾರಿ ವೈಷ್ಣವಿ ವರಾಹಿ ಮಾಹೇಂದ್ರಿ
ಚಾಮುಂಡಿಯೆಂಬ ಸಪ್ತಮಾತೃಕೆಯರು ಇಹರು.
ಮೇಲುಗಡೆಯಲ್ಲಿ ವಿನಾಯಕ, ಕೆಳಗಡೆಯಲ್ಲಿ ಭೈರವನಿಹನು.
ಈ ಭೂಮಿಗೆ ಉತ್ತರ ದಕ್ಷಿಣ ಪೂರ್ವ ಪಶ್ಚಿಮದಲ್ಲಿ
ಭೈರವ ಮಹಾಭೈರವ ಕಾಲಭೈರವ ದುರ್ಗಿ ಮಹಾದುರ್ಗಿ
ಮೊದಲಾದ ಅನಂತ ಭೂತಗಣಂಗಳು ಕಾವಲಾಗಿಹರು.
ಈ ಭೂಮಿಯಿಂದ ಮೇಲೆ ಯೋಜನ ಪ್ರಮಾಣದಲ್ಲಿ
ಸಪ್ತಮೇಘಂಗಳು, ವಾಯುವಿನ ದೆಸೆಯಿಂದ ಚಲಿಸುತ್ತಿಹುದು.
ಅವಾವೆಂದಡೆ :
ನೆಲವೃಷ್ಟಿ ನೀರವೃಷ್ಟಿ ಸ್ವರ್ಣವೃಷ್ಟಿ ಪುಷ್ಪವೃಷ್ಟಿ
ಕಲ್ಪವೃಷ್ಟಿ ಮಣ್ಣವೃಷ್ಟಿ ಮೌಕ್ತಿಕವೃಷ್ಟಿ–
ಎಂಬ ಸಪ್ತವೃಷ್ಟಿಗಳು ವೃಷ್ಟಿಸುತ್ತಿರಲು
ಆ ಸಪ್ತಮೇಘಮಂಡಲಂಗಳ ಮೇಲೆ
ಶತಕೋಟಿಯೋಜನದಲ್ಲಿ ಭುವರ್ಲೋಕವಿಹುದು.
ಆ ಭುವರ್ಲೋಕದಲ್ಲಿ ಆದಿತ್ಯ ಚರಿಸುತ್ತಿಹನು.
ಆ ಆದಿತ್ಯನ ರಥದ ಪ್ರಮಾಣು
ತೊಂಬತ್ತುಸಾವಿರಯೋಜನಪ್ರಮಾಣದುದ್ದವು,
ನಾಲ್ವತ್ತೈದುಸಾವಿರ ಯೋಜನದಗಲವು.
ಆ ರಥಕ್ಕೆ ಒಂದೇ ಗಾಲಿ, ಒಂದೆ ನೊಗದಲ್ಲಿ ಕಟ್ಟುವ
ಪಚ್ಚವರ್ಣದ ವಾಜಿಗಳೇಳು.
ಉರದ್ವಯವಿಲ್ಲದ ಅರುಣ ರಥದ ಸಾರಥಿ.
ಆ ಅರುಣನ ಕಂಡುದೆ ಉದಯ, ಕಾಣದುದೇ ಅಸ್ತಮಯ.
ಆದಿತ್ಯಪಥಕ್ಕೆ ಶತಕೋಟಿ ಯೋಜನದಲ್ಲಿ ಚಂದ್ರಮನ ಪಥವು
ಆ ಚಂದ್ರಮನ ಪಥಕ್ಕೆ ಶತಕೋಟಿ ಯೋಜನದಲ್ಲಿ
ಅಂಗಾರಕನ ಪಥವು.
ಅಂಗಾರಕನ ಪಥಕ್ಕೆ ಶತಕೋಟಿಯೋಜನದಲ್ಲಿ ಬುಧನ ಪಥವು.
ಆ ಬುಧನ ಪಥಕ್ಕೆ ಶತಕೋಟಿಯೋಜನದಲ್ಲಿ
ಬೃಹಸ್ಪತಿಯ ಪಥವು.
ಆ ಬೃಹಸ್ಪತಿಯ ಪಥಕ್ಕೆ ಶತಕೋಟಿಯೋಜನದಲ್ಲಿ
ಶುಕ್ರನ ಪಥವು.
ಆ ಶುಕ್ರನ ಪಥಕ್ಕೆ ಶತಕೋಟಿ ಯೋಜನದಲ್ಲಿ
ಶನೀಶ್ವರನ ಪಥವು.
ಆ ಶನೀಶ್ವರನ ಪಥಕ್ಕೆ ಶತಕೋಟಿ ಯೋಜನದಲ್ಲಿ

ರಾಹುಕೇತುಗಳ ಪಥವು.
ಆ ರಾಹುಕೇತುಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ನಕ್ಷತ್ರಾದಿಗಳ ಪಥವು.
ಆ ನಕ್ಷತ್ರಾದಿಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ಸಪ್ತಮಹಾಋಷಿಗಳ ಪಥವು.
ಆ ಸಪ್ತಮಹಾಋಷಿಗಳ ಪಥಕ್ಕ ಶತಕೋಟಿಯೋಜನದಲ್ಲಿ
ಅಶ್ವಿನೀದೇವತೆಗಳ ಪಥವು.
ಆ ಅಶ್ವಿನೀದೇವತೆಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ವಿಶ್ವದೇವತೆಗಳ ಪಥವು.
ಆ ವಿಶ್ವದೇವತೆಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ಬಾಲಸೂರ್ಯರ ಪಥವು.
ಆ ಬಾಲಸೂರ್ಯರ ಪಥಕ್ಕೆ ಶತಕೋಟಿಯೋಜನದಲ್ಲಿ
ಸೇನ ಮಹಾಸೇನ ಋಷಿಗಳ ಪಥವು.
ಆ ಸೇನ ಮಹಾಸೇನ ಋಷಿಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ಕ್ರುಕರನೆಂಬ ಋಷಿಗಳ ಪಥವು.
ಆ ಕ್ರುಕರನೆಂಬ ಮುನಿಗಳ ಪಥಕ್ಕೆ ಶತಕೋಟಿಯೋಜನದಲ್ಲಿ
ಸ್ವರ್ಣಪ್ರಭವಾಗಿ ಸ್ವರ್ಗಲೋಕವಿಹುದು.
ಆ ಸ್ವರ್ಗಲೋಕದಲ್ಲಿ ಕಲ್ಪವೃಕ್ಷವಿಹುದು.
ಆ ಕಲ್ಪವೃಕ್ಷದ ನೆಳಲಲ್ಲಿ ಅಮರಾವತಿಪುರ.
ಆ ಪುರದೊಳು ದೇವೇಂದ್ರನಿಹನು.
ಆ ದೇವೇಂದ್ರನ ಓಲಗದೊಳಗೆ
ಸಪ್ತಮಹಾಋಷಿಗಳು, ಮೂವತ್ತೂರು ಕೋಟಿ ದೇವರ್ಕಳಿಹರು.
ಆ ಸ್ವರ್ಗಲೋಕಕ್ಕೆ ಶತಕೋಟಿ ಯೋಜನದಲ್ಲಿ
ಮಹರ್ಲೋಕವಿಹುದು; ಅದು ಬ್ರಹ್ಮಪಥವು.
ಆ ಮಹರ್ಲೋಕಕ್ಕೆ ಶತಕೋಟಿ ಯೋಜನದಲ್ಲಿ
ಜನರ್ಲೋಕವಿಹುದು; ಅದು ವಿಷ್ಣುವಿನ ಪಥವು.
ಆ ಜನರ್ಲೋಕಕ್ಕೆ ಶತಕೋಟಿ ಯೋಜನದಲ್ಲಿ
ತಪರ್ಲೋಕವಿಹುದು ; ಅದು ರುದ್ರಪಥವು.
ಆ ತಪರ್ಲೋಕಕ್ಕೆ ಶತಕೋಟಿ ಯೋಜನದಲ್ಲಿ
ಸತ್ಯರ್ಲೋಕವಿಹುದು ; ಅದು ಈಶ್ವರಪಥವು.
ಆ ಸತ್ಯರ್ಲೋಕಕ್ಕೆ ಶತಕೋಟಿ ಯೋಜನದಲ್ಲಿ
ಸದಾಶಿವಲೋಕವಿಹುದು.
ಆ ಸದಾಶಿವಲೋಕಕ್ಕೆ ತ್ರಿಶತ ಸಹಸ್ರಕೋಟಿ ಯೋಜನದಲ್ಲಿ
ಶಿವಾಂಡವಿಹುದು.

ಆ ಶಿವಾಂಡವು ಪಂಚಶತಸಹಸ್ರಕೋಟಿ ಲಕ್ಷವು
ತ್ರಿಶತ ಸಹಸ್ರಕೋಟಿ ಲಕ್ಷದ ಮೇಲೆ ಶತಕೋಟಿ ಸಾವಿರ ಲಕ್ಷ
ಯೋಜನ ಪ್ರಮಾಣದಗಲವನುಳ್ಳ ಶಿವಾಂಡವು,
ಮಹಾಸಮುದ್ರಂಗಳನು, ಅಣುವಾಂಡಗಳನು,
ಬ್ರಹ್ಮಾಂಡಂಗಳನು, ಅನಂತಕೋಟಿ ಲೋಕಾದಿಲೋಕಂಗಳನೊಳಕೊಂಡು
ಮಹಾಪ್ರಳಯಜಲದೊಳಗಿಹುದು.
ಆ ಶಿವಾಂಡಕ್ಕೆ ಹೊರಗಾಗಿ ಅಖಂಡ ಚಿದ್ಬ್ರಹ್ಮಾಂಡವಿಹುದು.
ಅಖಂಡ ಚಿದ್ಬ್ರಹ್ಮಾಂಡವು ಅನಂತಕೋಟಿ ಬ್ರಹ್ಮಾಂಡವನೊಳಕೊಂಡು
ಆದಿ ಮಧ್ಯಾವಸಾನಂಗಳಿಲ್ಲದೆ
ಅಖಂಡಿತ ಅಪ್ರಮೇಯ ಅವ್ಯಕ್ತ ಅಚಲಿತ ಅಪ್ರಮಾಣ ಅಗೋಚರ
ಅಖಂಡಪರಿಪೂರ್ಣವಾಗಿಹುದು ನೋಡಾ ಚಿದ್ಬ್ರಹ್ಮಾಂಡವು
ಅಪ್ರಮಾಣಕೂಡಲಸಂಗಮದೇವಾ. ॥ ೨೪೨ ॥

೨೪೩

ಆ ಮಹಾಸದಾಶಿವ ತತ್ವದ
ಪಂಚಮುಖದಲ್ಲಿ ಉತ್ಪತ್ಯವಾದ
ಪಂಚಮಹಾಭೂತಬ್ರಹ್ಮಾಂಡಕಪಾಲದೊಳು
ಪಂಚಭೂತ ಬ್ರಹ್ಮಾಂಡಕಪಾಲ ಉತ್ಪತ್ಯವದೆಂತೆಂದೊಡೆ :
ಆ ಮಹಾಶಿವತತ್ವದ ನಿರ್ಭಾವ ಮುಖದಲ್ಲಿ ಆತ್ಮನುತ್ಪತ್ಯವಾದನು.
ಆ ಆತ್ಮನಲ್ಲಿ ಆಕಾಶ ಉತ್ಪತ್ಯವಾಯಿತ್ತು.
ಆ ಆಕಾಶದಲ್ಲಿ ವಾಯು ಉತ್ಪತ್ಯವಾಯಿತ್ತು.
ಆ ವಾಯುವಿನಲ್ಲಿ ಅಗ್ನಿ ಉತ್ಪತ್ಯವಾಯಿತ್ತು.
ಆ ಅಗ್ನಿಯಲ್ಲಿ ಅಪ್ಪು ಉತ್ಪತ್ಯವಾಯಿತ್ತು.
ಆ ಅಪ್ಪುವಿನಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು.
ಇದಕ್ಕೆ ಈಶ್ವರ ಉವಾಚ :
''ಆತ್ಮನ್ಯಾಕಾಶಸಂಭೂತಿರಾಕಾಶಾದ್ವಾಯು ಸಂಭವಃ ।
ವಾಯೋರಗ್ನಿಃ ಸಮುತ್ಪತ್ತಿರಗ್ನೇರಾಪ ಉದಾಹೃತಂ ।
ಅಪ್ ಪೃಥ್ವೀಚ ಸಂಭೂತಿರ್ಲಕ್ಷಣ್ಯೈಕಪ್ರಭಾವತಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೪೩ ॥

೨೪೪

ಆ ಪೃಥ್ವಿ ಅಪ್ಪು ತೇಜ ವಾಯುವಾಕಾಶವೆಂಬ
ಪಂಚಭೂತ ಬ್ರಹ್ಮಾಂಡಕಪಾಲದೊಳು
ಚತುರ್ದಶಭುವನಂಗಳು, ಸಪ್ತಸಮುದ್ರಂಗಳು,

ಸಪ್ತದ್ವೀಪಂಗಳು, ಸಪ್ತಕುಲಪರ್ವತಂಗಳು,
ಸಮಸ್ತ ಗ್ರಹರಾಶಿ ತಾರಾಪಥಂಗಳಿಹ ಕ್ರಮವೆಂತೆಂದಡೆ :
ಆ ಭೂತಬ್ರಹ್ಮಾಂಡಕಪಾಲದಲ್ಲಿ ಅತಳಲೋಕವಿಹುದು.
ಆ ಅತಳಲೋಕದಿಂದ ಮೇಲೆ ವಿತಳಲೋಕವಿಹುದು.
ಆ ವಿತಳಲೋಕದಿಂದ ಮೇಲೆ ಸುತಳಲೋಕವಿಹುದು.
ಆ ಸುತಳಲೋಕದಿಂದ ಮೇಲೆ ತಳಾತಳಲೋಕವಿಹುದು.
ಆ ತಳಾತಳಲೋಕದಿಂದ ಮೇಲೆ ರಸಾತಳಲೋಕವಿಹುದು.
ಆ ರಸಾತಳಲೋಕದಿಂದ ಮೇಲೆ ಮಹಾತಳಲೋಕವಿಹುದು.
ಆ ಮಹಾತಳಲೋಕದಿಂದ ಮೇಲೆ ಪಾತಾಳಲೋಕವಿಹುದು.
ಆ ಪಾತಾಳಲೋಕದಿಂದ ಮೇಲೆ ಜಲಪ್ರಳಯವಿಹುದು.
ಆ ಜಲಪ್ರಳಯದ ಮೇಲೆ ಮಹಾಕಮಠನಿಹುದು.
ಆ ಮಹಾಕಮಠನ ಮೇಲೆ ಮಹಾವಾಸುಗಿ ಇಹುದು.
ಆ ಮಹಾವಾಸುಗಿಯ ಸುತ್ತುವಳಯಾಕೃತವಾಗಿ
ಅಷ್ಟದಿಕ್‌ಮಹಾಗಜಂಗಳಿಹವು.
ಆ ಅಷ್ಟದಿಕ್‌ಮಹಾಗಜಂಗಳ ಮೇಲೆ ಭೂಲೋಕವಿಹುದು.
ಆ ಭೂಲೋಕದಲ್ಲಿ ಸಪ್ತಸಮುದ್ರಂಗಳು, ಸಪ್ತದ್ವೀಪಂಗಳು,
ಸಪ್ತಕುಲಪರ್ವತಂಗಳಿಹವು.
ಆ ಸಪ್ತಸಮುದ್ರಂಗಳ ಸಪ್ತದ್ವೀಪಂಗಳ ಸಪ್ತಕುಲಪರ್ವತಂಗಳ
ಸುತ್ತುವಳಯಾಕೃತವಾಗಿ ಸಮಸ್ತ ಲೋಕಾಲೋಕ ಪರ್ವತವಿಹುದು.
ಆ ಸಪ್ತಸಮುದ್ರಂಗಳ ಸಪ್ತದ್ವೀಪಂಗಳ ಸಪ್ತಕುಲಪರ್ವತಂಗಳ
ವಿಸ್ತೀರ್ಣವೆಂತೆಂದಡೆ :
ಪಂಚಾಶತಕೋಟಿ ವಿಸ್ತೀರ್ಣದ ಮಧ್ಯಭೂಮಿ.
ಆ ಮಧ್ಯಭೂಮಿ ಮಂಡಲವಳಯದಲ್ಲಿ
ಮಹಾಮೇರುಪರ್ವತದ ವಿಸ್ತೀರ್ಣವೆಂತೆಂದಡೆ :
ಒಂದುಕೋಟಿಯು ಇಪ್ಪತ್ತಾರುಲಕ್ಷದ ಮೇಲೆ
ಎಂಬತ್ತೈದುಸಾವಿರ ಯೋಜನಪ್ರಮಾಣು.
ಆ ಮೇರುಮಂದಿರದ ಶಿರದ ಮೇಲೆ
ಮೂವತ್ತುಮೂರುಕೋಟಿ ದೇವರ್ಕಳು,
ನಾಲ್ವತ್ತೆಂಟುಸಾವಿರ ಮುನಿಗಳು, ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ನಂದಿವಾಹ ಗಣಂಗಳು, ದ್ವಾದಶಾದಿತ್ಯರು,
ನಾರದಮುನಿ ಯೋಗೀಶ್ವರರು, ಅಷ್ಟದಿಕ್ಪಾಲರು, ಏಕಾದಶರುದ್ರರು
ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು
ಶಿವಸುಖ ಸಂಗೀತ ವಿನೋದದಿಂದ ರಾಜ್ಯಂಗೆಯ್ಯುತ್ತಿರಲು,
ಆ ಮೇರುಮಂದಿರದ ಶಿಖರದ ಕೆಳಗೆ ಜಂಬೂದ್ವೀಪವಿಹುದು.

ಆ ಜಂಬೂದ್ವೀಪವು ಒಂದು ಲಕ್ಷದ ಮೇಲೆ
ಇಪ್ಪತ್ತೈದುಸಾವಿರ ಯೋಜನಪ್ರಮಾಣು.
ಒಂದುಲಕ್ಷದ ಮೇಲೆ ಇಪ್ಪತ್ತೈದುಸಾವಿರ ಯೋಜನದಗಲವಾಗಿ
ಲವಣಸಮುದ್ರವು ಆ ಜಂಬೂದ್ವೀಪವಮಂ
ವಳಯಾಕೃತವಾಗಿ ಸುತ್ತಿಕೊಂಡಿಹುದು.
ಎರಡು ಲಕ್ಷದ ಮೇಲೆ ಐವತ್ತುಸಾವಿರ ಯೋಜನ ಪ್ರಮಾಣದಲ್ಲಿ
ಇಕ್ಷುಸಮುದ್ರವು ಆ ಪ್ಲಕ್ಷದ್ವೀಪವಮಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಮೂರುಲಕ್ಷದ ಮೇಲೆ ಎಪ್ಪತ್ತುಸಾವಿರದಯಿನೂರು
ಯೋಜನಪ್ರಮಾಣದಗಲವಾಗಿ
ಕುಶದ್ವೀಪವಂ ಆ ಇಕ್ಷುಸಮುದ್ರವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ನಾಲ್ಕುಲಕ್ಷದ ಮೇಲೆ ಮೂರುಸಾವಿರ
ಯೋಜನಪ್ರಮಾಣದಗಲವಾಗಿ ಸುರೆಯ ಸಮುದ್ರವು
ಆ ಕುಶದ್ವೀಪವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಐದುಲಕ್ಷ ಯೋಜನಪ್ರಮಾಣದಗಲವಾಗಿ ಶಾಕದ್ವೀಪವು
ಆ ಸುರೆಯ ಸಮುದ್ರವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಹದಿನಾಲ್ಕುಲಕ್ಷ ಯೋಜನಪ್ರಮಾಣದಗಲವಾಗಿ ಘೃತಸಮುದ್ರವು
ಆ ಶಾಕದ್ವೀಪವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಇಪ್ಪತ್ತುಲಕ್ಷ ಯೋಜನಪ್ರಮಾಣದಗಲವಾಗಿ ಶಾಲ್ಮಲೀದ್ವೀಪ
ಆ ಘೃತಸಮುದ್ರವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಇಪ್ಪತ್ತು ಲಕ್ಷ ಯೋಜನಪ್ರಮಾಣದಗಲವಾಗಿ ದಧಿಸಮುದ್ರವು
ಆ ಶಾಲ್ಮಲೀದ್ವೀಪವಂ ವಳಯಾಕೃತವಾದಿ ಸುತ್ತಿಕೊಂಡಿಹುದು.
ನಾಲ್ವತ್ತುಲಕ್ಷ ಯೋಜನಪ್ರಮಾಣದಗಲವಾಗಿ ಪುಷ್ಕರದ್ವೀಪ
ಆ ದಧಿಸಮುದ್ರವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ನಾಲ್ವತ್ತುಲಕ್ಷ ಯೋಜನಪ್ರಮಾಣದಗಲವಾಗಿ ಕ್ಷೀರಸಮುದ್ರವು
ಆ ಪುಷ್ಕರದ್ವೀಪವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಎಂಬತ್ತುಲಕ್ಷ ಯೋಜನಪ್ರಮಾಣದಗಲವಾಗಿ ಕ್ರೌಂಚದ್ವೀಪವು
ಆ ಕ್ಷೀರಸಮುದ್ರಮಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಎಂಬತ್ತುಲಕ್ಷ ಯೋಜನಪ್ರಮಾಣದಗಲವಾಗಿ ಸ್ವಾದೋದಕಸಮುದ್ರವು
ಆ ಕ್ರೌಂಚದ್ವೀಪವಂ ವಳಯಾಕೃತವಾಗಿ ಸುತ್ತಿಕೊಂಡಿಹುದು.
ಸಪ್ತದ್ವೀಪಂಗಳ ಸುತ್ತುವಳಯಾಕೃತವಾಗಿ ಲೋಕಾಲೋಕ ಪರ್ವಂತಗಳಿಹವು.
ಆ ಲೋಕಾಲೋಕ ಪರ್ವತಂಗಳ ಸುತ್ತುವಳಯಾಕೃತವಾಗಿ
ಚಕ್ರವಾಳಗಿರಿ ಇಹುದು.
ಆ ಚಕ್ರವಾಳಗಿರಿಗತ್ತತ್ತ ಭೂಮಿ ಪರ್ವತಾಕಾರವಾಗಿಹುದು.
ಆ ಭೂಮಿಯಿಂದಂ ಮೇಲೆ ಮೇಘಮಂಡಲಂಗಳಿಹವು.

ಆ ಮೇಘಮಂಡಲಂಗಳ ಮೇಲೆ ಭುವರ್ಲೋಕವಿಹುದು.
ಆ ಭುವರ್ಲೋಕದಿಂದ ಮೇಲೆ ಸ್ವರ್ಗಲೋಕವಿಹುದು.
ಆ ಸ್ವರ್ಗಲೋಕದಿಂದ ಮೇಲೆ ನಕ್ಷತ್ರಾದಿಮಂಡಲವಿಹುದು.
ಆ ನಕ್ಷತ್ರಾದಿ ಮಂಡಲಂಗಳಿಂದತ್ತ ಮೇಲೆ ಮಹರ್ಲೋಕವಿಹುದು.
ಆ ಮಹರ್ಲೋಕದಿಂದತ್ತ ಮೇಲೆ ಜನರ್ಲೋಕವಿಹುದು.
ಆ ಜನರ್ಲೋಕದಿಂದತ್ತ ಮೇಲೆ ತಪರ್ಲೋಕವಿಹುದು.
ಆ ತಪರ್ಲೋಕದಿಂದತ್ತ ಮೇಲೆ ಸತ್ಯರ್ಲೋಕವಿಹುದು.
ಆ ಸತ್ಯರ್ಲೋಕದಿಂದತ್ತ ಮೇಲೆ ತ್ರಿಲಕ್ಷಕೋಟಿಯೋಜನ
ಪರಿಪ್ರಮಾಣದುದ್ದದಲ್ಲಿ ಮಹಾಪ್ರಳಯಜಲವಿಹುದು.
ಆ ಮಹಾಪ್ರಳಯಜಲದಿಂದತ್ತ ಮೇಲೆ ಶಿವಾಂಡ ಚಿದ್ಬ್ರಹ್ಮಾಂಡವಿಹುದು.
ಇಂಥ ಅನಂತಕೋಟಿ ಚಿದ್ಬ್ರಹ್ಮಾಂಡಗಳು,
ಅನಂತಕೋಟಿ ಲೋಕಾಲೋಕಂಗಳೆಲ್ಲ
ಒಂದರಲ್ಲೊಂದಡಗಿ ಅಪ್ರಮಾಣ ಕೂಡಲಸಂಗಯ್ಯನು
ತನ್ನ ಲೀಲಾವಿನೋದದಿಂದ ನಿಂದರಾಗಿ ನಿಲುವುದು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೨೪೪ ॥

೨೪೫

ಇನ್ನು ಪಿಂಡ ಉತ್ಪತ್ಯವದೆಂತೆಂದಡೆ :
ಆ ಪೃಥ್ವಿಯಲ್ಲಿ ಅನ್ನ ಉತ್ಪತ್ಯವಾಯಿತ್ತು;
ಆ ಅನ್ನದಲ್ಲಿ ರಸ ಉತ್ಪತ್ಯವಾಯಿತ್ತು;
ಆ ರಸದಲ್ಲಿ ರುಧಿರ ಉತ್ಪತ್ಯವಾಯಿತ್ತು;
ಆ ರುಧಿರದಲ್ಲಿ ಮಾಂಸ ಉತ್ಪತ್ಯವಾಯಿತ್ತು;
ಆ ಮಾಂಸದಲ್ಲಿ ಮೇದಸ್ಸು ಉತ್ಪತ್ಯವಾಯಿತ್ತು;
ಆ ಮೇದಸ್ಸುವಿನಲ್ಲಿ ಅಸ್ಥಿ ಉತ್ಪತ್ಯವಾಯಿತ್ತು;
ಆ ಅಸ್ಥಿಯಲ್ಲಿ ಮಜ್ಜೆ ಉತ್ಪತ್ಯವಾಯಿತ್ತು;
ಆ ಮಜ್ಜೆಯಲ್ಲಿ ಶುಕ್ಲ ಉತ್ಪತ್ಯವಾಯಿತ್ತು
ಇದಕ್ಕೆ **ಕಾತ್ಯಾಯಿನಿ ಶ್ರುತಿ** :
''ಪೃಥುವೀರಂ ನ ಸಂಭೂತಿಃ ಅನ್ನಾತ್ ರಸಸಂಭವಃ ।
ರಸೇನ ರುಧಿರೋ ಜಾತ ರುಧಿರಾತ್ ಮಾಂಸಸಂಭವಃ ॥
ಮಾಂಸೇನ ಮೇದಸ್ಸಂಭೂತಿಃ ಮೇದಸಾ ಅಸ್ಥಿಸಮುದ್ಭವಃ ।
ಅಸ್ಥಿನಾ ಮಜ್ಜಾ ಸಂಭೂತಾ ಮಜ್ಜೇ ಶುಕ್ಲಂ ಚ ಜಾಯತೇ ॥''
ಇಂತೆಂದುದಾಗಿ
ಅಪ್ರಮಾಣ ಕೂಡಲಸಂಗಮದೇವಾ. ॥ ೨೪೫ ॥

೨೪೬

ಇನ್ನು ಸ್ತ್ರೀಯರುಗಳಿಂದ ಜನನವಾದ ಶಿಶುಗಳ ಭೇದವಂ ಪೇಳ್ವೆ ಅದೆಂತೆಂದಡೆ :
ಸ್ತ್ರೀಗೆ ರಜಸ್ವಲೆಯಾದ ತ್ರಿವಿಧದಿನಕ್ಕೆ
ಗರ್ಭವಾಗಿ ಹುಟ್ಟಿದ ಮಗನು ಚೋರನಹನು,
ಚತುರ್ಥದಿನಕ್ಕೆ ಪಾಪಿಯಹನು, ಪಂಚದಿನಕ್ಕೆ ಬುದ್ಧಿವಂತನಹನು,
ಷಷ್ಠಿದಿನಕ್ಕೆ ವ್ರತಗೇಡಿಯಹನು, ಸಪ್ತದಿನಕ್ಕೆ ದಯಾಪರನಹನು,
ಅಷ್ಟಮದಿನಕ್ಕೆ ದರಿದ್ರನಹನು, ನವಮದಿನಕ್ಕೆ ಧನಿಕನಹನು,
ದಶದಿನಕ್ಕೆ ಕಾಮಿಯಹನು, ಏಕಾದಶದಿನಕ್ಕೆ ವ್ಯಾಧಿಪೀಡಿತನಹನು,
ದ್ವಾದಶದಿನಕ್ಕೆ ಪಂಡಿತನಹನು, ತ್ರಯೋದಶದಿನಕ್ಕೆ ವಿವೇಕಿಯಹನು,
ಚತುರ್ದಶದಿನಕ್ಕೆ ಭೋಗಿಯಹನು, ಪಂಚಾದಶದಿನಕ್ಕೆ ರಾಜನಹನು,
ಷೋಡಶದಿನಕ್ಕೆ ಶಿವಯೋಗಿಯಹನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೪೬ ॥

೨೪೭

ಇನ್ನು ಸ್ತ್ರೀ ಪುರುಷರುಗಳ ಕೂಟದ ಸ್ವರಭೇದವದೆಂತೆಂದಡೆ :
ಸ್ತ್ರೀಪುರುಷರ ಸಂಯೋಗ ಕಾಲದಲ್ಲಿ
ಸ್ತ್ರೀಗೆ ಅಪಾನವಾಯು ಇದಿರಾದರೆ ಮಕ್ಕಳು ಇಬ್ಬರು ಹುಟ್ಟುವರು.
ಪುರುಷರಿಗೆ ಶಶಿಸ್ವರ, ಸ್ತ್ರೀಗೆ ರವಿಸ್ವರವಾದರೆ ಪುರುಷ ಹುಟ್ಟುವನು.
ಸ್ತ್ರೀಗೆ ಶಶಿಸ್ವರ, ಪುರುಷಗೆ ರವಿಸ್ವರವಾದರೆ ಸ್ತ್ರೀ ಹುಟ್ಟುವಳು.
ಸ್ತ್ರೀ ಪುರುಷರಿಬ್ಬರಿಗೆಯೂ ಸ್ವರಸಂಚಲವಿಲ್ಲದೆ ಇದ್ದರೆ ಗರ್ಭ ಉಂಟು.
ಸ್ತ್ರೀಪುರುಷರಿಬ್ಬರಿಗೆಯೂ ಸ್ವರಸಂಚಲವಾದರೆ ಗರ್ಭವಿಲ್ಲ,
ಪುರುಷಂಗಗ್ನಿಸ್ವರ ವಿಶೇಷವಾದರೆ ಬಂಜೆಯಹಳು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೪೭ ॥

೨೪೮

ಇನ್ನು ಕಾಲಭೇದಂಗಳದೆಂತೆಂದಡೆ :
ಪ್ರಥಮಕಾಲದಲ್ಲಿ ಹುಟ್ಟಿದ ಮಗನು ಕೋಪಿಯಹನು.
ದ್ವಿತೀಯಕಾಲದಲ್ಲಿ ಹುಟ್ಟಿದ ಮಗನು ಪಾಪಕರ್ಮಾಶ್ರಯವಾಗಿಹನು.
ತೃತೀಯಕಾಲದಲ್ಲಿ ಹುಟ್ಟಿದ ಮಗನು ಪಾಪಿಯಹನು.
ಅಸ್ತಮಯವಾದ ಎಂಟು ಘಳಿಗೆಗೆ ಹುಟ್ಟಿದ ಮಗನು ಜ್ಞಾನಿಯಹನು.
ಮಧ್ಯರಾತ್ರಿಯಲ್ಲಿ ಹುಟ್ಟಿದ ಮಗನು ಶಾಂತಿ ದಾಂತಿ ಸಮತೆಯುಳ್ಳ ಪುರುಷನಹನು.
ಬೆಳಗಾಗುವ ಜಾವದಲ್ಲಿ ಹುಟ್ಟಿದ ಮಗನು ಪರಮಯೋಗಿಯಹನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೪೮ ॥

೨೪೯

ಇನ್ನು ವರ್ಣಭೇದವೆಂತೆಂದಡೆ :
ಸ್ತ್ರೀ ಪುರುಷರಿಬ್ಬರ ಸಂಯೋಗ ಕಾಲದಲ್ಲಿ
ಪೃಥ್ವಿಯ ಸ್ವರವಾದರೆ ಹುಟ್ಟಿದ ಮಗ ಪೀತವರ್ಣನಹನು.
ಅಪ್ಪುವಿನ ಸ್ವರವಾದಡೆ ಶ್ವೇತವರ್ಣನಹನು,
ಅಗ್ನಿಯ ಸ್ವರವಾದಡೆ ರಕ್ತವರ್ಣನಹನು,
ವಾಯುವಿನ ಸ್ವರವಾದಡೆ ಕೃಷ್ಣವರ್ಣನಹನು,
ಆಕಾಶದ ಸ್ವರವಾದಡೆ ಧೂಮ್ರವರ್ಣನಹನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೪೯ ||

೨೫೦

ಇನ್ನು ಆಯುಷ್ಯಂಗಳ ಭೇದವೆಂತೆಂದಡೆ :
ಸ್ತ್ರೀ ಪುರುಷರಿಗೆಯು ಸ್ವರ ಐದುಗಳಿಗೆ ನಡೆದಡೆ,
ಆಯುಷ್ಯ ನೂರವರುಷ.
ನಾಲ್ಕುಗಳಿಗೆ ನಡೆದಡೆ ಆಯುಷ್ಯ ಎಂಬತ್ತುವರುಷ.
ಮೂರುಗಳಿಗೆ ನಡೆದಡೆ ಆಯುಷ್ಯ ಅರುವತ್ತುವರುಷ.
ಎರಡುಗಳಿಗೆ ನಡೆದಡೆ ಆಯುಷ್ಯ ನಾಲ್ವತ್ತುವರುಷ.
ಒಂದುಗಳಿಗೆ ನಡೆದಡೆ ಆಯುಷ್ಯ ಇಪ್ಪತ್ತುವರುಷ.
ಅರೆಗಳಿಗೆ ನಡೆದಡೆ ಆಯುಷ್ಯ ಹತ್ತುವರುಷ.
ಕಾಲುಗಳಿಗೆ ನಡೆದಡೆ ಆಯುಷ್ಯ ಐದುವರುಷ.
ಇಂತೀ ಕ್ರಮದಿಂದ ನೋಡಿಕೊಂಬುದು
ಅಪ್ರಮಾಣಕೂಡಲಸಂಗಮದೇವಾ. || ೨೫೦ ||

೨೫೧

ಇನ್ನು ಆ ಶುಕ್ಲ ಸ್ತ್ರೀ ಪುರುಷರ ಸಂಯೋಗದಿಂದ
ಮಾರುತ ನೂಂಕಲು ಚೈತನ್ಯ ಬೀಜವು
ಆ ಶುಕ್ಲವು ಸ್ತ್ರೀಯ ಶೋಣಿತದಲ್ಲಿ ಬಿದ್ದು ಏಕೀಭೂತವಾಯಿತ್ತು ನೋಡಾ.
ಇದಕ್ಕೆ **ಈಶ್ವರ ಉವಾಚ** :
''ಚೈತನ್ಯಂ ಬೀಜರೂಪಂ ಚ ಶುಕ್ಲಂ ರಕ್ತಂ ತಥಾ ಜಲಂ ।
ಏಕೀಭೂತಂ ಯಥಾ ಕಾಲೇ ತಥಾ ಕಾಲೇ ಪ್ರರೋಪತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೨೫೧ ||

೨೫೨

ಆ ಚೈತನ್ಯಬೀಜ ಶುಕ್ಲಶೋಣಿತ ಬಲಿತು ಜೀವನಾಗಿ
ಭೂತಂಗಳ ಕೂಡಿಕೊಂಡು

ಕರ್ಮವಶದಿಂದ ಪಿಂಡವಹುದು.
ಇದಕ್ಕೆ ಶ್ರುತಿ :
''ಆಯುಃ ಕರ್ಮ ಚ ವಿತ್ತಂ ಚ ವಿದ್ಯಾ ನಿಧನಮೇವ ಚ ।
ಪಂಚೈತಾನಿ ವಿಲಿಖ್ಯಂತೇ ಗರ್ಭಸ್ಥಸ್ಯೈವ ದೇಹಿನಾಂ ॥ ''
ಇಂತೆಂದುದಾಗಿ,
ಈ ಪಂಚಾಕ್ಷರವ ನಿಟಿಲತಟದಲ್ಲಿ ಬರೆವನು.
ಆ ಚೈತನ್ಯಬೀಜ ಶುಕ್ಲಶೋಣಿತಂಗಳು ಬದ್ಧವಹುದು.
ಪುರುಷವೀರ್ಯ ಘನವಾದಡೆ ಗಂಡುಮಗ ಹುಟ್ಟುವನು.
ಸ್ತ್ರೀವೀರ್ಯ ಘನವಾದಡೆ ಹೆಣ್ಣುಮಗು ಹುಟ್ಟುವಳು.
ಸಮವಾದಡೆ ನಪುಂಸಕ ಹುಟ್ಟುವದು.
ಮಾತಾಪಿತರ ಮಲತ್ರಯದಲ್ಲಿ ಪಿಂಡರೂಪವಹುದು.
ಇದಕ್ಕೆ ಶ್ರೀಮಹಾದೇವ ಉವಾಚ :
''ರಕ್ತಾಧಿಕ್ಯಂ ಭವೇನ್ನಾರೀ ನರಶುಕ್ಲಾಧಿಕೇ ಸುತಂ ।
ನಪುಂಸಕಂ ಸಮಂ ದ್ರವ್ಯೈಃ ತ್ರಿವಿಧಂ ಪಿಂಡರೂಪಕಂ ॥
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೨ ॥

೨೫೩

ಏಕರಾತ್ರಿಗೆ ಹಾಲಿಗೆ ಹೆಪ್ಪ ಕೊಟ್ಟ ಹಾಗೆ ಕದಡಿಕೊಂಡಿಹುದು.
ಪಂಚರಾತ್ರಿಗೆ ಬುದ್ಬುಧಾಕಾರವಾಗಿಹುದು.
ದಶರಾತ್ರಿಗೆ ಶೋಣಿತವಾಗಿಹುದು.
ತ್ರಿಪಂಚರಾತ್ರಿಗೆ ಮಾಂಸ ಅಸ್ಥಿಯಾಗಿಹುದು.
ಚತುರ್ವಿಂಶತಿರಾತ್ರಿಗೆ ಪುನರ್ಮಾಂಸವಾಗಿ
ಗರ್ಭಸ್ಥಾನದಲ್ಲಿ ಕ್ರಮದಿಂದ ವರ್ತಿಸುತ್ತಿಹುದು ನೋಡಾ.
ಇದಕ್ಕೆ ಈಶ್ವರ ಉವಾಚ :
''ಕಲಲಂ ತ್ವೇಕರಾತ್ರೇಣ ಪಂಚರಾತ್ರೇಣ ಬುದ್ಬುಧಂ ।
ಶೋಣಿತಂ ದಶರಾತ್ರೇಣ ಮಾಂಸಪಿಂಡಂ ತ್ರಿಪಂಚ ತೇ ।
ಪೂರ್ಣಮಾಂಸಶ್ಚ ವಿಂಶಾಯೇ ಗರ್ಭೇನಾ ವರ್ಧತೇ ಕ್ರಮಾತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೩ ॥

೨೫೪

ಪಂಚವಿಂಶತಿರಾತ್ರಿಗೆ ಪಂಚಾಂಕುರ ಸಂಪೂರ್ಣವಹುದು.
ಏಕಮಾಸಕ್ಕೆ ಪಂಚತತ್ವ ಸಂಪೂರ್ಣವಾಗಿ ಧರಿಸೂದು.
ದ್ವಿಮಾಸಕ್ಕೆ ಮಾಂಸ ಮೇದಸ್ಸು ಜನಿಸುವುದು.

ಇದಕ್ಕೆ ಶ್ರೀಗರ್ಭ ಉವಾಚ :
''ಪಂಚವಿಂಶತಿ ಸಂಪೂರ್ಣೇ ಫಲಪಂಚಾಂಕುರಾಯತೇ ।
ಮಾಸೇನೈಕೇನ ಸಂಪೂರ್ಣಂ ಪಂಚತತ್ವಾನಿ ಧಾರಯೇತ್ ।
ಮಾಸದ್ವಯೇನ ಸಂಪೂರ್ಣಂ ಮಾಂಸಮೇದಃ ಪ್ರಜಾಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೪ ॥

೨೫೫

ತ್ರಿಮಾಸಕ್ಕೆ ಮಜ್ಜೆ ಅಸ್ಥಿ ಪುಟ್ಟುವುದು.
ಚತುರ್ಮಾಸಕ್ಕೆ ಕೇಶ ಗುಹ್ಯ ಪುಟ್ಟುವುದು.
ಪಂಚಮಾಸಕ್ಕೆ ಕರ್ಣ ಅಕ್ಷಿ ನಾಸಿಕಾದಿ ರಂಧ್ರಂಗಳು ಪುಟ್ಟುವವು ನೋಡಾ.
ಇದಕ್ಕೆ ಈಶ್ವರ ಉವಾಚ :
''ಮಜ್ಜಾಸ್ಥಿನಿಸ್ತ್ರೀ ತ್ರಿಮಾಸ್ಯೈಃ ಕೇಶಗುಹ್ಯಚತುರ್ಥಕೇ ।
ಕರ್ಣಾಕ್ಷಿ ನಾಸಿಕಸ್ಯಾದಿ ರಂಧ್ರಾದಿ ಮಾಸಪಂಚಕೇ ॥
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೫ ॥

೨೫೬

ಷಷ್ಠಿಮಾಸಕ್ಕೆ ಕಂಧರ ಉದರ ಪುಟ್ಟುವುದು.
ಸಪ್ತಮಾಸಕ್ಕೆ ಗುಹ್ಯ ಪಾದ ಪುಟ್ಟುವುದು.
ಅಷ್ಟಮಾಸಕ್ಕೆ ಸರ್ವಾಂಗಸಂಧಿ ಪುಟ್ಟುವದು ಸಂಪೂರ್ಣವಹುದು.
ಇದಕ್ಕೆ ಶ್ರೀಮಹಾದೇವ ಉವಾಚ :
''ಕಂಧರಾಜೋದರಂ ಷಷ್ಠೇ ಗುಹ್ಯ ಪಾದಂ ಚ ಸಪ್ತಮೇ ।
ಸರ್ವಾಂಗ ಸಂಧಿ ಸಂಪೂರ್ಣೇ ಮಾಸೇ ಸ್ಯಾದಷ್ಟಭಿಃ ಪ್ರಿಯೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೬ ॥

೨೫೭

ನವಮಾಸಕ್ಕೆ ಶ್ರೋತ್ರಾದಿಗಳೈದು, ಶಬ್ದಾದಿಗಳೈದು,
ಮಂಡಲಮೂರು, ಗುಣಮೂರು, ವ್ಯಾಧಿಮೂರು,
ಈಷಣಮೂರು, ನಾಡಿಹತ್ತು, ವಾಯುಹದಿನಾಲ್ಕು,
ಕ್ಲೇಷಂಗಳೈದು, ಧಾತುಗಳೇಳು, ಮದವೆಂಟು,
ಸುಖದುಃಖಂಗಳೆರಡು, ಎಪ್ಪತ್ತೆರಡುಸಾವಿರ ನಾಡಿಗಳು,
ಎಂಬತ್ತೆಂಟುಕೋಟಿ ರೋಮದ್ವಾರಂಗಳು,
ಎಂಬತ್ನಾಲ್ಕುನೂರುಸಾವಿರ ಸಂದುಗಳು,
ಇಪ್ಪತ್ತೊಂದುಸಾವಿರದಾರುನೂರು ಶ್ವಾಸಂಗಳು,

ಮೂವತ್ತೆರಡು ಲಕ್ಷಣಂಗಳು, ಐವತ್ತಾರಕ್ಷರಂಗಳು,
ಅರುವತ್ನಾಲ್ಕು ಕಲೆ, ಜ್ಞಾನಂಗಳು ಕೂಡಿ
ಸುಜ್ಞಾನಸಂಪನ್ನನಾಗಿ ಪೂರ್ವಜನ್ಮದಲ್ಲಿ
ಎಂಬತ್ನಾಲ್ಕುನೂರುಸಾವಿರ ಜನ್ಮದಲ್ಲಿ ಬಂದ
ಜನ್ಮವ ವಿವೇಕಿಸುತ್ತಿಹುದು ನೋಡಾ.
ಅದೆಂತೆಂದಡೆ:
ಮಾನವಜನ್ಮ ಒಂಬತ್ತುಸಾವಿರ ಜನ್ಮ.
ಉರುವ ಜೀವಜನ್ಮ ಹನ್ನೊಂದುಸಾವಿರಜನ್ಮ.
ಜಲಚರ ಜೀವಜನ್ಮದಲ್ಲಿ ಎಂಬತ್ನಾಲ್ಕುನೂರುಸಾವಿರಜನ್ಮದಲ್ಲಿ
ಹತ್ತುಸಾವಿರ ಜನ್ಮ.
ಹಾರುವ ಪಕ್ಷಿಗಳ ಜೀವಜನ್ಮದಲ್ಲಿ ಹತ್ತುಸಾವಿರಜನ್ಮ.
ಚತುಷ್ಪಾದಜೀವರಾಶಿಗಳ ಜನ್ಮದಲ್ಲಿ ಹತ್ತುಸಾವಿರಜನ್ಮ.
ದೈತ್ಯ ಜೀವಜನ್ಮದಲ್ಲಿ ಹದಿನಾರುಸಾವಿರಜನ್ಮ.
ಸ್ಥಾವರಂಗಳ ಜನ್ಮದಲ್ಲಿ ಹದಿನೆಂಟುಸಾವಿರಜನ್ಮ.
ಇಂತು ಎಂಬತ್ನಾಲ್ಕುನೂರುಜನ್ಮ
ಅಂಡಜ ಸ್ವೇದಜ ಉದ್ಭಿಜ ಜರಾಯುಜವೆಂಬ
ನಾಲ್ಕು ಯೋನಿಯಲ್ಲಿ ಜನಿಸಿದನು.
ಇನ್ನು ಹುಟ್ಟಿದಾಕ್ಷಣದಲ್ಲಿಯೆ ಮರಣ,
ಮರಣದಾಕ್ಷಣದಲ್ಲಿಯೇ ಜನನವೆಂದರಿದು
ಸ್ಮರಿಸುತ್ತಿಹುದು ನೋಡಾ.
ಇದಕ್ಕೆ ಈಶ್ವರ ಉವಾಚ :
''ಮಾಸೇಕಂ ನವಮೇ ಪ್ರಾಪ್ತೇ ಗರ್ಭೇತ ತತ್‌ಸ್ಮರತಿ ಸ್ವಯಂ ।
ಮೃತಸ್ಯಾಹಂ ಪುನರ್ಜಾತಃ ಜಾತಸ್ಯಾಹಂ ಮೃತಃ ಪುನಃ ।
ನಾನಾಯೋನಿಸಹಸ್ರೇಷು ಮಯಾ ದೃಷ್ಟಮನೇಕಶಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೭ ॥

೨೫೮

ಇನ್ನು ಪ್ರಸೂತಿಕಾಲದಲ್ಲಿ ವಾಯುವಶದಿಂದ
ಜನನಿಯ ಜಠರಮಂ ಪೊರಮಡುವನು.
ಪೊರಮಡಲೊಳಗಾಗಿ ಆದಿಮಾಯೆಯೆಂಬ ಗಾಳಿಬೀಸಿ.
ಮಲವೇ ಒಡಲಾಗಿ ನೆನವೆಲ್ಲವ ಮರದುದು,
ಮುನ್ನ ಮಾಡಿದ ಕರ್ಮಫಲದಿಂದ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೫೮ ॥

೨೫೯

ಸುಕರ್ಮದಿಂದ ದೇವತಾಯೋನಿಯಲ್ಲಿ ಜನಿಸುವನು.
ದುಷ್ಕರ್ಮದಿಂದ ಎಂಬತ್ತುನಾಲ್ಕುಲಕ್ಷ ಜೀವರಾಶಿಗಳ
ಕ್ರೂರಯೋನಿಯಲ್ಲಿ ಜನಿಸುವನು.
ಸುಕರ್ಮ ದುಷ್ಕರ್ಮ ಎರಡರ ಮಿಶ್ರಣದಿಂದ
ಮನುಜಯೋನಿಯಲ್ಲಿ ಜನಿಸುವನು.
ಇಂತಪ್ಪ ಸುಕರ್ಮ ದುಷ್ಕರ್ಮಗಳು
ಪೂರ್ವಕರ್ಮವಶದಿಂದ ಬಹವು ನೋಡಾ.
ಇದಕ್ಕೆ **ಸೂತಸಂಹಿತಾಯಾಂ :**
''ಪುಣ್ಯಾದ್ದೇವತ್ವಮಾಪ್ನೋತಿ ಪಾಪಾತ್ ಸ್ಥಾವರತಾಮಿಯಾತ್ ।
ಸಮಾಭ್ಯಾಂ ಪಾಪಪುಣ್ಯಾಭ್ಯಾಂ ಮಾನುಷ್ಯೇ ಪರಿವರ್ತತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೫೯ ॥

೨೬೦

ಸ್ಥೂಲಕಾಯ ಶರೀರ ಶುಕ್ಲಶೋಣಿತದಿಂದ
ಎರಡಕ್ಕೆ ಎರಡು ಕಾಲು,
ಬ್ರಹ್ಮಗ್ರಂಥಿ ಏಳು, ವಿಷ್ಣುಗ್ರಂಥಿ ಏಳು, ರುದ್ರಗ್ರಂಥಿ ಏಳು,
ಮೂರೇಳು ಇಪ್ಪತ್ತೊಂದು ಗ್ರಂಥಿಯನುಳ್ಳ ಕಂಕಾಳದಂಡವು.
ಆ ಕಂಕಾಳದಂಡದ ದ್ವಾರದಲ್ಲಿ ಷೋಡಶಕಳೆಯನ್ನುಳ್ಳ ವೀಣಾದಂಡವು.
ಮೂರುಗೇಣು ಎಲುವು, ಮೂರುಗೇಣು ಮಾಂಸವು,
ಮೂವತ್ತೆರಡು ಪಕ್ಕದೆಲುವು,
ನಾಲ್ಕುಗೇಣು ಗಾತ್ರವು, ಎಂಟು ಗೇಣು ಉದ್ದವು.
ಆದಿ ನಾಲ್ಕು ಬಾಗಿಲನುಳ್ಳುದಾಗಿ,
ರಸ ರುಧಿರ ಮಾಂಸ ಮೇದಸ್ಸು ಅಸ್ಥಿ ಮಜ್ಜೆ ಶುಕ್ಲವೆಂಬ
ಸಪ್ತಧಾತುಗಳಿಂದ ದೇಹವಾಗಿ ಬೆಳೆಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೬೦ ॥

೨೬೧

ಸಪ್ತಧಾತುಗಳಿಂದ ದೇಹವಾಗಿ ಬೆಳೆದ ಪಿಂಡ
ಆಪಾದಮಸ್ತಕವೆಲ್ಲ ಬ್ರಹ್ಮಾಂಡಸಂಗ್ರಹವಾಗಿ
ತೋರ್ಪುದದೆಂತೆಂದಡೆ :
ಪಾದತಳದಲ್ಲಿ ಅತಳಲೋಕ, ಪಾದೋರ್ಧ್ವದಲ್ಲಿ ವಿತಳಲೋಕ,
ಜಂಘೆಯಲ್ಲಿ ಸುತಳಲೋಕ, ಜಾನುವಿನಲ್ಲಿ ನಿತಳಲೋಕ,

ಊರುದ್ವಯದಲ್ಲಿ ತಳಾತಳಲೋಕ, ಗುಹ್ಯಸ್ಥಾನದಲ್ಲಿ ರಸಾತಳಲೋಕ,
ಕಟಿಯಲ್ಲಿ ಪಾತಾಳಲೋಕ.
ಆ ಕಟಿಸ್ಥಾನದ ಪಾತಾಳಲೋಕದ ಮೇಲೆ
ಅಧೋಬ್ರಹ್ಮರಂಧ್ರ ವಳಯಾಕೃತವಾಗಿಹುದು.
ಆ ಅಧೋಬ್ರಹ್ಮರಂಧ್ರದ ವಳಯಾಕೃತದೊಳು
ಅಮೃತವೆಂಬ ಮಹಾಜಲವಿಹುದು.
ಅಮೃತವೆಂಬ ಮಹಾಜಲದಮೇಲೆ
ಅಧೋಜ್ಯೋತಿಪ್ರಣಮಲಿಂಗವೆಂಬ ಮಹಾಕಮಠನಿಹುದು.
ಆ ಮಹಾಕಮಠನ ಮೇಲೆ ಅಧೋಕುಂಡಲಿಯ ಸರ್ಪನೆಂಬ
ಮಹಾವಾಸುಗಿ ಇಹುದು.
ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ,
ಅತಿಚಾರಿಣಿ, ಗಂಧಚಾರಿಣಿ, ವಾಸಿನಿಯೆಂಬ
ಅಂತರಂಗದ ಅಷ್ಟಮದಂಗಳೆಂಬ ಅಷ್ಟದಿಕ್‌ಮಹಾಗಜಂಗಳ ಮೇಲೆ
ಭೂಲೋಕವಿಹುದು.
ಆ ಭೂಲೋಕ ನಾಭಿಸ್ಥಾನಂಗಳಲ್ಲಿಹುದು.
ಕುಕ್ಷಿಯಲ್ಲಿ ಭುವರ್ಲೋಕವಿಹುದು.
ಹೃದಯಸ್ಥಾನದಲ್ಲಿ ಸ್ವರ್ಲೋಕವಿಹುದು.
ವಕ್ಷದಲ್ಲಿ ಮಹರ್ಲೋಕವಿಹುದು.
ಕಂಠಸ್ಥಾನದಲ್ಲಿ ಜನರ್ಲೋಕವಿಹುದು.
ಲಲಾಟದಲ್ಲಿ ತಪರ್ಲೋಕವಿಹುದು.
ಶಿರಸ್ಥಾನದಲ್ಲಿ ಸತ್ಯರ್ಲೋಕವಿಹುದು.
ಬ್ರಹ್ಮರಂಧ್ರದಲ್ಲಿ ಮಹಾಪ್ರಳಯಜಲವಿಹುದು.
ಶಿಖಾಚಕ್ರದಲ್ಲಿ ಶಿವಾಂಡವಿಹುದು.
ಪಶ್ಚಿಮಚಕ್ರದಲ್ಲಿ ಚಿದ್ಬ್ರಹ್ಮಾಂಡವಿಹುದು.
ಇದಕ್ಕೆ **ಶ್ರೀ ಮಹಾದೇವ ಉವಾಚ :**
''ಪಾದಸ್ಸ್ವತಲಂ ವಿದ್ಯಾತ್ ಪಾದೋರ್ಧ್ವಂ ವಿತಲಂ ಭವೇತ್ ।
ಸುತಲಂ ಜಂಘದೇಶೇಷು ನಿತಲಂ ಜಾನುನೋದಯೇ ॥
ತಲಾತಲಂ ಚ ಉಭ್ಯಾಗಂ ಗುಹ್ಯಸ್ಥಾನೇ ರಸಾತಲಂ ।
ಪಾತಾಲಂ ಕಟಿರಿತ್ಯುಕ್ತಂ ಸಪ್ತಮಂ ಪರಿಕೀರ್ತಿತಂ ॥
ಭೂಲೋಕಂ ನಾಭಿಮಧ್ಯಸ್ಥಂ ಭುವರ್ಲೋಕಂತು ಕುಕ್ಷಿಗಂ ।
ಹೃದಿಸ್ಥಂ ಸ್ವರ್ಲೋಕಂತು ಮಹರ್ಲೋಕಂತು ವಕ್ಷಸಿ ॥
ಕಂಠಸ್ಥಂ ಜನರ್ಲೋಕಂತು ತಪರ್ಲೋಕಂ ಲಲಾಟಕೇ ।
ಸತ್ಯರ್ಲೋಕಮೂರ್ಧ್ವನ್ಯಸ್ತಿಂ ಭುವನಾನಿ ಚತುರ್ದಶ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೨೬೧ ॥

೨೬೨

ಇನ್ನು ಸಪ್ತಕುಲಪರ್ವತಂಗಳ ಸ್ಥಾನವದೆಂತೆಂದಡೆ :
ತ್ರಿಕೋಣೆಯಲ್ಲಿ ಮಹಾಮೇರುಪರ್ವತವಿಹುದು.
ಅರ್ಧಕೋಣೆಯಲ್ಲಿ ಮಂದರಪರ್ವತವಿಹುದು.
ದಕ್ಷಿಣಕೋಣೆಯಲ್ಲಿ ಕೈಲಾಸಪರ್ವತವಿಹುದು.
ವಾಮಕೋಣೆಯಲ್ಲಿ ಹಿಮಾಲಯಪರ್ವತವಿಹುದು.
ಊರ್ಧ್ವಭಾಗದಲ್ಲಿ ನಿಷಾಧಪರ್ವತವಿಹುದು.
ದಕ್ಷಿಣಭಾಗದಲ್ಲಿಗಂಧಮಾದನಪರ್ವತವಿಹುದು.
ರೋಮಲೇಖೆಯಲ್ಲಿ ವಿಂಧ್ಯಪರ್ವತವಿಹುದು.
ಇದಕ್ಕೆ **ಈಶ್ವರ ಉವಾಚ** :
''ತ್ರಿಕೋಣೇ ಸಂಸ್ಥಿತೋ ಮೇರುಃ ಅರ್ಧಕೋಣೇತು ಮಂದರಃ ।
ಕೈಲಾಸೋ ದಕ್ಷಿಣೆಕೋಣೇ ವಾಮಕೋಣೇ ಹಿಮಾಲಯಃ ॥
ನಿಷಾದಸ್ತೂರ್ಧ್ವಭಾಗೇ ಚ ದಕ್ಷಿಣೇ ಗಂಧಮಾದನಃ ।
ವಿಂಧ್ಯಸ್ತು ರೋಮಲೇಖಾಯಾಂ ಸಪ್ತಮೋ ಕುಲಪರ್ವತಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೬೨ ॥

೨೬೩

ಇನ್ನು ಸಪ್ತದ್ವೀಪಂಗಳ ಸ್ಥಾನವದೆಂತೆಂದಡೆ :
ಅಸ್ಥಿಸ್ಥಾನದಲ್ಲಿ ಜಂಬೂದ್ವೀಪವಿಹುದು.
ಮೇದಸ್ಥಾನದಲ್ಲಿ ಪ್ಲಕ್ಷದ್ವೀಪವಿಹುದು.
ಮಾಂಸಸ್ಥಾನದಲ್ಲಿ ಕುಶದ್ವೀಪವಿಹುದು.
ಶಿರಸ್ಥಾನದಲ್ಲಿ ಕ್ರೌಂಚದ್ವೀಪವಿಹುದು.
ತ್ವಚಸ್ಥಾನದಲ್ಲಿ ಶಾಲ್ಮಲೀದ್ವೀಪವಿಹುದು.
ರೋಮಸಂಚದಲ್ಲಿಗೋಮೇಧದ್ವೀಪವಿಹುದು.
ನಖಸ್ಥಾನದಲ್ಲಿ ಪುಷ್ಕರದ್ವೀಪವಿಹುದು.
ಇದಕ್ಕೆ **ಶ್ರೀಮಹಾಭಗವಾನ ಉವಾಚ** :
''ಅಸ್ಥಿಸ್ಥಾನೇ ಸ್ಥಿತೋ ಜಂಬೂರ್ಮೇದಸ್ಥಾಪ್ಲಕ್ಷಸಂಜ್ಞಕಃ ।
ಕುಶದ್ವೀಪಸ್ಥಿತೋ ಮಾಂಸೇ ಕ್ರೌಂಚದ್ವೀಪಃ ಶಿರಸುಚ ॥
ತ್ವಚಾಯಾಂ ಶಾಲ್ಮಲೀದ್ವೀಪಾಃ ಮೇಧೋ ರೋಮಸಾ ಭವೇತ್ ।
ನಖಸ್ಥಂ ಪುಷ್ಕರಂ ವಿದ್ಯಾತ್ ಸಾಗರಾಸ್ಥಾನನಂತರಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೬೩ ॥

೨೬೪

ಇನ್ನು ಸಪ್ತಸಮುದ್ರಂಗಳ ವಿವರವೆಂತೆಂದಡೆ :
ಮೂತ್ರವೆ ಲವಣಸಮುದ್ರ ; ಅಮೃತವೆ ಕ್ಷೀರಸಮುದ್ರ ;
ಶ್ಲೇಷ್ಮವೆ ದಧಿಸಮುದ್ರ ; ಮಜ್ಜೆಯೇ ಘೃತಸಮುದ್ರ,
ಮಾಂಸವೆ ರಸಸಮುದ್ರ ; ಶೋಣಿತವೆ ಸುರೆಯ ಸಮುದ್ರ ;
ಲಂಬಿಕಾಸ್ಥಾನದ ಸ್ವಾದೋದಕವೆ ಸ್ವಾದೋದಕಸಮುದ್ರ.
ಇದಕ್ಕೆ ಶ್ರೀ **ಮಹಾದೇವ ಉವಾಚ** :
''ಕ್ಷಾರೋದಧಿ ತಥಾ ಮೂತ್ರೇ ಕ್ಷೀರೇ ಕ್ಷೀರೋದಸಾಗರಃ ।
ದಧ್ಯರ್ಣವಃ ತಥಾ ಶ್ಲೇಷ್ಮ ಮಜ್ಜಾಯಾಂ ಸರ್ಪಿಷಾರ್ಣವಃ ॥
ರಸೋದಧಿಃ ಸ್ಥಾವರೇ ಚ ಶೋಣಿತೇ ಚ ಸುರೋದಧಿಃ ।
ಸ್ವಾದುದೋ ಲಂಬಿಕಾಸ್ಥಾನೇ ಗರ್ಭೋದಸ್ಯ ಸಪ್ತಸಾಗರಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೬೪ ॥

೨೬೫

ಇನ್ನು ಸಪ್ತಸಮುದ್ರಂಗಳ, ಸಪ್ತದ್ವೀಪಂಗಳ,
ಸಪ್ತಕುಲಪರ್ವತಂಗಳ ವಳಯಾಕೃತವಾಗಿ ಸುತ್ತಿಕೊಂಡಿಹ
ಲೋಕಾಲೋಕಪರ್ವತಂಗಳ ಸ್ಥಾನವದೆಂತೆಂದಡೆ :
ಮಲಯಜಪರ್ವತ, ಸಿಂಹಪರ್ವತ, ನೀಲಪರ್ವತ,
ಶ್ವೇತಪರ್ವತ, ಗವತಪರ್ವತ, ರಮ್ಯಪರ್ವತ,
ಉತ್ತರಕುರುಪರ್ವತ, ಸುಗಂಧಪರ್ವತ, ನಿರಾಕಾರಪರ್ವತ,
ಉದಾರಪರ್ವತ, ಮಣಿಶಿಖರಪರ್ವತ, ಅರ್ಧಚಂದ್ರಪರ್ವತ,
ಮಧುರಪರ್ವತ, ಮಣಿನಾಗಪರ್ವತ, ಮೈನಾಕಪರ್ವತ,
ಮಂದರಾಚಲಪರ್ವತ, ಉದಯಾದ್ರಿಪರ್ವತ,
ತ್ರಿಪುರಾಂತಕಪರ್ವತ, ಶ್ರೀರಾಮಪರ್ವತ,
ಮಾಲ್ಯವಂತಪರ್ವತ, ನಿಷಧಪರ್ವತ ಹೇಮಕೂಟಪರ್ವತ,
ವಿಂಧ್ಯಾಚಲಪರ್ವತ, ಗಂಧಾಚಲಪರ್ವತ,
ನೀಲಾಚಲಪರ್ವತ, ಮೇರುಮಂದಿರಪರ್ವತ,
ಶಬರೀಶ್ವರಪರ್ವತ, ಕುಮುದ ಉದಯಾದ್ರಿ, ದೇವಕೂಟ,
ಪವನಾಚಲ, ಪರಿಯಾತ್ರಾಚಲ, ಚಂದ್ರಾಚಲ, ಧಾರಾಚಲ,
ಷಡುಲಕ್ಷ್ಮೀ, ಕಪಿಲಗಿರಿ, ಮನಶ್ಯಾಂತಗಿರಿ, ಚಂದ್ರಗಿರಿ,
ನಾಗಗಿರಿ, ಲಘುಗಿರಿ, ಮಕರಗಿರಿ, ದ್ರೋಣಗಿರಿ,
ಅನಂತವಜ್ರಗಿರಿ, ನೀಲಗಿರಿ, ವರಗಿರಿ, ತ್ರಿಪುರಗಿರಿ,
ಸಿಂಹಗಿರಿ, ಶ್ರೀಕಂಠಗಿರಿ, ಚಕ್ರವಾಳಗಿರಿಪರ್ವತ,

ಇಂದ್ರಗಿರಿಪರ್ವತ, ಲೋಕಪರ್ವತಂಗಳೆಲ್ಲ ವಳಯಾಕೃತವಾಗಿ
ಆ ಪಿಂಡರೋಮಕೂಪಂಗಳಲ್ಲಿಹವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೬೫ ॥

೨೬೬

ಇನ್ನು ನಕ್ಷತ್ರ ನವಗ್ರಹಗಳ ಸ್ಥಾನವೆಂತೆಂದಡೆ :
ನಾದಚಕ್ರದಲ್ಲಿ ಸೂರ್ಯನಿಹನು, ಬಿಂದುಚಕ್ರದಲ್ಲಿ ಚಂದ್ರನಿಹನು.
ಅಧೋನಾಭಿಯಲ್ಲಿ ಮಂಗಳನಿಹನು,
ಹೃದಯಸ್ಥಾನದಲ್ಲಿ ಬುಧನಿಹನು, ಗುಹ್ಯಸ್ಥಾನದಲ್ಲಿ ಬೃಹಸ್ಪತಿ ಇಹನು,
ಕಲಾಚಕ್ರದಲ್ಲಿ ಶುಕ್ರನಿಹನು, ನಾಭಿಸ್ಥಾನದಲ್ಲಿ ಶನೀಶ್ವರನಿಹನು,
ಮುಖದಲ್ಲಿ ರಾಹು ಇಹನು, ನಾದಸ್ಥಾನದಲ್ಲಿ ಕೇತು ಇಹನು.
ಇಂತು ನವಗ್ರಹಂಗಳು, ಒಂದೊಂದು ಗ್ರಹಂಗಳಲ್ಲಿ
ತ್ರಿತ್ರಿನಕ್ಷತ್ರಂಗಳು ಇಹವು.
**ಇದಕ್ಕೆ ಈಶ್ವರ ಉವಾಚ :**
"ನಾದಚಕ್ರಸ್ಥಿತೋ ಸೂರ್ಯಃ ಬಿಂದುಚಕ್ರೇ ಚ ಚಂದ್ರಮಾಃ ।
ಚೋನಾಭ್ಯಾಂತುಚೋ ಜ್ಞೇಯಂ ಹೃದಯೇ ಚ ಬುಧಸ್ಮೃತಃ ॥
ಗುಹ್ಯಸ್ಥಾನೇ ಗುರುಂ ವಿದ್ಯಾತ್ ಚಕ್ರೇ ಕಲಾ ಶುಕ್ರಸಮಾಶ್ರಿತಃ ।
ನಾಭಿಸ್ಥಾನೇ ಸ್ಥಿತೋ ಮಂದಃ ಮುಖಾಂತೇ ರಾಹುರಾಶ್ರಿತಃ ॥
ನಾದಸ್ಥಾನೇ ಸ್ಥಿತೋ ಕೇತುಃ ಅಸ್ತಿನಾಹಿಸ್ತಯಶ್ರಯಃ ।
ವಿಭವತ್ಸಮಾಖ್ಯಾತ ಆಪಾದಸ್ಥಲಮಸ್ತಕೇ ॥"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೬೬ ॥

೨೬೭

ಇನ್ನು ಭೂತನಾಯಕರ ಸ್ಥಾನವೆಂತೆಂದಡೆ :
ಹೃದಯಸ್ಥಾನದಲ್ಲಿ ಬ್ರಹ್ಮನಿಹನು, ಕಂಠಸ್ಥಾನದಲ್ಲಿ ವಿಷ್ಣುವಿಹನು,
ಭ್ರೂಮಧ್ಯದಲ್ಲಿ ರುದ್ರನಿಹನು, ಭ್ರೂಮಧ್ಯೋರ್ಧ್ವದಲ್ಲಿ ಈಶ್ವರನಿಹನು,
ಲಲಾಟಾಂತದಲ್ಲಿ ಸದಾಶಿವನಿಹನು.
**ಇದಕ್ಕೆ ಶ್ರೀ ಮಹಾದೇವ ಉವಾಚ :**
"ಹೃದಿ ಸ್ಥಾನೇ ಸ್ಥಿತೋಬ್ರಹ್ಮಾಃ ಕಂಠೇ ವಿಷ್ಣುಃ ಸಮಾಶ್ರಿತಃ ।
ಭ್ರೂಮಧ್ಯೇ ಸಂಸ್ಥಿತೋ ರುದ್ರಃ ತಸ್ಯೋರ್ಧ್ವೇ ಈಶ್ವರ ಸ್ಮೃತಃ ।
ಸದಾಶಿವೋ ಲಲಾಟೇ ತು ಪಂಚೈತೇ ಭೂತನಾಯಕಾಃ ॥"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೬೭ ॥

೨೬೮

ಇನ್ನು ಆ ಪಿಂಡಮಧ್ಯದಲ್ಲಿಹ ಷಡುಚಕ್ರಂಗಳೊಳು
ಸಪ್ತಕೋಟಿ ಮಹಾಮಂತ್ರಂಗಳ ಸಾರವಾದ ಏಕಾದಶಮಂತ್ರಂಗಳು,
ತೊಂಬತ್ನಾಲ್ಕು ವ್ಯೋಮವ್ಯಾಪಿ ಪದಂಗಳು,
ಪ್ರಣವ ಪಂಚಾಕ್ಷರಂ, ಅಕಾರಾದಿ ಕ್ಷಕಾರಾಂತವಾದ
ಐವತ್ತಾರು ವರ್ಣಂಗಳು, ಇನ್ನೂರಿಪ್ಪತ್ನಾಲ್ಕು ಭುವನಂಗಳು,
ಮೂವತ್ತಾರು ತತ್ವಂಗಳು ಪಂಚಕಲೆಗಳು ಮೊದಲಾದ
ಕಲೆ ಜ್ಞಾನಂಗಳೆಲ್ಲ ಆ ಪಿಂಡಮಧ್ಯದಲ್ಲಿಹ
ಚಕ್ರಂಗಳಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೬೮ ॥

೨೬೯

ಇನ್ನು ಆ ಆತ್ಮನು ಪೃಥ್ವಿ ಅಪ್ಪು ತೇಜ
ವಾಯು ಆಕಾಶವೆಂಬ ಪಂಚಭೂತಂಗಳಂ
ಪಂಚಭೂತಾಂಶಿಕಮಂ ಕೂಡಿಕೊಂಡು
ದೇಹವಾಗಿ ಬೆಳೆದು, ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ
ತಾಪತ್ರಯಂಗಳಿಂದ ನೊಂದು ಬೆಂದು
ಪುಣ್ಯಪಾಪ ವಶದಿಂದ ಜೀವನಾಗಿ,
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ
ಚೌರಾಶಿಲಕ್ಷ ಜೀವಜಂತುಗಳ ಯೋನಿಯಲ್ಲಿ ಬಂದು,
ಹುಟ್ಟದ ಯೋನಿಯಿಲ್ಲ, ಮೆಟ್ಟದ ಭೂಮಿಯಿಲ್ಲ,
ಉಣ್ಣದ ಆಹಾರವಿಲ್ಲ, ಕಾಣದ ಸುಖದುಃಖವಿಲ್ಲ,
ಇದಕ್ಕೆ **ಈಶ್ವರ ಉವಾಚ :**
''ನಾನಾಯೋನಿಸಹಸ್ರಾಣಿ ಗತ್ವಾ ಚೈವಂತು ಮಾಯಯಾ ।
ಆಹಾರಂ ವಿವಿಧಂ ಭುಕ್ತ್ವಾ ಪೀತ್ವಾ ಚ ವಿವಿಧಸ್ತನಾನ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಂಸಗಮದೇವಾ. ॥ ೨೬೯ ॥

೨೭೦

ಇಂತಪ್ಪ ನಾನಾ ಸುಖದುಃಖಂಗಳನುಂಡು,
ಎಂತಕ್ಕೆ ನರನಾಗಿ ಬಂದು,
ಪೂರ್ವಜನ್ಮಸುಕೃತಫಲದಿಂದ ಮಹಾಪುರುಷರಂ ಸಾರ್ದು
ನರಕೋತ್ತರವಂ ಮಾಡಿ, ಸ್ವರ್ಗಾದಿ ಭೋಗಂಗಳನುಂಡು,
ಮೇಲಣ ಮುಕ್ತಿಯ ಪಥವನು ಪಡೆದ ತೆರನಾವುದೆಂದು ವಿಚಾರಿಸಿ,
ಸಕಲವೇದಾಗಮಶಾಸ್ತ್ರಪುರಾಣಂಗಳಂ ನೋಡಿ

ತನ್ನಿಂದ ತಾನೆ ತಿಳಿದು ಅನಂತಕೋಟಿ ತತ್ವಂಗಳೊಳು
ತೊಂಬತ್ತಾರುತತ್ತ್ವಂಗಳನರಿದು, ಆ ತೊಂಬತ್ತಾರುತತ್ವಂಗಳೊಳು
ಮೂವತ್ತಾರುತತ್ವಂಗಳ ಭೇದಿಸಿ,
ಆ ಮೂವತ್ತಾರು ತತ್ವಂಗಳೊಳು
ತ್ವಂ ಪದ ತತ್‌ಪದ ಅಸಿಪದಂಗಳೆಂಬ ಪದತ್ರಯಂಗಳನರಿದು
ಎಪ್ಪತ್ತೆರಡುಸಾವಿರ ನಾಡಿಗಳನು
ಆ ಎಪ್ಪತ್ತೆರಡುಸಾವಿರ ನಾಡಿಗಳೊಳು ಮೂವತ್ತೆರಡು ನಾಡಿಗಳ ಭೇದವನು,
ಆ ಮೂವತ್ತೆರಡು ನಾಡಿಗಳೊಳು ಚತುರ್ದಶನಾಡಿಗಳ ಭೇದವನು,
ಆ ಚತುರ್ದಶನಾಡಿಗಳೊಳು ತ್ರಿನಾಡಿಗಳ ಭೇದವನು,
ಆ ತ್ರಿನಾಡಿಗಳೊಳು ಏಕನಾಡಿಯ ಭೇದವನರಿದು
ಆ ಚತುರ್ದಶನಾಡಿಗಳೊಳು ಚತುರ್ದಶವಾಯುಭೇದವನರಿದು
ಆ ಚತುರ್ದಶವಾಯುವಿನೊಳು ಪಂಚವಾಯುವ ಭೇದಿಸಿ,
ಪಂಚವಾಯುವಿನೊಳು ದ್ವಿವಾಯುವನರಿದು,
ದ್ವಿವಾಯುವಿನೊಳು ಏಕವಾಯುವಿನ ಸಂಚವನರಿದು
ಷಡುಚಕ್ರ, ದಶವರ್ಣ, ಅಕ್ಷರ, ಅಧಿದೇವತೆಗಳಂ ಭೇದಿಸಿ
ಅಂತಃಕರಣಚತುಷ್ಟಯಂಗಳನರಿದು
ಮಂಡಲತ್ರಯಭೇದವ ಭೇದಿಸಿ ಕಂಡನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. || ೨೭೦ ||

೨೭೧

ಇನ್ನು ನಾಡಿಧಾರಣವೆಂತೆಂದಡೆ :
ಎಪ್ಪತ್ತೆರಡು ಸಾವಿರ ನಾಡಿಗಳೊಳು ಮೂವತ್ತೆರಡು ನಾಡಿ ಮುಖ್ಯವಾಗಿಹುದು.
ಆ ಮೂವತ್ತೆರಡು ನಾಡಿಗಳೊಳು
ಚತುರ್ದಶನಾಡಿಗಳು ಪ್ರಧಾನನಾಡಿಗಳಾಗಿಹವು.
ಆ ಚತುರ್ದಶನಾಡಿಗಳೊಳು ಮೂರುನಾಡಿ ಮುಖ್ಯವಾಗಿಹುದು.
ಆ ಮೂರು ನಾಡಿಗಳೊಳು ಒಂದುನಾಡಿ ಮುಖ್ಯವಾಗಿಹುದು.
ಆ ಒಂದು ನಾಡಿಯ ಯೋಗಿಗಳು ಬ್ರಹ್ಮನಾಡಿಯೆಂಬರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೭೧ ||

೨೭೨

ಅದೊಂದು ನಾಡಿ ಮೂಲಾಧಾರ ಮೊದಲಾಗಿ
ಬ್ರಹ್ಮರಂಧ್ರ ಕಡೆಯಾಗಿ ಲತೆಯ ಹಾಗೆ
ಕೆಳಗೆ ಮೇಲೆ ಸುತ್ತಿಕೊಂಡಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೭೨ ||

೨೭೩

ಕಾಲು ಕೈ ನಡುವೆಲ್ಲ ತಾವರೆಯ ತಂತಿನಂತೆ
ಎಂಬತ್ತುನಾಲ್ಕುನೂರುಸಾವಿರ
ಸಂದುಗಳ ಬಂಧಿಸಿಕೊಂಡಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೩ ॥

೨೭೪

ಭಾನುಕಿರಣಂಗಳು ಸರ್ವಲೋಕಂಗಳ ತುಂಬಿಕೊಂಡಿಹುದು.
ಅದರ ಹಾಂಗೆ ಬ್ರಹ್ಮನಾಡಿ ಸರ್ವಾಂಗವೆಲ್ಲವ ತುಂಬಿ
ಆಧಾರಚಕ್ರಂಗಳಾರನು ಹಾಯ್ದು
ಬ್ರಹ್ಮರಂಧ್ರವ ಮುಟ್ಟಿ, ನಾದ ಬಿಂದುಗಳಿಗೆ
ಆಶ್ರಯವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೪ ॥

೨೭೫

ಅಗ್ನಿಮಂಡಲ, ಆದಿತ್ಯಮಂಡಲ, ಚಂದ್ರಮಂಡಲವೆಂಬ
ಮಂಡಲತ್ರಯಂಗಳ ಹಾಯ್ದು
ಬ್ರಹ್ಮಚಕ್ರ ಶಿಖಾಚಕ್ರವ ಹಾಯ್ದು
ಆಚೆ ಪಶ್ಚಿಮಚಕ್ರವ ಮುಟ್ಟಿ,
ಆ ಬ್ರಹ್ಮನಾಡಿ ಏಕನಾಡಿಯಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೫ ॥

೨೭೬

ಎಲ್ಲಾ ನಾಡಿಗಳಂ ಕಡೆಮೆಟ್ಟಿ
ಬ್ರಹ್ಮನಾಡಿಯ ಒಳಹೊಕ್ಕು ನೋಡಲು
ಅಲ್ಲಿ ಓಂಕಾರಜ್ಯೋತಿಯುಂಟು ನೋಡಾ.
ಆ ಓಂಕಾರಜ್ಯೋತಿಯಲ್ಲಿ ಮನಮಗ್ನಯೋಗವೇ ಯೋಗ,
ಮಿಕ್ಕಿನ ಯೋಗಂಗಳಲ್ಲಿ ಮನಮಗ್ನವಿಲ್ಲ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೬ ॥

೨೭೭

ನಾಡಿಗಳು ಚರಿಸುವ ಭೇದವನರಿದು
ಸುಷುಮ್ನವ ಒಳಹೊಕ್ಕು ಮಹಾಜ್ಯೋತಿರ್ಮಯಲಿಂಗವ ಕಂಡು
ಬೆರಸಿ ಭೇದವಿಲ್ಲದಿಹುದು ನೋಡಾ.
ಅದೇ ಜ್ಞಾನ, ಅದೇ ಪರಿಣಾಮ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೭ ॥

೨೭೮

ತಿಲದೊಳಗಣ ತೈಲದಂತೆ, ಕ್ಷೀರದೊಳಗಣ ಘೃತದಂತೆ,
ಪುಷ್ಪದೊಳಗಣ ಪರಿಮಳದಂತೆ, ತುಪ್ಪದೊಳಗಣ ರುಚಿಯಂತೆ,
ಎಪ್ಪತ್ತೆರಡುಸಾವಿರ ನಾಡಿಗಳೆಲ್ಲವ
ಶಿವನು ಬೆರೆಸಿ ಭೇದವಿಲ್ಲದಿಹನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೮ ॥

೨೭೯

ಇನ್ನು ವಾಯುಧಾರಣೆ ಎಂತೆಂದಡೆ :
ಚತುರ್ದಶವಾಯುಗಳೊಳು ಪಂಚವಾಯುವೆ ಮುಖ್ಯವಾಗಿಹುದು.
ಆ ಪಂಚವಾಯುವಿನೊಳು ದ್ವಿವಾಯುವೆ ಮುಖ್ಯವಾಗಿಹುದು.
ಆ ದ್ವಿವಾಯುವಿನೊಳು ಏಕವಾಯುವೆ ಮುಖ್ಯವಾಗಿಹುದು.
ಆ ಏಕವಾಯುವೆ ಚತುರ್ದಶವಾಯುವಾಗಿ ಚರಿಸುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೭೯ ॥

೨೮೦

ಎಂಬತ್ತೆಂಟು ಕೋಟಿ ರೋಮದ್ವಾರಂಗಳಲ್ಲಿ ಚರಿಸುವ
ವಾಯುವ ಚರಿಸಲೀಯದೆ ಧರಿಸಿ ಬ್ರಹ್ಮನಾಳದಲ್ಲಿ
ನಿಲಿಸುವುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೦ ॥

೨೮೧

ಪಿಂಗಳನಾಳವಮುಚ್ಚಿ ಇಡಾನಾಳದಲ್ಲಿ ತೆಗೆದು,
ಪಿಂಗಳನಾಳದಲ್ಲಿ ಮೆಲ್ಲಮೆಲ್ಲನೆ ಬಿಡುವುದು.
ಇಡಾನಾಳವ ಮುಚ್ಚಿ ಪಿಂಗಳನಾಳದಲ್ಲಿ ತೆಗೆದು,
ಇಡಾನಾಳದಲ್ಲಿ ಮೆಲ್ಲಮೆಲ್ಲನೆ ಬಿಡುವುದು.
ಹೀಂಗೆ ಪೂರಿಸಿ ಪೂರಿಸಿ ರೇಚಿಸಲು
ಉಕ್ಕುವದು ನೋಡಾ ಪೂರಕದೊಳು
ಅಪ್ರಮಾಣಕೂಡಲಸಂಗಮದೇವಾ. ॥ ೨೮೧ ॥

೨೮೨

ರೇಚಿಸಿ ರೇಚಿಸಿ ಪೂರಿಸಲು
ವಾಯು ಆಶ್ರಯವಂ ಕಂಡು
ಆ ವಾಯು ಕುಂಭಕವಾಗಿ ನಿಂದು
ತುಂಬಿ ತುಳುಕದಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೨ ॥

೨೮೩

ರೇಚಕ ಪೂರಕಮಂ ಬಿಟ್ಟು ಕುಂಭಕವಾಗಿ
ಆ ಕುಂಭಕದೊಳು ಸುಸ್ಥಿರವಾಗಿ
ನಿಂದಡಾತನೆ ಪರಮಯೋಗಿ.
ಆತನೆ ದಿವ್ಯಯೋಗಿ.
ಇದಕ್ಕೆ **ಶ್ರುತಿ** :
'ಕುಂಭಕಂ ಪರಮಂ ಪದಂ'
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೮೩ ॥

೨೮೪

ಆ ವಾಯುವಿಶಾಲವನರಿದು ನಿಲಿಸಿದಡೆ
ಆಯುಷ್ಯ ಅನೇಕ ಕಾಲವಿಹುದು ನೋಡಾ.
ಇದಕ್ಕೆ **ಈಶ್ವರ ಉವಾಚ** :
''ತಿಷ್ಟಂ ಗರ್ಭ ಸದಾಕಾಲಂ ವಾಯುವಿಕರಣಾತೀತಂ ।
ಸರ್ವಕಾಲಪ್ರಯೋಗೇನ ಸಹಸ್ರಾಯುರ್ಭವೇ ನರಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೮೪ ॥

೨೮೫

ಸಕಲ ವೇದಾಗಮ ಶಾಸ್ತ್ರ ಪುರಾಣಂಗಳೆಲ್ಲ
ಸಂಕಲ್ಪವಿಕಲ್ಪ ಭ್ರಾಂತುಭ್ರಮೆಯ ಕೆಡಿಸಲಲ್ಲದೆ
ವಾಯುವಶವಾದಡೆ ಬೇರೆ ಬ್ರಹ್ಮವನರಸಲುಂಟೆ
ಅಪ್ರಮಾಣಕೂಡಲಸಂಗಮದೇವಾ. ॥ ೨೮೫ ॥

೨೮೬

ಹೋಹ ವಾಯುವಂ ಹೋಗಲೀಯದೆ ನಿಲಿಸಿ,
ಇಡಾ ಪಿಂಗಳನಾಳದಲ್ಲಿ ಸೂಸಲೀಯದೆ
ಸುಷುಮ್ನ ಗಮ್ಯವ ಮಾಡಿದರೆ
ಆ ವಾಯುವಿಂಗೆ ಪರಮಪದವಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೬ ॥

೨೮೭

ಮುಂದೆ ಅನಂತಕೋಟಿ ಕಾಲ ತಪವ ಮಾಡಿದಾತಂಗಲ್ಲದೆ
ಈಗ ಅರಿವಿಲ್ಲ ನೋಡಾ.
ಮುಂದೆ ಅನಂತಕೋಟಿ ಕಾಲ ತಪವ ಮಾಡಿ

ಈಗ ಅರಿವನರಿದು ಅನುಭವಿಸುವುದೆ ಅರಿವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೭ ॥

೨೮೮

ಇನ್ನು ಅಗ್ನಿಧಾರಣವೆಂತೆಂದಡೆ :
ಮೂಲಜ್ವಾಲೆಯನೆಬ್ಬಿಸಿ ಸುಷುಮ್ನನಾಳದ
ಬಟ್ಟೆಯ ತುದಿಯನಡರಿ
ಸಹಸ್ರದಳಮಂಟಪನೊಳಹೊಕ್ಕು ನೋಡಿ
ಅಲ್ಲಿ ವಿಶ್ವತೋಮುಖ, ವಿಶ್ವತೋಚಕ್ಷು,
ವಿಶ್ವತೋಹಸ್ತ, ವಿಶ್ವತೋಪಾದವನುಳ್ಳ
ಮಹಾಗುರುವಂ ಕಂಡು ಪರಿಣಾಮಿಸುತ್ತಿರ್ದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೮ ॥

೨೮೯

ಕಾಲಾಗ್ನಿಯನೆಬ್ಬಿಸಿ, ಕಮಲನಾಳದ ತುದಿಯನಡರಿ,
ಕರ್ಮಂಗಳ ಸುಟ್ಟು, ಮಹಾಜ್ಯೋತಿ ಪ್ರಕಾಶದಲ್ಲಿ
ಬಯಲಾದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೮೯ ॥

೨೯೦

ಮಹಾವಾಯುವಂ ಪಿಡಿದು ಬಹುಮೂಲಜ್ವಾಲೆಯನೆಬ್ಬಿಸಿ,
ಮೇಲಣ ಬಯಲ ಬಾಗಿಲ ತೆಗೆದು ಒಳಹೊಕ್ಕು
ಮಹಾಜ್ಯೋತಿರ್ಮಯಲಿಂಗದಲ್ಲಿ ಬಯಲಾದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೦ ॥

೨೯೧

ಪರದಲ್ಲಿ ಮನವ ಶಿಲ್ಕಿಸಿ
ನಾಶಿಕಾಗ್ರದ ಮೇಲೆ ನಯನಾಂಬುಧಿಗಳಂ ತುಂಬಿ,
ಮೂಲಜ್ವಾಲೆಯ ಸುಷುಮ್ನನಾಳದ ಬಟ್ಟೆಯತುದಿಯನಡರಿ,
ಬ್ರಹ್ಮರಂಧ್ರವ ಮುಟ್ಟಿ, ಮೂಲಾಧಾರಮಂಡಲ ನಿಶ್ವಾಸಮಂ ಪಿಡಿದು,
ಹೊರಡದೆ ಸಾಧಿಸುವ ಯೋಗಿಗಳಿಗೆ ಮೇಲೆ ಕೊಡನುಕ್ಕಿತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೧ ॥

೨೯೨

ಮೂಲಾಧಾರವನೊತ್ತಿ ಮೂಲಾಗ್ನಿಯನೆಬ್ಬಿಸಿ,
ಮೂರಕ್ಷರವಂ ತಟ್ಟೆಯ ಮಾಡಿ, ಭಕ್ತಿಯೆಂಬ ಬತ್ತಿಯ ಹೀವಿ.

ಅಮೃತವೆಂಬ ತುಪ್ಪವನೆರದು,
ಪರಮಾನಂದವೆಂಬ ಜ್ಯೋತಿಯ ಮುಟ್ಟಿಸಿ,
ಆ ಪರಮಾನಂದಪ್ರಭೆಯೊಳೋಲಾಡುತ್ತಿರ್ದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೨ ॥

೨೯೩

ಇನ್ನು ಅಮೃತಧಾರಣವದೆಂತೆಂದಡೆ :
ಮೂಲವಾಯುವಂ ಪಿಡಿದು ಮೂಲಜ್ವಾಲೆಯನೆಬ್ಬಿಸಿ,
ಅಮಳೋಕ್ಯದ್ವಾರದಲ್ಲಿ ಜಿಹ್ವೆಯನೇರಿಸಿ,
ಚಂದ್ರಮಂಡಲದೊಳಿಹ ಅಮೃತವನುಂಡರೆ
ಅಜ ಹರಿ ಸುರ ರುದ್ರಾದಿಗಳಿಗೊಡೆಯ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೩ ॥

೨೯೪

ತ್ರಿಕಲೆ ದ್ವಾದಶಕಲೆ ಷೋಡಶಕಲೆಗಳೆಂಬ
ಕಲಾಬ್ರಹ್ಮದ ಮಧ್ಯದಲ್ಲಿಹ ಪ್ರಣವಕಲಶದಮೃತವನುಂಡರೆ
ಹಸಿವು ತೃಷೆಯಡಗಿ ಕಾಲಕಲ್ಪಿತವಿಲ್ಲದೆ
ಬ್ರಹ್ಮಸ್ವರೂಪನಹ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೪ ॥

೨೯೫

ಜ್ಞಾನಸ್ವರೂಪವಾಗಿ ಮಹಾಜ್ಯೋತಿರ್ಮಯಲಿಂಗವೆಂಬ
ಅಮೃತವನುಂಡಡೆ, ಹಸಿವು ತೃಷೆಗಳಡಗಿ
ಆನಂದಸ್ವರೂಪವಾಗಿ ಅನಂತಕಲ್ಪವಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೫ ॥

೨೯೬

ಇನ್ನು ಆಧಾರ ಧಾರಣವೆಂತೆಂದಡೆ :
ಪುಣ್ಯ–ಪಾಪ ಸ್ವರ್ಗ–ನರಕಾದಿಗಳಿಗೆ ಹೇತುಭೂತವಾಗಿಹ
ಅನ್ನ ಪಾನಾದಿಗಳಂ ಬಿಟ್ಟು–ಸಿದ್ಧಾಸನದಲ್ಲಿ ಕುಳ್ಳಿರ್ದು,
ಮೂಲಬಂಧ ಒಡ್ಯಾಣಬಂಧ ಜಾಳಾಂದರಬಂಧಮಂ ಮಾಡಿ
ಜಾಗ್ರ ಸ್ವಪ್ನ ಸುಷುಪ್ತಿ ತಲೆದೋರದೆ
ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ
ಪಚೇಂದ್ರಿಯಂಗಳಲ್ಲಿ ಮನ ಪವನಮಂ ಸೂಸಲೀಯದೆ,
ಏಕಾಗ್ರಚಿತ್ತನಾಗಿ ಮೂಲವಾಯುವಂ ಪಿಡಿದು
ಆಕುಂಚನಂ ಮಾಡಿ, ಮೂಲಾಗ್ನಿಯನೆಬ್ಬಿಸಿ,

ಆಧಾರಚಕ್ರ ಚತುರ್ದಳಪದ್ಮವ ಪೊಕ್ಕು ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು,
ಅಲ್ಲಿ ಪಚ್ಚೆವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ
ಅಗ್ನಿಯಂ ಪಟುಮಾಡಿ, ಮನಮಂ ಏಕೀಕರಿಸಿ,
ಅಲ್ಲಿಂದ ಮೇಲೆ ಸ್ವಾಧಿಷ್ಠಾನಚಕ್ರದ ಷಡುದಳಪದ್ಮವ ಪೊಕ್ಕನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೬ ॥

೨೯೭

ಸ್ವಾಧಿಷ್ಠಾನಚಕ್ರದ ಷಡುದಳಪದ್ಮವ ಪೊಕ್ಕು ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು,
ಅಲ್ಲಿ ಪಚ್ಚೆಯವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ
ಮನ ಪವನ ಬಿಂದುವಂ ಏಕೀಕರಿಸಿ
ನಾಭಿಚಕ್ರಕ್ಕೆ ನೆಗೆದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೭ ॥

೨೯೮

ಮಣಿಪೂರಕಚಕ್ರದ ದಶದಳ ಪದ್ಮವ ಪೊಕ್ಕು ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು,
ಅಲ್ಲಿ ಕೃಷ್ಣವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ
ಅಧೋಮುಖವಾಗಿಹ ಕುಂಡಲಿಯ ಸರ್ಪನ ಬಾಲವಂ ಮೆಟ್ಟಿ
ಊರ್ಧ್ವಮುಖವಂ ಮಾಡಿ, ಪಶ್ಚಿಮವಾಯು ತಿರುಗಿ
ಅನಿಲಾಗ್ನಿಯ ದೆಸೆಯಿಂದ ಗ್ರಂಥಿಗಳು ಕರಗಿ
ಮನಪವನಬಿಂದು ಸಂಯೋಗದಿಂದೇಕಾಗ್ರ ಚಿತ್ತದಿಂ
ಅನಾಹತಚಕ್ರದ ದ್ವಾದಶದಳದ ಪದ್ಮವ ಹೊಕ್ಕನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೮ ॥

೨೯೯

ಆ ಅನಾಹತಚಕ್ರದ ದ್ವಾದಶದಳದ ಪದ್ಮವ ಪೊಕ್ಕು ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು,
ಅಲ್ಲಿ ಕುಂಕುಮವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ,
ಅಗ್ನಿಯ ಪಟುಮಾಡಿ,ಮನ ಪವನ ಬಿಂದು ಸಂಯೋಗದಿಂದ
ವಿಶುದ್ಧಿಚಕ್ರದ ಷೋಡಶದಳದ ಪದ್ಮವ ಹೊಕ್ಕನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೯ ॥

೩೦೦

ಆ [ವಿಶುದ್ಧಿಚಕ್ರದ] ಷೋಡಶದಳಪದ್ಮವ ಪೊಕ್ಕುನೋಡಿ ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು
ಅಲ್ಲಿ ಶ್ವೇತವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ,
ಅಗ್ನಿಯ ಪಟುಮಾಡಿ,
ಮನ–ಪವನ–ಬಿಂದು ಸಂಯೋಗದಿಂದ
ಆಜ್ಞಾಚಕ್ರದ ದ್ವಿದಳಪದ್ಮವ ಹೊಕ್ಕನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೦ ॥

೩೦೧

ಆ [ಆಜ್ಞಾಚಕ್ರದ] ದ್ವಿದಳಪದ್ಮವ ಹೊಕ್ಕು ನೋಡಿ ಸಾಧಿಸಿ,
ಅಲ್ಲಿಹ ಮಂತ್ರ–ಪದ–ವರ್ಣ–ಭುವನ–ತತ್ವ–ಕಲೆಗಳಂ ಕಂಡು
ಜೀವ ಪರಮರಂ ಏಕೀಕರಿಸಿ
ಅಲ್ಲಿ ಮಾಣಿಕ್ಯವರ್ಣವಾಗಿಹ ಜ್ಯೋತಿರ್ಮಯಲಿಂಗಮಂ ಬೆರಸಿ
ಓಂಕಾರಜ್ಯೋತಿಯಂ ಬೆರಸುತ್ತ
ಉನ್ಮನಿಯ ಬೆಳಗನೊಳಕೊಂಡು ಕರ್ಣದ್ವಾರದಲ್ಲಿ
ಶಂಖ ದುಂದುಭಿ ಧ್ವನಿಗಳಂ ಕೇಳುತ್ತ ಪರಮಕಾಷ್ಠಿಯಾಗಿ
ತಾನೇ ಜಗತ್ತಾಗಿ "ಅಣೋರಣೀಯಾನ್ ಮಹತೋ ಮಹೀಯಾನ್"
"ಏಕಮೇವ ಅದ್ವಿತೀಯಂ" ಎಂಬ ಶ್ರುತಿಪ್ರಮಾಣದರಿವು ನೆಲೆಗೊಂಡು
ಷಡುಚಕ್ರ ಪ್ರಾಪ್ತಿಯಾಗಿ,
ಮನ–ಪವನ–ಬಿಂದು–ರವಿ–ಶಶಿ–ಶಿಖಿಗಳನೇಕೀಕರಿಸಿ
ಮೇಗಣ ಬಯಲ ಬಾಗಿಲಂ ತೆಗೆದು ಸಹಸ್ರದಳಪದ್ಮವ ಹೊಕ್ಕನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೧ ॥

೩೦೨

ಆ ಸಹಸ್ರದಳ ಪದ್ಮವ ಪೊಕ್ಕು ನೋಡಿ ಸಾಧಿಸಿ,
"ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋವೃತ್ವಾ ಅತ್ಯತಿಷ್ಠದ್ದಶಾಂಗುಲಂ ॥"
ಎಂಬ ಪರಮಪುರುಷನ ಕಂಡು ನಮೋ ನಮೋ ಎನುತಿರ್ದನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೨ ॥

೩೦೩

ಇನ್ನು ನಿರಾಧಾರಧಾರಣವೆಂತೆಂದಡೆ :
ನಿರಾಧಾರಯೋಗದ ಮನವೆಂಬ ಮಹಾಪೀಠದ ಮೇಲೆ
ಸುಜ್ಞಾನವೆಂಬ ಲಿಂಗವ ನೆಲೆಗೊಳಿಸಿ,
ದ್ರವ್ಯವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸಿ

ಭವದೂರನಾದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೩ ॥

೩೦೪

ಜೀವನೆಂಬ ಶಿವಾಲಯದೊಳು
ಶಿವನೆಂಬ ಲಿಂಗವ ನೆಲೆಗೊಳಿಸಿ
ಅಜ್ಞಾನವೆಂಬ ನಿರ್ಮಾಲ್ಯವಂ ಕಳೆದು
ಸೋಹಂಭಾವದಲ್ಲಿ ಪೂಜಿಸುತ್ತಿರಲು
ಎನ್ನ ಭವರೋಗಂಗಳು ಬಯಲಾಗಿ
ಭವರಹಿತನಾದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೪ ॥

೩೦೫

ಎನ್ನ ದೇಹವೆಂಬ ಪ್ರಾಕಾರದೊಳು
ಮನವೆಂಬ ಶಿವಾಲಯ ನೋಡಾ.
ಮನವೆಂಬ ಶಿವಾಲಯದೊಳು
ಚಿದ್ರೂಪವೆಂಬ ಸಿಂಹಾಸನ ನೋಡಾ.
ಚಿದ್ರೂಪವೆಂಬ ಸಿಂಹಾಸನದ ಮೇಲೆ
ಚಿತ್ಪ್ರಕಾಶವೆಂಬ ಲಿಂಗವ ನೆಲೆಗೊಳಿಸಿ
ನಿಶ್ಚಿಂತವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸಲು
ಭವಮಾಲೆ ಹಿಂಗಿ ಭವರಹಿತನಾದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೫ ॥

೩೦೬

ಬಿಂದುವೆ ಪೀಠ, ನಾದವೇ ಲಿಂಗ,
ಕಳೆಯೇ ಪೂಜೆಯಾಗಿ ಅರ್ಚಿಸುವರಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೦೬ ॥

೩೦೭

ಓಂಕಾರವೇ ಪೀಠ, ಅಕಾರವೇ ಕಂಠ,
ಉಕಾರವೆ ಮೇಗಣಪೀಠವಾಗಿ,
ಆ ಮೇಗಣಪೀಠದ ಮೇಲಿಹ ಬಟುವೇ ಮಕಾರ,
ಆ ಬಟುವಿನೊಳಗಣ ಗುಣಿಯ ಬಿಂದು,
ಆ ಬಿಂದುವಿನೊಳಗಣ ನಾದವೆ ಲಿಂಗವಾಗಿ ಅರ್ಚಿಸುವುದು
ನಿರಾಧಾರಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೭ ॥

೨೦೮

ಓಂಕಾರದ ಪೀಠದ ಮೇಲೆ
ನಿಶ್ಶಬ್ದವೆಂಬ ಲಿಂಗವ ನೆಲೆಗೊಳಿಸಿ,
ನಿರಾಮಯದಲ್ಲಿ ನಿಂದು
ನಿರಾಳನಾಗಿಹುದೇ ನಿರಾಧಾರಪೂಜೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೮ ॥

೨೦೯

ನಾಡಿಧಾರಣ ವಾಯುಧಾರಣ ಅಗ್ನಿಧಾರಣ
ಅಮೃತಧಾರಣ ಆಧಾರಧಾರಣ ನಿರಾಧಾರಧಾರಣ ಷಷ್ಠಿಧಾರಣವಂ ಮಾಡಿ,
ಇನ್ನು ಆತ್ಮಯೋಗಿಯಾಗಿರಬಾರದೆಂದು
ನಿಂದು, ತಾನೆ ತಿಳಿದು, ವಿಚಾರಿಸಿಕೊಂಡು
ಅನಂತದೇಶಗಳಂ ತಿರುಗಿ ಸದ್ಗುರುಸ್ವಾಮಿಯನರಸಿ,
ಅವರ ಕಾರುಣ್ಯಪಡೆವೆನೆಂದು ಬಾಹಾಗ
ಸದ್ಗುರುಸ್ವಾಮಿ ಕಂಡನು.
ಇದಕ್ಕೆ **ಈಶ್ವರ ಉವಾಚ** :
''ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ ।
ಗುಣರೂಪವಿಹೀನತ್ವಂ ಗುರುರಿತ್ಯಭಿಧೀಯತೇ ॥
ಗುಕಾರಂ ಮಮ ರೂಪಂ ಚ ರುಕಾರಂ ತನುರೂಪಕಂ ।
ಉಭಯೋಃ ಸಂಗಮೇ ದೇವಾಃ ಗುರುರೂಪೋ ಮಹೇಶ್ವರಃ ॥
ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ ।
ಗುಣರೂಪಮತೀತಂ ಚ ಯೋ ದದ್ಯಾತ್ ಸ ಗುರುಸ್ಮೃತಃ ॥
ಯೋ ಗುರುಃ ಸ ಶಿವಃ ಪ್ರೋಕ್ತಃ ಶಿವಸ್ಯ ಏವ ಗುರುಸ್ಮೃತಃ ।
ಭುಕ್ತಿಮುಕ್ತಿಪ್ರದಾತಾ ಚ ಮಮರೂಪೋ ಮಹೇಶ್ವರಃ॥''
ಇಂತೆಂದುದಾಗಿ,
ಇದಕ್ಕೆ **ಶ್ರೀ ಮಹಾದೇವ ಉವಾಚ** :
''ಪರಶಿವೋ ಗುರೋರ್ಮೂರ್ತಿ ಶಿಷ್ಯದೀಕ್ಷಾದಿಕಾರಣಾತ್ ।''
ಇಂತೆಂದುದಾಗಿ,
ಪರಶಿವ ತಾನೇ ಗುರುವಾಗಿ ಬಂದನಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೨೦೯ ॥

೨೧೦

ಆ ಸದ್ಗುರುಸ್ವಾಮಿಯ ಕಂಡು
ದೀರ್ಘದಂಡ ನಮಸ್ಕಾರಮಂ ಮಾಡಿ
ಶ್ರೀಗುರುವೆ ಸದ್ಗುರುವೆ ಶ್ರೀ ಮಹಾಗುರುವೆ

ಶ್ರೀ ಜಗದ್ಗುರುವೆ ಶರಣು ಶರಣೆನುತಿರ್ದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೧೦ ॥

೩೧೧

ಮತ್ತಂ, ಆ ಶಿಷ್ಯನು ಶ್ರೀ ಗುರುವೆ ಶರಣು,
ಸರ್ವಚೈತನ್ಯಾತ್ಮಗುರುವೆ ಶರಣು,
ನಿತ್ಯನಿರಂಜನಗುರುವೆ ಶರಣು, ಶಾಂತ ಉಪಶಾಂತಗುರುವೇ ಶರಣು,
ವ್ಯೋಮಾತೀತಗುರುವೆ ಶರಣು,
ನಾದ ಬಿಂದು ಕಲಾತೀತಗುರುವೆ ಶರಣು,
ನಿಮ್ಮ ಭವರೋಗವೈದ್ಯನೆಂದು ಶ್ರುತಿಗಳು ಸಾರುತಿರಲು
ನಾನು ಭವರೋಗಿ ಬಂದು ನಿಮ್ಮ ಮೊರೆಹೊಕ್ಕೆನು,
ಎನ್ನ ಭವರೋಗಂಗಳ ಕಳದು
ನಿಮ್ಮ ಕರುಣಪ್ರಸಾದವನಿಕ್ಕಿ ಸಲಹಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೧೧ ॥

೩೧೨

ಮತ್ತಂ, ಆ ಶಿಷ್ಯನ ಪ್ರಳಾಪವೆಂತೆಂದಡೆ :
ಅಯ್ಯಾ, ಅನಂತ ಜನ್ಮದಲ್ಲಿ ಮಾಡಿದ ಪಾಪಂಗಳೆಂಬ ಪಂಕವ
ನಿಮ್ಮ ಚಿದ್ವಾಕ್ಯಪ್ರಭೆಯಲ್ಲಿ ಮುಳುಗಿಸುವುದಯ್ಯ.
ಎನ್ನ ಭವಾರಣ್ಯವ ನಿಮ್ಮ ಮಹಾಜ್ಞಾನ ಶಸ್ತ್ರದಲ್ಲಿರಿದು ಖಂಡಿಸುವುದಯ್ಯ.
ಎನ್ನ ಭವರೋಗಂಗಳೆಂಬ ಕಾಷ್ಠಂಗಳ
ನಿಮ್ಮ ಮಹಾಜ್ಞಾನಾಗ್ನಿಯಲ್ಲಿ ದಹಿಸುವುದಯ್ಯ.
ಅಪ್ರಮಾಣಕೂಡಲಸಂಗಮದೇವಾ ಶಿವಧೋ ಶಿವಧೋ. ॥ ೩೧೨ ॥

೩೧೩

ಮತ್ತಂ, ಆ ಶಿಷ್ಯನ ಸ್ತೋತ್ರ:
ಶ್ರೀಗುರುವೆ ಮಹಾದೇವ, ಮಹಾಗುರುವೆ ಸದಾಶಿವನು,
ಶ್ರೀಗುರುವೆ ಪರತತ್ವ, ಶ್ರೀಗುರುವೆ ಪರಬ್ರಹ್ಮವೆಂದರಿದು
ನಿಮ್ಮ ಮೊರೆಹೊಕ್ಕೆನು,
ಎನ್ನ ಭವಸಾಗರವ ದಾಂಟಿಸಿ,
ಎನ್ನ ಕರಕಮಲಕ್ಕೆ ಇಷ್ಟಲಿಂಗವ ಕರುಣಿಸಿ
ರಕ್ಷಿಸಾ ಶ್ರೀಗುರುವೆ
ಅಪ್ರಮಾಣಕೂಡಲಸಂಗಮದೇವಾ. ॥ ೩೧೩ ॥

೩೧೪

ಇಂತೀ ನಾನಾ ಮುಖದಲ್ಲಿ ಸ್ತೋತ್ರವ ಮಾಡಿ
ಅಳುವ ಶಿಷ್ಯನಂ ಕಂಡು

ಆ ಸದ್ಗುರುಸ್ವಾಮಿ ಆ ಶಿಷ್ಯನ ಹಣೆಯ ಹಿಡಿದೆತ್ತಿ
ಕಂಬನಿಯಂ ತೊಡದು ಅಂಜದಿರು ಅಂಜದಿರು
ನಿನ್ನ ಭವರೋಗಂಗಳಂ ಮಾಣಿಸುವೆನೆಂದು
ಅಭಯಹಸ್ತವಂ ಕೊಟ್ಟು ಸಂತೈಸಿ
ತಮ್ಮ ಕರುಣಪ್ರಸಾದವನಿತ್ತು ಸಲಹಿದನಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೧೪ ॥

೩೧೫

ಮತ್ತಂ, ಆ ಶಿಷ್ಯನು ತನ್ನ ಪೂರ್ವಾಪರಸಂಬಂಧವ
ವಿವೇಕಿಸಿ ನುಡಿದ ಪ್ರಸ್ತಾವದ ವಚನವೆಂತೆಂದಡೆ :
ಅನಾದಿಯೆಂಬ ಯುಗದಲ್ಲಿ ಅನಾದಿಕಾಯನೆಂಬ ಒಡಲುವಿಡಿದು
ನಿರಂಜನಪ್ರಣವವ ಧ್ಯಾನಿಸುತಿರ್ದೆನು.
ಆದಿಯೆಂಬ ಯುಗದಲ್ಲಿ ಆದಿಕಾಯನೆಂಬ ಒಡಲುವಿಡಿದು
ಅವಾಚ್ಯಪ್ರಣವವ ಧ್ಯಾನಿಸುತಿರ್ದೆನು.
ಅನಾಗತವೆಂಬ ಯುಗದಲ್ಲಿ ಅನಂತಕಾಯನೆಂಬ ದೇಹದೊಳು
ಚಿನ್ನಾದಪ್ರಣವವ ಧ್ಯಾನಿಸುತಿರ್ದೆನು.
ಅನಂತವೆಂಬ ಯುಗದಲ್ಲಿ ಅನಂತಕಾಯನೆಂಬ ಒಡಲುವಿಡಿದು
ಚಿದ್ಬಿಂದುಪ್ರಣವವ ಧ್ಯಾನಿಸುತಿರ್ದೆನು.
ಅದ್ಭುತವೆಂಬ ಯುಗದಲ್ಲಿ ಸೂಕ್ಷ್ಮಕಾಯನೆಂಬ ಒಡಲುವಿಡಿದು
ಚಿತ್ಕಲಾಪ್ರಣವವ ಧ್ಯಾನಿಸುತಿರ್ದೆನು.
ತಮಂಧವೆಂಬ ಯುಗದಲ್ಲಿ ಜ್ಞಾನಕಾಯನೆಂಬ ಒಡಲುವಿಡಿದು
ಕಲಾಪ್ರಣವವ ಧ್ಯಾನಿಸುತಿರ್ದೆನು.
ತಾರಜವೆಂಬ ಯುಗದಲ್ಲಿ ಸಕಲಕಾಯನೆಂಬ ಒಡಲುವಿಡಿದು
ಅನಾದಿಪ್ರಣವವ ಧ್ಯಾನಿಸುತಿರ್ದೆನು.
ತಂಡಜವೆಂಬ ಯುಗದಲ್ಲಿ ಪ್ರಚಂಡಕಾಯನೆಂಬ ಒಡಲುವಿಡಿದು
ಅನಾದಿ ಅಕಾರಪ್ರಣವವ ಧ್ಯಾನಿಸುತಿರ್ದೆನು.
ಭಿನ್ನಜವೆಂಬ ಯುಗದಲ್ಲಿ ಭಿನ್ನಜ್ಞಾನನೆಂಬ ಒಡಲುವಿಡಿದು
ಅನಾದಿ ಉಕಾರಪ್ರಣವವ ಧ್ಯಾನಿಸುತಿರ್ದೆನು.
ಭಿನ್ನಾಯುಕ್ತವೆಂಬ ಯುಗದಲ್ಲಿ ಅಭಿನ್ನಕಾಯನೆಂಬ ಒಡಲುವಿಡಿದು
ಅನಾದಿ ಮಕಾರಪ್ರಣವವ ಧ್ಯಾನಿಸುತಿರ್ದೆನು.
ಅವ್ಯಕ್ತವೆಂಬ ಯುಗದಲ್ಲಿ ಅವಿರಳಕಾಯನೆಂಬ ಒಡಲುವಿಡಿದು
ಆದಿಪ್ರಣವವ ಧ್ಯಾನಿಸುತಿರ್ದೆನು.
ಅಮದಾಯುಕ್ತವೆಂಬ ಯುಗದಲ್ಲಿ ಅಖಂಡಿತಜ್ಞಾನಕಾಯನೆಂಬ
ಒಡಲುವಿಡಿದು

ಶಿವಪ್ರಣವವ ಧ್ಯಾನಿಸುತಿರ್ದೆನು.
ಮಣಿರಣವೆಂಬ ಯುಗದಲ್ಲಿ ಮನೋನ್ಮಯನೆಂಬ ಒಡಲುವಿಡಿದು
ಪರಮೋಂಕಾರವ ಧ್ಯಾನಿಸುತಿರ್ದೆನು.
ಮಾನ್ಯರಣವೆಂಬ ಯುಗದಲ್ಲಿ ಮಹಾಕಾಯನೆಂಬ ಒಡಲುವಿಡಿದು
ಮಹದೋಂಕಾರವ ಧ್ಯಾನಿಸುತಿರ್ದೆನು.
ವಿಶ್ವಾರಣವೆಂಬ ಯುಗದಲ್ಲಿ ವಿಶ್ವಕಾಯನೆಂಬ ಒಡಲುವಿಡಿದು
ವಿಶ್ವಾಧಿಕಮಹಾಲಿಂಗವ ಧ್ಯಾನಿಸುತಿರ್ದೆನು.
ವಿಶ್ವಾವಸುವೆಂಬ ಯುಗದಲ್ಲಿ ವಿಶ್ವಕಾರಣನೆಂಬ ದೇಹವಿಡಿದು
ವಿಶ್ವರೂಪಲಿಂಗವ ಧ್ಯಾನಿಸುತಿರ್ದೆನು.
ಅಲಂಕೃತವೆಂಬ ಯುಗದಲ್ಲಿ ಅನಂತಕಾಯನೆಂಬ ಒಡಲುವಿಡಿದು
ಅಖಂಡಲಿಂಗವ ಧ್ಯಾನಿಸುತಿರ್ದೆನು.
ಕೃತಯುಗದಲ್ಲಿ ಅಖಂಡಾತ್ಮಕನೆಂಬ ಗಣೇಶ್ವರನಾಗಿರ್ದಂದು
ಅನಾದಿಲಿಂಗವ ಧ್ಯಾನಿಸುತಿರ್ದೆನು.
ತ್ರೇತಾಯುಗದಲ್ಲಿ ಅಚಲಾತ್ಮನೆಂಬ ಗಣೇಶ್ವರನಾಗಿರ್ದಂದು
ಆದಿಲಿಂಗವ ಧ್ಯಾನಿಸುತಿರ್ದೆನು.
ದ್ವಾಪರಯುಗದಲ್ಲಿ ಅಖಂಡಿತನೆಂಬ ಗಣೇಶ್ವರನಾಗಿರ್ದಂದು
'ಓಂಕಾರೇಭ್ಯೋ ಜಗದ್ರಕ್ಷಾಯ ಜಗತಾಂ ಪತಯೇ ನಮೋ ನಮಃ'
ಎಂಬ ಪ್ರಣವಲಿಂಗವ ಧ್ಯಾನಿಸುತಿರ್ದೆನು.
ಕಲಿಯುಗದಲ್ಲಿ ಅಪ್ರಮಾಣಗಣೇಶ್ವರನಾಗಿ ಬಂದು
ಅಪ್ರಮಾಣ ಅಗೋಚರಲಿಂಗವ ಧ್ಯಾನಿಸುತಿರ್ದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೧೫ ॥

**ಪಿಂಡಸ್ಥಲ :**
ತನ್ನ ಪೂರ್ವಾಪರ ಸಂಬಂಧವ ಚಿದ್ವಿವೇಕದಿಂದ ತಿಳಿದ ಮಹಾ ಶರಣಂಗೆ
ಮುಂದೆ ಪಿಂಡಸ್ಥಲವಾದುದು.

೩೧೬

ನಾದ ಬಿಂದುವ ನುಂಗಿ ಉಗುಳದಂತಿದ್ದುದು.
ಬಿಂದುವ ಕಲೆ ನುಂಗಿ ಉಗುಳದಂತಿದ್ದುದು.
ಕಲೆಯ ಕಲಾತೀತ ನುಂಗಿ ಉಗುಳದಂತಿದ್ದುದು.
ಕಲಾತೀತವ ಬಯಲು ನುಂಗಿ ಉಗುಳದಂತಿದ್ದುದು.
ಬಯಲ ನಿರ್ವಯಲು ನುಂಗಿ ಉಗುಳದಂತಿದ್ದುದು.
ನಿರ್ವಯಲ ನಿರಾಕಾರ ನುಂಗಿ ಉಗುಳದಂತಿದ್ದುದು.
ನಿರಾಕಾರವ ನಿರುಪಮ ನುಂಗಿ ಉಗುಳದಂತಿದ್ದುದು.
ನಿರುಪಮವ ನಿರಾಳ ನುಂಗಿ ಉಗುಳದಂತಿದ್ದುದು.

ನಿರಾಳವ ಸಹಜ ನುಂಗಿ ಉಗುಳದಂತಿದ್ದುದು ನೋಡಾ
ಅಪ್ರಮಾಣಕೂಡಲಸಂಗಮದೇವಾ ನಿಮ್ಮ ಶರಣಸಂಬಂಧ. ॥ ೩೧೬ ॥

೩೧೭

ನಿರಂಜನಪ್ರಣವ ಉತ್ಪತ್ಯವಾಗದಂದು
ಅವಾಚ್ಯಪ್ರಣಫ ಕಲಾಪ್ರಣವವೆಲ್ಲಿದ್ದುದೊ ?
ಅನಾದಿಪ್ರಣವ ಆದಿಪ್ರಣವ ಉತ್ಪತ್ಯವಾಗದಂದು
ಅಕಾರಪ್ರಣವ ಉಕಾರಪ್ರಣವವೆಲ್ಲಿದ್ದುದೊ ?
ಪರಶಿವಶಕ್ತಿಯ ಸಂಕಲ್ಪದಿಂದ ನಾದ–ಬಿಂದು–ಕಳೆ ಸಂಯುಕ್ತವಾಗಿ
ಅಖಂಡಲಿಂಗ ಉತ್ಪತ್ಯವಾಗದಂದು,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಲ್ಲಿದ್ದರೊ ?
ಸದ್ಯೋಜಾತ ವಾಮದೇವ ಅಘೋರ ತತ್ಪುರುಷ
ಈಶಾನವೆಂಬ ಪಂಚಬ್ರಹ್ಮವಿಲ್ಲದಂದು
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮರೆಂಬ
ಅಷ್ಟತನುಮೂರ್ತಿಗಳೆಲ್ಲಿದ್ದರೊ ?
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮರೆಂಬ
ಶಿವನ ಅಷ್ಟತನುಮೂರ್ತಿಗಳು ನೆಲೆಗೊಳ್ಳದಂದು
ಅಖಂಡ ಲೋಕಾದಿಲೋಕಂಗಳು ಸಚರಾಚರಗಳೆಲ್ಲಿದ್ದುದೋ ?
ಅಪ್ರಮಾಣಕೂಡಲಸಂಗಮದೇವಾ,
ನಿಮ್ಮ ನಿಲವ ಮಹಾನುಭಾವಸುಖಿ ಬಲ್ಲನು. ॥ ೩೧೭ ॥

**ಪಿಂಡಜ್ಞಾನಸ್ಥಲ :**

ತನ್ನ ಚಿದ್ವಿವೇಕದಿಂದ ಪಿಂಡಸ್ಥಲವನರಿದು ಆ ಪಿಂಡಸ್ಥಲ ಅಂಗವಾದ ಮಹಾ ಶರಣಂಗೆ ಮುಂದೆ ಪಿಂಡಜ್ಞಾನಸ್ಥಲವಾದುದು.

೩೧೮

ಪೃಥ್ವಿ ಅಪ್ಪು ತೇಜ ವಾಯು ಆಕಾಶವಿಲ್ಲದಂದು,
ಚಂದ್ರ ಸೂರ್ಯ ಆತ್ಮರಿಲ್ಲದಂದು,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರಿಲ್ಲದಂದು,
ನಾದ ಬಿಂದು ಕಳೆಗಳಿಲ್ಲದಂದು,
ಪ್ರಕೃತಿ ಪ್ರಾಣ ಓಂಕಾರವಿಲ್ಲದಂದು,
ಒಬ್ಬನೆ ಸ್ವಯಂಜ್ಯೋತಿಯಾಗಿದ್ದನಯ್ಯಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವಾ. ॥ ೩೧೮ ॥

೩೧೯

ಜ್ಞಾತೃ ಜ್ಞಾನಂಗಳಿಲ್ಲದಂದು, ಜ್ಞಾನತ್ರಯಂಗಳಿಲ್ಲದಂದು,
ಜೀವಾತ್ಮ ಅಂತರಾತ್ಮ ಪರಮಾತ್ಮರಿಲ್ಲದಂದು,

ತ್ರೈಲೋಕ್ಯ ಸಚರಾಚರರೆಲ್ಲ ರಚನೆಗೆ ಬಾರದಂದು
ಅನಂತಕೋಟಿ ಬ್ರಹ್ಮಾಂಡಗಳನೊಳಕೊಂಡು
ಆದಿ ಮಧ್ಯಾವಸಾನಂಗಳಿಲ್ಲದೆ
ಮಹಾಘನ ಚೈತನ್ಯನಾಗಿದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವಾ. ॥ ೩೧೯ ॥

**ಸಂಸಾರಹೇಯಸ್ಥಲ :**

ತನ್ನ ಚಿದ್ವಿವೇಕದಿಂದ ಪಿಂಡಜ್ಞಾನಮಂ ತಿಳಿದು ಆ ಪಿಂಡಜ್ಞಾನ ಅಂಗವಾದ ಶರಣಂಗೆ ಮುಂದೆ ಸಂಸಾರಹೇಯಸ್ಥಲವಾದುದು.

೩೨೦

ಸಂಸಾರವೆಂಬ ಸಾಗರದೊಳು ಬಿದ್ದು ಮುಳುಗಿದೆನಯ್ಯ.
ತಲೆಯುದ್ದವೆಂಬೆನೆ ? ತಲೆಯುದ್ದವಲ್ಲ.
ಉರದುದ್ದವೆಂಬೆನೆ ? ಉರದುದ್ದವಲ್ಲ.
ಕೊರಳುದ್ದವೆಂಬೆನೆ ? ಕೊರಳುದ್ದವಲ್ಲ.
ಶಿರದುದ್ದವೆಂಬೆನೆ ?ಶಿರದುದ್ದವಲ್ಲ.
ಮುಗಿಲುದ್ದವಾದ ಬಳಿಕ ಇನ್ನೇವೆ ಇನ್ನೇವೆನಯ್ಯಾ ?
ಸಂಸಾರಸಾಗರದೊಳು ಬಿದ್ದು ಮುಳುಗಿಹನ
ತೆಗೆದು ಕಾಯಯ್ಯ ಕಾಯಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೨೦ ॥

೩೨೧

ಸಂಸಾರವೆಂಬ ಆರಣ್ಯದೊಳು ಬಿದ್ದೆನು.
ಆಸೆಯೆಂಬ ಹುಲಿ ಬಂದು ಹಿಡಿಯಿತ್ತಯ್ಯ ಎನ್ನ.
ನಿಮ್ಮ ಮಹಾಜ್ಞಾನ ಶಸ್ತ್ರದಲ್ಲಿ
ಆಸೆಯೆಂಬ ಹುಲಿಯ ಕೊಂದು ನಿಮ್ಮತ್ತ ತೆಗೆದುಕೊಳ್ಳಾ
ಅಪ್ರಮಾಣಕೂಡಲಸಂಗಮದೇವಾ. ॥ ೩೨೧ ॥

೩೨೨

ಸೂರ್ಯನ ಗ್ರಹಣದಂತೆ ಸರ್ವಗ್ರಹಣವಾಯಿತ್ತಯ್ಯಾ ಎನಗೆ.
ಸಂಸಾರವೆಂಬ ರಾಹು ಸರ್ವಗ್ರಹಣವಾಗಿ ಹಿಡಿದು ನುಂಗಿತ್ತಯ್ಯಾ ಎನ್ನ.
ಈ ಬೆಂದ ಸಂಸಾರ ಎಂದು ಸಮನಾಗಿ ಮೋಕ್ಷವಹುದೋ ?
ಇನ್ನೆಂದಿಂಗೆ ಪರಮಪದವಹುದೊ
ಅಯ್ಯಾ ಅಪ್ರಮಾಣಕೂಡಲಸಂಗಮದೇವಾ ? ॥ ೩೨೨ ॥

೩೨೩

ಶಬ್ದ ಸ್ಪರ್ಶ ರೂಪು ರಸ ಗಂಧವೆಂಬ
ಸಂಸಾರದ ಬಲೆಯಲ್ಲಿ ಸಿಕ್ಕಿದೆನಯ್ಯಾ.
ಇವರು ಐದು ಕಡೆಯಲ್ಲಿ ಕಾಡುತ್ತೈದಾರೆ.
ಈ ಐವರ ಕಾಟ ಇನ್ನೆಂದಿಂಗೆ ಸಮನಾಗಿ
ಮೋಕ್ಷವಹುದೋ ಅಯ್ಯಾ
ಅಪ್ರಮಾಣಕೂಡಲಸಂಗಮದೇವಾ ? || ೩೨೩ ||

**ಮಾಯಾವಿಡಂಬನಸ್ಥಲ :**

ಇಂತು ತನ್ನ ಚಿದ್ವಿವೇಕದಿಂದ ತಿಳಿದು ವಿವೇಕಿಸಿ ಸಂಸಾರಹೇಯಮಂ ಮಾಡಿದ ಮಹಾಶರಣಂಗೆ ಮುಂದೆ ಮಾಯಾವಿಡಂಬನಸ್ಥಲವಾದುದು.

೩೨೪

ಇನ್ನು ಮಾಯಾವಿಡಂಬನಸ್ಥಲವದೆಂತೆಂದಡೆ :
ಮಾಯೆಗಂಜಿ ಕೌಪವ ಕಟ್ಟಿದವರು ಕೋಟಾನುಕೋಟಿ.
ಮಾಯೆಗಂಜಿ ತಪೋವನವ ಹೊಕ್ಕವರು ಕೋಟಾನುಕೋಟಿ.
ಮಾಯೆಗಂಜಿ ಪವನಾಶನವಾಗಿಹರು ಕೋಟಾನುಕೋಟಿ.
ಮಾಯೆಗಂಜಿ ಗಿರಿಗಹ್ವರಂಗಳ ಹೊಕ್ಕವರು ಕೋಟಾನುಕೋಟಿ.
ಮಾಯೆಗಂಜಿ ತರಗೆಲೆಗಳ ಮೆದ್ದವರು ಕೋಟಾನುಕೋಟಿ.
ಇವರೆಲ್ಲರು ಮಾಯೆಯ ಬಾಯ ತುತ್ತಾದರು.
ನಾನು ಮರ್ತ್ಯಕ್ಕೆ ಬಂದು
ಪ್ರಭು ಬಸವಣ್ಣ ಮೊದಲಾದ ಅಸಂಖ್ಯಾತ ಗಣಂಗಳ
ಪ್ರಸಾದವ ಕೊಂಡೆನಾಗಿ ಮಾಯಾತೀತನಾದೆ ಕಾಣಾ
ಅಪ್ರಮಾಣಕೂಡಲಸಂಗಮದೇವಾ. || ೩೨೪ ||

೩೨೫

ಮನು ಮುನಿ ಯತಿ ಸನ್ಯಾಸಿಗಳೆಲ್ಲರು
ಮಾಯೆಗೊಳಗಾಗಿ ಭವಸಾಗರದೊಳು ಬಿದ್ದರು ನೋಡಾ.
ದೇವದಾನಮಾನವರೆಲ್ಲರು
ಮಾಯೆಗೊಳಗಾಗಿ ನಾನಾ ಯೋನಿಯಲ್ಲಿ ಬಂದರು ನೋಡಾ,
ಬ್ರಹ್ಮ ವಿಷ್ಣ್ವಾದಿ ದೇವರ್ಕಳೆಲ್ಲರು
ಮಾಯೆಗೊಳಗಾಗಿ ಭವಾರಣ್ಯವ ಹೊಕ್ಕರು ನೋಡಾ.
ಮಾಯೆಯನತಿಗಳವ ನಿರ್ಮಾಯಂಗಲ್ಲದೆ ಭವಮಾಲೆ ಹಿಂಗದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೨೫ ||

೩೨೬

ಮನು ಮುನಿ ಯತಿ ಸನ್ಯಾಸಿಗಳ
ಮಾಯೆ ಕೊಂಡು ಕೂಗುವಂದು
ಮಾಯಾಸಂಹಾರನೆಂಬ ಗಣೇಶ್ವರನಾಗಿದ್ದೆನಯ್ಯಾ.
ದೇವ–ದಾನ–ಮಾನವರೆಲ್ಲರ
ಮಾಯೆ ಕಾಲಲ್ಲಿ ಕಟ್ಟಿ ಎಳೆವಂದು
ಮಾಯನಾಶನೆಂಬ ಗಣೇಶ್ವರನಾಗಿದ್ದೆನಯ್ಯಾ.
ಮನು ಮುನಿ ಯತಿ ಬ್ರಹ್ಮಚಾರಿಗಳ
ಮಾಯೆ ಕೊಂದು ಕೋಳಾಹಳವ ಮಾಡುವಂದು
ಮಾಯಾತೀತನೆಂಬ ಗಣೇಶ್ವರನಾಗಿದ್ದೆನಯ್ಯಾ
ಅಪ್ರಮಾಣಕೂಡಲಸಂಗಮದೇವಾ. ॥ ೩೨೬ ॥

೩೨೭

ಅನಂತಕೋಟಿ ಬ್ರಹ್ಮರ
ಮಾಯೆ ನುಂಗಿ ನುಂಗಿ ಉಗುಳುವಂದು
ಮಾಯಾರಹಿತನೆಂಬ ಗಣೇಶ್ವರನಾಗಿದ್ದೆನು.
ಅನಂತಕೋಟಿ ವಿಷ್ಣ್ವಾದಿಗಳ ಮಾಯೆ ನುಂಗುವಂದು
ಮಾಯಾಹರನೆಂಬುವ ಗಣೇಶ್ವರನಾಗಿದ್ದೆನು.
ಅನಂತಕೋಟಿ ಇಂದ್ರಾದಿಗಳ ದೇವರ್ಕಳ
ಮಾಯೆ ಒದ್ದೊದ್ದು ಕೊಲುವಂದು
ಮಾಯಾತೀತನೆಂಬ ಗಣೇಶ್ವರನಾಗಿದ್ದೆನು.
ಅನಂತಕೋಟಿ ಋಷಿಗಳ ತಪವ ಮುರಿದು
ಕೆಡಹಿ ಉಚ್ಛಿಷ್ಟವ ಮಾಡುವಂದು
ಮಾಯಾದಹನನೆಂಬ ಗಣೇಶ್ವರನಾಗಿದ್ದೆನು.
ಇವರೆಲ್ಲರು ಮಾಯೆಯ ಕಾಲ ಸರಮಾಲೆಯಾದಂದು
ಮಾಯಾಭಸ್ಮ ಗಣೇಶ್ವರನಾಗಿದ್ದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೨೭ ॥

**ಗುರುಕರುಣಸ್ಥಲ :**

ಇಂತು ತನ್ನ ಚಿದ್ವಿವೇಕದಿಂದ ತಿಳಿದು ವಿವೇಕಿಸಿ ಮಾಯಾವಿಡಂಬನವಂ ಮಾಡಿದ ಮಹಾಶರಣಂಗೆ ಮುಂದೆ ಗುರುಕರುಣಸ್ಥಲವಾದುದು.

೩೨೮

ಇನ್ನು ಗುರುಕರುಣಸ್ಥಲವದೆಂತೆಂದಡೆ :
ನಾನಾ ಭವದಲ್ಲಿ ಬಂದ ಭವಿಯಂ ಕಳದು
ಭಕ್ತನ ಮಾಡಿದ ಕ್ರಮವೆಂತೆಂದಡೆ ;

'ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ'ವೆಂಬ ವಿಭೂತಿಯಿಲ್ಲದಂದು.
'ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ'ವೆಂಬ ವಿಭೂತಿಯಿಲ್ಲದಂದು.
'ವ್ಯೋಮೇತಿ ಭಸ್ಮ ಸೋಮೇತಿ ಭಸ್ಮ'ವೆಂಬ ವಿಭೂತಿಯಿಲ್ಲದಂದು.
'ಸೂರ್ಯೇತಿ ಭಸ್ಮ ಆತ್ಮೇತಿ ಭಸ್ಮ'ವೆಂಬ ವಿಭೂತಿಯಿಲ್ಲದಂದು.
'ಅನಾದಿಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ
ಚಿದಂಗಂ ವೃಷಭಾಕಾರಂ' ಆಗಿಹ ಚಿದ್ಭಸ್ಮವ ತಂದು
ವಿಭೂತಿಯ ಪಟ್ಟವಂ ಕಟ್ಟಿದರೆ
ಭಾವಭ್ರಮೆಯಳಿದು ಭಾವ ಗುರುವಾಯಿತ್ತು.
ಕಾಯಗುಣವಳಿದು ಕಾಯ ಲಿಂಗವಾಯಿತ್ತು.
ಪ್ರಾಣಗುಣವಳಿದು ಪ್ರಾಣ ಲಿಂಗವಾಯಿತ್ತು.
ಮನವಿಕಾರವಳಿದು ಮನ ಲಿಂಗವಾಯಿತ್ತು.
ಘ್ರಾಣಕ್ಕೆ ಸುವಾಸನೆಯನರಿವ ಆಚಾರಲಿಂಗವಾಯಿತ್ತು.
ಜಿಹ್ವೆಗೆ ಪ್ರಸಾದಭೋಗವನರಿವ ಗುರುಲಿಂಗವಾಯಿತ್ತು.
ಶ್ರೋತ್ರಕ್ಕೆ ಷಡಾಕ್ಷರಮಂತ್ರವನರಿವ ಪ್ರಸಾದಲಿಂಗವಾಯಿತ್ತು.
ನೋಟಕ್ಕೆ ಘನಚೈತನ್ಯವಾದ ಶಿವಲಿಂಗವಾಯಿತ್ತು.
ಶಬ್ದಕ್ಕೆ ಸರ್ವಲಿಂಗಾನುಭಾವಿಯಾಯಿತ್ತು.
ಇಂತು ಪೂರ್ವಗುಣವಳಿದು ಪುನರ್ಜಾತನಾದ ಮಹಾಶರಣನು
ಸರ್ವಾಂಗಲಿಂಗಿ ನೋಡಾ ಅಪ್ರಮಾಣಕೂಡಲಸಂಗಮದೇವಾ. ॥ ೩೨೮ ॥

೩೨೯

ಗುರುಕರುಣದಿಂದ ವಿಭೂತಿಯ ಪಟ್ಟವಂ ಕಟ್ಟಿ
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞಾ ಬ್ರಹ್ಮರಂಧ್ರ ಶಿಖಾಚಕ್ರ ಪಶ್ಚಿಮಚಕ್ರ
ನಾದಚಕ್ರ ಬಿಂದುಚಕ್ರ ಕಲಾಚಕ್ರವೆಂಬ ದ್ವಾದಶಚಕ್ರಂಗಳ
ದಳ–ವರ್ಣ–ಅಕ್ಷರಂಗಳಂ ನ್ಯಾಸವಮಾಡಿ ತೋರಿದಬಳಿಕ
ಆ ಶಿವಭಕ್ತನೆ ಶಿವನು, ಆತನ ಮರ್ತ್ಯನೆಂದರೆ
ನಾಯಕನರಕ ತಪ್ಪದು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೨೯ ॥

**ಲಿಂಗಧಾರಣಸ್ಥಲ :**

ಇಂತು ತನ್ನ ಚಿದ್ವಿವೇಕದಿಂದ ವಿಚಾರಿಸಿ ತಿಳಿದು ನೋಡಿ ಗುರುಕರುಣಮಂ
ಪಡೆದ ಮಹಾಶರಣಂಗೆ ಮುಂದೆ ಲಿಂಗಧಾರಣಸ್ಥಲವಾದುದು.

೩೩೦

ಇನ್ನು ಲಿಂಗಧಾರಣಸ್ಥಲವದೆಂತೆಂದಡೆ :
ಆ ಸದ್ಗುರುಸ್ವಾಮಿ ಶಿಷ್ಯನ ಏಕಭುಕ್ತೋಪವಾಸಂಗಳ ಮಾಡಿಸಿ

ಪಂಚಗವ್ಯಮಂ ಕೊಟ್ಟು, ಗಣತಿಂತಿಣಿಗೆ ದೀರ್ಘದಂಡ ನಮಸ್ಕಾರವಂ ಮಾಡಿ,
ದಶವಾಯು ಶುದ್ಧ, ಅಷ್ಟ ತನುಶುದ್ಧ, ಜೀವಶುದ್ಧ, ಆತ್ಮಶುದ್ಧವಂ ಮಾಡಿ,
ಇಂದ್ರಿಯಲಿಖಿತವಂ ತೊಡದು ಶಿವಲಿಖಿತವಂ ಲಿಖಿಸಿ,
ವಿಭೂತಿಯನಿಟ್ಟು, ಸ್ಥಾನಸ್ಥಾನದಲ್ಲಿ ರುದ್ರಾಕ್ಷೆಯಂ ಧರಿಸಿ,
ಕಳಶಾಭಿಷೇಕವಂ ಮಾಡಿ, ಆ ಶಿಷ್ಯನ ಮಸ್ತಕದ ಮೇಲೆ
ತಮ್ಮ ಹಸ್ತಕಮಲವನಿರಿಸಿ,
ಆತನ ಬ್ರಹ್ಮರಂಧ್ರದ ಚಿತ್ಪ್ರಭಾ ಲಿಂಗಮಂ ತೆಗೆದು ಧ್ಯಾನಿಸಿ,
ಆ ಶಿಷ್ಯನ ಹಸ್ತಮಂ ಪಂಚಾಮೃತದಿಂ ತೊಳದು,
ಅಂಗದ ಮೇಲೆ ಲಿಂಗಮಂ ಪ್ರತಿಷ್ಠೆಯಂ ಮಾಡಿ
ಕರ್ಣದ್ವಾರದಲ್ಲಿ ಮೂಲಮಂತ್ರಮಂ ತುಂಬಿ
ಕೃತಾರ್ಥನ ಮಾಡಿದನಯ್ಯ ಎನ್ನ ಗುರು.
''ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಂ ।
ದೀಯತೇ ಕ್ಷೀಯತೇ ಚೈವ ಲಿಂಗದೀಕ್ಷಾಭಿಧೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೩೦ ॥

೩೩೧

ಕೃತಯುಗದಲ್ಲಿ ಅಖಂಡಾತ್ಮನೆಂಬ ಗಣೇಶ್ವರನಾಗಿದ್ದಂದು,
ಸದ್ಗುರುಸ್ವಾಮಿ ತಮ್ಮ ಕೃಪಾಕಟಾಕ್ಷದೃಷ್ಟಿಯಿಂ ನೋಡಿ,
ಎನ್ನ ಮಸ್ತಕದಮೇಲೆ ತಮ್ಮ ಹಸ್ತಕಮಲವನಿರಿಸಿ
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'
ಎಂಬ ಲಿಂಗವ ತೆಗದೆನ್ನ ಕರಸ್ಥಲದಲ್ಲಿ
ಪ್ರತಿಷ್ಠೆಯ ಮಾಡಿದನಯ್ಯಾ ಎನ್ನ ಗುರು.
ತ್ರೇತಾಯುಗದಲ್ಲಿ ಅಚಲಾತ್ಮನೆಂಬ ಗಣೇಶ್ವರನಾಗಿದ್ದಂದು
ಸದ್ಗುರುಸ್ವಾಮಿ ತಮ್ಮ ಕೃಪಾಕಟಾಕ್ಷದೃಷ್ಟಿಯಿಂ ನೋಡಿ,
ಎನ್ನ ಮಸ್ತಕದ ಮೇಲೆ ತಮ್ಮ ಹಸ್ತಕಮಲವನಿರಿಸಿ
'ನಿಶ್ಶಬ್ದಂ ಪರಬ್ರಹ್ಮ ಉಚ್ಯತೇ' ಎಂಬ
ನಾದಬಿಂದುಕಲಾತೀತ ಲಿಂಗಮಂ ತೆಗದೆನ್ನ ಕರಸ್ಥಲದಲ್ಲಿ
ಪ್ರತಿಷ್ಠೆಯಂ ಮಾಡಿದನಯ್ಯ ಎನ್ನ ಗುರು.
ದ್ವಾಪರಯುಗದಲ್ಲಿ ಅಖಂಡಿತನೆಂಬ ಗಣೇಶ್ವರನಾಗಿದ್ದಂದು
ಸದ್ಗುರುಸ್ವಾಮಿ ತಮ್ಮ ಕೃಪಾದೃಷ್ಟಿಯಿಂ ನೋಡಿ,
ಎನ್ನ ಮಸ್ತಕದಮೇಲೆ ತಮ್ಮ ಹಸ್ತಕಮಲವನಿರಿಸಿ
'ಓಂಕಾರೇಭ್ಯೋ ಜಗತ್ರಾಣ ಜಗತಾಂ ಪತಯೇ ನಮೋ ನಮೋ'
ಎಂಬ ಪ್ರಣವಲಿಂಗವ ತೆಗದೆನ್ನ ಕರಸ್ಥಲದಲ್ಲಿ

ಪ್ರತಿಷ್ಠೆಯಂ ಮಾಡಿದನಯ್ಯ ಎನ್ನ ಗುರು.
ಕಲಿಯುಗದಲ್ಲಿ ಅಪ್ರಮಾಣಗಣೇಶ್ವರನಾಗಿದ್ದಂದು
ಎನ್ನ ಸದ್ಗುರುಸ್ವಾಮಿ ತಮ್ಮ ಕೃಪಾದೃಷ್ಟಿಯಿಂ ನೋಡಿ,
ಎನ್ನ ಮಸ್ತಕದಮೇಲೆ ತಮ್ಮ ಹಸ್ತಕಮಲಮಂ ತಂದಿರಿಸಿ
'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ
ಅಖಂಡಪರಿಪೂರ್ಣಲಿಂಗವಂ ತೆಗೆದೆನ್ನ ಕರಸ್ಥಲದಲ್ಲಿ ಪ್ರತಿಷ್ಠೆಯಂ
ಮಾಡಿದನಯ್ಯ ಎನ್ನ ಗುರು.
ಆ ಲಿಂಗ ಸ್ಪರ್ಶನವ ಮಾಡಲು
ಎನ್ನ ಸ್ಪರ್ಶನವಳಿದು ಲಿಂಗಸ್ಪರ್ಶನವಾಯಿತ್ತು,
ಆ ಲಿಂಗವ ನೋಡಲು
ಎನ್ನ ನೇತ್ರವಳಿದು ಲಿಂಗನೇತ್ರವಾಯಿತ್ತು,
ಆ ಲಿಂಗವ ಸ್ತೋತ್ರವ ಮಾಡಲು
ಎನ್ನ ಜಿಹ್ವೆಯಳಿದು ಲಿಂಗಜಿಹ್ವೆಯಾಯಿತ್ತು,
ಆ ಲಿಂಗಸ್ತೋತ್ರವ ಕೇಳಲು
ಎನ್ನ ಶ್ರೋತ್ರವಳಿದು ಲಿಂಗಶ್ರೋತ್ರವಾಯಿತ್ತು,
ಆ ಲಿಂಗಪ್ರಸಾದವ ಘ್ರಾಣಿಸಲು
ಎನ್ನ ಘ್ರಾಣವಳಿದು ಲಿಂಗಘ್ರಾಣವಾಯಿತ್ತು,
ಆ ಲಿಂಗವ ನೆನನೆನೆದು
ಎನ್ನ ಮನವಳಿದು ಮನವೆಲ್ಲ ಲಿಂಗದ ಮನವಾಯಿತ್ತು,
ಎನ್ನ ಸರ್ವಾಂಗವೆಲ್ಲ ಮಹಾಲಿಂಗವಾಯಿತ್ತು,
ಇನ್ನು ಮರಳಿ ಮರ್ತ್ಯಲೋಕಕ್ಕೆ ಬಂದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ ಕಾಣಾ.
ಅಪ್ರಮಾಣಕೂಡಲಸಂಗಮದೇವಾ. ॥ ೩೩೧ ॥

ವಿಭೂತಿಸ್ಥಲ :

ಇಂತು ಗುರುಕರುಣದಿಂದ ಲಿಂಗಧಾರಣಸ್ಥಲ ಅಂಗವಾದ ಮಹಾಶರಣಂಗೆ
ಮುಂದೆ ವಿಭೂತಿಸ್ಥಲವಾದುದು :

೩೩೨

ಇನ್ನು ವಿಭೂತಿಸ್ಥಲವದೆಂತೆಂದಡೆ :
ಶ್ರೀ ವಿಭೂತಿಯು ಮೊದಲಲ್ಲಿ ಗೂಢನಿರ್ನಾಮವಾಗಿದ್ದಿತ್ತು,
ಎರಡನೆಯಲ್ಲಿ ಜ್ಞಾನಸ್ವರೂಪವಾಗಿದ್ದುದು,
ಮೂರನೆಯಲ್ಲಿ ಜ್ಞಾನವಹನವಾಗಿದ್ದುದು.
ನಾಲ್ಕನೆಯಲ್ಲಿ ಭಸ್ಮವಾಗಿ ಧರಿಸಿದರು ಶ್ರೀ ವಿಭೂತಿಯ.
ಇದಕ್ಕೆ ಈಶ್ವರ ಉವಾಚ :

‘‘ಪ್ರಥಮಂ ಗೂಢನಿರ್ನಾಮಂ ದ್ವಿತೀಯಂ ಚಿತ್ಸ್ವರೂಪಕಂ ।
ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಂ ॥
ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ ।
ಚಿದಂಗಂ ವೃಷಭಾಕಾರಂ ಚಿದ್ಭಸ್ಮಂ ಲಿಂಗಧಾರಣಂ ॥’’
ಇಂತೆಂದುದಾಗಿ, ಈ ಮಹಾಭಸ್ಮಕ್ಕೆ ನಮಸ್ಕಾರ ನೋಡಾ.
‘‘ಭಸ್ಮ ಜ್ಯೋತಿಸ್ಸ್ವರೂಪಾಯ ಶಿವಾಯ ಪರಮಾತ್ಮನೇ ।
ಷಟ್ತ್ರಿಂಶತತ್ವಬೀಜಾಯ ನಮಃ ಶಾಂತಾಯ ತೇಜಸೇ ॥’’
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೩೨ ॥

೩೩೩

ಇನ್ನು ವಿಭೂತಿ ಭಸಿತ ಭಸ್ಮ ಕ್ಷಾರ ರಕ್ಷೆ ಎಂಬ
ಪಂಚ ವಿಭೂತಿ ಉತ್ಪತ್ಯವೆಂತೆಂದಡೆ :
ಸದ್ಯೋಜಾತ ವಾಮದೇವ ಅಘೋರ
ತತ್ಪುರುಷ ಈಶಾನವೆಂಬ ಪಂಚಮುಖದಲ್ಲಿ
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಉತ್ಪತ್ಯವಾಯಿತ್ತು
ಆ ಪೃಥ್ವಿಯಪ್ಪುತೇಜವಾಯುವಾಕಾಶದಿಂದಲ್ಲಿ
ನಿವೃತ್ತಿ ಪ್ರತಿಷ್ಠೆ ವಿದ್ಯಾ ಶಾಂತಿ ಶಾಂತ್ಯಾತೀತಯೆಂಬ
ಪಂಚಕಲೆಗಳುತ್ಪತ್ಯವಾಯಿತ್ತು
ಆ ಪಂಚಕಲೆಗಳಿಂದ ನಂದೆ ಭದ್ರೆ ಸುರಭಿ ಸುಶೀಲೆ ಸುಮನೆಯೆಂಬ
ಪಂಚಗೋವುಗಳುತ್ಪತ್ಯವಾಯಿತ್ತು
ಆ ಪಂಚಗೋವುಗಳ ಗೋಮಯದಲ್ಲಿ
ವಿಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಯೆಂಬ
ಪಂಚವಿಭೂತಿ ಉತ್ಪತ್ಯವಾಯಿತ್ತು.
ಇದಕ್ಕೆ ಜಾಬಾಲೋಪನಿಷತ್ :
‘‘ಸದ್ಯೋಜಾತಾತ್ ಪೃಥಿವೀ ತಸ್ಯಾ ನಿವೃತ್ತಿಃ
ತಸ್ಯಾಃ ಕಪಿಲವರ್ಣಾ ನಂದಾ
ತಸ್ಯಾಃ ಗೋಮಯೇನ ವಿಭೂತಿರ್ಜಾತಾ ॥
ವಾಮದೇವಾದುದಕಂ ತಸ್ಮಾತ್ ಪ್ರತಿಷ್ಠಾ
ತಸ್ಯಾಃ ಕೃಷ್ಣವರ್ಣಾ ಭದ್ರಾ
ತಸ್ಯಾಃ ಗೋಮಯೇನ ಭಸಿತಂ ಜಾತಂ ॥
ಅಘೋರಾದ್ವಹ್ನಿಃ ತಸ್ಮಾತ್ ವಿದ್ಯಾ
ತಸ್ಯಾಃ ರಕ್ತವರ್ಣಾ ಸುರಭೀ
ತಸ್ಯಾಃ ಗೋಮಯೇನ ಭಸ್ಮ ಜಾತಂ ॥

ತತ್ಪುರುಷಾತ್ ವಾಯುಃ ತಸ್ಮಾತ್ ಶಾಂತಿ ಃ
ತಸ್ಯಾಃ ಶ್ವೇತವರ್ಣಾ ಸುಶೀಲಾ
ತಸ್ಯಾಃ ಗೋಮಯೇನ ಕ್ಷಾರಂ ಜಾತಂ ॥
ಈಶಾನಾದಾಕಾಶಃ ತಸ್ಮಾತ್ ಶಾಂತ್ಯತೀತಾ
ತಸ್ಯಾಃ ಚಿತ್ರವರ್ಣಾ ಸುಮನಾಃ
ತಸ್ಯಾಃ ಗೋಮಯೇನ ರಕ್ಷಾ ಜಾತಾ ॥''
''ಐಶ್ವರ್ಯಕಾರಣಾತ್ ಭೂತಿಃ, ಭಾಸನಾತ್ ಭಸಿತಂ,
ಸರ್ವಾಘಭಕ್ಷಣಾತ್ ಭಸ್ಮಂ, ಅಪದಾಂ ಕ್ಷರಣಾತ್ ಕ್ಷಾರಂ,
ಭೂತಪ್ರೇತಪಿಶಾಚಬ್ರಹ್ಮರಾಕ್ಷಸಾಪಸ್ಮಾರ
ಭವಭೀತಿಭ್ಯೋಽಭಿರಕ್ಷಣಾತ್ ರಕ್ಷೇತಿ ॥''
ಇಂತೆಂದುದು ಶ್ರುತಿ.
ಇದಕ್ಕೆ ಕ್ರಿಯಾಸಾರೇ :
''ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ ।
ಭವಂತಿ ಪಂಚ ನಾಮಾನಿ ಹೇತು ರಕ್ಷಣಾದ್ರಕ್ಷೇತಿ ॥''
ಇಂತೆಂದುದು ಶ್ರುತಿ.
''ಪಂಚಭಿಃಬೃಷಂ ಐಶ್ವರ್ಯಕಾರಣಾದ್ಭೂತಿ,
ಭಸ್ಮ ಸರ್ವಾಘಭಕ್ಷಣಾತ್, ಭಾಸನಾತ್ ಭಸಿತಂ, ತತ್ವಾ
ಕ್ಷರಣಾತ್ ಕ್ಷಾರಮಾಪದಂ, ಭೂತಪ್ರೇತಪಿಶಾಚೇಭ್ಯೋ
ಸ್ವರ್ಗಹೇತುಭ್ಯೋಭಿರಕ್ಷಣಾತ್ ರಕ್ಷಾ ಸ್ಯಾತ್
ಕ್ರೂರಸರ್ಪೇಭ್ಯೋ ವ್ಯಾಘ್ರಾದಿಭ್ಯಶ್ಚ ಸರ್ವದಾ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೩೩ ॥

೩೩೪

ಶ್ರುತಿವಿಧಿಸಿದ ಶ್ರೀವಿಭೂತಿಯ ಪರಂಜ್ಯೋತಿಯೆಂದರಿದು
ಭವಭೀತಿ ಮೃತ್ಯುಭಯಕ್ಕಂಜಿ
ಜಮದಗ್ನಿ ಅಗಸ್ತ್ಯ ಕಸ್ಯಪ ಮೊದಲಾದ ಎಲ್ಲಾ ಋಷಿಗಳು
ಧರಿಸಿ ಕೊರಜರಾದರು ನೋಡಾ.
ಶ್ರೀವಿಭೂತಿಯ ಪರಂಜ್ಯೋತಿಯೆಂದರಿದು
ಎಲ್ಲಾ ದೇವರ್ಕಳು ಎಲ್ಲಾ ಶ್ರುತಿ ಸ್ಮೃತಿಗಳು ಧರಿಸಿದವು ನೋಡಾ.
ಶ್ರೀವಿಭೂತಿಯೆ ಪರಂಜ್ಯೋತಿಯೆಂದರಿದು
ಗಾಯತ್ರಿ ಬ್ರಹ್ಮ ವಿಷ್ಣು ಇಂದ್ರಾದಿ ದೇವರ್ಕಳು
ಧರಿಸಿದರು ನೋಡಾ.
ಶ್ರೀವಿಭೂತಿಯ ಪರಂಜ್ಯೋತಿ ನಿರುತವಿದು

ನಂಬಿ ಧರಿಸಿ ಬದುಕು ಮನುಜಾ.
ಶ್ರೀವಿಭೂತಿಯೆ ಪರಂಜ್ಯೋತಿಯೆಂಬುದು.
ಇದಕ್ಕೆ **ಜಾಬಾಲೋಪನಿಷತ್** :
''ಓಂ ಸ ಏಷ ಭಸ್ಮ ಜ್ಯೋತಿ ಸ್ಸಏಷ ಭಸ್ಮ ಜ್ಯೋತಿರಿತ''
ಇಂತೆಂದುದು ಶ್ರುತಿ.
ಇದಕ್ಕೆ **ಮಾನವಪುರಾಣೇ** :
''ಭಸ್ಮ ಜ್ಯೋತಿರ್ಭವತ್ಯೇವ ಶಿವಾಖ್ಯಂ ನ ಹಿ ಸಂಶಯಃ ।
ಜಾಬಾಲೋಪನಿಷತ್ಸರ್ವಂ ಪ್ರಾಹೇದಂ ಪರಯಾ ಮುದಾ ॥''
ಇಂತೆಂದುದಾಗಿ,
ಇನ್ನು ವಿಭೂತಿ ಅಭಿಮಂತ್ರ ವಿಭೂತಿಧಾರಾ
ಎಂಬುದಕ್ಕೆ **ಕಾತ್ಯಾಯನ ಗೃಹ್ಯೇ, ಕಾತ್ಯಾಯನ ಸ್ಮೃತಿ,**
**ಬೋಧಾಯನ ಸ್ಮೃತಿ, ಅಭಿಮಂತ್ರ ಶ್ರುತಿ** :
''ಮಾನಸ್ತೋಕೇ ತನಯೇ ಮಾನ ಆಯುಷಿ
ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ ।
ವೀರಾನ್ಮಾನೋ ರುದ್ರ ಭಾಮಿತೋ ವಧೀರ್ಹವಿಷ್ಮಂತೋ
ಶಮಿತ್ವಾ ಹವಾಮಹೇ ॥''
ಇಂತೆಂದುದು ಶ್ರುತಿ.
ಇನ್ನು ವಿಭೂತಿಧಾರಾ ಎಂಬುದಕ್ಕೆ ಶ್ರುತಿ:
''ಓಂ, ಕುಕ್ಷರುಷಿ ರುದ್ರೋ ದೇವತಾ ಜಗತೀ ಛಂದಃ ।
ಓಂ, ತ್ರಿಯಾಯುಷಂ ಜಮದಗ್ನೇಃ ಕಶ್ಯಪಸ್ಯ ತ್ರಿಯಾಯುಷಂ ।
ಅಗಸ್ತ್ಯಸ್ಯ ತ್ರಿಯಾಯುಷಂ ತನ್ಮೇ ಅಸ್ತು ತ್ರಿಯಾಯುಷಂ ।
ಯದ್ದೇವಾನಾಂ ತ್ರಿಯಾಯುಷಂ ಶತಾಯುಷಂ ಕುರು ತ್ವಾನಿ ॥
ಲಲಾಟ ಭುಜದ್ವಯಂ ನಾಭೇರುತ್ವಾರುಷಿ ।
ಬ್ರಹ್ಮಣ ರುಷಿ ವೈದಿಕಂ ಸದಾ ॥ ''
ಇಂತೆಂದುದು ಶ್ರುತಿ.
ಇದಕ್ಕೆ **ಬೋಧಾಯನ ಶ್ರುತಿ** :
''ಮಾನಸ್ತೋಕೇತ್ಯಾದಿ ಮಂತ್ರೇಣ ಮಂತ್ರಿತಂ ಭಸ್ಮ ಧಾರಯೇತ್ ।
ಊರ್ಧ್ವಪುಂಡ್ರಂ ಭವೇತ್ ಸಾಮ ಮಧ್ಯಪುಂಡ್ರಂ ಯಜೂಂಷಿ ಚ ।
ಅಧಃ ಪುಂಡ್ರಮೃಚಃ ಸಾಕ್ಷಾತ್ ತಸ್ಮಾತ್ ಪುಂಡ್ರಂ ತ್ರಿಯಾಯುಷಂ ॥''
ಇದಕ್ಕೆ **ಲೈಂಗ್ಯ ಪುರಾಣೇ** :
''ಅಕಾರೋನಾಮಿಕಂ ಪ್ರೋಕ್ತಂ ಉಕಾರೋ ಮಧ್ಯಮಾಂಗುಲಿಃ ।
ಮಕಾರೋ ತರ್ಜ್ಜನಿಸ್ಥಾನಂ ತ್ರಿಭಿಃ ಕುರ್ಯಾತ್ ತ್ರಿಪುಂಡ್ರಕಂ ॥''
ಇಂತೆಂದುದಾಗಿ.
ಇದಕ್ಕೆ **ಕಾಲಾಗ್ನಿರುದ್ರೋಪನಿಷತ್** :

''ಹರಃ ಓಂ, ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ
ಅಪಪ್ರಚ್ಛಧೀಹಿ ಭಗವನ್ ತ್ರಿಪುಂಡ್ರವಿಧಿಂ ಸತತ್ವಂ ಕಿಂ ದ್ರವ್ಯಂ
ಕ್ರಿಯತ್ ಸ್ಥಾನಂ ಕತಿ ಪ್ರಮಾಣಂ ಕಾ ರೇಖಾ ಕೇ ಮಂತ್ರಾಃ ಕಾ ಶಕ್ತಿಃ
ಕಿಂ ದೈವತಂ ಕಃ ಕರ್ತಾ ಕಿಂ ಫಲಮಿತಿ ಚ ॥

ತಂ ಹ್ಯೋವಾಚ ಭಗವಾನ್ ಕಾಲಾಗ್ನಿ ರುದ್ರಃ
ಯದ್ದ್ರವ್ಯಂ ತದಾಗ್ನೇಯಂ ಭಸ್ಮ ಸದ್ಯೋಜಾತಾದಿ
ಪಂಚಬ್ರಹ್ಮ ಮಂತ್ರೈಃ ಪರಿಗೃಹ್ಯ ಅಗ್ನಿರಿತಿ ಭಸ್ಮೇತ್ಯನೇನ ಚಾಭಿಮಂತ್ರ್ಯ
ಮಾನಸ್ತೋಕ ಇತಿ ಸಮುದ್ಧೃತ್ಯ, ಮಾನೊ ಮಹಾಂತಮಿತಿ
ಜಲೇನ ಸಂಸೃಜ್ಯ, ತ್ರಿಯಾಯುಷಮಿತಿ ಶಿರೋ ಲಲಾಟವಕ್ಷ ಸ್ಕಂಧೇಷು
ತ್ರಿಯಾಯುಷೈಸ್ತ್ರ್ಯಂಬಕೈಸ್ತ್ರಿಶಕ್ತಿಭಿಸ್ತಿರ್ಯಕ್ ತಿಸ್ರೋ ರೇಖಾಃ
ಪ್ರಕುರ್ವೀತ ವ್ರತಮೇತಚ್ಛಾಂಭವಂ ಸರ್ವೇಷು ದೇವೇಷು
ವೇದವೇದಾದಿಭಿರುಕ್ತಂ
ಭವತಿ ತಸ್ಮಾತ್ತತ್ಸಮಾಚರೇನ್ಮುಮುಕ್ಷುರ್ನಪುನರ್ಭವಾಯ ॥

ಅಥ ಸನತ್ಕುಮಾರಃ ಪಪ್ರಚ್ಛ ಪ್ರಮಾಣಮಸ್ಯ ತ್ರಿಪುಂಡ್ರಧಾರಣಸ್ಯ
ತ್ರಿಧಾ ರೇಖಾಭವತ್ಯಾಲಲಾಟಾದಾಚಕ್ಷುಷೋರಾಮೂರ್ಧ್ನೋರಾಭ್ರುವೋರ್ಮ–
ಧ್ಯತಶ್ಚ ಪ್ರಥಮಾ ರೇಖಾ ಸಾ ಗಾರ್ಹಪತ್ಯಶ್ಚಾಕಾರೋ ರಜೋ
ಭೂರ್ಲೋಕಃ ಸ್ವಾತ್ಮಾ ಕ್ರಿಯಾಶಕ್ತಿಃ ಋಗ್ವೇದಃ ಪ್ರಾತಃ ಸವನಂ
ಮಹೇಶ್ವರೋ ದೇವತೇತಿ ॥

ಯಾಽಸ್ಯ ದ್ವಿತೀಯಾ ರೇಖಾ ಸಾ ದಕ್ಷಿಣಾಗ್ನಿರುಕಾರಃ
ಸ್ವತ್ವ ಮಂತ್ರರಿಕ್ಷಮಂತರಾತ್ಮಾ ಚೇಚ್ಛಾಶಕ್ತಿಃ ಯಜುರ್ವೇದೋ
ಮಾಧ್ಯಂ ದಿನಂ ಸವನಂ ಸದಾಶಿವೋ ದೇವತೇತಿ ॥

ಯಾಽಸ್ಯ ತೃತೀಯಾ ರೇಖಾ ಸಾಽಽಹವನೀಯೋ ಮಕಾರಸ್ತಮೋ –
ದ್ಯೌರ್ಲೋಕಃ ಪರಮಾತ್ಮಾ ಜ್ಞಾನಶಕ್ತಿಃ ಸಾಮವೇದಸ್ತೃತೀಯಂ
ಸವನಂ ಮಹಾದೇವೋ ದೇವತೇತಿ ॥

ಏವಂ ತ್ರಿಪುಂಡ್ರವಿಧಿಂ ಭಸ್ಮನಾ ಕರೋತಿ ಯೋ ವಿದ್ವಾನ್
ಬ್ರಹ್ಮಚಾರೀ ಗೃಹೀ ವಾನಪ್ರಸ್ಥೋ ಯತಿರ್ವಾ ಸಃ ಸಮಸ್ತ ಮಹಾಪಾತಕೋ –
ಪಪಾತಕೇಭ್ಯಃ ಪೂತೋ ಭವತಿ, ಸ ಸರ್ವೇಷು ತೀರ್ಥೇಷು ಸ್ನಾತೋ ಭವತಿ,
ಸ ಸರ್ವಾನ್ ಜ್ಞಾತೋ ಭವತಿ, ಸ ಸರ್ವಾನ್ ವೇದಾನಧೀತೋ ಭವತಿ,
ಸ ಸತತಂ ಸಕಲರುದ್ರಮಂತ್ರಜಾಪೀ ಭವತಿ, ಸ ಸಕಲಭೋಗಾನ್‌ಭುಂಕ್ತೆ
ದೇಹಂ
ತ್ಯಕ್ತ್ವಾ ಶಿವಸಾಯುಜ್ಯಮೇತಿ ನ ಸ ಪುನರಾವರ್ತತೇನ
ಸ ಪುನರಾವರ್ತತ ಇತ್ಯಾಹ ಭಗವಾನ್ ಕಾಲಾಗ್ನಿರುದ್ರಃ ॥''

ಇಂತೆಂದುದಾಗಿ,

ಇದಕ್ಕೆ ಭೀಮತಂತ್ರಾಗಮೇ :

‘‘ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ।
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಾನ್ನಸಂಶಯಃ॥’’
ಇಂತೆಂದುದಾಗಿ,
ಇದಕ್ಕೆ **ಭವಿಷ್ಯೋತ್ತರಪುರಾಣೇ :**
‘‘ಶಿವಾಗ್ನಿಕಾರ್ಯಂ ಯಃ ಕೃತ್ವಾ ಕುರ್ಯಾತ್ರಿಯಾಯುಷಂ ।
ಆತ್ಮವಿತ್ ವಿಶುದ್ಧಃ ಸರ್ವಪಾಪೈಶ್ಚ ಸಿತೇನ ಭಸ್ಮನಾ ॥ ’’
ಇಂತೆಂದುದಾಗಿ,
ಇದಕ್ಕೆ **ಪರಾಶರಪುರಾಣೇ :**
‘‘ಕ್ರಿಯಾಯುಷ್ಯಾಣಿ ಕುರುತೇ ಲಲಾಟೇಚ ಭುಜದ್ವಯೇ ।
ನಾಶಿಕಾಂತೇ ಚ ಧೃತ್ವಾರ್ಷೇ । ’’ (?)
ಇದಕ್ಕೆ **ಬ್ರಹ್ಮಪುರಾಣೇ :**
‘‘ಶ್ರಾದ್ಧೇ ಯಜ್ಞೇ ಜಪೇ ಹೋಮೇ ವೈಶ್ವದೇವೇ ಸುರಾರ್ಚನೇ ।
ಧೃತತ್ರಿಪುಂಡ್ರಪೂತಾತ್ಮಾ ಮೃತ್ಯುಂ ಜಯತಿ ಮಾನವ ಃ॥ ’’
ಇಂತೆಂದುದಾಗಿ,
ಇದಕ್ಕೆ **ಆದಿತ್ಯಪುರಾಣೇ :**
‘‘ಸರ್ವಾಶ್ರಮಾಣಾಂ ವರ್ಣಾನಾಂ ಭಸ್ಮ ರುದ್ರಾಕ್ಷ ಧಾರಣಂ ।
ಕರ್ತವ್ಯಂ ಮಂತ್ರತಶ್ಲೋಕ್ತಂ ದ್ವಿಜಾನಾಂ ನಾತ್ರ ಸಂಶಯಃ॥ ’’
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ ಃ**
‘‘ವಿಪ್ರಾದೀನಾಂಚ ಸರ್ವೇಷಾಂ ಲಲಾಟಂ ಭಸ್ಮಶೂನ್ಯಕಂ ।
ಭಿಕ್ಷಾ ಚ ಜಪಹೋಮಂ ಚಾರ್ಪಣಂ ನಿಷ್ಫಲಂ ಭವೇತ್ ॥ ’’
ಇಂತೆಂದುದಾಗಿ,
ಇದಕ್ಕೆ **ಸ್ಕಂದಪುರಾಣೇ :**
‘‘ಸಿತೇನ ಭಸ್ಮನಾ ಕಾರ್ಯಂ ತ್ರಿಸಂಧ್ಯಾಂ ತ್ರಿಪುಂಡ್ರಕಂ ।
ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯಮಾಪ್ನುಯಾತ್ ॥ ’’
ಇಂತೆಂದುದಾಗಿ,
ಇದಕ್ಕೆ **ಲೋಕಾಕ್ಷಿ ಸ್ಮೃತಿ :**
‘‘ಮಧ್ಯಮಾನಾಮಿಕಾಂಗುಷ್ಠೇ ತ್ರಿಪುಂಡ್ರಂ ಭಸ್ಮನಾ ಧೃತಂ ।
ತತ್ತ್ರಿಪುಂಡ್ರಂ ಭವೇತ್ಪುಣ್ಯಂ ಮಹಾಪಾತಕನಾಶಕಂ ’’॥
ಇಂತೆಂದುದಾಗಿ,
ಇದಕ್ಕೆ **ಸ್ಕಂದಪುರಾಣೇ :**
‘‘ನೃಪಾಣಾಮೀಶ್ವರಾಣಾಂ ಚ ಭಸ್ಮೀ ತ್ರೇಣ ಚ ಚಂದನಂ ।
ತ್ರಿಪುಂಡ್ರಂ ವಿಧಿವತ್ಕುರ್ಯಾತ್ ಸುಗಂಧೇನಾಪಿ ವಾಗುಹಾಂ ॥
ಭಸ್ಮನಾಯ್ಯೆ ತ್ರಿಸಂಧ್ಯಾಂ ಚ ಗೃಹಸ್ಥೋ ಜಲಸಂಯುತಂ ।

ಸರ್ವಕಾಲೇ ಭವೇತ್ ಸ್ತ್ರೀಣಾಂ ಯತಿನಾಂ ಜಲವರ್ಜಿತಂ ॥
ವಾನಪ್ರಸ್ಥೇಷು ಕಾಂಸ್ಯಾನಾಂ ದೀಕ್ಷಾಹೀನಂ ಮೃಣಂ ತಥಾ ।
ಮಧ್ಯಾಹ್ನೇ ಪ್ರಾಕ್‌ಜಲಯುಕ್ತಂ ಪರಾಕ್ ಜಲವಿವರ್ಜಿತಂ ॥''
ಇಂತೆಂದುದಾಗಿ,
ಇದಕ್ಕೆ ಕ್ರಿಯಾಸಾರೇ :
''ಶುದ್ಧ ತಾ ಜಲೇನೈವ ಭಸ್ಮಸ್ಯಾತ್ ತ್ರಿಪುಂಡ್ರಕಂ ।
ಯೋ ಧಾರಯೇತ್ ಪರಬ್ರಹ್ಮ ಸಂಪ್ರಾಪ್ನೋತಿ ನ ಸಂಶಯಃ॥
ಮಧ್ಯಮಾನಾಮಿಕಾಂಗುಷ್ಠೈರನುಲೋಮವಿಲೋಮತಃ ॥''
ಧಾರಯದ್ಯಗ್ನಿ ತ್ರಿಪುಂಡ್ರಾಂತಂ ಸ ರುದ್ರೋ ನಾತ್ರ ಸಂಶಯಃ ॥''
ಇಂತೆಂದುಗಾಗಿ,
ಇದಕ್ಕೆ ಕ್ರಿಯಾಸಾರೇ :
''ಮಧ್ಯಾಂಗುಲಿ ತ್ರಯೇಣೈವ ಸ್ವದಕ್ಷಿಣ ಕರಸ್ಯ ತು ।
ಷಡಂಗುಲಾಯತಂ ಮಾನಮಪಿವಾಽಲಿಕಮಾನನಂ ॥
ಷಡಂಗುಲಪ್ರಮಾಣೇನ ಬ್ರಾಹ್ಮಣಾನಾಂ ತ್ರಿಪುಂಡ್ರಕಂ ।
ನೃಪಾನಾಂ ಚತುರಂಗುಲ್ಯಂ ವೈಶ್ಯಾನಾಂ ಚ ದ್ವಿರಂಗುಲಂ ।
ಶೂದ್ರಾಣಾಂ ಚ ಸರ್ವೇಷಾಂ ಏಕಾಂಗುಲಾ ತ್ರಿಪುಂಡ್ರಕಂ ॥''
ಇಂತೆಂದುಗಾಗಿ,
ಇದಕ್ಕೆ ಭೀಮಸಂಹಿತಾಯಾಂ :
''ಮೂರ್ಧ್ನಾ ಲಲಾಟಕಂ ದ್ವೌಶ್ಚ ಶ್ರೋತ್ರೇ ಬಾಹೂ ತಥೈವ ಚ ।
ಹೃದಯಂ ನಾಭಿಪೃಷ್ಠೌ ಚ ಹಸ್ತೋ ವೈ ಸಂಧಯಃ ಕ್ರಮಾತ್ ॥
ಮೂರ್ಧ್ನಿಃ ಸ್ಯಾತ್ ಬ್ರಹ್ಮಣ ಪ್ರೀತಿಃ ಲಲಾಟೇ ಚ ಸರಸ್ವತೀ ।
ಕಂಠೋ ಲಕ್ಷ್ಮ್ಯಾ ಭವೇತ್ ಪ್ರೀತಿಃ ಸ್ಕಂದೇ ಪೀಣಾತಿ ಪಾರ್ವತಿ ॥
ಇಂದ್ರ ಪ್ರೀತಿ ಕರಂ ಬಾಹೋ ಹೃದಯಂ ಚ ಶರಪ್ರಿಯಂ ।
ಅನೇನ ವಿಧಿನಾ ಚೈವ ವಿಭೂತಿಂ ಧಾರಯೇತ್ ಸುಧೀಃ ॥''
ಇಂತೆಂದುದಾಗಿ,
ಇದಕ್ಕೆ ಕೂರ್ಮಪುರಾಣೇ :
''ತ್ರಿಪುಂಡ್ರಂ ಬ್ರಹ್ಮಣೋ ವಿದ್ವಾನ್ ಮನಸಾಽಪಿ ನ ಲಂಘಯೇತ್ ।
ಶ್ರುತ್ವಾ ವಿಧೀಯತೇ ಯಸ್ಮಾತ್ ತತ್ಯಾನಿ ಪತಿತೋ ಭವೇತ್ ॥''
ಇಂತೆಂದುದಾಗಿ,
ಇದಕ್ಕೆ ಮತ್ಸ್ಯಪುರಾಣೇ :
''ನ ಚ ಶೌಚಂ ತಪೋ ಯಜ್ಞಂ ತೀರ್ಥಂ ದೇವಾಗ್ನಿಪೂಜನಂ ।
ಅಶ್ವಮೇಧಮಿದಂ ವ್ಯರ್ಥಂ ತ್ರಿಪುಂಡ್ರೋ ಯೋ ನ ಧಾರಯೇತ್ ॥''
ಇಂತೆಂದುದಾಗಿ,

ಇದಕ್ಕೆ **ಬ್ರಹ್ಮಾಂಡಪುರಾಣೇ :**
''ವಿಪ್ರಾಣಾಂ ವೇದವಿದುಷಾಂ ವೇದಾಂತಜ್ಞೇನ ವೇದಿನಾಂ ।
ಸಿತೇನ ಭಸ್ಮನಾ ಕಾರ್ಯಂ ತ್ರಿಪುಂಡ್ರಮಿತಿ ಪದ್ಮಭೂಃ ॥''
ಇಂತೆಂದುದಾಗಿ,
ಇದಕ್ಕೆ **ಕೂರ್ಮಪುರಾಣೇ :**
''ಸರ್ವೇ ತಪಸ್ವಿನಃ ಪ್ರೋಕ್ತಾಃ ಸರ್ವೇ ಯಜ್ಞೇಷು ಭಾಗಿನಃ ।
ರುದ್ರಭಕ್ತಾ ಸ್ಮೃತಾಸ್ಸರ್ವೇ ತ್ರಿಪುಂಡ್ರಾಂಕಿತಮಸ್ತಕಾಃ ॥''
ಇಂತೆಂದುದಾಗಿ,
ಇದಕ್ಕೆ **ಕ್ರಿಯಾಸಾರೇ :**
''ಶಿರೋ ಲಲಾಟೇ ಶ್ರವಣೋದ್ವಯಾಗ್ನಿರ್ವಾಭುಜದ್ವಯಂ ।
ವಕ್ಷೋ ನಾಭಿಃ ಪೃಷ್ಠಭಾಗೇ । ಕಕುದಿತ್ಯೇಕದೋದಶ ॥ ''
ಇಂತೆಂದುದಾಗಿ,
ಇದಕ್ಕೆ **ಕೂರ್ಮಪುರಾಣೇ :**
''ಮೂರ್ಧ್ನೇ ಲಾಲಟೇ ಕರ್ಣೇ ಚ ಚಕ್ಷುಷೇ ಮಸ್ತಕಸ್ತಥಾ ।
ಅನ್ಯ ಬಾಹು ಭುಜದ್ವಂದ್ವಂ ಸ್ಥಾನಾವಪ್ಯುದರಂ ತಥಾ ॥
ಮಣಿಬಂಧೇಷು ಧೃತ್ವಾ ಪಾರ್ಶ್ವೇ ನಾಭಿಮೇಢ್ರಂ ಚ ಪೃಷ್ಟಕಂ ।
ಊರೂ ಚ ಚಾಮಕಾಶ್ಚ್ಯವ ಸಂಷ್ಪಪಿ ಯಥಾಕ್ರಮಂ ॥
ವಿಧಿವತ್‌ಭಸ್ಮಸ್ನಾನಂ ಧಾರಣಂ ಮೋಕ್ಷಕಾರಣಂ ॥ ''
ಇಂತೆಂದುದಾಗಿ,
ಇದಕ್ಕೆ **ಮಹಾಲಿಂಗಪುರಾಣೇ :**
''ಶಿರೋ ಫಾಲಃ ಕರ್ಣಕಂ ತೌಚ ಬಾಹೂ ಚ ಮಣಿಬಂಧಕೇ ।
ಹೃದಯಂ ಚ ಪರಂ ಚೈವ ನಾಭಿ ಭುಜದ್ವಯಂ ತಥಾ ॥
ಓಷ್ಠಾವಪಿ ಚ ವಿಜ್ಞೇಯೋ ಷೋಡಶಃ ಸಂಧಯಃ ಸ್ಮೃತಾಃ ॥ ''
ಇಂತೆಂದುದಾಗಿ,
ಇದಕ್ಕೆ **ಕೂರ್ಮಪುರಾಣೇ :**
''ಲಲಾಟಾಂಘ್ರಿವಾಂ ಭುಜಾತ್ ಹೃದಯಂ ನಾಭಿರೇವ ಚ ।
ಅಪರೇ ಸಂಧಯೋ ಜ್ಞೇಯಾ ಅಷ್ಟಸ್ಥಾನಂ ಚ ಭೂಷಣಂ ॥
ಭಸ್ಮಸ್ನಾನಂ ನರೋ ತೀರ್ಥಂ ಗಂಗಾಸ್ನಾನಂ ದಿನೇ ದಿನೇ ।
ಭಸ್ಮರೂಪಂ ಶಿವಂ ಸಾಕ್ಷಾದ್ಭಸ್ಮ ತ್ರೈಲೋಕ್ಯಸಾಧನಂ ॥ ''
ಇಂತೆಂದುದಾಗಿ,
ಇದಕ್ಕೆ **ಯಜುರ್ವೇದ :**
''ಓಂ ಭಾಗದ್ವಯೇವಾಯೇವಂ ಪ್ರಣಯೇತಿ ಬ್ರಾಹ್ಮಣಃ ।
ಆ ಋಷಯಃ ಉದ್ಧರೇವ ಬ್ರಾಹ್ಮಣೋ ವೈ ಸರ್ವದೇವತಾಃ ।
ಸರ್ವಾದಿ ದೇವೈಃ ಆನಂದೇವತಾಭಿರುದ್ಧತಿ ॥ ''

ಇಂತೆಂದುದಾಗಿ,
ಇದಕ್ಕೆ ಈಶ್ವರೋವಾಚ :
''ಜಲಸ್ನಾನಂ ತಪಃ ಪುಣ್ಯಂ ಮಂತ್ರಸ್ನಾನಂ ಕುಲಕ್ಷಯಃ।
ವಿಭೂತಿರೇಣುಮಾತ್ರೇಣ ತತ್ಫಲಂ ಶೃಣು ಪಾರ್ವತಿ ॥ ''
ಇಂತೆಂದುದಾಗಿ,
ಇದಕ್ಕೆ ಕೂರ್ಮಪುರಾಣೇ :
''ಶ್ರೀಮತ್ ತ್ರಿಪುಂಡ್ರಮಹಾತ್ಮ್ಯಂ ಯಃ ಪಠೇತ್ ಸತತಂ ನರಃ।
ಈಹೇಷ್ಟಾನ್ ಸಕಲಾನ್ ಪ್ರಾಪ್ಯ ಗಚ್ಛಂತಿ ಪರಮಂ ಪದಂ ॥''
ಇಂತೆಂದುದಾಗಿ,
ಇದನರಿದು ಶ್ರೀ ವಿಭೂತಿಯ ಧರಿಸದ
ಕರ್ಮಿಯ ಎನಗೊಮ್ಮೆ ತೋರದಿರಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೩೪ ॥

## ರುದ್ರಾಕ್ಷಿಸ್ಥಲ :

ಇಂತು ತನ್ನ ಚಿದ್ವಿವೇಕದಿಂದ ವಿಚಾರಿಸಿ ತಿಳಿದು ನೋಡಿ ಆ ಚಿದ್ವಿಭೂತಿಯನರಿದು, ಆ ಚಿದ್ವಿಭೂತಿಯಂಗವಾದ ಮಹಾಶರಣಂಗೆ ಮುಂದೆ ರುದ್ರಾಕ್ಷಿಯ ಸ್ಥಲವಾದುದು.

೩೩೫

ಇನ್ನು ರುದ್ರಾಕ್ಷಿಸ್ಥಲವೆಂತೆಂದಡೆ :
ಬ್ರಹ್ಮ ವಿಷ್ಣು ರುದ್ರ ಮೊದಲಾದ ಸಮಸ್ತ ದೇವರ್ಕಳು
ತ್ರಿಪುರದ ರಾಕ್ಷಸರ ಉಪದ್ರಕ್ಕೆ ಭೀತರಾಗಿ
ರುದ್ರಲೋಕದ ಮಹಾರುದ್ರಂಗೆ ಶಿವಧೋ ಶಿವಧೋ ಎಂದು
ಮೊರೆಯಿಡುತ ಚಿಂತಾಕ್ರಾಂತರಾಗಿ ನಿಲಲು,
ಆ ರುದ್ರಲೋಕದ ಮಹಾರುದ್ರನು ತ್ರಿಪುರವಧಾರ್ಥ
ಸರ್ವದೇವಮಯ ದಿವ್ಯ ಅನಂತತೇಜ ಅನಂತಪ್ರಚಯ
ಅನಂತಜ್ವಾಲಾಮಯವಾಗಿಹ ಅಘೋರರೂಪ ತಾಳಿ
ಉತ್ತಮವಾದ ಅಘೋರಾಸ್ತ್ರಮಂ ಚಿಂತಿಸಿ,
ತ್ರಿಪುರದ ಕೀಲ ದಿವ್ಯಸಹಸ್ರವರ್ಷ ನೋಡಲು
ಆ ರುದ್ರನ ಅಕ್ಷಿಯಲ್ಲಿ ರಕ್ತಾಶ್ರುಜಲಬಿಂದುಗಳು ಜನಿಸಿ
ಭೂಮಿಯ ಮೇಲೆ ಬೀಳಲು ಮಹಾರುದ್ರಾಕ್ಷ ವೃಕ್ಷವಾಗಿ
ತ್ರೈಲೋಕ್ಯಾನುಗ್ರಹ ಕಾರಣವಾಯಿತ್ತು ನೋಡಾ.
ಆ ರುದ್ರಾಕ್ಷಿಯ ದರುಶನದ ಫಲ ಲಿಂಗದರುಷನದ ಫಲ,
ರುದ್ರಾಕ್ಷಿಯ ದರುಶನ ಸ್ಪರ್ಶನದಿಂದ

ಸರ್ವಪಾಪಂಗಳು ಹೋಹವು ನೋಡಾ.
ಇದಕ್ಕೆ **ಈಶ್ವರೋಉವಾಚ** :
''ಶೃಣು ಷಣ್ಮುಖ ಯತ್ನೇನ ಕಥಯಾಮಿ ಸಮಾಸತಃ ।
ತ್ರಿಪುರೋ ನಾಮ ದೈತ್ಯಸ್ತು ಪುರಶ್ಚಿತ್ತು ಸುರರ್ಜಯಃ ॥
ಚಿತ್ತಾಪ್ತೇವ ಸುರಾಸ್ಸರ್ವೇ ಬ್ರಹ್ಮವಿಷ್ಣೇಂದ್ರದೇವತಾಃ
ಚಿಂತಿತಂ ಚ ಮಯಾ ಪುತ್ರ ಅಘೋರಾಸ್ತ್ರಮನುತ್ತಮಂ॥
ಸರ್ವದೇವಮಯಂ ದಿವ್ಯಂ ಜ್ವಲಿತಂ ಘೋರರೂಪಕಂ ।
ತ್ರಿಪುರಸ್ಯ ವಧಾರ್ಥಾಯ ದೇವಾನಾಂ ಪ್ರಾಣವಾಯು ಚ ॥
ಸರ್ವವಿಘ್ನಪ್ರಶಮನಂ ಅಘೋರಾಸ್ತ್ರಂತು ಚಿಂತಿತಂ ।
ದಿವ್ಯವರ್ಷಸಹಸ್ರಾಣಿ ಚಕ್ಷುರುನ್ಮೀಲಿತಂ ಮಯಾ ॥
ಘಟೇಭ್ಯಾಂ ಚ ಕುಲಾಕ್ಷಿಭ್ಯಾಂ ಪತಿತಾ ಜಲಬಿಂದವಃ ।
ರಕ್ತಾಶ್ರುಬಿಂದವೋ ಜಾತಾಃ ಮಹಾರುದ್ರಾಕ್ಷವೃಕ್ಷಕಾಃ ॥
ಸ್ಥಾವರತ್ವಮನುಪ್ರಾಪ್ಯ ಮರ್ತ್ಯಾನುಗ್ರಹಕಾರಣಾತ್ ।
ರುದ್ರಾಕ್ಷಾಣಾಂ ಫಲಂ ಧೃತ್ವಾ ತ್ರಿಷು ಲೋಕೇಷು ವಿಶ್ರುತಂ ॥
ಲಿಂಗಸ್ಯ ದರ್ಶನೇ ಪುಣ್ಯಂ ಭವೇತ್‌ರುದ್ರಾಕ್ಷದರ್ಶನಾತ್ ।
ಭಕ್ತ್ಯಾ ರಾತ್ರೌ ದಿವಾಪಾಪಂ ದಿವಾರಾತ್ರಿ ಕೃತಂ ಹರೇತ್ ॥
ಲಕ್ಷಂತು ದರ್ಶನಾತ್ಪುಣ್ಯಂ ಕೋಟಿ ಸಂಸ್ಪರ್ಶನೇ ಭವೇತ್ ।
ತತ್ಕೋಟಿ ಶತಂ ಪುಣ್ಯಂ ಲಭತೇ ಧಾರಣಾನ್ನರಃ ॥
ಲಕ್ಷಕೋಟಿ ಸಹಸ್ರಾಣಿ ಲಕ್ಷಕೋಟಿ ಶತಾನಿ ಚ ।
ತಜ್ಜಪಾಲ್ಲಭತೇ ಪುಣ್ಯಂ ನಾತ್ರ ಕಾರ್ಯಂ ವಿಚಾರಣಾತ್ ॥''
ಇಂತೆಂದುದಾಗಿ,
ಇದಕ್ಕೆ **ಮಹಾದೇವೋಉವಾಚ** :
''ಶಿರೋಮಾಲಾ ಚ ಷಟ್ತ್ರಿಂಶದ್ವಾತ್ರಿಂಶತ್ಕಂಠಮಾಲಿಕಾ ।
ಕೂರ್ಪರೇ ಷೋಡಶ ಪ್ರೋಕ್ತಾ ದ್ವಾದಶಂ ಮಣಿಬಂಧಯೋಃ ॥
ಉರೋಮೂಲಾಚ ಪಂಚಾಶತಷ್ಟೋತ್ತರಶತಂ ತಥಾ ।
ಶಿರಸಾ ಧಾರಯತ್ಕೋಟಿ ಕರ್ಣಾಭ್ಯಾಂ ದಶಕೋಟಿಯಃ ॥
ಗಳೇ ಬಂಧಂ ಶತಂ ಕೋಟಿ ಮೂರ್ಧ್ನಿ ಕೋಟಿಸಹಸ್ರಕಂ ।
ಆಯುಕಂಠೋಪವಿತ್ತಂ ಚ ಲಕ್ಷಮಾವೇ ಮಣಿಬಂಧಯೋರ್ಣ ವಕ್ತ್ರಾಣಿ ।
ದ್ವಾದಶಾದಿತ್ಯಾದಿ ಪಾಯು ಶ್ರೀಮಹಾದೇವಾಯ ನಮಃ ॥
ಅಷ್ಟೋತ್ತರಶತಂ ಸೋಪವಿ ತ್ತಂ ಚತುರ್ದಶ ವಕ್ತ್ರಾಣಿ ।
ಶತರುದ್ರಾತ್ಮಕಾಯ ಶ್ರೀ ವಿಶ್ವೇಶ್ವರಾಯ ನಮಃ ಇತಿ ॥''
ಇಂತೆಂದುದಾಗಿ,
ಇದಕ್ಕೆ **ಬೋಧಾಯನಶಾಖಾಯಾಂ** :
''ತಾನಿ ಹವಾಪತಾನಿ ರುದ್ರಾಕ್ಷಾಣಿ ಯತ್ರ ಯೋ ಯೇ ಧಾರಯಂತಿ

ಕಸ್ಮಾದೇವ ಧಾರಯಂತಿ ಸ್ನಾತ್ವಾನಿ ಧಾರಯನ್ ಗರ್ಭೇ
ತಿಷ್ಟನ್ ಸ್ವಪನ್ ಖಾದನ್ ಉನ್ಮಿಷನ್ ಅಪಿ
ಸರ್ವಾಣ್ಯೆವಾನಿ ಚರತಿ ಮದ್ರಿ ಭೂತ್ವಾ ರುದ್ರೋ ಭವತಿ
ಯೋಯೇನ ವಿದ್ವಾನ್ ಬ್ರಹ್ಮಚಾರೀ
ಗೃಹಸ್ಥೋ ವಾನಪ್ರಸ್ಥೋಯತಿರ್ವಾ ಧಾರಯೇತ್
ಪದೇ ಪದೇ ಯಶ್ವಮೇಧಫಲಂ ಪ್ರಾಪ್ನೋತಿ ॥''
ಇಂತೆಂದುದು ಶ್ರುತಿ.
ಇದಕ್ಕೆ **ಲೈಂಗ್ಯಪುರಾಣೇ** :
''ರುದ್ರಾಕ್ಷಂ ಧಾರಯೇದ್ವಿಪ್ರಃ ಸಂಧ್ಯಾದಿಷು ಚ ಕರ್ಮಸು ।
ತತ್ಸರ್ವಂ ಸಮವಾಪ್ನೋತಿ ಕೋಟಿ ಕೋಟಿ ಗುಣಂ ಸದಾ ॥
ಸ್ನಾನೇ ದಾನೇ ಜಪೇ ಹೋಮೇ ವೈಶ್ಯದೇವೇಷುರರ್ಚನೆ ।
ಪ್ರಾಯಶ್ಚಿತ್ತೇ ಕಥಾ ಶ್ರಾದ್ಧೇ ದೀಕ್ಷಾಕಾಲೇ ವಿಶೇಷತಃ ॥
ರುದ್ರಾಕ್ಷಧರೋ ಭೂತ್ವಾ ಯತ್ಕಿಂಚಿತ್ಕರ್ಮವೈದಿಕಂ ।
ಕುರ್ಯಾದ್ವಿಪ್ರಸ್ತು ಯೋ ಮೋಹ ವಂಶಾವಪ್ನೋತಿ ತತ್ಫಲಂ ॥''
ಇಂತೆಂದುದಾಗಿ,
ಇದಕ್ಕೆ **ಸ್ಕಂದಪುರಾಣೇ** :
''ಲಕ್ಷಂತು ದರ್ಶನಾತ್ಪುಣ್ಯಂ ಕೋಟಿ ಸಂಸ್ಪರ್ಶನಾದಪಿ ।
ದಶಕೋಟಿ ಶತಂ ಪುಣ್ಯಂ ಧಾರಣಾಲ್ಲಭತೇ ವರಂ ॥''
ಇಂತೆಂದುದಾಗಿ,
ಇದಕ್ಕೆ **ಕೂರ್ಮಪುರಾಣೇ** :
''ಹಸ್ತೇಚೋರಸಿ ಕಂಠೇ ವಾ ಮಸ್ತಕೇ ವಾऽಪಿ ಧಾರಯೇತ್ ।
ಮುಚ್ಯತೇ ಸರ್ವಪಾಪೇಭ್ಯಃ ಸ ರುದ್ರೋ ನಾತ್ರಸಂಶಯಃ ॥ ''
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ** :
''ಶಿಖಾಯಾಂ ಧಾರಯೇದೇಕಂ ಷಟ್ತ್ರಿಂಶನ್ಮಸ್ತಕೇ ತಥಾ।
ದ್ವಾತ್ರಿಂಶತ್ಕಂಠದೇಶೇಚ ಪಂಚಾಷಣ್ಮಾಲಿಕಾ ಹೃದಿ ॥
ಷೋಡಶಂ ಬಾಹುಮೂಲಯೋಃ ದ್ವಾದಶಂ ಮಣಿಬಂಧಕೇ ।
ಕರ್ಣಯೇಕೀಕಮೇಶುಸ್ಯಾ ದುಪವಿತೇ ಶತಾಷ್ಟಕಂ ॥
ಶತಾಷ್ಟಮಕ್ಷಮಾಲಾಂತು ನಿತ್ಯಂ ಧಾರಯೇತೇ ವರಃ ।
ಪದೇ ಪದೇऽಶ್ವಮೇಧಸ್ಯ ಫಲಂ ಪ್ರಾಪ್ನೋತಿ ನ ಸಂಶಯಃ ॥
ಇಂತೆಂದುದಾಗಿ,
ಇದಕ್ಕೆ **ಈಶ್ವರೋऽವಾಚ** :
''ರುದ್ರಾಕ್ಷ ಶತಕಂಠೋ ಯಃ ಗೃಹೇ ತಿಷ್ಠತಿ ಯೋ ವರಃ ।
ಕುಲೈಕವಿಂಶಮುಕ್ತಾರ್ಯ ಶಿವಲೋಕೇ ಕೋಟಿಭುಜದ್ವಯಂ ।

ಅಪ್ರಮೇಯ ಫಲಂ ಹಸ್ತೇ ರುದ್ರಾಕ್ಷಂ ಮೋಕ್ಷಸಾಧನಂ ॥''
ಇಂತೆಂದುದಾಗಿ,
ಇದಕ್ಕೆ ಇಶ್ವರೋऽವಾಚ :
''ಅವಧ್ಯಃ ಸರ್ವಭೂತಾನಾಂ ರುದ್ರವದ್ವಿಚರೇತ್ ಭುವಿ ।
ಸುರಾಣಾಮಸುರಾಣಾಂ ಚ ವಂದನೀಯೋ ಯಥಾ ಶಿವಃ ॥
ರುದ್ರಾಕ್ಷರಧಾರಶೋ ನಿತ್ಯಂ ವಂದನೀಯೋ ನರೈರಿಹ ।
ಉಚ್ಛಿಷ್ಟೋ ವಾ ವಿಕರ್ಮಸ್ಥೋ ಯುಕ್ತೋ ವಾ ಸರ್ವಪಾಪಕೈಃ ।
ಮುಚ್ಯತೇ ಸರ್ವಪಾಪೇಭ್ಯೋ ನರೋ ರುದ್ರಾಕ್ಷಧಾರಣಾತ್ ॥''
ಇಂತೆಂದುದಾಗಿ
ಇದಕ್ಕೆ **ಕಾತ್ಯಾಯನಶಾಖಾಯಾಂ** :
''ಅಥೈವ ಭಗವಂತಂ ರುದ್ರಕುಮಾರಃ
ಪಪ್ರಚ್ಛಾರಣೇನ ದಶಶತ ಗೋದಾನಫಲಂ ॥
ದರ್ಶನಸ್ಪರ್ಶನಾಭ್ಯಾಂ ದ್ವಿಗುಣಂ ತ್ರಿಗುಣಂ ಫಲಂ ಭವತಿ,
ಅತ ಊರ್ಧ್ವಂ ವಕ್ತುಂ ನ ಶಕ್ನೋಮಿ ತತೋಂ ಜಪ ಸಮಂತ್ರಕಂ
ಧಾರಣೇ ವಿಧಿಂ ಕಥಯಾಮಿ ॥
ಸ್ನಾನ ವಿಧಿನಾ ಸ್ನಾತೇಷು ಖೇರಾಜ್ಞೇಯ ಸ್ನಾನಂ
ತ್ರಿಪುಂಡ್ರಧಾರಣಂ ಕೃತ್ವಾ ಏಕಾಕ್ಷ್ಯಾದಿರುದ್ರ ಶಾಂತಾನಾಂ ॥
ಸೃಷ್ಟಿಕ್ರಮೇಣಂ ಮಂತ್ರಾಸ್ಯಂ 'ಓಂ ಹೂಂ ಚಂ ಖಂ ಹೂಂ
ಕ್ಲಿಂ ಮಾಂ ದ್ರಾಂ ದ್ರಿಂ ಹ್ರುಂ ಕ್ರೂಂ ಕ್ಷಾಂ ಕ್ಷಿಂ ಕ್ಷುಂ'
ನವಮಿತೀಷುರುವೋಕ್ತಂ ಮಂತ್ರಾನನಂತಾ ಶೋಕ್ತ್ವಾಪ್ನಾ ಜಪೇದಿಮಾನ್
ಪಾಣಾನಾಯಮ್ಯ ಸಮಸ್ತಪಾಪಕ್ಷಯಾರ್ಥಂ ಶಿವಜ್ಞಾನಾ
ವಸ್ಯಾರ್ಥ ಸಮಸ್ತಮಂತ್ರಸ್ಸಹಧಾರಣಂ ಕರಿಷ್ಯಾಮಿತಿ
ಸಂಕಲ್ಪ್ಯ ಶಿಖಾಯಾಮೇಕಮೇಕಸ್ಯಂ ಶ್ರೀ ಸದಾಶಿವಾಯ ನಮಃ ಇತಿ ॥''
''ದ್ವಿ ತ್ರಿ ದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್ ।
ವಹ್ನಿ ಸೂರ್ಯಸೋಮಾಧಿಪಾಯ ಶಿವಾಯ ನಮಃ ಇತಿ ॥
ಏಕಾದಶ ವಕ್ತ್ರಂ ಷಟ್ತ್ರಿಂಶನ್ಮೂರ್ಧ್ನಿ ಷಟ್ತ್ರಿಂಶತ್ತತ್ವಾತ್ಮಕಾಯ ।
ನಮ ಇತಿ ಪಂಚದಶ ವಕ್ತ್ರಾಣಿ ಕರ್ಣಯೋರೇಕಮೇಕಂ ॥
ಸೋಮಾಯ ನಮಃ ಇತಿ, ಯೇದಷ್ಟವಕ್ತ್ರಾಣಿ ಕಂಠೇ ದ್ವಾತ್ರಿಂಶತ್ ।
ತ್ರ್ಯಂಬಕಕಲಾತ್ಮನೇ ಶ್ರೀಕಂಠಾಯ ನಮಃ ಇತಿ ॥
ಚತುರ್ವಕ್ತ್ರಂ ಪಂಚಷಣ್ಮಾಲಿಕಾಮುರಸಿ ಶ್ರೀಕಂಠಾದಿ ।
ಮೂರ್ತ್ಯಾಯಸ್ಥಿಕಾಯ ಶ್ರೀ ಸರ್ವಜ್ಞಾಯ ನಮಃ ಇತಿ ॥
ಬಾಹೋ ತ್ರಯೋದಶವಕ್ತ್ರಾಣಿ ಷೋಡಶಸುಖಾಸನಾದಿ ।
ಷೋಡಶಮೂರ್ತ್ಯಾತ್ಮಕಾಯ ಶ್ರೀಕಂಠಾಯ ನಮಃ ಇತಿ ॥
ದಕ್ಷೇರ್ಣವ ವಕ್ತ್ರಾಣಿ ಶ್ರೀ ವ್ಯೋಮಕಳಾತ್ಮಕಾಯ

ಉಪವಮಾಪತಯೇ ನಮಃ ಇತಿ ಉಪಾಯತೇ ॥''
ಇಂತೆಂದುದಾಗಿ,
ಇದಕ್ಕೆ **ಮಹಾಲಿಂಗಪುರಾಣೇ** :
''ರುದ್ರಾಕ್ಷಮಾಲಯಾ ಶುಭ್ರೋ ಜಟಾಜೂಟವಿರಾಜಿತಃ ।
ಭಸ್ಮಾವಲಿಪ್ತಸರ್ವಾಂಗಃ ಕಮಂಡಲುಕರಾನ್ವಿತಃ ॥
ಕೃಷ್ಣಾಜಿನೋ ಪವಿತ್ರಾಂಗಃ ಆಶಾಹೆ ಪುಣ್ಯಕೀರ್ತನಃ ।
ಶಿವಃ ತಸ್ಮೈಃ ಮಹಾದೇವಂ ಯೋಗಿನಾಂ ಹೃದಯಾಲಯಂ ॥''
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ** :
''ರುದ್ರಕ್ಷಧಾರಣಾಸ್ಸರ್ವೇ ಜಟಾಮಂಡಲಧಾರಣಾತ್ ।
ಅಕ್ಷಮಾಲಾರ್ಪಿತಕರಂ ತ್ರಿಪುಂಡ್ರಾಪಲಿಯುಕ್ತಾಂಗಂ ।
ಆಷೇಡೇವ ವಿರಾಜಿತಂ ಋಗ್ಯಜುಃಸಾಮರೂಪೇಣ ।
ಸೇವತೇಸ್ಮೈ ಮಹೇಶ್ವರಃ ಸಂಸ್ಥಾಯಮನೋದಿಷ್ಟಾಂಗೈ ॥
ದೇವೈರ್ಮುನಿಗಣೈಸ್ತಥಾಮೃತ ತ್ರಿಪುಂಡ್ರಕೋ ದಿವ್ಯೇ ।
ರುದ್ರಾಕ್ಷೇಶ್ಚ ವಿಭಾಷಿತಃ ಶುಭೇ ಸತತಂ ವಿಷ್ಣು।
ಭಸ್ಮದಿಗ್ಧತಮೂಲತಃ ತ್ರಿಪುಂಡ್ರಾಂಕಿತ ಸರ್ವಾಂಗೋ ।
ಜಟಾಮಂಡಲಮಂಡನ ಭೂತಿ ತ್ರಿಪುಂಡ್ರರುದ್ರಾಕ್ಷಂ ।
ಅಕ್ಷರ ಮಾಲಾರ್ಪಿತಕರಃ ಕುರ್ವಕ್ತ್ರಃ ಪಿತಾಮಹಾ ॥''
ಇಂತೆಂದುದಾಗಿ,
ಇದಕ್ಕೆ **ಮಹಾದೇವೋವಾಚ** :
''ಭಾಲೇ ತ್ರಿಪುಂಡ್ರಕಂ ಚೈವ ಗಳೇ ರುದ್ರಾಕ್ಷಮಾಲಿಕಾ ।
ವಕ್ತ್ರೇ ಷಡಕ್ಷರೀ ಮಂತ್ರೋ ಸ ರುದ್ರೋ ನಾತ್ರ ಸಂಶಯಃ ॥''
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ** :
''ರುದ್ರಕ್ಷಮಾಲಿಕಾ ಕಂಠೇ ಧಾರಸ್ತದ್ಭಕ್ತಿವರ್ಜಿತಃ ।
ಪಾಪಕರ್ಮಾಽಪಿ ಯೋ ನಿತ್ಯಂ ರುದ್ರಲೋಕೇ ಮಹೀಯತೇ ॥''
ಇಂತೆಂದುದಾಗಿ,
ಇದಕ್ಕೆ **ಸ್ಕಂದಪುರಾಣೇ** :
''ರುದ್ರಾಕ್ಷಂ ಕಂಠಮಾಶ್ರಿತ್ಯ ಶ್ವಾನೋಽಪಿ ಮ್ರಿಯತೇ ಯದಿ ।
ಸೋಽಪಿ ರುದ್ರಂ ಸಮಾಪ್ನೋತಿ ಕಿಂ ಪುನರ್ಮಾನುಷಾದಯಃ ॥
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ** :
''ಖಾದನ್ ಮಾಂಸಂ ಪಿಬನ್ ಮದ್ಯಂ ಸಂಗಚ್ಛನ್ನಂತ್ಯಜೇಷ್ವಪಿ ।
ಸದ್ಯೋ ಭವತಿ ಪೂತಾತ್ಮಾ ರುದ್ರಾಕ್ಷೌ ಶಿರಸಿ ಸ್ಥಿತೇ ॥''

ಇಂತೆಂದುದಾಗಿ,
ಇದಕ್ಕೆ **ಈಶ್ವರ ಉವಾಚ** :
''ಶುಚಿರ್ವಾಪ್ಯಶುಚಿರ್ವಾಪಿ ಅಭಕ್ಷಸ್ಯ ಚ ಭಕ್ಷಣಾತ್ ।
ಅಗಮ್ಯಾಗಮನಂ ಚೈವ ಬ್ರಹ್ಮಹಾ ಗುರುತಲ್ಪಕಃ ॥
ಮ್ಲೇಚ್ಛೋ ವಾಪ್ಯಥ ಚಾಂಡಾಲೋ ಯುಕ್ತೋ ವಾ ಪ್ಯಥ ಪಾತಕೈಃ ।
ರುದ್ರಾಕ್ಷಧಾರಣಾದ್ಯಸ್ತು ಸ ರುದ್ರೋ ನಾತ್ರ ಸಂಶಯಃ ॥''
ಇಂತೆಂದುದಾಗಿ,
ಇದಕ್ಕೆ **ಮಹಾಲಿಂಗಪುರಾಣೇ** :
''ಧ್ಯಾನಧಾರಣಹೀನೋಽಪಿ ರುದ್ರಾಕ್ಷಂ ಯೋ ಹಿ ಧಾರಯೇತ್ ।
ಸರ್ವಪಾಪವಿನಿರ್ಮುಕ್ತಃ ಸಯಾತಿ ಪರಮಾಂ ಗತಿಂ॥''
ಇಂತೆಂದುದಾಗಿ,
ಇದಕ್ಕೆ **ಮಾನವಪುರಾಣೇ** :
''ಮೃಣ್ಮಯಂ ವಾಪಿ ರುದ್ರಾಕ್ಷಂ ಕೃತ್ವಾ ಯಸ್ತು ಧಾರಯೇತ್ ।
ಅಪಿ ದುಃಕೃತಕರ್ಮೋಽಪಿ ಸ ಯಾತಿ ಪರಮಾಂ ಗತಿಂ ॥''
ಇಂತೆಂದುದಾಗಿ,
ಇದಕ್ಕೆ **ಶಿವಲಿಂಗಾಗಮೇ** :
''ರುದ್ರಾಕ್ಷಮಾಲಂ ಬ್ರಹ್ಮಾ ಚ ತನ್ನಾಳಂ ವಿಷ್ಣುರುಚ್ಯತೇ ।
ಮುಖಂ ಸದಾಶಿವಂ ಪ್ರೋಕ್ತಂ ಬಿಂದುಃ ಸರ್ವತ್ರ ದೇವತಾ ॥''
ಇಂತೆಂದುದಾಗಿ,
''ರುದ್ರಾಕ್ಷಿಯ ಧರಿಸಿಪ್ಪಾತನೆ ರುದ್ರನು.
ಆತನ ಭವರೋಗಂಗಳು ಹೊದ್ದಲಮ್ಮವು ನೋಡಾ.
'ಏವಂ ರುದ್ರಾಕ್ಷಧಾರಣಾದ್ ರುದ್ರಾ' ಎಂದುದು ಶ್ರುತಿ.
ರುದ್ರಾಕ್ಷಿಯ ಧರಿಸಿಪ್ಪ ಶರಣರಿಗೆ ಶರಣೆಂದು ಬದುಕಿದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೩೩೫ ॥

**ಲಿಂಗಧಾರಣ ಮಹಾತ್ಮೆಯಸ್ಥಲ** :

ಇಂತು ತನ್ನ ಚಿದ್ವಿವೇಕದಿಂದ ಗುರುಕರುಣಮಂ ಪಡೆದು, ಆ ಗುರುಕರುಣದಿಂದ ರುದ್ರಾಕ್ಷಿಯಸ್ಥಲ ಅಂಗವಾದ ಮಹಾಶರಣಂಗೆ ಮುಂದೆ ಲಿಂಗಧಾರಣ ಮಹಾತ್ಮೆಯ ಸ್ಥಲವಾದುದು.

೩೩೬

ಇನ್ನು ಲಿಂಗಧಾರಣ ಮಹಾತ್ಮೆಯ ಸ್ಥಲವೆಂತೆಂದಡೆ :
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ
ಸಮಸ್ತಗಣಂಗಳೆಲ್ಲರು ಶಿವಲಿಂಗಧಾರಣವಾಗಿ
ಶಿವಪೂಜೆಯ ಮಾಡಿದರು ನೋಡಾ.

ಚಂದ್ರಾದಿತ್ಯ ಇಂದ್ರಾದಿ ದೇವರ್ಕಳೆಲ್ಲರು
ಶಿವಲಿಂಗಧಾರಣವಾಗಿ ಶಿವಪೂಜೆಯ ಮಾಡಿದರು ನೋಡಾ.
ಮನು ಮುನಿ ಯತಿ ರಾಕ್ಷಸರು ಮೊದಲಾಗಿ
ಶಿವಲಿಂಗಧಾರಣವಾಗಿ ಶಿವಪೂಜೆಯಮಾಡಿ, ಶಿವಪ್ರಸಾದವ ಕೊಂಡು
ತಮ್ಮ ತಮ್ಮ ಪದವಿಯ ಪಡೆದು ಬದುಕಿದರು ನೋಡಾ.
ಇದಕ್ಕೆ ಶಿವಧರ್ಮಪುರಾಣೇ :
''ಇಂದ್ರ ನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ ।
ವಿಷ್ಣುತ್ವಂ ಪ್ರಾಪ್ಯತೇ ತೇನ ಸಾದ್ಭುತಂ ಚ ಸನಾತನಂ ॥
ಬ್ರಹ್ಮಾ ಪೂಜಯತೇ ನಿತ್ಯಂ ಲಿಂಗಂ ಶೈಲಮಯಂ ಶುಭಂ ।
ತಸ್ಯ ಸಂಪೂಜನಾತ್ತೇನ ಪ್ರಾಪ್ತಂ ಬ್ರಾಹ್ಮತ್ವಮುತ್ತಮುಂ ॥
ಮುಕ್ತಾಫಲಮಯಂ ಲಿಂಗಂ ಸೋಮಃ ಪೂಜಯತೇ ಸದಾ ।
ತೇನ ಸೋಮೇನ ಸಂಪ್ರಾಪ್ತಂ ಸೋಮತ್ವಂ ಸತತೋಜ್ಜಲಂ ॥
ಶಕ್ರೋಽಪಿ ದೇವರಾಜೇಂದ್ರೋ ಲಿಂಗಂ ಮಣಿಮಯಂ ಶುಭಂ ।
ಭಕ್ತ್ಯಾ ಪೂಜಯತೇ ನಿತ್ಯಂ ತೇನ ಶಕ್ರತ್ವಮಾಪ್ತವಾನ್ ॥
ಲಿಂಗಂ ರತ್ನಮಯಂ ಚಾರು ವರುಣೋಽರ್ಚಯತೇ ಸದಾ ।
ತೇನ ತದ್ವರುಣತ್ವಂ ಹಿ ಪ್ರಾಪ್ತಂ ವೃದ್ಧಿಸಮನ್ವಿತಂ ॥
ಲಿಂಗಂ ಹೇಮಮಯಂ ಕಾಂತಂ ಧನದೋಽರ್ಚಯತೇ ಸದಾ ।
ತೇನಾಽಸೌ ಧನದೋ ದೇವೋ ಧನದತ್ವಮವಾಪ್ತವಾನ್ ॥
ಸಂಪೂಜ್ಯ ಕಾಂಸ್ಯಕಂ ಲಿಂಗಂ ವಸವಃ ಕಾಮಮಾಪ್ನುಯುಃ ।
ನಾಗಾಃ ಪ್ರವಾಲಜಂ ಲಿಂಗಂ ರಾಜ್ಯಂ ಸಂಪೂಜ್ಯ ಲೇಭಿರೇ ।
ಏವಂ ದೇವಾಃ ಸ ಗಂಧರ್ವಾಃ ಸ ಯಕ್ಷೋರಗರಾಕ್ಷಸಾಃ ।
ಪೂಜಯಂತಿ ಸದಾಕಾಲಮೀಶಾನಂ ಸುರನಾಯಕಂ ॥
ಸರ್ವಂ ಲಿಂಗಮಯಂ ಲೋಕೇ ಸರ್ವಂ ಲಿಂಗೇ ಪ್ರತಿಷ್ಠಿತಂ ।
ತಸ್ಮಾತ್ ಸಂಪೂಜ್ಯಯೇನ್ನಿತ್ಯಂ ಯದಿಚ್ಛೇತ್ ಸಿದ್ಧಿಮಾತ್ಮನಃ ॥''
ಇಂತೆಂದುದಾಗಿ,
ಇದಕ್ಕೆ ವ್ಯಾಸ ಜೈಮಿನಿ ಸಂವಾದೇ: ವ್ಯಾಸ ಉವಾಚ-
''ಇತಿಹಾಸೇಷು ವೇದೇಷು ಪುರಾಣೇಷು ಪುರಾತನ್ಯೈಃ ।
ಮಹರ್ಷಿಭಿರ್ಮಹಾದೇವೋ ಶಿವಲಿಂಗಂತು ಧಾರಯೇತ್ ॥
ಸುರಾಸುರೇಂದ್ರದೇವಾಶ್ಚ ಲಿಂಗಧಾರಣಯಾ ಸದಾ ।
ತಥಾಗಸ್ತ್ಯಾದಿ ಮುನಯೋ ದೂರ್ವಾಸು ನಂದಿಕೇಶ್ವರಃ ।
ಮಹಾಕಾಲೋ ದಧೀಚಿಶ್ಚ ಪಾಣಿನಿಶ್ಚ ಕಣಾದಕಃ ।
ಸ್ಕಂದೋ ಭೃಂಗಿರೀಟರ್ವೀರಭದ್ರಾಶ್ಚ ಪ್ರಮಥಾದಯಃ ॥
ಅಜೋ ಹರಿಃ ಸಹಸ್ರಾಕ್ಷೋ ಬಾಣಾಸುರದಶಾನನೌ ।
ವಶಿಷ್ಠರುರುವಾಲ್ಮೀಕಿಭಾರದ್ವಾಜಾತ್ರಿಗೌತಮಾಃ ॥

ಏತೇ ಪರಮಶೈವಾಶ್ಚ ಭಜಂತಿ ಪರಯಾ ಮುದಾ ।
ಪ್ರಸಾದ ಸೇವನಾತ್‍ಧ್ಯಾನಾದರ್ಚನಾದ್ಧಾರಣಾದಪಿ ॥''
ಇಂತೆಂದುದಾಗಿ,
ಇದಕ್ಕೆ **ವಾತುಲತಂತ್ರೇ** :
''ಬ್ರಹ್ಮವಿಷ್ಣುಸುರೇಶಾದಿ ದೇವತಾಃ ಪರಯಾ ಮುದಾ ।
ಶಿರೋಭಿರ್ಧಾರಯಂತ್ಯೇತಾ ಃ ಶಿವಲಿಂಗಮಹರ್ನಿಶಂ ॥
ಪಾಣಿನಿಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ ।
ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ ॥
ಕಂಠೇಷು ಹರಕಂಠಾದಿ ಮುನಯೋ ಮಾನವಾಸ್ತಥಾ ।
ಸರ್ವದಾ ಶಿವಲಿಂಗಂತು ಧಾರಯಂತಿ ಯಜಂತಿ ಚ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರೋऽವಾಚ** :
''ಉತ್ತಮಾಂಗೇ ಗಲೇ ಕಕ್ಷೇ ಸರ್ವದಾ ಧಾರಯೇತ್ ಶಿವಂ ।
ಮಂತ್ರಾದ್ಯುತ್ಸಾರ್ಜನೇಯುವೇ ಭೋಜನೇऽಪಿ ಸದಾ ಶುಚಿಃ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರೋऽವಾಚ** :
''ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರನ್ ಉನ್ಮಿಷನ್ ನಿಮಿಷನ್ನಪಿ ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ॥''
ಇಂತೆಂದುದಾಗಿ,
ಇದಕ್ಕೆ **ಶ್ರೀ ಮಹಾದೇವ ಉವಾಚ** :
''ಉದರೇ ಧಾರಯೇಲ್ಲಿಂಗಂ ಗ್ರಾಮಸ್ಯಾಧಿಪತಿರ್ಭವೇತ್ ।
ವಕ್ಷಸಾ ಧಾರಯೇಲ್ಲಿಂಗಂ ಇಂದ್ರಸ್ಯಾಧಿಪತಿರ್ಭವೇತ್ ॥
ಕಂಠೇತು ಧಾರಯೇಲ್ಲಿಂಗಂ ಬ್ರಾಹ್ಮಣಾಧಿಪತಿರ್ಭವೇತ್ ।
ಅಪರೇ ಧಾರಯೇಲ್ಲಿಂಗಂ ರಾಕ್ಷಸ್ಯಾಧಿಪತಿರ್ಭವೇತ್ ॥
ಸ್ಕಂದೇ ತು ಧಾರಯೇಲ್ಲಿಂಗಮೀಪ್ಸಿತಂ ಲಭತೇ ಧ್ರುವಂ ।
ಶಿರಸಾ ಧಾರಯೇಲ್ಲಿಂಗಂ ಗಣತ್ವೇನ ಸಯುಜ್ಯತೇ ।
ತೇ ಸ್ಥಾನೇಷು ಧಾರಯೇಲ್ಲಿಂಗ ಸರ್ವಸಿದ್ಧಿ ಫಲಪ್ರದಂ ॥''
ಇಂತೆಂದುದಾಗಿ,
ಇದಕ್ಕೆ **ಲೈಂಗ್ಯಪುರಾಣೇ** :
''ಲಿಂಗಪ್ರಣೆತಥಾ ಲಿಂಗಂ ಶಿಖಾಯಾಂ ಧಾರಯೇತ್ಸುಧೀಃ ।
ತದಸ್ಥಾನಾಧಿಕಂ ದಿವ್ಯಂ ಬ್ರಹ್ಮರಂಧ್ರಂ ವಿಶೇಷತಃ ॥
ಮೂರ್ಧ್ನಿವಾ ಧಾರಯೇಲ್ಲಿಂಗಂ ನ ತಥಾ ಚ ದ್ವಿಜಯೋ ಜಯೇತ್ ।
ಈಶಾವಾ ನಿತ್ಯಸಂಯೋಗೋ ಪರಯೋನಿರನಿಷ್ಪಯಃ ।
ನಾಭೇರಧೋ ಲಿಂಗಧಾರಿ ಪಾಪೇನ ಚ ಸ ಯುಜ್ಯತೇ ।

ನಾಭ್ಯೋರ್ಧ್ವೇ ಲಿಂಗಧಾರೀ ಚ ಸೌಭಾಗ್ಯಜ್ಞಾನವರ್ಧನಂ ॥''
ಇಂತೆಂದುದಾಗಿ,
ಇದಕ್ಕೆ **ಉಮಾಮಹೇಶ್ವರ ಸಂವಾದೇ :**
''ಜಾತಾ ದರ್ಶನಕರ್ತಾರಃ ಶ್ರಾವಯಂತಿ ಜಗತ್ರಯಂ ।
ಕಕ್ಷೇ ಬ್ರಹ್ಮಾ ಕರೇ ವಿಷ್ಣುಃ ಕಂಠೇ ಮಾಹೇಶ್ವರಸ್ಸದಾ ॥
ವ್ಯೋಮಾತೀತಸ್ತು ಶಿರಸಿ ಮುಖೇ ರುದ್ರಸ್ತು ಧಾರಯೇತ್ ।
ಈಶ್ವರಸ್ತ್ವಮಲ್ಯೈಕ್ಯೇ ತು ಉತ್ತಮಾಂಗೇ ಸದಾಶಿವಃ ।
ಇತಿ ದೇವಗಣೋ ಧೃತ್ವಾ ಲಿಂಗಂತು ಯಜತೇ ಸದಾ ॥
ನಾಭಿಂ ಚ ಹೃದಯೇ ಮೂರ್ಧ್ನಿ ಸರ್ವಾವಸ್ಥಾಸು ಸರ್ವದಾ ।
ತ್ರಿಲಿಂಗಧಾರಣಂ ಕುರ್ಯಾದೇವೀ ನಿತ್ಯಂ ಮಮಪ್ರಿಯಃ ॥
ಕಾಯಸಂಬಂಧ ಲಿಂಗೇನರಹಿತಶ್ಚಾಪಿಯೋ ಭವೇತ್ ।
ನಿಮುಷಾರ್ಧಂ ವಿಯೋಗೇನ ವಿಶೇಷೋತ್ಪಾತ್ ಕೋಭವೇತ್ ॥
ಇಂತೆಂದುದಾಗಿ,
ಇದಕ್ಕೆ **ಅಥರ್ವಣವೇದೇ :**
''ಓಂ ತ್ರಯೋ ದೇವಾ ಲಿಂಗಂ ಧಾರಯಂತಿ ।
ಋಷಯಃ ಶಿವಲಿಂಗಧಾರಯಂತಿ ।
ತಸ್ಮಾದ್ದೇವಲಿಂಗ ಧಾರಯಂತಿ ।
ಅಜಹರಿ ಲಿಂಗಂ ಧಾರಯಂತಿ ।
ಸುರೇಂದ್ರದೈತ್ಯಾ ಧಾರಯಂತಿ ॥''
ಇಂತೆಂದುದಾಗಿ,
ಇದಕ್ಕೆ **ಋಗ್ವೇದೇ :**
''ಸೋಮೇ ರುದ್ರಾಯುವಮೇತಾವ್ಯಸ್ಮಿ ವಿಶ್ವಾತಮಾಷುಭೇಷಾವಿದತ್ತಂ ।
ಅವಸ್ಯತಂ ಮುಲಚತಯಿಂ ನೋ ಅಸ್ತಿತನುಕ್ಷುಬಂಧಂ ಕ್ರುಷಮೇನೋ ಅಸ್ತಿತ್॥''
ಇಂತೆಂದುದಾಗಿ,
ಇದಕ್ಕೆ **ಅಥರ್ವಣವೇದೇ :**
''ಚತುರ್ವೇದಾ ಲಿಂಗ ಧಾರಯಂತಿ ।
ಅನಂತಾ ವೈ ವೇದಾಃ ಲಿಂಗಂ ಧಾರಯಂತಿ ॥''
ಇಂತೆಂದುದು ಶ್ರುತಿ.
ಇದನರಿದು ಶ್ರೀವಿಭೂತಿ ರುದ್ರಾಕ್ಷಿ ಶಿವಲಿಂಗಧಾರಣವಿಲ್ಲದ
ಕರ್ಮಿಯನೆನಗೊಮ್ಮೆ ತೋರದಿರಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೩೭ ॥

ಪಂಚಾಕ್ಷರಿಯಸ್ಥಲ :

ಇಂತು ತನ್ನ ಚಿದ್ವಿವೇಕದಿಂದ ಗುರುಕರುಣಮಂ ಪಡೆದು, ಆ ಗುರುಕರುಣದಿಂದ ಲಿಂಗಧಾರಣಮಹಾತ್ಮೆಯಸ್ಥಲ ಅಂಗವಾದ ಮಹಾಶರಣಂಗೆ ಮುಂದೆ ಪಂಚಾಕ್ಷರಿಯಸ್ಥಲವಾದುದು.

೩೩೭

ಇನ್ನು ಪಂಚಾಕ್ಷರಿಯಸ್ಥಲವೆಂತೆಂದೊಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ದಕ್ಷಿಣಭಾಗದಲ್ಲಿ ಅಕಾರೋತ್ಪತ್ಯವಾಯಿತ್ತು.
ಆ ಪ್ರಣವದ ವಾಮಭಾಗದಲ್ಲಿ ಉಕಾರೋತ್ಪತ್ಯವಾಯಿತ್ತು.
ಆ ಪ್ರಣವದ ಪೂರ್ವಭಾಗದಲ್ಲಿ ಮಕಾರೋತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಈಶ್ವರ ಉವಾಚ** :
''ಓಂಕಾರ ದಕ್ಷಿಣೇಭಾಗೇ ಅಕಾರಂ ಚಾಪಿ ಜಾಯತೇ ।
ಓಂಕಾರ ವಾಮಭಾಗೇ ಚ ಉಕಾರಂಚೋದ್ಭವಂ ಸದಾ ॥
ಓಂಕಾರ ಪೂರ್ವಭಾಗೇ ಚ ಮಕಾರಂ ಚ ಸಮುದ್ಭವಂ ।
ಇತಿ ತ್ರಿಯಕ್ಷರಂ ದೇವಿ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ,
ಅಪ್ರಮಾಣ ಕೂಡಲಸಂಗಮೇವಾ. ॥ ೩೩೭ ॥

೩೩೮

ಇನ್ನು ಆ ಅಕಾರ ಉಕಾರ ಮಕಾರ ಇವು ಮೂರು ಬೀಜಾಕ್ಷರ.
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.
ಅಕಾರವೇ ರುದ್ರ, ಉಕಾರವೇ ಈಶ್ವರ, ಮಕಾರವೇ ಸದಾಶಿವ.
ಅಕಾರವೆಂಬ ಪ್ರಣವದಲ್ಲಿ ನಕಾರ ಮಕಾರ ಉತ್ಪತ್ಯ ಲಯ.
ಉಕಾರವೆಂಬ ಪ್ರಣವದಲ್ಲಿ ಶಿಕಾರ ವಕಾರ ಉತ್ಪತ್ಯ ಲಯ.
ಮಕಾರವೆಂಬ ಪ್ರಣವದಲ್ಲಿ ಯಕಾರ ಆತ್ಮನುತ್ಪತ್ಯ ಲಯ.
ಅಕಾರ ಮಕಾರ ಉಕಾರ ಸಂಯುಕ್ತವಾಗಿ ಓಂಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಓಂಕಾರೋಪನಿಷತ್** :
ಅಕಾರವೆಂಬ ಪ್ರಣವದಲ್ಲಿ–
''ನಕಾರಶ್ಚ ಮಕಾರೋ ಭವತಿ । ಓಂ ರುದ್ರೋ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ದ್ವಿತೀಯೇ ಪ್ರಣವಾಂಶಿಕೇ ॥''
ಉಕಾರವೆಂಬ ಪ್ರಣವದಲ್ಲಿ–
''ಶಿಕಾರಶ್ಚ ನಕಾರೋ ಭವತಿ । ಓಂ ಈಶ್ವರೋ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ತೃತೀಯಂ ಪ್ರಣವಾಂಶಿಕೇ ॥''
ಮಕಾರವೆಂಬ ಪ್ರಣವದಲ್ಲಿ–
''ಯಕಾರಶ್ಚಾತ್ಮಾ ಭವತಿ । ಓಂ ಸದಾಶಿವೋ ದೇವತಾ ।

ಮಕಾರೇ ಚ ಲಯಂ ಪ್ರಾಪ್ತೇ ಚತುರ್ಥಂ ಪ್ರಣವಾಂಶಿಕೇ ॥''
''ಅಕಾರೇ ಚ ಉಕಾರೇ ಚ ಮಕಾರೇ ಚ ತ್ರಯಕ್ಷರಂ ।
ಅಕಾರಂ ನಾದರೂಪೇಣಂ ಉಕಾರಂ ಬಿಂದುರುಚ್ಯತೇ ।
ಮಕಾರಂತಿ ಕಲಾಶ್ಚೈವ ನಾದಬಿಂದುಕಲಾತ್ಮನೇ ।
ನಾದಬಿಂದುಕಲಾಯುಕ್ತೋ ಓಂಕಾರೋ ಪರಮೇಶ್ವರಃ ॥
ವಕಾರಂ ತಾರಕಾರೂಪಂ ಮಕಾರಂ ದಂಡ ಉಚ್ಯತೇ ।
ಶಿಕಾರಂ ಕುಂಡಲಾಕಾರಂ ವಕಾರಶ್ಚಾರ್ಧಚಂದ್ರಕಂ ।
ಯಕಾರಂ ದರ್ಪಣಾಕಾರಂ ಓಂಕಾರೋ ಜ್ಯೋತಿರೂಪಕಂ ।
ಇತಿ ಪ್ರಣವಂ ವಿಜ್ಞೇಯಂ ಏತದ್ಗೋಪ್ಯಂ ವರಾನನೇ ॥
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೩೮ ॥

### ೩೩೯

ಐವತ್ತೆರಡು ಅಕ್ಷರಕ್ಕೆ ಈ ಪ್ರಣವವೇ
ಉತ್ಪತ್ತಿ–ಸ್ಥಿತಿ–ಲಯಸ್ಥಾನ.
ಅಜಪೆ ಗಾಯತ್ರಿ ಪ್ರಾಣಾಯಾಮನಕ್ಕೆ ಪ್ರಣವವೇ
ಉತ್ಪತ್ತಿ–ಸ್ಥಿತಿ–ಲಯಸ್ಥಾನ.
ಅನೇಕ ವೇದಾಗಮ ಶಾಸ್ತ್ರಪುರಾಣಂಗಳಿಗೆ ಪ್ರಣವವೇ
ಉತ್ಪತ್ತಿ–ಸ್ಥಿತಿ–ಲಯಸ್ಥಾನ.
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ
ಸಮಸ್ಥ ದೇವರ್ಕಳಿಗೆ ಪ್ರಣವವೇ
ಉತ್ಪತ್ತಿ–ಸ್ಥಿತಿ–ಲಯಸ್ಥಾನ.
ಪ್ರಣವವೇ ಪರಂಜ್ಯೋತಿ, ಪ್ರಣವವೇ ಪರಮಾನಂದ,
ಪ್ರಣವವೇ ಪರಬ್ರಹ್ಮ
ಪ್ರಣವವೇ ಅಖಂಡ ಲೋಕಾದಿಲೋಕಕ್ಕೆ ಮೂಲಪ್ರಣವ
ಓಂ ನಮಃಶಿವಾಯ ಪ್ರಣವ.
ಓಂ ನಮಃ ಶಿವಾಯ ಪ್ರಣವ ಸಪ್ತಕೋಟಿ ಮಂತ್ರಗಳ ಸಾರ ;
ಅನಂತಕೋಟಿ ವೇದಾಗಮಶಾಸ್ತ್ರಪುರಾಣಂಗಳ ಸಾರ.
ಇದಕ್ಕೆ **ಈಶ್ವರ ಉವಾಚ** :
''ಸಪ್ತಕೋಟಿ ಮಹಾಮಂತ್ರ ಚಿತ್ತವ್ಯಾಕುಲ ಕಾರಣಂ ।
ಏಕಯೇಕಾಕ್ಷರಂ ದೇವೀ ತೂರ್ಯಾತೀತಂ ಮನೋಲಯಃ ॥
ಸಪ್ತಕೋಟಿ ಮಹಾಮಂತ್ರಂ ಉಪಮಂತ್ರಂ ಸನೇಕತಾ ।
ಓ ಮಿತ್ಯೇಕಾಕ್ಷರಂ ಮೂಲಂ ಇತಿ ಭೇದಂ ವರಾನನೇ ॥''
ಇಂತೆಂದುದಾಗಿ,

ಇದಕ್ಕೆ **ಚಿತ್ಪಿಂಡಾಗಮೇ** :
''ಓಂಕಾರೇ ಬೀಜರೂಪಂ ಚ ವೃಕ್ಷಂ ವಿಶ್ವವಿಶಾಲಯೋಃ ।
ಓಮಿತ್ಯೇಕಾಕ್ಷರಂ ಬ್ರಹ್ಮ ಓಂಕಾರೇ ವಿಶ್ವಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರ ಉವಾಚ** :
''ಅಕಾರೋಕಾರ ಸಂಯೋಗ ಓಂಕಾರಃ ಸ್ವರ ಉಚ್ಯತೇ ।
ಓಮಿತ್ಯೇಕಾಕ್ಷರಂ ಬ್ರಹ್ಮ ವದಂತಿ ಶಿವಯೋಗಿನಃ ॥''
ಇಂತೆಂದುದಾಗಿ,
ಇದಕ್ಕೆ **ಮಹಾಗಮಸಾರೇ** :
''ಓಂಕಾರೇ ತ್ರಿಗುಣಾತ್ಮಾ ಚ ತದರ್ಭೇತಿ ತ್ರಿಯಕ್ಷರಂ ।
ಅಕಾರೇ ಚ ಉಕಾರೇ ಚ ಮಕಾರೇ ಚ ತ್ರಿಯಕ್ಷರಂ ॥
ಅಕಾರಂ ನಾದರೂಪೇಣ ಉಕಾರಂ ಬಿಂದುರುಚ್ಯತೇ ।
ಮಕಾರಂತು ಕಲಾಚ್ಚೈವ ನಾದಬಿಂದುಕಲಾತ್ಮನೇ ।
ನಾದಬಿಂದುಕಲಾಯುಕ್ತೋ ಓಂಕಾರೋ ಪರಮೇಶ್ವರಃ ॥''
ಇಂತೆಂದುದಾಗಿ,
ಇದಕ್ಕೆ **ಗೀತಸಾರೇ** :
''ಪೃಥಿವಿಶ್ಚಾಗ್ನಿಶ್ಚ ಋಗ್ವೇದೋ ಭೂರಿತ್ಯೇವ ಪಿತಾಮಹಃ ।
ಅಕಾರೇ ತು ಲಯಂ ಪ್ರಾಪ್ತೇ ಪ್ರಥಮೇ ಪ್ರಣವಾಂಶಿಕೈಃ ॥
ಅಂತರಿಕ್ಷಂ ಯಜುರ್ವೇದಂ ಭುಜೋವಿಷ್ಣುಃ ಸನಾತನವಃ ।
ಉಕಾರೇತು ಲಯಂ ಪ್ರಾಪ್ತೇ ದ್ವಿತಿಯ್ಯೇ ಪ್ರಣವಾಂಶಿಕೇ ॥
ದಿವಿ ಸೂರ್ಯಂ ಸಾಮವೇದಸ್ಸ್ಯೋರಿತ್ಯೇವ ಮಹೇಶ್ವರಃ ।
ಮಕಾರೇ ತು ಲಯಂ ಪ್ರಾಪ್ತೇ ತೃತೀಯೇ ಪ್ರಣವಾಂಶಿಕೇ ।
ಅಕಾರೇ ಚ ಉಕಾರೇ ಚ ಮಕಾರೇ ಚ ತ್ರಿಯಕ್ಷರಂ ।
ಇದಮೇಕಂ ಸಮುತ್ಪನ್ನಂ ಓಮಿತಿ ಜ್ಯೋತಿರೂಪಕಂ ॥
ಓಂಕಾರ ಪ್ರಭವಾತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಓಮಿತ್ಯೇಕಾಕ್ಷರಂ ಬ್ರಹ್ಮ ಹೃತ್ಪದ್ಮೇಪಿ ವ್ಯವಸ್ಥಿತಂ ।
ಸದ್ಯೋದಹತಿ ಪಾಪಾನಿ ದೀರ್ಘೋ ಮೋಕ್ಷಂ ಪ್ರಯಚ್ಛತಿ ॥''
ಇಂತೆಂದುದಾಗಿ,
ಇದಕ್ಕೆ **ಪ್ರಣವೋಪನಿಷತ್** :
ಅಕಾರವೆಂಬ ಪ್ರಣವದಲ್ಲಿ –
''ಅಗ್ನಿಶ್ಚ ಋಗ್ವೇದೋ ಭವತಿ । ಓಂ ರುದ್ರೋ ದೇವತಾ ।
ಅಕಾರೇಚ ಲಯಂ ಪ್ರಾಪ್ತೇ ಪ್ರಥಮಂ ಪ್ರಣವಾಂಶಿಕೇ ॥''
ಉಕಾರವೆಂಬ ಪ್ರಣಮದಲ್ಲಿ–
''ಅಂತರಿಕ್ಷಜುರ್ವೇದಾದ್ಭವತಿ । ಓಮೀಶ್ವರೋ ದೇವತಾ ।

ಉಕಾರೇ ಚ ಲಯಂ ಪ್ರಾಪ್ತೇ ದ್ವಿತೀಯಂ ಪ್ರಣವಾಂಶಿಕೇ ॥''
ಮಕಾರವೆಂಬ ಪ್ರಣವದಲ್ಲಿ–
''ವಿದ್ಯೇಸ್ಸಾಮವೇದಾ ಭವತಿ । ಓಂ ಸದಾಶಿವೋ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ತೃತೀಯಂ ಪ್ರಣವಾಂಶಿಕೇ ॥
ಅಕಾರೇ ಚ ಉಕಾರೇ ಚ ಮಕಾರೇ ಚ ತೃತೀಯಕಂ ।
ಇದಮೇಕಂ ಸಮುತ್ಪನ್ನಂ ಓಮಿತಿ ಜ್ಯೋತಿರೂಪಕಂ ॥
ಓಂಕಾರಪ್ರಭವಾ ವೇದಾ ಓಂಕಾರ ಪ್ರಭವಾತ್ಸ್ವರಾಃ ।
ಓಂಕಾರಪ್ರಭವಾತ್ಸರ್ವಂ ತ್ರೈಲೋಕ್ಯಂ ಸಚರಾಚರಂ ॥
ಸರ್ವವ್ಯಾಪಕಮೋಂಕಾರಂ ಮಂತ್ರನ್ಯತ್ರ ನ ಭವೇತ್ ।
ಪ್ರಣವಂ ಹಿ ಪರಂ ಬ್ರಹ್ಮಂ ಪ್ರಣವಂ ಪರಮಂ ಪದಂ ।
ಓಂಕಾರಂ ನಾದರೂಪಂ ಚ ಓಂಕಾರಂ ಮಂತ್ರರೂಪಕಂ ।
ಓಂಕಾರಂ ವ್ಯಾಪಿ ಸರ್ವತ್ರ ಓಂಕಾರಂ ಗೋಪ್ಯಮಾನನಂ ॥''
ಇಂತೆಂದುದಾಗಿ,
**ಇದಕ್ಕೆ ಈಶ್ವರ ಉವಾಚ :**
''ಪ್ರಣಮಂ ನಕಾರರೂಪಂ ಚ । ಓಂಕಾರಂ ಮಂತ್ರರೂಪಕಂ ।
ಓಂಕಾರಂ ವ್ಯಾಪಿ ಸರ್ವತ್ರ । ಪ್ರಣವಂ ಮಕಾರರೂಪಕಂ ॥
ಪ್ರಣವಂ ಶಿಕಾರರೂಪಂ ಚ । ಪ್ರಣವಂ ವಕಾರರೂಪಕಂ ।
ಪ್ರಣವಂ ಯಕಾರರೂಪಂ ಚ । ಪ್ರಣವಂ ಷಡಕ್ಷರಮಯಂ ।
ಇತಿ ಪ್ರಣವ ವಿಜ್ಞೇಯಂ । ಗುಹ್ಯಾದ್ಗುಹ್ಯಂ ವರಾನನೇ ॥''
ಇಂತೆಂದುದಾಗಿ,
**ಇದಕ್ಕೆ ಯಜುರ್ವೇದೋಪನಿಷತ್ :**
''ಓಮಿತ್ಯೇಕಾಕ್ಷರಂ ಬ್ರಹ್ಮ ನಮಃ ಶಿವಾಯೇತ್ಯ ಜಾಯತ ॥''
ಇಂತೆಂದುದಾಗಿ,
**ಇದಕ್ಕೆ ಶ್ರೀರುದ್ರೇ :**
''ಓಂ ನಮಃ ಶಿವಾಯ ಚ ಶಿವ ತರಾ ಯ ಚ ॥''
ಇಂತೆಂದುದಾಗಿ,
**ಇದಕ್ಕೆ ಅಥರ್ವಣವೇದೇ :**
''ಓಂಕಾರೋಭ್ಯೋ ಜಗಕ್ಷೇತ್ರಾ । ಯಜಿತಾಂ ಪತಯೇ ನಮೋ ನಮೋ ।
ಅಕಾರೇಭ್ಯೋ ಬ್ರಹ್ಮಕ್ಷೇತ್ರಾಯ । ಕ್ಷೇತ್ರಾನಾಂ ಪತಯೇ ನಮೋ ನಮೋ ।
ಉಕಾರೇಭ್ಯೋ ವಿಷ್ಣುಕ್ಷೇತ್ರಾಯ । ಕ್ಷೇತ್ರಾನಾಂ ಪತಯೇ ನಮೋ ನಮೋ ।
ಮಕಾರೇಭ್ಯೋ ರುದ್ರಕ್ಷೇತ್ರಾಯ । ಕ್ಷೇತ್ರಾನಾಂ ಪತಯೇ ನಮೋ ನಮೋ ।
ಓಂಕಾರೇಭ್ಯೋ ಅಧ್ವಕ್ಷೇತ್ರಾಯ । ಕ್ಷೇತ್ರಾನಾಂ ಪತಯೇ ನಮೋ ನಮೋ ।
ನಮಃ ಶಿವಾಯೇಭ್ಯೋ ಸರ್ವ । ಕ್ಷೇತ್ರಾನಾಂ ಪತಯೇ ನಮೋ ನಮೋ ॥''
ಇಂತೆಂದುದಾಗಿ,

ಪ್ರಣವವ ಬಲ್ಲಾತನೆ ಬ್ರಾಹ್ಮಣನು.
ಪ್ರಣವವ ಬಲ್ಲಾತನೆ ವೇದಾಧ್ಯಾಯಿ.
ಪ್ರಣವವ ಬಲ್ಲಾತನೆ ಆಗಮಿಕನು.
ಪ್ರಣವವ ಬಲ್ಲಾತನೆ ಶಾಸ್ತ್ರಿಕನು.
ಪ್ರಣವವ ಬಲ್ಲಾತನೆ ಪುರಾಣಿಕನು.
ಪ್ರಣವವ ಬಲ್ಲಾತನೆ ದಿವ್ಯಯೋಗಿ.
ಪ್ರಣವವ ಬಲ್ಲಾತನೆ ನಿಜಾನಂದಯೋಗಿ.
ಪ್ರಣವವ ಬಲ್ಲಾತನೆ ಪರಮಜ್ಞಾನಿ.
ಪ್ರಣವವ ಬಲ್ಲಾತನೆ ಪರಮಯೋಗಿ.
ಪ್ರಣವವ ಬಲ್ಲಾತನೆ ಪರಮಾನಂದಯೋಗಿ.
ಪ್ರಣವವ ಬಲ್ಲಾತನೆ ನಿಜಯೋಗಿ.
ಪ್ರಣವವ ಬಲ್ಲಾತನೆ ಶಿವಯೋಗಿ.
ಪ್ರಣವವ ಬಲ್ಲಾತನೆ ಶಿವಾನಂದಯೋಗಿ.
ಪ್ರಣವವ ಬಲ್ಲಾತನೆ ಜ್ಞಾನಯೋಗಿ.
ಪ್ರಣವವ ಬಲ್ಲಾತನೆ ಜ್ಞಾನಾನಂದಯೋಗಿ.
ಪ್ರಣವವ ಬಲ್ಲಾತನೆ ನಮ್ಮ ಅಪ್ರಮಾಣಕೂಡಲಸಂಗಮದೇವ. ॥ ೩೩೯ ॥

ಇಂತು ತನ್ನ ಚಿದ್ವಿವೇಕದಿಂದ ಗುರುಕರುಣವಂ ಪಡದು, ಆ ಗುರುಕರುಣದಿಂದ ಪಂಚಾಕ್ಷರಿಸ್ಥಲ ಅಂಗವಾದ ಮಹಾಶರಣನು ಮತ್ತಂ ಆ ಸದ್ಗುರುಸ್ವಾಮಿಗೆ ದೀರ್ಘದಂಡ ನಮಸ್ಕಾರವಂ ಮಾಡಿ ಭಕ್ತಿಯಿಂದ ಎಲೆ ಸದ್ಗುರುಸ್ವಾಮಿ ಇಷ್ಟ–ಪ್ರಾಣ–ಭಾವಲಿಂಗ ಭೇದವನು, ಆ ಇಷ್ಟ–ಪ್ರಾಣ–ಭಾವಲಿಂಗಕ್ಕೆ ಅಂಗತ್ರಯಂಗಳ ಭೇದವನು, ಆ ಇಷ್ಟ–ಪ್ರಾಣ– ಭಾವ ಲಿಂಗದಲ್ಲಿ ಮಾಡುವ ಪೂಜೆಯ ಕ್ರಮದ ಭೇದವನು, ಷಡುಸ್ಥಲಬ್ರಹ್ಮಿಗಳು, ಆ ಇಷ್ಟ–ಪ್ರಾಣ–ಭಾವಲಿಂಗದಲ್ಲಿ ಅರ್ಪಿತಾವಧಾನ ಭೇದವನು, ಗುರುಲಿಂಗ ಶಿವಲಿಂಗ ಜಂಗಮಲಿಂಗದ ಭೇದವನು, ತ್ರಿವಿಧಲಿಂಗದಲ್ಲಿ ಪೂಜೆಯ ಮಾಡುವ ಕ್ರಮವನು, ಆ ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಯೆಂಬ ಅಷ್ಟಾಂಗಯೋಗದ ಭೇದವನು, ತ್ರಿವಿಧ ಲಿಂಗದಲ್ಲಿ ಸಮುದ್ಭವವಾದ ತ್ರಿವಿಧಪ್ರಸಾದಭೇದವನು, ತ್ರಿವಿಧೋದಕದ ಕ್ರಮವನು, ಷಡುಸ್ಥಲಂಗಳ ಭೇದವನು, ಅರಿಯೆನು ನಿರೂಪಿಸೆಂದು ಬಿನ್ನವಿಸಲು ಆ ಸದ್ಗುರುಸ್ವಾಮಿ ನಿರೂಪಿಸಿದ ವಚನವೆಂತೆಂದಡೆ:

೩೪೦

ಸಚ್ಚಿದಾನಂದಸ್ವರೂಪವಾಗಿಹ ಪರಬ್ರಹ್ಮನೆ
ಇಷ್ಟ–ಪ್ರಾಣ–ಭಾವವೆಂದು ಮೂರುತೆರನಾಯಿತ್ತು
ಅದೆಂತೆಂದಡೆ :

ಸತ್ತೇ ಭಾವಲಿಂಗ, ಚಿತ್ತೇ ಪ್ರಾಣಲಿಂಗ,
ಆನಂದವೇ ಇಷ್ಟಲಿಂಗ ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಸಚ್ಚಿದಾನಂದರೂಪಂ ಚ ಇಷ್ಟಪ್ರಾಣಂತು ಭಾವಕಂ ।
ಸತ್ತು ಸದ್ಭಾವಲಿಂಗಂ ಚ ಚಿತ್ತು ಚಿತ್ಪ್ರಾಣಲಿಂಗಕಂ ।
ಆನಂದಂ ಇಷ್ಟಲಿಂಗಂ ಚ ಇತಿ ಭೇದಂ ವರಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೦ ॥

೩೪೧

ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಕ್ಕೆ
ಅಂಗತ್ರಯಂಗಳಾವಾವೆಂದಡೆ :
ಸುಷುಪ್ತಾವಸ್ಥೆಯೇ ಯೋಗಾಂಗ
ಸ್ವಪ್ನಾವಸ್ಥೆಯೇ ಭೋಗಾಂಗ
ಜಾಗ್ರಾವಸ್ಥೆಯೇ ತ್ಯಾಗಾಂಗ ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಸುಷುಪ್ತ್ಯವಸ್ಥಾ ಯೋಗಾಂಗಂ ಸ್ವಪ್ನಾವಸ್ಥೇನಾಭಿರು ।
ಜಾಗ್ರದಿತ್ಯುದಿತಾವಸ್ಥಾ ತ್ಯಾಗಾಂಗಮಿತಿ ಲಕ್ಷ್ಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೧ ॥

೩೪೨

ಇನ್ನೊಂದು ಪ್ರಕಾರದ ಅಂಗತ್ರಯವೆಂತೆಂದಡೆ :
ಪ್ರಾಜ್ಞಾತ್ಮನೆ ಯೋಗಾಂಗ, ತೈಜಸಾತ್ಮನೆ ಭೋಗಾಂಗ,
ವಿಶ್ವಾತ್ಮನೆ ತ್ಯಾಗಾಂಗ.
ಇದಕ್ಕೆ **ಮಹಾದೇವ ಉವಾಚ** :
''ಏ ಯೋಗಾಂಗಂ ಪ್ರಾಜ್ಞವಸ್ಯಾತ್ ಭೋಗಾಂಗಂ ತೈಜಸಾ ಭವೇತ್ ।
ತ್ಯಾಗಾಂಗಂ ವಿಶ್ವಮೇ ವಸ್ಯಾತ್ ಪರಮಾರ್ಥನಿರೂಪಣೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೨ ॥

೩೪೩

ಇನ್ನೊಂದು ಪ್ರಕಾರದ ಅಂಗಸ್ಥಲವೆಂತೆಂದಡೆ :
ಐಕ್ಯ ಶರಣಸ್ಥಲವೆರಡು ಯೋಗಾಂಗ.
ಪ್ರಾಣಲಿಂಗಿ ಪ್ರಸಾದಿಸ್ಥಲವೆರಡು ಭೋಗಾಂಗ.

ಮಾಹೇಶ್ವರ ಭಕ್ತಸ್ಥಲವೆರಡು ತ್ಯಾಗಾಂಗ.
ಇದಕ್ಕೆ **ಈಶ್ವರೋऽವಾಚ** :
''ಯೋಗಾಂಗಮೈಕ್ಯಂ ಶರಣಂ ಸ್ಥಲಮಿತ್ಯುಭಯಂ ಭವೇತ್ ।
ಪ್ರಾಣಲಿಂಗಂ ಪ್ರಸಾದೀತಿ ದ್ವಯಂ ಭೋಗಾಂಗಮಿಷ್ಯತೇ ॥
ಮಾಹೇಶ್ವರಸ್ಥಲಂ ಭಕ್ತಸ್ಥಲಮಿತ್ಯುಭಯಸ್ತಥಾ ।
ತ್ಯಾಗಾಂಗಂ ಭವೇನ್ನಿತ್ಯಂ ಪ್ರೋಚ್ಯತೇ ಪಾರಮಾರ್ಥಿಕೈಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೩ ॥

೩೪೪

ಇನ್ನು ಅಂಗತ್ರಯಂಗಳಲ್ಲಿ ಲಿಂಗತ್ರಯಸ್ವಾಯತವದೆಂತೆಂದಡೆ :
ಸುಷುಪ್ತಾವಸ್ಥೆಯೆಂಬ ಯೋಗಾಂಗದಲ್ಲಿ
ಭಾವಲಿಂಗ ಸ್ವಾಯತವಾಗಿಹುದು.
ಸ್ವಪ್ನಾವಸ್ಥೆಯೆಂಬ ಭೋಗಾಂಗದಲ್ಲಿ
ಪ್ರಾಣಲಿಂಗ ಸ್ವಾಯತವಾಗಿಹುದು.
ಜಾಗ್ರಾವಸ್ಥೆಯೆಂಬ ತ್ಯಾಗಾಂಗದಲ್ಲಿ
ಇಷ್ಟಲಿಂಗ ಸ್ವಾಯತವಾಗಿಹುದು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಲಿಂಗಂ ತತ್ಪದಮಾಖ್ಯಾತಂ ಅಂಗಂ ತ್ವಂ ಪದಮೀರಿತಂ ।
ಸಂಯೋಗೋऽಸಿ ಪದಂ ಪ್ರೋಕ್ತಂ ಅನಯೋರಂಗಲಿಂಗಯೋಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೪ ॥

೩೪೫

ಭಾವಲಿಂಗದಲ್ಲಿ ಪ್ರಾಜ್ಞಾತ್ಮನೆಂಬ ಯೋಗಾಂಗವೈಕ್ಯವಾಯಿತ್ತು.
ಪ್ರಾಣಲಿಂಗದಲ್ಲಿ ತೈಜಸಾತ್ಮವೆಂಬ ಭೋಗಾಂಗವೈಕ್ಯವಾಯಿತ್ತು.
ಇಷ್ಟಲಿಂಗದಲ್ಲಿ ವಿಶ್ವಾತ್ಮವೆಂಬ ತ್ಯಾಗಾಂಗವೈಕ್ಯವಾಯಿತ್ತು.
ಇದಕ್ಕೆ ಶ್ರೀ **ಮಹಾದೇವ ಉವಾಚ** :
''ಅಂಗಂ ತ್ವಂ ಪದಮಾಖ್ಯಾತಂ ಲಿಂಗಂ ತತ್ಪದಮೇವ ಚ ।
ಅನಯೋರೈಕ್ಯಬಾಹೋಯಂ ಸಂಬಂಧೋऽಸಿಪದಾವಪಿ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೫ ॥

೩೪೬

ಭಾವಲಿಂಗದಲ್ಲಿ ಐಕ್ಯ–ಶರಣಸ್ಥಲವೆಂಬ ಯೋಗಾಂಗವೈಕ್ಯವಾಯಿತ್ತು.
ಪ್ರಾಣಲಿಂಗದಲ್ಲಿ

ಪ್ರಾಣಲಿಂಗಿ–ಪ್ರಸಾದಿಸ್ಥಲವೆಂಬ ಭೋಗಾಂಗವೈಕ್ಯವಾಯಿತ್ತು.
ಇಷ್ಟಲಿಂಗದಲ್ಲಿ ಮಹೇಶ್ವರ–ಭಕ್ತಸ್ಥಲವೆಂಬ ತ್ಯಾಗಾಂಗವೈಕ್ಯವಾಯಿತ್ತು ನೋಡಾ.
ಇದಕ್ಕೆ **ಈಶ್ವರ ಉವಾಚ :**
''ತತ್ಪದೇನೋಚ್ಯತೇ ಲಿಂಗಂ ತ್ವಂಪದೇನಾಂಗಮೀರಿತಂ ।
ಅನಯೋರೈಕ್ಯೇ ಬಾಹೋಯಂ ಸಂಬಂಧೋಽಸಿಪದೇವಪಿ ॥
ಸವಿತುಃ ಪದಮಂಗಸ್ಯಾತ್ ಭರ್ಗೋಲಿಂಗಮುದಾಹೃತಂ ।
ಧೀಮಹೀ ಪದಮಿತ್ಯೇಷಾಂ ಗಾಯತ್ರೀಂಹ್ಯಾಂಗಲಿಂಗವತ್ ॥
ತಚ್ಛಬ್ದಂ ಲಿಂಗಮಿತ್ಯಾಹುಃ ಸವಿತುಃ ಅಂಗಮೇವಚ ।
ತತ್ಸವಿತುರ್ದ್ವಯೋರೈಕ್ಯಂ ಧೀಮಹೀ ಕಮಲೋದ್ಭವಾ ॥''
ಇಂತೆಂದುದಾಗಿ, ಇದಕ್ಕೆ **ಶ್ರುತಿ :**
''ಸವಿತು ಪದಮೇ ಅಂಗಃ ಭರ್ಗೋ ತದಸ್ಯ ವರಣಿಯಾ ।
ಅನಯೋರೈಕ್ಯಂ ಧೀಮಹಿ ಪದಮಿತ್ಯೇಷಾಂ ।
ಪ್ರಾಹುರ್ಜೀವಪರಮೈಕ್ಯಂ ।''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೪೬ ॥

೩೪೭

ಇನ್ನು ಇಷ್ಟ–ಪ್ರಾಣ–ಭಾವಲಿಂಗದ ಪೂಜೆಯ ವಿವರವೆಂತೆಂದಡೆ :
ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ
ಮಾಡುವದು ಇಷ್ಟಲಿಂಗದ ಪೂಜೆ.
ಆ ಲಿಂಗವನು ಮನಸ್ಸಿನಲ್ಲಿಯೇ ಧ್ಯಾನಿಸುವದು ಪ್ರಾಣಲಿಂಗದ ಪೂಜೆ.
ಜೀವನೆಂಬ ಶಿವಾಲಯದೊಳು ಪ್ರಾಣಲಿಂಗವೇ ದೇವ ನೋಡಾ.
ಅಜ್ಞಾನವೆಂಬ ನಿರ್ಮಾಲ್ಯವಂ ಕಳದು
ಸೋಹಂ ಭಾವದಲ್ಲಿ ಪೂಜಿಸುತಿರ್ಪುದೆ ಪ್ರಾಣಲಿಂಗಪೂಜೆ ನೋಡಾ.
ಇದಕ್ಕೆ **ಈಶ್ವರೋಽವಾಚ :**
''ಅಷ್ಟವಿಧಾರ್ಚನಂ ಕುರ್ಯಾತ್ ಇಷ್ಟಲಿಂಗಸ್ಯ ಪೂಜನಂ ।
ತಲ್ಲಿಂಗಂ ಮನುತೇ ಯಸ್ತು ಪ್ರಾಣಲಿಂಗಸ್ಯ ಪೂಜನಂ ॥
ಜೀವೋ ಶಿವಾಲಯಃ ಪ್ರೋಕ್ತ ಲಿಂಗದೇವಃ ಪರಃಶಿವಃ ।
ತ್ಯಜೇದ್ಯಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೪೭ ॥

೩೪೮

ಉಪ್ಪು ಉದಕವ ಬೆರೆಸಿದಂತೆ
ವಾರಿಕಲ್ಲು ವಾರಿಯ ಬೆರಸಿದಂತೆ

ಕರ್ಪೂರ ಅಗ್ನಿಯ ಬೆರಸಿದಂತೆ
ಮನ ಲಿಂಗದಲ್ಲಿ ಲೀಯವಾಗಿಹುದೆ ಭಾವಲಿಂಗದ ಪೂಜೆ.
ಇದಕ್ಕೆ **ಈಶ್ವರೋವಾಚ** :
"ಮನೋಲಯ ನಿರಂಜನ್ಯಂ ಭಾವಲಿಂಗಸ್ಯ ಪೂಜನಂ ।
ಯತ್ತೇ ಲಿಂಗಾರ್ಚನಂ ಜ್ಞಾದ್ವಿಶೇಷಂ ಶ್ರುಣು ಪಾರ್ವತಿ ॥"
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೪೮ ॥

೩೪೯

ಇನ್ನು ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಾರ್ಪಿತದ ವಿವರವೆಂತೆಂದಡೆ :
ಇಷ್ಟಲಿಂಗಕ್ಕೆ ತನ್ನ ಶರೀರವ ಸಮರ್ಪಿಸುವುದು,
ಪ್ರಾಣಲಿಂಗಕ್ಕೆ ತನ್ನ ಮನವ ಸಮರ್ಪಿಸುವುದು,
ಭಾವಲಿಂಗಕ್ಕೆ ತನ್ನ ಪರಿಣಾಮವ ಸಮರ್ಪಿಸುವುದು.
ಇದಕ್ಕೆ **ಈಶ್ವರೋವಾಚ** :
"ಇಷ್ಟಲಿಂಗಾರ್ಪಿತಂ ಅಂಗಂ ಪ್ರಾಣಲಿಂಗಾರ್ಪಿತಂ ಮನಃ ।
ಭಾವಲಿಂಗಾರ್ಪಿತಂ ತೃಪ್ತಿಃ ಇತಿ ಭೇದಂ ವರಾನನೇ ॥
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೪೯ ॥

೩೫೦

ಇಷ್ಟಲಿಂಗಕ್ಕೆ ರೂಪಾಗಿ ಬಂದುದ ಕಾಯದ ಕೈಯಲ್ಲಿ ಕೊಡುವುದು.
ಪ್ರಾಣಲಿಂಗಕ್ಕೆ ರುಚಿಯಾಗಿ ಬಂದುದ ಮನದ ಕೈಯಲ್ಲಿ ಕೊಡುವುದು.
ಭಾವಲಿಂಗಕ್ಕೆ ತೃಪ್ತಿಯಾಗಿ ಬಂದುದ ಭಾವದ ಕೈಯಲ್ಲಿ ಕೊಡುವುದು ನೋಡಾ.
ಇದಕ್ಕೆ **ಈಶ್ವರೋವಾಚ** :
"ಇಷ್ಟಲಿಂಗಾರ್ಪಿತಂ ರೂಪಂ ಪ್ರಾಣಲಿಂಗಾರ್ಪಿತಂ ರುಚಿಃ ।
ಭಾವಲಿಂಗಾರ್ಪಿತಂ ತೃಪ್ತಿಃ ಇತಿ ಭೇದಂ ವರಾನನೇ ॥"
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೫೦ ॥

೩೫೧

ಇನ್ನು ಗುರುಲಿಂಗ ಶಿವಲಿಂಗ ಜಂಗಮಲಿಂಗದ ವಿವರವೆಂತೆಂದಡೆ :
ಗುರುಲಿಂಗವು ಸಕಲನು, ಶಿವಲಿಂಗವು ನಿಃಕಲನು,
ಜಂಗಮಲಿಂಗವು ಸಕಲನಿಃಕಲನು ನೋಡಾ.
ಇದಕ್ಕೆ **ಈಶ್ವರೋವಾಚ** :
"ಸಕಲಂ ಗುರುಲಿಂಗಂ ಚ ನಿಷ್ಕಲಂ ಶಿವಲಿಂಗಕಂ ।
ಸಕಲಂ ನಿಃಕಲಂ ಚೈವ ಜಂಗಮಶ್ಚ ಪ್ರಕೀರ್ತಿತಃ ॥"
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೫೧ ॥

೩೫೨

ಇನ್ನು ಪ್ರಥಮ ಲಿಂಗದಲ್ಲಿ, ದ್ವಿತೀಯ ಲಿಂಗದಲ್ಲಿ,
ತೃತೀಯ ಲಿಂಗದಲ್ಲಿ ಮಾಡುವ ಪೂಜಾವಿಧಿ ಕ್ರಮವೆಂತೆಂದಡೆ :
ಶಕ್ತಿ ಪ್ರಥಮಲಿಂಗ, ಆ ಲಿಂಗವೆ ಗುರುಲಿಂಗ,
ಆ ಸನ್ನಿಧಿಯೇ ಶಿವಲಿಂಗ, ಆ ಲಿಂಗವೆ ಜಂಗಮಲಿಂಗ.
ಇಂತೀ ತ್ರಿವಿಧವು ಗುರುಲಿಂಗದೊಳಗಿಹವು.
ಇದಕ್ಕೆ **ಈಶ್ವರೋಽವಾಚ :**
''ಶಕ್ತಿಃ ಸದ್ಗುರುಲಿಂಗಂ ಚ ಸನ್ನಿಧೌ ಶಿವಲಿಂಗಕಂ ।
ತಲ್ಲಿಂಗಂ ಜಂಗಮಲಿಂಗಂ ತ್ರಿವಿಧಂ ಗುರುಮಿಶ್ರಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೩೫೨ ॥

೩೫೩

ಹೀಂಗೆ ಅರಿದು ಅರ್ಚಿಸಿ ವಂದಿಸಿ ಆರಾಧನೆಯಂ ಮಾಡಿ
ತನುಕ್ರಿಯಾಮಾರ್ಗದಿಂದ ಶುದ್ಧ ಪವಿತ್ರಚರಿತನಾಗಿ,
ಮಹಾಜ್ಞಾನವರ್ತಕನಾಗಿ, ಶ್ರೀಗುರುವಾಜ್ಞೆಯಂ ಮೀರದೆ
ನಡೆವುದೀಗ ಗುರುಪೂಜೆಯ ಇರವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೫೩ ॥

೩೫೪

ಶ್ರೀಗುರುವಿನ ಉಪದೇಶ ಮಂತ್ರಮಾರ್ಗದಲ್ಲಿ
ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ
ಎಂಬ ಅಷ್ಟಾಂಗಯೋಗದಲ್ಲಿ ನಿರತನಾಗಿ,
ಇಂದ್ರಿಯವ್ಯವಹಾರ ದೇಹವಿಕಾರವಿಲ್ಲದೆ ನಿರಾಕಾರಲಿಂಗಸಂಗಿಯಾಗಿ
ಪ್ರಥಮಕಾಲ ದ್ವಿತೀಯಕಾಲ ತೃತೀಯಕಾಲವೆಂಬ
ಕಾಲತ್ರಯಂಗಳನುಲ್ಲಂಘಿಸದೆ ಮಾಡುವುದೀಗ ಲಿಂಗಪೂಜೆ ನೋಡಾ,
ಅಪ್ರಮಾಣಕೂಡಲಸಂಗಮದೇವ. ॥ ೩೫೪ ॥

೩೫೫

ಇನ್ನು ಗುರುಪೂಜಾವಿಧಿಯ ಕ್ರಮ ತಾನೇ ಅಷ್ಟಾಂಗಯೋಗ.
ಅದೆಂತೆಂದಡೆ :
ಹಿಂಸೆಯನತಿಗಳೆದು, ಅನ್ಯದೈವವ ಬಿಡುವ,
ಅನ್ಯಕರ್ಮವನಾಚರಿಸದಿಹ, ಪರಧನ ಪರಸ್ತ್ರೀ ವರ್ಜಿತ,
ಇವು ಐದು ಯಮಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೫೫ ॥

೩೫೬

ಬ್ರಹ್ಮಚಾರಿಯಾಗಿಹ, ಅಪೇಕ್ಷೆಯಂ ಬಿಟ್ಟು ನಿರಾಪೇಕ್ಷನಾಗಿಹ,
ಧನಾಪೇಕ್ಷೆಯಿಲ್ಲದಿಹ, ಆಗಮವಿಡಿದು ಆಚರಿಸುತ್ತಿಹ,
ಗುರುತತ್ತ್ವ ಶಿವತತ್ತ್ವ ಪರತತ್ತ್ವಸ್ವರೂಪಂಗಳನರಿದಿಹ,
ಇವು ಐದು ನಿಯಮಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೫೬ ||

೩೫೭

ವಜ್ರಾಸನ, ಪದ್ಮಾಸನ, ಸ್ವಸ್ತಿಕಾಸನ, ಗೋಮುಖಾಸನ, ಕುಕ್ಕುಟಾಸನ,
ಅರ್ಧಾಸನ, ಮಂಡೂಕಾಸನ, ಸಿಂಹಾಸನ, ಭದ್ರಾಸನ, ಸುಖಾಸನ
ಇವು ಹತ್ತು ಆಸನಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೫೭ ||

೩೫೮

ಸರ್ವೇಂದ್ರಿಯಂಗಳಿಗೆ ಒಡೆಯನಹಂತಾ ಮನಸ್ಸು,
ಆ ಮನಸ್ಸಿಗೊಡೆಯನಹಂತಾ ಪವನ,
ಆ ಮನ ಪವನಂಗಳು ಸಮಾನಂಗೊಂಡು
ಇಂದ್ರಿಯಂಗಳನು ಸೂಸಲೀಯದೆ
ಸ್ಥಿರಚಿತ್ತನಾಗಿಹುದೆ ಪ್ರತ್ಯಾಹಾರಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೫೮ ||

೩೫೯

ಮನವ ಸಕಲೇಂದ್ರಿಯಂಗಳ ಕೇರಿಗಳಲ್ಲಿ
ಸೂಸಲೀಯದೆ ಧರಿಸಿಕೊಂಡಿಹುದೇ ಧಾರಣಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೫೯ ||

೩೬೦

ಶ್ರೀಗುರುಲಿಂಗಭಾವವಿಲ್ಲದ ನಿರ್ಭಾವಲಿಂಗವ ಭಾವಸ್ಥಲಕ್ಕೆ ತಂದು
ಆ ಭಾವಸ್ಥಲದ ಲಿಂಗವ ಮನಸ್ಥಲಕ್ಕೆ ತಂದು
ಆ ಮನಸ್ಥಲದ ಲಿಂಗವ ದೃಷ್ಟಿಸ್ಥಲಕ್ಕೆ ತಂದು
ಆ ದೃಷ್ಟಿಸ್ಥಲದ ಲಿಂಗವ ಕರಸ್ಥಲಕ್ಕೆ ತಂದು
ಆ ಕರಸ್ಥಲದ ಮೂರ್ತಿಯ ಧ್ಯಾನಿಸುವುದೆ ಧ್ಯಾನಯೋಗ ನೋಡಾ.
ಇದಕ್ಕೆ **ಈಶ್ವರೋಽವಾಚ** :
''ಯಥಾ ಕಲಾ ತಥಾ ಭಾವಃ ಯಥಾ ಭಾವಸ್ತಥಾ ಮನಃ ।
ಯಥಾ ಮನಸ್ತಥಾ ದೃಷ್ಟಿಃ ಯಥಾ ದೃಷ್ಟಿಸ್ತಥಾ ಸ್ಥಲಂ ॥ ''

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ३೬೦ ||

३೬೧

ಆ ಧ್ಯಾನವನೆಚ್ಚಲರಿಯದೆ ಸುಷುಪ್ತಿಯ ಹಾಂಗೆ
ಅಂತಃಕರಣಚತುಷ್ಟಯಂಗಳು ಸುಸ್ಥಿರವಾಗಿಹುದೆ
ಸಮಾಧಿಯೋಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ३೬೧ ||

३೬೨

ಇನ್ನು ಜಂಗಮಭಕ್ತಿಯ ವಿವರ ಅದೆಂತೆಂದಡೆ :
ಶುದ್ಧವಹ ಪಾಕಪ್ರಯತ್ನಂಗಳಿಂದ,
ಪ್ರಿಯವಾಕ್ಯಂಗಳಿಂದ, ಬಾಹ್ಯಪರಿಚಾರಂಗಳಿಂದ, ಸಹಜಹಸ್ತದಿಂದ,
ಕುಲ ಛಲ ಧನ ಯವ್ವನ ರೂಪು ವಿದ್ಯೆ ರಾಜ್ಯ
ತಪವೆಂಬ ಅಷ್ಟಮದಂಗಳ ಬಿಟ್ಟು,
ಅಹಂಕಾರವಂ ಬಿಟ್ಟು ನಿರಹಂಕಾರಭರಿತನಾಗಿ,
ಉಪಾಧಿಯ ಬಿಟ್ಟು ನಿರುಪಾಧಿಕನಾಗಿ,
ದೇಹಾದಿಗುಣಂಗಳ ಬಿಟ್ಟು ನಿರ್ದೇಹಿಕನಾಗಿ,
ಅಪೇಕ್ಷೆಯಂ ಬಿಟ್ಟು ನಿರಾಪೇಕ್ಷಿತನಾಗಿ,
ಜಂಗಮವೇ ಲಿಂಗವೆಂದು ಮನಶುಚಿಯಿಂದ ಮಾಡುವುದೀಗ
ಜಂಗಮಭಕ್ತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ३೬೨ ||

३೬३

ಇನ್ನು ಪ್ರಥಮಲಿಂಗ ದ್ವಿತೀಯಲಿಂಗ ತೃತೀಯಲಿಂಗದಲ್ಲಿ
ಸಮುದ್ಭವವಾದ,
ಪ್ರಥಮ ದ್ವಿತೀಯ ತೃತೀಯ ಪ್ರಸಾದದ ವಿವರ ಅದೆಂತೆಂದಡೆ :
ಪ್ರಥಮಲಿಂಗದಲ್ಲಿ ಶುದ್ಧ, ದ್ವಿತೀಯಲಿಂಗದಲ್ಲಿ ಸಿದ್ಧ,
ತೃತೀಯಲಿಂಗದಲ್ಲಿ ಪ್ರಸಿದ್ಧ.
ಶುದ್ಧ ಗುರುಪ್ರಸಾದ, ಸಿದ್ಧ ಲಿಂಗಪ್ರಸಾದ, ಪ್ರಸಿದ್ಧ ಜಂಗಮಪ್ರಸಾದ,
ಶಿವಜ್ಞಾನವೇ ಮಹಾಪ್ರಸಾದ –ಇಂತು ಚತುರ್ವಿಧ ಪ್ರಸಾದ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ३೬३ ||

३೬४

ಇನ್ನು ಲಿಂಗೋದಕ, ಪಾದೋದಕ, ಪ್ರಸಾದೋದಕವೆಂತೆಂದಡೆ :
ಲಿಂಗೋದಕ ಶಿವಮಂತ್ರಸಂಸ್ಕಾರದಿಂದಾದುದು.

ಲಿಂಗಕ್ಕೆ ಮಜ್ಜನಕ್ಕೆರದುದೇ ಪಾದೋದಕ.
ಲಿಂಗಪಾರೋಗಣೆಯ ಮಾಡಿ ಮಿಕ್ಕುದೆ ಪ್ರಸಾದೋದಕ.
ಲಿಂಗೋದಕದಲ್ಲಿ ಪಾಕಪ್ರಯತ್ನ ಮಜ್ಜನಾದಿಗಳ ಮಾಡುವುದು.
ಪಾದೋದಕದಲ್ಲಿ ಮುಖಪ್ರಕ್ಷಾಲನವ ಮಾಡುವುದು ;
ಮಸ್ತಕದ ಮೇಲೆ ತಳಿದುಕೊಂಬುವುದು,
ಪ್ರಸಾದೋದಕವ ಭುಂಜಿಸುವುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೬೪ ||

೩೬೫

ಇನ್ನು ಷಟ್ಸ್ಥಲದ ಭೇದವೆಂತೆಂದಡೆ :
ಸದಾಚಾರದಲ್ಲಿ ನಡಹ, ಶಿವನಲ್ಲಿ ಭಕ್ತಿಯಾಗಿಹ,
ಲಿಂಗಜಂಗಮ ಒಂದೆಯೆಂಬ ಬುದ್ಧಿಯಾಗಿಹ,
ಲಾಂಛನಧಾರಿಗಳ ಕಂಡಡೆ ಒಂದಿಸುವುದೀಗ ಭಕ್ತಸ್ಥಲ ನೋಡಾ.
ಇದಕ್ಕೆ ಈಶ್ವರೋಽವಾಚ :
"ಸದಾಚಾರಂ ಶಿವೇ ಭಕ್ತಿಃ ಲಿಂಗಜಂಗಮೇ ರತಿಃ ।
ಲಾಂಛನಂ ಚ ಶರಣ್ಯಂ ಚ ಭಕ್ತಿಸ್ಥಲಸುಬುದ್ಧಿಮಾನ್ ॥"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೩೬೫ ||

೩೬೬

ಪರಸ್ತ್ರೀ ಪರಧನದಾಸೆಯ ಬಿಟ್ಟು ಶುದ್ಧವಾಗಿ
ಲಿಂಗನಿಷ್ಠೆಯುಳ್ಳುದೀಗ ಮಾಹೇಶ್ವರಸ್ಥಲ ನೋಡಾ.
ಇದಕ್ಕೆ **ಮಹಾದೇವೋಽವಾಚ** :
"ಪರಸ್ತ್ರಿಯಂ ಪರಾರ್ಥಂ ಚ ವರ್ಜಿತ್ವಾಭವ ಶುದ್ಧಿಮಾನ್ ।
ಲಿಂಗನಿಷ್ಠಾನಿಯುಕ್ತಾ ಚ ಮಾಹೇಶ್ವರಸ್ಥಲಮುತ್ತಮಂ ॥"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೩೬೬ ||

೩೬೭

ಲಿಂಗಪ್ರಸಾದವ ಲಿಂಗನೆನಹಿನಿಂದ ಭೋಗಿಸುವುದು.
ಅನರ್ಪಿತವ ಬಿಡುವುದೀಗ ಪ್ರಸಾದಿಸ್ಥಲ ನೋಡಾ.
ಇದಕ್ಕೆ **ಈಶ್ವರೋಽವಾಚ** :
"ಲಿಂಗಾರ್ಪಿತಪದಾರ್ಥಂ ಚ ಸುಭೋಗಿ ಲಿಂಗಸಂಯುಕ್ತಃ ।
ಅನರ್ಪಿತಂ ವಿವರ್ಜಂ ಚ ಪ್ರಸಾದಿಸ್ಥಲಮುತ್ತಮಂ ॥"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೩೬೭ ||

೩೬೮

ಪ್ರಾಣವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ,
ಸುಖದುಃಖ ಭಯವು ತನಗಿಲ್ಲದಿಹುದೀಗ ಪ್ರಾಣಲಿಂಗಿಸ್ಥಲ ನೋಡಾ.
ಇದಕ್ಕೆ **ಈಶ್ವರೋಽವಾಚ** :
''ತಥಾ ಪ್ರಾಣೇ ಗುಣೇ ಲಿಂಗೇ ಲಿಂಗಪ್ರಾಣಸಮಾಹಿತಃ ।
ಸುಖದುಃಖೇ ಭಯಂ ನಾಸ್ತಿ ಪ್ರಾಣಲಿಂಗಿಸ್ಥಲಂ ಭವೇತ್ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೬೮ ॥

೩೬೯

ಲಿಂಗವೇ ಪತಿಯಾಗಿ, ತಾನು ಸತಿಯೆಂಬ ಭಾವದಲ್ಲಿ ಆಚರಿಸಿ,
ಪಂಚೇಂದ್ರಿಯಸುಖಂಗಳ ಬಯಸದಿಹುದೀಗ ಶರಣಸ್ಥಲ ನೋಡಾ.
ಇದಕ್ಕೆ **ಶ್ರೀ ಮಹಾದೇವೋಽವಾಚ** :
''ಪತಿರ್ಲಿಂಗಂ ಸತಿರ್ಭಾವಾಮಿತಿ ಯುಕ್ತಂ ಸದಾ ತಥಾ ।
ಪಂಚೇಂದ್ರಿಯಸುಖಂ ನಾಸ್ತಿ ಶರಣಸ್ಥಲಮುತ್ತಮಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೬೯ ॥

೩೭೦

ಕ್ಷುತ್ಪಿಪಾಸೆ ಶೋಕ ಮೋಹ ಜನನ ಮರಣ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಂ ಬಿಟ್ಟು
ಅಷ್ಟವಿಧಾರ್ಚನೆ, ಷೋಡಶೋಪಚಾರವಿಲ್ಲದಿರುವ
ಕ್ಷೀರದೊಳಗಣ ಘೃತದಂತೆ, ತಿಲದೊಳಗಣ ತೈಲದಂತೆ,
ಪುಷ್ಪದೊಳಗಣ ಪರಿಮಳದಂತೆ, ಉಪ್ಪು ಉದಕವ ಕೂಡಿದಂತೆ,
ವಾರಿಕಲ್ಲು ವಾರಿಯ ಕೂಡಿದಂತೆ, ಕರ್ಪುರವು ಜ್ಯೋತಿಯ ಕೂಡಿದಂತೆ,
ಮನ ಲಿಂಗದಲ್ಲಿ ಲೀಯವಾಗಿಹುದೀಗ ಐಕ್ಯಸ್ಥಲ ನೋಡಾ,
ಇದಕ್ಕೆ **ಈಶ್ವರೋಽವಾಚ** :
''ಷಡೂರ್ಮಯಶ್ಚ ಷಡ್ವರ್ಗೋ ನಾಸ್ತಿ ಅಷ್ಟವಿಧಾರ್ಚನಂ ।
ನಿರ್ಭಾವಂ ಶಿವಲಿಂಗೈಕ್ಯಂ ಶಿಖಿಕರ್ಪೂರಯೋಗವತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೭೦ ॥

೩೭೧

ಹೀಗೆಂದು ಆ ಶಿಷ್ಯಂಗೆ ಬೋಧಿಸಿ, ಕೃತಾರ್ಥನ ಮಾಡಿದ
ಸದ್ಗುರುಲಿಂಗಂಗೆ ನಮೋ ನಮೋಯೆಂದು ಬದುಕಿದೆನು ಕಾಣಾ,
ಅಪ್ರಮಾಣಕೂಡಲಸಂಗಮದೇವಾ. ॥ ೩೭೧ ॥

೩೭೨

ಮತ್ತಂ,ಆ ಶಿಷ್ಯನು ಸದ್ಗುರುಸ್ವಾಮಿಗೆ ದೀರ್ಘದಂಡ ನಮಸ್ಕಾರವಂ ಮಾಡಿ
ಭಯ ಭಕ್ತಿಯಿಂದ 'ಎಲೆ ಸದ್ಗುರುಸ್ವಾಮಿ ಆದಿಮೂಲ
ಅನಾದಿಮೂಲಂಗಳಿಗತ್ತತ್ತವಾಗಿಹ ಚಿದ್ಬ್ರಹ್ಮಾಂಡ ಮೊದಲಾಗಿ
ಪ್ರಣವಬ್ರಹ್ಮಾಂಡ ಕಡೆಯಾಗಿ
ಅನಂತಕೋಟಿ ಬ್ರಹ್ಮಾಂಡಗಳೇನೂ ಇಲ್ಲದಂದು,
ಇನ್ನೂರಿಪ್ಪತ್ನಾಲ್ಕು ಭುವನಂಗಳು ಮೊದಲಾಗಿ
ಮಹಾಭುವನ, ಅತಿಮಹಾಭುವನಂಗಳು ಕಡೆಯಾಗಿ,
ಅತಿಮಹಾತೀತ ಮಹಾ ಅನಂತಕೋಟಿ ಭುವನಾದಿಭುವನಂಗಳೇನೂ
ಎನಲಿಲ್ಲದಂದು, ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ
ಮಹಾಮೂಲಸ್ವಾಮಿಯ ಮೀರಿದ ಅತಿಮಹಾಮೂಲ ಸ್ವಾಮಿಗತ್ತತ್ತವಾಗಿಹ
ಅಖಂಡಮಹಾಮೂಲಸ್ವಾಮಿಯ
ರೂಪು-ಲಾವಣ್ಯ-ಸೌಂದರ್ಯ-ಅಂಗ-ಪ್ರತ್ಯಂಗ-ಸ್ವರೂಪ-ಸ್ವಭಾವಂಗಳು
ಹೇಗಿರ್ದವೆಂಬುದನು, ನಿರಂಜನಾತೀತ ಪ್ರಣವದುತ್ಪತ್ಯವನು,
ಅವಾಚ್ಯ ಪ್ರಣವದುತ್ಪತ್ಯವನು ಕಲಾಪ್ರಣವದುತ್ಪತ್ಯದ ಭೇದವನು,
ಅನಾದಿಪ್ರಣವದುತ್ಪತ್ಯದ ಭೇದವನು,
ಅನಾದಿ ಅಕಾರ ಉಕಾರ ಮಕಾರದುತ್ಪತ್ಯವನು,
ಆದಿಪ್ರಣವದುತ್ಪತ್ಯದ ಭೇದವನು,
ಆದಿ ಅಕಾರ ಉಕಾರ ಮಕಾರಂಗಳುತ್ಪತ್ಯವನು,
ನಾದ ಬಿಂದುಕಳೆಗಳ ಭೇದವನು,
ಆ ಆದಿ ಅಕಾರ ಉಕಾರ ಮಕಾರದಲ್ಲಿ ತಾರಕಸ್ವರೂಪ
ದಂಡಕಸ್ವರೂಪ ಕುಂಡಲಾಕಾರ ಅರ್ಧಚಂದ್ರಕ ದರ್ಪಣಾಕಾರ
ಜ್ಯೋತಿಸ್ವರೂಪದುತ್ಪತ್ಯ ಲಯದ ಭೇದವನು,
ಅದಕ್ಕೆ ಅಧಿದೇವತೆಯನು,
ತಾರಕಸ್ವರೂಪ ದಂಡಕಸ್ವರೂಪ ಕುಂಡಲಾಕಾರ
ಅರ್ಧಚಂದ್ರಕ ದರ್ಪಣಾಕಾರ ಜ್ಯೋತಿಸ್ವರೂಪವು
ಅಕಾರ ಉಕಾರ ಮಕಾರದಲ್ಲಿ ಅಡಗಿದ ಭೇದವನು,
ಅಕಾರ-ಉಕಾರ-ಮಕಾರ-ನಾದ-ಬಿಂದು-ಕಳೆ-ಪ್ರಕೃತಿ-ಪ್ರಾಣ
ಆಧಾರಂಗಳ ಭೇದವನು,
ನಾದಬಿಂದುಕಳೆ ಪ್ರಕೃತಿ ಪ್ರಾಣಂಗಳ ಆಧಾರಂಗಳ ಭೇದವನು,
ನಾದ-ಬಿಂದು-ಕಳೆ-ಅಕಾರ-ಉಕಾರ-ಮಕಾರವು ಕೂಡಿ
ಓಂಕಾರದುತ್ಪತ್ಯವನು,
ಅಖಂಡ ಜ್ಯೋತಿರ್ಮಯವಾಗಿಹ
ಗೋಳಕಾಕಾರ ಪ್ರಣವದುತ್ಪತ್ಯದ ಭೇದವನು,

ಅಖಂಡ ಸ್ವಯಂಭುಲಿಂಗದುತ್ಪತ್ಯವನು,
ಅನಾದಿ ಸದಾಶಿವದುತ್ಪತ್ಯದ ಭೇದವನು,
ಅನಾದಿ ಈಶ್ವರತತ್ವದುತ್ಪತ್ಯವನು,
ಅನಾದಿ ಮಹೇಶ್ವರತತ್ವದುತ್ಪತ್ಯದ ಭೇದವನು,
ಆದಿ ಸದಾಶಿವತತ್ವದುತ್ಪತ್ಯದ ಭೇದವನು,
ಆದಿ ಈಶ್ವರತತ್ವದುತ್ಪತ್ಯದ ಭೇದವನು,
ಆದಿ ಮಹೇಶ್ವರತತ್ವದುತ್ಪತ್ಯದ ಭೇದವನು,
ದಶಚಕ್ರದ ಉತ್ಪತ್ಯಭೇದವನು, ದಶಚಕ್ರದ ನ್ಯಾಸವನು,
ದಶಚಕ್ರದ ನಿವೃತ್ತಿಯನು, ನವಪದ್ಮದ ನಿವೃತ್ತಿಯನು,
ನವಪದ್ಮದ ನೆಲೆಯನು, ನವಪದ್ಮದ ನಿವೃತ್ತಿಯನು,
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪ ಕುಂಡಲಾಕಾರ ಜ್ಯೋತಿಸ್ವರೂಪದಲ್ಲಿ
ಅಕಾರ ಉಕಾರ ಮಕಾರದುತ್ಪತ್ಯವನು,
ಆ ಅಕಾರ ಉಕಾರ ಮಕಾರದಲ್ಲಿ
ಪೃಥ್ವಿ ಅಗ್ನಿ ಋಗ್ವೇದ ಭೂಲೋಕ ಬ್ರಹ್ಮಾಂಡ ಅಂತರೀಕ್ಷ ಯಜುರ್ವೇದ
ವಾಯು ಭುವರ್ಲೋಕ, ವಿಷ್ಣು ದಿವಿ ಸೂರ್ಯ ಸಾಮವೇದ ಸ್ವರ್ಗಲೋಕ
ಮಹೇಶ್ವರನುತ್ಪತ್ಯ ಲಯವನು,
ಆ ಅಕಾರ ಉಕಾರ ಮಕಾರ ಸಂಯುಕ್ತವಾಗಿ
ಓಂಕಾರ ಉತ್ಪತ್ಯವಾದ ಭೇದವನು,
ಆ ಓಂಕಾರ ತಾರಕಸ್ವರೂಪ ಕುಂಡಲಾಕಾರ ಅರ್ಧಚಂದ್ರಕ
ದರ್ಪಣಾಕಾರ ಜ್ಯೋತಿಸ್ವರೂಪದ ಕಾಂತಿಯನು,
ಅತಿಸೂಕ್ಷ್ಮ ಪಂಚಾಕ್ಷರಿಯ ಉತ್ಪತ್ಯವನು,
ಅತಿಸೂಕ್ಷ್ಮ ಪಂಚಾಕ್ಷರಿಯ ನೆಲೆಯನು,
ಅತಿಸೂಕ್ಷ್ಮ ಪಂಚಾಕ್ಷರಿಯ ನಿವೃತ್ತಿಯನು,
ಅತಿಸೂಕ್ಷ್ಮ ಪಂಚಾಕ್ಷರಿಯ ಕಾಂತಿಯನು,
ಚಿದಾತ್ಮ ಪರಮಾತ್ಮನುತ್ಪತ್ಯವನು, ಚಿದಾತ್ಮ ಪರಮಾತ್ಮನ ನೆಲೆಯನು,
ಚಿದಾತ್ಮ ಪರಮಾತ್ಮನ ನಿವೃತ್ತಿಯನು, ಏಕಾಕ್ಷರದುತ್ಪತ್ಯವನು,
ತ್ರಿಯಾಕ್ಷರದುತ್ಪತ್ಯವನು, ಸಹಸ್ರಾಕ್ಷರದುತ್ಪತ್ಯವನು,
ಏಕಾಕ್ಷರದ ನೆಲೆಯನು, ತ್ರಿಯಾಕ್ಷರದ ನೆಲೆಯನು,
ಸಹಸ್ರಾಕ್ಷರದ ನೆಲೆಯನು, ಏಕಾಕ್ಷರದ ನಿವೃತ್ತಿಯನು,
ತ್ರಿಯಾಕ್ಷರದ ನಿವೃತ್ತಿಯನು, ಸಹಸ್ರಾಕ್ಷರದ ನಿವೃತ್ತಿಯನು,
ಷಡ್ವಿಧಮುಖಂಗಳುತ್ಪತ್ಯವನು, ಷಡ್ವಿಧಮುಖಂಗಳ ನೆಲೆಯನು,
ಷಡ್ವಿಧಮುಖಂಗಳ ನಿವೃತ್ತಿಯನು,
ಷಡ್ವಿಧಭೂತಂಗಳುತ್ಪತ್ಯವನು, ಷಡ್ವಿಧಭೂತಂಗಳ ನೆಲೆಯನು,

ಷಡ್ವಿಧಭೂತಂಗಳ ನಿವೃತ್ತಿಯನು,
ಷಡ್ವಿಧಲಿಂಗದುತ್ಪತ್ಯವನು, ಷಡ್ವಿಧಲಿಂಗಗಳ ನೆಲೆಯನು,
ಷಡ್ವಿಧಲಿಂಗಗಳ ನಿವೃತ್ತಿಯನು,
ಷಡ್ವಿಧಕಲೆಗಳುತ್ಪತ್ಯವನು, ಷಡ್ವಿಧಕಲೆಗಳ ನೆಲೆಯನು,
ಷಡ್ವಿಧಕಲೆಗಳ ನಿವೃತ್ತಿಯನು,
ಷಡ್ವಿಧಸಾದಾಖ್ಯದುತ್ಪತ್ಯವನು, ಷಡ್ವಿಧಸಾದಾಖ್ಯದ ನೆಲೆಯನು,
ಷಡ್ವಿಧಸಾದಾಖ್ಯದ ನಿವೃತ್ತಿಯನು,
ಷಡ್ವಿಧಹಸ್ತಂಗಳುತ್ಪತ್ಯವನು, ಷಡ್ವಿಧಹಸ್ತಂಗಳ ನೆಲೆಯನು,
ಷಡ್ವಿಧಹಸ್ತಂಗಳ ನಿವೃತ್ತಿಯನು,
ನವಶಕ್ತಿಯ ಉತ್ಪತ್ಯವನು, ನವಶಕ್ತಿಯ ನೆಲೆಯನು,
ನವಶಕ್ತಿಯ ನಿವೃತ್ತಿಯನು,
ನವ ಅಧಿದೇವತೆಗಳುತ್ಪತ್ಯವನು, ನವ ಅಧಿದೇವತೆಗಳ ನೆಲೆಯನು,
ನವ ಅಧಿದೇವತೆಗಳ ನಿವೃತ್ತಿಯನು,
ಅಷ್ಟನಾದದುತ್ಪತ್ಯವನು, ಅಷ್ಟನಾದದ ನೆಲೆಯನು,
ಅಷ್ಟನಾದದ ನಿವೃತ್ತಿಯನು,
ಷಡ್ವಿಧಭಕ್ತಿಯ ಉತ್ಪತ್ಯವನು, ಷಡ್ವಿಧಭಕ್ತಿಯ ನೆಲೆಯನು,
ಷಡ್ವಿಧಭಕ್ತಿಯ ನಿವೃತ್ತಿಯನು,
ಷಡ್ವಿಧಪರಿಣಾಮದುತ್ಪತ್ಯವನು, ಷಡ್ವಿಧಪರಿಣಾಮದ ನೆಲೆಯನು,
ಷಡ್ವಿದ ಪರಿಣಾಮದ ನಿವೃತ್ತಿಯನು,
ಚತುರ್ವೇದದುತ್ಪತ್ಯವನು, ಚತುರ್ವೇದದ ನೆಲೆಯನು,
ಚತುರ್ವೇದದ ನಿವೃತ್ತಿಯನು,
ಅಜಪೆ ಗಾಯತ್ರಿ ಉತ್ಪತ್ಯವನು, ಅಜಪೆ ಗಾಯತ್ರಿ ನೆಲೆಯನು,
ಅಜಪೆ ಗಾಯತ್ರಿಯ ನಿವೃತ್ತಿಯನು,
ಷಡ್ವಿಧ ಚಕ್ರಾರ್ಪಣದ ಭೇದವನು, ಮಿಶ್ರಾರ್ಪಣ ಷಡುಸ್ಥಲ ಭೇದವನು,
ಇಷ್ಟ–ಪ್ರಾಣ–ಭಾವಲಿಂಗದ ಭೇದವನು,
ಇಷ್ಟ–ಪ್ರಾಣ–ಭಾವಲಿಂಗದಲ್ಲಿ
ತಾರಕಸ್ವರೂಪ ದಂಡಕಸ್ವರೂಪ ಕುಂಡಲಾಕಾರ
ಅರ್ಧಚಂದ್ರಕ ದರ್ಪಣಾಕಾರ ಜ್ಯೋತಿಸ್ವರೂಪವು ಅಡಗಿಹ ಭೇದವನು
ಅಕಾರ ಉಕಾರ ಮಕಾರ ಈ ಮೂರು ಕೂಡಿ ಏಕಾರ್ಥವಾಗಿ
ಅಖಂಡಜ್ಯೋತಿರ್ಮಯಲಿಂಗವಾದ ಭೇದವನು.
ಆತ್ಮನುತ್ಪತ್ಯವನು, ಆತ್ಮನ ನೆಲೆಯನು, ಆತ್ಮನ ನಿವೃತ್ತಿಯನು,
ಪೃಥ್ವಿ ಅಪ್ಪು ತೇಜ ವಾಯು ಆಕಾಶದ ನೆಲೆಯನು,
ಪೃಥ್ವಿ ಅಪ್ಪು ತೇಜ ವಾಯು ಆಕಾಶದ ನಿವೃತ್ತಿಯನು,
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನುತ್ಪತ್ಯವನು,

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನ ನೆಲೆಯನು,
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನ ನಿವೃತ್ತಿಯನು,
ಷಡ್ವಿಧ ಅರ್ಪಿತ ಅವಧಾನದ ಭೇದವನು,
ನಿರಾಳ ದಶಚಕ್ರಂಗಳ ಭೇದವನು,
ನಿರಾಮಯ ಷಟ್ಸ್ಥಲದ ಭೇದವನು,
ನಿರಂಜನ ದಶಚಕ್ರಂಗಳ ಭೇದವನು,
ನಿರಾಮಯಾತೀತ ಷಟ್ಸ್ಥಲದ ಭೇದವನು, ಷಟ್ಸ್ಥಲ ಬ್ರಹ್ಮದುತ್ಪತ್ಯವನು,
ಆ ಷಟ್ಸ್ಥಲಬ್ರಹ್ಮದಲ್ಲಿ ಮೂವತ್ತಾರು ತತ್ತ್ವಂಗಳುತ್ಪತ್ಯವನು,
ಷಡುಶಕ್ತಿಗಳುತ್ಪತ್ಯವನು, ಷಡಂಗಂಗಳುತ್ಪತ್ಯವನು, ಶಿವಶಕ್ತಿಗಳುತ್ಪತ್ಯವನು,
ಪ್ರೇರಕಾವಸ್ಥೆಯ ದರ್ಶನದ ಭೇದವನು,
ಮಧ್ಯಾವಸ್ಥೆಯ ದರ್ಶನದ ಭೇದವನು,
ಕೆಳಗಾದವಸ್ಥೆಯ ದರ್ಶನವನು,
ಮೇಲಾದವಸ್ಥೆಯ ದರ್ಶನದ ಭೇದವನು,
ಕೇವಲಾವಸ್ಥೆಯ ದರ್ಶನವನು,
ಸಕಲಾವಸ್ಥೆಯ ದರ್ಶನದ ಭೇದವನು,
ಶುದ್ಧಾವಸ್ಥೆಯ ದರ್ಶನದ ಭೇದವನು,
ಪಂಚಮಲಂಗಳ ದರ್ಶನವನು,
ನಿರ್ಮಲಾವಸ್ಥೆಯ ದರ್ಶನದ ಭೇದವನು,
ನಿರಾಳವಸ್ಥೆಯ ದರ್ಶನವನು,
ನಿರಂಜನಾವಸ್ಥೆಯ ದರ್ಶನದ ಭೇದವನು,
ಜ್ಞಾನವಸ್ಥೆಯ ದರ್ಶನವನು,
ಶಿವಾವಸ್ಥೆಯ ದರ್ಶನದ ಭೇದವನು,
ಮಂತ್ರಾಧ್ವದುತ್ಪತ್ಯವನು, ಮಂತ್ರಾಧ್ವದ ವರ್ತನೆಯನು,
ಪದಾಧ್ವದುತ್ಪತ್ಯವನು, ಪದಾಧ್ವದ ವರ್ತನೆಯನು,
ವರ್ಣಾಧ್ವದುತ್ಪತ್ಯವನು, ವರ್ಣಾಧ್ವದ ವರ್ತನೆಯನು,
ಭುವನಾಧ್ವದುತ್ಪತ್ಯವನು, ಭುವನಾಧ್ವದ ವರ್ತನೆಯನು,
ತತ್ವಾಧ್ವದುತ್ಪತ್ಯವನು, ತತ್ವಾಧ್ವದ ವರ್ತನೆಯನು,
ಕಲಾಧ್ವದುತ್ಪತ್ಯವನು, ಕಲಾಧ್ವದ ವರ್ತನೆಯನು,
ಗುರುಲಿಂಗಜಂಗಮವೆಂದು ಸುಳಿವ ಅಣ್ಣಗಳ,
ತಾಮಸನಿರಸನವ ಮಾಡಿ ನುಡಿದ ವಚನದ ಭೇದವನು,
ತತ್‌ಪದ ತ್ವಂಪದ ಅಸಿಪದಂಗಳ ಭೇದವನು,
ಆ ತ್ವಂಪದ ತತ್ಪದ ಅಕಾರ ಉಕಾರ ಮಕಾರಂಗಳಲ್ಲಿ
ಅಡಗಿಹ ಭೇದವನು,
ಆ ಅಕಾರ ಉಕಾರ ಮಕಾರ ಏಕವಾಗಿ ಷಟ್ಸ್ಥಲಬ್ರಹ್ಮವಾದ ಭೇದವನು,

ವಚನಾನುಭಾವದ ಭೇದವನು ಅರಿಯೆನು,
ಎಲೆ ಸದ್ಗುರುಸ್ವಾಮಿ ನಿರೂಪಿಸೆಂದು, ಆ ಶಿಷ್ಯನು ಬಿನ್ನವಿಸಲು
ಆ ಸದ್ಗುರುಸ್ವಾಮಿ ನಿರೂಪಿಸಿದ ವಚನವೆಂತೆಂದಡೆ :
ಅನಂತಕೋಟಿ ಮಹಾಬ್ರಹ್ಮಾಂಡ ಮೊದಲಾಗಿ
ಅನಂತಕೋಟಿ ಪ್ರಣವಬ್ರಹ್ಮಾಂಡ ಕಡೆಯಾಗಿ
ಅನಂತಕೋಟಿ ಅತಿಮಹಾಬ್ರಹ್ಮಾಂಡಂಗಳೇನೂಯೇನೂ ಎನಲಿಲ್ಲದಂದು,
ಅನಂತಕೋಟಿ ಮಹಾಬ್ರಹ್ಮಾಂಡಂಗಳನೊಳಕೊಂಡು
ಇನ್ನೂರಿಪ್ಪತ್ನಾಲ್ಕು ಮಹಾಭುವನ ಮೊದಲಾಗಿ ಅತಿಮಹಾಭುವನಂಗಳು
ಅತಿಮಹಾತೀತವೆಂಬ ಮಹಾಭುವನಂಗಳು ಕಡೆಯಾಗಿ
ಅನಂತಕೋಟಿ ಅತಿಮಹಾತೀತ ಭುವನಂಗಳು ಏನೂಯೇನೂ ಇಲ್ಲದಂದು
ಆದಿಮೂಲ ಅನಾದಿಮೂಲಂಗಳಿಗತತ್ತ್ವವಾದ
ಮಹಾಮೂಲಸ್ವಾಮಿಯ ಮೀರಿದ
ಅತಿಮಹಾಮೂಲಸ್ವಾಮಿಗತತ್ತ್ವವಾಗಿಹ ಮಹಾಘನವ ಮೀರಿದತತ್ತ್ವವಾಗಿಹ
ಅಖಂಡ ಅಖಂಡಮಹಾಮೂಲಸ್ವಾಮಿಯ
ಅಂಗ–ಪ್ರತ್ಯಂಗ–ಸ್ವರೂಪ–ಸ್ವಭಾವಂಗಳನರಿಯದೆ
ಅನಂತಕೋಟಿ ರುದ್ರ ಈಶ್ವರ ಸದಾಶಿವ
ಬ್ರಹ್ಮ ನಾರಾಯಣರಳಿದುಳಿದರು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ ಅಂಗ ಪ್ರತ್ಯಂಗ
ಸ್ವರೂಪ–ಸ್ವಭಾವಂಗಳನರಿಯದೆ
ಅನಂತಕೋಟಿ ದೇವರ್ಕಳಳಿದರು ನೋಡಾ.
ಆ ಅಖಂಡ ಮಹಾಮೂಲಸ್ವಾಮಿಯ
ಅಂಗ ಪ್ರತ್ಯಂಗ ಸ್ವರೂಪ ಸ್ವಭಾವಂಗಳನರಿಯದೆ
ಅನಂತಕೋಟಿ ವೇದಂಗಳು, ಅನಂತಕೋಟಿ ಮುನಿಗಳು,
ಅನಂತಕೋಟಿ ಲೋಕಾದಿಲೋಕಂಗಳೆಲ್ಲ ಪ್ರಳಯಕ್ಕೊಳಗಾದರು ನೋಡಾ.
ಆ ಅಖಂಡಮಹಾಮೂಲಸ್ವಾಮಿಯ
ಅಂಗ ಪ್ರತ್ಯಂಗ ಸ್ವರೂಪ ಸ್ವಭಾವಂಗಳ
ಈ ಲೋಕದ ಜಡರುಗಳೆತ್ತ ಬಲ್ಲರಯ್ಯ
ಅಪ್ರಮಾಣಕೂಡಲಸಂಗಮದೇವಾ. ॥ ೩೭೨ ॥

೩೭೩

ಆ ಅಖಂಡಮಹಾಮೂಲಸ್ವಾಮಿಯು ಸ್ಥಲದ ವಚನವೆಂತೆಂದಡೆ :
ನಿರಂಜನಾತೀತಪ್ರಣವ, ಅವಾಚ್ಯಪ್ರಣವ, ಕಲಾಪ್ರಣವ,
ಅನಾದಿಪ್ರಣವ, ಆದಿಪ್ರಣವ, ಶಿವಶಕ್ತಿಪ್ರಣವ,
ಶಿವಶಕ್ತಿರಹಿತವಾಗಿ ಮಹಾಪ್ರಣವ ಮೊದಲಾಗಿ

ಅನಂತಕೋಟಿಪ್ರಣವಂಗಳಿಲ್ಲದಂದು,
ಚಿತ್ತಾಕಾಶ ಚಿದಾಕಾಶ ಮಹದಾಕಾಶ ಪರಾಕಾಶ ಶಿವಾಕಾಶ ಬಿಂದ್ವಾಕಾಶ
ನಾದಾಕಾಶ ಕಲಾಕಾಶ ಪ್ರಣವಾಕಾಶ ಮೊದಲಾಗಿ
ಅನಂತಕೋಟಿ ಮಹಾಪ್ರಣವಾಕಾಶ, ಅತಿಮಹಾಪ್ರಣವಾಕಾಶ,
ಅತಿಮಹಾತೀತಪ್ರಣವಾಕಾಶಂಗಳಿಲ್ಲದಂದು,
ಆದಿ ಅನಾದಿ ಅನಾಗತ ಅನಂತ ಅದ್ಭುತ ತಮಂಧ ತಾರಜ
ತಂಡಜ ಭಿನ್ನಜ ಭಿನ್ನಾಯುಕ್ತ ಅವ್ಯಕ್ತ ಅಮದಾಯುಕ್ತ
ಮಣಿರಣ ಮಾನ್ಯರಣ ವಿಶ್ವಾರಣ ವಿಶ್ವಾವಸು ಅಲಂಕೃತ
ಕೃತಯುಗ ತ್ರೇತಾಯುಗ ಕಲಿಯುಗಂಗಳೆಂಬ
ಇಪ್ಪತ್ತೊಂದು ಯುಗ ಮೊದಲಾಗಿ ಅನಂತಕೋಟಿ ಮಹಾಯುಗಂಗಳು,
ಅತಿಮಹಾಯುಗಂಗಳು ಅತಿಮಹಾತೀತ ಮಹಾಯುಗಂಗಳಿಲ್ಲದಂದು,
ಆದಿಮೂಲ ಅನಾದಿಮೂಲಂಗಳಿಗತ್ತತ್ತವಾದ
ಮಹಾಮೂಲಸ್ವಾಮಿಯ ಮೀರಿದ ಅತಿಮಹಾಮೂಲಸ್ವಾಮಿಗತ್ತತ್ತವಾಗಿಹ
ಅಖಂಡ ಮಹಾಮೂಲಸ್ವಾಮಿ ಇದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣ ಕೂಡಲಸಂಗಮದೇವ. || ೩೭೩ ||

ಇನ್ನು ನಿರಂಜನಾತೀತ ಪ್ರಣವಮೊದಲಾಗಿ ಬ್ರಹ್ಮ ಕಡೆಯಾಗಿ ಸೃಷ್ಟಿಮಾರ್ಗವ ಹೇಳುತ್ತಿಹೆನು, ಸುಚಿತ್ತದಿಂದ ಕೇಳು ಮಗನೆ ಎಂದು ಆ ಸದ್ಗುರುಸ್ವಾಮಿ ನಿರೂಪಿಸಿದ ವಚನವೆಂತೆಂದಡೆ :

೩೭೪

ಆದಿಮೂಲ ಅನಾದಿಮೂಲಂಗಳಿಗತ್ತತ್ತವಾಗಿಹ
ಮಹಾಮೂಲಸ್ವಾಮಿಗತ್ತತ್ತವಾಗಿಹ ಅಖಂಡಮಹಾಮೂಲಸ್ವಾಮಿ
ಅನಂತಕೋಟಿಬ್ರಹ್ಮಾಂಡಂಗಳ ಅನಂತಕೋಟಿಮಹಾಭುವನಂಗಳ
ಅನಂತಕೋಟಿಲೋಕಾದಿಲೋಕಂಗಳ ಸೃಜಿಸಬೇಕೆಂಬ
ನೆನಹುಮಾತ್ರದಲ್ಲಿ ಈ ನಿರಂಜನಾತೀತ ಪ್ರಣವದುತ್ಪತ್ಯವಾಯಿತ್ತು.
ಆ ಅವಾಚ್ಯಪ್ರಣವದ ನೆನಹುಮಾತ್ರದಲ್ಲಿಯೇ
ನಿರಂಜನ ಕಲಾಪ್ರಣವವು ಉತ್ಪತ್ಯವಾಯಿತ್ತು.
ಆ ನಿರಂಜನಾತೀತ ಕಲಾಪ್ರಣವದ ನೆನಹುಮಾತ್ರದಲ್ಲಿಯೇ
ಅನಾದಿಪ್ರಣವದುತ್ಪತ್ಯವಾಯಿತ್ತು.
ಆ ಅನಾದಿಪ್ರಣವದ ನೆನಹುಮಾತ್ರದಲ್ಲಿಯೇ
ಅನಾದಿ ಅಕಾರ ಉಕಾರ ಮಕಾರ ಉತ್ಪತ್ಯವಾಯಿತ್ತು.
ಆ ಅನಾದಿ ಅಕಾರ ಉಕಾರ ಮಕಾರದ ನೆನಹುಮಾತ್ರದಲ್ಲಿಯೇ
ಆದಿಪ್ರಣವ ಉತ್ಪತ್ಯವಾಯಿತ್ತು.
ಆ ಆದಿಪ್ರಣವದ ನೆನಹು ಮಾತ್ರದಲ್ಲಿಯೇ.

ಆದಿ ಅಕಾರ ಉಕಾರ ಮಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ಚಕ್ರಾತೀತಾಗಮೇ :
''ಅಖಂಡಮೂಲ ಚಿಂತಾಯಾಂ ನಿರಂಜನಾತೀತೋದ್ಭವಃ |
ನಿರಂಜನಾತೀತ ಚಿಂತಾಯಾಂ ನಿರಂಜನೋಂಕಾರಸಂಭವಃ ||
ನಿರಂಜನಸ್ಯ ಚಿಂತಾಯಾಂ ಅವಾಚ್ಯಂ ನಾಮ ಜಾಯತೇ |
ಅವಾಚ್ಯಸ್ಯ ಚ ಚಿಂತಾಯಾಂ ಕಲಾನಾಮ ಸಮುದ್ಗತಃ ||
ಕಲಾಪ್ರಣವಚಿಂತಾಯಾಂ ಅನಾದಿಪ್ರಣವೋಽಭವತ್ |
ಅನಾದಿಪ್ರಣವ ಚಿಂತಾಯಾಂ ಅನಾದಿಮಂತ್ರ ಸಂಭವಃ ||
ಅನಾದಿಮಂತ್ರಚಿಂತಾಯಾಂ ಆದಿಪ್ರಣವ ಸಂಭವಃ |
ಆದಿಪ್ರಣವಚಿಂತಾಯಾಂ ಅಕ್ಷರತ್ರಯಮುದ್ಗತಂ ||''
ಇಂತೆಂದುದಾಗಿ.
ಇದಕ್ಕೆ ಮಹಾವೇದದ ಪ್ರಣವ ಪುರುಷಸೂಕ್ತೇ :
''ಓಂ ಅಖಂಡಮೂಲಚಿಂತಾಯಾಂ ನಿರಂಜನಾತೀತಮಜಾಯತ |
ಕಲಾಪ್ರಣವ ತದಸ್ಯಾ ಅನಾದಿ ಓಂಕಾರೋಽಜಾಯತ||
ಅನಾದ್ಯೋಂಕಾರಚಿಂತಾಯಾಮನಾದಿ ತ್ರಿಯಕ್ಷರಮಜಾಯತ |
ಅನಾದಿ ತ್ರಿಯಕ್ಷರ ಚಿಂತಾಯಾಂ ಆದಿಪ್ರಣವೋಽಜಾಯತ |
ನಿರಂಜನಾತೀತ ಪ್ರಣವಾಭ್ಯಾಂ ನಿರಂಜನಪ್ರಣವೋಽಜಾಯತ |
ನಿರಂಜನಪ್ರಣವಾದಸ್ಯ ಅವಾಚ್ಯೋಂಕಾರೋಽಜಾಯತ |
ಅವಾಚ್ಯೋಂಕಾರಚಿಂತಾಭ್ಯಾಂ ಕಲಾಪ್ರಣವೋಽಜಾಯತ |
ಆದಿಪ್ರಣವಚಿಂತಾಯಾಂ ಅಕ್ಷರತ್ರಯಮಜಾಯತ ||''
ಇಂತೆಂದುದು ಶ್ರುತಿ.
ಅಪ್ರಮಾಣಕೂಡಲಸಂಗಮದೇವಾ. || ೩೭೪ ||

ಮತ್ತಂ, ಆ ಶಿಷ್ಯನು ತನ್ನ ಚಿದ್ವಿವೇಕದಿಂದ ವಿವೇಕಿಸಿ ನೋಡಿ ಎಲೆ ಸದ್ಗುರುಸ್ವಾಮಿ ನಿಮ್ಮ ಮಹಾಜ್ಞಾನ ದೃಕ್ಕಿನಿಂದ ಆ ಅಖಂಡ ಮಹಾಮೂಲಸ್ವಾಮಿಯ ಅಂಗ ಪ್ರತ್ಯಂಗ ಸ್ವರೂಪ ಸ್ವಭಾವಂಗಳ ಕಂಡು ತೃಪ್ತನಾದೆನು, ಮುಕ್ತನಾದೆನು, ಧನ್ಯನಾದೆನು, ಕೃತಾರ್ಥನಾದೆನು ಎಂದು ಬಿನ್ನೈಸಿ, ಮುಂದೆ ನಿರಂಜನಾತೀತ ಪ್ರಣವಸ್ಥಲವ ನಿರೂಪಿಸೆಂದು ಆ ಶಿಷ್ಯನು ಬೆಸಗೊಳಲು ಸದ್ಗುರುಸ್ವಾಮಿ ನಿರೂಪಿಸಿದರೆಂತೆಂದಡೆ :

೩೭೫

ಪರಾಪರವಿಲ್ಲದಂದು ಆ ಪರಾಪರಕ್ಕಪರವಾಗಿಹ
ಪರಬ್ರಹ್ಮವಿಲ್ಲದಂದು, ಪರಶಿವವಿಲ್ಲದಂದು,
ಶೂನ್ಯ ನಿಃಶೂನ್ಯ ಮಹಾಶೂನ್ಯ ಅತಿಮಹಾಶೂನ್ಯ
ಎಂಬ ಮಹಾಘನವಸ್ತುವಿಲ್ಲದಂದು,

ಊರ್ಧ್ವಶೂನ್ಯ, ಅಧಃಶೂನ್ಯ, ಮಧ್ಯಶೂನ್ಯವಾಗಿಹ
ನಿರಾಮಯಬ್ರಹ್ಮವಿಲ್ಲದಂದು,
ಶಂಕರ ಶಶಿಧರ ಗಂಗಾಧರ ಗೌರೀಶ ವೃಷಭವಾಹನರಿಲ್ಲದಂದು,
ಉಮಾಪತಿಯಿಲ್ಲದಂದು,
ಸುರಾಳ–ನಿರಾಳ, ಹಮ್ಮು–ಬಿಮ್ಮು ಮದಹಂಕಾರವಿಲ್ಲದಂದು,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರಿಲ್ಲದಂದು,
ಪೃಥ್ವಿ ಅಪ್ಪು ತೇಜ ವಾಯು ಆಕಾಶವಿಲ್ಲದಂದು,
ಚಂದ್ರಸೂರ್ಯಾತ್ಮರಿಲ್ಲದಂದು, ಇವೇನೂ ಎನಲಿಲ್ಲದಂದು,
ನಿರಂಜನಾತೀತನಾಗಿರ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೭೫ ||

೩೭೬

ಅನಂತಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಮಯವಾಗಿಹ
ಪರಂಜ್ಯೋತಿ ಉದಯವಾಗದಂದು,
ರಾಜಸ ತಾಮಸ ಸಾತ್ವಿಕ ಗುಣತ್ರಯಂಗಳುತ್ಪತ್ಯವಾಗದಂದು,
ಅಕ್ಷರತ್ರಯಂಗಳುತ್ಪತ್ಯವಾಗದಂದು,
ಮಹಾಶೇಷನ ಮೇಲೆ ಭೂಮಿ ಹಾಸದಂದು,
ಹೇಮಾದ್ರಿ ಕೈಲಾಸವಿಲ್ಲದಂದು,
ಗಂಗೆವಾಳುಕ ಸಮಾರುದ್ರರಿಲ್ಲದಂದು,
ಸ್ವರ್ಗ ಮರ್ತ್ಯ ಪಾತಾಳಲೋಕವಿಲ್ಲದಂದು,
ಭೂಲೋಕ ಭುವರ್ಲೋಕ, ಮಹರ್ಲೋಕ, ಜನರ್ಲೋಕ,
ತಪರ್ಲೋಕ, ಸತ್ಯಲೋಕ, ಸ್ವರ್ಲೋಕ
ಇಂತೀ ಮೇಲೇಳು ಲೋಕಂಗಳಿಲ್ಲದಂದು,
ಅತಲ ವಿತಲ ಸುತಲ ತಲಾತಲ ರಸಾತಲ
ನಿರಾತಳ ಪಾತಾಳಲೋಕಂಗಳೆಂಬ ಕೆಳಗೇಳುಲೋಕಂಗಳಿಲ್ಲದಂದು.
ಮಲಯ ಸಂಸ್ಥಲ ಶಕ್ತಿಮಾನ್ ವಿಂಧ್ಯ ಮಹೇಂದ್ರ ಋಕ್ಷದಂತ, ಸಹ್ಯವೆಂಬ
ಸಪ್ತಕುಲಪರ್ವತಂಗಳಿಲ್ಲದಂದು,
ಲವಣ ಇಕ್ಷು ಸುರೆ ಘೃತ ದಧಿ ಕ್ಷೀರ ಶುದ್ಧಜಲವೆಂಬ
ಸಪ್ತಸಮುದ್ರಂಗಳಿಲ್ಲದಂದು,
ಜಂಬೂದ್ವೀಪ, ಪ್ಲಕ್ಷದ್ವೀಪ, ಕುಶದ್ವೀಪ, ಶಾಕದ್ವೀಪ,
ಶಾಲ್ಮಲೀದ್ವೀಪ, ಪುಷ್ಕರದ್ವೀಪ, ಕ್ರೌಂಚದ್ವೀಪವೆಂಬ
ಸಪ್ತದ್ವೀಪಂಗಳಿಲ್ಲದಂದು,
ನಾಲ್ವತ್ತೆಂಟುಸಾವಿರ ಮುನಿಗಳಿಲ್ಲದಂದು,
ಮೂವತ್ತುಮೂರುಕೋಟಿ ದೇವರ್ಕಳಿಲ್ಲದಂದು,
ಸರ್ವಶೂನ್ಯನಿರಾಲಂಬವಾಗಿದ್ದಂದು,

ನಿರಂಜನಾತೀತನಾಗಿದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ३೭೬ ||

३೭೭

ನಿರಾಳ ನಿರಂಜನವಿಲ್ಲದಂದು,
ನಾದ ಬಿಂದು ಕಳೆಗಳಿಲ್ಲದಂದು,
ಅತ್ಯತಿಷ್ಟದ್ದಶಾಂಗುಲವೆಂಬ ವಿರಾಟ್ಪುರುಷನುತ್ಪತ್ಯವಾಗದಂದು,
ಮಹಾಜ್ಯೋತಿರ್ಮಯಲಿಂಗವೆಂಬ ನಾಮ ತಲೆದೋರದಂದು,
ಕುಳ ನಿರಾಕುಳ ಅಪ್ರಮಾಣ ಅಗೋಚರ ವಾಚಾತೀತ ಮನೋತೀತವೆಂಬ
ಶಬ್ದಸಂದಣಿ ನಾಮಸೀಮೆಗಳೇನೂ ಎನಲಿಲ್ಲದಂದು,
ಬ್ರಹ್ಮ ಪರಬ್ರಹ್ಮವೆಂಬ ಭಿನ್ನನಾಮ ತಲೆದೋರದಂದು,
ಅಖಂಡ ಗೋಳಕಾಕಾರಲಿಂಗ ಉತ್ಪತ್ಯವಾಗದಂದು,
ಆ ಲಿಂಗದ ಪಂಚಸಂಜ್ಞೆ ತಲೆದೋರದಂದು,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ ಸಮಸ್ತದೇವರ್ಕಳಿಗೂ
ಜನನಸ್ಥಲವಾದ ನಿರ್ವಾಣಪದವಿಲ್ಲದಂದು,
ಶಿವಸಂಬಂಧ ಶಕ್ತಿಸಂಬಂಧವಾಗಿಹ ಓಂಕಾರ ಉತ್ಪತ್ಯವಾಗದಂದು,
ಶಿವಶಕ್ತಿರಹಿತವಾಗಿಹ ಮಹದೋಂಕಾರ ಉತ್ಪತ್ಯವಾಗದಂದು,
ಅತಿಸೂಕ್ಷ್ಮ ಪಂಚಾಕ್ಷರ, ಪ್ರಣವಪಂಚಾಕ್ಷರ ಉತ್ಪತ್ಯವಾಗದಂದು,
ನಿರಂಜನಾತೀತಪ್ರಣವವಾಗಿದ್ದನಯ್ಯಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ३೭೭ ||

ಎಲೆ ಸದ್ಗುರುಸ್ವಾಮಿ ನಿಮ್ಮ ಮಹಾಜ್ಞಾನ ದೃಕ್ಕಿನಿಂದ ನಿರಂಜನಾತೀತ ಪ್ರಣವವ ತೋರಲು, ನಿಮ್ಮ ಜ್ಞಾನದೃಕ್ಕಿಂದ ಕಂಡು ಅನುಭವಸುಖಿಯಾದೆನು. ಇನ್ನು ನಿರಂಜನಪ್ರಣವವ ನಿರೂಪಿಸೆಂದು ಬೆಸಗೊಳಲು, ಆ ಶಿಷ್ಯಂಗೆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

३೭೮

ಏನೂ ಏನೂ ಎನಲಿಲ್ಲದಂದು ಮಹಾಘನಕ್ಕೆ ಘನವಾದ
ಮಹಾಘನ ನಿರಂಜನಾತೀತಪ್ರಣವದ ನೆನಹು ಮಾತ್ರದಲ್ಲಿ
ನಿರಂಜನಪ್ರಣವ ಉತ್ಪತ್ಯವಾಯಿತ್ತು.
ಆ ನಿರಂಜನಪ್ರಣವದ ನಿರ್ದೇಶ ಸ್ಥಲದ ವಚನವೆಂತೆಂದಡೆ :
ಅವಾಚ್ಯಪ್ರಣವ ಕಲಾಪ್ರಣವ ಉತ್ಪತ್ಯವಾಗದತ್ತತ್ತ,
ಪ್ರಣವನಾದ ಪ್ರಣವಬಿಂದು ಪ್ರಣವಕಲೆಗಳುತ್ಪತ್ಯವಾಗದತ್ತತ್ತ,
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ३೭೮ ||

೩೭೯

ಘನಕ್ಕೆ ಘನವಾದ ಮಹಾಘನದೋಂಕಾರವಿಲ್ಲದಂದು,
ಪರಮ ಅಕಾರ ಪರಮ ಉಕಾರ ಪರಮ ಮಕಾರವಿಲ್ಲದಂದು,
ಅನಾದಿ ಅಕಾರ ಅನಾದಿ ಉಕಾರ ಅನಾದಿ ಮಕಾರವಿಲ್ಲದಂದು,
ಆದಿ ಅಕಾರ ಆದಿ ಉಕಾರ ಆದಿ ಮಕಾರ, ಅಕಾರ ಉಕಾರ ಮಕಾರವಿಲ್ಲದಂದು,
ಪ್ರಕೃತಿ ಪ್ರಣವ ಓಂಕಾರ ಉತ್ಪತ್ಯವಾಗದಂದು,
ನಿರಂಜನ ಪ್ರಣವವಾಗಿರ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೭೯ ||

೩೮೦

ಚಿನ್ನಾದ ಬಿಚ್ಬಿಂದು ಚಿತ್ಕಳೆ ತಲೆದೋರದಂದು,
ಪರನಾದ ಪರಬಿಂದು ಪರಕಲೆ ಇಲ್ಲದಂದು,
ಅನಾದಿ ನಾದ ಅನಾದಿ ಬಿಂದು ಅನಾದಿ ಕಲೆ ತಲೆದೋರದಂದು,
ಆದಿ ನಾದ ಆದಿ ಬಿಂದು ಆದಿ ಕಲೆ ಇಲ್ಲದಂದು,
ನಾದ ಬಿಂದು ಕಲಾತೀತವಿಲ್ಲದಂದು,
ನಿರಂಜನ ಪ್ರಣವವಾಗಿದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೮೦ ||

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿಮ್ಮ ಬ್ರಹ್ಮಾಜ್ಞಾನ ದೃಕ್ಕಿನಿಂದ ನಿರಂಜನ ಪ್ರಣವವ ತೋರಲು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಅನುಭವ ಸುಖಿಯಾದೆನು. ಮುಂದೆ ಅವಾಚ್ಯಪ್ರಣವದುತ್ಪತ್ಯವ ನಿರೂಪಿಸೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ಶಿಷ್ಯಂಗೆ ನಿರೂಪಿಸಿದರದೆಂತೆಂದಡೆ :

೩೮೧

ನಿರಂಜನ ಪ್ರಣವದ ನೆನಹುಮಾತ್ರದಿಂದ
ಅವಾಚ್ಯ ಪ್ರಣವದುತ್ಪತ್ಯವಾಯಿತ್ತು.
ಇನ್ನು ಅವಾಚ್ಯ ಪ್ರಣವದ ನಿರ್ದೇಶಸ್ಥಲದ ವಚನವೆಂತೆಂದಡೆ :
''ಸತ್ಯಂ ಜ್ಞಾನಮನಂತಂ ಬ್ರಹ್ಮ ಏಕಮೇವ ನ ದ್ವಿತೀಯಂ ಬ್ರಹ್ಮಂ''
ಎಂಬ ಪರಬ್ರಹ್ಮವಿಲ್ಲದಂದು,
''ಏಕಏವೋ ರುದ್ರೋ ಮಹೇಶ್ವರಃ'' ಎಂಬ ಮಹೇಶ್ವರತತ್ವವಿಲ್ಲದಂದು,
ವಿಶ್ವರೂಪರುದ್ರ ವಿಶ್ವಾಧಿಕಮಹಾರುದ್ರರಿಲ್ಲದಂದು,
ಕೋಟಿ ಶತಕೋಟಿ ಸಾವಿರ ಜಡೆಮುಡಿ ಗಂಗೆ ಗೌರಿಯರಿಲ್ಲದಂದು,
ಕೋಟಾನುಕೋಟಿ ಕಾಲರುದ್ರರಿಲ್ಲದಂದು,
ಅಸಂಖ್ಯಾತ ಪ್ರಳಯ ಕಾಲರುದ್ರರಿಲ್ಲದಂದು,
ಅವಾಚ್ಯಪ್ರಣವವಾಗಿದ್ದನಯ್ಯ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೮೧ ||

೩೮೨

ಆದಿಮೂಲ ಅನಾದಿಮೂಲವಿಲ್ಲದಂದು,
ಅಜಾಂಡ ಬ್ರಹ್ಮಾಂಡವಿಲ್ಲದಂದು, ವೇದಾಂತ ಸಿದ್ಧಾಂತವಿಲ್ಲದಂದು,
ವ್ಯೋಮ ವ್ಯೋಮಾಕಾಶವಿಲ್ಲದಂದು,
ಜೀವಹಂಸ ಪರಮಹಂಸರಿಲ್ಲದಂದು, ಅಜಪೆ ಗಾಯತ್ರಿ ಇಲ್ಲದಂದು,
ಅನಂತಕೋಟಿ ವೇದಾಗಮ ಶಾಸ್ತ್ರಪುರಾಣಂಗಳಿಲ್ಲದಂದು,
ಭಾವ ನಿರ್ಭಾವವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು,
ಅವಾಚ್ಯಪ್ರಣವವಾಗಿದ್ದನಯ್ಯಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೮೨ ||

೩೮೩

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರಿಲ್ಲದಂದು,
ಸರಸ್ವತಿ ಮಹಾಲಕ್ಷ್ಮಿ ಗಿರಿಜೆ ಉಮಾಶಕ್ತಿ ಮನೋನ್ಮನಿಶಕ್ತಿ ಮೊದಲಾದ ಮಹಾಶಕ್ತಿಗಳಿಲ್ಲದಂದು,
ಸಚರಾಚರಂಗಳೆಲ್ಲ ರಚನೆಗೆ ಬಾರದಂದು,
ಅವಾಚ್ಯಪ್ರಣವವಾಗಿದ್ದನು ನೋಡಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೮೩ ||

೩೮೪

ಶಾಂತ್ಯತೀತೋತ್ತರಕಲೆ, ಶಾಂತ್ಯತೀತಕಲೆಗಳಿಲ್ಲದಂದು,
ಶಾಂತಿಕಲೆ ವಿದ್ಯಾಕಲೆಗಳಿಲ್ಲದಂದು, ಪ್ರತಿಷ್ಠೆಕಲೆ ನಿವೃತ್ತಿಕಲೆಗಳಿಲ್ಲದಂದು,
ಮಹಾಸಾದಾಖ್ಯ ಶಿವಸಾದಾಖ್ಯವಿಲ್ಲದಂದು,
ಅಮೂರ್ತಿಸಾದಾಖ್ಯ ಮೂರ್ತಿಸಾದಾಖ್ಯವಿಲ್ಲದಂದು,
ಕರ್ತೃಸಾದಾಖ್ಯ ಕರ್ಮಸಾದಾಖ್ಯವಿಲ್ಲದಂದು,
ಅವಾಚ್ಯಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೮೪ ||

ಮತ್ತಂ, ಆ ಶಿಷ್ಯನು 'ಸದ್ಗುರುವೆ ಶ್ರೀ ಜಗದ್ಗುರುವೆ ಮಹಾಗುರುವೆ' ಎಂದು ಸ್ತೋತ್ರಮಂ ಮಾಡಿ, ನಿಮ್ಮ ಶಿವಜ್ಞಾನ ದೃಕ್ಕಿನಿಂದ ಅವಾಚ್ಯಪ್ರಣವವ ತೋರಲು ನಿಮ್ಮ ಬ್ರಹ್ಮಜ್ಞಾನದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಮುಂದೆ ಕಲಾ ಪ್ರಣವದುತ್ಪತ್ಯವ ನಿರೂಪಿಸೆಂದು ಬಿನ್ನವಿಸಲು ಆ ಶಿಷ್ಯಂಗೆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೩೮೫

ಅವಾಚ್ಯಪ್ರಣವದ ನೆನಹು ಮಾತ್ರದಲ್ಲಿ
ಚಿನ್ನಾದ ಚಿದ್ಬಿಂದು ಚಿತ್ಕಲೆ ಉತ್ಪತ್ಯವಾಯಿತ್ತು,

ಚಿನ್ನಾದಕಲೆ ದ್ವಾದಶಕಲೆ, ಚಿದ್ಬಿಂದುವಿನಕಲೆ ಷೋಡಶಕಲೆ,
ಚಿತ್ಕಳೆಯಕಲೆ ದಶಕಲೆ– ಈ ಮೂವತ್ತೆಂಟುಕಲೆಗಳು ಕೂಡಿ
ಏಕವಾಗಿ ಕಲಾಪ್ರಣವ ಉತ್ಪತ್ಯವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೩೮೫ ||

೩೮೬

ಆ ಕಲಾಪ್ರಣವದ ಮೂವತ್ತೆಂಟು ಕಲೆಗಳ ಕಾಂತಿ ಅದೆಂತೆಂದಡೆ :
ಒಂದೊಂದು ಕಲೆಗಳು ಹೊಳವುತ್ತಿಹ
ಕಾಲಾಗ್ನಿಯೋಪಾದಿಯ ಕಾಂತಿಯನುಳ್ಳುದು.
ಒಂದೊಂದು ಕಲೆಗಳು ಕೋಟಿಮಿಂಚುಗಳಿಗೆ ಸಮಾನವಹ ಪ್ರಭೆಯನುಳ್ಳ
ಜ್ಞಾನಸ್ವರೂಪವಹ ಸೂಕ್ಷ್ಮ ಸೂಕ್ಷ್ಮಕಲೆಗಳೇಕವಾಗಿ
ಮೂವತ್ತೆಂಟುಕೋಟಿಮಿಂಚುಗಳಿಗೆ ಸಮಾನವಹ ಪ್ರಭೆಯನುಳ್ಳ
ಚಿತ್ಕಳಾಪ್ರಣವ ಶಿಖಾಗ್ರದಲ್ಲಿಹುದು.
ಇದಕ್ಕೆ **ಈಶ್ವರೋಽವಾಚ** :
''ಜ್ವಲತ್ಕಾಲಾನಲಾಭಾಸಾ ತಟಿತ್ಕೋಟಿಸಮಪ್ರಭಾ |
ತಸ್ಯೋರ್ಧ್ವಂ ಚ ಶಿಖಾಸೂಕ್ಷ್ಮಾಂ ಚಿದ್ರೂಪಾ ಪರಮಾ ಕಲಾ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೩೮೬ ||

೩೮೭

ಚಿತ್ಕಲಾಪ್ರಣವ ಉಪಮಿಸಬಾರದ ಉಪಮಾತೀತವು
ಮನಾತೀತವು ವರ್ಣಾತೀತವು ತತ್ವಾತೀತವು ಜ್ಞಾನಾತೀತವು.
ನಿರಂಜನಕಲಾಪ್ರಣವವು ಅತ್ಯಂತ ಸೂಕ್ಷ್ಮವಾಗಿಹುದು.
ಇದಕ್ಕೆ **ಈಶ್ವರೋಽವಾಚ** :
''ವಾಚಾತೀತಂ ಮನೋಽತೀತಂ ವರ್ಣಾತೀತಂ ಚ ತತ್ವದಂ |
ಜ್ಞಾನಾತೀತನಿರಂಜನ್ಯಂ ಕಲಾಯಾಂ ಸೂಕ್ಷ್ಮ ಭಾವಯೇತ್ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ||೩೮೭ ||

೩೮೮

ಸಚ್ಚಿದಾನಂದ ಪರಮಾನಂದವಿಲ್ಲದತ್ತತ್ತ,
ಚಿದಾತ್ಮ ಪರಮಾತ್ಮವಿಲ್ಲದತ್ತತ್ತ,
ಚಿನ್ಮಯ ಚಿದ್ರೂಪ ಚಿತ್ಪ್ರಕಾಶವಿಲ್ಲದತ್ತತ್ತ,
ಶಿವಜ್ಞಾನ ಮಹಾಜ್ಞಾನವಿಲ್ಲದತ್ತತ್ತ,
ಶಿವನೆಂಬ ನಾಮಸೀಮೆ ಏನೂ ಏನೂ ಎನಲಿಲ್ಲದತ್ತತ್ತ
ಕಲಾಪ್ರಣವವಾಗಿದ್ದನಯ್ಯ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೮೮ ||

೩೮೯

ಅವಾಚ್ಯಪ್ರಣವ ಅನಿರ್ವಾಚ್ಯಪ್ರಣವವಿಲ್ಲದಂದು,
ಆಕಾರ ನಿರಾಕಾರವಿಲ್ಲದಂದು, ನಾನು ನೀನು ಎನಲಿಲ್ಲದಂದು,
ಕಲಾಪ್ರಣವವಾಗಿದ್ದನಯ್ಯ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೮೯ ||

೩೯೦

ಇಂದ್ರಪದ ಬ್ರಹ್ಮಪದ ವಿಷ್ಣುಪದವಿಲ್ಲದಂದು,
ಸುರಾಲಯ ರುದ್ರಲೋಕ ಉತ್ಪತ್ಯವಾಗದಂದು,
ಅಷ್ಟವಸುಗಳು, ದ್ವಾದಶಾದಿತ್ಯರು, ಏಕಾದಶ ರುದ್ರರುತ್ಪತ್ಯವಾಗದಂದು,
ದ್ವಾದಶ ರಾಸಿ ನಕ್ಷತ್ರ ನವಗ್ರಹಂಗಳುತ್ಪತ್ಯವಾಗದಂದು,
ಅಗ್ನಿಮಂಡಲ ಆದಿತ್ಯಮಂಡಲ ಉತ್ಪತ್ಯವಾಗದಂದು,
ಚಂದ್ರಮಂಡಲ ತಾರಾಮಂಡಲ ಉತ್ಪತ್ಯವಾಗದಂದು,
ಇವೇನೂ ಏನೂ ಎನಲಿಲ್ಲದಂದು ಚಿತ್ಕಲಾಪ್ರಣವವಾಗಿದ್ದನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೯೦ ||

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿಮ್ಮ ಸ್ವಾನುಭಾವದಿಂದ ಚಿತ್ಕಲಾ ಪ್ರಣಮವ ನಿರೂಪಿಸಲು ನಿಮ್ಮ ಶಿವಜ್ಞಾನ ದೃಕ್ಕಿನಿಂದ ಕಂಡು ಸುಖಿಯಾದೆನು, ಮುಂದೆ ಅನಾದಿ ಪ್ರಣವದುತ್ಪತ್ಯವ ನಿರೂಪಿಸೆನಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೩೯೧

ಏನು ಏನೂ ಎನಲಿಲ್ಲದ ಮಹಾಘನ ಚಿತ್ಕಲಾಪ್ರಣವದ
ನೆನಹುಮಾತ್ರದಲ್ಲಿ ಅನಾದಿಪ್ರಣವದ ಉತ್ಪತ್ಯವಾಯಿತ್ತು
ಆ ಅನಾದಿಪ್ರಣವಸ್ಥಲದ ವಚನವೆಂತೆಂದಡೆ :
ಆದಿ ಅಕಾರ ಆದಿ ಉಕಾರ ಆದಿ ಮಕಾರವೆಂಬ
ಆದಿ ಅಕ್ಷರತ್ರಯಂಗಳಿಲ್ಲದಂದು.
ಆದಿ ನಾದ ಆದಿ ಬಿಂದು ಆದಿ ಕಲೆಗಳೆಂಬ ಭಿನ್ನನಾಮ ತಲೆದೋರದಂದು,
ಆದಿ ಪ್ರಕೃತಿ ಆದಿ ಪ್ರಾಣವಿಲ್ಲದಂದು,
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವ
ಜ್ಯೋತಿರ್ಲಿಂಗವಿಲ್ಲದಂದು,
ಓಂಕಾರವೆಂಬ ಅನಾದಿಪ್ರಣವವಾಗಿದ್ದನು ನೋಡಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಸಂಗಮದೇವನು || ೩೯೧ ||

೩೯೨

ಆದಿ ರುದ್ರ ಆದಿ ಈಶ್ವರ ಆದಿ ಸದಾಶಿವರಿಲ್ಲದ ಮುನ್ನ ಮುನ್ನ,
ಆದಿ ಅಕಾರ ಆದಿ ಉಕಾರ ಆದಿ ಮಕಾರಕ್ಕೆ

ಆದಿ ನಾದ ಆದಿ ಬಿಂದು ಆದಿ ಕಲೆಗಳು ಆಧಾರವಾಗದ ಮುನ್ನ ಮುನ್ನ,
ಆ ಆದಿ ನಾದ–ಬಿಂದು–ಕಲೆಗಳಿಗೆ
ಆ ಆದಿ ಪ್ರಕೃತಿಗಳಾಧಾರವಾಗದ ಮುನ್ನ ಮುನ್ನ,
ಆ ಆದಿ ಪ್ರಾಣಕ್ಕೆ ಲಿಂಗಾಧಾರವಾಗದ ಮುನ್ನ ಮುನ್ನವೆ ಓಂಕಾರವೆಂಬ ಅನಾದಿಪ್ರಣವವಾಗಿದ್ದನು ನೋಡಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೩೯೨ ॥

೩೯೩

ಆದಿ ಅಕಾರದಲ್ಲಿ ತಾರಕಸ್ವರೂಪ ದಂಡಕಸ್ವರೂಪ
ಉತ್ಪತ್ಯವಾಗದ ಮುನ್ನ ಮುನ್ನ,
ಆದಿ ಉಕಾರದಲ್ಲಿ ಕುಂಡಲಾಕಾರ ಅರ್ಧಚಂದ್ರಕಸ್ವರೂಪ
ಉತ್ಪತ್ಯವಾಗದ ಮುನ್ನ ಮುನ್ನ,
ಆದಿ ಮಕಾರದಲ್ಲಿ ದರ್ಪಣಾಕಾರ ಜ್ಯೋತಿಸ್ವರೂಪ
ಉತ್ಪತ್ಯವಾಗದ ಮುನ್ನ ಮುನ್ನ,
ಆದಿ ಅಕಾರ ಉಕಾರ ಮಕಾರ–ಈ ಮೂರು ಏಕವಾಗಿ
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವ
ಉತ್ಪತ್ಯವಾಗದ ಮುನ್ನ ಮುನ್ನವೆ
ಓಂಕಾರವೆಂಬ ಅನಾದಿಪ್ರಣವವಾಗಿದ್ದನು ನೋಡಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೩೯೩ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ನಿಮ್ಮ ಮಹಾಜ್ಞಾನೋದಯದಿಂದ ಅನಾದಿ ಪ್ರಣವವ ನಿರೂಪಿಸಲು ನಿಮ್ಮ ಸ್ವಾನುಭಾವ ದೃಕ್ಕಿನಿಂದ ಕಂಡು ಪರಮ ಸುಖಿಯಾದೆನು. ಮುಂದೆ ಅನಾದಿ ಅಕಾರ, ಅನಾದಿ ಉಕಾರ, ಅನಾದಿ ಮಕಾರವೆಂಬ ಪ್ರಣವೋತ್ಪತ್ಯವ ನಿರೂಪಿಸೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆನೆ :

೩೯೪

ಏನೂ ಏನೂ ಎನಲಿಲ್ಲದ ಅನಾದಿ ಪ್ರಣವದ
ನೆನಹು ಮಾತ್ರದಲ್ಲಿಯೇ ಅನಾದಿ ಅಕಾರ, ಅನಾದಿ ಉಕಾರ,
ಅನಾದಿ ಮಕಾರವೆಂಬ
ಪ್ರಣವತ್ರಯಂಗಳುತ್ಪತ್ಯವಾಯಿತ್ತು,
ಆ ಅನಾದಿ ಅಕಾರ, ಆ ಅನಾದಿ ಉಕಾರ, ಆ ಅನಾದಿ ಮಕಾರವೆಂಬ
ಪ್ರಣವತ್ರಯಂಗಳ ನಿರ್ದೇಶನಸ್ಥಲದ ವಚನವದೆಂತೆಂದಡೆ :
ಅಕಾರ ಉಕಾರ ಮಕಾರವೆಂಬ ನಿರಾಕಾರಪ್ರಣವತ್ರಯದ ಮೇಲೆ
ನಿರ್ಮಯಲು ಬಂದು ಕುಳ್ಳಿರದಂದು,

ಬಯಲು ನಿರ್ವಯಲೆಂಬಾ ನಾಮ ತಲೆದೋರದಂದು,
ಪರಬ್ರಹ್ಮಲೀಲೆಯು ನಿಂದು ಏನೂ ಏನೂ ಎನಲಿಲ್ಲದಂದು,
ಅನಾದಿ ಅಕಾರ, ಅನಾದಿ ಉಕಾರ, ಅನಾದಿ ಮಕಾರವೆಂಬ
ಪ್ರಣವತ್ರಯವಾಗಿದ್ದನು ನೋಡಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. ॥ ೩೯೪ ॥

೩೯೫

ಅನಂತಕೋಟಿ ಆದಿಬ್ರಹ್ಮರ ಶಿರವನರಿದು
ಬ್ರಹ್ಮಕಪಾಲವ ಪಿಡಿದಾಡದಂದು,
ಅನಂತಕೋಟಿ ಆದಿನಾರಾಯಣರ
ನಿಟ್ಟೆಲುವ ಮುರಿದು ಕಂಕಾಳದಂಡವ ಧರಿಸದಂದು,
ಅನಂತಕೋಟಿ ಆದಿಕಾಲರ ಒದ್ದೊದ್ದು ಕೊಲ್ಲದಂದು,
ಅನಂತಕೋಟಿ ಆದಿ ಮನ್ಮಥರ ದಹಿಸಿ ಭಸ್ಮವ ಮಾಡದಂದು,
ಅನಂತಕೋಟಿ ತ್ರಿಪುರಂಗಳ ಸಂಹಾರವ ಮಾಡದಂದು,
ಪರಶಿವಲೀಲೆಯಿಂದ ಅನಂತಕೋಟಿ ಬ್ರಹ್ಮಾಂಡಂಗಳ ಸೃಜಿಸದಂದು,
ಅನಾದಿ ಅಕಾರ, ಅನಾದಿ ಉಕಾರ, ಅನಾದಿ ಮಕಾರವೆಂಬ
ಪ್ರಣವತ್ರಯವಾಗಿದ್ದನು ನೋಡಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವ. ॥ ೩೯೫ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ನಿಮ್ಮ ಸಚ್ಚಿದಾನಂದವೆಂಬ ದೃಕ್ಕಿನಿಂದ ಅನಾದಿ ಅಕಾರ, ಅನಾದಿ ಉಕಾರ, ಅನಾದಿ ಮಕಾರವೆಂಬ ಪ್ರಣವ ತ್ರಯಂಗಳ ತೋರಲು, ನಿಮ್ಮ ಕೃಪಾದೃಷ್ಟಿಯಿಂದ ಕಂಡು ಪರಮಸುಖಿಯಾದೆನು. ಮುಂದೆ ಆದಿಪ್ರಣವವ ನಿರೂಪಿಸೆಂದು ಭಯಭಕ್ತಿಯಿಂದ ಬಿನ್ನವಿಸಲು, ಸದ್ಗುರು ಸ್ವಾಮಿ ಆ ಶಿಷ್ಯಂಗೆ ಆದಿ ಪ್ರಣವೋತ್ಪತ್ಯವ ನಿರೂಪಿಸಿದನದೆಂತೆಂದಡೆ:

೩೯೬

ಏನೂ ಏನೂ ಎನಲಿಲ್ಲದ ಅನಾದಿ ಅಕಾರ, ಅನಾದಿ ಉಕಾರ,
ಅನಾದಿ ಮಕಾರವೆಂಬ ಪ್ರಣವತ್ರಯಂಗಳ ನೆನಹು ಮಾತ್ರದಲ್ಲಿಯೇ
ಆದಿ ಪ್ರಣವ ಉತ್ಪತ್ಯವಾಯಿತು.
ಆ ಆದಿ ಪ್ರಣವಸ್ಥಲದ ವಚನವದೆಂತೆಂದಡೆ :
ಆಧಾರಚಕ್ರ, ಸ್ವಾಧಿಷ್ಠಾನಚಕ್ರ ಉತ್ಪತ್ಯವಾಗದ ಮುನ್ನ ,
ಮಣಿಪೂರಕಚಕ್ರ ಅನಾಹತಚಕ್ರ ಉತ್ಪತ್ಯವಾಗದ ಮುನ್ನ ,
ವಿಶುದ್ಧಿಚಕ್ರ ಆಜ್ಞಾಚಕ್ರ ಉತ್ಪತ್ಯವಾಗದ ಮುನ್ನ ,
ಬ್ರಹ್ಮಚಕ್ರ ಶಿಖಾಚಕ್ರ ಉತ್ಪತ್ಯವಾಗದ ಮುನ್ನ ,

ಪಶ್ಚಿಮಚಕ್ರ ಅಣುಚಕ್ರ ಉತ್ಪತ್ಯವಾಗದ ಮುನ್ನವೆ
ಓಂಕಾರವೆಂಬ ಆದಿಪ್ರಣವವಾಗಿದ್ದನು ನೋಡಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೯೬ ||

೩೯೭

ಸಪ್ತಕೋಟಿ ಮಹಾಮಂತ್ರ ವಿಶಾಲವಾಗದಂದು,
ತೊಂಬತ್ತುನಾಲ್ಕು ಪದ ವಿಶಾಲವಾಗದಂದು,
ವರ್ಣ ಐವತ್ತೆರಡು ವಿಶಾಲವಾಗದಂದು,
ಇನ್ನೂರಾ ಇಪ್ಪತ್ತುನಾಲ್ಕು ಭುವನ ವಿಶಾಲವಾಗದಂದು,
ತೊಂಬತ್ತಾರುತತ್ವ ವಿಶಾಲವಾಗದಂದು,
ಅರುವತ್ತುನಾಲ್ಕು ಕಲೆಜ್ಞಾನ ವಿಶಾಲವಾಗದಂದು,
ಓಂಕಾರವೆಂಬ ಅನಾದಿಪ್ರಣವವಾಗಿದ್ದನು ನೋಡಾ ಇಲ್ಲದಂತೆ
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೩೯೭ ||

೩೯೮

ಅಸಂಖ್ಯಾತ ಆದಿಬ್ರಹ್ಮರುತ್ಪತ್ಯವಾಗದಂದು,
ಅಸಂಖ್ಯಾತ ಆದಿನಾರಾಯಣರುತ್ಪತ್ಯವಾಗದಂದು,
ಅಸಂಖ್ಯಾತ ಸುರೇಂದ್ರಾದಿಗಳು ಉತ್ಪತ್ಯವಾಗದಂದು,
ಅಸಂಖ್ಯಾತ ಮನುಮುನಿ ದೈತ್ಯರು ಉತ್ಪತ್ಯ ಲಯವಾಗದಂದು,
ಓಂಕಾರವೆಂಬ ಆದಿಪ್ರಣವವಾಗಿದ್ದನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೩೯೮ ||

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿಮ್ಮ ಮಹಾನುಭಾವದ ಮಹಾವಾಕ್ಯದಿಂದ ಆದಿಪ್ರಣವೋತ್ಪತ್ಯವ ನಿರೂಪಿಸಲು ನಿಮ್ಮ ಕಾರುಣ್ಯ ದೃಕ್ಕಿನಿಂದ ಕಂಡು ಮಹಾನುಭಾವಸುಖಿಯಾದೆನು. ಮುಂದೆ ಆದಿ ಅಕಾರ, ಆದಿ ಉಕಾರ, ಆದಿ ಮಕಾರವೆಂಬ ಪ್ರಣವತ್ರಯಂಗಳುತ್ಪತ್ಯವ ನಿರೂಪಿಸೆಂದು ಬಿನ್ನವಿಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆನೆ :

೩೯೯

ಆ ಆದಿ ಪ್ರಣವದ ನೆನಹುಮಾತ್ರದಲ್ಲಿ
ಆದಿ ಅಕಾರ, ಆದಿ ಉಕಾರ, ಆದಿ ಮಕಾರವೆಂಬ
ಪ್ರಣವತ್ರಯಂಗಳುತ್ಪತ್ಯವಾಯಿತ್ತು.
ಆ ಆದಿ ಅಕಾರ, ಆದಿ ಉಕಾರ, ಆದಿ ಮಕಾರ–ಇವು ಮೂರು ಬೀಜಾಕ್ಷರ.
ಆದಿ ಅಕಾರವೆ ಆದಿನಾದ, ಆದಿ ಉಕಾರವೇ ಆದಿಬಿಂದು,
ಆದಿ ಮಕಾರವೆ ಆದಿಕಲೆ.
ಆದಿ ಅಕಾರವೇ ನಿರಾಳಾತ್ಮನು, ಆದಿ ಉಕಾರವೇ ನಿರಂಜನಾತ್ಮನು,

ಆದಿ ಮಕಾರವೆ ನಿರಾಮಯಾತ್ಮಕನು ನೋಡಾ.
ಇದಕ್ಕೆ ಶ್ರೀಮಹಾದೇವೋವಾಚ:
''ಅಕಾರಂ ನಾದರೂಪೇಣ ಉಕಾರೋ ಬಿಂದುರುಚ್ಯತೇ ।
ಮಕಾರಂತು ಕಲಾಶ್ಚೈವ ನಾದಬಿಂದುಕಲಾತ್ಮನೇ ॥
ಓಂಕಾರೋ ಜ್ಯೋತಿರೂಪಂಚ ಓಂಕಾರೋ ಪರಮೇಶ್ವರಃ ।
ನಾದರೂಪಂ ನಿರಾಲಂಬಂ ಬಿಂದುರೂಪಂ ನಿರಂಜನಂ ।
ನಾದಬಿಂದೂಭಯೋಃ ಕರ್ತಾ ರುದ್ರಃ ಶಂಭುಃ ನಿರಾಮಯಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೩೯೯ ॥

೪೦೦

ಆದಿ ಅಕಾರ ಪ್ರಣವಕ್ಕೆ ಆದಿ ನಾದಪ್ರಣವವೇ ಆಧಾರ.
ಆದಿ ಉಕಾರಪ್ರಣವಕ್ಕೆ ಆದಿ ಬಿಂದುಪ್ರಣವವೇ ಆಧಾರ.
ಆದಿ ಮಕಾರಪ್ರಣವಕ್ಕೆ ಆದಿ ಕಲಾಪ್ರಣವವೇ ಆಧಾರ.
ಆ ಆದಿ ನಾದಬಿಂದುಕಲಾಪ್ರಣವಣಕ್ಕೆ
ಆ ಆದಿ ಪ್ರಕೃತಿಪ್ರಣವವೇ ಆಧಾರ.
ಆ ಆದಿ ಪ್ರಕೃತಿಪ್ರಣವಕ್ಕೆ
ಆ ಆದಿ ಪ್ರಾಣಮಾತ್ರೆಯ ಪ್ರಣವವೇ ಆಧಾರ.
ಆ ಆದಿ ಪ್ರಾಣಮಾತ್ರೆಯ ಪ್ರಣವಕ್ಕೆ
ಆ ಅಖಂಡಜ್ಯೋತಿರ್ಮಯಲಿಂಗವೇ ಆಧಾರ.
ಆದಿ ಅ ಎಂದರೆ ಆದಿ ಅನಾಹತಪ್ರಣವ,
ಆದಿ ಉ ಎಂದರೆ ಆದಿ ನಾದ ಪ್ರಣವವಳಿಯಿತ್ತು.
ಆದಿ ಮ ಎಂಬ ಪ್ರಣವದಲ್ಲಿ ಆದಿ ಬಿಂದುಪ್ರಣವ ಬಂದು ಕೂಡಲು
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೦೦ ॥

೪೦೧

ಇದಕ್ಕೆ **ಪ್ರಣವೋಪನಿಷತ್** :
ಅಕಾರವೆಂಬ ಪ್ರಣವದಲ್ಲಿ–
''ದಂಡಶ್ಚ ತಾರಕಾಕಾರೋ ಭವತಿ । ಓಂ ನಿರಾಳಾತ್ಮಾ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ದಶಮಂ ಪ್ರಣವಾಂಶಕೇ ॥''
ಉಕಾರವೆಂಬ ಪ್ರಣವದಲ್ಲಿ–
''ಕುಂಡಲಶ್ಚ ಅರ್ಧಚಂದ್ರೋ ಭವತಿ । ಓಂ ನಿರಂಜನಾತ್ಮಾ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ಏಕಾದಶ ಪ್ರಣವಾಂಶಕೇ ॥''
ಮಕಾರವೆಂಬ ಪ್ರಣವದಲ್ಲಿ–

''ದರ್ಪಣಶ್ಚ ಜ್ಯೋತಿರೂಪೋ ಭವತಿ । ಓಂ ನಿರಾಮಯೋ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ದ್ವಾದಶಂ ಪ್ರಣವಾಂಶಕೇ ॥
ಅಕಾರೇ ಚ ಉಕಾರೇ ಚ ಮಕಾರೇ ಚ ನಿರಂಜನಂ ।
ಇದಮೇಕಂ ಸಮುತ್ಪನ್ನಂ ಓಮಿತಿ ಜ್ಯೋತಿರೂಪಕಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೧ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿಮ್ಮ ಸಮ್ಯಜ್ಞಾನದೃಕ್ಕಿನಿಂದ ಆ ಅಖಂಡಜ್ಯೋತಿರ್ಮಯಲಿಂಗವಾಗಿಹ ಗೋಳಕಾಕಾರ ಪ್ರಣವವ ತೋರಲು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಮಹಾನುಭಾವಸುಖಿಯಾದೆನು. ಮುಂದೆ ಲಿಂಗೋತ್ಪತ್ಯವ ನಿರೂಪಿಸೆನಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ:

೪೦೨

ಆ ಅಖಂಡಮಹಾಜ್ಯೋತಿಪ್ರಣವದ ತಾರಕಸ್ವರೂಪದ ಕುಂಡಲಾಕಾರ
ಜ್ಯೋತಿಸ್ವರೂಪದಲ್ಲಿ ಉತ್ಪತ್ಯವಾದ
ಅಕಾರ ಉಕಾರ ಮಕಾರ ಇವು ಮೂರು ಬೀಜಾಕ್ಷರ.
ಅಕಾರವೆ ಶಿವನು, ಉಕಾರವೆ ಶಕ್ತಿ, ಮಕಾರವೆ ಪರವು.
ಅಕಾರವೆ ನಾದ, ಉಕಾರವೆ ಬಿಂದು, ಮಕಾರವೆ ಕಲೆ.
ಈ ಆರು ನಾಮಂಗಳು ನಿಃಕಲತತ್ವ.
ಆ ಪರಶಿವಶಕ್ತಿಯ ಸಂಕಲ್ಪದಿಂದ ನಾದ ಬಿಂದು ಕಲೆ ಯುಕ್ತವಾಗಿ
ಅಖಂಡಲಿಂಗವಾಯಿತ್ತು.
ಅದಕ್ಕೆ ಕರಚರಣ ಅವಯವಂಗಳಿಲ್ಲ; ಅಖಂಡಸ್ವರೂಪು.
ಇದಕ್ಕೆ **ಚಿತ್ಪಿಂಡಾಗಮೇ** :
''ಓಂಕಾರಂ ತಾರಕಾರೂಪಂ ಅಕಾರಂ ಸೋऽಜಾಯತ ।
ಓಂಕಾರ ಕುಂಡಲಾಕಾರೇ ಉಕಾರಂ ಚಾತ್ರ ಜಾಯತೇ ॥
ಓಂಕಾರ ಜ್ಯೋತಿರೂಪೇ ಚ ಮಕಾರಂ ಚಾಪಿ ಜಾಯತೇ ।
ಇತಿ ತ್ರ್ಯಕ್ಷರಂ ದೇವಿ ಸ್ಥಾನಸ್ಥಾನೇಷು ಜಾಯತೇ ॥
ಅಕಾರೇಚ ಉಕಾರೇಚ ಮಕಾರೇಚಕ್ಷರತ್ರಯಂ ।
ಅಕಾರಂ ನಾದರೂಪೇಣ ಉಕಾರಂ ಬಿಂದುರುಚ್ಯತೇ ।
ಮಕಾರಂತು ಕಲಾಶ್ಚೈವ ನಾದಬಿಂದುಕಲಾತ್ಮನೇ ।
ನಾದಬಿಂದುಕಲಾಮಧ್ಯೇ ವೇದಲಿಂಗ ಸಮುದ್ಭವಂ ।
ಅಖಂಡಗೋಳಕಾಕಾರಂ ವೇದಪಂಚಕಸಂಜ್ಞಕಂ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರೋऽವಾಚ** :
''ಅಕಾರೋಕಾರ ಸಂಯೋಗಾತ್ತನ್ಮಧ್ಯೇ ಲಿಂಗರೂಪಕಂ ।

ಅವ್ಯಕ್ತಲಿಂಗಮಾಕಲ್ಯ ಗೋಳಕಾಕಾರಸಂಜ್ಞಕಃ ॥
ನಾದೋ ಲಿಂಗಮಿತಿ ಜ್ಞೇಯಂ ಬಿಂದುಪೀಠಮುದಾಹೃತಂ ।
ನಾದಬಿಂದುಯುತಂ ರೂಪಂ ಜಗಸ್ಸೃಷ್ಟ್ಯರ್ಥಕಾರಣಂ ॥
ಚಿದ್ವ್ಯೋಮ ಲಿಂಗಮಿತ್ಯಾಹುಃ ಚಿದ್ಭೂಮಿಸ್ತಸ್ಯ ಪೀಠಿಕಾ ।
ಆಲಯಂ ಸರ್ವದೇವಾನಾಂ ಲಯಾನಾಂ ಲಿಂಗಮುಚ್ಯತೇ ॥
ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇವಂ ಲಿಂಗಮಿತ್ಯುಕ್ತಂ ಲಿಂಗತತ್ವಪರಾಯಣೈಃ ॥
ಲಿಂಗಂ ಶಂಭುರಿತಿಜ್ಞೇಯಂ ಪೀಠಂ ಶಕ್ತಿರುದಾಹೃತಂ ।
ಶಿವಶಕ್ತಿಸಮಾಯೋಗಂ ಸೃಷ್ಟಿಸ್ಥಿತಿ ಲಯಾವಹಂ ॥
ಲಿಂಗೇನ ಜಾಯತೇ ತತ್ರ ಜಗತ್‌ಸ್ಥಾವರ ಜಂಗಮಂ ।
ತಸ್ಮಾಲ್ಲಿಂಗಮಶೇಷೇಣ ಲಿಂಗರೂಪಮುದಾಹೃತಂ ॥
ಅಸಂಖ್ಯಾತ ಮಹಾವಿಷ್ಣುಃ ಅಸಂಖ್ಯಾತ ಪಿತಾಮಹಾಃ ।
ಅಸಂಖ್ಯಾತ ಸುರೇಂದ್ರಾಣಾಂ ಲೀಯತೇ ಸರ್ವದೇವತಾ ಃ ॥
ಅಸಂಖ್ಯಾತ ದೇವಮುನಯೋ ಗಮ್ಯತೇ ಸರ್ವದೇವತಾಃ ।
ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇವ ಲಿಂಗಮಿತ್ಯಾಹುಃ ಲಿಂಗತತ್ವ ಪರಾಯಣಾಃ ॥''
ಇಂತೆಂದುದಾಗಿ,
ಇದಕ್ಕೆ ಪ್ರಣವಾನಂದ ಸೂಕ್ತೇ :
''ಆದಿಯೋಂಕಾರಪೀಠಂಚ ಅಕಾರಂ ಕಂಠರುಚ್ಯತೇ ।
ಉಕಾರಂ ಗೋಮುಖಂ ಚೈವ ಮಕಾರಂ ವರ್ತುಲಂ ತಥಾ ॥
ನಾಳಂ ಬಿಂದು ಮಹಾತೇಜ ನಾದಮಖಂಡಲಿಂಗಯೋಃ ।
ಆದಿಮಧ್ಯಾಂತರಹಿತಂ ಅಪ್ರಮೇಯಮನಾಮಯಂ ॥
ಅಸಂಖ್ಯ ಸೂರ್ಯಚಂದ್ರಾಗ್ನಿಃ ಅಸಂಖ್ಯಾತತಟಿತ್ಪ್ರಭಂ ।
ಅವ್ಯಕ್ತಂ ಅಮಲಂ ಶೂನ್ಯಂ ಅಪ್ರಮಾಣಂ ಅಗೋಚರಂ ॥
ನಿರ್ನಾಮಂ ನಿರ್ಗುಣಂ ನಿತ್ಯಂ ನಿರಂಜನಂ ನಿರಾಮಯಂ ।
ಇತಿ ಲಿಂಗಸ್ಥಲಂ ಜ್ಞಾತುಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೨ ॥

೪೦೩

ಇನ್ನು ಆ ಲಿಂಗಗರ್ಭದಲ್ಲಿ ಅನೇಕಕೋಟಿ ತತ್ವಂಗಳು,
ಅನೇಕಕೋಟಿ ಸದಾಶಿವರು, ಅನೇಕಕೋಟಿ ಈಶ್ವರರಡಗಿಹರು ನೋಡಾ.
ಆ ಲಿಂಗಗರ್ಭದಲ್ಲಿ ಅನೇಕಕೋಟಿ ಮಹೇಶ್ವರರು,
ಅನೇಕಕೋಟಿ ರುದ್ರರು, ಅನೇಕಕೋಟಿ ವಿಷ್ಣ್ವಾದಿಗಳಡಗಿಹರು ನೋಡಾ.

ಆ ಲಿಂಗಗರ್ಭದಲ್ಲಿ ಅನೇಕ ಕೋಟಿ ಬ್ರಹ್ಮರು,
ಅನೇಕಕೋಟಿ ಚಂದ್ರಾದಿತ್ಯರು, ಅನೇಕಕೋಟಿ ಋಷಿಗಳು
ಅಡಗಿಹರು ನೋಡಾ.
ಆ ಲಿಂಗಗರ್ಭದಲ್ಲಿ ಅನೇಕಕೋಟಿ ಇಂದ್ರರು,
ಅನೇಕಕೋಟಿ ದೇವರ್ಕಳು, ಅನೇಕಕೋಟಿ ಬ್ರಹ್ಮಾಂಡಂಗಳಡಗಿ
ಆದಿ ಮಧ್ಯಾವಸಾನಂಗಳಿಲ್ಲದೆ ಅಖಂಡಸ್ವರೂಪು
ಅಖಂಡಪರಿಪೂರ್ಣ ಗೋಳಕಾಕಾರ ಅಪ್ರಮಾಣ ಅಗೋಚರ
ಅಪ್ರಮೇಯ ಅವ್ಯಕ್ತ ಅನಂತತೇಜ ಅನಂತಪ್ರಚಯ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶ
ಅನಂತಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿಹುದು ನೋಡಾ.
ಇದಕ್ಕೆ ಶಿವಧರ್ಮಸೂತ್ರೇ :
''ಅಸಂಖ್ಯಾತ ತತ್ವಸಂಜ್ಞಾ ಅಸಂಖ್ಯಾ ಅಂಬರಂ ತಥಾ ।
ಅಸಂಖ್ಯಾ ದೇವಮುನಯೋ ಲಿಂಗತತ್ವಂ ವಿಲೀಯತೇ ॥
ಅಸಂಖ್ಯಾ ಸೂರ್ಯಚಂದ್ರಾಗ್ನಿ ಅಸಂಖ್ಯಾ ದೈತ್ಯಮಾನವಾಃ ।
ಅಸಂಖ್ಯಾತ ಸುರೇಂದ್ರಾಣಾಂ ಲಿಂಗಗರ್ಭೇ ವಿಲೀಯತೇ ॥
ಅಸಂಖ್ಯಾತ ಮಹಾವಿಷ್ಣುಃ ಅಸಂಖ್ಯಾತ ಪಿತಾಮಹಾಃ ।
ಅಸಂಖ್ಯಾತ ಮಹಾಕಾಶಂ ಲಿಂಗಗರ್ಭೇ ವಿಲೀಯತೇ ॥''
ಇಂತೆಂದುದಾಗಿ,
ಇದಕ್ಕೆ ಶಿವಧರ್ಮಪುರಾಣೇ :
''ಕಲ್ಪಾಂತೇ ತಸ್ಯ ದೇವಸ್ಯ ವಿಲೀಯಂತೇ ಸರ್ವದೇವತಾ ।
ದಕ್ಷಿಣೇ ಲೀಯತೇ ಬ್ರಹ್ಮಾ ವಾಮಭಾಗೇ ಜನಾರ್ಧನಃ ॥
ಹೃದಯೇ ಚೈವ ಗಾಯತ್ರೀ ಸರ್ವದೇವೋತ್ತಮೋತ್ತಮಃ ।
ಲೀಯಂತೇ ಮೂರ್ಧ್ನಿ ವೈ ವೇದಾಃ ಸ್ವಷಡಂಗಪದಕ್ರಮಾತ್ ॥
ಓಂಕಾರೇ ಲೀಯತೇ ಸರ್ವಂ ಜಗತ್‌ಸ್ಥಾವರಜಂಗಮಂ ।
ಉತ್ಪಾದ್ಯತೇ ಪುನಸ್ಥಾನಾತ್ ಬ್ರಹ್ಮಾದ್ಯಂ ಸಚರಾಚರಂ ॥''
ಇಂತೆಂದುದಾಗಿ,
ಇದಕ್ಕೆ ಶಿವಲಿಂಗಾಗಮೇ :
''ಚಿದ್ವ್ಯೋಮ ಲಿಂಗಮಿತ್ಯಾಹುಃ ಚಿದ್ಭೂಮಿಸ್ತಸ್ಯ ಪೀಠಿಕಾ ।
ಆಲಯಂ ಸರ್ವದೇವಾನಾಂ ಲಯನಾಂ ಲಿಂಗಮುಚ್ಯತೇ ।
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಉತ್ಪದ್ಯಂತೇ ಪುನಃ ಸ್ಥಾಪನಾತ್ ಬ್ರಹ್ಮವಿಷ್ಣ್ವಾದಿ ದೇವತಾಃ ॥''
ಇಂತೆಂದುದಾಗಿ,
ಇದಕ್ಕೆ ಉತ್ತರವಾತುಲಾಗಮೇ :
''ನ ಭೂಮಿಃ ಜಲಂ ನೈವ ನ ತೇಜೋ ನ ಚ ವಹ್ನಿಃ ।

ಆಕಾಶಂ ನ ಚ ಸೂರ್ಯೋ ನ ಚ ಚಂದ್ರಮಾ ಇಂದ್ರಯೋ ।
ನ ಚ ಬ್ರಹ್ಮಾ ನ ಚೋ ವಿಷ್ಣುಃ ನ ಚ ನಕ್ಷತ್ರತಾರಕಾಃ ।
ಏಕಮೇಕಂ ಪರಂ ನಾಸ್ತಿ ಅಖಂಡಿತ ಖಂಡೋದಯಂ
ಸರ್ವಶೂನ್ಯಂ ನಿರಾಲಂಬಂ ಸ್ವಯಂ ಲಿಂಗಮಯಂ ಪರಂ ॥''
ಇಂತೆಂದುದಾಗಿ,
ಇದಕ್ಕೆ ಮಹಾಗಮಸಾರೇ :
''ಊರ್ಧ್ವಶೂನ್ಯಂ ಅಧಃಶೂನ್ಯಂ ಮಧ್ಯಶೂನ್ಯಂ ನಿರಾಮಯಂ ।
ಸರ್ವಶೂನ್ಯಂ ನಿರಾಕಾರಂ ಸ್ವಯಂಭೂ ಲಿಂಗಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ ಆದಿನಾರಾಯಣ ಉವಾಚ :
''ನಮಸ್ತೇ ಜ್ಞಾನಲಿಂಗಾಯ ಶಿವಲಿಂಗಾಯ ಲಿಂಗಿನೇ ।
ನಮಸ್ತೇ ಗೂಢಲಿಂಗಾಯ ವರಲಿಂಗಾಯ ಲಿಂಗಿನೇ ॥
ಜಗತ್ಕಾರಣಲಿಂಗಾಯ ಜಗತಾಂ ಪತಯೇ ನಮಃ ।
ಆವಯೋಃ ಪತಯೇ ನಿತ್ಯಂ ಪತೀನಾಂ ಪತಯೇ ನಮಃ ॥
ಅನಾದಿಮೂಲಸಂಸಾರರೋಗವೈದ್ಯಾಯ ಶಂಭವೇ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಪ್ರಳಯಾಂಬುಧಿಸಂಸ್ಥಾಯ ಪ್ರಳಯೋತ್ಪತ್ತಿಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಜ್ವಾಲಾಮೂಲಹೃತಲಿಂಗಾಯ ಜ್ವಲನಸ್ತಂಬರೂಪಿಣೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಆದಿಮಧ್ಯಾಂತಶೂನ್ಯಾಯ ಅಂಬಕಸ್ಯಾಪಿ ಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ನಿಷ್ಕಳಾಯ ವಿಶುದ್ಧಾಯ ನಿತ್ಯಾನಂದಸ್ಯ ಹೇತವೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ನಿರ್ವಿಕಾರಾಯ ನಿತ್ಯಾಯ ಸತ್ಯಾಯ ಪರಮಾತ್ಮನೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥
ಓಂಕಾರ ಶಾಂತಾಯ ಸೂಕ್ಷ್ಮಾಯ ಸ್ತ್ರೀಪುಂಸಾಯಾತ್ಮರೂಪಿಣೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ।
ಲೀಲಾತ್ತಂಚ ದ್ವಯೋರ್ಮಧ್ಯೇ ಸ್ಥಿತಾಯಾತ್ಮರೂಪಿಣೇ ।
ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ ॥''
ಇಂತೆಂದುದಾಗಿ,
ಇದಕ್ಕೆ ಶ್ರೀಮಹಾದೇವ ಉವಾಚ :
''ವಾಚಾತೀತಂ ಮನೋತೀತಂ ವರ್ಣಾತೀತಂ ಪರಂ ಶಿವಃ ।
ಸರ್ವಶೂನ್ಯ ನಿರಾಕಾರಂ ನಿರಾಲಂಬಸ್ಯ ಲಿಂಗಯೋ ॥''

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೪೦೩ ||

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಲಿಂಗೋತ್ಪತ್ಯವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಿ, ನಮ್ಮ ಅಖಂಡಜ್ಞಾನದೃಕ್ಕಿನಿಂದ ತೋರಲು, ನಿಮ್ಮ ಕಾರುಣ್ಯದ ದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಮುಂದೆ ಸಾದಾಖ್ಯ ತತ್ವಂಗಳುತ್ಪತ್ಯವ ನಿರೂಪಿಸೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದನದೆಂತೆಂದಡೆ :

೪೦೪

ಇನ್ನು ಆ ಅಖಂಡ ಪರಿಪೂರ್ಣ ಅಪ್ರಮಾಣ ಅಗೋಚರ
ಅಪ್ರಮೇಯ ಅವ್ಯಕ್ತ ಅನಂತತೇಜ ಅನಂತಪ್ರಚಯ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹ
ಮಹಾಘನಲಿಂಗದಲ್ಲಿ ವಿಶ್ವತೋಮುಖ, ವಿಶ್ವತೋಚಕ್ಷು, ವಿಶ್ವತೋ ಹಸ್ತ
ವಿಶ್ವತೋಪಾದ, ವಿಶ್ವತೋಬಾಹುವನುಳ್ಳ
ಅನಾದಿಸದಾಶಿವತತ್ವ ಉತ್ಪತ್ಯವಾಯಿತ್ತು.
ಆ ಅನಾದಿಸದಾಶಿವತತ್ವದಲ್ಲಿ ಅನೇಕಮುಖ, ಅನೇಕಚಕ್ಷು,
ಅನೇಕ ಬಾಹು, ಅನೇಕ ಪಾದವನುಳ್ಳ
ಅನಾದಿ ಈಶ್ವರತತ್ವ ಉತ್ಪತ್ಯವಾಯಿತ್ತು.
ಆ ಅನಾದಿ ಈಶ್ವರತತ್ವದಲ್ಲಿ
ಸಹಸ್ರ ಶಿರ, ಸಹಸ್ರ ಬಾಹು, ಸಹಸ್ರ ಪಾದವನುಳ್ಳ
ಅನಾದಿ ಮಹೇಶ್ವರತತ್ವ ಉತ್ಪತ್ಯವಾಯಿತ್ತು.
ಆ ಅನಾದಿ ಮಹೇಶ್ವರತತ್ವದಲ್ಲಿ
ತ್ರಿಪಂಚಮುಖ, ತ್ರಿದಶಭುಜ, ತ್ರಿದಶಪಾದವನುಳ್ಳ
ಆದಿಸದಾಶಿವತತ್ವ ಉತ್ಪತ್ಯವಾಯಿತ್ತು.
ಆ ಆದಿಸದಾಶಿವತತ್ವದಲ್ಲಿ
ಷಡ್ವಕ್ತ್ರ ದ್ವಾದಶಭುಜ ತ್ರಿಪಾದವನುಳ್ಳ
ಆದಿ ಈಶ್ವರತತ್ವ ಉತ್ಪತ್ಯವಾಯಿತ್ತು.
ಆ ಆದಿ ಈಶ್ವರತತ್ವದಲ್ಲಿ
ಪಂಚವಿಂಶತಿಮುಖ ಪಂಚದಶಭುಜ ಪಂಚದಶಪಾದವನುಳ್ಳ
ಆದಿಮಹೇಶ್ವರತತ್ವ ಉತ್ಪತ್ಯವಾಯಿತ್ತು.
ಆ ಆದಿಮಹೇಶ್ವರತತ್ವದಲ್ಲಿ
ಪಂಚಮುಖ ದಶಭುಜವನುಳ್ಳ
ಸದಾಶಿವತತ್ವ ಉತ್ಪತ್ಯವಾಯಿತ್ತು ನೋಡಾ,
ಇದಕ್ಕೆ **ಅತಿ ಮಹಾಗಮೇ :**

''ಅಖಂಡಲಿಂಗಸಂಭೂತಾ ಅನಾದಿ ಸಾದಾಖ್ಯಯುತೌ ।
ವಿಶ್ವತೋಮುಖ ತತ್ವೇ ಚ ಅನಾದಿ ಈಶ್ವರೋದ್ಭವಾ ॥
ಅನಾದಿ ಈಶ್ವರ ತತ್ವೇ ಚ ಅನಾದಿ ಮಾಹೇಶ್ವರೋ ಭವೇತ್ ।
ಅನಾದಿ ಮಾಹೇಶ್ವರ ಸಂಭೂತೇ ಆದಿ ಸದಾಶಿವಾಯುತೌ ॥
ಅನಾದಿಸಾದಾಖ್ಯ ತತ್ವೇ ಚ ಆದಿ ಈಶ್ವರೋದ್ಭವಂ ಸದಾ ।
ಆದಿ ಈಶ್ವರತತ್ವೇ ಚ ಆದಿ ಮಹೇಶ್ವರೋ ಭವೇತ್ ॥
ಆದಿ ಮಹೇಶ್ವರ ಸಂಭೂತೌ ಶಿವಃ ಸದಾಶಿವಯುತೌ ।
ಇತಿ ತತ್ವೋದ್ಭವಂ ಜ್ಞಾತುಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೪ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ಅನಾದಿ ಸದಾಶಿವತತ್ವ ಮೊದಲಾಗಿ, ಸದಾಶಿವತತ್ವ ಕಡೆಯಾಗಿ ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು, ನಿಮ್ಮ ಕಾರುಣ್ಯದ ದೃಕ್ಕಿನಿಂದ ಕಂಡು ಸುಖಿಯಾದೆನು. ಮುಂದೆ ಅಷ್ಟತನು ಮೂರ್ತಿಗಳ ಉತ್ಪತ್ಯವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೦೫

ಪಂಚಮುಖ ದಶಭುಜವನುಳ್ಳ ಸದಾಶಿವನ ನಿರ್ಭಾವಮುಖದಲ್ಲಿ
ಆತ್ಮನುತ್ಪತ್ಯವಾಯಿತ್ತು.
ಆ ಸದಾಶಿವನ ಈಶಾನಮುಖದಲ್ಲಿ ಆಕಾಶ ಉತ್ಪತ್ಯವಾಯಿತ್ತು.
ಆ ಸದಾಶಿವನ ತತ್ಪುರುಷಮುಖದಲ್ಲಿ ವಾಯು ಉತ್ಪತ್ಯವಾಯಿತ್ತು.
ಆ ಸದಾಶಿವನ ಅಘೋರಮುಖದಲ್ಲಿ ಅಗ್ನಿ ಉತ್ಪತ್ಯವಾಯಿತ್ತು.
ಆ ಸದಾಶಿವನ ವಾಮದೇವಮುಖದಲ್ಲಿ ಅಪ್ಪು ಉತ್ಪತ್ಯವಾಯಿತ್ತು.
ಆ ಸದಾಶಿವನ ಸದ್ಯೋಜಾತಮುಖದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು,
ಆ ಸದಾಶಿವನ ಮನಸ್ಸಿನಲ್ಲಿ ಚಂದ್ರನುತ್ಪತ್ಯವಾಯಿತ್ತು.
ಆ ಸದಾಶಿವನ ಚಕ್ಷುವಿನಲ್ಲಿ ಸೂರ್ಯನುತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಈಶ್ವರ** ಉವಾಚ :
''ಸದ್ಯೋಜಾತ ಸ್ತಥಾ ಭೂಮಿಃ ವಾಮದೇವೋ ಭವೇಜ್ಜಲಂ ।
ಅಘೋರೋ ವಹ್ನಿರಿತ್ಯುಕ್ತಂ ತತ್ಪುರುಷಾದ್ವಾಯುರುಚ್ಯತೇ ।
ಈಶಾನಂ ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ।
ಚಂದ್ರಮಾ ಮನಸೋ ಜಾತಃ ಚಕ್ಷುಃ ಸೂರ್ಯೋ ಅಜಾಯತ ।
ಆತ್ಮಾ ಗುಹ್ಯ ಮುಖಾಜ್ಜಾತ ಇತಿ ಭೇದಂ ವರಾನನೇ ॥ ''
ಇಂತೆಂದುದಾಗಿ,
ಇದಕ್ಕೆ **ಶ್ರೀಮಹಾದೇವ** ಉವಾಚ :

''ಭೂಜಲಾಗ್ನಿಮರುದ್ವ್ಯೋಮ ಭಾಸ್ಕರೋ ಶಶಿಚೇತನಃ ।
ದಿವಿ ಪ್ರಕಾಶತೇ ಸೂರ್ಯಃ ರಾತ್ರೌ ಚಂದ್ರಃ ಪ್ರಕಾಶತೇ ।
ಸರ್ವಚೇತನಮಾತ್ಮಾನಾಂ ಶಿವಃ ಸೋಽಪ್ಯಷ್ಟಮೂರ್ತಯೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೫ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ನಿಮ್ಮ ಮಹಾವಾಕ್ಯದಿಂದ ಅಷ್ಟತನುಮೂರ್ತಿ ಉತ್ಪತ್ಯವ ಕಂಡು ಸುಖಿಯಾದೆನು. ಮುಂದೆ ದ್ವಿದಶಚಕ್ರ ಉತ್ಪತ್ಯವಂ ನಿರೂಪಿಸೆಂದು ಬಿನ್ನವಿಸಲು ಆ ಸದ್ಗುರುಸ್ವಾಮಿ ನಿರೂಪಿಸಿದರ ದೆಂತೆಂದಡೆ :

೪೦೬

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ನೆನಹುಮಾತ್ರದಲ್ಲಿಯೇ ಅಣುಚಕ್ರ ಉತ್ಪತ್ಯವಾಯಿತ್ತು.
ಆ ಅಣುಚಕ್ರದ ನೆನಹುಮಾತ್ರದಲ್ಲಿಯೇ
ಪಶ್ಚಿಮಚಕ್ರ ಉತ್ಪತ್ಯವಾಯಿತ್ತು.
ಆ ಪಶ್ಚಿಮಚಕ್ರದ ನೆನಹುಮಾತ್ರದಲ್ಲಿಯೇ
ಶಿಖಾಚಕ್ರ ಉತ್ಪತ್ಯವಾಯಿತ್ತು.
ಆ ಶಿಖಾಚಕ್ರದ ನೆನಹುಮಾತ್ರದಲ್ಲಿಯೇ
ಬ್ರಹ್ಮಚಕ್ರ ಉತ್ಪತ್ಯವಾಯಿತ್ತು.
ಆ ಬ್ರಹ್ಮಚಕ್ರದ ನೆನಹುಮಾತ್ರದಲ್ಲಿಯೇ
ಆಜ್ಞಾಚಕ್ರ ಉತ್ಪತ್ಯವಾಯಿತ್ತು.
ಆ ಆಜ್ಞಾಚಕ್ರದ ನೆನಹುಮಾತ್ರದಲ್ಲಿಯೇ
ವಿಶುದ್ಧಿಚಕ್ರ ಉತ್ಪತ್ಯವಾಯಿತ್ತು.
ಆ ವಿಶುದ್ಧಿಚಕ್ರದ ನೆನಹುಮಾತ್ರದಲ್ಲಿಯೇ
ಅನಾಹತಚಕ್ರ ಉತ್ಪತ್ಯವಾಯಿತ್ತು.
ಆ ಅನಾಹತಚಕ್ರದ ನೆನಹುಮಾತ್ರದಲ್ಲಿಯೇ
ಮಣಿಪೂರಕಚಕ್ರ ಉತ್ಪತ್ಯವಾಯಿತ್ತು.
ಆ ಮಣಿಪೂರಕಚಕ್ರದ ನೆನಹುಮಾತ್ರದಲ್ಲಿಯೇ
ಸ್ವಾಧಿಷ್ಠಾನಚಕ್ರ ಉತ್ಪತ್ಯವಾಯಿತ್ತು.
ಆ ಸ್ವಾಧಿಷ್ಠಾನಚಕ್ರದ ನೆನಹುಮಾತ್ರದಲ್ಲಿಯೇ
ಆಧಾರಚಕ್ರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ಈಶ್ವರೋವಾಚ :
''ಓಂಕಾರಹೃದಯಜ್ಞಾನಾತ್ ಅಣುಚಕ್ರಂ ಚ ಜಾಯತೇ ।
ಅಣುಚಕ್ರಮನೋ ಜ್ಞಾನಾತ್ ಪಶ್ಚಿಮಸ್ಯ ಸಮುದ್ಭವಃ ॥

ಪಶ್ಚಿಮಚಕ್ರಚಿಂತಾಯಾಂ ಶಿಖಾಚಕ್ರಂ ಚ ಜಾಯತೇ ।
ಶಿಖಾನಾಮಸ್ಯ ಚಿಂತಾಯಾಂ ಬ್ರಹ್ಮಚಕ್ರಸಮುದ್ಭವಃ ॥
ಬ್ರಹ್ಮಚಕ್ರಸ್ಯ ಚಿಂತಾಯಾಂ ಆಜ್ಞಾ ನಾಮ ಸಮುದ್ಭವಃ ।
ಆಜ್ಞಾನಾಮಸ್ಯ ಚಿಂತಾಯಾಂ ವಿಶುದ್ಧೋ ನಾಮ ಜಾಯತೇ ॥
ವಿಶುದ್ಧಚಕ್ರ ಚಿಂತಾಯಾಂ ಅನಾಹತಚಕ್ರೋ ಭವೇತ್ ।
ಅನಾಹತಸ್ಯ ಚಿಂತಾಯಾಂ ಮಣಿಪೂರಂ ಚ ಜಾಯತೇ ॥
ಮಣಿಪೂರ ಮನೋ ಜ್ಞಾನಾತ್ ಸ್ವಾಧಿಷ್ಠಾನ ಸಮುದ್ಭವಃ ।
ಸ್ವಾಧಿಷ್ಠಾನಮನೋ ಜ್ಞಾನಾತ್ ಆಧಾರಂ ಚಾಪಿ ಜಾಯತೇ ।
ಇತಿ ಚಕ್ರೋದ್ಭವಜ್ಞಾನಂ ದುರ್ಲಭಂ ಕಮಲಾನನೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೬ ॥

೪೦೭

ಇನ್ನೊಂದು ಪ್ರಕಾರದ ಚಕ್ರೋತ್ಪತ್ಯವೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ಪಶ್ಚಿಮಭಾಗದಲ್ಲಿ ಅಣುಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ದಕ್ಷಿಣಭಾಗದಲ್ಲಿ ಪಶ್ಚಿಮಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ವಾಮಭಾಗದಲ್ಲಿ ಶಿಖಾಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಪೂರ್ವಭಾಗದಲ್ಲಿ ಬ್ರಹ್ಮಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಹೃದಯದಲ್ಲಿ ಕೋದಂಡಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಜ್ಯೋತಿರೂಪದಲ್ಲಿ ಆಜ್ಞಾಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ದಕ್ಷಿಣಾಕಾರದಲ್ಲಿ ವಿಶುದ್ಧಿಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಾಕಾರದಲ್ಲಿ ಅನಾಹತಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಮಣಿಪೂರಕಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ಸ್ವಾಧಿಷ್ಠಾನಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಆಧಾರಚಕ್ರ ಉತ್ಪತ್ಯವಾಯಿತ್ತು.
ಆ ಪ್ರಣವದ ಮಹಾಪ್ರಕಾಶದಲ್ಲಿ ಪರಚಕ್ರ ಮೊದಲಾಗಿ
ನಿಷ್ಕಲಚಕ್ರಕಡೆಯಾಗಿ
ನವಚಕ್ರಂಗಳುತ್ಪತ್ಯವಾಯಿತ್ತು ನೋಡಾ.
ಇದಕ್ಕೆ ಶ್ರೀಮಹಾದೇವ ಉವಾಚ :
''ಓಂಕಾರಪಶ್ಚಿಮಾಂಗತ್ವೇ ಅಣುಚಕ್ರಂ ಚ ಜಾಯತೇ ।
ಓಂಕಾರ ದಕ್ಷಿಣೇ ಭಾಗೇ ಪಶ್ಚಿಮಂ ಚೋದ್ಭವಂ ಸದಾ ॥
ಓಂಕಾರ ವಾಮಭಾಗೇ ಚ । ಶಿಖಾಚಕ್ರಂ ಚ ಜಾಯತೇ ।
ಓಂಕಾರಪೂರ್ವಭಾಗೇ ತು ಬ್ರಹ್ಮಚಕ್ರಸಮುದ್ಭವಃ ॥

ಓಂಕಾರಹೃದಯಂಚೈವ ಕೋದಂಡಚಕ್ರೋದ್ಭವಃ ।
ಓಂಕಾರಜ್ಯೋತಿರೂಪೇ ಚ ಆಜ್ಞಾಚಕ್ರೇಷು ಜಾಯತೇ ॥
ಓಂಕಾರದರ್ಪಣಾಕಾರೇ ವಿಶುದ್ಧಿ ಚಕ್ರಸಮುದ್ಭವಃ ।
ಓಂಕಾರ ಅರ್ಧಚಂದ್ರೇಶ್ಚ ಅನಾಹತಚಕ್ರೋ ಭವೇತ್ ॥
ಓಂಕಾರಕುಂಡಲಾಕಾರೇ ಮಣಿಪೂರಂ ಚ ಜಾಯತೇ ।
ಓಂಕಾರದಂಡರೂಪೇ ಚ ಸ್ವಾಧಿಷ್ಠಾನಂ ಚ ಜಾಯತೇ ॥
ಓಂಕಾರತಾರಕಾರೂಪೇ ಆಧಾರಂ ಚಾಪಿ ಜಾಯತೇ ।
ಓಂಕಾರಪ್ರಭವಂಚೈವ ನವಚಕ್ರಂ ಚ ಜಾಯತೇ ।
ಇತಿ ಚಕ್ರಸಮುತ್ಪನ್ನಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೭ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ದ್ವಿದಶಚಕ್ರಂಗಳುತ್ಪತ್ಯವ ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು, ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಮಹಾನುಭಾವ ಸುಖಿಯಾದೆನು. ದ್ವಿದಶ ಚಕ್ರಂಗಳ ನ್ಯಾಸಸ್ಥಲವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೦೮

ಗುದಸ್ಥಾನದಲ್ಲಿ ಆಧಾರಚಕ್ರ ಉತ್ಪತ್ಯವಾಯಿತ್ತು.
ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ ನ್ಯಾಸವಾಗಿಹುದು.
ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ ನ್ಯಾಸವಾಗಿಹುದು.
ಹೃದಯಸ್ಥಾನದಲ್ಲಿ ಅನಾಹತಚಕ್ರ ನ್ಯಾಸವಾಗಿಹುದು.
ಕಂಠಸ್ಥಾನದಲ್ಲಿ ವಿಶುದ್ಧಿಚಕ್ರ ನ್ಯಾಸವಾಗಿಹುದು.
ಭ್ರೂಮಧ್ಯದಲ್ಲಿ ಆಜ್ಞಾಚಕ್ರ ನ್ಯಾಸವಾಗಿಹುದು.
ಆ ಆಜ್ಞಾಚಕ್ರದಮೇಲೆ ನಿಷಾದಚಕ್ರ ನ್ಯಾಸವಾಗಿಹುದು.
ಆ ನಿಷಾದಚಕ್ರದಮೇಲೆ ಸೃಷ್ಟಿಚಕ್ರ ನ್ಯಾಸವಾಗಿಹುದು.
ಬ್ರಹ್ಮರಂಧ್ರದಲ್ಲಿ ಬ್ರಹ್ಮಚಕ್ರ ನ್ಯಾಸವಾಗಿಹುದು.
ಶಿಖಾಗ್ರದಲ್ಲಿ ಶಿಖಾಚಕ್ರ ನ್ಯಾಸವಾಗಿಹುದು.
ಪಶ್ಚಿಮದಲ್ಲಿ ಪಶ್ಚಿಮಚಕ್ರ ಉತ್ಪತ್ಯವಾಯಿತ್ತು.
ಆ ಪಶ್ಚಿಮಚಕ್ರದಮೇಲೆ ಅಣುಚಕ್ರ ನ್ಯಾಸವಾಗಿಹುದು.
ಆ ಅಣುಚಕ್ರದಮೇಲೆ ನಿಃಕಳಚಕ್ರ ನ್ಯಾಸವಾಗಿಹುದು.
ಆ ನಿಷ್ಕಳಚಕ್ರದಮೇಲೆ ನಿರಾಳಚಕ್ರ ನ್ಯಾಸವಾಗಿಹುದು.
ಆ ನಿರಾಳಚಕ್ರದಮೇಲೆ ಸುರಾಳಚಕ್ರ ನ್ಯಾಸವಾಗಿಹುದು.
ಆ ಸುರಾಳಚಕ್ರದಮೇಲೆ ಕಳಾಚಕ್ರ ನ್ಯಾಸವಾಗಿಹುದು.
ಆ ಕಳಾಚಕ್ರದಮೇಲೆ ಬಿಂದುಚಕ್ರ ನ್ಯಾಸವಾಗಿಹುದು.

ಆ ಬಿಂದುಚಕ್ರದಮೇಲೆ ನಾದಚಕ್ರ ನ್ಯಾಸವಾಗಿಹುದು.
ಆ ನಾದಚಕ್ರದಮೇಲೆ ಗುರುಚಕ್ರ ನ್ಯಾಸವಾಗಿಹುದು.
ಆ ಗುರುಚಕ್ರದಮೇಲೆ ಚರಚಕ್ರ ನ್ಯಾಸವಾಗಿಹುದು.
ಆ ಚರಚಕ್ರದಮೇಲೆ ಪರಚಕ್ರ ನ್ಯಾಸವಾಗಿಹುದು ನೋಡಾ.
ಇದಕ್ಕೆ **ಈಶ್ವರ ಉವಾಚ** :
''ಆಧಾರಂ ಚ ಗುದಸ್ಥಾನೇ ಸ್ವಾಧಿಷ್ಠಾ ಲಿಂಗಕ್ಷೇತ್ರಕೇ ।
ಮಣಿಪೂರಂ ಚ ನಾಭೌ ಚ ಹೃದಿಸ್ಥಾನೇ ಚ ಅನಾಹತಂ ।
ವಿಶುದ್ಧಾ ಕಂಠದೇಶೇ ಚ ಭ್ರೂಮಧ್ಯೇ ಆಜ್ಞಾಚಕ್ರಕಂ ।
ನಿಷಾಧೇ ಸೃಷ್ಟಿಚಕ್ರಕಂ ಪಶ್ಚಿಮಾದಿ ಪರಾತ್ತಂಚ ।
ದಶಚಕ್ರಂ ನಿರಾಶ್ರಯಾಃ । (?)
ಓಂಕಾರ ಹೃದಯಶ್ಚೈವಂ ಕೋದಂಡಚಕ್ರಮಾಶ್ರಿತಾಃ ।
ಇತಿ ಚಕ್ರನ್ಯಾಸಂ ಜ್ಞಾತುಂ ದುರ್ಲಭಂ ಕಮಲಾನನೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೦೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ದ್ವಿದಶಚಕ್ರಂಗಳ ನ್ಯಾಸವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಲು, ನಿಮ್ಮ ಸುಜ್ಞಾನದೃಕ್ಕಿನಿಂದ ಕಂಡು ಪರಮ ಸುಖಿಯಾದೆನು. ಮುಂದೆ ದ್ವಿದಶ ಪದ್ಮಂಗಳುತ್ಪತ್ಯನ್ಯಾಸಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ತಮ್ಮ ಸ್ವಾನುಭಾವದುದಯ ದಿಂದ ಕಂಡು ಪದ್ಮೋತ್ಪತ್ತಿನ್ಯಾಸವನು ಪ್ರಳಯಕಾಲ ರುದ್ರೋಪನಿಷದ್ವಾಕ್ಯ ಗಳಿಂದ ನಿರೂಪಿಸಿ ದರದೆಂತೆಂದಡೆ :

೪೦೯

ಪರಾಪರವಾಗಿಹ ಪರಬ್ರಹ್ಮದ ನೆನಹುಮಾತ್ರದಲ್ಲಿ
'ಮಹಾಕ್ಷಿತಿದಳಪದ್ಮಾವುದ್ಭವತಿ । ಓಂ ಪರಾಪರಾತ್ಮೋ ದೇವತಾ ।'
ಎಂದುದಾಗಿ,
ಆ ಪರಾಪರಕ್ಕೂ ಪರವಾಗಿಹ ಪರಬ್ರಹ್ಮದ ನೆನಹುಮಾತ್ರದಲ್ಲಿಯೇ
ಮಹಾಕ್ಷಿತಿದಳ ಪದ್ಮವುದ್ಭವಿಸಿ, ಪರಶಿವಚಕ್ರಮಂ ಮುಟ್ಟಿ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೦೯ ॥

೪೧೦

ಆ ಮಹಾಕ್ಷಿತಿದಳಪದ್ಮದಲ್ಲಿ ಕ್ಷಿತಿದಳಪದ್ಮಹುಟ್ಟಿ,
ಚರಚಕ್ರದಲ್ಲಿ ಅನಂತಕೋಟಿ ತಟಿತ್ಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೦ ॥

೪೧೧

ಆ ಕ್ಷಿತಿದಳಪದ್ಮದಲ್ಲಿ –
'ಕ್ಷೋಣಿದಳ ಪದ್ಮೋ ಭವತಿ । ಓಂ ಅಚಲಾತ್ಮೋ ದೇವತಾ ।'
ಎಂದುದಾಗಿ,
ಆ ಕ್ಷಿತಿದಳ ಪದ್ಮದಲ್ಲಿ ಕ್ಷೋಣಿದಳ ಪದ್ಮದಳ ಉದ್ಭವಿಸಿ
ಗುರುಚಕ್ರದಲ್ಲಿ ಮಹಾಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೧ ॥

೪೧೨

ಆ ಕ್ಷೋಣಿದಳಪದ್ಮದಲ್ಲಿ –
'ಪದ್ಮದಳ ಪದ್ಮೋಽದ್ಭವತಿ । ಓಂ ನಿರಂಜನಾತ್ಮಾ ದೇವತಾ।'
ಎಂದುದಾಗಿ, ಆ ಕ್ಷೋಣಿದಳಪದ್ಮದಲ್ಲಿ
ಪದ್ಮದಳಪದ್ಮ ಉದ್ಭವಿಸಿ ನಾದಚಕ್ರದಲ್ಲಿ
ಅನಂತಕೋಟಿ ಸೂರ್ಯಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೨ ॥

೪೧೩

ಆ ಪದ್ಮದಳಪದ್ಮದಲ್ಲಿ –
'ಮಹಾಖರ್ವದಳ ಪದ್ಮೋಽದ್ಭವತಿ । ಓಂ ನಿರಾಳಾತ್ಮಾ ದೇವತಾ ।'
ಎಂದುದಾಗಿ, ಆ ಪದ್ಮದಳಪದ್ಮದಲ್ಲಿ
ಮಹಾಖರ್ವದಳಪದ್ಮ ಉದ್ಭವಿಸಿ
ಬಿಂದುಚಕ್ರದಲ್ಲಿ ಅನಂತಕೋಟಿ ಚಂದ್ರಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೩ ॥

೪೧೪

ಆ ಮಹಾಖರ್ವದಳಪದ್ಮದಲ್ಲಿ –
'ಖರ್ವದಳ ಪದ್ಮೋಽದ್ಭವತಿ । ಓಂ ನಿರಾಮಯಾತ್ಮಾ ದೇವತಾ ।'
ಎಂದುದಾಗಿ, ಆ ಮಹಾಖರ್ವದಳಪದ್ಮದಲ್ಲಿ
ಖರ್ವದಳಪದ್ಮ ಉದ್ಭವಿಸಿ
ಕಲಾಚಕ್ರದಲ್ಲಿ ಪರಂಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೪ ॥

೪೧೫

ಆ ಖರ್ವದಳಪದ್ಮದಲ್ಲಿ
'ಅರ್ಬುದದಳ ಪದ್ಮೋಽದ್ಭವತಿ । ಓಂ ಮಹಾತ್ಮಾ ದೇವಾತಾ ।'
ಎಂದುದಾಗಿ, ಆ ಖರ್ವದಳಪದ್ಮದಲ್ಲಿ

ಅರ್ಬುದದಳಪದ್ಮ ಉದ್ಭವಿಸಿ
ಸುರಾಳಚಕ್ರದಲ್ಲಿ ಹಿರಣ್ಯಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೫ ॥

೪೧೬

ಆ ಅರ್ಬುದದಳಪದ್ಮದಲ್ಲಿ
'ಕೋಟಿದಳ ಪದ್ಮೋಽದ್ಭವತಿ । ಓಂ ಶಿವಾತ್ಮಾ ದೇವತಾ ।'
ಎಂದುದಾಗಿ, ಅರ್ಬುದದಳಪದ್ಮದಲ್ಲಿ
ಕೋಟಿದಳಪದ್ಮ ಉದ್ಭವಿಸಿ.
ನಿರಾಳಚಕ್ರದಲ್ಲಿ ಅನಂತಜ್ಯೋತಿಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೬ ॥

೪೧೭

ಆ ಕೋಟಿದಳಪದ್ಮದಲ್ಲಿ –
'ಲಕ್ಷದಳ ಪದ್ಮೋಽದ್ಭವತಿ । ಓಂ ನಿಷ್ಕಳಾತ್ಮಾ ದೇವತಾ ।'
ಎಂದುದಾಗಿ, ಆ ಕೋಟಿದಳಪದ್ಮದಲ್ಲಿ
ಅಕ್ಷದಳಪದ್ಮ ಉದ್ಭವಿಸಿ
ನಿಷ್ಕಳಚಕ್ರದಲ್ಲಿ ಸ್ಫಟಿಕಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೭ ॥

೪೧೮

ಆ ಲಕ್ಷದಳಪದ್ಮದಲ್ಲಿ –
'ತ್ರಿಸಹಸ್ರದಳ ಪದ್ಮೋಽದ್ಭವತಿ । ಓಂ ನಿರ್ಗುಣಾತ್ಮಾ ದೇವತಾ ।'
ಎಂದುದಾಗಿ, ಆ ಲಕ್ಷದಳ ಪದ್ಮದಲ್ಲಿ
ತ್ರಿಸಹಸ್ರದಳ ಪದ್ಮ ಉದ್ಭವಿಸಿ
ಅಣುಚಕ್ರದಲ್ಲಿ ಮಹಾತಮಂಧಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೮ ॥

೪೧೯

ಆ ತ್ರಿಸಹಸ್ರದಳಪದ್ಮದಲ್ಲಿ –
'ಏಕದಳ ಪದ್ಮೋಽದ್ಭವತಿ । ಓಂ ಸರ್ವಾತ್ಮಾ ದೇವತಾ ।'
ಎಂದುದಾಗಿ, ಆ ತ್ರಿಸಹಸ್ರದಳಪದ್ಮದಲ್ಲಿ
ಏಕದಳ ಪದ್ಮ ಉದ್ಭವಿಸಿ ಪಶ್ಚಿಮಚಕ್ರದಲ್ಲಿ
ಅಪ್ರದರ್ಶನವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೧೯ ॥

೪೨೦

ಆ ಏಕದಳಪದ್ಮದಲ್ಲಿ –
'ತ್ರಿದಳಪದ್ಮೋಽದ್ಭವತಿ । ಓಂ ವಿಶ್ವಾತ್ಮಾ ದೇವತಾ ।'
ಎಂದುದಾಗಿ, ಆ ಏಕದಳಪದ್ಮದಲ್ಲಿ
ತ್ರಿದಳಪದ್ಮ ಹುಟ್ಟಿ, ಶಿಖಾಚಕ್ರದಲ್ಲಿ
ಮಹಾಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೦ ॥

೪೨೧

ಆ ತ್ರಿದಳಪದ್ಮದಲ್ಲಿ –
'ಸಹಸ್ರದಳಪದ್ಮೋಽಭವತಿ । ಓಂ ಪರಮಾತ್ಮಾ ದೇವತಾ ।'
ಎಂದುದಾಗಿ, ಆ ತ್ರಿದಳಪದ್ಮದಲ್ಲಿ
ಸಹಸ್ರದಳಪದ್ಮ ಉದ್ಭವಿಸಿ
ಬ್ರಹ್ಮಚಕ್ರದಲ್ಲಿ ಜ್ಯೋತಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೧ ॥

೪೨೨

ಆ ಸಹಸ್ರದಳಪದ್ಮದಲ್ಲಿ –
'ಶತದಳಪದ್ಮೋಽದ್ಭವತಿ । ಸ್ವಯಮಾತ್ಮಾ ದೇವತಾ ।'
ಎಂದುದಾಗಿ, ಆ ಸಹಸ್ರದಳಪದ್ಮದಲ್ಲಿ ಶತದಳಪದ್ಮ ಉದ್ಭವಿಸಿ
ಸೃಷ್ಟಿಚಕ್ರದಲ್ಲಿ ಸಿಡಿಲೊಡೆದ ಬಯಲಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೨ ॥

೪೨೩

ಆ ಶತದಳಪದ್ಮದಲ್ಲಿ –
'ತ್ರಿವಿಂಶಚತುರ್ದಳ ಪದ್ಮೋಽದ್ಭವತಿ । ಓಂ ತತ್ವಾರ್ಥೋ ದೇವತಾ ।'
ಎಂದುದಾಗಿ, ಆ ಶತದಳಪದ್ಮದಲ್ಲಿ ಅರುವತ್ನಾಲ್ಕುದಳಪದ್ಮ ಉದ್ಭವಿಸಿ
ನಿಶಾದಚಕ್ರದಲ್ಲಿ ಎಳೆಮಿಂಚಿನ ವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೩ ॥

೪೨೪

ಆ ತ್ರಿವಿಂಶಚತುರ್ದಳಪದ್ಮದಲ್ಲಿ –
'ದ್ವಿದಳಪದ್ಮೋಽದ್ಭವತಿ । ಓಂ ಚಿತ್ಕಲಾತ್ಮಾ ದೇವತಾ ।'
ಎಂದುದಾಗಿ, ಆ ತ್ರಿವಿಂಶಚತುರ್ದಳ ಪದ್ಮದಲ್ಲಿ ದ್ವಿದಳಪದ್ಮ ಉದ್ಭವಿಸಿ,
ಆಜ್ಞಾಚಕ್ರದಲ್ಲಿ ಮಾಣಿಕ್ಯವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೪ ॥

೪೨೫

ಆ ದ್ವಿದಳಪದ್ಮದಲ್ಲಿ –
'ಷೋಡಶದಳ ಪದ್ಮೋऽದ್ಭವತಿ । ಓಂ ಕಲಾತ್ಮಾ ದೇವತಾ ।'
ಎಂದುದಾಗಿ, ಆ ದ್ವಿದಳಪದ್ಮದಲ್ಲಿ ಷೋಡಶದಳಪದ್ಮ ಉದ್ಭವಿಸಿ,
ವಿಶುದ್ಧಿಚಕ್ರದಲ್ಲಿ ಶ್ವೇತವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೫ ॥

೪೨೬

ಆ ಷೋಡಶದಳಪದ್ಮದಲ್ಲಿ –
'ದ್ವಾದಶದಳ ಪದ್ಮೋऽದ್ಭವತಿ । ಓ ಚಿದಾತ್ಮಾ ದೇವತಾ ।'
ಎಂದುದಾಗಿ, ಆ ಷೋಡಶದಳಪದ್ಮದಲ್ಲಿ ದ್ವಾದಶದಳಪದ್ಮ ಉದ್ಭವಿಸಿ,
ಅನಾಹತಚಕ್ರದಲ್ಲಿ ಕುಂಕುಮವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೬ ॥

೪೨೭

ಆ ದ್ವಾದಶದಳಪದ್ಮದಲ್ಲಿ –
'ದಶದಳಪದ್ಮೋऽದ್ಭವತಿ । ಓಂ ನಾದಾತ್ಮಾ ದೇವತಾ ।'
ಎಂದುದಾಗಿ, ಆ ದ್ವಾದಶದಳಪದ್ಮದಲ್ಲಿ ದಶದಳಪದ್ಮ ಉದ್ಭವಿಸಿ,
ಮಣಿಪೂರಕಚಕ್ರದಲ್ಲಿ ಕೃಷ್ಣವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೭ ॥

೪೨೮

ಆ ದಶದಳಪದ್ಮದಲ್ಲಿ –
'ಷಟ್‌ದಳಪದ್ಮೋऽದ್ಭವತಿ । ಓಂ ಅಂತರಾತ್ಮಾ ದೇವತಾ ।'
ಎಂದುದಾಗಿ, ಆ ದಶದಳಪದ್ಮದಲ್ಲಿ ಷಡುದಳಪದ್ಮ ಉದ್ಭವಿಸಿ
ಸ್ವಾಧಿಷ್ಠಾನಚಕ್ರದಲ್ಲಿ ಪಚ್ಚೆಯವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೮ ॥

೪೨೯

ಆ ಷಡುದಳಪದ್ಮದಲ್ಲಿ–
'ಚತುರ್ದಳಪದ್ಮೋऽದ್ಭವತಿ । ಓಂ ಆತ್ಮಾ ದೇವತಾ ।'
ಎಂದುದಾಗಿ, ಆ ಷಡುದಳಪದ್ಮದಲ್ಲಿ ಚತುರ್ದಳಪದ್ಮ ಉದ್ಭವಿಸಿ,
ಆಧಾರಚಕ್ರದಲ್ಲಿ ಅಗ್ನಿವರ್ಣವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೨೯ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿಯೇ ತ್ರಿದಶದಳಪದ್ಮ ಉತ್ಪತ್ತ್ಯ ನ್ಯಾಸಸ್ಥಲವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿರಲು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಮಹಾನುಭಾವಸುಖಿಯಾದೆನು. ಮುಂದೆ ತ್ರಿದಳ ಪದ್ಮಂಗಳ ಅಕ್ಷರ ಉತ್ಪತ್ತ್ಯ ನ್ಯಾಸಸ್ಥಲವ ನಿರೂಪಿಸೆಂದು ಬಿನ್ನೈಸಲು,ಆ ಸದ್ಗುರು ಸ್ವಾಮಿ ತಮ್ಮ ಸ್ವಾನುಭಾವಜ್ಞಾನದಿಂದ ಪ್ರಳಯಕಾಲರುದ್ರೋಪ ನಿಷದ್ವಾಕ್ಯಗಳಿಂದ ನಿರೂಪಿಸಿದರದೆಂತೆಂದಡೆ :

೪೩೦

ಪರಾಪರತತ್ವದಲ್ಲಿ –
'ಮಹಾಕ್ಷಿತಿ ಅಕ್ಷರೋ ಭವತಿ । ಓಂ ಪರಾಪರಾತ್ಮಾ ದೇವತಾ ।'
ಎಂದುದಾಗಿ, ಶ್ರುತಿ.
ಆ ಪರಾಪರತತ್ವದಲ್ಲಿ ಮಹಾಕ್ಷಿತಿ ಅಕ್ಷರೋತ್ಪತ್ತ್ಯವಾಗಿ
ಪರಮಚಕ್ರದ ಮಹಾಕ್ಷಿತಿದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩೦ ॥

೪೩೧

ಅಖಂಡ ಮಹಾತತ್ವದಲ್ಲಿ –
'ಕ್ಷಿತಿದಳಕ್ಷರೋ ಭವತಿ । ಓಂ ಅಖಂಡಾತ್ಮಾದೇವತಾ ।'
ಎಂದುದು ಶ್ರುತಿ.
ಆ ಅಖಂಡಮಹಾತತ್ವದಲ್ಲಿ ಅಕ್ಷರಂಗಳುತ್ಪತ್ತ್ಯವಾಗಿ
ಚರಚಕ್ರದ ಕ್ಷಿತಿದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩೧ ॥

೪೩೨

ಅಚಲತತ್ವದಲ್ಲಿ –
'ಕೋಣಿದಳಾಕ್ಷರೋ ಭವತಿ । ಓಂ ಅಚಲಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ಅಚಲತತ್ವದಲ್ಲಿ ಕ್ಷೋಣಿದಳಾಕ್ಷರ ಉತ್ಪತ್ತ್ಯವಾಗಿ
ಗುರುಚಕ್ರದ ಕ್ಷೋಣಿತದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩೨ ॥

೪೩೩

ನಿರಂಜನತತ್ವದಲ್ಲಿ –
'ಪದ್ಮದಳಾಕ್ಷರೋ ಭವತಿ । ಓಂ ನಿರಂಜನಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ನಿರಂಜನತತ್ವದಲ್ಲಿ ಪದ್ಮ ಅಕ್ಷರ ಉತ್ಪತ್ತ್ಯವಾಗಿ

ನಾದಚಕ್ರದ ಪದ್ಮದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೩೩ ||

೪೩೪

ನಿರಾಳತತ್ವದಲ್ಲಿ –
'ಮಹಾಖರ್ವದಳಾಕ್ಷರೋ ಭವತಿ । ಓಂ ನಿರಾಳಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ನಿರಾಳತತ್ವದಲ್ಲಿ ಮಹಾಖರ್ವದಳ ಅಕ್ಷರಂಗಳುತ್ಪತ್ಯವಾಗಿ
ಬಿಂದುಚಕ್ರದ ಮಹಾಖರ್ವದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೩೪ ||

೪೩೫

ನಿರಾಮಯತತ್ವದಲ್ಲಿ –
'ಖರ್ವದಳಾಕ್ಷರೋ ಭವತಿ । ಓಂ ನಿರಾಮಯಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ನಿರಾಮಯತತ್ವದಲ್ಲಿ ಖರ್ವದಳಾಕ್ಷರುತ್ಪತ್ಯವಾಗಿ
ಕಲಾಚಕ್ರದ ಖರ್ವದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೩೫ ||

೪೩೬

ಮಹಾತತ್ವದಲ್ಲಿ –
'ಅರ್ಬುದಾಕ್ಷರೋ ಭವತಿ । ಓಂ ಮಹಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ಮಹಾಜ್ಞಾನದಲ್ಲಿ ಅರ್ಬುದದಳಾಕ್ಷರುತ್ಪತ್ಯವಾಗಿ
ಸುರಾಳಚಕ್ರದ ಅರ್ಬುದದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೩೬ ||

೪೩೭

ಪರಶಿವತತ್ವದಲ್ಲಿ –
'ಕೋಟಿದಳಾಕ್ಷರೋ ಭವತಿ । ಓಂ ಪರಶಿವಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ಪರಶಿವತತ್ವದಲ್ಲಿ ಕೋಟಿ ಅಕ್ಷರಂಗಳುತ್ಪತ್ಯವಾಗಿ
ನಿರಾಳಚಕ್ರದ ಕೋಟಿದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೪೩೭ ||

೪೩೮

ನಿಷ್ಕಳತತ್ವದಲ್ಲಿ –
'ಲಕ್ಷದಳಾಕ್ಷರೋ ಭವತಿ । ಓಂ ನಿಷ್ಕಳಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ನಿಷ್ಕಳತತ್ವದಲ್ಲಿ ಲಕ್ಷ ಅಕ್ಷರಂಗಳುತ್ಪತ್ಯವಾಗಿ
ನಿಷ್ಕಳಚಕ್ರದ ಲಕ್ಷದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩೮ ॥

೪೩೯

ನಿರ್ಗುಣತತ್ವದಲ್ಲಿ –
'ಶ್ರೀ ಸಹಸ್ರಾಕ್ಷರೋ ಭವತಿ । ಓಂ ನಿರ್ಗುಣಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ನಿರ್ಗುಣ ತತ್ವದಲ್ಲಿ ತ್ರಿಸಹಸ್ರಾಕ್ಷರ ಉತ್ಪತ್ಯವಾಗಿ
ಅಣುಚಕ್ರದ ತ್ರಿಸಹಸ್ರದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೩೯ ॥

೪೪೦

ಸರ್ವಾತ್ಮತತ್ವದಲ್ಲಿ –
'ಏಕಾಕ್ಷರೋ ಭವತಿ । ಓಂ ಸರ್ವಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ಸರ್ವಾತ್ಮತತ್ವದಲ್ಲಿ ಏಕಾಕ್ಷರ ಉತ್ಪತ್ಯವಾಗಿ,
ಪಶ್ಚಿಮಚಕ್ರದ ಏಕಾಕ್ಷರದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೦ ॥

೪೪೧

ವಿಶ್ವಾತ್ಮತತ್ವದಲ್ಲಿ –
'ಅಕ್ಷರತ್ರಯೋ ಭವತಿ । ಓಂ ವಿಶ್ವಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ವಿಶ್ವಾತ್ಮತತ್ವದಲ್ಲಿ ಅಕ್ಷರತ್ರಯ ಉತ್ಪತ್ಯವಾಗಿ
ಶಿಖಾಚಕ್ರದ ತ್ರಿದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೧ ॥

೪೪೨

ಪರತತ್ವದಲ್ಲಿ –
'ಸಹಸ್ರದಳಾಕ್ಷರೋ ಭವತಿ । ಓಂ ಪರಮಾತ್ಮಾ ದೇವತಾ ।'

ಎಂದುದು ಶ್ರುತಿ.
ಆ ಪರತತ್ವದಲ್ಲಿ ಸಹಸ್ರಾಕ್ಷರ ಉತ್ಪತ್ಯವಾಗಿ
ಬ್ರಹ್ಮಚಕ್ರದ ಸಹಸ್ರದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೨ ॥

೪೪೩

ಸ್ವಯಾತ್ಮತತ್ವದಲ್ಲಿ–
'ಶತದಳಾಕ್ಷರೋ ಭವತಿ । ಓಂ ಸ್ವಯಮಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ಸ್ವಯಾತ್ಮತತ್ವದಲ್ಲಿ ಶತಕ್ಷರ ಉತ್ಪತ್ಯವಾಗಿ
ಸುಷುಪ್ತಿಚಕ್ರದ ಶತದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೩ ॥

೪೪೪

ತತ್ವಾತ್ಮತತ್ವದಲ್ಲಿ–
'ಚೌಷಷ್ಠಿದಳಾಕ್ಷರೋ ಭವತಿ । ಓಂ ತತ್ವಾತ್ಮಾ ದೇವತಾ ।'
ಎಂದುದು ಶ್ರುತಿ.
ಆ ತತ್ವಾತ್ಮತತ್ವದಲ್ಲಿ ಚೌಷಷ್ಠಿ ಅಕ್ಷರಂಗಳುತ್ಪತ್ಯವಾಗಿ
ನಿಶಾದಚಕ್ರದ ಚೌಷಷ್ಠಿದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೪ ॥

೪೪೫

ಇದಕ್ಕೆ **ಈಶ್ವರ ಉವಾಚ** :
'ಮಹಾಕ್ಷಿತಿ ಅಕ್ಷರಾದಿ ಚತುಃಷಷ್ಠಿ ಅಕ್ಷರಾತ್ಮಕಂ ।
ಬಹುವಿಧಾತ್ಮಂ ನಿಜಾತ್ಮಂ ನ್ಯಾಸಂ ಗೋಪ್ಯಂ ವರಾನನೇ ॥'
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೪೫ ॥

೪೪೬

ಇನ್ನು ಆ ಅಖಂಡಜ್ಯೋತಿರ್ಮಯವಾಗಿಪ
ಗೋಳಕಾಕಾರ ಪ್ರಣವದ ತಾರಕಸ್ವರೂಪದಲ್ಲಿ ಅಕಾರ ಉತ್ಪತ್ಯವಾಯಿತ್ತು.
ಆ ಪ್ರಣಮದ ಕುಂಡಲಾಕಾರದಲ್ಲಿ ಉಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಮಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಚಕ್ರಾತೀತಾಗಮೇ** :
''ಓಂಕಾರ ತಾರಕಾರೂಪೇ ಅಕಾರಂ ಚ ಪ್ರಜಾಯತೇ ।
ಓಂಕಾರ ಕುಂಡಲಾಕಾರೇ ಉಕಾರಂ ಚ ಪ್ರಜಾಯತೇ ॥

ಓಂಕಾರ ಜ್ಯೋತಿರೂಪೇ ಚ ಮಕಾರಂ ಚಾಪಿ ಜಾಯತೇ ।
ಇತ್ಯಕ್ಷರತ್ರಯಂ ದೇವಿ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೪೬ ॥

೪೪೭

ಅಕಾರದಲ್ಲಿ ಪೃಥ್ವಿಯಗ್ನಿ ಋಗ್ವೇದ ಭೂಲೋಕ
ಬ್ರಹ್ಮನುತ್ಪತ್ಯ ಲಯ ನೋಡಾ.
ಆ ಉಕಾರದಲ್ಲಿ ಅಂತರಿಕ್ಷ ಯಜುರ್ವೇದ ವಾಯು
ಭುವರ್ಲೋಕ ವಿಷ್ಣು ಉತ್ಪತ್ಯ ಲಯ ನೋಡಾ.
ಆ ಮಕಾರದಲ್ಲಿ ದಿವಿ ಸೂರ್ಯ ಸಾಮವೇದ ಸ್ವರ್ಗಲೋಕ
ಮಹೇಶ್ವರನುತ್ಪತ್ಯ ಲಯ ನೋಡಾ.
ಇದಕ್ಕೆ ಓಂಕಾರೋಪನಿಷದಿ :
''ಪೃಥ್ವಿವ್ಯಗ್ನಿಃ ಋಗ್ವೇದೋ ಭವತೀತ್ಯೇವ ಪಿತಾಮಹಃ ।
ಅಕಾರೇ ತು ಲಯಂ ಪ್ರಾಪ್ತೇ ಷಷ್ಠಾದಶಪ್ರಣವಾಂಶಕೈಃ ॥
ಅಂತರಿಕ್ಷಂ ಯಜುರ್ವಾಯುಃ ಭೂರ್ವೋ ವಿಷ್ಣುಃ ಸನಾತನಃ ।
ಉಕಾರೇ ತು ಲಯಂ ಪ್ರಾಪ್ತೇ ಸಪ್ತದಶಕ ಪ್ರಣವಾಂಶಕೈಃ ॥
ದಿವಿ ಸೂರ್ಯಸ್ಸಾಮವೇದಃ ಸ್ಯೇರಿತ್ಯೇವಾ ಮಾಹೇಶ್ವರ ।
ಮಕಾರೇತು ಲಯಂ ಪ್ರಾಪ್ತೇ ಅಷ್ಟಾದಶಾಕ್ಷರಾಂಶಕೈಃ ॥
ಅಕಾರೇ ಚ ಉಕಾರೇ ಚ ಮಕಾರೇಚಾಕ್ಷರತ್ರಯಂ ।
ಇದಮೇಕಂ ಸಮುತ್ಪನ್ನಂ ಓಂ ಇತಿ ಜ್ಯೋತಿರೂಪಕಂ ॥
ಓಂಕಾರ ಪ್ರಭವಾ ವೇದಾಃ ಓಂಕಾರ ಪ್ರಭವಾ ಸ್ವರಾಃ ।
ಓಂಕಾರ ಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಓಮಿತ್ಯೇಕಾಕ್ಷರಂ ಬ್ರಹ್ಮ ಓಂಕಾರೋ ಪರಮೇಶ್ವರಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೪೭ ॥

೪೪೮

ಇನ್ನು ಆ ಪ್ರಣವದ ತತ್‌ಸ್ಥಾನವೆಂತೆಂದಡೆ :
ಪ್ರಥಮ ತಾರಕಸ್ವರೂಪವಾಗಿಹುದು.
ಎರಡನೆಯದು ದಂಡಸ್ವರೂಪವಾಗಿಹುದು.
ಮೂರನೆಯದು ಕುಂಡಲಾಕಾರವಾಗಿಹುದು.
ನಾಲ್ಕನೆಯದು ಅರ್ಧಚಂದ್ರಾಕಾರವಾಗಿಹುದು.
ಐದನೆಯದು ದರ್ಪಣಾಕಾರವಾಗಿಹುದು.
ಆರನೆಯದು ಜ್ಯೋತಿಸ್ವರೂಪವಾಗಿಹುದು ನೋಡಾ.

ಇದಕ್ಕೆ ಈಶ್ವರೋऽವಾಚ :
''ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡ ಉಚ್ಯತೇ ।
ತೃತೀಯಂ ಕುಂಡಲಾಕಾರಂ ಚತುರ್ಥಂ ಚಾರ್ಧಚಂದ್ರಕಂ ॥
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿಸ್ಸ್ವರೂಪಕಂ ।
ಇತಿ ಪ್ರಣವ ವಿಜ್ಞೇಯಂ ಏತದ್ಗೋಪ್ಯಂ ವರಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೪೮ ॥

೪೪೯

ಇನ್ನು ಆ ಪ್ರಣವದ ತಾರಕಾಸ್ವರೂಪ
ಕುಂಡಲಾಕಾರ ಅರ್ಧಚಂದ್ರಕ ದರ್ಪಣಾಕಾರ
ಜ್ಯೋತಿಸ್ವರೂಪದ ಕಾಂತಿಯದೆಂತೆಂದಡೆ :
ಆ ಪ್ರಣವದ ತಾರಕಾಸ್ವರೂಪವು
ಅರುವತ್ತುನೂರುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹುದು ನೋಡಾ.
ಆ ಪ್ರಣವದ ದಂಡಸ್ವರೂಪವು
ಎಪ್ಪತ್ತುನೂರುಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವಾಗಿಹುದು.
ಆ ಪ್ರಣವದ ಕುಂಡಲಾಕಾರವು
ಎಂಬತ್ತುನೂರುಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವಾಗಿಹುದು.
ಆ ಪ್ರಣವದ ಅರ್ಧಚಂದ್ರಕಸ್ವರೂಪವು
ತೊಂಬತ್ತುನೂರುಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವಾಗಿಹುದು.
ಆ ಪ್ರಣವದ ದರ್ಪಣಾಕಾರವು
ಸಾವಿರದ ನೂರುಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವಾಗಿಹುದು.
ಆ ಪ್ರಣವದ ಜ್ಯೋತಿಸ್ವರೂಪವು
ಅನೇಕಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೪೯ ॥

೪೫೦

ಇನ್ನು ಅತಿ ಸೂಕ್ಷ್ಮಪಂಚಾಕ್ಷರದುತ್ಪತ್ಯವದೆಂತೆಂದಡೆ :
ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ನಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ಮಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಶಿಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ವಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಯಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ

ಚಿದಾತ್ಮ ಪರಮಾತ್ಮರುತ್ಪತ್ಯವಾದರು ನೋಡಾ,
ಇದಕ್ಕೆ **ಚಿತ್ಪಿಂಡಾಗಮೇ** :
''ಓಂಕಾರ ತಾರಕಾರೂಪೇ ನಕಾರಂ ಚಾತ್ರಜಾಯತೇ ।
ಓಂಕಾರ ದಂಡರೂಪೇ ಚ ಮಕಾರಂ ಚ ಸಮುದ್ಭವಂ ॥
ಓಂಕಾರ ಕುಂಡಲಾಕಾರೇ ಶಿಕಾರಂ ಜಾಯತೇ ತಥಾ ।
ಓಂಕಾರ ಅರ್ಧಚಂದ್ರೇ ಚ ವಕಾರಂಚೋದ್ಭವಂ ಸದಾ ।
ಓಂಕಾರ ದರ್ಪಣಾಕಾರೇ ಯಕಾರಂ ಚಾಪಿ ಜಾಯತೇ ।
ಓಂಕಾರ ಜ್ಯೋತಿರೂಪೇ ಚ ಚಿತ್ಪರಂ ಚೈವ ಜಾಯತೇ ॥
ಇತ್ಯಕ್ಷರಸಮುತ್ಪನ್ನಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೫೦ ॥

೪೫೧

ಇನ್ನು ಅತಿಸೂಕ್ಷ್ಮಪಂಚಾಕ್ಷರದ ಕಾಂತಿ,
ಅತಿಸೂಕ್ಷ್ಮಪಂಚಾಕ್ಷರದ ನೆಲೆ, ಚಿದಾತ್ಮ-ಪರಮಾತ್ಮನ ಕಾಂತಿ,
ಚಿದಾತ್ಮ-ಪರಮಾತ್ಮನ ನೆಲೆ ಅದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಆ ಪ್ರಣವದ ತಾರಕಸ್ವರೂಪದಲ್ಲಿ
ಅರುವತ್ತುನೂರುಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ನಕಾರವಿಹುದು ನೋಡಾ.
ಆ ಪ್ರಣವದ ದಂಡಕಸ್ವರೂಪದಲ್ಲಿ
ಎಪ್ಪತ್ತುನೂರುಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ಮಕಾರವಿಹುದು ನೋಡಾ.
ಆ ಪ್ರಣವದ ಕುಂಡಲಾಕಾರದಲ್ಲಿ
ಎಂಬತ್ತುನೂರುಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ಶಿಕಾರವಿಹುದು ನೋಡಾ.
ಆ ಪ್ರಣವದ ಅರ್ಧಚಂದ್ರಕದಲ್ಲಿ
ತೊಂಬತ್ತುನೂರುಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ವಕಾರವಿಹುದು ನೋಡಾ.
ಆ ಪ್ರಣವದ ದರ್ಪಣಾಕಾರದಲ್ಲಿ
ಸಾವಿರನೂರುಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ಯಕಾರವಿಹುದು ನೋಡಾ.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ
ಅನೇಕಕೋಟಿ ಸಿಡಿಲೊಡೆದ ಬಯಲಪ್ರಕಾಶವಾಗಿ
ಚಿದಾತ್ಮ-ಪರಮಾತ್ಮರಿಹರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೪೫೧ ॥

೪೫೨

ಇನ್ನು ಐವತ್ತೆರಡಕ್ಷರದ ಉತ್ಪತ್ಯವದೆಂತೆಂದಡೆ :
ಆ ಪ್ರಣವದ ತಾರಕಸ್ವರೂಪದಲ್ಲಿಹ ನಕಾರದಲ್ಲಿ ನಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿಹ ಮಕಾರದಲ್ಲಿ ಮಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿಹ ಶಿಕಾರದಲ್ಲಿ ಶಿಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿಹ ವಕಾರದಲ್ಲಿ ವಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರದಲ್ಲಿ
ಯಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನೀಲಕಂಠಸಾರೇ :
''ನಕಾರೇ ನಕಾರೋತ್ಪನ್ನಂ ಮಕಾರೇ ಮಕಾರಮುದ್ಭವಂ।
ಶಿಕಾರೇ ಶಿಕಾರಮುತ್ಪನ್ನಂ ವಕಾರೇ ವಕಾರಮುದ್ಭವಂ।
ಯಕಾರೇ ಯಕಾರಮುತ್ಪನ್ನಂ ಗುಹ್ಯಾದ್ಗುಹ್ಯಂ ಕಮಲಾನನೇ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೨ ॥

೪೫೩

ಇನ್ನು ಬೀಜಾಕ್ಷರಂಗಳ ನೆಲೆ ಅದೆಂತೆಂದಡೆ :
ಆ ಗೋಳಕಾಕಾರ ಪ್ರಣವದಲ್ಲಿ
ಪ್ರಣವ ಉತ್ಪತ್ಯವಾಗಿ ಆಜ್ಞಾಚಕ್ರಕ್ಕೆ ಬೀಜಾಕ್ಷರವಾಗಿಹುದು.
ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರದಲ್ಲಿ ಯಕಾರ ಉತ್ಪತ್ಯವಾಗಿ
ವಿಶುದ್ಧಿಚಕ್ರಕ್ಕೆ ಬೀಜಾಕ್ಷರವಾಗಿಹುದು.
ಆ ಪ್ರಣವದ ಅರ್ಧಚಂದ್ರಕದಲ್ಲಿಹ ವಕಾರದಲ್ಲಿ ವಕಾರ ಉತ್ಪತ್ಯವಾಗಿ
ಅನಾಹತಚಕ್ರಕ್ಕೆ ಬೀಜಾಕ್ಷರವಾಗಿಹುದು.
ಆ ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರದಲ್ಲಿ ಶಿಕಾರ ಉತ್ಪತ್ಯವಾಗಿ
ಮಣಿಪೂರಕಚಕ್ರಕ್ಕೆ ಬೀಜಾಕ್ಷರವಾಗಿಹುದು.
ಆ ಪ್ರಣವದ ದಂಡಕಸ್ವರೂಪದಲ್ಲಿಹ ಮಕಾರದಲ್ಲಿ ಮಕಾರ ಉತ್ಪತ್ಯವಾಗಿ
ಸ್ವಾಧಿಷ್ಠಾನಚಕ್ರಕ್ಕೆ ಬೀಜಾಕ್ಷರವಾಗಿಹುದು
ಆ ಪ್ರಣವದ ತಾರಕಸ್ವರೂಪದಲ್ಲಿಹ ನಕಾರದಲ್ಲಿ ನಕಾರ ಉತ್ಪತ್ಯವಾಗಿ
ಆಧಾರಚಕ್ರಕ್ಕೆ ಬೀಜಾಕ್ಷರವಾಗಿಹುದು ನೋಡಾ.
ಇದಕ್ಕೆ ಈಶ್ವರ ಉವಾಚ :
''ಆಧಾರೇ ಚ ನಕಾರಂ ಚ ಸ್ವಾಧಿಷ್ಠಾನೇ ಮಕಾರಕೇ।
ಶಿಕಾರಂ ಮಣಿಪೂರಂ ಚ ವಕಾರಂ ಚ ಅನಾಹತೇ।
ಯಕಾರಂ ಚ ವಿಶುದ್ಧಿಶ್ಚ ಆಜ್ಞಾ ಪ್ರಣವ ಏವ ಚ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೩ ॥

೪೫೪

ಇನ್ನು ಆ ಪ್ರಣಮದ
ಜ್ಯೋತಿಸ್ವರೂಪದಲ್ಲಿಹ ಚಿದಾತ್ಮ–ಪರಮಾತ್ಮನಲ್ಲಿ
ಜೀವಹಂಸ ಪರಮಹಂಸನುತ್ಪತ್ಯವಾಗಿ
ಆಜ್ಞಾಚಕ್ರದ ದ್ವಿದಳಪದ್ಮದಲ್ಲಿ ನ್ಯಾಸವಾಗಿಹುದು.
ವಿಶುದ್ಧಿಚಕ್ರದ ಯಕಾರ ಬೀಜಾಕ್ಷರದಲ್ಲಿ
ಅ ಆ ಇ ಈ ಉ ಊ ಋ ೠ ಲೃ ಲೄ ಏ ಐ ಓ ಔ ಅಂ ಅಃ ಎಂಬ
ಷೋಡಶಾಕ್ಷರಂಗಳುತ್ಪತ್ಯವಾಗಿ
ವಿಶುದ್ಧಿಚಕ್ರದ ಷೋಡಶದಳಪದ್ಮದಲ್ಲಿ ನ್ಯಾಸವಾಗಿಹುದು.
ಅನಾಹತಚಕ್ರದ ವಕಾರ ಬೀಜದಲ್ಲಿ
ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ
ದ್ವಾದಶಾಕ್ಷರಂಗಳುತ್ಪತ್ಯವಾಗಿ ಅನಾಹತಚಕ್ರದ
ದ್ವಾದಶದಶದಳಪದ್ಮದಲ್ಲಿ ನ್ಯಾಸವಾಗಿಹುದು.
ಮಣಿಪೂರಕಚಕ್ರದ ಶಿಕಾರ ಬೀಜದಲ್ಲಿ
ಡ ಢ ಣ ತ ಥ ದ ಧ ನ ಪ ಫ ಎಂಬ
ದಶಾಕ್ಷರಂಗಳುತ್ಪತ್ಯವಾಗಿ,
ಆ ಮಣಿಪೂರಕಚಕ್ರದ ದಶದಳಪದ್ಮದಲ್ಲಿ ನ್ಯಾಸವಾಗಿಹುದು.
ಸ್ವಾಧಿಷ್ಠಾನಚಕ್ರದ ಮಕಾರ ಬೀಜದಲ್ಲಿ
ಬ ಭ ಮ ಯ ರ ಲ ಎಂಬ ಷಡಕ್ಷರಂಗಳುತ್ಪತ್ಯವಾಗಿ
ಆ ಸ್ವಾಧಿಷ್ಠಾನಚಕ್ರದ ಷಡ್ದಳಪದ್ಮದಲ್ಲಿ ನ್ಯಾಸವಾಗಿಹುದು.
ಆಧಾರಚಕ್ರದ ನಕಾರ ಬೀಜದಲ್ಲಿ
ವ ಶ ಷ ಸ ಎಂಬ ಚತುರಾಕ್ಷರಂಗಳುತ್ಪತ್ಯವಾಗಿ
ಆ ಆಧಾರಚಕ್ರದ ಚತುರ್ದಳಪದ್ಮದಲ್ಲಿ ನ್ಯಾಸವಾಗಿಹುದು ನೋಡಾ.
**ಇದಕ್ಕೆ ಕಾಲಾಗ್ನಿರುದ್ರಸಂಹಿತಾಯಾಂ :**
''ಹಂ ಕ್ಷಂ ದ್ವಿವರ್ಣಕಂ ಚೈವ ಪರಮಾತ್ಮನಿ  ಜಾಯತೇ ।
ಹಂ ಕ್ಷಂ ದ್ವಿವರ್ಣಕಂ ಚೈವ ಜೀವಾತ್ಮನಿ ಚ ಜಾಯತೇ ॥
ಅಆ ಇಈ ಉಊ ವರ್ಣಂ ಚ ಋೠ ಲೃಲೄ ವರ್ಣಂ ವಿದುಃ ।
ಏ ಐ ಓ ಔ ಅಂ ಅಃ ವರ್ಣಂ ಯಕಾರಂ ಚಾಪಿ ಜಾಯತೇ ॥
ಕಖಗಘಙ ವರ್ಣಂ ಚ ಚಛಜಝಞ ವರ್ಣಕಂ ।
ಟಠ ದ್ವಿವರ್ಣಕಂ ಚೈವ ವಕಾರೇ ಜಾಯತೇ ಧ್ರುವಂ ॥
ಡಢಣ ತಥ ವರ್ಣಂ ಚ ದಧನ ಪಫ ವರ್ಣಕಂ ।
ಇತ್ಯೇತಿ ದಶವರ್ಣಾನಿ ಶಿಕಾರೇ ಚ ಸಮುದ್ಭವಾಃ ॥
ಬ ಭ ಮ ಯ ರ ವರ್ಣಂ ಚ ಲ ಏಕೋ ವರ್ಣಕಂ ತಥಾ ।
ಇತಿ ಷಡ್ವರ್ಣಕಂ ಚೈವ ಮಕಾರೇ ಚ ಸಜಾಯತೇ ।

ವಶಷಸ ಚತುರ್ವರ್ಣಂ ನಕಾರಂ ಚ ಸಜಾಯತೇ ।
ಇತಿ ವರ್ಣಾಕ್ಷರಂ ನ್ಯಾಸಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೪ ॥

೪೫೫

ಈ ಐವತ್ತೆರಡಕ್ಷರವ ಅರಿವಿಂದರಿದಡೆ ಅನೇಕ ಆಗಮಂಗಳು,
ಐವತ್ತೆರಡಕ್ಷರವೆ ಅನೇಕ ಪುರಾಣಂಗಳು,
ಐವತ್ತೆರಡಕ್ಷರವೇ ಅನೇಕ ವೇದಂಗಳು,
ಐವತ್ತೆರಡಕ್ಷರವೇ ಅನೇಕ ಶಾಸ್ತ್ರಂಗಳು,
ಆ ಐವತ್ತೆರಡಕ್ಷರವ ಅರಿವಿಂದರಿದಡೆ
ಐವತ್ತೆರಡಕ್ಷರವು ಆರಕ್ಷರವಾಯಿತ್ತು ನೋಡಾ
ಅಪ್ರಮಾಣಕೂಡಲಂಸಗಮದೇವಾ. ॥ ೪೫೫ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ದ್ವಿದಶದಳಾಕ್ಷರಂಗಳುತ್ಪತ್ಯ ನ್ಯಾಸವನು ನಿಮ್ಮಯ ಮಹಾವಾಕ್ಯಂಗಳಿಂದ ನಿರೂಪಿಸಲು, ನಿಮ್ಮ ಪರಮಜ್ಞಾನ ದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಮುಂದೆ ಷಡ್ವಿಧಮುಖಂಗಳುತ್ಪತ್ಯ, ನ್ಯಾಸ ಸ್ಥಲಂಗಳ ನಿರೂಪಿಸೆಂದೆನಲು, ಆ ಸದ್ಗುರುಸ್ವಾಮಿ ನಿರೂಪಿಸಿದರ ದೆಂತೆಂದಡೆ :

೪೫೬

ಆ ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ತಾರಕಸ್ವರೂಪದಲ್ಲಿ ಸದ್ಯೋಜಾತಮುಖ ಉತ್ಪತ್ಯವಾಯಿತ್ತು,
ಆ ಪ್ರಣವದ ದಂಡಕಸ್ವರೂಪದಲ್ಲಿ ವಾಮದೇವಮುಖ ಉತ್ಪತ್ಯವಾಯಿತ್ತು,
ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರಮುಖ ಉತ್ಪತ್ಯವಾಯಿತ್ತು,
ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖ ಉತ್ಪತ್ಯವಾಯಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನಮುಖ ಉತ್ಪತ್ಯವಾಯಿತ್ತು,
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ
ನಿರ್ಭಾವಮುಖ ಉತ್ಪತ್ಯವಾಯಿತ್ತು, ನೋಡಾ.
ಇದಕ್ಕೆ **ಈಶ್ವರೋऽವಾಚ-ಶಿವಧರ್ಮಸೂತ್ರೇ :**
''ಓಂಕಾರತಾರಕಸ್ವರೂಪೇ ಸದ್ಯೋಜಾತಂ ಚ ಜಾಯತೇ ।
ಓಂಕಾರದಂಡ ಸ್ವರೂಪೇ ವಾಮದೇವಂ ಚ ಜಾಯತೇ ॥
ಓಂಕಾರಕುಂಡಲಾಕಾರೇ ಅಘೋರಂ ಚಾಪಿ ಜಾಯತೇ ।
ಓಂಕಾರ ಅರ್ಧಚಂದ್ರೇ ಚ ತತ್ಪುರುಷಂ ಚ ಜಾಯತೇ ॥
ಓಂಕಾರದರ್ಪಣಾಕಾರೇ ಈಶಾನ್ಯಂ ಚ ಸ ಜಾಯತೇ ॥
ಓಂಕಾರ ಜ್ಯೋತಿರೂಪೇ ಚ ನಿರ್ಭಾವಃ ತತ್ರ ಜಾಯತೇ ॥

ಇತಿ ಷಟ್‌ಮುಖಂ ದೇವಿ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೭ ॥

೪೫೭

ಇನ್ನು ಷಡ್ವಿಧಮುಖಂಗಳ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಸದ್ಯೋಜಾತಮುಖವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ವಾಮದೇವಮುಖವಿಹುದು.
ಮಣಿಪೂರಕಚಕ್ರದಲ್ಲಿ ಅಘೋರಮುಖವಿಹುದು.
ಅನಾಹತಚಕ್ರದಲ್ಲಿ ತತ್ಪುರುಷಮುಖವಿಹುದು.
ವಿಶುದ್ಧಿಚಕ್ರದಲ್ಲಿ ಈಶಾನಮುಖವಿಹುದು.
ಆಜ್ಞಾಚಕ್ರದಲ್ಲಿ ನಿರ್ಭಾವಮುಖವಿಹುದು.
ಇದಕ್ಕೆ ಶಿವಧರ್ಮಸಂಹಿತಾಯಾಂ :
''ಆಧಾರೇ ಚ ಸದ್ಯೋಜಾತಂ ಸ್ವಾಧಿಷ್ಠೇ ವಾಮದೇವಕಂ ।
ಅಘೋರಂ ಮಣಿಪೂರೇ ಚ ತತ್ಪುರುಷಂ ಚ ಅನಾಹತೇ ॥
ಈಶಾನಂ ಚ ವಿಶುದ್ಧಿಶ್ಚ ಆಜ್ಞೇ ನಿರ್ಭಾವಕಂ ತಥಾ ।
ಇತಿ ಷಟ್‌ಮುಖಂ ದೇವಿ ಸ್ಥಾನ ಸ್ಥಾನೇ ಸಮಾಚರೇತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೫೭ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಮುಖಂಗಳುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾನಿರೂಪದಿಂದ ಕಂಡು ಸುಖಿಯಾದೆನು. ಇನ್ನು ಷಡ್ವಿಧ ಭೂತಂಗಳುತ್ಪತ್ಯಸ್ಥಲವ ನಿರೂಪಿಸೆಂದು ಬಿನ್ನವಿಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೫೮

ಸದ್ಯೋಜಾತಮುಖದಲ್ಲಿ ಪೃಥ್ವಿ ಪುಟ್ಟಿತ್ತು,
ವಾಮದೇವಮುಖದಲ್ಲಿ ಅಪ್ಪು ಪುಟ್ಟಿತ್ತು,
ಅಘೋರಮುಖದಲ್ಲಿ ಅಗ್ನಿ ಪುಟ್ಟಿತ್ತು,
ತತ್ಪುರುಷಮುಖದಲ್ಲಿ ವಾಯು ಪುಟ್ಟಿತ್ತು,
ಈಶಾನಮುಖದಲ್ಲಿ ಆಕಾಶ ಪುಟ್ಟಿತ್ತು,
ಪ್ರಣವದ ಅರ್ಧಚಂದ್ರಕದಲ್ಲಿ ಮನ ಪುಟ್ಟಿತ್ತು ನೋಡಾ.
ಇದಕ್ಕೆ ಉತ್ತರವಾತುಲಾಗಮೇ :
''ಸದ್ಯೋಜಾತಾದ್ಭವೇದ್ಭೂಮಿಃ ವಾಮದೇವಾದ್ಭವೇತ್ ಜಲಂ ।
ಅಘೋರಾದ್ವಹ್ನಿರುತ್ಪತ್ತಿಃ ತತ್ಪುರುಷಾದ್ವಾಯೋರುದ್ಭವಃ
ಈಶಾನಾದ್ಗಗನಂ ಜಾತಂ ಅರ್ಧಚಂದ್ರಾತ್ ಮನೋದ್ಭವಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೮ ॥

೪೫೯

ಇನ್ನು ಷಡ್ವಿಧಭೂತಂಗಳ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಪೃಥ್ವಿಯೆಂಬ ಮಹಾಭೂತವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ಅಪ್ಪುಯೆಂಬ ಮಹಾಭೂತವಿಹುದು.
ಮಣಿಪೂರಕಚಕ್ರದಲ್ಲಿ ಅಗ್ನಿಯೆಂಬ ಮಹಾಭೂತವಿಹುದು.
ಅನಾಹತಚಕ್ರದಲ್ಲಿ ವಾಯುವೆಂಬ ಮಹಾಭೂತವಿಹುದು.
ವಿಶುದ್ಧಿಚಕ್ರದಲ್ಲಿ ಆಕಾಶವೆಂಬ ಮಹಾಭೂತವಿಹುದು.
ಆಜ್ಞಾಚಕ್ರದಲ್ಲಿ ಮನವೆಂಬ ಮಹಾಭೂತವಿಹುದು ನೋಡಾ.
ಇದಕ್ಕೆ ಮೃಗೇಂದ್ರಸಾರೇ :
''ಆಧಾರೇ ಪೃಥ್ವೀಭೂತಂ ಚ ಸ್ವಾಧಿಷ್ಠಾನೇ ಜಲಂ ತಥಾ ॥
ಮಣಿಪೂರೇ ಚ ತೇಜಶ್ಚ ವಾಯುಭೂತಶ್ಚಾನಾಹತಂ ॥
ಆಕಾಶಂ ಚ ವಿಶುದ್ಧಿಶ್ಚ ಆಜ್ಞೇಯಾಂ ಮನಏವ ಚ ॥
ಇತಿ ಷಷ್ಠಭೂತಂ ಚೈವ ಸ್ಥಾನ ಸ್ಥಾನೇ ಸಮಾಚರೇತ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೫೯ ॥

೪೬೦

ಇನ್ನೊಂದು ಪ್ರಕಾರದ ಪಂಚಭೂತದ ಮನದ ನೆಲೆಯದೆಂತೆಂದಡೆ :
ಆವ ಠಾವು ಕಠಿಣವಾಗಿಹುದು
ಆ ಠಾವು ಪೃಥ್ವಿಯೆಂಬ ಮಹಾಭೂತ.
ಆವ ಠಾವು ಮೃದುವಾಗಿಹುದು
ಆ ಠಾವು ಅಪ್ಪುವೆಂಬ ಮಹಾಭೂತ.
ಆವ ಠಾವು ಉಷ್ಣವಾಗಿಹುದು
ಆ ಠಾವು ಅಗ್ನಿಯೆಂಬ ಮಹಾಭೂತ.
ಆವ ಠಾವು ಚಲನೆಯಾಗಿಹುದು
ಆ ಠಾವು ವಾಯುವೆಂಬ ಮಹಾಭೂತ.
ಆವ ಠಾವು ಬಯಲಾಗಿಹುದು
ಆ ಠಾವು ಆಕಾಶವೆಂಬ ಮಹಾಭೂತ.
ಆವ ಠಾವು ನೆನವಾಗಿಹುದು
ಆ ಠಾವು ಮನವೆಂಬ ಮಹಾಭೂತ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೬೦ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧ ಭೂತಂಗಳುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾವಾಕ್ಯದಿಂದ ಕಂಡು ಸುಖಿಯಾದೆನು. ಇನ್ನು ಷಡ್ವಿಧ ಲಿಂಗ ಉತ್ಪತ್ಯ ನ್ಯಾಸಸ್ಥಲವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೬೧

ಆ ಅಖಂಡ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಮಹಾಲಿಂಗ ಹುಟ್ಟಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಪ್ರಸಾದಲಿಂಗ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಜಂಗಮಲಿಂಗ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಶಿವಲಿಂಗ ಹುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಗುರುಲಿಂಗ ಹುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಆಚಾರಲಿಂಗ ಹುಟ್ಟಿತ್ತು ನೋಡಾ.
ಇದಕ್ಕೆ ಶಿವಲಿಂಗಾಗಮೇ :
'' ಓಂಕಾರ ಜ್ಯೋತಿಸ್ವರೂಪೇ ಚ ಮಹಾಲಿಂಗ ಸಮುದ್ಭವಂ ।
ಓಂಕಾರ ದರ್ಪಣಾಕಾರೇ ಪ್ರಸಾದಲಿಂಗಮುದ್ಭವಂ ॥
ಓಂಕಾರೇಚಾರ್ಧಚಂದ್ರೇ ಚ ಜಂಗಮಲಿಂಗಮುದ್ಭವಂ ।
ಓಂಕಾರಕುಂಡಲಾಕಾರೇ ಶಿವಲಿಂಗ ಸಮುದ್ಭವಂ ॥
ಓಂಕಾರದಂಡಕಸ್ವರೂಪೇ ಗುರುಲಿಂಗ ಸಮುದ್ಭವಂ ।
ಓಂಕಾರತಾರಕರೂಪೇ ಆಚಾರಲಿಂಗಮುದ್ಭವಂ ।
ಇತಿ ಷಷ್ಠಲಿಂಗೋತ್ಪನ್ನಂ ಸುಸೂಕ್ಷ್ಮಂ ಶೃಣು ಪಾರ್ವತಿ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೧ ॥

೪೬೨

ಇನ್ನು ಷಡ್ವಿಧಲಿಂಗದ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ನಾದಸ್ವರೂಪವಾಗಿ ಆಚಾರಲಿಂಗವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ಮಹಾನಾದಸ್ವರೂಪವಾಗಿ ಗುರುಲಿಂಗವಿಹುದು.
ಮಣಿಪೂರಕಚಕ್ರದಲ್ಲಿ ಅತಿಮಹಾನಾದಸ್ವರೂಪವಾಗಿ ಶಿವಲಿಂಗವಿಹುದು.
ಅನಾಹತಚಕ್ರದಲ್ಲಿ ಬ್ರಹ್ಮನಾದಸ್ವರೂಪವಾಗಿ ಜಂಗಮಲಿಂಗವಿಹುದು.
ವಿರುದ್ಧಿಚಕ್ರದಲ್ಲಿ ದಿವ್ಯನಾದಸ್ವರೂಪವಾಗಿ ಪ್ರಸಾದಲಿಂಗವಿಹುದು.
ಆಜ್ಞಾಚಕ್ರದಲ್ಲಿ ಪ್ರಾಣನಾದಸ್ವರೂಪವಾಗಿ ಮಹಾಲಿಂಗವಿಹುದು ನೋಡಾ,
ಇದಕ್ಕೆ ಶಿವಲಿಂಗಾಗಮಸೂತ್ರೇ :
''ಆಧಾರೇ ಭೃತ್ಯಲಿಂಗಂ ಚ ಸ್ವಾಧಿಷ್ಠೇ ಗುರುಲಿಂಗಕಂ ।
ಶಿವಂ ಚ ಮಣಿಪೂರೇ ಚ ಜಂಗಮಂ ಚ ಅನಾಹತೇ ॥
ಪ್ರಸಾದಂ ಚ ವಿಶುದ್ಧಿಶ್ಚ ಆಜ್ಞಾಯಾಂ ಮಹಾಲಿಂಗಕಂ ।
ಇತಿ ಲಿಂಗಸ್ಥಲಂ ಜ್ಞಾತ್ವಾ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೨ ॥

೪೬೩

ಆಧಾರಚಕ್ರದಲ್ಲಿಹ ಆಚಾರಲಿಂಗವು
ಸಮಸ್ತವಾದ ತತ್ವಂಗಳ ನಿವಾಸಕ್ಕೋಸುಗ ಆಧಾರವಾದುದಾಗಿ
ಕರ್ಮರೂಪವಾದ ಕ್ರಿಯೆಯೆಂಬ ತನ್ನ ಶಕ್ತಿಯಿಂದ
ಸರಿಯಿಲ್ಲದುದಾಗಿ ಚಿತ್ತದಿಂದಾಧರಿಸಲು ತಕ್ಕಂಥಾದಾದುದಾಗಿ
ಆಶ್ರಯಿಸಲುಪಟ್ಟ ಮೋಕ್ಷಮಾರ್ಗವುಳ್ಳುದುದಾಗಿ
ಇದ್ದುದು ಆಚಾರಲಿಂಗ ನೋಡಾ.
ಇದಕ್ಕೆ **ಮಹಾವಾತುಲಾಗಮೇ : ವಸಂತತಿಲಕವೃತ್ತ-**
''ಕರ್ಮಾತ್ಮನಾ ಸಕಲತತ್ವನಿವಾಸಹೇತೋ
ರಾಧಾರಭೂತಮತುಲಂ ಕ್ರಿಯಯಾಸ್ವಶಕ್ತ್ಯಾ ।
ಚಿತ್ತೇನ ಧಾರ್ಯಮಿತಿ ಪ್ರರೂಪ ನಿವೃತ್ತಿಮಾರ್ಗಂ
ಆಚಾರಲಿಂಗಮಿತಿ ವೇದವಿದೋ ವದಂತಿ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೩ ॥

೪೬೪

ಸ್ವಾಧಿಷ್ಠಾನಚಕ್ರದಲ್ಲಿಹ ಗುರುಲಿಂಗಸ್ಥಲವನು
ಕರ್ತೃತ್ವವಾಗಿಯು ತನ್ನ ಜ್ಞಾನಶಕ್ತಿಯ ವೈಭವದಿಂದಲು
ಸಮಸ್ತವಾದ ಉಪದೇಶವಿಧಾನ ಶಾಸ್ತ್ರಂಗಳಲ್ಲಿ
ಮಾಡಲುಪಟ್ಟ ಆಸ್ಪದವನುಳ್ಳುದಾಗಿಯೂ
ಕಡೆಯಿಲ್ಲದ ಸುಖಸಮುದ್ರನಾಗಿಯೂ
ಬುದ್ಧಿತತ್ವದ ಸ್ಥಲದ ಪ್ರತಿಷ್ಠಿತವಾಗಿಹ
ಗುರುಲಿಂಗವಿಹುದು ನೋಡಾ.
ಇದಕ್ಕೆ **ಮಹಾವಾತುಲಾಗಮೇ: ವೃತ್ತ-**
''ಸ್ವಜ್ಞಾನಶಕ್ತಿವಿಭವಾದಿ ಕರ್ತೃತ್ವಂ ।
ಸರ್ವೋಪದೇಶ ವಿಧಿತಂತ್ರಕೃತಂ ಪ್ರತಿಷ್ಠಂ ।
ತೇಜೋನಿಧಿಃ ಪರಮಪಾರಸುಖಾಂಬುಧಿ ॥
ಬುದ್ಧೇಃ ಪದೇ ವಿನಿಹಿತಂ ಗುರುಲಿಂಗಮಾಹುಃ ॥
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೪ ॥

೪೬೫

ಮಣಿಪೂರಕಚಕ್ರದಲ್ಲಿಹ ಶಿವಲಿಂಗವು
ಜ್ಞಾನಕಲೆಗಳೊಡನೆ ಕೂಡಿದ ರೂಪದಿಂದ ಮಿಗೆ ಒಪ್ಪುತಿರ್ದಂಥಾದಾಗಿ
ಒಂದು ಮುಖವಾಗಿ ಮಿಗೆ ಶಾಂತವಾದ ದಿವ್ಯತೇಜಃಪುಂಜವನು
ಅಹಂಕಾರಕ್ಕೆ ಸ್ಥಾನವಪ್ಪ ಪ್ರಪಂಚದಲ್ಲಿ
ತನ್ನ ಇಚ್ಛಾಶಕ್ತಿಯಿಂದ ವ್ಯಾಪಿಸಲುಪಟ್ಟ ಮೂರ್ತೀಕರಿಸಿದ

ತತ್ವವಾದ ಶಿವಲಿಂಗವಿಹುದು ನೋಡಾ.
**ಇದಕ್ಕೆ ಮಹಾವಾತುಲಾಗಮೇ: ವೃತ್ತ -**
''ವಿದ್ಯಾಕಲಾಕಲಿತರೂಪಸುಶೋಭಮಾನಂ
ದಿವ್ಯಾಂ ಪ್ರಭಾಫಲವುಮೇಕಮುಖಂ ಪ್ರಶಾಂತಂ ॥
ಇಚ್ಛಾಸ್ವಶಕ್ತಿಪರಿಜೃಂಭಿತಮೂರ್ತಿತತ್ವಂ
ವ್ಯಕ್ತ ಹ್ರೂಹಂಕೃತಿಪದೇ ಶಿವಲಿಂಗಮಾಹುಃ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೫ ॥

### ೪೬೬

ಅನಾಹತಚಕ್ರದಲ್ಲಿಯ ಜಂಗಮಲಿಂಗವು
ಅಂತರಂಗದೊಡನೆ ಕೂಡಿ ವರ್ತಿಸುವುದಾಗಿ
ಬಹಿರಂಗ ಸಹಿತವಾಗಿ ಅಮೂರ್ತವಹ ವಸ್ತುತತ್ವವಾಗಿ
ಅಕ್ಷರವಪ್ಪ ಪ್ರಕೃತಿಗಿಂದಲು, ಪರತತ್ವವೆಂಬ ಹೆಸರನುಳ್ಳ
ಜ್ಯೋತಿಸ್ವರೂಪನಪ್ಪ ಪುರುಷನ ತನ್ನ ಆತ್ಮಮೂರ್ತಿಯಹಂಥಾ
ಆದಿಶಕ್ತಿಯೊಡನೆ ಕೂಡಿದಂತಾದಾಗಿ,
ಮನಸ್ಸಿನಿಂದವೆ ಎಲ್ಲಾಗಳು ಧ್ಯಾನವ ಮಾಡಲು ತಕ್ಕಂಥಾಚಾರಲಿಂಗವೆಂದು
ಆಪ್ತವಾದ ಬುದ್ಧಿಯುಳ್ಳ ಮಹಾತ್ಮರು ಹೇಳುತ್ತಿಹರು ನೋಡಾ
**ಇದಕ್ಕೆ ಮಹಾವಾತುಲಾಗಮೇ: ವೃತ್ತ -**
''ಸಾಭ್ಯಾಂತರಂ ಸಬಹಿರಂಗಮಮೂರ್ತಿತತ್ವಂ
ಜ್ಯೋತಿರ್ಮಯಂ ಪುರುಷಮಕ್ಷರತಃ ಪರಾಖ್ಯಂ ।
ಸ್ವಾತ್ಮಾದಿಶಕ್ತಿಘಟಿತಂ ಮನಸೈವ ನಿತ್ಯಂ
ಧ್ಯಾತವ್ಯರೂಪಮಿತಿ ಯಶ್ಚರಲಿಂಗಮಾಹುಃ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೬ ॥

### ೪೬೭

ವಿಶುದ್ಧಿಚಕ್ರದಲ್ಲಿಹ ಪ್ರಸಾದಲಿಂಗವು
ಪರಂಜ್ಯೋತಿಸ್ವರೂಪವಾಗಿ ನಿತ್ಯವಾಗಿ ಪರಿಪೂರ್ಣವಾಗಿ
ಇಂದ್ರಿಯಾರ್ಥಂಗಳೆಂಬ ವಿಷಯಂಗಳು
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ವಿಷಯಂಗಳನು ಮೀರಿ
ವರ್ತಿಸುವುದಾಗಿ, ಜ್ಞಾನದಿಂದ ಹಡೆಯಲುಪಟ್ಟಂಥಾ
ಮೋಕ್ಷಸ್ವರೂಪವಾಗಿ ಪರಿಣಾಮಪ್ರಪಂಚಕ್ಕೆ ಕಾರಣವಾದ
ಸಾಧನವೆಂಬ ನಾಮವನುಳ್ಳ ತತ್ವವನು
ಪತಿಯೆಂಬ ತನ್ನ ಶಕ್ತಿಯಿಂದ ಉದಯಿಸಿದುದಾಗಿ
ನಾಮರೂಪಾದಿಗಳಿಲ್ಲದಂಥಾ ಪ್ರಸಾದವೆಂಬ ಮಹಾಲಿಂಗವಾಗಿ
ಹೇಳುತ್ತಿಹರು ನೋಡಾ.

ಇದಕ್ಕೆ **ಮಹಾವಾತುಲಾಗಮೇ : ವೃತ್ತ -**
''ಜ್ಯೋತಿಂ ಪರಂ ನಿಜಮಖಂಡಮತೀಂದ್ರಿಯಾರ್ಥಂ
ಜ್ಞಾನೋಪಲಬ್ಧಮಮೃತಂ ಪರಿಣಾಮಬೀಜಂ ।
ಸಾದಾಖ್ಯತತ್ವಮುದಿತಂ ಪರಯಾ ಸ್ವಶಕ್ತ್ಯಾ
ಪ್ರಾಹುಃ ಪ್ರಸಾದಘನಲಿಂಗಮುಪಾಧಿಹೀನಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೭ ॥

೪೬೮

ಆಜ್ಞಾಚಕ್ರದಲ್ಲಿಯ ಮಹಾಲಿಂಗವು
ಜನ್ಮ ಜರಾ ಮರಣಂಗಳಿಲ್ಲದುದಾಗಿ, ನಿರ್ಮಲವಾಗಿ,
ಸರ್ವವ್ಯಾಪ್ತಿಯಾಗಿ, ಅದ್ವಿತೀಯವಾಗಿ, ಅಣುವಿಗೆ ಅಣುವಾಗಿ,
ಪರಾಪರವಾಗಿ, ಸಂಸಾರವ್ಯಾಪ್ತಿಯಿಲ್ಲದುದಾಗಿ,
ಹವಣಿಸಲು ಬಾರದುದಾಗಿ, ಭಾವವಂದರಿಂದವೆ
ಅರಿಯಲು ಬಹುದಾಗಿ, ಚೈತನ್ಯಸ್ವರೂಪವಾಗಿ,
ಶಿವತತ್ವವನು ಚಿತ್ತೆಂಬ ಶಕ್ತಿಯ ಸ್ಫುರಣವೆ ರೂಪಾಗಿಯುಳ್ಳ
ಮಹಾಲಿಂಗವಾಗಿ ಹೇಳುತ್ತಿಹರು ನೋಡಾ.
ಇದಕ್ಕೆ **ಮಹಾವಾತುಲಾಗಮೇ : ವೃತ್ತ -**
''ಆದ್ಯಂತಶೂನ್ಯಮಮಲಂ ಪರಿಪೂರ್ಣಮೇಕಂ
ಸೂಕ್ಷ್ಮಂ ಪರಾಪರಮನಾಮಯಮಪ್ರಮೇಯಂ ।
ಭಾವೈಕಗಮ್ಯ ಜಡಂ ಶಿವತತ್ವಮಾಹುಃ
ಚಿಚ್ಛಕ್ತಿ ಸಂಸ್ಫುರಣರೂಢಮಹಾತ್ಮಲಿಂಗಂ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೬೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಲಿಂಗದುತ್ಪತ್ಯ ನ್ಯಾಸಸ್ಥಲವನು ನಿಮ್ಮ ಅನುಭಾವದ ವಾಕ್ಯಂಗಳಿಂದ ನಿರೂಪಿಸಲು, ನಿಮ್ಮ ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣವೆಂಬ ಮಹಾದೃಕ್ಕಿನಿಂದ ಕಂಡು ಸುಖಿಯಾದೆನು. ಇನ್ನು ಷಟ್ಕಲೆಗಳುತ್ಪತ್ಯ–ನ್ಯಾಸ–ಸ್ಥಲವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೬೯

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಶಾಂತ್ಯತೀತೋತ್ತರ ಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶಾಂತ್ಯತೀತ ಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಶಾಂತಿಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ವಿದ್ಯಾಕಲೆ ಉತ್ಪತ್ಯವಾಯಿತ್ತು.

ಆ ಪ್ರಣವದ ದಂಡಕಸ್ವರೂಪದಲ್ಲಿ ಪ್ರತಿಷ್ಠಾಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ನಿವೃತ್ತಿಕಲೆ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನಿಃಕಲಾತೀತಾಗಮೇ :
''ಓಂಕಾರಜ್ಯೋತಿರೂಪೇ ಚ ಮಹಾಕಲಾ ಚ ಜಾಯತೇ ।
ಓಂಕಾರದರ್ಪಣಾಕಾರೇ ಶಾಂತ್ಯತೀತಾ ಚ ಜಾಯತೇ ॥
ಓಂಕಾರೇಚಾರ್ಧಚಂದ್ರೇ ಚ ಶಾಂತಿಕಲಾ ಚ ಜಾಯತೇ ।
ಓಂಕಾರಕುಂಡಲಾಕಾರೇ ವಿದ್ಯಾಕಲಾ ಚ ಜಾಯತೇ ॥
ಓಂಕಾರದಂಡಕರೂಪೇ ಚ ಪ್ರತಿಷ್ಠಾಚ ಸಜಾಯತೇ ।
ಓಂಕಾರ ತಾರಕರೂಪೇ ನಿವೃತ್ತಿಶ್ಚ ಸಜಾಯತೇ ।
ಇತಿ ಷಷ್ಠಕಲಾದೇವೀ ಸ್ಥಾನಸ್ಥಾನೇಷು ಜಾಯತೇ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೯ ॥

೪೮೦

ಆಚಾರಲಿಂಗದಲ್ಲಿ ನಿವೃತ್ತಿಕಲೆ ಇಹುದು.
ಗುರುಲಿಂಗದಲ್ಲಿ ಪ್ರತಿಷ್ಠಾಕಲೆ ಇಹುದು.
ಶಿವಲಿಂಗದಲ್ಲಿ ವಿದ್ಯಾಕಲೆ ಇಹುದು.
ಜಂಗಮಲಿಂಗದಲ್ಲಿ ಶಾಂತಿಕಲೆ ಇಹುದು.
ಪ್ರಸಾದಲಿಂಗದಲ್ಲಿ ಶಾಂತ್ಯತೀತಕಲೆ ಇಹುದು.
ಮಹಾಲಿಂಗದಲ್ಲಿ ಶಾಂತ್ಯತೀತೋತ್ತರಕಲೆ ಇಹುದು ನೋಡಾ.
ಇದಕ್ಕೆ **ಆದಿತ್ಯಸಂಹಿತಾಯಾಂ** :
''ಆಚಾರೇಚ ನಿವೃತ್ತೀ ಚ ಗುರುಲಿಂಗೇ ಪ್ರತಿಷ್ಠಿತಂ ।
ವಿದ್ಯಾಚ ಶಿವಲಿಂಗೌ ಚ ತಥಾ ಶಾಂತಿಕಲಾ ಚರೇತ್ ॥
ಶಾಂತ್ಯತೀತ ವಿಶುದ್ಧೌ ಚ ಮಹಾಲಿಂಗೇ ಮಹತ್ಕಲಾ ।
ಇತಿ ಷಷ್ಠಕಲಾನ್ಯಾಸಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೦ ॥

೪೮೧

ಇನ್ನೊಂದು ಪ್ರಕಾರದ ಕಲಾನ್ಯಾಸವದೆಂತೆಂದೊಡೆ :
ಆಧಾರಚಕ್ರದಲ್ಲಿ ನಿವೃತ್ತಿಕಲೆ ಇಹುದು.
ಸ್ವಾಧಿಷ್ಠಾನಚಕ್ರದಲ್ಲಿ ಪ್ರತಿಷ್ಠಾಕಲೆ ಇಹುದು.
ಮಣಿಪೂರಕಚಕ್ರದಲ್ಲಿ ವಿದ್ಯಾಕಲೆ ಇಹುದು.
ಅನಾಹತಚಕ್ರದಲ್ಲಿ ಶಾಂತಿಕಲೆ ಇಹುದು.
ವಿಶುದ್ಧಿಚಕ್ರದಲ್ಲಿ ಶಾಂತ್ಯತೀತೋತ್ತರಕಲೆ ಇಹುದು ನೋಡಾ.
ಇದಕ್ಕೆ **ಆದಿತ್ಯಸೂತ್ರೇ** :
''ಆಧಾರೇ ನಿವೃತ್ತೀ ಚ ಸ್ವಾಧಿಷ್ಠಾನೇ ಪ್ರತಿಷ್ಠಿತಂ ।

ವಿದ್ಯಾ ಚ ಮಣಿಪೂರೇ ಚ ಕಲಾಶಾಂತಿರನಾಹತೇ ॥
ಶಾಂತ್ಯತೀತಂ ವಿಶುದ್ಧೌ ಚ ಆಜ್ಞಾಚಕ್ರೇ ಮಹತ್ಕಲಾ ।
ಇತಿ ಷಷ್ಠ ಕಲಾನ್ಯಾಸಂ ಸುಸೂಕ್ಷ್ಮಂ ಶೃಣು ಪಾರ್ವತೀ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೧ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಟ್ಕಲೆಗಳುತ್ಪತ್ತಿ-ನ್ಯಾಸ ಸ್ಥಲವನ್ನು ನಿಮ್ಮ ಮಹಾವಾಕ್ಯದಿಂ ನಿರೂಪಿಸಲು, ನಿಮ್ಮ ಕಾರುಣ್ಯದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಇನ್ನು ಷಡ್ವಿಧ ಸಾದಾಖ್ಯದುತ್ಪತ್ಯ–ನ್ಯಾಸ–ಸ್ಥಲವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೭೨

ಶಾಂತ್ಯತೀತೋತ್ತರಕಲೆಯಲ್ಲಿ ಮಹಾಸಾದಾಖ್ಯ ಉತ್ಪತ್ಯವಾಯಿತ್ತು.
ಶಾಂತ್ಯತೀತಕಲೆಯಲ್ಲಿ ಶಿವಸಾದಾಖ್ಯ ಉತ್ಪತ್ಯವಾಯಿತ್ತು.
ಶಾಂತಿಕಲೆಯಲ್ಲಿ ಅಮೂರ್ತಿಸಾದಾಖ್ಯ ಉತ್ಪತ್ಯವಾಯಿತ್ತು.
ವಿದ್ಯಾಕಲೆಯಲ್ಲಿ ಮೂರ್ತಿಸಾದಾಖ್ಯ ಉತ್ಪತ್ಯವಾಯಿತ್ತು.
ಪ್ರತಿಷ್ಠಾಕಲೆಯಲ್ಲಿ ಕರ್ತೃಸಾದಾಖ್ಯ ಉತ್ಪತ್ಯವಾಯಿತ್ತು.
ನಿವೃತ್ತಿಕಲೆಯಲ್ಲಿ ಕರ್ಮಸಾದಾಖ್ಯ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ಉತ್ತರವಾತುಲಾಗಮೇ :
''ಶಾಂತ್ಯತೀತೋತ್ತರೇ ಚೈವ ಮಹಾಸಾದಾಖ್ಯಮುದ್ಭವಂ ।
ಶಾಂತ್ಯತೀತಕಲಾಯಾಂ ಶಿವಸಾದಾಖ್ಯಮುದ್ಭವಂ ॥
ಅಮೂರ್ತಸಾದಾಖ್ಯಂ ದೇವಿ ಶಾಂತಿಕಲಾಯಾಂ ಉದ್ಭವಂ ।
ಮೂರ್ತಿಸಾದಾಖ್ಯಕಂ ಚೈವ ವಿದ್ಯಾಕಲಾಯಾಂ ಉದ್ಭವಂ ॥
ಕರ್ತೃಸಾದಾಖ್ಯಕಂ ಚೈವ ಪ್ರತಿಷ್ಠೇಚ ಸಮುದ್ಭವಂ ।
ಕರ್ಮಸಾದಾಖ್ಯಕಂ ಚೈವ ನಿವೃತ್ತ್ಯಾ ಚ ಸಮುದ್ಭವಂ ॥
ಷಡ್ವಿಧಸಾದಾಖ್ಯಂ ದೇವಿ ಷಟ್ಕಲಾಯಾಂ ಚ ಜಾಯತೇ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೨ ॥

೪೭೩

ಸಾದಾಖ್ಯ ಉತ್ಪತ್ಯ ಇನ್ನೊಂದು ಪ್ರಕಾರವದೆಂತೆಂದಡೆ :
ಆ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರ ಪ್ರಣವದ ಜ್ಯೋತಿಸ್ವರೂಪದಲ್ಲಿ
ಮಹಾಸಾದಾಖ್ಯ ಉತ್ಪತ್ಯವಾಯಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿ
ಶಿವಸಾದಾಖ್ಯ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ

ಅಮೂರ್ತಿಸಾದಾಖ್ಯ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ
ಮೂರ್ತಿಸಾದಾಖ್ಯ ಉತ್ಪತ್ಯವಾಯಿತ್ತು.
ಆ ಪ್ರಣಮದ ದಂಡಸ್ವರೂಪದಲ್ಲಿ
ಕರ್ತೃಸಾದಾಖ್ಯ ಉತ್ಪತ್ಯವಾಯಿತ್ತು.
ಆ ಪ್ರಣಮದ ತಾರಕಸ್ವರೂಪದಲ್ಲಿ
ಕರ್ಮಸಾದಾಖ್ಯ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಅತಿಮಹಾಗಮೇ** :
" ಓಂಕಾರ ಜ್ಯೋತಿರೂಪೇ ಚ ಮಹಾಸಾದಾಖ್ಯಮುದ್ಭವಂ।
ಓಂಕಾರ ದರ್ಪಣಾಕಾರೇ ಶಿವಸಾದಾಖ್ಯಮುದ್ಭವಂ ॥
ಓಂಕಾರಮರ್ಧಚಂದ್ರೇ ಚ ಅಮೂರ್ತಂ ನಾಮ ಜಾಯತೇ ।
ಓಂಕಾರಕುಂಡಲಾಕಾರೇ ಮೂರ್ತಸಾದಾಖ್ಯಮುದ್ಭವಂ ॥
ಕರ್ತೃಕಂ ನಾಮಸಾದಾಖ್ಯಂ ದಂಡರೂಪೇ ಸಮುದ್ಭವಾಃ ।
ಕರ್ಮಸಾದಾಖ್ಯಕಂ ಚೈವ ತಾರಕೇ ಚ ಸಮುದ್ಭವಂ ।
ಸಾದಾಖ್ಯಂ ಷಡ್ವಿಧಂ ದೇವಿ ಸ್ಥಾನಸ್ಥಾನೇಷು ಜಾಯತೇ ॥ "
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೩ ॥

೪೭೪

ಇನ್ನು ಷಡ್ವಿಧಸಾದಾಖ್ಯದ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಕರ್ಮಸಾದಾಖ್ಯವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ಕರ್ತೃಸಾದಾಖ್ಯವಿಹುದು.
ಮಣಿಪೂರಕಚಕ್ರದಲ್ಲಿ ಮೂರ್ತಸಾದಾಖ್ಯವಿಹುದು.
ಅನಾಹತಚಕ್ರದಲ್ಲಿ ಅಮೂರ್ತಸಾದಾಖ್ಯವಿಹುದು.
ವಿರುದ್ಧಿ ಚಕ್ರದಲ್ಲಿ ಶಿವಸಾದಾಖ್ಯವಿಹುದು.
ಆಜ್ಞಾಚಕ್ರದಲ್ಲಿ ಮಹಾಸಾದಾಖ್ಯವಿಹುದು ನೋಡಾ.
ಇದಕ್ಕೆ **ವಾತುಲಾಗಮತಂತ್ರೇ** :
"ಆಧಾರೇ ಕರ್ಮಸಾದಾಖ್ಯಂ ಸ್ವಾಧಿಷ್ಠಾನೇ ಚ ಕರ್ತೃಕಂ ।
ಮಣಿಪೂರೇ ಚ ಮೂರ್ತಂ ಚ ಅಮೂರ್ತಂ ಚ ಅನಾಹತೇ ॥
ವಿಶುದ್ಧೌ ಚ ಶಿವಂ ಚೈವ ಆಜ್ಞಾಯಾಂ ಮಹಾಸಾದಾಖ್ಯಂ ।
ಇತಿ ಷಟ್ಸಾದಾಖ್ಯಂ ಚೈವ ಸ್ಥಾನಸ್ಥಾನೇ ಸಮಾಚರೇತ್ ॥"
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೪ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧ ಸಾದಾಖ್ಯಂ ಗಳುತ್ಪತ್ಯ–ನ್ಯಾಸ–ಸ್ಥಲವನ್ನು ನಿಮ್ಮ ಮಹಾವಾಕ್ಯದಿಂದ ಕಂಡುಸುಖಿಯಾದೆನು. ಇನ್ನು

ಷಡ್ವಿಧ ಹಸ್ತಂಗಳುತ್ಪತ್ಯ ನ್ಯಾಸ ಸ್ಥಲವ ನಿರೂಪಿಸೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೭೫

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಭಾವಹಸ್ತ ಹುಟ್ಟಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಜ್ಞಾನಹಸ್ತ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಸುಮನಹಸ್ತ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನಿರಹಂಕಾರಹಸ್ತ ಹುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಸುಬುದ್ಧಿಹಸ್ತ ಹುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಸುಚಿತ್ತಹಸ್ತ ಹುಟ್ಟಿತ್ತು ನೋಡಾ.
ಇದಕ್ಕೆ **ಅತಿಮಹಾಗಮಸಾರೇ** :
''ಓಂಕಾರ ಜ್ಯೋತಿಸ್ವರೂಪೇ ಚ ಭಾವಹಸ್ತಂ ಚ ಜಾಯತೇ ।
ಓಂಕಾರದರ್ಪಣಾಕಾರೇ ಜ್ಞಾನಹಸ್ತಂ ಚ ಜಾಯತೇ ॥
ಓಂಕಾರಚಾರ್ಧಚಂದ್ರೇ ಚ ಮನೋಹಸ್ತಸ್ಯ ಜಾಯತೇ ।
ಓಂಕಾರಕುಂಡಲಾಕಾರೇ ನಿರಹಂಕಾರಂ ಚ ಜಾಯತೇ ॥
ಓಂಕಾರದಂಡಕಸ್ವರೂಪೇ ಚ ಬುದ್ಧಿಹಸ್ತಂ ಚ ಜಾಯತೇ ।
ಓಂಕಾರತಾರಕರೂಪೇ ಚಿತ್ತಹಸ್ತಂ ಚ ಜಾಯತೇ ।
ಇತಿ ಹಸ್ತಶ್ಚ ಷಡ್ದೇವಿ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೫ ॥

೪೭೬

ಇನ್ನು ಷಡ್ವಿಧಹಸ್ತಂಗಳ ನೆಲೆ ಆದೆಂತೆಂದಡೆ :
ಆಧಾರಚಕ್ರದಲ್ಲಿ ಸುಚಿತ್ತಹಸ್ತವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ಸುಬುದ್ಧಿಹಸ್ತವಿಹುದು.
ಮಣಿಪೂರಕಚಕ್ರದಲ್ಲಿ ನಿರಹಂಕಾರಹಸ್ತವಿಹುದು.
ಅನಾಹತಚಕ್ರದಲ್ಲಿ ಸುಮನಹಸ್ತವಿಹುದು.
ವಿಶುದ್ಧಿಚಕ್ರದಲ್ಲಿ ಜ್ಞಾನಹಸ್ತವಿಹುದು.
ಆಜ್ಞಾಚಕ್ರದಲ್ಲಿ ಭಾವಹಸ್ತವಿಹುದು ನೋಡಾ.
ಇದಕ್ಕೆ **ಚಕ್ರಾತೀತಾಗಮೇ** :
''ಆಧಾರ ಸುಚಿತ್ತಂ ಚ ಸ್ವಾಧಿಷ್ಠಾನೇ ಸುಬುದ್ಧಿಕಂ ।
ಮಣಿಪೂರೇ ಚಾಹಂಕಾರಂ ಮನೋಹಸ್ತಂಚಾನಾಹತಂ ॥
ವಿಶುದ್ಧಿ ಜ್ಞಾನಹಸ್ತಶ್ಚ ಆಜ್ಞಾಯಾಂ ಭಾವಹಸ್ತಕಂ ।
ಇತಿ ಹಸ್ತ ಭೇದಜ್ಞಾತುಂ ದುರ್ಲಭಂ ಚ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೬ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಹಸ್ತ ಉತ್ಪತ್ಯ-ನ್ಯಾಸ-ಸ್ಥಲವನು ನಿಮ್ಮ ಶಬ್ದಜ್ಞಾನದಿಂದ ನಿರೂಪಿಸಲು, ನಿಮ್ಮ ಕೃಪಾವಲೋಚನವೆಂಬ ದೃಕ್ಕಿನಿಂದ ಕಂಡು ಸುಖಿಯಾದೆನು. ಇನ್ನು ನವಶಕ್ತಿಗಳುತ್ಪತ್ಯ, ನ್ಯಾಸ-ಸ್ಥಲವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೭೭

ಏನು ಏನೂ ಎನಲಿಲ್ಲದ ಮಹಾಘನ ನಿರಂಜನ ವಸ್ತುವಿನ
ನೆನಹುಮಾತ್ರದಲ್ಲಿ ನಿರ್ಭಿನ್ನ ಶಕ್ತಿ ಹುಟ್ಟಿದಳು.
ಆ ನಿರ್ಭಿನ್ನಶಕ್ತಿಯ ನೆನಹುಮಾತ್ರದಲ್ಲಿ ನಿಭ್ರಾಂತಶಕ್ತಿ ಹುಟ್ಟಿದಳು.
ಆ ನಿಭ್ರಾಂತಶಕ್ತಿಯ ನೆನಹುಮಾತ್ರದಲ್ಲಿ ನಿರ್ಮಾಯಶಕ್ತಿ ಹುಟ್ಟಿದಳು.
ಆ ನಿರ್ಮಾಯಶಕ್ತಿಯ ನೆನಹುಮಾತ್ರದಲ್ಲಿ ಹಾಕಿನಿಶಕ್ತಿ ಹುಟ್ಟಿದಳು.
ಆ ಹಾಕಿನಿಶಕ್ತಿಯ ನೆನಹುಮಾತ್ರದಲ್ಲಿ ಡಾಕಿನಿಶಕ್ತಿ ಹುಟ್ಟಿದಳು.
ಆ ಡಾಕಿನಿಶಕ್ತಿಯ ನೆನಹುಮಾತ್ರದಲ್ಲಿ ಶಾಕಿನಿಶಕ್ತಿ ಹುಟ್ಟಿದಳು.
ಆ ಶಾಕಿನಿಶಕ್ತಿಯ ನೆನಹುಮಾತ್ರದಲ್ಲಿ ಲಾಕಿನಿಶಕ್ತಿ ಹುಟ್ಟಿದಳು.
ಆ ಲಾಕಿನಿಶಕ್ತಿಯ ನೆನಹುಮಾತ್ರದಲ್ಲಿ ರಾಕಿನಿಶಕ್ತಿ ಹುಟ್ಟಿದಳು.
ಆ ರಾಕಿನಿಶಕ್ತಿಯ ನೆನಹುಮಾತ್ರದಲ್ಲಿ ಕಾಕಿನಿಶಕ್ತಿ ಹುಟ್ಟಿದಳು ನೋಡಾ.
ಇದಕ್ಕೆ **ನಿರಾಮಯಾತೀತಾಗಮೇ** :
''ನಿರಂಜನ್ಯ ಮನೋಜ್ಞಾನಾನ್ನಿರ್ಭಿನ್ನಶ್ಚ ಸಮುದ್ಭವಃ ।
ನಿರ್ಭಿನ್ನಸ್ಯ ಮನೋಜ್ಞಾನಾನ್ನಿಭ್ರಾಂತಶಕ್ತಿರುದ್ಭವಾ ॥
ನಿಭ್ರಾಂತ ಮನೋಜ್ಞಾನಾನ್ನಿರ್ಮಾಯಂ ಚ ಸಮುದ್ಭವಂ ।
ನಿರ್ಮಾಯಸ್ಯ ಮನೋಜ್ಞಾನಾತ್ ಹಾಕಿನೀಶಕ್ತಿರುದ್ಭವಾ ॥
ಹಾಕಿನೇಶ್ಚ ಮನೋಜ್ಞಾನಾತ್ ಡಾಕಿನಿಶ್ಚ ಸಮುದ್ಭವಾ ।
ಡಾಕಿನೇಶ್ಚ ಮನೋ ಜ್ಞಾನಾತ್ ಶಾಕಿನಿಶ್ಚ ಸಮುದ್ಭವಾ ॥
ಶಾಕಿನೇಶ್ಚ ಮನೋ ಜ್ಞಾನಾತ್ ಲಾಕಿನಿಶ್ಚ ಸಮುದ್ಭವಾ ।
ಲಾಕಿನೇಶ್ಚ ಮನೋ ಜ್ಞಾನಾತ್ ರಾಕಿನಿಶ್ಚ ಸಮುದ್ಭವಾ ॥
ರಾಕಿನೇಶ್ಚ ಮನೋ ಜ್ಞಾನಾತ್ ಕಾಕಿನಿಶ್ಚ ಸಮುದ್ಭವಾ ।
ಏಕೈಕಂ ಪ್ರಾಣಮಾಖ್ಯಾತಂ ಏಕೈಕಂತು ಸಮನ್ವಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೭ ॥

೪೭೮

ಇನ್ನು ನವಶಕ್ತಿಗಳ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಕಾಕಿನಿಶಕ್ತಿ ಇಹಳು.
ಸ್ವಾಧಿಷ್ಠಾನಚಕ್ರದಲ್ಲಿ ರಾಕಿನಿಶಕ್ತಿ ಇಹಳು.
ಮಣಿಪೂರಕಚಕ್ರದಲ್ಲಿ ಲಾಕಿನಿಶಕ್ತಿ ಇಹಳು.

ಅನಾಹತಚಕ್ರದಲ್ಲಿ ಶಾಕಿನಿಶಕ್ತಿ ಇಹಳು.
ವಿಶುದ್ಧಿಚಕ್ರದಲ್ಲಿ ಡಾಕಿನಿಶಕ್ತಿ ಇಹಳು.
ಆಜ್ಞಾಚಕ್ರದಲ್ಲಿ ಹಾಕಿನಿಶಕ್ತಿ ಇಹಳು.
ಬ್ರಹ್ಮಚಕ್ರದಲ್ಲಿ ನಿರ್ಮಾಯಶಕ್ತಿ ಇಹಳು.
ಶಿಖಾಚಕ್ರದಲ್ಲಿ ನಿರ್ಭ್ರಾಂತಶಕ್ತಿ ಇಹಳು.
ಪಶ್ಚಿಮಚಕ್ರದಲ್ಲಿ ನಿರ್ಭಿನ್ನಶಕ್ತಿ ಇಹಳು ನೋಡಾ.
ಇದಕ್ಕೆ ನಿರಾಮಯಾಗಮತಂತ್ರೇ :
''ಆಧಾರೇ ಕಾಕಿನೀಚೈವ ಸ್ವಾಧಿಷ್ಠಾನೇ ಚ ರಾಕಿನಿ ।
ಲಾಕಿನೀ ಮಣಿಪೂರೇ ಚ ಶಾಕಿನಿಶ್ಚ ಅನಾಹತೇ ॥
ವಿಶುದ್ಧೌ ಡಾಕಿನೀಚೈವ ಆಜ್ಞಾಯಾಂ ಹಾಕಿನೀತಥಾ
ಬ್ರಹ್ಮಚಕ್ರೇ ತು ನಿರ್ಮಾಯಾ ಶಿಖಾಚಕ್ರೇ ನಿಭ್ರಾಂತಕಂ ।
ಪಶ್ಚಿಮೇ ತು ನಿರ್ಭಿನ್ನಂ ಚ ಸ್ಥಾನೇ ಸ್ಥಾನೇ ಸಮಾಚರೇತ್ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನವಚಕ್ರಂಗಳುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಸುಖಿಯಾದೆನು. ಇನ್ನು ಷಡ್ವಿಧ ಅಧಿದೇವತೆಗಳುತ್ಪತ್ಯ ನ್ಯಾಸ ಸ್ಥಲವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೭೯

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ಜ್ಯೋತಿಸ್ವರೂಪದಲ್ಲಿ ಆತ್ಮನುತ್ಪತ್ಯವಾದನು.
ಆ ಪ್ರಣವದ ದರ್ಪಣಾಕಾರದಲ್ಲಿ ಸದಾಶಿವನುತ್ಪತ್ಯವಾದನು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಈಶ್ವರನುತ್ಪತ್ಯವಾದನು.
ಆ ಪ್ರಣವದ ಕುಂಡಲಾಕಾರದಲ್ಲಿ ರುದ್ರನುತ್ಪತ್ಯವಾದನು.
ಆ ಪ್ರಣವದ ದಂಡಕಸ್ವರೂಪದಲ್ಲಿ ವಿಷ್ಣು ಉತ್ಪತ್ಯವಾದನು ನೋಡಾ.
ಇದಕ್ಕೆ ಬ್ರಹ್ಮೋತ್ತರಸೂತ್ರಸಾರೇ :
''ಓಂಕಾರ ಜ್ಯೋತಿರೂಪೇ ಚ ಜೀವಾತ್ಮಾ ತತ್ರ ಜಾಯತೇ ।
ಓಂಕಾರದರ್ಪಣಾಕಾರೇ ಸದಾಶಿವಶ್ಚ ಜಾಯತೇ ॥
ಓಂಕಾರೇಚಾರ್ಧಚಂದ್ರೇ ಚ ಈಶ್ವರಃ ತತ್ರಜಾಯತೇ ।
ಓಂಕಾರ ಕುಂಡಲಾಕಾರೇ ಕಾಲರುದ್ರಶ್ಚ ಜಾಯತೇ ॥
ಓಂಕಾರದಂಡರೂಪೇ ಚ ನಾರಾಯಣ ಸಮುದ್ಭವಾಃ ।
ಓಂಕಾರತಾರಕಾರೂಪೇ ವಿರಿಂಚಿಶ್ಚ ಸಜಾಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೭೯ ॥

೪೮೦

ಇನ್ನು ನವಷಡ್ವಿಧ ಅಧಿದೇವತೆಗಳ ನೆಲೆ ಅದೆಂತೆಂದಡೆ :
ಆಧಾರಚಕ್ರಕ್ಕೆ ಬ್ರಹ್ಮನಧಿದೇವತೆ.
ಸ್ವಾಧಿಷ್ಠಾನಚಕ್ರಕ್ಕೆ ವಿಷ್ಣು ಅಧಿದೇವತೆ.
ಮಣಿಪೂರಕಚಕ್ರಕ್ಕೆ ರುದ್ರನಧಿದೇವತೆ.
ಅನಾಹತಚಕ್ರಕ್ಕೆ ಈಶ್ವರನಧಿದೇವತೆ.
ವಿಶುದ್ಧಿಚಕ್ರಕ್ಕೆ ಸದಾಶಿವನಧಿದೇವತೆ.
ಆಜ್ಞಾಚಕ್ರಕ್ಕೆ ಆತ್ಮನಧಿದೇವತೆ.
ಬ್ರಹ್ಮಚಕ್ರಕ್ಕೆ ಅಂತರಾತ್ಮನೆಂಬ ಮಹಾಗುರುವೆ ಅಧಿದೇವತೆ.
ಶಿಖಾಚಕ್ರಕ್ಕೆ ಪರಮಾತ್ಮನೆಂಬ ಮಹಾಲಿಂಗವೇ ಅಧಿದೇವತೆ.
ಪಶ್ಚಿಮಚಕ್ರಕ್ಕೆ ಸರ್ವಾತ್ಮನೆಂಬ ಮಹಾಜಂಗಮವೆ ಅಧಿದೇವತೆ ನೋಡಾ.
ಇದಕ್ಕೆ **ಚಿತ್ಪ್ರಕಾಶಾಗಮೇ** :
''ಆಧಾರೇ ಬ್ರಹ್ಮದೈವತಂ ಸ್ವಾಧಿಷ್ಠೇ ವಿಷ್ಣುದೈವತಂ ।
ರುದ್ರಂ ಚ ಮಣಿಪೂರೇ ಚ ಈಶ್ವರಂ ಚ ಅನಾಹತೇ ॥
ವಿಶುದ್ಧಿಶ್ಚ ಶಿವಂ ಚೈವ ಆಜ್ಞೇಯ ಆತ್ಮದೈವತಂ ।
ಬ್ರಹ್ಮಚಕ್ರಂತರಾತ್ಮಾ ಚ ಶಿಖಾಚಕ್ರಪರಂ ತಥಾ ।
ಸರ್ವಾತ್ಮಾ ಪಶ್ಚಿಮಶ್ಚೈವ ಇತಿ ಭೇದಂ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೦ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧ ಅಧಿದೇವತೆಗಳುತ್ಪತ್ಯವನು ನವ ಅಧಿದೇವತೆಗಳ ನ್ಯಾಸ ಸ್ಥಲವನು ನಿಮ್ಮ ಕೃಪೆಯಿಂದ ಕಂಡು ಸುಖಿಯಾದೆನು. ಮುಂದೆ ಅಷ್ಟನಾದದುತ್ಪತ್ಯವನು ನ್ಯಾಸ ಸ್ಥಲವನು ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೮೧

ನಿಶ್ಶಬ್ದವೆಂಬ ಪರಬ್ರಹ್ಮದ ನೆನಹುಮಾತ್ರದಲ್ಲಿ–
'ಸಿಂಹನಾದೋ ಭವತಿ । ಓಂ ಗುಹ್ಯಾತ್ಮಾ ದೇವತಾ' ಎಂದು ಶ್ರುತಿ.
ಆ ಸಿಂಹನಾದದಲ್ಲಿ ದಿವ್ಯನಾದ ಉತ್ಪತ್ಯವಾಯಿತ್ತು.
ಆ ದಿವ್ಯನಾದದಲ್ಲಿ ಪ್ರಣವನಾದ ಉತ್ಪತ್ಯವಾಯಿತ್ತು.
ಆ ಪ್ರಣವನಾದದಲ್ಲಿ ಮೇಘನಾದ ಉತ್ಪತ್ಯವಾಯಿತ್ತು.
ಆ ಮೇಘನಾದದಲ್ಲಿ ಭೇರೀನಾದ ಉತ್ಪತ್ಯವಾಯಿತ್ತು.
ಆ ಭೇರೀನಾದದಲ್ಲಿ ಘಂಟಾನಾದ ಉತ್ಪತ್ಯವಾಯಿತ್ತು.
ಆ ಘಂಟಾನಾದದಲ್ಲಿ ವೀಣಾನಾದ ಉತ್ಪತ್ಯವಾಯಿತ್ತು.
ಆ ವೀಣಾನಾದದಲ್ಲಿ ಪೆಣ್ದುಂಬಿಯನಾದ ಉತ್ಪತ್ಯವಾಯಿತ್ತು.
ಇದಕ್ಕೆ **ಅಥರ್ವಣವೇದೇ** :

``ಓಂ ಪರಬ್ರಹ್ಮೇ ಸಿಂಹನಾದೋ ಜನಿತಾ ।
ಸಿಂಹನಾದೇ ದಿವ್ಯನಾದೋ ಭವತಿ ।
ದಿವ್ಯನಾದೇ ಪ್ರಣವನಾದೋ ಭವತಿ ।
ಪ್ರಣವನಾದೇ ಮೇಘನಾದೋ ಜನಿತಾ ॥
ಮೇಘನಾದೇ ಭೇರೀನಾದೋ ಭವತಿ ।
ಭೇರೀನಾದೇ ಘಂಟಾನಾದೋ ಜನಿತಾ।
ಘಂಟಾನಾದಸ್ಯ ವೀಣಾನಾದೋ ಭವತಿ ।
ವೀಣಾನಾದೇ ಭ್ರಮರನಾದೋ ಜನಿತಾ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೪೮೧ ॥

೪೮೨

ಇನ್ನು ಅಷ್ಟನಾದದ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಪೆಣ್ದುಂಬಿಯನಾದವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ವೀಣಾನಾದವಿಹುದು.
ಮಣಿಪೂರಕ ಚಕ್ರದಲ್ಲಿ ಘಂಟಾನಾದವಿಹುದು.
ಅನಾಹತಚಕ್ರದಲ್ಲಿ ಭೇರೀನಾದವಿಹುದು.
ವಿಶುದ್ಧಿಚಕ್ರದಲ್ಲಿ ಮೇಘಧ್ವನಿನಾದವಿಹುದು.
ಆಜ್ಞಾಚಕ್ರದಲ್ಲಿ ಪ್ರಣವನಾದವಿಹುದು.
ಬ್ರಹ್ಮಚಕ್ರದಲ್ಲಿ ದಿವ್ಯನಾದವಿಹುದು.
ಶಿಖಾಚಕ್ರದಲ್ಲಿ ಸಿಂಹನಾದವಿಹುದು ನೋಡಾ.
**ಇದಕ್ಕೆ ರುದ್ರಕೋಟಿ ಸಂಹಿತಾಯಾಂ :**
``ಆಧಾರೇ ಭ್ರಮರಂ ಚೈವ ಸ್ವಾಧಿಷ್ಠೇ ವೀಣಕಂ ತಥಾ ।
ಮಣಿಪೂರೇ ಚ ಘಂಟಾ ಚ ಭೇರೀನಾದಂಚಾನಾಹತಂ ॥
ವಿಶುದ್ಧೌ ಮೇಘನಾದಂ ಚ ಆಜ್ಞೇ ಪ್ರಣವನಾದಕಂ ।
ಬ್ರಹ್ಮಾ ಚ ದಿವ್ಯನಾದಂ ಚ ಸಿಂಹನಾದೇ ಶಿಖಾಗ್ರಕಂ ।
ಏವಮಷ್ಟನಾದಂ ಜ್ಞಾತ್ವಾ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವ. ॥ ೪೮೨ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಅಷ್ಟನಾದ ಉತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಕೃಪಾದೃಷ್ಟಿಯಿಂದ ಕಂಡು ಸುಖಿಯಾದೆನು. ಇನ್ನು ಷಡ್ವಿಧ ಭಕ್ತಿ ಉತ್ಪತ್ಯ ನ್ಯಾಸ ಸ್ಥಲಪ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೮೩

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಸಮರಸಭಕ್ತಿ ಹುಟ್ಟಿತ್ತು

ಆ ಪ್ರಣವದ ದರ್ಪಣಾಕಾರದಲ್ಲಿ ಆನಂದಭಕ್ತಿ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಅನುಭಾವಭಕ್ತಿ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಅವಧಾನಭಕ್ತಿ ಹುಟ್ಟಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ನೈಷ್ಠಿಕಾಭಕ್ತಿ ಹುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಸದ್ಭಕ್ತಿ ಹುಟ್ಟಿತ್ತು ನೋಡಾ.
ಇದಕ್ಕೆ **ಪ್ರಳಯಕಾಲರುದ್ರಸಂಹಿತಾಯಾಂ :**
''ಓಂಕಾರ ಜ್ಯೋತಿಸ್ವರೂಪೇ ಚ ಸಮರಸಭಕ್ತಿರುದ್ಭವಂ ।
ಓಂಕಾರ ದರ್ಪಣಾಕಾರೇ ಆನಂದಭಕ್ತಿರುದ್ಭವಂ ॥
ಓಂಕಾರ ಅರ್ಧಚಂದ್ರೇ ಚ ಅನುಭಾವ ಸಮುದ್ಭವಂ ।
ಓಂಕಾರ ಕುಂಡಲಾಕಾರೇ ಅವಧಾನಸಮುದ್ಭವಂ ।
ಓಂಕಾರದಂಡರೂಪೇ ಚ ನೈಷ್ಠಿಕಾಭಕ್ತಿರುದ್ಭವಂ ।
ಓಂಕಾರ ತಾರಕಾರೂಪೇ ಸದ್ಭಕ್ತಿಶ್ಚ ಸಮುದ್ಭವಂ ।
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೩ ॥

೪೮೪

ಇನ್ನು ಷಡ್ವಿಧಭಕ್ತಿಯ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಸದ್ಭಕ್ತಿ ಇಹುದು.
ಸ್ವಾಧಿಷ್ಠಾನಚಕ್ರದಲ್ಲಿ ನೈಷ್ಠಿಕಾಭಕ್ತಿ ಇಹುದು.
ಮಣಿಪೂರಕಚಕ್ರದಲ್ಲಿ ಅವಧಾನಭಕ್ತಿ ಇಹುದು.
ವಿಶುದ್ಧಿಚಕ್ರದಲ್ಲಿ ಆನಂದಭಕ್ತಿ ಇಹುದು.
ಆಜ್ಞಾಚಕ್ರದಲ್ಲಿ ಸಮರಸಭಕ್ತಿ ಇಹುದು ನೋಡಾ.
ಇದಕ್ಕೆ **ಚಕ್ರಾತೀತಾಗಮೇ :**
''ಆಧಾರೇ ಭೃತ್ಯಭಕ್ತಿಶ್ಚ ಸ್ವಾಧಿಷ್ಠೇ ನೈಷ್ಠಿಕಂ ತಥಾ ।
ಅವಧಾನ ತಥಾ ಪೂರೇ ಅನುಭಾವಂಚಾನಾಹತೇ ॥
ಆನಂದಾಶ್ಚ ವಿಶುದ್ಧಿಶ್ಚ ಆಜ್ಞೇ ಸಮರಸಂ ಭವೇತ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೪ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಭಕ್ತಿಯುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಜ್ಞಾನಾನುಭವಪ್ರಕಾಶದೃಕ್ಕಿನಿಂದ ಕಂಡು ಪರಮಸುಖಿ ಯಾದೆನು. ಇನ್ನು ಷಡ್ವಿಧಪರಿಣಾಮದುತ್ಪತ್ಯ ನ್ಯಾಸ ಸ್ಥಲವ ನಿರೂಪಿಸಿಯೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೮೫

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಪರಿಣಾಮ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶಬ್ದ ಉತ್ಪತ್ಯವಾಯಿತ್ತು.

ಆ ಪ್ರಣವದ ಅರ್ಧಚಂದ್ರಕದಲ್ಲಿ ಸ್ಪರ್ಶ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ರೂಪ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ರಸ ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಗಂಧ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
''ಓಂಕಾರ ಜ್ಯೋತಿರೂಪೇಚ ತೃಪ್ತಿಶ್ಚೈವಸಮುದ್ಭವಾ ।
ಓಂಕಾರ ದರ್ಪಣಾಕಾರೇ ಶಬ್ದಶ್ಚೈವಂ ಸಮುದ್ಭವಃ ॥
ಓಂಕಾರ ಅರ್ಧಚಂದ್ರೇ ಚ ಸ್ಪರ್ಶನಂ ಚ ಸಮುದ್ಭವಂ ।
ಓಂಕಾರ ಕುಂಡಲಾಕಾರೇ ರೂಪಂ ಚೈವಂ ಸಮುದ್ಭವಂ ॥
ಓಂಕಾರದಂಡರೂಪೇಚ ರಸಶ್ಚ್ಯೈವ ಸಮುದ್ಭವಃ ।
ಓಂಕಾರತಾರಕಾರೂಪೇ ಗಂಧಶ್ಚೈವ ಸಮುದ್ಭವಃ ॥
ಇತಿ ಷಷ್ಠದ್ರವ್ಯಂ ಚೈವ ಸ್ಥಾನ ಸ್ಥಾನೇ ಸಮುದ್ಭವಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೫ ॥

೪೮೬

ಇನ್ನು ಷಡ್ವಿಧ ಪರಿಣಾಮದ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಗಂಧವಿಹುದು.
ಸ್ವಾಧಿಷ್ಠಾನಚಕ್ರದಲ್ಲಿ ರಸವಿಹುದು.
ಮಣಿಪೂರಕಚಕ್ರದಲ್ಲಿ ರೂಪವಿಹುದು.
ಅನಾಹತಚಕ್ರದಲ್ಲಿ ಸ್ಪರ್ಶನವಿಹುದು.
ವಿಶುದ್ಧಿಚಕ್ರದಲ್ಲಿ ಶಬ್ದವಿಹುದು.
ಆಜ್ಞಾಚಕ್ರದಲ್ಲಿ ಪರಿಣಾಮವಿಹುದು ನೋಡಾ.
ಇದಕ್ಕೆ **ಮಹಾವಾತುಲತಂತ್ರೇ** :
''ಧಾರೇ ವರ್ತತೇ ಗಂಧೋ ಸ್ವಾಧಿಷ್ಠಾನೇ ರಸಸ್ತಥಾ ।
ಮಣಿಪೂರೇ ಚ ರೂಪಂ ಚ ಸ್ಪರ್ಶನಂಚನಾಹತೇ ।
ವಿಶುದ್ಧೌ ಸ್ಥಿಯತೇ ಸಬ್ದಃ ಆಜ್ಞೇಯಂ ತೃಪ್ತಿರೇವಚ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೬ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧ ಪರಿಣಾಮದುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು ಕಂಡು ಪರಮ ಸುಖಿಯಾದೆನು. ಇನ್ನು ಚತುರ್ವೇದ, ಅಜಪೆ, ಗಾಯತ್ರಿ ಉತ್ಪತ್ಯ ನ್ಯಾಸ ಸ್ಥಲವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ:

೪೮೭

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ತಾರಕಸ್ವರೂಪದಲ್ಲಿ–

''ಉದಾತ್ತ ಋಗ್ವೇದೋ ಭವತಿ ಓಂ ನಕಾರೋ ದೇವತಾ ।
ತಾರಕೇ ಚ ಲಯಂ ಪ್ರಾಪ್ತೇ ಪ್ರಥಮಂ ಪ್ರಣವಾಂಶಕೇ ॥
ಆ ಪ್ರಣವದ ದಂಡಸ್ವರೂಪದಲ್ಲಿ–
''ಅನುದಾತ್ತಶ್ಚ ಯಜುರ್ವೇದಃ ಭವತಿ ಓಂ ಮಕಾರೋ ದೇವತಾ ।
ದಂಡಕೇ ಚ ಲಯಂ ಪ್ರಾಪ್ತೇ ದ್ವಿತೀಯಂ ಪ್ರಣವಾಂಶಕೇ ॥''
ಆ ಪ್ರಣವದ ಕುಂಡಲಾಕಾರದಲ್ಲಿ–
''ಸ್ವರಿತಶ್ಚ ಸಾಮವೇದೋ ಭವತಿ ಓಂ ಶಿಕಾರೋ ದೇವತಾ ।
ಕುಂಡಲೇ ಚ ಲಯಂ ಪ್ರಾಪ್ತೇ ತೃತೀಯಂ ಪ್ರಣವಾಂಶಕೇ ॥''
ಆ ಪ್ರಣವದ ಅರ್ಧಚಂದ್ರಕದಲ್ಲಿ–
''ಪ್ರಚರಶ್ಚಥರ್ವವೇದೋ ಭವತಿ ಓಂ ವಕಾರೋ ದೇವತಾ ।
ಅರ್ಧಚಂದ್ರೇ ಚ ಲಯಂ ಪ್ರಾಪ್ತೇ ಚತುರ್ಥಂ ಪ್ರಣವಾಂಶಕೇ ॥''
ಆ ಪ್ರಣವದ ದರ್ಪಣಾಕಾರದಲ್ಲಿ–
''ಗಾಯತ್ರೀಛಂದೋ ಭವತಿ ಓಂ ಯಕಾರೋ ಭವತಿ ।
ದರ್ಪಣೇ ಚ ಲಯಂ ಪ್ರಾಪ್ತೇ ಪಂಚಮಂ ಪ್ರಣವಾಂಶಕೇ ॥''
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ–
''ಆತ್ಮಾಚ ಜಪೋ ಭವತಿ ಓಂ ಪ್ರಣವೋ ದೇವತಾ ।
ಜ್ಯೋತಿರೂಪೇಚ ಲಯಂ ಪ್ರಾಪ್ತೇ ಷಷ್ಠಮಂ ಪ್ರಣವಾಂಶಕೇ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೮೭ ॥

### ೪೮೮

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಾಸ್ವರೂಪದಲ್ಲಿ ಋಗ್ವೇದ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ಯಜುರ್ವೇದ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಸಾಮವೇದ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಅಥರ್ವಣವೇದ ಹುಟ್ಟಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಗಾಯತ್ರಿ ಉತ್ಪತ್ಯವಾಯಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಅಜಪೆ ಹುಟ್ಟಿತು ನೋಡಾ.
ಇದಕ್ಕೆ ಶಿವಧರ್ಮೋತ್ತರೇ :
''ಓಂಕಾರಜ್ಯೋತಿರೂಪೇ ಚ ಅಜಪಾತ್ಮತ್ರ ಜಾಯತೇ ।
ಓಂಕಾರ ದರ್ಪಣಾಕಾರೇ ಗಾಯತ್ರೀ ಚ ಸಮುದ್ಭವಾ ॥
ಓಂಕಾರ ಅರ್ಧಚಂದ್ರೇ ಚ ಅಥರ್ವಣಂಚಾತ್ರಜಾಯತೇ ।
ಓಂಕಾರ ಕುಂಡಲಾಕಾರೇ ಸಾಮವೇದಾಶ್ಚ ಜಾಯತೇ ॥
ಓಂಕಾರ ದಂಡರೂಪೇ ಚ ಯಜುರ್ವೇದಶ್ಚ ಜಾಯತೇ ।
ಓಂಕಾರ ತಾರಕಾರೂಪೇ ಋಗ್ವೇದಃ ತತ್ರ ಜಾಯತೇ ।

ಏವಂ ಸಮುತ್ಪನ್ನಾಃ ಸುಸೂಕ್ಷ್ಮಂ ಕಮಲಾನನೇ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೪೮೮ ||

೪೮೯

ಇನ್ನು ಋಗ್ವೇದ ಯಜುರ್ವೇದ ಅಥರ್ವಣವೇದ
ಗಾಯತ್ರಿ ಅಜಪೆಯ ನೆಲೆ ಅದೆಂತೆಂದಡೆ :
ಆಧಾರಚಕ್ರದಲ್ಲಿ ಋಗ್ವೇದವಿಹುದು.
ಸ್ವಾಧಿಷ್ಠಾನಚಕ್ರದಲ್ಲಿಯಜುರ್ವೇದವಿಹುದು.
ಮಣಿಪೂರಕಚಕ್ರದಲ್ಲಿಸಾಮವೇದವಿಹುದು.
ಅನಾಹತಚಕ್ರದಲ್ಲಿಅಥರ್ವಣವೇದವಿಹುದು.
ವಿಶುದ್ಧಿಚಕ್ರದಲ್ಲಿ ಗಾಯತ್ರಿ ಇಹುದು.
ಆಜ್ಞಾಚಕ್ರದಲ್ಲಿ ಅಜಪೆ ಇಹುದು ನೋಡಾ
ಇದಕ್ಕೆ **ನೀಲಕಂಠಸಂಹಿತಾಯಾಂ** :
''ಆಧಾರೇ ಋಗ್ವೇದಶ್ಚೈವ ಸ್ವಾಧಿಷ್ಠೇ ಯಜುರ್ವೇದಕಂ |
ಮಣಿಪೂರೇ ಚ ಸಾಮಂಚ ಅತಃ ಶ್ರುತಿಶ್ಚನಾಹತೇ |
ಗಾಯತ್ರಿಶ್ಚ ವಿಶುದ್ಧಿಶ್ಚ ಆಜ್ಞೇಯಾ ಅಜಪಂ ಭವೇತ್ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೪೮೯ ||

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಚತುರ್ವೇದ ಅಜಪೆ ಗಾಯತ್ರಿ ಉತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾ ಅಖಂಡವಾಕ್ಯಂಗಳಿಂದ ಕಂಡು ಮಹಾನುಭಾವ ಸುಖಿಯಾದೆನು. ಇನ್ನು ಷಷ್ಠ ಸಂಜ್ಞೆಯನುಳ್ಳ ಅಖಂಡಲಿಂಗದ ವರ್ಮವನು, ಷಷ್ಠ ಸಂಜ್ಞೆಯ ನ್ಯಾಸಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೯೦

ಲಿಂಗವೆಂಬುದು ನಾದಬಿಂದುಕಲಾತೀತ.
ಲಿಂಗವೆಂಬುದು ಅಖಂಡಜ್ಞಾನ.
ಲಿಂಗವೆಂಬುದು ಅಖಂಡಪರಿಪೂರ್ಣ.
ಲಿಂಗವೆಂಬುದು ನಿಃಶಬ್ದಬ್ರಹ್ಮ
ಲಿಂಗವೆಂಬುದು ಅಖಂಡಗೋಳಕಾಕಾರ.
ಲಿಂಗವೆಂಬುದು ನಿರಾಳ ನಿರಂಜನ ನಿರಾಮಯಾತೀತ.
ಲಿಂಗವೆಂಬುದು ಅತ್ಯತಿಷ್ಠದ್ದಶಾಂಗುಲವೆಂಬ
ಘನಕ್ಕೆ ಘನವಾದ ಮಹಾಘನ.
ಲಿಂಗವೆಂಬುದು ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ
ಸಮಸ್ತ ದೇವರ್ಕಳ ಜನ್ಮಭೂಮಿ.

ಲಿಂಗವೆಂಬುದು ಹರಿಬ್ರಹ್ಮಾದಿಗಳ ನಡುವೆ ನೆಗಳ್ದ ಜ್ಯೋತಿರ್ಮಯ.
ಇದು ಲಿಂಗದ ವರ್ಮ ನೋಡಾ.
ಇದಕ್ಕೆ **ಮಹಾಲಿಂಗಾಗಮೇ** :
''ಅಖಿಲಾರ್ಣವಾ ಲಯಾನಾಂ ಲಿಂಗಮುಖ್ಯಂ ಪರಂ ತಥಾ ।
ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ ।
ಯಥಾಮೈಶ್ವರಂ ತೇಜಂ ತಲ್ಲಿಂಗಂ ಪಂಚಸಂಜ್ಞಕಂ ॥''
ಇಂತೆಂದುದಾಗಿ.
ಇದಕ್ಕೆ **ಮಹಾಲಿಂಗಸೂತ್ರೇ** :
''ಅಸಂಖ್ಯಾತ ಮಹಾವಿಷ್ಣು ಅಸಂಖ್ಯಾತ ಪಿತಾಮಹಾಃ ।
ಅಸಂಖ್ಯಾತ ಸೇಂದ್ರಾಣಾಂ ಲೀಯತೇ ಸರ್ವದೇವತಾಃ ॥
ವಿಷ್ಣುಸಂಜ್ಞಾ ಅಸಂಖ್ಯಾತಾ ಅಸಂಖ್ಯಾತಾಪಿತಾಮಹಾಃ ।
ಅಸಂಖ್ಯಾತಾ ದೇವಮುನಯೋ ಗಮ್ಯತೇ ಸರ್ವದೇವತಾಃ ॥
ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇವ ಲಿಂಗಮಿತ್ಯುಕ್ತಂ ಲಿಂಗತತ್ವಂ ಪರಾಯಣೈಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೦ ॥

೪೯೧

ಆಧಾರಚಕ್ರದಲ್ಲಿ ಅನಾದಿಯೆಂಬ ಸಂಜ್ಞೆ,
ಸ್ವಾಧಿಷ್ಠಾನಚಕ್ರದಲ್ಲಿ ಲಿಂಗಕ್ಷೇತ್ರವೆಂಬ ಸಂಜ್ಞೆ,
ಮಣಿಪೂರಕಚಕ್ರದಲ್ಲಿ ಶರೀರವೆಂಬ ಸಂಜ್ಞೆ,
ಅನಾಹತಚಕ್ರದಲ್ಲಿ ಗೂಢವೆಂಬ ಸಂಜ್ಞೆ,
ವಿಶುದ್ಧಿಚಕ್ರದಲ್ಲಿ ಪರವೆಂಬ ಸಂಜ್ಞೆ,
ಆಜ್ಞಾಚಕ್ರದಲ್ಲಿ ನಿರಾಕುಳವೆಂಬ ಸಂಜ್ಞೆ ನೋಡಾ.
ಇದಕ್ಕೆ **ಶಿವಲಿಂಗಸೂತ್ರೇ** :
''ಆಧಾರೇsನಾದಿಸಂಜ್ಞಾ ಚ ಸ್ವಾಧಿಷ್ಠೇ ಲಿಂಗಕ್ಷೇತ್ರಕಂ ।
ಶರೀರಂ ಮಣಿಪೂರೇ ಚ ಗೂಢಂ ಚಾನಾಹತೇ ತಥಾ ॥
ವಿಶುದ್ಧೌ ಚ ಪರಂ ಚೈವ ಆಜ್ಞಾ ನಿರಾಕುಳಂ ಭವೇತ್ ।
ಇತಿ ಷಷ್ಠ ಸಂಜ್ಞೇ ಜ್ಞಾತುಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೧ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಷ್ಠಸಂಜ್ಞೆಯನುಳ್ಳ ಅಖಂಡ ಲಿಂಗದ ವರ್ಮ ನ್ಯಾಸ ಸ್ಥಲವನು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಇನ್ನು ಷಡುಚಕ್ರದ ಅರ್ಪಿತವಧಾನ ಭೇದವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೯೨

ಗುದಸ್ಥಾನದಲ್ಲಿ ಆಧಾರಚಕ್ರ, ಪೃಥ್ವಿ ಎಂಬ ಮಹಾಭೂತ.
ಆ ಚಕ್ರ ಚತುಷ್ಕೋಣಾಕಾರ, ಚತುರ್ದಳಪದ್ಮ
ಆ ಪದ್ಮ ಕೆಂಪುವರ್ಣ, ಅಲ್ಲಿ 'ವ ಶ ಷ ಸ' ಎಂಬ ಚತುರಾಕ್ಷರ.
ಅಲ್ಲಿ ಪೀತವರ್ಣವಾದ ಸದ್ಯೋಜಾತಮುಖವನುಳ್ಳ ಆಚಾರಲಿಂಗ.
ಆ ಲಿಂಗಕ್ಕೆ ನಿವೃತ್ತಿಕಲೆ, ಅಲ್ಲಿ ಕರ್ಮಸಾದಾಖ್ಯ, ಪಶ್ಚಿಮದಿಕ್ಕು.
ಅಲ್ಲಿ ಪೆಣ್ದುಂಬಿಯ ನಾದ.
ಆ ಲಿಂಗಕ್ಕೆ ಕಾಕಿನಿ ಎಂಬ ಪರಿಯಾಯನಾಮವನುಳ್ಳ ಕ್ರಿಯಾಶಕ್ತಿ
ಋಗ್ವೇದವನುಚ್ಚರಿಸುತ್ತ ಸುಚಿತ್ತವೆಂಬ ಹಸ್ತದಿಂದ
ಸುಗಂಧವೆಂಬ ದ್ರವ್ಯವನು
ಲಿಂಗದ ಘ್ರಾಣವೆಂಬ ಮುಖಕ್ಕೆ ಸದ್ಭಕ್ತಿಯಿಂದರ್ಪಿಸುವಳು.
ಬ್ರಹ್ಮ ಪೂಜಾರಿ, ಅನಾದಿಯೆಂಬ ಸಂಜ್ಞೆ.
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ನಕಾರವೆಂಬ ಬೀಜಾಕ್ಷರ.
ಅದು ಪ್ರಣವದ ತಾರಕಸ್ವರೂಪದಲ್ಲಿಹ ನಕಾರದಲ್ಲಿಹುದಾಗಿ
ಆ ಈ ಊ ಏಂ ಓಂ ನಾಂ ಎಂಬ
ಬ್ರಹ್ಮನಾದಮಂತ್ರಮೂರ್ತಿಪ್ರಣವದ ಶಿರೋಮಧ್ಯದಲ್ಲಿಹ
ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ ನಮಸ್ಕಾರವು ನೋಡಾ.
ಇದಕ್ಕೆ **ಈಶ್ವರೋವಾಚ** :
''ಗುದೇಷಾತಸ್ಥಿತಾ ಚಕ್ರಂ ಆಧಾರಂ ಪೃಥ್ವಿರೂಪಕಂ ।
ಚತುರಾಕೃತಿರಾಕಾರಂ ಚವುದಳಪದ್ಮವೇವಚ ॥
ಅಕ್ಷರಂ ಚ ಚತುರ್ವೇದಂ ಅಧಿದೈವಂ ಪ್ರಜಾಪತಿಃ ।
ವರ್ಣಂತು ಪೀತವರ್ಣಾನಾಂ ಬೀಜಾಕ್ಷರಂ ನಕಾರಯೇತ್ ॥
ಭ್ರಮರಂ ಸ್ತ್ರೀಸ್ವರಂ ನಾದಂ ಕಾಕಿನೀಶಕ್ತಿಮೇವ ಚ ।
ಆಚಾರಲಿಂಗಯೋಸ್ಥಿತ್ವಾ ದ್ವಿತೀಚಕ್ರಕ್ರಮಂ ಶ್ರುಣು ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೨ ॥

೪೯೩

ಅಲ್ಲಿಂದ ಮೇಲೆ ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ,
ಅಪ್ಪುವೆಂಬ ಮಹಾಭೂತ.
ಆ ಚಕ್ರ ಧನುರ್ಗತಿಯಾಕಾರ, ಷಡ್ದಳ ಪದ್ಮ
ಆ ಪದ್ಮ ಪಚ್ಚೆಯವರ್ಣ, ಅಲ್ಲಿಯ ಅಕ್ಷರ–
'ಬ ಭ ಮ ಯ ರ ಲ'– ಎಂಬ ಷಡಕ್ಷರ ನ್ಯಾಸವಾಗಿಹುದು.
ಅಲ್ಲಿ ಶ್ವೇತವರ್ಣವಾಗಿಹ ವಾಮದೇವಮುಖವನುಳ್ಳ ಗುರುಲಿಂಗ.
ಆ ಲಿಂಗಕ್ಕೆ ಪ್ರತಿಷ್ಠೆಕಲೆ, ಅಲ್ಲಿ ಕರ್ತೃಸಾದಾಖ್ಯ,

ಉತ್ತರ ದಿಕ್ಕು, ಅಲ್ಲಿ ವೀಣಾನಾದ.
ರಾಕಿನಿಯೆಂಬ ಪರಿಯಾಯ ನಾಮವನುಳ್ಳ ಜ್ಞಾನಶಕ್ತಿ
ಸುಬುದ್ಧಿಯೆಂಬ ಹಸ್ತದಿಂ ಲಿಂಗದ ಜಿಹ್ವೆಯೆಂಬ ಮುಖಕ್ಕೆ ರಸದ್ರವ್ಯವನು
ನೈಷ್ಠಿಕಾಭಕ್ತಿಯಿಂದ ಯಜುರ್ವೇದವನುಚ್ಚರಿಸುತ್ತ ಅರ್ಪಿಸುವಳು.
ವಿಷ್ಣು ಪೂಜಾರಿ, ಲಿಂಗಕ್ಷೇತ್ರವೆಂಬ ಸಂಜ್ಞೆ;
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಮಕಾರವೆಂಬ ಬೀಜಾಕ್ಷರ.
ಅದು ಪ್ರಣವದ ದಂಡಸ್ವರೂಪದಲ್ಲಿಹ ಮಕಾರದಲ್ಲಿಹುದಾಗಿ
ಆ ಈ ಊ ಏಂ ಓಂ ಮಾಂ ಎಂಬ
ಬ್ರಹ್ಮನಾದಮಂತ್ರಮೂರ್ತಿಪ್ರಣವದ ಶಿರೋಮಧ್ಯದಲ್ಲಿಹ
ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ ನಮಸ್ಕಾರವು ನೋಡಾ.
ಇದಕ್ಕೆ ಈಶ್ವರೋಽವಾಚ :
''ಲಿಂಗೇ ಸ್ವಾಧಿಷ್ಠಚಕ್ರಂತು ಭೂತಮಾಪಃ ಧನುಃಕೃತಿಃ ।
ಪದ್ಮಂ ಷಡ್ದಳಂ ಚೈವ ಷಡಕ್ಷರಸ್ಥಿತಂ ತಥಾ ।
ವರ್ಣಾಯ ಪಶ್ಚಯೋಶ್ಚೈವ ಅಧಿದೈವಂ ಹರಿಸ್ಮೃತಂ ।
ಬೀಜಾಕ್ಷರ ಮಕಾರಂಚ ರಾಕಿನೀಶಕ್ತಿರೇವ ಚ ।
ವೀಣಾನಾದ ಗುದೋರ್ಲಿಂಗಂ ತಿಷ್ಠತಿ ಶ್ರುಣು ಪಾರ್ವತೀ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೩ ॥

೪೯೪

ಅಲ್ಲಿಂದ ಮೇಲೆ ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ,
ಅಗ್ನಿಯೆಂಬ ಮಹಾಭೂತ.
ಆ ಚಕ್ರ ತ್ರಿಕೋಣಾಕಾರ, ದಶದಳಪದ್ಮ,
ಆ ಪದ್ಮ ಕೃಷ್ಣವರ್ಣ, ಅಲ್ಲಿಯ ಅಕ್ಷರ ಡಢಣ ತಥದಧನ ಪಫ
ಎಂಬ ದಶಾಕ್ಷರ ನ್ಯಾಸವಾಗಿಹುದು.
ಅಲ್ಲಿ ರಕ್ತವರ್ಣವಾಗಿಹ ಅಘೋರಮುಖವನುಳ್ಳ ಶಿವಲಿಂಗ ;
ಆ ಲಿಂಗಕ್ಕೆ ವಿದ್ಯೆ ಕಲೆ, ಅಲ್ಲಿ ಮೂರ್ತಿಸಾದಾಖ್ಯ.
ಅಲ್ಲಿಯ ದಿಕ್ಕು ದಕ್ಷಿಣದಿಕ್ಕು, ಅಲ್ಲಿಯ ನಾದ ಘಂಟಾನಾದ.
ಲಾಕಿನಿಯೆಂಬ ಪರಿಯಾಯ ನಾಮವನುಳ್ಳ ಇಚ್ಛಾಶಕ್ತಿ
ಆ ಲಿಂಗದ ನೇತ್ರವೆಂಬ ಮುಖಕ್ಕೆ ನಿರಹಂಕಾರವೆಂಬ ಹಸ್ತದಿಂದ
ಅವಧಾನಭಕ್ತಿಯಿಂದ ರೂಪುದ್ರವ್ಯವನು
ಸಾಮವೇದವನುಚ್ಚರಿಸುತ್ತ ಅರ್ಪಿಸುವಳು.
ರುದ್ರ ಪೂಜಾರಿ, ಅಲ್ಲಿ ಶರೀರವೆಂಬ ಸಂಜ್ಞೆ.
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಶಿಕಾರವೆಂಬ ಬೀಜಾಕ್ಷರ.
ಅದು ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರದಲ್ಲಿಹುದಾಗಿ,

ಆ ಈ ಊ ಏ ಓ ಶಿಂ ಎಂಬ ಬ್ರಹ್ಮನಾದ ಮಂತ್ರಮೂರ್ತಿಪ್ರಣವದ
ಶಿರೋಮಧ್ಯದಲ್ಲಿಹ ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ
ನಮಸ್ಕಾರವು ನೋಡಾ.
ಇದಕ್ಕೆ **ಈಶ್ವರೋವಾಚ** :
''ಮಣಿಪೂರೇನಾಭಿಮಧ್ಯೇ ಭೂತಂ ತೇಜಃ ತ್ರಿಕೋಣಯೋಃ ।
ಪದ್ಮಂ ದಶದಳಂ ಚೈವ ಅಕ್ಷರಂ ಚ ದಶಂ ಸ್ಮೃತಂ ।
ವರ್ಣಾನಾಂ ಕೃಷ್ಣವರ್ಣಂತು ರುದ್ರೇ ದೇವಸ್ಯ ಲಾಕಿನಿ ।
ಬೀಜಾಕ್ಷರಂ ಶಿಕಾರಂ ಚ ಘಂಟಾನಾದಂ ತಥೈವಚ ।
ಶಿವಲಿಂಗಂ ಸ್ಥಿತಂ ಚೈವಂ ತ್ರಯೋಶ್ಚಕ್ರಮಿತಿ ಸ್ಮೃತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೪ ॥

೪೯೫

ಅಲ್ಲಿಂದ ಮೇಲೆ ಹೃದಯಸ್ಥಾನದಲ್ಲಿ
ಅನಾಹತಚಕ್ರ, ವಾಯುವೆಂಬ ಮಹಾಭೂತ.
ಆ ಚಕ್ರ ಷಟ್ಕೋಣಾಕಾರ, ದ್ವಾದಶದಳಪದ್ಮ, ಆ ಪದ್ಮ ಕುಂಕುಮವರ್ಣ,
ಅಲ್ಲಿಯ ಅಕ್ಷರ ಕಖಗಘಙ ಚಛಜಝಞ ಟಠ
ಎಂಬ ದ್ವಾದಶಾಕ್ಷರ ನ್ಯಾಸವಾಗಿಹುದು.
ಅಲ್ಲಿ ತತ್ಪುರುಷಮುಖವನುಳ್ಳ ಜಂಗಮಲಿಂಗ, ಆ ಲಿಂಗಕ್ಕೆ ಶಾಂತಿಕಲೆ,
ಅಲ್ಲಿ ಅಮೂರ್ತಿಸಾದಾಖ್ಯ, ಅಲ್ಲಿಯ ದಿಕ್ಕು ಪೂರ್ವದಿಕ್ಕು,
ಅಲ್ಲಿಯ ನಾದ ಭೇರೀನಾದ,
ಶಾಕಿನಿಯೆಂಬ ಪರಿಯಾಯ ನಾಮವನುಳ್ಳ ಆದಿಶಕ್ತಿ
ಲಿಂಗದ ತ್ವಕ್ಕೆಂಬ ಮುಖಕ್ಕೆ ಸುಮನವೆಂಬ ಹಸ್ತದಿಂದ ಅನುಭಾವಭಕ್ತಿಯಿಂದ
ಸ್ಪರ್ಶನದ್ರವ್ಯವನು
ಅಥರ್ವಣವೇದವನುಚ್ಚರಿಸುತ್ತ ಅರ್ಪಿಸುವಳು.
ಈಶ್ವರ ಪೂಜಾರಿ, ಗೂಢವೆಂಬ ಸಂಜ್ಞೆ.
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ವಕಾರವೆಂಬ ಬೀಜಾಕ್ಷರ ;
ಅದು ಪ್ರಣವದ ಅರ್ಧಚಂದ್ರಕದಲ್ಲಿಹ ವಕಾರದಲ್ಲಿಹುದಾಗಿ,
ಆ ಈ ಊ ಏ ಓ ವಾಂ ಎಂಬ ಬ್ರಹ್ಮನಾದ ಮಂತ್ರಮೂರ್ತಿಪ್ರಣವದ
ಶಿರೋಮಧ್ಯದಲ್ಲಿಹ ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ
ನಮಸ್ಕಾರವು ನೋಡಾ.
ಇದಕ್ಕೆ **ಶ್ರೀಮಹಾದೇವೋವಾಚ** :
''ಅನಾಹತಂ ಹೃದಿ ಸ್ಥಾನಂ ವಾಯುಭೂತಂ ಷಡಾಕೃತಿ ।
ಪದ್ಮಂತು ದ್ವಾದಶಂ ಚೈವ ಅಕ್ಷರಂ ದ್ವಾದಶಂ ಸ್ಮೃತಂ ।
ಕುಂಕುಮವರ್ಣಮೀಶಂಚ ಅಧಿದೈವಂ ಶಕ್ತಿಮೇವಚ ।

ಶಾಕಿನಿ ರಕ್ಷರ್ಯೈರ್ಬಿಚ್ಛೈ ವಕಾರಸ್ಯಂತುರುಚ್ಯತೇ ।
ಭೇರಿನಾದಂ ಚತೋರ್ಲಿಂಗಂ ಸ್ಥಿತೋ ದೇವಿ ನ ಸಂಶಯಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೫ ॥

೪೯೬

ಅಲ್ಲಿಂದ ಮೇಲೆ ಕಂಠಸ್ಥಾನದಲ್ಲಿ ವಿಶುದ್ಧಿಚಕ್ರ,
ಆಕಾಶವೆಂಬ ಮಹಾಭೂತ,
ಆ ಚಕ್ರ ವರ್ತುಳಾಕಾರ, ಷೋಡಶದಳ ಪದ್ಮ, ಆ ಪದ್ಮ ಶ್ವೇತವರ್ಣ.
ಅಲ್ಲಿಯ ಅಕ್ಷರ ಅ ಆ ಇ ಈ ಉ ಊ ಋ ೠ ಌ ೡ
ಏ ಐ ಓ ಔ ಅಂ ಅಃ ಎಂಬ ಷೋಡಶಾಕ್ಷರ ನ್ಯಾಸವಾಗಿಹುದು.
ಈಶಾನ್ಯಮುಖವನುಳ್ಳ ಪ್ರಸಾದಲಿಂಗ.
ಆ ಲಿಂಗಕ್ಕೆ ಶಾಂತ್ಯತೀತೆಯೆಂಬ ಕಲೆ,
ಅಲ್ಲಿ ಶಿವಸಾದಾಖ್ಯ, ಅಲ್ಲಿಯ ದಿಕ್ಕು ಊರ್ಧ್ವದಿಕ್ಕು,
ಅಲ್ಲಿಯ ನಾದ ಮೇಘಧ್ವನಿ,
ಡಾಕಿನಿಯೆಂಬ ಪರಿಯಾಯ ನಾಮವನುಳ್ಳ ಪರಾಶಕ್ತಿ
ಲಿಂಗದ ಶ್ರೋತ್ರವೆಂಬಮುಖದಲ್ಲಿ ಸುಜ್ಞಾನವೆಂಬ ಹಸ್ತದಿಂದ
ಆನಂದಭಕ್ತಿಯಿಂದ ಶಬ್ದದ್ರವ್ಯವನು
ಗಾಯತ್ರಿಯನುಚ್ಚರಿಸುತ್ತ ಅರ್ಪಿಸುವಳು.
ಸದಾಶಿವ ಪೂಜಾರಿ, ಪರವೆಂಬ ಸಂಜ್ಞೆ,
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಯಕಾರವೆಂಬ ಬೀಜಾಕ್ಷರ.
ಅದು ಪ್ರಣವದ ದರ್ಪಣಾಕಾರದಲ್ಲಿಹ ಯಕಾರದಲ್ಲಿಹುದಾಗಿ
ಅಲ್ಲಿ ಆ ಈ ಊ ಏ ಓ ಯಾಂ ಎಂಬ ಬ್ರಹ್ಮನಾದ ಮಂತ್ರಮೂರ್ತಿಪ್ರಣವದ
ಶಿರೋಮಧ್ಯದಲ್ಲಿಹ ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ
ನಮಸ್ಕಾರವು ನೋಡಾ.
''ಇದಕ್ಕೆ **ಈಶ್ವರೋವಾಚ** :
''ಕಂಠ ಪೀಠೇ ವಿಶುದ್ಧೇ ತು ಮಹಾಭೂತಸ್ಯಯೋನಭಃ ।
ಗೋಳಕಾಕಾರಂ ಷೋಡಶದಳ ಪದ್ಮಂ ದ್ವಿರಷ್ಟಯೋ ॥
ಆಕಾರಂ ಶ್ವೇತವರ್ಣಂತು ದೈವಂ ಸದಾಶಿವಂ ಸ್ಮೃತಂ ।
ಬೀಜಾಕ್ಷರಂ ಯಕಾರಂ ಚ ಪ್ರಸಾದಲಿಂಗಯೋ ಸ್ಥಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೬ ॥

೪೯೭

ಅಲ್ಲಿಂದ ಮೇಲೆ ಭ್ರೂಮಧ್ಯದಲ್ಲಿ ಆಜ್ಞಾಚಕ್ರ,
ಮನವೆಂಬ ಮಹಾಭೂತ,
ಆ ಚಕ್ರ ತಮಂಧಾಕಾರ, ದ್ವಿದಳ ಪದ್ಮ, ಆ ಪದ್ಮ ಮಾಣಿಕ್ಯವರ್ಣ.

ಅಲ್ಲಿಹ ಅಕ್ಷರ ಹಂ ಳಂ ಹಂ ಕ್ಷಂ ಎಂಬ ಚತುರಾಕ್ಷರ ನ್ಯಾಸವಾಗಿಹುದು.
ನಿರ್ಭಾವಮುಖವನುಳ್ಳ ಮಹಾಲಿಂಗ.
ಆ ಲಿಂಗಕ್ಕೆ ಶಾಂತ್ಯತೀತೋತ್ತರ ಕಲೆ,
ಅಲ್ಲಿ ನಿರ್ಮುಕ್ತಿಯೆಂಬ ಮಹಾಸಾದಾಖ್ಯ, ಅಲ್ಲಿಯ ನಾದ ಪ್ರಣವನಾದ,
ಹಾಕಿನಿಯೆಂಬ ಪರಿಯಾಯ ನಾಮವನುಳ್ಳ ಚಿಚ್ಛಕ್ತಿ
ಲಿಂಗದ ಹೃದಯವೆಂಬ ಮುಖದಲ್ಲಿ
ಸದ್ಭಾವವೆಂಬ ಹಸ್ತದಿಂದ ಸಮರಸಭಕ್ತಿಯಿಂದ
ಪರಿಣಾಮವೆಂಬ ದ್ರವ್ಯವನು ಅಜಪೆಯನುಚ್ಚರಿಸುತ್ತ ಅರ್ಪಿಸುವಳು.
ಪರಶಿವ ಪೂಜಾರಿ, ನಿರಾಕುಳವೆಂಬ ಸಂಜ್ಞೆ.
ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಓಂಕಾರವೆಂಬ ಬೀಜಾಕ್ಷರ.
ಅದು ಅನಂತಕೋಟಿ ಬೀಜಾಕ್ಷರವನೊಳಕೊಂಡು
ಅಕಾರ ಉಕಾರ ಮಕಾರವೆಂಬ ನಾದ ಬಿಂದು ಕಳೆಗೆ ಆಶ್ರಯವಾಗಿಹುದು.
ತತ್‌ಪದ ತ್ವಂಪದ ಅಸಿಪದವೆಂಬ ಪದತ್ರಯಂಗಳನೊಳಕೊಂಡು
ಅನೇಕ ಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹುದಾಗಿ
ಅಲ್ಲಿ ಆ ಈ ಊ ಏ ಓಂ ಎಂಬ
ಬ್ರಹ್ಮನಾದಮಂತ್ರಮೂರ್ತಿಪ್ರಣವದ ಶಿರೋಮಧ್ಯದಲ್ಲಿಹ
ಗುಹ್ಯನಾದಮಂತ್ರಮೂರ್ತಿಪ್ರಣವಕ್ಕೆ ನಮಸ್ಕಾರವು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಭ್ರೂಮಧ್ಯೇ ಆಗ್ನೇಯಚಕ್ರಂ ಮಹಾಭೂತಸ್ಯ ಮಾನಸಂ ।
ತಮಂಧಾಕಾರಯೋಶ್ಚೈವ ದ್ವಿದಳಂ ಕಮಲಾಕ್ಷರಂ ॥
ದ್ವಯೋರಾತ್ಮಮಧಿದೈವತಂ ಹಾಕಿನೀಶಕ್ತಿರೇವ ಚ ।
ಉನ್ಮನೀರ್ಜ್ಯೋತಿ ತೇಜಂ ಚ ಪ್ರಣವಂ ಬೀಜಮೇವ ಚ ॥
ಘೋಷಂ ಪ್ರಣವನಾದಂ ಚ ಮಹಾಲಿಂಗಸ್ಥಲೇ ತಥಾ ।
ಷಡ್ಲಿಂಗಂ ಷಣ್ಮುಖಂ ಚೈವ ಷಷ್ಠ ಸಾದಾಖ್ಯಮೇವ ಚ ॥
ತಥಾ ಷಟ್‌ಶಕ್ತಿ ಷಡ್ಭೇದಂ ಷಡ್ಭಕ್ತಿಶ್ಚ ಷಡ್ದ್ರವ್ಯಕಂ ।
ಷಡ್‌ಲಿಂಗಾರ್ಪಣಂ ಚೈವ ವಕ್ತ್ರೇ ತಿಷ್ಠಂತಿ ಪಾರ್ವತಿ ।
ಇತಿ ಚಕ್ರಾರ್ಪಣಂ ಜ್ಞಾತುಂ ದುರ್ಲಭಂ ಕಮಲಾನನೇ ॥
ಷಟ್ಚಕ್ರಾಗ್ರಸ್ಥಿತಂ ಚಕ್ರಂ ತ್ರಿವಿಧಂ ಪರಿಕೀರ್ತಿತಾಃ ।
ಬ್ರಹ್ಮಚಕ್ರ ಶಿಖಾಚಕ್ರಂ ಪಶ್ಚಿಮಂ ಶಿಖಾಚಕ್ರಮೇವ ಚ ॥
ಅಜಚಕ್ರೇರುತ್ತಮಾಂಗಂ ಸಹಸ್ರದಳಪದ್ಮಕಂ ।
ಅಕ್ಷರಸ್ಯ ಸಹಸ್ರಂತು ಜ್ಯೋತಿರ್ವರ್ಣಮೇವ ಚ ॥
ಅಕ್ಷರಾತ್ಮಮಯಂ ಪ್ರೋಕ್ತಂ ದಿವ್ಯವೇದಸ್ಯ ಘೋಷಣಂ ।
ನಿರ್ಮಾಯಶಕ್ತಿರಾಖ್ಯಾತಂ ಅಂತರಾತ್ಮ್ಯೆ ಗುರೋಸ್ಥಿತಂ ॥
ಬ್ರಹ್ಮಸ್ಥಾನೇ ಶಿಖಾಚಕ್ರಂ ತ್ರಿದಳೇ ಕಮಲಸ್ಯತು ।

ತ್ರಿಯಕ್ಷರಮವಾಪ್ನೋತಿ ಮಹಾಜ್ಯೋತಿಶ್ಚ ವರ್ಣಕಂ ॥
ಅಕ್ಷರಾತ್ಮಾ ಸಂಬಂಧಃ ಸಿಂಹನಾದಸ್ಯ ಘೋಷಣಂ ।
ನಿಭ್ರಾಂತಶಕ್ತಿರಾಖ್ಯಾತಂ ಲಿಂಗಂಚ ಪರಮಾತ್ಮಕಂ ॥
ಸದಾ ಸನ್ನಿಹಿತಂ ದೇವಿ ಶಿಖಾಚಕ್ರಮಿತಿ ಸ್ಮೃತಂ ।
ಬ್ರಹ್ಮಪೀಠಸ್ಯ ಯೋ ರೂಢಂ ಪಶ್ಚಿಮಚಕ್ರ ಸಂಸ್ಥಿತಾ ॥
ಪದ್ಮಮೇಕದಳಂಚೈವ ಅಕ್ಷರಾರೇಕಯೋರಸಿ ।
ನಾಸನಂ ರೂಪವರ್ಣಂತು ಅಕ್ಷರಾತೀತಮೇವ ಚ ॥
ನಿಶ್ಶಬ್ದಂ ಶಿವ ಮಯಂ ಪ್ರೋಕ್ತಂ ಶಕ್ತಿಶ್ಚ ನಿರುಪಾಧಿಕಂ ।
ಸರ್ವಾರ್ಥಮೂರ್ತಿನಾಮಂ ಚ ತಸ್ಯ ಜಂಗಮಸಂಯುತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೭ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡುಚಕ್ರಾರ್ಪಣಭೇದವನು, ಆ ಚಕ್ರಂಗಳ ಸ್ವರೂಪ ಸ್ವಭಾವಂಗಳನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಿ. ನಿಮ್ಮ ಮಹಾನುಭಾವದೃಕ್ಕಿನಿಂದ ತೋರಲು ಕಂಡು ಪರಮಸುಖಿಯಾದೆನು. ಇನ್ನು ಅಖಂಡಜ್ಯೋತಿರ್ಮಯವಾಗಿಹ ಪರಮೋಂಕಾರುತ್ಪತ್ಯವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೪೯೮

ಇನ್ನು ಇಷ್ಟ ಪ್ರಾಣ ಭಾವಲಿಂಗದ ಭೇದವೆಂತೆಂದಡೆ :
ಆದಿ ಉಕಾರ ಆದಿ ಮಕಾರ ಆದಿ ಅಕಾರ ಇವು ಮೂರು ಬೀಜಾಕ್ಷರ.
ಆದಿ ಉಕಾರವೆ ಆದಿನಾದ, ಆದಿ ಮಕಾರವೆ ಆದಿ ಬಿಂದು,
ಆದಿ ಅಕಾರವೆ ಆದಿಕಲೆ.
ಆದಿ ಉಕಾರವೆ ಇಷ್ಟಲಿಂಗ, ಆದಿ ಮಕಾರವೇ ಪ್ರಾಣಲಿಂಗ,
ಆದಿ ಅಕಾರವೆ ಭಾವಲಿಂಗವು ನೋಡಾ.
ಇದಕ್ಕೆ **ಈಶ್ವರೋವಾಚ** :
''ಉಕಾರಂ ಇಷ್ಟಲಿಂಗಂ ಚ ಮಕಾರಂ ಪ್ರಾಣಲಿಂಗಯೋ ।
ಅಕಾರಂ ಭಾವಲಿಂಗಂ ಚ ತ್ರಿಧಾಏಕಂ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೪೯೮ ॥

೪೯೯

ಆ ಆದಿ ಉಕಾರ, ಆ ಆದಿ ಮಕಾರ, ಆ ಆದಿ ಅಕಾರಕ್ಕೆ
ಆ ಆದಿಬಿಂದು, ಆ ಆದಿಕಲೆ, ಆ ಆದಿನಾದವೆ ಆಧಾರ.
ಆ ಆದಿಬಿಂದು, ಆದಿಕಲೆ, ಆದಿನಾದಕ್ಕೆ ಆ ಆದಿಪ್ರಕೃತಿಯೇ ಆಧಾರ.
ಆ ಆದಿಪ್ರಕೃತಿಪ್ರಣವಕ್ಕೆ ಪ್ರಾಣಮಾತ್ರೆಪ್ರಣವವೇ ಆಧಾರ.
ಆ ಪ್ರಾಣಮಾತ್ರೆಪ್ರಣವಕ್ಕೆ ಅಖಂಡಜ್ಯೋತಿರ್ಮಯಲಿಂಗವೇ ಆಧಾರ.
ಉ ಎಂದರೆ ಆದಿಬಿಂದುವಿಳಿದು ಮ ಎಂಬ ಆದಿಕಲೆಯಲ್ಲಿ ಸಂಯುಕ್ತವಾಗಿ,

ಅ ಎಂಬ ಆದಿನಾದದಲ್ಲಿ ಮ ಎಂಬ ಅನುಸ್ವಾರ ಬಂದು ಕೂಡಲು,
ಅಖಂಡಜ್ಯೋತಿರ್ಮಯವಾಗಿಹ ಪರಮೋಂಕಾರವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೪೯೯ ॥

೫೦೦

ಆ ಇಷ್ಟ, ಪ್ರಾಣ ಭಾವಲಿಂಗವೆಂಬ ಆದಿಪ್ರಣವತ್ರಿತಯದಲ್ಲಿ
ತಾರಕಾಸ್ವರೂಪ, ದಂಡಸ್ವರೂಪ, ಕುಂಡಲಾಕಾರ,
ಅರ್ಧಚಂದ್ರಕ, ದರ್ಪಣಾಕಾರ, ಜ್ಯೋತಿಸ್ವರೂಪವೆಂಬ
ಷಟ್ಪ್ರಣವ ಉತ್ಪತ್ಯ ಲಯ ನೋಡಾ.
ಇದಕ್ಕೆ **ಪ್ರಳಯಕಾಲರುದ್ರೋಪನಿಷತ್** :
ಉಕಾರವೆಂಬ ಪ್ರಣವದಲ್ಲಿ –
''ದಂಡಶ್ಚ ತಾರಕಾಕಾರೋ ಭವತಿ ಓಂ ಇಷ್ಟಲಿಂಗೋ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ಅಷ್ಟಾದಶ ನವಮಪ್ರಣವಾಂಶಕೇ ॥''
ಮಕಾರವೆಂಬ ಪ್ರಣವದಲ್ಲಿ–
''ಕುಂಡಲಶ್ಚಾರ್ಧಚಂದ್ರೋ ಭವತಿ ಓಂ ಪ್ರಾಣಲಿಂಗೋ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ನವದಶ ಪ್ರಣವಾಂಶಕೇ ॥''
ಅಕಾರವೆಂಬ ಪ್ರಣವದಲ್ಲಿ–
''ದರ್ಪಣಶ್ಚ ಜ್ಯೋತಿರೂಪೋ ಭವತಿ ಓಂ ಭಾವಲಿಂಗೋ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ಏಕಾದಶ ಪ್ರಣವಾಂಶಕೇ ॥
ಉಕಾರೇ ಚ ಮಕಾರೇ ಚ ಅಕಾರೇ ಚ ತ್ರಿಯಕ್ಷರಂ ।
ಅಕಾರಮಾದಿನಾದಂ ಚ ಉಕಾರಮಾದಿಬಿಂದವಃ ॥
ಮಕಾರಾದಿ ಕಲಾಶ್ಚೈವ ನಾದಬಿಂದುಕಲಾತ್ಮನೇ ।
ನಾದಬಿಂದುಕಲಾಯುಕ್ತೋ ಅಖಂಡೋಂಕಾರಜ್ಯೋತಿಭಿಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೦ ॥

೫೦೧

ಇನ್ನು ಪ್ರಣವದ ಲಕ್ಷಣವದೆಂತೆಂದಡೆ :
ಪ್ರಥಮ ತಾರಕ ಸ್ವರೂಪವಾಗಿಹುದು.
ದ್ವಿತೀಯ ದಂಡಸ್ವರೂಪವಾಗಿಹುದು.
ತೃತೀಯ ಕುಂಡಲಾಕಾರವಾಗಿಹುದು.
ಚತುರ್ಥ ಅರ್ಧಚಂದ್ರಕಾಕಾರವಾಗಿಹುದು.
ಪಂಚಮ ದರ್ಪಣಾಕಾರವಾಗಿಹುದು.
ಷಷ್ಠ ಜ್ಯೋತಿಸ್ವರೂಪವಾಗಿಹುದು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡ ಉಚ್ಯತೇ ।

ತೃತೀಯಂ ಕುಂಡಲಾಕಾರಂ ಚತುರ್ಥಂ ಚಾರ್ಧಚಂದ್ರಕಂ ॥
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿಸ್ಸ್ವರೂಪಕಂ ।
ಇತಿ ಪ್ರಣವಂ ವಿಜ್ಞೇಯಂ ಯದ್ಗೋಪ್ಯಂ ವರಾರನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೧ ॥

ಮತ್ತಂ. ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ಅಖಂಡಜ್ಯೋತಿರ್ಮಯವಾಗಿಹ ಪರಮೋಂಕಾರ ಉತ್ಪತ್ಯವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಿ. ನಿಮ್ಮಸ್ವಾನುಭಾವದೃಕ್ಕಿನಿಂದ ತೋರಲು ಕಂಡು ಸುಖಿಯಾದೆನು. ಇನ್ನು ಷಡ್ವಿಧ ಭೂತಂಗಳುತ್ಪತ್ಯ ನ್ಯಾಸಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೦೨

ಅಖಂಡಜ್ಯೋತಿರ್ಮಯವಾಗಿಹ ಪರಮೋಂಕಾರ ಪ್ರಣವದ
ಜ್ಯೋತಿಸ್ಸ್ವರೂಪದಲ್ಲಿ ಆತ್ಮನುತ್ಪತ್ಯವಾದನು.
ಆ ಪ್ರಣವದ ದರ್ಪಣಾಕಾರದಲ್ಲಿ ಆಕಾಶ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ವಾಯು ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ತೇಜ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಅಪ್ಪು ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಚಿತ್ರಕಾಶಾಗಮೇ** :
''ಓಂಕಾರ ಜ್ಯೋತಿರೂಪೇ ಚ । ಆತ್ಮಾ ಚೈವ ಸಮುದ್ಭವಃ ।
ಓಂಕಾರ ದರ್ಪಣಾಕಾರೇ । ಆಕಾಶಂ ಚ ಸಮುದ್ಭವಂ ॥
ಓಂಕಾರೇ ಚಾರ್ಧಚಂದ್ರೇ ಚ । ವಾಯುಶ್ಚೈವ ಸಮುದ್ಭವಃ ।
ಓಂಕಾರ ಕುಂಡಲಾಕಾರೇ । ತೇಜಶ್ಚೈವ ಸಮುದ್ಭವಂ ।
ಓಂಕಾರ ದಂಡರೂಪೇ ಚ । ಆಪಶ್ಚೈವ ಸಮುದ್ಭವಃ ।
ಓಂಕಾರ ತಾರಕರೂಪೇ । ಪೃಥ್ವಿಶ್ಚ ಸಮುದ್ಭವಃ ।
ಇತಿ ಷಷ್ಠಭೂತಂ ದೇವೀ । ಸ್ಥಾನ ಸ್ಥಾನೇ ಸಮುದ್ಭವಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೨ ॥

೫೦೩

ಆ ಅಖಂಡ ಜ್ಯೋತಿರ್ಮಯವಾಗಿಹ ಪರಮೋಂಕಾರಪ್ರಣವದ
ತಾರಕಾಸ್ವರೂಪದಲ್ಲಿ ಪೃಥ್ವಿಯೆಂಬ ಮಹಾಭೂತವಿಹುದು.
ಆ ಪ್ರಣವದ ದಂಡಸ್ವರೂಪದಲ್ಲಿ
ಅಪ್ಪುವೆಂಬ ಮಹಾಭೂತವಿಹುದು.
ಆ ಪ್ರಣವದ ಕುಂಡಲಾಕಾರದಲ್ಲಿ
ತೇಜವೆಂಬ ಮಹಾಭೂತವಿಹುದು.

ಆ ಪ್ರಣವದ ಅರ್ಧಚಂದ್ರಕದಲ್ಲಿ
ವಾಯುವೆಂಬ ಮಹಾಭೂತವಿಹುದು.
ಆ ಪ್ರಣವದ ದರ್ಪಣಾಕಾರದಲ್ಲಿ
ಆಕಾಶವೆಂಬ ಮಹಾಭೂತವಿಹುದು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ
ಆತ್ಮನೆಂಬ ಮಹಾಭೂತವಿಹುದು ನೋಡಾ.
ಇದಕ್ಕೆ **ಚಿತ್ಪಿಂಡಾಗಮೇ** :
''ಓಂಕಾರ ತಾರಕರೂಪೇ ಪೃಥ್ವೀಭೂತಂ ಸಮಾಚರೇತ್ ।
ಓಂಕಾರ ದಂಡರೂಪೇ ಚ ಅಪ್‌ಭೂತ ಸಮಾಶ್ರಿತಾಃ ॥
ಓಂಕಾರ ಕುಂಡಲಾಕಾರೇ ತೇಜಭೂತಃ ತಥಾ ಭವೇತ್ ।
ಓಂಕಾರ ಅರ್ಧಚಂದ್ರೇ ಚ ವಾಯುಭೂತಂ ಚ ವರ್ತತೇ ॥
ಓಂಕಾರ ದರ್ಪಣಾಕಾರೇ ವ್ಯೋಮಭೂತಂ ಸದಾ ಶ್ರಿತಾಃ ।
ಓಂಕಾರ ಜ್ಯೋತಿರೂಪೇ ಚ ಆತ್ಮಭೂತಾಶ್ರಿತಂ ತಥಾ ।
ಇತಿ ಷಷ್ಠಭೂತಂ ದೇವಿ ಸ್ಥಾನ ಸ್ಥಾನೇ ಸಮಾಚರೇತ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೩ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ಷಡ್ವಿಧಭೂತಂಗಳುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾನುಭಾವವಚನದಿಂದ ನಿರೂಪಿಸಿ, ನಿಮ್ಮ ಮಹಾನುಭಾವದೃಕ್ಕಿನಿಂದ ತೋರಲು, ಕಂಡು ಪರಮಸುಖಿಯಾದೆನು. ಇನ್ನು ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣರುತ್ಪತ್ಯನ್ಯಾಸ ಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೦೪

ಅಖಂಡ ಜ್ಯೋತಿರ್ಮಯವಾಗಿಹ ಪರಮೋಂಕಾರ ಪ್ರಣವದ
ಜ್ಯೋತಿಸ್ವರೂಪದಲ್ಲಿ ಐಕ್ಯನುತ್ಪತ್ಯವಾದನು.
ಆ ಪ್ರಣವದ ದರ್ಪಣಾಕಾರದಲ್ಲಿ ಶರಣನುತ್ಪತ್ಯವಾದನು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಪ್ರಾಣಲಿಂಗಿ ಉತ್ಪತ್ಯವಾದನು.
ಆ ಪ್ರಣವದ ಕುಂಡಲಾಕಾರದಲ್ಲಿ ಪ್ರಸಾದಿ ಉತ್ಪತ್ಯವಾದನು.
ಆ ಪ್ರಣವದ ದಂಡಕಸ್ವರೂಪದಲ್ಲಿ ಮಹೇಶ್ವರ ಉತ್ಪತ್ಯವಾದನು.
ಆ ಪ್ರಣವದ ತಾರಕಸ್ವರೂಪದಲ್ಲಿ ಭಕ್ತನುತ್ಪತ್ಯವಾದನು ನೋಡಾ.
ಇದಕ್ಕೆ **ಚಿತ್ಪ್ರಕಾಶಾಗಮೋತ್ತರಸಾರೇ** :
''ಓಂಕಾರ ಜ್ಯೋತಿರೂಪೇ ಚ ಐಕ್ಯಂತು ಸಮುದ್ಭವಂ ।
ಓಂಕಾರ ದರ್ಪಣಾಕಾರೇ ಶರಣಶ್ಚ ಸಮುದ್ಭವಂ ॥
ಓಂಕಾರೇಚಾರ್ಧಚಂದ್ರೇ ಚ ಪ್ರಾಣಲಿಂಗೀ ಸಮುದ್ಭವಂ ।
ಓಂಕಾರ ದಂಡಕರೂಪೇ ಚ ಮಾಹೇಶ್ವರ ಸಮುದ್ಭವಃ ।

ಓಂಕಾರ ತಾರಕಾರೂಪೇ ಭಕ್ತಶ್ಚೈವ ಸಮುದ್ಭವಃ ।
ಇತಿ ಷಟ್‌ಸ್ಥಲಂ ದೇವಿ ಸ್ಥಾನಸ್ಥಾನೇಷು ಜಾಯತೇ ॥
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೪ ॥

೫೦೫

ಪೃಥ್ವಿಯೆಂಬ ಮಹಾಭೂತವೇ ಅಂಗವಾಗಿ ಭಕ್ತನಿಹನು.
ಅಪ್ಪುವೆಂಬ ಮಹಾಭೂತವೇ ಅಂಗವಾಗಿ ಮಾಹೇಶ್ವರನಿಹನು.
ತೇಜವೆಂಬ ಮಹಾಭೂತವೇ ಅಂಗವಾಗಿ ಪ್ರಸಾದಿಯಿಹನು.
ವಾಯುವೆಂಬ ಮಹಾಭೂತವೇ ಅಂಗವಾಗಿ ಪ್ರಾಣಲಿಂಗಿಯಿಹನು.
ಆಕಾಶವೆಂಬ ಮಹಾಭೂತವೇ ಅಂಗವಾಗಿ ಶರಣನಿಹನು.
ಆತ್ಮನೆಂಬ ಮಹಾಭೂತವೇ ಅಂಗವಾಗಿ ಐಕ್ಯನಿಹನು ನೋಡಾ.
ಇದಕ್ಕೆ **ಚಿತ್ರಕಾಶಾಗಮೇ** :
''ಪೃಥ್ವೀಭೂತೇ ಚ ಭಕ್ತಶ್ಚ ಅಪ್‌ಭೂತೋ ಮಾಹೇಶ್ವರಃ ।
ಪ್ರಸಾದೀ ತೇಜಭೂತಂ ಚ ಪ್ರಾಣಂ ಚ ವಾಯುಭೂತಕಂ ॥
ಶರಣ್ಯಾಕಾಶಭೂತಂ ಚ ಐಕ್ಯಶ್ಚಾತ್ಮಭೂತಕಂ ।
ಇತಿ ಷಟ್‌ಸ್ಥಲಂ ದೇವಿ ಸ್ಥಾನ ಸ್ಥಾನೇ ಸಮಾಚರೇತ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೫ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾಜ್ಞಾನ ದೃಕ್ಕಿನಿಂದ ನಿರೂಪಿಸಲು, ಕಂಡು ಮಹಾನುಭಾವಸುಖಿಯಾದೆನು. ಇನ್ನು ಷಡ್ವಿಧ ಹಸ್ತದುತ್ಪತ್ಯ ನ್ಯಾಸ ಸ್ಥಲವ ನಿರೂಪಿಸೆಂದು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೦೬

ಅಖಂಡಜ್ಯೋತಿರ್ಮಯವಾಗಿ ಪರಮೋಂಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಭಾವಹಸ್ತ ಹುಟ್ಟಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಜ್ಞಾನಹಸ್ತ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಸುಮನಹಸ್ತ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನಿರಹಂಕಾರಹಸ್ತ ಹುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಸುಬುದ್ಧಿಹಸ್ತ ಹುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಸುಚಿತ್ತಹಸ್ತ ಹುಟ್ಟಿತ್ತು ನೋಡಾ.
ಇದಕ್ಕೆ **ಚಕ್ರಾತೀತಾಗಮೇ** :
''ಓಂಕಾರಜ್ಯೋತಿರೂಪೇ ಚ ಭಾವಹಸ್ತಶ್ಚ ಜಾಯತೇ ।
ಓಂಕಾರದರ್ಪಣಾಕಾರೇ ಜ್ಞಾನಹಸ್ತಶ್ಚ ಜಾಯತೇ ।
ಓಂಕಾರ ಅರ್ಧಚಂದ್ರಂ ಚ ಮನೋಹಸ್ತಶ್ಚ ಜಾಯತೇ ।

ಓಂಕಾರ ಕುಂಡಲಾಕಾರೇ ನಿರಹಂಕಾರಶ್ಚ ಜಾಯತೇ ॥
ಓಂಕಾರದಂಡರೂಪೋ ಚ ಬುದ್ಧಿಹಸ್ತಶ್ಚ ಜಾಯತೇ ।
ಓಂಕಾರ ತಾರಕರೂಪೋ ಚಿತ್ತಹಸ್ತಶ್ಚ ಜಾಯತೇ ।
ಇತಿ ಷಷ್ಠ ಹಸ್ತ ದೇವಿ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೬ ॥

೫೦೭

"ಇನ್ನೊಂದು ಪ್ರಕಾರದ ಹಸ್ತ ಉತ್ಪತ್ಯವದೆಂತೆಂದಡೆ :
ಏನೂ ಏನೂ ಎನಲಿಲ್ಲದ ಪರಬ್ರಹ್ಮದಲ್ಲಿ ಭಾವಹಸ್ತ ಹುಟ್ಟಿತ್ತು.
ಆ ಭಾವಹಸ್ತದಲ್ಲಿ ಜ್ಞಾನಹಸ್ತ ಹುಟ್ಟಿತ್ತು.
ಆ ಜ್ಞಾನಹಸ್ತದಲ್ಲಿ ಸುಮನಹಸ್ತ ಹುಟ್ಟಿತ್ತು.
ಆ ಸುಮನಹಸ್ತದಲ್ಲಿ ನಿರಹಂಕಾರಹಸ್ತ ಹುಟ್ಟಿತ್ತು.
ಆ ನಿರಹಂಕಾರಹಸ್ತದಲ್ಲಿ ಸುಬುದ್ಧಿಹಸ್ತ ಹುಟ್ಟಿತ್ತು.
ಆ ಸುಬುದ್ಧಿಹಸ್ತದಲ್ಲಿ ಸುಚಿತ್ತಹಸ್ತ ಹುಟ್ಟಿತ್ತು ನೋಡಾ.
ಇದಕ್ಕೆ **ಈಶ್ವರೋಽವಾಚ :**
''ವಸ್ತುನೋಭಾವಮುತ್ಪನ್ನಂ ಭಾವಾತ್ ಜ್ಞಾನಂ ಸಮುದ್ಭವಂ ।
ಜ್ಞಾನಾಚ್ಚ ಮನಉತ್ಪನ್ನಂ ಮನಸೋಽಹಂಕೃತಿಸ್ತಥಾ ॥
ಅಹಂಕಾರಾತ್ತತೊ ಬುದ್ಧಿಃ ಬುದ್ಧ್ಯಾ ಚಿತ್ತಂ ಸಮುದ್ಭವಂ ।
ಏಕೈಕಂತು ಸಮುತ್ಪನ್ನಂ ಸೂಕ್ಷ್ಮಂ ಸೂಕ್ಷ್ಮಂ ವರಾನನೇ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೭ ॥

೫೦೮

ಪೃಥ್ವಿಭೂತದಲ್ಲಿ ಸುಚಿತ್ತಹಸ್ತವಿಹುದು,
ಅಪ್ಪುಭೂತದಲ್ಲಿ ಸುಬುದ್ಧಿಹಸ್ತವಿಹುದು,
ತೇಜಭೂತದಲ್ಲಿ ನಿರಹಂಕಾರಹಸ್ತವಿಹುದು,
ವಾಯುಭೂತದಲ್ಲಿ ಸುಮನಹಸ್ತವಿಹುದು,
ಆಕಾಶಭೂತದಲ್ಲಿ ಸುಜ್ಞಾನಹಸ್ತವಿಹುದು,
ಆತ್ಮಭೂತದಲ್ಲಿ ಭಾವಹಸ್ತವಿಹುದು ನೋಡಾ.
ಇದಕ್ಕೆ **ಈಶ್ವರೋಽವಾಚ :**
''ಪೃಥ್ವೀ ಚ ಚಿತ್ತಮಾಶ್ರಿತ್ಯ ಹಸ್ತೇ ಬುದ್ಧಿಃ ಸಮಾಚರೇತ್ ।
ಅಹಂಕಾರಶ್ಚ ತೇಜಶ್ಚ ಮಾರುತಂ ಚ ಮನಃ ಶ್ರಿತಾ ॥
ಆಕಾಶೋ ಜ್ಞಾನಮಾಶ್ರಿತ್ಯ ಆತ್ಮಾ ಚ ಭಾವಮಾಶ್ರಿತಃ ।
ಇತಿ ಹಸ್ತಸ್ಯಹಸ್ತ್ಯಾಸಂ ಸುಸೂಕ್ಷ್ಮಂ ಶೃಣು ಪಾರ್ವತೀ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೦೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ, ಷಡ್ವಿಧಹಸ್ತಂಗಳುತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾನುಭಾವ ನಿರೂಪದಿಂದ ನಿರೂಪಿಸಲು ಕಂಡು ಸುಖಿಯಾದೆನು. ಇನ್ನು ಷಡ್ವಿಧಲಿಂಗದುತ್ಪತ್ಯವನು ನ್ಯಾಸ ಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೨೯

ಆ ಅಖಂಡಜ್ಯೋತಿರ್ಮಯವಾಗಿಹ ಪರಮೋಂಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಮಹಾಲಿಂಗ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಪ್ರಸಾದಲಿಂಗ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಜಂಗಮಲಿಂಗ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಶಿವಲಿಂಗ ಹುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಗುರುಲಿಂಗ ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಆಚಾರಲಿಂಗ ಹುಟ್ಟಿತ್ತು ನೋಡಾ.
ಇದಕ್ಕೆ **ಶಿವಲಿಂಗಾಗಮೇ** :
''ಓಂಕಾರ ಜ್ಯೋತಿರೂಪೇ ಚ ಮಹಾಲಿಂಗಂ ಚ ಜಾಯತೇ ।
ಓಂಕಾರ ದರ್ಪಣಾಕಾರೇ ಪ್ರಸಾದಲಿಂಗೋ ಜಾಯತೇ ॥
ಓಂಕಾರೇಚಾರ್ಧಚಂದ್ರೇ ಚ ಜಂಗಮಂ ಚಾಪಿ ಜಾಯತೇ ।
ಓಂಕಾರ ದಂಡರೂಪೇ ಚ ಗುರುಲಿಂಗಂ ಚ ಜಾಯತೇ ॥
ಓಂಕಾರ ತಾರಕಾರೂಪೇ ಆಚಾರಶ್ಚ ಸಜಾಯತೇ ।
ಇತಿ ಷಡ್ಲಿಂಗಮುತ್ಪನ್ನಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೯ ॥

೫೩೦

ಇನ್ನೊಂದು ಪ್ರಕಾರದ ಲಿಂಗೋತ್ಪತ್ಯವದೆಂತೆಂದಡೆ :
ಮಹಾಲಿಂಗದಲ್ಲಿ ಪ್ರಸಾದಲಿಂಗ ಹುಟ್ಟಿತ್ತು.
ಆ ಪ್ರಸಾದಲಿಂಗದಲ್ಲಿ ಜಂಗಮಲಿಂಗ ಹುಟ್ಟಿತ್ತು.
ಆ ಜಂಗಮಲಿಂಗದಲ್ಲಿ ಶಿವಲಿಂಗ ಹುಟ್ಟಿತ್ತು.
ಆ ಶಿವಲಿಂಗದಲ್ಲಿ ಗುರುಲಿಂಗ ಹುಟ್ಟಿತ್ತು.
ಆ ಗುರುಲಿಂಗದಲ್ಲಿ ಆಚಾರಲಿಂಗ ಹುಟ್ಟಿತ್ತು.
ಈ ಆರು ಲಿಂಗವು ಒಂದೇ ಲಿಂಗ ನೋಡಾ.
ಇದಕ್ಕೆ **ಈಶ್ವರೋಃವಾಚ** :
''ಮಹಾಲಿಂಗ ಸಮಾಖ್ಯಾತಂ ಪ್ರಸಾದಂ ಲಿಂಗಮುದ್ಭವಂ ।
ತತಃ ಪ್ರಸಾದಲಿಂಗೇ ಚ ಜಂಗಮಂ ಲಿಂಗಮುದ್ಭವಂ ॥
ತಥಾ ಜಂಗಮಲಿಂಗಂ ಚ ಶಿವಲಿಂಗ ಸಮುದ್ಭವಂ ।
ಶಿವಲಿಂಗ ಯಥಾಚೈವ ಗುರುಲಿಂಗಸಮುದ್ಭವಂ ।

ಷಟ್ಸ್ಥಲಂ ಚ ಪರಿಜ್ಞೇಯಂ ಏಕೀಭಾವಂ ವಿಶೇಷತಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೦ ॥

೫೧೧

ಪೃಥ್ವಿಯೆಂಬ ಮಹಾಭೂತದಲ್ಲಿ ಆಚಾರಲಿಂಗವಿಹುದು.
ಅಪ್ಪುವೆಂಬ ಮಹಾಭೂತದಲ್ಲಿ ಗುರುಲಿಂಗವಿಹುದು.
ತೇಜವೆಂಬ ಮಹಾಭೂತದಲ್ಲಿ ಶಿವಲಿಂಗ ನ್ಯಾಸವಾಗಿಹುದು.
ವಾಯುವೆಂಬ ಮಹಾಭೂತದಲ್ಲಿ ಚರಲಿಂಗ ನ್ಯಾಸವಾಗಿಹುದು.
ಆಕಾಶವೆಂಬ ಮಹಾಭೂತದಲ್ಲಿ ಪ್ರಸಾದಲಿಂಗ ನ್ಯಾಸವಾಗಿಹುದು.
ಆತ್ಮನೆಂಬ ಮಹಾಭೂತದಲ್ಲಿ ಮಹಾಲಿಂಗ ನ್ಯಾಸವಾಗಿಹುದು ನೋಡಾ.
ಇದಕ್ಕೆ **ಶಿವಲಿಂಗಸೂತ್ರೇ** :
''ಆಚಾರಂ ಪೃಥ್ವಿಭೂತೇ ಚ ಜಲೇ ಚ ಗುರುಲಿಂಗಕಂ ।
ತೇಜಸ್ಯಪಿ ಶಿವಲಿಂಗಕಂ ವಾಯೌ ಚ ಚರಲಿಂಗಕಂ ॥
ಪ್ರಸಾದಲಿಂಗಂ ಚಾಕಾಶೇ ಆತ್ಮನ್ಯಪಿ ಮಹಸ್ತಥಾ ।
ಇತಿ ಲಿಂಗಸ್ಥಲಂ ಜ್ಞಾತುಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೧ ॥

೫೧೨

ಇನ್ನೊಂದು ಪ್ರಕಾರದ ಷಡ್ಲಿಂಗನ್ಯಾಸಸ್ಥಲವೆಂತೆಂದಡೆ :
ಪೃಥ್ವಿಯೇ ಅಂಗವಾದ ಭಕ್ತನ ಸುಚಿತ್ತಹಸ್ತದಲ್ಲಿ
ಆಚಾರಲಿಂಗ ನ್ಯಾಸವಾಗಿಹುದು.
ಅಪ್ಪುವೆ ಅಂಗವಾದ ಮಹೇಶ್ವರನ ಸುಬುದ್ಧಿಹಸ್ತದಲ್ಲಿ
ಗುರುಲಿಂಗ ನ್ಯಾಸವಾಗಿಹುದು.
ಅನಲಾಂಗವಾದ ಪ್ರಸಾದಿಯ ನಿರಹಂಕಾರಹಸ್ತದಲ್ಲಿ
ಶಿವಲಿಂಗ ನ್ಯಾಸವಾಗಿಹುದು.
ವಾಯುವೇ ಅಂಗವಾದ ಪ್ರಾಣಲಿಂಗಿಯ ಸುಮನವೆಂಬ ಹಸ್ತದಲ್ಲಿ
ಚರಲಿಂಗ ನ್ಯಾಸವಾಗಿಹುದು.
ವ್ಯೋಮಾಂಗವಾದ ಶರಣನ ಸುಜ್ಞಾನಹಸ್ತದಲ್ಲಿ
ಪ್ರಸಾದಲಿಂಗ ನ್ಯಾಸವಾಗಿಹುದು.
ಆತ್ಮಾಂಗವಾದ ಐಕ್ಯನ ಭಾವಹಸ್ತದಲ್ಲಿ
ಮಹಾಲಿಂಗ ನ್ಯಾಸವಾಗಿಹುದು ನೋಡಾ.
ಇದಕ್ಕೆ **ಈಶ್ವರೋಽವಾಚ** :
''ಆಚಾರಂ ಚಿತ್ತಹಸ್ತಂ ಚ ಬುದ್ಧಿಹಸ್ತೇ ಗುರುಸ್ತಥಾ ।
ಶಿವಲಿಂಗಂ ಚ ಅಹಂಕಾರೇ ಚರಲಿಂಗ ಮನೇ ತಥಾ ॥
ಪ್ರಸಾದಂ ಜ್ಞಾನಹಸ್ತೇ ಚ ಭಾವಹಸ್ತೇ ಮಹಸ್ತಥಾ ।

ಇತಿ ಲಿಂಗಸ್ಥಲಂ ಜ್ಞಾತುಂ ದುರ್ಲಭಂ ಚ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೨ ॥

೫೧೩

ಪೃಥ್ವಿಯೇ ಅಂಗವಾದ ಭಕ್ತನ ಸುಚಿತ್ತಹಸ್ತದಲ್ಲಿಹ
ಆಚಾರಲಿಂಗವು ಸಮಸ್ತವಾದ ತತ್ವಂಗಳ ನಿವಾಸಕ್ಕೋಸುಗ
ಆಧಾರವಾದುದಾಗಿ, ಕರ್ಮರೂಪವಾದ ಕ್ರಿಯೆಯೆಂಬ ತನ್ನ ಶಕ್ತಿಯಿಂದ
ಸರಿಯಿಲ್ಲದುದಾಗಿ ಚಿತ್ತದಿಂದ ಧರಿಸಲು ತಕ್ಕಂಥಾದುದಾಗಿ
ಆಶ್ರಯಿಸಲು ಪಟ್ಟ ಮೋಕ್ಷಮಾರ್ಗ ಉಳ್ಳುದಾಗಿ
ಇದ್ದುದು ನೋಡಾ ಆಚಾರಲಿಂಗ.
ಇದಕ್ಕೆ **ಮಹಾವಾತುಲಾಗಮೇ : ವಸಂತತಿಲಕವೃತ್ತ-**
''ಕರ್ಮಾತ್ಮನಾ ಸಕಲತತ್ವ ನಿವಾಸಹೇತೋ
ರಾಧಾರಭೂತಮತುಲಂ ಕ್ರಿಯಯಾ ಸ್ವ ಶಕ್ತ್ಯಾ ।
ಚಿತ್ತೇನ ಧಾರ್ಯಮತಿರೂಢ ನಿವೃತ್ತಿಮಾರ್ಗಂ
ಆಚಾರಲಿಂಗಮಿತಿ ವೇದವಿದೋ ವದಂತಿ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೩ ॥

೫೧೪

ಅಪ್ಪುವೆ ಅಂಗವಾದ ಮಹೇಶ್ವರನ ಸುಬುದ್ಧಿಹಸ್ತದಲ್ಲಿಹ
ಗುರುಲಿಂಗವನು ಕರ್ತೃತ್ವನಾಗಿಯು ತನ್ನ ಜ್ಞಾನಶಕ್ತಿಯ ವೈಭವದಿಂದ
ಸಮಸ್ತವಾದ ಉಪದೇಶ ವಿಧಾನ ಶಾಸ್ತ್ರಂಗಳಲ್ಲಿ ಮಾಡಲ್ಪಟ್ಟ
ಆಸ್ಪದವನುಳ್ಳುದಾಗಿಯು, ಕಡೆಯಿಲ್ಲದ ಸುಖಸಮುದ್ರವನಾಗಿಯು,
ಬುದ್ಧಿತತ್ವದಾಸ್ಥಾನದಲ್ಲಿ ಪ್ರತಿಷ್ಠಿತನಾಗಿಹ ಗುರುಲಿಂಗವಿಹುದು ನೋಡಾ,
ಇದಕ್ಕೆ **ಮಹಾವಾತುಲಾಗಮೇ : ವೃತ್ತ -**
''ಸ್ವಜ್ಞಾನ ಶಕ್ತಿವಿಭವೋದಿತ ಕರ್ತೃತ್ವಂ ।
ಸರ್ವೋಪದೇಶವಿದಿತಂ ತತ್ರಕೃತಂ ಪ್ರತಿಷ್ಠಿತಂ,।
ತೇಜೋನಿಧಿಂ ಪರಮಪಾರ ಸುಖಾಂಬುರಾಸಿ
ಬುದ್ಧೇಃ ಪದೇ ವಿನಿಹಿತಂ ಗುರುಲಿಂಗಮಾಹುಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೪ ॥

೫೧೫

ಅನಲಾಂಗವಾದ ಪ್ರಸಾದಿಯ ನಿರಹಂಕಾರಹಸ್ತದಲ್ಲಿಹ
ಶಿಲಿಂಗವು ಜ್ಞಾನಕಲೆಗಳಿಂದ ಕೂಡಿದ ರೂಪದಿಂದ
ಮಿಗೆ ಒಪ್ಪುತಿದ್ದಂಥಾದಾಗಿ, ಒಂದು ಮುಖವಾಗಿ,
ಮಿಗೆ ಶಾಂತವಾದ ದಿವ್ಯತೇಜಃಪುಂಜವನು, ಅಹಂಕಾರಕ್ಕೆ ಸ್ಥಾನವಪ್ಪ

ಪ್ರಪಂಚದಲ್ಲಿ ತನ್ನ ಇಚ್ಛಾಶಕ್ತಿಯಿಂದ ವ್ಯಾಪಿಸಲುಪಟ್ಟ
ಮೂರ್ತೀಕರಿಸಿದ ತತ್ವವಾದ ಶಿವಲಿಂಗವಿಹುದು ನೋಡಾ.
ಇದಕ್ಕೆ **ಮಹಾವಾತುಲಾಗಮೇ :ವೃತ್ತ -**
''ವಿದ್ಯಾಕಲಾಕಲಿತರೂಪಸು ಶೋಭಮಾನಂ
ದಿವ್ಯಂ ಪ್ರಭಾಪಟಲಮೇಕಮುಖಂ ಪ್ರಶಾಂತಂ।
ಇಚ್ಛಾಶಕ್ತಿಪರ ಝ್ರುಂಬಿತಮೂರ್ತಿತತ್ವಂ
ವ್ಯಕ್ತೋಹ್ಯಹಂಕೃತಿಪದೇ ಶಿವಲಿಂಗಮಾಹುಃ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೫ ॥

೫೧೬

ವಾಯುವೇ ಅಂಗವಾದ ಪ್ರಾಣಲಿಂಗಿಯ
ಸುಮನವೆಂಬ ಹಸ್ತದಲ್ಲಿಹ ಚರಲಿಂಗವು ಅಂತರಂಗದೊಡನೆ ಕೂಡಿ
ವರ್ತಿಸುವುದಾಗಿ, ಬಹಿರಂಗಸಹಿತವಾಗಿ, ಅಮೂರ್ತನಹ
ವಸ್ತುತತ್ವವಾಗಿ, ಅಕ್ಷರವಪ್ಪ ಪ್ರಕೃತಿಗಿಂದಲು
ಪರತತ್ವವೆಂಬ ಹೆಸರುಳ್ಳ ಜ್ಯೋತಿಸ್ವರೂಪನಪ್ಪ,
ಪುರುಷನಹನು, ತನ್ನ ಆತ್ಮಮೂರ್ತಿಯಹಂಥ
ಆದಿಶಕ್ತಿಯೊಡನೆ ಕೂಡಿದಂತಾಗಿ ಮನಸ್ಸಿನಿಂದವೆ
ಎಲ್ಲಾಗಳೂ ಧ್ಯಾನವಮಾಡಲು ತಕ್ಕಂಥಾ ಚರಲಿಂಗವೆಂದು
ಆಪ್ತವಾದ ಬುದ್ಧಿಯನುಳ್ಳ ಮಹಾತ್ಮರು ಹೇಳುತ್ತಿಹರು ನೋಡಾ.
ಇದಕ್ಕೆ **ಮಹಾವಾತುಲಾಗಮೇ :ವೃತ್ತ -**
''ಸಾಭ್ಯಾಂತರಂ ಸಬಹಿರಂಗಮಮೂರ್ತಿತತ್ವಂ
ಜ್ಯೋತಿರ್ಮಯಂ ಪುರುಷಮಕ್ಷರತಃ ಪರಾಖ್ಯಂ
ಸ್ವಾತ್ಮಾದಿ ಶಕ್ತಿಘಟಿತಂ ಮನಸೈವ ನಿತ್ಯಂ
ಧ್ಯಾತವ್ಯರೂಪಮಿತಿಂ ಯರಲಿಂಗಮಾಹುಃ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೬ ॥

೫೧೭

ವ್ಯೋಮವೇ ಅಂಗವಾದ ಶರಣನ ಸುಜ್ಞಾನಹಸ್ತದಲ್ಲಿಹ
ಪ್ರಸಾದಲಿಂಗವು ಪರಂಜ್ಯೋತಿಸ್ವರೂಪವಾಗಿ, ನಿತ್ಯವಾಗಿ,
ಪರಿಪೂರ್ಣವಾಗಿ ಇಂದ್ರಿಯಾರ್ಥಂಗಳೆಂದು ವಿಷಯಂಗಳು
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ವಿಷಯಂಗಳನು ಮೀರಿ
ವರ್ತಿಸುವುದಾಗಿ, ಜ್ಞಾನದಿಂದ ಹಡೆಯಲ್ಪಟ್ಟಂಥಾ
ಮೋಕ್ಷಸ್ವರೂಪವಾಗಿ,
ಪರಿಣಾಮಪ್ರಪಂಚಕ್ಕೆ ಕಾರಣವಾದುದಾಗಿ, ಸ್ವಾದವೆಂಬ ನಾಮವನುಳ್ಳ
ತತ್ವವನು ಪರೆಯೆಂಬ ತನ್ನ ಶಕ್ತಿಯಿಂದುದಯಿಸಿದುದಾಗಿ

ನಾಮರೂಪಗಳಿಲ್ಲದಂಥಾ ಪ್ರಸಾದವೆಂಬ
ಮಹಾಘನಲಿಂಗವಾಗಿ ಹೇಳುತಿಹರು ನೋಡಾ.
ಇದಕ್ಕೆ **ಮಹಾವಾತುಲಾಗಮೇ : ವೃತ್ತ**-
''ಜ್ಯೋತಿಃಪರಂ ನಿಜಮುಖಂಡಮತೀಂದ್ರಿಯಾರ್ಥಂ
ಜ್ಞಾನೋಪಲಬ್ಧಮಮೃತಂ ಪರಿಣಾಮಬೀಜಂ ।
ಸಾದಾಖ್ಯತತ್ವಮುದಿತಂ ಪರಯಾ ಸ್ವಶಕ್ತ್ಯಾ
ಪ್ರಾಹುಃ ಪ್ರಸಾದಘನಲಿಂಗಮುಪಾಧಿಹೀನಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೭ ॥

೫೧೮

ಆತ್ಮನೆ ಅಂಗವಾದ ಐಕ್ಯನ ಭಾವಹಸ್ತದಲ್ಲಿ
ಮಹಾಲಿಂಗವು ಜನ್ಮ ಜರಾ ಮರಣಂಗಳಿಲ್ಲವಾಗಿ, ನಿರ್ವಿಕಾರವಾಗಿ,
ಸರ್ವವ್ಯಾಪಿಯಾಗಿ, ಅದ್ವಿತೀಯನಾಗಿ,
ಅಣುವಿಗೆ ಅಣುವಾಗಿ,
ಪರಾಪರವಾಗಿ, ಸಂಸಾರವ್ಯಾಧಿ ಇಲ್ಲದುದಾಗಿ,
ಹವಣಿಸಲು ಬಾರದುದಾಗಿ, ಭಾವವೊಂದರಿಂದವೆ
ಅರಿಯಲು ಬಹುದಾಗಿ, ಚೈತನ್ಯಸ್ವರೂಪವಾಗಿ
ಶಿವತತ್ವವನು ಚಿತ್ ಎಂಬ ಶಕ್ತಿಯ ಸ್ಫುರಣವೇ ರೂಪಾಗಿವುಳ್ಳ
ಮಹಾಲಿಂಗವಾಗಿ ಹೇಳುತ್ತಿಹರು ನೋಡಾ.
ಇದಕ್ಕೆ **ಮಹಾವಾತುಲಾಗಮೇ : ವೃತ್ತ** -
''ಆದ್ಯಂತಯ ಶೂನ್ಯ ಅಮಲಂ ಪರಿಪೂರ್ಣಮೇಕಂ
ಸೂಕ್ಷ್ಮಂ ಪರಾತ್ಪರಮನಾಮಯಮಪ್ರಮೇಯಂ ।
ಭಾವೈಕ್ಯಗಮ್ಯಮಜಡಂ ಶಿವತತ್ವಮಾಹುಃ
ಚಿಚ್ಛಕ್ತಿಸಂಸ್ಫುರಣರೂಢಮಾತ್ಮಲಿಂಗಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಲಿಂಗ ಉತ್ಪತ್ಯ ನ್ಯಾಸ ಸ್ಥಲವನು ಅಖಂಡಜ್ಞಾನವೇ ಸ್ವರೂಪವಾದ ಮಹಾಜ್ಞಾನ ಲಿಂಗದ ಜಿಹ್ವೆಯ ತೆರೆದು ನಿರೂಪಿಸಲು, ನಿಮ್ಮ ಮಹಾನುಭಾವದ ದೃಕ್ಕಿನಿಂದ ಕಂಡು ಪರಮ ಸುಖಿಯಾದೆನು. ಇನ್ನು ಷಡ್ವಿಧಮುಖಂಗಳ ಉತ್ಪತ್ಯ ನ್ಯಾಸ ಸ್ಥಲವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೧೯

ಆ ಅಖಂಡ ಜ್ಯೋತಿರ್ಮಯವಾಗಿಹ ಪರಮೋಂಕಾರ ಪ್ರಣಮದ
ಜ್ಯೋತಿಸ್ವರೂಪದಲ್ಲಿ ಮನಸ್ಸು ಪುಟ್ಟಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿ ಶ್ರೋತ್ರ ಪುಟ್ಟಿತ್ತು

ಆ ಪ್ರಣವದ ಅರ್ಧಚಂದ್ರಕದಲ್ಲಿ ತ್ವಕ್ಕು ಪುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನೇತ್ರ ಪುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಜಿಹ್ವೆ ಪುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಘ್ರಾಣ ಪುಟ್ಟಿತ್ತು ನೋಡಾ.
ಇದಕ್ಕೆ **ಚಕ್ರಾತೀತಾಗಮೇ** :
ಓಂಕಾರ ಜ್ಯೋತಿರೂಪೇ ಚ ಮಾನಸಂ ಚ ಸಮುದ್ಭವಂ ।
ಓಂಕಾರ ದರ್ಪಣಾಕಾರೇ ಶ್ರೋತ್ರಂ ಚೈವ ಸಮುದ್ಭವಂ ॥
ಓಂಕಾರರಾರ್ಧಚಂದ್ರೇ ಚ ತ್ವಕ್ ಚೈವ ಸಮುದ್ಭವಂ ।
ಓಂಕಾರ ಕುಂಡಲಾಕಾರೇ ನೇತ್ರಂ ಚೈವ ಸಮುದ್ಭವಂ ॥
ಓಂಕಾರ ದಂಡಕರೂಪೇ ಚ ಜಿಹ್ವಾ ಚೈವ ಸಮುದ್ಭವಂ ।
ಓಂಕಾರ ತಾರಕರೂಪೇ ಘ್ರಾಣಂ ಚೈವ ಸಮುದ್ಭವಂ ।
ಇತಿ ಷಷ್ಠಮುಖಂ ದೇವಿ ಸ್ಥಾನಸ್ಥಾನೇಷು ಜಾಯತೇ ॥
ಎಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೧೯ ॥

೫೨೦

ಘ್ರಾಣ ಪೃಥ್ವಿಯಾಶ್ರಯವಾಗಿಹುದು.
ಜಿಹ್ವೆ ಅಪ್ಪುವಾಶ್ರಯವಾಗಿಹುದು.
ನೇತ್ರ ತೇಜವಾಶ್ರಯವಾಗಿಹುದು.
ತ್ವಕ್ಕು ವಾಯುವಾಶ್ರಯವಾಗಿಹುದು.
ಶ್ರೋತ್ರ ಆಕಾಶವಾಶ್ರಯವಾಗಿಹುದು.
ಮನ ಆತ್ಮಾಶ್ರಯವಾಗಿಹುದು ನೋಡಾ.
ಇದಕ್ಕೆ **ಜ್ಯೋತಿಪ್ರಕಾಶೇ** :
''ಘ್ರಾಣಂ ಪೃಥ್ವೀಮಾಶ್ರಿತ್ಯ ಜಿಹ್ವಾ ಚ ಜಲಮಾಶ್ರಿತಾ ।
ನೇತ್ರಂ ಚ ತೇಜವಾಶ್ರಿತ್ಯ ತ್ವಕ್ ಚೈವ ವಾಯುಮಾಶ್ರಿತಾ ॥
ಶ್ರೋತ್ರಂ ಚಾಕಾಶಮಾಶ್ರಿತ್ಯ ಮನಃ ಸ್ಯಾದಾತ್ಮಾಶ್ರಯಂ ।
ಇತಿ ಷಷ್ಠಮುಖಂ ದೇವೀ ಸ್ಥಾನ ಸ್ಥಾನೇ ಸಮಾಚರೇತ್ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೦ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಮುಖಂಗಳುತ್ಪತ್ಯ ನ್ಯಾಸವನು ನಿಮ್ಮ ಮಹಾವಾಕ್ಯದಿಂದ ಕಂಡು ಸುಖಿಯಾದೆನು. ಇನ್ನು ಷಡ್ವಿಧ ಪರಿಣಾಮ ಉತ್ಪತ್ಯ ನ್ಯಾಸಸ್ಥಲವ ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರು ಸ್ವಾಮಿ ನಿರೂಪಿಸಿವರಂದೆಂತೆಂದಡೆ :

೫೨೧

ಅಖಂಡ ಜ್ಯೋತಿರ್ಮಯವಾಗಿಹ ಪರಮೋಂಕಾರ ಪ್ರಣವದ
ಜ್ಯೋತಿಸ್ವರೂಪದಲ್ಲಿ ಪರಿಣಾಮ ಹುಟ್ಟಿತ್ತು.

ಆ ಪ್ರಣವದ ದರ್ಪಣಾಕಾರದಲ್ಲಿ ಶಬ್ದ ಹುಟ್ಟಿತ್ತು.
ಆ ಪ್ರಣವದ ಅರ್ಧಚಂದ್ರಾಕಾರದಲ್ಲಿ ಸ್ಪರ್ಶನ ಹುಟ್ಟಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ರೂಪು ಹುಟ್ಟಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ರಸ ಹುಟ್ಟಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಗಂಧ ಹುಟ್ಟಿತ್ತು ನೋಡಾ.
ಇದಕ್ಕೆ **ಶಿವಲಿಂಗಾಗಮೇ** :
''ಓಂಕಾರ ಜ್ಯೋತಿರೂಪೇ ಚ ಪರಿಣಾಮಂ ಚ ಜಾಯತೇ ।
ಓಂಕಾರ ದರ್ಪಣಾಕಾರೇ ಶಬ್ದಶ್ಚೈವ ಸಜಾಯತೇ ॥
ಓಂಕಾರೇಚಾರ್ಧಚಂದ್ರೇ ಚ ಸ್ಪರ್ಶನಂ ಚ ಸಜಾಯತೇ ।
ಓಂಕಾರಕುಂಡಲಾಕಾರೇ ರೂಪಂ ಚೈವ ಸಜಾಯತೇ ।
ಓಂಕಾರದಂಡಕರೂಪೇ ಚ ರಸಂ ಚೈವ ಸಜಾಯತೇ ।
ಓಂಕಾರತಾರಕಾರೂಪೇ ಗಂಧಂ ಚೈವ ಸಜಾಯತೇ ।
ಇತಿ ಷಡ್ಗುಣದ್ರವ್ಯಂ ಸ್ಥಾನೇ ಸ್ಥಾನೇ ಸಮುದ್ಭವಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೧ ॥

೫೨೨

ಪೃಥ್ವಿಯಲ್ಲಿ ಗಂಧವಿಹುದು, ಅಪ್ಪುವಿನಲ್ಲಿ ರಸವಿಹುದು,
ತೇಜದಲ್ಲಿ ರೂಪವಿಹುದು, ವಾಯುವಿನಲ್ಲಿ ಸ್ಪರ್ಶವಿಹುದು,
ಆಕಾಶದಲ್ಲಿ ಶಬ್ದವಿಹುದು,
ತೃಪ್ತಿಯಲ್ಲಿ ಆತ್ಮನೆಂಬ ಮಹಾಭೂತಾಶ್ರಯವಾಗಿಹುದು ನೋಡಾ.
ಇದಕ್ಕೆ **ಶಿವಪ್ರಕಾಶಾಗಮೇ** :
''ಸುಗಂಧಃ ಪೃಥ್ವೀಮಾಶ್ರಿತ್ಯ ಸುರಸೋ ಜಲಮಾಶ್ರಿತಾಃ ।
ರೂಪ ತೇಜ ಆಶ್ರಿತ್ಯ ಸ್ಪರ್ಶನಂ ವಾಯುಮಾಶ್ರಿತಂ ॥
ಶಬ್ದಮಾಕಾಶಮಾಶ್ರಿತ್ಯ ಆತ್ಮಾ ಚ ತೃಪ್ತಿ ಆಶ್ರಯಾಃ ।
ಇತಿ ಷಡಿಂದ್ರಿಯಂ ದೇವಿ ಸ್ಥಾನೇ ಸ್ಥಾನೇ ಸಮಾಚರೇತ್ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೨ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡ್ವಿಧಮುಖಂಗಳ ಉತ್ಪತ್ಯ ನ್ಯಾಸ ಸ್ಥಲವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು ಕಂಡು ಸುಖಿಯಾದೆನು. ಇನ್ನು ಷಡ್ವಿಧಲಿಂಗಾರ್ಪಣದ ಭೇದವನು ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೨೩

ಭೂಮಿಯೆ ಅಂಗವಾದ ಭಕ್ತನು ಸುಚಿತ್ತವೆಂಬ ಹಸ್ತದಲ್ಲಿ
ಆಚಾರಲಿಂಗಕ್ಕೆ ಘ್ರಾಣವೆಂಬ ಮುಖದಲ್ಲಿ ಗಂಧವನೆ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.

ಇದಕ್ಕೆ **ಈಶ್ವರೋऽವಾಚ** :
''ಚಿತ್ತಹಸ್ತೇ ಚ ಭೂಮ್ಯಾಂಗೌ ಭಕ್ತಶ್ಚಾಚಾರಲಿಂಗಕಂ ।
ಘ್ರಾಣೇ ಚ ತನ್ಮುಖೇ ಗಂಧಂ ಅರ್ಪಿತಂ ತೃಪ್ತಿಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೩ ॥

೫೨೪

ಅಪ್ಪುವೆ ಅಂಗವಾದ ಮಹೇಶ್ವರನು ಸುಬುದ್ಧಿಯೆಂಬ ಹಸ್ತದಲ್ಲಿ
ಗುರುಲಿಂಗಕ್ಕೆ ಜಿಹ್ವೆಯೆಂಬ ಮುಖದಲ್ಲಿ ರಸವ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಮಾಹೇಶ್ವರೋ ಜಲಾಂಗಶ್ಚ ಬುದ್ಧಿಹಸ್ತೇನ ಸದ್ಗುರುಃ ।
ಜಿಹ್ವಾಮುಖೇ ರಸೋ ಭೇದಂ ಅರ್ಪಿತಂ ತೃಪ್ತಿಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೪ ॥

೫೨೫

ಅಗ್ನಿಯೆ ಅಂಗವಾದ ಪ್ರಸಾದಿ ನಿರಹಂಕಾರವೆಂಬ ಹಸ್ತದಲ್ಲಿ
ಶಿವಲಿಂಗಕ್ಕೆ ನೇತ್ರವೆಂಬ ಮುಖದಲ್ಲಿ ಸುಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ನಿರಹಂಕಾರಹಸ್ತೇನಾ ಅನಲಾಂಗ ಪ್ರಸಾದಿ ಚ ।
ಶಿವಲಿಂಗಮುಖೇ ನೇತ್ರೇ ಅರ್ಪಿತಂ ರೂಪಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೫ ॥

೫೨೬

ವಾಯುವೆ ಅಂಗವಾದ ಪ್ರಾಣಲಿಂಗಿ ಸುಮನವೆಂಬ ಹಸ್ತದಲ್ಲಿ
ಜಂಗಮಲಿಂಗಕ್ಕೆ ತ್ವಕ್ಕೆಂಬ ಮುಖದಲ್ಲಿ ಸ್ಪರ್ಶನವ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.
ಇದಕ್ಕೆ **ಶ್ರೀಮಹಾದೇವೋऽವಾಚ** :
''ಮನೋ ಹಸ್ತೇನ ವಾಯ್ವಂಗಂ ಪ್ರಾಣಲಿಂಗೀ ತಥೈವ ಚ ।
ಜಂಗಮೇ ತ್ವಙ್ಮುಖಂಚೈವ ಅರ್ಪಿತಂ ಸ್ಪರ್ಶಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೬ ॥

೫೨೭

ಆಕಾಶವೇ ಅಂಗವಾದ ಶರಣ ಸುಜ್ಞಾನವೆಂಬ ಹಸ್ತದಲ್ಲಿ
ಪ್ರಸಾದಲಿಂಗಕ್ಕೆ ಶ್ರೋತ್ರವೆಂಬ ಮುಖದಲ್ಲಿ ಶಬ್ದವ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.

ಇದಕ್ಕೆ **ಈಶ್ವರೋಽವಾಚ** :
''ಜ್ಞಾನಹಸ್ತೇನ ಶರಣಂ ವ್ಯೋಮಾಂಗಶ್ಚ ಪ್ರಸಾದಿತೇ
ಶ್ರೋತ್ರೇ ಚ ತನ್ಮುಖಿ ಚೈವ ಅರ್ಪಿತಂ ಶಬ್ದಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೭ ॥

೫೨೮

ಆತ್ಮನೆ ಅಂಗವಾದ ಐಕ್ಯ ಭಾವವೆಂಬ ಹಸ್ತದಲ್ಲಿ
ಮಹಾಲಿಂಗಕ್ಕೆ ಮನವೆಂಬ ಮುಖದಲ್ಲಿ ಪರಿಣಾಮ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ.
ಇದಕ್ಕೆ **ಈಶ್ವರೋಽವಾಚ** :
''ಆತ್ಮಾಂಗೋ ಭಾವಹಸ್ತೇನ ಐಕ್ಯಶ್ಚಾಪಿ ಮಹಾತ್ಮನೇ ।
ಹೃನ್ಮುಖೀ ಅರ್ಪಿತಂಚೈವ ಪದಾರ್ಥಂ ತೃಪ್ತಿಭೋಕ್ತವಾನ್ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೨೮ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡುಸ್ಥಲ ಲಿಂಗಾರ್ಪಣದ ಭೇದವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಲು ಕಂಡು ಕೃತಾರ್ಥನಾದೆನು. ಇನ್ನು ಮಿಶ್ರಷಡುಸ್ಥಲ, ಮಿಶ್ರಲಿಂಗಾರ್ಪಣ ಭೇದವನು ಅರಿಯೆನು ಎಲೆ ಸದ್ಗುರುಸ್ವಾಮಿ ನಿರೂಪಿಸೆಂದು ಬೆಸಗೊಳಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

**ಕಾಯಾರ್ಪಣಸ್ಥಲ :**

೫೨೯

ಭಕ್ತನಾಚಾರಲಿಂಗದಲ್ಲಿ ಭೋಜ್ಯ ಸಮರ್ಪಣವು.
ಭಕ್ತನಲ್ಲಿಯ ಮಹೇಶ್ವರನ ಗುರುಲಿಂಗದಲ್ಲಿ ಪಾನೀಯ ಸಮರ್ಪಣವು.
ಭಕ್ತನಲ್ಲಿಯ ಪ್ರಸಾದಿಯ ಶಿವಲಿಂಗದಲ್ಲಿ ಭಕ್ಷ್ಯ ಸಮರ್ಪಣವು.
ಭಕ್ತನಲ್ಲಿಯ ಪ್ರಾಣಲಿಂಗಿಯ ಜಂಗಮಲಿಂಗದಲ್ಲಿ ಚೋಹ್ಯ ಸಮರ್ಪಣವು.
ಭಕ್ತನಲ್ಲಿಯ ಶರಣನ ಪ್ರಸಾದಲಿಂಗದಲ್ಲಿ ಲೇಹ್ಯ ಸಮರ್ಪಣವು.
ಭಕ್ತನಲ್ಲಿಯ ಐಕ್ಯನ ಮಹಾಲಿಂಗದಲ್ಲಿ
ಭೋಜ್ಯ ಪಾನೀಯ ಭಕ್ಷ್ಯ ಚೋಹ್ಯ ಲೇಹ್ಯವೆಂಬ
ಎಲ್ಲಾ ರುಚಿದ್ರವ್ಯಂಗಳನು ಸಮರ್ಪಣವಂ ಮಾಡಿ
ತೃಪ್ತಿಯನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೨೯ ॥

೫೩೦

ಇನ್ನು ಕರಣಾರ್ಪಣಸ್ಥಲಂಗಳೆಂತೆಂದಡೆ :
ಭೂಮಿಯೇ ಅಂಗವಾದ

ಭಕ್ತನು ಸುಚಿತ್ತವೆಂಬ ಹಸ್ತದಲ್ಲಿ
ಆಚಾರಲಿಂಗದಲ್ಲಿ ಘ್ರಾಣವೆಂಬ ಮುಖದಲ್ಲಿ
ಬೇರು ಗೆಣಸು ಮೊದಲಾದ ಗಂಧದ್ರವ್ಯಮಂ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೦ ||

೫೩೧

ಭಕ್ತನಲ್ಲಿಯ ಪ್ರಸಾದಿಗೆ ಪೃಥ್ವಿಯಲ್ಲಿಯ ಅಗ್ನಿಯೇ ಅಂಗ.
ಆ ಅಂಗಕ್ಕೆ ಸುಚಿತ್ತದಲ್ಲಿಯ ನಿರಹಂಕಾರವೇ ಹಸ್ತ
ಆ ಹಸ್ತಕ್ಕೆ ಆಚಾರಲಿಂಗದಲ್ಲಿಯ ಶಿವಲಿಂಗವೇ ಲಿಂಗ.
ಆ ಶಿವಲಿಂಗಮುಖದಲ್ಲಿ ಚಿಗುರು ಮೊದಲಾದ ಪತ್ರೆಯ ಗಂಧದ್ರವ್ಯಮಂ
ಸಮರ್ಪಣವ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೧ ||

೫೩೨

ಭಕ್ತನಲ್ಲಿಯ ಪ್ರಾಣಲಿಂಗಿಗೆ ಪೃಥ್ವಿಯಲ್ಲಿಯ ವಾಯುವೇ ಅಂಗ.
ಆ ಅಂಗಕ್ಕೆ ಸುಚಿತ್ತದಲ್ಲಿಯ ಸುಮನವೇ ಹಸ್ತ
ಆ ಹಸ್ತಕ್ಕೆ ಆಚಾರಲಿಂಗದಲ್ಲಿಯ ಜಂಗಮಲಿಂಗವೇ ಲಿಂಗ.
ಆ ಜಂಗಮಲಿಂಗಮುಖದಲ್ಲಿ ಮೊಗ್ಗೆ ಮೊದಲಾದ ಗಂಧದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೫೩೨ ||

೫೩೩

ಭಕ್ತನಲ್ಲಿಯ ಶರಣಂಗೆ ಪೃಥ್ವಿಯಲ್ಲಿಯ ಆಕಾಶವೇ ಅಂಗ.
ಆ ಅಂಗಕ್ಕೆ ಸುಚಿತ್ತದಲ್ಲಿಯ ಸುಜ್ಞಾನವೇ ಹಸ್ತ
ಆ ಹಸ್ತಕ್ಕೆ ಆಚಾರಲಿಂಗದಲ್ಲಿಯ ಪ್ರಸಾದಲಿಂಗವೇ ಲಿಂಗ.
ಆ ಪ್ರಸಾದಲಿಂಗಮುಖದಲ್ಲಿ ಕಾಯಿ ಮೊದಲಾದ ಗಂಧದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೩ ||

೫೩೪

ಭಕ್ತನಲ್ಲಿಯ ಐಕ್ಯಂಗೆ ಪೃಥ್ವಿಯಲ್ಲಿಯ ಆತ್ಮನೆ ಅಂಗ,
ಆ ಅಂಗಕ್ಕೆ ಸುಚಿತ್ತದಲ್ಲಿಯ ಭಾವವೇ ಹಸ್ತ
ಆ ಹಸ್ತಕ್ಕೆ ಆಚಾರಲಿಂಗದಲ್ಲಿಯ ಮಹಾಲಿಂಗವೇ ಲಿಂಗ.
ಆ ಮಹಾಲಿಂಗಮುಖದಲ್ಲಿ ಎಲ್ಲಾ ಗಂಧದ್ರವ್ಯವನು

ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೪ ||

೫೩೫

ಇನ್ನು ಮಹೇಶ್ವರನಲ್ಲಿಯ ಷಡ್ವಿಧ ಷಡುಸ್ಥಲಲಿಂಗ
ಮಿಶ್ರಾರ್ಪಣವೆಂತೆಂದಡೆ :
ಅಪ್ಪುವೆ ಅಂಗವಾದ ಮಾಹೇಶ್ವರನು ಸುಬುದ್ಧಿಯೆಂಬ ಹಸ್ತದಲ್ಲಿ
ಗುರುಲಿಂಗಕ್ಕೆ ಜಿಹ್ವೆಯೆಂಬ ಮುಖದಲ್ಲಿ
ಓಗರಾದುರು ಚಿದ್ರವ್ಯವ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೫ ||

೫೩೬

ಆ ಮಾಹೇಶ್ವರನಲ್ಲಿಯ ಭಕ್ತಂಗೆ ಅಪ್ಪುವಿನಲ್ಲಿಯ ಪೃಥ್ವಿಯೇ ಅಂಗ.
ಆ ಅಂಗಕ್ಕೆ ಸುಬುದ್ಧಿಯಲ್ಲಿಯ ಸುಚಿತ್ತವೇ ಹಸ್ತ,
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಆಚಾರಲಿಂಗವೇ ಲಿಂಗ,
ಆ ಆಚಾರಲಿಂಗಮುಖದಲ್ಲಿ ಮಧುರವಾದ
ದ್ರವ್ಯವನು ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೬ ||

೫೩೭

ಆ ಮಾಹೇಶ್ವರನಲ್ಲಿಯ ಪ್ರಸಾದಿಗೆ ಅಪ್ಪುವಿನಲ್ಲಿಯ ಅಗ್ನಿಯೇ ಅಂಗ.
ಆ ಅಂಗಕ್ಕೆ ಸುಬುದ್ಧಿಯಲ್ಲಿಯ ನಿರಹಂಕಾರವೆ ಹಸ್ತ,
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಶಿವಲಿಂಗವೆ ಲಿಂಗ.
ಆ ಶಿವಲಿಂಗಮುಖದಲ್ಲಿ ಖಾರವಾದ ರುಚಿಯ ದ್ರವ್ಯವನು ಸಮರ್ಪಣವಂ
ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೭ ||

೫೩೮

ಆ ಮಹಾಹೇಶ್ವರನಲ್ಲಿಯ ಪ್ರಾಣಲಿಂಗಿಗೆ
ಅಪ್ಪುವಿನಲ್ಲಿಯ ವಾಯುವೆ ಅಂಗ.
ಆ ಅಂಗಕ್ಕೆ ಸುಬುದ್ಧಿಯಲ್ಲಿಯ ಸುಮನವೇ ಹಸ್ತ,
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಜಂಗಮಲಿಂಗವೇ ಲಿಂಗ,
ಆ ಜಂಗಮಲಿಂಗಮುಖದಲ್ಲಿ ಅಮೃತವಾದ ರುಚಿಯ ದ್ರವ್ಯವನು

ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೮ ||

೫೩೯

ಆ ಮಾಹೇಶ್ವರನಲ್ಲಿಯ ಶರಣಂಗೆ ಅಪ್ಪುವಿನಲ್ಲಿಯ ಆಕಾಶವೇ ಅಂಗ.
ಆ ಅಂಗಕ್ಕೆ ಸುಬುದ್ಧಿಯಲ್ಲಿಯ ಸುಜ್ಞಾನವೇ ಹಸ್ತ
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಪ್ರಸಾದಲಿಂಗವೇ ಲಿಂಗ.
ಪ್ರಸಾದಲಿಂಗಮುಖದಲ್ಲಿ ಕಹಿಯಾದ ರುಚಿದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೩೯ ||

೫೪೦

ಆ ಮಾಹೇಶ್ವರನಲ್ಲಿಯ ಐಕ್ಯಂಗೆ ಅಪ್ಪುವಿನಲ್ಲಿಯ ಆತ್ಮನೇ ಅಂಗ.
ಆ ಅಂಗಕ್ಕೆ ಸುಬುದ್ಧಿಯಲ್ಲಿಯ ಭಾವವೇ ಹಸ್ತ
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಮಹಾಲಿಂಗವೆ ಲಿಂಗ.
ಆ ಮಹಾಲಿಂಗಮುಖದಲ್ಲಿ ಎಲ್ಲಾ ರುಚಿ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೦ ||

೫೪೧

ಇನ್ನು ಪ್ರಸಾದಿಯ ಷಡ್ವಿಧ ಷಡುಸ್ಥಲಲಿಂಗ
ಮಿಶ್ರಾರ್ಪಣದ ಭೇದ ವೆಂತೆಂದಡೆ :
ಅಗ್ನಿಯೆ ಅಂಗವಾದ ಪ್ರಸಾದಿಗೆ ನಿರಹಂಕಾರವೆಂಬ ಹಸ್ತದಲ್ಲಿ
ಶಿವಲಿಂಗಕ್ಕೆ ನೇತ್ರವೆಂಬಮುಖದಲ್ಲಿ
ಹರಿತವರ್ಣವಾದ ರೂಪದ್ರವ್ಯವನು ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೧ ||

೫೪೨

ಇನ್ನು ಆ ಪ್ರಸಾದಿಯಲ್ಲಿಯ ಭಕ್ತಂಗೆ ಅಗ್ನಿಯಲ್ಲಿಯ ಪೃಥ್ವಿಯೆ ಅಂಗ.
ಆ ಅಂಗಕ್ಕೆ ನಿರಹಂಕಾರದಲ್ಲಿಯ ಸುಚಿತ್ತವೆ ಹಸ್ತ
ಆ ಹಸ್ತಕ್ಕೆ ಶಿವಲಿಂಗದಲ್ಲಿಯ ಆಚಾರಲಿಂಗವೆ ಲಿಂಗ.
ಆ ಆಚಾರಲಿಂಗಮುಖದಲ್ಲಿ ಪೀತವರ್ಣವಾದ ರೂಪದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೨ ||

೫೪೩

ಆ ಪ್ರಸಾದಿಯಲ್ಲಿಯ ಮಾಹೇಶ್ವರಂಗೆ ಅಗ್ನಿಯಲ್ಲಿಯ ಅಪ್ಪುವೆ ಅಂಗ.
ಆ ಅಂಗಕ್ಕೆ ನಿರಹಂಕಾರದಲ್ಲಿಯ ಸುಬುದ್ಧಿಯೇ ಹಸ್ತ.
ಆ ಹಸ್ತಕ್ಕೆ ಶಿವಲಿಂಗದಲ್ಲಿಯ ಗುರುಲಿಂಗವೆ ಲಿಂಗ.
ಆ ಗುರುಲಿಂಗಮುಖದಲ್ಲಿ ಶ್ವೇತವರ್ಣವಾದ ರೂಪದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೪೩ ॥

೫೪೪

ಆ ಪ್ರಸಾದಿಯಲ್ಲಿಯ ಪ್ರಾಣಲಿಂಗಿಗೆ ಅಗ್ನಿಯಲ್ಲಿಯ ವಾಯುವೇ ಅಂಗ.
ಆ ಲಿಂಗಕ್ಕೆ ನಿರಹಂಕಾರದಲ್ಲಿಯ ಸುಮನವೆ ಹಸ್ತ.
ಆ ಹಸ್ತಕ್ಕೆ ಶಿವಲಿಂಗದಲ್ಲಿಯ ಜಂಗಮಲಿಂಗವೆ ಲಿಂಗ.
ಆ ಜಂಗಮಲಿಂಗಮುಖದಲ್ಲಿ ಮಾಂಜಿಷ್ಟವರ್ಣವಾದ ರೂಪದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೪೪ ॥

೫೪೫

ಆ ಪ್ರಸಾದಿಯಲ್ಲಿಯ ಶರಣಂಗೆ ಅಗ್ನಿಯಲ್ಲಿಯ ಆಕಾಶವೇ ಅಂಗ.
ಆ ಅಂಗಕ್ಕೆ ನಿರಹಂಕಾರದಲ್ಲಿಯ ಸುಜ್ಞಾನವೇ ಹಸ್ತ.
ಆ ಹಸ್ತಕ್ಕೆ ಗುರುಲಿಂಗದಲ್ಲಿಯ ಪ್ರಸಾದಲಿಂಗವೆ ಲಿಂಗ.
ಆ ಪ್ರಸಾದಲಿಂಗಮುಖದಲ್ಲಿ ಕಪೋತವರ್ಣವಾದ ರೂಪದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೪೫ ॥

೫೪೬

ಆ ಪ್ರಸಾದಿಯಲ್ಲಿಯ ಐಕ್ಯಂಗೆ ಅಗ್ನಿಯಲ್ಲಿಯ ಆತ್ಮವೇ ಅಂಗ.
ಆ ಅಂಗಕ್ಕೆ ನಿರಹಂಕಾರದಲ್ಲಿಯ ಭಾವವೇ ಹಸ್ತ.
ಆ ಹಸ್ತಕ್ಕೆ ಶಿವಲಿಂಗದಲ್ಲಿಯ ಮಹಾಲಿಂಗವೆ ಲಿಂಗ.
ಆ ಮಹಾಲಿಂಗಮುಖದಲ್ಲಿ ಈ ಎಲ್ಲಾ ರೂಪದ್ರವ್ಯಂಗಳನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೪೬ ॥

೫೪೭

ಇನ್ನು ಪ್ರಾಣಲಿಂಗಿಯಲ್ಲಿಯ ಷಡ್ವಿಧ ಷಡುಸ್ಥಲಲಿಂಗ
ಮಿಶ್ರಾರ್ಪಣದ ಭೇದವೆಂತೆಂದಡೆ :
ವಾಯುವೆ ಅಂಗವಾದ ಪ್ರಾಣಲಿಂಗಿಗೆ ಸುಮನವೆಂಬ ಹಸ್ತದಲ್ಲಿ

ಜಂಗಮಲಿಂಗದಲ್ಲಿ ತ್ವಕ್ಕೆಂಬ ಮುಖದಲ್ಲಿ
ಶೈತ್ಯವಾದ ಸ್ಪರ್ಶನದ್ರವ್ಯವನು ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೭ ||

೫೪೮

ಇನ್ನು ಪ್ರಾಣಲಿಂಗಿಯಲ್ಲಿಯ ಭಕ್ತಂಗೆ
ವಾಯುವಿನಲ್ಲಿಯ ಪೃಥ್ವಿಯೇ ಅಂಗ.
ಆ ಅಂಗಕ್ಕೆ ಸುಮನದಲ್ಲಿಯ ಸುಚಿತ್ತವೇ ಹಸ್ತ.
ಆ ಹಸ್ತಕ್ಕೆ ಜಂಗಮಲಿಂಗದಲ್ಲಿಯ ಆಚಾರಲಿಂಗವೆ ಲಿಂಗ.
ಆ ಆಚಾರಲಿಂಗಮುಖದಲ್ಲಿ ಕಠಿಣವಾದ ಸ್ಪರ್ಶನದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೮ ||

೫೪೯

ಆ ಪ್ರಾಣಲಿಂಗಿಯಲ್ಲಿಯ ಮಾಹೇಶ್ವರಂಗೆ
ವಾಯುವಿನಲ್ಲಿಯ ಅಪ್ಪುವೆ ಅಂಗ.
ಆ ಅಂಗಕ್ಕೆ ಸುಮನದಲ್ಲಿಯ ಸುಬುದ್ಧಿಯೇ ಹಸ್ತ.
ಆ ಹಸ್ತಕ್ಕೆ ಜಂಗಮಲಿಂಗದಲ್ಲಿಯ ಗುರುಲಿಂಗವೆ ಲಿಂಗ.
ಆ ಗುರುಲಿಂಗದಮುಖದಲ್ಲಿ ಮೃದುವಾದ ಸ್ಪರ್ಶನದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೪೯ ||

೫೫೦

ಆ ಪ್ರಾಣಲಿಂಗಿಯಲ್ಲಿಯ ಪ್ರಸಾದಿಗೆ
ವಾಯುವಿನಲ್ಲಿಯ ಅಗ್ನಿಯೇ ಅಂಗ.
ಆ ಅಂಗಕ್ಕೆ ಸುಮನದಲ್ಲಿಯ ನಿರಹಂಕಾರವೇ ಹಸ್ತ.
ಆ ಹಸ್ತಕ್ಕೆ ಜಂಗಮಲಿಂಗದಲ್ಲಿಯ ಶಿವಲಿಂಗವೇ ಲಿಂಗ.
ಆ ಶಿವಲಿಂಗದಮುಖದಲ್ಲಿ ಉಷ್ಣವಾದ ಸ್ಪರ್ಶನದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೫೦ ||

೫೫೧

ಆ ಪ್ರಾಣಲಿಂಗಿಯಲ್ಲಿಯ ಶರಣಂಗೆ
ವಾಯುವಿನಲ್ಲಿಯ ಆಕಾಶವೇ ಅಂಗ.
ಆ ಅಂಗಕ್ಕೆ ಸುಮನದಲ್ಲಿಯ ಸುಜ್ಞಾನವೇ ಹಸ್ತ.

ಆ ಹಸ್ತಕ್ಕೆ ಜಂಗಮಲಿಂಗದಲ್ಲಿಯ ಪ್ರಸಾದಲಿಂಗವೇ ಲಿಂಗ.
ಆ ಪ್ರಸಾದಲಿಂಗದಮುಖದಲ್ಲಿ ಮಿಶ್ರವಾದ ಸ್ಪರ್ಶನದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೧ ॥

೫೫೨

ಆ ಪ್ರಾಣಲಿಂಗಿಯಲ್ಲಿಯ ಐಕ್ಯಂಗೆ ವಾಯುವಿನಲ್ಲಿಯ ಆತ್ಮನೇ ಅಂಗ.
ಆ ಅಂಗಕ್ಕೆ ಸುಮನದಲ್ಲಿಯ ಭಾವವೇ ಹಸ್ತ.
ಆ ಹಸ್ತಕ್ಕೆ ಜಂಗಮಲಿಂಗದಲ್ಲಿಯ ಮಹಾಲಿಂಗವೇ ಲಿಂಗ.
ಆ ಮಹಾಲಿಂಗದಮುಖದಲ್ಲಿ ಇವೆಲ್ಲರಲ್ಲಿಯ ಸ್ಪರ್ಶನದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೨ ॥

೫೫೩

ಇನ್ನು ಶರಣನಲ್ಲಿಯ ಷಡ್ವಿಧ ಷಡುಸ್ಥಲಲಿಂಗ
ಮಿಶ್ರಾರ್ಪಣ ಭೇದವೆಂತೆಂದಡೆ :
ಆಕಾಶವೆ ಅಂಗವಾದ ಶರಣನ ಸುಜ್ಞಾನವೆಂಬ ಹಸ್ತದಲ್ಲಿ
ಪ್ರಸಾದಲಿಂಗಕ್ಕೆ ಶ್ರೋತ್ರವೆಂಬ ಮುಖದಲ್ಲಿ
ಪಾತ್ರದಲ್ಲಿ ಹುಟ್ಟಿದ ಸುನಾದಾಳಾಪನೆಯ ಶಬ್ದದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೩ ॥

೫೫೪

ಇನ್ನು ಶರಣನಲ್ಲಿಯ ಭಕ್ತಂಗೆ ಆಕಾಶದಲ್ಲಿಯ ಪೃಥ್ವಿಯೇ ಅಂಗ.
ಆ ಅಂಗಕ್ಕೆ ಸುಜ್ಞಾನದಲ್ಲಿಯ ಸುಚಿತ್ತವೇ ಹಸ್ತ.
ಆ ಹಸ್ತಕ್ಕೆ ಪ್ರಸಾದಲಿಂಗದಲ್ಲಿಯ ಆಚಾರಲಿಂಗವೇ ಲಿಂಗ.
ಆ ಆಚಾರಲಿಂಗದ ಮುಖದಲ್ಲಿ ತಾಳ ಕೌಂಸಾಳದಲ್ಲಿ ಹುಟ್ಟಿದ
ಶಬ್ದದ್ರವ್ಯವ ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೪ ॥

೫೫೫

ಆ ಶರಣನಲ್ಲಿಯ ಮಾಹೇಶ್ವರಂಗೆ ಆಕಾಶದಲ್ಲಿಯ ಅಪ್ಪುವೇ ಅಂಗ.
ಆ ಅಂಗಕ್ಕೆ ಸುಜ್ಞಾನದಲ್ಲಿಯ ಸುಬುದ್ಧಿಯೇ ಹಸ್ತ.
ಆ ಹಸ್ತಕ್ಕೆ ಪ್ರಸಾದಲಿಂಗದಲ್ಲಿಯ ಗುರುಲಿಂಗವೇ ಲಿಂಗ.
ಆ ಗುರುಲಿಂಗದಮುಖದಲ್ಲಿ ತಂತಿವಿಡಿದು ಹುಟ್ಟಿದ ನಾದದ್ರವ್ಯವನು

ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೫ ॥

೫೫೬

ಆ ಶರಣನಲ್ಲಿಯ ಪ್ರಸಾದಿಗೆ ಆಕಾಶದಲ್ಲಿಯ ಅಗ್ನಿಯೇ ಅಂಗ.
ಆ ಅಂಗಕ್ಕೆ ಸುಜ್ಞಾನದಲ್ಲಿಯ ನಿರಹಂಕಾರವೇ ಹಸ್ತ.
ಆ ಹಸ್ತಕ್ಕೆ ಪ್ರಸಾದಲಿಂಗದಲ್ಲಿಯ ಶಿವಲಿಂಗವೇ ಲಿಂಗ.
ಆ ಶಿವಲಿಂಗದ ಮುಖದಲ್ಲಿ ಕುರುಹುವಿಡಿದು ಹುಟ್ಟಿದ ಶಬ್ದದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೬ ॥

೫೫೭

ಆ ಶರಣನಲ್ಲಿಯ ಪ್ರಾಣಲಿಂಗಿಗೆ ಆಕಾಶದಲ್ಲಿಯ ವಾಯುವೇ ಅಂಗ.
ಆ ಅಂಗಕ್ಕೆ ಸುಜ್ಞಾನದಲ್ಲಿಯ ಸುಮನವೇ ಹಸ್ತ
ಆ ಹಸ್ತಕ್ಕೆ ಪ್ರಸಾದಲಿಂಗದಲ್ಲಿಯ ಜಂಗಮಲಿಂಗವೇ ಲಿಂಗ.
ಆ ಜಂಗಮಲಿಂಗದ ಮುಖದಲ್ಲಿ ಕೊಳಲು ನಾಗಸ್ವರ ಶಂಕುದೊಳಗಾಗಿ
ಪುಟ್ಟಿದ ಶಬ್ದದ್ರವ್ಯವನು ಸಮರ್ಪಣವಂ ಮಾಡಿ
ತೃಪ್ತಿಯನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೭ ॥

೫೫೮

ಆ ಶರಣನಲ್ಲಿಯ ಐಕ್ಯಂಗೆ ಆಕಾಶದಲ್ಲಿಯ ಆತ್ಮನೇ ಅಂಗ.
ಆ ಅಂಗಕ್ಕೆ ಸುಜ್ಞಾನದಲ್ಲಿಯ ಭಾವವೇ ಹಸ್ತ
ಆ ಹಸ್ತಕ್ಕೆ ಪ್ರಸಾದಲಿಂಗದಲ್ಲಿಯ ಮಹಾಲಿಂಗವೇ ಲಿಂಗ.
ಆ ಮಹಾಲಿಂಗದಮುಖದಲ್ಲಿ ಇವೆಲ್ಲದರಲ್ಲಿ ಹುಟ್ಟಿದ ಶಬ್ದದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೮ ॥

೫೫೯

ಇನ್ನು ಆ ಐಕ್ಯನಲ್ಲಿಯ ಷಡ್ವಿಧ ಷಡುಸ್ಥಲಲಿಂಗ
ಮಿಶ್ರಾರ್ಪಣ ಭೇದವೆಂತೆಂದಡೆ :
ಆತ್ಮನೇ ಅಂಗವಾದ ಐಕ್ಯಂಗೆ ಭಾವವೆಂಬ ಹಸ್ತದಲ್ಲಿ
ಮಹಾಲಿಂಗಕ್ಕೆ ಮನವೆಂಬ ಮುಖದಲ್ಲಿ ಪರಿಣಾಮದ್ರವ್ಯವನು
ಸಮರ್ಪಣವಂ ಮಾಡಿ ತೃಪ್ತಿಯನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೫೯ ॥

೫೬೦

ಇನ್ನು ಆ ಐಕ್ಯನಲ್ಲಿಯ ಭಕ್ತಂಗೆ ಆತ್ಮನಲ್ಲಿಯ ಪೃಥ್ವಿಯೇ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ಸುಚಿತ್ತವೇ ಹಸ್ತ.
ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಆಚಾರಲಿಂಗವೇ ಲಿಂಗ.
ಆ ಆಚಾರಲಿಂಗದಮುಖದಲ್ಲಿ ಗಂಧದ ತೃಪ್ತಿಯನೆ ಸಮರ್ಪಣವಂ ಮಾಡಿ
ತೃಪ್ತಿಯನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೬೦ ||

೫೬೧

ಆ ಐಕ್ಯನಲ್ಲಿಯ ಮಾಹೇಶ್ವರಂಗೆ ಆತ್ಮನಲ್ಲಿಯ ಅಪ್ಪುವೇ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ಸುಬುದ್ಧಿಯೇ ಹಸ್ತ.
ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಗುರುಲಿಂಗವೇ ಲಿಂಗ.
ಆ ಗುರುಲಿಂಗದಮುಖದಲ್ಲಿ ರಸತೃಪ್ತಿದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೬೧ ||

೫೬೨

ಆ ಐಕ್ಯನಲ್ಲಿಯ ಪ್ರಸಾದಿಗೆ ಆತ್ಮನಲ್ಲಿಯ ಅಗ್ನಿಯೇ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ನಿರಹಂಕಾರವೇ ಹಸ್ತ.
ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಶಿವಲಿಂಗವೇ ಲಿಂಗ.
ಆ ಶಿವಲಿಂಗದ ಮುಖದಲ್ಲಿ ರೂಪತೃಪ್ತಿದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಪ್ರಸಾದವನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೬೨ ||

೫೬೩

ಆ ಐಕ್ಯನಲ್ಲಿಯ ಪ್ರಾಣಲಿಂಗಿಗೆ ಆತ್ಮನಲ್ಲಿಯ ವಾಯುವೇ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ಸುಮನವೇ ಹಸ್ತ.
ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಜಂಗಮಲಿಂಗವೇ ಲಿಂಗ.
ಆ ಜಂಗಮಲಿಂಗದಮುಖದಲ್ಲಿ ಸ್ಪರ್ಶನತೃಪ್ತಿದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಪ್ರಸಾದವನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೬೩ ||

೫೬೪

ಆ ಐಕ್ಯನಲ್ಲಿಯ ಶರಣಂಗೆ ಆತ್ಮನಲ್ಲಿಯ ಆಕಾಶವೇ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ಸುಜ್ಞಾನವೇ ಹಸ್ತ.

ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಪ್ರಸಾದಲಿಂಗವೇ ಲಿಂಗ.
ಆ ಪ್ರಸಾದಲಿಂಗಮುಖದಲ್ಲಿ ಶಬ್ದತೃಪ್ತಿದ್ರವ್ಯವನು
ಸಮರ್ಪಣವಂ ಮಾಡಿ, ತೃಪ್ತಿಪ್ರಸಾದವನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೬೪ ॥

೫೬೫

ಆ ಐಕ್ಯನಲ್ಲಿಯ ಐಕ್ಯಂಗೆ ಆತ್ಮನಲ್ಲಿಯ ಪರಮಾತ್ಮನೆ ಅಂಗ.
ಆ ಅಂಗಕ್ಕೆ ಭಾವದಲ್ಲಿಯ ನಿರ್ಭಾವವೇ ಹಸ್ತ
ಆ ಹಸ್ತಕ್ಕೆ ಮಹಾಲಿಂಗದಲ್ಲಿಯ ಅತಿಮಹಾಲಿಂಗವೇ ಲಿಂಗ.
ಆ ಅತಿಮಹಾಲಿಂಗಮುಖದಲ್ಲಿ ಪರಮಪರಿಣಾಮವನೇ ಸಮರ್ಪಿಸಿ
ಆ ಪರಮಪ್ರಸಾದವನೇ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೬೫ ॥

೫೬೬

ಈ ಮೂವತ್ತಾರು ಷಡುಸ್ಥಲಬ್ರಹ್ಮವನರಿದು
ಆ ಮೂವತ್ತಾರುಷಡುಸ್ಥಲಬ್ರಹ್ಮ ಅಂಗವಾಗಿ
ಆ ಮೂವತ್ತಾರು ಷಡುಸ್ಥಲಬ್ರಹ್ಮವನೊಡಗೂಡಿದಾತನೆ
ಷಡುಸ್ಥಲಬ್ರಹ್ಮಯೋಗಿ, ಆತನೆ ದಿವ್ಯಯೋಗಿ, ಆತನೆ ಪರಮಶಿವಯೋಗಿ,
ಆತನೆ ಸಚ್ಚಿದಾನಂದ ನಿತ್ಯಪರಿಪೂರ್ಣಯೋಗಿ,
ಆತನೆ ನಿತ್ಯನಿರಂಜನ ಯೋಗಿ,
ಆತನೆ ನಮ್ಮ ಅಪ್ರಮಾಣಕೂಡಲಸಂಗಮದೇವಾ. ॥ ೫೬೬ ॥

ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಮೂವತ್ತಾರು ಷಡುಸ್ಥಲಬ್ರಹ್ಮದ ಲಿಂಗಾರ್ಪಣದ ಭೇದವನು ನಿಮ್ಮ ಅಖಂಡಜ್ಞಾನದೃಕ್ಕಿನಿಂದ ಕಂಡು ಮಹಾನು ಭಾವ ಸುಖಿಯಾದೆನು, ಇನ್ನು ಸರ್ವಾಂಗಲಿಂಗಸ್ಥಲವನು ಕರುಣದಿಂದ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೬೭

ನಾಮರೂಪಕ್ರಿಯಾತ್ಮಕವಾಗಿಹ ಪರವಸ್ತುಲಿಂಗ ತಾನೆ
ತನ್ನ ಲೀಲಾವಿನೋದಕ್ಕೆ ಅಂಗಸ್ಥಲದಲ್ಲಿ ನಾಮ–ರೂಪ–ಕ್ರಿಯಾತ್ಮನಾಗಿ
ಪ್ರತಿಷ್ಠಿಸಲುಪಟ್ಟುದಾಗಿ ಎಲ್ಲಾ ಮುಖಂಗಳೂ
ತನ್ನ ಮುಖಂಗಳುಳ್ಳದಾಗಿ ತೋರುತ್ತಿಹುದು ನೋಡಾ.
ಇದಕ್ಕೆ ಶಿವಲಿಂಗಾಗಮೇ :
''ಏಕಮೇವ ಪರಂ ಲಿಂಗಂ ಅಂಗೇऽಸ್ಮಿನ್ ಸುಪ್ರತಿಷ್ಠಿತಂ ।
ಸರ್ವತೋ ಮುಖಮಾಭಾತಿ ನಾಮರೂಪಕ್ರಿಯಾತ್ಮನಾ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೬೭ ॥

೫೬೮

ಸ್ಥೂಲತನುವಿನಲ್ಲಿ ಇಷ್ಟಲಿಂಗ ಸ್ವಾಯತವಾಗಿಹುದು.
ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗ ಸ್ವಾಯತವಾಗಿಹುದು.
ಕಾರಣತನುವಾದ ಆತ್ಮಾಂಗದಲ್ಲಿ
ಭಾವಲಿಂಗ ಸ್ವಾಯತವಾಗಿಹುದು ನೋಡಾ.
ಇದಕ್ಕೆ **ಮಹಾಲಿಂಗಾಗಮೇ** :
''ಇಷ್ಟಲಿಂಗಂತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ ।
ಭಾವಲಿಂಗಂ ಸದೈವಾತ್ಮಾ ಸ್ವಾಂಗೇsಸ್ಮಿನ್ ಸುಪ್ರತಿಷ್ಠಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೬೮ ॥

೫೬೯

ಇನ್ನು ಹೃದಯಂಗದಲ್ಲಿ ಮಹಾಲಿಂಗ ಸ್ವಾಯತವಾಗಿಹುದು.
ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ ಸ್ವಾಯತವಾಗಿಹುದು.
ತ್ವಗಾಂಗದಲ್ಲಿ ಚರಲಿಂಗ ಸ್ವಾಯತವಾಗಿಹುದು.
ದೃಗಾಂಗದಲ್ಲಿ ಶಿವಲಿಂಗ ಸ್ವಾಯತವಾಗಿಹುದು.
ಜಿಹ್ವಾಂಗದಲ್ಲಿ ಗುರುಲಿಂಗ ಸ್ವಾಯತವಾಗಿಹುದು.
ಘ್ರಾಣಾಂಗದಲ್ಲಿ ಆಚಾರಲಿಂಗ ಸ್ವಾಯತವಾಗಿಹುದು ನೋಡಾ.
ಇದಕ್ಕೆ **ವಾತುಲಾಗಮೇ** :
''ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇತು ಪ್ರಸಾದಕಂ ।
ತ್ವಗಂಗೇ ಚರಲಿಂಗಂ ಚ ದೃಗಂಗೇ ಶಿವಲಿಂಗಕಂ ॥
ಜಿಹ್ವಾಂಗೇ ಗುರುಲಿಂಗಂತು ನಾಶಿಕಾಂಗೇ ತಥೈವ ಚ ।
ಆಚಾರಲಿಂಗಮಾಶ್ರಾಂತಂ ಸುಪ್ರತಿಷ್ಠಿತಮೇವ ಹಿ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೬೯ ॥

೫೭೦

ಜ್ಞಾನೇಂದ್ರಿಯವೆಂಬ ಅಂಗಂಗಳಲ್ಲಿ ಲಿಂಗಸ್ವಾಯತವಾಗಿಹುದು.
ಆ ಕ್ರಮದಿಂದವೆ, ಆ ಕರ್ಮೇಂದ್ರಿಯಂಗಳೆಂಬ ಅಂಗಂಗಳಲ್ಲಿಯೂ
ಲಿಂಗಸ್ವಾಯತವಾಗಿಹುದು ನೋಡಾ.
ಇದಕ್ಕೆ **ಶಿವಲಿಂಗಾಗಮೇ** :
''ಯಥಾ ಜ್ಞಾನೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಂ ।
ತಥಾ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಸಂಗಮದೇವಾ. ॥ ೫೭೦ ॥

೫೭೧

ಶ್ರೋತ್ರ ತ್ವಕ್ಕು ಚಕ್ಷು ಜಿಹ್ವೆ ಘ್ರಾಣಂಗಳೆಂಬವೈದು
ಜ್ಞಾನೇಂದ್ರಿಯಂಗಳು.

ವಾಕು ಪಾಣಿ ಪಾದ ಗುಹ್ಯ ಗುದಂಗಳೆಂಬವೈದು ಕರ್ಮೇಂದ್ರಿಯಂಗಳು.
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬವೈದು ವಿಷಯಂಗಳು.
ವಚನ ಆದಾನ ಗಮನ ಆನಂದ ವಿಸರ್ಜನಂಗಳು
ಕರ್ಮೇಂದ್ರಿಯಂಗಳ ವಿಷಯಂಗಳು.
ಶ್ರೋತ್ರೇಂದ್ರಿಯ ವಾಗೀಂದ್ರಿಯಂಗಳಿಗೆ ಭೇದವಿಲ್ಲ,
ಶ್ರವಣೇಂದ್ರಿಯವಿಷಯವಪ್ಪ ಶಬ್ದಕ್ಕೆಯು,
ವಾಗೀಂದ್ರಿಯವಿಷಯವಪ್ಪ ನುಡಿಗೆಯು ಭೇದವಿಲ್ಲ,
ತ್ವಗೀಂದ್ರಿಯ ಪಾಣೇಂದ್ರಿಯಂಗಳೆಂಬ,
ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳೆರಡಕ್ಕೆಯು
ತ್ವಕ್ಪಾಣಿಗಳ ವಿಷಯಂಗಳಪ್ಪ ಸ್ಪರ್ಶನ ಆದಾನ
ಈ ಎರಡು ವಿಷಯಂಗಳಿಗೆಯೂ ಭೇದವಿಲ್ಲ,
ಜ್ಞಾನಕರ್ಮೇಂದ್ರಿಯಂಗಳಪ್ಪ ನೇತ್ರ ಪಾದಂಗಳೆಂಬೆರಡಕ್ಕೆಯು
ನೇತ್ರ ವಿಷಯವಪ್ಪ ರೂಪಕ್ಕೆಯು
ಪಾದೇಂದ್ರಿಯ ವಿಷಯಮಪ್ಪ ಗಮನಕ್ಕೆಯು ಭೇದವಿಲ್ಲ,
ಆ ಜಿಹ್ವೆ ಗುಹ್ಯ ವಿಷಯಂಗಳಪ್ಪ ರಸ ಆನಂದವಪ್ಪವೆಂಬೆರಡು
ವಿಷಯಂಗಳಿಗೆಯೂ ಭೇದವಿಲ್ಲ,
ಘ್ರಾಣೇಂದ್ರಿಯ ಗುದೇಂದ್ರಿಯಂಗಳಿಗೆಯು ಭೇದವಿಲ್ಲ,
ಅವರ ವಿಷಯಂಗಳಪ್ಪ ಗಂಧ ವಿಜರ್ಸನಂಗಳೆಂಬೆರಡು
ವಿಷಯಂಗಳಿಗೆಯು ಭೇದವಿಲ್ಲ,
ಈ ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳಿಗೆ
ಹೃದಯವೇ ಕಾರಣವಾಗಿ ಹೃದಯವಾಕಾಶವೆನಿಸಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಶ್ರೋತ್ರಂ ವಾಚೋರ್ನಭೇದೋಽಸ್ತಿ ಶಬ್ದಸ್ಯ ವಚನಸ್ಯ ಚ ।
ಸ್ಪರ್ಶಭಾಷಣ ಸದ್ಭಾವಾದ್ಭೇದೋ ನ ತು ಕರದ್ವಯೋಃ ॥
ನ ನೇತ್ರಪಾದಯೋರ್ಭೇದಃ ರೂಪಸ್ಯ ಗಮನಸ್ಯ ಚ ।
ರಸಾನಂದಯೋರ್ಭೇದೋ ನ ಜಿಹ್ವಾ ಗುಹ್ಯಯೋಸ್ತಥಾ ॥
ನಾಸಿಕಾ ಗುದಯೋರ್ಭೇದೋ ನಾಸ್ತಿ ಗಂಧವಿಸರ್ಗಯೋಃ ।
ಅಸ್ತಿಭೇದ ಪ್ರಮಾಣಸ್ಯ ಇತಿ ಸತ್ಯಾರ್ಥವರ್ಧಿನಿ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೫೭೦ ॥

೫೭೨

ಆ ಹೃದಯಾಕಾಶದಲ್ಲಿ ಮಹಾಲಿಂಗ ಸ್ವಾಯತವಾಗಿಹುದು.
ವಾಗೀಂದ್ರಿಯಂಗದಲ್ಲಿ ಪ್ರಸಾದಲಿಂಗ ಸ್ವಾಯತವಾಗಿಹುದು.
ಹಸ್ತೇಂದ್ರಿಯಂಗದಲ್ಲಿ ಚರಲಿಂಗ ಸ್ವಾಯತವಾಗಿಹುದು.
ಪಾದೇಂದ್ರಿಯಂಗದಲ್ಲಿ ಶಿವಲಿಂಗ ಸ್ವಾಯತವಾಗಿಹುದು.

ಗುಹ್ಯೇಂದ್ರಿಯಂಗದಲ್ಲಿ ಗುರುಲಿಂಗ ಸ್ವಾಯತವಾಗಿಹುದು.
ಗುದೇಂದ್ರಿಯಂಗದಲ್ಲಿ ಆಚಾರಲಿಂಗ ಸ್ವಾಯತವಾಗಿಹುದು ನೋಡಾ.
ಇದಕ್ಕೆ **ಈಶ್ವರೋऽವಾಚ :**
''ಹೃದಯಾಂಗೇ ಮಹಾಲಿಂಗಂ ವಾಗಂಗೇತು ಪ್ರಸಾದಕಂ ।
ಹಸ್ತಾಂಗೇ ಚರಲಿಂಗಂ ಚ ಪಾದಾಂಗೇ ಶಿವಲಿಂಗಕಂ ॥
ಗುಹ್ಯಾಂಗೇ ಗುರುಲಿಂಗಂತು ಗುದೇ ಆಚಾರಲಿಂಗಕಂ ।
ಇತಿ ಲಿಂಗಸ್ಥಲಂ ಜ್ಞಾನಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೫೭೨ ॥

೫೭೩

ರುಧಿರದಲ್ಲಿ ಆಚಾರಲಿಂಗವಿಹುದು.
ಮಾಂಸದಲ್ಲಿ ಗುರುಲಿಂಗವಿಹುದು.
ಮೇದಸ್ಸಿನಲ್ಲಿ ಶಿವಲಿಂಗವಿಹುದು.
ಅಸ್ಥಿಯಲ್ಲಿ ಚರಲಿಂಗವಿಹುದು.
ಮಜ್ಜೆಯಲ್ಲಿ ಪ್ರಸಾದಲಿಂಗವಿಹುದು.
ಶುಕ್ಲದಲ್ಲಿ ಮಹಾಲಿಂಗವಿಹುದು ನೋಡಾ.
ಇದಕ್ಕೆ **ಈಶ್ವರೋऽವಾಚ :**
''ಆಚಾರಂ ರುಧಿರಾಂಗೇತು ಮಾಂಸಾಂಗೇ ಗುರುಲಿಂಗಕಂ ।
ಮೇಧಾಂಗೇ ಶಿವಲಿಂಗಂ ಚ ಅಸ್ಥ್ಯಂಗೇ ಚರಂ ತಥಾ ॥
ಮಜ್ಜೇ ಪ್ರಸಾದಲಿಂಗಂ ಚ ಶುಕ್ಲಾಂಗೇ ಮಹಾಲಿಂಗಕಂ ।
ಇತಿ ಲಿಂಗಸ್ಥಲಂ ಜ್ಞಾತುಂ ಸುಸೂಕ್ಷ್ಮಂ ಶೃಣು ಪಾರ್ವತೀ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೫೭೩ ॥

೫೭೪

ನಕಾರವೇ ರುಧಿರಮಯವಾಗಿಹುದು.
ಮಕಾರವೇ ಮಾಂಸಮಯವಾಗಿಹುದು.
ಶಿಕಾರವೇ ಮೇದಸ್ಸುಮಯವಾಗಿಹುದು.
ವಕಾರವೇ ಅಸ್ಥಿಮಯವಾಗಿಹುದು.
ಯಕಾರವೇ ಮಜ್ಜೆಮಯವಾಗಿಹುದು.
ಓಂಕಾರವೇ ಶುಕ್ಲಮಯವಾಗಿಹುದು.
ಈ ಷಡಕ್ಷರವೇ ಆಚಾರಾದಿ ಮಹಾಲಿಂಗಂಗಳಾಗಿಹುದು ನೋಡಾ.
ಇದಕ್ಕೆ ದಿವ್ಯಾಗಮೇ :
''ನಕಾರೋ ರುಧಿರೇಸ್ಯಾತ್ತು ಮಕಾರೋ ಮಾಂಸ ಸಂಚಯಃ ।

ಶಿಕಾರೋ ಮೇಧಸೀಸ್ಯಾತ್ತು ವಕಾರಸ್ಥಾತುಮಾಸ್ಥಿಷು ॥
ಯಕಾರಸ್ಥಾತು ಮಜ್ಜಾಯಾಂ ಶುಕ್ಲೇಸ್ಥಾತು ಷಡಾತ್ಮಕಃ ।
ಏವಂ ಷಡಕ್ಷರಮಯಂ ಶಿವವರ್ಮಾಂತು ಸಂಸ್ಥಿತಂ ।
ದೇಹಂ ಮಮೇತಿ ಯೋತ್ ಧ್ಯಾಯೇ ಸೋಽಹಮೇವ ನ ಸಂಶಯಃ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೫೭೪ ॥

೫೭೫

ನಕಾರವೇ ಆಚಾರಲಿಂಗ, ಮಕಾರವೇ ಗುರುಲಿಂಗ,
ಶಿಕಾರವೇ ಶಿವಲಿಂಗ, ವಕಾರವೇ ಚರಲಿಂಗ,
ಯಕಾರವೇ ಪ್ರಸಾದಲಿಂಗ, ಓಂಕಾರವೇ ಮಹಾಲಿಂಗ ನೋಡಾ.
ಇದಕ್ಕೆ **ಈಶ್ವರೋಽವಾಚ** :
''ನಕಾರಮಾಚಾರಲಿಂಗಂ ಮಕಾರಂ ಗುರುಲಿಂಗಕಂ ।
ಶಿಕಾರಂ ಶಿವಲಿಂಗಂ ಚ ವಕಾರಂ ಚರಲಿಂಗಕಂ ॥
ಯಕಾರಂ ಪ್ರಸಾದಂ ಚೈವ ಓಂಕಾರಂ ಚ ಮಹಸ್ತಥಾ ।
ಇತಿ ಷಡಕ್ಷರಂ ದೇವೀ ಷಡ್ಲಿಂಗಂ ಚ ನ ಸಂಶಯಃ ।''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೫೭೫ ॥

ಹೀಂಗೆಂದು ಸದ್ಗುರುಸ್ವಾಮಿ ಸರ್ವಾಂಗಲಿಂಗಸ್ಥಲವ ನಿರೂಪಿಸಲು, ಪರಮ ಹರುಷಿತನಾಗಿ, ಮತ್ತಂ ಆ ಶಿಷ್ಯನು, ಎಲೆ ಸದ್ಗುರುಸ್ವಾಮಿಯೆಯೆಂದು ದೀರ್ಘ ದಂಡ ನಮಸ್ಕಾರವಂ ಮಾಡಿ, ಭಯಭಕ್ತಿಯಿಂದ ಎಲೆ ಸದ್ಗುರು ಸ್ವಾಮಿಯೇ ಎಲ್ಲಾ ಲಿಂಗಮಯವೆಂದು ನಿರೂಪಿಸಿದಿರಿ. ತಾನಾರು? ತನ್ನ ಸ್ವರೂಪು ಸ್ವಭಾವವಾವುದು ? ನಾನು ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮರೆಂಬ ಅಷ್ಟತನುಮೂರ್ತಿಯೊ? ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ತತ್ವವೋ ? ತೊಂಬತ್ತಾರು ತತ್ವ ಮೊದಲಾಗಿ ಚತ್ತೀಸತತ್ವ ಕಡೆಯಾಗಿ ಈ ಎಲ್ಲಾ ತತ್ವಂಗಳು ನಾನಹುದೊ ? ಅಲ್ಲವೊ ? ನಾನರಿಯೆನು. ನಾನಾರೆಂಬುದ ತಿಳುಹಿ ರಕ್ಷಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೫೭೬

ಅನಾದಿ ಸದಾಶಿವತತ್ವ, ಅನಾದಿ ಈಶ್ವರತತ್ವ,
ಅನಾದಿ ಮಹೇಶ್ವರತತ್ವವೆಂಬ, ಅನಾದಿ ತ್ರಿತತ್ವಂಗಳು ತಾನಲ್ಲ,
ಆದಿ ಸದಾಶಿವತತ್ವ, ಆದಿ ಈಶ್ವರತತ್ವ,
ಆದಿ ಮಹೇಶ್ವರತತ್ವವೆಂಬ ಆದಿ ತ್ರಿತತ್ವಂಗಳು ತಾನಲ್ಲ,
ಶಂಕರ ಶಶಿಧರ ಗಂಗಾಧರ ಗೌರೀಶ ಕಳಕಂಠ ರುದ್ರ,

ಕಪಾಲಮಾಲಾಧರ ರುದ್ರ, ಕಾಲಾಗ್ನಿರುದ್ರ,
ಏಕಪಾದರುದ್ರ, ಮಹಾಕಾಲರುದ್ರ, ಮಹಾನಟನಾಪಾದರುದ್ರ,
ಊರ್ಧ್ವಪಾದರುದ್ರ, ಬ್ರಹ್ಮಕಪಾಲ ವಿಷ್ಣುಕಂಕಾಳವ ಪಿಡಿದಾಡುವ
ಪ್ರಳಯಕಾಲರುದ್ರರು, ತ್ರಿಶೂಲ ಖಟ್ವಾಂಗಧರರು
ವೃಷಭವಾಹನರು ಪಂಚಮುಖರುದ್ರರು,
ಶೂನ್ಯಕಾಯನೆಂಬ ಮಹಾರುದ್ರ,
ಅನೇಕಮುಖ ಒಂದುಮುಖವಾಗಿ ವಿಶ್ವರೂಪರುದ್ರ,
ವಿಶ್ವಾಧಿಕಮಹಾರುದ್ರ, ಅಂಬಿಕಾಪತಿ ಉಮಾಪತಿ
ಪಶುಪತಿ ಮೊದಲಾದ ಗಣಾಧೀಶ್ವರರೆಂಬ ಮಹಾಗಣಂಗಳು ತಾನಲ್ಲ.
ಸಹಸ್ರಶಿರ ಸಹಸ್ರಾಕ್ಷ ಸಹಸ್ರಬಾಹು ಸಹಸ್ರಪಾದವನುಳ್ಳ
ವಿರಾಟ್ಪುರುಷನು ತಾನಲ್ಲ.
ವಿಶ್ವತೋಮುಖ ವಿಶ್ವತೋಚಕ್ಷು ತಾನಲ್ಲ.
ವಿಶ್ವತೋಪಾದವನುಳ್ಳ ಮಹಾಪುರುಷ ತಾನಲ್ಲ.
ಪತಿ–ಪಶು–ಪಾಶಂಗಳೆಂಬ
ಸಿದ್ಧಾಂತಜ್ಞಾನತ್ರಯಂಗಳು ತಾನಲ್ಲ.
ತ್ವಂ ಪದ ತತ್‌ಪದ ಅಸಿಪದವೆಂಬ
ವೇದಾಂತಪದತ್ರಯ ಪದಾರ್ಥಂಗಳು ತಾನಲ್ಲ.
ಜೀವಹಂಸ ಪರಮಹಂಸ ಪರಾಪರಹಂಸನೆಂಬ
ಹಂಸತ್ರಯಂಗಳು ತಾನಲ್ಲ.
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಂಬ
ಪಂಚಮೂರ್ತಿಗಳು ತಾನಲ್ಲ.
ಆ ಸದಾಶಿವತತ್ವದಲ್ಲುತ್ಪತ್ಯವಾದ
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯಾತ್ಮರೆಂಬ
ಅಷ್ಟತನುಮೂರ್ತಿಗಳು ತಾನಲ್ಲ.
ಅಸ್ಥಿ ಮಾಂಸ ಚರ್ಮ ನರ ರೋಮ
–ಈ ಐದು ಪೃಥ್ವಿಯಿಂದಾದವು.
ಪಿತ್ಥ ಶ್ಲೇಷ್ಮ ರಕ್ತ ಶುಕ್ಲ ಮೂತ್ರ
–ಈ ಐದು ಅಪ್ಪುವಿನಿಂದಾದವು.
ಕ್ಷುದೆ ತೃಷೆ ನಿದ್ರೆ ಆಲಸ್ಯ ಸಂಗ
–ಈ ಐದು ಅಗ್ನಿಯಿಂದಾದವು.
ಪರಿವ ಪಾರುವ ಸುಳಿವ ಕೂಡುವ ಅಗಲುವ
–ಈ ಐದು ವಾಯುವಿನಿಂದಾದವು.
ವಿರೋಧಿಸುವ ಅಂಜಿಸುವ ನಾಚುವ
ಮೋಹಿಸುವ ಅಹುದಾಗದೆನುವ

–ಈ ಐದು ಆಕಾಶದಿಂದಾದವು.
ಇಂತೀ ಪಂಚಭೌತಿಕದ ಪಂಚವಿಂಶತಿ ಗುಣಂಗಳಿಂದಾದ
ದೇಹವು ತಾನಲ್ಲ.
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬ
ಜ್ಞಾನೇಂದ್ರಿಯಂಗಳು ತಾನಲ್ಲ.
ವಾಕು ಪಾದ ಪಾಣಿ ಪಾಯು ಗುಹ್ಯವೆಂಬ
ಕರ್ಮೇಂದ್ರಿಯಂಗಳು ತಾನಲ್ಲ.
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ
ಪಂಚವಿಷಯಂಗಳು ತಾನಲ್ಲ.
ವಚನ ಗಮನ ದಾನ ವಿಸರ್ಗ ಆನಂದವೆಂಬ
ಕರ್ಮೇಂದ್ರಿಯಂಗಳ ತನ್ಮಾತ್ರೆಗಳು ತಾನಲ್ಲ.
ಇಡೆ ಪಿಂಗಳೆ ಸುಷುಮ್ನಾ ಗಾಂಧಾರೀ ಹಸ್ತಿಜಿಹ್ವಾ ಪೂಷೆ
ಪಯಸ್ವಿನೀ ಅಲಂಬು ಲಕುಹ ಶಂಕಿನೀ–ಎಂಬ ದಶನಾಡಿಗಳು ತಾನಲ್ಲ.
ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ ಕ್ರಕರ
ದೇವದತ್ತ ಧನಂಜಯವೆಂಬ ದಶವಾಯುಗಳು ತಾನಲ್ಲ.
ಸ್ಥೂಲತನು, ಸೂಕ್ಷ್ಮತನು, ಕಾರಣತನು, ನಿರ್ಮಲತನು,
ಆನಂದತನು, ಚಿನ್ಮಯತನು, ಚಿದ್ರೂಪತನು,
ಶುದ್ಧತನುವೆಂಬ ಅಷ್ಟತನುಗಳು ತಾನಲ್ಲ.
ಜೀವಾತ್ಮ ಅಂತರಾತ್ಮ ಪರಮಾತ್ಮ ನಿರ್ಮಲಾತ್ಮ
ಶುದ್ಧಾತ್ಮ ಜ್ಞಾನಾತ್ಮ ಭೂತಾತ್ಮ ಮಹಾತ್ಮವೆಂಬ
ಅಷ್ಟ ಆತ್ಮಂಗಳು ತಾನಲ್ಲ.
ಸಂಸ್ಥಿತ ತೃಣೀಕೃತ ವರ್ತಿನಿ ಕ್ರೋಧಿನಿ ಮೋಹಿನಿ
ಅತಿಚಾರಿಣಿ ಗಂಧಚಾರಿಣಿ ವಾಸಿನಿಯೆಂಬ
ಅಂತರಂಗದ ಅಷ್ಟಮದಂಗಳು ತಾನಲ್ಲ.
ಕುಲ ಛಲ ಧನ ರೂಪ ಯೌವ್ವನ ವಿದ್ಯೆ ರಾಜ್ಯ ತಪವೆಂಬ
ಬಹಿರಂಗ ಅಷ್ಟಮದಂಗಳು ತಾನಲ್ಲ.
ರಸ ರುಧಿರ ಮಾಂಸ ಮೇದಸ್ಸು ಅಸ್ಥಿ ಮಜ್ಜೆ
ಶುಕ್ಲವೆಂಬ ಸಪ್ತಧಾತುಗಳು ತಾನಲ್ಲ.
ತನುವ್ಯಸನ, ಮನವ್ಯಸನ, ಧನವ್ಯಸನ,
ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹವ್ಯಸನ,
ಸೇವಕವ್ಯಸನವೆಂಬ ಸಪ್ತವ್ಯಸನಂಗಳು ತಾನಲ್ಲ.
ಕ್ಷುತ್ ಪಿಪಾಸೆ ಶೋಕ ಮೋಹ ಜನನ ಮರಣವೆಂಬ
ಷಡೂರ್ಮಿಗಳು ತಾನಲ್ಲ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ

ಅರಿಷಡ್ವರ್ಗಂಗಳು ತಾನಲ್ಲ.
ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮಗಳೆಂಬ
ಷಟ್‌ಭ್ರಮೆಗಳು ತಾನಲ್ಲ.
ಆಸ್ತಿ, ಜಾಯತೇ, ಪರಿಣಮತೇ, ವರ್ಧತೇ, ವಿನಶ್ಯತಿ, ಅಪಕ್ಷೀಯತೇ ಎಂಬ
ಷಡ್ಭಾವವಿಕಾರಂಗಳು ತಾನಲ್ಲ.
ಅನ್ನಮಯ ಪ್ರಾಣಮಯ ಮನೋಮಯ
ವಿಜ್ಞಾನಮಯ ಆನಂದಮಯವೆಂಬ ಪಂಚಕೋಶಂಗಳು ತಾನಲ್ಲ.
ಸತ್ವ ರಜ ತಮೋಗುಣತ್ರಯಂಗಳು ತಾನಲ್ಲ.
ಅಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ತಾಪತ್ರಯಂಗಳು ತಾನಲ್ಲ.
ವಿಶ್ವ ತೈಜಸ ಪ್ರಾಜ್ಞವೆಂಬ ಜೀವತ್ರಯಂಗಳು ತಾನಲ್ಲ.
ವಾತ ಪಿತ್ಥ ಕಫಂಗಳೆಂಬ ದೋಷತ್ರಯಂಗಳು ತಾನಲ್ಲ.
ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯಂಗಳು ತಾನಲ್ಲ.
ಸುಖ ದುಃಖ ಪುಣ್ಯ ಪಾಪಂಗಳು ತಾನಲ್ಲ.
ಸಂಚಿತ, ಪ್ರಾರಬ್ಧ, ಆಗಾಮಿಯೆಂಬ ಕರ್ಮತ್ರಯಂಗಳು ತಾನಲ್ಲ.
ಅಗ್ನಿಮಂಡಲ, ಆದಿತ್ಯಮಂಡಲ, ಚಂದ್ರಮಂಡಲವೆಂಬ
ಮಂಡಲತ್ರಯಂಗಳು ತಾನಲ್ಲ.
ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬ
ಷಡುಚಕ್ರಂಗಳ ದಳ ವರ್ಣ ಅಕ್ಷರಂಗಳು ತಾನಲ್ಲ.
ಜಾಗ್ರ ಸ್ವಪ್ನ ಸುಷುಪ್ತಿ ತೂರ್ಯ ತೂರ್ಯಾತೀತಗಳೆಂಬ
ಪಂಚಾವಸ್ಥೆಗಳು ತಾನಲ್ಲ.
ಜಾಗ್ರದಲ್ಲಿಯ ಜಾಗ್ರ, ಜಾಗ್ರದಲ್ಲಿಯ ಸ್ವಪ್ನ, ಜಾಗ್ರದಲ್ಲಿಯ ಸುಷುಪ್ತಿ
ಜಾಗ್ರದಲ್ಲಿಯ ತೂರ್ಯ, ಜಾಗ್ರದಲ್ಲಿಯ ತೂರ್ಯಾತೀತವೆಂಬ
ಜಾಗ್ರಪಂಚಾವಸ್ಥೆಗಳು ತಾನಲ್ಲ.
ಸ್ವಪ್ನದಲ್ಲಿಯ ಜಾಗ್ರ, ಸ್ವಪ್ನದಲ್ಲಿಯ ಸ್ವಪ್ನ, ಸ್ವಪ್ನದಲ್ಲಿಯ ಸುಷುಪ್ತಿ
ಸ್ವಪ್ನದಲ್ಲಿಯ ತೂರ್ಯ, ಸ್ವಪ್ನದಲ್ಲಿಯ ತೂರ್ಯಾತೀತವೆಂಬ
ಸ್ವಪ್ನಪಂಚಾವಸ್ಥೆಗಳು ತಾನಲ್ಲ.
ಸುಷುಪ್ತಿಯಲ್ಲಿಯ ಜಾಗ್ರ, ಸುಷುಪ್ತಿಯಲ್ಲಿಯ ಸ್ವಪ್ನ,
ಸುಷುಪ್ತಿಯಲ್ಲಿಯ ಸುಷುಪ್ತಿ,
ಸುಷುಪ್ತಿಯಲ್ಲಿಯ ತೂರ್ಯ, ಸುಷುಪ್ತಿಯಲ್ಲಿಯ ತೂರ್ಯಾತೀತವೆಂಬ
ಸುಷುಪ್ತಿಯ ಪಂಚಾವಸ್ಥೆಗಳು ತಾನಲ್ಲ.
ತೂರ್ಯದಲ್ಲಿಯ ಜಾಗ್ರ, ತೂರ್ಯದಲ್ಲಿಯ ಸ್ವಪ್ನ, ತೂರ್ಯದಲ್ಲಿಯ ಸುಷುಪ್ತಿ
ತೂರ್ಯದಲ್ಲಿಯ ತೂರ್ಯ, ತೂರ್ಯದಲ್ಲಿಯ ತೂರ್ಯಾತೀತವೆಂಬ
ತೂರ್ಯಪಂಚಾವಸ್ಥೆಗಳು ತಾನಲ್ಲ.
ತೂರ್ಯಾತೀತದಲ್ಲಿಯ ಜಾಗ್ರ, ತೂರ್ಯಾತೀತದಲ್ಲಿಯ ಸ್ವಪ್ನ,

ತೂರ್ಯಾತೀತದಲ್ಲಿಯ ಸುಷುಪ್ತಿ, ತೂರ್ಯಾತೀತದಲ್ಲಿಯ ತೂರ್ಯ,
ತೂರ್ಯಾತೀತದಲ್ಲಿಯ ತೂರ್ಯಾತೀತವೆಂಬ
ತೂರ್ಯಾತೀತಪಂಚಾವಸ್ಥೆಗಳು ತಾನಲ್ಲ.
ಸಕಲ–ಶುದ್ಧ–ಕೇವಲಾವಸ್ಥೆಗಳು ತಾನಲ್ಲ.
ಸಕಲದಲ್ಲಿಯ ಸಕಲ, ಸಕಲದಲ್ಲಿಯ ಶುದ್ಧ, ಸಕಲದಲ್ಲಿಯ ಕೇವಲವೆಂಬ
ಸಕಲತ್ರಿಯಾವಸ್ಥೆಗಳು ತಾನಲ್ಲ.
ಶುದ್ಧದಲ್ಲಿಯ ಸಕಲ, ಶುದ್ಧದಲ್ಲಿಯ ಶುದ್ಧ, ಶುದ್ಧದಲ್ಲಿಯ ಕೇವಲವೆಂಬ
ಶುದ್ಧತ್ರಿಯಾವಸ್ಥೆಗಳು ತಾನಲ್ಲ.
ಕೇವಲದಲ್ಲಿಯ ಸಕಲ, ಕೇವಲದಲ್ಲಿಯ ಶುದ್ಧ,
ಕೇವಲದಲ್ಲಿಯ ಕೇವಲವೆಂಬ
ಕೇವಲತ್ರಿಯಾವಸ್ಥೆಗಳು ತಾನಲ್ಲ.
ಜ್ಞಾತೃ ಜ್ಞಾನ ಜ್ಞೇಯವೆಂಬ ಜ್ಞಾನತ್ರಯಂಗಳು ತಾನಲ್ಲ.
ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ
ಧ್ಯಾನ ಧಾರಣ ಸಮಾಧಿಯೆಂಬ ಅಷ್ಟಾಂಗಯೋಗಂಗಳು ತಾನಲ್ಲ.
ಧರ್ಮ ಅರ್ಥ ಕಾಮ ಮೋಕ್ಷಂಗಳೆಂಬ
ಚತುರ್ವಿಧ ಪುರುಷಾರ್ಥಂಗಳು ತಾನಲ್ಲ.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ
ಚತುರ್ವಿಧಪದಂಗಳು ತಾನಲ್ಲ.
ಅಣಿಮಾ ಗರಿಮಾ ಲಘಿಮಾ ಮಹಿಮಾ ಪ್ರಾಪ್ತಿ ಪ್ರಕಾವ್ಯ ಇಶಿತ್ವ ವಶಿತ್ವ
ಎಂಬ ಅಷ್ಟಮಹದೈಶ್ವರ್ಯಂಗಳು ತಾನಲ್ಲ.
ರಾಜಸಹಂಕಾರ ತಾಮಸಹಂಕಾರ ಸ್ವಹಂಕಾರವೆಂಬ
ಅಹಂಕಾರತ್ರಯಂಗಳು ತಾನಲ್ಲ.
ಅಂಜನಾಸಿದ್ಧಿ, ಘುಟಿಕಾಸಿದ್ಧಿ, ರಸಸಿದ್ಧಿ, ಪಾದೋದಕಸಿದ್ಧಿ,
ಪರಕಾಯ ಪ್ರವೇಶ, ದೂರಶ್ರವಣ, ದೂರದೃಷ್ಟಿ,
ತ್ರಿಕಾಲಜ್ಞಾನವೆಂಬ ಅಷ್ಟಮಹಾಸಿದ್ಧಿಗಳು ತಾನಲ್ಲ.
ಉದರಾಗ್ನಿ ಮಂದಾಗ್ನಿ ಶೋಕಾಗ್ನಿ ಕ್ರೋಧಾಗ್ನಿ
ಕಾಮಾಗ್ನಿಯೆಂಬ ಪಂಚಾಗ್ನಿಗಳು ತಾನಲ್ಲ.
ಪ್ರಕೃತಿ, ಪುರುಷ, ಕಾಲ, ಪರ, ವ್ಯೋಮಾಕಾಶಂಗಳು ತಾನಲ್ಲ.
ಊರ್ಧ್ವಶೂನ್ಯ, ಅಧಃಶೂನ್ಯ, ಮಧ್ಯಶೂನ್ಯ, ಸರ್ವಶೂನ್ಯವಾಗಿಹ
ಸಹಜನಿರಾಲಂಬವೇ ತಾನೆಂದರಿದ ಮಹಾಶರಣಂಗೆ
ನಾಮ ರೂಪ ಕ್ರಿಯಾತೀತವಾಗಿಹ ಮಹಾಘನವೇ ತನ್ನ ಶಿರಸ್ಸು ನೋಡಾ.
ದಿವ್ಯಜ್ಞಾನವೇ ತನ್ನ ಚಕ್ಷು, ಅಚಲಪದವೇ ತನ್ನ ಪುರ್ಬು,
ಅಚಲಾತೀತವೇ ತನ್ನ ಹಣೆ ನೋಡಾ.
ನಿರಾಕುಳಪದವೇ ತನ್ನ ನಾಸಿಕ,

ನಿರಂಜನಾತೀತವೆ ತನ್ನ ಉಶ್ವಾಸ–ನಿಶ್ವಾಸ ನೋಡಾ.
ನಿರಾಮಯವೇ ತನ್ನ ಕರ್ಣ, ನಿರಾಮಯಾತೀತವೇ
ತನ್ನ ಕರ್ಣದ್ವಾರ ನೋಡಾ.
ಅಮಲ ನಿರ್ಮಲವೇ ತನ್ನ ಗಲ್ಲ,
ಅಮಲಾತೀತವೇ ತನ್ನ ಗಡ್ಡಮೀಸೆ ಕೋರೆದಾಡೆ ನೋಡಾ.
ನಾದಬಿಂದುಕಳಾತೀತವೆ ತನ್ನ ತಾಳೋಷ್ಠಸಂಪುಟ ನೋಡಾ.
ಅಕಾರ, ಉಕಾರ, ಮಕಾರ, ನಾದ ಬಿಂದು
ಅರ್ಧಚಂದ್ರ ನಿರೋದಿನಾದಾಂತ ಶಕ್ತಿವ್ಯಾಪಿನಿ
ವ್ಯೋಮರೂಪಿಣಿ ಅನಂತ ಆನಂದ ಅನಾಶ್ರಿತ ಸುಮನೆ ಉನ್ಮನಿ
ಇಂತೀ ಪ್ರಣವದಲ್ಲಿ ಉತ್ಪತ್ಯವಾದ ಷೋಡಶಕಳೆ
ತನ್ನ ಷೋಡಶ ದಂತಂಗಳು ನೋಡಾ.
ಆ ದಂತಂಗಳ ಕಾಂತಿ ಅನೇಕಕೋಟಿ ಸಿಡಿಲೊಡೆದ
ಬಯಲಪ್ರಕಾಶವಾಗಿಹುದು ನೋಡಾ.
ತನ್ನ ಕೊರಳೆ ನಿರಾಕುಳ, ತನ್ನ ಭುಜಂಗಳೆ
ಅಪ್ರಮಾಣ ಅಗೋಚರ ನೋಡಾ.
ತನ್ನ ಹಸ್ತಾಂಗುಲಿ ನಖಂಗಳೆ ಪರತತ್ವ, ಶಿವತತ್ವ, ಗುರುತತ್ವ,
ಲಿಂಗತತ್ವಂಗಳು ನೋಡಾ.
ಪರಬ್ರಹ್ಮವೇ ತನ್ನ ಎದೆ, ಆ ಪರಬ್ರಹ್ಮವೆಂಬ ಎದೆಯಲ್ಲಿ ನಿರಂಜನಪ್ರಣವ
ಅವಾಚ್ಯಪ್ರಣವವೆಂಬ ಸಣ್ಣಕುಚಂಗಳು ನೋಡಾ.
ಚಿತ್ತಾಕಾಶ ಭೇದಾಕಾಶವೆ ತನ್ನ ದಕ್ಷಿಣ ವಾಮ ಪಾರ್ಶ್ವಂಗಳು ನೋಡಾ.
ಬಿಂದ್ವಾಕಾಶವೇ ತನ್ನ ಬೆನ್ನು ನೋಡಾ.
ಮಹಾಕಾಶವೇ ತನ್ನ ಬೆನ್ನ ನಿಟ್ಟೆಲವು ನೋಡಾ.
ಪಂಚಸಂಜ್ಞೆಯುಸುಳ್ಳ ಅಖಂಡಗೋಳಕಾಕಾರಲಿಂಗವೆ ತನ್ನ ಗರ್ಭ ನೋಡಾ.
ಆ ಗರ್ಭ ಅನೇಕಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹುದುನೋಡಾ.
ಆ ಗರ್ಭದಲ್ಲಿ ಅನೇಕಕೋಟಿತತ್ವಂಗಳು, ಅನೇಕಕೋಟಿ ಸದಾಶಿವರು,
ಅನೇಕಕೋಟಿ ಮಹೇಶ್ವರರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಸದಾಶಿವರು, ಅನೇಕಕೋಟಿರುದ್ರರು,
ಅನೇಕಕೋಟಿ ವಿಷ್ಣ್ವಾದಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಬ್ರಹ್ಮರು, ಅನೇಕಕೋಟಿ ಋಷಿಗಳು
ಅನೇಕಕೋಟಿ ಚಂದ್ರಾದಿತ್ಯರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಇಂದ್ರರು, ಅನೇಕಕೋಟಿ ದೇವರ್ಕಗಳು,
ಅನೇಕಕೋಟಿ ಬ್ರಹ್ಮಾಂಡಗಳಡಗಿಹವು ನೋಡಾ.
ತನ್ನ ನಡುವೆ ವ್ಯೋಮಾತೀತವು, ತನ್ನ ಕಟಿಸ್ಥಾನವೇ ಕಲಾಪ್ರಣವ,
ತನ್ನ ಪಚ್ಚಳವೆ ಅನಾದಿಪ್ರಣವ ಆದಿಪ್ರಣವ ನೋಡಾ.

ತನ್ನ ಉಪಸ್ಥವೇ ಬ್ರಹ್ಮ ವಿಷ್ಣು ರುದ್ರ, ಈಶ್ವರ, ಸದಾಶಿವ
ಮೊದಲಾದ ಸಮಸ್ತದೇವರ್ಕಗಳಿಗೂ
ಜನನಸ್ಥಳವಾಗಿಹ ನಿರ್ವಾಣಪದ ನೋಡಾ.
ಶಿವಸಂಬಂಧ, ಶಕ್ತಿಸಂಬಂಧವಾಗಿಹ ಓಂಕಾರವೆ ತನ್ನ ಒಳದೊಡೆ ನೋಡಾ.
ಸಚ್ಚಿದಾನಂದ ಪರಮಾನಂದವೆ ತನ್ನ ಒಳಪಾದ ಕಂಬಗಳು ನೋಡಾ.
ಚಿದಾತ್ಮ ಪರಮಾತ್ಮನೆ ತನ್ನ ಹರಡು, ಅತಿಸೂಕ್ಷ್ಮ ಪಂಚಾಕ್ಷರವೆ
ತನ್ನ ಪಾದಾಂಗುಷ್ಠಾಂಗುಲಿಗಳೆಂಬ ಸಾಯುಜ್ಯಪದ ನೋಡಾ.
ತನ್ನ ಸ್ವರವೆ ಪರಾಪರ, ತನ್ನ ಮಾತೇ ಮಹಾಜ್ಯೋತಿರ್ಮಯಲಿಂಗ,
ಚಿನ್ಮಯ ಚಿದ್ರೂಪ ಚಿತ್ಪ್ರಕಾಶವೆ ತನ್ನ ವಪೆ ನೋಡಾ.
ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ, ಆಚಾರಲಿಂಗ, ಗುರುಲಿಂಗ,
ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಮೊದಲಾಗಿ
ಇನ್ನೂರ ಹದಿನಾರು ಷಡುಸ್ಥಲಲಿಂಗವೆ
ತನ್ನಂತಃಸ್ಥಾನದಲ್ಲಿ ಧರಿಸಿಹ ಆಭೂಷಣಂಗಳು ನೋಡಾ.
ಮಹಾಲಿಂಗವೇ ತುರುಬು, ಶಿವಜ್ಞಾನವೆ ಶೃಂಗಾರವಾಗಿಹ
ತನ್ನ ತಾನರಿದು ಅಂತಃಶೂನ್ಯ, ಅಧಃಶೂನ್ಯ, ಬಹಿಃಶೂನ್ಯ,
ದಶದಿಶಾಶೂನ್ಯ ನಿರಾಕಾರವಾಗಿಹ
ತನ್ನ ಅಂಗ ಪ್ರತ್ಯಂಗ ಸ್ವರೂಪ ಸ್ವಭಾವಂಗಳ ತಿಳಿದು ಮಹಾಶರಣನು ತಾನೆ
ಗುರು, ತಾನೆ ಲಿಂಗ, ತಾನೆ ಜಂಗಮ,
ತಾನೆ ಪರಮಪಾದೋದಕಪ್ರಸಾದ ನೋಡಾ.
ತಾನೆ ನಾದಬಿಂದುಕಳಾತೀತ ನೋಡಾ.
ತಾನೆ ಶೂನ್ಯ ನಿಶ್ಶೂನ್ಯನು, ತಾನೆ ಘನಶೂನ್ಯ, ಮಹಾಘನಶೂನ್ಯ ನೋಡಾ.
ತಾನೆ ಬಯಲು ನಿರ್ಬಯಲು, ತಾನೆ ನಿರುಪಮ ನಿರಾಕಾರ
ತಾನೆ ನಿರಾಳ ನಿರಾಲಂಬ ನೋಡಾ.
ತಾನೆ ಸಚ್ಚಿದಾನಂದ ನಿತ್ಯಪರಿಪೂರ್ಣನು,
ತನ್ನಿಂದಧಿಕವಪ್ಪ ಪರಬ್ರಹ್ಮವೊಂದಿಲ್ಲವಾಗಿ
ತಾನೆ ಸ್ವಯಂಜ್ಯೋತಿರ್ಲಿಂಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೭೬ ||

೫೭೭

ತಾನೆ ಭಕ್ತ ತಾನೆ ಮಾಹೇಶ್ವರನು
ತಾನೆ ಪ್ರಸಾದಿ ತಾನೆ ಪ್ರಾಣಲಿಂಗಿ ತಾನೆ ಶರಣ ತಾನೆ ಐಕ್ಯ ನೋಡಾ.
ತನ್ನಿಂದಧಿಕವಪ್ಪ ಘನವಿಲ್ಲವಾಗಿ ತಾನೆ ಷಟ್ಸ್ಥಲಬ್ರಹ್ಮ
ತಾನೆ ನಾದಬಿಂದುಕಲಾತೀತವಹ ಮಹಾಘನಲಿಂಗೈಕ್ಯ.
ತಾನಲ್ಲದೆ ಮತ್ತಾರುಂಟು ಹೇಳಾ
ಅಪ್ರಮಾಣಕೂಡಲಸಂಗಮದೇವಾ. || ೫೭೭ ||

೫೭೮

ತಾನೆ ಇಷ್ಟಲಿಂಗ ತಾನೆ ಪ್ರಾಣಲಿಂಗ ತಾನೆ ಭಾವಲಿಂಗ ನೋಡಾ.
ತಾನೆ ಆಚಾರಲಿಂಗ ತಾನೆ ಗುರುಲಿಂಗ ತಾನೆ ಶಿವಲಿಂಗ ನೋಡಾ.
ತಾನೆ ಜಂಗಮಲಿಂಗ ತಾನೆ ಪ್ರಸಾದಲಿಂಗ ತಾನೆ ಮಹಾಲಿಂಗ ನೋಡಾ.
ತನ್ನಿಂದಧಿಕವಪ್ಪ ಲಿಂಗವಿಲ್ಲವಾಗಿ ತಾನೆ ಸ್ವಯಲಿಂಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೭೮ ॥

೫೭೯

ತಾನೆ ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ
ಆರು ಸ್ಥಲವ ಮೀರಿದ ಅಖಂಡನಿರ್ವಯಲು ನೋಡಾ.
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ ಮೊದಲಾಗಿ
ಆಚಾರಾದಿ ಮಹಾಲಿಂಗ ಕಡೆಯಾಗಿ ನವನಾದಬ್ರಹ್ಮಲಿಂಗವ ಮೀರಿದ
ಮಹಾಘನಲಿಂಗೈಕ್ಯ ತಾನಲ್ಲದೆ ಮತ್ತಾರುಂಟು ಹೇಳಾ
ಅಪ್ರಮಾಣಕೂಡಲಸಂಗಮದೇವಾ. ॥ ೫೭೯ ॥

೫೮೦

ತನ್ನಲ್ಲಿ ಅನಂತಕೋಟಿ ಬ್ರಹ್ಮರುತ್ಪತ್ಯ ಸ್ಥಿತಿ ಲಯ ನೋಡಾ.
ತನ್ನಲ್ಲಿ ಅನಂತಕೋಟಿ ವಿಷ್ಣ್ವಾದಿಗಳುತ್ಪತ್ಯ ಸ್ಥಿತಿ ಲಯ ನೋಡಾ.
ತನ್ನಲ್ಲಿ ಅನಂತಕೋಟಿ ಇಂದ್ರಾದಿಗಳುತ್ಪತ್ಯ ಸ್ಥಿತಿ ಲಯ ನೋಡಾ.
ತನ್ನಲ್ಲಿ ಅನಂತಕೋಟಿ ದೇವರ್ಕಳುತ್ಪತ್ಯ ಸ್ಥಿತಿ ಲಯ ನೋಡಾ.
ತಾನೆ ಅಖಂಡ ಅಪ್ರಮೇಯ ಅಗಮ್ಯ ಅಗೋಚರಕ್ಕತತ್ತಲಾದ
ಮಹಾಘನಲಿಂಗ ನೋಡಾ, ಅಪ್ರಮಾಣಕೂಡಲಸಂಗಮದೇವಾ. ॥ ೫೮೦ ॥

೫೮೧

ತಾನೆ ಗುರುತತ್ವ, ತಾನೆ ಶಿವತತ್ವ, ತಾನೆ ಪರತತ್ವ
ತಾನಲ್ಲದೆ ಬೇರೆ ಪರಬ್ರಹ್ಮವುಂಟೆಂಬ
ಭ್ರಾಂತುಭ್ರಮಿತರ ನಾನೇನೆಂಬೆನಯ್ಯಾ,
ಅಪ್ರಮಾಣಕೂಡಲಸಂಗಮದೇವಾ. ॥ ೫೮೧ ॥

೫೮೨

ಆದಿ ಅನಾದಿಯಿಲ್ಲದಂದು ತಾನೆ ಪ್ರಣವಸ್ವರೂಪನು.
ಅನಂತ ಬ್ರಹ್ಮಾಂಡವಿಲ್ಲದಂದು ತಾನೆ ನಾದಬಿಂದುಕಲಾತೀತನು.
ಜೀವಪರಮರಿಲ್ಲದಂದು ತಾನೆ ನಾಮ ಸ್ವರೂಪ ಕ್ರಿಯಾತೀತನು.
ಸಚರಾಚರಂಗಳೆಲ್ಲಾ ರಚನೆಗೆ ಬಾರದಂದು ತಾನೆ ಅಖಂಡಪರಿಪೂರ್ಣ
ಅಪ್ರಮೇಯ ಅಗೋಚರ ಅಪ್ರಮಾಣ ಅನಂತ ತೇಜೋಮಯವಾಗಿಹ
ಮಹಾಘನಲಿಂಗ ನೋಡಾ, ಅಪ್ರಮಾಣಕೂಡಲಸಂಗಮದೇವಾ. ॥ ೫೮೨॥

೫೮೩

ಬ್ರಹ್ಮಲೋಕ ತಾನಿರ್ದಲ್ಲಿ,
ವಿಷ್ಣುಲೋಕ ತಾನಿರ್ದಲ್ಲಿ, ಜ್ಯೋತಿರ್ಮಯಲೋಕ ತಾನಿರ್ದಲ್ಲಿ,
ರುದ್ರಲೋಕ ತಾನಿರ್ದಲ್ಲಿ, ಕೈಲಾಸ ತಾನಿರ್ದಲ್ಲಿ,
ಸಚರಾಚರಂಗಳೆಲ್ಲಾ ತಾನಿರ್ದಲ್ಲಿ, ತನ್ನಿಂದಧಿಕವಪ್ಪ ದೈವವಿಲ್ಲವಾಗಿ,
ಇವೆಲ್ಲಾ ತನ್ನಾಧೀನವಲ್ಲದೆ ಅವರಾಧೀನ ತಾನಲ್ಲ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೫೮೩ ||

೫೮೪

ಅಂಗಾಲಕಣ್ಣವರು ಮೈಯಲ್ಲಾ ಕಣ್ಣವರು ತಾನಿರ್ದಲ್ಲಿ,
ಗಂಗಾಧರ ಗೌರೀಶ್ವರರು ತಾನಿರ್ದಲ್ಲಿ,
ಶಂಕರ ಶಶಿಧರ ನಂದಿವಾಹನರು ತಾನಿರ್ದಲ್ಲಿ,
ತ್ರಿಶೂಲ ಖಟ್ವಾಂಗಧರರು ತಾನಿರ್ದಲ್ಲಿ,
ತನ್ನಿಂದಧಿಕರೊಬ್ಬರಿಲ್ಲವಾಗಿ ತಾನೆ ಸ್ವಯಂಭು ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೫೮೪ ||

೫೮೫

ಬ್ರಹ್ಮವಿಷ್ಣ್ವಾದಿಗಳು ತಾನಿರ್ದಲ್ಲಿ, ರುದ್ರ ಈಶ್ವರರು ತಾನಿರ್ದಲ್ಲಿ,
ಪಂಚಮುಖ ದಶಭುಜವನುಳ್ಳ ಸದಾಶಿವ ತಾನಿರ್ದಲ್ಲಿ,
ಸಹಸ್ರಶಿರ ಸಹಸ್ರಾಕ್ಷ ಸಹಸ್ರಬಾಹು ತಾನಿರ್ದಲ್ಲಿ,
ಸಹಸ್ರಪಾದವನುಳ್ಳ ಪರಮಪುರುಷರು ತಾನಿರ್ದಲ್ಲಿ,
ವಿಶ್ವತೋಮುಖ ವಿಶ್ವತೋಚಕ್ಷು ವಿಶ್ವತೋಬಾಹು
ವಿಶ್ವತೋ ಪಾದವನುಳ್ಳ ಮಹಾಪುರುಷರು ತಾನಿರ್ದಲ್ಲಿ,
ನಾಲ್ವತ್ತೆಂಟುಸಾವಿರ ಮುನಿಗಳು ತಾನಿರ್ದಲ್ಲಿ,
ಮೂವತ್ತುಮೂರು ಕೋಟಿ ದೇವರ್ಕಳು ತಾನಿರ್ದಲ್ಲಿ,
ತಾನೆ ಅಖಂಡ ಪರಿಪೂರ್ಣವಾಗಿಹ ಘನವಲ್ಲದೆ
ತನ್ನಿಂದಧಿಕವಪ್ಪವರಾರು ಇಲ್ಲ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೫೮೫ ||

೫೮೬

ಪೃಥ್ವಿ ಅಪ್ಪು ತೇಜ ವಾಯುವಾಕಾಶ ಚಂದ್ರ ಸೂರ್ಯ ಆತ್ಮರೆಂಬೀ
ಅಷ್ಟತನುಮೂರ್ತಿಗಳು ತಾನಿರ್ದಲ್ಲಿ,
ಹಿಮ, ಮಲಯ, ಶಕ್ತಿ, ವಿಂಧ್ಯ, ಮಹೇಂದ್ರ, ರುಕ್ಷವಂತ, ಸಹ್ಯವೆಂಬ
ಸಪ್ತಕುಲಪರ್ವತಂಗಳು ತಾನಿರ್ದಲ್ಲಿ,
ಲವಣ ಇಕ್ಷು ಸುರೆ ಅಮೃತ ದಧಿ ಕ್ಷೀರ ಶುದ್ಧಜಲವೆಂಬ

ಸಪ್ತಸಮುದ್ರಂಗಳು ತಾನಿರ್ದಲ್ಲಿ,
ಜಂಬುದ್ವೀಪ ಪ್ಲಕ್ಷದೀಪ ಕುಶದ್ವೀಪ ಶಾಕದ್ವೀಪ ಶಾಲ್ಮಲೀದ್ವೀಪ
ಪುಷ್ಕರದ್ವೀಪ ಕ್ರೌಂಚದ್ವೀಪವೆಂಬ ಸಪ್ತದ್ವೀಪಂಗಳು ತಾನಿರ್ದಲ್ಲಿ,
ಸಮಸ್ತಗ್ರಹರಾಶಿ ತಾರಾಪಥಂಗಳೆಲ್ಲ ತಾನಿರ್ದಲ್ಲಿ,
ಪಿಂಡ ಬ್ರಹ್ಮಾಂಡಂಗಳು ತನ್ನಲ್ಲಿಯೆ ಉತ್ಪತ್ತಿ ಸ್ಥಿತಿ ಲಯವಲ್ಲದೆ
ಮತ್ತಾರುಂಟು ಹೇಳಾ ಅಪ್ರಮಾಣಕೂಡಲಸಂಗಮದೇವಾ ? ॥ ೫೮೬ ॥

೫೮೭

ಅತಳಲೋಕ ಸುತಳಲೋಕ ತಾನಿರ್ದಲ್ಲಿ,
ವಿತಳಲೋಕ ತಳಾತಳಲೋಕ ತಾನಿರ್ದಲ್ಲಿ,
ರಸಾತಳಲೋಕ ಸ್ವಸ್ಥಲಲೋಕ ತಾನಿರ್ದಲ್ಲಿ,
ಪಾತಾಳಲೋಕ ತಾನಿರ್ದಲ್ಲಿ, ಭೂಲೋಕ ಭುವರ್ಲೋಕ ತಾನಿರ್ದಲ್ಲಿ,
ಮಹರ್ಲೋಕ ಸ್ವರ್ಲೋಕ ತಾನಿರ್ದಲ್ಲಿ,
ಜನರ್ಲೋಕ ತಪರ್ಲೋಕ ತಾನಿರ್ದಲ್ಲಿ, ಸತ್ಯರ್ಲೋಕ ತಾನಿರ್ದಲ್ಲಿ,
ಇಹಲೋಕ ಪರಲೋಕ ಕಾಳಾಂಧರಲೋಕ ತಾನಿರ್ದಲ್ಲಿ,
ಇಂತೀ ಲೋಕಾದಿಲೋಕಂಗಳೆಲ್ಲಾ ತನ್ನಲ್ಲಿ
ಉತ್ಪತ್ಯ ಸ್ಥಿತಿ ಲಯವಾದಕಾರಣ ತಾನೇ ಪರಂಜ್ಯೋತಿಲಿಂಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೮೭ ॥

೫೮೮

ಋಗ್ವೇದ ಯಜುರ್ವೇದ ತಾನಿರ್ದಲ್ಲಿ,
ಸಾಮದೇವ ಅಥರ್ವಣವೇದ ತಾನಿರ್ದಲ್ಲಿ,
ಉದಾತ್ತ ಅನುದಾತ್ತ ಸ್ವರಿತ ಪ್ರಚರವೆಂಬ ಸ್ವರಂಗಳು ಮೊದಲಾಗಿ,
ಅನಂತ ವೇದಸ್ವರಂಗಳೆಲ್ಲ ತಾನಿರ್ದಲ್ಲಿ,
ಅಜಪೆ ಗಾಯತ್ರಿ ತಾನಿರ್ದಲ್ಲಿ,
ಛಂದಸ್ಸು ನಿಘಂಟು ಶಾಸ್ತ್ರಂಗಳೆಲ್ಲ ತಾನಿರ್ದಲ್ಲಿ,
ಅಷ್ಟಾದಶಪುರಾಣಂಗಳು ತಾನಿರ್ದಲ್ಲಿ,
ಅಷ್ಟವಿಂಶತಿ ದಿವ್ಯಾಗಮಂಗಳು ತಾನಿರ್ದಲ್ಲಿ,
ಅನಂತಕೋಟಿ ವೇದಂಗಳು ತಾನಿರ್ದಲ್ಲಿ,
ಇವೆಲ್ಲ ತನ್ನಲ್ಲಿ ಉತ್ಪತ್ತಿ ಸ್ಥಿತಿ ಲಯವಲ್ಲದೆ ಮತ್ತಾರುಂಟು ಹೇಳಾ ?
ತನ್ನಿಂದಧಿಕವಪ್ಪ ಪರಬ್ರಹ್ಮವಿಲ್ಲವಾಗಿ
ತಾನೇ ಸಹಜ ನಿರಾಲಂಬವಾಗಿಹ ಸ್ವಯಂಭುಲಿಂಗ ನೋಡಾ
ಅನಂತ ಅಪ್ರಮಾಣಕೂಡಲಸಂಗಮದೇವಾ. ॥ ೫೮೮ ॥

೫೭೯

ಸಪ್ತಕೋಟಿ ಮಹಾಮಂತ್ರಂಗಳು ತಾನಿರ್ದಲ್ಲಿ
ತೊಂಬತ್ತುನಾಲ್ಕು ವ್ಯೋಮವ್ಯಾಪಿಪದಂಗಳು ತಾನಿರ್ದಲ್ಲಿ
ಅಕಾರಾದಿ ಕ್ಷಕಾರಾಂತವಾದ ಐವತ್ತೆರಡು ಅಕ್ಷರಂಗಳು ತಾನಿರ್ದಲ್ಲಿ
ಇನ್ನೂರ ಇಪ್ಪತ್ತುನಾಲ್ಕು ಭುವನಂಗಳು ತಾನಿರ್ದಲ್ಲಿ
ಮೂವತ್ತಾರು ತತ್ವಂಗಳು ತಾನಿರ್ದಲ್ಲಿ
ಷಟ್ಕಲೆ ದ್ವಾದಶಕಲೆ ಷೋಡಶಕಲೆಗಳು ತಾನಿರ್ದಲ್ಲಿ
ಅರುವತ್ತುನಾಲ್ಕು ಕಲೆಯ ಜ್ಞಾನಂಗಳು ತಾನಿರ್ದಲ್ಲಿ
ಇವೆಲ್ಲವು ತನ್ನಲ್ಲಿ ಉತ್ಪತ್ತಿ ಸ್ಥಿತಿ ಲಯವಾದ ಕಾರಣ
ತನ್ನಿಂದಧಿಕವಪ್ಪ ಘನವೊಂದಿಲ್ಲವಾಗಿ, ತಾನೆ ಪರಬ್ರಹ್ಮ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೭೯ ||

೫೮೦

ಮರ್ತ್ಯಲೋಕದ ಮಹಾಗಣಂಗಳೆಲ್ಲ ತಾನಿರ್ದಲ್ಲಿ
ನಾಗಲೋಕದ ನಾಗಗಣಂಗಳೆಲ್ಲ ತಾನಿರ್ದಲ್ಲಿ
ದೇವಲೋಕದ ದೇವಗಣಂಗಳೆಲ್ಲ ತಾನಿರ್ದಲ್ಲಿ
ರುದ್ರಲೋಕದ ರುದ್ರಗಣಂಗಳೆಲ್ಲ ತಾನಿರ್ದಲ್ಲಿ
ಭೃಂಗಿ ವೀರೇಶ್ವರ ನಂದಿ ಮಹಾಕಾಳರೆಂಬ ಮಹಾಗಣಂಗಳೆಲ್ಲ ತಾನಿರ್ದಲ್ಲಿ
ತನ್ನಿಂದಧಿಕವಪ್ಪ ಪರತತ್ವವಿಲ್ಲವಾಗಿ ತಾನೆ ಸ್ವಯಂಭು ನಿರಾಳ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೮೦ ||

೫೮೧

'ಏಕೋ ರುದ್ರಮಹೇಶ್ವರಾ' ಎಂಬ ಮಹೇಶ್ವರತತ್ವ ತಾನಿರ್ದಲ್ಲಿ
ವಿಶ್ವರೂಪರುದ್ರ ವಿಶ್ವಾಧಿಕಮಹಾರುದ್ರರು ತಾನಿರ್ದಲ್ಲಿ
ಕೋಟಿ ಶತಕೋಟಿ ಸಾವಿರಜಡೆಮುಡಿ ಗಂಗೆ ಗೌರಿಯರು ತಾನಿರ್ದಲ್ಲಿ
ಕೋಟ್ಯಾನುಕೋಟಿ ಕಾಲರುದ್ರರು ತಾನಿರ್ದಲ್ಲಿ
ಅಸಂಖ್ಯಾತ ಪ್ರಳಯಕಾಲರುದ್ರರು ತಾನಿರ್ದಲ್ಲಿ
ಶತಕೋಟಿ ಸಾವಿರ ಬ್ರಹ್ಮಕಪಾಲ ವಿಷ್ಣುಕಂಕಾಳ
ದಂಡವ ಧರಿಸಿದ ಕಾಲಭೈರವರು ತಾನಿರ್ದಲ್ಲಿ
ತನ್ನಿಂದಧಿಕವಾದ ವಸ್ತುವೊಂದಿಲ್ಲವಾಗಿ
ತಾನೆ ಸಚ್ಚಿದಾನಂದ ನಿತ್ಯಪರಿಪೂರ್ಣವಾಗಿಹ ಪರಶಿವತತ್ವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೮೧ ||

೫೮೨

ಅನಂತಕೋಟಿ ಇಂದ್ರಾದಿಗಳೆಲ್ಲ ಇಂದ್ರಸಂಸಾರಕ್ಕೊಳಗಾಗಿ
ತನ್ನ ತಾನರಿಯದೆ ತಾನಾರೆಂದು ತಿಳಿಯದೆ

ಭವರೋಗಂಗಳಿಗೊಳಗಾಗಿ ಕೆಟ್ಟರು ನೋಡಾ.
ಅನಂತಕೋಟಿ ಬ್ರಹ್ಮಾದಿಗಳೆಲ್ಲ ಬ್ರಹ್ಮಸಂಸಾರಕ್ಕೊಳಗಾಗಿ
ತನ್ನ ತಾನರಿಯದೆ ತಾನಾರೆಂದು ತಿಳಿಯದೆ
ಭವಸಾಗರದೊಳು ಬಿದ್ದು ಕೆಟ್ಟರು ನೋಡಾ.
ಅನಂತಕೋಟಿ ವಿಷ್ಣ್ವಾದಿಗಳೆಲ್ಲ ವಿಷ್ಣುಸಂಸಾರಕ್ಕೊಳಗಾಗಿ
ತನ್ನ ತಾನರಿಯದೆ ತಾನಾರೆಂದು ತಿಳಿಯದೆ
ಭವಾರಣ್ಯದೊಳು ಬಿದ್ದು ಮುಳುಗಿ ಏಳಲರಿಯದೆ ಕೆಟ್ಟರು ನೋಡಾ.
ಮೀನಜ ರೋಮಜ ಚಿಪ್ಪಜ ಡೊಂಕಜ ಚಿಡುಕಜ
ಸಾರಂಗನೆಂಬ ಮುನಿಗಳು ಮೊದಲಾಗಿ ಅನಂತಕೋಟಿ ಮುನಿಗಳೆಲ್ಲಾ
ಮುನಿಸಂಸಾರಕ್ಕೊಳಗಾಗಿ ತನ್ನ ತಾನರಿಯದೆ ತಾನಾರೆಂದು ತಿಳಿಯದೆ
ಜನನಮರಣಕ್ಕೊಳಗಾಗಿ ಕೆಟ್ಟರು ನೋಡಾ.
ಮೂವತ್ತೂರುಕೋಟಿ ದೇವರ್ಕಳು ಮೊದಲಾಗಿ ಅನಂತಕೋಟಿ
ದೇವರ್ಕಳೆಲ್ಲ
ದೇವಸಂಸಾರಕ್ಕೊಳಗಾಗಿ ತನ್ನ ತಾನರಿಯದೆ, ತಾನಾರೆಂದು ತಿಳಿಯದೆ
ಜನನಮರಣಕ್ಕೊಳಗಾಗಿ ಕೆಟ್ಟರು ನೋಡಾ.
ಇವರೆಲ್ಲ ಕೆಟ್ಟಕೇಡಿಂಗೆ ಕಡೆಯಿಲ್ಲ.
ನಾಮ ರೂಪ ಕ್ರಿಯಾತೀತವಾಗಿಹ ಪರಬ್ರಹ್ಮವೇ ತಾನೆಂದು ಅರಿದ
ಮಹಾಶರಣನ ಭವರೋಗಂಗಳು ಮುಟ್ಟಲಮ್ಮವು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೫೯೨ ||

೫೯೩

ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣವೆಂಬ
ಜ್ಞಾನೇಂದ್ರಿಯಂಗಳು ತಾನಿರ್ದಲ್ಲಿ,
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ
ಕರ್ಮೇದ್ರಿಯಂಗಳು ತಾನಿರ್ದಲ್ಲಿ,
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ
ಪಂಚೇಂದ್ರಿಯವಿಷಯಂಗಳು ತಾನಿರ್ದಲ್ಲಿ,
ವಚನ ಗಮನ ಆದಾನ ವಿಸರ್ಜನ ಆನಂದವೆಂಬ
ಕರ್ಮೇಂದ್ರಿಯಂಗಳ ತನ್ಮಾತ್ರಯಂಗಳು ತಾನಿರ್ದಲ್ಲಿ,
ಮನ ಬುದ್ಧಿ ಚಿತ್ತ ಅಹಂಕಾರ ಜೀವನೆಂಬ
ಜೀವಪಂಚಕಂಗಳು ತಾನಿರ್ದಲ್ಲಿ,
ಇವೆಲ್ಲ ತನ್ನಲ್ಲಿ ಉತ್ಪತ್ಯ ಸ್ಥಿತಿ ಲಯವಾಗಿ
ಮತ್ತಂ ತನ್ನಾಧೀನದಲ್ಲಿ ಆಡುತ್ತಿಹುದಲ್ಲದೆ ಸ್ವತಂತ್ರ ಪರಬ್ರಹ್ಮವೆ ತಾನೆಂದರಿದ

ಮಹಾಶರಣನು ಅದರಾಧೀನದಲ್ಲಿ ತಾನಾಡನು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೫೯೩ ॥

೫೯೪

ನಿವೃತ್ತಿಕಲೆ ಪ್ರತಿಷ್ಠಾಕಲೆ ತಾನಿರ್ದಲ್ಲಿ,
ವಿದ್ಯಾಕಲೆ ಶಾಂತಿಕಲೆ ತಾನಿರ್ದಲ್ಲಿ,
ಶಾಂತ್ಯತೀತಕಲೆ ಶಾಂತ್ಯತೀತೋತ್ತರಕಲೆ ತಾನಿರ್ದಲ್ಲಿ,
ಕರ್ಮಸಾದಾಖ್ಯ ಕರ್ತೃಸಾದಾಖ್ಯ ತಾನಿರ್ದಲ್ಲಿ,
ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯ ತಾನಿರ್ದಲ್ಲಿ,
ಶಿವಸಾದಾಖ್ಯ ತಾನಿರ್ದಲ್ಲಿ, ಮಹಾಸಾದಾಖ್ಯ ತಾನಿರ್ದಲ್ಲಿ.
ಇವೆಲ್ಲಾ ತನ್ನ ಮೂರ್ತಿಯಿಂದಾದುದಲ್ಲದೆ
ಮತ್ತೊಂದು ಮೂರ್ತಿಯಿಂದಾದುದಿಲ್ಲ.
ತಾನೆ ಶಿವತತ್ವ ತಾನೆ ಪರತತ್ವ ತಾನೆ ಪರಾತ್ಪರತತ್ವ
ತನ್ನಿಂದಧಿಕವಪ್ಪ ಘನವೊಂದಿಲ್ಲವಾಗಿ ತಾನೆ ನಿರಾಲಂಬ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೫೯೪ ॥

೫೯೫

ಇಡಾ ಪಿಂಗಳ ಸುಷುಮ್ನ ಗಾಂಧಾರಿ ಹಸ್ತಿ ಜಿಂಹ್ವೆ
ಪೂಷ ಪಯಶ್ಚಿನಿ ಅಲಂಬು ಶಂಕಿನಿಯೆಂಬ
ದಶನಾಳಂಗಳು ತಾನಿರ್ದಲ್ಲಿ,
ಇಡಾ ಪಿಂಗಳ ಸುಷುಮ್ನನಾಳ ಮೊದಲಾದ
ದಶನಾಳಂಗಳೊಳಾಡುವ ವಾಯು ಪ್ರಾಣ ಅಪಾನ ವ್ಯಾನ ಉದಾನ
ಸಮಾನ ನಾಗ ಕೂರ್ಮ ಕ್ರಕರ ದೇವದತ್ತ
ಧನಂಜಯನೆಂಬ ದಶವಾಯುಗಳು ತಾನಿರ್ದಲ್ಲಿ,
ಅಗ್ನಿಮಂಡಲ ಆದಿತ್ಯಮಂಡಲ ಚಂದ್ರಮಂಡಲವೆಂಬ
ಮಂಡಲತ್ರಯಂಗಳು ತಾನಿರ್ದಲ್ಲಿ,
ತಾನೆ ಯಂತ್ರವಾಹಕನಾಗಿ ಇವೆಲ್ಲವ ತನ್ನ ಲೀಲಾವಿಲಾಸ
ಸೂತ್ರಮಾತ್ರದಲ್ಲಿಯೇ ಆಡಿಸುತ್ತಿಹನಲ್ಲದೆ
ತಾನಾಡನು ತಾ ನೋಡನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. ॥ ೫೯೫ ॥

೫೯೬

ಇಡೆಯಲ್ಲಿ ಸುಳಿವ ವಾಯುವ ಸ್ವೀಕರಿಸಿ ನಿಜವನರಿಯದೆ
ಕೆಟ್ಟವರು ಕೋಟಾನುಕೋಟಿ.
ಪಿಂಗಳೆಯಲ್ಲಿ ಸುಳಿವ ವಾಯುವ ಸ್ವೀಕರಿಸಿ ನಿಜವನರಿಯದೆ

ಕೆಟ್ಟವರು ಕೋಟಾನುಕೋಟಿ.
ಸುಷಮ್ನನಾಳದಲ್ಲಿ ಸುಳಿವ ವಾಯುವ ಸ್ವೀಕರಿಸಿ
ನಿಜವನರಿಯದೆ ಕೆಟ್ಟವರು ಕೋಟಾನುಕೋಟಿ.
ಅಲ್ಲಿಂದತತ್ತಲಾದ ಮಹಾಘನಲಿಂಗವನರಿಯದೆ
ಕೆಟ್ಟವರು ಕೋಟಾನುಕೋಟಿ.
ಅಪ್ರಮಾಣಕೂಡಲಸಂಗಮದೇವಯ್ಯನ ನಿಲವ ತಾನೆಂದರಿಯದೆ
ಕೆಟ್ಟ ವೇಷಡಂಭಕರ ನಾನೇನೆಂಬೆನಯ್ಯಾ ? || ೫೯೬ ||

೫೯೭

ಕಲ್ಲದೇವರು ದೇವರಲ್ಲ, ಮಣ್ಣದೇವರು ದೇವರಲ್ಲ,
ಮರದೇವರು ದೇವರಲ್ಲ, ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ,
ಸೇತುರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾಗಿ
ಅಷ್ಟಾಷಷ್ಟಿಕೋಟಿ ಪುಣ್ಯಕ್ಷೇತ್ರಂಗಳಲ್ಲಿಹ ದೇವರು ದೇವರಲ್ಲ,
ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ,
ಅಪ್ರಮಾಣಕೂಡಲಸಂಗಮದೇವ. || ೫೯೭ ||

೫೯೮

ಬ್ರಹ್ಮ ದೇವರಲ್ಲ, ವಿಷ್ಣು ದೇವರಲ್ಲ, ರುದ್ರ ದೇವರಲ್ಲ,
ಈಶ್ವರ ದೇವರಲ್ಲ, ಸದಾಶಿವ ದೇವರಲ್ಲ,
ಸಹಸ್ರಶಿರ, ಸಹಸ್ರಾಕ್ಷ, ಸಹಸ್ರಪಾದವನುಳ್ಳ ವಿರಾಟ್ಪುರುಷ ದೇವರಲ್ಲ;
ವಿಶ್ವತೋಮುಖ, ವಿಶ್ವತೋಚಕ್ಷು, ವಿಶ್ವತೋಬಾಹು,
ವಿಶ್ವತೋಪಾದವನುಳ್ಳ ಪರಮಪುರುಷ ದೇವರಲ್ಲ,
ಸಹಜನಿರಾಲಂಬವೇ ತಾನೆಂದರಿದ ಮಹಾಶರಣ ತಾನೇ ದೇವ ನೋಡಾ
ಅಪ್ರಮಾಣಕೂಡಲಸಂಗಮದೇವ. || ೫೯೮ ||

೫೯೯

ಗಂಗಾಧರ ಗೌರೀಶ ದೇವರಲ್ಲ, ಶಂಕರ ಶಶಿಧರ ದೇವರಲ್ಲ,
ಪಂಚಮುಖ, ದಶಭುಜವನುಳ್ಳ ನಂದಿವಾಹನರು ದೇವರಲ್ಲ,
ತ್ರಿಶೂಲ ಖಟ್ವಾಂಗಧರರು ದೇವರಲ್ಲ,
ಬ್ರಹ್ಮಕಪಾಲ ವಿಷ್ಣುಕಂಕಾಳ ದಂಡವ ಹಿಡಿದ ಪ್ರಳಯಕಾಲರುದ್ರ ದೇವರಲ್ಲ,
ನಿರಾಳಸ್ವಯಂಭುಲಿಂಗವ ತಾನೆಂದರಿದಡೆ ತಾನೆ ದೇವ ನೋಡಾ
ಅಪ್ರಮಾಣಕೂಡಲಸಂಗಮದೇವ. || ೫೯೯ ||

೬೦೦

ನಾಸಿಕದ ತುದಿಯಲ್ಲಿ ಆಡುವ ಪ್ರಾಣವಾಯು
ದೇವರೆಂಬರು ; ಅಲ್ಲಲ್ಲ ನೋಡಾ.

ಅದೆಂತೆಂದಡೆ :
ಆ ಪ್ರಾಣವಾಯು ನಾಸಿಕದಿಂದ ಹನ್ನೆರಡಂಗುಲಪ್ರಮಾಣ,
ಹೊರಹೊಂಟು ಎಂಟಂಗುಲ ಪ್ರಮಾಣ,
ತಿರುಗಿ ನಾಲ್ಕಂಗುಲ ಪ್ರಮಾಣ ಖಂಡಿಸುವುದು ನೋಡಾ.
ಇಂತು ದಿನವೊಂದಕ್ಕೆ ಇಪ್ಪತ್ತೊಂದು ಸಾವಿರದ ಆರುನೂರು
ಶ್ವಾಸಂಗಳು ಹೊರಹೊಂಟು, ಹದಿನಾಲ್ಕುಸಾವಿರದ ನಾನೂರು
ಶ್ವಾಸಂಗಳು ತಿರುಗಿ, ಏಳುಸಾವಿರದ ಇನ್ನೂರು ಶ್ವಾಸಂಗಳು ಖಂಡಿಸಿ
ಮೃತವಾಗಿ ಹೋಹ ಪ್ರಾಣವಾಯುವ
ದೇವರೆಂಬ ಶಿವದ್ರೋಹಿಗಳ ಎನಗೊಮ್ಮೆ ತೋರದಿರಯ್ಯಾ,
ಅಪ್ರಮಾಣಕೂಡಲಸಂಗಮದೇವಾ. ॥ ೬೦೦ ॥

೬೦೧

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚಭೌತಿಕದ ಪಂಚವಿಂಶತಿಗುಣಂಗಳಿಂದಾದ ದೇಹವ ದೇವರೆಂಬರು ;
ಆ ದೇಹವು ದೇವರಲ್ಲ ನೋಡಾ.
ಸಕಲೇಂದ್ರಿಯಕ್ಕೂ ಒಡೆಯನಾಗಿಹ ಮನವ ದೇವರೆಂಬರು ;
ಆ ಮನ ದೇವರಲ್ಲ ನೋಡಾ.
ಆ ಮನದಿಂದಾದ ಬುದ್ಧಿಯ ದೇವರೆಂಬರು ;
ಆ ಬುದ್ಧಿ ದೇವರಲ್ಲ ನೋಡಾ.
ಆ ಬುದ್ಧಿಯಿಂದಾದ ಚಿತ್ತವ ದೇವರೆಂಬರು ;
ಆ ಚಿತ್ತ ದೇವರಲ್ಲ ನೋಡಾ.
ಆ ಚಿತ್ತದಿಂದಾದ ಅಹಂಕಾರವ ದೇವರೆಂಬರು ;
ಆ ಅಹಂಕಾರ ದೇವರಲ್ಲ ನೋಡಾ.
ಆ ಅಹಂಕಾರದಿಂದ ಜೀವನಾಗಿ ಅಳಿವ ಜೀವವ ದೇವರೆಂಬರು ;
ಆ ಅಳಿವ ಜೀವ ದೇವರಲ್ಲ ನೋಡಾ.
ಇವೆಲ್ಲ ಅಳಿವವಲ್ಲದೆ ಉಳಿವವಲ್ಲ; ದೇವರಿಗೆ ಅಳುವುಂಟೆ ?
ಅಳಿವಿಲ್ಲದ ಪರಶಿವತತ್ವವ ತಾನೆಂದರಿದಡೆ, ತಾನೇ ದೇವ ನೋಡಾ
ಅಪ್ರಮಾಣಕೂಡಲಸಂಗಮದೇವ. ॥ ೬೦೧ ॥

೬೦೨

ಪಿಂಗಳನಾಳದಲ್ಲಿ ಆಡುವ ಸೂರ್ಯನ ದೇವರೆಂಬರು ;
ಆ ಸೂರ್ಯ ದೇವರಲ್ಲ ನೋಡಾ.
ಇಡಾನಾಳದಲ್ಲಿ ಆಡುವ ಚಂದ್ರನ ದೇವರೆಂಬರು ;
ಆ ಚಂದ್ರನು ದೇವರಲ್ಲ ನೋಡಾ.
ಸುಷುಮ್ನನಾಳದಲ್ಲಿ ಆಡುವ ಜೀವಾತ್ಮನ ದೇವರೆಂಬರು ;
ಆ ಜೀವಾತ್ಮನು ದೇವರಲ್ಲ ನೋಡಾ.

ಆ ಇಡಾ ಪಿಂಗಳ ಸುಷುಮ್ನ ನಾಳದೊಳಾಡುವ
ಚಂದ್ರ ಸೂರ್ಯ ಜೀವಾತ್ಮರಿಗೆ ಪರಬ್ರಹ್ಮವೇ ಜನಕನೆಂದರಿದು
ಆ ಪರಬ್ರಹ್ಮವೇ ತಾನೆಂದರಿದಡೆ ತಾನೆ ದೇವ ನೋಡಾ,
ಅಪ್ರಮಾಣಕೂಡಲಸಂಗಮದೇವ. ॥ ೬೦೨ ॥

೬೦೩

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞಾಯೆಂಬ ಷಡುಚಕ್ರದೊಳಗಣ
ದಳ–ವರ್ಣ–ಅಕ್ಷರ–ಅಧಿದೇವತೆ
ಶಕ್ತಿ–ಭಕ್ತಿ–ಸಾದಾಖ್ಯಂಗಳ ದೇವರೆಂಬರು ; ಅಲ್ಲಲ್ಲ ನೋಡಾ.
ವಾಙ್ಮನಕ್ಕಗೋಚರವಾಗಿಹ ಪರಶಿವತತ್ವವ ತಾನೆಂದರಿದಡೆ
ತಾನೆ ದೇವ ನೋಡಾ
ಅಪ್ರಮಾಣಕೂಡಲಸಂಗಮದೇವ. ॥ ೬೦೩ ॥

೬೦೪

ಬ್ರಹ್ಮಚಕ್ರದ ಸಹಸ್ರದಳಪದ್ಮದೊಳು ದೇವರಿಹುದು,
ಆ ದೇವರ ಕಂಡಿಹೆನೆಂದು ಸ್ವರ್ಗ ಮೋಕ್ಷಂಗಳಿಗೆ ಹೇತುವಾಗಿಹ
ಅನ್ನಪಾನಾದಿಗಳಂ ಬಿಟ್ಟು ತನುವ ದಂಡಿಸಿ,
ಸ್ವಸ್ತಿಪದ್ಮಾಸನದಲ್ಲಿ ಕುಳ್ಳಿರ್ದು, ಮಹಾವಾಯುವಂ ಪಿಡಿದು,
ಬಹುಮೂಲಜ್ವಾಲೆಯನೆಬ್ಬಿಸಿ, ಸುಷುಮ್ನನಾಳದ ತುದಿಯನಡರಿಸಿ,
ಅಮಳೋಕ್ಯದ್ವಾರದೊಳು ಜಿಹ್ವೆಯೇರಿಸಿ ಅಮೃತವನುಂಡು
ಅಲ್ಲಿಹ ದೇವರ ಕಂಡಿಹೆನೆಂದು ಕಾಣದೆ
ವಾತ ಪಿತ್ಥ ಶ್ಲೇಷ್ಮಂಗಳಂ ಕುಡಿದು
ಸತ್ತ ಕರ್ಮಯೋಗಿಗಳು ಕೋಟಾನುಕೋಟಿ.
ಅಲ್ಲಿಂದ ಮೇಲೆ ಶಿಖಾಚಕ್ರದ ದಶದಳಪದ್ಮದೊಳು ದೇವರಿಹುದು,
ಆ ದೇವರ ಕಂಡೆಹೆನೆಂದು ಇಡಾ ಪಿಂಗಳ ಸುಷುಮ್ನ ನಾಳದಲ್ಲಿ
ಸೂಸುವ ವಾಯುವ ಸೂಸಲೀಯದೆ
ಕುಂಬಾರನ ಚಕ್ರ ಒಂದು ಸುತ್ತು ಬಾಹನ್ನಕ್ಕರ ಸಾವಿರ ಸುತ್ತು ಬಹ ಮನವ
ನಿಲಿಸಿ ಆ ಮನ ಪವನ ಸಂಯೋಗದಿಂದ
ಏಕಾಗ್ರಚಿತ್ತನಾಗಿ ಶಿಖಾಚಕ್ರದ ತ್ರಿದಳಪದ್ಮದ
ಕರಣಿಕಾಮಧ್ಯದಲ್ಲಿಹ ದೇವರ ಧ್ಯಾನಿಸಿ ಕಂಡೆಹೆನೆಂದು
ಆ ದೇವರ ಕಾಣದೆ ಸತ್ತ ಧ್ಯಾನಯೋಗಿಗಳು ಕೋಟಾನುಕೋಟಿ.
ಅಲ್ಲಿಂದತ್ತ ಮೇಲೆ ಪಶ್ಚಿಮಚಕ್ರದೊಳು
ಅಪ್ರದರ್ಶನ ವರ್ಣವಾಗಿಹ ಏಕದಳಪದ್ಮಸಿಂಹಾಸನದ ಮೇಲೆ
ದೇವರ ಲಕ್ಷವಿಟ್ಟು ನೋಡಿ ಕಂಡಿಹೆನೆಂದು

ಕಾಣದೆ ಸತ್ತ ಭ್ರಾಂತಯೋಗಿಗಳು ಕೋಟಾನುಕೋಟಿ.
ಇಂತೀ ಕರ್ಮಯೋಗ, ಲಂಬಿಕಾಯೋಗ, ಧ್ಯಾನಯೋಗಗಳೆಂಬ
ಯೋಗಂಗಳ ಸಾಧಿಸಿ ದೇವರ ಕಂಡಿಹೆನೆಂದು
ಕಾಣದೆ ಸತ್ತ ಭ್ರಾಂತಿಯೋಗಿಗಳಿಗೆ ಕಡೆಯಿಲ್ಲ.
ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೆ ದೇವ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೦೪ ||

೬೦೫

ಹೃದಯಕಮಲಮಧ್ಯದಲ್ಲಿ ಲಕ್ಷವಿಟ್ಟು
ನೋಡುವ ದೇವರು ದೇವರಲ್ಲ,
ಭ್ರೂಮಧ್ಯದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ,
ಬ್ರಹ್ಮರಂಧ್ರದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ,
ನಾಸಿಕಾಗ್ರದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ.
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರ ಸ್ವಯಂಭುಲಿಂಗವ
ತಾನೆಂದರಿದಡೆ ತಾನೇ ದೇವ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೦೫ ||

೬೦೬

ಭೂಚರಿಯಮುದ್ರೆಯ ದೇವರೆಂಬರು,
ಆ ಭೂಚರಿಯಮುದ್ರೆಯು ದೇವರಲ್ಲ,
ಖೇಚರಿಯಮುದ್ರೆಯ ದೇವರೆಂಬರು,
ಆ ಖೇಚರಿಯಮುದ್ರೆಯು ದೇವರಲ್ಲ,
ಶಾಂಭವಮುದ್ರೆಯ ದೇವರೆಂಬರು,
ಆ ಶಾಂಭವಮುದ್ರೆಯು ದೇವರಲ್ಲ ನೋಡಾ.
ಸ್ವಸ್ಥಪದ್ಮಾಸನದಲ್ಲಿ ಕುಳ್ಳಿರ್ದು
ಶ್ರೋತ್ರ ನೇತ್ರ ಜಿಹ್ವೆ ಘ್ರಾಣವೆಂಬ
ಸಪ್ತದ್ವಾರಂಗಳನೊತ್ತಿ ನೋಡಲು
ಆ ಒತ್ತಿದ ಪ್ರಭೆಯಿಂದ ಕುಂಬಾರನ ಚಕ್ರದ ಹಾಂಗೆ
ಶ್ವೇತ ಪೀತ ಕಪೋತ ಹರಿತ ಮಾಂಜಿಷ್ಠ ವರ್ಣವಾಗಿ
ತೋರುವ ಷಣ್ಮುಖೀಮುದ್ರೆಯ ದೇವರೆಂಬರು ; ಅಲ್ಲಲ್ಲ ನೋಡಾ.
ಇವೆಲ್ಲಕ್ಕೂ ಉತ್ಪತ್ತಿ ಸ್ಥಿತಿ ಲಯ ಉಂಟಾಗಿ ದೇವರಲ್ಲ ನೋಡಾ.
ದೇವರಿಗೆ ಉತ್ಪತ್ತಿ ಸ್ಥಿತಿ ಲಯ ಉಂಟೆ ಹೇಳಾ ?
ಈ ಉತ್ಪತ್ತಿ ಸ್ಥಿತಿ ಲಯವಿಲ್ಲದ
ಪರಾಪರತತ್ವ ತಾನೆಂದರಿದಡೆ, ತಾನೇ ದೇವ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೦೬ ||

೬೦೭

ತಾನೆ ಚಿನ್ನಾದ, ತಾನೆ ಚಿದ್ಬಿಂದು, ತಾನೆ ಚಿತ್ಕಲೆ
ತಾನೆ ಚಿತ್ಕಲಾತೀತ ನೋಡಾ.
ತನ್ನಿಂದಧಿಕವಾದ ದೇವರಿಲ್ಲವಾಗಿ
ತಾನೆ ಚಿದಾನಂದಸ್ವರೂಪವಾಗಿಹ ಚಿಲ್ಲಿಂಗ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೦೭ ||

೬೦೮

ತಾನೆ ಚಿತ್ಪ್ರಕಾಶ ತಾನೆ ಚಿದಾಕಾಶ ತಾನೆ ಬಿಂದ್ವಾಕಾಶ ನೋಡಾ.
ತಾನೆ ಮಹದಾಕಾಶ ತಾನೆ ಪರಾಕಾಶ ನೋಡಾ.
ತನ್ನಿಂದಧಿಕವಾಗಿಹ ಪರಶಿವತತ್ವವಿಲ್ಲವಾಗಿ ತಾನೆ ಪರಬ್ರಹ್ಮ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೦೮ ||

ಹೀಂಗೆಂದು ತನ್ನ ಅಂಗ ಪ್ರತ್ಯಂಗ ಸ್ವರೂಪ ಸ್ವಭಾವಂಗಳನು ಆ ಸದ್ಗುರುಸ್ವಾಮಿ ತಿಳುಹಲು, ಆ ಶಿಷ್ಯನು ಪರಮಹರುಷಿತನಾಗಿ, ಸದ್ಗುರುವೆ ಮದ್ಗುರುವೆ ಶ್ರೀ ಜಗದ್ಗುರುವೆ ಸಕಲನಿಃಕಲಾತೀತಗುರುವೆ, ಸಚ್ಚಿದಾನಂದ ನಿತ್ಯಪರಿಪೂರ್ಣಗುರುವೆ, ನಿತ್ಯನಿರಂಜನಗುರುವೆ, ನಾದಬಿಂದುಕಲಾತೀತ ಗುರುವೆ, ವ್ಯೋಮವ್ಯೋಮಾತೀತಗುರುವೆ, ನಿರಾಳ ನಿರಾಮಯ ನಿರಾಮಯಾತೀತಗುರುವೆ ಎಂದು ಸ್ತೋತ್ರವಂ ಮಾಡಿ, ಶ್ರೀಮಹಾಗುರುಘನತೆಯಂ ಕೊಂಡಾಡಿ ನನ್ನ ಸ್ವರೂಪ ಸ್ವಭಾವಂಗಳ ನಿಮ್ಮ ಅಖಂಡ ಜ್ಞಾನದೃಕ್ಕಿನಿಂದ ತೋರಲು ಕಂಡು ಪರಮಸುಖಿಯಾದೆನು. ಇನ್ನು ಷಡುಸ್ಥಲಬ್ರಹ್ಮತತ್ವವ ನಿರೂಪಿಸೆಂದು ಆ ಶಿಷ್ಯ ಬೆಸಗೊಳಲು ಆ ಸದ್ಗುರುಸ್ವಾಮಿ ನಿರೂಪಿಸಿದರ ದೆಂತೆಂದಡೆ :

೬೦೯

ಆದಿ ಮಕಾರಪ್ರಣವ, ಆದಿ ಅಕಾರಪ್ರಣವ, ಆದಿ ಉಕಾರಪ್ರಣವ
–ಈ ಮೂರು ಬೀಜಾಕ್ಷರ
ಆದಿ ಮಕಾರಪ್ರಣವವೆ ಆದಿಕಲೆ, ಆದಿ ಅಕಾರಪ್ರಣವವೆ ಆದಿನಾದ,
ಆದಿ ಉಕಾರಪ್ರಣವವೆ ಆದಿಬಿಂದು
ಆದಿ ಮಕಾರಪ್ರಣವವೇ ಸರ್ವಾತ್ಮನು.
ಆದಿ ಅಕಾರಪ್ರಣವವೇ ಪರಮಾತ್ಮನು.
ಆದಿ ಉಕಾರಪ್ರಣವವೇ ಶಿವಾತ್ಮನು ನೋಡಾ.
ಇದಕ್ಕೆ ಈಶ್ವರೋಽವಾಚ :
''ಅಕಾರಂ ಪರಾತ್ಪರಾತ್ಮಂ ಉಕಾರಂ ಶಿವಾತ್ಮೋ ಭವೇತ್ ।
ಮಕಾರಂ ಸರ್ವಾತ್ಮವ ಇತಿ ಭೇದಂ ವರಾನನೇ ॥''

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೬೦೯ ॥

೬೧೦

ಆ ಮಕಾರಪ್ರಣವಕ್ಕೆ ಆದಿ ಕಲಾಪ್ರಣವವೇ ಆಧಾರ.
ಆದಿ ಅಕಾರಪ್ರಣವಕ್ಕೆ ಆದಿ ನಾದಪ್ರಣವವೇ ಆಧಾರ.
ಆದಿ ಉಕಾರಪ್ರಣವಕ್ಕೆ ಆದಿ ಬಿಂದುಪ್ರಣವವೇ ಆಧಾರ.
ಆ ಆದಿ ಕಲೆ ನಾದ ಬಿಂದುಪ್ರಣವಕ್ಕೆ
ಆದಿ ಪ್ರಕೃತಿಪ್ರಣವವೇ ಆಧಾರ.
ಆ ಆದಿಪ್ರಕೃತಿಪ್ರಣವಕ್ಕೆ ಪ್ರಾಣಮಾತ್ರೆಯಪ್ರಣವವೇ ಆಧಾರ.
ಆ ಪ್ರಾಣಮಾತ್ರೆಯಪ್ರಣವಕ್ಕೆ ಅಖಂಡಜ್ಯೋತಿರ್ಮಯವಾಗಿಹ
ಲಿಂಗವೇ ಆಧಾರ.
'ಮ' ಎಂದಡೆ ಆದಿ ಅನುಸ್ವಾರಪ್ರಣವ,
'ಅ' ಎಂದಡೆ ಆದಿ ನಾದ ಪ್ರಣವ,
'ಉ' ಎಂಬ ಆದಿಬಿಂದುಪ್ರಣವದಲ್ಲಿ ಬಂದು ಕೂಡಿ
ಮಯೆಂಬ ಅನುಸ್ವಾರಪ್ರಣವದಲ್ಲಿ ಬಂದು ಕೂಡಲು
ಮಹದೋಂಕಾರವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೧೦

೬೧೧

ಇದಕ್ಕೆ **ಓಂಕಾರೋಪನಿಷತ್** :
ಮಕಾರವೆಂಬ ಪ್ರಣವದಲ್ಲಿ –
''ದಂಡಶ್ಚ ತಾರಕಾಕಾರೋ ಭವತಿ ಓಂ ಸರ್ವಾತ್ಮಾ ದೇವತಾ ।
ಮಕಾರೇ ಚ ಲಯಂ ಪ್ರಾಪ್ತೇ ದ್ವಿತೀಯಂ ಪ್ರಣವಾಂಶಕೇ ॥''
ಅಕಾರವೆಂಬ ಪ್ರಣವದಲ್ಲಿ –
''ಕುಂಡಲಶ್ಚ ಅರ್ಧಚಂದ್ರೋ ಭವತಿ ಓಂ ಪರಾತ್ಪರಾತ್ಮೋ ದೇವತಾ ।
ಅಕಾರೇ ಚ ಲಯಂ ಪ್ರಾಪ್ತೇ ತ್ರಿಮಿಶಪ್ರಣವಾಂಶಕೇ ॥''
ಉಕಾರವೆಂಬ ಪ್ರಣವದಲ್ಲಿ–
''ದರ್ಪಣಶ್ಚ ಜ್ಯೋತಿರೂಪೋ ಭವತಿ ಓಂ ಶಿವಾತ್ಮಾ ದೇವತಾ ।
ಉಕಾರೇ ಚ ಲಯಂ ಪ್ರಾಪ್ತೇ ಚತುರ್ವಿಂಶ ಪ್ರಣವಾಂಶಕೇ ॥''
ಮಕಾರೇ ಚ ಅಕಾರೇ ಚ ಉಕಾರೇ ಚ ನಿರಾಮಯಂ ।
ಇದಮೇಕಂ ಸಮುತ್ಪನ್ನಂ ಓಮಿತಿ ಜ್ಯೋತಿರೂಪಕಂ ॥
ಪ್ರಥಮಂ ತಾರಕರೂಪಂ ದ್ವಿತೀಯಂ ದಂಡಉಚ್ಯತೇ ।
ತೃತೀಯಂ ಕುಂಡಲಾಕಾರಂ ಚತುರ್ಥಶ್ಚಾರ್ಧಚಂದ್ರಕಂ ॥
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿಸ್ಸ್ವರೂಪಕಂ ।

ಇತಿ ಪ್ರಣವಾ ವಿಜ್ಞೇಯಂ ಏತದ್ಗೌಪ್ಯಂ ವರಾನನೇ ॥
ಓಂಕಾರಪ್ರಭವಾ ವೇದಾಃ ಓಂಕಾರ ಪ್ರಭವಾತ್ ಸ್ವರಾಃ ।
ಓಂಕಾರಪ್ರಭವಾ ಭೂಃ ಓಂಕಾರ ಪ್ರಭವಾ ಭುವಃ ॥
ಓಂಕಾರಪ್ರಭವಾ ಸ್ವಹಃ ಓಂಕಾರ ಪ್ರಭವೋ ಮಹಃ ।
ಓಂಕಾರ ಪ್ರಭವೋ ಜನಃ ಓಂಕಾರ ಪ್ರಭವೋ ತಪಃ ॥
ಓಂಕಾರಪ್ರಭವಂ ಸತ್ಯಂ ಓಂಕಾರಪ್ರಭವೋ ರವಿಃ ।
ಓಂಕಾರ ಪ್ರಭವಾತ್ಸರ್ವಂ ತ್ರೈಲೋಕ್ಯಂ ಸಚರಾಚರಂ ॥
ಸರ್ವವ್ಯಾಪಕಮೋಂಕಾರಂ ಮಂತ್ರಾನ್ಯತ್ರ ನ ಶೋಭಯೇತ್ ।
ಪ್ರಣವೋಹಿ ಪರಬ್ರಹ್ಮ ಪ್ರಣವೋಹಿ ಪರಮಂ ಪದಂ ॥
ಓಂಕಾರಂ ನಾದರೂಪಂ ಚ ಓಂಕಾರಂ ಬಿಂದುರೂಪಕಂ ।
ಓಂಕಾರಂ ಚ ಕಲಾರೂಪಂ ಓಂಕಾರಂ ಮಂತ್ರರೂಪಕಂ ॥
ಓಂಕಾರಂ ವ್ಯಾಪಿಸರ್ವತ್ರ ಓಂಕಾರಂ ಗೌಪ್ಯಮಾನನಂ ।
ಇತಿ ಪ್ರಣವಂ ವಿಜ್ಞೇಯಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೬೧೧ ॥

೬೧೨

ಇನ್ನು ಆ ಅಖಂಡಮಹಾಜ್ಯೋತಿಪ್ರಣವದ
ತಾರಕಸ್ವರೂಪವೇ ಮೂರ್ತಿಬ್ರಹ್ಮವು.
ಆ ಅಖಂಡಮಹಾಜ್ಯೋತಿಪ್ರಣವದ ದಂಡಸ್ವರೂಪವೆ ಪಿಂಡಬ್ರಹ್ಮವು.
ಆ ಅಖಂಡಮಹಾಜ್ಯೋತಿಪ್ರಣವದ ಕುಂಡಲಾಕಾರವೆ ಕಲಾಬ್ರಹ್ಮವು.
ಆ ಅಖಂಡಮಹಾಜ್ಯೋತಿಪ್ರಣವದ
ಅರ್ಧಚಂದ್ರಾಕಾರವೆ ಬ್ರಹ್ಮಾನಂದ ಬ್ರಹ್ಮವು.
ಆ ಅಖಂಡಮಹಾಜ್ಯೋತಿಪ್ರಣವದ ದರ್ಪಣಾಕಾರವೆ ವಿಜ್ಞಾನಬ್ರಹ್ಮವು.
ಆ ಅಖಂಡಮಹಾಜ್ಯೋತಿಪ್ರಣವದ ಜ್ಯೋತಿಸ್ವರೂಪವೆ ಪರಬ್ರಹ್ಮವು.
ಈ ಆರು ಷಟ್ಸ್ಥಲಬ್ರಹ್ಮ ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ಓಂಕಾರ ತಾರಕಂ ರೂಪಂ ಮೂರ್ತಿಬ್ರಹ್ಮ ಯಥಾ ಭವೇತ್ ।
ಓಂಕಾರ ದಂಡರೂಪೇ ಚ ಪಿಂಡಬ್ರಹ್ಮೇತಿ ಕಥ್ಯತೇ ॥
ಓಂಕಾರ ಕುಂಡಲಾಕಾರಂ ಕಲಾಬ್ರಹ್ಮೇತಿ ಕೀರ್ತಿತಂ ।
ಓಂಕಾರಂ ಅರ್ಧಚಂದ್ರಂ ಚ ಬ್ರಹ್ಮಾನಂದಂ ತಥಾ ಭವೇತ್ ॥
ಓಂಕಾರಂ ದರ್ಪಣಾಕಾರಂ ವಿಜ್ಞಾನಬ್ರಹ್ಮ ಉಚ್ಯತೇ ।
ಓಂಕಾರಂ ಜ್ಯೋತಿರೂಪಂ ಚ ಪರಬ್ರಹ್ಮ ಯಥಾ ಭವೇತ್ ॥
ಪ್ರಣವಂ ಷಡ್ವಿಧಂ ಚೈವ ಷಟ್ಸ್ಥಲಬ್ರಹ್ಮ ಉಚ್ಯತೇ ।

ಇತಿ ಷಟ್‌ಬ್ರಹ್ಮ ವಿಜ್ಞೇಯಂ ಏತದ್ಗೋಪ್ಯಂ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೨ ॥

೬೧೩

ಇನ್ನು ಷಟ್ಸ್ಥಲಬ್ರಹ್ಮವಾಗಿಹ
ಆ ಅಖಂಡಮಹಾಜ್ಯೋತಿಪ್ರಣವದ ತಾರಕಸ್ವರೂಪವಾಗಿಹ
ಮೂರ್ತಿಬ್ರಹ್ಮವು ಅನಂತಕೋಟಿ ಮಹಾಜ್ಯೋತಿಪ್ರಕಾಶವಾಗಿಹುದು.
ಆ ಅಖಂಡಮಹಾಜ್ಯೋತಿಪ್ರಣವದ ದಂಡಕಸ್ವರೂಪವಾಗಿಹ
ಪಿಂಡಬ್ರಹ್ಮವು ಅನಂತಕೋಟಿ ಮಹಾಜ್ಯೋತಿಪ್ರಕಾಶವಾಗಿಹುದು.
ಆ ಅಖಂಡಮಹಾಜ್ಯೋತಿಪ್ರಣವದ ಕುಂಡಲಾಕಾರವಾಗಿಹ
ಕಲಾಬ್ರಹ್ಮವು ಅನಂತಕೋಟಿ ಅತಿಮಹಾಜ್ಯೋತಿಪ್ರಕಾಶವಾಗಿಹುದು.
ಆ ಅಖಂಡಮಹಾಜ್ಯೋತಿಪ್ರಣವದ ಅರ್ಧಚಂದ್ರಸ್ವರೂಪವಾಗಿಹ
ಬ್ರಹ್ಮಾನಂದಬ್ರಹ್ಮವು ಅನಂತಕೋಟಿ ಅತಿಮಹಾಜ್ಯೋತಿ
ಪ್ರಕಾಶವಾಗಿಹುದು.
ಆ ಅಖಂಡಮಹಾಜ್ಯೋತಿಪ್ರಣವದ ದರ್ಪಣಾಕಾರವಾಗಿಹ ವಿಜ್ಞಾನಬ್ರಹ್ಮವು
ಅನಂತಕೋಟಿ ಅತಿ ಮಹಾತೀತೋತ್ತರಜ್ಯೋತಿಪ್ರಕಾಶವಾಗಿಹುದು.
ಆ ಅಖಂಡಮಹಾಜ್ಯೋತಿಸ್ವರೂಪವಾಗಿಹ ಪರಬ್ರಹ್ಮವು
ಅನಂತಕೋಟಿ ಅತಿಮಹಾತೀತೋತ್ತರಕ್ಕೂ ಅತೀತವಾಗಿಹ
ಅಖಂಡಮಹಾಜ್ಯೋತಿಪ್ರಕಾಶವಾಗಿಹುದು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೬೧೩ ॥

ಹೀಗೆಂದು ಆ ಸದ್ಗುರುಸ್ವಾಮಿ ಷಡುಸ್ಥಲಬ್ರಹ್ಮಮಹಾತ್ಮೆಯ ನಿರೂಪಿಸಲು ಆ ಶಿಷ್ಯನು ತನ್ನ ಸೌಮ್ಯಜ್ಞಾನದೃಕ್ಕಿನಿಂದ ಕಂಡು ಪರಮಾನಂದಲೋಲನಾಗಿ ಪರವಶನಾಗಿ ಪರಮಪರಿಣಾಮಿಯಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿಮ್ಮ ಮಹಾವಾಕ್ಯದಿಂದ ಷಡುಸ್ಥಲಬ್ರಹ್ಮೋತ್ಪತ್ಯವ ನಿರೂಪಿಸಲು ನಿಮ್ಮ ಸಮ್ಯಜ್ಞಾನದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಇನ್ನು ಆ ಷಡುಸ್ಥಲ ಬ್ರಹ್ಮದಲ್ಲಿ ಮೂವತ್ತಾರುತತ್ವಂಗಳುತ್ಪತ್ಯವ ನಿರೂಪಿಸೆಂದು ಬಿನ್ನೈಸಲು ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೧೪

ಆ ಅಖಂಡಮಹಾಜ್ಯೋತಿಪ್ರಣವದ ಜ್ಯೋತಿಸ್ವರೂಪವಾಗಿಹ
ಪರಬ್ರಹ್ಮದಲ್ಲಿ ಶಿವನುತ್ಪತ್ಯವಾದನು,
ಕ್ಷೇತ್ರಜ್ಞನುತ್ಪತ್ಯವಾದನು, ಕರ್ತೃ ಉತ್ಪತ್ಯವಾದನು,
ಭಾವವುತ್ಪತ್ಯವಾಯಿತ್ತು, ಚೈತನ್ಯನುತ್ಪತ್ಯವಾದನು,
ಆಕಾಶವುತ್ಪತ್ಯವಾಯಿತ್ತು,

ಈ ಆರು ತತ್ವಂಗಳು ಪರಬ್ರಹ್ಮದಲ್ಲಿ ಹುಟ್ಟಿತ್ತು ನೋಡಾ.
ಇದಕ್ಕೆ ನಿರಂಜನಾಗಮೇ :
''ಶಿವಂ ಕ್ಷೇತ್ರಜ್ಞಕರ್ತಾರಂ ಭಾವಂ ಚೈತನ್ಯಮಂತರಂ ।
ಏವಂತು ಷಡ್ವಿಧಂ ಪ್ರೋಕ್ತಂ ಪರಬ್ರಹ್ಮ ಚ ಕಥ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೪ ॥

೬೧೫

ಆ ಅಖಂಡಮಹಾಜ್ಯೋತಿಪ್ರಣವದ ದರ್ಪಣಾಕಾರವಾಗಿಹ
ವಿಜ್ಞಾನಬ್ರಹ್ಮದಲ್ಲಿ ಸದಾಶಿವ, ಮಹಾಕಾಶ, ಶಬ್ದ
ಜ್ಞಾನ, ಶ್ರೋತ್ರ, ವಾಕು
ಈ ಆರು ತತ್ವಂಗಳು ಹುಟ್ಟಿತ್ತು ನೋಡಾ.
ಇದಕ್ಕೆ ನಿರಂಜನಾಗಮೇ :
''ಸದಾಶಿವಂ ಮಹಾಕಾಶಂ ಶಬ್ದಜ್ಞಾನಂ ಚ ಶ್ರೋತ್ರಕಂ ।
ವಾಕ್ತಥಾ ಷಡ್ವಿಧಂ ಪ್ರೋಕ್ತಂ ವಿಜ್ಞಾನಂ ಬ್ರಹ್ಮ ಉಚ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೫ ॥

೬೧೬

ಆ ಅಖಂಡಮಹಾಜ್ಯೋತಿಪ್ರಣವದ ಅರ್ಧಚಂದ್ರಕಸ್ವರೂಪವಾಗಿಹ
ಬ್ರಹ್ಮಾನಂದಬ್ರಹ್ಮದಲ್ಲಿ ಈಶ್ವರ, ವಾಯು, ಸ್ಪರ್ಶ,
ಮನ, ತ್ವಕ್ಕು, ಪಾಣೇಂದ್ರಿಯವೆಂಬ
ಈ ಆರು ತತ್ವಂಗಳು ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ಈಶ್ವರೋ ವಾಯು ಸಂಸ್ಪರ್ಶೇ ಮನಸ್ತ್ವಾನಿ ಉಚ್ಯತೇ ।
ಷಟ್‌ಸಮ್ಮಿಶ್ರಿತಂ ಯಸ್ತು ಬ್ರಹ್ಮಾನಂದಶ್ಚ ಕಥ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೬ ॥

೬೧೭

ಆ ಅಖಂಡಮಹಾಜ್ಯೋತಿಪ್ರಣವದ ಕುಂಡಲಾಕಾರವಾಗಿಹ
ಕಲಾಬ್ರಹ್ಮದಲ್ಲಿ ರುದ್ರ, ಅಗ್ನಿ, ರೂಪ,
ಅಹಂಕಾರ, ನೇತ್ರ, ಪಾದೇಂದ್ರಿಯವೆಂಬ
ಈ ಆರು ತತ್ವಂಗಳು ಉತ್ಪತ್ಯವಾಯಿತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ರುದ್ರಂ ತೇಜಸ್ತಥಾ ರೂಪಂ ಮಹಾನೇತ್ರಂ ಚ ಪಾದಯೋಃ ।
ಷಡಂಗಮಿಶ್ರಿತಂ ಚೇತಿ ಕಲಾಬ್ರಹ್ಮೇತಿ ಕಥ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೭ ॥

೬೧೮

ಆ ಅಖಂಡಮಹಾಜ್ಯೋತಿಪ್ರಣವದ ದಂಡಕಸ್ವರೂಪವಾಗಿಹ
ಪಿಂಡಬ್ರಹ್ಮದಲ್ಲಿ ವಿಷ್ಣು ಅಪ್ಪು, ರಸ, ಬುದ್ಧಿ
ಜಿಹ್ವೆ, ಗುಹ್ಯವೆಂಬ ಈ ಆರು ತತ್ವಂಗಳು ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ವಿಷ್ಣುರಾಪೋ ರಸೋ ಬುದ್ಧಿಃ ಜಿಹ್ವಾ ಗುಹ್ಯಸ್ತಥೈವ ಚ ।
ಷಟ್‌ತತ್ವಮಿದಂ ಪ್ರೋಕ್ತಂ ಪಿಂಡಬ್ರಹ್ಮೇತಿ ಕಥ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೮ ॥

೬೧೯

ಆ ಅಖಂಡಮಹಾಜ್ಯೋತಿಪ್ರಣವದ ತಾರಕಸ್ವರೂಪವಾಗಿಹ
ಮೂರ್ತಿಬ್ರಹ್ಮದಲ್ಲಿ ಬ್ರಹ್ಮ ಪೃಥ್ವಿ, ಗಂಧ, ಚಿತ್ತ ಘ್ರಾಣ,
ಗುದವೆಂಬ ಈ ಆರು ತತ್ವಂಗಳು ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ಧಾತಾ ಧಾತ್ರೀ ಚ ಗಂಧಶ್ಚ ಚಿತ್ತಂ ಘ್ರಾಣಗುದಸ್ತಥಾ ।
ಏತೇಷಾಂ ಮಿಶ್ರಿತಂ ಷಟ್ಕಂ ಮೂರ್ತಿಬ್ರಹ್ಮೇತಿ ಕಥ್ಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೧೯ ॥

ಹೀಂಗೆಂದು ಸದ್ಗುರುಸ್ವಾಮಿ ಆ ಷಡುಸ್ಥಲಬ್ರಹ್ಮದಲ್ಲಿ ಮೂವತ್ತಾರು ತತ್ವಂಗಳುತ್ಪತ್ಯವ ನಿರೂಪಿಸಲು ಪರಮಹರುಷಿತನಾಗಿ, ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡುಸ್ಥಲಬ್ರಹ್ಮದಲ್ಲಿ ಮೂವತ್ತಾರುತತ್ವಂಗಳುತ್ಪತ್ಯವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಲು ಮಹಾನುಭಾವಸುಖಿಯಾದೆನು. ಇನ್ನು ಷಡುಶಕ್ತಿ ಷಡಂಗಗಳುತ್ಪತ್ಯವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೨೦

ನಿಃಶಬ್ದವೆಂಬ ಪರಬ್ರಹ್ಮದ ಚಿಂತಾಶಕ್ತಿಯ
ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿದಳು.
ಆ ಚಿತ್‌ಶಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿ ಹುಟ್ಟಿದಳು.
ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿ ಹುಟ್ಟಿದಳು.
ಆ ಆದಿಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಹುಟ್ಟಿದಳು.
ಆ ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿ ಹುಟ್ಟಿದಳು.
ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಹುಟ್ಟಿದಳು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಚಿಂತಾಶಕ್ತಿಸಹಸ್ರಾಂಶೇ ಚಿಚ್ಛಕ್ತಿಶ್ಚ ಸಮುದ್ಭವಃ ।

ಚಿಚ್ಛಕ್ತಿಶ್ಚ ಸಹಸ್ರಾಂಶೇ ಪರಶಕ್ತಿಶ್ಚ ಸಮುದ್ಭವಃ ||
ಪರಶಕ್ತಿ ಸಹಸ್ರಾಂಶೇ ಆದಿಶಕ್ತಿ ಸಮುದ್ಭವಾಃ |
ಆದಿಶಕ್ತಿಶ್ಚ ಸಹಸ್ರಾಂಶೇ ಇಚ್ಛಾಶಕ್ತಿ ಸಮುದ್ಭವಃ |
ಇಚ್ಛಾಶಕ್ತಿ ಸಹಸ್ರಾಂಶೇ ಜ್ಞಾನಶಕ್ತಿಶ್ಚ ಸಮುದ್ಭವಃ |
ಏಕೈಕಂ ಪ್ರಣವಾಖ್ಯಾತಂ ಏಕೈಕಂ ಕುಸುಮಾಹಿತಂ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೬೨೦ ||

೬೨೧

ಚಿಚ್ಛಕ್ತಿ ಪರಾಶಕ್ತಿ ಆದಿಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ
ಈ ಷಡುಶಕ್ತಿಗಳು ಸರ್ವತತ್ವಕ್ಕೂ ಕಾರಣವಾಗಿಹವು ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
''ಚಿಚ್ಛಕ್ತಿಃ ಪರಾಶಕ್ತಿ ಆದಿಶಕ್ತಿಸ್ತಥೈವ ಚ |
ಇಚ್ಛಾಜ್ಞಾನಕ್ರಿಯಾಶಕ್ತಿ ಸರ್ವತತ್ವಂತು ಕಾರಣಂ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೬೨೧ ||

೬೨೨

ಇನ್ನು ಷಡಂಗ ಉತ್ಪತ್ಯವದೆಂತೆಂದಡೆ :
ಬ್ರಹ್ಮ ವಿಷ್ಣು ರುದ್ರ ಈಶ್ವರ ಶಿವ ಸದಾಶಿವ
ಈ ಆರು ಶಿವಾಂಗವು
ಚಿಚ್ಛಕ್ತಿಯೇ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ |
ಶಿವಂ ಶಿವಾಂಗಮಿತ್ಯೇತತ್ ಚಿಚ್ಛಕ್ತಿಶ್ಚೈವ ಕಾರಣಂ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೬೨೨ ||

೬೨೩

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಕ್ಷೇತ್ರಜ್ಞನು
ಈ ಆರು ಭೂತಾಂಗವು
ಪರಾಶಕ್ತಿಯೇ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಭೂಜಲಾಗ್ನಿಮರುದ್ವ್ಯೋಮ ಕ್ಷೇತ್ರಜ್ಞಾನಶ್ಚ ದೇವ ಹಿ |
ಭೂತಾಂಗಂ ಚ ಮಿದಂ ಪ್ರೋಕ್ತಂ ಪರಾಶಕ್ತಿಶ್ಚ ಕಾರಣಂ ||''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. || ೬೨೩ ||

೬೨೪

ಗಂಧ ರಸ ರೂಪ ಸ್ಪರ್ಶ ಶಬ್ದ ಕರ್ತನು
ಈ ಆರು ಯೋಗಾಂಗವು

ಆದಿಶಕ್ತಿಯೇ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಗಂಧಂ ಚ ರಸರೂಪಂ ಚ ಸ್ಪರ್ಶನಂ ಶಬ್ದಮೇವ ಹಿ ।
ಕರ್ತಾರಂ ಚೇತಿ ಯೋಗಾಂಗಂ ಆದಿಶಕ್ತಿಸ್ತು ಕಾರಣಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೨೪ ॥

೬೨೫

ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನ ಭಾವ
ಈ ಆರು ಕಾಮಾಂಗವು
ಇಚ್ಛಾಶಕ್ತಿಯೆ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಚಿತ್ತಂ ಬುದ್ಧಿರಹಂಕಾರಂ ಮನೋಜ್ಞಾನಂ ಚ ಭಾವಕಂ ।
ಷಡ್ಭಿಃ ಕಾಮಾಂಗದಂ ಪ್ರೋಕ್ತಂ ಇಚ್ಛಾಶಕ್ತಿಸ್ತು ಕಾರಣಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೨೫ ॥

೬೨೬

ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಚೇತನ
ಈ ಆರು ವಿದ್ಯಾಂಗವು
ಜ್ಞಾನಶಕ್ತಿಯೇ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಘ್ರಾಣಂ ಜಿಹ್ವಾ ಚ ನೇತ್ರಂ ಚ ತ್ವಕ್ ಶ್ರೋತ್ರಂ ಚೇತನಂ ವಿದುಃ ।
ಷಟ್ಕಂ ವಿದ್ಯಾಂಗಮೇವೇತಿ ಜ್ಞಾನಶಕ್ತಿಸ್ತು ಕಾರಣಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೨೬ ॥

೬೨೭

ಪಾಯು ಗುಹ್ಯ ಪಾದ ಪಾಣಿ ವಾಕ್ ಅಂತರ
ಈ ಆರು ಕರ್ಮಾಂಗವು
ಕ್ರಿಯಾಶಕ್ತಿಯೇ ಕಾರಣವಾಗಿ ಹುಟ್ಟಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಪಾಯುಶ್ಚ ಗುಹ್ಯಪಾದಾಶ್ಚ ಹಸ್ತಂ ವಾಗಂತರಂ ತಥಾ ।
ಷಟ್ಕರ್ಮಾಂಗಮಿದಂ ಪ್ರೋಕ್ತಂ ಕ್ರಿಯಾಶಕ್ತಿಸ್ತು ಕಾರಣಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೬೨೭ ॥

೬೨೮

ಜಗತ್ ಸೃಷ್ಟ್ಯಾರ್ಥಕಾರಣವಾಗಿ
ನಿಃಶಬ್ದವೆಂಬ ಪರಬ್ರಹ್ಮದ ಚಿಂತಾಶಕ್ತಿಯ ದೆಸೆಯಿಂದ

ಷಟ್‌ಶಕ್ತಿಗಳುತ್ಪತ್ಯವಾದವು.
ಆ ಷಟ್‌ಶಕ್ತಿಯೇ ಕಾರಣವಾಗಿ ಷಡಂಗಗಳು ಉತ್ಪತ್ಯವಾದವು.
ಆ ಷಡಂಗದಲ್ಲಿ ಲೋಕಾದಿಲೋಕ ಸಚರಾಚರಂಗಳ ಉತ್ಪತ್ಯ ಲಯವು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೬೨೮ ॥

ಹೀಂಗೆಂದು ಸದ್ಗುರುಸ್ವಾಮಿ ನಿರೂಪಿಸಲು ಕೇಳಿ ಪರಮಹರುಷಿತನಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡುಶಕ್ತಿ ಷಡಂಗಗಳುತ್ಪತ್ಯವನು ನಿಮ್ಮ ಮಹಾವಾಕ್ಯಂಗಳಿಂದ ಕೇಳಿ ಸ್ವಾನುಭಾವಸುಖಿಯಾದೆನು. ಇನ್ನು ನಿರಾಳ ದಶಚಕ್ರಂಗಳ ಭೇದವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೨೯

ಶಿವತತ್ವದ ಪೃಥ್ವಿಯೆಂದು, ಶಿವತತ್ವದ ಅಪ್ಪುವೆಂದು,
ಶಿವತತ್ವದ ತೇಜವೆಂದು, ಶಿವತತ್ವದ ವಾಯುವೆಂದು,
ಶಿವತತ್ವದ ಆಕಾಶವೆಂದು, ಶಿವತತ್ವದ ಹೃದಯವೆಂದು,
ಆರು ಪ್ರಕಾರವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೨೯ ॥

೬೩೦

ಆ ಶಿವತತ್ವದ ಪೃಥ್ವಿಯ ಮೇಲೆ ನಿರಾಳ ಆಧಾರಚಕ್ರ.
ಅಲ್ಲಿಯ ಪದ್ಮ ಐನೂರುನಾಲ್ವತ್ತುದಳದ ಪದ್ಮ,
ಆ ಪದ್ಮಕ್ಕೆ ವರ್ಣವಿಲ್ಲ.
ಅಲ್ಲಿಯ ಅಕ್ಷರ ಐನೂರು ನಾಲ್ವತಕ್ಷರ ;
ಆ ಅಕ್ಷರಕ್ಕೆ ರೂಪಿಲ್ಲ.
ಅಲ್ಲಿಯ ಶಕ್ತಿ ನಿರಾಳರುದ್ರಶಕ್ತಿ ;
ನಿರಾಳಬ್ರಹ್ಮವೆ ಅಧಿದೇವತೆ.
ಅಲ್ಲಿಯ ನಾದ ಅಕಾರನಾದ.
ಅಲ್ಲಿಯ ಬೀಜಾಕ್ಷರ ಅಕಾರ ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೬೩೦ ॥

೬೩೧

ಶಿವತತ್ವದ ಅಪ್ಪುವಿನ ಮೇಲೆ ನಿರಾಳ ಸ್ವಾಧಿಷ್ಠಾನಚಕ್ರ,
ಅಲ್ಲಿಯ ಪದ್ಮ ನಾನೂರು ಐವತ್ತುದಳದ ಪದ್ಮ ;
ಆ ಪದ್ಮವು ಉಪಮೆ ಇಲ್ಲದ ವರ್ಣ.
ಅಲ್ಲಿಯ ಅಕ್ಷರ ನಾನೂರ ಐವತಕ್ಷರ ;

ಆ ಅಕ್ಷರ ನಿರಾಕಾರವಾಗಿಹುದು.
ಅಲ್ಲಿಯ ಶಕ್ತಿ ನಿರಾಳ ಈಶ್ವರಶಕ್ತಿ.
ನಿತ್ಯಾನಂದಬ್ರಹ್ಮವೆ ಅಧಿದೇವತೆ.
ಅಲ್ಲಿಯ ನಾದ ಪ್ರಣವನಾದ.
ಅಲ್ಲಿಯ ಬೀಜಾಕ್ಷರ ಉಕಾರ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೧ ॥

೬೩೨

ಶಿವತತ್ವದ ತೇಜದ ಮೇಲೆ ನಿರಾಳ ಮಣಿಪೂರ ಚಕ್ರ.
ಅಲ್ಲಿಯ ಪದ್ಮ ಮುನ್ನೂರರುವತ್ತು ದಳದ ಪದ್ಮ ;
ಆ ಪದ್ಮದ ವರ್ಣ ಉಪಮಾತೀತವು.
ಅಲ್ಲಿಯ ಅಕ್ಷರ ಮುನ್ನೂರರುವತಕ್ಷರ ;
ಆ ಅಕ್ಷರ ರೂಪಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಳಶಿವಶಕ್ತಿ.
ನಿರಂಜನಬ್ರಹ್ಮವೇ ಅಧಿದೇವತೆ.
ಅಲ್ಲಿಯ ನಾದ ಬ್ರಹ್ಮನಾದ.
ಅಲ್ಲಿಯ ಬೀಜಾಕ್ಷರ ಮಕಾರ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೨ ॥

೬೩೩

ಶಿವತತ್ವದ ವಾಯುವಿನ ಮೇಲೆ ನಿರಾಳ ಅನಾಹತಚಕ್ರ.
ಅಲ್ಲಿಯ ಪದ್ಮ ಇನ್ನೂರಾ ಎಪ್ಪತ್ತು ದಳದ ಪದ್ಮ
ಆ ಪದ್ಮ ವರ್ಣವಿಲ್ಲದೆ ಅಪ್ರಮಾಣ ಅಗೋಚರವಾಗಿಹುದು.
ಅಲ್ಲಿಯ ಅಕ್ಷರ ಇನ್ನೂರಾ ಎಪ್ಪತಕ್ಷರ ;
ಆ ಅಕ್ಷರ ನಿರೂಪಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಳ ಉಪಮಾಶಕ್ತಿ.
ಅಮಲಾನಂದಬ್ರಹ್ಮವೇ ಅಧಿದೇವತೆ.
ಅಲ್ಲಿಯ ನಾದ ಸುನಾದ.
ಅಲ್ಲಿಯ ಬೀಜಾಕ್ಷರ ಆದಿಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೩ ॥

೬೩೪

ಶಿವತತ್ತ್ವದ ಆಕಾಶದ ಮೇಲೆ ನಿರಾಳ ವಿಶುದ್ಧಿಚಕ್ರ.
ಅಲ್ಲಿಯ ಪದ್ಮ ನೂರಯೆಂಬತ್ತು ದಳದಪದ್ಮ
ಆ ಪದ್ಮ ವರ್ಣಾತೀತವಾಗಿಹುದು.

ಅಲ್ಲಿಯ ಅಕ್ಷರ ನೂರಯೆಂಬತ್ತಕ್ಷರ ;
ಆ ಅಕ್ಷರ ರೂಪಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಳಮನೋನ್ಮನಿಶಕ್ತಿ,
ಸಕಲನಿಃಕಲಾತೀತಬ್ರಹ್ಮವೇ ಅಧಿದೇವತೆ.
ಅಲ್ಲಿಯ ನಾದ ಮಹಾನಾದ.
ಅಲ್ಲಿಯ ಬೀಜಾಕ್ಷರ ಅನಾದಿಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೪ ॥

೬೩೫

ಶಿವತತ್ತ್ವದ ಹೃದಯದ ಮೇಲೆ ನಿರಾಳ ಆಜ್ಞಾಚಕ್ರ.
ಅಲ್ಲಿಯ ಪದ್ಮ ಅನೇಕ ಕೋಟಿದಳಪದ್ಮ,
ಆ ಪದ್ಮದ ವರ್ಣ ಅಂಥಾದಿಂಥಾದೆಂದು
ಉಪಮೆ ಇಲ್ಲದ ಉಪಮಾತೀತವಾಗಿಹುದು.
ಅಲ್ಲಿಯ ಅಕ್ಷರ ಅನೇಕ ಕೋಟಿ ಅಕ್ಷರ ;
ಆ ಅಕ್ಷರ ಸರ್ವಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಳಪ್ರಣವವೆಂಬ ಮಹಾಶಕ್ತಿ,
ನಿರಾಳಾತೀತವೆಂಬ ಮಹಾಘನಲಿಂಗವೆ ಅಧಿದೇವತೆ.
ಅಲ್ಲಿಯ ನಾದ ಪರಮಾನಂದವೆಂಬ ಮಹಾನಾದ.
ಅಲ್ಲಿ ಬೀಜಾಕ್ಷರ ಕಲಾಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೫ ॥

೬೩೬

ನಿರಾಳ ಷಡುಚಕ್ರಂಗಳ ಮೇಲೆ ನಾಲ್ಕು ಚಕ್ರಂಗಳುಂಟು.
ಆ ಚಕ್ರಂಗಳು ಗೋಪ್ಯಕ್ಕೂ ಅತ್ಯಂತ ಗೋಪ್ಯ,
ಸೂಕ್ಷ್ಮಕ್ಕೂ ಅತ್ಯಂತ ಸೂಕ್ಷ್ಮ,
ಶೂನ್ಯಕ್ಕೂ ಅತ್ಯಂತ ಶೂನ್ಯ,
ಅಮಲಕ್ಕೂ ಅಮಲಾತೀತವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೩೬ ॥

೬೩೭

ಇನ್ನು ನಿರಾಳ ಷಡುಚಕ್ರಂಗಳ ಮೇಲಣ
ನಾಲ್ಕು ಚಕ್ರಂಗಳ ಕ್ರಮವೆಂತೆಂದಡೆ :
ನಿರ್ವಾಣಲಿಂಗಚಕ್ರವೆಂದು, ಮಹಾನಿರ್ವಾಣಲಿಂಗಚಕ್ರವೆಂದು,
ಅತಿಮಹಾನಿರ್ವಾಣಘನಲಿಂಗಚಕ್ರವೆಂದು,
ಅತಿಮಹಾತೀತ ಮಹಾನಿರ್ವಾಣ ಘನಲಿಂಗಚಕ್ರವೆಂದು.

ನಾಲ್ಕು ಚಕ್ರಕ್ಕೂ ಪದ್ಮವಿಲ್ಲ ವರ್ಣವಿಲ್ಲ
ಅಕ್ಷರಂಗಳಿಲ್ಲ ಶಕ್ತಿಯಿಲ್ಲ ಅಧಿದೇವತೆ ಇಲ್ಲ ನಾದವಿಲ್ಲ
ಬೀಜಾಕ್ಷರವಿಲ್ಲದೆ ಬೆಳಗುತ್ತಿಹುದು.
ಆ ಚಕ್ರಂಗಳು ವರ್ಣಕ್ಕೂ ವರ್ಣಾತೀತವಾಗಿಹುದು,
ಉಪಮೆಗೆ ಉಪಮಾತೀತವಾಗಿಹುದು
ಚಕ್ರಕ್ಕೂ ಚಕ್ರಾತೀತವಾಗಿಹುದೆಂದು
ಚಕ್ರಾತೀತಾಗಮದಲ್ಲಿ ಪ್ರಸಿದ್ಧವಾಗಿ ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೩೭ ||

ಹೀಂಗೆಂದು ಸದ್ಗುರುಸ್ವಾಮಿ ನಿರಾಳದಶಚಕ್ರಂಗಳ ಭೇದವ ನಿರೂಪಿಸಲು ಅತ್ಯಂತ ಪರಮ ಹರುಷಿತನಾಗಿ, ಎಲೆ ಸದ್ಗುರುಸ್ವಾಮಿ ನಿರಾಳದಶಚಕ್ರಂಗಳ ಭೇದವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ, ನಿಮ್ಮ ಸ್ವಾನುಭಾವ ದೃಕ್ಕಿನಿಂದ ತೋರಲು ಕಂಡು ಸುಖಿಯಾದೆನು. ಇನ್ನು ನಿರಾಮಯ ಷಡುಸ್ಥಲ ಬ್ರಹ್ಮದ ಭೇದವನು ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೩೮

ನಿರಾಮಯ ಭಕ್ತ, ನಿರಾಮಯ ಮಹೇಶ್ವರ,
ನಿರಾಮಯ ಪ್ರಸಾದಿ, ನಿರಾಮಯ ಪ್ರಾಣಲಿಂಗಿ,
ನಿರಾಮಯ ಶರಣ, ನಿರಾಮಯ ಐಕ್ಯನೆಂದು
ಆರು ಪ್ರಕಾರವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೩೮ ||

೬೩೯

ಇನ್ನು ನಿರಾಮಯ ಭಕ್ತಂಗೆ ನಿರಾಮಯವೇ ಅಂಗ.
ನಿರಾಮಯವೆ ಹಸ್ತ, ನಿರಾಮಯವೇ ಆಚಾರಲಿಂಗ.
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವ ಸಮರ್ಪಣವ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೩೯ ||

೬೪೦

ನಿರಾಮಯ ಮಹೇಶ್ವರಂಗೆ ನಿರಾಮಯವೆ ಅಂಗ,
ನಿರಾಮಯವೆ ಹಸ್ತ, ನಿರಾಮಯವೆ ಗುರುಲಿಂಗ,
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವ ಸಮರ್ಪಣವ ಮಾಡಿ,

ತೃಪ್ತಿಯ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೪೦ ॥

೬೪೧

ನಿರಾಮಯ ಪ್ರಸಾದಿಗೆ ನಿರಾಮಯವೆ ಅಂಗ,
ನಿರಾಮಯವೆ ಹಸ್ತ, ನಿರಾಮಯವೆ ಶಿವಲಿಂಗ.
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವ ಸಮರ್ಪಣವ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೪೧ ॥

೬೪೨

ನಿರಾಮಯ ಪ್ರಾಣಲಿಂಗಿಗೆ ನಿರಾಮಯವೆ ಅಂಗ,
ನಿರಾಮಯವೆ ಹಸ್ತ, ನಿರಾಮಯವೆ ಜಂಗಮಲಿಂಗ.
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವ ಸಮರ್ಪಣವ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೪೨ ॥

೬೪೩

ನಿರಾಮಯ ಶರಣಂಗೆ ನಿರಾಮಯವೆ ಅಂಗ,
ನಿರಾಮಯವೆ ಹಸ್ತ, ನಿರಾಮಯವೆ ಪ್ರಸಾದಲಿಂಗ,
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವ ಸಮರ್ಪಣವ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೪೩ ॥

೬೪೪

ನಿರಾಮಯ ಐಕ್ಯಂಗೆ ನಿರಾಮಯವೆ ಅಂಗ,
ನಿರಾಮಯವೆ ಹಸ್ತ, ನಿರಾಮಯವೆ ಮಹಾಲಿಂಗ,
ನಿರಾಮಯವೆಂಬ ಮುಖದಲ್ಲಿ
ನಿರಾಮಯಾನಂದವೆಂಬ ಸುಖವನು ಸಮರ್ಪಣವ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ.
ಭೋಗಿಸಿ ನಿರಾಮಯಾತೀತವೆಂಬ ನಿರ್ವಯಲನೈದಿದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೪೪ ॥

ಹೀಂಗೆಂದು ಸದ್ಗುರುಸ್ವಾಮಿ ನಿರಾಮಯ ಷಡುಸ್ಥಲಬ್ರಹ್ಮದ ಅರ್ಪಿತವಧಾನದ ಭೇದವನು ನಿರೂಪಿಸಲು ಕೇಳಿ ತನ್ನ ಸಮ್ಯಜ್ಞಾನ ದೃಕ್ಕಿನಿಂದ ತಿಳಿದು ನೋಡಿ, ಆ ನಿರಾಮಯ ಷಡುಸ್ಥಲಬ್ರಹ್ಮವೇ ತಾನೆಂದರಿದು ಪರಮುಹರುಷಿತನಾಗಿ, ಮತ್ತಂ, ಎಲೆ ಸದ್ಗುರುಸ್ವಾಮಿ ನಿರಾಮಯ ಷಡುಸ್ಥಲಬ್ರಹ್ಮದ ಅರ್ಪಿತವಧಾನದ ಭೇದವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಿ ನಿಮ್ಮ ಜ್ಞಾನದೃಕ್ಕಿನಿಂದ ತೋರಲು ಕಂಡು ಪರಮಸುಖಿಯಾದೆನು. ಇನ್ನು ನಿರಂಜನ ದಶ ಚಕ್ರಂಗಳ ಭೇದವ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೪೫

ಪರತತ್ತ್ವದ ಪೃಥ್ವಿಯೆಂದು, ಪರತತ್ತ್ವದ ಅಪ್ಪುವೆಂದು,
ಪರತತ್ತ್ವದ ತೇಜವೆಂದು, ಪರತತ್ತ್ವದ ವಾಯುವೆಂದು,
ಪರತತ್ತ್ವದ ಆಕಾಶವೆಂದು, ಪರತತ್ತ್ವದ ಹೃದಯವೆಂದು
ಆರು ಪ್ರಕಾರವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೪೫ ||

೬೪೬

ಆ ಪರತತ್ತ್ವದ ಪೃಥ್ವಿಯ ಮೇಲೆ ನಿರಂಜನ ಆಧಾರಚಕ್ರ.
ಅಲ್ಲಿಯ ಪದ್ಮ ಐನೂರುನಾಲ್ವತ್ತುದಳದಪದ್ಮ
ಆ ಪದ್ಮದ ವರ್ಣ ಅರವತ್ತುಸಾವಿರದಾರುನೂರು ಕೋಟಿ
ಸೂರ್ಯಚಂದ್ರಾಗ್ನಿಪ್ರಕಾಶದ ವರ್ಣ.
ಅಲ್ಲಿಯ ಅಕ್ಷರ ಐನೂರು ನಾಲ್ವತ್ತಕ್ಷರ ;
ಆ ಅಕ್ಷರ ವಾಚಾತೀತವಾಗಿಹುದು.
ಅಲ್ಲಿಯ ಶಕ್ತಿ ನಿಃಕಲಶಕ್ತಿ ಅಲ್ಲಿಯ ನಾದ ಚಿನ್ನಾದ.
ಅಚಲ ಬ್ರಹ್ಮವೆ ಅಧಿದೇವತೆ.
ಅಲ್ಲಿಯ ಬೀಜಾಕ್ಷರ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರ ಪ್ರಣವ ನೋಡಾ.
ಅಪ್ರಮಾಣಕೂಡಲಸಂಗಮದೇವಾ. || ೬೪೬ ||

೬೪೭

ಪರತತ್ತ್ವದ ಅಪ್ಪುವಿನ ಮೇಲೆ ನಿರಂಜನ ಸ್ವಾಧಿಷ್ಠಾನಚಕ್ರ.
ಅಲ್ಲಿಯ ಪದ್ಮ ನಾನೂರಐವತ್ತುದಳದಪದ್ಮ
ಆ ಪದ್ಮದ ವರ್ಣ ಎಪ್ಪತ್ತುಸಾವಿರದಾರುನೂರುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶದ ವರ್ಣ.
ಅಲ್ಲಿಯ ಅಕ್ಷರ ನಾನೂರಐವತ್ತಕ್ಷರ,

ಆ ಅಕ್ಷರ ಮನಾತೀತವಾಗಿಹುದು.
ಅಲ್ಲಿಯ ಶಕ್ತಿ ಆನಂದಶಕ್ತಿ, ಅಚಲಾನಂದ ಬ್ರಹ್ಮವೇ ಅಧಿದೇವತೆ.
ಅಲ್ಲಿಯ ನಾದ ಪರನಾದ.
ಅಲ್ಲಿಯ ಬೀಜಾಕ್ಷರ ಪರಬ್ರಹ್ಮಸ್ವರೂಪವಾಗಿಹ ಪರಮೋಂಕಾರ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೪೭ ||

೬೪೮

ಪರತತ್ತ್ವದ ತೇಜದ ಮೇಲೆ ನಿರಂಜನ ಮಣಿಪೂರಕಚಕ್ರ.
ಅಲ್ಲಿಯ ಪದ್ಮ ಮೂರುನೂರರುವತ್ತುದಳದಪದ್ಮ.
ಆ ಪದ್ಮದ ವರ್ಣ ಎಂಬತ್ತುಸಾವಿರದಾರುನೂರುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶದ ವರ್ಣ.
ಅಲ್ಲಿಯ ಅಕ್ಷರ ಮೂರುನೂರರುವತ್ತಕ್ಷರ ;
ಆ ಅಕ್ಷರ ವರ್ಣಾತೀತವಾಗಿಹುದು.
ಅಲ್ಲಿಯ ಶಕ್ತಿ ನಿತ್ಯಾನಂದಶಕ್ತಿ ; ವಿಮಲಬ್ರಹ್ಮವೆ ಅಧಿದೇವತೆ.
ಅಲ್ಲಿಯ ನಾದ ಅಮಲಾನಂದವೆಂಬ ಮಹಾನಾದ.
ಅಲ್ಲಿಯ ಬೀಜಾಕ್ಷರ ಅಖಂಡಮಹಾಜ್ಯೋತಿಪ್ರಣಮ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೪೮ ||

೬೪೯

ಪರತತ್ತ್ವದ ವಾಯುವಿನ ಮೇಲೆ ನಿರಂಜನ ಅನಾಹತಚಕ್ರ.
ಅಲ್ಲಿಯ ಪದ್ಮ ಇನ್ನೂರ ಎಪ್ಪತ್ತುದಳದಪದ್ಮ.
ಆ ಪದ್ಮದ ವರ್ಣ ತೊಂಬತ್ತುಸಾವಿರದಾರುನೂರುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶದ ವರ್ಣ.
ಅಲ್ಲಿಯ ಅಕ್ಷರ ಇನ್ನೂರ ಎಪ್ಪತ್ತಕ್ಷರ :
ಆ ಅಕ್ಷರ ತತ್ತ್ವಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಮಯಾನಂದವೆಂಬ ಮಹಾಶಕ್ತಿ.
ವಿಮಲಾನಂದಬ್ರಹ್ಮವೆ ಅಧಿದೇವತೆ.
ಅಲ್ಲಿಯ ನಾದ ನಿರಾಳನಾದ.
ಅಲ್ಲಿಯ ಬೀಜಾಕ್ಷರ ಕಲಾಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೪೯ ||

೬೫೦

ಪರತತ್ತ್ವದ ಆಕಾಶದ ಮೇಲೆ ನಿರಂಜನ ವಿಶುದ್ಧಿಚಕ್ರ.
ಅಲ್ಲಿಯ ಪದ್ಮ ನೂರಾ ಎಂಬತ್ತುದಳದಪದ್ಮ.
ಆ ಪದ್ಮದ ವರ್ಣ ನೂರುಸಾವಿರದಾರುನೂರು ಕೋಟಿ

ಸೂರ್ಯಚಂದ್ರಾಗ್ನಿ ಪ್ರಕಾಶದ ವರ್ಣ.
ಅಲ್ಲಿಯ ಅಕ್ಷರ ನೂರಾ ಎಂಬತ್ತಕ್ಷರ ;
ಆ ಅಕ್ಷರ ಜ್ಞಾನಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಮಯವೆಂಬ ಮಹಾಶಕ್ತಿ
ಆನಂದಬ್ರಹ್ಮವೆ ಅಧಿದೇವತೆ.
ಅಲ್ಲಿಯ ನಾದ ನಿರಾಳಾನಂದವೆಂಬ ಮಹಾನಾದ.
ಅಲ್ಲಿಯ ಬೀಜಾಕ್ಷರ ಅವಾಚ್ಯಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೫೦ ||

೬೫೧

ಪರತತ್ತ್ವದ ಹೃದಯದ ಮೇಲೆ ನಿರಂಜನ ಆಜ್ಞಾಚಕ್ರ.
ಅಲ್ಲಿಯ ಪದ್ಮ ವಿಶ್ವತೋದಳಪದ್ಮ.
ಆ ಪದ್ಮದ ವರ್ಣ ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶದ ವರ್ಣ.
ಅಲ್ಲಿಯ ಅಕ್ಷರಂಗಳು ವಿಶ್ವತೋ ಅಕ್ಷರಂಗಳು.
ಆ ಅಕ್ಷರಂಗಳು ವಿಶ್ವಾತೀತವಾಗಿಹುದು.
ಅಲ್ಲಿಯ ಶಕ್ತಿ ನಿರಾಮಯಾನಂದಾತೀತವೆಂಬ ಮಹಾಶಕ್ತಿ
ನಿರಂಜನಾತೀತವೆಂಬ ಮಹಾಘನಲಿಂಗವೆ ಅಧಿದೇವತೆ.
ಅಲ್ಲಿಯ ನಾದ ಮಹಾಗುಹ್ಯನಾದ.
ಅಲ್ಲಿಯ ಬೀಜಾಕ್ಷರ ನಿರಂಜನಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೫೧ ||

೬೫೨

ಇನ್ನು ನಿರಂಜನ ಷಡುಚಕ್ರಂಗಳ ಮೇಲೆ ನಾಲ್ಕು ಚಕ್ರಂಗಳುಂಟು.
ಅದೆಂತೆಂದಡೆ :
ರಹಸ್ಯಕ್ಕೂ ಅತ್ಯಂತ ರಹಸ್ಯವಾಗಿಹುದು.
ಸೂಕ್ಷ್ಮಕ್ಕೂ ಅತ್ಯಂತ ಸೂಕ್ಷ್ಮವಾಗಿಹುದು.
ಶೂನ್ಯಕ್ಕೂ ಅತ್ಯಂತ ಶೂನ್ಯವಾಗಿಹುದು.
ಉಪಮೆಗೂ ಉಪಮಾತೀತವಾಗಿಹುದುಯೆಂದು
ಚಕ್ರಾತೀತಾಗಮದಲ್ಲಿ ಪ್ರಸಿದ್ಧವಾಗಿ ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೫೨ ||

೬೫೩

ಇನ್ನು ನಿರಂಜನಷಡುಚಕ್ರಂಗಳ ಮೇಲಣ ನಾಲ್ಕು ಚಕ್ರಂಗಳ
ವಿವರವೆಂತೆಂದಡೆ :
ಸ್ವಯಾನಂದಚಕ್ರವೆಂದು, ಸ್ವಯಾನಂದ ಘನಚಕ್ರವೆಂದು,
ಸ್ವಯಾನಂದ ಮಹಾಘನಚಕ್ರವೆಂದು,

ಸ್ವಯಾನಂದ ಮಹಾಘನಾತೀತಚಕ್ರವೆಂದು ಈ ನಾಲ್ಕು ಚಕ್ರಂಗಳು
ಅನಂತಕೋಟಿ ಪದ್ಮವನೊಳಕೊಂಡು ಪದ್ಮವಿಲ್ಲದಿಹುದು.
ಅನಂತಕೋಟಿ ವರ್ಣಗಳನೊಳಕೊಂಡು ವರ್ಣವಿಲ್ಲದಿಹುದು.
ಅನಂತಕೋಟಿ ಅಕ್ಷರಗಳನೊಳಕೊಂಡು ಅಕ್ಷರವಿಲ್ಲದಿಹುದು.
ಅನಂತಕೋಟಿ ಶಕ್ತಿಗಳನೊಳಕೊಂಡು ಶಕ್ತಿಯಿಲ್ಲದಿಹುದು.
ಅನಂತಕೋಟಿ ಅಧಿದೇವತೆಗಳನೊಳಕೊಂಡು ಅಧಿದೇವತೆಯಿಲ್ಲದಿಹುದು.
ಅನಂತಕೋಟಿ ನಾದವನೊಳಕೊಂಡು ನಾದವಿಲ್ಲದಿಹುದು.
ಅನಂತಕೋಟಿ ಬೀಜಾಕ್ಷರವನೊಳಕೊಂಡು ಬೀಜವಿಲ್ಲದೆ ಬೆಳಗುತ್ತಿಹುದು.
ಆ ಚಕ್ರಂಗಳು ವಾಚ್ಯಕ್ಕೂ ವಾಚ್ಯಾತೀತವಾಗಿಹುದು.
ಮನಕ್ಕೂ ಮನಾತೀತವಾಗಿಹುದು, ವರ್ಣಕ್ಕೂ ವರ್ಣಾತೀತವಾಗಿಹುದು,
ತತ್ತ್ವಕ್ಕೂ ತತ್ತ್ವಾತೀತವಾಗಿಹುದು, ಜ್ಞಾನಕ್ಕೂ ಜ್ಞಾನಾತೀತ ವಾಗಿಹುದು,
ಉಪಮೆಗೂ ಉಪಮಾತೀತವಾಗಿಹುದು, ಚಕ್ರಕ್ಕೂ ಚಕ್ರಾತೀತವಾಗಿಹುದೆಂದು
ಅಸಿಪದಾತೀತಾಗಮದಲ್ಲಿ ಪ್ರಸಿದ್ಧವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೩ ॥

ಹೀಂಗೆಂದು ಸದ್ಗುರುಸ್ವಾಮಿ ನಿರಂಜನದಶಚಕ್ರಂಗಳ ಭೇದವ ನಿರೂಪಿಸಲು ಸುಚಿತ್ತದಿಂದ ಕೇಳಿ ನಿರಂಜನ ದಶಚಕ್ರಸಂಗಿಯಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ನಿರಂಜನ ದಶಚಕ್ರಂಗಳ ಭೇದವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ ನಿಮ್ಮ ಮಹಾದೃಕ್ಕಿನಿಂದ ತೋರಲು ಕಂಡು ಮಹಾನುಭಾವ ಸುಖಿಯಾದೆನು. ಇನ್ನು ನಿರಂಜನಾತೀತ ಷಡುಸ್ಥಲಬ್ರಹ್ಮದ ಭೇದವನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರ ದೆಂತೆಂದಡೆ :

೬೫೪

ನಿರಂಜನಾತೀತ ಭಕ್ತ, ನಿರಂಜನಾತೀತ ಮಹೇಶ್ವರ,
ನಿರಂಜನಾತೀತ ಪ್ರಸಾದಿ, ನಿರಂಜನಾತೀತ ಪ್ರಾಣಲಿಂಗಿ,
ನಿರಂಜನಾತೀತ ಶರಣ, ನಿರಂಜನಾತೀತ ಐಕ್ಯ.
ಈ ನಿರಂಜನಾತೀತ ಷಡುಸ್ಥಲಬ್ರಹ್ಮವು
ಅಖಂಡಿತ ಅಪ್ರಮಾಣ ಅಗೋಚರ ಅಪ್ರಮೇಯ ಅಗಮ್ಯ
ವಾಚಾತೀತಮಗೋಚರಕತ್ತತ್ತ್ವವಾಗಿಹುದು
ನಿರಂಜನಾತೀತ ಷಡುಸ್ಥಲಬ್ರಹ್ಮ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೪ ॥

೬೫೫

ಇನ್ನು ನಿರಂಜನಾತೀತ ಷಟ್‌ಸ್ಥಲ ಬ್ರಹ್ಮದ
ಅರ್ಪಿತಾವಧಾನದ ಭೇದವದೆಂತೆಂದಡೆ :

ನಿರಂಜನಾತೀತ ಭಕ್ತಂಗೆ ನಿರಂಜನಾತೀತವೇ ಅಂಗ,
ನಿರಂಜನಾತೀತವೇ ಹಸ್ತ, ನಿರಂಜನಾತೀತವೇ ಆಚಾರಲಿಂಗ,
ನಿರಂಜನಾತೀತವೆಂಬ ಮುಖದಲ್ಲಿ,
ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೫ ॥

೬೫೬

ನಿರಂಜನಾತೀತ ಮಹೇಶ್ವರಂಗೆ ನಿರಂಜನಾತೀತವೇ ಅಂಗ,
ನಿರಂಜನಾತೀತವೆ ಹಸ್ತ, ನಿರಂಜನಾತೀತವೆ ಗುರುಲಿಂಗ.
ನಿರಂಜನಾತೀತವೆಂಬ ಮುಖದಲ್ಲಿ,
ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೬ ॥

೬೫೭

ನಿರಂಜನಾತೀತಪ್ರಸಾದಿಗೆ ನಿರಂಜನಾತೀತವೇ ಅಂಗ,
ನಿರಂಜನಾತೀತವೆ ಹಸ್ತ, ನಿರಂಜನಾತೀತವೆ ಶಿವಲಿಂಗ.
ನಿರಂಜನಾತೀತವೆಂಬ ಮುಖದಲ್ಲಿ
ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೭ ॥

೬೫೮

ನಿರಂಜನಾತೀತಪ್ರಾಣಲಿಂಗಿಗೆ ನಿರಂಜನಾತೀತವೇ ಅಂಗ,
ನಿರಂಜನಾತೀತವೇ ಹಸ್ತ, ನಿರಂಜನಾತೀತವೇ ಜಂಗಮಲಿಂಗ,
ನಿರಂಜನಾತೀತವೆಂಬ ಮುಖದಲ್ಲಿ,
ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೬೫೮ ॥

೬೫೯

ನಿರಂಜನಾತೀತಶರಣಂಗೆ ನಿರಂಜನಾತೀತವೆ ಅಂಗ,
ನಿರಂಜನಾತೀತವೆ ಹಸ್ತ, ನಿರಂಜನಾತೀತವೆ ಪ್ರಸಾದಲಿಂಗ.
ನಿರಂಜನಾತೀತವೆಂಬ ಮುಖದಲ್ಲಿ

ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೫೯ ॥

೬೬೦

ನಿರಂಜನಾತೀತಐಕ್ಯಂಗೆ ನಿರಂಜನಾತೀತವೇ ಅಂಗ,
ನಿರಂಜನಾತೀತವೇ ಹಸ್ತ, ನಿರಂಜನಾತೀತವೆ ಮಹಾಲಿಂಗ.
ನಿರಂಜನಾತೀತವೆಂಬ ಮುಖದಲ್ಲಿ
ನಿರಂಜನಾತೀತಾನಂದವೆಂಬ ಸುಖವ ಸಮರ್ಪಣಂ ಮಾಡಿ,
ತೃಪ್ತಿಯನೆ ಭೋಗಿಸುವನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬೦ ॥

೬೬೧

ನಿರಂಜನಾತೀತಷಟ್‌ಸ್ಥಲಬ್ರಹ್ಮ ಅಂಗವಾಗಿ
ಆ ನಿರಂಜನಾತೀತ ಷಟ್‌ಸ್ಥಲಬ್ರಹ್ಮವನೊಡಗೂಡಿದ ಮಹಾಶರಣಂಗೆ
ನಮೋ ನಮೋ ಎಂದು ಬದುಕಿದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬೧ ॥

ಚಕ್ರಾತೀತಾಗಮ ಅಸಿಪದಾತೀತಾಗಮದಲ್ಲಿ ನಿರಾಳಚಕ್ರ, ನಿರಾಮಯಷಡು ಸ್ಥಲಬ್ರಹ್ಮ ನಿರಂಜನದಶಚಕ್ರ, ನಿರಂಜನಾತೀತಷಡುಸ್ಥಲಬ್ರಹ್ಮವನು ಪಾರ್ವತೀ ದೇವಿಯರಿಗೆ ಶಿವನು ನಿರೂಪಿಸಿದರೆಂದು ಆ ಸದ್ಗುರುಸ್ವಾಮಿ ಬೋಧಿಸಲು, ಆ ಶಿಷ್ಯನು ಪರಮಹರುಷಿತನಾಗಿ, ಎಲೆ ಸದ್ಗುರುಸ್ವಾಮಿ ನಿರಂಜನಾತೀತಷಡುಸ್ಥಲ ಬ್ರಹ್ಮದ ಅರ್ಪಿತವಧಾನದ ಭೇದವನು ನಿಮ್ಮ ಮಹಾವಾಕ್ಯಗಳಿಂದ ನಿರೂಪಿಸಿ, ನಿಮ್ಮ ಸಮ್ಯಜ್ಞಾನದೃಕ್ಕಿನಿಂದ ತೋರಲು ಕಂಡು ಪರಮಸುಖಿಯಾದೆನು. ಇನ್ನು ಅವಸ್ಥೆಗಳ ದರ್ಶನದ ಭೇದವನು ನಿರೂಪಿಸೆಂದು ಬೆಸಗೊಳಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೬೨

ಪ್ರೇರಕಾವಸ್ಥೆ ಒಂದು, ಮಧ್ಯಾವಸ್ಥೆ ಐದು,
ಕೆಳಗಾದವಸ್ಥೆ ಐದು, ಮೇಲಾದವಸ್ಥೆ ಐದು,
ಕೇವಲಾವಸ್ಥೆ ಒಂದು, ಸಕಲಾವಸ್ಥೆ ಒಂದು, ಶುದ್ಧಾವಸ್ಥೆ ಒಂದು
ನಿರ್ಮಲಾವಸ್ಥೆ ಐದು–
ಈ ಇಪ್ಪತ್ತುನಾಲ್ಕು ಅವಸ್ಥೆಗಳ ದರ್ಶನದ ಭೇದವನು
ಶಿವಯೋಗಿಲಿಂಗಾನುಭಾವಿ ಬಲ್ಲನಲ್ಲದೆ
ಮಿಕ್ಕಿನ ವೇಷಧಾರಿಗಳವರೆತ್ತ ಬಲ್ಲರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೬೬೨ ॥

೬೬೩

ಇನ್ನು ಪ್ರೇರಕಾವಸ್ಥೆಯ ದರ್ಶನವದೆಂತೆಂದಡೆ :
ಶಿವತತ್ತ್ವವೈದು, ಕಲಾದಿಗಳೇಳು, ಕರಣ ನಾಲ್ಕು,
ಜ್ಞಾನೇಂದ್ರಿಯಂಗಳಲ್ಲಿ ಶ್ರೋತ್ರ ಒಂದು,
ಭೂತಂಗಳಲ್ಲಿ ಆಕಾಶ ಒಂದು,
ಈ ಹದಿನೆಂಟು ಕರಣಂಗಳೊಡನೆ ಕೂಡಿ,
ಶಬ್ದವ ಕೇಳುವ ಅವಸರ ಮತ್ತಂ ಉಂಟಾದ
ಕರಣಂಗಳ ಕಂಡು ಕೊಂಬುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೬೩ ||

೬೬೪

ಇನ್ನು ಮಧ್ಯಾವಸ್ಥೆಯ ದರ್ಶನವದೆಂತೆಂದಡೆ :
ಜಾಗ್ರತದಲ್ಲಿಯ ಅತೀತವಾವುದು ?
ಮುಂದೆ ಕಂಡವನ ಈಗ ಅರಿಯದಿಪ್ಪುದು ಜಾಗ್ರದಲ್ಲಿ ಅತೀತವು.
ಜಾಗ್ರದಲ್ಲಿಯ ತುರಿಯವಾವುದು ?
ಪುರುಷ ತತ್ತ್ವದೊಡನೆ ಪ್ರಾಣವಾಯು ಕೂಡಿಕೊಂಡು
ಇವನರಿಯದ ಹಾಂಗೆ ಉಸುರು ಬಿಡುವುದು ಜಾಗ್ರದಲ್ಲಿಯ ತುರೀಯ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೬೪ ||

೬೬೫

ಜಾಗ್ರದಲ್ಲಿಯ ಸುಷುಪ್ತಿಯಾವುದು ?
ಪುರುಷ ಪ್ರಾಣವಾಯು ಚಿತ್ತದೊಡನೆ ಕೂಡಿ
ಅವರ ಕಂಡ ಠಾವ ಹೇಳುವುದು ಜಾಗ್ರದಲ್ಲಿಯ ಸುಷುಪ್ತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೬೫ ||

೬೬೬

ಜಾಗ್ರದಲ್ಲಿಯ ಸ್ವಪ್ನವಾವುದು ?
ಶಬ್ದಾದಿಗಳೈದು, ಶ್ರೋತ್ರಾದಿಗಳೈದು, ವಚನಾದಿಗಳೈದು,
ವಾಗಾದಿಗಳೈದು, ಕರಣ ನಾಲ್ಕು, ಪುರುಷನೊಬ್ಬ,
ಇಂತೀ ಇಪ್ಪತ್ತೈದು ಕರಣಂಗಳೊಡನೆ ಕೂಡಿ
ಅವನನು ಅವನಕಂಡ ಠಾವನು ಹೇಳುವುದು ಜಾಗ್ರದಲ್ಲಿಯ ಸ್ವಪ್ನ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೫೬ ||

೬೬೭

ಜಾಗ್ರದಲ್ಲಿಯ ಜಾಗ್ರವಾವುದು ?
ಪುರುಷನೊಬ್ಬ, ವಾಯು ಹತ್ತು

ನಾಡಿ ನಾಲ್ಕು, ಶಬ್ದಾದಿಗಳೈದು, ವಚನಾದಿಗಳೈದು,
ಶ್ರೋತ್ರಾದಿಗಳೈದು, ವಾಗಾದಿಗಳೈದು–
ಈ ಮೂವತ್ತೈದು ಕಾರಣಂಗಳೊಡನೆ ಕೂಡಿ
ಇವನ ತಬ್ಬಿಕೊಳ್ಳುತ್ತ ಪ್ರಿಯವ ಮಾಡುವದು ಜಾಗ್ರದಲ್ಲಿಯ ಜಾಗ್ರ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬೭ ॥

೬೬೮

ಮುಂದೆ ಹೇಳಿದ ಪ್ರೇರಕಾವಸ್ಥೆಯಲ್ಲಿ ಹೇಳಿದ
ಕರಣಂಗಳು ಹದಿನೆಂಟರೊಡನೆ ಕೂಡಿ
ಇವನ ನಾಮ ಜಾತಿ ಗುಣತ್ರಯಂಗಳೆಲ್ಲವನು ವಿಚಾರಿಸಿ
ಅರಿದು ಸಂದೇಹವಳಿದು ತಿಳಿವುದೇ
ಪ್ರೇರಕಾವಸ್ಥೆಯೆಂದರಿವುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬೮ ॥

೬೬೯

ಇನ್ನು ಕೆಳಗಾದವಸ್ಥೆಯ ದರ್ಶನವದೆಂತೆಂದಡೆ :
ಜಾಗ್ರವಾವುದು ?
ಶ್ರೋತ್ರಾದಿಗಳೈದು, ವಾಗಾದಿಗಳೈದು,
ಶಬ್ದಾದಿಗಳೈದು, ವಚನಾದಿಗಳೈದು, ವಾಯು ಹತ್ತು,
ಕರಣ ನಾಲ್ಕು, ಪುರುಷನೊಬ್ಬ–
ಈ ಮೂವತ್ತೈದು ಕರಣಂಗಳೊಡನೆ
ಭ್ರೂಮಧ್ಯದಲ್ಲಿ ದರ್ಶನವ ಮಾಡುವುದು ಜಾಗ್ರ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೬೯ ॥

೬೭೦

ಸ್ವಪ್ನವಾವುದು ?
ಶ್ರೋತ್ರಾದಿಗಳೈದು, ವಾಗಾದಿಗಳೈದು
–ಈ ಹತ್ತು ಕರಣಂಗಳು ಭ್ರೂಮಧ್ಯದಲ್ಲಿ ನಿಂದು
ಶಬ್ದಾದಿಗಳೈದು, ವಚನಾದಿಗಳೈದು, ವಾಯು ಹತ್ತು,
ಕರಣ ನಾಲ್ಕು, ಪುರುಷನೊಬ್ಬ–
ಈ ಇಪ್ಪತ್ತೈದು ಕರಣಂಗಳೊಡನೆ ಕಂಠಸ್ಥಾನದಲ್ಲಿ ನಿಂದು
ಗಗನಕ್ಕೆ ಹಾರುವ ಹಾಂಗೆ,
ಮುಗಿಲಹತ್ತುವ ಹಾಂಗೆ,
ನಾನಾ ವ್ಯಾಪಿಯಂ ಕಂಡ ಅವರ ಸ್ವಪ್ನ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೭೦ ॥

೬೭೧

ಸುಷುಪ್ತಿ ಯಾವುದು ?
ವಚನಾದಿಗಳೈದು, ಶಬ್ದಾದಿಗಳೈದು, ಕರಣದಲ್ಲಿ ಚಿತ್ತವಲ್ಲದೆ ಮೂರು.
ದಶವಾಯುಗಳಲ್ಲಿ ಪ್ರಾಣವಾಯುವಲ್ಲದೆ, ವಾಯು ಒಂಬತ್ತು,
ಈ ಇಪ್ಪತ್ತುಮೂರು ಕರಣಂಗಳು ಕಂಠಸ್ಥಾನದಲ್ಲಿ ನಿಂದು
ಚಿತ್ತವನು, ಪ್ರಾಣವಾಯುವನು, ಪುರುಷನನು
ಈ ಮೂರು ಕರಣಂಗಳೊಡನೆ ಹೃದಯಸ್ಥಾನದಲ್ಲಿ ನಿಂದು,
ಅನೇಕ ಚಿಂತನೆಯ ಮಾಡುವುದು,
ಜಾಗ್ರದಲ್ಲಿ ನಿಂದರೆ ಹೇಳಲರಿಯದಿಪ್ಪುದು ಸುಷುಪ್ತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೧ ||

೬೭೨

ತೂರ್ಯವಾವುದು ?
ಚಿತ್ತವೊಂದು ಹೃದಯಸ್ಥಾನದಲ್ಲಿ ನಿಂದು
ಪುರುಷನನು ಪ್ರಾಣವಾಯುವನು ನಾಭಿಸ್ಥಾನದಲ್ಲಿ ನಿಂದು
ಶರೀರಕ್ಕೆ ಕಾವಲಾಗಿ ನಿಂದು, ಸಂಧಿಸಿಹುದು ತೂರ್ಯ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೨ ||

೬೭೩

ತೂರ್ಯಾತೀತವಾವುದು ?
ನಾಭಿಸ್ಥಾನದಲ್ಲಿ ಪ್ರಾಣವಾಯು ನಿಂದು
ಪುರುಷನನು ಸುಖಸ್ವರೂಪನಾಗಿ, ಆ ಸುಖಸ್ವರೂಪನಾಗಿ ಕಂಡೆನೆಂಬುದು ಕೆಟ್ಟು,
ಮೂಲಾಧಾರದಲ್ಲಿಹುದು ತೂರ್ಯಾತೀತ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೬೭೩ ||

೬೭೪

ಇನ್ನು ಮೇಲಾದವಸ್ಥೆಯ ದರ್ಶನವದೆಂತೆಂದಡೆ :
ಶುದ್ಧ ತತ್ವಕೈದು ಇಂಬಾಗಿ ನಿಂದು
ಅತೀತ ಮೊದಲಾಗಿ ದರ್ಶನವ ಮಾಡುವುದು.
ಅದೆಂತೆಂದಡೆ :
ನಾದ ಇಂಬಾಗಿ ನಿಂದು ಒಂದೆಂಬುದ ಕೆಟ್ಟರವನು
ಪುರುಷನನು ಮೂಲಾಧಾರದಲ್ಲಿ ದರ್ಶನವ ಮಾಡುವುದು
ತೂರ್ಯಾತೀತ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೪ ||

೬೭೫

ನಾದ ಬಿಂದುಗಳಿಗಿಂಬಾಗಿ ನಿಂದು
ಪುರುಷನನು ಪ್ರಾಣವಾಯುವನು
ನಾಭಿಸ್ಥಾನದಲ್ಲಿ ದರ್ಶನವಂ ಮಾಡುವುದು
ಪರಮತೂರ್ಯ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೫ ||

೬೭೬

ನಾದ ಬಿಂದು ಸಾದಾಖ್ಯ ಇಂಬಾಗಿ ನಿಂದು ಪುರುಷನನು,
ಪ್ರಾಣವಾಯುವನು, ಚಿತ್ತವನು
ಹೃದಯಸ್ಥಾನದಲ್ಲಿ ದರ್ಶನವಂ ಮಾಡುವುದು
ಪರಮಸುಷುಪ್ತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೬ ||

೬೭೭

ನಾದ ಬಿಂದು ಸಾದಾಖ್ಯ ಈಶ್ವರ ಇಂಬಾಗಿ ನಿಂದು,
ವಚನಾದಿಗಳೈದು, ಶಬ್ದಾದಿಗಳೈದು, ಕರಣ ನಾಲ್ಕು,
ವಾಯು ಹತ್ತು, ಪುರುಷನೊಬ್ಬ–
ಈ ಇಪ್ಪತ್ತೈದು ಕರಣಂಗಳೊಡನೆ
ಕಂಠಸ್ಥಾನದಲ್ಲಿ ನಿಂದು ದರ್ಶನವಂ ಮಾಡುವುದು
ಪರಮಸ್ವಪ್ನ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೭ ||

೬೭೮

ಶಿವತತ್ವವೈದು ಇಂಬಾಗಿ ನಿಂದು
ಪುರುಷನೊಬ್ಬ, ವಚನಾದಿಗಳೈದು, ಶಬ್ದಾದಿಗಳೈದು, ಕರಣ ನಾಲ್ಕು,
ಶ್ರೋತ್ರಾದಿಗಳೈದು ಕರಣಂಗಳೊಡನೆ
ಭ್ರೂಮಧ್ಯದಲ್ಲಿ ದರ್ಶನವ ಮಾಡುವುದು ಪರಮಜಾಗ್ರ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೮ ||

೬೭೯

ಇನ್ನು ಕೇವಲಾವಸ್ಥೆಯ ದರ್ಶನವದೆಂತೆಂದಡೆ :
ಮುಂದೆ ಹೇಳಿದ ಅವಸ್ಥೆಗಳನು ಬಿಟ್ಟು ಬೇರಾಗಿ
ಒಂದೆಂಬುದು ಕೆಟ್ಟ, ಠಾವು ಕೇವಲಾವಸ್ಥೆ.
ಇನ್ನು ಸಕಲಾವಸ್ಥೆಯ ದರ್ಶನವದೆಂತೆಂದಡೆ :

ಮುಂದೆ ಹೇಳಿದ ಅರಿವೇ ಸ್ವರೂಪವಾಗಿ ಆತನ ಕಂಡ ಠಾವು ಸಕಲಾವಸ್ಥೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೭೯ ||

೬೮೦

ಇನ್ನು ಶುದ್ಧಾವಸ್ಥೆಯ ದರ್ಶನವೆಂತೆಂದಡೆ :
ಮುಂದೆ ಹೇಳಿದ ಕೇವಲದಲ್ಲಿ ಒಂದೆಂಬುದು ಕೆಟ್ಟ ಠಾವನು
ಸಕಲದಲ್ಲಿ ಕರಣಂಗಳ ಕೂಟವನು ಬಿಟ್ಟು,
ಈ ಎರಡವಸ್ಥೆಯು ಇವನಿಗೆ ಪ್ರತಿ ಇಲ್ಲವೆಂದು ಕಂಡುದು ಶುದ್ಧಾವಸ್ಥೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೦ ||

೬೮೧

ಇನ್ನು ನಿರ್ಮಲಾವಸ್ಥೆಯ ದರ್ಶನವ ಮಾಡುವಾಗ
ಪಂಚಲಿಂಗಗಳನು ದರ್ಶನವ ಮಾಡುವುದು.
ಅದೆಂತೆಂದಡೆ :
ಅಣವ, ಮಾಯೆ, ಕಾರ್ಮಿಕ, ಮಹಾಮಾಯೆ, ತಿರೋಧಾನಮಲ.
ಆಣವಮಲವಾವುದು ?
ಶಿವನ ನೆನೆಯಲೀಸದಿಹುದು.
ಮಾಯೆಯಾವುದು ?
ತನು ಕರಣ ಭುವನಭೋಗಂಗಳ ಬಯಸುತ್ತಿಹುದು,
ಕಾರ್ಮಿಕವಾವುದು ?
ಪುಣ್ಯಪಾಪಂಗಳೆಂದು ಹೆಸರಾಗಿ ಸುಖದುಃಖಂಗಳಾಗಿಹುದು.
ಮಹಾಮಾಯೆ ಯಾವುದು ?
ಪಂಚಕರ್ತನು ರೂಪಾದಿ ದೇಹಾಗಿ ಪ್ರಪಂಚಗಳ ಪ್ರೇರಿಸಿಕೊಂಡಿಹುದು.
ತಿರೋಧಾನಮಲವಾವುದು ?
ಮರಳಿ ಮಾಯಾಭೋಗದಲ್ಲಿ ಬಿದ್ದು ಹೊರಳಾಡಿಸುತ್ತಿಹುದು.
ಈ ಪ್ರಕಾರದಲ್ಲಿ ಪಂಚಮಲಂಗಳನು ಅರಿವುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೧ ||

೬೮೨

ಇನ್ನು ಮುಂದೆ ಹೇಳಿದ ನಿರ್ಮಲಾವಸ್ಥೆಯ ದರ್ಶನವದೆಂತೆಂದಡೆ :
ಹೀಂಗೆ ಪಂಚಮಲಂಗಳ ತೋರಿದ ಜ್ಞಾನಶಕ್ತಿಗೂ ಮೊದಲು
ಪೂರ್ಣಬೋಧವಾಗಿ ನಿಂದ ಠಾವು ನಿರ್ಮಲಜಾಗ್ರ ನೋಡಾ.
ಮುಂದೆ ಹೇಳಿದ ಪೂರ್ಣಬೋಧ ನಿರ್ವಿಕಾರ ಹುಟ್ಟುವ ಬಗೆಗೂ
ಮೊದಲ ಠಾವು ನಿರ್ಮಲಸ್ವಪ್ನ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೨ ||

೬೮೩

ಆ ಪರಮಭೋಗಿಯಲ್ಲಿಯೆ ಸಂತೋಷವಳಿದು
ನಿಷ್ಪತ್ತಿಯಾಗಿ ನಿಂದುದೆ ನಿರ್ಮಲಸುಷುಪ್ತಿ,
ಮುಂದೆ ಹೇಳಿದ ಪರಮಭೋಗವನು ಬಿಟ್ಟು
ಮೇಲಾದ ಪರಮಾನಂದಕ್ಕೆ ಮೊದಲು ನಿರ್ಮಲತೂರ್ಯ,
ಮುಂದೆ ಹೇಳಿದ ಪರಮಾನಂದವ ಸುಟ್ಟ ಠಾವು ನಿರ್ಮಲ ತೂರ್ಯಾತೀತ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೩ ||

೬೮೪

ಅವಸ್ಥೆಗಳಿಪ್ಪತ್ತುನಾಲ್ಕನು
ಹೀಂಗೆ ದರ್ಶನವ ಮಾಡಿದಾತನು ಶಿವಮುಕ್ತನು,
ಆತನು ಶಿವಯೋಗಿ ಲಿಂಗಾನುಭಾವಿ.
ಆ ಶಿವಮುಕ್ತನಿಗೆ ಪಂಚಮಲಂಗಳು ಪಂಚಶಕ್ತಿಗಳು
ಬಿಟ್ಟ ಪ್ರಕಾರ ದರ್ಶನವದೆಂತೆಂದಡೆ :
ಮುಂದೆ ಇದ್ದ ಮಾಯಾಭೋಗದ ಇಚ್ಫೆಯಿಲ್ಲದಿಹುದೆ ತಿರೋಧಾನಮಲ ನಷ್ಟ,
ಕರ್ಮವ ತೊರೆದು ಸುಖದುಃಖಗಳು ಸಮವಾಗಿ ಪಂಚಕೃತ್ಯಂಗಳು ಕೆಟ್ಟುದಾಗಿ,
ಮಹಾಮಾಯೆ ನಷ್ಟ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೪ ||

೬೮೫

ಅವನು ಅವಳು ಅದು ನಾನೆಂಬ ಜ್ಯೋತಿ ಅಡಗಿತ್ತಾಗಿ ಕರ್ಮ ನಷ್ಟ.
ರೂಪ ನಿರೂಪೆಂಬುದು ಕೆಟ್ಟುದಾಗಿ ಮಾಯೆ ನಷ್ಟ.
ಅರಿವು ತಲೆದೋರಿತ್ತಾಗಿ ಆಣವ ನಷ್ಟ.
ಶಿವಪ್ರಕಾಶವಾದ ಕಾರಣ ತಿರೋಧಾನಶಕ್ತಿ ನಷ್ಟ.
ಫಲಪದವಿಗಳು ಬಯಕೆ ಹಿಂಗಿತ್ತಾಗಿ ಇಚ್ಛಾಶಕ್ತಿ ನಷ್ಟ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೫ ||

೬೮೬

ಅದಂಥಾದಿಂಥಾದೆಂದು ನೋಡುವ ರೂಪ ನಿರೂಪವ ಬಿಟ್ಟು
ಅತ್ತತ್ತವಾಗಿ ಸ್ವಾನುಭೂತಿ ಬೆಳೆಯಲಿಕ್ಕಾಗಿ ಜ್ಞಾನಶಕ್ತಿ ನಷ್ಟವು.
ಕೂಟಂಗಳು ಕೆಡಲು ಕ್ರಿಯಾಶಕ್ತಿ ನಷ್ಟವು.
ವಿಕಾರ ನಿರ್ವಿಕಾರಂಗಳು ಕೆಟ್ಟು ಪರಮಾನಂದ ಸುಖವ
ಅನುಭವಿಸಲು ಪರಶಕ್ತಿ ನಷ್ಟವು.

ಹೀಂಗೆ ಅವಸ್ಥೆಗಳು ನಷ್ಟವು, ದರ್ಶನವದು ನಿತ್ಯ ನಿರಂಜನ
ನಿರ್ಮಾಯ ನಿರಾಳ ನಿರಾಲಂಬವ ತಾನೆಂದು ತಿಳಿದ ಮಹಾಶರಣಂಗಲ್ಲದೆ
ಮಿಕ್ಕಿನ ವೇಷಧಾರಿಗಳವರೆತ್ತ ಬಲ್ಲರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೬ ||

೬೮೭

ಇನ್ನು ಜ್ಞಾನಾವಸ್ಥೆಯ ದರ್ಶನವದೆಂತೆಂದಡೆ :
ತನ್ನ ತಾನರಿದು ಪರಮಜ್ಞಾನವ ತಿಳಿವುದೇ ಜ್ಞಾನಜಾಗ್ರ.
ಆ ಪರಮಜ್ಞಾನ ನಿವಾಸಿಯಾಗಿಹುದೇ ಜ್ಞಾನಸ್ವಪ್ನ.
ಆ ಪರಮಜ್ಞಾನ ನಿವಾಸದಲ್ಲಿ ಲೀಯವಾಗಿಹುದೇ ಜ್ಞಾನಸುಷುಪ್ತಿ.
ಆ ಜ್ಞಾನಸುಷುಪ್ತಿಯಲ್ಲಿ ತಲೆದೋರಿದ
ಸುಜ್ಞಾನವೇ ಜ್ಞಾನತೂರ್ಯ.
ಆ ಸುಜ್ಞಾನವನ್ನೊಳಗೊಂಡ ನಿಃಶಬ್ದವೇ ಜ್ಞಾನವ್ಯೋಮ.
ಆ ಜ್ಞಾನವ್ಯೋಮವನೊಳಗೊಂಡ ಮಹಾಜ್ಞಾನವೆ
ಜ್ಞಾನವ್ಯೋಮಾತೀತವೆಂದು ಶ್ರುತಿಗಳು ಸಾರುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೭ ||

೬೮೮

ಇನ್ನು ಶಿವಾವಸ್ಥೆಯ ದರ್ಶನವದೆಂತೆಂದಡೆ :
ಆತ್ಮನು ತನ್ನ ತಾನರಿದು ಶಿವನನರಿವಾಗ ಶಿವಜಾಗ್ರವೆನಿಸಿತ್ತು.
ಆತ್ಮನು ಶಿವನನರಿದು ಬೆರಸುವತನಕವೆ ಶಿವಸ್ವಪ್ನವೆಂದೆನಿಸಿತ್ತು.
ಆತ್ಮನು ಶಿವನ ಬೆರಸಿ ನಿಂದುದೆ ಶಿವಸುಷುಪ್ತಿ.
ಆತ್ಮನು ತಾನಳಿದು ತಾನುಳಿದು ನಿಂದುದೆ ಶಿವತೂರ್ಯ.
ಆತ್ಮನು ತಾನಳಿದು ಶಿವನುಳಿದುನಿಂದುದೆ ಶಿವವ್ಯೋಮ.
ಶಿವನೆಂಬ ನಾಮ ನಿಃಶಬ್ದವಾಗಿಹುದೆ ಶಿವವ್ಯೋಮಾತೀತವೆಂದು
ಶ್ರುತಿಗಳು ಸಾರುತ್ತಿವೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೮ ||

೬೮೯

ಇನ್ನು ನಿರಾಳವಸ್ಥೆಯ ದರ್ಶನವದೆಂತೆಂದಡೆ :
ನಿರಾಳಮಯವನರಿದು ಆ ನಿರಾಳಮಯದೊಳು
ಪೂರ್ಣಬೋಧವಾಗಿ ನಿಂದುದೇ ನಿರಾಳಜಾಗ್ರ.
ಮುಂದೆ ಹೇಳಿದ ನಿರಾಳಮಯದೊಳು ವಿಕಾರವಳಿದು
ನಿರ್ವಿಕಾರವಾಗಿ ನಿಂದುದೆ ನಿರಾಳಸ್ವಪ್ನ.
ಮುಂದೆ ಹೇಳಿದ ನಿರಾಳಬೋಧದಲ್ಲಿ ಸಂತೋಷವನಳಿದು

ನಿಷ್ಪತ್ತಿಯಾಗಿ ನಿಂದುದೆ ನಿರಾಳಸುಷುಪ್ತಿ.
ಮುಂದೆ ಹೇಳಿದ ನಿರಾಳಬೋಧವ ಬಿಟ್ಟು
ಮೇಲಾದ ನಿರಾಳಾನಂದಕ್ಕೆ ಮೊದಲು ನಿರಾಳತೂರ್ಯ.
ಮುಂದೆ ಹೇಳಿದ ನಿರಾಳಾನಂದವನು ಸುಟ್ಟು ತಾವು ನಿರಾಳವ್ಯೋಮ.
ನಿರಾಳವ್ಯೋಮವ ಮೆಟ್ಟಿ ಮೇಲಾದುದೇ ನಿರಾಳವ್ಯೋಮಾತೀತವೆಂದು
ಅಸಿಪದಾತೀತಾಗಮದಲ್ಲಿ ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೮೯ ||

೬೯೦

ಇನ್ನು ನಿರಂಜನಾವಸ್ಥೆಯ ದರ್ಶನವದೆಂತೆಂದಡೆ :
ನಿರಂಜನವೆಂಬ ನಿತ್ಯಾನಂದಪೂರ್ಣನಿವಾಸನನರಿದು
ಆ ನಿತ್ಯಾನಂದಪೂರ್ಣನಿವಾಸದೊಳು ನಿಂದುದೆ ನಿರಂಜನಜಾಗ್ರ.
ನಿತ್ಯಾನಂದಪೂರ್ಣನಿವಾಸದೊಳು
ವಿಕಾರ ನಿರ್ವಿಕಾರವಿಲ್ಲದಿಹುದೆ ನಿರಂಜನಸ್ವಪ್ನ.
ಆ ನಿತ್ಯಾನಂದಪೂರ್ಣನಿವಾಸದೊಳು ಸಂತೋಷವಳಿದು
ನಿಷ್ಪತ್ತಿಯಾಗಿ ನಿಂದುದೆ ನಿರಂಜನಸುಷುಪ್ತಿ.
ನಿತ್ಯಾನಂದಪೂರ್ಣನಿವಾಸವ ಬಿಟ್ಟು ಮೇಲಾದ
ಆ ನಿತ್ಯಾನಂದಾತೀತಕ್ಕೆ ಮೊದಲು ನಿರಂಜನತೂರ್ಯ.
ಆ ನಿತ್ಯಾನಂದಾತೀತವ ಸುಟ್ಟು ತಾವು ನಿರಂಜನವ್ಯೋಮ.
ಆ ನಿರಂಜನವ್ಯೋಮವ ಮೆಟ್ಟಿ ಮೇಲಾದುದೆ ನಿರಂಜನವ್ಯೋಮಾತೀತವೆಂದು
ಚಕ್ರಾತೀತಾಗಮದಲ್ಲಿ ಪ್ರಸಿದ್ಧವಾಗಿ ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೯೦ ||

ಹೀಂಗೆಂದು ಸದ್ಗುರುಸ್ವಾಮಿ ಅವಸ್ಥೆಗಳ ದರ್ಶನದ ಭೇದವನು ನಿರೂಪಿಸಲು ಪರಮಹರುಷಿತನಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಅವಸ್ಥೆಗಳ ದರ್ಶನದ ಭೇದವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು ಕೇಳಿ ಕೃತಾರ್ಥನಾದೆನು. ಇನ್ನು ಅಷ್ಟದಳಚೌಕಮಧ್ಯದ ಭೇದವನರಿಯೆನು ನಿರೂಪಿಸೆಂದು ಬಿನ್ನೈಸಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೯೧

ಶ್ರೋತ್ರದ್ವಾರಂಗಳೆರಡು ದ್ವಯದಳ
ನೇತ್ರದ್ವಾರಂಗಳೆರಡು ದ್ವಯದಳ
ಘ್ರಾಣಂಗಳೆರಡು ದ್ವಯದಳ
ಜಿಹ್ವೆ ಅಮಳೋಕ್ಯವೆಂಬ ದ್ವಯದ್ವಾರಂಗಳೆರಡು ದ್ವಯದಳ ನೋಡಾ.
ಇಂತೀ ಮುಖಕಮಲದ ಅಷ್ಟದಳಂಗಳ

ಆ ಅಷ್ಟದಳಕಮಲ ನೋಡಾ.
ಅಷ್ಟದಳಕಮಲವ ಮುಟ್ಟದಿಹ
ಚತುರ್ದಳಪದ್ಮದ ಭೇದವದೆಂತೆಂದಡೆ :
ಜೀವಹಂಸನ ಅಕ್ಷರದ್ವಯಗಳೆರಡು.
ದ್ವಿದಳಪದ್ಮ ಪರಮಹಂಸನ ಅಕ್ಷರದ್ವಯಗಳೆರಡು ದ್ವಿದಳಪದ್ಮ ನೋಡಾ.
ಜೀವಹಂಸನ ಅಕ್ಷರದ್ವಯವು ಪರಮಹಂಸನ ಅಕ್ಷರದ್ವಯವು
ಚತುರ್ದಳಪದ್ಮ ನೋಡಾ.
ಆ ಚತುರ್ದಳಪದ್ಮದ ಮಧ್ಯದಲ್ಲಿಹ ಕರ್ಣಿಕಾವಾಸದಲ್ಲಿ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹ
ನಿರಾಳಶಂಭುಲಿಂಗವಿಹುದು. ಅದೇ ಮಧ್ಯ ನೋಡಾ.
ಈ ಅಷ್ಟದಳಕಮಲ ಚೌಕಮಧ್ಯದ ಭೇದವ
ಶಿವಯೋಗಿ ಲಿಂಗಾನುಭಾವಿ ಬಲ್ಲನಲ್ಲದೆ
ಲೋಕದ ಜಡರುಗಳೆತ್ತ ಬಲ್ಲರು ಹೇಳಾ
ಅಪ್ರಮಾಣಕೂಡಲಸಂಗಮದೇವಾ. || ೬೯೧ ||

೬೯೨

ನಿರಾಮಯದೊಳು ನಿರಾಕಾರವಾಗಿ ಹುಟ್ಟಿತ್ತು ನೋಡಾ ಒಂದು ಪದ್ಮ
ಆ ಪದ್ಮ ಹನ್ನೆರಡೆಸಳಾಗಿಹುದು.
ಎಂಟೆಸಳೆ ಅಧೋಮುಖವಾಗಿಹುದು.
ನಾಲ್ಕೆಸಳೆ ಊರ್ಧ್ವಮುಖವಾಗಿಹುದು.
ಅಧೋಮುಖವಾಗಿಹ ಎಂಟೆಸಳಕರ್ಣಿಕೆಯ ಅಷ್ಟದಳಕಮಲ.
ಊರ್ಧ್ವಮುಖವಾಗಿಹ ನಾಲ್ಕೆಸಳ ಕರ್ಣಿಕೆಯೆ ಚೌಕಮಧ್ಯ.
ಆ ಎಂಟೆಸಳ ಕರ್ಣಿಕೆಯ ಸದ್ವಾಸನೆಯ ಪರಮಾತ್ಮನು.
ಆ ನಾಲ್ಕೆಸಳ ಕರ್ಣಿಕೆಯ ಸದ್ವಾಸನೆಯೆ ಪರಾತ್ಪರಾತ್ಮನು.
ಪರಮಾತ್ಮನು ಪರಾತ್ಪರಾತ್ಮನು ಇಬ್ಬರನು ಬೆರಸಿ ಒಂದಾಗದೆ,
ಬಿಚ್ಚಿಬೇರಾಗದೆ ನಿಲ್ಲಬಲ್ಲಾತನೆ ಪರಮಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೯೨ ||

೬೯೩

ಅಕಾರವೆಂಬ ಅಷ್ಟದಳಕಮಲದ ಮಧ್ಯದಲ್ಲಿಯೂ
ಉಕಾರವೆಂಬ ಚೌಕಮಧ್ಯದಲ್ಲಿಯೂ
ಮಕಾರವೆಂಬ ಮಹಾಜ್ಯೋತಿರ್ಮಯಲಿಂಗವಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೬೯೩ ||

೬೯೪

ನಿರಾಮಯದೊಳು ಹುಟ್ಟಿತು ನೋಡಾ ಒಂದು ಪದ್ಮ
ಅನೇಕಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿ
ಆ ಪದ್ಮ ಹನ್ನೆರಡೆಸಳಾಗಿಹುದು.
ಎಂಟೆಸಳೆ ಅಧೋಮುಖವಾಗಿಹುದು.
ಅದು ಅಷ್ಟದಳಕಮಲ.
ನಾಲ್ಕೆಸಳೆ ಊರ್ಧ್ವಮುಖವಾಗಿಹುದು ;
ಅದು ಚೌಕಮಧ್ಯ.
ಎಂಟೆಸಳ ನಾಲ್ಕೆಸಳ ಸಂಯೋಗವೇ ನಿರಾಳಪ್ರಣಮ ನೋಡಾ.
ಆ ಪುಷ್ಪದ ಸದ್ವಾಸನೆ ತಾನೆ ನಮ್ಮ
ಅಪ್ರಮಾಣಕೂಡಲಸಂಗಮದೇವಾ. || ೬೯೪ ||

೬೯೫

ನಿರಾಳದಷ್ಟದಳದ ಕಮಲದೊಳು
ನಿರಂಜನ ಚೌಕಮಧ್ಯ ನೋಡಾ.
ಅದರ ಬೀಜಾಕ್ಷರದ ಭೇದವನು ಆರು ಬಲ್ಲರು ?
ನಿರಂಜನಪ್ರಣವ ಅವಾಚ್ಯಪ್ರಣವ ಕಲಾಪ್ರಣವ
ಅನಾದಿಪ್ರಣವ ಅಕಾರಪ್ರಣವ ಉಕಾರಪ್ರಣವ
ಮಕಾರಪ್ರಣವ ಆದಿಪ್ರಣವ
ಅಖಂಡಗೋಳಕಾಕಾರಪ್ರಣವ, ಜ್ಯೋತಿಪ್ರಣವ,
ಅಖಂಡ ಮಹಾಜ್ಯೋತಿಪ್ರಣವ,
ನಿರಾಳ ಅಷ್ಟದಳ ಕಮಲ ನಿರಂಜನ ಚೌಕಮಧ್ಯದ ಬೀಜಾಕ್ಷರದ ಭೇದವ
ನಿಜಲಿಂಗೈಕ್ಯರು ಬಲ್ಲರಲ್ಲದೆ ಮಿಕ್ಕಿನ ವೇಷಧಾರಿಗಳವರೆತ್ತ
ಬಲ್ಲರಯ್ಯ ಅಪ್ರಮಾಣಕೂಡಲಸಂಗಮದೇವಾ. || ೬೯೫ ||

ಹೀಂಗೆಂದು ಅಷ್ಟದಳಕಮಲ ಚೌಕಮಧ್ಯದ ಭೇದವನು ನಿರೂಪಿಸಲು ಕೇಳಿ, ಪರಮಪರಿಣಾಮಿಯಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಅಷ್ಟದಳ ಕಮಲ ಚೌಕಮಧ್ಯದ ಭೇದವನು ನಿಮ್ಮ ಮಹಾವಾಕ್ಯದಿಂದ ನಿರೂಪಿಸಲು ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಇನ್ನು ಷಡಧ್ವದುತ್ಪತ್ಯನ್ಯಾಸಸ್ಥಲವನು ನಿರೂಪಿಸೆಂದು ಬೆಸಗೊಳಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೬೯೬

ಇದಕ್ಕೆ **ಪ್ರಳಯಕಾಲರುದ್ರೋಪನಿಷತ್** :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ

ಜ್ಯೋತಿಸ್ವರೂಪದಲ್ಲಿ–
ಹೃದಯಮಂತ್ರೋ ಭವತಿ । ಓಂ ಪರಮಾತ್ಮಾ ದೇವತಾ ।
ಜ್ಯೋತಿರೂಪೋ ಲಯಂ ಪ್ರಾಪ್ತೇ ಪ್ರಥಮಂ ಪ್ರಣವಾಂಶಕೇ ॥
ಆ ಪ್ರಣವದ ದರ್ಪಣಾಕಾರದಲ್ಲಿ–
''ಶಿರೋಮಂತ್ರೋ ಭವತಿ । ಓಂ ಯಕಾರಾತ್ಮಾ ದೇವತಾ ।
ದರ್ಪಣೇ ಚ ಲಯಂ ಪ್ರಾಪ್ತೇ ದ್ವಿತೀಯಂ ಪ್ರಣವಾಂಶಕೇ ॥''
ಆ ಪ್ರಣವದ ಅರ್ಧಚಂದ್ರಕದಲ್ಲಿ–
''ಶಿಖಾಮಂತ್ರೋ ಭವತಿ । ಓಂ ಅಕಾರಾತ್ಮಾ ದೇವತಾ ।
ಅರ್ಧಚಂದ್ರೇ ಲಯಂ ಪ್ರಾಪ್ತೇ ತೃತೀಯಂ ಪ್ರಣವಾಂಶಕೇ ॥''
ಆ ಪ್ರಣವದ ಕುಂಡಲಾಕಾರದಲ್ಲಿ–
''ಕವಚಮಂತ್ರೋ ಭವತಿ । ಓಂ ಶಿಕಾರಾತ್ಮಾ ದೇವತಾ ।
ಕುಂಡಲೇ ಚ ಲಯಂ ಪ್ರಾಪ್ತೇ ಚತುರ್ಥಂ ಪ್ರಣವಾಂಶಕೇ ॥''
ಆ ಪ್ರಣವದ ದಂಡಸ್ವರೂಪದಲ್ಲಿ–
''ನೇತ್ರಮಂತ್ರೋ ಭವತಿ । ಓಂ ಮಕಾರಾತ್ಮಾ ದೇವತಾ ।
ದಂಡರೂಪೇ ಚ ಲಯಂ ಪ್ರಾಪ್ತೇ ಪಂಚಮಂ ಪ್ರಣವಾಂಶಕೇ ॥''
ಆ ಪ್ರಣವದ ತಾರಕಸ್ವರೂಪದಲ್ಲಿ–
''ಅಸ್ತ್ರಮಂತ್ರೋ ಭವತಿ । ಓಂ ನಕಾರಾತ್ಮಾ ದೇವತಾ ।
ತಾರಕೇ ಚ ಲಯಂ ಪ್ರಾಪ್ತೇ ಷಷ್ಠಮಂ ಪ್ರಣವಾಂಶಕೇ ॥''
ಇಂತೆಂದುದು ಶ್ರುತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೬೯೬ ॥

೬೯೭

ಮತ್ತಂ, ಆ ಪ್ರಣವದ ದರ್ಪಣಾಕಾರದಲ್ಲಿ
ಈಶಾನ್ಯಮುಖ ಉತ್ಪತ್ಯವಾಯಿತ್ತು
ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖ ಉತ್ಪತ್ಯವಾಯಿತ್ತು
ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರಮುಖ ಉತ್ಪತ್ಯವಾಯಿತ್ತು
ಆ ಪ್ರಣವದ ದಂಡಸ್ವರೂಪದಲ್ಲಿ ವಾಮದೇವಮುಖ ಉತ್ಪತ್ಯವಾಯಿತ್ತು
ಆ ಪ್ರಣವದ ತಾರಕಸ್ವರೂಪದಲ್ಲಿ
ಸದ್ಯೋಜಾತಮುಖ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಓಂಕಾರ ತಾರಕಾರೂಪೇ ಸದ್ಯೋಜಾತಂ ಚ ಜಾಯತೇ ।
ಓಂಕಾರ ದಂಡರೂಪೇ ಚ ವಾಮದೇವಂ ಚ ಜಾಯತೇ ॥
ಓಂಕಾರ ಕುಂಡಲಾಕಾರೇ ಅಘೋರಂ ಚಾಪಿ ಜಾಯತೇ ।
ಓಂಕಾರ ಅರ್ಧಚಂದ್ರೇ ಚ ತತ್ಪುರುಷಂ ಚ ಜಾಯತೇ ॥
ಓಂಕಾರ ದರ್ಪಣಾಕಾರೇ ಈಶಾನಂ ಚ ಜಾಯತೇ ।

ಇತಿ ಪಂಚಮುಖಂ ದೇವೀ ಸ್ಥಾನಸ್ಥಾನೇಷು ಜಾಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೬೯೭ ॥

೬೯೮

ಈಶಾನಮುಖದಲ್ಲಿ ಈಶಾನಮಂತ್ರ ಉತ್ಪತ್ತ್ಯವಾಯಿತ್ತು.
ತತ್ಪುರುಷಮುಖದಲ್ಲಿ ತತ್ಪುರುಷಮಂತ್ರ ಉತ್ಪತ್ತ್ಯವಾಯಿತ್ತು.
ಅಘೋರಮುಖದಲ್ಲಿ ಅಘೋರಮಂತ್ರ ಉತ್ಪತ್ತ್ಯವಾಯಿತ್ತು.
ವಾಮದೇವಮುಖದಲ್ಲಿ ವಾಮದೇವಮಂತ್ರ ಉತ್ಪತ್ತ್ಯವಾಯಿತ್ತು.
ಸದ್ಯೋಜಾತಮುಖದಲ್ಲಿ ಸದ್ಯೋಜಾತಮಂತ್ರ ಉತ್ಪತ್ತ್ಯವಾಯಿತ್ತು.
ಈ ಹನ್ನೊಂದು ಮಂತ್ರವು
ಸಪ್ತಕೋಟಿ ಮಹಾಮಂತ್ರಗಳ ಸಾರವಾದಂಥಾದ್ದು.
ಇದು ಮಂತ್ರಾರ್ಥ್ವ ನೋಡಾ ಅಪ್ರಮಾಣಕೂಡಲಸಂಗಮದೇವಾ. ॥ ೬೯೮ ॥

೬೯೯

ಇನ್ನು ತೊಂಬತ್ತುನಾಲ್ಕು ವ್ಯೋಮವ್ಯಾಪಿ ಪದಂಗಳುತ್ಪತ್ತ್ಯವದೆಂತೆಂದಡೆ :
ಅನೇಕಕೋಟಿ ಸೂರ್ಯಚಂದ್ರಾಗ್ನಿಮಯವಾಗಿಹ
ಮಹಾಜ್ಯೋತಿರ್ಮಯಲಿಂಗದಲ್ಲಿ ತೊಂಬತ್ತುನಾಲ್ಕು
ವ್ಯೋಮವ್ಯಾಪಿ ಪದಂಗಳುತ್ಪತ್ತ್ಯ.
ತೊಂಬತ್ತುನಾಲ್ಕು ವ್ಯೋಮವ್ಯಾಪಿಪದಂಗಳ ವಿವರವದೆಂತೆಂದಡೆ :
''ವ್ಯೋಮವ್ಯಾಪಿನೇ ವ್ಯೋಮರೂಪಾಯ ಸರ್ವವ್ಯಾಪಿನೇ ಶಿವಾಯ
ಈಶಾನ ಮೂರ್ಧ್ನಾಯ ತತ್ಪುರುಷವಕ್ತ್ರಾಯ
ಅಘೋರ ಹೃದಯಾಯ ವಾಮದೇವ ಗುಹ್ಯಾಯ
ಸದ್ಯೋಜಾತಮೂರ್ತಯೇ ಓಂ ನಮೋ ನಮಃ ॥
ಗುಹ್ಯಾತಿಗುಹ್ಯಾಯ ಗೌಪ್ತೇ ಅಭಿಧಾನಾಯ
ಸರ್ವಯೋಗಾಧಿಕೃತಾಯ ಜ್ಯೋತಿರೂಪಾಯ
ಪರಮೇಶ್ವರ ಪರಾಯ ಚೇತನಾಚೇತನ ವ್ಯೋಮಿನ್
ವ್ಯಾಪಿನ್ ರೂಪಿನ್ ಅರೂಪಿನ್ ಪ್ರಥಮ ಪ್ರಥಮ ।
ತೇಜಸ್ತೇಜಃ ಜ್ಯೋತಿರ್ಜ್ಯೋತಿಃ ಅರೂಪ ಅನಿಲೀನ ಅಧೂಮ
ಅಭಸ್ಮ ಅನಾದೇರನಾದೆ ನಾ ನಾ ನಾ ಧೂ ಧೂ ಧೂ
ಓಂ ಭೂಃ ಓಂ ಭುವಃ ಓಂ ಸ್ವಾಹಾ ।
ಅನಿಧನ ನಿಧನೋದ್ಭವ ಶಿವಃ ಶರ್ವ ಪರಮಾತ್ಮಾ
ಮಹೇಶ್ವರ ಮಹೇಶ್ವರ ಮಹಾತೇಜ ಮಹಾತೇಜ
ಯೋಗಾಧಿಪತೇ ಮುಂಚ ಮುಂಚ ಪ್ರಮಥ ಪ್ರಮಥ
ಶರ್ವ [illegible] ಭವೋದ್ಭವ ಸರ್ವಭೂತಸುಖಪ್ರದ

ಸರ್ವಸಾನಿಧ್ಯಕರ, ಬ್ರಹ್ಮವಿಷ್ಣುರುದ್ರಪರ ಅರ್ಚಿತಸುತ್ತ ಪೂರ್ವಸ್ಥಿತ
ಸಾಕ್ಷಿಹಿ ಸಾಕ್ಷಿಹಿ ತರುತರು ಪತಂಗ ಪತಂಗ ಪಿಂಗ ಪಿಂಗ
ಜ್ಞಾನ ಜ್ಞಾನ, ಶಬ್ದ ಶಬ್ದ, ಸೂಕ್ಷ್ಮ ಸೂಕ್ಷ್ಮ
ಶಿವ ಶರ್ವ ಶರ್ವ ಓಂ ನಮಃಶಿವಾಯ ।
ಓಂ ನಮಃಶಿವಾಯ, ನಮೋ ನಮಃ ಓಂ ॥''
ಅಂತು ತೊಂಬತ್ತುನಾಲ್ಕು ವ್ಯೋಮವ್ಯಾಪಿ ಪದಂಗಳು.
ಇದು ಪದಾರ್ಥ್ವ ನೋಡಾ, ಅಪ್ರಮಾಣಕೂಡಲಸಂಗಮದೇವಾ. ॥ ೧೯೯ ॥

೨೦೦

ಇನ್ನು ಐವತ್ತೆರಡು ಅಕ್ಷರವದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಾಸ್ವರೂಪದ ಕುಂಡಲಾಕಾರ ಜ್ಯೋತಿಸ್ವರೂಪದಲ್ಲಿ
ಅಕಾರ ಉಕಾರ ಮಕಾರ ಉತ್ಪತ್ಯವಾಯಿತ್ತು.
ಆ ಅಕಾರ ಉಕಾರ ಮಕಾರ ಈ ಮೂರೂ ಸಂಯುಕ್ತವಾಗಿ
ಓಂಕಾರ ಉತ್ಪತ್ಯವಾಯಿತ್ತು.
ಆ ಓಂಕಾರಪ್ರಣವದ ತಾರಕಾಸ್ವರೂಪದಲ್ಲಿಹ
ನಕಾರದಲ್ಲಿ ನಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿಹ ಮಕಾರದಲ್ಲಿ ಮಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿಹ
ಶಿಕಾರದಲ್ಲಿ ಶಿಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿಹ
ವಕಾರದಲ್ಲಿ ವಕಾರ ಉತ್ಪತ್ಯವಾಯಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿಹ
ಯಕಾರದಲ್ಲಿ ಯಕಾರ ಉತ್ಪತ್ಯವಾಯಿತ್ತು ನೋಡಾ.
ಇದಕ್ಕೆ ನೀಲಕಂಠೋತ್ತರಸಾರೇ :
''ನಕಾರೇ ನಕಾರೋತ್ಪನ್ನಂ ಮಕಾರೇ ಮಕಾರೋದ್ಭವಃ ।
ಶಿಕಾರೇ ಶಿಕಾರೋತ್ಪನ್ನಂ ವಕಾರೇ ವಕಾರೋದ್ಭವಃ ।
ಯಕಾರೋ ಶಿಕಾರೋತ್ಪನ್ನಂ ಗುಹ್ಯಾದ್ಗುಹ್ಯಂ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೨೦೦ ॥

೨೦೧

ಪ್ರಣವದ ಜ್ಯೋತಿಸ್ವರೂಪದಲ್ಲಿಹ ಚಿದಾತ್ಮ ಪರಮಾತ್ಮನಲ್ಲಿ
ಹಂ ಕ್ಷಂ ಹಂ ಳಂ ಎಂಬ ಚತುರಾಕ್ಷರ ಉತ್ಪತ್ಯವಾಯಿತ್ತು
ಆ ಯಕಾರದಲ್ಲಿ ಉತ್ಪತ್ಯವಾದ ಯಕಾರ ಬೀಜದಲ್ಲಿ
ಅ ಆ ಇ ಈ ಉ ಊ ಋ ೠ ಌ ೡ [illegible] ಐ [illegible] ಔ ಅಂ ಅಃ

ಎಂಬ ಷೋಡಶ ವರ್ಣಾಕ್ಷರ ಉತ್ಪತ್ಯವಾಯಿತ್ತು.
ಆ ವಕಾರದಲ್ಲಿ ಉತ್ಪತ್ಯವಾದ ವಕಾರ ಬೀಜದಲ್ಲಿ
ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ
ದ್ವಾದಶವರ್ಣಾಕ್ಷರ ಉತ್ಪತ್ಯವಾಯಿತ್ತು.
ಆ ಶಿಕಾರದಲ್ಲಿ ಉತ್ಪತ್ಯವಾದ ಶಿಕಾರ ಬೀಜದಲ್ಲಿ
ಡ ಢ ಣ ತ ಥ ದ ಧ ನ ಪ ಫ ಎಂಬ ದಶವರ್ಣಾಕ್ಷರ ಉತ್ಪತ್ಯವಾಯಿತ್ತು.
ಆ ಮಕಾರದಲ್ಲಿ ಉತ್ಪತ್ಯವಾದ ಮಕಾರ ಬೀಜದಲ್ಲಿ
ಬ ಭ ಮ ಯ ರ ಲ ಎಂಬ ಷಡುವರ್ಣಾಕ್ಷರ ಉತ್ಪತ್ಯವಾಯಿತ್ತು.
ಆ ನಕಾರದಲ್ಲಿ ಉತ್ಪತ್ಯವಾದ ನಕಾರ ಬೀಜದಲ್ಲಿ
ವ ಶ ಷ ಸ ಎಂಬ ಚತುರ್ವರ್ಣಾಕ್ಷರ ಉತ್ಪತ್ಯವಾಯಿತ್ತು.
ಈ ಐವತ್ತೆರಡು ವರ್ಣಾಕ್ಷರವು ವರ್ಣಾಧ್ವ ನೋಡಾ.
ಇದಕ್ಕೆ **ಶಿವಾಗಮಸೂತ್ರೇ** :
''ಹಂ ಕ್ಷಂ ದ್ವಿವರ್ಣಕಂ ಚೈವ ಪರಮಾತ್ಮನಿ ಜಾಯತೇ ।
ಹಂ ಳಂ ದ್ವಿವರ್ಣಕಂ ಚಾಪಿ ಜೀವಾತ್ಮನಿ ಚ ಜಾಯತೇ ॥
ಅ ಆ ಇ ಈ ಉ ಊ ವರ್ಣಂ ಚ ಋ ೠ ಌ ೡ ವರ್ಣಕಂ ತಥಾ ।
ಏ ಐ ಓ ಔ ಅಂ ಅಃ ವರ್ಣಂ ಯಕಾರಂ ಚಾಪಿ ಜಾಯತೇ ॥
ಕ ಖ ಗ ಘ ಙ ವರ್ಣಂ ಚ ಚ ಛ ಜ ಝ ಞ ವರ್ಣಕಂ ।
ಟ ಠ ದ್ವಿವರ್ಣಕಂ ಚೈವ ವಕಾರೇ ಚ ಸಜಾಯತೇ ॥
ಡ ಢ ಣ ತ ಥ ವರ್ಣಂ ಚ ದ ಧ ನ ಪ ಫ ವರ್ಣಕಂ ।
ಬ ಭ ಮ ಯ ರ ವರ್ಣಂ ಚ ಲ ಏಕೋ ವರ್ಣಕಂ ತಥಾ ।
ಇತಿ ಷಡ್‌ವರ್ಣಕಂ ಚೈವ ಮಕಾರೇ ಚ ಸಜಾಯತೇ ॥
ವ ಶ ಷ ಸ ಚತುರ್ವರ್ಣಂ ನಕಾರೇ ಚ ಸಜಾಯತೇ ।
ಇತಿ ವರ್ಣಂ ಸಮುತ್ಪನ್ನಂ ವರ್ಣಾಧ್ವಂ ಚ ಪ್ರಕೀರ್ತಿತಂ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೦೧ ॥

೭೦೨

ಇನ್ನು ಇನ್ನೂರ ಇಪ್ಪತ್ತುನಾಲ್ಕು ಭುವನಂಗಳ ಉತ್ಪತ್ಯವೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಮಹದೋಂಕಾರ ಪ್ರಣವದಲ್ಲಿ
ಇನ್ನೂರು ಇಪ್ಪತ್ತುನಾಲ್ಕು ಭುವನ ಉತ್ಪತ್ಯವಾಯಿತ್ತು, ನೋಡಾ.
ಇದಕ್ಕೆ **ಮಹಾಪ್ರಳಯಕಾಲರುದ್ರೋಪನಿಷತ್** :
ಮಹದೋಂಕಾರಪ್ರಣವದಲ್ಲಿ–
''ದ್ವಿಶತಶ್ಚತುರ್ವಿಂಶತಿಭುವನಾ ಭವಂತಿ । ಓಂ ಪ್ರಣವಾತ್ಮಾ ದೇವತಾ ।
ಓಂಕಾರೇ ಚ ಲಯಂ ಪ್ರಾಪ್ತೇ ಪಂಚವಿಂಶತ್ಪ್ರಣವಾಂಶಕೇ ॥''
ಇಂತೆಂದು ಶ್ರುತಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೦೨ ॥

೭೦೩

ಇನ್ನು ಇನ್ನೂರ ಇಪ್ಪತ್ತುನಾಲ್ಕು ಭುವನಂಗಳ ವಿವರವದೆಂತೆಂದಡೆ :
ಅನಾಶ್ರಿತ, ಅನಾಥ, ಅನಂತ, ವ್ಯೋಮರೂಪ, ವ್ಯಾಪಿನಿ, ಊರ್ಧ್ವಗಾಮಿನಿ,
ಮೋಚಿಕಾ, ರೋಚಿಕಾ, ದೀಪಿಕೋದೀಪ, ಶಾಂತ್ಯತೀತೆ, ಶಾಂತಿ,
ವಿದ್ಯೆ, ಪ್ರತಿಷ್ಠೆ ನಿವೃತ್ತಿ ಸದಾಶಿವ, ಅಚಿಂತ್ಯ, ಸೂಕ್ಷ್ಮ
ವಾಮದೇವ, ಸತ್ಯಾನಂದ, ಸರ್ವೇಶ್ವರ, ಶಿವೋತ್ತಮ,
ನಿತ್ಯಾನಂದ, ಏಕನೇತ್ರ, ಸದಾನಂದ, ಏಕರುದ್ರ, ನಿಜಾನಂದ,
ತ್ರಿಮೂರ್ತಿ, ಶ್ರಿಕಂಠ, ಶಿಖಂಡಿ, ವಾಮಜೇಷ್ಠ, ರೌದ್ರಿ, ಕಲವಿಕರಣೆ, ?
ಕಾಳಿ, ಬಲವಿಕರಣೆ, ಸರ್ವಭೂತದಮನಿ, ಬಲಪ್ರಮದಿನಿ,
ಮನೋನ್ಮನಿ, ಅಂಗುಷ್ಠಮಾತ್ರಭುವನಿ, ಮಹಾಭುವನ, ಏಕಿಶಾನ, ಏಕ,
ಪಿಂಗಳೇಕ್ಷಣ, ಉದ್ಭವ, ಭವ, ವಾಮದೇವ, ಮಹಾದೇವ,
ಶಿಭೇದ, ಏಕವೀರ, ಪಂಚಾಂತಕ, ಶೂರ, ಸಂವರ್ತನ, ಜ್ಯೋತಿ,
ಚಂಡ, ಕ್ರೋಧ, ಅನಂತ, ಏಕನೇಕ, ಭವ್ಯ,
ಮಂಗಳ, ಅಜ, ಉಮಾಪತಿ, ಏಕಧೀರ, ಪ್ರಚಂಡ, ಈಶಾನ, ಉಗ್ರ, ಭೀಮ,
ಭೌಮ, ಕೌಮಾರಿ, ವೈಷ್ಣವ, ಬ್ರಾಹ್ಮಣ, ವೈಭವ, ಕೃತ, ಶಾಕೃತ,
ಯಾಮ್ಯ, ಪ್ರಜೇಶ, ಸೌಮ್ಯ, ಇಂದ್ರ, ಗಾಂಧರ್ವ, ಯಕ್ಷ, ರಾಕ್ಷಸ,
ಪೈಶಾಚಿಕ, ಸ್ಥಲೇಶ್ವರ, ಸ್ಥೂಲೇಶ್ವರ, ಶಂಖಕರ್ಣ, ಕಾಳಾಂಜನ,
ಮಂಡಲೇಶ್ವರ, ಮಾಕೋಟ, ದ್ವಿರಂಡ, ಛಗ, ಚಂದ, ಸ್ಥಾಣು, ಸ್ವರ್ಣಾಕ್ಷ,
ಭದ್ರಕರ್ಣ, ಮಹಾಲಯ, ಅವಿಮುಕ್ತ ರುದ್ರಕೋಟಿ, ವಸ್ತ್ರಾಪದ,
ಭೀಮೇಶ್ವರ, ಮಹೇಂದ್ರ, ಅಟ್ಟಹಾಸ, ವಿಮಲೇಶ್ವರ, ನಖಿಲ, ನಾಖಿಲ,
ಕುರುಕ್ಷೇತ್ರ, ಭೈರವ, ಕೈದಾರ, ಮಹಾಬಲ, ಮಧ್ಯಮೇಶ್ವರ,
ಮಾಹೇಂದ್ರಕೇಶ್ವರ, ಜಲಜೇಶ್ವರ, ಶ್ರೀಶೈಲ, ಹರಿಶ್ಚಂದ್ರ, ಅಕುಲಿಶ, ಮುಂಡಿ,
ಚಾರುಭೂತಿ, ಆಶಾಡಿ, ಪೌಷ್ಕರ, ನೈಮಿಷ, ಪ್ರಭಾಸ, ಅಮರೇಶ್ವರ,
ಭದ್ರಕಾಳ, ವೀರಭದ್ರ, ತ್ರಿಲೋಚನ, ವಿಷ್ಣು, ವಭ , ವಿವಾಹ,
ತ್ರಿದಶೇಶ್ವರ, ತ್ರಿಯಕ್ಷ, ಗಣಾ, ದೃಕ್ಷ, ವಿಭು, ಶಂಭು, ದೌಷ್ಟ್ರಿ
ವಜ್ರ, ಫಣೇಶ, ಉದುಂಬರೀಶ, ಗ್ರಸನ, ಮಾರುತಾಸನ,
ಕ್ರತುಮರ್ದನ, ಆನಂದ, ವೃಷಧರ, ಬಲಿಪ್ರಿಯ,
ಭೂತಪಾಲ, ಜೇಷ್ಠ, ಸರ್ವ, ಸುರೇಶಾನ, ವೇದಪಾರಗ, ಜ್ಞಾನಭೂತ,
ಸರ್ವಜ್ಞ, ಈಶ, ಸರ್ವವಿದ್ಯಾಧಿಪ, ಪ್ರಕಾಮದ, ಪ್ರಸೀದಡನ,
ಶ್ರೀಧರ, ಲಕ್ಷ್ಮೀಧರ, ಜಟಾಧರ, ಸೌಮ್ಯದೇಹ, ಧನ್ಯರೂಪ,
ನಿಧೀಶ, ಮೇಘವಾಹನ, ಕಪರ್ದಿ, ಪಂಚಶಿಖಿ, ಪ್ರಪಂಚಾಂತಕ,
ಕ್ಷಯಾಂತಕ, ತಿಕ್ಷು, ಸುಸೂಕ್ಷ್ಮ ವಾಯುವೇಗ, ಲಘು,
ಶೀಘ್ರ, ಸುನಾದ, ಮೇಘನಾದ, ಜ್ವಲಾಂತಕ, ದೀರ್ಘಬಾಹು,
ಜಯ, ಭದ್ರ, ಶ್ವೇತಮಹಾಬಲ, ಪಾಶಹಸ್ತ ಅತಿಬಲ,

ಮಹಾಬಲ, ವಾರುಣೇಶ, ದೌಷ್ಟ್ರೀವ, ಲೋಹಿತ, ಧೂಮ್ರ,
ವಿರೂಪಾಕ್ಷ, ಊರ್ಧ್ವಶೇಷ, ಉಭಯನಖ, ಕ್ರೂರದೃಷ್ಟಿ, ಹಂತ,
ಮಾರಣ, ನಿರುತಿ, ಧರ್ಮ, ಧರ್ಮಪರೇಣ, ನಿಯೋಕ್ತ್ರ, ಕರ್ತು, ಹರ,
ಮೃತ್ಯು, ಯಾಮ್ಯ, ಕ್ಷಯಾಂತಕ, ಭಸ್ಮಾಂತಕ, ಬಭ್ರು,
ದಹನ, ಜ್ವಲನ, ಹರಿಹರ, ಖಾದಕ, ಪಿಂಗ, ಹುತಾಶನ,
ಜಯರುದ್ರ, ತ್ರಿದಶಾಧಿಪ, ಪಿನಾಕಿ, ಶಾಸ್ತ್ರ, ಅವ್ಯಯ,
ವಿಭೂತಿ, ಪ್ರಮರ್ಧ, ವಜ್ರದೇಹ, ಬುಧ, ಅಜಕಪಾಲ,
ಈಶ್ವರ, ರುದ್ರ, ವಿಷ್ಣು ಬ್ರಹ್ಮ ಹಾಟಕ, ಕೂಷ್ಮಾಂಡ,
ಕಾಲಾಗ್ನಿರುದ್ರ, ಪ್ರಳಯಕಾಲ, ಮಹಾರುದ್ರ,
ಅಂತು ಇನ್ನೂರಾ ಇಪ್ಪತ್ತುನಾಲ್ಕು ಭುವನಂಗಳು ಭುಲನಾಥ್ವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೦೩ ||

೨೦೪

ಇನ್ನು ಮೂವತ್ತಾರು ತತ್ತ್ವಂಗಳುತ್ಪತ್ಯವದೆಂತೆಂದಡೆ :
ಪರಶಿವತತ್ವ ತಾನೆ ತನ್ನ ಲೀಲಾವಿನೋದಕ್ಕೆ ಸಕಲನಿಃಕಲತತ್ವವಾಯಿತ್ತು.
ಸಕಲನಿಃಕಲತತ್ವದಲ್ಲಿ ಮೂವತ್ತಾರು ತತ್ವಂಗಳುತ್ಪತ್ಯವಾಯಿತ್ತು.
ಆ ನಿಃಕಲತತ್ವದಲ್ಲಿ ದಶತತ್ವ ಉತ್ಪತ್ಯವದೆಂತೆಂದಡೆ :
ಪರಾಶಕ್ತಿ ಸದಾಶಿವ ಈಶ್ವರ ಶುದ್ಧವಿದ್ಯೆ ಮಾಯೆ ಕಾಲ ನಿಯತಿ
ಕಲೆ ವಿದ್ಯೆ ರಾಗ– ಈ ದಶತತ್ವಂಗಳು ನಿಃಕಲತತ್ವದಲ್ಲಿ ಹುಟ್ಟಿತ್ತು ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೨೦೪ ||

೨೦೫

ಇನ್ನು ಸಕಲತತ್ವದಲ್ಲಿ ಇಪ್ಪತ್ತುನಾಲ್ಕುತತ್ವ ಉತ್ಪತ್ಯವದೆಂತೆಂದಡೆ :
ಗುಣತ್ರಯ ಬುದ್ಧಿ ಅಹಂಕಾರ ಚಿತ್ತ ಶ್ರೋತ್ರ ತ್ವಕ್ಕು ಚಕ್ಷು
ಜಿಹ್ವೆ ಘ್ರಾಣ ವಾಕ್ಕು ಪಾಣಿ ಪಾದ ಪಾಯು ಗುಹ್ಯ ಶಬ್ದ ಸ್ಪರ್ಶ
ರೂಪು ರಸ ಗಂಧ ಆಕಾಶ ವಾಯು ತೇಜ ಅಪ್ಪು ಪೃಥ್ವಿ
ಈ ಇಪ್ಪತ್ತುನಾಲ್ಕು ತತ್ವಂಗಳು ಸಕಲತತ್ವದಲ್ಲಿ ಉತ್ಪತ್ಯವಾಯಿತ್ತು.
ಆ ಸಕಲ ನಿಃಕಲತತ್ವ ಮೊದಲಾಗಿ ರಾಗ ಪೃಥ್ವಿತತ್ವ ಕಡೆಯಾಗಿ
ಈ ಮೂವತ್ತಾರು ತತ್ವವು ತತ್ವಾಧ್ವ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೨೦೫ ||

೨೦೬

ಇನ್ನು ಷಟ್‌ಕಲೆಗಳುತ್ಪತ್ಯವದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಶಾಂತ್ಯತೀತೋತ್ತರಕಲೆ ಉತ್ಪತ್ಯವಾಯಿತ್ತು.

ಆ ಪ್ರಣವದ ದರ್ಪಣಾಕಾರದಲ್ಲಿ ಶಾಂತ್ಯತೀತಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಶಾಂತಿಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ವಿದ್ಯಾಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ಪ್ರತಿಷ್ಠಾಕಲೆ ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ನಿವೃತ್ತಿಕಲೆ ಉತ್ಪತ್ಯವಾಯಿತ್ತು.
ಅಂತು ಈ ಷಟ್‌ಕಲಾ ನಾಮಂಗಳು ಕಲಾಧ್ವ ನೋಡಾ.
ಇದಕ್ಕೆ ನಿಷ್ಕಲಾತೀತಾಗಮೇ :
“ಓಂಕಾರ ಜ್ಯೋತಿರೂಪೇ ಚ ಮಹತಿರ್ಜಾಯತೇ ಕಲಾ ।
ಓಂಕಾರ ದರ್ಪಣಾಕಾರೇ ಶಾಂತ್ಯತೀತಾ ಚ ಜಾಯತೇ ॥
ಓಂಕಾರ ಅರ್ಧಚಂದ್ರೇ ಚ ಕಲಾಶಾಂತಿ ಚ ಜಾಯತೇ ।
ಓಂಕಾರ ಕುಂಡಲಾಕಾರೇ ಕಲಾವಿದ್ಯಾ ಚ ಜಾಯತೇ ।
ಓಂಕಾರ ದಂಡರೂಪೇ ಚ ಪ್ರತಿಷ್ಠಾ ಜಾಯತೇ ಕಲಾ ॥
ಓಂಕಾರ ತಾರಕಾರೂಪೇ ನಿವೃತ್ತಿರ್ಜಾಯತೇ ಕಲಾ ।
ಇತಿ ಷಷ್ಠಕಲಾದೇವೀ ಸ್ಥಾನಸ್ಥಾನೇಷು ಜಾಯತೇ ॥ ”
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೨೦೬ ॥

೨೦೭

ಇನ್ನು ಷಡಧ್ವನ್ಯಾಸವದೆಂತೆಂದಡೆ :
ಆಧಾರಚಕ್ರದ ಚತುರ್ದಳಪದ್ಮದ ಮಧ್ಯದಲ್ಲಿಹ ಮಂತ್ರ
ಸದ್ಯೋಜಾತಮಂತ್ರ,
ಅಲ್ಲಿಹ ಪದಂಗಳು– ‘ವ್ಯೋಮವ್ಯಾಪಿನೆ ವ್ಯೋಮರೂಪಾಯ
ಸರ್ವವ್ಯಾಪಿನೆ ಶಿವಾಯ’ವೆಂಬ ನಾಲ್ಕು ಪದ.
ಅಲ್ಲಿಹ ವರ್ಣ ವ ಶ ಷ ಸ ಎಂಬ ನಾಲ್ಕು ವರ್ಣ.
ಅಲ್ಲಿಹ ಭುವನಂಗಳು– ಅನಾಶ್ರಿತ ಅನಾಥ ಅನಂತ
ವ್ಯೋಮರೂಪ ವ್ಯಾಪಿನಿ ಊರ್ಧ್ವಗಾಮಿನಿ
ಮೋಚಿಕಾ ರೋಚಿಕಾ ದೀಪಿಕೋದಿಕಾ
ಶಾಂತ್ಯತೀತೆ ಶಾಂತಿ ವಿದ್ಯೆ ಪ್ರತಿಷ್ಠೆ ನಿವೃತ್ತಿ
ಸದಾಶಿವ ಅಚಿಂತ್ಯವೆಂಬ ಹದಿನಾರು ಭುವನ.
ಅಲ್ಲಿಹ ತತ್ತ್ವ ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚತತ್ತ್ವ.
ಅಲ್ಲಿಹ ಕಲೆ, ನಿವೃತ್ತಿಕಲೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೦೭ ॥

೨೦೮

ಅಲ್ಲಿಂದ ಮೇಲೆ ಸ್ವಾಧಿಷ್ಠಾನಚಕ್ರದ
ಷಡುದಳಪದ್ಮದ ಮಧ್ಯದಲ್ಲಿಹ ಮಂತ್ರ ವಾಮದೇವಮಂತ್ರ.

ಅಲ್ಲಿಹ ಪದಂಗಳು ''ಈಶಾನ್ಯ ಮೂರ್ಧ್ನಾಯ ತತ್ಪುರುಷ ವಕ್ತ್ರಾಯ
ಅಘೋರ ಹೃದಯಾಯ ವಾಮದೇವ ಗುಹ್ಯಾಯ
ಸದ್ಯೋಜಾತ ಮೂರ್ತಯೇ ಓಂ ನಮೋ ನಮಃ ''
ಎಂಬ ಆರು ಪದ.
ಅಲ್ಲಿಹ ವರ್ಣ ಬ ಭ ಮ ಯ ರ ಲ ಎಂಬ ಆರು ವರ್ಣವಿಹುದು.
ಅಲ್ಲಿಹ ಭುವನ–ಸೂಕ್ಷ್ಮ, ವಾಮದೇವ,
ಸತ್ಯಾನಂದ , ಸರ್ವೇಶ್ವರ, ಶಿವೋತ್ತಮ, ನಿತ್ಯಾನಂದ,
ಏಕನೇತ್ರ, ಸದಾನಂದ, ಏಕರುದ್ರ, ನಿಜಾನಂದ,
ತ್ರಿಮೂರ್ತಿ, ಶ್ರೀಕಂಠ, ಶಿಖಂಡಿ, ವಾಮಜೇಷ್ಠ,
ರೌದ್ರಿ, ಕಲವಿಕರಣಿ, ಕಾಳಿ, ಬಲವಿಕರಣಿ,
ಸರ್ವಭೂತದಮನಿ, ಬಲಪ್ರಮದಿನಿ, ಮನೋನ್ಮನಿ,
ಅಂಗುಷ್ಠಮಾತ್ರಭುವನಿ, ಮಹಾಭುವನ,
ಏಕಿಶಾನವೆಂಬ ಇಪ್ಪತ್ತುನಾಲ್ಕು ಭುವನ.
ಅಲ್ಲಿಹ ತತ್ತ್ವ–ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚತತ್ತ್ವ.
ಅಲ್ಲಿಹ ಕಲೆ, ಪ್ರತಿಷ್ಠಾಕಲೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೭೦೮ ||

೭೦೯

ಅಲ್ಲಿಂದ ಮೇಲೆ ಮಣಿಪೂರಕ ಚಕ್ರದ
ದಶದಳಪದ್ಮದ ಮಧ್ಯದಲ್ಲಿಹ ಮಂತ್ರ ಅಘೋರಮಂತ್ರ.
ಅಲ್ಲಿಹ ಪದ – ''ಗುಹ್ಯಾತಿ ಗುಹ್ಯಾಯ ಗೌಪ್ತೇ ಅಭಿಧಾನಾಯ
ಸರ್ವಯೋಗಾಧಿಕೃತಾಯ ಜ್ಯೋತಿರೂಪಾಯ
ಪರಮೇಶ್ವರ ಪರಾಯ ಚೇತನ ಅಚೇತನ ವ್ಯೋಮಿನ್ ''
ಎಂಬ ಹತ್ತು ಪದ.
ಅಲ್ಲಿಹ ವರ್ಣ–ಡ ಢ ಣ ತ ಥ ದ ಧ ನ ಪ ಫ ಎಂಬ ಹತ್ತು ವರ್ಣ.
ಅಲ್ಲಿಹ ಭುವನ–ಏಕ, ಪಿಂಗಳೇಕ್ಷಣ, ಉದ್ಭವ, ಭವ,
ವಾಮದೇವ, ಮಹಾದೇವ,
ಶಿಭೇದ, ಏಕವೀರ, ಪಂಚಾಂತಕ, ಶೂರ, ಸಂವರ್ತನ,
ಜ್ಯೋತಿ, ಚಂಡ, ಕ್ರೋಧ, ಆನಂದ, ಏಕನೇಕ, ಭವ್ಯ,
ಮಂಗಳ, ಅಜ, ಉಮಾಪತಿ, ಏಕಧೀರ, ಪ್ರಚಂಡ,
ಈಶಾನ, ಉಗ್ರ, ಭೀಮ, ಭೌಮ, ಕೌಮಾರಿ, ವೈಷ್ಣವ,
ಬ್ರಾಹ್ಮಣ, ರೈಭವ, ಕೃತ, ಶಾಕೃತ, ಯಾಮ್ಯ, ಪ್ರಜೇಶ, ಸೌಮ್ಯ,
ಇಂದ್ರ, ಗಾಂಧರ್ವ, ಯಕ್ಷ, ರಾಕ್ಷಸ, ಪೈಶಾಚಿಕ ಎಂಬ ನಲ್ವತ್ತು ಭುವನ.
ಅಲ್ಲಿಹ ತತ್ತ್ವ–ವಾಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಪಂಚತತ್ತ್ವ.

ಅಲ್ಲಿಹ ಕಲೆ ವಿದ್ಯಾಕಲೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೦೯ ॥

೭೧೦

ಅಲ್ಲಿಂದ ಮೇಲೆ ಅನಾಹತಚಕ್ರದ
ದ್ವಾದಶದಳಪದ್ಮ ಮಧ್ಯದಲ್ಲಿಹ ಮಂತ್ರ ತತ್ಪುರುಷಮಂತ್ರ.
ಅಲ್ಲಿಹ ಪದ – ''ವ್ಯಾಪಿನ್ ರೂಪಿನ್ ಅರೂಪಿನ್ ಪ್ರಥಮ
ಪ್ರಥಮ ತೇಜಸ್ತೇಜ ಜ್ಯೋತಿರ್ಜ್ಯೋತಿ ಅರೂಪ
ಅನಿಲಿನ ಅಧೂಮ'' ವೆಂಬ ಹನ್ನೆರಡು ಪದ.
ಇಲ್ಲಿಹ ವರ್ಣ–ಕ ಖ ಗ ಘ ಙ ಚ ಛ ಜ ಝ ಞ ಟ ಠ
ಎಂಬ ಹನ್ನೆರಡು ವರ್ಣ.
ಅಲ್ಲಿಹ ಭುವನ–ಸ್ಥಲೇಶ್ವರ, ಸ್ಥೂಲೇಶ್ವರ, ಶಂಖಕರ್ಣ, ಕಾಳಾಂಜನ,
ಮಂಡಲೇಶ್ವರ, ಮಾಕೂಟ, ದ್ವಿರಂಡ, ಛಗ, ಚಂದ, ಸ್ಥಾಣು, ಸ್ವರ್ಣಾಕ್ಷ,
ಭದ್ರಕರ್ಣ, ಮಹಾಲಯ, ಅವಿಮುಕ್ತ ರುದ್ರಕೋಟಿ,
ವಸ್ತ್ರಾಪದ, ಭೀಮೇಶ್ವರ,
ಮಹೇಂದ್ರ, ಅಷ್ಟಹಾಸ, ವಿಮಲೇಶ್ವರ, ನಖಲ, ನಾಖಲ,
ಕುರುಕ್ಷೇತ್ರ, ಭೈರವ, ಕೈದಾರ, ಮಹಾಬಲ,
ಮಧ್ಯಮೇಶ್ವರ, ಮಾಹೇಂದ್ರಕೇಶ್ವರ, ಜಲಭೇಶ್ವರ,
ಶ್ರೀಶೈಲ, ಹರಿಶ್ಚಂದ್ರ, ಅಕುಲಿಶ, ಮುಂಡಿ, ಚಾರುಭೂತಿ,
ಆಷಾಡಿ, ಪೌಷ್ಕರ, ನೈಮಿಷ, ಪ್ರಭಾಸ, ಅಮರೇಶ್ವರ,
ಭದ್ರಕಾಳ, ವೀರಭದ್ರ, ತ್ರಿಲೋಚನ, ವಿಷ್ಣು, ವಭ,
ವಿವಾಮಿ, ತ್ರಿದಶೇಶ್ವರ, ತ್ರಿಯಕ್ಷ, ಗಣಾ
ಎಂಬ ನಾಲ್ವತ್ತೆಂಟು ಭುವನ.
ಅಲ್ಲಿಹ ತತ್ತ್ವ–ಶ್ರೋತ್ರ, ತ್ವಕ್ಕು, ಚಕ್ಷು, ಜಿಹ್ವೆ, ಘ್ರಾಣವೆಂಬ ಪಂಚತತ್ತ್ವ.
ಅಲ್ಲಿಹ ಕಲೆ–ಶಾಂತಿಕಲೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೧೦ ॥

೭೧೧

ಅಲ್ಲಿಂದ ಮೇಲೆ ವಿಶುದ್ಧಿಚಕ್ರದ
ಷೋಡಶದಳ ಪದ್ಮದ ಮಧ್ಯದಲ್ಲಿಹ ಮಂತ್ರ ಈಶಾನಮಂತ್ರ.
ಅಲ್ಲಿಹ ಪದ– ''ಅಭಸ್ಮ ಅನಾದೆ ಅನಾದೆ ನಾ. ನಾ ನಾ
ಧೂ ಧೂ ಧೂ ಓಂ ಭೂಃ ಓಂ ಭುವಃ ಓಂ ಸ್ವಾಹಾ
ಅನಿಧನಾ ನಿಧನೋದ್ಭವ ಶಿವ ಶರ್ವ'' ಎಂಬ ಹದಿನಾರು ಪದ.
ಅಲ್ಲಿಹ ವರ್ಣ– ಅ ಆ ಇ ಈ ಉ ಊ ಋ ೠ ಌ ೡ,
ಏ ಐ ಓ ಔ ಅಂ ಅಃ ಎಂಬ ಹದಿನಾರು ವರ್ಣ.

ಅಲ್ಲಿಹ ಭುವನ–ದೃಕ್ಷ, ವಿಭು, ಶಂಭು, ದೌಷ್ಟ್ರಿ, ವಜ್ರ, ಫಣೇಶ,
ಉದುಂಬರೀಶ, ಗ್ರಸನ, ಮಾರುತಾಶನ, ಕ್ರತುಮರ್ದನ,
ಆನಂದ, ವೃಷಧರ, ಬಲಿಪ್ರಿಯ, ಭೂತಪಾಲ,
ಜ್ಯೇಷ್ಠ, ಸರ್ವ, ಸುರೇಶಾನ, ವೇದಪಾರಗ, ಜ್ಞಾನಭೂತ,
ಸರ್ವಜ್ಞ, ಈಶ, ಸರ್ವವಿದ್ಯಾಧಿಪ, ಪ್ರಕಾಮದ, ಪ್ರಸೀದಡನ,
ಶ್ರೀಧರ, ಲಕ್ಷ್ಮೀಧರ, ಜಟಾಧರ, ಸೌಮ್ಯದೇಹ, ಧನ್ಯರೂಪ,
ನಿಧೀಶ, ಮೇಘವಾಹನ, ಕಪರ್ದಿ, ಪಂಚಶಿಖಿ, ಪ್ರಪಂಚಾಂತಕ,
ಕ್ಷಯಾಂತಕ, ತಿಕ್ಷು, ಸುಸೂಕ್ಷ್ಮ, ವಾಯುವೇಗ, ಲಘು, ಶೀಘ್ರ,
ಸುನಾದ, ಮೇಘನಾದ, ಜ್ವಲಾಂತಕ, ದೀರ್ಘಬಾಹು,
ಜಯ, ಭದ್ರ, ಶ್ವೇತಮಹಾಬಲ, ಪಾಶಹಸ್ತ, ಅತಿಬಲ,
ಮಹಾಬಲ, ವಾರುಣೇಶ, ದೌಷ್ಟ್ರೀವ, ಲೋಹಿತ,
ಧೂಮ್ರ, ವಿರೂಪಾಕ್ಷ, ಊರ್ಧ್ವಶೇಷ, ಉಭಯಾನಖ,
ಕ್ರೂರದೃಷ್ಟಿ, ಹಂತ, ಮಾರಣ, ನಿರುತಿ, ಧರ್ಮ, ಧರ್ಮಪರೀಣ
ನಿಯೋಕ್ತ್ರ ಎಂಬ ಅರವತ್ತುನಾಲ್ಕು ಭುವನ.
ಅಲ್ಲಿಹ ತತ್ತ್ವ–ಗುಣತ್ರಯ ಬುದ್ಧಿ ಅಹಂಕಾರ ಚಿತ್ತ ಸಕಲವೆಂಬ ಪಂಚತತ್ತ್ವ.
ಅಲ್ಲಿಹ ಕಲೆ–ಶಾಂತ್ಯತೀತ ಕಲೆ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೭೧೧ ॥

೭೧೨

ಅಲ್ಲಿಂದ ಮೇಲೆ ಆಜ್ಞಾಚಕ್ರವ ಚತುರ್ದಳಪದ್ಮದ
ಮಧ್ಯದಲ್ಲಿಹ ಮಂತ್ರ ಹೃದಯ ಶಿರ ಶಿಖಾ ಕವಚ
ನೇತ್ರಾಸ್ತ್ರಗಳೆಂಬ ಆರು ಮಂತ್ರ.
ಅಲ್ಲಿಹ ಪದ – ''ಪರಮಾತ್ಮ ಮಹೇಶ್ವರ,
ಮಹೇಶ್ವರ, ಮಹಾತೇಜ, ಮಹಾತೇಜ,
ಯೋಗಾಧಿಪತೇ ಮುಂಚ ಮುಂಚ ಪ್ರಮಥ ಪ್ರಮಥ
ಶರ್ವ ಶರ್ವ ಭವ ಭವ ಭವೋದ್ಭವ ಸರ್ವಭೂತ ಸುಖಪ್ರದ
ಸರ್ವಸಾನ್ನಿಧ್ಯಕರ ಬ್ರಹ್ಮ ವಿಷ್ಣು ರುದ್ರಪರ
ಅರ್ಚಿತ ಸ್ತುತಾ ಪೂರ್ವಸ್ಥಿತ ಸಾಕ್ಷಿಹಿ ಸಾಕ್ಷಿಹಿ ತುರುತುರು
ಪತಂಗ ಪತಂಗ ಪೂರ್ವಸ್ಥಿತ ಸಾಕ್ಷಿಹಿ ಸಾಕ್ಷಿಹಿ ತುರುತುರು
ಪತಂಗ ಪತಂಗ ಪಿಂಗ ಪಿಂಗ ಜ್ಞಾನ ಜ್ಞಾನ
ಶಬ್ದ ಶಬ್ದ ಸೂಕ್ಷ್ಮ ಸೂಕ್ಷ್ಮ ಶಿವ ಶರ್ವ ಶರ್ವ
ಓಂ ನಮಃಶಿವಾಯ, ಓಂ ನಮಃಶಿವಾಯ ನಮೋ ನಮಃ ಓಂ''
ಎಂಬ ನಲ್ವತ್ತಾರು ಪದ.
ಅಲ್ಲಿಹ ವರ್ಣ–ಹಂ ಳಂ ಹಂ ಕ್ಷಂ ಎಂಬ ನಾಲ್ಕು ವರ್ಣ.

''ಅಲ್ಲಿಹ ಭುವನ–ಕರ್ತೃ, ಹರ, ಮೃತ್ಯು, ಯಾಮ್ಯ,
ಕ್ಷಯಾಂತಕ, ಭಸ್ಮಾಂತಕ, ಬಭ್ರು, ದಹನ, ಜ್ವಲನ,
ಹರಿಹರ, ಖಾದತಕ್ಷ, ಪಿಂಗ, ಹುತಾಶನ, ಜಯರುದ್ರ,
ತ್ರಿದಶಾಧಿಪ, ಪಿನಾಕಿ, ಶಾಸ್ತ್ರ, ಅವ್ಯಯ, ವಿಭೂತಿ,
ಪ್ರಮರ್ಧ, ವಜ್ರದೇಹ, ಬುಧ, ಅಜಕಪಾಲಿ, ಈಶ್ವರ,
ರುದ್ರ, ವಿಷ್ಣು ಬ್ರಹ್ಮ ಹಾಟಕ, ಕೂಷ್ಮಾಂಡ,
ಕಾಲಾಗ್ನಿರುದ್ರ, ಪ್ರಳಯಕಾಲ, ಮಹಾರುದ್ರನೆಂಬ ಮೂವತ್ತೆರಡು ಭುವನ.
ಅಲ್ಲಿಹ ತತ್ವ–ಪರಶಿವ, ಪರಾಶಕ್ತಿ, ಸದಾಶಿವ,
ಈಶ್ವರ, ಮನ, ಶುದ್ಧವಿದ್ಯೆ, ಮಾಯೆ,
ಕಾಲ ಹನ್ನೆರಡು ನಿಯತಿ ಕಲೆ ವಿದ್ಯೆ ರಾಗವೆಂಬ ಹನ್ನೊಂದು ತತ್ವ
ಅಲ್ಲಿಹ ಕಲೆ–ಶಾಂತ್ಯತೀತೋತ್ತರ ಕಲೆ ನೋಡಾ
ಅಪ್ರಮಾಣಕೂಡಲಸಂಗಮದೇವಾ || ೭೧೨ ||

೭೧೩

ಈ ಮಂತ್ರಾಧ್ವ ಪದಾಧ್ವವ ತನ್ನಲ್ಲಿ ತಿಳಿದು
ಅನುಭವಿಸಬಲ್ಲಾತನ ಆಚಾರ್ಯನೆಂಬೆ ;
ವರ್ಣಾಧ್ವ ಭುವನಾಧ್ವವ ತನ್ನಲ್ಲಿ ತಿಳಿದು
ಅನುಭವಿಸಬಲ್ಲಾತನ ಆಚಾರ್ಯನೆಂಬೆ ;
ತತ್ವಾಧ್ವ ಕಲಾಧ್ವವ ತನ್ನಲ್ಲಿ ತಿಳಿದು
ಅನುಭವಿಸಬಲ್ಲಾತನ ಆಚಾರ್ಯನೆಂಬೆ ;
ಈ ಷಡಧ್ವವ ತನ್ನಲ್ಲಿ ತಿಳಿದು ಅನುಭವಿಸಬಲ್ಲಾತನ ಜಗದಾರಾಧ್ಯನೆಂಬೆ.
ಈ ಷಡಧ್ವವ ತನ್ನಲ್ಲಿ ತಿಳಿದು ಅನುಭವಿಸಲರಿಯದೆ
ಆಚಾರ್ಯರೆಂಬ ಅನಾಚಾರ್ಯರ ಮೆಚ್ಚುವನೆ
ನಮ್ಮ ಅಪ್ರಮಾಣಕೂಡಲಸಂಗಮದೇವ ? || ೭೧೩ ||

ಹೀಂಗೆಂದು ಷಡಧ್ವದುತ್ಪತ್ಯನ್ಯಾಸಸ್ಥಲವ ನಿರೂಪಿಸಲು ಪರಮಹರುಷಿತನಾಗಿ ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡಧ್ವದುತ್ಪತ್ಯನ್ಯಾಸಸ್ಥಲವನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ, ನಿಮ್ಮ ಮಹಾಜ್ಞಾನದೃಕ್ಕಿನಿಂದ ಕಂಡು ಪರಮಸುಖಿಯಾದೆನು. ಇನ್ನು ಷಡಧ್ವನಿವೃತ್ತಿಯನು ನಿರೂಪಿಸೆಂದು ಬಿನ್ನವಿಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೭೧೪

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿ ಹೃದಯಮಂತ್ರವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶಿರೋಮಂತ್ರವಡಗಿತ್ತು.

ಆ ಪ್ರಣವದ ಅರ್ಧಚಂದ್ರಕದಲ್ಲಿ ಶಿಖಾಮಂತ್ರವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಕವಚಮಂತ್ರವಡಗಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ನೇತ್ರಮಂತ್ರವಡಗಿತ್ತು.
ಆ ಪ್ರಣವದ ತಾರಕಸ್ವರೂಪದಲ್ಲಿ ಅಸ್ತ್ರಮಂತ್ರವಡಗಿತ್ತು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೭೧೪ ॥

೭೧೫

ಈಶಾನಮುಖದಲ್ಲಿ ಈಶಾನಮಂತ್ರವಡಗಿತ್ತು.
ತತ್ಪುರಷಮುಖದಲ್ಲಿ ತತ್ಪುರುಷಮಂತ್ರವಡಗಿತ್ತು.
ಅಘೋರಮುಖದಲ್ಲಿ ಅಘೋರಮಂತ್ರವಡಗಿತ್ತು.
ವಾಮದೇವಮುಖದಲ್ಲಿ ವಾಮದೇವಮಂತ್ರವಡಗಿತ್ತು.
ಸದ್ಯೋಜಾತಮುಖದಲ್ಲಿ ಸದ್ಯೋಜಾತಮಂತ್ರವಡಗಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೧೫ ॥

೭೧೬

ಆ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ
ತಾರಕಸ್ವರೂಪದಲ್ಲಿ ಸದ್ಯೋಜಾತಮುಖವಡಗಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ವಾಮದೇವಮುಖವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರಮುಖವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನಮುಖವಡಗಿತ್ತು ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಸದ್ಯೋಜಾತಮಘೋರಂ ಚ ವಾಮಂ ತತ್ಪುರುಷಸ್ತಥಾ ।
ಈಶಾನಂ ಪಂಚವಕ್ತ್ರಂ ಚ ಓಂಕಾರೇ ಚ ಲಯಂ ಗತಾಃ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೧೬ ॥

೭೧೭

ವ್ಯೋಮವ್ಯಾಪಿ ಮೊದಲಾಗಿ ಓಂಕಾರವೆಂಬ ಪದ ಕಡೆಯಾಗಿ
ಈ ತೊಂಬತ್ನಾಲ್ಕು ವ್ಯೋಮವ್ಯಾಪಿಪದಂಗಳು
ಅನೇಕಕೋಟಿ ಸೂರ್ಯಚಂದ್ರಾಗ್ನಿ
ಪ್ರಕಾಶವಾಗಿ ಮಹಾಜ್ಯೋತಿರ್ಮಯಲಿಂಗದಲ್ಲಿ
ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಚತುಃಷಷ್ಠಿಪದಂ ಚೈವ ದಶವಿಂಶತ್ಪದಂ ತಥಾ ।

ಇತಿ ಪದಾಧ್ವಕಂ ದೇವಿ ಲಿಂಗಗರ್ಭೇ ವಿಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೧೭ ॥

೭೧೮

ವ ಶ ಷ ಸ ಎಂಬ ಚತುವರ್ಣಾಕ್ಷರವು
ಆಧಾರಚಕ್ರದ ನಕಾರಬೀಜದಲ್ಲಿ ಅಡಗಿತ್ತು,
ಬ ಭ ಮ ಯ ರ ಲ ಎಂಬ ಷಡುವರ್ಣಾಕ್ಷರವು
ಸ್ವಾಧಿಷ್ಠಾನಚಕ್ರದ ಮಕಾರಬೀಜದಲ್ಲಿ ಅಡಗಿತ್ತು,
ಡ ಢ ಣ ತ ಥ ದ ಧ ನ ಪ ಫ ಎಂಬ ದಶಾಕ್ಷರವು
ಮಣಿಪೂರಕಚಕ್ರದ ಶಿಕಾರಬೀಜದಲ್ಲಿ ಅಡಗಿತ್ತು ನೋಡಾ
ಇದಕ್ಕೆ ಉತ್ತರ ವಾತುಲಾಗಮೇ :
'' ವ ಶ ಷ ಸಾಖ್ಯ ವರ್ಣಾಶ್ಚ ನಕಾರೇ ಚ ವಿಲೀಯತೇ ।
ಬ ಭ ದ್ವೇ ಮ ಯ ರ ಲ ಶ್ಚ ಮಕಾರೇ ಚ ವಿಲೀಯತೇ ॥
ಡ ಢ ಣ ಸ್ತಥಾವರ್ಣಾಶ್ಚ ದ ಧ ಪ ಫ ವರ್ಣಕಂ ।
ಇತ್ಯೇತೇ ದಶವರ್ಣಾಶ್ಚ ಶಿಕಾರೇ ಚ ಲಯಂ ಗತಾಃ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೧೮ ॥

೭೧೯

ಕ ಖ ಗ ಘ ಙ ಚ ಛ ಜ ಝ ಞ ಟ ಠ
ಎಂಬ ದ್ವಾದಶಾಕ್ಷರವು ಅನಾಹತಚಕ್ರದ
ವಕಾರಬೀಜದಲ್ಲಿ ಅಡಗಿತ್ತು,
ಅ ಆ ಇ ಈ ಉ ಊ ಋ ೠ ಲೃ ಲೄ ಏ ಐ ಓ ಔ ಅಂ ಅಃ
ಎಂಬ ಷೋಡಶ ವರ್ಣಾಕ್ಷರವು ವಿಶುದ್ಧಿಚಕ್ರದ
ಯಕಾರಬೀಜದಲ್ಲಿ ಅಡಗಿತ್ತು,
ಹಂ ಳಂ ಹಂ ಕ್ಷಂ ಎಂಬ ಚತುರ್ವರ್ಣಾಕ್ಷರವು
ಆಜ್ಞಾಚಕ್ರದ ಓಂಕಾರಬೀಜದ ಜ್ಯೋತಿಸ್ಸ್ವರೂಪದಲ್ಲಿಹ
ಚಿದಾತ್ಮ ಪರಮಾತ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ ಉತ್ತರವಾತುಲಾಗಮೇ :
''ಕ ಖ ದ್ವಯಂ ಗ ಗೋಪ್ಪಶ್ಚ ಛ ದ್ವೇ ಜ ಝ ಞ ಸ್ತಥಾ ।
ಟ ಠ ದ್ವಿವರ್ಣಕಂ ಚೈವ ವಕಾರೇ ಚ ವಿಲೀಯತೇ ॥
ಅ ಆ ಇ ಈ ಉ ಊ ವರ್ಣಂ ಚ ಋ ೠ ಲೃ ಲೄ ಸ್ತಥಾ ।
ಏ ಐ ಓ ಔ ತಥಾಃ ಅಂ ಅಃ ಯಕಾರೇ ಚ ಲಯಂ ಗತಾಃ ॥
ಹಂ ಕ್ಷಂ ದ್ವಿವರ್ಣಕಂ ಚೈವ ಪರಮಾತ್ಮೇ ವಿಲೀಯತೇ ।
ಹಂ ಳಂ ದ್ವಿವರ್ಣಕಂ ಚೈವ ಚಿದಾತ್ಮೇ ಚ ಲಯಂ ಗತಾಃ ॥

ಇತಿ ವರ್ಣಲಯಂ ಜ್ಞಾತುಂ ದುರ್ಲಭಂ ಕಮಲಾನನೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೧೯ ॥

೭೨೦

ಇನ್ನು ಪಂಚಾಕ್ಷರಂಗಳ ನಿವೃತ್ತಿಯೆಂತೆಂದಡೆ :
ಆ ಪ್ರಣವದ ತಾರಕಾಕೃತಿಯಲ್ಲಿಹ ನಕಾರದಲ್ಲಿ ನಕಾರವಡಗಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿಹ ಮಕಾರದಲ್ಲಿ ಮಕಾರವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರದಲ್ಲಿ ಶಿಕಾರವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿಹ ವಕಾರದಲ್ಲಿ ವಕಾರವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರದಲ್ಲಿ ಯಕಾರವಡಗಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ನಕಾರಶ್ಚ ಮಕಾರಶ್ಚ ಶಿಕಾರಶ್ಚ ವಕಾರಕಂ
ತಥಾ ಯಕಾರಂ ಚೈವ ಮೂಲಬೀಜಾಕ್ಷರೇ ಲಯಃ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೦ ॥

೭೨೧

ಅನಾಶ್ರಿತವೆಂಬ ಭುವನ ಮೊದಲಾಗಿ
ಕಾಲಾಗ್ನಿರುದ್ರನೆಂಬ ಭುವನ ಕಡೆಯಾಗಿ
ಇನ್ನೂರಿಪ್ಪತ್ನಾಲ್ಕು ಭುವನಂಗಳು
ಆ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರಪ್ರಣವದಲ್ಲಿ ಅಡಗಿತ್ತು ನೋಡಾ.
ಇದಕ್ಕೆ ಮಹಾವಾತುಲಾಗಮೇ :
''ಚತುರ್ವಿಂಶತಿ ಭುವನಂ ಚ ದ್ವಿಶತಂ ಭುವನಂ ತಥಾ ।
ಇತಿ ಭುವನಾಧ್ವಂ ಚ ದೇವೀ ಓಂಕಾರೇ ಚ ವಿಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೧ ॥

೭೨೨

ಇನ್ನು ಮೂವತ್ತಾರು ತತ್ವಂಗಳ ನಿವೃತ್ತಿ ಎಂತೆಂದಡೆ :
ರಾಗ ವಿದ್ಯೆ ಕಲೆ ನಿಯತಿ ಕಾಲ ಮಾಯೆ ಶುದ್ಧವಿದ್ಯೆ
ಈಶ್ವರ ಸದಾಶಿವ ಮಹಾಶಕ್ತಿ– ಈ ಹತ್ತು ತತ್ವವು
ನಿಃಕಲತತ್ವದಲ್ಲಿ ಅಡಗಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೨೨ ॥

೭೨೩

ಗುಣತ್ರಯ ಮನ ಬುದ್ಧಿ ಚಿತ್ತ ಅಹಂಕಾರ
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ, ವಾಕು ಪಾಣಿ ಪಾದ ಪಾಯು ಗುಹ್ಯ,
ಶಬ್ದ ಸ್ಪರ್ಶ ರೂಪ ರಸ ಗಂಧ, ಪೃಥ್ವಿ ಅಪ್ಪು ತೇಜ ವಾಯು ಆಕಾಶ
ಈ ಇಪ್ಪತ್ತು ನಾಲ್ಕು ತತ್ವಂಗಳು ಸಕಲತತ್ವದಲ್ಲಿ ಅಡಗಿತ್ತು
ಸಕಲ ನಿಃಕಲತತ್ವಂಗಳು ಏಕಾರ್ಥವಾಗಿ ಪರಶಿವತತ್ವವಾಗಿತ್ತು ನೋಡಾ.
ಇದಕ್ಕೆ **ಈಶ್ವರೋವಾಚ** :
''ರಾಗವಿದ್ಯಾಕಲಾಶ್ಚೈವ ನೇತಿಶ್ಚಕಾಲ ಮಾಯಯಾ ।
ಈಶ್ವರಃ ಶುದ್ಧವಿದ್ಯಾಶ್ಚ ಪರಾಶಕ್ತಿಃ ಸದಾಶಿವಃ ॥
ಇತಿ ದಶ ತತ್ವಂ ಚೈವ ನಿಃಕಲತತ್ವ ವಿಲೀಯತೇ ।
ಗುಣತ್ರಯಂ ಮನೋ ಬುದ್ಧಿಃ ಚಿತ್ತಮಹಂಕಾರಸ್ತಥಾ ॥
ಶ್ರೋತ್ರತ್ವಗ್ನೇತ್ರಜಿಹ್ವಾ ಚ ಘ್ರಾಣಂ ಪಂಚೇಂದ್ರಿಯಂ ತಥಾ ।
ವಾಕ್ ಪಾಣಿಶ್ಚ ಪಾದಶ್ಚ ಪಾಯುಗುಹ್ಯಸ್ತಥೈವ ಚ ॥
ಪೃಥಿವ್ಯಪ್‌ಸ್ತತಸ್ತೇಜಃ ವಾಯುರ್ವ್ಯೋಮ ತಥೈವ ಚ ।
ಇತಿ ದಶೇಂದ್ರಿಯಾಣಾಂ ಸಕಲ ತತ್ವವಿಲೀಯತೇ ।
ಸಕಲನಿಃಕಲೋರ್ಯೈಕ್ಯಂ ಪರತತ್ವಂ ವರಾನನೇ ॥ ''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೨೩ ॥

ಹೀಂಗೆಂದು ಷಡಧ್ವನಿವೃತ್ತಿಯನು ನಿರೂಪಿಸಲು ತನ್ನೊಳಗೆ ಪರಮ ಪರಿಣಾಮಿಯಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಷಡಧ್ವ ನಿವೃತ್ತಿಯನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ, ನಿಮ್ಮ ಸಮ್ಯಜ್ಞಾನ ದೃಕ್ಕಿನಿಂದ ತೋರಲು ಕಂಡು ಮಹಾನುಭಾವಸುಖಿಯಾದೆನು. ಇನ್ನು ಮೂವ ತ್ತಾರುತತ್ವಂಗಳ ನಿವೃತ್ತಿಯನು, ಷಡಂಗನಿವೃತ್ತಿಯನು, ಎಲೆ ಸದ್ಗುರುಸ್ವಾಮಿ ಅರಿಯೆನು ನಿರೂಪಿಸೆಂದು ಬಿನ್ನವಿಸಲು ಆ ಸದ್ಗುರುಸ್ವಾಮಿ ನಿರೂಪಿಸಿದರ ದೆಂತೆಂದಡೆ :

೭೨೪

ಆಕಾಶ ಚೈತನ್ಯ ಭಾವ ಕರ್ತ ಕ್ಷೇತ್ರಜ್ಞ ಶಿವನು– ಈ ಆರು ತತ್ವಂಗಳು
ಆ ಅಖಂಡ ಮಹಾಜ್ಯೋತಿಪ್ರಣವದ ಜ್ಯೋತಿಸ್ವರೂಪವಾಗಿಹ
ಪರಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಶಿವಕ್ಷೇತ್ರಜ್ಞಕರ್ತಾರಂ ಭಾವಂ ಚೈತನ್ಯಮಂತರಂ ।
ಏವಂತು ಷಡ್ವಿಧಂ ಪ್ರೋಕ್ತಂ ಪರಬ್ರಹ್ಮಣಿಲೀಯತೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೨೪ ॥

೭೨೫

ವಾಕ್ ಶ್ರೋತ್ರ ಜ್ಞಾನ ಶಬ್ದ ಮಹಾಕಾಶ ಸದಾಶಿವನು
ಈ ಆರು ತತ್ತ್ವಂಗಳು
ಆ ಅಖಂಡ ಮಹಾಜ್ಯೋತಿಪ್ರಣವದ ದರ್ಪಣಾಕಾರವಾಗಿಹ
ವಿಜ್ಞಾನಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಸದಾಶಿವಂ ಮಹಾಕಾಶಂ ಶಬ್ದಂ ಜ್ಞಾನಂ ಚ ಶ್ರೋತ್ರಕಂ ।
ವಾಕ್ ತಥಾ ಷಡ್ವಿಧಂ ಪ್ರೋಕ್ತಂ ವಿಜ್ಞಾನಬ್ರಹ್ಮಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೫ ॥

೭೨೬

ಪಾಣಿ ತ್ವಕ್ಕು ಮನ ಸ್ಪರ್ಶ ವಾಯು ಈಶ್ವರನು
ಈ ಆರು ತತ್ತ್ವಂಗಳು
ಅಖಂಡ ಮಹಾಜ್ಯೋತಿಪ್ರಣವದ ಅರ್ಧಚಂದ್ರಕಸ್ವರೂಪವಾಗಿಹ
ಆನಂದಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಈಶ್ವರೋ ವಾಯು ಸ್ಪರ್ಶ ಮನ ಸ್ತ್ವತ್‌ಪಾಣಿರುಚ್ಯತೇ ।
ಷಡ್‌ಸಂಮಿಶ್ರಿತಂ ಯಸ್ತು ಬ್ರಹ್ಮಾನಂದೇ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೬ ॥

೭೨೭

ಪಾದ ನೇತ್ರ ಅಹಂಕಾರ ರೂಪ ಅಗ್ನಿ ರುದ್ರನು
ಈ ಆರು ತತ್ತ್ವಂಗಳು
ಆ ಅಖಂಡ ಮಹಾಜ್ಯೋತಿಪ್ರಣವದ ಕುಂಡಲಾಕಾರವಾಗಿಹ
ಕಲಾಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ರುದ್ರೋ ತೇಜಃ ತಥಾ ರೂಪಂ ಮಹಾನೇತ್ರಂ ಚ ಪಾದಯೋಃ ।
ಷಡಂಗಮಿಶ್ರಿತಂ ಚೇತಿ ಕಲಾಬ್ರಹ್ಮಣಿ ಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೭ ॥

೭೨೮

ಗುಹ್ಯ ಜಿಹ್ವೆ ಬುದ್ಧಿ ರಸ ಅಪ್ಪು ವಿಷ್ಣು
ಈ ಆರು ತತ್ತ್ವಂಗಳು

ಆ ಅಖಂಡ ಮಹಾಜ್ಯೋತಿಪ್ರಣವದ ದಂಡಕಸ್ವರೂಪವಾಗಿಹ
ಪಿಂಡಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ವಿಷ್ಣುರ್ಆಪೋ ರಸೋ ಬುದ್ಧಿಃ ಜಿಹ್ವಾ ಗುಹ್ಯ ಸ್ತಥೈವ ಚ ।
ಷಟ್‌ತತ್ವಮಿದಂ ಪ್ರೋಕ್ತಂ ಪಿಂಡಬ್ರಹ್ಮಣಿ ಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೮ ॥

೭೨೯

ಗುದ ಘ್ರಾಣ ಚಿತ್ತ ಗಂಧ ಪೃಥ್ವಿ ಬ್ರಹ್ಮ
ಆ ಆರು ತತ್ತ್ವಂಗಳು
ಆ ಅಖಂಡ ಮಹಾಜ್ಯೋತಿಪ್ರಣವದ ತಾರಕಸ್ವರೂಪವಾಗಿಹ
ಮೂರ್ತಿಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಧಾತಾ ಧಾತ್ರೀಚ ಗಂಧಂ ಚ ಚಿತ್ತಂ ಘ್ರಾಣಗುದಸ್ತಥಾ ।
ಏತೇಷಾಂ ಮಿಶ್ರಿತಂ ಷಟ್ಕಂ ಮೂರ್ತಿಬ್ರಹ್ಮಣಿ ಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೨೯ ॥

೭೩೦

ಇನ್ನು ಷಡಂಗನಿವೃತ್ತಿ ಅದೆಂತೆಂದಡೆ :
ಶಿವ ಸದಾಶಿವ ಈಶ್ವರ ರುದ್ರ ವಿಷ್ಣು ಬ್ರಹ್ಮ
ಈ ಆರು ಶಿವಾಂಗವು ಚಿಚ್ಛಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ ।
ಶಿವಂ ಶಿವಾಂಗಮಿತ್ಯೇತೇ ಚಿದ್ರೂಪೇ ಚ ವಿಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೦ ॥

೭೩೧

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಕ್ಷೇತ್ರಜ್ಞ
ಈ ಆರು ಭೂತಾಂಗವು ಪರಾಶಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಭೂಜಲಾಗ್ನಿ ಮರುದ್ವ್ಯೋಮ ಕ್ಷೇತ್ರಜ್ಞಶ್ಚ ದೇವಹಿ ।
ಭೂತಾಂಗಂ ಚಮಿದಂ ಪ್ರೋಕ್ತಂ ಪರೇ ರೂಪೇ ವಿಲೀಯತೇ ॥ ''

ಇಂತೆಂದುದಾಗಿ
ಅಪ್ರಮಾಣಕೂಡಲಸಂಗಮದೇವಾ. ॥ ೭೩೧ ॥

೭೩೨

ಗಂಧ ರಸ ರೂಪ ಸ್ಪರ್ಶ ಶಬ್ದ ಕರ್ತನು
ಈ ಆರು ಯೋಗಾಂಗವು ಆದಿಶಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಗಂಧಂ ಚ ರಸರೂಪೇ ಚ ಸ್ಪರ್ಶನಂ ಶಬ್ದಮೇವ ಹಿ ।
ಕರ್ತಾರಂ ಚೇತಿ ಯೋಗಾಂಗಂ ಆದಿರೂಪೇ ವಿಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೨ ॥

೭೩೩

ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನ ಭಾವ
ಈ ಆರು ಕಾಮಾಂಗವು ಇಚ್ಛಾಶಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಚಿತ್ತಂ ಬುದ್ಧಿರಹಂಕಾರಂ ಮನೋ ಜ್ಞಾನಂ ಚ ಭಾವಕಂ ।
ಷಟ್ ಕಾಮಾಂಗಮಿದಂ ಪ್ರೋಕ್ತಂ ಇಚ್ಛಾರೂಪೇ ವಿಲೀಯತೇ ॥ ''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೩ ॥

೭೩೪

ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಚೇತನ
ಈ ಆರು ವಿದ್ಯಾಂಗವು ಜ್ಞಾನಶಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಘ್ರಾಣಂ ಜಿಹ್ವಾ ಚ ನೇತ್ರಂ ಚ ತ್ವಕ್ ಶ್ರೋತ್ರಂ ಚೇತನಂ ವಿದುಃ ।
ಷಣ್ಣಾಂ ವಿದ್ಯಾಂಗಮೇವೇತಿ ಜ್ಞಾನಶಕ್ತಿಷು ಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೪ ॥

೭೩೫

ಪಾಯು ಗುಹ್ಯ ಪಾದ ಪಾಣಿ ವಾಕ್ ಅಂತರ್
ಈ ಆರು ಕರ್ಮಾಂಗವು ಕ್ರಿಯಾಶಕ್ತಿಯಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ನಿಃಕಲಾತೀತಾಗಮೇ** :
''ಪಾಯುಶ್ಚಗುಹ್ಯಪಾದಶ್ಚ ಹಸ್ತವಾಗಂತರಂ ತಥಾ ।
ಷಟ್ಕರ್ಮಾಂಗಮಿದಂ ಪ್ರೋಕ್ತಂ ಕ್ರಿಯಾಶಕ್ತಿಸ್ತು ವಿಲೀಯತೇ ॥ ''

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೫ ॥

೭೩೬

ಇನ್ನು ಷಡುಶಕ್ತಿಗಳ ನಿವೃತ್ತಿ ಅದೆಂತೆಂದಡೆ :
ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿಯಡಗಿದಳು.
ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿಯಡಗಿದಳು.
ಆದಿಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿಯಡಗಿದಳು.
ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿಯಡಗಿದಳು.
ನಿಃಶಬ್ದವೆಂಬ ಪರಬ್ರಹ್ಮದ ಚಿಂತಾಶಕ್ತಿಯ ಸಹಸ್ರಾಂಶದಲ್ಲಿ
ಚಿಚ್ಛಕ್ತಿಯಡಗಿದಳು.
ಆ ನಿಃಶಬ್ದವೆಂಬ ಪರಬ್ರಹ್ಮದ ಚಿಂತೆಯು ಅಡಗಿ
ಶೂನ್ಯ ನಿಶ್ಶೂನ್ಯವಾಗಿತ್ತು ನೋಡಾ.
ಇದಕ್ಕೆ **ನಿರಂಜನಾತೀತಾಗಮೇ** :
''ಜ್ಞಾನಶಕ್ತಿಃ ಸಹಸ್ರಾಂಶೇ ಕ್ರಿಯಾಶಕ್ತಿಶ್ಚ ಲೀಯತೇ ।
ಇಚ್ಛಾಶಕ್ತಿ ಸಹಸ್ರಾಂಶೇ ಜ್ಞಾನಶಕ್ತಿಶ್ಚ ಲೀಯತೇ ॥
ಆದಿಶಕ್ತಿ ಸಹಸ್ರಾಂಶೇ ಇಚ್ಛಾಶಕ್ತಿಶ್ಚ ಲೀಯತೇ ।
ಪರಾಶಕ್ತಿ ಸಹಸ್ರಾಂಶೇ ಆದಿಶಕ್ತಿಶ್ಚ ಲೀಯತೇ ॥
ಚಿಚ್ಛಕ್ತಿ ಸಹಸ್ರಾಂಶೇ ಪರಾಶಕ್ತಿಶ್ಚ ಲೀಯತೇ ।
ಚಿಂತಾಶಕ್ತಿಸಹಸ್ರಾಂಶೇ ಚಿಚ್ಛಕ್ತಿಶ್ಚ ವಿಲೀಯತೇ ।
ನಿಶ್ಶಬ್ದಬ್ರಹ್ಮಚಿಂತಾಯಾಂ ನಿಶ್ಚಿಂತಂ ಪರಮಂ ಪದಂ ॥''
ಇಂತೆಂದುದಾಗಿ,
ಇದಕ್ಕೆ **ಶ್ರುತಿ** :
''ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೬ ॥

೭೩೭

ಅನಂತಕೋಟಿ ತತ್ವಂಗಳನೊಳಕೊಂಡು
ಅನಂತಕೋಟಿ ಅಜಪೆ ಗಾಯತ್ರಿಯನೊಳಕೊಂಡು
ಅನಂತಕೋಟಿ ಅಕ್ಷರಂಗಳನೊಳಕೊಂಡು
ಅನಂತಕೋಟಿ ಶಕ್ತಿಗಳನೊಳಕೊಂಡು
ಅನಂತಕೋಟಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರನೊಳಕೊಂಡು
ಅನಂತಕೋಟಿ ಚಂದ್ರಾದಿತ್ಯರನೊಳಕೊಂಡು
ಅನಂತಕೋಟಿ ಭುವನಂಗಳನೊಳಕೊಂಡು

ಅನಂತಕೋಟಿ ಭುವನಾಧಿಪತಿಗಳನೊಳಕೊಂಡು
ಅನಂತಕೋಟಿ ಬ್ರಹ್ಮಾಂಡಂಗಳನೊಳಕೊಂಡು
ತಿರುಗಿ ತಿರುಗಿ ಬಹ ಅನಂತಕೋಟಿ ಕಲ್ಪಾಂತರಂಗಳನೊಳಕೊಂಡು
ಮೂರ್ತಿಬ್ರಹ್ಮ ಪಿಂಡಬ್ರಹ್ಮ ಕಲಾಬ್ರಹ್ಮ
ಬ್ರಹ್ಮಾನಂದಬ್ರಹ್ಮ ವಿಜ್ಞಾನಬ್ರಹ್ಮ ಪರಬ್ರಹ್ಮವೆಂಬ
ಷಡುಸ್ಥಲಬ್ರಹ್ಮವನೊಳಕೊಂಡು
ಆದಿ ಮಧ್ಯಾವಸಾನಂಗಳಿಲ್ಲದೆ ಅಖಂಡಮಹದೋಂಕಾರ
ಪ್ರಣವವಾಗಿದ್ದುದು ನೋಡಾ.
ಇದಕ್ಕೆ **ಮಹಾಲಿಂಗಾಗಮೇ** :
''ಆದಿಮಧ್ಯಾಂತ ಶೂನ್ಯಂಚ ಶೂನ್ಯಂ ಶೂನ್ಯಾದಿಶೋ ದಶ ।
ಸರ್ವಶೂನ್ಯಂ ನಿರಾಕಾರಂ ನಿಶ್ಶಬ್ದಂ ಪರಮಂ ಪದಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೭ ॥

ಹೀಂಗೆಂದು ಮೂವತ್ತಾರು ತತ್ವಂಗಳ ನಿವೃತ್ತಿಯನು, ಷಡುಶಕ್ತಿಗಳ ನಿವೃತ್ತಿಯನು ನಿರೂಪಿಸಿಲು ಪರಮಹರುಷಿತನಾಗಿ ಮತ್ತಂ, ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಮೂವತ್ತಾರು ತತ್ವಂಗಳ ನಿವೃತ್ತಿಯನು, ಷಡುಶಕ್ತಿಗಳ ನಿವೃತ್ತಿಯನು ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಲು ಕಂಡು ಪರಮಸುಖಿಯಾದೆನು. ಇನ್ನು ಷಡ್ಭೂತಂಗಳು ಮೊದಲಾಗಿ ಪರಿಣಾಮ ಕಡೆಯಾಗಿ ಎಲ್ಲಾ ನಿವೃತ್ತಿಮಾರ್ಗಂಗಳ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂಘಡೆ :

೭೩೮

ಪರಬ್ರಹ್ಮಸ್ವರೂಪವಾಗಿಹ ಪರಮಪ್ರಣವದ ತಾರಕಸ್ವರೂಪದಲ್ಲಿ
ಪೃಥ್ವಿಯೆಂಬ ಮಹಾಭೂತವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಅಪ್ಪುವೆಂಬ ಮಹಾಭೂತವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ತೇಜವೆಂಬ ಮಹಾಭೂತವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ವಾಯುವೆಂಬ ಮಹಾಭೂತವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಆಕಾಶವೆಂಬ ಮಹಾಭೂತವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ
ಆತ್ಮನೆಂಬ ಮಹಾಭೂತವಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಪೃಥ್ವೀರಾಪಃ ಸ್ತಥಾ ತೇಜಃ ವಾಯುಶ್ಚಾಕಾಶ ಚೇತನಃ ।
ಇತಿ ಷಷ್ಠಭೂತಾನಿ ದೇವೀ ಓಂಕಾರ ಗರ್ಭೆ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೮ ॥

೭೩೯

ಇನ್ನು ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ
ಶರಣ ಐಕ್ಯನ ನಿವೃತ್ತಿ ಅದೆಂತೆಂದಡೆ :
ಆ ಪ್ರಣವದ ತಾರಕಸ್ವರೂಪದಲ್ಲಿ ಭಕ್ತನಡಗಿದನು.
ಆ ಪ್ರಣವದ ದಂಡಕಸ್ವರೂಪದಲ್ಲಿ ಮಾಹೇಶ್ವರನಡಗಿದನು.
ಆ ಪ್ರಣವದ ಕುಂಡಲಾಕಾರದಲ್ಲಿ ಪ್ರಸಾದಿಯಡಗಿದನು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಪ್ರಾಣಲಿಂಗಿಯಡಗಿದನು.
ಆ ಪ್ರಣವದ ದರ್ಪಣಾಕಾರದಲ್ಲಿ ಶರಣನಡಗಿದನು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಐಕ್ಯನಡಗಿದನು ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
''ಭಕ್ತೋ ಮಹೇಶ್ವರಶ್ಚೈವ ಪ್ರಸಾದಿಪ್ರಾಣಲಿಂಗಿಕಃ ।
ತಥಾ ಶರಣಂ ಚೈಕ್ಯಂಚ ಓಂಕಾರಗರ್ಭೇ ಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೩೯ ॥

೭೪೦

ಇನ್ನು ಷಡ್ವಿಧಹಸ್ತನಿವೃತ್ತಿ ಅದೆಂತೆಂದಡೆ :
ಆ ಪ್ರಣವದ ತಾರಕಸ್ವರೂಪದಲ್ಲಿ ಸುಚಿತ್ತಹಸ್ತವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಸುಬುದ್ಧಿಹಸ್ತವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನಿರಹಂಕಾರಹಸ್ತವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಸುಮನಹಸ್ತವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಸುಜ್ಞಾನಹಸ್ತವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಸದ್ಭಾವಹಸ್ತವಡಗಿತ್ತು ನೋಡಾ.
ಇದಕ್ಕೆ **ಚಿತ್ಪಿಂಡಾಗಮೇ** :
''ಚಿತ್ತಂ ಬುದ್ಧಿರಹಂಕಾರಂ ಮನೋ ಜ್ಞಾನಂ ಚ ಭಾವಕಂ ।
ಇತಿ ಷಷ್ಠಕರಂ ದೇವಿ ಓಂಕಾರೇ ಚ ಲಯಂ ಗತಾಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೦ ॥

೭೪೧

ಇನ್ನು ಷಡ್ವಿಧಲಿಂಗನಿವೃತ್ತಿ ಅದೆಂತೆಂದಡೆ :
ಆ ಪ್ರಣವದ ತಾರಕಾಕೃತಿಯಲ್ಲಿ ಆಚಾರಲಿಂಗವಡಗಿತ್ತು.
ಆ ಪ್ರಣವದ ದಂಡಕಾಕೃತಿಯಲ್ಲಿ ಗುರುಲಿಂಗವಡಗಿತ್ತು.
ಆ ಪ್ರಣವದ ಕುಂಡಲಾಕೃತಿಯಲ್ಲಿ ಶಿವಲಿಂಗವಡಗಿತ್ತು.
ಆ ಪ್ರಣವದ ಅರ್ಧಚಂದ್ರಾಕೃತಿಯಲ್ಲಿ ಜಂಗಮಲಿಂಗವಡಗಿತ್ತು.

ಆ ಪ್ರಣವದ ದರ್ಪಣಾಕೃತಿಯಲ್ಲಿ ಪ್ರಸಾದಲಿಂಗವಡಗಿತ್ತು.
ಆ ಪ್ರಣವದ ಜ್ಯೋತಿಸ್ತಂಭಾಕೃತಿಯಲ್ಲಿ ಮಹಾಲಿಂಗವಡಗಿತ್ತು ನೋಡಾ.
ಇದಕ್ಕೆ **ಶಿವಲಿಂಗಾಗಮೇ** :
''ಓಂಕಾರ ತಾರಕರೂಪೇ ಆಚಾರಲಿಂಗಂ ಲೀಯತೇ ।
ಓಂಕಾರ ದಂಡಕರೂಪೇ ಗುರುಲಿಂಗಂ ಚ ಲೀಯತೇ ॥
ಓಂಕಾರ ಕುಂಡಲಾಕಾರೇ ಶಿವಲಿಂಗಂ ಚ ಲೀಯತೇ ।
ಓಂಕಾರಾರ್ಧಚಂದ್ರೇಚ ಚರಲಿಂಗಂ ಚ ಲೀಯತೇ ।
ಓಂಕಾರ ದರ್ಪಣಾಕಾರೇ ಪ್ರಸಾದಲಿಂಗ ಲೀಯತೇ ।
ಓಂಕಾರ ಜ್ಯೋತಿರೂಪೇ ಚ ಮಹಾಲಿಂಗಂ ಚ ಲೀಯತೇ ।
ಇತಿ ಷಡ್ಲಿಂಗ ಐಕ್ಯಂ ಜ್ಞಾತುಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೧ ॥

೭೪೨

ಇನ್ನು ಷಡ್ವಿಧಮುಖಂಗಳ ನಿವೃತ್ತಿ ಅದೆಂತೆಂದಡೆ :
ಆ ಪ್ರಣವದ ತಾರಕಸ್ವರೂಪದಲ್ಲಿ ಘ್ರಾಣೇಂದ್ರಿಯವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಜಿಹ್ವೇಂದ್ರಿಯವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನೇತ್ರೇಂದ್ರಿಯವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ತ್ವಗೇಂದ್ರಿಯವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶ್ರೋತ್ರೇಂದ್ರಿಯವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಮನಸ್ಸೇಂದ್ರಿಯವಡಗಿತ್ತು ನೋಡಾ.
ಇದಕ್ಕೆ **ಚಿತ್ಪ್ರಕಾಶಾಗಮೇ** :
''ಓಂಕಾರ ತಾರಕರೂಪೇ ಘ್ರಾಣೇಂದ್ರಿಯಂ ಲಯಂ ಗತಾ ।
ಓಂಕಾರ ದಂಡರೂಪೇ ಚ ಜಿಹ್ವೇಂದ್ರಿಯಂ ಲಯಂ ಗತಾ ।
ಓಂಕಾರ ಕುಂಡಲಾಕಾರೇ ನೇತ್ರಂ ಚ ತತ್ರ ಜಾಯತೇ ।
ಓಂಕಾರಾರ್ಧಚಂದ್ರೇ ಚ ತ್ವಗೇಂದ್ರಿಯಲಯಂ ಸದಾ ।
ಓಂಕಾರ ದರ್ಪಣಾಕಾರೇ ಶ್ರೋತ್ರಶ್ಚೈವ ವಿಲೀಯತೇ ।
ಓಂಕಾರ ಜ್ಯೋತಿರೂಪೇ ಚ ಮಾನಸಂಚ ವಿಲೀಯತೇ ।
ಇತಿ ಮುಖಂ ಲಯ ಜ್ಞಾತುಂ ಸುಸೂಕ್ಷ್ಮಂ ಶೃಣು ಪಾರ್ವತೀ ॥
ಇಂತೆಂದುದಾಗಿ,
ಇದಕ್ಕೆ **ಚಕ್ರಾತೀತಾಗಮೇ** :
''ಶ್ರೋತ್ರಂ ತ್ವಗ್ನೇತ್ರಜಿಹ್ವಾ ಚ ಘ್ರಾಣಂ ಚ ಹೃದಯಂ ತಥಾ ।
ಇತಿ ಷಷ್ಠಮುಖಂ ದೇವಿ ಓಂಕಾರೇ ಚ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೨ ॥

೭೪೩

ಇನ್ನು ಷಡ್ವಿಧಪರಿಣಾಮದ ನಿವೃತ್ತಿ ಅದೆಂತೆಂದಡೆ :
ಪರಬ್ರಹ್ಮಸ್ವರೂಪವಾಗಿಹ ಪರಮಪ್ರಣವದ
ತಾರಕಸ್ವರೂಪದಲ್ಲಿ ಗಂಧೇಂದ್ರಿಯವಡಗಿತ್ತು,
ಆ ಪ್ರಣವದ ದಂಡಕಸ್ವರೂಪದಲ್ಲಿ ರಸನೇಂದ್ರಿಯವಡಗಿತ್ತು,
ಆ ಪ್ರಣವದ ಕುಂಡಲಾಕಾರದಲ್ಲಿ ರೂಪೇಂದ್ರಿಯವಡಗಿತ್ತು,
ಆ ಪ್ರಣವದ ಅರ್ಧಚಂದ್ರಕದಲ್ಲಿ ಸ್ಪರ್ಶನೇಂದ್ರಿಯವಡಗಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿ ಶಬ್ದೇಂದ್ರಿಯವಡಗಿತ್ತು,
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ತೃಪ್ತೇಂದ್ರಿಯವಡಗಿತ್ತು ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
''ಶಬ್ದ ಸ್ಪರ್ಶಂ ಚ ರೂಪಂ ಚ ರಸಗಂಧಸ್ತಥೈವಚ ।
ಪಂಚೇಂದ್ರಿಯ ಸಹ ತೃಪ್ತಿ ನಾದಸ್ತಾನೇ ವಿಲೀಯತೇ ॥''
ಇಂತೆಂದುದಾಗಿ
ಅಪ್ರಮಾಣಕೂಡಲಸಂಗಮದೇವಾ. ॥ ೭೪೩ ॥

೭೪೪

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮನೆಂಬ
ಷಡ್ವಿಧ ಅಂಗಂಗಳನೊಳಕೊಂಡು,
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬ
ಷಟ್ಸ್ಥಲವನೊಳಕೊಂಡು,
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವವೆಂಬ
ಷಡ್ವಿಧ ಹಸ್ತಂಗಳನೊಳಕೊಂಡು,
ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂಬ
ಷಡ್ವಿಧಲಿಂಗಂಗಳನೊಳಕೊಂಡು,
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಹೃದಯವೆಂಬ
ಷಡ್ವಿಧಮುಖಂಗಳನೊಳಕೊಂಡು,
ಗಂಧ ರಸ ರೂಪ ಸ್ಪರ್ಶ ಶಬ್ದ ತೃಪ್ತಿಯೆಂಬ
ಷಡ್ವಿಧದ್ರವ್ಯವನೊಳಕೊಂಡು,
ಕೂರ್ಮನು ತನ್ನ ವಿನೋದಕ್ಕೆ ತಾ ನಡೆಯಬೇಕಾದರೆ
ತಾನು ತನ್ನ ಕಾಲು ಕೈ ತಲೆ ಬಾಲವ ತೋರಿ ಅಡಗಿಸಿಕೊಂಬುದು.
ಅದರ ಹಾಂಗೆ ನಿಶ್ಶಬ್ದವೆಂಬ ಪರಬ್ರಹ್ಮವು ತನ್ನ ಲೀಲಾವಿನೋದಕ್ಕೆ
ತಾನು ತನ್ನ ತಾರಕಸ್ವರೂಪ ದಂಡಕಸ್ವರೂಪ
ಕುಂಡಲಾಕಾರ ಅರ್ಧಚಂದ್ರಕ ದರ್ಪಣಾಕಾರ

ಜ್ಯೋತಿಸ್ವರೂಪವ ತೋರಿ ಅಡಗಿಸಿಕೊಂಡು,
ಆದಿ ಮಧ್ಯ ಅಂತ್ಯವಿಲ್ಲದೆ ದಶದಿಶೆಗಳಿಲ್ಲದೆ
ಸರ್ವಶೂನ್ಯ ನಿರಾಕಾರವಾಗಿಹ
ಅಖಂಡ ಪರಂಜ್ಯೋತಿರ್ಮಯಲಿಂಗವಾಗಿಹುದು ನೋಡಾ.
ಇದಕ್ಕೆ **ಮಹಾಲಿಂಗಾಗಮೇ** :
''ಆದಿಮಧ್ಯಾಂತಶೂನ್ಯಂ ಚ ಶೂನ್ಯಂ ಶೂನ್ಯಂ ದಿಶೋ ದಶ ।
ಸರ್ವಶೂನ್ಯಂ ನಿರಾಕಾರಂ ನಿರ್ದ್ವಂದ್ವಂ ಪರಮಂ ಪದಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೪ ॥

ಷಡಂಗ ಮೊದಲಾಗಿ ಪರಿಣಾಮ ಕಡೆಯಾಗಿ ನಿವೃತ್ತಮಾರ್ಗವ ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ, ನಿಮ್ಮ ಸ್ವಾನುಭಾವದೃಕ್ಕಿನಿಂದ ತೋರಲು ಪರಮ ಮಹಾನುಭಾವಸುಖಿಯಾದೆನು. ಇನ್ನು ವಿಂಶತಿಚಕ್ರಂಗಳ ನಿವೃತ್ತಿ ಮೊದಲಾಗಿ ಚತುರ್ವೇದ ಅಜಪೆ ಗಾಯತ್ರಿಯಾದಿ ನಿವೃತ್ತಿ ಕಡೆಯಾಗಿ ನಿವೃತ್ತಿಮಾರ್ಗಂಗಳನ್ನು ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೭೪೫

ಸ್ವಾಧಿಷ್ಠಾನಚಕ್ರದ ಸಹಸ್ರಾಂಶದಲ್ಲಿ ಆಧಾರಚಕ್ರವಡಗಿತ್ತು.
ಮಣಿಪೂರಕಚಕ್ರದ ಸಹಸ್ರಾಂಶದಲ್ಲಿ ಸ್ವಾಧಿಷ್ಠಾನಚಕ್ರವಡಗಿತ್ತು.
ಅನಾಹತಚಕ್ರದ ಸಹಸ್ರಾಂಶದಲ್ಲಿ ಮಣಿಪೂರಕಚಕ್ರವಡಗಿತ್ತು.
ವಿಶುದ್ಧಿಚಕ್ರದ ಸಹಸ್ರಾಂಶದಲ್ಲಿ ಅನಾಹತಚಕ್ರವಡಗಿತ್ತು.
ಆಜ್ಞಾಚಕ್ರದ ಸಹಸ್ರಾಂಶದಲ್ಲಿ ವಿಶುದ್ಧಿಚಕ್ರವಡಗಿತ್ತು.
ನಿಷಾದಚಕ್ರದ ಸಹಸ್ರಾಂಶದಲ್ಲಿ ಆಜ್ಞಾಚಕ್ರವಡಗಿತ್ತು.
ಸುಷುಪ್ತಿಚಕ್ರದ ಸಹಸ್ರಾಂಶದಲ್ಲಿ ನಿಷಾದಚಕ್ರವಡಗಿತ್ತು.
ಬ್ರಹ್ಮಚಕ್ರದ ಸಹಸ್ರಾಂಶದಲ್ಲಿ ಸುಷುಪ್ತಿಚಕ್ರವಡಗಿತ್ತು.
ಶಿಖಾಚಕ್ರದ ಸಹಸ್ರಾಂಶದಲ್ಲಿ ಬ್ರಹ್ಮಚಕ್ರವಡಗಿತ್ತು.
ಪಶ್ಚಿಮಚಕ್ರದ ಸಹಸ್ರಾಂಶದಲ್ಲಿ ಶಿಖಾಚಕ್ರವಡಗಿತ್ತು.
ಅಣುಚಕ್ರದ ಸಹಸ್ರಾಂಶದಲ್ಲಿ ಪಶ್ಚಿಮಚಕ್ರವಡಗಿತ್ತು.
ನಿಷ್ಕಲಚಕ್ರದ ಸಹಸ್ರಾಂಶದಲ್ಲಿ ಅಣುಚಕ್ರವಡಗಿತ್ತು.
ನಿರಾಳಚಕ್ರದ ಸಹಸ್ರಾಂಶದಲ್ಲಿ ನಿಷ್ಕಳಚಕ್ರವಡಗಿತ್ತು.
ಸುರಾಳಚಕ್ರದ ಸಹಸ್ರಾಂಶದಲ್ಲಿ ನಿರಾಳಚಕ್ರವಡಗಿತ್ತು.
ಕಲಾಚಕ್ರ ಸಹಸ್ರಾಂಶದಲ್ಲಿ ಸುರಾಳಚಕ್ರವಡಗಿತ್ತು.
ಬಿಂದುಚಕ್ರದ ಸಹಸ್ರಾಂಶದಲ್ಲಿ ಕಲಾಚಕ್ರವಡಗಿತ್ತು.
ನಾದಚಕ್ರದ ಸಹಸ್ರಾಂಶದಲ್ಲಿ ಬಿಂದುಚಕ್ರವಡಗಿತ್ತು.

ಗುರುಚಕ್ರದ ಸಹಸ್ರಾಂಶದಲ್ಲಿ ನಾದಚಕ್ರವಡಗಿತ್ತು.
ಚರಚಕ್ರದ ಸಹಸ್ರಾಂಶದಲ್ಲಿ ಗುರುಚಕ್ರವಡಗಿತ್ತು.
ಪರಚಕ್ರದ ಸಹಸ್ರಾಂಶದಲ್ಲಿ ಚರಚಕ್ರವಡಗಿತ್ತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
''ಸ್ವಾಧಿಷ್ಠಾನ ಸಹಸ್ರಾಂಶೇ ಆಧಾರಶ್ಚ ವಿಲೀಯತೇ ।
ಮಣಿಪೂರ ಸಹಸ್ರಾಂಶೇ ಸ್ವಾಧಿಷ್ಟಂ ಚಕ್ರ ಲೀಯತೇ ॥
ಹೃಚ್ಚಕ್ರ ಸಹಸ್ರಾಂಶೇ ಮಣಿಪೂರಂ ಲೀಯತೇ ತಥಾ ।
ವಿಶುದ್ಧಿಶ್ಚ ಸಹಸ್ರಾಂಶೇ ಹೃತ್ಕಂಜ ತಥಾ ಲಯಂ ॥
ಆಜ್ಞಾನಚಕ್ರ ಸಹಸ್ರಾಂಶೇ ವಿಶುದ್ಧಿಶ್ಚ ವಿಲೀಯತೇ ।
ನಿಷಾದಸ್ಯ ಸಹಸ್ರಾಂಶೇ ಆಜ್ಞಾಚಕ್ರಂ ಚ ಲೀಯತೇ ॥
ಸುಪ್ತಿಚಕ್ರಸಹಸ್ರಾಂಶೇ ನಿಷಾದಂ ಲೀಯತೇ ತಥಾ ।
ವಿಶುದ್ಧಿಶ್ಚ ಸಹಸ್ರಾಂಶೇ ವಿಶುದ್ಧಿಚಕ್ರಂ ಲೀಯತೇ ॥
ಬ್ರಹ್ಮಚಕ್ರ ಸಹಸ್ರಾಂಶೇ ಸುಷುಪ್ತಿಚಕ್ರಂ ಲೀಯತೇ ।
ಶಿಖಾಚಕ್ರ ಸಹಸ್ರಾಂಶೇ ಬ್ರಹ್ಮಚಕ್ರಂ ಚ ಲೀಯತೇ ॥
ಪಶ್ಚಿಮಚಕ್ರ ಸಹಸ್ರಾಂಶೇ ಶಿಖಾಚಕ್ರಶ್ಚ ಲೀಯತೇ ।
ಅಣುಚಕ್ರ ಸಹಸ್ರಾಂಶೇ ಪಶ್ಚಿಮಚಕ್ರ ಲೀಯತೇ ॥
ನಿಷ್ಕಳಸ್ಯ ಸಹಸ್ರಾಂಶೇ ಅಣುಚಕ್ರಶ್ಚ ಲೀಯತೇ ।
ನಿರಾಳಸ್ಯ ಸಹಸ್ರಾಂಶೇ ನಿಷ್ಕಳಚಕ್ರ ಲೀಯತೇ ॥
ಸುರಾಳಸ್ಯ ಸಹಸ್ರಾಂಶೇ ಸುರಾಳಶ್ಚಕ್ರ ಲೀಯತೇ ।
ಕಲಾಚಕ್ರ ಸಹಸ್ರಾಂಶೇ ಸುರಾಳಶ್ಚಕ್ರ ಲೀಯತೇ ॥
ಬಿಂದುಚಕ್ರ ಸಹಸ್ರಾಂಶೇ ಕಲಾಚಕ್ರಂ ವಿಲೀಯತೇ ।
ನಾದಚಕ್ರ ಸಹಸ್ರಾಂಶೇ ಬಿಂದುಚಕ್ರಂ ಚ ಲೀಯತೇ ॥
ಗುರುಚಕ್ರ ಸಹಸ್ರಾಂಶೇ ನಾದಚಕ್ರಂ ಚ ಲೀಯತೇ ।
ಚರಚಕ್ರ ಸಹಸ್ರಾಂಶೇ ಗುರುಚಕ್ರಂ ಚ ಲೀಯತೇ ।
ಪರಚಕ್ರ ಸಹಸ್ರಾಂಶೇ ಚರಚಕ್ರಶ್ಚ ಲೀಯತೇ ।
ಇತಿ ಚಕ್ರ ಲಯಂ ಜ್ಞಾನಂ ಸುಸೂಕ್ಷ್ಮಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೫ ॥

೭೪೬

ಇನ್ನು ದ್ವಿದಶಕಮಲಂಗಳ ನಿವೃತ್ತಿ ಅದೆಂತೆಂದಡೆ :
ಚತುರ್ದಳಪದ್ಮ ಷಡುದಳಪದ್ಮದಲ್ಲಿ ಅಡಗಿತ್ತು.
ಆ ಷಡ್ದಳಪದ್ಮ ದಶದಳಪದ್ಮದಲ್ಲಿ ಅಡಗಿತ್ತು.
ಆ ದಶದಳಪದ್ಮ ದ್ವಾದಶದಳಪದ್ಮದಲ್ಲಿ ಅಡಗಿತ್ತು.
ಆ ದ್ವಾದಶದಳಪದ್ಮ ಷೋಡಶದಳಪದ್ಮದಲ್ಲಿ ಅಡಗಿತ್ತು.

ಆ ಷೋಡಶದಳಪದ್ಮ ದ್ವಿದಳಪದ್ಮದಲ್ಲಿ ಅಡಗಿತ್ತು.
ಆ ದ್ವಿದಳಪದ್ಮ ಚೌಷಷ್ಠಿದಳಪದ್ಮದಲ್ಲಿ ಅಡಗಿತ್ತು.
ಆ ಚೌಷಷ್ಠಿದಳಪದ್ಮ ಶತದಳಪದ್ಮದಲ್ಲಿ ಅಡಗಿತ್ತು.
ಆ ಶತದಳಪದ್ಮ ಸಹಸ್ರದಳಪದ್ಮದಲ್ಲಿ ಅಡಗಿತ್ತು.
ಆ ಸಹಸ್ರದಳಪದ್ಮ ತ್ರಿದಳಪದ್ಮದಲ್ಲಿ ಅಡಗಿತ್ತು.
ಆ ತ್ರಿದಳಪದ್ಮ ಏಕದಳಪದ್ಮದಲ್ಲಿ ಅಡಗಿತ್ತು.
ಆ ಏಕದಳಪದ್ಮ ತ್ರಿಸಹಸ್ರದಳಪದ್ಮದಲ್ಲಿ ಅಡಗಿತ್ತು.
ಆ ತ್ರಿಸಹಸ್ರದಳಪದ್ಮ ಲಕ್ಷದಳಪದ್ಮದಲ್ಲಿ ಅಡಗಿತ್ತು.
ಆ ಲಕ್ಷದಳಪದ್ಮ ಕೋಟಿದಳಪದ್ಮದಲ್ಲಿ ಅಡಗಿತ್ತು.
ಆ ಕೋಟಿದಳಪದ್ಮ ಅರ್ಬುದದಳಪದ್ಮದಲ್ಲಿ ಅಡಗಿತ್ತು.
ಆ ಅರ್ಬುದದಳಪದ್ಮ ಖರ್ವದಳಪದ್ಮದಲ್ಲಿ ಅಡಗಿತ್ತು.
ಆ ಖರ್ವದಳಪದ್ಮ ಮಹಾಖರ್ವದಳಪದ್ಮದಲ್ಲಿ ಅಡಗಿತ್ತು.
ಆ ಮಹಾಖರ್ವದಳಪದ್ಮ ಪದ್ಮದಳಪದ್ಮದಲ್ಲಿ ಅಡಗಿತ್ತು.
ಆ ಪದ್ಮದಳಪದ್ಮ ಕ್ಷೋಣಿದಳಪದ್ಮದಲ್ಲಿ ಅಡಗಿತ್ತು.
ಆ ಕ್ಷೋಣಿದಳಪದ್ಮ ಕ್ಷಿತಿದಳಪದ್ಮದಲ್ಲಿ ಅಡಗಿತ್ತು.
ಆ ಕ್ಷಿತಿದಳಪದ್ಮ ಮಹಾಕ್ಷಿತಿದಳಪದ್ಮದಲ್ಲಿ ಅಡಗಿತ್ತು.
ಆ ಮಹಾಕ್ಷಿತಿದಳಪದ ಪರಾಪರಕ್ಕೂ ಪರವಾಗಿಹ ಪರಬ್ರಹ್ಮದ
ನೆನಹುಮಾತ್ರದಲ್ಲಿ ಅಡಗಿತ್ತು ನೋಡಾ.

**ಇದಕ್ಕೆ ಚಕ್ರಾತೀತಾಗಮೇ :**

''ಚತುರ್ದಳಪದ್ಮಶ್ಚೈವ ಷಡ್ದಳೇ ಚ ವಿಲೀಯತೇ ।
ಷಡ್ದಳಪದ್ಮಕಂ ಚೈವ ದಶದಳೇ ಲಯಂ ತಥಾ ॥
ದಶದಳಪದ್ಮಶ್ಚೈವ ದ್ವಾದಶದಳೇ ಲೀಯತೇ ।
ದ್ವಾದಶದಳಪದ್ಮಶ್ಚ ಷಷ್ಠಾದಶದಳೇ ಲಯಃ ॥
ಷಷ್ಠಾದಶದಳಂ ಚೈವ ಬ್ರಹ್ಮಪದ್ಮೇ ವಿಲೀಯತೇ ।
ದ್ವಿದಳೇ ಚ ವಿಲೀಯತೇ ತಥಾ ದ್ವಿದಳಪದ್ಮಶ್ಚ ॥
ಚತುಷಷ್ಠಿರ್ದಳೇ ಲಯಂ ಚೌಷಷ್ಠಿರ್ದಳೇ ಲಯಂ ।
ಚೌಪಷ್ಠಿದಳಪದ್ಮಂ ಚ ಶತದಳಪದ್ಮೇ ಲಯಂ ।
ಶತದಳಪದ್ಮಶ್ಚೈವ ಬ್ರಹ್ಮಪದ್ಮೇ ವಿಲೀಯತೇ ।
ಸಹಸ್ರದಳಪದ್ಮಂ ಚ ತ್ರಿದಳೇ ಚ ವಿಲೀಯತೇ ॥
ತ್ರಿದಳಕಮಲಶ್ಚೈವ ಏಕಪದ್ಮೇ ವಿಲೀಯತೇ
ತ್ರಿಸಹಸ್ರಕಮಲೇ ಚ ಏಕಪದ್ಮಶ್ಚ ವಿಲೀಯತೇ ॥
ತ್ರಿಸಹಸ್ರದಳಂ ಪದಂ ಲಕ್ಷದಳೇ ವಿಲೀಯತೇ ।
ತಥಾ ಲಕ್ಷದಳಂ ಪದ್ಮಂ ಕೋಟಿದಳೇ ವಿಲೀಯತೇ ॥
ಕೋಟಿದಳಮಹಾಪದ್ಮಂ ಅರ್ಬುದದಳೇ ವಿಲೀಯತೇ ॥

ಅರ್ಬುದದಳಪದ್ಮಶ್ಚ ಖರ್ವದಳೇ ಚ ವಿಲೀಯತೇ ॥
ಖರ್ವದಳಪದ್ಮಶ್ಚ ಮಹಾಖರ್ವದಳೇ ಲಯಾಃ ।
ಮಹಾಖರ್ವದಳಂ ಚೈವ ಪದ್ಮದಳೇ ಚ ಲೀಯತೇ ॥
ತಥಾ ಪದ್ಮದಳಂ ಪದ್ಮಂ ಕ್ಷೋಣಿದಳಪದ್ಮೇ ಲಯಾಃ ।
ಕ್ಷೋಣಿದಳ ಮಹಾಪದ್ಮಂ ಕ್ಷಿತಿದಳಪದ್ಮೇ ಲಯಾಃ ॥
ಕ್ಷಿತಿದಳ ಮಹಾಪದ್ಮಂ ಮಹಾಕ್ಷಿತಿದಳೇ ಲಯಾ ಃ ।
ಮಹಾಕ್ಷಿತಿದಳಂ ಪದ್ಮಂ ಪರಬ್ರಹ್ಮೇ ಲಯಂ ತಥಾ ।
ಇತಿ ಪದ್ಮಲಯಂ ಜ್ಞಾತುಂ ದುರ್ಲಭಂ ಚ ವರಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೬ ॥

೭೪೭

ಇನ್ನು ವಿಂಶತಿಕಮಲದಳಾಕ್ಷರಂಗಳ ನಿವೃತ್ತಿ ಅದೆಂತೆಂದಡೆ :
'ವಶಷಸ' ಎಂಬ ಚತುರಾಕ್ಷರವು
ಆಧಾರಚಕ್ರದ ನಕಾರಬೀಜದಲ್ಲಿ ಅಡಗಿತ್ತು.
'ಬಭಮಯರಲ' ಎಂಬ ಷಡಾಕ್ಷರವು
ಸ್ವಾಧಿಷ್ಠಾನಚಕ್ರದ ಮಕಾರಬೀಜದಲ್ಲಿ ಅಡಗಿತ್ತು.
'ಡಢಣತಥದಧನಪಫ' ಎಂಬ ದಶಾಕ್ಷರವು
ಮಣಿಪೂರಕಚಕ್ರದ ಶಿಕಾರಬೀಜದಲ್ಲಿ ಅಡಗಿತ್ತು.
'ಕಖಗಘಙ ಚಛಜಝಞ ಟಠ' ಎಂಬ ದ್ವಾದಶಾಕ್ಷರವು
ಅನಾಹತಚಕ್ರದ ವಕಾರಬೀಜದಲ್ಲಿ ಅಡಗಿತ್ತು.
'ಅಆ ಇಈ ಉಊ ಋೠ ಌೡ ಏಐ ಓಔ ಅಂಅಃ'
ಎಂಬ ಷೋಡಶಾಕ್ಷರವು ವಿಶುದ್ಧಿಚಕ್ರದ ಯಕಾರಬೀಜದಲ್ಲಿ ಅಡಗಿತ್ತು.
'ಹಂ ಳಂ ಹಂ ಕ್ಷಂ' ಎಂಬ ಚತುರಾಕ್ಷರವು
ಆಜ್ಞಾಚಕ್ರದ ಓಂಕಾರಬೀಜದ ಜ್ಯೋತಿಸ್ವರೂಪದಲ್ಲಿಹ
ಚಿದಾತ್ಮ ಪರಮಾತ್ಮದಲ್ಲಿ ಅಡಗಿತ್ತು.
ದಶದಳದ ಶತಾಕ್ಷರಂಗಳು ಸ್ವಯಾತ್ಮದಲ್ಲಿ ಅಡಗಿತ್ತು.
ಸಹಸ್ರದಳ ತ್ರಿಸಹಸ್ರಾಕ್ಷರವು ಪರತತ್ವದಲ್ಲಿ ಅಡಗಿತ್ತು.
ತ್ರಿದಳ ತ್ರಿಯಕ್ಷರಂಗಳು ವಿಶ್ವಾತ್ಮಕದಲ್ಲಿ ಅಡಗಿತ್ತು.
ಏಕದಳದ ಏಕಾಕ್ಷರಂಗಳು ಸರ್ವಾತ್ಮದಲ್ಲಿ ಅಡಗಿತ್ತು.
ತ್ರಿಸಹಸ್ರದಳದ ತ್ರಿಸಹಸ್ರಾಕ್ಷರವು
ನಿರ್ಗುಣಾತ್ಮತತ್ವದಲ್ಲಿ ಅಡಗಿತ್ತು.
ಲಕ್ಷದಳದ ಲಕ್ಷಾಕ್ಷರಂಗಳು ನಿಃಕಳಾತ್ಮತತ್ವದಲ್ಲಿ ಅಡಗಿತ್ತು.
ಕೋಟಿದಳದ ಕೋಟಿ ಅಕ್ಷರಂಗಳು ಶಿವಾತ್ಮತತ್ವದಲ್ಲಿ ಅಡಗಿತ್ತು.

ಅರ್ಬುದದಳದ ಅರ್ಬುದಾಕ್ಷರಂಗಳು
ಮಹಾತತ್ವದಲ್ಲಿ ಅಡಗಿತ್ತು.
ಖರ್ವದಳದ ಖರ್ವಾಕ್ಷರಂಗಳು ನಿರಾಮಯಾತ್ಮತತ್ವದಲ್ಲಿ ಅಡಗಿತ್ತು.
ಮಹಾಖರ್ವದಳದ ಮಹಾಖರ್ವಾಕ್ಷರಂಗಳು
ನಿರಾತ್ಮತತ್ವದಲ್ಲಿ ಅಡಗಿತ್ತು.
ಪದ್ಮದಳದ ಪದ್ಮಾಕ್ಷರಂಗಳು ನಿರಾಕಾರತತ್ವದಲ್ಲಿ ಅಡಗಿತ್ತು.
ಕ್ಷೋಣಿದಳದ ಕ್ಷೋಣಿ ಅಕ್ಷರಂಗಳು ಅಚಲಾತ್ಮತತ್ವದಲ್ಲಿ ಅಡಗಿತ್ತು.
ಕ್ಷಿತಿದಳದ ಕ್ಷಿತಿ ಅಕ್ಷರಂಗಳು ಅಖಂಡಾತ್ಮತತ್ವದಲ್ಲಿ ಅಡಗಿತ್ತು.
ಮಹಾಕ್ಷಿತಿದಳದ ಮಹಾಕ್ಷಿತಿ ಅಕ್ಷರಂಗಳು
ಪರಕೆಪರವಾಗಿಹ ಪರಬ್ರಹ್ಮದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ವ ಶಃ ಷ ಸಾಖ್ಯ ವರ್ಣಾಶ್ಚ ಸಕಾರೇ ಚ ವಿಲೀಯತೇ ।
ಬ ಭ ದ್ವಯೇ ಮಯರಲಶ್ಚ ಮಕಾರೇ ಚ ವಿಲೀಯತೇ ॥
ಡಢಣಸ್ತಥ ವರ್ಣಂ ಚ ದಧನ ಪಫ ವರ್ಣಕಂ ।
ಇತ್ಯೇತೇ ದಶವರ್ಣಾಶ್ಚ ಶಿಕಾರೇ ಚ ವಿಲೀಯತೇ ॥
ಕಖದ್ವಯಂ ಗಘೊಜಶ್ಚ ಚಛ ದ್ವೇ ಜಝಞಸ್ತಥಾ ।
ಟಠ ದ್ವಿವರ್ಣಕಂಚೈವ ವಕಾರೇಚ ವಿಲೀಯತೇ ॥
ಅಆ ಇಈ ಉಊ ವರ್ಣಂ ಋೠ ಚ ಲೃಲೄ ತಥಾ ।
ಏಐ ಓಔ ತಥಾ ಅಂ ಅಃ ಯಕಾರೇ ಚ ವಿಲೀಯತೇ ॥
ಹಂ ಕ್ಷಂ ದ್ವಿವರ್ಣಕಂ ಚೈವ ಪರಮಾತ್ಮನಿ ಚ ವಿಲೀಯತೇ ।
ಹಂ ಳಂ ದ್ವಿವರ್ಣಕಂ ಚೈವ ಚಿದಾತ್ಮನಿ ಲಯಂ ತಥಾ ॥
ಚತುಃಷಷ್ಠಿಮಾತೃಕಂ ಚೈವ ತತ್ವಾತ್ಮನಿ ವಿಲೀಯತೇ ।
ಶತದಳಾಕ್ಷರಂ ಚೈವ ಸ್ವಯಾತ್ಮನಿ ವಿಲೀಯತೇ ॥
ಸಹಸ್ರಾಕ್ಷರಾತ್ಮಾಚ್ಚೈವ ಪರತತ್ವೇ ವಿಲೀಯತೇ ।
ತಥಾ ತ್ರಿಯಕ್ಷರಂ ಚೈವ ವಿಶ್ವಾತ್ಮನಿ ವಿಲೀಯತೇ ॥
ಏಕದಳಾಕ್ಷರಂ ಚೈವ ಸರ್ವಾತ್ಮನಿ ವಿಲೀಯತೇ ।
ತ್ರಿಸಹಸ್ರಾಕ್ಷರಂ ಚೈವ ನಿರ್ಗುಣಾತ್ಮನಿ ಲೀಯತೇ ॥
ತಥಾ ಲಕ್ಷಾಕ್ಷರಂ ಚೈವ ನಿಃಕಳಾತ್ಮನಿ ಲೀಯತೇ ।
ಕೋಟಿದಳಾಕ್ಷರಂ ಚೈವ ಶಿವತತ್ವೇ ಚ ಲೀಯತೇ ॥
ಅರ್ಬುದಮಾತೃಕಂ ಚೈವ ನಿರಾಕಾರೇ ಲಯಂ ತಥಾ ।
ಕ್ಷೋಣಿದಳಾಕ್ಷರಂ ದೇವಿ ಅಚಲಾತ್ಮನಿ ಲೀಯತೇ ॥
ಕ್ಷಿತಿದಳಾಕ್ಷರಂ ಚೈವ ಅಖಂಡಾತ್ಮನಿ ಲೀಯತೇ ।
ಮಹಾಕ್ಷಿತಿಲಿಪಿಶ್ಚೈವ ಪರಬ್ರಹ್ಮಣಿ ಲೀಯತೇ ।
ಇತಿ ಲಿಪಿಲಯಂ ಜ್ಞಾತುಂ ಸುಸೂಕ್ಷ್ಮಂ ಶ್ರುಣು ಪಾರ್ವತೀ ॥''

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೭೪೭ ||

೭೪೮

ಇನ್ನು ಪಂಚಾಕ್ಷರದ ನಿವೃತ್ತಿ ಅದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿಸ್ವರೂಪದಲ್ಲಿಹ ನಕಾರದಲ್ಲಿ ನಕಾರವಡಗಿತ್ತು,
ಆ ಪ್ರಣವದ ದಂಡಸ್ವರೂಪದಲ್ಲಿಹ ಮಕಾರದಲ್ಲಿ ಮಕಾರವಡಗಿತ್ತು,
ಆ ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರದಲ್ಲಿ ಶಿಕಾರವಡಗಿತ್ತು,
ಆ ಪ್ರಣವದ ಅರ್ಧಚಂದ್ರಕದಲ್ಲಿಹ ವಕಾರದಲ್ಲಿ ವಕಾರವಡಗಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರದಲ್ಲಿ ಯಕಾರವಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
‘‘ನಕಾರಂ ಚ ಮಕಾರಂ ಚ ಶಿಕಾರಂ ಚ ವಕಾರಕಂ ।
ತಥಾ ಯಕಾರಂ ಚೈವ ಮೂಲಪಂಚಾಕ್ಷರೇ ಲಯಾಃ ॥’’
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೭೪೮ ||

೭೪೯

ಇನ್ನು ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಾಸ್ವರೂಪ, ದಂಡಸ್ವರೂಪ, ಕುಂಡಲಾಕಾರ, ಅರ್ಧಚಂದ್ರಕ,
ದರ್ಪಣಾಕಾರ, ಜ್ಯೋತಿಸ್ವರೂಪದಲ್ಲಿಹ ಪಂಚಾಕ್ಷರ ಚಿದಾತ್ಮ ಪರಮಾತ್ಮನ
ಐಕ್ಯವದೆಂತೆಂದಡೆ :
ಆ ಪ್ರಣವದ ತಾರಕಾಸ್ವರೂಪದಲ್ಲಿಹ ನಕಾರವು
ಆ ಪ್ರಣವದ ತಾರಕಾಸ್ವರೂಪದಲ್ಲಿಯೇ ಐಕ್ಯವಾಯಿತ್ತು,
ಆ ಪ್ರಣವದ ದಂಡಸ್ವರೂಪದಲ್ಲಿಹ ಮಕಾರವು
ಆ ಪ್ರಣವದ ದಂಡಸ್ವರೂಪದಲ್ಲಿಯೇ ಐಕ್ಯವಾಯಿತ್ತು,
ಆ ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರವು
ಆ ಪ್ರಣವದ ಕುಂಡಲಾಕಾರದಲ್ಲಿಯೇ ಐಕ್ಯವಾಯಿತ್ತು,
ಆ ಪ್ರಣವದ ಅರ್ಧಚಂದ್ರಕದಲ್ಲಿಯ ವಕಾರವು
ಆ ಪ್ರಣವದ ಅರ್ಧಚಂದ್ರಕದಲ್ಲಿಯೇ ಐಕ್ಯವಾಯಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರವು
ಆ ಪ್ರಣವದ ದರ್ಪಣಾಕಾರದಲ್ಲಿಯೇ ಐಕ್ಯವಾಯಿತ್ತು,
ಆ ಪ್ರಣವದ ಜ್ಯೋತಿಸ್ವರೂಪದಲ್ಲಿಹ ಚಿದಾತ್ಮ ಪರಮಾತ್ಮರಿಬ್ಬರೂ
ಆ ಪ್ರಣವದ ಜ್ಯೋತಿಸ್ವರೂಪದಲ್ಲಿಯೇ ಐಕ್ಯವಾದರು ನೋಡಾ.
ಇದಕ್ಕೆ **ಮೂಲಾಗಮೇ** :

''ಓಂಕಾರ ತಾರಕರೂಪೇ ನಕಾರಂ ಚ ವಿಲೀಯತೇ ।
ಓಂಕಾರ ದಂಡಕರೂಪೇ ಚ ಮಕಾರಂ ಚಾಪಿ ಜಾಯತೇ ॥
ಓಂಕಾರ ಕುಂಡಲಾಕಾರೇ ಶಿಕಾರಂ ಲೀಯತೇ ತಥಾ ।
ಓಂಕಾರಾರ್ಧಚಂದ್ರೇ ಚ ವಕಾರಂ ಚಾಪಿ ಲೀಯತೇ ॥
ಓಂಕಾರ ದರ್ಪಣಾಕಾರೇ ಯಕಾರಂ ಲೀಯತೇ ತಥಾ ॥
ಓಂಕಾರ ಜ್ಯೋತಿಸ್ವರೂಪೇ ಚಿತ್ಸರಂ ಚಾಪಿ ಲೀಯತೇ ।
ಇತ್ಯಕ್ಷರಂ ಐಕ್ಯಂ ಜ್ಞಾನಂ ದುರ್ಲಭಂ ಕಮಲಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೪೯ ॥

೭೫೦

ಇನ್ನು ಷಡ್ವಿಧಭೂತಂಗಳ ನಿವೃತ್ತಿ ಅದೆಂತೆಂದಡೆ :
ಸದ್ಯೋಜಾತಮುಖದಲ್ಲಿ ಪೃಥ್ವಿ ಎಂಬ ಮಹಾಭೂತವಡಗಿತ್ತು.
ವಾಮದೇವಮುಖದಲ್ಲಿ ಅಪ್ಪುವೆಂಬ ಮಹಾಭೂತವಡಗಿತ್ತು.
ಅಘೋರಮುಖದಲ್ಲಿ ತೇಜವೆಂಬ ಮಹಾಭೂತವಡಗಿತ್ತು.
ತತ್ಪುರುಷಮುಖದಲ್ಲಿ ವಾಯುವೆಂಬ ಮಹಾಭೂತವಡಗಿತ್ತು.
ಈಶಾನಮುಖದಲ್ಲಿ ಆಕಾಶವೆಂಬ ಮಹಾಭೂತವಡಗಿತ್ತು.
ಪ್ರಣವದ ಅರ್ಧಚಂದ್ರಕದಲ್ಲಿ ಮನವೆಂಬ ಮಹಾಭೂತವಡಗಿತ್ತು ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
ಪೃಥ್ವೀರಾಪೆಸ್ತಥಾ ತೇಜಃ ಮನೋ ವಾಯುಶ್ಚವ್ಯೋಮಕಂ ।
ಇತಿ ಷಷ್ಠಭೂತಂ ಚೈವ ಷಷ್ಠವಕ್ತ್ರೇ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೦ ॥

೭೫೧

ಇನ್ನು ಷಡ್ವಿಧಮುಖಂಗಳ ನಿವೃತ್ತಿ ಅದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ಸದ್ಯೋಜಾತಮುಖವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ವಾಮದೇವಮುಖವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರಮುಖವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನಮುಖವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ನಿರ್ಭಾವಮುಖವಡಗಿತ್ತು ನೋಡಾ.
ಇದಕ್ಕೆ **ಚತ್ರಿಂಡಾಗಮೇ** :
''ಓಂಕಾರ ತಾರಕರೂಪೇ ಸದ್ಯೋಜಾತಶ್ಚ ಲೀಯತೇ ।

ಓಂಕಾರ ದಂಡರೂಪೇ ಚ ವಾಮದೇವ ವಕ್ತ್ರಂಚ ಲೀಯತೇ ||
ಓಂಕಾರ ಕುಂಡಲಾಕಾರೇ ಅಘೋರವಕ್ತ್ರಂಚ ಲೀಯತೇ |
ಓಂಕಾರ ಅರ್ಧಚಂದ್ರೇ ಚ ತತ್ಪುರುಷಶ್ಚ ಲೀಯತೇ ||
ಓಂಕಾರ ದರ್ಪಣಾಕಾರೇ ಈಶಾನಶ್ಚ ವಿಲೀಯತೇ |
ಓಂಕಾರ ಜ್ಯೋತಿರೂಪೇ ಚ ನಿರ್ಭಾವಃ ತತ್ರ ಲೀಯತೇ |
ಇತಿ ಷಣ್ಮುಖಂ ದೇವಿ ಸ್ಥಾನಸ್ಥಾನೇ ವಿಲೀಯತೇ ||''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೭೫೧ ||

೭೫೨

ಇನ್ನು ಷಡ್ವಿಧಲಿಂಗದ ನಿವೃತ್ತಿ ಅದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ಆಚಾರಲಿಂಗವಡಗಿತ್ತು,
ಆ ಪ್ರಣವದ ದಂಡಕಸ್ವರೂಪದಲ್ಲಿ ಗುರುಲಿಂಗವಡಗಿತ್ತು,
ಆ ಪ್ರಣವದ ಕುಂಡಲಾಕಾರದಲ್ಲಿ ಶಿವಲಿಂಗವಡಗಿತ್ತು,
ಆ ಪ್ರಣವದ ಅರ್ಧಚಂದ್ರಕದಲ್ಲಿ ಜಂಗಮಲಿಂಗವಡಗಿತ್ತು,
ಆ ಪ್ರಣವದ ದರ್ಪಣಾಕಾರದಲ್ಲಿ ಪ್ರಸಾದಲಿಂಗವಡಗಿತ್ತು,
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಮಹಾಲಿಂಗವಡಗಿತ್ತು ನೋಡಾ.
ಇದಕ್ಕೆ **ಶಿವಲಿಂಗಾಗಮೇ** :
''ಓಂಕಾರ ತಾರಕಾರೂಪೇ ಆಚಾರಲಿಂಗೇ ಚ ಲೀಯತೇ |
ಓಂಕಾರ ದಂಡರೂಪೇ ಚ ಗುರುಲಿಂಗಂ ಚ ಲೀಯತೇ ||
ಓಂಕಾರ ಕುಂಡಲಾಕಾರೇ ಶಿವಲಿಂಗಂ ಚ ಲೀಯತೇ |
ಓಂಕಾರ ಅರ್ಧಚಂದ್ರೇ ಚ ಚರಲಿಂಗಶ್ಚಲೀಯತೇ ||
ಓಂಕಾರ ದರ್ಪಣಾಕಾರೇ ಪ್ರಸಾದಲಿಂಗ ಲೀಯತೇ |
ಓಂಕಾರ ಜ್ಯೋತಿರೂಪೇ ಚ ಮಹಾಲಿಂಗಶ್ಚ ಲೀಯತೇ |
ಇತಿ ಷಡ್ಲಿಂಗೈಕ್ಯಂ ಜ್ಞಾತುಂ ದುರ್ಲಭಂ ಚ ಮಾನನೇ ||''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೭೫೨ ||

೭೫೩

ಇನ್ನು ಷಡ್ವಿಧಸಾದಾಖ್ಯಂಗಳ ನಿವೃತ್ತಿ ಅದೆಂತೆಂದಡೆ :
ನಿವೃತ್ತಿಕಲೆಯಲ್ಲಿ ಕರ್ಮಸಾದಾಖ್ಯವಡಗಿತ್ತು,
ಪ್ರತಿಷ್ಠಾಕಲೆಯಲ್ಲಿ ಕರ್ತೃಸಾದಾಖ್ಯವಡಗಿತ್ತು,
ವಿದ್ಯಾಕಲೆಯಲ್ಲಿ ಮೂರ್ತಿಸಾದಾಖ್ಯವಡಗಿತ್ತು,
ಶಾಂತಿಕಲೆಯಲ್ಲಿ ಅಮೂರ್ತಿಸಾದಾಖ್ಯವಡಗಿತ್ತು,

ಶಾಂತ್ಯತೀತಕಲೆಯಲ್ಲಿ ಶಿವಸಾದಾಖ್ಯವಡಗಿತ್ತು.
ಶಾಂತ್ಯತೀತೋತ್ತರಕಲೆಯಲ್ಲಿ ನಿರ್ಮುಕ್ತಿಯೆಂಬ
ಮಹಾಸಾದಾಖ್ಯವಡಗಿತ್ತು, ನೋಡಾ.
ಇದಕ್ಕೆ **ಉತ್ತರವಾತುಲಾಗಮೇ** :
''ಕರ್ಮಸಾದಾಖ್ಯಂ ಚೈವಂ ನಿವೃತ್ತೇಚ ವಿಲೀಯತೇ ।
ಕರ್ತೃಕಂ ನಾಮ ಸಾದಾಖ್ಯಂ ಪ್ರತಿಷ್ಠೇ ಚ ವಿಲೀಯತೇ ॥
ಮೂರ್ತಸಾದಾಖ್ಯಕಂ ಚೈವ ವಿದ್ಯಾಕಲೆ ವಿಲೀಯತೇ ।
ಅಮೂರ್ತನಾಮ ಸಾದಾಖ್ಯಂ ಶಾಂತಿಕಲಾಯಾಂ ಲೀಯತೇ ।
ಶಿವಸಾದಾಖ್ಯಕಂ ಚೈವ ಶಾಂತ್ಯತೀತೋತ್ತರೇ ಲಯಃ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೩ ॥

೭೫೪

ಇನ್ನು ಷಡ್ವಿಧಕಲೆಗಳ ನಿವೃತ್ತಿ ಅದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ನಿವೃತ್ತಿಕಲೆಯಡಗಿತ್ತು.
ಆ ಪ್ರಣವದ ದಂಡಸ್ವರೂಪದಲ್ಲಿ ಪ್ರತಿಷ್ಠಾಕಲೆ ಅಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ವಿದ್ಯಾಕಲೆಯಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಶಾಂತಿಕಲೆಯಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶಾಂತ್ಯತೀತಕಲೆಯಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಶಾಂತ್ಯತೀತೋತ್ತರ ಕಲೆಯಡಗಿತ್ತು.
ಇದಕ್ಕೆ **ಅಖಂಡಾಗಮೇ** :
''ಓಂಕಾರ ತಾರಕಾರೂಪೇ ನಿವೃತ್ತಿಶ್ಚ ವಿಲೀಯತೇ ।
ಓಂಕಾರ ದಂಡರೂಪೇ ಚ ಪ್ರತಿಷ್ಠಾ ಲೀಯತೇ ತಥಾ ॥
ಓಂಕಾರ ಕುಂಡಲಾಕಾರೇ ಕಲಾವಿದ್ಯಾ ವಿಲೀಯತೇ ।
ಓಂಕಾರ ಅರ್ಧಚಂದ್ರೇ ಚ ಕಲಾ ಶಾಂತಿರ್ವಿಲೀಯತೇ ।
ಓಂಕಾರ ದರ್ಪಣಾಕಾರೇ ಶಾಂತ್ಯತೀತಂ ಚ ಲೀಯತೇ ।
ಓಂಕಾರ ಜ್ಯೋತಿಸ್ವರೂಪೇ ಚ ಶಾಂತ್ಯತೀತೋತ್ತರಂ ಲಯಃ ॥''
ಇಂತೆಂದುದಾಗಿ,
ಇದಕ್ಕೆ **ಈಶ್ವರೋಽವಾಚ** :
''ನಿವೃತ್ತಿಃ ಪ್ರತಿಷ್ಠಾ ಚೈವ ವಿದ್ಯಾ ಶಾಂತಿಕಲಾಸ್ತಥಾ ।
ಶಾಂತ್ಯತೀತ ಕಲಾ ಚೈವ ಶಾಂತ್ಯತೀತೋತ್ತರಂ ತಥಾ ।
ಇತಿ ಷಷ್ಠಕಲಾ ದೇವಿ ಓಂಕಾರೇ ಚ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೪ ॥

೭೫೫

ಇನ್ನು ಷಡ್ವಿಧಹಸ್ತಂಗಳ ನಿವೃತ್ತಿ ಅದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ಸುಚಿತ್ತಹಸ್ತವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಸುಬುದ್ಧಿಹಸ್ತವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ನಿರಹಂಕಾರಹಸ್ತವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಸುಮನಹಸ್ತವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಸುಜ್ಞಾನಹಸ್ತವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಭಾವಹಸ್ತವಡಗಿತ್ತು ನೋಡಾ.
ಇದಕ್ಕೆ **ಚಿತ್ಪ್ರಕಾಶಾಗಮೇ** :
''ಓಂಕಾರ ತಾರಕಾರೂಪೇ ಚಿತ್ತಹಸ್ತಂ ಚ ಲೀಯತೇ ।
ಓಂಕಾರ ದಂಡರೂಪೇ ಚ ಬುದ್ಧಿಹಸ್ತಂ ಚ ಲೀಯತೇ ।
ಓಂಕಾರ ಕುಂಡಲಾಕಾರೇ ನಿರಹಂಕಾರಶ್ಚ ಲೀಯತೇ ।
ಓಂಕಾರ ಅರ್ಧಚಂದ್ರೇ ಚ ಮನೋಹಸ್ತಂ ಚ ಲೀಯತೇ ॥
ಓಂಕಾರ ದರ್ಪಣಾಕಾರೇ ಜ್ಞಾನಹಸ್ತಂ ಚ ಲೀಯತೇ ।
ಓಂಕಾರ ಜ್ಯೋತಿರೂಪೇ ಚ ಭಾವಹಸ್ತಶ್ಚ ಲೀಯತೇ ।
ಇತಿ ಹಸ್ತಲಯಂ ಜ್ಞಾತುಂ ಸುಸೂಕ್ಷ್ಮಂ ಶ್ರುಣು ಪಾರ್ವತಿ ॥
ಇದಕ್ಕೆ **ಈಶ್ವರೋಽವಾಚ** :
''ಚಿತ್ತಂ ಬುದ್ಧಿರಹಂಕಾರಂ ಮನೋಜ್ಞಾನಂ ಚ ಲೀಯತೇ ।
ಇತಿ ಷಷ್ಟಕರಂ ದೇವಿ ಸ್ಥಾನಸ್ಥಾನೇ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೫ ॥

೭೫೬

ಇನ್ನು ನವಶಕ್ತಿಗಳ ನಿವೃತ್ತಿ ಅದೆಂತೆಂದಡೆ :
ಕಾಕಿನಿಶಕ್ತಿ ರಾಕಿನಿಶಕ್ತಿಯಲ್ಲಿ ಅಡಗಿದಳು.
ಆ ರಾಕಿನಿಶಕ್ತಿ ಲಾಕಿನಿಶಕ್ತಿಯಲ್ಲಿ ಅಡಗಿದಳು.
ಆ ಲಾಕಿನಿಶಕ್ತಿ ಶಾಕಿನಿಶಕ್ತಿಯಲ್ಲಿ ಅಡಗಿದಳು.
ಆ ಶಾಕಿನಿಶಕ್ತಿ ಡಾಕಿನಿಶಕ್ತಿಯಲ್ಲಿ ಅಡಗಿದಳು.
ಆ ಡಾಕಿನಿಶಕ್ತಿ ಹಾಕಿನಿಶಕ್ತಿಯಲ್ಲಿ ಅಡಗಿದಳು.
ಆ ಹಾಕಿನಿಶಕ್ತಿ ನಿರ್ಮಾಯಶಕ್ತಿಯಲ್ಲಿ ಅಡಗಿದಳು.
ಆ ನಿರ್ಮಾಯಶಕ್ತಿ ನಿಭ್ರಾಂತಶಕ್ತಿಯಲ್ಲಿ ಅಡಗಿದಳು.
ಆ ನಿಭ್ರಾಂತಿಶಕ್ತಿ ನಿರ್ಭಿನ್ನಶಕ್ತಿಯಲ್ಲಿ ಅಡಗಿದಳು.
ಆ ನಿರ್ಭಿನ್ನಶಕ್ತಿ ಏನೂ ಎನಲಿಲ್ಲದ

ಪರಬ್ರಹ್ಮದ ನೆನಹುಮಾತ್ರದಲ್ಲಿ ಅಡಗಿದಳು.
ಏನೂ ಏನೂ ಎನಲಿಲ್ಲದ ಪರಬ್ರಹ್ಮದ ನೆನಹು
ಅಡಗಿ ನಿಃಶೂನ್ಯವಾಯಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ :**
''ರಾಕಿನ್ಯಾಶ್ಚ ಮನೋಜ್ಞಾನಾತ್ ಕಾಕಿನೀಶಕ್ತಿ ಲೀಯತೇ ।
ಲಾಕಿನ್ಯಾಶ್ಚ ಮನೋಜ್ಞಾನಾತ್ ರಾಕಿನೀಶಕ್ತಿ ಲೀಯತೇ ।
ಶಾಕಿನ್ಯಾಶ್ಚ ಮನೋಜ್ಞಾನಾತ್ ಲಾಕಿನೀಶಕ್ತಿ ಲೀಯತೇ ।
ಡಾಕಿನ್ಯಾಶ್ಚ ಮನೋಜ್ಞಾನಾತ್ ಶಾಕಿನ್ಯಾಶ್ಚಕ್ತಿಲೀಯತೇ ।
ಹಾಕಿನ್ಯಾಶ್ಚ ಮನೋಜ್ಞಾನಾತ್ ಡಾಕಿನೀಶಕ್ತಿ ಲೀಯತೇ ।
ನಿರ್ಮಾಯೋಃ ಮನೋಜ್ಞಾನಾತ್ ಡಾಕಿನೀಶಕ್ತಿ ಲೀಯತೇ ॥
ನಿಭ್ರಾಂತುಃ ಮನೋಜ್ಞಾನಾತ್ ನಿರ್ಮಾಯಶಕ್ತಿ ಲೀಯತೇ ॥
ನಿರ್ಭಿನ್ನಾಃ ಮನೋಜ್ಞಾನಾತ್ ನಿಭ್ರಾಂತಶಕ್ತಿ ಲೀಯತೇ ॥
ಪರಬ್ರಹ್ಮ ಮನೋಜ್ಞಾನಾತ್ ಪರಬ್ರಹ್ಮೇ ಲೀಯತೇ ।
ಏಕೈಕ ಪ್ರಣವಾಖ್ಯಾತಂ ಏಕೈಕಂತು ವಿಲೀಯತೇ ।''
ಇದಕ್ಕೆ **ಶ್ರುತಿ :**
''ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೬ ॥

೭೫೭

ಇನ್ನು ವಿಂಶತಿಚಕ್ರಂಗಳ ಅಧಿದೇವತೆಗಳ ನಿವೃತ್ತಿ ಅದೆಂತೆಂದಡೆ:
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಾಸ್ವರೂಪದಲ್ಲಿ ಬ್ರಹ್ಮನಡಗಿದನು.
ಆ ಪ್ರಣವದ ದಂಡಕಸ್ವರೂಪದಲ್ಲಿ ವಿಷ್ಣುವಡಗಿದನು.
ಆ ಪ್ರಣವದ ಕುಂಡಲಾಕಾರದಲ್ಲಿ ರುದ್ರನಡಗಿದನು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಈಶ್ವರನಡಗಿದನು.
ಆ ಪ್ರಣವದ ದರ್ಪಣಾಕಾರದಲ್ಲಿ ಸದಾಶಿವನಡಗಿದನು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಆತ್ಮನಡಗಿದನು.
ತತ್ವಾತ್ಮ ಸ್ವಯಾತ್ಮನಲ್ಲಿ ಅಡಗಿದನು.
ಆ ಸ್ವಯಾತ್ಮನು ಪರಮಾತ್ಮನಲ್ಲಿ ಅಡಗಿದನು.
ಆ ಪರಮಾತ್ಮನು ವಿಶ್ವಾತ್ಮನಲ್ಲಿ ಅಡಗಿದನು.
ಆ ವಿಶ್ವಾತ್ಮನು ಸರ್ವಾತ್ಮನಲ್ಲಿ ಅಡಗಿದನು.
ಆ ಸರ್ವಾತ್ಮನು ನಿರ್ಗುಣಾತ್ಮನಲ್ಲಿ ಅಡಗಿದನು.
ಆ ನಿರ್ಗುಣಾತ್ಮನು ನಿಃಕಳಾತ್ಮನಲ್ಲಿ ಅಡಗಿದನು.

ಆ ನಿಃಕಳಾತ್ಮನು ಶಿವಾತ್ಮನಲ್ಲಿ ಅಡಗಿದನು.
ಆ ಶಿವಾತ್ಮನು ಮಹಾತತ್ವದಲ್ಲಿ ಅಡಗಿದನು.
ಆ ಮಹಾತತ್ವವು ನಿರಾಮಯತತ್ವದಲ್ಲಡಗಿತ್ತು.
ಆ ನಿರಾಮಯತತ್ವವು ನಿರಾಳತತ್ವದಲ್ಲಿ ಅಡಗಿತ್ತು.
ಆ ನಿರಾಳತತ್ವವು ನಿರಂಜನತತ್ವದಲ್ಲಿ ಅಡಗಿತ್ತು.
ಆ ನಿರಂಜನತತ್ವವು ಅಚಲಾನಂದತತ್ವದಲ್ಲಿ ಅಡಗಿತ್ತು.
ಆ ಅಚಲಸಾಂದವು ಅಖಂಡಾತ್ಮನೆಂಬ ಮಹಾತತ್ವದಲ್ಲಿ ಅಡಗಿತ್ತು.
ಆ ಅಖಂಡಮಹಾತತ್ವವೆಂಬ ಮಹಾಜ್ಞಾನತತ್ವವು
ಪರಬ್ರಹ್ಮವೆಂಬ ಅಖಂಡಮಹಾಜ್ಞಾನತತ್ವದಲ್ಲಿ ಅಡಗಿತ್ತು ನೋಡಾ.
ಇದಕ್ಕೆ **ಅಖಂಡಾಗಮತಂತ್ರೇ** :
''ಓಂಕಾರ ತಾರಕಾರೂಪೇ ಬ್ರಹ್ಮಾಪಿ ವಿಲೀಯತೇ ।
ಓಂಕಾರ ದಂಡರೂಪೇ ಚ ವಿಷ್ಣುಸ್ತಂತ್ರಂ ವಿಲೀಯತೇ ॥
ಓಂಕಾರ ಕುಂಡಲಾಕಾರೇ ರುದ್ರಶ್ಚ ಲೀಯತೇ ತಥಾ ।
ಓಂಕಾರ ಅರ್ಧಚಂದ್ರೇ ಚ ಈಶ್ವರಶ್ಚ ಲಯಂ ತಥಾ ॥
ಓಂಕಾರ ದರ್ಪಣಾಕಾರೇ ಸದಾಶಿವಂ ಚ ಲೀಯತೇ ।
ಓಂಕಾರ ಜ್ಯೋತಿರೂಪೇ ಚ ಆತ್ಮತತ್ವಂ ವಿಲೀಯತೇ ॥
ತಥಾ ತತ್ವಾತ್ಮಕಶ್ಚೈವ ಸ್ವಯಾತ್ಮನಿ ವಿಲೀಯತೇ ।
ಪರಮಾತ್ಮಾ ಸ್ವಯಂ ಲೀಯಂ ವಿಶ್ವಾತ್ಮನಿ ಲಯಂ ಪರಃ ॥
ತಥಾ ವಿಶ್ವಾತ್ಮಕಂ ಚೈವ ಸರ್ವಾತ್ಮನಿ ವಿಲೀಯತೇ ।
ತಥಾ ಸರ್ವಾತ್ಮಕಂ ಚೈವ ನಿರ್ಗುಣಾತ್ಮನಿ ಲೀಯತೇ ।
ನಿರ್ಗುಣಾತ್ಮಕತತ್ವಂ ಚ ನಿಃಕಳಾತ್ಮನಿ ಲೀಯತೇ ।
ಶಿವಾತ್ಮನಿ ಲೀಯತೇ ನಿಃಕಳೇ ಲೀಯತೇ ॥
ಮಹಾತ್ಮೇ ಲೀಯತೇ ಶಿವಃ ।
ತಥಾ ಮಹಾತತ್ವಂ ಚ ನಿರಾಲಂಬೇ ವಿಲೀಯತೇ ।
ನಿರಾಮಯಾತ್ಮಕಂ ಚೈವ ನಿರಾಳಾತ್ಮೇ ವಿಲೀಯತೇ ।
ತಥಾ ನಿರಾಳತತ್ವಂ ಚ ನಿರಂಜನಾತ್ಮನಿ ಲೀಯತೇ ।
ಇತ್ಯಾತ್ಮನೋ ಲಯಂ ಜ್ಞಾತುಂ ದುರ್ಲಭಂ ಕಮಲೋದ್ಭವ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೫೭ ॥

೭೫೮

ಇನ್ನು ಅಷ್ಟನಾದನಿವೃತ್ತಿಯೆಂತೆಂದಡೆ :
ವೀಣಾನಾದದ ಸಹಸ್ರಾಂಶದಲ್ಲಿ ಪೆಣ್ದುಂಬಿನಾದವಡಗಿತ್ತು.
ಘಂಟಾನಾದದ ಸಹಸ್ರಾಂಶದಲ್ಲಿ ವೀಣಾನಾದವಡಗಿತ್ತು.
ಭೇರೀನಾದದ ಸಹಸ್ರಾಂಶದಲ್ಲಿ ಘಂಟಾನಾದವಡಗಿತ್ತು.
ಮೇಘನಾದದ ಸಹಸ್ರಾಂಶದಲ್ಲಿ ಭೇರೀನಾದವಡಗಿತ್ತು.

ಪ್ರಣವನಾದದ ಸಹಸ್ರಾಂಶದಲ್ಲಿ ಮೇಘನಾದವಡಗಿತ್ತು.
ದಿವ್ಯನಾದದ ಸಹಸ್ರಾಂಶದಲ್ಲಿ ಪ್ರಣವನಾದವಡಗಿತ್ತು.
ಸಿಂಹನಾದದ ಸಹಸ್ರಾಂಶದಲ್ಲಿ ದಿವ್ಯನಾದವಡಗಿತ್ತು.
ನಿಶ್ಶಬ್ದವೆಂಬ ಪರಬ್ರಹ್ಮದ ನೆನಹಿನ ಕೋಟ್ಯಾಂಶದಲ್ಲಿ ಸಿಂಹನಾದವಡಗಿತ್ತು.
ಆ ನಿಶ್ಶಬ್ದವೆಂಬ ಪರಬ್ರಹ್ಮವು ಅಡಗಿ ನಿಶ್ಶೂನ್ಯವಾಯಿತ್ತು ನೋಡಾ.
ಇದಕ್ಕೆ ನಿರಂಜನಾತೀತಾಗಮೇ :
"ವೀಣಾನಾದಸಹಸ್ರಾಂಶೇ ಭ್ರಮರಂ ಚ ವಿಲೀಯತೇ ।
ಘಂಟಾನಾದಸಹಸ್ರಾಂಶೇ ವೀಣಾನಾದ ವಿಲೀಯತೇ ॥
ಭೇರೀನಾದ ಸಹಸ್ರಾಂಶೇ ಘಂಟಾನಾದ ವಿಲೀಯತೇ ।
ಮೇಘನಾದ ಸಹಸ್ರಾಂಶೇ ಭೇರೀನಾದೇ ವಿಲೀಯತೇ ।
ಪ್ರಣವನಾದ ಸಹಸ್ರಾಂಶೇ ಮೇಘನಾದಂ ಚ ಲೀಯತೇ ।
ದಿವ್ಯನಾದ ಸಹಸ್ರಾಂಶೇ ಪ್ರಣವಃ ಸವಿಲೀಯತೇ ॥"
ಇಂತೆಂದುದಾಗಿ,
ಇದಕ್ಕೆ ಶ್ರುತಿ :
"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ॥"
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೫೮ ॥

೭೫೯

ಇನ್ನು ಷಡ್ವಿಧಭಕ್ತಿಯ ನಿವೃತ್ತಿ ಅದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಾಸ್ವರೂಪದಲ್ಲಿ ಸದ್ಭಕ್ತಿ ಅಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ನೈಷ್ಠಿಕಾಭಕ್ತಿಯಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಅವಧಾನಭಕ್ತಿ ಅಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಅನುಭಾವಭಕ್ತಿ ಅಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಆನಂದಭಕ್ತಿ ಅಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಸಮರಸಭಕ್ತಿ ಅಡಗಿತ್ತು ನೋಡಾ.
ಇದಕ್ಕೆ ಮಹಾವಾತುಲತಂತ್ರೇ :
"ಓಂಕಾರ ತಾರಕಾರೂಪೇ ಸದ್ಭಕ್ತಿಶ್ಚ ವಿಲೀಯತೇ ।
ಓಂಕಾರ ದಂಡರೂಪೇ ಚ ನೈಷ್ಠಿಕಾಭಕ್ತಿ ಲೀಯತೇ ॥
ಓಂಕಾರ ಕುಂಡಲಾಕಾರೇ ಅವಧಾನಶ್ಚ ಲೀಯತೇ ।
ಓಂಕಾರ ಅರ್ಧಚಂದ್ರೇ ಚ ಅನುಭಾವಶ್ಚ ಲೀಯತೇ ॥
ಓಂಕಾರ ದರ್ಪಣಾಕಾರೇ ಆನಂದಭಕ್ತಿರ್ಲೀಯತೇ ।
ಓಂಕಾರ ಜ್ಯೋತಿರೂಪೇ ಚ ಸಂಯೋಗಭಕ್ತಿರ್ಲೀಯತೇ ।
ಇತಿ ಭಕ್ತಿಲಯಂ ಜ್ಞಾತುಂ ದುರ್ಲಭಂ ಕಮಲಾನನೇ ॥"

ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೫೯ ॥

೭೬೦

ಇನ್ನು ಷಡ್ವಿಧದ್ರವ್ಯಂಗಳ ನಿವೃತ್ತಿ ಅದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ಗಂಧವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ರಸವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ರೂಪವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಸ್ಪರ್ಶನವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಶಬ್ದವಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ತೃಪ್ತಿ ಅಡಗಿತ್ತು ನೋಡಾ.
ಇದಕ್ಕೆ **ಮಹಾವಾತುಲಾಗಮೇ** :
''ಓಂಕಾರ ತಾರಕಾರೂಪೇ ಗಂಧಶ್ಚ ವಿಲೀಯತೇ ।
ಓಂಕಾರ ದಂಡರೂಪೇ ಚ ರಸಶ್ಚೈವಾ ವಿಲೀಯತೇ
ಓಂಕಾರ ಕುಂಡಲಾಕಾರೇ ರೂಪಶ್ಚೈವಾ ವಿಲೀಯತೇ ॥
ಓಂಕಾರ ಅರ್ಧಚಂದ್ರೇ ಚ ಸ್ಪರ್ಶನಂ ಲೀಯತೇ ತಥಾ ॥
ಓಂಕಾರ ದರ್ಪಣಾಕಾರೇ ಶಬ್ದಶ್ಚಾಪಿ ವಿಲೀಯತೇ ।
ಓಂಕಾರ ಜ್ಯೋತಿರೂಪೇ ಚ ತೃಪ್ತಿಶ್ಚೈವ ವಿಲೀಯತೇ ।
ಇತಿ ಷಡ್ಗುಣದ್ರವ್ಯಂ ಸ್ಥಾನ ಸ್ಥಾನೇ ವಿಲೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೦ ॥

೭೬೧

ಇನ್ನು ಋಗ್ವೇದ ಯಜುರ್ವೇದ ಸಾಮವೇದ
ಅಥರ್ವಣವೇದ ಅಜಪೆ ಗಾಯತ್ರಿಯ ನಿವೃತ್ತಿ ಅದೆಂತೆಂದಡೆ :
ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ತಾರಕಸ್ವರೂಪದಲ್ಲಿ ಋಗ್ವೇದವಡಗಿತ್ತು.
ಆ ಪ್ರಣವದ ದಂಡಕಸ್ವರೂಪದಲ್ಲಿ ಯಜುರ್ವೇದವಡಗಿತ್ತು.
ಆ ಪ್ರಣವದ ಕುಂಡಲಾಕಾರದಲ್ಲಿ ಸಾಮವೇದವಡಗಿತ್ತು.
ಆ ಪ್ರಣವದ ಅರ್ಧಚಂದ್ರಕದಲ್ಲಿ ಅಥರ್ವಣವೇದವಡಗಿತ್ತು.
ಆ ಪ್ರಣವದ ದರ್ಪಣಾಕಾರದಲ್ಲಿ ಗಾಯತ್ರಿಯಡಗಿತ್ತು.
ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಅಜಪೆಯಡಗಿತ್ತು ನೋಡಾ.
ಇದಕ್ಕೆ **ಚಿತ್ಪಿಂಡಾಗಮೇ** :

''ಓಂಕಾರ ತಾರಕಾರೂಪೇ ಋಗ್ವೇದಶ್ಚ ವಿಲೀಯತೇ ।
ಓಂಕಾರ ದಂಡರೂಪೇ ಚ ಯಜುರ್ವೇದಂ ಚ ಲೀಯತೇ ।
ಓಂಕಾರ ಕುಂಡಲಾಕಾರೇ ಸಾಮವೇದಂ ಚ ಲೀಯತೇ ।
ಓಂಕಾರ ಅರ್ಧಚಂದ್ರೇ ಚ ಅಥಃ ಶ್ರುತಿಲಯಂ ತಥಾ ।
ಓಂಕಾರ ದರ್ಪಣಾಕಾರೇ ಗಾಯಾತ್ರೀ ಚ ವಿಲೀಯತೇ ।
ಓಂಕಾರ ಜ್ಯೋತಿಸ್ವರೂಪೇ ಅಜಪೇಶ್ಚ ವಿಲೀಯತೆ ।
ಇತಿ ವೇದಲಯಂ ಜ್ಞಾತುಂ ದುರ್ಲಭಂ ಕಮಲೋದ್ಭವಾ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೧ ॥

೭೬೨

ದ್ವಿದಶಚಕ್ರ ಮೊದಲಾಗಿ ಚತುರ್ವೇದ ಅಜಪೆ ಗಾಯತ್ರಿ ಕಡೆಯಾಗಿ ಸಮಸ್ತವನೊಳಕೊಂಡು ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿಹ ಅನಂತವ ಅಖಂಡಗರ್ಭದಲ್ಲಿ ಅಡಗಿಸಿಕೊಂಡು,
ಆದಿಮಧ್ಯಾವಸಾನಂಗಳಿಲ್ಲದೆ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರಪ್ರಣವವಾಗಿದ್ದುದು ನೋಡಾ
ಇದಕ್ಕೆ **ಮಹಾಗಮೇ** :
''ಆದಿಮಧ್ಯಾಂತಶೂನ್ಯಂ ಚ ಶೂನ್ಯ ಶೂನ್ಯಂ ದಶೋದಶ ।
ಸರ್ವಶೂನ್ಯಂ ನಿರಾಕಾರಂ ನಿರ್ದ್ವಂದ್ವಂ ಪರಮಂ ಪದಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೨ ॥

ದ್ವಿದಶಚಕ್ರ ಮೊದಲಾಗಿ ಚತುರ್ವೇದ ಗಾಯತ್ರಿ ಅಜಪೆ ಕಡೆಯಾಗಿ ಸಮಸ್ತವು ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದಲ್ಲಿಯೇ ಉತ್ಪತ್ಯಲಯವೆಂದು ನಿರೂಪಿಸಲು, ಆ ಶಿಷ್ಯನು ಅತ್ಯಂತ ಪರಮಹರುಷಿತನಾಗಿ ಸದ್ಗುರುವೆ ಮದ್ಗುರುವೆ, ಶ್ರೀಜಗದ್ಗುರುವೆ, ಶ್ರೀಮದ್ಗುರುವೆ, ಶ್ರೀಮಹಾಗುರುವೇ ಚಿದಾನಂದ ನಿತ್ಯಪರಿಪೂರ್ಣಗುರುವೆ ಸರ್ವಚೈತನ್ಯ ಕಲಾತ್ಮಗುರುವೆ, ನಾದಬಿಂದು ಕಲಾತೀತ ಗುರುವೆ ಎಂದು ಸ್ತೋತ್ರವ ಮಾಡಿ, ಮತ್ತಂ ಎಲೆ ಸದ್ಗುರುಸ್ವಾಮಿ ದ್ವಿದಶಚಕ್ರಂಗಳು ಮೊದಲಾಗಿ ಚತುರ್ವೇದ ಗಾಯತ್ರಿ ಅಜಪೆ ಕಡೆಯಾಗಿ, ಸಮಸ್ತವು ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದಲ್ಲಿ ಉತ್ಪತ್ಯಲಯವೆಂದು ನಿಮ್ಮ ಮಹಾವಾಕ್ಯಗಳಿಂದ ನಿರೂಪಿಸಿ, ನಿಮ್ಮ ಮಹಾಜ್ಞಾನದೃಕ್ಕಿನಿಂದ ತೋರಲು, ಕಂಡು ಪರಮಸುಖಿಯಾದೆನು. ಇನ್ನು ಭಕ್ತ ಗುರು ಲಿಂಗ ಜಂಗಮದ ತಾಮಸನಿರಸನಮಂ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೭೬೩

ಇನ್ನು ಭಕ್ತನ ತಾಮಸನಿರಸನವದೆಂತೆಂದಡೆ :
ಭಕಾರವೇ ಮಹಾಜ್ಞಾನ, ತಕಾರವೇ ತತ್ವಜ್ಞಾನ ನೋಡಾ.
ಭಕಾರ ತಾರಕಾಸ್ವರೂಪ ಸ್ವಭಾವಗಳನರಿದಾತನೆ ಭಕ್ತನು.
ಭಕಾರ ತಾರಕಾಸ್ವರೂಪ ಸ್ವಭಾವಂಗಳನರಿಯದೆ
ಭಕ್ತರೆಂಬ ವೇಷಡಂಭಕ ರೌರವನಕಿಗಳನೇನೆಂಬೆನಯ್ಯಾ.
ಇದಕ್ಕೆ **ವೀರಾಗಮೇ** :
ಭಕಾರಂತು ಮಹಾಜ್ಞಾನಂ ತಕಾರಂ ತತ್ವರೂಪಕಂ ।
ತತ್ವಜ್ಞಾನದಯಂ ಚೈವ ಭಕ್ತಶ್ರದ್ಧಾಭಿಧೀಯತೇ ॥
ಭಕಾರಂ ಭವದೂರಂ ಚ ತಕಾರಂ ತನುನಾಶನಂ ।
ಭಕ್ತಾಕ್ಷರ ದ್ವಯಂ ನಾಸ್ತಿ ತದ್ಭಕ್ತೋ ನರಕಂ ವ್ರಜೇತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೩ ॥

೭೬೪

ಭಕಾರವೇ ಜ್ಞಾನಸ್ವರೂಪ
ತಕಾರವೇ ತತ್ವಸ್ವರೂಪ
ತತ್ವಜ್ಞಾನಸ್ವರೂಪವ ಬಲ್ಲಾತನೆ ಭಕ್ತನು ;
ಆತನೆ ಪರಶಿವಮೂರ್ತಿ.
ತತ್ವಜ್ಞಾನಸ್ವರೂಪನರಿಯದೆ ಭಕ್ತರೆಂಬರು,
ಅವರಿಗೆ ಭಕ್ತಸ್ಥಲವಿಲ್ಲ ನೋಡಾ.
ಭಕ್ತಸ್ಥಲವಿಲ್ಲದವರಿಗೆ ಲಿಂಗಸ್ಥಲವಿಲ್ಲ,
ಭಕ್ತ–ಲಿಂಗಸ್ಥಲವಿಲ್ಲದವರಿಗೆ ಮೋಕ್ಷವಿಲ್ಲ ನೋಡಾ.
ಇದಕ್ಕೆ **ಈಶ್ವರೋऽವಾಚ** :
''ಭಕಾರಂ ಜ್ಞಾನರೂಪಂ ಚ ತಕಾರಂ ತತ್ವರೂಪಕಂ ।
ತತ್ವಜ್ಞಾನದ್ವಯಜ್ಞಾನಂ ಶಿವಭಕ್ತೋ ಮಹೇಶ್ವರಿ ।
ನಾಮಧಾರಕ ಭಕ್ತಾನಾಂ ನಾಮಧಾರಕಲಿಂಗಯೋः ।
ಭಕ್ತಲಿಂಗ ದ್ವಯಂ ನಾಸ್ತಿ ನಾಸ್ತಿ ಮೋಕ್ಷಂ ವರಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೪ ॥

೭೬೫

ಭಕ್ತನೆಂಬೆರಡಕ್ಷರವೇ ತಾನೆಂದು ತಿಳಿದು
ಮೋಕ್ಷವನೈದಲರಿಯದೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧವ ಹಿಡಿದು ಕೆಟ್ಟರು ನೋಡಾ:

ಭಕ್ತರೆಲ್ಲ ಸತ್ತರು ನೋಡಾ.
ನಾಯ ಸಾವ ಸತ್ತು ಹುಟ್ಟುವಂಗೆ
ಎತ್ತಣ ಮುಕ್ತಿ ಹೇಳಾ.
ಇದಕ್ಕೆ **ಉತ್ತರವೀರಾಗಮೇ** :
''ಭಕಾರಶ್ಚ ಮಹಾಜ್ಞಾನಂ ತಕಾರಂ ತತ್ವರೂಪಕಂ ।
ತತ್ವಜ್ಞಾನಂ ಚ ಜಾನಾತಿ ತದ್ಭಕ್ತೋ ನರಕಂ ವ್ರಜೇತ್ ॥
ಅಂಗಭೋಗಂ ಚ ಕ್ಷೇತ್ರಂಚ ಕಾಂಚನಂ ಕಾಮಿನೀ ತಥಾ ।
ಚತುರ್ಥಾಪೇಕ್ಷಭಕ್ತಾನಾಂ ಕಥಂ ಮುಕ್ತಿಃ ವರಾನನೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೫ ॥

೭೬೬

ಇನ್ನು ಗುರುತಾಮಸ ನಿರಸನವದೆಂತೆಂದಡೆ :
ಗುಕಾರವೆ ಅಂಧಃಕಾರವೆಂಬ ಅಜ್ಞಾನವ ಕೆಡಿಸುವ
ಜ್ಯೋತಿಸ್ವರೂಪ ನೋಡಾ.
ರುಕಾರವೇ ರೂಪಾತೀತವಾಗಿಹ ಪರಬ್ರಹ್ಮ ನೋಡಾ.
ಇದಕ್ಕೆ **ಉತ್ತರವೀರಾಗಮೇ** :
''ಗುಕಾರವಸ್ತಂಧಕಾರಸ್ತು ರೂಪಾತೀತಂ ರುಕಾರಕಂ ।
ಗುಣರೂಪ ವಿಹೀನತ್ವಾತ್ ಗುರುರಿತ್ಯಾಭಿಧೀಯತೇ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೬ ॥

೭೬೭

ಗುಕಾರವೇ ನಿರ್ಗುಣಾತ್ಮನು, ರುಕಾರವೇ ಪರಮಾತ್ಮನು.
ಗುಕಾರವೇ ಶಿವ, ರುಕಾರವೇ ಶಿವಾತ್ಮನು.
ಈ ಉಭಯ ಸಂಗವೇ ಗುರುರೂಪ ನೋಡಾ.
ಇದಕ್ಕೆ **ಈಶ್ವರೋವಾಚ** :
ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ ।
ಗುಕಾರಂ ಮಮ ರೂಪಂ ಚ ರುಕಾರಂ ತನುರೂಪಕಂ ।
ಉಭಯೋಃ ಸಂಗಮೇದೇವ ಗುರುರೂಪೋ ಮಹೇಶ್ವರಿ ॥''
ಇಂತೆಂದುದಾಗಿ,
ಇದಕ್ಕೆ **ವೀರಾಗಮೇ** :
ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ ।
ಗುಣರೂಪಮತೀತಂ ಚ ಯೋತ್ಸದದ್ಯಾತ್ಸ ಗುರುಸ್ಮೃತಃ ॥''
ಇಂತೆಂದುದಾಗಿ,

ಇದಕ್ಕೆ **ಈಶ್ವರೋಽವಾಚ** :
''ಯೋ ಗುರುಃ ಸ ಶಿವಃ ಪ್ರೋಕ್ತೋ ಯೋ ಶಿವಸ್ಸಗುರುಸ್ಮೃತಃ ।
ಭುಕ್ತಿಮುಕ್ತಿಪ್ರದಾತಾ ಚ ಮಮ ರೂಪೋ ಮಹೇಶ್ವರಿ ॥''
ಇಂತೆಂದುದಾಗಿ,
ಇಂಥ ಮಹಾಮಹಿಮನೆ ಗುರುವಲ್ಲದೆ
ಮಿಕ್ಕಿನ ನಾಮಧಾರಕ ಗುರುಗಳೆಲ್ಲ ಗುರುವಲ್ಲ ;
ಆ ಗುರುವಿನ ಬೆಂಬಳಿಯವರೆಲ್ಲ ಶಿಷ್ಯರಲ್ಲ.
ಆ ಗುರುಶಿಷ್ಯರಿಬ್ಬರಿಗೂ ಕುಂಭೀಪಾತಕವೆಂದುದು ನೋಡಾ.
ಇದಕ್ಕೆ **ಉತ್ತರವೀರಾಗಮೇ** :
''ನಾಮಧಾರಕಶಿಷ್ಯಾನಾಂ ನಾಮಧಾರೀ ಗುರುಃ ಸದಾ ।
ಅಂಧಕಾಂಧಕರಾಯುಕ್ತಂ ದ್ವಿವಿಧಂ ಪಾತಕಂ ಭವೇತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೭ ॥

೭೬೮

ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧವಿಡಿದಾತ ಗುರುವಲ್ಲ,
ಆತ ದೋಷಾರ್ಥಿ ; ಆತ ನರಕಿ ಎಂದುದು ನೋಡಾ.
ಇದಕ್ಕೆ **ವೀರಾಗಮೇ** :
''ಕಾಂಚನಂ ಕಾಮಿನೀಚೈವ ತಥಾ ಮಹಿಶ್ಚ ಕ್ಷೇತ್ರಕಂ ।
ಗುರುಣಾ ತ್ರಿವಿಧಂ ಭೋಗ್ಯಂ ತದ್ಗುರುಃ ನರಕಂ ವ್ರಜೇತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೬೮ ॥

೭೬೯

ಇನ್ನು ಲಿಂಗದ ತಾಮಸನಿರಸನವದೆಂತೆಂದಡೆ :
ಅನಂತಕೋಟಿ ಬ್ರಹ್ಮರು, ಅನಂತಕೋಟಿ ವಿಷ್ಣ್ವಾದಿಗಳು,
ಅನಂತಕೋಟಿ ಇಂದ್ರಾದಿಗಳು, ಅನಂತಕೋಟಿ ದೇವರ್ಕಳು,
ಇವರೆಲ್ಲ ಎಲ್ಲಿ ಹುಟ್ಟುವರು ಅದೇ 'ಗಂ' ಎಂಬ ಶಬ್ದ.
ಇದಕ್ಕೆ **ಅಖಂಡಾಗಮೇ** :
''ಅಸಂಖ್ಯಾತಮಹಾವಿಷ್ಣುಃ ಅಸಂಖ್ಯಾತಪಿತಾಮಹಾಃ ।
ಅಸಂಖ್ಯಾತಸುರೇಂದ್ರಾಣಾಂ ಲೀಯತೇ ಸರ್ವದೇವತಾಃ ॥
ವಿಷ್ಣುಸಂಜ್ಞಾ ಅಸಂಖ್ಯಾತಾಃ ಅಸಂಖ್ಯಾತಪಿತಾಮಹಾಃ ।
ಅಸಂಖ್ಯಾತಸುರೇಂದ್ರಾಣಾಂ ಗಮ್ಯತೇ ಸರ್ವದೇವತಾಃ ॥
ಲೀಯತೇ ಗಮ್ಯತೇ ಯತ್ರಬ್ರಹ್ಮವಿಷ್ಣ್ವಾದಿ ದೇವತಾಃ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ವಂ ಪರಾಯಣೈಃ ॥''

ಎಂದುದಾಗಿ,
ಅಂಥ ಅಖಂಡ ಪರಿಪೂರ್ಣ ಅಪ್ರಮೇಯ ಅಗಮ್ಯ
ಅವ್ಯಕ್ತ ಅನಂತತೇಜ ಅಪ್ರಮಾಣ ಅಗೋಚರವಾಗಿಹ
ಅಖಂಡಮಹಾಘನಲಿಂಗವೇ ಲಿಂಗವಲ್ಲದೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಪದಾರ್ಥಂಗಳಲ್ಲಿ
ಅಬದ್ಧವಾಗಿ ಬಿದ್ದಿಹ ಲಿಂಗಂಗಳೆಲ್ಲವೂ ಮೋಕ್ಷವನ್ನೈದಲರಿಯವು ನೋಡಾ.
ಇದಕ್ಕೆ **ವೀರಾಗಮೇ** :
''ವಿತ್ತಂಚ ಕಾಮಿನೀಚೈವ ಕ್ಷೇತ್ರಂ ಭೂಮೀ ತಥೈವ ಚ ।
ತ್ರಿವಿಧಾಪೇಕ್ಷಲಿಂಗಾನಾಂ ಕಥಂ ಮುಕ್ತಿಃ ವರಾನನೇ ॥''
ಇಂತೆಂದುದಾಗಿ, ಅಪ್ರಮಾಣಕೂಡಲಸಂಗಮದೇವಾ. ॥ ೭೭೯ ॥

೭೭೦

ಇನ್ನು ಜಂಗಮದ ತಾಮಸನಿರಸನವದೆಂತೆಂದಡೆ :
ವ್ಯೋಮಾಕಾಶವೇ ಶರೀರ, ಆಕಾಶವೇ ಮುಖ,
ಚಂದ್ರಾರ್ಕವಹ್ನಿಯೇ ನೇತ್ರಂಗಳು ನೋಡಾ.
ಮಹಾಮೇರು ಪರ್ವತವೇ ಲಿಂಗ, ಬ್ರಹ್ಮಾಂಡವೇ ಮಕುಟ,
ಪಾತಾಳವೇ ಪಾದದ್ವಯಂಗಳು ನೋಡಾ.
ದಶದಿಕ್ಕುಗಳೇ ಬಾಹು, ಮೇಘಂಗಳೇ ಜಟಾಮಯ,
ಚಂದ್ರಜ್ಯೋತಿಯೇ ವಿಭೂತಿ, ವೇದಂಗಳೆ ಸರ್ವಕ್ರಿಯಾಮಯ ನೋಡಾ.
ನಕ್ಷತ್ರಂಗಳೇ ಪುಷ್ಪ, ಸಪ್ತಕುಲಪರ್ವತಂಗಳೇ ರುದ್ರಾಕ್ಷಿ,
ಸಪ್ತಸಮುದ್ರಂಗಳೇ ಜಲಪಾತಂಗಳು ನೋಡಾ.
ಜಗ ಸೃಷ್ಟಿಮಯವೇ ಕಂಠ, ಪೃಥ್ವಿಯೇ ಆಸನ,
ಅಹೋ ರಾತ್ರಿಯೇ ಮಠ ನೋಡಾ.
ತ್ರಿಕಾಲಜ್ಞಾನವೇ ಸೌಭಾಗ್ಯ, ಷಡುಸ್ಥಲಬ್ರಹ್ಮವೇ ಅರಿವು,
ಮಹಾಶೇಷನೆ ಕಟಿಸೂತ್ರ, ಮಹಾಜ್ಞಾನಸಮುದ್ರವೇ ವಾಙ್ಮಯ ನೋಡಾ.
ಮಹಾಮೇರುವೇ ದಂಡಕೋಲು,
ಸದ್ಗುಣವೇ ಪಾತ್ರ, ಕುಲ ಶಿವಕುಲ ನೋಡಾ.
ವನಸ್ಪತಿಯೇ ರೋಮಂಗಳು,
ಮಕುಟದಲಿ ಶೂನ್ಯಲಿಂಗ ಚಿದಾಭಾಸ ಚಿದಂಬರ ನೋಡಾ.
ಇಂಥ ಮಹಾಮಹಿಮ ಜಂಗಮ ಚತುರ್ದಶಭುಜವನೊಳಕೊಂಡು,
ಬ್ರಹ್ಮಾಂಡವೇ ಮಕುಟ, ಪಾತಾಳವೇ ಪಾದದ್ವಯವಾಗಿ
ಸುಳಿದನು ನೋಡಾ.
ಇದಕ್ಕೆ **ವೀರಾಗಮೇ** :
''ಪಾದಮಪ್ಯತಳಂ ವಿದ್ಯಾತ್ ಪಾದೋರ್ಧ್ವಂ ವಿತಳಂ ತಥಾ ।

ಜಂಗಾಭ್ಯಾಂ ಸುತಳಂ ಜ್ಞೇಯಂ ದ್ವಿತಳಂ ಜಾನುಸಂಸ್ಥಿತಂ ।
ತಳಾತಳಂ ತಥೋರೂಭ್ಯಾಂ ಗುಹ್ಯಸ್ಥಾನೇ ರಸಾತಳಂ ।
ಪಾತಾಳೇ ಕಟಿಮಧ್ಯಸ್ತು ಇತ್ಯೇತೇ ಸಪ್ತಲೋಕಕಂ ॥
ಭೂಲೋಕಂ ನಾಭಿಮಧ್ಯಂ ಚ ಭುವರ್ಲೋಕೇ ಹೃದಿ ಸ್ಥಿತಂ ।
ಊರುಚಯಃ ಸ್ವರ್ಗಲೋಕೇ ಮಹರ್ಲೋಕಂತು ಕಂಠಜಂ ।
ಜನರ್ಲೋಕಂ ಕಂಠಮಧ್ಯೇ ತಪರ್ಲೋಕೇ ಲಲಾಟಕೇ ।
ಸತ್ಯಲೋಕೇ ಮಸ್ತಕಸ್ಥಂ ಭುವನಾನಿ ಚತುರ್ದಶ ॥
ಶರೀರಂ ವ್ಯೋಮಾಕಾಶಂ ಪಾತಾಳಂ ಚ ಪದದ್ವಯಂ ।
ಚಂದ್ರಾರ್ಕನೇತ್ರಯುಗಳಂ ಮೇರುಲಿಂಗಂ ಕರಸ್ಥಲಂ ।
ತಸ್ಯ ದೇಹೇ ಸಮಸ್ತಾನಿ ಭುವನಾನಿ ಚತುರ್ದಶ ॥
ಬ್ರಹ್ಮಾಂಡೇ ಮಕುಟಂ ತಸ್ಯ ವದನಂ ಗಗನಂ ಶಿವೇ ।
ದಿಶಶ್ಚ ಸರ್ವಬಾಹುಶ್ಚ ಮೇಘಂ ಸರ್ವಜಟಾಮಯಂ ।
ಚಂದ್ರ ಜ್ಯೋತಿರ್ವಿಭೂತಿಶ್ಚ ವೇದಃ ಸರ್ವಂ ಕ್ರಿಯಾಮಯಂ ।
ನಕ್ಷತ್ರಂ ಪುಷ್ಪನಿಚಯಂ ರುದ್ರಾಕ್ಷಂ ಕುಲಪರ್ವತಂ ।
ಸಾಗರಂ ಜಲಪಾತ್ರಂ ಚ ವಾಙ್ಮಯಂ ಸೃಷ್ಟಿಮಯಂ ಜಗತ್ ।
ಆಸನಂ ಪೃಥ್ವೀ ಮಾತ್ರಸ್ಯ ಅಹೋರಾತ್ರಂ ಗೃಹಾಮಠಂ ।
ತ್ರಿಕಾಲಂ ಜ್ಞಾನ ಸೌಭಾಗ್ಯಂ ಮತಿವಾನ್ ಷಟ್‌ಸ್ಥಲ ಪ್ರಿಯೆ ।
ಶೇಷಾಪಿ ಕಟಿಸೂತ್ರಂ ಚ ಜ್ಞಾನಮುದ್ರಾ ಚ ವಾಙ್ಮಯಂ ।
ಮೇರುದಂಡ ಗುಣಂ ಪಾತ್ರಂ ಕುಲಂ ಶಿವಕುಲಂ ಭವೇತ್ ।
ವನಸ್ಪತಿಶ್ಚ ರೋಮಾನಿ ಏವಮೇಕಾನಿ ಪಾರ್ವತೀ ।
ಮಕುಟಂ ಶೂನ್ಯ ಸಂಜಾತಂ ಚಿದಾಭಾಸಂ ಚಿದಂಬರೇ ॥
ಜಕಾರಂ ಹಂಸವಾಹಸ್ಯಾ ಗಕಾರಂ ಗರುಡಧ್ವಜಂ ।
ಮಕಾರಂ ರುದ್ರ ರೂಪಂ ಚ ತ್ರಿಮೂರ್ತ್ಯಾತ್ಮಜಂಗಮಂ ॥
ಜಕಾರೇ ಜನನಂ ಪೃಥ್ವೀ ಗಕಾರೇ ಆಕಾಶೋದ್ಭವಂ ।
ಮಕಾರೇ ಮರ್ತ್ಯಲೋಕಂ ಚ ಜಂಗಮಂ ಜಗದೀಶ್ವರಂ ।
ಜಂಗಮಸ್ಯ ತ್ರಿಯಕ್ಷರಂ ಭುವನಾನಿ ಚತುರ್ದಶಂ ।
ಸ್ವರ್ಗ ಮರ್ತ್ಯಂ ಚ ಪಾತಾಳಂ ಜಂಗಮಾನಾಂ ಪ್ರಸಶ್ಯತೇ ॥''
ಎಂದುದಾಗಿ,
ಇಂಥ ಮಹಾಮಹಿಮೆಯನುಳ್ಳ ಮಹಾಜಂಗಮವೆ ಜಂಗಮವಲ್ಲದೆ
ಸಚರಾಚರ ಚತುರ್ವಳಯದೊಳಗೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧದಾಸೆಗೆ ಸುಳಿವ
ವೇಷಧಾರಿಯನೆನಗೊಮ್ಮೆ ತೋರದಿರಯ್ಯ.
ಇದಕ್ಕೆ ವೀರಾಗಮೇ :
''ಆಶಯಾಬದ್ಧ್ಯತೇ ಲೋಕಃ ಕರ್ಮಣಾ ಬಹುಚಿಂತಯಾ ।

ಆಯುಕ್ಷಯಂ ನ ಜಾನಾತಿ ವೇಣು ಸೂತ್ರಂ ವಿಧೀಯತೇ ॥''
ಇಂತೆಂದುದಾಗಿ,
ಆಸೆಯ ಧಿಕ್ಕರಿಸಿ ನಿರಾಸೆಯನಿಂಬುಗೊಂಡ
ಮಹಾಜಂಗಮವನೀಪರಿ ಎಂಬೆನಯ್ಯಾ,
ಅಪ್ರಮಾಣಕೂಡಲಸಂಗಮದೇವಾ. ॥ ೭೭೦ ॥

೭೭೧

ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಉಳ್ಳವರ ಮನೆಯ ಬಾಗಿಲಕಾಯ್ದು
ಅವರಾಳಾಗಿ ಮೋಕ್ಷವನೆಯ್ದಲರಿಯದೆ
ಸಾವ ವೇಷಧಾರಿಗಳ ಜಂಗಮವಲ್ಲವೆಂದುದು ನೋಡಾ.
ಇದಕ್ಕೆ ವೀರಾಗಮೇ :
''ಆಯುರ್ವೃದ್ಧಾಃ ತಪೋವೃದ್ಧಾಃ ವೇದವೃದ್ಧಾಃ ಬಹುಶ್ರುತಾಃ ।
ಸರ್ವಸಾಧನವೃದ್ಧಾಪಿ ದ್ವಾರೇ ತಿಷ್ಠತಿ ಕಿಂಕರಾಃ ॥''
ಇಂತೆಂದುದಾಗಿ,
ಆಸೆಯ ಧಿಕ್ಕರಿಸಿದ ನಿಶ್ಚಿಂತ ನಿರಾಭರಿತ ಮಹಾಜಂಗಮಕ್ಕೆ
ನಮೋ ನಮೋ ಎಂಬೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೭೭೧ ॥

೭೭೨

ಜಟೆಯಾಗಲಿ, ಮುಡಿಯಾಗಲಿ, ಶಿಖಿಯಾಗಲಿ,
ಪಂಚಮುದ್ರೆ ಪರಿಪೂರ್ಣವಾಗಿಹ ಜಂಗಮವಾಗಲಿ,
ಪ್ರಮಾದವಶದಿಂದ ಮೈಥುನವ ಮಾಡಿದನಾದಡೆ
ಅವರ ಶಿವದ್ರೋಹಿಗಳೆಂದುದು ನೋಡಾ.
ಇದಕ್ಕೆ ಶಿವಾಗಮೇ :
''ಜಟೀ ಮುಂಡೀ ಶಿಖೀ ವಾಪಿ ಮುದ್ರಾಪಂಚಕ ಭೂಷಿತಂ ।
ಪ್ರಮಾದೇ ಮೈಥುನಂ ಕುರ್ಯಾತ್ ಶಿವದ್ರೋಹೀ ನ ಸಂಶಯಃ ॥''
ಇಂತೆಂದುದಾಗಿ,
ಇದಕ್ಕೆ ವೀರಾಗಮೇ :
''ಜಗನ್ಮೋಹಿತ ಮರ್ತ್ಯಾನಾಂ ಮೋಹಿತಾನಾಮೇತಿ ಈಶ್ವರಃ ।
ಯೋಗಿದ್ವಾರೇ ಚ ಕ್ರಿಯಾಮೇತಿ ಸ ಚಾಪಿ ನರಕಂ ವ್ರಜೇತ್ ॥''
ಇಂತೆಂದುದಾಗಿ,
ಇದಕ್ಕೆ ಉತ್ತರವೀರಾಗಮೇ :
''ಸ್ತ್ರಿಯೋ ಅಧರಪಾನಂ ಚ ಕುಚಂ ಚಾಪೀಡನಂ ತಥಾ ।
ಯೋನಿದ್ವಾರೇ ಚ ಕ್ರೀಡಾಯಾಂ ಯೋಗಿನಾಂ ನರಕಂ ಭವೇತ್ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೭೨ ॥

೭೭೩

ಗುರುಲಿಂಗಜಂಗಮವೆಂದು ಸುಳಿವ ಅಣ್ಣಗಳು ನೀವು ಕೇಳಿರೆ :
ದಾಸಿಯ ಸಂಗವುಳ್ಳನ್ನಕ್ಕ ಗುರುವಲ್ಲ,
ವೇಶಿಯಸಂಗವುಳ್ಳನ್ನಕ್ಕ ಲಿಂಗವಲ್ಲ,
ಪರಸ್ತ್ರೀಯ ಸಂಗವುಳ್ಳನ್ನಕ್ಕ ಜಂಗಮವಲ್ಲ.
ಈ ತ್ರಿವಿಧಸಂಗವುಳ್ಳನ್ನಕ್ಕ ಗುರುಲಿಂಗಜಂಗಮವೆಂದು ಸುಳಿದರೆ
ಇಪ್ಪತ್ತೆಂಟುಕೋಟಿ ನರಕ ತಪ್ಪದು ನೋಡಾ.
ಇದಕ್ಕೆ ವೀರಾಗಮೇ :
''ದಾಸಿವೇಶಿಪರಸ್ತ್ರೀಣಾಂ ತ್ರಿವಿಧ ಸಂಗಯೋಗಾಯಃ ।
ಅಷ್ಟವಿಂಶತಿ ಕೋಟ್ಯಸ್ತು ನರಕೇ ಕಾಲಮಕ್ಷಯಂ ॥''
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೭೩ ॥

೭೭೪

ಹೊನ್ನು ಬಿಡದೆ ಹಿರಿಯರೆಂಬರು ;
ಅಲ್ಲಲ್ಲ ನೋಡಾ.
ಹೆಣ್ಣು ಬಿಡದೆ ಹಿರಿಯರೆಂಬರು ;
ಅಲ್ಲಲ್ಲ ನೋಡಾ.
ಮಣ್ಣು ಬಿಡದೆ ಹಿರಿಯರೆಂಬರು ;
ಅಲ್ಲಲ್ಲ ನೋಡಾ.
ಈ ತ್ರಿವಿಧವನತಿಗಳೆಯದೆ
ಹಿರಿಯರೆಂಬ ನುಡಿಗೆ ನಾಚರು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೭೭೪ ॥

೭೭೫

ಹೊನ್ನ ಬಿಟ್ಟಡೆ ಹಿರಿಯರೆಂಬೆನೆ ?
ಅಲ್ಲಲ್ಲ ನೋಡಾ.
ಹೆಣ್ಣ ಬಿಟ್ಟಡೆ ಹಿರಿಯರೆಂಬೆನೆ ?
ಅಲ್ಲಲ್ಲ ನೋಡಾ.
ಮಣ್ಣ ಬಿಟ್ಟಡೆ ಹಿರಿಯರೆಂಬೆನೆ ?
ಅಲ್ಲಲ್ಲ ನೋಡಾ.
ಈ ತ್ರಿವಿಧವು ಒಂದಬಿಟ್ಟೊಂದಿರದಾಗಿ,
ಈ ತ್ರಿವಿಧವನತಿಗಳೆದು ಮಹಾಘನದಲ್ಲಿ
ಮನ ಲೀಯವಾಗಿ ಸುಳಿವ ನಿಜಸುಳಿವಿಂಗೆ
ನಮೋ ನಮೋ ಎಂಬೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೭೫ ॥

೭೭೬

ಹೊನ್ನ ಬಿಟ್ಟರೇನು ? ಹೆಣ್ಣಿನಾಸೆಯ ಬಿಡದನ್ನಕ್ಕ.
ಅಲ್ಲಿಗೆ ಹಿರಿಯತನ ಸಲ್ಲದು.
ಹೆಣ್ಣ ಬಿಟ್ಟರೇನು ? ಮಣ್ಣಿನಾಸೆಯ ಬಿಡದನ್ನಕ್ಕ.
ಅಲ್ಲಿಗೆ ಹಿರಿಯತನ ಸಲ್ಲದು.
ಅದೆಂತೆಂದಡೆ :
ಈ ತ್ರಿವಿಧವು ಒಂದಬಿಟ್ಟೊಂದಿರದಾಗಿ,
ಈ ತ್ರಿವಿಧವನತಿಗಳೆದು ಮನ ಮಹಾಘನದಲ್ಲಿ ಲೀಯವಾಗಿ
ದಗ್ಧಪಟನ್ಯಾಯದಲ್ಲಿ ಸುಳಿವ ನಿಜಸುಳಿವಿಂಗೆ
ನಮೋ ನಮೋ ಎನುತಿರ್ದೆನು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೭೭೬ ॥

೭೭೭

ಅಕಾರ ಉಕಾರ ಮಕಾರ
ನಾದ ಬಿಂದು ಕಲೆಯನರಿಯರು.
ಪ್ರಣವದ ಸ್ವರೂಪವನರಿಯರು
ನಿರಾಳ ನಿರಂಜನ ನಿರಾಮಯ ನಿರಾಮಯಾತೀತವನರಿಯದೆ
ಗುರುಲಿಂಗಜಂಗಮವೆಂದು ಸುಳಿದರೆ
ರೌರವನರಕವೆಂದುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೭೭ ॥

೭೭೮

ಅಕಾರ ಉಕಾರ ಮಕಾರವನರಿಯದೆ,
ಅಕಾರದೊಳಗೆ ಅಕಾರವನರಿಯರು,
ಅಕಾರದೊಳಗೆ ಉಕಾರವನರಿಯರು,
ಅಕಾರದೊಳಗೆ ಮಕಾರವನರಿಯರು,
ಅಕಾರದೊಳಗೆ ಓಂಕಾರವನರಿಯರು.
ಅಕಾರದೊಳಗೆ ನಿರಾಳ ನಿರಂಜನ ನಿರಾಮಯ
ನಿರಾಮಯಾತೀತವನರಿಯದೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಪದಾರ್ಥದಲ್ಲಿ ಬದ್ಧರಾಗಿ,
ಗುರುಲಿಂಗಜಂಗಮವೆಂದು ಸುಳಿದಡೆ ರೌರವನರಕವೆಂದುದು ನೋಡಾ.
ಇದಕ್ಕೆ ವೀರಾಗಮೇ :
''ಜಂಗಮಶ್ಚ ಗುರೂಣಾಂಚ ಕಾಮಿನೀ ವಿತ್ತಬದ್ಧಯೋಃ ।
ದ್ವಿವಿಧಂ ನರಕಂ ಯಾಂತಿ ಯಾವಚ್ಚಂದ್ರದಿವಾಕರಂ ।''
ಎಂದುದಾಗಿ,

ಇದನರಿದು ತ್ರಿವಿಧವನತಿಗಳದು ಮನ ಮಹಾಘನದಲ್ಲಿ ಲೀಯವಾಗಿ
ಸುಳಿವ ಮಹಾಸುಳಿವಿಂಗೆ ನಮೋ ನಮೋ ಎಂಬೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. || ೭೭೮ ||

೭೭೯

ಉಕಾರದೊಳಗೆ ಉಕಾರವನರಿಯರು
ಉಕಾರದೊಳಗೆ ಅಕಾರವನರಿಯರು
ಉಕಾರದೊಳಗೆ ಮಕಾರವನರಿಯರು
ಉಕಾರದೊಳಗೆ ಓಂಕಾರವನರಿಯರು
ಉಕಾರದೊಳಗೆ ನಿರಾಳನಿರಂಜನ ನಿರಾಮಯ
ನಿರಾಮಯಾತೀತವನರಿಯದೆ ಗುರುಲಿಂಗಜಂಗಮವೆಂದು ಸುಳಿದನಾದರೆ
ಅವನನಾಚಾರಿ ಪಂಚಮಹಾಪಾತಕ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೭೭೯ ||

೭೮೦

ಮಕಾರದೊಳಗೆ ಮಕಾರವನರಿಯರು
ಮಕಾರದೊಳಗೆ ಅಕಾರವನರಿಯರು
ಮಕಾರದೊಳಗೆ ಉಕಾರವನರಿಯರು
ಮಕಾರದೊಳಗೆ ಓಂಕಾರವನರಿಯರು.
ಮಕಾರದೊಳಗೆ ನಿರಾಳ ನಿರಂಜನ ನಿರಾಮಯ
ನಿರಾಮಯಾತೀತವನರಿಯದೆ ಗುರುಲಿಂಗಜಂಗಮವೆಂದು ಸುಳಿದಡೆ
ಕುಂಭೀಪಾತಕವೆಂದು ಶ್ರುತಿಗಳು ಸಾರುತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೭೮೦ ||

೭೮೧

ಮಂತ್ರ ಹನ್ನೊಂದನರಿಯರು ಆಚಾರ್ಯರೆಂಬರು.
ಪದ ತೊಂಬತ್ತನರಿಯರು ಆಚಾರ್ಯರೆಂಬರು.
ವರ್ಣ ಐವತ್ತೆರಡನರಿಯರು ಆಚಾರ್ಯರೆಂಬರು.
ಭುವನ ಇನ್ನೂರಿಪ್ಪತ್ತುನಾಲ್ಕನರಿಯರು ಆಚಾರ್ಯರೆಂಬರು.
ತತ್ವ ಮೂವತ್ತಾರನರಿಯರು ಆಚಾರ್ಯರೆಂಬರು.
ಮೂವತ್ತೆಂಟು ಕಲೆಗಳನರಿಯರು ಆಚಾರ್ಯರೆಂಬರು.
ಅರವತ್ತುನಾಲ್ಕು ಕಲೆ ಜ್ಞಾನವನರಿಯರು ಆಚಾರ್ಯರೆಂಬರು.
ಅಲ್ಲಲ್ಲ ನೋಡಾ, ಅವ ಅನಾಚಾರ್ಯನೆಂದು ಆದಿವೇದಂಗಳು
ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೭೮೧ ||

೭೮೨

ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯಂಗಳಲ್ಲಿ
ಬಿದ್ದು ಹೊರಳಾಡುತ್ತಿಹರು,
ಗುರುವೆಂಬ ನುಡಿಗೆ ನಾಚರು.
ಪರಧನ ಪರಸ್ತ್ರೀಗಳುಪ್ಪುತ್ತಿಹರು,
ಗುರುವೆಂಬ ನುಡಿಗೆ ನಾಚರು.
ಜಾಗ್ರ ಸ್ವಪ್ನ ಸುಷುಪ್ತಿಯ ಕೆಡಿಸಿ
ತೂರ್ಯ ತೂರ್ಯಾತೀತವ ಬೆರಸಲರಿಯರು,
ಗುರುವೆಂಬ ನುಡಿಗೆ ನಾಚರು.
ಆ ತೂರ್ಯಾತೀತಕತತ್ತ್ವ ವ್ಯೋಮಾತೀತವಾಗಿಹ
ಮಹಾಘನದಲ್ಲಿ ಬೆರಸಿ ಬೇರಾಗಲರಿಯದೆ
ಗುರುಲಿಂಗಜಂಗಮವೆಂದು ಸುಳಿವ ಪಂಚಮಹಾಪಾತಕರ ನೋಡಿ
ನಾಚಿತ್ತು ನಾಚಿತ್ತು ನೋಡಾ ಎನ್ನ ಮನ
ಅಪ್ರಮಾಣಕೂಡಲಸಂಗಮದೇವಾ. ॥ ೭೮೨ ॥

೭೮೩

ಆ ಸದ್ಗುರುಸ್ವಾಮಿ ಸದ್ಯೋಜಾತವಾಮದೇವಮುಖದಲ್ಲಿ
ಅಘೋರ ತತ್ಪುರುಷ ಈಶಾನವೆಂಬ ಪಂಚಕಳಸವನಿರಿಸಿ,
ಆ ಶಿಷ್ಯನನು ಗಣತಿಂತಿಣಿಗೆ ದೀರ್ಘದಂಡನಮಸ್ಕಾರವಂ ಮಾಡಿಸಿ
ಪೂರ್ವಜನ್ಮವಂ ಕಳೆದು ಪುನರ್ಜಾತನಂ ಮಾಡಿ,
ಆ ಶಿಷ್ಯನ ಮಸ್ತಕದ ಮೇಲೆ ತಮ್ಮ ಹಸ್ತಕಮಲವನಿರಿಸಿ,
ಬ್ರಹ್ಮರಂಧ್ರದ ಚಿತ್ಪ್ರಭಾಕಳೆಯಂ ತೆಗೆದು
ಆ ಕುಮಾರನ ಠಾವಿನಮೇಲೆ ಆಹ್ವಾನವಂ ಮಾಡಿ
ಇಷ್ಟಲಿಂಗವಂ ಕರಸ್ಥಲದಲ್ಲಿ ಕೊಟ್ಟು,
ಕರ್ಣದ್ವಾರದಲ್ಲಿ ಮಂತ್ರೋಪದೇಶವಂ ಮಾಡಿ, ಗಣಸಾಕ್ಷಿಯಾಗಿ
ದೀಯೆಂಬ ಮಹಾಜ್ಞಾನಮಂ ಕೊಟ್ಟು ಕ್ಷ ಎಂಬ ಮಲತ್ರಯಂಗಳ ಬಿಡಿಸಿ,
ಸದ್ಗುರುಸ್ವಾಮಿ ಗುರುಲಿಂಗಜಂಗಮವಂ ಮಾಡಿದ ಬಳಿಕ
ತಿರುಗಿ ಆ ಮಲತ್ರಯಂಗಳ ಹಿಡಿದರೆ ಆ ಗುರುಲಿಂಗ ಜಂಗಮಕ್ಕೆ
ರೌರವನರಕವೆಂದುದು ನೋಡಾ.
ಇದಕ್ಕೆ ವೀರಾಗಮೇ :
''ದೀಯತೇ ಜ್ಞಾನಸಂಬಂಧಂ ಕ್ಷೀಯತೇ ಚ ಮಲತ್ರಯಂ ।
ದೀಯತೇ ಕ್ಷೀಯತೇ ಚೈವ ದೀಕ್ಷಾಶಬ್ದೋಽಭಿಧೀಯತೇ ॥
ತನ್ಮಲತ್ರಯಸಂಯೋಗಾತ್ ಗುರೂಣಾಂ ಜಂಗಮ ಸ್ತಥಾ ।
ದ್ವಿವಿಧ ನರಕಂ ಯಾತಿ ಯಾವಚ್ಚಂದ್ರದಿವಾಕರೌ ॥''

ಮಲತ್ರಯಂಗಳ ಬಿಟ್ಟು ಸುಳಿವ ಮಹಾಗುರುಲಿಂಗಜಂಗಮಕ್ಕೆ
ನಮೋ ನಮೋ ನಮೋ ಎಂದು ಬದುಕಿದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೮೩ ॥

೭೮೪

ಅಕಾರ ಉಕಾರ ಮಕಾರವನರಿದು
ಅಕಾರದೊಳಗೆ ಅಕಾರವನರಿದು
ಅಕಾರದೊಳಗೆ ಉಕಾರವನರಿದು
ಅಕಾರದೊಳಗೆ ಮಕಾರವನರಿದು
ಅಕಾರದೊಳಗೆ ಓಂಕಾರವನರಿದು
ಅಕಾರದೊಳಗೆ ನಿರಾಳವನರಿದು
ಅಕಾರದೊಳಗೆ ನಿರಂಜನವನರಿದು
ಅಕಾರದೊಳಗೆ ನಿರಾಮಯವನರಿದು
ಅಕಾರದೊಳಗೆ ನಿರಾಮಯಾತೀತವನರಿದು
ನಿರಾಮಯಾತೀತದಲ್ಲಿ ನಿಷ್ಪತ್ತಿಯಾಗಿ ಸುಳಿವ
ನಿಜಸುಳುಹಿಂಗೆ ನಮೋ ನಮೋ ಎನುತಿರ್ದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೭೮೪ ॥

೭೮೫

ಉಕಾರದೊಳಗೆ ಉಕಾರವನರಿದು
ಉಕಾರದೊಳಗೆ ಅಕಾರವನರಿದು
ಉಕಾರದೊಳಗೆ ಮಕಾರವನರಿದು
ಉಕಾರದೊಳಗೆ ಓಂಕಾರವನರಿದು
ಉಕಾರದೊಳಗೆ ನಿರಾಳವನರಿದು
ಉಕಾರದೊಳಗೆ ನಿರಂಜನವನರಿದು
ಉಕಾರದೊಳಗೆ ನಿರಾಮಯವನರಿದು
ಉಕಾರದೊಳಗೆ ನಿರಾಮಯಾತೀತವನರಿದು
ಆ ನಿರಾಮಯಾತೀತದಲ್ಲಿ ಲೀಯವಾಗಿ ಸುಳಿವ
ನಿಜಸುಳುಹಿಂಗೆ ಭವಂ ನಾಸ್ತಿಯಾದ ಬಳಿಕ
ಗುರುಲಿಂಗಜಂಗಮವೆನ್ನಬಹುದು.
ಆ ಮಹಾಶರಣನ–
'ಓಂ ವಿಶ್ವಾಧಿಕೋ ರುದ್ರೋ ಮಹರ್ಷಿಃ
ಮಹೇಶ ರುದ್ರುಸ್ತಸ್ಮೈ ರುದ್ರಾಯ ನಮೋಽಸ್ತು'
ಎಂದು ಶ್ರುತಿಗಳು ಕೊಂಡಾಡುತ್ತಿಹವು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೭೮೫ ॥

೭೮೬

ಮಕಾರದೊಳಗೆ ಮಕಾರವನರಿದು
ಮಕಾರದೊಳಗೆ ಅಕಾರವನರಿದು
ಮಕಾರದೊಳಗೆ ಉಕಾರವನರಿದು
ಮಕಾರದೊಳಗೆ ಓಂಕಾರವನರಿದು
ಮಕಾರದೊಳಗೆ ನಿರಾಳವನರಿದು
ಮಕಾರದೊಳಗೆ ನಿರಂಜನವನರಿದು
ಮಕಾರದೊಳಗೆ ನಿರಾಮಯವನರಿದು
ಮಕಾರದೊಳಗೆ ನಿರಾಮಯಾತೀತವನರಿದು
ಆ ನಿರಾಮಯಾತೀತದಲ್ಲಿ ಬೆರಸಿ ನಿಶ್ಚಿಂತನಾಗಿ ಸುಳಿವ
ನಿಜಸುಳುಹಿಂಗೆ ಭವಂ ನಾಸ್ತಿಯೆಂದುದು ವೇದಂಗಳು.
ಆ ಮಹಾಶರಣನೇ ಶಿವನೆಂದು ಕೊಂಡಾಡುತ್ತಿಹುದು ನೋಡಾ.
ಇದಕ್ಕೆ ಶ್ರುತಿ :
''ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋವೃತ್ವಾ ಅತ್ಯತಿಷ್ಠದ್ದಶಾಂಗುಲಂ ॥''
ಎಂದು ಶ್ರುತಿಗಳು ಹೊಗಳುತ್ತಿಹುದ
ಮಹಾಗಮದಲ್ಲಿ ಹೇಳುತ್ತಿಹುದು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೭೮೬ ॥

೭೮೭

ಮಂತ್ರ ಹನ್ನೊಂದು, ಪದ ತೊಂಬತ್ತುನಾಲ್ಕನರಿದು
ಮೇಲಾಗಿ ಮನ ಮಹಾಘನದಲ್ಲಿ ನಿಂದಡೆ,
ಆಚಾರ್ಯನೆಂದುದು ನೋಡಾ ಶ್ರುತಿಗಳು.
ವರ್ಣ ಐವತ್ತೆರಡು, ಭುವನ ಇನ್ನೂರ ಇಪ್ಪತ್ತುನಾಲ್ಕವನರಿದು,
ಮೇಲಾಗಿ ಮನ ಮಹಾಘನದಲ್ಲಿ ನಿಂದರೆ
ಆಚಾರ್ಯನೆಂದುದು ನೋಡಾ ಶ್ರುತಿಗಳು.
ಮೂವತ್ತಾರು ತತ್ವವನರಿದು, ಷಟ್‌ಕಲೆಗಳ ತಿಳಿದು
ಮೇಲಾಗಿ ಮನ ಮಹಾಘನದಲ್ಲಿ ನಿಂದಡೆ
ಆಚಾರ್ಯನೆಂದುದು ನೋಡಾ ಶ್ರುತಿಗಳು.
ಮೂವತ್ತೆಂಟು ಕಲೆಗಳು, ಅರುವತ್ತುನಾಲ್ಕು ಕಲೆ ಜ್ಞಾನವನರಿದು
ಮೇಲಾಗಿ ಮನ ಮಹಾಘನದಲ್ಲಿ ನಿಂದರೆ ಅವರ
ವೇದಂಗಳು ಜಗದಾರಾಧ್ಯರೆಂದು ನಮೋ ನಮೋ ಎಂದುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೮೭ ॥

೭೮೮

ಅಕಾರ ಉಕಾರ ಮಕಾರ ನಾದ ಬಿಂದು ಕಳೆಗಳ ತಿಳಿದು,
ಪ್ರಣವಸ್ವರೂಪವನರಿದು, ನಿರಾಳ ನಿರಂಜನ ನಿರಾಮಯ
ನಿರಾಮಯಾತೀತವನರಿದು, ಆ ನಿರಾಮಯಾತೀತದೊಳು
ಮನ ಲೀಯವಾಗಿ ಸುಳಿವ ನಿಜಸುಳುಹಿಂಗೆ ನಮೋ ನಮೋ ಎಂಬೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೮೮ ॥

೭೮೯

ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯಂಗಳ ಹೊದ್ದದೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧದಾಸೆಯಂ ಬಿಟ್ಟು,
ಜಾಗ್ರ ಸ್ವಪ್ನ ಸುಷುಪ್ತಿಯೆಂಬ ಮೂರವಸ್ಥೆಯಂ ಗೆಲಿದು,
ತೂರ್ಯವನೊಡಗೂಡಿ ತೂರ್ಯಾತೀತನಾಗಿ ಆ ತೂರ್ಯಾತೀತಕ್ಕತ್ತತ್ತ
ವ್ಯೋಮಾತೀತವಾಗಿಹಾತನೆ ಗುರು, ಆತನೆ ಲಿಂಗ, ಆತನೆ ಜಂಗಮ,
ಆತನೆ ಶರಣ, ಆತನೆ ನಿತ್ಯನಿರಂಜನ ನಿರಾಮಯ, ನಿರಾಮಯಾತೀತನು,
ಆತನೆ ನಮ್ಮ ಅಪ್ರಮಾಣಕೂಡಲಸಂಗಮದೇವ. ॥ ೭೮೯ ॥

ಹೀಂಗೆಂದು ಸದ್ಗುರುಸ್ವಾಮಿ ನಿರೂಪಿಸಲು ಪರಮಹರುಷಿತನಾಗಿ, ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಭಕ್ತ–ಗುರು–ಲಿಂಗ–ಜಂಗಮದ ಮಹಾತ್ಮೆಯಂ, ಗುರುಲಿಂಗಜಂಗಮದ ತಾಮಸನಿರಸನಮಂ ನಿಮ್ಮ ಮಹಾವಾಕ್ಯಂಗಳಿಂದ ನಿರೂಪಿಸಿ, ನಿಮ್ಮ ಮಹಾಜ್ಞಾನದೃಕ್ಕಿನಿಂದ ತೋರಲು ಕಂಡು ಪರಮಸುಖಿಯಾದೆನು. ಇನ್ನು ನಿರ್ವಾಣದೀಕ್ಷೆಯಂ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರು ಸ್ವಾಮಿ ನಿರೂಪಿಸಿದರದೆಂತೆಂದಡೆ :

೭೯೦

ಎನ್ನ ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನವೆಂಬ ಭೂಮಿಯ ಮೇಲೆ
ತಮ್ಮ ಕೃಪಾದೃಷ್ಟಿಯೆಂಬ ಗೋಮಯದಲ್ಲಿ
ಸ್ವಯಂಪ್ರಕಾಶವೆಂಬ ಅಗ್ಘವಣಿಯಂ ನೀಡಿ, ಸಮ್ಮಾರ್ಜನೆಯಂ ಮಾಡಿ,
ಎನ್ನ ಅಷ್ಟಮದಂಗಳ ಕುಟ್ಟಿ ರಂಗವಲ್ಲಿಯನಿಕ್ಕಿ,
ನಮಃಶಿವಾಯವೆಂಬ ಬೀಜವಂ ಸುರಿದು,
ನಿರಂಜನಪ್ರಣವ ಅವಾಚ್ಯಪ್ರಣವ ಕಲಾಪ್ರಣವ
ಅನಾದಿಪ್ರಣವ ಆದಿಪ್ರಣವವೆಂಬ
ಪಂಚಕಳಸಂಗಳಲ್ಲಿ ನಿರಂಜನಾತೀತವೆಂಬ ಉದಕವಂ ತುಂಬಿ,
ಪಂಚಾಕ್ಷರವೆಂಬ ಬೀಜದ ಮೇಲೆ
ಪಂಚಪ್ರಣವವೆಂಬ ಪಂಚಕಳಸಂಗಳಂ ಸ್ಥಾಪ್ಯವಂ ಮಾಡಿ,
ಅರುವೆಂಬ ದಾರವಂ ಸುತ್ತಿ, ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ
ಮಹಾಲಿಂಗವೆಂಬ ನವರತ್ನವಂ ನೀಡಿ,
ಮೂವತ್ತೆಂಟು ಕಲೆಗಳೆಂಬ ದರ್ಭೆಯಂ,
ಅರುವತ್ತುನಾಲ್ಕು ಕಲೆ ಜ್ಞಾನಂಗಳೆಂಬ ತಳಿರುಗಳಂ ತುಂಬಿ,
ನಿರಾಳವೆಂಬ ವಿಭೂತಿಯಂ ಧರಿಸಿ, ನಿರಂಜನವೆಂಬ ಗಂಧವನಿಟ್ಟು,
ನಿರಾಮಯವೆಂಬ ಅಕ್ಷತೆಯಂ ಸಮರ್ಪಿಸಿ,
ಪರಮಾನಂದವೆಂಬ ಮಧುರಸವನಿರಿಸಿ,
ಅನಂತಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶವಾಗಿಹ
ನಿರಾಲಂಬವೆಂಬ ಅಷ್ಟದಳಕಮಲ ಪುಷ್ಪವ ಸಮರ್ಪಿಸಿ,
ಜ್ಞಾನವೆಂಬ ಧೂಪವಮಂ ಬೀಸಿ,
ಸ್ವಯಂಜ್ಯೋತಿಯೆಂಬ ಆರತಿಯಂ ಬೆಳಗಿ,
ಅಖಂಡಿತವೆಂಬ ನೈವೇದ್ಯವಂ ಸಮರ್ಪಿಸಿ
ಅಖಂಡಾನಂದವೆಂಬ ಅಡಕೆ,
'ಏಕಏವ ನ ದ್ವಿತೀಯಂ ಬ್ರಹ್ಮ'ವೆಂಬ ಎಲೆ,
ಸುರಾಳಬ್ರಹ್ಮವೆಂಬ ಸುಣ್ಣವಂ ತಂದು,
ತಾಂಬೂಲವಂ ಸಮರ್ಪಿಸಿ,
ಈ ಕ್ರಮದಲ್ಲಿ ಕಳಶಾಭಿಷೇಕವಂ ಮಾಡಿ,
ಆ ಶಿಷ್ಯನ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬ
ಗಣತಿಂತಿಣಿಗೆ ದೀರ್ಘದಂಡ ನಮಸ್ಕಾರವಂ ಮಾಡಿಸಿ
ಚಿತ್ಪ್ರಕಾಶವೆಂಬ ವಿಭೂತಿಯ ಸರ್ವಾಂಗವೆಲ್ಲವ ಧೂಳನವಂ ಮಾಡಿ,
ಶಿವಪ್ರಕಾಶವೆಂಬ ಯಜ್ಞೋಪವೀತವಂ ಧರಿಸಿ,
ಅಪ್ರಮಾಣಕೂಡಲಸಂಗನೆಂಬ ಲಿಂಗಕ್ಕೆ
ಪರಮಪರಿಣಾಮವೆಂಬ ಪಂಚಾಮೃತದಲ್ಲಿ ಅಭಿಷೇಕವಂ ಮಾಡಿಸಿ,
ಪರಂಜ್ಯೋತಿಯೆಂಬ ವಿಭೂತಿಯನಿಟ್ಟು
ನಿರಾಳಾತೀತವೆಂಬ ಗಂಧವ ಧರಿಸಿ,
ಅನಾಮಯವೆಂಬ ಅಕ್ಷತೆಯನಿಟ್ಟು
ಪರಾಪರಚಕ್ರದಲ್ಲಿಹ ಮಹಾಕ್ಷಿತಿ ದಳಪದ್ಮಮಂ ಸಮರ್ಪಿಸಿ,
ಸಚ್ಚಿದಾನಂದವೆಂಬ ಧೂಪವಂ ಬೀಸಿ,
ನಿತ್ಯಾನಂದವೆಂಬ ದೀಪವಂ ಬೆಳಗಿ,
ಪರಾಪರವೆಂಬ ನೈವೇದ್ಯವನಿಟ್ಟು,
ಅನುಭಾವವೆಂಬ ಅಡಕೆ, ಅಪ್ರಮೇಯವೆಂಬ ಎಲೆ,
ಸ್ವಾನುಭೂತಿಯೆಂಬ ಸುಣ್ಣವಂ ತಂದು, ತಾಂಬೂಲವಂ ಸಮರ್ಪಿಸಿ,
ಆ ಶಿಷ್ಯನ ಮೂವತ್ತೆರಡು ತತ್ವಸ್ಥಾನದಲ್ಲಿ
ಮಹಾಪ್ರಕಾಶವೆಂಬ ವಿಭೂತಿಯಂ ಧರಿಸಿ,

ನಿರಾಕಾರವೆಂಬ ಹಸ್ತವ ನಿರ್ವಯಲೆಂಬ ಪಂಚಾಮೃತದಲ್ಲಿ ಪ್ರಕ್ಷಾಲಿಸಿ,
ಘನಕ್ಕೆ ಘನವಾಗಿಹ ಮಹಾಮಸ್ತಕದ ಮೇಲೆ
ತಮ್ಮ ಪರಬ್ರಹ್ಮವೆಂಬ ಹಸ್ತಕಮಲವನಿರಿಸಿ,
ಅನಂತತೇಜೋಮಯ ಅಪ್ರಮಾಣ ಅಗೋಚರಕ್ಕತ್ತತ್ತವಾಗಿಹ
ಮಹಾಪ್ರಭಾಕಳೆಯಂ ತೆಗೆದು
ಅಪ್ರಮಾಣಕೂಡಲಸಂಗಯ್ಯನೆಂಬ ಮಹಾಘನಲಿಂಗದ ಮೇಲಿರಿಸಿ,
ಆ ಶಿಷ್ಯನ ನಿರಾಕಾರವೆಂಬ ಕರಸ್ಥಲದಲ್ಲಿ
ಅಪ್ರಮಾಣಕೂಡಲಸಂಗಯ್ಯನೆಂಬ ಮಹಾಘನಲಿಂಗಮಂ ಬಿಜಯಂಗೆಯ್ಸಿ,
ಪರಾಕಾಶವೆಂಬ ಕರ್ಣದ್ವಾರದಲ್ಲಿ
ಅನಾದಿಮೂಲಮಂತ್ರಮಂ ತುಂಬಿ,
'ಭಕ್ತಿ ಭಿಕ್ಷಾಂದೇಹಿ' ಎಂದು ಲಿಂಗಾರ್ಪಿತ ಭಿಕ್ಷಮಂ ಬೇಡಿಸಿ,
ಈ ಕ್ರಮದಲ್ಲಿ ನಿರ್ವಾಣದೀಕ್ಷೆಯಂ ಕೊಟ್ಟು
ಎನ್ನ ಕೃತಾರ್ಥನ ಮಾಡಿದ ಅಪ್ರಮಾಣ ಕೂಡಲಸಂಗಯ್ಯನ
ಶ್ರೀಚರಣಕ್ಕೆ ನಮೋ ನಮೋ ಎನುತಿರ್ದೆನು ಕಾಣಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೦ ॥

ಹೀಂಗೆಂದು ಸದ್ಗುರುಸ್ವಾಮಿ ಆ ಶಿಷ್ಯಂಗೆ ನಿರ್ವಾಣದೀಕ್ಷೆಯಂ ನಿರೂಪಿಸಲು ಪರಮಹರುಷಿತನಾಗಿ, ಮತ್ತಂ ಆ ಶಿಷ್ಯನು ಮದ್ಗುರುಸ್ವಾಮಿಗೆ ದೀರ್ಘದಂಡ ನಮಸ್ಕಾರವಂ ಮಾಡಿ ಭಯಭಕ್ತಿಯಿಂದ ಎಲೆ ಸದ್ಗುರುಸ್ವಾಮಿ ಇಂತೀ ಕ್ರಮದಲ್ಲಿ ನಿರ್ವಾಣದೀಕ್ಷೆಯಂ ಕೊಟ್ಟು ಕೃತಾರ್ಥನಂ ಮಾಡಿದಿರಿ, ಇನ್ನು ಮುಕ್ತಾಂಗನೆಯ ರೂಪುಲಾವಣ್ಯ ಸೌಂದರ್ಯಮಂ ತೋರಿ ಆ ಮುಕ್ತಾಂಗನೆಯ ಮದುವೆಯಂ ಮಾಡಿ ರಕ್ಷಿಸೆಂದು ಆ ಶಿಷ್ಯನು ಬೆಸಗೊಳಲು, ಆ ಸದ್ಗುರುಸ್ವಾಮಿ ನಿರೂಪಿಸಿದರದೆಂತೆಂದಡೆ :

೭೯೧

ನಾಮರೂಪುಕ್ರಿಯಾತೀತವಾಗಿ
ಘನಕ್ಕೆ ಘನವಾದ ಮಹಾಘನವೇ ಆ ಮುಕ್ತಾಂಗನೆಯ ಶಿರಸ್ಸು ನೋಡಾ.
ದಿವ್ಯಜ್ಞಾನದ ಶಕ್ತಿ, ಮಹಾಜ್ಞಾನದ ಶಕ್ತಿ, ಅಖಂಡಜ್ಞಾನದ ಶಕ್ತಿಯೇ
ಆ ಮುಕ್ತಾಂಗನೆಯ ನೇತ್ರತ್ರಯಂಗಳು ನೋಡಾ.
ಅಚಲ ಅಚಲಾನಂದಶಕ್ತಿಯೇ
ಆ ಮುಕ್ತಾಂಗನೆಯ ಪುರ್ಬುದ್ವಯಂಗಳು ನೋಡಾ.
ಅಚಲಾತೀತದ ಮಹಾಶಕ್ತಿಯೇ
ಆ ಮುಕ್ತಾಂಗನೆಯ ಹಣೆ ನೋಡಾ.
ನಿರಾಳಾನಂದದ ಮಹಾಶಕ್ತಿಯೇ
ಆ ಮುಕ್ತಾಂಗನೆಯ ನಾಸಿಕ ನೋಡಾ.

ನಿರಂಜನಾತೀತದ ಶಕ್ತಿ, ನಿರಂಜನಾತೀತಾನಂದ ಶಕ್ತಿಯೇ
ಆ ಮುಕ್ತಾಂಗನೆಯ ಉಶ್ವಾಸ ನಿಶ್ವಾಸ ನೋಡಾ.
ನಿರಾಮಯದ ಶಕ್ತಿ, ನಿರಾಮಯಾತೀತದ ಶಕ್ತಿಯೇ
ಆ ಮುಕ್ತಾಂಗನೆಯ ಕರ್ಣದ್ವಯಂಗಳು ನೋಡಾ.
ನಿರಾಳನಿರ್ವಯಲಶಕ್ತಿಯೇ ಆ ಮುಕ್ತಾಂಗನೆಯ
ನಯನದ್ವಯಂಗಳು ನೋಡಾ.
ಅಮಲ ನಿರ್ಮಲದ ಶಕ್ತಿಯೇ
ಆ ಮುಕ್ತಾಂಗನೆಯ ಕಪೋಲದ್ವಯಂಗಳು ನೋಡಾ.
ಅಮಲಾತೀತದ ಶಕ್ತಿಯೇ
ಆ ಮುಕ್ತಾಂಗನೆಯ ಗದ್ದ ನೋಡಾ.
ನಾದದ ಶಕ್ತಿ ಬಿಂದುವಿನ ಶಕ್ತಿ ಕಲೆಯ ಶಕ್ತಿ
ಕಲಾತೀತ ಶಕ್ತಿಯೆ ಆ ಮುಕ್ತಾಂಗನೆಯ
ತಾಳೋಷ್ಟಸಂಪುಟ ನೋಡಾ.
ಆ ಪ್ರಣವದ ನಾದದ ಕಲೆ, ಷೋಡಶಕಲೆ,
ಪ್ರಣವಬಿಂದುವಿನ ಕಲೆ, ಈ ಮೂವತ್ತೆರಡು ಕಲಾಶಕ್ತಿಗಳೇ
ಆ ಮುಕ್ತಾಂಗನೆಯ ಮೂವತ್ತೆರಡು ದಂತಗಳು ನೋಡಾ.
ಆ ದಂತಂಗಳ ಕಾಂತಿ ಅನಂತಕೋಟಿ
ಮಹಾಜ್ಯೋತಿಪ್ರಕಾಶವಾಗಿಹುದು ನೋಡಾ.
ಆ ಮುಕ್ತಾಂಗನೆಯ ಕೊರಳೇ
ಕುಳವಿಲ್ಲದ ನಿರಾಕುಳವಸ್ತುವಿನ ಮಹಾಶಕ್ತಿ ನೋಡಾ.
ಅಪ್ರಮಾಣ ಅಗೋಚರಶಕ್ತಿಯೇ
ಆ ಮುಕ್ತಾಂಗನೆಯ ಭುಜದ್ವಯಂಗಳು ನೋಡಾ.
ಪರತತ್ವದಲ್ಲಿ ಶಿವತತ್ವದ ಮಹಾಶಕ್ತಿಯೇ
ಆ ಮುಕ್ತಾಂಗನೆಯ ಕೂರ್ಪದ್ವಯಂಗಳು ನೋಡಾ.
ಗುರತತ್ವದ ಲಿಂಗಶಕ್ತಿಯೇ ಆ ಮುಕ್ತಾಂಗನೆಯ
ಹಸ್ತದ್ವಯಂಗಳು ನೋಡಾ.
ಚಿತ್ಪಂಚಾಕ್ಷರ ಪರಮಪಂಚಾಕ್ಷರವೆ
ಆ ಮುಕ್ತಾಂಗನೆಯ ಹಸ್ತದ್ವಯದ ಹಸ್ತಾಂಗುಲಿಗಳು ನೋಡಾ.
ಚಿತ್ಪಂಚಾಕ್ಷರ ಪರಮಪಂಚಾಕ್ಷರದ ಮಹಾಪ್ರಭೆಯೆ
ಆ ಮುಕ್ತಾಂಗನೆಯ ಹಸ್ತಾಂಗುಲಿಯ ನಖಂಗಳು ನೋಡಾ.
ಪರಬ್ರಹ್ಮದ ಮಹಾಶಕ್ತಿಯೇ ಆ ಮುಕ್ತಾಂಗನೆಯ ಉರಸ್ಥಲ ನೋಡಾ.
ಉನ್ಮನೀಶಕ್ತಿ ಮನೋನ್ಮನಿಶಕ್ತಿಯೇ
ಆ ಮುಕ್ತಾಂಗನೆಯ ಕಕ್ಷದ್ವಯಂಗಳು ನೋಡಾ.
ಆ ಪರಬ್ರಹ್ಮದ ಅಖಂಡ ಮಹಾಶಕ್ತಿಯೆಂಬ ಉರಸ್ಥಲದಲ್ಲಿ

ನಿರಂಜನಪ್ರಣವ ಅವಾಚ್ಯಪ್ರಣವವೆಂಬ
ಅಖಂಡಮಹಾ ಬಟ್ಟಕಲಶಕುಚಂಗಳು ನೋಡಾ.
ಚಿತ್ತಾಕಾಶ ಚಿದಾಕಾಶಶಕ್ತಿಯೇ
ಆ ಮುಕ್ತಾಂಗನೆಯ ದಕ್ಷಿಣ–ವಾಮಪಾರ್ಶ್ವಂಗಳು ನೋಡಾ.
ಬಿಂದ್ವಾಕಾಶದ ಶಕ್ತಿಯೇ
ಆ ಮುಕ್ತಾಂಗನೆಯ ಬೆನ್ನು ನೋಡಾ,
ಮಹದಾಕಾಶ ಶಕ್ತಿಯೇ
ಆ ಮುಕ್ತಾಂಗನೆಯ ಬೆನ್ನ ನಿಟ್ಟೆಲುವು ನೋಡಾ.
ಪಂಚಸಂಜ್ಞೆಯನ್ನುಳ್ಳ ಅಖಂಡಲಿಂಗದ ಅಖಂಡಪರಾಕ್ರಮಶಕ್ತಿಯೇ
ಆ ಮುಕ್ತಾಂಗನೆಯ ಗರ್ಭ ನೋಡಾ.
ಆ ಗರ್ಭ ಅನಂತಕೋಟಿ ಮಹಾಜ್ಯೋತಿಪ್ರಕಾಶವಾಗಿಹುದು ನೋಡಾ.
ಆ ಗರ್ಭದಲ್ಲಿ ಅನಂತಕೋಟಿ ಇಂದ್ರಾದಿಗಳು,
ಅನೇಕಕೋಟಿ ಸರಸ್ವತಿಗಳು,
ಅನೇಕಕೋಟಿ ಮಹಾಲಕ್ಷ್ಮಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ರುದ್ರಾಣಿಗಳು,
ಅನೇಕಕೋಟಿ ಈಶ್ವರಶಕ್ತಿ,
ಅನೇಕಕೋಟಿ ಉಮಾಶಕ್ತಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಕ್ರಿಯಾಶಕ್ತಿ,
ಅನೇಕಕೋಟಿ ಜ್ಞಾನಶಕ್ತಿ,
ಅನೇಕಕೋಟಿ ಆದಿಶಕ್ತಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಇಚ್ಛಾಶಕ್ತಿ,
ಅನೇಕಕೋಟಿ ಪರಶಕ್ತಿ,
ಅನೇಕಕೋಟಿ ಚಿಚ್ಛಕ್ತಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ನಿರ್ಮಾಯಶಕ್ತಿ,
ಅನೇಕಕೋಟಿ ನಿಭ್ರಾಂತಶಕ್ತಿ,
ಅನೇಕಕೋಟಿ ವಿಭಿನ್ನಶಕ್ತಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ತತ್ವಂಗಳು,
ಅನೇಕಕೋಟಿ ಸದಾಶಿವರು,
ಅನೇಕಕೋಟಿ ಮಹೇಶ್ವರರು ಅಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಈಶ್ವರರು,
ಅನೇಕಕೋಟಿ ರುದ್ರರು,
ಅನೇಕಕೋಟಿ ವಿಷ್ಣ್ವಾದಿಗಳಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಬ್ರಹ್ಮರು,
ಅನೇಕಕೋಟಿ ಋಷಿಗಳು,

ಅನೇಕಕೋಟಿ ಚಂದ್ರಾದಿತ್ಯರಡಗಿಹರು ನೋಡಾ.
ಆ ಗರ್ಭದಲ್ಲಿ ಅನೇಕಕೋಟಿ ಇಂದ್ರರು,
ಅನೇಕಕೋಟಿ ದೇವರ್ಕಳು,
ಅನೇಕಕೋಟಿ ಬ್ರಹ್ಮಾಂಡಗಳಡಗಿಹವು ನೋಡಾ.
ವ್ಯೋಮಾತೀತದ ಮಹಾಶಕ್ತಿಯೇ
ಆ ಮುಕ್ತಾಂಗನೆಯ ನಡು ನೋಡಾ.
ಕಲಾಪ್ರಣವದ ಶಕ್ತಿಯೇ
ಆ ಮುಕ್ತಾಂಗನೆಯ ಕಟಿಸ್ಥಾನಂಗಳು ನೋಡಾ.
ಆದಿಪ್ರಣವದ, ಅನಾದಿಪ್ರಣವದ ಶಕ್ತಿಯೇ
ಆ ಮುಕ್ತಾಂಗನೆಯ ಪಚ್ಚಳ ನೋಡಾ.
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ
ಸಮಸ್ತದೇವರ್ಕಗಳಿಗೂ ಜನನಸ್ಥಲವಾಗಿಹ
ನಿರ್ವಾಣಪದದ ಮಹಾಶಕ್ತಿಯೇ
ಆ ಮುಕ್ತಾಂಗನೆಯ ಉರಸ್ಥಲ ನೋಡಾ.
ಶಿವಸಂಬಂಧ ಶಕ್ತಿಸಂಬಂಧವಾಗಿಹ ಓಂಕಾರಶಕ್ತಿಯೇ
ಆ ಮುಕ್ತಾಂಗನೆಯ ಒಳತೊಡೆ ನೋಡಾ.
ಸಚ್ಚಿದಾನಂದ ಪರಮಾನಂದದ ಶಕ್ತಿಯೇ
ಆ ಮುಕ್ತಾಂಗನೆಯ ಮೊಳಪಾದ ಕಂಭದ್ವಯಂಗಳು ನೋಡಾ,
ಚಿದಾನಂದದ ಮಹಾನಂದದ ಶಕ್ತಿಯೇ
ಆ ಮುಕ್ತಾಂಗನೆಯ ಜಾನುದ್ವಯಂಗಳು ನೋಡಾ.
ಚಿದಾತ್ಮ ಪರಮಾತ್ಮದ ಶಕ್ತಿಯೇ
ಆ ಮುಕ್ತಾಂಗನೆಯ ಪಾದದ್ವಯಂಗಳು ನೋಡಾ.
ಅತಿಸೂಕ್ಷ್ಮ ಪಂಚಾಕ್ಷರವೇ
ಆ ಮುಕ್ತಾಂಗನೆಯ ಪದಾಂಗುಲಿಗಳೆಂಬ ಸಾಯುಜ್ಯಪದ ನೋಡಾ.
ಅತಿಸೂಕ್ಷ್ಮ ಪಂಚಾಕ್ಷರ ಪ್ರಣವಪಂಚಾಕ್ಷರ ಮಹಾಪ್ರಕಾಶವೇ
ಪಾದಾಂಗುಷ್ಠಾಂಗುಲಿಗಳ ನಖಂಗಳು ನೋಡಾ.
ಪ್ರಣವಪಂಚಾಕ್ಷರ ಪರಾಪರವಾಗಿಹ ಪರಬ್ರಹ್ಮದ
ಅತಿಮಹಾನಂದದ ಶಕ್ತಿಯೇ ಆ ಮುಕ್ತಾಂಗನೆಯ ಸ್ವರ ನೋಡಾ.
ಆ ಮುಕ್ತಾಂಗನೆಯ ಮಾತೇ
ಅಖಂಡಮಹಾಜ್ಯೋತಿರ್ಮಯ ಲಿಂಗ ನೋಡಾ.
ಚಿನ್ಮಯ ಚಿದ್ರೂಪ ಚಿತ್ಪ್ರಕಾಶದ ಅಖಂಡಮಹಾಶಕ್ತಿಯೇ
ಆ ಮುಕ್ತಾಂಗನೆಯ ಪೀತಾಂಬರದುಡುಗೆ ನೋಡಾ.
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ ಆಚಾರಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ

ಮೊದಲಾಗಿ ಇನ್ನೂರ ಹದಿನಾರು ಷಡುಸ್ಥಲಲಿಂಗಂಗಳ
ಅತಿಮಹಾಶಕ್ತಿಗಳೇ ಆ ಮುಕ್ತಾಂಗನೆಯ ತತ್‌ಸ್ಥಾನದಲ್ಲಿ
ಧರಿಸಿಹ ಭೂಷಣಂಗಳು ನೋಡಾ.
ಅಖಂಡಪರಿಪೂರ್ಣ ಜ್ಞಾನವೇ
ಆ ಮುಕ್ತಾಂಗನೆಯ ತುರುಬು ನೋಡಾ.
ಅನಂತಕೋಟಿ ಅಖಂಡ ಮಹಾಜ್ಞಾನವೇ
ಶೃಂಗಾರವಾಗಿಹ ಆ ಮುಕ್ತಾಂಗನೆಯನೆಯ್ದಲೀಯದೆ,
ಆ ಮುಕ್ತಾಂಗನೆಯ ಸುತ್ತುವಳಯಾಕೃತವಾಗಿಹ
ಅನಂತಕೋಟಿಭೂತಂಗಳು, ಅನಂತಕೋಟಿ ಮಹಾಭೂತಂಗಳು,
ಅನಂತಕೋಟಿ ಅತಿಮಹಾಭೂತಂಗಳು
ಸುತ್ತಿಕೊಂಡಿಹವು ನೋಡಾ.
ಆ ಮುಕ್ತಾಂಗನೆಯ ಅನಂತಕೋಟಿ ಇಂದ್ರರು,
ಅನಂತಕೋಟಿ ಬ್ರಹ್ಮರು, ಅನಂತಕೋಟಿ ವಿಷ್ಣ್ವಾದಿಗಳು,
ಅನಂತಕೋಟಿ ರುದ್ರರು, ಅನಂತಕೋಟಿ ಈಶ್ವರರು,
ಅನಂತಕೋಟಿ ಸದಾಶಿವರು, ಅನಂತಕೋಟಿ ಮುನಿಗಳು,
ಅನಂತಕೋಟಿ ದೇವರ್ಕಳು, ಅನಂತಕೋಟಿ ವೇದಾಗಮಂಗಳು,
ಅನಂತಕೋಟಿ ಶಾಸ್ತ್ರ ಪುರಾಣಂಗಳೆಲ್ಲ ಕಾಣಲರಿಯವು ನೋಡಾ.
ಅಂಥ ಮುಕ್ತಾಂಗನೆಯ ಸದ್ಗುರುಸ್ವಾಮಿ
ತಮ್ಮ ಅಖಂಡಮಹಾಜ್ಞಾನದೃಕ್ಕಿನಿಂದ ತೋರಲು
ಆ ಶಿಷ್ಯನು ಆ ಮುಕ್ತಾಂಗನೆಯ ಕಂಡು ಮೋಹಿಸಿ
ಆ ಮುಕ್ತಾಂಗನೆಯನಪ್ಪಿ ಅಗಲದೆ
ಆಲಿಂಗನವಂ ಮಾಡುತ್ತ, ಆ ಮುಕ್ತಾಂಗನೆಯ
ಪರಬ್ರಹ್ಮದ ಅಖಂಡ ಮಹಾಶಕ್ತಿಯೆಂಬ
ಉರಸ್ಥಲದಲ್ಲಿಯ ನಿರಂಜನಪ್ರಣವವೆಂಬ
ಅಖಂಡಮಹಾಬಟ್ಟಕುಚಂಗಳ ಪಿಡಿದು
ನಾದಬಿಂದುಕಲಾತೀತ ಅಖಂಡಾನಂದಶಕ್ತಿಯೆಂಬ
ಆ ಮುಕ್ತಾಂಗನೆಯ ಅಧರಪಾನವಂ ಮಾಡಿ
ಪರಬ್ರಹ್ಮದ ಅಖಂಡಮಹಾಶಕ್ತಿಯೆಂಬಿದೆಯಮೇಲೆ
ಬಿದ್ದು ತಬ್ಬಿಕೊಂಡು ಪರವಶವಾಗಿ ಎನ್ನ ಭವಂ ನಾಸ್ತಿಯಾಯಿತ್ತು.
ಇಂತೀ ಮುಕ್ತಾಂಗನೆಯ ರೂಪ–ಲಾವಣ್ಯ–ಸೌಂದರ್ಯಮಂ ತೋರಿ
ಆ ಮುಕ್ತಾಂಗನೆಯೆಂಬ ಅನಂತಕೋಟಿ ಅಖಂಡಮಹಾಜ್ಞಾನ
ಸ್ವರೂಪ ಸ್ವಭಾವವಾಗಿಹ ಘನಕೆ ಘನವಾದ
ಮಹಾಘನ ಪರಮಪದವಿಯಂ ತೋರಿದ
ಮಹಾಶ್ರೀಗುರುವಿಂಗೆ ನಮೋ ನಮೋ ಎಂದು

ಪರಮಪದವಿಯೊಳಗೈಕ್ಯವಾಗಿ ಏನೆಂದೆನಲಮ್ಮದೆ
ಶಬ್ದಮುಗ್ಧನಾಗಿದ್ದೆನು.
ಇದಕ್ಕೆ ಶ್ರುತಿ :
"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ।"
ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೭೯೧ ॥

೭೯೨

ಈ ವಚನಾನುಭಾವದಲುಳ್ಳರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯುಂಟು ನೋಡಾ.
ಈ ವಚನಾನುಭಾವದಲ್ಲಿಲ್ಲದರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯೂ ಇಲ್ಲ ನೋಡಾ.
ಈ ವಚನಾನುಭಾವದ ಅರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಿಗೂ ನಿಲುಕದು ನೋಡಾ.
ಈ ವಚನಾನುಭಾವದ ಅರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಾತೀತವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೨ ॥

ಈ ವಚನಾನುಭಾವದ ಹೃದಯವನರಿದಡೆ
ಪರಮಪದವಿಯಂ ಪಡವರು.
ಈ ವಚನಾನುಭಾವವಂ ಬರೆದಡೆ ಕೇಳಿದಡೆ ಪಠಿಸಿದಡೆ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ
ಚತುರ್ವಿಧಪದವ ಪಡೆವರು.

**ಪರಿಶಿಷ್ಟ : ಒಂದು**

೭೯೩

ಇನ್ನು ಮುಂದೆ ಅನುಭಾವದ ವಚನ ಅದೆಂತೆಂದಡೆ :
ಜಾಗ್ರ ಸ್ವಪ್ನಸುಷುಪ್ತಿಯೆಂಬ ಮೂರವಸ್ಥೆಯು
ಅನಂತ ಭವದುಃಖಂಗಳ ತಹವು.
ಈ ಮೂರು ಅವಸ್ಥೆಯ ಕೆಡೆಮೆಟ್ಟಿ ಸಾಕ್ಷಿಯಾಗಿಹ
ತೂರ್ಯಬೋಧೆಯ ಕಂಡವರ ಘನವನೇನೆಂದುಪಮಿಸುವೆ ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೭೯೩ ॥

೭೯೪

ಅರಿದಾತ ದುಃಖಕ್ಕೊಳಗಾಗದೆ
ಅಂಧಃಕಾರವ ಮುಚ್ಚಿಕೊಂಡು ಕಾಣಲಾರದಿಪ್ಪ

ಮಹಾಮಾಯೆಯ ಕೆಡೆಮೆಟ್ಟಿ
ಮೇಲಾಗಿಹ ಈಶಾನ್ಯತೂರ್ಯಬೋಧೆಯ
ತಿಳಿದು ಕಂಡಡೆ ಮುಕ್ತಿಯಹದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೪ ॥

೭೯೫

ತನ್ನನರಿಯದೆ ತಾನೆ ಕೆಟ್ಟೆನೆಂದವು ಶ್ರುತಿಗಳು.
ತನ್ನನರಿದಡೆ ತನಗೆ ಕೇಡಿಲ್ಲವೆಂದುದು ನೋಡಾ ಶ್ರುತಿಗಳು.
ತನ್ನನರಿವ ಅರಿವನರಿಯದೆ
ತನ್ನ ನಚ್ಚಿಸುತ್ತ ತಾನಿದ್ದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೫ ॥

೭೯೬

ಮೂರವಸ್ಥೆಯ ನೆಲೆಯೆಂದು ಕಾಬವ
ಅರಿವಿಲ್ಲದ ಅಜ್ಞಾನಿ ನೋಡಾ.
ಹೇಳಿದವಸ್ಥಾತ್ರಯದೊಳಿದ್ದಡೆ
ಜನನ ಮರಣ ತಪ್ಪದು ನೋಡಾ.
ಸಾಕ್ಷಾವಸ್ಥೆಯ ತೂರ್ಯವ ತತ್ಪರವೆಂದಡೆ ಅಲ್ಲಲ್ಲ.
ಮೂರವಸ್ಥೆಯ ಅರ್ಥತೂರ್ಯವ ತತ್ಪರವೆಂದಡೆ
ಜನನ ಮರಣವಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೬ ॥

೭೯೭

ಕಾಯ ಜೀವದ ಹೊಲಿಗೆ ಬಿಚ್ಚಲರಿಯದಿದ್ದೆನು ಅನೇಕ ಕಾಲವು.
ಕಾಯ ಜೀವದ ಹೊಲಿಗೆಯ ಬಿಚ್ಚಿ ತೋರಿದನೆನ್ನ ಸದ್ಗುರುಸ್ವಾಮಿ.
ಜೀವಪರಮರ ಭೇದವನರಿಯದೆ ಅನೇಕ ಭವದಲ್ಲಿ ಬಂದೆನು.
ಅನೇಕ ಭವದಲ್ಲಿ ಬಂದ ಶಿಶುವನೆತ್ತಿಕೊಂಡು
ಜೀವ ಪರಮರ ಭೇದವ ತಿಳಿಹಿಸಿ
ಬೆರೆಸುವ ಪರಿಯ ತೋರಿದ ಮಹಾಗುರುವಿಂಗೆ
ನಮೋ ನಮೋ ಎನುತಿರ್ದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೭ ॥

೭೯೮

ತಾನೆಂಬ ಅರಿವ ಬಿಟ್ಟು ಮತ್ತೆಲ್ಲವನತಿಗಳದು
ಅದಂಥಾದಿಂಥಾದೆಂದು ಹೇಳಬಾರದ ತೂರ್ಯಾತೀತವ
ಪರವೆಂದು ಶ್ರುತಿಗಳು ಸಾರುತ್ತಿಹದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೭೯೮ ॥

೨೯೯

ಊನವಾಗಿಹ ದೇಹವ ಕೂಡಿಕೊಂಡು ಹೋಗಿ
ತಾನದಾಗಿ, ಜೀವನು ತಾನೆಯಾಗಿ,
ಸಾಯದೆ ಸತ್ತು ಮೋನವಾಗಿಹ
ತೂರ್ಯಾತೀತವ ಮುಳುಗಿಕೊಂಡಿಹ
ಜ್ಞಾನನಾಯಕನೆ ಈಶನೆಂದು ಶ್ರುತಿಗಳು ಸಾರುತ್ತಿವೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೨೯೯ ॥

೩೦೦

ಜೀವ ಕರಣ ದೇಹ ಇತ್ಯಾದಿಗಳು
ವಿಸ್ತೀರ್ಣವಾಗಿ ಅಡಗುವದಕ್ಕೆ ಇಂಬಾಗಿ
ವಿಷಯಭಾವವು ಕೆಟ್ಟ ಭಾವುಕರ ಕಾರ್ಯ ಉಪಾಧಿ ಅರಿದು,
ಸುಷುಪ್ತಿಯ ಹಾಂಗೆ ಪರಮವಿಕೃತಿಭಾವಂಗಳು ವಿಸ್ತೀರ್ಣವಾಗಿ ಅಡಗಿ,
ಏನೂ ಇಲ್ಲದ ಅವಾಚ್ಯಪರಮಭಾವವಾಗಿಹ
ತೂರ್ಯಾತೀತವ ಶ್ರುತಿಗಳು ಪರವೊಡಲೆಂದುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೦ ॥

೩೦೧

ಜಾಗ್ರ ಸ್ವಪ್ನ ಸುಷುಪ್ತಿ ತೂರ್ಯ ತೂರ್ಯಾತೀತ
ಈ ಐದು ಅವಸ್ಥೆಗಳಾಗಿ ಕೆಡುಹುದು ಪರವಲ್ಲ.
ಶಿವನಿಗೆ ಅವಸ್ಥೆಗಳೊಂದು ಕಾಲವು ಇಲ್ಲವೆಂದು
ಸಕಲಾಗಮಶಾಸ್ತ್ರಂಗಳಲ್ಲಿ ಪ್ರಸಿದ್ಧವಾಗಿ ಹೇಳುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೧ ॥

೩೦೨

ತೂರ್ಯವಡಗಿ ಹೇಳಬಾರದ ಹಾಳವರಿದುದ
ಪರಾಪರವೆಂಬರು ನೋಡಾ.
ವಿವರಿಸದಾದ ಪರಾಪರವೆಂಬುದಿದು
ಅಗೋಚರವೆಂಬುದನಾರು ಅರಿಯರು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೩೦೨ ॥

೩೦೩

ವಾಗಾದಿಗಳೈದು, ವಚನಾದಿಗಳೈದು, ಶ್ರೋತ್ರಾದಿಗಳೈದು,
ಶಬ್ದಾದಿಗಳೈದು, ಕರಣ ನಾಲ್ಕು,
ಕರಣಂಗಳ ಮೇಲೆ ಪುರುಷನೊಬ್ಬನು,

ಆ ಪುರುಷಗತ್ತತ್ತ ಪರಮ,
ಆ ಪರಕತ್ತತ್ತ ವ್ಯೋಮ.
ಆ ವ್ಯೋಮಕತ್ತತ್ತ ವ್ಯೋಮಾತೀತ.
ಆ ವ್ಯೋಮಾತೀತವ ಶಿವನೆಂದು
ಸಕಲ ವೇದಾಗಮಶಾಸ್ತ್ರಂಗಳು ಸಾರುತ್ತಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೦೩ ॥

೮೦೪

ಆ ವ್ಯೋಮಾತೀತವೆಂಬ ಮಹಾಘನದಲ್ಲಿ
ಲೀಯವಾದ ಶರಣನ ನಿಲವದೆಂತೆಂದಡೆ :
ರವಿಯೊಳಗಣ ಬಿಂಬದಂತಿದ್ದುದು,
ದರ್ಪಣದೊಳಗಣ ಪ್ರತಿಬಿಂಬದಂತಿದ್ದುದು,
ಪುಷ್ಪದೊಳಗಣ ಪರಿಮಳದಂತಿದ್ದುದು,
ಜ್ಯೋತಿಯೊಳಗಣ ಕರ್ಪುರದಂತಿದ್ದುದು ನೋಡಾ
ಮಹಾಘನದಲ್ಲಿ ಲೀಯವಾದ ಶರಣನ ನಿಲವು
ಅಪ್ರಮಾಣಕೂಡಲಸಂಗಮದೇವಾ. ॥ ೮೦೪ ॥

೮೦೫

ಶ್ಲೋಕದೊಳಗಣ ಅರ್ಥದಂತಿದ್ದುದು,
ಫಲದೊಳಗಣ ರುಚಿಯಂತಿದ್ದುದು,
ಕ್ಷೀರದೊಳಗಣ ಘೃತದಂತಿದ್ದುದು ನೋಡಾ
ಮಹಾಘನದಲ್ಲಿ ಲೀಯವಾದ ಶರಣನ ನಿಲವು,
ಅಪ್ರಮಾಣಕೂಡಲಸಂಗಮದೇವಾ. ॥ ೮೦೫ ॥

೮೦೬

ತಿಲದೊಳಗಣ ತೈಲದಂತಿದ್ದುದು,
ಶಿಲೆಯೊಳಗಣ ಪಾವಕನಂತಿದ್ದುದು,
ಬೀಜದೊಳಗಣ ವೃಕ್ಷದಂತಿದ್ದುದು,
ಅರಿವಿನೊಳಗಡಗಿದ ಅರುವಿನಂತಿದ್ದುದು ನೋಡಾ
ಮಹಾಘನದಲ್ಲಿ ಲೀಯವಾದ ಶರಣನ ನಿಲವು
ಅಪ್ರಮಾಣಕೂಡಲಸಂಗಮದೇವಾ. ॥ ೮೦೬ ॥

೮೦೭

ತನ್ನನುಭೂತಿಯಲ್ಲಿ ತಾ ಕಂಡ ಶರಣನ ನಿಲವು
ಕುರುಹಲ್ಲ–ಗುಣವಲ್ಲ, ರೂಪಲ್ಲ–ನಿರೂಪಲ್ಲ, ಹೊಸದಲ್ಲ–ಹಳದಲ್ಲ,
ಒಳಗಲ್ಲ–ಹೊರಗಲ್ಲ, ಹಿಂದಲ್ಲ–ಮುಂದಲ್ಲ, ಕೆಳಗಲ್ಲ–ಮೇಲಲ್ಲ

ಎಂದುದು ನೋಡಾ ಶ್ರುತಿಗಳು.
ತನ್ನನುಭೂತಿಯಲ್ಲಿ ತಾ ಕಂಡ ಶರಣನ ನಿಲವು
ದಶಚಕ್ರಂಗಳಲ್ಲ, ಅವಸ್ಥೆಗಳೈದಲ್ಲ, ಆರಕ್ಷರವಲ್ಲ, ಆರು ವರ್ಣವಲ್ಲ,
ಐದು ಮಂಡಲವಲ್ಲವೆಂದುದು ನೋಡಾ ಶ್ರುತಿಗಳು.
ತನ್ನನುಭೂತಿಯಲ್ಲಿ ತಾ ಕಂಡ ಶರಣನ ನಿಲವು
ಚತುರ್ದಶ ನಾಡಿಗಳಲ್ಲ, ಚತುರ್ದಶ ವಾಯುಗಳಲ್ಲ,
ಪಂಚವಿಂಶತಿ ತತ್ತ್ವವಲ್ಲ, ಅಷ್ಟವಿಂಶತಿ ತತ್ತ್ವವಲ್ಲ,
ಛತ್ತೀಸ ತತ್ತ್ವವಲ್ಲವೆಂದುದು ನೋಡಾ ಶ್ರುತಿಗಳು.
ತನ್ನನುಭೂತಿಯಲ್ಲಿ ತಾ ಕಂಡ ಶರಣನ ನಿಲವು
ಐವತ್ತೆರಡಕ್ಷರವಲ್ಲ, ಐದು ಭೂತವಲ್ಲ, ಆರು ಸಾದಾಖ್ಯವಲ್ಲ,
ಆರು ಕಲೆಗಳಲ್ಲ, ಆರು ಶಕ್ತಿಗಳಲ್ಲ,
ತೂರ್ಯ ತೂರ್ಯಾತೀತವಲ್ಲ, ಪುರುಷನಲ್ಲ,
ಪರವಲ್ಲವೆಂದುದು ನೋಡಾ ಶ್ರುತಿಗಳು.
ತನ್ನನುಭೂತಿಯಲ್ಲಿ ತಾ ಕಂಡ ಶರಣನ ನಿಲವು
ವ್ಯೋಮ ವ್ಯೋಮಾತೀತವಲ್ಲ, ವಾಚಾಮಗೋಚರವಲ್ಲ,
ನಿತ್ಯನಿರಂಜನ ನಿರಾಳ, ನಿರಾಮಯವಲ್ಲ ನಿರಾಮಯಾತೀತಕತತ್ತ್ವ
ಅತ್ಯತಿಷ್ಠದ್ದಶಾಂಗುಲವೆಂದುದು ನೋಡಾ ಶ್ರುತಿಗಳು
ಅಪ್ರಮಾಣಕೂಡಲಸಂಗಮದೇವಾ. ॥ ೮೦೭ ॥

೮೦೮

ಕರ್ಮಭಾವವು ಕೆಟ್ಟಡೊಂದು ನಿರ್ವಾಣವೆಂದು
ಶ್ರುತಿಗಳು ಸಾರುತ್ತಿವೆ ನೋಡಾ.
ಕಾರಣಭಾವ ಕೆಟ್ಟಡೊಂದು ನಿರ್ವಾಣವೆಂದು
ಶ್ರುತಿಗಳು ಸಾರುತ್ತಿವೆ ನೋಡಾ.
ನಿಂದ ವಾಸನೆಯು ಕೆಟ್ಟಡೊಂದು ನಿರ್ವಾಣವೆಂದು
ಶ್ರುತಿಗಳು ಸಾರುತ್ತಿವೆ ನೋಡಾ.
ಈ ಮೂರು ನಿರ್ವಾಮವನೊಳಕೊಂಡು ಇಹುದೊಂದು
ಮಹಾನಿರ್ವಾಣವೆಂದು
ಶ್ರುತಿಗಳು ಸಾರುತ್ತಿವೆ ನೋಡಾ.
ಆ ಮಹಾ ನಿರ್ವಾಣವನೊಳಕೊಂಡು ಅಖಂಡಿತ ಅಪ್ರಮಾಣ
ಅಗೋಚರವಾಗಿಹುದೊಂದು ನಿರ್ವಾಣ ನೋಡಾ.
ಆ ನಿರ್ವಾಣವ ಶ್ರುತಿಗಳು ಅತ್ಯತಿಷ್ಠದ್ದಶಾಂಗುಲವೆಂದವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೦೮ ॥

೮೦೯

ಅಕಾರವೆಂಬೆನೆ ಉಕಾರವಾಗಿಹುದು,
ಉಕಾರವೆಂಬೆನೆ ಮಕಾರವಾಗಿಹುದು ನೋಡಾ.
ಮಕಾರವೆಂಬೆನೆ ಓಂಕಾರವಾಗಿಹುದು,
ಓಂಕಾರವೆಂಬೆನೆ ಅಚಲವಪ್ಪ ನಿರಾಳವಾಗಿಹುದು ನೋಡಾ.
ನಿರಾಳವೆಂಬೆನೆ ನಿರಂಜನವಾಗಿಹುದು,
ನಿರಂಜನವೆಂಬೆನೆ ನಿರಾಮಯವಾಗಿಹುದು ನೋಡಾ.
ನಿರಾಮಯವೆಂಬೆನೆ ನಿರಾಮಯಾತೀತವಾಗಿಹುದು,
ನಿರಾಮಯಾತೀತವೆಂಬೆನೆ ನಿರಾಮಯಾತೀತಕತ್ತತ್ತವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೦೯ ॥

೮೧೦

ಬಿಂದುವಾಗಿದ್ದು ಅಲ್ಲದೆ
ನಾದವಾಗಿಹ ಘನವನಾರೂ ಅರಿಯರು.
ನಾದವಾಗಿದ್ದು ಅಲ್ಲದೆ
ಕಲೆಯಾಗಿಹ ಘನವನಾರೂ ಅರಿಯರು.
ನಾದಬಿಂದುಕಲೆಯಾಗಿ ಅಲ್ಲದೆ
ನಾದಬಿಂದುಕಲಾತೀತವಾಗಿಹ ಘನವನಾರೂ ಅರಿಯರು
ನಾದಬಿಂದುಕಲಾತೀತವಾಗಿಹ ಘನವ ಮೀರಿ
ಅತ್ತತ್ತವಾಗಿಹ ಮಹಾಘನವನಾರೂ ಅರಿಯರು
ಅಪ್ರಮಾಣಕೂಡಲಸಂಗಮದೇವಾ. ॥ ೮೧೦ ॥

೮೧೧

ವೇದಾಗಮ ಪುರಾಣಂಗಳನೋದಿ
ಕಂಡೆನೆಂಬ ಭ್ರಾಂತರ ನೋಡಾ.
ವೇದಂಗಳನೋದಿ ಕಾಣದೆ ವೇದಾತೀತನೆಂದುದು ನೋಡಾ.
ಆಗಮಂಗಳನೋದಿ ಕಾಣದೆ ಆಗಮಾತೀತನೆಂದುದು ನೋಡಾ.
ಶಾಸ್ತ್ರಂಗಳನೋದಿ ಕಾಣದೆ ಶಾಸ್ತ್ರಾತೀತನೆಂದುದು ನೋಡಾ.
ಪುರಾಣಂಗಳನೋದಿ ಕಾಣದೆ ಪುರಾಣಾತೀತನೆಂದುದು ನೋಡಾ.
ಉಪನಿಷತ್ತುಗಳನೋದಿ ಕಾಣದೆ ಉಪಮಾತೀತನೆಂದುದು ನೋಡಾ.
ಆ ಉಪಮಾತೀತವೆಂಬ ಮಹಾಘನವ
ನಮ್ಮ ಅಪ್ರಮಾಣಕೂಡಲಸಂಗನ ಶರಣರು ಬಲ್ಲರು. ॥ ೮೧೧ ॥

೮೧೨

ಗುರುಕರುಣವಿಲ್ಲದೆ
ವೇದಾಗಮಶಾಸ್ತ್ರಪುರಾಣಂಗಳನೋದಿ ಕಾಣದೆ ಹೋದರು

ಅದು ಕಾರಣವೆ,
ವೇದವಿಪ್ರರ ಬೋಧೆ, ಶಾಸ್ತ್ರ ಸಂತೆಯ ಸುದ್ದಿ,
ಪುರಾಣ ಪುಂಡರಗೋಷ್ಠಿ ಎಂಬ ಶರಣರ ವಾಕ್ಯ ದಿಟ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೧೨ ॥

೮೧೩

ಅನೇಕ ವೇದಾಗಮಶಾಸ್ತ್ರಪುರಾಣವನೋದಿ ಕೇಳಿದಡೇನು ?
ಮನದ ಕತ್ತಲೆ ಹರಿಯದು ನೋಡಾ.
ಓಂಕಾರವೆಂಬ ಕಂಬದ ಮೇಲೆ ಮನ ಬುದ್ಧಿ ಚಿತ್ತ ಅಹಂಕಾರವೆಂಬ
ಪಣಿತೆಯನಿಡಿಸಿ, ಅಷ್ಟಮದವೆಂಬ ಬತ್ತಿಯ ತೀವಿ,
ಜ್ಞಾನೇಂದ್ರಿಯ ಕರ್ಮೇಂದ್ರಿಯವೆಂಬ ತೈಲವನೆರೆದು,
ಜ್ಞಾನಾಗ್ನಿಯ ಮುಟ್ಟಿಸಿ, ಸ್ವಯಂಪ್ರಕಾಶವ ಬೆಳಗುವದು ನೋಡಾ.
ಅನಂತಕೋಟಿ ಸೂರ್ಯ–ಚಂದ್ರಾಗ್ನಿಮಯವಾಗಿ
ಮಹಾಜ್ಯೋತಿ ಬೆಳಗುತ್ತಿಹುದು.
ಆ ಮಹಾಜ್ಯೋತಿಪ್ರಕಾಶದಲ್ಲಿ ಆಣವ ಮಾಯಾ ಕಾರ್ಮಿಕವೆಂಬ
ಹುಳುಗಳು ಬಿದ್ದು ಸತ್ತವು.
ಹೃದಯದ ಕತ್ತಲೆ ಹರಿಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೧೩ ॥

೮೧೪

ದೇಹವಳಿದು ಜೀವವಳಿದು ಮನವಳಿದು ಅರಿವಳಿದು,
ತಾನೆಂಬ ಪರವಳಿದು, ಪೃಥ್ವಿ ಅಪ್ಪು ತೇಜ ವಾಯು ಆಕಾಶವಳಿದು,
ತೂರ್ಯ ತೂರ್ಯಾತೀತವಳಿದು,
ವ್ಯೋಮವಳಿದು ವ್ಯೋಮಾತೀತಕತತ್ತ್ವವಾಗಿಹ
ಅಪ್ರಮಾಣಕೂಡಲಸಂಗಯ್ಯನಲ್ಲಿ ಲೀಯವಾದ
ಮಹಾಶರಣನ ನಿಲವಿಂಗೆ ನಮೋ ನಮೋ ಎನುತಿರ್ದೆನು. ॥ ೮೧೪ ॥

೮೧೫

ನಿರಾಮಯಾತೀತದಲ್ಲಿ ಪುಟ್ಟಿದ ಶರಣನು
ನಿರಾಮಯಾತೀತದಲ್ಲಿ ಬೆರೆಸಿದಡೆ,
ನಿರಾಮಯಾತೀತವಾಗಿಹುದು ನೋಡಾ ಜನನವು
ಅಪ್ರಮಾಣಕೂಡಲಸಂಗಮದೇವಾ. ॥ ೮೧೫ ॥

೮೧೬

ಹೆಣ್ಣೆಂಬೆನೆ ಹೆಣ್ಣಲ್ಲ, ಗಂಡೆಂಬೆನೆ ಗಂಡಲ್ಲ,
ನಪುಂಸಕನೆಂಬೆನೆ ನಪುಂಸಕನಲ್ಲ ನೋಡಾ.

ಏನೂ ಅಲ್ಲದ ನಿರಾಮಯಾತೀತದಲ್ಲಿ
ಲೀಯವಾದ ಶರಣಂಗೆ ನಿರಾಮಯಾತೀತವಾಗಿಹುದು ನೋಡಾ ಜನನವು
ಅಪ್ರಮಾಣಕೂಡಲಸಂಗಮದೇವಾ. || ೮೧೬ ||

೮೧೭

ನಿರಾಮಯಾತೀತದಲ್ಲಿ ಹುಟ್ಟಿದ ನೋಡಾ ಶರಣನು.
ನಿರಾಮಯಾತೀತದಲ್ಲಿ ಬೆಳೆದನು ನೋಡಾ ಶರಣನು.
ನಿರಾಮಯಾತೀತದಲ್ಲಿ ಲೀಯವಾದ ನೋಡಾ ಶರಣನು.
ನಿರಾಮಯಾತೀತದಲ್ಲಿ ಲೀಯವಾದ ಶರಣನ ಜನನವು
ನಿರಾಮಯಾತೀತವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೧೭ ||

೮೧೮

ರೂಪಿಲ್ಲದವನರಿದನೆಂದು ನಿರೂಪಲ್ಲದ ಮಾಮರದ ತುದಿಗೆ
ಮೆಲಲಿಲ್ಲದ ಹಣ್ಣುಮೆದ್ದು ಪರಿಣಾಮಿಸಿ
ಬಯಲಿಲ್ಲದ ನಿರ್ವಯಲಲ್ಲಿ ಬಯಲಾದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೧೮ ||

೮೧೯

ಆತ್ಮತತ್ವ ಇಪ್ಪತ್ತೈದು , ವಿದ್ಯಾತತ್ವ ಹತ್ತು, ಶಿವತತ್ತ್ವವೊಂದು.
ಅದೆಂತೆಂದಡೆ :
ಭೂತಾದಿ ಪಂಚಕಂಗಳೈದು, ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು,
ಶಬ್ದಾದಿ ವಿಷಯಂಗಳೈದು, ವಾಗಾದಿ ಕರ್ಮೇಂದ್ರಿಯಂಗಳೈದು,
ಮನಸಾದಿ ಪಂಚಕಂಗಳೈದು, ಆತ್ಮತತ್ವ ಇಪ್ಪತ್ತೈದು,
ಕರ್ಮಸಾದಾಖ್ಯ, ಮೂರ್ತಿಸಾದಾಖ್ಯ,
ಅಮೂರ್ತಿಸಾದಾಖ್ಯ, ಶಿವಸಾದಾಖ್ಯ,
ನಿವೃತ್ತಿಕಲೆ, ಪ್ರತಿಷ್ಠಾಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯತೀತಕಲೆ,
ಇಂತು ವಿದ್ಯಾತತ್ವ ಹತ್ತು, ಶಿವತತ್ವವೊಂದು.
ಇಂತು ಮೂವತ್ತಾರು ತತ್ವಂಗಳೊಳಗೆ
ಶಿವತತ್ತ್ವವೆ ತತ್ಪದ, ಆತ್ಮತತ್ವವೆ ತ್ವಂಪದ, ವಿದ್ಯಾತತ್ತ್ವವೆ ಅಸಿಪದ.
ಅಕಾರದಲ್ಲಿ ತತ್ಪದ ಐಕ್ಯವಾಯಿತ್ತು,
ಉಕಾರದಲ್ಲಿ ತ್ವಂಪದ ಐಕ್ಯವಾಯಿತ್ತು,
ಮಕಾರದಲ್ಲಿ ಅಸಿಪದ ಐಕ್ಯವಾಯಿತ್ತು,
ಮಕಾರ ಅಕಾರ ಉಕಾರ ಏಕಾರ್ಥವಾಗಿ
ಷಟ್ಸ್ಥಲಬ್ರಹ್ಮವೆಂಬ ಮಹಾಜ್ಯೋತಿರ್ಮಯಲಿಂಗವಾಯಿತ್ತು.

ಆ ಷಟ್ಸ್ಥಲಬ್ರಹ್ಮವೆಂಬ ಮಹಾಜ್ಯೋತಿರ್ಮಯಲಿಂಗದಲ್ಲಿ
ತತ್ಪದ ತ್ವಂಪದ ಅಸಿಪದ ನಿಕ್ಷೇಪವಾಗಿಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೧೯ ॥

೮೨೦

ಷಟ್ಸ್ಥಲಬ್ರಹ್ಮ ಷಟ್ಸ್ಥಲಬ್ರಹ್ಮವೆಂಬರು.
ಷಟ್ಸ್ಥಲಬ್ರಹ್ಮದ ಭೇದವನಾರು ಬಲ್ಲರು ?
ಷಟ್ಸ್ಥಲಬ್ರಹ್ಮದ ಭೇದವನಾರೂ ಅರಿಯರು.
ಷಟ್ಸ್ಥಲಬ್ರಹ್ಮದ ಭೇದವನರಿದಡೆ ಅರಿಯದಂತಿರಬೇಕು.
ಷಟ್ಸ್ಥಲಬ್ರಹ್ಮದ ಭೇದವನರಿದೆವೆಂಬರು ; ಅರಿದ ಪರಿಯೆಂತೊ ?
ಷಟ್ಸ್ಥಲಬ್ರಹ್ಮ 'ನಿಃಶ್ಯಬ್ದಬ್ರಹ್ಮಮುಚ್ಯತೇ' ಎಂದು
ಶ್ರುತಿಗಳು ಸಾರುತ್ತಿಹುದು.
ಷಟ್ಸ್ಥಲಬ್ರಹ್ಮದ ಭೇದವು ನಿಶ್ಶಬ್ದಬ್ರಹ್ಮಗಲ್ಲದೆ ಅರಿಯಬಾರದು.
ಅರಿದಡೆ ಅರಿಯದಂತಿರಬೇಕು ; ಅರಿದಡೆ ಅರಿವುದು.
ಜಂಗಮನೆ ಲಿಂಗವೆಂದರಿವುದು ;
ಜಂಗಮಪಾದೋದಕ ಪ್ರಸಾದವನು ಲಿಂಗಕ್ಕೆ ಕೊಟ್ಟು ಕೊಳ್ಳಬಹುದು.
ಆ ಲಿಂಗಪ್ರಸಾದ ತಾ ಕೊಳ್ಳಬಹುದು.
ಆ ಲಿಂಗದೊಡನೆ ಸಹಭೋಜನ ಮಾಡಬಹುದು.
ಇಂತೀ ಭೇದವನರಿಯದೆ ಉದ್ದಂಡವೃತ್ತಿಯಲ್ಲಿ ಕೊಂಡನಾದಡೆ
ನಾಯಕನರಕ ತಪ್ಪದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೦ ॥

೮೨೧

ಭ್ರಮರನು ಚತುರ್ದಳಪದ್ಮದ ಮೇಲೆ ಆಡಿತ್ತು ನೋಡಾ.
ಭ್ರಮರನು ಚತುರ್ದಳಪದ್ಮದಮೇಲೆ ಆಡಿ ನೋಡಿ
ಷಡ್ದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ಷಡ್ದಳಪದ್ಮದಮೇಲೆ ಆಡಿ ನೋಡಿ
ದಶದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ದಶದಳಪದ್ಮದಮೇಲೆ ಆಡಿ ನೋಡಿ
ದ್ವಾದಶದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ದ್ವಾದಶದಳಪದ್ಮದಮೇಲೆ ಆಡಿ ನೋಡಿ
ಷೋಡಶದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ಷೋಡಶದಳಪದ್ಮದ ಮೇಲೆ ಆಡಿ ನೋಡಿ
ದ್ವಿದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ದ್ವಿದಳಪದ್ಮದ ಮೇಲೆ ಆಡಿ ನೋಡಿ

ಸಹಸ್ರದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ಸಹಸ್ರದಳಪದ್ಮದ ಮೇಲೆ ಆಡಿ ನೋಡಿ
ತ್ರಿದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ತ್ರಿದಳಪದ್ಮದ ಮೇಲೆ ಆಡಿ ನೋಡಿ
ಏಕದಳಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ಏಕದಳಪದ್ಮದ ಮೇಲೆ ಆಡಿ ನೋಡಿ
ಕಾಳಾಂಧರಪದ್ಮಕ್ಕೆ ಬಂದಿತ್ತು ನೋಡಾ.
ಭ್ರಮರನು ಆ ಕಾಳಾಂಧರಪದ್ಮದ ಮೇಲೆ ಆಡಿ ನೋಡಿ
ಸದ್ವಾಸನೆಯ ಕೊಂಡು ಅಲ್ಲಿಯೇ ಲೀಯವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೧ ॥

೮೨೨

ಕುರುಹು ಕೆಟ್ಟು ಬೀಜದಲ್ಲಿ ಮೂರು ನಿರಾಳವೃಕ್ಷ ಹುಟ್ಟಿತ್ತು.
ಒಂದು ವೃಕ್ಷ ಹನ್ನೆರಡು ಕೊಂಬಾದವು.
ಒಂದು ವೃಕ್ಷ ಹದಿನಾರು ಕೊಂಬಾದವು.
ಒಂದು ವೃಕ್ಷ ಎಂಟು ಕೊಂಬಾದವು.
ಸದ್ವಾಸನೆಯೆಂಬ ಹೂವಾಯಿತ್ತು.
ಸಚ್ಚಿದಾನಂದವೆಂಬ ಕಾಯಾಯಿತ್ತು.
ನಿಶ್ಶಬ್ದವೆಂಬ ಹಣ್ಣಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೨ ॥

೮೨೩

ಕುಂಡಲೀಶಕ್ತಿಯ ಬಾಯಲ್ಲಿ ಮೂರು ಮಾತ್ರೆ ಹುಟ್ಟಿತ್ತು ನೋಡಾ.
ಒಂದು ಮಾತ್ರೆ ಆರು ಮಾತ್ರೆಯಾಯಿತ್ತು.
ಒಂದು ಮಾತ್ರೆ ನಾಲ್ಕು ಮಾತ್ರೆಯಾಯಿತ್ತು.
ಒಂದು ಮಾತ್ರೆ ಆರು ಮಾತ್ರೆಯಾಯಿತ್ತು.
ಈ ಹನ್ನೆರಡು ನಾಲ್ಕು ಹದಿನಾರು ಮಾತ್ರೆಗಳಾದವು.
ಈ ಹದಿನಾರು ಹದಿನಾರು ಮೂವತ್ತೆರಡು ಮಾತ್ರೆಗಳಾದವು.
ಈ ಮೂವತ್ತೆರಡು ಮೂವತ್ತೆರಡು ಅರುವತ್ತುನಾಲ್ಕು ಮಾತ್ರೆಗಳಾದವು.
ಈ ಭೇದವ ಬಲ್ಲಾತನೆ ಶಿವಯೋಗಿ ಲಿಂಗಾನುಭಾವಿ ಎಂಬೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೩ ॥

೮೨೪

ನಿರಾಮಯದೊಳು ನಿರಾಳಮಯವಾಗಿ ಹುಟ್ಟಿತ್ತು ನೋಡಾ
ಒಂದು ಹೃತ್ಕಮಲಕರ್ಣಿಕೆ.
ಆ ಹೃತ್ಕಮಲಕರ್ಣಿಕೆ ಹನ್ನೆರಡೆಸಳಾಗಿಹುದು.

ಎಂಟೆಸಳೆ ಅಧೋಮುಖವಾಗಿಹುದು,
ನಾಲ್ಕೆಸಳೆ ಊರ್ಧ್ವಮುಖವಾಗಿಹುದು.
ಅಧೋಮುಖವಾಗಿಹ ಎಂಟೆಸಳ ಕರ್ಣಿಕೆಯೆ ಅಷ್ಟದಳಕಮಲ,
ಊರ್ಧ್ವಮುಖವಾಗಿಹ ನಾಲ್ಕೆಸಳ ಕರ್ಣಿಕೆಯೆ ಚೌಕಮಧ್ಯ,
ಆ ಎಂಟೆಸಳ ಕರ್ಣಿಕೆಯ ಸದ್ವಾಸನೆಯೆ ಜೀವಾತ್ಮನು,
ಆ ನಾಲ್ಕೆಸಳ ಕರ್ಣಿಕೆಯ ಸದ್ವಾಸನೆಯೆ ಪರಮಾತ್ಮನು,
ಈ ಜೀವ ಪರಮರಿಬ್ಬರನು ಬೆರಸಿ ಒಂದಾಗದೆ ಬಿಚ್ಚಿ ಬೇರಾಗದೆ
ನಿಲ್ಲಬಲ್ಲಾತನು ಪರಮಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೨೪ ||

೮೨೫

ನಿರಾಮಯದೊಳು ಹುಟ್ಟಿತ್ತು ನೋಡಾ ಒಂದು ಪದ್ಮ
ಸೂರ್ಯಚಂದ್ರಾಗ್ನಿಪ್ರಕಾಶವಾಗಿ ಆ ಪದ್ಮ ಹನ್ನೆರಡೆಸಳಾಗಿಹುದು.
ಎಂಟೆಸಳೆ ಅಧೋಮುಖವಾಗಿಹುದು, ಅದು ಅಷ್ಟದಳಕಮಲ.
ನಾಲ್ಕೆಸಳೆ ಊರ್ಧ್ವಮುಖವಾಗಿಹುದು, ಅದು ಚೌಕಮಧ್ಯ.
ಎಂಟೆಸಳ ಸಂಯೋಗವೆ ನಿರಾಳಪ್ರಣವಪೀಠ.
ಆ ಪುಷ್ಪಸದ್ವಾಸನೆ ತಾನೆ ನಮ್ಮ
ಅಪ್ರಮಾಣಕೂಡಲಸಂಗಮದೇವ. || ೮೨೫ ||

೮೨೬

ನಿರಾಳ ಅಷ್ಟದಳಕಮಲದೊಳು
ನಿರಂಜನ ಚೌಕಮಧ್ಯ ನಾಲ್ಕೆಸಳ ನೋಡಾ.
ಅದರ ಬೀಜಾಕ್ಷರಭೆದವನಾರು ಬಲ್ಲರು ?
ನಿರಂಜನಪ್ರಣವ ಅವಾಚ್ಯಪ್ರಣವ ಕಲಾಪ್ರಣವ ಅನಾದಿಪ್ರಣವ
ಅಕಾರಪ್ರಣವ ಉಕಾರಪ್ರಣವ ಮಕಾರಪ್ರಣವ ಆದಿಪ್ರಣವ
ಅಖಂಡ ಗೋಳಕಾಕಾರಪ್ರಣವ ಜ್ಯೋತಿಪ್ರಣವ ಮಹಾಜ್ಯೋತಿಪ್ರಣವ
ಅಖಂಡ ಮಹಾಜ್ಯೋತಿಪ್ರಣವ ನಿರಾಳ ಅಷ್ಟದಳಕಮಲ
ನಿರಂಜನ ಚೌಕಮಧ್ಯದ ಬೀಜಾಕ್ಷರದ ಭೇದವ ನಿಜಲಿಂಗೈಕ್ಯರು ಬಲ್ಲರಲ್ಲದೆ
ಮಿಕ್ಕಿನ ವೇಷಧಾರಿಗಳೆತ್ತ ಬಲ್ಲರಯ್ಯಾ
ಅಪ್ರಮಾಣಕೂಡಲಸಂಗಮದೇವಾ. || ೮೨೬ ||

೮೨೭

ಊರ್ಧ್ವಮುಖ ಅಧೋಮುಖ ಸಮಾದಿಷ್ಟಿಯೆಂದು
ಅಂತರಂಗದಲ್ಲಿ ತ್ರಿವಿಧಮುಖಂಗಳುಂಟು.
ಅದೆಂತೆಂದಡೆ :

ಊರ್ಧ್ವಮುಖ ಹದಿನಾರು ಮುಖವಾಗಿಹುದು.
ಅಧೋಮುಖ ಮೂವತ್ತೆರಡು ಮುಖವಾಗಿಹುದು.
ಸಮಾದಿಷ್ಟಿ ಅರುವತ್ತುನಾಲ್ಕು ಮುಖವಾಗಿಹುದು.
ಈ ತ್ರಿವಿಧ ಮುಖವನರಿದು ಅರ್ಚಿಸಿ,
ಸಚ್ಚಿದಾನಂದವೆಂಬ ದ್ರವ್ಯವ ತ್ರಿವಿಧಮುಖದಲ್ಲಿ ಅರ್ಪಿಸಬಲ್ಲಾತ
ತ್ರಿವಿಧಪ್ರಸಾದಿ, ತ್ರಿವಿಧಪರಿಣಾಮಿ, ತ್ರಿವಿಧಐಕ್ಯ ತಾನಾದ ಶರಣ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೭ ॥

೮೨೮

ನಿರಾಮಯವೆಂಬ ಬಾವಿಗೆ
ನಿರಂಜನವೆಂಬ ಹುಲ್ಲೆ ತೃಷ್ಣೆಯಾಗಿ ಬಂದು,
ನಿರಾಳವೆಂಬ ಅಮೃತವನುಂಡು
ತೃಷ್ಣೆಯಡಗಿ ಸಾಲದೆ ಕುಣಿಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೨೮ ॥

೮೨೯

ರೂಪಿಲ್ಲದೆ ಇಹುದು ನೋಡಾ ಜೀವಾತ್ಮನು.
ನೆಲೆಯಿಲ್ಲದೆ ಇಹುದು ನೋಡಾ ಅಂತರಾತ್ಮನು.
ಜೀವಾಂತರಾದಿಗಳ ಶಿರೋಮಧ್ಯದಲ್ಲಿ ಯಂತ್ರವಾಹಕನಾಗಿ
ಆಡಿಸುತ್ತಿಹನು ನೋಡಾ ಪರಮಾತ್ಮನು
ಅಪ್ರಮಾಣಕೂಡಲಸಂಗಮದೇವಾ. ॥ ೮೨೯ ॥

೮೩೦

ದೇಹ ಪ್ರಾಣ ಇಂದ್ರಿಯ ಕರಣಂಗಳ ಕೂಡಿ
ವರ್ತಿಸುತ್ತಿಹುದು ನೋಡಾ ಜೀವಾತ್ಮನು.
ದೇಹ ಪ್ರಾಣ ಇಂದ್ರಿಯಂಗಳನತಿಗಳೆದು ಕರಣಂಗಳ ಕೂಡಿ
ವರ್ತಿಸುತ್ತಿಹುದು ನೋಡಾ ಅಂತರಾತ್ಮನು.
ದೇಹ ಪ್ರಾಣ ಇಂದ್ರಿಯ ಕರಣಂಗಳನತಿಗಳೆದು
ಒಬ್ಬನೆ ನಿಶ್ಚಿಂತನಾಗಿಹನು ನೋಡಾ ಪರಮಾತ್ಮನು
ಅಪ್ರಮಾಣಕೂಡಲಸಂಗಮದೇವಾ. ॥ ೮೩೦ ॥

೮೩೧

ಕಣ್ಣಿಲ್ಲದಂಧಕ ಕಾಲಿಲ್ಲದ ಪಶುವ ಮೇಸುವ ನೋಡಾ.
ಕಣ್ಣಿಲ್ಲದಂಧಕ ತಗುಳುವ, ಕಾಲಿಲ್ಲದ ಪಶುವೋಡದು,
ಗಗನದಲ್ಲಿ ತಲೆಯಿಲ್ಲದ ವ್ಯಾಘ್ರ ಹಿಡಿದು ನುಂಗಿತ್ತ ಕಂಡು
ಬೆರಗಾದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೩೧ ॥

೮೩೨

ಕೋಣನ ಬಸುರಲ್ಲಿ ಒಂದು ಕಪಿ ಹುಟ್ಟಿ ಕುಣಿವುದ ಕಂಡೆನು.
ಕುಂಡಲಿಯ ಮಧ್ಯದಲ್ಲಿ ಒಂದು ಮುಂಡ ಹುಟ್ಟಿ,
ಕುಣಿದ ಕಪಿಯ ಕಂಡು ಬೆರಗಾದೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೩೨ ||

೮೩೩

ಆಣವ ಮಾಯಾ ಕಾರ್ಮಿಕವೆಂಬ ಮೂರು ಕಲ್ಲನಿರಿಸಿ,
ಜ್ಞಾನೇಂದ್ರಿಯ ಕರ್ಮೇಂದ್ರಿಯವೆಂಬ ಹೊಟ್ಟ ನೀಡಿ,
ಅಷ್ಟಮದವೆಂಬ ಕಟ್ಟಿಗೆಯ ತಂದು ಜ್ಞಾನಾಗ್ನಿಯೆಂಬ ಕಿಚ್ಚನೊಟ್ಟಿ
ತನುವೆಂಬ ಭಾಜನವ ತೊಳೆದು
ಸ್ವಯಂಪ್ರಕಾಶವೆಂಬ ಉದಕವ ತುಂಬಿ,
ಮನವೆಂಬ ಸಯಿದಾನವ ನೀಡಿ,
ಜ್ಞಾನಾಗ್ನಿಯಲ್ಲಿ ಪಾಕವಾದ ಪ್ರಸಾದವನು ಮಹಾಲಿಂಗಕ್ಕೆ ಅರ್ಪಿಸುವ
ಮಹಾಮಹಿಮರ ತೋರಾ
ಅಪ್ರಮಾಣಕೂಡಲಸಂಗಮದೇವಾ. || ೮೩೩ ||

೮೩೪

ನಾದವೆಂಬ ಕೆರೆಯೊಳಗೆ ಬಿಂದುವೆಂಬ ಅಮೃತವ ತುಂಬಿ,
ಪಂಚೇಂದ್ರಿಯವೆಂಬ ಗದ್ದಿಗೆ ಕರಣಂಗಳೆಂಬ ಕಾಲುವೆಯ ತಿದ್ದಿ,
ಜಾತಿ ವಿಜಾತಿಯೆಂಬ ಕೆಸರನುತ್ತು,
ಪುಣ್ಯಪಾಪವೆಂಬ ಕಳೆಯ ಕಿತ್ತು,
ಓಂ ನಮಃಶಿವಾಯವೆಂಬ ಬೀಜವ ಬಿತ್ತಿ,
ಸ್ವಯಂಪ್ರಕಾಶವೆಂಬ ಅಗ್ಘವಣಿಯ ಕಟ್ಟಿ,
ಪರಮಾನಂದವೆಂಬ ಬೆಳೆಯಾದವು.
ಆಣವ ಮಾಯಾ ಕಾರ್ಮಿಕವೆಂಬ ಹಂದಿಯ
ಹೊದ್ದಲೀಸದೆ ಹೆಡನೊತ್ತಿದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೩೪ ||

೮೩೫

ಕಾಲಿಲ್ಲದ ಗುರುವಿಂಗೆ ತಲೆಯಿಲ್ಲದ ಶಿಷ್ಯನು.
ತಲೆಯಿಲ್ಲದ ಶಿಷ್ಯಂಗೆ ಕಾಲಿಲ್ಲದ ಗುರು.
ಕಾಲಿಲ್ಲದ ಗುರುವನು ತಲೆಯಿಲ್ಲದ ಶಿಷ್ಯನರಿಯನು.
ತಲೆಯಿಲ್ಲದ ಶಿಷ್ಯನನು ಕಾಲಿಲ್ಲದ ಗುರುವರಿಯನು.
ಕಾಲಿಲ್ಲದ ಗುರುವ ತಲೆಯಿಲ್ಲದ ಶಿಷ್ಯನರಿದಡೆ
ಕಾಲಿಲ್ಲದ ಗುರು ಆ ತಲೆಯಿಲ್ಲದ ಶಿಷ್ಯನ

ನುಂಗಿತ್ತ ಕಂಡು ಬೆರಗಾದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೩೫ ||

೮೩೬

ಆವುದೊಂದು ರೂಪನು ಕಂಗಳು ಕಾಣವು.
ಆವುದೊಂದು ಶಬ್ದವ ಕಿವಿಗಳು ಕೇಳವು.
ಆವುದೊಂದು ಪರಿಣಾಮವ ಮನವರಿಯದು.
ಆವುದೊಂದು ರುಚಿಯ ಜಿಹ್ವೆಯರಿಯದು.
ಆವುದೊಂದು ಪರಿಮಳವ ನಾಶಿಕವರಿಯದು.
ಆವುದೊಂದು ಸ್ಪರ್ಶನವ ತ್ವಕ್ಕರಿಯದು.
ಎಲ್ಲರಲ್ಲಿಯ ಅರಿವ ಮಹಾಘನ ನಿರಾಳ ನಿರಂಜನ ನಿರಾಮಯ
ನಿರಾಮಯಾತೀತವ ಆರೂ ಅರಿಯರು
ಅಪ್ರಮಾಣಕೂಡಲಸಂಗಮದೇವಾ. || ೮೩೬ ||

೮೩೭

ಶಿವನು ಐದಕ್ಷರವೆಂಬ ಅಣ್ಣಗಳು ನೀವು ಕೇಳಿರೆ,
ಶಿವನು ಐದುವರ್ಣವೆಂಬ ಅಣ್ಣಗಳು ನೀವು ಕೇಳಿರೆ,
ಶಿವನು ನಿರ್ಮಲನೆಂಬ ಅಣ್ಣಗಳು ನೀವು ಕೇಳಿರೆ,
ಶಿವನು ನಿಃಕಲನೆಂಬ ಅಣ್ಣಗಳು ನೀವು ಕೇಳಿರೆ,
ಶಿವನು ಐದಕ್ಷರವಲ್ಲ, ಐದುವರ್ಣವಲ್ಲ, ನಿರ್ಮಲವಲ್ಲ,
ನಿಃಕಲನಲ್ಲ ನಿಃಕಲಾತೀತನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೮೩೭ ||

೮೩೮

ಶಿವನು ಐದಕ್ಷರವು ಆಗಬಲ್ಲ, ಐದು ವರ್ಣವು ಆಗಬಲ್ಲ
ನಿರ್ಮಲನು ಆಗಬಲ್ಲ, ನಿಃಕಲನು ಆಗಬಲ್ಲನು.
ನಿಃಕಲಾತೀತನಾಗಿ ಏನೂ ಎನಲಿಲ್ಲದ ಮಹಾಘನಶೂನ್ಯನಾಗಬಲ್ಲನಯ್ಯಾ,
ನಮ್ಮ ಅಪ್ರಮಾಣಕೂಡಲಸಂಗಮದೇವ. || ೮೩೮ ||

೮೩೯

ತ್ರಿಪುರಂಗಳ ಕೆಡೆಮೆಟ್ಟಿ, ತೂರ್ಯ ತೂರ್ಯಾತೀತವ ದಾಂಟಿ,
ವ್ಯೋಮಾತೀತಕತ್ತತ್ತವಾಗಿಹ ಮಹಾಘನದಲ್ಲಿ ನಿಂದ ಶರಣನು
ಉದಯಾಸ್ತಮಾನವೆಂಬೆರಡರಿದ ಶಿವಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೩೯ ||

೮೪೦

ಮಹಾವಾಯುವ ಹಿಡಿದು ಮೂಲಜ್ವಾಲೆಯನೆಬ್ಬಿಸಿ,
ಅಗ್ನಿಮಂಡಲ ಆದಿತ್ಯಮಂಡಲ ಚಂದ್ರಮಂಡಲವ ದಾಂಟಿ,

ಹರಿವಿರಿಂಚಿಗಳರಿಯದ ಮಹಾಬಾಗಿಲ ತೆಗೆದು,
ಮೇಲಣ ಬಯಲಾನಂದಮೃತವನುಂಡು,
ನಿರ್ವಯಲಲ್ಲಿ ನಿಂದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೦ ॥

೮೪೧

ಎಡಬಲನ ತಡೆದು, ಮೇರುಗಿರಿಶಿಖರ ಪಶ್ಚಿಮದ್ವಾರದಲ್ಲಿ ನಿಲಿಸಿದಡೆ,
ಆ ಶಿಖರದ್ವಾರದ ಮಧ್ಯದಲ್ಲಿ ಅಮಲನಾದವನು
ಅಮಲಾತೀತವೆಂಬ ಮಹಾನಾಟ್ಯವನು ಕಾಣಬಹುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೧ ॥

೮೪೨

ಜಂಬುಕ ಹದಿನಾಲ್ಕು ವಿಷಯವನುಂಡು ಸತ್ತವು ನೋಡಾ,
ಹಿರಿಯ ಕುದುರೆ ಹತ್ತು ಐಮುಖವಾಯಿತ್ತು ನೋಡಾ,
ತೂರ್ಯ ತೂರ್ಯಾತೀತದಲ್ಲಿ ಲೀಯವಾಯಿತ್ತು
ಆ ತೂರ್ಯಾತೀತ ಮಹಾಘನಗಂಭೀರದಲ್ಲಿ ಲಯವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೨ ॥

೮೪೩

ಪದ್ಮವೊಂದು ಮೊಗ್ಗೆ ಮೂರುಂಟು ನೋಡಾ :
ಮೂರು ವಿಕಸಿತವಾಗಿ, ಸ್ವಯಂಪ್ರಕಾಶದ ಬೆಳಗಿನೊಳಗೆ ಓಲಾಡುತ್ತಿದ್ದೆನು.
ಆ ಸ್ವಯಂಪ್ರಕಾಶದ ಬೆಳಗಿನ ಬೆಳಗನೊಳಕೊಂಡು
ಆ ಸ್ವಯಂಪ್ರಕಾಶದ ಬೆಳಗು ತಾನಾದ
ಶರಣನಪೂರ್ವವೆಂದು ಅವರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದವು ನೋಡಾ ಶ್ರುತಿಗಳು
ಅಪ್ರಮಾಣಕೂಡಲಸಂಗಮದೇವಾ. ॥ ೮೪೩ ॥

೮೪೪

ಏಳುಸುತ್ತಿನ ಕೋಟೆಗೆ ಒಂಬತ್ತು ಬಾಗಿಲು,
ಇಪ್ಪತ್ತೈದು ಗ್ರಾಮ ನೋಡಾ.
ಇಪ್ಪತ್ತೈದು ಗ್ರಾಮದೊಳಗೆ ಎಂಟಾನೆ, ಹತ್ತು ಕುದುರೆ,
ಅರುವತ್ತಾರುಕೋಟಿ ಕಾಲಾಳು,
ಐವರು ತಳವಾರರು, ನಾಲ್ವರು ಪ್ರಧಾನಿಗಳು,
ಏಳುಮಂದಿ ಅರಸರು, ಒಬ್ಬ ರಾಯನು,
ಇಷ್ಟನು ಕೂಡಿಕೊಂಡು ಹನ್ನೆರಡುಗಾವುದ ದಾಳಿಯೋಗಿ,
ಎಂಟುಗಾವುದ ತಿರುಗಲೊಡನೆ

ಆ ಇಪ್ಪತ್ತೈದು ಗ್ರಾಮವನು, ಎಂಟಾನೆಯನು,
ಹತ್ತು ಕುದುರೆಯನು, ಅರುವತ್ತಾರುಕೋಟಿ ಕಾಲಾಳನು,
ಐವರು ತಳವಾರರನು, ನಾಲ್ವರು ಪ್ರಧಾನಿಗಳನು,
ಏಳುಮಂದಿ ಅರಸುಗಳನು, ಒಬ್ಬ ರಾಯನನು
ಒಬ್ಬ ಸೂಳೆ ನುಂಗಿದಳು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೪ ॥

೮೪೫

ಒಂದಾದೆನೆಂಬ ಅಣ್ಣಗಳು ನೀವು ಕೇಳಿರೆ,
ಎರಡೆಂಬ ಅಣ್ಣಗಳು ನೀವು ಕೇಳಿರೆ,
ಒಂದಾದಡೊಂದು ಮೋಕ್ಷವಿಲ್ಲ ಕೇಳಿರಣ್ಣಾ,
ಎರಡಾದಡೆ ಬೇರಾಯಿತ್ತು ಕೇಳಿರಣ್ಣಾ.
ಒಂದಾಗಿ ನಿಂದರು ಮೋಕ್ಷವಿಲ್ಲ,
ಎರಡಾಗಿ ಹೋದರು ಮೋಕ್ಷವಿಲ್ಲ.
ನಿಲ್ಲದೆ ನಿಂದ ನಿಲವಿಂಗೆ ನಮೋ ನಮೋ ಎಂಬೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೫ ॥

೮೪೬

ಒಂದೆಂಬೆನೆ ಎರಡಾಗಿ ತೋರುತ್ತಿದೆ,
ಎರಡೆಂಬೆನೆ ಒಂದಾಗಿ ತೋರುತ್ತಿದೆ,
ಒಂದೆಂಬುದು ಅದ್ವೈತಿಯ ಮತ.,
ಎರಡೆಂಬುದು ದ್ವೈತಿಯ ಮತ,
ಒಂದಲ್ಲ ಎರಡಲ್ಲ ಅಪ್ರಮಾಣಕೂಡಲಸಂಗಮದೇವಾ.
ನಿಮ್ಮ ಶರಣನ ಪರಿಯು ಬೇರೆ. ॥ ೮೪೬ ॥

೮೪೭

ಬೀಜವಿಲ್ಲದೆ ಅಂಕುರವಿಲ್ಲ, ಬೀಜವಿಲ್ಲದೆ ಅಂಕುರವ ಕಾಣಬಾರದು.
ಆ ಬೀಜವು ಅಂಕುರವು ಒಂದೆಂಬೆನೆ ಒಂದಲ್ಲ;
ಎರಡೆಂಬೆನೆ ಎರಡಲ್ಲ; ಬೀಜಾಂಕುರದ ನ್ಯಾಯ,
ಬಿಚ್ಚಿ ಬೇರಲ್ಲ, ಬೆರಸಿ ಒಂದಲ್ಲ
ಅಪ್ರಮಾಣಕೂಡಲಸಂಗಾ ನಿಮ್ಮ ಶರಣನು. ॥ ೮೪೭ ॥

೮೪೮

ಅದೆ ಇದೆಂಬ ಅಣ್ಣಗಳು ನೀವು ಕೇಳಿರೆ,
'ಅಯನಿಯಾನಾಯಿ, ನಿಯದಾನಾಯಿ' ಎಂಬ ಶ್ರುತಿ ಹುಸಿ,
ಅಯನಿಯಲ್ಲ ನಿಯದನಲ್ಲ

ಅಪ್ರಮಾಣಕೂಡಲಸಂಗಾ, ನಿಮ್ಮ ಶರಣ ನಿಂದ ನಿಲವಿಂಗೆ
ನಮೋ ನಮೋ ಎಂಬೆನು. ॥ ೮೪೮ ॥

೮೪೯

ಉರಿಯ ಬೀಜದ ಬಾಯಲ್ಲಿ ಎರಡು ಪಕ್ಷಿ ಹುಟ್ಟಿತ್ತು ನೋಡಾ,
ಒಂದು ಪಕ್ಷಿಯೆ ಆದಿ, ಒಂದು ಪಕ್ಷಿಯೆ ಅನಾದಿ ನೋಡಾ,
ಒಂದು ಪಕ್ಷಿಯೆ ಸಕಲ, ಒಂದು ಪಕ್ಷಿಯೆ ನಿಃಕಲ,
ಎರಡು ಪಕ್ಷಿಯು ಕೂಡಿ ಸಕಲನಿಃಕಲವಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೪೯ ॥

೮೫೦

ಪರಬ್ರಹ್ಮಸ್ವರೂಪವಾಗಿಹ ಪ್ರಣವದ ಬಾವಿಯೊಳಗೆ
ಪರಮಾನಂದವೆಂಬ ಜಲವಿಹುದು.
ನಿರಾಳವೆಂಬ ನೇಣಿನಲ್ಲಿ ನಿರಂಜನವೆಂಬ ಮಡಕೆಯ ಕಟ್ಟಿ,
ಪರಮಾನಂದವೆಂಬ ಜಲ ಸೇದಬಲ್ಲಾತನೆ ಶಿವಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೫೦ ॥

೮೫೧

ಅನಂತಕೋಟಿ ಸೂರ್ಯ ಚಂದ್ರಾಗ್ನಿಪ್ರಕಾಶವಾಗಿಹ
ಪರಂಜ್ಯೋತಿಯಲ್ಲಿ ನಿರಾಮಯಬೀಜ ಹುಟ್ಟಿತ್ತು ನೋಡಾ.
ನಿರಾಮಯಬೀಜದಲ್ಲಿ ನಿರಾಳ ನಿರಂಜನವೆಂಬ ವೃಕ್ಷ ತಲೆದೋರಿ,
ಉದಯಾಸ್ತಮಾನವೆಂಬೆರಡರಿದ ಶರಣಂಗೆ,
ಅನಂತಕೋಟಿ ಶಾಖಾದಿಗಳಾದವು ನೋಡಾ.
ಪರಮಾನಂದವೆಂಬ ಹೂವಾಯಿತ್ತು,
ಪರಮಪರಿಣಾಮವೆಂಬ ಕಾಯಾಯಿತ್ತು,
ಪರಮಪರಿಣಾಮದ ತೃಪ್ತಿಯೆಂಬ ಹಣ್ಣಾಯಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೫೧ ॥

೮೫೨

ಸಮತೆ ಸಮಾಧಾನವೆಂಬ ಭೂಮಿಯ ಮೇಲೆ
ನಿರಂಜನವೆಂಬ ಅಶ್ವಂಗೆ ನಿರಾಳವೆಂಬ ಹಲ್ಲಣವ ಬಿಗಿದು,
ಜ್ಞಾನವೆಂಬ ವಾಘೆಯನಿಕ್ಕಿ, ನಿರಾಮಯವೆಂಬ ರಾವುತನೇರಿ,
ಮುನ್ನೂರರುವತ್ತುಗ್ರಾವುದ ದಾಳಿಹೋಗಿ ತಿರುಗಿದ ನೋಡಾ.
ಈ ಅನುಭಾವವ ತಿಳಿದು ಅನುಭವಿಸಬಲ್ಲಾತನು ಪರಮಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೫೨ ॥

೮೫೩

ಸೊಂಬರಿಹರು ಶುದ್ಧಬಯಲಲ್ಲಿ ನೋಡಾ,
ಸೊಂಬರಿಹರು ಶುದ್ಧಪ್ರಕಾಶದಲ್ಲಿ ನೋಡಾ,
ಸೊಂಬರಿಹರು ಶುದ್ಧಬಯಲಾತೀತದಲ್ಲಿ ನೋಡಾ,
ಸೊಂಬರಿಹರು ಅತ್ಯತಿಷ್ಠದ್ದಶಾಂಗುಲದಲ್ಲಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೫೩ ||

೮೫೪

ಸೊಂಬರಿಹರು ನಿರಾಳಮಯದಲ್ಲಿ
ಸೊಂಬರಿಹರು ನಿರಂಜನ ಪ್ರಕಾಶದಲ್ಲಿ
ಸೊಂಬರಿಹರು ನಿರಾಮಯದಲ್ಲಿ
ಸೊಂಬರಿಹರು ನಿರಾಮಯಾತೀತದಲಿ
ಸೊಂಬರಿಹರು ಅತ್ಯತಿಷ್ಠದ್ದಶಾಂಗುಲದಲ್ಲಿ ನೋಡಾ,
ಅಪ್ರಮಾಣಕೂಡಲಸಂಗಮದೇವಾ. || ೮೫೪ ||

೮೫೫

ಏನು ಏನೂ ಎನಲಿಲ್ಲದ ಹಾಳು ಬೆಟ್ಟದ ಮೇಲೊಂದು
ತಲೆಯಿಲ್ಲದ ಹುಲಿ ಹುಟ್ಟಿತ್ತು ನೋಡಾ,
ಆ ಹುಲಿ ಮೇಲಕೆ ಹದಿನಾಲ್ಕುಸಾವಿರದನಾನೂರಗಾವುದ
ನೆಗೆಯಿತ್ತು ನೋಡಾ.
ಆ ಹುಲಿ ಒಂದು ಹುಲ್ಲೆಯ ಕಂಡು ತಿರುಗಿ,
ಮೂರೇಳು ಸಾವಿರದಾರುನೂರುಗಾವುದ ತಿರುಗಿ
ಹುಲ್ಲೆಯ ಹಿಡಿದು ನುಂಗಿ,
ಹದಿನಾಲ್ಕುಸಾವಿರದ ನಾನೂರುಗಾವುದ ತಿರುಗಿತ್ತು,
ಇದನರಿದು ಅನುಭವಿಸಬಲ್ಲಾತನೆ ಮಹಾಶರಣ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೫೫ ||

೮೫೬

ಎಂಟೆರಡೆಂಟೆರಡೆಂಬರು,
ಎಂಟೆರಡೆಂಟೆರಡೆಂಬ ಅಣ್ಣಗಳು ನೀವು ಕೇಳಿರೆ,
ಎಂಟೆರಡೆಂಟೆರಡೆಂಬ ಭೇದವನರಿಯದಿದ್ದೆನು ನೋಡಾ ಅನೇಕ ಕಾಲವು.
ಎಂಟೆರಡೆಂಟೆರಡೆಂಬ ಭೇದವನರಿಯಿಸಿದನೆನ್ನ ಸದ್ಗುರುಸ್ವಾಮಿ.
ಎಂಟೆರಡೆಂಟೆರಡೆಂಬ ಭೇದವನರಿವಿಂದರಿದಡೆ
ಎಂಟೆರಡೆಂಬ ಭೇದ ಲಿಂಗಾಂಗ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೫೬ ||

೮೫೭

ಬೀಜವ ವೃಕ್ಷ ನುಂಗಿ ತೋರಿದ ಘನವನೇನೆಂಬೆ ನೋಡಾ !
ವೃಕ್ಷ ಬೀಜವ ನುಂಗಿ ತೊರಿದ ಘನವನೇನೆಂಬೆ ನೋಡಾ !
ಈ ಎರಡರ ಭೇದವನು ಉಪಮಿಸಬಾರದು.
ಬೀಜವೃಕ್ಷನ್ಯಾಯ ಲಿಂಗಾಂಗಭೇದ ;
ಬಿಚ್ಚಿ ಬೇರಿಲ್ಲ ಬೆರಸಿ ಒಂದಲ್ಲ
ಅಪ್ರಮಾಣಕೂಡಲಸಂಗಮದೇವಾ. ॥ ೮೫೭ ॥

೮೫೮

ನಾದವ ಬಿಂದು ನುಂಗಿ, ಬಿಂದುವ ನಾದ ನುಂಗಿ
ತೋರಿತ್ತು ನೋಡಾ.
ಆ ನಾದ ಬಿಂದು ಕಳೆ ನುಂಗಿ ತೋರಿದ ಮಹಾಘನವ
ಏನೆಂದು ಉಪಮಿಸುವೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೫೮ ॥

೮೫೯

ಸರ್ಪನ ಬಾಯಲ್ಲಿ ಚಂದ್ರಸೂರ್ಯರುತ್ಪತ್ಯವಾಗಿ
ಮಹಾಮೇರುವ ತಿರುಗುವರು.
ಆ ಸರ್ಪಂಗೆಯೂ ಚಂದ್ರಸೂರ್ಯರಿಗೂ
ಅನೇಕ ಕಾಲ ಹಗೆಗಳಾಗಿಹವು.
ಆ ಸರ್ಪನು ಚಂದ್ರಸೂರ್ಯರ ಸಂಧಿಸಿ ಹಿಡಿಯಿತ್ತು ನೋಡಾ.
ಈ ಭೇದವನರಿದ ಶರಣನು
ಉದಯಾಸ್ತಮಾನವೆಂದರಿದ ಶಿವಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೫೯ ॥

೮೬೦

ಹುಸಿವರ್ಣನಾಗಿ ಪಂಚಭೂತವಲ್ಲ,
ಉದಯಾಸ್ತಮಾನವಾಗಿಹ ಚಂದ್ರಸೂರ್ಯರಲ್ಲ,
ಆರುವರ್ಣಂಗಳಲ್ಲ, ಅರೂಪಲ್ಲ, ನಿರೂಪಲ್ಲ,
ನಿರಾಳ ನಿರಂಜನ ನಿರಾಮಯ ನಿರಾಮಯಾತೀತವ
ರೂಪೆಂದು ಕಾಬುವ ಭವಭಾರಿಗಳ
ಎಂಬತ್ತು ನಾಲ್ಕು ಲಕ್ಷಯೋನಿಯಲ್ಲಿ ತಿರುಗಿ ತಿರುಗಿ
ಹುಟ್ಟಿಸದೆ ಮಾಣ್ಬನೆ
ನಮ್ಮ ಅಪ್ರಮಾಣಕೂಡಲಸಂಗಮದೇವ ? ॥ ೮೬೦ ॥

೮೬೧

ಸರ್ಪನ ಹೆಸರ ಹೇಳಿದಡೆ ವಿಷ ಹತ್ತಿತು ನೋಡಾ,
ಅತ್ತತ್ತ ಏನ ಮಾಡುವೆ ಯಂತ್ರ ಮಂತ್ರವಾದಿಗಳಿಗಳವಲ್ಲ ನೋಡಾ.
ಒಂದಿರುಹೆ ಅರುವತ್ತಾರುಕೋಟಿ ಕೋಣನ ನುಂಗಿತ್ತು ನೋಡಾ,
ಸೊಳ್ಳೆಯ ಕಾಲಬೆರಳಲ್ಲಿ ಎಂಟಾನೆ ನಿಂತು ಆಡುತ್ತಿವೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೧ ||

೮೬೨

ಅನಾದಿ ಗಣೇಶ್ವರನ ನೆನಹುಮಾತ್ರದಲ್ಲಿ
ಮೂರು ಹುಲಿ ಹುಟ್ಟಿತ್ತು ನೋಡಾ.
ಒಂದು ಹುಲಿಗೆ ಆರುಮುಖ
ಒಂದು ಹುಲಿಗೆ ನಾಲ್ಕು ಮುಖ
ಎರಡು ಹುಲಿಯು ನೆಗೆದಾಡುತ್ತಿಹುದು ನೋಡಾ,
ಆ ಎರಡು ಹುಲಿಯು ನೆಗೆದಾಡುವುದು ಕಂಡು
ಆ ನಾಲ್ಕುಮುಖದ ಹುಲಿ ಆ ಎರಡು ಹುಲಿಯನು
ನುಂಗಿ ನುಂಗಿ ಉಗುಳಿತ್ತು ನೋಡಾ.
ಆ ಆರುಮುಖದ ಹುಲಿಗಳೆರಡು ಕೂಡಿ
ಆ ನಾಲ್ಕು ಮುಖದ ಹುಲಿಯ ನುಂಗಿ ಉಗುಳಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೨ ||

೮೬೩

ಕಣ್ಣಿಲ್ಲದೆ ನೋಡಿ ಕಾಮಿಸುವ ಶರಣ.
ಕಾಲಿಲ್ಲದೆ ಗಮಿಸಿ ಸುಳಿದಾಡುವ ಶರಣ.
ಕೈಯಿಲ್ಲದೆ ಸೋಂಕಿ ಪರಿಣಾಮಿಸುವ ಶರಣ.
ಬಾಯಿಲ್ಲದೆ ರುಚಿಸುವ ನೋಡಾ ಶರಣನು
ಅಪ್ರಮಾಣಕೂಡಲಸಂಗಮದೇವಾ. || ೮೬೩ ||

೮೬೪

ಶರಣನ ಸ್ವಾನುಭಾವವೆ ಕಣ್ಣಿಲ್ಲದ ನೋಟ,
ಶರಣನ ಸ್ವಾನುಭಾವವೆ ಕಾಲಿಲ್ಲದ ಗಮನ,
ಶರಣನ ಸ್ವಾನುಭಾವವೆ ಕೈಯಿಲ್ಲದ ಸೋಂಕು,
ಶರಣನ ಸ್ವಾನುಭಾವವೆ ಬಾಯಿಲ್ಲದ ರುಚಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೪ ||

೮೬೫

ಶರಣನು ಸ್ವಾನುಭಾವದಲ್ಲಿ ಕಂಡನು ನಿರಾಮಯಾತೀತವ,
ಶರಣನು ಸ್ವಾನುಭಾವದಲ್ಲಿ ಕಂಡು ಗಮನಿಸಿದ ನಿರಾಮಯಾತೀತವ,
ಶರಣನು, ಸ್ವಾನುಭಾವದಲ್ಲಿ ಕಂಡು ಗಮನಿಸಿ ಸವಿದು
ಅಲ್ಲಿಯೆ ಲೀಯವಾದ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೫ ||

೮೬೬

ಶರಣ ಸತ್ತು, ಸುತ್ತಿದ್ದ ಪ್ರಪಂಚ ಕೆಟ್ಟವು ನೋಡಾ.
ನಿರಾಳ ನಿರಂಜನ ನಿರಾಮಯ ನಿರಾಮಯಾತೀತವೆಂಬ
ಮಹಾಗಣೇಶ್ವರರು ಹೊತ್ತುಕೊಂಡು ಹೋದರು ನೋಡಾ.
ಹೊತ್ತುಕೊಂಡು ಹೋಗಿ, ಅತ್ಯತಿಷ್ಠದ್ದಶಾಂಗುಲವೆಂಬ
ನಿಜಸಮಾಧಿಯ ತೆಗೆದು ನಿಕ್ಷೇಪಿಸಿದರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೬ ||

೮೬೭

ಮೂರುಲೋಕವ ನುಂಗಿತ್ತು ನೋಡಾ ಒಂದು ಕಪ್ಪೆ,
ಆ ಕಪ್ಪೆಯ ನುಂಗಿದಳು ನೋಡಾ ಒಬ್ಬ ಸೂಳೆ,
ಆ ಸೂಳೆಯ ನುಂಗಿ ತೇಗಿತ್ತು ನೋಡಾ ಒಂದಿರುಹೆ
ಅಪ್ರಮಾಣಕೂಡಲಸಂಗಮದೇವಾ. || ೮೬೭ ||

೮೬೮

ಅಯ್ಯಾ, ಎನ್ನ ಮನವ ಮಹಾಮಾಯೆ ಮುಚ್ಚಿಕೊಂಡ ಕಾರಣ
ಅನಂತ ಭವದಲ್ಲಿ ಬಂದೆನು.
ಅಯ್ಯಾ, ಎನ್ನ ಮನ ಒಡೆದು ಚಿತ್ಪ್ರಕಾಶನಯನ ಮೂಡಿತ್ತು ನೋಡಾ.
ಅಯ್ಯಾ, ಚಿತ್ಪ್ರಕಾಶನಯನ ಮೂಡಿ ಎನ್ನ ಸರ್ವಾಂಗವ ಭೇದಿಸಿ
ಅತ್ತತ್ತ ಮೀರಿ ತೋರಿತ್ತು ನೋಡಾ.
ಅಯ್ಯಾ, ಎನ್ನ ಭವಬಂಧನದ ಬೇರ ಕಿತ್ತೀಡಾಡಿದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೮ ||

೮೬೯

ಗಣೇಶ್ವರಿಯೆಂಬ ಮಹಾಶಕ್ತಿಗೆ ಆರುಮುಖವುಂಟು ನೋಡಾ.
ಆ ಗಣೇಶ್ವರಿಯೆಂಬ ಮಹಾಶಕ್ತಿ ಆರುಮಕ್ಕಳ ಹಡೆದಳು.
ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು,
ಇಬ್ಬರು ನಪುಂಸಕರು ನೋಡಾ.
ಇಬ್ಬರು ಗಂಡುಮಕ್ಕಳಿಗೆ ಹದಿನಾರು ಹದಿನಾರು ಮುಖ.

ಇಬ್ಬರು ಹೆಣ್ಣುಮಕ್ಕಳಿಗೆ ಮೂವತ್ತೆರಡು ಮೂವತ್ತೆರಡು ಮುಖ.
ಇಬ್ಬರು ನಪುಂಸಕರಿಗೆ ಅರುವತ್ತುನಾಲ್ಕು ಅರುವತ್ತುನಾಲ್ಕು ಮುಖ ನೋಡಾ.
ಆ ಗಣೇಶ್ವರಿ ಎಂಬ ಮಹಾಶಕ್ತಿಯನು ಇಬ್ಬರು ಗಂಡುಮಕ್ಕಳು,
ಇಬ್ಬರು ಹೆಣ್ಣುಮಕ್ಕಳು, ನಪುಂಸಕರಿಬ್ಬರನು ಮಹಾಘನಗಂಭೀರ ನುಂಗಿತ್ತು.
ಆ ಮಹಾಘನಗಂಭೀರವನೊಂದು ಮದಾಳಿ ನುಂಗಿತ್ತ ಕಂಡೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೬೯ ||

೮೭೦

ಮೇರುಗಿರಿಶಿಖರ ಪಶ್ಚಿಮದ್ವಾರದಲ್ಲಿ ಎರಡು ಗೂಬೆ ಹುಟ್ಟಿತ್ತು.
ಆ ಎರಡೂ ಗೂಬೆಯು ಏಕವಾಗಿ
ಆ ಅಕಾರ ಉಕಾರ ಮಕಾರವ ನುಂಗಿತ್ತು.
ನಾದ ಬಿಂದು ಕಳೆಯ ನುಂಗಿ ಕಲಾತೀತವಾಗಿ ಅತ್ತತ್ತ ಹಾರಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೦ ||

೮೭೧

ಮೇರುಗಿರಿಶಿಖರ ಪಶ್ಚಿಮದ್ವಾರದಮಧ್ಯದಲ್ಲಿ
ನಿರಾಳವೆಂಬ ಮಹಾಗಿರಿಯೊಂದು ನೋಡಾ.
ಆ ಮಹಾಗಿರಿಯ ಶಿಖರದ ತುದಿಯಲ್ಲಿ
ನಿರಂಜನವೆಂಬ ಕದಳಿಯುಂಟು ನೋಡಾ.
ಆ ಕದಳಿಯ ಒಳಹೊಕ್ಕು ನೋಡಲು
ನಿರಂಜನಾತೀತವೆಂಬ ಲಿಂಗವ ಕಂಡು, ಸ್ವಯಲಿಂಗಿಯಾದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೧ ||

೮೭೨

ನಾದ ಬಿಂದು ಕಲಾತೀತವಾಗಿಹ ಜ್ಯೋತಿರ್ಮಯವಾಗಿಹ ಲಿಂಗವ
ಕಿಂಚತ್‌ಮಾತ್ರ ಧ್ಯಾನಿಸಿದರೆ
ಜನನ ಮರಣವಿಲ್ಲವೆಂಬ ಅಣ್ಣಗಳು ನೀವು ಕೇಳಿರೆ,
ನವಣೆಯ ಮರಿಯಾದೆ ನೆನದರು ಮರದರು ಅರಿವಲ್ಲ.
ನೆನಹು ಮರಹು ಎರಡಳಿದಲ್ಲದೆ ಜನನ–ಮರಣ ಬಿಡದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೨ ||

೮೭೩

ಉತ್ತರ ದಕ್ಷಿಣ ಪೂರ್ವ ಪಶ್ಚಿಮವೆಂಬ ನಾಲ್ಕು ದೇಶವ ತಿರುಗಿದಡೆ,
ಅಷ್ಟಾಷಷ್ಟಿಕೋಟಿ ತೀರ್ಥಂಗಳಲ್ಲಿ ಸ್ನಾನವ ಮಾಡಿದಡೆ,
ಸಂಸಾರವೆಂಬ ದ್ರುಮ ನಾಶವಾಗುವದೆಂಬರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೩ ||

೮೭೪

ಉತ್ತರ ದಕ್ಷಿಣ ಪೂರ್ವ ಪಶ್ಚಿಮವೆಂಬ
ನಾಲ್ಕು ದೇಶವ ತಿರುಗಿದಡೇನು ಫಲವಿಲ್ಲ.
ಅಷ್ಟಾಷಷ್ಟಿಕೋಟಿ ತೀರ್ಥಂಗಳಲ್ಲಿ ಸ್ನಾನವ ಮಾಡಿದಡೂ
ಜನನ–ಮರಣ ಪುಣ್ಯ ಪಾಪಂಗಳು ಬಿಡವು.
ಅದೆಂತೆಂದಡೆ :
ಅನೇಕ ಕಾಲವು ಅಷ್ಟಾಷಷ್ಟಿಕೋಟಿ ತೀರ್ಥಂಗಳೊಳಗೆ
ಮತ್ಸ್ಯ ಕೂರ್ಮ ಮಂಡೂಕಂಗಳಿಹವು.
ಆ ಮತ್ಸ್ಯ ಕೂರ್ಮ ಮಂಡೂಕಂಗಳಿಗೆ
ಜನನ–ಮರಣ ಪುಣ್ಯಪಾಪಂಗಳು ಬಿಡದೆಹೋದವು.
ಇದು ಕಾರಣ ಗುರುಪಾದಸೇವೆಯ ಮಾಡಿ, ಗುರುಕಾರುಣ್ಯವ ಪಡೆದು
ನಿರಾಳ ನಿರಂಜನ ನಿರಾಮಯ ನಿರಾಮಯಾತೀತವೆಂಬ
ಗಂಗೆಯಲ್ಲಿ ಮುಳಗಿದಡೆ
ನಿರಾಳ ನಿರಂಜನ ನಿರಾಮಯ
ನಿರಾಮಯಾತೀತವಾಗಿಹುದು ನೋಡಾ ಜನನವು,
ಅಪ್ರಮಾಣಕೂಡಲಸಂಗಮದೇವಾ. ॥ ೮೭೪ ॥

೮೭೫

ಚಿತ್ಸ್ವರೂಪವಾಗಿ ತನ್ನೊಳಗೆ ತೀರ್ಥ ಚಿತ್ಪ್ರಕಾಶವಾಗಿಹುದು ನೋಡಾ.
ಆ ತೀರ್ಥವನರಿಯದೆ ಹೊರಗೆ ಹರಿವ ನೀರ
ತೀರ್ಥವೆಂದು ಹೋಗುವರು ನೋಡಾ.
ಶುದ್ಧಪ್ರಕಾಶವಾಗಿಹ ತೀರ್ಥವನರಿಯದೆ
ಹರಿವ ನೀರ ತೀರ್ಥವೆಂದು ಹೋಗುವ ಭವಭಾರಿಗಳಿಗೆ
ಎಂದೆಂದಿಗೂ ಜನನ ಮರಣ ಬಿಡದು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೭೫ ॥

೮೭೬

ಆ ತೀರ್ಥ ಸೂರ್ಯಪ್ರಭೆಗೂ ಬತ್ತಲೀಯದು,
ಜ್ವಾಲಾಗ್ನಿ ಉಷ್ಣಕೂ ಬತ್ತಲೀಯದು,
ಗಾಳಿ ಬೀಸಿದಡೆ ಅಲ್ಲಾಡದು,
ತೆರೆನೊರೆಗಳಿಲ್ಲ, ಹುಳುಗಳಿಲ್ಲ,
ಆಕಾಶದಲ್ಲಿದ್ದು ಬಾಹ ಮಳೆಯಿಲ್ಲ;
ಪೃಥ್ವಿ ಅಪ್ಪು ತೇಜ ವಾಯು ಆಕಾಶ
ಲಯವಾದಡೂ ಲಯವಿಲ್ಲ ಆ ತೀರ್ಥಕ್ಕೆ.
ಅಂಥ ಚಿತ್ಪ್ರಕಾಶತೀರ್ಥವ ಮಹಾಶರಣ ಬಲ್ಲನಲ್ಲದೆ

ಮಿಕ್ಕ ಭವಭಾರಿಗಳೆತ್ತ ಬಲ್ಲರು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೬ ||

೮೭೭

ತಾನೊಂದು ಕಾಲದಲ್ಲಿ ನಿರಾಮಯವಾಗಿರ್ದನು ನೋಡಾ.
ತಾನೊಂದು ಕಾಲದಲ್ಲಿ ನಿರಾಳವಾಗಿರ್ದನು ನೋಡಾ.
ತಾನೊಂದು ಕಾಲದಲ್ಲಿ ನಿರಂಜನವಾಗಿರ್ದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೭೭ ||

೮೭೮

ತಾನೊಂದು ಕಾಲದಲ್ಲಿ ನಾದ ಬಿಂದು ಕಲೆಯಾದನು.
ತಾನೊಂದು ಕಾಲದಲ್ಲಿ ನಾದದೊಳಗೆ ಸುನಾದವಾದನು.
ತಾನೊಂದು ಕಾಲದಲ್ಲಿ ನಾದದೊಳಗೆ ಬಿಂದುವಾದನು.
ತಾನೊಂದು ಕಾಲದಲ್ಲಿ ನಾದದೊಳಗೆ ಕಲೆಯಾದನು.
ತಾನೊಂದು ಕಾಲದಲ್ಲಿ ನಾದದೊಳಗೆ ನಾದಾತೀತನಾದ ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೮೭೮ ||

೮೭೯

ತಾನೊಂದು ಕಾಲದಲ್ಲಿ ಬಿಂದುವಿನೊಳಗೆ ಬಿಂದುವಾದನು.
ತಾನೊಂದು ಕಾಲದಲ್ಲಿ ಬಿಂದುವಿನೊಳಗೆ ನಾದವಾದನು.
ತಾನೊಂದು ಕಾಲದಲ್ಲಿ ಬಿಂದುವಿನೊಳಗೆ ಕಲೆಯಾದನು.
ತಾನೊಂದು ಕಾಲದಲ್ಲಿ ಬಿಂದುವಿನೊಳಗೆ ಬಿಂದ್ವಾತೀತನಾದನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ || ೮೭೯ ||

೮೮೦

ತಾನೊಂದು ಕಾಲದಲ್ಲಿ ಕಲೆಯೊಳಗೆ ಕಲೆಯಾದನು.
ತಾನೊಂದು ಕಾಲದಲ್ಲಿ ಕಲೆಯೊಳಗೆ ನಾದವಾದನು.
ತಾನೊಂದು ಕಾಲದಲ್ಲಿ ಕಲೆಯೊಳಗೆ ಬಿಂದುವಾದನು.
ತಾನೊಂದು ಕಾಲದಲ್ಲಿ ಕಲೆಯೊಳಗೆ ಕಲಾತೀತನಾದನು ನೋಡಾ
ನಮ್ಮ ಅಪ್ರಮಾಣಕೂಡಲಸಂಗಮದೇವ. || ೮೮೦ ||

೮೮೧

ಅಯ್ಯಾ, ಆತ್ಮಯೋಗಿಗಳು ದೇಹವಾಸನೆ ಕೆಡದೆ
ಮೋನಮುದ್ರೆಯಲ್ಲಿದ್ದಡೇನು ?
ಅಯ್ಯಾ, ಆತ್ಮಯೋಗಿಗಳು ಜೀವಹಮ್ಮು ಕೆಡದೆ
ಮೋನಮುದ್ರೆಯಲ್ಲಿದ್ದಡೇನು ?

ಅಯ್ಯಾ, ಆತ್ಮಯೋಗಿಗಳು ಮನದ ಸಂಚಲವರಿಯದೆ
ಮೋನಮುದ್ರೆಯಲ್ಲಿದ್ದಡೇನು ?
ಅಯ್ಯಾ, ಆತ್ಮಯೋಗಿಗಳು ಭಾವಭ್ರಮೆಯರಿಯದೆ
ಮೋನಮುದ್ರೆಯಲ್ಲಿದ್ದಡೇನು ?
ಭವಭವಾಂತರದಲ್ಲಿ ಬಹುದು ತಪ್ಪದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೮೧ ||

೮೮೨

ನಿರಂಜನಜಾಗ್ರದಲ್ಲಿನಿಂದಡೆ ಭಕ್ತನೆಂಬೆ.
ನಿರಂಜನಸ್ವಪ್ನದಲ್ಲಿನಿಂದಡೆ ಮಹೇಶ್ವರನೆಂಬೆ
ನಿರಂಜನಸುಷುಪ್ತಿಯಲ್ಲಿ ನಿಂದಡೆ ಪ್ರಸಾದಿಯೆಂಬೆ.
ನಿರಂಜನತೂರ್ಯದಲ್ಲಿ ನಿಂದಡೆ ಪ್ರಾಣಲಿಂಗಿಯೆಂಬೆ.
ನಿರಂಜನವ್ಯೋಮದಲ್ಲಿ ನಿಂದಡೆ ಶರಣನೆಂಬೆ.
ನಿರಂಜನವ್ಯೋಮಾತೀತದಲ್ಲಿ ನಿಂದಡೆ ಐಕ್ಯನೆಂಬೆ.
ನಿರಂಜನವ್ಯೋಮಾತೀತಕತ್ತತ್ತ್ವವಾಗಿಹ ಮಹಾಘನ
ನಿರ್ವಾಣಾತೀತವೆ ಅಂಗವಾದ ಮಹಾಶರಣಂಗೆ ಭವಹಿಂಗಿತ್ತಾಗಿ,
ಅವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೮೨ ||

೮೮೩

ನಕಾರದೊಳಗೆ ಐವತ್ತೊಂದಕ್ಷರವನರಿಯದೆ
ಎಂತು ಆಚಾರಲಿಂಗಸಂಬಂಧಿಯೆಂಬೆ ?
ಮಕಾರದೊಳಗೆ ಐವತ್ತೊಂದಕ್ಷರವನರಿಯದೆ
ಎಂತು ಗುರುಲಿಂಗಸಂಬಂಧಿಯೆಂಬೆ ?
ಶಿಕಾರದೊಳಗೆ ಐವತ್ತೊಂದಕ್ಷರವನರಿಯದೆ
ಎಂತು ಶಿವಲಿಂಗಸಂಬಂಧಿಯೆಂಬೆ ?
ವಕಾರದೊಳಗೆ ಐವತ್ತೊಂದಕ್ಷರವನರಿಯದೆ
ಎಂತು ಜಂಗಮಲಿಂಗಸಂಬಂಧಿಯೆಂಬೆ ?
ಯಕಾರದೊಳಗೆ ಐವತ್ತೊಂದಕ್ಷರವನರಿಯದೆ
ಎಂತು ಪ್ರಸಾದಲಿಂಗಸಂಬಂಧಿಯೆಂಬೆ ?
ಓಂಕಾರದೊಳಗೆ ಐವತ್ತೊಂದಕ್ಷರವನರಿಯದೆ ?
ಎಂತು ಮಹಾಲಿಂಗಸಂಬಂಧಿಯೆಂಬೆ ?
ಓಂಕಾರದೊಳಗೆ ಸಮಸ್ತ ಭೇದಾದಿಭೇದಂಗಳ ತಿಳಿದು ಮೀರಿ
ನಿರ್ವಯಲಸರಿಯದೆ,
ಎಂತು ನಿರ್ವಯಲಸಂಬಂಧಿಯೆಂಬೆನಯ್ಯಾ
ಅಪ್ರಮಾಣಕೂಡಲಸಂಗಮದೇವಾ. || ೮೮೩ ||

೮೮೪

ಪರಸ್ತ್ರೀ ಪರಾರ್ಥ ಪರಾನ್ನಕ್ಕೆ ಸುಳಿವ ಅಣ್ಣಗಳು ನೀವು ಕೇಳಿರೆ.
ಪರಸ್ತ್ರೀಗೆ ಚಕ್ಷುದಗ್ಧವಾಗಿರಬೇಕು ಕೇಳಿರಣ್ಣಾ.
ಪರಾರ್ಥಕ್ಕೆ ಹಸ್ತದಗ್ಧವಾಗಿರಬೇಕು ಕೇಳಿರಣ್ಣಾ.
ಪರಾನ್ನಕ್ಕೆ ಜಿಹ್ವೆದಗ್ಧವಾಗಿರಬೇಕು ಕೇಳಿರಣ್ಣಾ.
ನಿಂದೆಸ್ತುತಿಗೆ ಕಿವುಡನಾಗಿರಬೇಕು ಕೇಳಿರಣ್ಣಾ.
ಬಯಲಬ್ರಹ್ಮವ ನುಡಿವ ತರ್ಕಿಗಳ ಕಂಡಡೆ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು ಶರಣನು ಕೇಳಿರಣ್ಣಾ,
ಇವರಿಂಗೆ ಭವನಾಸ್ತಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೮೪ ||

೮೮೫

ಪರಧನ ಪರಸ್ತ್ರೀ ಪರಾನ್ನದಾಸೆಯ ಬಿಡದೆ,
ನಿಂದೆ ಸ್ತುತಿಗಳೆರಡು ಸಮವಾಗದೆ,
ಮಾಗಿಯ ಕೋಗಿಲೆಯಂತೆ ಮೂಗನಾಗಿರಲರಿಯದೆ,
ಬಯಲಬ್ರಹ್ಮವ ನುಡಿವ ತರ್ಕಿಗಳ ಕೂಡೆ ತರ್ಕವ ಮಾಡಿ,
ಶರಣನೆಂದು ಸುಳಿದಡೆ ಪಂಚಮಹಾಪಾತಕ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೮೫ ||

೮೮೬

ಆರು ಬೀಜವ ಮೀರಿ ತೋರಿತ್ತು ನೋಡಾ ಒಂದು ಬೀಜ,
ಆ ಬೀಜ ಸಪ್ತಸಾಗರವ ನುಂಗಿತ್ತು,
ಅರವತ್ತಾರುಕೋಟಿ ನದಿಗಳ ನುಂಗಿತ್ತು ನೋಡಾ.
ಹದಿನಾಲ್ಕು ಕುದುರೆಯ ನುಂಗಿತ್ತು,
ಮೂರು ಕೋಣನ ನುಂಗಿತ್ತು ನೋಡಾ.
ಎಂಟಾನೆಯ ನುಂಗಿ, ಆ ಬೀಜ ಆರಾರು ಈರಾರು ಶಾಖೆಗಳಾಗಿ
ಅಮೃತಫಲರಸತುಂಬಿ ತೊಟ್ಟಿಟ್ಟುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೮೬ ||

೮೮೭

ಬಣ್ಣವಿಲ್ಲದ ಪಕ್ಷಿ ಬಯಲ ತತ್ತಿಯನಿಕ್ಕಿತ್ತು ನೋಡಾ.
ಆ ಬಯಲ ತತ್ತಿಗೆ ತುಪ್ಪುಳು ಬಾರದೆ
ಹದಿನಾಲ್ಕು ಗಿಣಿಗಳ ಕೂಡಿಯಾಡಿತ್ತು,
ಆ ಬಯಲ ತತ್ತಿಗೆ ಪಕ್ಕ ಬಂದು ಹಾರಿ
ನಮ್ಮ ಅಪ್ರಮಾಣಕೂಡಲಸಂಗನ ಕೂಡಿತ್ತು. || ೮೮೭ ||

೮೮೮

ಅಂಧಕಾರವಾಗಿಹ ಕತ್ತಲೆಯೊಳು ಮಹಾಮೇರುವಿಹುದು ನೋಡಾ.
ಆ ಮಹಾಮೇರುವ ಉದಯಾಸ್ತಮಯವಾಗಿಹ
ಚಂದ್ರಸೂರ್ಯರು ತಿರುಗುವರು.
ಆ ಚಂದ್ರಸೂರ್ಯರ ದೆಸೆಯಿಂದ ಇರುಳು ಹಗಲೆಂಬ ವೃಕ್ಷ ಹುಟ್ಟಿ,
ಆ ವೃಕ್ಷಕ್ಕೆ ಅರವತ್ತು ಶಾಖೆಗಳಾದವು ನೋಡಾ.
ಒಂದೊಂದು ಶಾಖೆಗಳಲ್ಲಿ ಮುನ್ನೂರರವತ್ತು ಮುನ್ನೂರರವತ್ತು
ಗೂಬೆಗಳು ಕುಳಿತು ಕೂಗುತ್ತಿಹವು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೮೮ ॥

೮೮೯

ಅಂದು ಮೊದಲಾಗಿ ಇಂದು ಕಡೆಯಾಗಿ
ಆ ಪರಾಪರದಲ್ಲಿ ಲೀಯವಾದ ಶರಣರಿಗೆ
ಅಂಥಾದಿಂಥಾದೆಂದು ಹೇಳಬಾರದು.
ಉಪಮಾತೀತವ ಹೇಂಗಿದ್ದುದೆಂದಡೆ, ಹಾಂಗೆ ಇದ್ದುದು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೮೮೯ ॥

೮೯೦

ರೂಪಿಲ್ಲದ ಪುಸ್ತಕದ ಬರಹವ
ಕಣ್ಣಿಲ್ಲದ ಕುರುಡನು ಕಂಡು ತೋರಿದನು,
ಬಾಯಿಲ್ಲದ ಮೂಗನು ಓದಿದನು,
ಕಿವಿಯಿಲ್ಲದ ಕಿವುಡ ಕೇಳಿ ಪರಿಣಾಮಿಸಿದ,
ತಲೆಯಿಲ್ಲದ ಮೋಟನು ನಿಶ್ಚೈಯಿಸಿದನೆಂದು
ನೆಲೆಯಿಲ್ಲದವ ಹೇಳಿದನು ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೯೦ ॥

೮೯೧

ಓಂಕಾರವೆಂಬ ಬಾವಿಯೊಳಗೆ ಒಂದು ಮರ ಹುಟ್ಟಿತ್ತು ನೋಡಾ.
ಆ ಮರಕ್ಕೆ ಮೂರೇಳು ಸಾವಿರದರುನೂರು ಕೊಂಬೆಗಳಾದವು ನೋಡಾ.
ಏಳುಸಾವಿರದಿನ್ನೂರು ಕೊಂಬೆ ಮುರಿದು ಬಿದ್ದವು ನೋಡಾ.
ಪೃಥ್ವಿ ಜಲದಲ್ಲಿ ಮುದ್ದೆಯಾಯಿತ್ತು;
ಆ ಹಣ್ಣ ಸವಿಯಬಲ್ಲಾತನು ಮಹಾಶರಣ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೮೯೧ ॥

೮೯೨

ತತ್ವಮೂರರಾದಿಯನರಿದು,
ಮೂರರೊಳಗೆ ಮೂವತ್ತಾರುತತ್ತ್ವವ ಭೇದಿಸಿ,

ಆ ಮೂವತ್ತಾರುತತ್ತ್ವದೊಳಗೆ
ತ್ವಂಪದ ತತ್ಪದ ಅಸಿಪದಂಗಳನರಿದು,
ಅಕಾರ ಉಕಾರ ಮಕಾರವ ತಿಳಿದು,
ತ್ವಂಪದ ತತ್ಪದ ಅಸಿಪದಂಗಳ
ಅಕಾರ ಉಕಾರ ಮಕಾರದಲ್ಲಿ ಅಡಗಿಸಿ,
ಆ ಪ್ರಣವದ ಶಿರೋಮಧ್ಯದಲ್ಲಿಹುದೆ ಜ್ಯೋತಿರ್ಮಯಲಿಂಗ.
ಆ ಜ್ಯೋತಿರ್ಮಯಲಿಂಗವನರಿದ ಶರಣ
ಜ್ಞಾನಿಯೆಂಬೆನೆ ಜ್ಞಾನಿಯಲ್ಲ, ಅಜ್ಞಾನಿಯೆಂಬೆನೆ ಅದಕ್ಕೆ ಮುನ್ನವೆ ಅಲ್ಲ,
ದ್ವೈತಿಯೆಂಬೆನೆ ದ್ವೈತಿಯಲ್ಲ, ಅದ್ವೈತಿಯೆಂಬೆನೆ ಅದ್ವೈತಿಯಲ್ಲ,
ಶೂನ್ಯನೆಂಬೆನೆ ಶೂನ್ಯನಲ್ಲ, ನಿಶ್ಶೂನ್ಯನೆಂಬೆನೆ ನಿಶ್ಶೂನ್ಯನಲ್ಲ;
ನಿಮ್ಮ ಶರಣನ ನಿಲವ ನೀನೆ ಬಲ್ಲೆಯಯ್ಯಾ
ಅಪ್ರಮಾಣಕೂಡಲಸಂಗಮದೇವಾ. || ೮೯೨ ||

೮೯೩

ತ್ರಿಪುರಂಗಳ ಸಂಹಾರವ ಮಾಡಿ,
ಉದಯಕ್ಕೆ ಹುಟ್ಟಿದಾತನೆ ದಿವ್ಯಯೋಗಿ.
ಅಸ್ತಮಾನಕ್ಕೆ ಅಳಿದಾತನೆ ಪರಮಯೋಗಿ.
ಈ ಎರಡರ ಭೇದವನರಿದು ಅನುಭಾವಿಸಬಲ್ಲಾತನೆ
ಪರಮಾನಂದಯೋಗಿ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೮೯೩ ||

**ಪರಿಶಿಷ್ಟ : ಎರಡು**

೮೯೪

ಸಕಲಾಗಮ ಶಿಖಾಮಣಿಯನು,
ಅಪ್ರಮಾಣ ಕೂಡಲಸಂಗಯ್ಯನ ನಿರೂಪದಿಂದ
ಪರ ಮೊದಲಾಗಿ ಬ್ರಹ್ಮ ಕಡೆಯಾಗಿ ಸೃಷ್ಟಿ ಮಾರ್ಗವ ನಿರೂಪಿಸಿಹೆನು,
ಚಿತ್ತೈಸುವದು ಶರಣಜನಂಗಳು.
ಪರಾಪರವಾಗಿಹ ಪರಬ್ರಹ್ಮ ಲೋಕಾದಿ ಲೋಕಗಳ ಸೃಜಿಸಬೇಕೆಂದು
ನೆನಹುಮಾತ್ರದಲ್ಲಿಯೇ ಆ ಪರಾಪರವಾಗಿಹ ಪರಬ್ರಹ್ಮದಲ್ಲಿ
ಪರ ಉತ್ಪತ್ಯವಾಯಿತ್ತು, ಆ ಪರದಲ್ಲಿ ಶಿವನುತ್ಪತ್ಯವಾದನು,
ಆ ಶಿವನಲ್ಲಿ ಶಕ್ತಿ ಉತ್ಪತ್ಯವಾದಳು, ಆ ಶಕ್ತಿಯಲ್ಲಿ ಬಿಂದು ಉತ್ಪತ್ಯವಾಯಿತ್ತು,
ಆ ಬಿಂದುವಿನಲ್ಲಿ ನಾದ ಉತ್ಪತ್ಯವಾಯಿತ್ತು,
ಆ ನಾದದಲ್ಲಿ ಸದಾಶಿವನುತ್ಪತ್ಯವಾದನು.
ಆ ಸದಾಶಿವನ ಗೌಪ್ಯವಕ್ತ್ರದಲ್ಲಿ ಆತ್ಮನುತ್ಪತ್ಯವಾದನು.
ಆ ಸದಾಶಿವನ ಈಶಾನವಕ್ತ್ರದಲ್ಲಿ ಆಕಾಶ ಉತ್ಪತ್ಯವಾಯಿತ್ತು,

ಆ ಸದಾಶಿವನ ತತ್ಪುರುಷವಕ್ತ್ರದಲ್ಲಿ ವಾಯು ಉತ್ಪತ್ಯವಾಯಿತ್ತು.
ಆ ಸದಾಶಿವನ ಅಘೋರಮುಖದಲ್ಲಿ ಅಗ್ನಿ ಉತ್ಪತ್ಯವಾಯಿತ್ತು.
ಆ ಸದಾಶಿವನ ವಾಮದೇವವಕ್ತ್ರದಲ್ಲಿ ಅಪ್ಪು ಉತ್ಪತ್ಯವಾಯಿತ್ತು.
ಆ ಸದಾಶಿವನ ಸದ್ಯೋಜಾತವಕ್ತ್ರದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು.
ಆ ಸದಾಶಿವನ ಹೃದಯದಲ್ಲಿ ಚಂದ್ರನುತ್ಪತ್ತಿಯಾದನು.
ಆ ಸದಾಶಿವನ ಚಕ್ಷುವಿನಲ್ಲಿ ಸೂರ್ಯನುತ್ಪತ್ತಿಯಾದನು.
ಆ ಸದಾಶಿವನು ಆಕಾಶಕ್ಕೆ ಅಧಿದೇವತೆಯಾಗಿಹನು.
ಆ ಸದಾಶಿವನಲ್ಲಿ ಈಶ್ವರತತ್ವ ಉತ್ಪತ್ಯವಾಗಿ
ವಾಯುವಿಗಧಿದೇವತೆಯಾಗಿಹನು.
ಆ ಈಶ್ವರತತ್ವದಲ್ಲಿ ರುದ್ರನುತ್ಪತ್ತಿಯಾಗಿ ಅಗ್ನಿಗಧಿದೇವತೆಯಾಗಿಹನು.
ಆ ರುದ್ರನಲ್ಲಿ ವಿಷ್ಣು ಉತ್ಪತ್ತಿಯಾಗಿ ಅಪ್ಪುವಿಗಧಿದೇವತೆಯಾಗಿಹನು.
ಆ ವಿಷ್ಣುವಿನಲ್ಲಿ ಬ್ರಹ್ಮನುತ್ಪತ್ತಿಯಾಗಿ ಪೃಥ್ವಿಗಧಿದೇವತೆಯಾಗಿಹನು.
ಆ ಬ್ರಹ್ಮನಲ್ಲಿ ಸರ್ವಜಗಂಗಳು ಉತ್ಪತ್ಯವಾಯಿತ್ತು ನೋಡಾ.
ಅಪ್ರಮಾಣಕೂಡಲಸಂಗಮದೇವಾ. ॥ ೮೯೪ ॥

೮೯೫

ಅವಾಚ್ಯತತ್ತ್ವ ತಲೆದೋರದಂದು,
ಕಲಾ ತತ್ತ್ವ ತಲೆದೋರದಂದು, ಅನಾದಿತತ್ತ್ವ ತಲೆದೋರದಂದು,
ಆದಿತತ್ತ್ವ ತಲೆದೋರದಂದು,
ಚಿನ್ನಾದ, ಚಿದ್ಬಿಂದು, ಚಿತ್ಕಳೆ ತಲೆದೋರದಂದು,
ನಾದ ಸುನಾದ ತಲೆದೋರದಂದು,
ಮಹಾನಾದ ಗುಹ್ಯನಾದ ತಲೆದೋರದಂದು,
ಇವೇನು ಏನೂ ಎನಲಿಲ್ಲದಂದು,
ನಿರಂಜನಾತೀತನಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೮೯೫ ॥

೮೯೬

ನಿರಂಜನಪ್ರಣವ ಅವಾಚ್ಯಪ್ರಣವ ಉತ್ಪತ್ಯವಾಗದತ್ತತ್ತ,
ಕಲಾಪ್ರಣವ ಅನಾದಿಪ್ರಣವ ಉತ್ಪತ್ಯವಾಗದತ್ತತ್ತ,
ಅಕಾರ ಉಕಾರ ಮಕಾರವೆಂಬ ಬೀಜ ಉತ್ಪತ್ಯವಾಗದತ್ತತ್ತ,
ನಾದ ಬಿಂದು ಕಳೆ ಉತ್ಪತ್ಯವಾಗದತ್ತತ್ತ,
ಪ್ರಕೃತಿ ಪ್ರಾಣ ಓಂಕಾರ ಉತ್ಪತ್ಯವಾಗದತ್ತತ್ತ,
ಲೋಕಾದಿಲೋಕಂಗಳೇನೂ ಉತ್ಪತ್ಯವಾಗದತ್ತತ್ತ,
ನಿರಂಜನಪ್ರಣವಾತೀತನಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೮೯೬ ॥

೮೯೭

ಸಕಲತತ್ವವಿಲ್ಲದಂದು, ನಿಷ್ಕಲತತ್ವವಿಲ್ಲದಂದು,
ಸಕಲನಿಷ್ಕಲತತ್ವವಿಲ್ಲದಂದು, ಪರಶಿವತತ್ವವಿಲ್ಲದಂದು,
ನಿರಂಜನತತ್ವವಿಲ್ಲದಂದು, ಈ ತತ್ವಗಳೇನೂ ಎನಲಿಲ್ಲದಂದು,
ನಿರಂಜನಾತೀತನಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೮೯೭ ||

೮೯೮

ಏನು ಏನೂ ಎನಲಿಲ್ಲದಂದು ಮಹಾಘನ ನಿರಂಜನಾತೀತವಾಗಿಹ ವಸ್ತು
ಲೋಕಾದಿಲೋಕಂಗಳ ಸೃಜಿಸಬೇಕೆಂದು ನೆನಹುಮಾತ್ರದಲ್ಲಿಯೇ
ನಿರಂಜನಪ್ರಣವ ಉತ್ಪತ್ಯವಾಯಿತ್ತು.
ಇನ್ನು ನಿರಂಜನಪ್ರಣವಸ್ಥಲದ ವಚನ ಅದೆಂತೆಂದಡೆ :
ಮಂತ್ರಾಧ್ವ ಪದಾಧ್ವ ಜನನಕ್ಕೆ ಬಾರದಂದು,
ವರ್ಣಾಧ್ವ ಭುವನಾಧ್ವ ಜನನಕ್ಕೆ ಬಾರದಂದು,
ತತ್ತ್ವಾಧ್ವ ಕಲಾಧ್ವ ಜನನಕ್ಕೆ ಬಾರದಂದು,
ನಿರಂಜನಪ್ರಣವನಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮ ದೇವನು. || ೮೯೮ ||

೮೯೯

ನಿರಾಳಜಾಗ್ರ ನಿರಾಳಸ್ವಪ್ನವಿಲ್ಲದತತ್ತ್ತ,
ನಿರಾಳಸುಷುಪ್ತಿ ನಿರಾಳತೂರ್ಯವಿಲ್ಲದತತ್ತ್ತ,
ನಿರಾಳವ್ಯೋಮ ನಿರಾಳವ್ಯೋಮಾತೀತವಿಲ್ಲದತತ್ತ್ತ,
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೮೯೯ ||

೯೦೦

ನಿರ್ಮಲಜಾಗ್ರ ನಿರ್ಮಲಸ್ವಪ್ನವಿಲ್ಲದಂದು,
ನಿರ್ಮಲಸುಷುಪ್ತಿ ನಿರ್ಮಲತೂರ್ಯವಿಲ್ಲದಂದು,
ನಿರ್ಮಲವ್ಯೋಮ ನಿರ್ಮಲವ್ಯೋಮಾತೀತವಿಲ್ಲದಂದು
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೯೦೦ ||

೯೦೧

ಶಿವಜಾಗ್ರ ಶಿವಸ್ವಪ್ನವಿಲ್ಲದಂದು,
ಶಿವಸುಷುಪ್ತಿ ಶಿವತೂರ್ಯವಿಲ್ಲದಂದು,
ಶಿವವ್ಯೋಮ ಶಿವವ್ಯೋಮಾತೀತವಿಲ್ಲದಂದು,
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. || ೯೦೧ ||

೯೦೨

ಜ್ಞಾನಜಾಗ್ರ ಜ್ಞಾನಸ್ವಪ್ನವಿಲ್ಲದ ಮುನ್ನ,
ಜ್ಞಾನಸುಷುಪ್ತಿ ಜ್ಞಾನತೂರ್ಯವಿಲ್ಲದ ಮುನ್ನ,
ಜ್ಞಾನವ್ಯೋಮ ಜ್ಞಾನವ್ಯೋಮಾತೀತವಿಲ್ಲದ ಮುನ್ನ,
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೯೦೨ ॥

೯೦೩

ಶಿವತತ್ವವಿಲ್ಲದಂದು, ಸದಾಶಿವತತ್ವವಿಲ್ಲದಂದು,
ಮಹೇಶ್ವರತತ್ವವಿಲ್ಲದಂದು, ಕೇವಲತತ್ವವಿಲ್ಲದಂದು,
ಸಕಲತತ್ವವಿಲ್ಲದಂದು, ಶುದ್ಧತತ್ವವಿಲ್ಲದಂದು,
ಈ ತತ್ವಂಗಳೇನು ಏನೂ ಎನಲಿಲ್ಲದಂದು
ನಿರಂಜನಪ್ರಣವವಾಗಿದ್ದನಯ್ಯ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೯೦೩ ॥

೯೦೪

ನಿರಂಜನಪ್ರಣವದ ನೆನಹುಮಾತ್ರದಿಂದ
ಅವಾಚ್ಯಪ್ರಣವ ಉತ್ಪತ್ಯವಾಯಿತ್ತು,
ಇನ್ನು ಅವಾಚ್ಯಪ್ರಣವದ ನಿರ್ದೇಶಸ್ಥಲದ ವಚನವೆಂತೆಂದಡೆ :
ನಿರಾಳಶಾಂತ್ಯತೀತೋತ್ತರಕಲೆ, ನಿರಾಳ ಶಾಂತ್ಯತೀತ ಕಲೆಗಳಿಲ್ಲದಂದು,
ನಿರಾಳಶಾಂತಿಕಲೆ ನಿರಾಳವಿದ್ಯಾಕಲೆಗಳಿಲ್ಲದಂದು,
ನಿರಾಳಪ್ರತಿಷ್ಠಾಕಲೆ ನಿರಾಳನಿವೃತ್ತಿಕಲೆಗಳಿಲ್ಲದಂದು,
ನಿರಾಳಮಹಾಸಾದಾಖ್ಯ ನಿರಾಳಮೂರ್ತಿಸಾದಾಖ್ಯವಿಲ್ಲದಂದು,
ನಿರಾಳಕರ್ತೃಸಾದಾಖ್ಯ ನಿರಾಳಕರ್ಮಸಾದಾಖ್ಯವಿಲ್ಲದಂದು,
ಅವಾಚ್ಯ ಪ್ರಣವವಾಗಿದ್ದನು ನೋಡಾ ಇಲ್ಲದಂತೆ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೯೦೪ ॥

೯೦೫

ಇನ್ನು ಸಹಸ್ರಾಕ್ಷರ ತ್ರಯಾಕ್ಷರ ಏಕಾಕ್ಷರ ನಿವೃತ್ತಿ ಅದೆಂತೆಂದಡೆ :
ಸಹಸ್ರಾಕ್ಷರ ತ್ರಯಾಕ್ಷರದಲ್ಲಿ ಅಡಗಿತ್ತು.
ಆ ತ್ರಯಾಕ್ಷರ ಏಕಾಕ್ಷರದಲ್ಲಿ ಅಡಗಿತ್ತು,
ಆ ಏಕಾಕ್ಷರ 'ನಿಃಶಬ್ದಂ ಬ್ರಹ್ಮ ಉಚ್ಯತೇ'–ಎಂಬ
ಪರಬ್ರಹ್ಮದಲ್ಲಿ ಅಡಗಿತ್ತು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೦೫ ॥

೯೦೬

ಇನ್ನು ಅಂತರಾತ್ಮ ಪರಮಾತ್ಮನ ನಿವೃತ್ತಿ ಅದೆಂತೆಂದಡೆ :
ಅಂತರಾತ್ಮನೆಂಬ ಮಹಾಗುರು
ಪರಮಾತ್ಮನೆಂಬ ಮಹಾಲಿಂಗದಲ್ಲಿ ಅಡಗಿತ್ತು,
ಆ ಪರಮಾತ್ಮನೆಂಬ ಮಹಾಲಿಂಗವು
ಸರ್ವಾತ್ಮನೆಂಬ ಮಹಾಜಂಗಮದಲ್ಲಿ ಅಡಗಿತ್ತು,
ಆ ಸರ್ವಾತ್ಮನೆಂಬ ಮಹಾಜಂಗಮ ತಾನೆ ನಿತ್ಯ ನಿರಂಜನ
ನಿರಾಮಯ ನಿರಾಮಯಾತೀತನಾಗಿದ್ದನು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೦೬ ॥

೯೦೭

ಏನು ಏನೂ ಎನಲಿಲ್ಲದ ಮಹಾಘನ
ನಿರಂಜನಾತೀತದ ನೆನಹುಮಾತ್ರದಲ್ಲಿಯೆ
ನವಪದ್ಮ ನವಶಕ್ತಿಗಳುತ್ಪತ್ಯ ಲಯವು.
ನಿಶ್ಶಬ್ದವೆಂಬ ಪರಬ್ರಹ್ಮದ ನೆನಹುಮಾತ್ರದಲ್ಲಿಯೆ
ಏಕಾಕ್ಷರ ತ್ರಯಾಕ್ಷರ ಸಹಸ್ರಾಕ್ಷರ ಅಷ್ಟನಾದ ಉತ್ಪತ್ಯ ಲಯವು.
ದಶಚಕ್ರ ಮೊದಲಾಗಿ, ಚತುರ್ವೇದ ಗಾಯತ್ರಿ ಅಜಪೆ ಕಡೆಯಾಗಿ,
ಸಮಸ್ತವು ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರಪ್ರಣವದಲ್ಲಿ ಉತ್ಪತ್ಯ ಲಯವೆಂದು ಬೋಧಿಸಿ
ಕೃತಾರ್ಥನ ಮಾಡಿದ ಮಹಾಗುರುವಿನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು ಕಾಣಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೦೭ ॥

೯೦೮

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮನು ಈ ಪ್ರಕಾರವು
ಅತ್ಯಂತ ಗೋಪ್ಯ, ಅತ್ಯಂತ ಸೂಕ್ಷ್ಮ, ಅತ್ಯಂತ ರಹಸ್ಯವಾಗಿಹುದು.
ಈ ಆರನು ಗುರುಮುಖದಲಿ ಕೇಳಿಕೊಂಬುದು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೦೮ ॥

೯೦೯

ಇನ್ನು ಷಡ್ವಿಧಲಿಂಗ ಅದೆಂತೆಂದಡೆ :
ಪೃಥ್ವಿಯಲ್ಲಿ ಆಚಾರಲಿಂಗವಿಹುದು, ಅಪ್ಪುವಿನಲ್ಲಿ ಗುರುಲಿಂಗವಿಹುದು ;
ತೇಜದಲ್ಲಿ ಶಿವಲಿಂಗವಿಹುದು, ವಾಯುವಿನಲ್ಲಿ ಜಂಗಮಲಿಂಗವಿಹುದು,
ಆಕಾಶದಲ್ಲಿ ಪ್ರಸಾದಲಿಂಗವಿಹುದು, ಆತ್ಮನಲ್ಲಿ ಮಹಾಲಿಂಗವಿಹುದು ನೋಡಾ.
ಶಿವಲಿಂಗ ಸೂತ್ರೇ ಸಾಕ್ಷಿ-
''ಆಚಾರಂ ಪಥ್ವೀಭೂತೇ ಚ ಆಪಶ್ಚ ಗುರುಲಿಂಗಯೋಃ ।

ತೇಜಂ ಚ ಶಿವಲಿಂಗಂ ಚ ವಾಯೌಚ ಚರಲಿಂಗಕಂ ||
ಪ್ರಸಾದಲಿಂಗೇತ್ವಾಕಾಶಂ ಆತ್ಮಾ ಚ ಮಹಾಮೇವ ಚ |
ಇತಿ ಲಿಂಗಸ್ಥಲಂ ಜ್ಞಾತ್ವಾ ದುರ್ಲಭಂ ಚ ವರಾನನೇ ||''
ಎಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. || ೯೦೯ ||

೯೧೦

ವೇದಾಂತತತ್ವವೆಂಬ ಅಷ್ಟವಿಂಶತಿತತ್ವವನೊಳಕೊಂಡು
ಮಾಹೇಶ್ವರತತ್ವ, ಸದಾಶಿವತತ್ವ, ಶಿವತತ್ವವೆಂಬ
ಏಕತ್ರಿಂಶತತ್ವವನೊಳಕೊಂಡು
ತ್ವಂಪದ ತತ್‌ಪದ ಅಸಿಪದವೆಂಬ
ಮೂವತ್ತಾರುತತ್ವವನೊಳಕೊಂಡು ವೇದಾಂತಿಯ ಮನವಾರ್ತೆ.
ತ್ವಂಪದ ತತ್‌ಪದ ಅಸಿಪದವೆಂಬ ತ್ರಿವಿಧ ಪದಂಗಳನೊಳಕೊಂಡು,
ತೊಂಬತ್ತಾರುತತ್ವವನೊಳಕೊಂಡು,
ಷಡಂಗವನೊಳಕೊಂಡು, ಷಟ್‌ಶಕ್ತಿಗಳನೊಳಕೊಂಡು,
ಸ್ವರಾಕ್ಷರ ಕಲಾಕ್ಷರ ಏಕಾಕ್ಷರವನೊಳಕೊಂಡು,
ಅನೇಕಕೋಟಿ ವೇದಂಗಳನೊಳಕೊಂಡು,
ಅನೇಕಕೋಟಿ ಚಂದ್ರಾದಿತ್ಯರನೊಳಕೊಂಡು,
ತ್ರೈಲೋಕ್ಯ ಸಚರಾಚರಂಗಳನೊಳಕೊಂಡು,
ತಿರುತಿರುಗಿ ಬಹ ಅನೇಕಕೋಟಿ ಕಲ್ಪಾಂತರವನೊಳಕೊಂಡು,
ಷಟ್‌ಸ್ಥಲಬ್ರಹ್ಮವ ಗರ್ಭೀಕರಿಸಿಕೊಂಡು,
ಆದಿ ಮಧ್ಯ ಅವಸಾನವಿಲ್ಲದೆ,
ಅಖಂಡಮಹಾಜ್ಯೋತಿರ್ಮಯಲಿಂಗವಾಗಿದ್ದುದು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೧೦ ||

೯೧೧

ಇಂದ್ರ ಇಂದ್ರರೆಂಬುವರನೇಕ ಕೋಟಿ
ಲಿಂಗಗರ್ಭದಲ್ಲಿ ಲಯವಾಗಲು,
ಮೂವತ್ತುಮೂರುಕೋಟಿ ದೇವರ್ಕಳಿಗೆ ಒಂದು ಸಂವತ್ಸರವಾಯಿತ್ತು.
ಅಂಥ ಮೂವತ್ತುಮೂರುಕೋಟಿ ದೇವರ್ಕಳು
ಅನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಬ್ರಹ್ಮನಿಗೊಂದು ದಿನವಾಯಿತ್ತು.
ಅಂಥ ಬ್ರಹ್ಮಾದಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಮೀನಜನೆಂಬ ಮುನಿಗೊಂದು ಮೀನ ಸಡಿಲಿತ್ತು,
ಅಂಥ ಮೀನಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು

ರೋಮಜನೆಂಬ ಮುನಿಗೊಂದು ರೋಮ ಸಡಿಲಿತ್ತು.
ಅಂಥ ರೋಮಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಡೊಂಕಜನೆಂಬ ಮುನಿಗೊಂದು ಡೊಂಕು ಸಡಿಲಿತ್ತು.
ಅಂಥ ಡೊಂಕಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ನೇತ್ರಜನೆಂಬ ಮುನಿಗೊಂದು ನೇತ್ರ ಸಡಿಲಿತ್ತು.
ಅಂಥ ನೇತ್ರಜನೆಂಬ ಮುನಿಗಳನೇಕ ಕೋಟಿ ಲಿಂಗಗರ್ಭದಲ್ಲಿ ಲಯವಾಗಲು
[ಚಿ]ಪ್ಪಜನೆಂಬ ಮುನಿಗೊಂದು ಚಿಪ್ಪು ಸಡಿಲಿತ್ತು.
ಅಂಥ [ಚಿ]ಪ್ಪಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಪಾದಜನೆಂಬ ಮುನಿಗೊಂದು ಪಾದ ಸಡಿಲಿತ್ತು.
ಅಂಥ ಪಾದಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಚಿಟುಕನೆಂಬ ಮುನಿಗೊಂದು ಚಿಟುಕು ಸಡಿಲಿತ್ತು.
ಅಂಥ ಚಿಟುಕಜನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಸಾರಂಗನೆಂಬ ಮುನಿಗೊಂದು ರೇಣು ಕುಂದಿತ್ತು.
ಅಂಥ ಸಾರಂಗನೆಂಬ ಮುನಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ವಿಷ್ಣುವಿಗೊಂದು ದಿನವಾಯಿತ್ತು.
ಅಂಥ ವಿಷ್ಣುಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ರುದ್ರನ ಕಣ್ಣೆವೆ ಹಳಚಿತ್ತು.
ಅಂಥ ರುದ್ರಾದಿಗಳನೇಕಕೋಟಿ ಲಿಂಗಗರ್ಭದಲ್ಲಿ ಲಯವಾಗಲು
ಅತಲ ಸುತಲ ವಿತಲ ತಲಾತಲ ಮಹಾತಲ ರಸಾತಲ ಪಾತಾಲ,
ಭೂಲೋಕ ಭುವರ್ಲೋಕ ಮಹರ್ಲೋಕ ಜನರ್ಲೋಕ
ತಪೋಲೋಕ ಸತ್ಯಲೋಕ ಗೋಲೋಕವೆಂಬ
ಹದಿನಾಲ್ಕು ಲೋಕವು ಲಿಂಗಗರ್ಭದಲ್ಲಿ ಲಯವಾಗಲು
ಇಂತೀ ಹದಿನಾಲ್ಕು ಲೋಕವನೊಳಕೊಂಡು
ಅತ್ತತ್ತವಾಗಿಹ ಅಖಂಡಮಹಾಜ್ಯೋತಿರ್ಮಯ
ಲಿಂಗದೊಳಗಿದ್ದವರೆಲ್ಲರು ಲಿಂಗವನರಿಯದೆ ಸತ್ತರು.
ಲೋಕದೊಳು ಸುಳಿವ ವೇಷಧಾರಿಗಳಿಗೆಂತು ಸಾಧ್ಯವಹುದು ನೋಡಾ.
ಸಾಕ್ಷಿ :
''ಆಕಾಶಗತಲಿಂಗಾನಾಂ ಪೃಥ್ವೀಗತ ಪೀಠಯಃ ।
ಆಲಯಂ ಋಷಿದೇವಾನಾಂ ಲಯನಾಂ ಲಿಂಗಮುಚ್ಯತೇ ॥
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ ॥''
ಎಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ. ॥ ೯೧೧ ॥

೯೧೨

ನಿರಂಜನ ಪ್ರಣವದುತ್ಪತ್ಯ :
ಏನೂ ಏನೂ ಎನಲಿಲ್ಲದ ಮಹಾಘನ ನಿರಂಜನಾತೀತದ
ನೆನಹು ಮಾತ್ರದಲ್ಲಿ ನಿರಂಜನಪ್ರಣವ ಉತ್ಪತ್ಯವಾಯಿತ್ತು.
ಆ ನಿರಂಜನಪ್ರಣವದ ನೆನಹುಮಾತ್ರದಲ್ಲಿ
ಕಲಾಪ್ರಣವ ಉತ್ಪತ್ಯವಾಯಿತ್ತು.
ಆ ಕಲಾಪ್ರಣವದ ನೆನಹುಮಾತ್ರದಲ್ಲಿ
ಅನಾದಿಪ್ರಣವ ಉತ್ಪತ್ಯವಾಯಿತ್ತು.
ಆ ಅನಾದಿಪ್ರಣವದ ನೆನಹುಮಾತ್ರದಲ್ಲಿ
ಅಕಾರ ಉಕಾರ ಮಕಾರ ಉತ್ಪತ್ಯವಾಯಿತ್ತು.
ಆ ಅಕಾರ ಉಕಾರ ಮಕಾರದ ರೂಪಾಂಗಭೇದದಿಂದ
ಒಂಬತ್ತು ಪ್ರಣವ ಉತ್ಪತ್ಯವಾಯಿತ್ತು.
ಅಕಾರ ಉಕಾರ ಮಕಾರ ಈ ಮೂರು ಕೂಡಿ
ಏಕಾರ್ಥವಾಗಿಹ ಪ್ರಣವ ಶಿವಸಂಬಂಧವಾಗಿಹವು.
ಆ ಅಕಾರ ಉಕಾರ ಮಕಾರ ಈ ಮೂರು ಕೂಡಿ
ಏಕಾರ್ಥವಾಗಿಹ ಪ್ರಣವ ಶಿವಶಕ್ತಿರಹಿತವಾಗಿಹುದು.
ಆ ಶಿವಸಂಬಂಧವಾಗಿಹ ಅಖಂಡಗೋಳಕಾಕಾರಪ್ರಣವದಲ್ಲಿ
ಜ್ಯೋತಿಸ್ವರೂಪಪ್ರಣವವೆಂದು, ದರ್ಪಣಾಕಾರಪ್ರಣವವೆಂದು,
ಕುಂಡಲಾಕಾರಪ್ರಣವವೆಂದು, ದಂಡಕಸ್ವರೂಪಪ್ರಣವವೆಂದು
ಅರ್ಧಚಂದ್ರಕಪ್ರಣವವೆಂದು, ತಾರಕಕಾಸ್ವರೂಪಪ್ರಣವವೆಂದು
ಆರುಪ್ರಕಾರವಾಗಿಹುದು.
ಶಕ್ತಿಸಂಬಂಧವಾದ ಪರಂಜ್ಯೋತಿಸ್ವರೂಪವಾಗಿಹ ಪರಮಪ್ರಣವದಲ್ಲಿ
ತಾರಕಸ್ವರೂಪಪ್ರಣವವೆಂದು, ದಂಡಕಸ್ವರೂಪಪ್ರಣವವೆಂದು
ಕುಂಡಲಾಕಾರಪ್ರಣವವೆಂದು ಅರ್ಧಚಂದ್ರಕಪ್ರಣವವೆಂದು
ದರ್ಪಣಾಕಾರಪ್ರಣವವೆಂದು ಜ್ಯೋತಿಸ್ವರೂಪಪ್ರಣವವೆಂದು
ಆರು ಪ್ರಕಾರವಾಗಿಹುದು.
ಶಿವಶಕ್ತಿರಹಿತವಾಗಿಹ ಅಖಂಡಮಹಾಜ್ಯೋತಿಪ್ರಣವದಲ್ಲಿ
ಮೂರ್ತಿಬ್ರಹ್ಮಪ್ರಣವವೆಂದು, ಪಿಂಡಬ್ರಹ್ಮಪ್ರಣವವೆಂದು,
ಕಲಾಬ್ರಹ್ಮಪ್ರಣವವೆಂದು, ಬ್ರಹ್ಮಾನಂದಬ್ರಹ್ಮಪ್ರಣವವೆಂದು,
ವಿಜ್ಞಾನಬ್ರಹ್ಮಪ್ರಣವವೆಂದು ಪರಬ್ರಹ್ಮಪ್ರಣವವೆಂದು
ಈ ಆರು ಪ್ರಣವಂಗಳು ಷಟ್‌ಸ್ಥಲಬ್ರಹ್ಮ ತಾನೆ ಷಷ್ಠಪ್ರಣವವಾಗಿಹುದೆಂದು
ನಿರಾಮಯಾತೀತಾಗಮದಲ್ಲಿ ಪ್ರಸಿದ್ಧವಾಗಿ ಹೇಳಿಹುದು.
ಇನ್ನು ಶಿವಸಂಬಂಧವಾದ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರಪ್ರಣವದ ದರ್ಪಣಾಕಾರದ ಪ್ರಣವದಲ್ಲಿ

ಈಶಾನ್ಯಮುಖವು ಉತ್ಪತ್ಯವಾಯಿತ್ತು.
ಆ ಪ್ರಣವದ ಅರ್ಧಚಂದ್ರಕಪ್ರಣವದಲ್ಲಿ
ತತ್ಪುರುಷಮುಖವು ಉತ್ಪತ್ಯವಾಯಿತ್ತು.
ಆ ಪ್ರಣವದ ಕುಂಡಲಾಕಾರಪ್ರಣವದಲ್ಲಿ
ಅಘೋರಮುಖವು ಉತ್ಪತ್ಯವಾಯಿತ್ತು.
ಆ ಪ್ರಣವದ ದಂಡಕಸ್ವರೂಪಪ್ರಣವದಲ್ಲಿ
ವಾಮದೇವಮುಖವು ಉತ್ಪತ್ಯವಾಯಿತ್ತು.
ಆ ಪ್ರಣವದ ತಾರಕಸ್ವರೂಪಪ್ರಣವದಲ್ಲಿ
ಸದ್ಯೋಜಾತಮುಖವು ಉತ್ಪತ್ಯವಾಯಿತ್ತು.
ಈಶಾನ್ಯಮುಖದಲ್ಲಿ ಸಾಯುಜ್ಯಪ್ರಣವ ಉತ್ಪತ್ಯವಾಯಿತ್ತು.
ತತ್ಪುರುಷಮುಖದಲ್ಲಿ ಸಾಕಲ್ಯಪ್ರಣವ ಉತ್ಪತ್ಯವಾಯಿತ್ತು.
ಅಘೋರಮುಖದಲ್ಲಿ ಶಾಂಭವಪ್ರಣವ ಉತ್ಪತ್ಯವಾಯಿತ್ತು.
ವಾಮದೇವಮುಖದಲ್ಲಿ ಸ್ವಾಸ್ಯಪ್ರಣವ ಉತ್ಪತ್ಯವಾಯಿತ್ತು.
ಸದ್ಯೋಜಾತಮುಖದಲ್ಲಿ ಸೌಖ್ಯಪ್ರಣವ ಉತ್ಪತ್ಯವಾಯಿತ್ತು.
ಶಿವಸಂಬಂಧವಾದ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರಪ್ರಣವವು,
ಶಕ್ತಿಸಂಬಂಧವಾದ ಅಖಂಡಜ್ಯೋತಿರ್ಮಯವಾಗಿಹ
ಗೋಳಕಾಕಾರ ಪರಬ್ರಹ್ಮಪ್ರಣವವು,
ಶಿವಶಕ್ತಿರಹಿತವಾಗಿಹ ಅಖಂಡಮಹಾಜ್ಯೋತಿಪ್ರಣವ
ಈ ಮೂರು ಪ್ರಣವಂಗಳು ಕೂಡಿ ಏಕಾರ್ಥವಾಗಿ
ಅಖಂಡಿತ ಅಪ್ರಮಾಣ ಅಗೋಚರ ಅಪ್ರಮೇಯ ಅಗಮ್ಯ
ವಾಚಾಮಗೋಚರಕತತ್ತ್ವವಾದ ಮಹಾಘನಕ್ಕೆ
ಘನವನೇನೆಂದುಪಮಿಸಬಾರದ ಉಪಮಾತೀತಕತತ್ತ್ವವಾಗಿಹನು ನೋಡಾ,
ನಮ್ಮ ಅಪ್ರಮಾಣಕೂಡಲಸಂಗಮದೇವನು. ॥ ೯೧೨ ॥

೯೧೩

ಇನ್ನು ಷಡಧ್ವದುತ್ಪತ್ಯವದೆಂತೆಂದಡೆ :
ಅಖಂಡಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ
ಜ್ಯೋತಿರೂಪದಲ್ಲಿ ಹೃದಯಮಂತ್ರ ಉತ್ಪತ್ಯ.
ಆ ಪ್ರಣವದ ದರ್ಪಣಾಕಾರದಲ್ಲಿ ಶಿರೋಮಂತ್ರ ಉತ್ಪತ್ಯ.
ಆ ಪ್ರಣವದ ಅರ್ಧಚಂದ್ರಕದಲ್ಲಿ ಶಿಖಾಮಂತ್ರ ಉತ್ಪತ್ಯ.
ಆ ಪ್ರಣವದ ಕುಂಡಲಾಕಾರದಲ್ಲಿ ಕವಚಮಂತ್ರ ಉತ್ಪತ್ಯ.
ಆ ಪ್ರಣವದ ದಂಡಕಸ್ವರೂಪದಲ್ಲಿ ನೇತ್ರಮಂತ್ರ ಉತ್ಪತ್ಯ.
ಆ ಪ್ರಣವದ ತಾರಕಸ್ವರೂಪದಲ್ಲಿ ಅಸ್ತ್ರಮಂತ್ರ ಉತ್ಪತ್ಯ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯೧೩ ॥

೯೧೪

ಈ ಷಡ್ವಿಧದಿಂದವೆ ಅನೇಕ ವೇದಂಗಳೆಸಗಿತ್ತು,
ಈ ಷಡ್ವಿಧದಿಂದವೆ ಅನೇಕ ಶಾಸ್ತ್ರಂಗಳೆಸಗಿತ್ತು,
ಈ ಷಡ್ವಿಧದಿಂದವೆ ಅನೇಕ ಪುರಾಣಂಗಳೆಸಗಿತ್ತು,
ಈ ಷಡ್ವಿಧದಿಂದವೆ ಅನೇಕಾಗಮಂಗಳೆಸಗಿತ್ತು ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೧೪ ||

೯೧೫

ದಾಸಿಯ ಸಂಗವುಳ್ಳನ್ನಬರ ಗುರುವಿಲ್ಲವೆಂಬ
ಶ್ರುತಿ ದಿಟ ನೋಡಾ.
ವೇಶಿಯ ಸಂಗವುಳ್ಳನ್ನಬರ ಲಿಂಗವಿಲ್ಲವೆಂಬ
ಶ್ರುತಿ ದಿಟ ನೋಡಾ.
ಪರಸ್ತ್ರೀಯ ಸಂಗವುಳ್ಳನ್ನಬರ ಜಂಗಮವಿಲ್ಲವೆಂಬ
ಶ್ರುತಿ ದಿಟ ನೋಡಾ.
ಈ ತ್ರಿವಿಧಸಂಗವುಳ್ಳನ್ನಬರ ತ್ರಿವಿಧಪ್ರಸಾದವಿಲ್ಲವೆಂಬ
ಶ್ರುತಿ ದಿಟ ನೋಡಾ.
ತ್ರಿವಿಧಪ್ರಸಾದವಿಲ್ಲದಾತನೆ ಅನಾಚಾರಿಯೆಂಬ
ಶ್ರುತಿ ದಿಟ ನೋಡಾ.
ಆ ಅನಾಚಾರಿಯೆ ಪಂಚಮಹಾಪಾತಕನೆಂಬ
ಶ್ರುತಿ ದಿಟ ನೋಡಾ
ಅಪ್ರಮಾಣಕೂಡಲಸಂಗಮದೇವಾ. || ೯೧೫ ||

೯೧೬

ಹೆಣ್ಣೆಂಬ ಭೂತವ ಸೋಂಕಿ ಹೆಣನಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು,
ಹೊನ್ನೆಂಬ ಭೂತವ ಸೋಂಕಿ ಹೊಲೆಯನಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಕಾಮವೆಂಬ ಭೂತವ ಸೋಂಕಿ ಕರ್ಮಿಯಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಪಾಶವೆಂಬ ಭೂತವ ಸೋಂಕಿ ಪಾಪಿಯಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಈ ಪಂಚಭೂತಂಗಳನತಿಗಳದು
ಮಹಾಘನದಲ್ಲಿ ನಿಂದ ಮನವು ನಿಜಗುರುವಿಂಗೆ
ನಮೋ ನಮೋ ಎನುತಿದ್ದುದು ನೋಡಾ ಶ್ರುತಿಗಳು,
ಅಪ್ರಮಾಣಕೂಡಲಸಂಗಮದೇವಾ. || ೯೧೬ ||

೯೧೭

ಪಸರ ಪಸರ ತಪ್ಪದಿಹ ಗಾಜುಗಳೆಲ್ಲ ರತ್ನವಾಗಬಹುದೆ ಅಯ್ಯಾ ?
ಕೇರಿ ಕೇರಿ ತಪ್ಪದಿಹ ಶ್ವಾನವೆಲ್ಲ ಸಿಂಹವಾಗಬಹುದೆ ಅಯ್ಯಾ ?
ಧರೆಯೊಳಗೆ ಬಿದ್ದು ಹೊರಳುವ ನಾಮಧಾರಕಗುರುಗಳೆಲ್ಲ
ಸದ್ಗುರುವಾಗಬಲ್ಲರೆ ಅಯ್ಯಾ ?
ಇದು ಕಾರಣ ಮನವು ಮಹದಲ್ಲಿ ನಿಂದು
ಪರಿಣಾಮ ನೆಲೆಗೊಂಡ ಮಹಾನುಭಾವ ಸದ್ಗುರು
ಕೋಟಿಗೊಬ್ಬರು ಇಲ್ಲವೆಂಬೆನು ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೧೭ ॥

೯೧೮

ಹೊನ್ನು ಹೆಣ್ಣು ಮಣ್ಣು ಹಿಡಿವನ್ನಕ್ಕ ಗುರುವಲ್ಲ,
ಆ ಗುರುವಿನ ಬೆಂಬಳಿ ಲಿಂಗವಿಲ್ಲ,
ಆ ಲಿಂಗಪೂಜೆಯ ಮಾಡುವಾತ ಶಿಷ್ಯನಲ್ಲ,
ಆ ಗುರು ಶಿಷ್ಯರಿಬ್ಬರಿಗೆಯೂ ಕುಂಭೀಪಾತಕ
ತಪ್ಪದೆಂದು ಶ್ರುತಿ ಸಾರುತ್ತಿದೆ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯೧೮ ॥

೯೧೯

ಪಂಚಾಕ್ಷರಿ ಪಂಚವಕ್ತ್ರಂಗಳ ನೆಲೆಯನರಿಯರು
ಅಕಾರ ಉಕಾರ ಮಕಾರ ನಾದ ಬಿಂದು ಕಲೆಯನರಿಯರು
ಪ್ರಣವಸ್ವರೂಪವನರಿಯರು
ನಿರಾಳ ನಿರಂಜನ ನಿರಾಮಯ ನಿರಾಮಯಾತೀತವನರಿಯದೆ,
ಗುರುಲಿಂಗಜಂಗಮವೆಂದು ಸುಳಿದಡೆ ಪಂಚಮಹಾಪಾತಕ ನೋಡಾ,
ಅಪ್ರಮಾಣಕೂಡಲಸಂಗಮದೇವಾ. ॥ ೯೧೯ ॥

೯೨೦

ತಾನೆ ಶಿವಪ್ರಣವ, ತಾನೆ ಶಕ್ತಿಪ್ರಣವ,
ತಾನೆ ಶಿವಶಕ್ತಿರಹಿತವಾಗಿಹ ಮಹಾಪ್ರಣವ ನೋಡಾ.
ತಾನೆ ಆದಿಪ್ರಣವ, ತಾನೆ ಅನಾದಿಪ್ರಣವ,
ತಾನೆ ಕಲಾಪ್ರಣವ ನೋಡಾ.
ತಾನೆ ಅವಾಚ್ಯಪ್ರಣವ, ತಾನೆ ನಿರಂಜನಪ್ರಣವ,
ತಾನೆ ನಿರಾಮಯಪ್ರಣವ ನೋಡಾ,
ತನ್ನಿಂದಧಿಕವಾದ ಪ್ರಣವವೊಂದಿಲ್ಲವಾಗಿ
ತಾನೇ ನಿರಂಜನಾತೀತಪ್ರಣವ ನೋಡಾ
ಅಪ್ರಮಾಣಕೂಡಲಸಂಗಮದೇವಾ. ॥ ೯೨೦ ॥

■■

## ಬೊಮ್ಮಗೊಂಡೇಶ್ವರ ವಚನ

೯೨೧

ಶ್ರೀಗುರು ವೀರಸಂಗಮನ ಬಣ್ಣಿಸುವುದೆಂತು ಸಾಧ್ಯವೋ ?
ಸೂಳೆಯ ಮನೆಯಲ್ಲುಂಡು ಅವಳ ದೀಕ್ಷೆಯಗೈದು
ಶಿವಶರಣೆಯನ್ನಾಗಿ ಮಾಡಿದ ;
ಕಾಟುಗನ ಮನೆಯಲ್ಲುಂಡು
ಅವನ ಜಂಗಮದಾಸೋಹಿಯಾಗಿ ಮಾಡಿದ ;
ವೈರಿ ಭಾಸ್ಕರಂಗೆ ಲಿಂಗದೀಕ್ಷೆಯ ತೆತ್ತು
ಮೈದುನನನ್ನಾಗಿ ಮಾಡಿಕೊಂಡ ;
ಮೃತಪಟ್ಟವಂಗೆ ಮರಳಿ ಪ್ರಾಣವ ತೆತ್ತ
ಪರುಷದ ಪುತ್ಥಳಿ ಪತಿತ ಪಾವನಮೂರ್ತಿ
ಶ್ರೀಗುರು ವೀರಸಂಗಯ್ಯನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು ಬಸವಣ್ಣ.

## ಭಿಕ್ಷದ ಸಂಗಯ್ಯನ ವಚನ

೯೨೨

ಹೋಗುವ ಬನ್ನಿರಯ್ಯ ;
ಶಕ್ತಿಪಾತವಾದ ಶಿವಯೋಗೀಶ್ವರರು ಶಿವಭಕ್ತರು
ಹೋಗುವ ಬನ್ನಿರಯ್ಯ.
ಸುಕ್ಷೇತ್ರದಲ್ಲಿರ್ಪ ಮಹಲಿಂಗದರುಶನಕೆ
ಹೋಗುವ ಬನ್ನಿರಯ್ಯ.
ಜೀವಸಂಚಾರವೆಂಬ ಪ್ರಾಕೃತವೆನಿಸುವ
ಅಧೋಕುಂಡಲಿಸ್ವರೂಪಮಾದ
ಅಹಂ ಎಂಬ ಹೆಬ್ಬಟ್ಟೆಯಂ ಬಿಟ್ಟು,
ಸಜ್ಜೀವವೆಂಬ ವೈಕೃತವೆನಿಸುವ
ಮಧ್ಯಕುಂಡಲಿಸ್ವರೂಪಮಾದ
ಸೋಹಮೆಂಬ ಸಣ್ಣಬಟ್ಟೆಯ ಹಿಡಿದು
ಹೋಗುವ ಬನ್ನಿರಯ್ಯ ಮಹಲಿಂಗದರುಶನಕೆ.
ಕೇವಲ ಶಿವಯೋಗವೆಂಬ
ಏಕವೆನಿಸುವ ಊರ್ಧ್ವಕುಂಡಲಿಸ್ವರೂಪಮಾದ
ಓಂ ಎಂಬ ನುಸುಳುಗಂಡಿಯಂ ನುಸಿದು
ಹೋಗುವ ಬನ್ನಿರಯ್ಯ ಮಹಲಿಂಗದರುಶನಕೆ.

ದ್ವಯಮಂಡಲವ ಭ್ರೂಮಧ್ಯವೆಂಬ ಮಹಾಮೇರುವ
ಮಧ್ಯದಲ್ಲಿ ಏಕಮಂಡಲಾಕಾರ ಮಾಡಿ,
ಆ ಕಮಲಮಧ್ಯದಲ್ಲಿ ಮೂರ್ತಿಗೊಂಡಿಪ್ಪ ಮಹಾಲಿಂಗದಲ್ಲಿ
ಜೀವಪರಮರಿಬ್ಬರನೇಕಾರ್ಥವಂ ಮಾಡಿ,
ಶಾಂಭವೀಮುದ್ರಾನುಸಂಧಾನದಿಂದೆ
ಅಧೋಮುಖಕಮಲವೆಲ್ಲ ಊರ್ಧ್ವಮುಖವಾಗಿ,
ಆ ಮಹಾಲಿಂಗವ ನೋಡುತಿರಲು
ಆ ಕಮಲಸೂತ್ರವಿಡಿದಿಹ ಷಡಾಧಾರಚಕ್ರಂಗಳ
ಊರ್ಧ್ವಮುಖವಾಗಿ ಆ ಕಮಲದಲ್ಲಿ ಅಡಗಿ,
ಆ ಕಮಲದ ಎಸಳು ಐವತ್ತೆರಡಾಗಿ ಎಸೆವುತಿರ್ಪವು.
ಪರಿಪೂರ್ಣ ಜ್ಞಾನದೃಷ್ಟಿಯಿಂ ಆ ಮಹಾಲಿಂಗಮಂ ನಿರೀಕ್ಷಿಸಲು
ಆ ಕಮಲದಲ್ಲಿ ಮಹಾಲಿಂಗಸ್ವರೂಪವಾಗಿ
ಸಕಲ ಕರಣೇಂದ್ರಿಯಂಗಳು ಆ ಮಹಾಲಿಂಗದಲ್ಲಿಯೆ ಅಡಗಿ,
ಸುನಾದಬ್ರಹ್ಮವೆಂಬ ಇಷ್ಟವೆ ಮಹಾಲಿಂಗವೆಂದರಿದು ನೋಡುತ್ತಿರಲು,
ಜ್ಯೋತಿರ್ಮಯವಾಗಿ ಕಾಣಿಸುತಿಪ್ಪುದು.
ಅದೇ ಜೀವಪರಮರೈಕ್ಯವು ; ಅದೇ ಲಿಂಗಾಂಗಸಂಬಂಧವು.
ಆ ಮಹಾಲಿಂಗದ ಕಿರಣಂಗಳೆ ಕರಣಂಗಳಾಗಿ
ಆ ಕಮಲವು ಅಧೋಮುಖವಾಗಿ
ಆ ಮಹಾಲಿಂಗವು ತನ್ನ ನಿಜನಿವಾಸವೆನಿಸುವ
'ಅಂತರೇಣ ತಾಲುಕೇ' ಎಂಬ ಶ್ರುತಿ ಪ್ರಮಾಣದಿ
ತಾಲುಮೂಲದ್ವಾದಶಾಂತವೆಂಬ ಬ್ರಹ್ಮರಂಧ್ರದ ಮಧ್ಯದಲ್ಲಿ
ಪ್ರಕಾಶಿಸುತ್ತಿರ್ಪುದೊಂದು ಶಿವಚಕ್ರವು.
ಆ ಶಿವಚಕ್ರವೆ ಶಿವಲೋಕವೆನಿಸುವುದು.
ಆ ಶಿವಲೋಕವೆ ಶಾಂಭವಲೋಕವೆನಿಸುವುದು.
ಶಾಂಭವಲೋಕವೆ ಶಾಂಭವಚಕ್ರವೆನಿಸುವುದು.
ಆ ಶಾಂಭವಚಕ್ರದಲ್ಲಿ ಆಧಾರವಾದಿ ಪಶ್ಚಿಮಾಂತ್ಯವಾದ
ನವಚಕ್ರಂಗಳು ಸಂಬಂಧವಾಗಿರುತಿರ್ಪವು.
ಅದು ಹೇಗೆಂದೊಡೆ ;
ಆ ಶಾಂಭವಚಕ್ರಮಧ್ಯದ ಚತುರ್ದಳಾಗ್ರದಲ್ಲಿ
ಅಗ್ನಿಮಂಡಲದಲ್ಲಿ ಅಷ್ಟದಳ ಇರ್ಪುವು.
ಆ ಅಷ್ಟದಳ ಚತುರ್ದಳದಲ್ಲಿ
'ವಶಷಸ' ಎಂಬ ನಾಲ್ಕಕ್ಷರಯುಕ್ತವಾದ
ಆಧಾರಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿ 'ನ' ಕಾರವು

ಆ ಮಹಾಲಿಂಗಸ್ವರೂಪವಾದ ಪ್ರಣವದ
ತಾರಕಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಅಗ್ನಿಮಂಡಲದ ಚತುರ್ದಳದ ಈಶಾನ್ಯ ದಳದಲ್ಲಿ
'ಬ ಭ ಮ ಯ ರ ಲ' ಎಂಬ ಆರಕ್ಷರಯುಕ್ತವಾದ
ಸ್ವಾಧಿಷ್ಠಾನಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಮ'ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ದಂಡಕಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಅಷ್ಟದಳಾಗ್ರದಲ್ಲಿ ಸೂರ್ಯಮಂಡಲವಿರ್ಪುದು.
ಆ ಸೂರ್ಯಮಂಡಲದಲ್ಲಿ 'ಡಢಣ ತಥದಧನ ಪಫ' ಎಂಬ
ದಶಾಕ್ಷರಯುಕ್ತವಾದ ಮಣಿಪೂರಕಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಶಿ'ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ಕುಂಡಲಾಕೃತಿಯಲ್ಲಿ ಸಂಬಂಧವಾಗಿರ್ಪುದು.
'ಕಖಗಘಙ ಚಛಜಝಞ ಟಠ' ಎಂಬ
ದ್ವಾದಶಾಕ್ಷರಯುಕ್ತವಾದ ಅನಾಹತಚಕ್ರವು
ಸೂರ್ಯಮಂಡಲದಲ್ಲಿ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ವ'ಕಾರವು
ಆ ಮಹಾಲಿಂಗಸ್ವರೂಪವಾದಪ್ರಣವದ
ಅರ್ಧಚಂದ್ರಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಅಷ್ಟದಳದಮಧ್ಯದಲ್ಲಿ ಚಂದ್ರಮಂಡಲವಿರ್ಪುದು.
ಆ ಚಂದ್ರಮಂಡಲದಲ್ಲಿ–
'ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ'
ಎಂಬ ಷೋಡಶಾಕ್ಷರಯುಕ್ತವಾದ ವಿಶುದ್ಧಿಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಯ'ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ದರ್ಪಣಾಕೃತಿಯಲ್ಲಿ ಸಂಬಂಧವಾಗಿರ್ಪುದು.
ಆ ಮಹಾಲಿಂಗಕ್ಕೆ ಪೀಠಮಾಗಿರ್ದ ಬಿಂದುಯುಕ್ತಮಾದ ಪ್ರಣವವು
ಆ ಮಹಾಲಿಂಗದ ಮುಂದಿರ್ದ
'ಹಂ ಳಂ ಹಂ ಕ್ಷಂ' ಎಂಬ ಚುತವರ್ಣಾಕ್ಷರಯುಕ್ತವಾದ
ಆಜ್ಞಾಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ಓಂಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ಜ್ಯೋತಿರಾಕೃತಿಯಲ್ಲಿ ಸಂಬಂಧವಾಗಿರ್ಪುದು.

ಚತುರ್ದಳವು ತ್ರಿದಳದಲ್ಲಿ ಕ್ಷ ಉ ಸ ಎಂಬ ತ್ರಯಕ್ಷರಯುಕ್ತವಾದ
ಶಿಖಾಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿ 'ಕ್ಷ' ಕಾರವು
ಆ ಮಹಾಲಿಂಗಸ್ವರೂಪವಾದ ಕುಂಡಲಾಕೃತಿ
ಅರ್ಧಚಂದ್ರಾಕೃತಿಗಳಲ್ಲಿ ಸಂಬಂಧವಾಗಿರ್ಪುದು.
ಆ ಚತುರ್ದಳದ ಮಧ್ಯದಲ್ಲಿ ಬಟುವೆ ಏಕದಳವೆನಿಸಿಕೊಂಬುದು.
ಆ ಏಕದಳದಲ್ಲಿ ಪಶ್ಚಿಮಚಕ್ರ ಸಂಬಂಧವಾಗಿರ್ಪುದು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ 'ಹ್ರಾಂ'ಕಾರವು
ಆ ಮಹಾಲಿಂಗಸ್ವರೂಪವಾದ ಪ್ರಣವದ
ದರ್ಪಣಾಕೃತಿ ಜ್ಯೋತಿರಾಕೃತಿಗಳಲ್ಲಿ ಸಂಬಂಧವಾಗಿರ್ಪುದು.
ಹೀಂಗೆ ಅಷ್ಟಚಕ್ರಂಗಳ ತನ್ನೊಳಗೆ ಗರ್ಭೀಕರಿಸಿಕೊಂಡು
ಬೆಳಗುತ್ತಿರ್ಪುದೊಂದು ಬ್ರಹ್ಮರಂಧ್ರಚಕ್ರವು.
ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ಹ್ರೀಂ ಕಾರಗಳು.
ಆ ಹರದನಹಳ್ಳಿಯ ಪ್ರಭುಲಿಂಗಗುರುಸ್ವಾಮಿಯ ಶಿಷ್ಯರು
ನಿಜಾನಂದ ಗುರುಚೆನ್ನಯ್ಯನವರು.
ಆ ನಿಜಾನಂದ ಗುರುವಿನ [ಶಿಷ್ಯರು]
ಗುರುಸಿದ್ಧವೀರೇಶ್ವರದೇವರು.
ಆ ಸಿದ್ಧವೀರೇಶ್ವರದೇವರ ಕರಕಮಲದಲ್ಲಿ ಉದಯವಾದ
ಬಾಲಸಂಗಯ್ಯನು ನಾನು.
ಆ ನಿರಂಜನ ಗುರುವೆ ತಮ್ಮ ಕೃಪೆಯಿಂದ
ತಮ್ಮಂತರಂಗದಲ್ಲಿರ್ದ ಅತಿರಹಸ್ಯವಾದ
ಶಾಂಭವಶಿವಯೋಗವೆಂಬ ಮಹಾಜ್ಞಾನೋಪದೇಶಮಂ
ಹರಗುರು ವಾಕ್ಯಪ್ರಮಾಣೆನಿಂ ಎನ್ನ ಹೃದಯಕಮಲದಲ್ಲಿ
ಕರತಳಾಮಳಕದಂತೆ ತೋರಿ,
ಆ ಹೃದಯಕಮಲಕರ್ಣಿಕಾಮಧ್ಯದಲ್ಲಿರ್ಪ
ನಿರಂಜನಗುರುವೆ ನಿರಂಜನಮಹಾಲಿಂಗವೆಂದರಿದು
ಆ ನಿರಂಜನಮಹಾಲಿಂಗವೆ ಕರಸ್ಥಲದಲ್ಲಿರ್ಪ
ಸುನಾದಬ್ರಹ್ಮವೆಂಬ ಇಷ್ಟಲಿಂಗವೆಂದರಿದು,
ಆ ಕರಸ್ಥಲದಲ್ಲಿರ್ಪ ಇಷ್ಟಲಿಂಗವೆ ತಾನೆಂದರಿದು
"ಮಂತ್ರಮಧ್ಯೇ ಭವೇತ್‌ಲಿಂಗಂ ಲಿಂಗಮಧ್ಯೇ ಭವೇತ್‌ಮಂತ್ರಂ ।
ಮಂತ್ರಲಿಂಗದ್ವಯಾದೇಕಂ ಇಷ್ಟಲಿಂಗಂತು ಶಾಂಕರಿ ॥"
ಎಂದುದಾಗಿ, ಎನ್ನ ಹೃತ್ಕಮಲಕರ್ಣಿಕಾಮಧ್ಯದಲ್ಲಿ
ಶಾಂಭವೀಮುದ್ರಾನುಸಂಧಾನದಿಂದ
ಆ ಲಿಂಗವೆ ಮಂತ್ರ, ಮಂತ್ರವೆ ಲಿಂಗವೆಂದರಿದು

ಓಂ ಓಂ ಎಂದು ಶಿವಸಮಾಧಿಯ ಜಪಮಂ ಜಪಿಸುತ್ತ ಜ್ಯೋತಿರ್ಲಿಂಗಮಂ ಕೇಳುತ, ಜ್ಯೋತಿರ್ಲಿಂಗದೊಳು ಮುಳುಗಾಡುತ್ತಿರ್ದೆನಯ್ಯಾ ಬಸವಣ್ಣಪ್ರಿಯ ಚೆನ್ನಸಂಗಯ್ಯನೆಂಬ ಗುರುವಿನ ಕೃಪೆಯಿಂದ, ನಿಮ್ಮ ಶರಣರ ಪಡುಗ ಪಾದರಕ್ಷೆಯ ಹಿಡಿವುದಕ್ಕೆ ಯೋಗ್ಯನಾದೆನಯ್ಯ ನಿಮ್ಮ ಕೃಪೆಯಿಂದ.

■■

## ಮಡಿವಾಳಪ್ಪನ ನಿಜಲೀಲಾಮೃತ ವಚನ

ನಿಜಲೀಲಾ :

೯೨೩

ರೂಪತೋರಿಕೆಯೇನೂ ಇಲ್ಲದಂದು,
ಕರಣತೋರಿಕೆಯೇನೂ ಇಲ್ಲದಂದು,
ಪ್ರಾಣ ತೋರಿಕೆಯೇನೂ ಇಲ್ಲದಂದು,
ನಿರ್ಭಾವ ನಿರುಪಮ ನಿರಂಜನ ನಿಷ್ಕಳ ಏನೂ ಇಲ್ಲದಂದು,
ನಿರ್ಬೈಲೆಂಬುದು ಏನೋ ಏನೋ ಸುಳ್ಳಾಗಿರ್ದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧ ॥

೯೨೪

ಅರವುತೋರಿಕೆಯೇನೂ ಇಲ್ಲದಂದು,
ಮರವು ತೋರಿಕೆಯೇನೂ ಇಲ್ಲದಂದು,
ಕುರುಹುತೋರಿಕೆ ಏನೂ ಇಲ್ಲದಂದು
ಚಿನ್ನಾದ ಚಿದ್ಬಿಂದು ಚಿತ್ಕಳೆ ಇಲ್ಲದೆ ಏನೋ ಏನೋ ಆಗಿರ್ದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨ ॥

೯೨೫

ಹೃದಯತೋರಿಕೆಯೇನೂ ಇಲ್ಲದಂದು,
ನೆನಹುತೋರಿಕೆಯೇನೂ ಇಲ್ಲದಂದು,

ನಿರಾಳತೋರಿಕೆ ಏನೂ ಇಲ್ಲದಂದು,
ನಾದ ಬಿಂದು ಕಳೆಯಿಲ್ಲದಂದು,
ತಾನೆ ತಾನೆಂಬೊ ಮಹಾಬಯಲಾಗಿರ್ದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೩ ॥

ಪರಬ್ರಹ್ಮಸ್ಥಲ :

೯೨೬

ಮಾಯ ಛಾಯ ಏನೂ ಇಲ್ಲದಂದು,
ಕಾಲ ಕಲ್ಪಿತ ಏನೂ ಇಲ್ಲದಂದು,
ಬ್ರಹ್ಮಾಂಡ ಪಿಂಡಾಂಡ ಏನೂ ಇಲ್ಲದಂದು,
ಸ್ವಯಂಲೀಲಾ ಸಂಪರ್ಕಶಕ್ತಿ ಸೋಹಂಭಾವವಿಲ್ಲದೆ
ತಾನೆಂಬೊ ಮಹಾಂತನಾಗಿರ್ದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪ ॥

೯೨೭

ಶಿವಜೀವರಿಲ್ಲದಂದು, ಮಂತ್ರತಂತ್ರಗಳಿಲ್ಲದಂದು,
ಅಹುದು ಅಲ್ಲ ಇಲ್ಲದಂದು,
ನವಬ್ರಹ್ಮ ಷಡುಬ್ರಹ್ಮ ಪಂಚಬ್ರಹ್ಮವಿಲ್ಲದೆ
ನಿನ್ನ ನೀ ಅರಿಯದೆ ಅಖಂಡನಾಗಿರ್ದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫ ॥

ಗುರುಸ್ಥಲ :

೯೨೮

ತನ್ನ ತಾನರಿಯದ ಆ ಅಖಂಡ ಮಹತತ್ತ್ವವೆ
ತನ್ನ ತಾನರಿದ ಚಿತ್ಕಳೆ ತಾನೇ.
ಆ ಚತ್ಕಳೆ ತಾನೇ ತಾನೆಂಬೊ ಅರಿವು ತನಗಾದಲ್ಲಿ
ತಾನೆಂಬುದೊಂದೇ ಎರಡಾಯ್ತು,
ತಾನೆಂಬುದೊಂದು ಈ ಎರಡು ಮೂರು ಕೂಡಿ
ಮೂರು ಒಂದೇ, ಒಂದೇ ಮೂರು,
ಚಿನ್ನಾದ ಚಿದ್ಬಿಂದು ಚಿತ್ಕಳೆ ಇವು ಮೂರು ತಾನೆ.
ತಾನೆ ತನ್ನ ಬಲ್ಲಾತ ಅಲ್ಲಮಪ್ರಭು ನಿರಂಜನಮೂರ್ತಿ ನೀನಾಗಿರ್ದೆಯಲ್ಲ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೬ ॥

೯೨೯

ನಿರಂಜನ ತನಗೆ ತಾನೆ ಸುರಂಜನವತೋರಲು
ಅಂಗ ಲಿಂಗವಾಯಿತ್ತು; ಆ ಅಂಗ ಲಿಂಗ ಸಂಗೊಳಿಸಿದ

ಉಪಚಾರ ಉಪಮೆ ಸಮರಸವಾಯಿತ್ತು,
ಆ ಸಮರಸವೇ ಸಾಕಾರವಾಗಿ ತನ್ನ ಪ್ರತಿಬಿಂಬವೆ
ನೋಡಿಕೊಳ್ಳುವುದಕ್ಕೆ ಕನ್ನಡಿಯೊಳಗಿನ ರೂಹಿನಪರಿಯಲಿ
ಅನಾದಿ ಶರಣ ನಿನ್ನೊಳಗೆ ನೀನೇ
ನಾನೆಂಬೋ ಭಾವಕ್ಕೆ ಎದುರಾಗಿರ್ದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭ ॥

೯೩೦

ಗುರುಶಿಷ್ಯರೆಂಬಲ್ಲಿ ಬೋಧೆ ಮೊದಲೇ ಇತ್ತು,
ಇವು ಮೂರು ಒಂದಾಗಿರ್ದು ಒಂದು ಇಲ್ಲದೆ,
ಒಂದು ಇಲ್ಲದಾ ಒಂದರೊಳಗೆ ಒಂದು ಒಂದೆಂಬ ಮಹಾಬಯಲವೆ
ಚಿದ್‌ಬಯಲಾದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೮ ॥

**ಚಿದ್ಬೈಲು :**

೯೩೧

ತಾನೇ ಅಖಂಡಬಯಲಾಗಿ,
ಆ ಅಖಂಡ ಬೈಲು ಗಟ್ಟಿಗೊಂಡು ಚಿತ್ಪಿಂಡವಾಗಿ,
ಚಿತ್‌ಶಕ್ತಿ ಕಾಂತನಾಗಿ ಚಿದ್ವಿಲಾಸವು ಕೂಡಿ,
ಚಿದ್ರೂಪವ ತೋರಿ ಚಿನ್ಮಯನೆನಿಸಿ ಚಿತ್ಪ್ರಕಾಶ ನೀನಾದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೯ ॥

೯೩೨

ಚಿತ್ಪ್ರಕಾಶವು ತಾನೆ ತನ್ನ ಲೀಲಾವಿಲಾಸಕ್ಕೆ
ತಾನೇ ಮೇರುಪರ್ವತಾದಿ ಬ್ರಹ್ಮಾಂಡ ಪಿಂಡಾಂಡ
ಸಕಲ ಚರಾಚರ ದೇವ ಮಾನವ ದಾನವ
ಸದಾಶಿವ ಪರಮಾತ್ಮರೆಂಬ ತೋರಿಕೆಯೆಲ್ಲಾ ನೀನಾದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ, ॥ ೧೦ ॥

೯೩೩

ಸುಖಿಯಾಗಿ ಸುಖವರಿಯದೆ, ದುಃಖಿಯಾಗಿ ದುಃಖವರಿಯದೆ,
ಶಿವನೆಂಬುವದರಿಯದೆ, ಜಗವೇನೆಂಬುವದರಿಯದೆ,
ನಾನು ಏನೆಂಬುವದರಿಯದೆ, ಇಹವರಿಯದೆ ಪರವರಿಯದೆ,
ಪುಣ್ಯವರಿಯದೆ ಪಾಪವರಿಯದೆ, ಸ್ವರ್ಗವರಿಯದೆ ನರಕವರಿಯದೆ,
ಬಹುಮೂಢ ಅಜ್ಞಾನವೆಂಬ ವಿಲಾಸ ಅನಂತಕಾಲ ನಟಿಸಿರ್ದು

ಅನಂತಕಾಲವಾಯಿತ್ತೆಂಬೆ, ಚಿಂತೆಯಿಲ್ಲದೆ ಅನಂತಕಾಲವಿರ್ದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೧ ॥

೯೩೪

ಬಂದು ಬಂದದ್ದರಿಯರಿದೆ, ಹೋಗಿ ಹೋದದ್ದರಿಯದೆ,
ಇದ್ದು ಇದ್ದದ್ದರಿಯದೆ, ನೊಂದು ನೊಂದದ್ದರಿಯದೆ,
ಕೆಟ್ಟು ಕೆಟ್ಟದ್ದರಿಯದೆ, ಎಂಬತ್ನಾಲ್ಕುಲಕ್ಷ ಜೀವರಾಶಿ,
ಯೋನಿದ್ವಾರದಲ್ಲಿ ತಿರುತಿರುಗಿ ಬಂದದ್ದನ್ನರಿಯದೆ,
ಏನೂ ಏನರಿಯದ್ಹಾಂಗೆ ಅರಿತು ಅರಿಯದ್ಹಾಂಗೆ ಇರ್ದೆಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೨ ॥

ಆದಿಸ್ಥಲ :

೯೩೫

ನಿರ್ಬಯಲು ಮಹಾಬಯಲು ಚಿದ್‌ಬಯಲು ಬಯಲಾತ್ಮ
ಸೂರ್ಯ ಚಂದ್ರ ತಾರಕ ಕಠೋರ ವಾಯು ಆಕಾಶ
ಅಗ್ನಿ ಅಪ್ಪು ಪೃಥ್ವಿ ಬೀಜ ಅನ್ನರಸ ವೀರ್ಯ
ಪಿಂಡ ಪ್ರಾಣ ಮನ ಅಸಿ ಉತ್ಪತ್ತಿ ಸ್ಥಿತಿ ಲಯ ಅಕ್ಷರ
ಮೊದಲಾದ ಬ್ರಹ್ಮಾಂಡ ನೀನಾದುದಕ್ಕೆ, ನಿನ್ನ ನೀನರಿವುದಕ್ಕೆ
ನೀನೇ ನಾನಾದುದೇ ಇದೇ ಆದಿಯಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೩ ॥

ತ್ರಿವಿಧಾತ್ಮಸ್ಥಲ :

೯೩೬

ತಂದೆಯ ವಿಕಾರದಿಂದ ತಾಯಿಯ ಬಸುರಲ್ಲಿ ಬಂದು,
ತಂದೆಯದು ಒಂದು ದಿನದ ಶುಕ್ಲ,
ತಾಯಿಯದು ಒಂಬತ್ತು ತಿಂಗಳದ ಶೋಣಿತವು ಕೂಡಿ,
ಗಟ್ಟಿಗೊಂಡು ಪಿಂಡವಾದ ಈ ಶರೀರದ ಕಷ್ಟ, ಎಷ್ಟಂತ್ಹೇಳಲಿ,
ಆ ತಾಯಿಯ ಉದರದಲ್ಲಿರ್ದ ಆ ಪರಿಯೆಂತೆಂದರೆ :
ಕದ್ದ ಕಳ್ಳನ ಹೆಡಗುಡಿಯಕಟ್ಟಿ, ಹೊಗಸಿದ ಸೆರೆಮನೆಗಿಂತ
ಸಹಸ್ರ ಇಮ್ಮಡಿ ಉಪದ್ರವಾಯಿತು.
ಎಡಬಲ ಮೂತ್ರದ ಹಡಕಿಯ ಬಾಧೆ,
ನಡುವೆ ಕಡಿವ ಜಂತುಗಳ ಬಾಧೆ,
ಕುದಿವ ಜಠರಾಗ್ನಿಯ ಬಾಧೆ, ಏರಿಳಿವ ಶ್ವಾಸಮಾರುತನ ಬಾಧೆ,
ಹೆತ್ತವ್ವ ನುಂಗಿದ ತುತ್ತು ಆಳನೆತ್ತಿಗೆ ತಗಲಲು

ಹತ್ತುಸಾವಿರ ಸಿಡಿಲು ಹೊಡೆದಂತಾಯಿತು.
ಮೇಲೆ ಕುಡಿವ ನೀರಿನಿಂದಾದ ಸಂಕಟ ಹೇಳಲಳವಲ್ಲ,
ಆ ತಾಯಿ ನಡಿವ ನುಡಿವ ಆಡುವ ಹಾಡುವ ಓಡುವ
ಕೂಡ್ರುವ ಆಕಳಿಸುವ ಮಲಗುವ ಏಳುವ ಬೀಳುವ
ಮೈಮುರಿಯುವ ಇಂತು ಅನಂತ ಬಾಧೆಯೊಳಗೆ
ಸಾಯದ ಕಾರಣವೇನು ? ಕರ್ಮನಿವೃತ್ತಿ ಇಲ್ಲದಾಗಿ.
ಇಂತು ದುಃಖದಲ್ಲಿ ಒಂಬತ್ತುತಿಂಗಳು ತುಂಬಿ
ಸರ್ವ ಅವಯವಂಗಳ ಬಲಿದು ಎಚ್ಚರಹುಟ್ಟಿ ಜಾತಿಸ್ಮರತ್ವವ ತಿಳಿದು,
ಕೆಟ್ಟೆ ಕೆಟ್ಟೆನೆಂದು ತನ್ನ ಮುನ್ನಿನ ಕರ್ಮಕ್ಕೆ ನಡುನಡುಗಿ
ಕಡೆಗಾಣುವ ಪರಿಯೆಂತೆಂದು ಚಿಂತಿಸಿ,
ಸರ್ವರಿಗೆ ಶಿವನೇ ದೈವವೆಂದು ಸರ್ವರ ಪಾಪಪೊರೆವಾತನೆಂದು ತಿಳಿದು,
ಈ ಭವಬಾಧೆ ಬಿಡಿಸಿಕೊಳ್ಳುವುದಕ್ಕೆ
ಶಿವಧೋ ಶಿವಧೋ ಶಿವಧೋ ಎಂದು ಮೊರೆಯಿಡುವ ಸಮಯಕ್ಕೆ
ವಿಷ್ಣು ಪ್ರಸೂತಿಯ ಗಾಳಿಬೀಸಲು ತಲೆಮೇಲಾಗಿದ್ದ ಶಿಶುವು,
ಆಗಸ ಅರವಿಯ ಹಿಂಡಿದಂತೆ, ಹೆಡಕ್ಹಿಡಿದು ಮುರಿದೊತ್ತಿ
ತಲೆಕೆಳಗೆ ಮಾಡಿ ಯೋನಿದ್ವಾರದಾ ಹೊರಯಕ್ಕೆ ನೂಕಲು,
ಅಕ್ಕಸಾಲಿಗನು ಕಂಬೆಚ್ಚಿನಲ್ಲಿಕ್ಕಿ ತೆಗೆದ ಚಿನ್ನದ ಸಲಾಕೆಯಂತಾಯಿತಲ್ಲಾ.
ಮುಂದೆ ಭೂಸ್ಪರ್ಶನದಿಂದೆ ಹಿಂದಿನ ಜಾತಿಸ್ಮರತ್ವವ ಮರೆತು,
ತನ್ನ ಮಲಮೂತ್ರದಲ್ಲಿ ತಾನೆ ಹೊರಳ್ಯಾಡಿ, ಅನಂತದುಃಖವಂ ಬಡೆದು,
ಬಾಲತ್ವನೀಗಿ ಯವ್ವನಬರಲು, ತಾನು ಹ್ಯಾಂಗಾದೆನೆಂದು ತಿಳಿಯದೆ
ತಾ ಹಿಂದೆ ಬಂದ ಮೂತ್ರದ ಕುಣಿಗೆ ಮನವಿಟ್ಟು ಬಾಯಿದೆರೆದು
ಕುದಿಕುದಿದು ಕಿಸುಕುಳದ ಕೀವು ರಕ್ತವೊಸರುವ
ಹಸಿ ಘಾಯಿ ಹಳದೊಗಲಿಗೆ ಸೋತು
ಮುಪ್ಪಾಗಿ ಕೆಮ್ಮು ಕ್ಯಾಕರಿಕೆ ವಾತ ಪಿತ್ಥ ಶ್ಲೇಷ್ಮಾದಿ
ಅನಂತ ರೋಗಾದಿಗಳಿಂದ ಸತ್ತು ಸತ್ತು ಹೋಯಿತು
ಅನಂತಕಾಲ ಅನಂತಜನ್ಮ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೧೪ ||

**ಅಂತರಾತ್ಮಸ್ಥಲ :**

೬೩೭

ಪುಣ್ಯವಿಷ್ಟು, ಪಾಪವಿಷ್ಟು, ಕರ್ಮವಿಷ್ಟು, ಧರ್ಮವಿಷ್ಟು,
ಶೀಲವಿಷ್ಟು, ದುಶ್ಶೀಲವಿಷ್ಟು, ಸಜ್ಜನಸಂಗವಿಷ್ಟು,
ದುರ್ಜನರಸಂಗವಿಷ್ಟು, ಹಿತವಿಷ್ಟು, ಅಹಿತವಿಷ್ಟು,
ಸ್ತುತಿಯಿಷ್ಟು, ನಿಂದ್ಯವಿಷ್ಟು, ಅಜ್ಞಾನವಿಷ್ಟು, ಸುಜ್ಞಾನವಿಷ್ಟು,

ಚಿಂತಿಯಿಷ್ಟು, ಸಂತೋಷವಿಷ್ಟು, ಮೋಹವಿಷ್ಟು,
ನಿರ್ಮೋಹವಿಷ್ಟು, ಆಶೆಯಿಷ್ಟು, ವೈರಾಗ್ಯವಿಷ್ಟು,
ಅಹಂಕಾರವಿಷ್ಟು, ನಿರಹಂಕಾರವಿಷ್ಟು, ಕ್ರೋಧವಿಷ್ಟು,
ಶಾಂತಿಯಿಷ್ಟು, ಯೋಗವಿಷ್ಟು, ಭೋಗವಿಷ್ಟು, ಲಬ್ಧವಿಷ್ಟು,
ಹೇಯವಿಷ್ಟು–ಉತ್ತಮ, ಮಧ್ಯಮ, ಕನಿಷ್ಠವೆಂಬ
ಮೂರರೊಳಗೆ ಒಂದೂ ನಿಜವಿಲ್ಲದೆ ಬಡಯೆತ್ತಿನ ಮುಕಳ್ಯಾಗ
ಶಗಣಿ ಸಿಕ್ಕಂತೆ ಬಹುಗುಣಿಯಾಗಿ
ಬೆಲ್ಲ ಬೇವು ಕಲಸಿ ಸವಿದಂತೆ ವ್ಯರ್ಥವಾಗಿ ಹೋಯಿತು
ಅನಂತಕಾಲ ಅನಂತಜನ್ಮ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೫ ॥

**ಪರಮಾತ್ಮಸ್ಥಲ :**

೯೩೮

ದಯಾಧರ್ಮ ಶಮೆದಮೆ, ಶಾಂತಿದಾಂತಿ ನಯಾನೀತಿ,
ಸುಮನ ಸುಬುದ್ಧಿ, ನಿರಹಂಕಾರ, ಸುಜ್ಞಾನ ಸುಚಿತ್ತ
ಸದ್ಭಾವ ಸತ್ಕರ್ಮ, ಪರೋಪಕಾರ ಸುಖಭೋಗ,
ಶಿವಯೋಗ ರಾಜಯೋಗ, ಸಾಧುರಸಂಗ, ಶಿವತತ್ತ್ವ,
ಶಿವಪೂಜೆ ಶಿವಧ್ಯಾನ ಶಿವಮಹತ್ವಾಪೇಕ್ಷೆ,
ಶಿವಸಂಕಥಾಗೋಷ್ಠಿಯಲ್ಲಿರ್ದು, ತನ್ನ ತಾನರಿಯದೇ
ಸತ್ತು ಹೋಯಿತು ಅನಂತಕಾಲ ಅನಂತಜನ್ಮ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೬ ॥

**ಷಟ್‌ಸ್ಥಲ :**

ಭಕ್ತಸ್ಥಲ :

೯೩೯

ಮೊದಲೇ ಭಕ್ತ ತನುವಕೊಟ್ಟು, ಮನವಕೊಟ್ಟು,
ಧನವಕೊಟ್ಟು, ಸತಿಸುತಪಿತರಾದಿಯಾದ ಸರ್ವವಕೊಟ್ಟು,
ಕೊಂಡುದ ಕಡೆಗಿಟ್ಟು, ನಿತ್ಯತ್ವ ಕೆಟ್ಟು
ಸತ್ತು ಸತ್ತು ಹೋಯಿತ್ತು–ಅನಂತಕಾಲ ಅನಂತಜನ್ಮ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೭ ॥

ಮಹೇಶ್ವರಸ್ಥಲ :

೯೪೦

ಘನಲಿಂಗ, ಅತೀತ, ವಿರಕ್ತಿ–ಈ ಮೂರು ಒಂದಾಗಿ
ಭವತಿಭಿಕ್ಷವ ಕೈಕೊಂಡು

ಉಂಡು ಉಪವಾಸಿ ಆಗಿ, ಬಳಸಿ ಬ್ರಹ್ಮಚಾರಿ ಆಗಿ,
ತತ್ತ್ವಮಂತ್ರೋಪದೇಶವ ಪಸರಿಸಿ,
ಆಚಾರ ಹೆಚ್ಚುಗೊಳಿಸಿ, ನಿಷ್ಠೆಯೊಳಗಿರ್ದು,
ಕಷ್ಟನಿಷ್ಠುರವನಳಿದು ಸೃಷ್ಟಿಗೆ ಮಿಗಿಲೆನಿಸಿಕೊಂಡು
ಜಗವಾದ ಬಗೆಯ ಅರಿಯದೆ ಬಗೆತಗಿಗೆ ಈಡಾಗಿ
ನಗನಗುತಾ ಸತ್ತುಹೋಯಿತು ಅನಂತಕಾಲ ಅನಂತಜನ್ಮ.
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೮ ॥

ಪ್ರಸಾದಿಸ್ಥಲ :

೯೪೧

ಬಂದದ್ದು ಅತಿಗಳೆಯದೆ, ಬಾರದ್ದು ಬಯಸದೆ
ಷಡ್ರಸವನೊಂದುಮಾಡಿಕೊಂಡು ಸವಿದುಂಡು
ಚಿಂತೆಗೆಟ್ಟು ಸಂತೋಷವು ಅಳವಟ್ಟು
ನಗಿಗೆ ಹಗೆಗೆ ಒಂದಾಗಿ, ಝುಗಝುಗನೆ ಹೊಳೆದು
ವೈರಾಗ್ಯವೇ ಆರೋಗ್ಯವಾಗಿ ಭವರೋಗಬ್ಯಾನಿಗೆ ನೆಲಿಯಾಗಿ
ಸತ್ತು ಸತ್ತು ಹೋಯಿತು ಅನಂತಕಾಲ ಅನಂತಜನ್ಮ.
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೧೯ ॥

ಪ್ರಾಣಲಿಂಗಿಸ್ಥಲ :

೯೪೨

ಅಜ್ಞಾನವಳಿದು ಸುಜ್ಞಾನಿಯಾಗಿ, ಅಂತರಂಗದವಗುಣವ ಹೊರಹಾಕಿ,
ಅಂತಃಕರಣಗಳ ಕರಿಗೊಳಿಸಿ, ಮಾನಸಪೂಜೆಯ ಮನೋಹರವಾಗಿ,
ಶುದ್ಧಸ್ಥಾವರಕ್ಕೆ ಪ್ರತಿಸ್ಥಾವರವಾಗಿ
ಅಸ್ಥಿ ಚರ್ಮ ಮಜ್ಜೆ ಮಾಂಸ ರುಧಿರ–ಮೊದಲಾದವನೆಲ್ಲಾ ಶುಷ್ಕಗೊಳಿಸಿ,
ಸುಮ್ಮನೆ ಸತ್ತು ಸತ್ತು ಹೋಯಿತು ಅನಂತಕಾಲ ಅನಂತಜನ್ಮ.
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨೦ ॥

ಶರಣಸ್ಥಲ :

೯೪೩

ಆಸೆ ಇಲ್ಲಾ, ನಿರಾಸೆ ಇಲ್ಲಾ, ಕ್ಲೇಶ ಇಲ್ಲಾ, ರೋಷವಿಲ್ಲಾ,
ದ್ವೇಷವಿಲ್ಲಾ, ದೂಷಿಯಿಲ್ಲಾ–ಇವೂ ಏನೂ ಇಲ್ಲದೇ
ತಾನಲ್ಲಾಗದೆ ಮೆಲ್ಲಮೆಲ್ಲನೆ ಸತ್ತು ಸತ್ತು ಹೋಯಿತು
ಅನಂತಕಾಲ ಅನಂತಜನ್ಮ.
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨೧ ॥

ಐಕ್ಯಸ್ಥಲ :

೯೪೪

ಸಾವುಯಿಲ್ಲಾ, ಸಾವು ಇಲ್ಲದೆ ಸಾವು ಬಂತು,
ಸತ್ತವನ ಚಂದ ಇದ್ದವಗಲ್ಲದೇ ಸತ್ತವಗೆಲ್ಲಿಹದೋ ?
ಇದ್ದವರು ಮಾಡಿದ ಮಂತ್ರಪಠನ ಸಮಾಧಿಕ್ರಿಯಾ
ಇದ್ದವರೇ ಬಲ್ಲರು, ಸತ್ತವ ಅರಿಯ.
ಸತ್ತವನೆನಿಸಿಕೊಂಡು, ಸತ್ತವ ಸಾಯದೇ,
ಸತ್ತು ಸತ್ತು ಹೋಯಿತ್ತು ಅನಂತಕಾಲ ಅನಂತಜನ್ಮ,
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೨೨ ||

೯೪೫

ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ಎಂಬ ಈ ನಿರ್ಣಯ ಹೇಳಿದ ವಿಚಾರಕ್ಕೆ
ಇನ್ನೊಂದು ಸಂಜ್ಞೆ ಅಲ್ಲವೆ, ಇದು ಅಪೂರ್ವವೇ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ ? || ೨೩ ||

**ನಿಜಶರಣನ ಚರಿತ್ರ :**

ಸತ್ಯ :

೯೪೬

ಸತ್ಯ ಸದಾಚಾರ ಸಮ್ಯಜ್ಞಾನವೆಂಬುವು ಮೂರು.
ನಾಮವೊಂದೇ ರೂಪವೊಂದೇ ಕ್ರೀವೊಂದೇ
ಕಾಯವೊಂದೇ ಕರಣವೊಂದೇ ಆತ್ಮವೊಂದೇ ಪರಮಾತ್ಮವೊಂದೇ
ನೀರು ಗಟ್ಟಿಗೊಂಡ ಆಣೆಕಲ್ಲು ನೀರೇ ಆಯಿತಲ್ಲದೇ ಕಲ್ಲಾಗಲಿಲ್ಲಾ,
ಇದರಂತೆ ಶರಣ ಒಳಹೊರಗೆಂಬ ಸಂಶಯ ಅಳಿದು
ಸರ್ವವೂ ತಾನೆಂಬ ಸತ್ಯವೇ ಸತ್ಯವಾಗಿಹನು.
ಇದೇ ಸತ್ಯ ಸತ್ಯವೆಂದು ಮಹತ್ವ ತೋರಿದರೆ ಸತ್ಯವೇ ಅಲ್ಲಾ,
ಆ ಮಹತ್ವವು ತನಗನ್ಯವೇ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ ? || ೨೪ ||

ಸದಾಚಾರ :

೯೪೭

ತಾನೇ ಎರಡಾಗಿ, ತಾನೇ ಎರಡು ಒಂದಾಗಿ,
ತನ್ನ ತಾನೆ ಅರ್ಚಿಸಿಕೊಳ್ಳುವ, ಅರ್ಚಿಸುವ ನುತಿಸುವ
ಧ್ಯಾನಿಸುವ ಜಪಿಸುವ ಶರಣುಹೋಗುವ ಹಾಡುವ

ಆಡುವ ನೋಡುವ ಕೂಡ್ರುವ ತನ್ನ ವಿನೋದ
ತನಗಾಯಿತಲ್ಲದೆ ತನಗನ್ಯವೇ ಇಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨೫ ॥

೯೪೮

ಅನ್ಯವಿಲ್ಲದ ಅರ್ಚನವೆಂತೆಂದಡೆ :
''ನಿಷ್ಕಲಂ ನಿಗಮಾತೀತಂ ನಿಶ್ಶೂನ್ಯಂ ಶೂನ್ಯಮೇವ ಚ ।
ನಿರಂಜನಂ ನಿರಾಕಾರಂ ಸಾಕಾರಂ ಪರದರ್ಶನಂ ॥
ನೀರೂಪಂ ಸ್ವರೂಪಂ ಚೈವ ನಿರ್ಗುಣಂ ಸಗುಣಂ ತತಃ ।
ಅದೃಶ್ಯ ದೃಶ್ಯಮಹಾಂತ ಸ್ವಯಂಭೂ ಪ್ರಭುವೇ ನಮಃ ॥
ಮತ್ಕಲಾಂ ಚಿತ್ಕಲಾಂ ಚೈವ ಚಿದ್ರೂಪಂ ಚಿನ್ಮಯಂ ತತಃ ।
ಚಿತ್‌ಪ್ರಕಾಶಂ ಅಖಂಡೇಶಂ ಇಷ್ಟಲಿಂಗಾಕರಂ ದ್ವಯಂ ॥
ಪಾದ್ಯಮರ್ಘ್ಯಂ ಆಚಮನಂ ಸರ್ವದೇವಸಮಾಹಿತಃ ।
ತದ್ರೂಪಂ ಸಲಿಲಂ ಸ್ವಾಹಾ ಮದೇವಸ್ನಾನಮಾಚರೇತ್ ॥
ಏಕಮೇವಭವೇಸ್ಮಾತ್ರಂ ಏಕಮಾತ್ರಂ ಭವೇನ್ಮನುಃ ।
ಏಕಮಂತ್ರಂ ಷಡಕ್ಷರಂ ಷಡಕ್ಷರಂ ಷಡಾನನಃ ॥
ಷಡಾನನಃ ಭವೇತ್ತತ್ತ್ವಂ ತತ್ವಾತೀತಂ ಅಸಂಖ್ಯಕಂ ।
ಯಥಾಚಿತ್ತಂ ತಥಾಕಾರಂ ತತ್ಫಲಂ ಸ್ವಶಿವಾರ್ಪಿತಂ ॥''
ಇಂತೀ ಪರಿಯಲಿ ಜಲ ಗಂಧ ಪುಷ್ಪ ದೀಪ ಧೂಪ
ನೈವೇದ್ಯ ತಾಂಬೂಲ ಮೊದಲಾದ ಅಷ್ಟವಿಧಾರ್ಚನೆ
ಷೋಡಶೋಪಚಾರ ಸರ್ವವು ತಾ ಮುಂತಾಗಿ
ತನ್ನ ನಿಜದಲ್ಲಿ ನಿವೇದಿಸಲದೇ ಸದಾಚಾರ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨೬ ॥

ಸಮ್ಯಕ್‌ಜ್ಞಾನ :

೯೪೯

ತನ್ನ ವಿನೋದಕ್ಕೆ ತಾನೇ ಹಲವಾದುದರಿತು,
ಹಲವಾದ ಹಲವಿನೊಳಗೆ ತಾ ಹಲವಾಗದೆ, ಹಲವು ಹಲವಲ್ಲವೆಂದು
ತಾನೇ ಹಲವೆಂದು, ಹಲವು ತಾನೆಂದು,
ಹಲವು ಹಲವೆಂದರೇನು, ತಾನು ತಾನೆಂದರಿಯನು.
ತಾನೇ ಅಲ್ಲದೆ, ಹಲವು ಎಲ್ಲಿಹದೊ, ಹಲವು ಇಲ್ಲ,
ಬೀಜ ವೃಕ್ಷವಾಯಿತ್ತೆ? ವೃಕ್ಷ ಬೀಜವಾಯಿತ್ತೆ?
ಬೀಜವೃಕ್ಷವಾದ ಮೇಲೆ ಬೀಜವೇನಾಯಿತ್ತು?
ಇದ ತಿಳಿದು ಸರ್ವಲೀಲವ ಸಮಾಪ್ತಮಾಡಿ

ಸರ್ವಸಮ ನಿರೀಕ್ಷಣೆಯಲ್ಲಿ ಸಂತುಷ್ಟವಡದು
ಅಸ್ತಮಾನದ ಆದಿತ್ಯನಂತೆಯಿರುವುದೇ ಸಮ್ಯಕ್‌ಜ್ಞಾನದೊಳಗೆ ತೋರಿದ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨೭ ॥

**ತ್ರಿಕಾಲಜ್ಞಾನದಪದ**

ಸೃಷ್ಟಿ :

೯೫೦

ಇಲ್ಲ ಇಲ್ಲೆಂಬೊ ನಿರ್ಬೈಲೊಳು ತಾನೇನು
ಇಲ್ಲದವಾಚ್ಯ ಸ್ವಯಂಭು ಬೈಲ್ಹೆಂಗಾದುದೊ ತಾನೇ ತಾನೆಂದರೆ । ಪಲ್ಲ।

ನಿರುಪಮ ನಿಃಕಳ ಪರಬ್ರಹ್ಮವಾದುದು ತಾನೆ ತಾನೆ ಆ–
ಪರಬ್ರಹ್ಮದೊಳಗೆ ಚಿತ್ಕಳೆ ಅರವು ಆದುದು ತಾನೆ ತಾನೆ
ಅರವಿನೊಳು ಅರವು ಅರಿತುದೆ ಮನವಾದುದು ತಾನೆ ಆ
ಅರಿತ ಮನವೆ ನೆನವಿಗೆ ಘನವಾದುದು ತಾನೆ ತಾನೆ । ೧ ।

ಘನವಾದ ಘನವೇ ತಾ ಘನಲಿಂಗವಾದುದು ತಾನೆ ತಾನೆ ಆ
ಘನಲಿಂಗದೊಳಗೆ ತಾ ನವಲಿಂಗವಾದುದು ತಾನೆ ತಾನೆ ಆ
ಘನಲಿಂಗವೇ ಅವನ ಅಂಗವಾದುದು ತಾನೆ ತಾನೆ
ಘನ ನವಲಿಂಗವೇ ಬಹುಬಗೆಯಾದುದು ತಾನೆ । ೨ ।

ನವಶಕ್ತಿ ನವಭಕ್ತಿ ನವನಾದವಾದುದು ತಾನೆ ತಾನೆ
ನವಚಕ್ರ ನವವರ್ಣ ನವಮಂತ್ರವಾದುದು ತಾನೆ ತಾನೆ
ನವಹಸ್ತ ನವಮುಖ ನವದೈವವಾದುದು ತಾನೆ ತಾನೆ ಈ
ನವರೂಪು ನವರುಚಿ ನವತೃಪ್ತಿಯಾದುದು ತಾನೆ ತಾನೆ । ೩ ।

ಮೂರಾರು ಮುಂದೆ ಮೂವತ್ತಾರಾದುದು ತಾನೆ ತಾನೆ ಈ
ಮೂರಾರೇ ಇನ್ನೂರಾಹದಿನಾರಾದುದು ತಾನೆ ತಾನೆ
ಮೂರಾರೇ ಹನ್ನೆರಡುನೂರಾ ತೊಂಬತ್ತಾರಾದುದು ತಾನೆ ತಾನೆ ಈ
ಮೂರಾರೇ ಮೀರಿ ಈ ಜಗಮಯವಾದುದು ತಾನೆ ತಾನೆ । ೪ ।

ಒಂದೇ ಮೂರಾದುದು ಒಂದೇ ಆರಾದುದು ತಾನೆ ತಾನೆ ಆ
ಒಂದೇ ಆರು ಮೂರು ಒಂದೇ ಬರಿ ಆದುದು ತಾನೆ ತಾನೆ
ಒಂದಾದ ಅಂದದಾನಂದ ನಾಮವಾದುದು ತಾನೆ ತಾನೆ ಈ
ಸಂದ ಮಹಾಂತನ ಕಂದನಾದುದು ತಾನೆ ತಾನೆ । ೫ ।
॥ ೨೮ ॥

ಸ್ಥಿತಿ :

೯೫೧

ಆಗ ಆದುದು ತಾನೆ ಇಕೊ ಈಗ ಆದುದು ತಾನೆ
ಕೂಗಿ ಹೇಳಿದುದು ತಾನೆ ತಲೆದೂಗಿ ಕೇಳುವುದು ತಾನೆ ।ಪಲ್ಲ।
ಬೀಜ ಬಿತ್ತಾಯಿತು ಆ ಬೀಜವೇ ವೃಕ್ಷವಾಯಿತು
ಬೀಜ ಫಲವಾಯಿತು ಬೀಜ ಬೀಜವೇ ರಸವಾಯಿತು. ।೧।

ರಸವೆ ಊಟವಾಯಿತು ಆ ರಸವೇ ತಾಟಾಯಿತು ಆ
ರಸವೇ ನೋಟಾಯಿತು ರಸವೇ ಕೂಟಾಯಿತು. ।೨।

ಕೂಟೇ ಹೆಣ್ಣಾಯಿತು ಆ ಕೂಟೇ ಗಂಡಾಯಿತು
ಕೂಟೇ ಪಿಂಡಾಯಿತು ಆ ಕೂಟೇ ಆಶಾಯಿತು. ।೩।

ಆಶೆ ದೋಷವಾಯಿತು ಆಶೆ ಪಾಶವಾಯಿತು ಆ
ಆಶೆ ಘಾಸ್ಯಾಯಿತು ಆಶೆ ಆಶೆ ನಾಶಾಯಿತು. ।೪।

ನಾಶ ನಾನಾಯಿತು ಆ ನಾಶ ನೀನಾಯಿತು
ನಾಶ ತಾನಾಯಿತು ನಾಶ ನಾಶ ಮಹಾಂತಾಯಿತು. ।೫।
॥ ೨೯ ॥

ಲಯ :

೯೫೨

ಬೈಲ ಬ್ರಹ್ಮವು ತನ್ನ ಬೈಲಿನೊಳಗೆ ತಾನೆ
ಬೈಲುರೂಪವಾಗಿ ಬೈಲಾದುದು ತಾನೆ ।ಪಲ್ಲ।

ಜಾರನೋರ್ವಗೆ ಸುತರು ನೂರೆಂಟು ಹುಟ್ಟಿಹರು
ಚೋರತನಕ್ಕೆ ಬಿದ್ದು ಹೋರುವ ತಾನೆ
ಚೋರತನಕೆ ಬಿದ್ದು ಹೋರುವ ಮಕ್ಕಳ
ಜಾರ ತಾ ಕೊಂದು ಅಳಿವನು ತಾನೆ. ।೧।

ಪುಂಡಪುಂಡರು ಕೂಡಿ ದಂಡೆತ್ತಿ ಬರುವರು
ಕಂಡಕಂಡ್ಹಂಗೆ ಕಡಿದಾಡಿ ತಾನೆ.
ಕಂಡಕಂಡ್ಹಂಗೆ ಕಡಿದಾಡಿ ಆ ದಂಡು
ಬಂಡಾಟವಾಗಿ ಹೋಗುದು ತಾನೆ. ।೨।

ಇರವಿಯ ದಂಡೆದ್ದು ಧರೆಯೆಲ್ಲ ಮುತ್ತುವುದು
ನರರಿರುವುದಕ್ಕೆ ನೆಲೆಯಿಲ್ಲ ತಾನೆ.
ನರರಿರುವುದಕ್ಕೆ ನೆಲೆಯಿಲ್ಲದಂತಾಗಿ
ಧರೆ ಉರಿದಿರಿವಿ ಅಳಿವುದು ತಾನೆ. ।೩।

ಇದ್ದ ದೈವಗಳೆಲ್ಲ ಬಿದ್ದುರುಳಿ ಹೋದಾವು
ಸುದ್ದಿ ಕೇಳೋರ್ವ ಬರುವನು ತಾನೆ
ಸುದ್ದಿ ಕೇಳೋರ್ವ ಬಂದು ತಾ ಮಾಡಿದ
ಬುದ್ಧಿಂದ ಸೀಮಾ ನೇಮವು ತಾನೆ. ।೪।

ಮಾಡಿದ ನೇಮ ಸೀಮಾ ಮಾಡಿದಂತಿರದೆ ತಾ
ಕೂಡೋದು ಜಾತಿಸಂಕರ ತಾನೆ
ಕೂಡೋದು ಜಾತಿಸಂಕರವಾಗಲು
ರೂಢಿಯೊಳಗೆ ಮಹಾಶ್ಚರ್ಯವು ತಾನೆ. ।೫।

ಹಿಂದೆ ಬಸವರಾಜ ಬಂದು ತೋರಿದ ಮಹತ್ವಕ್ಕೆ
ಅಂದೇ ಆಯಿತು ವಿಘ್ನ ಪ್ರಮಥರಿಗೆ ತಾನೆ
ಅಂದಾದ ವಿಘ್ನಕ್ಕೆ ಪ್ರಮಥರು ತಾವೆಲ್ಲಾ
ಮುಂದಾಗುವದು ಸೂಚಿಸಿದರು ತಾನೆ. ।೬।

ಮುಂದಾದುದು ತಾನೆ ಮುಂದೇನಾಗುವದು ಅದ
ರಂದವ ಅರಿಯದೆ ಉಳುವಿಟ್ಟರು ತಾನೆ
ಅಂದವರಿಯದೆ ತಾವು ಉಳುವಿಟ್ಟು ಹೋದ ಕಾರಣ
ಬಂದುಹೋಗುವದು ಭವವುಂಟು ತಾನೆ. ।೭।

ಚನ್ನಣ್ಣ ಬರುವದು ಬಿನ್ನಣ ಮುಂದುಂಟು
ಚನ್ನಣ್ಣನಿಂದೇನಾಗುವದು ತಾನೆ
ಚನ್ನಣ್ಣನಿಂದೇನಾಗದಿರಲು ಆಗ
ತನ್ನ ತಾ ತಿಳಿದು ನಿಜವಹ ತಾನೆ ।೮।

ಆರು ಕೂಡಿಸಿದರೆ ಕೂಡದು ಆರು ಅಗಲಿಸಿದರೆ ಅಗಲದು
ಆರಿಗೆ ಆರಾಗಿ ಮೀರುವದು ತಾನೆ
ಆರಿಗೆ ಆರಾಗಿ ಮೀರುವ ಮಾತಿಗೆ
ಘೋರಾಟವಾಯಿತು ಬಹುಜನ್ಮ ತಾನೆ ।೯।

ಒಂದೊಂದು ಜೀವದಿಂದೆ ಮುಂದೊಮ್ಮೆ ಸರ್ವಜೀವವು
ಹೊಂದಿ ಹೋಗುವದು ಲಯವಾಗಿ ತಾನೆ
ಹೊಂದಿ ಹೋಗುವದು ಲಯವಾಗಿ ಅದರೊಳ್
ಬಂದುಳಿದು ಹಲವಾಗುವದು ತಾನೆ ।೧೦।

ನಿಷ್ಠೆ ನೆಲೆಗೊಳಿಸಿ ನಿಷ್ಠೆಯೊಳ್ ಅಳಿವರು
ನಿಷ್ಠೆ ಉಳ್ಳವರು ನಿಜವಲ್ಲ ತಾನೆ
ನಿಷ್ಠೆಯುಳ್ಳವರು ನಿಜವಲ್ಲ ಇದರಂತೆ
ದುಷ್ಟರು ದುಷ್ಟರೊಳ್ ಅಳಿವರು ತಾನೆ ।೧೧।

ಅಳಿದದ್ದು ಅಳಿವುದು ಉಳಿದದ್ದು ಉಳಿವುದು
ಇಳೆಯು ನೀರೊಳ್ ಕರಗುವದು ತಾನೆ
ಇಳೆಯು ನೀರೊಳು ಕರಗಿದ ಕಾಲಕ್ಕೆ
ಬಲವಂತನೊಬ್ಬನು ಬರುವನು ತಾನೆ । ೧೨ ।

ಬಲವಂತ ಬಂದಾಗ ನೆಲಜಲ ನೆಲಮಾಡಲು
ಹಲವುಕಾಲ ಮತ್ತಾಗುವದು ತಾನೆ
ಹಲವುಕಾಲ ಮತ್ತಾಗುವದು ಈ ಪರಿ
ನೆಲೆಯೊಳಳಿವು ಸಾಕಾರಕ್ಕೆ ತಾನೆ । ೧೩ ।

ಆರಾರ ವ್ಯಾಳ್ಯಕ್ಕೆ ಮೀರುವದು ಈ ಭೂಮಿ
ನೀರೊಳು ಕೂಡಿ ನೀರಾಗುವದು ತಾನೆ
ನೀರೊಳು ಕೂಡಿ ನೀರಾಗಿರಲು ಆ ನೀರು
ನೀರರ್ತು ಅಗ್ನಿ ಆಗುವದು ತಾನೆ । ೧೪ ।

ಅನಲಾನ ಉರಿನುಂಗಿ ಅನಿಲಾನ ಒಳಕೊಂಡು
ಅನುವಾಯಿತು ಆಕಾಶ ಆತ್ಮನೊಳು ತಾನೆ
ಅನುವಾಯಿತು ಆತ್ಮನೊಳು ಆಕಾಶ ಆ ಆತ್ಮ
ಚಿನುಮಯನೊಳಗೆ ತನುಮಯ ತಾನೆ । ೧೫ ।

ಲೀಲವನುಳಿದು ತಾ ಲೀಲವಾಗಲು ಮಹಾಂತ
ಮೂಲೋಕವೆಲ್ಲಾ ಸಾಲೋಕ್ಯ ತಾನೆ
ಮೂಲೋಕವೆಲ್ಲಾ ಸಾಲೋಕ್ಯವೆಲ್ಲುಂಟು
ಲೀಲ ಮೇಲಾಗಿ ತಾನಹನು ತಾನೆ. । ೧೬ ।
॥ ೩೦ ॥

ನಿಜಶರಣನ ಅನುಭವ :

೯೫೩

ಒಂದು ಮರವ ಕೊರೆದು ನೂರೆಂಟು ಬೊಂಬೆಯ ಮಾಡಿ
ಮರವೇ ಬೊಂಬೆಯಲ್ಲದೆ ಮರ ಬ್ಯಾರೆ ತಾನಿಲ್ಲಾ,
ಇದರಂತೆ ತಾನೇ ಹಲವು ಆಗಲು ತಾನೇ
ಹಲವಲ್ಲದೆ ತಾ ಬ್ಯಾರೆಲ್ಲಿಹನೋ ಇದೇ ಅನುಭವ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೩೧ ॥

೯೫೪

ಕಸ್ತೂರಿಮೃಗವು, ಕಸ್ತೂರಿಯ ಹುಡುಕುತ್ತ ಹೋದರೆ
ಕಸ್ತೂರಿಮೃಗವು ತಾನಲ್ಲದೆ ಕಸ್ತೂರಿಯು ಸಿಗಲುಂಟೆ ?

ಕನ್ನಡಿಯ ಮಹಲಿನೊಳಗೆ ಕುನ್ನಿ ತಾ ಕೂತು
ಸುತ್ತಲಿರ್ದ ಕನ್ನಡಿಯೊಳಗೆ ಕುನ್ನಿಗಳ ಕಂಡು
ತನ್ನ ರೂಹೆಂದು ಅರಿಯದೆ ಅನ್ಯವೆಂದು ಕೂಗಲು
ಆ ಕೂಗು ಎಂದಿಗೆ ಮಾಣ್ಬುದೋ ತನ್ನ ತಾ ತಿಳಿದಂದಿಗಲ್ಲದೆ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೨ ||

೯೫೫

ಒಂದು ರಾಷ್ಟ್ರದಲ್ಲಿ ಒಂಬತ್ತು ಅಗಸಿಯನುಳ್ಳ
ಮೂರು ಸುತ್ತಿನಾ ಕೋಟೆಯ ಗಡಹವಿರ್ಪುದು.
ಆ ಗಡಹವ ನೋಡ ಹೋಗಲು, ಆ ಗಡಹದ
ನವದ್ವಾರವು ತೆರೆದಿರಲು, ಅಲ್ಲಿ ಒಳಹೊಕ್ಕು ನೋಡಲು
ಎತ್ತ ನೋಡಿದರತ್ತ ವಜೀರ, ಉಮರಾವತ, ಅರಣ್ಯ, ಠಾಣ್ಯ
ಮೊದಲಾದ ಅನಂತ ಪರಿವಾರ ಆರೈಸಿರುವದು.
ಅಲ್ಲಿ ವೇದ ಆಗಮ ಪುರಾಣ ಮೊದಲಾದ
ನೃತ್ಯ ಹಾಸ್ಯ ಗಾಯನ ಅನಂತ ಉತ್ಸಹವಿರ್ಪುದು.
ಅಲ್ಲಿ ದೀವಟಿಗೆಯು ಬಿರಸು ಚಂದ್ರಜ್ಯೋತಿ ದೀಪ
ಮೊದಲಾದ ಅನಂತ ಪ್ರಕಾಶವಿರ್ಪುದು.
ಅಲ್ಲಿ ಭೇರಿ, ನಗಾರಿ, ತಮ್ಮಟೆ, ಕಾಳಿ, ಕರ್ಣೆ
ಮೊದಲಾದ ಅನಂತ ನಾದವಿರ್ಪುದು.
ಮತ್ತಲ್ಲಿ ಒಳಹೊಕ್ಕು ನೋಡಲು ಮುಂದೆ
ಚಿತ್ರವಿಚಿತ್ರವಾದ ಮಂಟಪವಿರ್ಪುದು.
ಆ ಮಂಟಪದ ಸುತ್ತ ಅರವಿಂದ ನೀಲೋತ್ಪಲ
ಸಂಪಿಗಿ ಇರವಂತಿಗೆ ಶ್ಯಾವಂತಿಗಿ ಮೊಲ್ಲೆ ಮಲ್ಲಿಗಿ
ಮೊದಲಾದ ಅನಂತ ಪುಷ್ಪಮಾಲೆಗಳಿರ್ಪವು.
ಬಹುವರ್ಣದ ರಂಗವಾಲಿಯ ನೆಲಗಟ್ಟಿರ್ಪುದು.
ಅದರೊಳಗೆ ನೋಡಬೇಕೆಂದು ಹೋಗಲು
ಮುಂದೆ ನವರತ್ನಖಚಿತವಾದ ಸಿಂಹಾಸನವಿರ್ಪುದು.
ಆ ಸಿಂಹಾಸನದ ಮೇಲೆ ಅಧಿಪತಿಯಾಗಿ ಇರುವಾತ
ಎಂಥಾತ ಆತನ ಆತುರದಿ ನೋಡಬೇಕೆಂದು
ಆ ಸಿಂಹಾಸನವೇರಲು ಅಲ್ಲಿಯ ಅಧಿಪತಿ ತಾನೇ ಆಗಿರ್ದ.
ಇದೇನು ಸೋಜಿಗವೋ, ತಾ ನೋಡ ಬಂದವನೆಂಬ ಅರವಿಲ್ಲ,
ಅಲ್ಲಿ ಅರಸನ್ಯಾವನೆಂಬ ಸಂಶಯವಿಲ್ಲದೆ ಅಲ್ಲಿಯ ಸರ್ವಕ್ಕೆ
ತಾನೇ ಅಧಿಪತಿಯಾಗಿ ಇದ್ದಾಗ್ಯೂ ಆವಾಗಲೂ
ಅಲ್ಲೇ ಇರ್ದಂತೆ ಇರುತಿರ್ದನೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೩ ||

ನಿಜಶರಣನ ನೀತಿ :

೯೫೬

ಈ ಭುವನದಲ್ಲಿ ಐದು ಜೀನಸಿನ ಐದು ವೃಕ್ಷ.
ಆ ಐದು ವೃಕ್ಷಕ್ಕೆ ಐದೈದು ಜೀನಸಿನ ಐದೈದು ಶಾಖೆಗಳು.
ಆ ಐದೈದು ಶಾಖೆಗಳಿಗೆ ಐದೈದು ಅಡ್ಡ ಶಾಖೆಗಳು.
ಆ ಅಡ್ಡ ಶಾಖೆಗಳಿಗೆ ಅನಂತ ಜೀನಸಿನ ಅನಂತ ಎಲೆಗಳು.
ಇಂತಪ್ಪ ಐದು ವೃಕ್ಷಗಳ ಬುಡ ಕೊನಿ ಒಳಗ ಮಾಡಿಕೊಂಡು,
ಬುಡ ಕೊನಿ ಇಲ್ಲದ ಬಳ್ಳಿ ಆ ಆ ಜೀನಸಿಗೆ ತಾನು ಆ ಆ ಜೀನಸಾಗಿ
ಆ ಗಿಡಯೆಂಬ ಗುರ್ತು ತೋರಿದ ಹಾಗೆ ಮುಸುಕಿಟ್ಟೈಹುದು.
ಆ ಮುಸುಕಿಟ್ಟ ಬಳ್ಳಿಯ ಚಿಗುರೆಲೆಯನು ಹರಿಯದೆ,
ಆ ವೃಕ್ಷದ ಕೊನರು ಡೊಂಕಿಸದೆ
ಆ ಬುಡ ಕೊನಿಯಿಲ್ಲದ ಬಳ್ಳಿಯ ಕಡೆದೆಗೆದ ನಿಮ್ಮ ನಿಜಶರಣನು
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೪ ||

೯೫೭

ಬೆಡಗು :

ಕೊಡಲಿ ಪಿಡಿದಲ್ಲದೇ ಕಾಡು ಕಡಿಯದು.
ಆ ಕಾಡ ಕಡಿದಲ್ಲದೆ ಕಲ್ಪವೃಕ್ಷದ ವನವು ಕಾಣದು.
ಆ ಕಲ್ಪವೃಕ್ಷದ ವನವ ಕಂಡಡೂ,
ಆ ಕಲ್ಪವೃಕ್ಷದ ವನವನಳಿದಲ್ಲದೆ ಕದಳಿಯು ಸಿಗದು.
ಆ ಕದಳಿಯ ಸುಲಿದು ಒಳಪೊಕ್ಕಲ್ಲದೆ ನಿಜವು ತಿಳಿಯದು.
ಆ ನಿಜವು ತಿಳಿದಲ್ಲದೆ ನಿರ್ಬಯಲು ತಾನಾಗದು
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೫ ||

ನಿಜಶರಣನ ಮುಕ್ತಿ :

೯೫೮

ಸುಳ್ಳಪ್ಪನ ಮಗ ಕಳ್ಳಪ್ಪ, ತಳ್ಳಿಗೆ ಹೋಗಿ ಕೊಳ್ಳಿಯಕೊಟ್ಟು
ಹಾಳ ಹಳ್ಳಿಯ ಸುಲಿದು, ಬೆಳ್ಳಿ ಬಂಗಾರ ಎಳ್ಳಷ್ಟು ಕೊಡಲಿಲ್ಲಾ.
ಕಳ್ಳಪ್ಪನ ಸುಳ್ಳಪ್ಪ ಕೇಳಲು, ಆ ಕಳ್ಳಪ್ಪ ಸುಳ್ಳಪ್ಪನಾದ
ಆ ಸುಳ್ಳಪ್ಪ ಮಳ್ಳಪ್ಪನಾದ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೬ ||

೯೫೯

ನನ್ನ ಕಾಲು ನನ್ನ ಕೈ ನನ್ನ ಕಣ್ಣು ನನ್ನ ಮೂಗು
ನನ್ನ ಬಾಯಿ ನನ್ನ ಮೈ ನನ್ನ ಮನ ನನ್ನ ಪ್ರಾಣ

ಇವು ಮೊದಲಾದ ಸಮಸ್ತವು ನನ್ನದೆಂಬುದು ಅದಾವುದದು ?
ಆವುದು ಅಕೊ ಅದೇ ತಾನಾದನಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೩೭ ||

೯೬೦

ಅದೇ ಅದೇ ಎಂಬಲ್ಲಿ, ಇದು ಎಂಬುದುಂಟೆ ?
ಅದು ಎಂದರೆ ವಸ್ತು, ಇದು ಅಂದರೆ ಅರಿವು.
ಇದು ಹೋದ ವ್ಯಾಲೆ ಅದು ಇರಲಿಲ್ಲಾ.
ಕರ್ಪುರಕ್ಕೆ ಹತ್ತಿ ಉರಿವ ಉರಿ, ಆ ಕರ್ಪುರವು
ಕರಗಿ ಹೋದ ಮೇಲೆ ಆ ಉರಿಯು ಏನಾಯಿತೊ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ ? || ೩೮ ||

**ಷಡವತಾರ :**
ಸದ್ಯೋಜಾತಮೂರ್ತಿಚರಿತ್ರ :
(ಕೈಲಾಸವಿಲಾಸ)

೯೬೧

ಶ್ರೀಮತ್ ಸಚ್ಚಿದಾನಂದ ನಿತ್ಯಪರಿಪೂರ್ಣ
ಅವಿರಳಪರಂಜ್ಯೋತಿಸ್ವರೂಪವೇ ಮಹಾಂತ
ಅಖಂಡಪರಶಿವಬ್ರಹ್ಮದ ನಿಜಚಿದ್ವಿಲಾಸದೊಳಾದ
ಬ್ರಹ್ಮಾಂಡಮಂಡಲಕ್ಕೆ ನಡುಗಂಬವಾದ ಬಳಿಕ
ಅನಂತ ನರ ನಾಗ ಸುರ ಅಸುರ ಮನು ಮುನಿ
ಮನೋವಿಷ್ಟಪ್ರದಾಯಕ ಈರೇಳುಲೋಕಾಧಾರ
ಮಹಾಮೇರುಶಿಖರಮಂದಿರಮಂಟಪಮಧ್ಯದೊಳೆಸೆವಾ
ನವರತ್ನಸಿಂಹಾಸನಾಗ್ರದವ್ಯಾಲೆ ಆ ನಿರ್ಬಯಲವೇ ಗಟ್ಟಿಗೊಂಡು
ಆ ಅಖಂಡಪರಬ್ರಹ್ಮವೇ ವಿನೋದದೊಳಗೊಂದು
ವಿನೋದವಾಗಿ ತಾನೇ ರೂಪದೋರಿ,
ಪಂಚಮುಖ ದಶಭುಜ ತ್ರಿಪಂಚನೇತ್ರ ವಿಷಕಂಠ ಗಂಗೋತ್ತುಮಾಂಗ
ಚಂದ್ರಮೌಳಿ ಅಹಿಕುಂಡಲಿ ಗಜಚರ್ಮಾಂಬರ
ಅರ್ಧನಾರೀಶ ವ್ಯಾಘ್ರಾಜಿನುಡಿಗೆ ಹರಿನಯನಾಂಕಿತ ಪಾದಪಂಕಜ
ಶ್ರೀಮನ್‌ಮಹಾದೇವ ಮೂರ್ತಿಗೊಂಡಿರಲು
ಅಲ್ಲಿ ಹರಿ ಅಜ ಇಂದ್ರಾದ್ಯಷ್ಟ ದಿಕ್ಪಾಲಕರು
ಅಷ್ಟವಸುಗಳು ಹದಿನಾಲ್ಕು ಮನುಗಳು
ಎಂಬತ್ತೆಂಟುಕೋಟಿ ಮುನಿಗಳು
ಮುನ್ನೂರಾಮೂವತ್ತಾರು ಕೋಟಿ ದೇವತೆಗಳು
ಕಿನ್ನರರು ಕಿಂಪುರುಷರು ಗರುಡರು ಗಂಧರ್ವರು

ಸಿದ್ಧರು ಸಾಧ್ಯರು ಸಾಧಕರು ಅಪ್ಸರೆಯರು ನಾಗದೇವತೆಗಳು
ಮೊದಲಾದ ಅನಂತ ದೇವತೆಗಳು,
ಮತ್ತೆ ವೀರೇಶ ನಂದೀಶ ಭೃಂಗೀಶ ವಿಘ್ನೇಶ
ಕಾಲಭೈರವ ಮಹಾಕಾಯ ಗಜಕರ್ಣ ಘಂಟಾಕರ್ಣ ಶಂಖಕರ್ಣಾದಿ
ವ್ಯಾಘ್ರಮುಖ ಸಿಂಹಮುಖ ವಾಮಮುಖ
ಗಜಮುಖಾದಿಯಾದ ಅನಂತ ಮುಖದವರು,
ಏಕಾಕ್ಷ ದ್ವಿಯಕ್ಷ, ತ್ರಿಯಕ್ಷ ಶತಾಕ್ಷ ಸಹಸ್ರಾಕ್ಷ ಅನಂತಾಕ್ಷರರು,
ಏಕಜಿಹ್ವೆ ದ್ವಿಜಿಹ್ವೆ ತ್ರಿಜಿಹ್ವೆ ಶತಜಿಹ್ವೆ ಸಹಸ್ರಜಿಹ್ವೆ
ಮೊದಲಾದ ಅನಂತ ಜಿಹ್ವೆಗಳು,
ಏಕ ದ್ವಿತೀಯ ಪಂಚ ಶತ ಸಹಸ್ರನಾಸಿಕ ಮೊದಲಾದ ಅನಂತ ನಾಸಿಕರು,
ಇದರಂತೆ ಅನಂತಪಾದ ಅನಂತಬಾಹು
ಅನಂತಶಿರ ಮೊದಲಾದ ಗಂಗೆಯ ಮೇಲ್ಗಣಿತಕ್ಕೆ ಮೀರಿದ
ಪ್ರಮಥಗಣ ರುದ್ರಗಣ ಅಮರಗಣ ಮಹಾಗಣಂಗಳು,
ಓಲೈಸಿ ಮೆರೆಯುವ ವೇದಾಗಮ ಪುರಾಣಶಾಸ್ತ್ರ ಉಪನಿಷತ್ತು
ಬಲ್ಲ ಪಾಂಡಿತ್ಯರು ವೇದಾಧ್ಯಯನರು ನವರಸವ ಬಲ್ಲ ಕವಿಗಳು
ಗಮಕಿ ವಾದಿ ವಾಗ್ಮಿಗಳು, ರಾಗವಿಶಾರದರಾದ
ನಾರದ ತುಂಬುರ ಕಂಬಲ ಅಶ್ವತ್ಥರು, ಪಾಠಕ ಪರಿಹಾಸಕರ ಬಹುನಾಟ್ಯದಿಂ
ಭೇರಿ ಮೃದಂಗ ಮೊದಲಾದ ಅನಂತ ನಾದಘೋಷ
ಅನಂತ ಮಾಂಗಲ್ಯೋತ್ಸವದಿಂದ ಓಲಗವ ಕೈಕೊಂಡು
ಅನಂತ ಸೌಖ್ಯದಲಿ ಪರಮಾತ್ಮನೆನಿಸಿ ಮೆರೆಯುವಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೩೯ ॥

ವಾಮದೇವಮೂರ್ತಿಚರಿತ್ರೆ :
(ಭೂವಿಲಾಸ)

೯೬೨

ಅಂತಾದ ಕೈಲಾಸ ಮಹಾಮೂರ್ತಿಪರಮಾತ್ಮನು
ತನ್ನ ವಕ್ಷ ಭಸ್ಮೋದ್ಭವ ರೇಣುರೂಪೆನಿಸಿದ ರೇಣುಕಾಖ್ಯ ತಾನಾಗಿ
ಲೋಕಪಾವನಾರ್ಥವಾದ ನಾರದಮುನಿ ವಿನಂತಿಗೆ
ಭೂವನಿತೆಯ ಭ್ರೂಮಧ್ಯ ಮಹಾಲಿಂಗವಾದ
ಕೊಲ್ಲಿಪಾಕಿ ಸೋಮೇಶ್ವರನೊಳುದ್ಭವಿಸಿ,
ಅರಿಯದೇಳುನೂರುವರ್ಷ ಸರ್ವೇಂದ್ರಿಯಗಳ ಶಿಕ್ಷಿಸಿ,
ನಿಜತತ್ತ್ವ ತಿಳಿಯುವುದಕ್ಕೆ ತನ್ನ ಬಯಸುವರ್ಗೆ ತತ್ತ್ವೋಪದೇಶವ ಕೈಗೊಳಿಸಿ,
ಸರ್ವತೀರ್ಥ ಸರ್ವದೇಶವ ನೋಡುವುದಕ್ಕೆ
ಖೇಚರಿಯ ಗಮನದಲ್ಲಿ ನೋಡುತ್ತ ಸಂಚರಿಸುತಿರ್ದು

ಮತ್ತೇಳ್ನೂರುವರ್ಷ ಲೋಕೋಪಕಾರವಾಗಿ ಸರ್ವಜನ ಅಭೀಷ್ಟೆಯನು ಸಲ್ಲಿಸಿ,
ಮುನ್ನೂರು ರಾಜಕುಮಾರಿಯರ ಮದುವೆಯಾಗಿ,
ಪೊಡವಿಡಿ ರುದ್ರಮುನಿಸ್ವಾಮಿಗಳ ಪಡೆದು,
ಷಡ್ವಿಧಾಚಾರ್ಯರೊಳಗೆ ಪಂಚಾಚಾರ್ಯರಂ ಪ್ರತಿಷ್ಠಿಸಿ,
ಪಂಚಬಗೆಯ ನಾಮವಿಟ್ಟು ಪಂಚಸಿಂಹಾಸನಕ್ಕೆ ಕರ್ತವ್ಯಮಾಡಿ
ಘನಲಿಂಗ, ಅತೀತ, ಪಟ್ಟ, ಪರದೇಶಿ, ಮಹಾಂತ, ನಿರಂಜನನೆಂಬ
ಆರರೊಳಗೆ ಐದು ಇದಿರಿಟ್ಟು,
ರುದ್ರಮುನಿಸ್ವಾಮಿಗಳ ಪಾದದಲ್ಲಿ
ಹಲವು ಶಿಷ್ಯರ ಪಡೆಸಿ, ಮಂತ್ರೋಪದೇಶವ ಕೊಡಿಸಿ,
ಭುವನಜನ ಶಿಕ್ಷ ದೀಕ್ಷೋಪದೇಶಕ್ಕೆ ಕರ್ತೃತ್ವ ಕೈಗೂಡಿಸಿ,
ದೇಶ ದೇಶದಲ್ಲಿ ನೆಲೆಗೊಳಿಸಿ ಸರ್ವಭೋಗ ಬಂಧ ಸುಖ ತನ್ನ ಪುತ್ರಂಗೆ ಇತ್ತು
ಪೊಡವಿಡಿ ರುದ್ರಮುನಿಸ್ವಾಮಿಯೆಂಬ ನಾಮ ಗುರ್ತಿಟ್ಟು
ಬಹುನಾಮವನಂಗೀಕರಿಸಿ ಈ ಭುವನದಲ್ಲಿ ಮೆರೆಯುವಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೪೦ ||

ಅಘೋರಮೂರ್ತಿಚರಿತ್ರ :

(ಮದ್ವಿಲಾಸ)

೯೬೩

ಈ ಪೊಡವಿಯ ಮಡದಿಯ ನಡುನಯನದ ಬೆಡಗಿನ
ಬೆಳಗಿನೊಳೆಸೆವಾ ಬಾಳೇಹಳ್ಳಿ ಸಿಂಹಾಸನಾಧೀಶ
ಪೊಡವಿಡಿ ರುದ್ರಮುನಿಸ್ವಾಮಿಗಳ ಕರಕಂಜೋದ್ಭವರಾದ
ಚಿಕ್ಕರೇವಣಸಿದ್ಧಸ್ವಾಮಿಗಳು ಎನಿಸಿದರು.
ಆ ಚಿಕ್ಕ ರೇವಣಸಿದ್ಧಸ್ವಾಮಿಗಳ ಶಿಷ್ಯ ಗುರುನಂಜಸ್ವಾಮಿ,
ಆ ಗುರುನಂಜಸ್ವಾಮಿಗಳ ಶಿಷ್ಯ ರಾಚೋಟಿಸ್ವಾಮಿ,
ಆ ರಾಚೋಟಿಸ್ವಾಮಿಗಳ ಶಿಷ್ಯ ನಿಡುಮಾಮಿಡಿ ಕರಿಬಸವಸ್ವಾಮಿ,
ಆ ಕರಿಬಸವಸ್ವಾಮಿಗಳ ಶಿಷ್ಯ ಮಲಘಣ ಶಾಂತಸ್ವಾಮಿಗಳು,
ಆ ಮಲಘಣದ ಶಾಂತಸ್ವಾಮಿಗಳ ಶಿಷ್ಯ ಜಡೆಶಾಂತಸ್ವಾಮಿಗಳು
ಆ ಜಡೆಶಾಂತಸ್ವಾಮಿಗಳ ಶಿಷ್ಯ ಮಹಾಂತಸ್ವಾಮಿಗಳು,
ಆತನ ಶಿಷ್ಯ ಮಡಿವಾಳಸ್ವಾಮಿ,
ಆತನ ಶಿಷ್ಯ ರಾಚೋಟಿಸ್ವಾಮಿಗಳು,
ಆತನ ಶಿಷ್ಯ ಮಹಾಂತಸ್ವಾಮಿ,
ಆತನ ಶಿಷ್ಯ ಅತೀತವ ಕೈಕೊಂಡು ಸರ್ವಕ್ಕೆ ಅತೀತನಾದ
ಚಿಣಮಗೇರಿ ಚೌಡಾಪೂರ ನಡುಸೀಮಿ ಗುಡ್ಡದ ಯೋಗಿಯೆನಿಸಿದ
ಮಹಾಂತಸ್ವಾಮಿಗಳು,

ಆತನ ಶಿಷ್ಯ ಮಡಿವಾಳಸ್ವಾಮಿ,
ಆತನ ಶಿಷ್ಯ ಮುರಿಸ್ವಾಮಿಗಳು, ಆತನ ಶಿಷ್ಯ ಗುರುಬಸವದೇವರು.
ಆ ಗುರು ಬಸವದೇವರ ಕನ್ನೆ ಶಿಷ್ಯ ಬಿದನೂರ ಮಡಿವಾಳಾಖ್ಯನು.
ಆ ಮಡಿವಾಳಾಖ್ಯನೆಂಬ ನಾಮವಿಡಿದು ನಿರ್ನಾಮಲೀಲಾ ನಟಿಸಬೇಕೆಂಬ
ಅರವಿನೊಳಗೆ ಮರವಾಗಿರ್ದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೧ ॥

ತತ್ಪುರುಷಮೂರ್ತಿಚರಿತ್ರ :
(ಚಿದ್ವಿಲಾಸ)

೯೬೪

ಹಲವು ಲೀಲೆಯೊಳಗೆ ಗುರುಶಿಷ್ಯ ಎರಡಾದ ವಿನೋದವೇನೆಂಬೆ ?
ಎನ್ನ ಶ್ರೀಗುರು ಬಸವೇಶ್ವರನು ಎನ್ನ ಶಿಕ್ಷಿಸಿ ದೀಕ್ಷೆಯನೆಸಗಿ
ಮೋಕ್ಷದಖಣೆಯಮೂರ್ತಿಯತಂದು, ತನ್ನ ಗುರು ತನ್ನ ಗುರ್ತವ ತೋರಿದಾ.
ಆ ಗುರ್ತವ ಎನ್ನ ಕೈಯಲ್ಲಿಟ್ಟು ಈ ಮಹಾಂತನ ಪೂಜಿಸಿ
ಮುಕ್ತಿಯ ಪಡಿಯೆಂದು ನಿರೂಪಿಸಲು,
ಆ ಗುರುನಿರೂಪವ ಕೈಕೊಂಡು ಮಹಾಂತನ ಮುಂದಿಟ್ಟುಕೊಂಡು
ಈ ಮಹಾಂತ ಎನ್ನ ಗುರುವಿನಗುರು ಎನಗೆ ಪರಮಾರಾಧ್ಯ
ತಾ ಲಿಂಗವಾಗಿ ಬಂದಕಾರಣವೇನೆಂದು ತನ್ನೊಳಗೆ ತಾನೆ ವಿಚಾರಿಸಲು,
ಅಲ್ಲಿ ಹೊಳೆದುದು ನೀನು ನನಗೆ ಪರಮಾರಾಧ್ಯ,
ಒಂದೇ ಲಿಂಗವೇ ಹಲವರಾಗಿ ತೋರಿದಿರಿ.
ಅದೆಂತೆಂದಡೆ :
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಪಂಚಾಕ್ಷರಿಯಮಂತ್ರ
ಮತ್ತು ಶಿಕ್ಷಾಗುರು ದೀಕ್ಷಾಗುರು ಮೋಕ್ಷಾಗುರು
ಗುರುವಿನಗುರು ಪರಮಗುರು ಪರಮಾರಾಧ್ಯ
ಮಹಾಂತದೇವರ ದೇವ ನೀನೇ ಆದಿ.
ನೀವು ಹೀಂಗಾದ ಪರಿಯೆಂತೆಂದಡೆ :
ಮೊದಲೇ ಶಿಕ್ಷಾಗುರು ಶಿಖಾಮಣಿಸ್ವಾಮಿಯೆನಿಸಿದಿರಿ,
ದೀಕ್ಷಾಗುರು ಗುರುಬಸವಸ್ವಾಮಿಯೆನಿಸಿದಿರಿ,
ಮೋಕ್ಷಾಗುರು ಶ್ರೀಮನ್‌ಮಹಾಮುರಘೆಯಸ್ವಾಮಿಗಳ ಚರಮೂರ್ತಿ
ಸಿರಿವಾಸ ಚನ್ನಬಸವೇಶ್ವರರೆನಿಸಿದಿರಿ.
ಗುರುವಿನಗುರು ಹಳಪ್ಯಾಟಿ ಬಸವಯ್ಯನೆನಿಸಿದಿರಿ.
ಪರಮಗುರು ಭಂಗೀಪರ್ವತದೇವರೆನಿಸಿದಿರಿ.
ಪರಮಾರಾಧ್ಯ ಗೊಬ್ಬೂರ ಸದಾಶಿವದೇವರೆನಿಸಿದಿರಿ.
ಸರ್ವದೇವರು ಮಹೇಶ್ವರರು ಎನಗೆ ಮಹಾಮಹಾಂತನೆನಿಸಿದಿರಿ.

ಎನ್ನ ದೇವರದೇವ ಸರ್ವವು ನೀನೇ ಆಗಿರ್ದು,
ನೀನು ಒಂದೇ ಪರಮಾರಾಧ್ಯರೆನಲುಂಟೆ ?
ಒಂದೇ ನೀ ಎನಗೆ ಲಿಂಗವಾದನೆನಲುಂಟೆ ?
ಲಿಂಗವಾದಾತನು ನೀನೆ, ಪರಮಾರಾಧ್ಯನಾದಾತನು ನೀನೆ,
ಗುರುವಾದಾತನು ನೀನೆ, ಅರುವಾದಾತನು ನೀನೆ,
ನೀನಲ್ಲದೆ ಮತ್ತೊಂದು ಬ್ಯಾರೆ ಭಾವಿಸಲುಂಟೆ ?
ಎನ್ನ ಹುಟ್ಟಿಸಿದ ಮಹಾಂತನು ನೀನೆ,
ಎನ್ನ ಬೆಳಸಿದ ಶರಣಬಸವಪ್ಪನು ನೀನೆ
ಎನ್ನ ಮನ್ನಿಸಿದ ಘನಸಿದ್ದಪ್ಪನು ನೀನೆ,
ಎನ್ನ ನಿಂದಿಸಿದ ಹಳಪ್ಯಾಟಿ ಬಸಯ್ಯನು ನೀನೆ,
ಉಣಿಸುವ ಉಡಿಸುವ ಹಾಸುವ ಹೊಚ್ಚುವ
ಮುಚ್ಚುವ ಚುಚ್ಚುವ ಹಳಿವ ಮುಳಿವ
ಸರ್ವವೂ ಎನಗೆ ನೀನಲ್ಲದೆ ಮತ್ತೊಬ್ಬರಿಲ್ಲ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೨ ॥

ಈಶಾನ್ಯಮೂರ್ತಿಚರಿತ್ರ :

(ಮಹಾಂತವಿಲಾಸ)

೯೬೫

ಗುರು ಶಿಷ್ಯ ಎರಡು ಒಂದಾದ ವಿನೋದವೇನೆಂಬೆ.
ಶ್ರೀಗುರು ಮಹಾಂತಯೋಗೇಂದ್ರ ನೀವು ಎನಗೆ
ಗತಿ ಮತಿ ಚೈತನ್ಯದಿ ಸರ್ವವು ನೀನೇ ಆದಿಯಲ್ಲಾ.
ನಿನಗೆ ನಾನು ಏನಾದೆ ಹೇಳಾ ?
ನಾನು ನೀನೇ ಆದದ್ದು ಹೇಳಬಾರದೆಂಬುದು ಅಹಂಕಾರವೇ ದೇವಾ ?
ನೀನು ಅಹಂಕಾರಿಯಾಗಿರೆ ನಾನು ನಿರಹಂಕಾರಿಯಾದರೆ
ಹೆಚ್ಚುಕಡಿಮೆಯಾಗುವದು.
ಅದು ಕಾರಣ ನೀನು ಹೇಳದಿದ್ದರೆ ನಾನು ಹೇಳುವೆನು.
ಅದೆಂತೆಂದೊಡೆ :
ನಾನು ನಿನ್ನ ಗುರುವಿನಲ್ಲಿ ಮುಂದೆ ಹುಟ್ಟಿದೆ,
ನೀನು ನನ್ನ ಹಿಂದೆ ಹುಟ್ಟಿದೆ :
ನಿನಗೆ ನಾನು ಏನಾದೆ ? ನಿನಗೆ ನಾನು ಅಣ್ಣನಾದೆ.
ಮತ್ತೆ ನಾನು ಮುಂದೆ ಗುರುವ ಪಡದು ನಾ ನಿನ್ನ ಪಡೆದೆ.
ನಿನಗೆ ನಾನು ತಂದಿಯಾದೆ.
ನಾ ಮುಂದೆ ಗುರುವಿನ ಪಡೆದು ಆ ಗುರುವಿನಿಂದ ನಿನ್ನ ಪಡದಲ್ಲಿ
ನಾ ನಿನಗೆ ಮುತ್ತ್ಯಾನಾದೆ.

ಮುಂದೆ ಸಾಧುರ ಸಂಗ ಪಡೆದು
ಆ ಸಾಧುರ ಸಂಗದಿಂದೆ ಗುರುವಿನ ಪಡೆದು
ಆ ಗುರುವಿನಿಂದ ನಿನ್ನ ಪಡದಲ್ಲೆ ನಾ ನಿನಗೆ ಅಜ್ಜನಾದೆ.
ಮುಂದೆ ಸತ್ಕರ್ಮ, ಆ ಸತ್ಕರ್ಮ ಪಡದಲ್ಲೆ ಸಾಧುರಸಂಗ,
ಆ ಸಾಧುರಸಂಗದಿಂದ ಗುರು,
ಆ ಗುರುವಿನಲ್ಲಿ ನೀನಾದುದಕ್ಕೆ ನಿನಗೆ ಪಣಜನಾದೆ.
ಮುಂದೆ ನೀತಿ ಪಡದಲ್ಲಿ ಆ ನೀತಿಯಿಂದ ಸತ್ಕರ್ಮ,
ಆ ಸತ್ಕರ್ಮದಿಂದೆ ಸಾಧುರಸಂಗ, ಆ ಸಾಧುರಸಂಗದಿಂದೆ ಗುರು,
ಆ ಗುರುವಿನಿಂದ ನಾನಾದಮ್ಯಾಲೆ ನಾ ನಿನಗೆ ಪಣಜನಪ್ಪನಾದೆ.
ಮುಂದೆ ನಾನು ಜ್ಞಾನ ಪಡೆದಲ್ಲಿ ಆ ಜ್ಞಾನದಿಂದ ನೀತಿ,
ಆ ನೀತಿಯಿಂದೆ ಸತ್ಕರ್ಮ, ಆ ಸತ್ಕರ್ಮದಿಂದೆ ಸಾಧುರಸಂಗ,
ಆ ಸಾಧುರಸಂಗದಿಂದೆ ಗುರುವು, ಆ ಗುರುವಿನಿಂದ ನಿನ್ನ ಪಡೆದಲ್ಲಿ
ನಾ ನಿನಗೆ ಪಣಜನ ಮುತ್ತ್ಯನಾದೆ.
ನಾ ಮುಂದೆ ನರಜನ್ಮ ಪಡದಲ್ಲಿ ಜ್ಞಾನ, ಆ ಜ್ಞಾನದಿಂದೆ ನೀತಿ,
ನೀತಿಯಿಂದ ಸತ್ಕರ್ಮ, ಸತ್ಕರ್ಮದಿಂದೆ ಸಾಧುರ ಸಂಗ,
ಸಾಧುರಸಂಗದಿಂದೆ ಗುರುವು, ಗುರುವಿನಿಂದೆ ನೀನು,
ನಾ ನಿನಗೆ ಪಣಜನಜ್ಜನಾದೆ.
ಈ ನರಜನ್ಮಕ್ಕೆ ಮುಂದೆ ಪುಣ್ಯವೆ ಕಾರಣ.
ಮುಂದೆ ಪುಣ್ಯಪಡೆದಲ್ಲಿ ಆ ಪುಣ್ಯದಿಂದೆ ಈ ನರಜನ್ಮಪಡೆದೆ.
ಈ ನರಜನ್ಮದಿಂದೆ ಜ್ಞಾನಪಡೆದೆ, ಈ ಜ್ಞಾನದಿಂದೆ ನೀತಿಪಡೆದೆ,
ನೀತಿಯಿಂದೆ ಸತ್ಕರ್ಮ, ಸತ್ಕರ್ಮದಿಂದೆ ಸಾಧುರಸಂಗಪಡೆದೆ.
ಈ ಸಾಧುರಸಂಗದಿಂದೆ ಗುರುವಿನಪಡೆದೆ.
ಗುರುವಿನಿಂದ ನಿನ್ನ ಪಡೆದೆ ; ನಾ ನಿನಗೆ ಪಣಜನ ಪಣಜನಾದೆ.
ಇಷ್ಟಾದರೂ ಆಯಿತೇ ?
ಮತ್ತೆ ನಿನ್ನ ಘ್ರಾಣಕ್ಕೆ ಗಂಧವಕೊಟ್ಟೆ, ನಿನ್ನ ಜಿಹ್ವೆಗೆ ರಸವ ನೀಡಿದೆ,
ನಿನ್ನ ನೇತ್ರಕ್ಕೆ ರೂಪವ ತೋರಿದೆ, ನಿನ್ನ ಅಂಗಕ್ಕೆ ಆಭರಣವನಿಟ್ಟೆ,
ನಿನ್ನ ಶ್ರೋತ್ರಕ್ಕೆ ಶಬ್ದವ ಕೊಟ್ಟೆ, ನಿನ್ನ ಹೃದಯಕ್ಕೆ ತೃಪ್ತಿಯಮಾಡಿದೆ.
ನಾನು ಈ ಪರಿಯಲ್ಲಿ ನಿನ್ನ ಹುಟ್ಟಿಸಿದೆ,
ನಿನ್ನ ಬೆಳಸಿದೆ, ನಿನ್ನ ಮನ್ನಿಸಿದೆ, ನಿನ್ನ ವರ್ಣಿಸಿದೆ.
ಮತ್ತೆ ಗುರು–ಶಿಷ್ಯ ಸತಿ–ಪತಿನ್ಯಾಯ.
ನೀ ಪತಿ ನಾ ಸತಿ, ಅಹುದೋ ಅಲ್ಲವೋ ?
ಮತ್ತೆ ನೀ ಪತಿಯಾದ ಮೇಲೆ ನಿನಗೆ ನಾನು ಸೋಲಬೇಕೋ
ನನಗೆ ನೀನು ಸೋಲಬೇಕೋ ?
ನನಗೆ ನೀ ಸೋತಲ್ಲಿ ನಾ ಹೆಚ್ಚೊ ? ನೀ ಹೆಚ್ಚೊ ?

ನಾನೇ ಹೆಚ್ಚು. ಅದು ಹೇಗೆಂದಡೆ :
ನನ್ನ ಮುಡಿಯಲಾದ ಗಂಧಕ್ಕೆ ನಿನ್ನ ಘ್ರಾಣೇಂದ್ರಿಯ ಸೋತಿತು.
ನನ್ನ ಅಧರಾಮೃತಕ್ಕೆ ನಿನ್ನ ಜಿಹ್ವೇಂದ್ರಿಯ ಸೋತಿತು.
ನನ್ನ ಹಾವ ಭಾವ ವಿಭ್ರಮ ವಿಲಾಸ ಶೃಂಗಾರ ತೋರಿಕೆಗೆ
ನಿನ್ನ ನಯನೇಂದ್ರಿಯ ಸೋತಿತು.
ನನ್ನ ಅಂಗದಾಲಿಂಗಕ್ಕೆ ನಿನ್ನ ತ್ವಗೇಂದ್ರಿಯ ಸೋತಿತು.
ನನ್ನ ಸಂಗಸಮರಸದಲ್ಲಿ ನಿನ್ನ ಸಂಯೋಗ ಸೋತಿತು.
ನೀನು ಆವ ಪರಿಯಾಗಿ ನನ್ನ ಸೋಲಿಸಬಂದರೆ.
ನಾನು ನಿನ್ನ ಆವಾವ ಪರಿಯಾಗಿ ಸೋಲಿಸಿದೆ.
ಅದು ಹಾಂಗಿರಲಿ, ಇನ್ನೊಂದುಂಟು–ಅದು ಏನೆನಲು :
ನೀನು ನಾ ಮುಡದದ್ದು ಮುಡದಿ, ನಾ ಉಂಡದ್ದು ಉಂಡಿ,
ನಾ ಕಂಡದ್ದು ಕಂಡಿ, ನಾ ಉಟ್ಟದ್ದು ಉಟ್ಟಿ,
ನಾ ಕೇಳಿದ್ದು ಕೇಳಿದಿ, ನಾ ಕುಡದದ್ದು ಕುಡಿದಿ,
ನೀನು ನನ್ನ ಪ್ರಸಾದಿ ಆದಿಯಲ್ಲಾ,
ಮತ್ತೆ ನನ್ನ ಮೂಗೇ ನಿನ್ನ ಮೂಗು, ನನ್ನ ಬಾಯಿಯೇ ನಿನ್ನ ಬಾಯಿ,
ನನ್ನ ಕಣ್ಣೇ ನಿನ್ನ ಕಣ್ಣು, ನನ್ನ ಮೈಯ್ಯೇ ನಿನ್ನ ಮೈ,
ನನ್ನ ಕಿವಿಯೇ ನಿನ್ನ ಕಿವಿ, ನನ್ನ ಹೃದಯವೇ ನಿನ್ನ ಹೃದಯ,
ನನ್ನ ಪ್ರಾಣವೇ ನಿನ್ನ ಪ್ರಾಣ, ನನ್ನ ಮನವೇ ನಿನ್ನ ಮನ,
ನನ್ನ ಪ್ರಾಣವೇ ನಿನ್ನ ಪ್ರಾಣ, ನನ್ನ ಮನವೇ ನಿನ್ನ ಮನ,
ನಾನೇ ನೀನು, ನನ್ನ ಬಿಟ್ಟರೆ ನಿನಗೆ ಗತಿಯಿಲ್ಲ,
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೩ ॥

ಗುಪ್ತಮೂರ್ತಿಚರಿತ್ರ :

(ಮುಕ್ತವಿಲಾಸ)

೯೬೬

ಆ ಗುರುಶಿಷ್ಯರೆರಡು ಒಂದಾಗಿ
ತಾನೇ ತಾನಾದ ವಿನೋದವೇನೆಂಬೆ ?
ಮಹಾಂತ ಮಹಾಂತ ನೀನೆಂದರೆ ನೀನು
ಇಂದಿನ ಮಹಾಂತನೇ ಅಲ್ಲಾ, ಅಂದಿನ ಮಹಂತ ನೀನು.
ನೀನು ನಿರುಪಮ, ನಿರಾಳ, ನಿಷ್ಕಳ, ನಿರ್ಬೈಲು,
ಮಹಾಬಯಲಾದ ಅಂದಿನ ಮಹಾಂತ ನೀನಲ್ಲವೆ ?
ಅದು ನೀ ಹ್ಯಾಂಗ ಬಲ್ಲೆಯೆಂದರೆ :
ನೀನು ನನಗೆ ತತ್ತ್ವೋಪದೇಶ ಹೇಳಿದಾತನೇ ? ಅಲ್ಲ,
ಅಷ್ಟಾಂಗಯೋಗಂಗಳ ಹೇಳಿದಾತನೇ ? ಅಲ್ಲ,

ಮುದ್ರೆಸಾಧನವ ಹೇಳಿದಾತನೇ ? ಅಲ್ಲ.
ಹಠಯೋಗ ಲಯಯೋಗ ಲಂಬಿಕಾಯೋಗ
ತಪಜಪ ಅದ್ವೈತಾದಿ ನಿತ್ಯನೇಮ ಪುಣ್ಯ ಸತ್ಕರ್ಮ
ಮೊದಲಾದ ಇವು ಏನಾದರೂ ಎನಗೆ ಹೇಳಿದಾತನೇ ? ಅಲ್ಲ.
ಇವು ಏನು ಹೇಳಲೊಲ್ಲದೆ ನನಗೊಂದು ಹೇಳಿದಿರಿ.
ಅದ ಏನು ಹೇಳಿದಿರಿ ಅಂದರೆ,
ನಿನ್ನ ನೀ ತಿಳಿದು ಹಾಡೆಂದು ಹೇಳಿದಿರಿ.
ನೀನು ಹೇಳಿದುದಕ್ಕೆ ನಾನು ನನ್ನ ಒಬ್ಬುಳಿಯ ಮಾಡಿ ಏಕಚಿತ್ತಾಗಿ
ಹೊರ ಆಸೆ ಬಿಟ್ಟು, ಒಳನೋಟವಿಟ್ಟು
ಹಸಿವೆ ತೃಷೆಗಳಂ ಸುಟ್ಟು, ನನ್ನನ್ನೇ ನಾ ಕೆಟ್ಟು
ರತಿ ನಿನ್ನೊಳಗಿಟ್ಟು, ಆತ್ಮಜ್ಞಾನ ಅಳವಟ್ಟು, ಅಹಂಬ್ರಹ್ಮವಂ ಬಿಟ್ಟು,
ನೀ ಒಂದು ಮಾಡೆಂದರೆ ನಾ ಒಂಬತ್ತು ಮಾಡಿ ಹುಡುಕಲು,
ಅಲ್ಲಿ ನಿನ್ನ ಬಲ್ಲಾದೆ, ನಿನ್ನ ಬಲ್ಲಲ್ಲಿ ಸರ್ವವೂ ಬಲ್ಲಾದೆ.
ನನ್ನ ನಿನ್ನ ಬಲ್ಲಲ್ಲಿ ಸರ್ವವೂ ಬಲ್ಲಾದೆ.
ಅದು ಹ್ಯಾಂಗ ಬಲ್ಲಿ ಅಂದರೆ,
ಮಾತಿಲೆ ಬಲ್ಲಲ್ಲಿ ನಿನ್ನ ವಾರ್ತಿ ಕೇಳಿ ಬಲ್ಲೆ,
ನಿನ್ನ ಸನ್ನಿಧಿಗೆ ಹೋಗಿ ಬಲ್ಲೆ, ನಿನ್ನ ಕಂಡು ಬಲ್ಲೆ
ನಿನ್ನ ಕೂಡಿ ಬಲ್ಲೆ, ನಿನ್ನ ಸದ್ವಾಸನೆಗೊಂಡು ಬಲ್ಲೆ,
ನಿನ್ನ ಸ್ನೇಹವ ಮಾಡಿ ಬಲ್ಲೆ, ನಿನ್ನ ಕೂಡುಂಡು ಬಲ್ಲೆ
ನಿನ್ನ ಸಮರಸಗೂಡಿ ಬಲ್ಲೆ, ನಿನ್ನ ಕೂಡಿದ ಪರಮಸುಖ
ಪರಮ ಉಪಕಾರಕ್ಕೆ ಹೇಳಬಲ್ಲೆ, ವಿಸ್ತಾರವಾಗಿ ನಿನ್ನ ಹಾಡಿ ಬಲ್ಲೆ
ಒಂದೆ ಮಾಡಬಲ್ಲಲ್ಲಿ ಒಂಬತ್ತ ಮಾಡಬಲ್ಲೆ,
ಈ ಒಂಬತ್ತುಮಾಡಿ ಬಲ್ಲಲ್ಲಿ ನಾ ಮೊದಲಾದ ಸರ್ವವು ನೀನೆಂಬುದು ಬಲ್ಲೆ.
ಇನ್ನು ಎನ್ನ ಪ್ರಾಣ, ಮನ, ದೇಹ, ಭಾವ, ಅರವು, ಮನವು
ನನ್ನ ಸರ್ವವು ನೀನಾದ ಮ್ಯಾಲೆ ನನಗೇನುಂಟು ?
ಮರ್ತ್ಯಲೋಕದ ಮಹಾಗಣಂಗಳು, ಮಹಾನುಭಾವಿಗಳು,
ನಿಜಜ್ಞಾನಿಗಳು, ಮಹಾ ಅರವಿಗಳು, ಎನಗೊಂದು ಹೆಸರಿಟ್ಟಿದ್ದರು.
ಅದು ಹೆಸರು ನಿನಗೆ ಆಯಿತು. ಅದೇನು ಹೆಸರೆಂದರೆ ?
ಸರ್ವವು ನೀನಾದಮ್ಯಾಲೆ, ಸತ್ಕರ್ಮ ದುಷ್ಕರ್ಮ ಎರಡು ನೀನೇ ಆದಿ.
ನಾನು ಇನ್ನೇನು ಮಾಡಲಿ ಎಂದು
ಆವ ಕರ್ಮವಿಲ್ಲದೆ ಸುಮ್ಮನೆ ಇರುತಿರಲು, ಅದ ಕಂಡು ಹೆಸರಿಟ್ಟಿದ್ದರು.
ಈತ ಸತ್ಕರ್ಮಿಯೆಂಬುವೆ ಸತ್ಕರ್ಮಿ ಅಲ್ಲಾ,
ಈತಗೆ ನಾವು ದುಷ್ಕರ್ಮಿಯೆಂಬುವೆ ದುಷ್ಕರ್ಮಿ ಅಲ್ಲಾ,
ಪಾಪಿಯೆಂಬುವೆ ಪಾಪಿ ಅಲ್ಲಾ, ಪುಣ್ಯನೆಂಬುವೆ ಪುಣ್ಯನಲ್ಲಾ,

ಆಸೆ ಅಲ್ಲಾ ನಿರಾಸೆ ಅಲ್ಲಾ, ಅಜ್ಞಾನಿ ಅಲ್ಲಾ ಸುಜ್ಞಾನಿ ಅಲ್ಲಾ,
ಕಾಮಿ ಅಲ್ಲಾ ನಿಷ್ಕಾಮಿ ಅಲ್ಲಾ, ಕ್ರೋಧಿ ಅಲ್ಲಾ ನಿಷ್ಕ್ರೋಧಿ ಅಲ್ಲಾ,
ಲೋಭಿ ಅಲ್ಲಾ ನಿರ್ಲೋಭಿ ಅಲ್ಲಾ, ಮೋಹಿ ಅಲ್ಲಾ ನಿರ್ಮೋಹಿ ಅಲ್ಲಾ,
ಅಹಂಕಾರಿ ಅಲ್ಲಾ ನಿರಹಂಕಾರಿ ಅಲ್ಲಾ, ಮತ್ಸರಿ ಅಲ್ಲಾ ಮತ್ಸರರಹಿತನೇ ಅಲ್ಲಾ,
ಯೋಗಿಯೇ ಅಲ್ಲಾ ಭೋಗಿಯೆ ಅಲ್ಲಾ,
ತ್ಯಾಗಿಯೇ ಅಲ್ಲಾ ರಾಗಿಯೇ ಅಲ್ಲಾ, ಸುಖಿಯೇ ಅಲ್ಲಾ ದುಃಖಿಯೆ ಅಲ್ಲಾ,
ಕ್ರಿಯಯುಕ್ತನೇ ಅಲ್ಲಾ ಕ್ರಿಯಾಬಾಹ್ಯನೇ ಅಲ್ಲಾ,
ಭವಿಯೇ ಅಲ್ಲಾ ಭಕ್ತನೇ ಅಲ್ಲಾ, ಶಿವನೇ ಅಲ್ಲಾ ಜೀವನೇ ಅಲ್ಲಾ,
ಅರುವೇ ಅಲ್ಲಾ ಮರವೆಯೇ ಅಲ್ಲಾ,
ಸತ್ತವನೇ ಅಲ್ಲಾ ಬದುಕಿದವನೇ ಅಲ್ಲಾ,
ಊರವನೇ ಅಲ್ಲಾ ಅಡವಿಯವನೇ ಅಲ್ಲಾ,
ಗುರುವೇ ಅಲ್ಲಾ ಶಿಷ್ಯನೇ ಅಲ್ಲಾ, ಶಂಕರನೆ ಅಲ್ಲಾ ಕಿಂಕರನೇ ಅಲ್ಲಾ,
ಹೇಳುವವನೇ ಅಲ್ಲಾ ಕೇಳುವವನೇ ಅಲ್ಲಾ,
ಮೂಕನೇ ಅಲ್ಲಾ ಮಾತಾಡುವವನೇ ಅಲ್ಲಾ, ಹೆಣ್ಣೆ ಅಲ್ಲಾ ಗಂಡೇ ಅಲ್ಲಾ,
ನಪುಂಸಕನೇ ಅಲ್ಲಾ ಅಂತರಪಿಶಾಚಿಯೇ ಅಲ್ಲಾ,
ವಿಷಯಾತುರಿಯೇ ಅಲ್ಲಾ ವಿರಕ್ತನೇ ಅಲ್ಲ,
ಇಹಲೋಕ ಇಚ್ಛೆಯೇ ಅಲ್ಲಾ ಪರಲೋಕ ಬಯಕಿಯೇ ಅಲ್ಲಾ.
ಅದು ಎಂಬುವೆ ಅದು ಅಲ್ಲ, ಇದು ಎಂಬುವೆ ಇದು ಅಲ್ಲ,
ಹಾಂಗೂ ಅಲ್ಲ ಹೀಂಗೂ ಅಲ್ಲ, ಅಂತೂ ಅಲ್ಲಾ ಇಂತೂ ಅಲ್ಲಾ,
ಏನೂ ಅಲ್ಲಾ ಅಲ್ಲಾ ಅಲ್ಲಾ ಎಂದು ಹೆಸರಿಟ್ಟಿದ್ದರು ಎನಗೆ.
ಇದು ಹೆಸರು ನಿನಗೆ ಆಯಿತು.
ಅದೆಂತೆಂದೊಡೆ :
ಅಲ್ಲಮಪ್ರಭು ಎಂಬುವ ನಾಮವು ನಿನಗೆ ಆಯಿತಲ್ಲದೆ ನನಗೆಲ್ಲಿಹದು ?
ಅದು ಕಾರಣ ನನಗೆ ನಾಮವಿಲ್ಲಾ ರೂಪವಿಲ್ಲಾ ಕ್ರೀಯವಿಲ್ಲಾ
ಬಯಕೆಯಿಲ್ಲಾ ಭವವಿಲ್ಲಾ ಆವುದೂ ಇಲ್ಲಾ.
ಅದೇಕೆ ನೀ ಅಲ್ಲಾ ನಾ ಇಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೪ ॥

ತ್ರಿಮುಖನ ವಿನೋದ :

ಇಷ್ಟಲೀಲಾ :

೯೬೭

ನಿಃಕಳ ನಿರುಪಮ ತೇಜೋಮಯ ನಿರಂಜನಲಿಂಗದ ನೆನಹಿನ
ಮಹಾಘನ ಮಹತ್ವವನುಳ್ಳ ಮಹಾಂತ ಅಖಂಡಪರಶಿವನೊಳಗೆ
ಷಡ್‌ವಕ್ತ್ರವನುಳ್ಳ ಪರಬ್ರಹ್ಮವಿರ್ಪುದು.

ಆ ಪರಬ್ರಹ್ಮದಲ್ಲಿ ಬ್ರಹ್ಮಾಂಡವಿರ್ಪುದು,
ಆ ಬ್ರಹ್ಮಾಂಡದೊಳಗೆ ಸಕಲ ಸ್ಥಿರಚರಪ್ರಾಣಿಗಳಿರ್ಪುವು.
ಆ ಪ್ರಾಣಿಗಳ ಸತ್ಕರ್ಮ ದುಷ್ಕರ್ಮದಿಂದಾದ ಪುಣ್ಯ ಪಾಪಂಗಳಿಂದೆ ಬಂದ
ಸುಖದುಃಖಂಗಳನುಂಡು ಸೃಷ್ಟಿ ಸ್ಥಿತಿ ಲಯಕ್ಕೊಳಗಾಗಿ
ಅನಂತಕಾಲ ಎಂಬತ್ತುನಾಲ್ಕುಲಕ್ಷ ಜೀವರಾಶಿಯೋನಿಯಲ್ಲಿ ಬರುತಿರ್ಪುದು.
ಆ ಬರುವದರೊಳಗೆ ಸತ್ಕರ್ಮದಿಂದ ಪುಣ್ಯವೊದಗಿ ಮಾನವಜನ್ಮ ಬರಲು
ಈ ಮಾನವಜನ್ಮದ ಅಜ್ಞಾನಕ್ಕೆ
ಆ ಮಹಾಮಹಾಂತ ಪರಿಮಳವನೊಳಕೊಂಡು
ಮಹಾಂತಮಾರುತ ಸುಳಿಯಲು
ಆ ಮಾರುತನ ಸೋಂಕಿಗೆ ಆ ಅಜ್ಞಾನ ಸುಜ್ಞಾನವಾಯಿತ್ತು.
ಆ ಸುಜ್ಞಾನದಿಂದೆ ಸತ್ಕರ್ಮವ ಮಾಡಲು ಸಾಧುರಸಂಗವು ದೊರಕಿತ್ತು.
ಆ ಸಾಧುರಸಂಗದಿಂದ ಸುಗುಣ ಅಳವಟ್ಟಿತ್ತು.
ಆ ಸುಗುಣ ಅಳವಟ್ಟಲ್ಲಿ ಸಂಸಾರ ಹೇಯವಾಯಿತ್ತು.
ಆ ಸಂಸಾರ ಹೇಯವಾದಲ್ಲಿ ಮುಕ್ತನಾಗಬೇಕೆಂಬೋ ಚಿಂತೆ ತಲೆದೋರಿತ್ತು.
ಆ ಚಿಂತಾಪರವಶದಿಂದೆ ದುಃಖಗೊಂಡಿರಲು
ಆ ಮಹಾಂತಪರಿಮಳವನೊಳಕೊಂಡು,
ಮಹಾಂತಮಾರುತನೆಂಬ ಪ್ರಭುವೇ ತಾ ಮುನ್ನ ಸೋಂಕಿದ್ದಕ್ಕೆ
ತನ್ನ ಬಯಸುವ ಶಿಷ್ಯನಲ್ಲಿಗೆ ತಾನೇ ಗುರುವಾಗಿ ಬಂದು,
ಮೋಕ್ಷವಾಸನಿಗೆ ಅವಸ್ಥೆಯೊಳಗಿದ್ದ ಶಿಷ್ಯನ ಸಂತೈಸಿ,
ಮಹಾಂತಪರಿಮಳವನುಳ್ಳ ಮುಕ್ತಿಫಲವಾಗುವ
ಘನವೆಂಬ ಪುಷ್ಪಕ್ಕೆ ಮೂಲನೆನವಾದ ಮನವೆಂಬ ಲಿಂಗದಲ್ಲಿ
ನಿಃಕಲವೇ ನಾನು, ನಾನೇ ನೀನು.
ಹೀಗೆಂಬುವುದ ಉಸುರದೆ ಮರೆಗೈದು,
ಆ ಲಿಂಗಮಂ ಪರಿಪೂರ್ಣವಾದ ಕರಕಮಲಕ್ಕೆ ಕೊಟ್ಟು,
ಮನವೆಂಬ ಲಿಂಗದ ನೆನವೆಂಬ ಬಳ್ಳಿಯೇ ಜಂಗಮವೆಂದು ತೋರಿ,
ಆ ಬಳ್ಳಿಯ ಬೊಡ್ಡಿಯ ತಂಪು ಪಾದೋದಕವು.
ಆ ಆನಂದ ತಂಪ್ಹಿಡಿಯುವುದಕ್ಕೆ ಮಡಿಯಾದ ಮೃತ್ತಿಕೆಯು ನಿರಂಜನಪ್ರಸಾದ.
ಆ ಮೃತ್ತಿಕೆಗೆ ಒಡ್ಡಾದ ತೇಜೋಮಯವೇ ವಿಭೂತಿ,
ಆ ತೇಜಸ್ಸು ಲಿಂಗಪೂಜೆಯೇ ರುದ್ರಾಕ್ಷಿ,
ಆ ತೇಜಸ್ಸು ಲಿಂಗಸ್ಫುಟನಾದವೇ ನಿರುಪಮಮಂತ್ರ,
ಇಂತೀ ಅಷ್ಟಾವರಣ ಘಟ್ಟಿಗೊಂಡು ಪೂಜಿಸಲಾಗಿ
ಆ ಶಿಷ್ಯನು ಗುರುವ ಹಾಡಿ, ಲಿಂಗವ ನೋಡಿ,
ಜಂಗಮವ ಪೂಜಿಸಿ, ಪಾದೋದಕವನ್ನುಪಾರ್ಜಿಸಿ,
ಪ್ರಸಾದವನುಂಡು, ವಿಭೂತಿಯ ಲೇಪಿಸಿಕೊಂಡು,

ರುದ್ರಾಕ್ಷಿಯ ಧರಿಸಿಕೊಂಡು, ಮಂತ್ರವ ಚಿತ್ತದೊಳಿರಿಸಿ ಆಚರಿಸಲು,
ಆ ಶಿಷ್ಯನ ಕಾಯ ಆ ಗುರುವನಪ್ಪಿ ಸದ್ಗುರುವಾಯಿತ್ತು.
ಮನವು ಲಿಂಗವ ಕೂಡಿ ಘನಲಿಂಗವಾಯಿತ್ತು.
ಪ್ರಾಣ ಜಂಗಮವ ಮರೆಗೊಂಡು ನಿಜಜಂಗಮವಾಯಿತ್ತು.
ತೃಷೆ ಪಾದೋದಕದಲ್ಲಿ ಮುಳುಗಿ ಆನಂದಪಾದೋದಕವಾಯಿತ್ತು.
ಹಸಿವು ಪ್ರಸಾದದಲ್ಲಡಗಿ ಪ್ರಸಿದ್ಧಪ್ರಸಾದವಾಯಿತ್ತು.
ಚಂದನ ವಿಭೂತಿಯಲ್ಲಿ ಸತ್ತು ಚಿದ್ವಿಭೂತಿಯಾಯಿತ್ತು.
ಶೃಂಗಾರ ರುದ್ರಾಕ್ಷಿಯಲ್ಲಿ ಕರಗಿ ಏಕಮುಖರುದ್ರಾಕ್ಷಿಯಾಯಿತ್ತು.
ಚಿತ್ತ ಮಂತ್ರದಲ್ಲಿ ಸಮರಸವಾಗಿ ಮೂಲಮಂತ್ರವಾಯಿತ್ತು.
ಇಂಥಾ ಮೂಲಮಂತ್ರವೇ ಬ್ರಹ್ಮಾಂಡ, ಪಿಂಡಾಂಡ,
ಸ್ಥಿರ, ಚರ, ಸಮಸ್ತಕ್ಕೆ ಕಾರಣ ಚೈತನ್ಯಸೂತ್ರವಾಗಿ
ಅಂತರಂಗ ನಿವೇದಿಸಲು, ಅಲ್ಲಿ ಅಂತರಂಗದಲ್ಲಿ ತೋರುವ
ಆರುಸ್ಥಲ, ಆರುಚಕ್ರ, ಆರುಶಕ್ತಿ, ಆರುಭಕ್ತಿ, ಆರುಲಿಂಗ,
ಆರಾರು ಮೂತ್ತಾರು, ಇನ್ನೂರಾಹದಿನಾರು ತೋರಿಕೆಗೆ
ಆ ಮೂಲಮಂತ್ರ ತಾನೇ ಕಾರಣ ಚೈತನ್ಯಸೂತ್ರವಾಗಿ
ಕಾಣಿಸಲು ಸಮ್ಯಜ್ಞಾನವೆನಿಸಿತು.
ಆ ಸಮ್ಯಜ್ಞಾನಬೆಳಗಿನೊಳಗೆ ಮುದ್ರೆ ಸಂಧಾನ ವಿವರ ವಿಚಾರದಿಂದೆ
ಷಟ್ಚಾತ್ರೆಗಳ ಸ್ವರೂಪದ ಆರುಭೂತ, ಆರುಮುಖ,
ಆರುಹಸ್ತ, ಆರುಪ್ರಸಾದ, ಆರುತೃಪ್ತಿ, ಆರು ಅಧಿದೇವತೆ
ಮೊದಲಾದ ಆರಾರು ಮೂವತ್ತಾರು ಇನ್ನೂರಾಹದಿನಾರು
ಅನಂತ ತೋರಿಕೆಯೆಲ್ಲಾ ಮಂತ್ರಸ್ವರೂಪವೇ ಆಗಿ
ತೋರಿದಲ್ಲಿ ತತ್ವಜ್ಞಾನವಾಯಿತು.
ಒಳಗೇಕವಾದ ತತ್ವಜ್ಞಾನವು ಹೊರಗೆ ನೋಡಲು ಹೊರಗೇಕವಾಗಿ ತೋರಿತು.
ಒಳಹೊರಗೆಂಬಲ್ಲಿ ನಡುವೆಂಬುದೊಂದು ತೋರಿತು.
ಈ ಮೂರು ಒಂದೇ ಆಗಿ, ಒಂದೇ ಬ್ಯಾರೆ ಬ್ಯಾರೆ
ಸ್ಥೂಲ ಸೂಕ್ಷ್ಮ ಕಾರಣ ಮೂರಾದಲ್ಲಿ ಆತ್ಮಜ್ಞಾನವಾಯಿತು.
ಆ ಆತ್ಮಜ್ಞಾನದಿಂದ ಆತ್ಮಾನಾತ್ಮ ವಿಚಾರ ಗಟ್ಟಿಗೊಂಡಲ್ಲಿ
ಮಹಾಜ್ಞಾನಪ್ರಕಾಶವಾಯಿತು.
ಆ ಮಹಾಜ್ಞಾನದಿಂದೆ ಅನುಭವದ ದೃಷ್ಟಿಯಿಡಲು
ಬೊಂಬೆಸೂತ್ರ ಆಡಿಸುವವನಂತೆ
ಬ್ಯಾರೆ ಬ್ಯಾರೆ ಕಾಣಿಸಲು ಈ ಬೊಂಬೆಯ ಸೂತ್ರ ಆಡಿಸುವವನು
ಇವು ಮೂರು ಎಲ್ಲಿಹವು. ಏನೆಂದು
ತೂರ್ಯವೇರಿ ಸೂರೆಗೊಂಡಲ್ಲಿ ಸ್ವಯಂಬ್ರಹ್ಮವೆನಿಸಿತ್ತು.
ಆ ಸ್ವಯಂಬ್ರಹ್ಮಜ್ಞಾನವು ತನ್ನ ತಾ ವಿಚಾರಿಸಲು

ತನ್ನೊಳಗೆ ಜಗ, ಜಗದೊಳಗೆ ತಾನು,
ತಾನೇ ಜಗ, ಜಗವೇ ತಾನೆಂಬಲ್ಲಿ ನಿಜಜ್ಞಾನವಾಯಿತು.
ಆ ನಿಜಜ್ಞಾನದಿಂದೆ ನಿಜವರಿಯಲು ಆ ನಿಜದೊಳಗೆ
ತಾನೇ ಜಗ, ಜಗದೊಳಗೆ ತಾನೇ ಎಂಬೋ ಎರಡಿಲ್ಲದೆ
ತಾನೆ ತಾನೆಂಬೊ ಅರುವಾಯಿತು.
ಆ ಅರುವು ಮರೆಗೊಂಡು ಕುರುಹು ಉಲಿಯದೆ ನಿರ್ಬೈಲಾಗಲು
ಮಹಾಂತನೆಂಬ ಹೆಸರಿಲ್ಲದೆ ಹೋಗಿ ಏನೋ ಆಯಿತ್ತು
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೫ ॥

ಪ್ರಾಣಲೀಲಾ :

### ೯೬೮

ಚಿತ್ತೆಂಬೊ ಬಿತ್ತುವಡೆದು, ಕಳೆಯೆಂಬೋ ಮೊಳಕೆ ಹುಟ್ಟಿ,
ಮಾಯವೆಂಬೋ ವೃಕ್ಷವಾಯಿತ್ತು
ಆ ವೃಕ್ಷದಲ್ಲಿ ಹಲವು ಶಾಖೆ, ಹಲವು ಎಲೆ, ಹಲವು ಪುಷ್ಪ,
ಹಲವು ಕಾಯಿ, ಹಲವು ಸವಿ, ಹಲವು ಬೀಜ,
ಹಲವು ಫಲವಾಯಿತಲ್ಲದೆ,
ನಾನೆಂಬುದೇನು ? ನೀನೆಂಬುದೇನು ? ತಾನೆಂಬುದೇನು ? ಏನೆಂಬುದೇನು ?
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೬ ॥

### ೯೬೯

ಮಾಯೆ ಹುಟ್ಟಿ ಮಾಯೆ ಬೆಳೆದು
ಮಾಯೆ ಸತ್ತು ಹೋಯಿತ್ತಲ್ಲಾ.
ಆ ಮಾಯೆಗೆ ನೋವೇನು ? ಸರ್ವವೂ ಮಾಯೆಯೇ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೭ ॥

ಭಾವಲೀಲಾ :

### ೯೭೦

ರೂಪಾದ ಮೇಲೆ ನಿರೂಪವಿಲ್ಲಾ,
ನಿರೂಪಾದ ಮೇಲೆ ರೂಪವಿಲ್ಲಾ,
ತಾನೇ ರೂಪಾಯಿತ್ತು, ತಾನೇ ನಿರೂಪವಾಯಿತ್ತು,
ಬೇಕಾದರೆ ಬಂತು, ಸಾಕಾದರೆ ಹೋಯ್ತು,
ತಾ ಬಂದು ಹೋಗುವದರೊಳಗೆ ಶಿವಬ್ಯಾರೆ, ಜಗಬ್ಯಾರೆ,
ನರರು ಬ್ಯಾರೆ, ಸುರರು ಬ್ಯಾರೆ, ಇಹಬ್ಯಾರೆ, ಪರಬ್ಯಾರೆ,
ಪುಣ್ಯ ಬ್ಯಾರೆ, ಪಾಪ ಬ್ಯಾರೆ, ಸುಖ ಬ್ಯಾರೆ ದುಃಖ ಬ್ಯಾರೆ,
ಈ ಸರ್ವವು ಬ್ಯಾರೆ ಬ್ಯಾರೆಯಾಗಿ ತೋರುವ

ತನ್ನ ವಿನೋದ, ತನ್ನಾಟ, ತಾನೆಂದರೇನು ? ಮಾಯೆ.
ಮಾಯೆಯೆಂದರೇನು ? ನಿರ್ಮಾಯೆ.
ನಿರ್ಮಾಯೆ ಎಂದರೆ ಬಂತ್ಯಾಂಗೆ, ಹೋಯಿತ್ಯಾಂಗೆ ?
ಹುಟ್ಟಿತ್ಯಾಂಗೆ ? ಬೆಳೀತ್ಯಾಂಗೆ ಸತ್ತಿತ್ಯಾಂಗೆ ಮಹಾಂತಯೋಗಿ ?
ಹೋಗೋದಲ್ಲಾ ನಿರ್ಮಾಯ ನಿರ್ವಯಲಾದ ಮ್ಯಾಲೆ ಬರುವದಲ್ಲ
ಅಲ್ಲಂದರೇನು ಬಂತು ? ಏನು ಬಂತೆಂದರೇನು ಹೋಯಿತು ?
ಹೋಗೋದೇನು ? ಬರೋದೇನು ? ಬರೋದಿಲ್ಲಾ ಹೋಗೋದಿಲ್ಲಾ,
ಏನೂ ಇಲ್ಲಾ, ಎಂತೂ ಇಲ್ಲಾ, ಸುಮ್ಮನೆ ಪರಬ್ರಹ್ಮ,
ಪರಬ್ರಹ್ಮೆಂಬೋ ನಾಮವುಂಟೆ ? ಆ ಪರಬ್ರಹ್ಮ ಎಲ್ಲಿಯಿತ್ತು ?
ಪರಬ್ರಹ್ಮ ತಾನಾಗುವುದಕ್ಕೆ ಮೊದಲೇ ಏನೆಂಬೋ ನಾಮವುಂಟು ?
ಚಿತ್ತೆಲ್ಲಿತ್ತು ? ಪ್ರಾಣೆಲ್ಲಿತ್ತು ? ಭಾವೆಲ್ಲಿತ್ತು ?
ಚಿತ್ತ ಚಿತ್ತಾಗುವದು, ಆ ಚಿತ್ತ ಪಟ್ಟಾಗುವದು.
ಇದರೊಳಗ ಭಾವೇನು ಜೀವೇನು ? ಸಾವೇನು ನೋವೇನು ?
ಈ ಮಾಯೆಯ ಬೆಡಗಿನ ಹೆಸರು ಮಹಾಂತ.
ಈ ಮಾಯೆ ತಾನೆ ನಿರ್ಮಾಯೆ ಆದರೆ
ಸಾವು ಇಲ್ಲಾ ಗೀವು ಇಲ್ಲಾ, ಬ್ರಹ್ಮಾಂಡವಿಲ್ಲಾ ಪಿಂಡಾಂಡವಿಲ್ಲಾ,
ನಾನೂ ಇಲ್ಲಾ ನೀನೂ ಇಲ್ಲಾ, ಶಿವನು ಇಲ್ಲಾ ಗಿವನು ಇಲ್ಲಾ,
ಮುಕ್ತಿ ಇಲ್ಲಾ ಗಿಕ್ತಿ ಇಲ್ಲಾ, ಮಾಂತ ಇಲ್ಲಾ ಗೀಂತ ಇಲ್ಲಾ,
ಇಲ್ಲಗಿಲ್ಲ ಸುಳ್ಳೆ ಸುಳ್ಳೆ ಸುಳ್ಳೇನೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೪೮ ॥

**ಚಿದ್ಬಯಲಸ್ಥಲ :**

೯೭೧

ನಿರ್ಬಯಲು ನಿರ್ಬಯಲು
ನಿರ್ಬಯಲೆ ಮಹಾಬಯಲು
ನಿರ್ಬಯಲೆ ಚಿದ್ಬಯಲಲೆ ಮಹಾಂತಯೋಗಿ. । ಪಲ್ಲ ।

ಚಿತ್ಕಳೆಯು ಚಿತ್ಕಳೆಯು
ಚಿತ್ಕಳೆಯು ಚಿದ್ಬಿಂದು
ಚಿತ್ಕಳೆಯು ಚಿನ್ನಾದ ತಾನೆ ತಾನೆ.
ಚಿತ್ಕಳೆಯು ಕಳೆಯೊಳಗೆ
ಚಿತ್ಕಳೆಯು ಬಿಂದುದಿಸಿ
ಚಿತ್ಕಳೆಯ ನಾದವು ತಾನೆ ಮಹಾಂತಯೋಗಿ. । ೧ ।

ನಾದ ಬಿಂದು ಕಳೆಯು

ಆದ ಮೂರೂ ಕೂಡಿ
ಭೇದವಿಲ್ಲದೆ ತಾನೊಂದಾಯಿತಲ್ಲಾ !
ಆಧಾರವೆರಡಾದ
ಮಹತ್ವ ಅದರೋಳೊಂದು
ಬೋಧರೂಪಾಗಿರ್ದ ಮಹಾಂತಯೋಗಿ. । ೨ ।

ಮೂರು ಮೂರೆರಡಾಗಿ
ಮೂರು ತಾ ಬ್ಯಾರ್ಯಾಗಿ
ಆರು ಮೂರಕ್ಕೆ ಮೇಲಾಯಿತಲ್ಲಾ !
ಆರಾರಿನ್ನೂರ್ಧಧಿ–
ನಾರಾದ ತತ್ವ ಮಹಾ
ಕಾರಣನೆ ಪರಬ್ರಹ್ಮ ಮಹಾಂತಯೋಗಿ. । ೩ ।

ಆ ಮಹಾಕಾರಣದೊಳಗೆ
ತಾ ಮಹಾನಿರ್ಬಯಲಿರಲು
ಮಹಾ ಅಖಂಡ ರೂಪಾಯಿತಲ್ಲಾ !
ಈ ಮಹಾಲಿಂಗದ ಚಿ
ತ್ಪ್ರೇಮವೇ ಶ್ರೀಮಹಾದೇವಿ
ಕಾಮಿತ ಕಲ್ಪವೃಕ್ಷ ಮಹಾಂತಯೋಗಿ. । ೪ ।

ತಾನೆ ತಾನೆರಡಾಗಿ
ತಾನೆರಡೊಂದಾಗಿ
ತಾನೆ ಮುಂದೊಂದು ರೂಪಾಯಿತಲ್ಲಾ !
ತಾನೆ ಮುಂದೊಂದಾದ
ತಾನೆ ಆ ವಸ್ತುವಿಗೆ
ತಾನಾರುಮುಖವಾದ ಮಹಾಂತಯೋಗಿ. । ೫ ।

ಆರು ಮುಖಗಳು ತಾನೆ
ಆರು ಆಕೃತಿಯಾಗಿ
ಆರು ಕಲೆ ಆರು ಲಿಂಗಾಯಿತಲ್ಲಾ !
ಆರು ಲಿಂಗಾಂಗಕ್ಕೆ
ಆರು ಶಕ್ತಿಗಳಾಗಿ
ಆರಾರೊಂದಾಗಿರ್ದ ಮಹಾಂತಯೋಗಿ. । ೬ ।

ಆರು ಅಧಿದೇವತರಿಂ
ಆರು ಭೂತಗಳು ಪುಟ್ಟಿ
ಮೂರು ಲೋಕವೆಂಬುದೊಂದಾಯಿತಲ್ಲಾ !

ಮೂರು ಲೋಕದೊಳಗೆ
ಈರೇಳು ಲೋಕಾಗಿ
ಮೇರು ಅವಕ್ಕಾದ ಮಹಾಂತಯೋಗಿ. ।೭।

ಆವರಣದಾವರಣ
ಈವರಣೆಂದ್ಹೇಳಕಾ
ಲಾವರಣದೊಳಗೈವತ್ತಾಯಿತಲ್ಲಾ!
ಆವರಣ ಈವರಣ
ಭಾವರಣ ಬಹುವರಣ
ಜೀವರಣ ತಾನಾದ ಮಹಾಂತಯೋಗಿ. ।೮।

ಜೀವೇ ತಾ ಬ್ರಹ್ಮಾಂಡ
ಜೀವೇ ತಾ ಪಿಂಡಾಂಡ
ಜೀವೇ ತಾ ಸಚರಾಚರವಾಯಿತಲ್ಲಾ!
ಜೀವೇ ದೇವರ ದೇವ
ಜೀವೇ ಸಾವರ ಸಾವ
ಜೀವಕ್ಕೆ ಜೀವಾದ ಮಹಾಂತಯೋಗಿ. ।೯।

ಜೀವಾತ್ಮ ಜೀವಾತ್ಮ
ಜೀವಾತ್ಮ ಅಂತರಾತ್ಮ
ಜೀವಾತ್ಮ ಪರಮಾತ್ಮವಾಯಿತಲ್ಲಾ!
ಜೀವಾತ್ಮ ಮಹಾತ್ಮ
ಜೀವಾತ್ಮ ಬಹುವಾತ್ಮ
ಜೀವಾತ್ಮ ಏಕಾತ್ಮ ಮಹಾಂತಯೋಗಿ. ।೧೦।

ಕನ್ನೆಸುರಳಿಸಲೊಂದು
ಸೊನ್ನೆ ಮಂಡಲವಾಗಿ
ಸೊನ್ನೆ ಹನ್ನೊಂದು ರೂಪಾಯಿತಲ್ಲಾ!
ಹನ್ನೊಂದು ಹಲವಾಗಿ
ಇನ್ನೊಂದಿಲ್ಲಲ್ಲೆನಿಸಿ
ಕನ್ನೆ ಕಾರಣವಾದ ಮಹಾಂತಯೋಗಿ. ।೧೧।
ಗೌರ ಗಂಭೀರ ಸುಧೆ
ಮೀರಿ ಬಗೆ ಬಗೆ ಸ್ವಾದ
ಹಾರೈಸಿ ಹಲವು ಬೀಜಾಯಿತಲ್ಲಾ!
ತಾರ ಅಷ್ಟತನುವು ಕೂಡಿ
ಸಾರ ಸಂಗ್ರಹ ಮಾಡಿ

ತೋರಿದಾ ಷಡ್ರಸವೊ ಮಹಾಂತಯೋಗಿ. ।೧೨।

ಮಾಡಿಕೊಂಡುಣದಿರಲು
ಬೇಡಿಕೊಂಡುಣಬೇಕು
ಮಾಡಿ ಬೇಡುಂಬುದೆರಡಾಯಿತಲ್ಲಾ!
ನಾಡಕೃತ್ಯವ ನೋಡಿ
ಜೋಡು ಸೂತ್ರವ ಹೂಡಿ
ನಾಡ ನಾಡ ಹಡದಾತ ಮಹಾಂತಯೋಗಿ. ।೧೩।

ಹಾಡೋದು ಆಡೋದು
ನೋಡೋದು ಓಡೋದು
ಕೂಡ್ರೋದು ಕಾಡೋದು ಒಂದಾಯಿತಲ್ಲಾ!
ಕಾಡು ಕತ್ತಲೆಯಾಗಿ
ಮೋಡ ಮರೆಗೊಂಡಿರಲು
ಜೋಡ ಅಗಲಿದಂತಾದ ಮಹಾಂತಯೋಗಿ. ।೧೪।

ಮರವೆ ಅರವಿನೊಳಗಾಗಿ
ಅರವು ಮರವಿನೊಳಾಗಿ
ಅರವು ಮರವೆಂಬುವೆರಡಾಯಿತಲ್ಲಾ!
ಅರುವು ಮರವೆರಡರೊಳು
ನರ ನಾಗ ಸುರ ಅಸುರ
ಪರಿಪರಿ ಮನುಮುನಿಯಾದ ಮಹಾಂತಯೋಗಿ. ।೧೫।

ಇಂತು ರೂಪಾಗಿರ್ದ–
ನಂತ ಕಾಲವು ಕಳಿಯೇ
ಎಂತಿರ್ದಂತಿರ್ದಂತಾಯಿತಲ್ಲಾ!
ಕಂತುಕೇಳಿಯೊಳಿರಲು
ಅಂತಕಾಂತಕನಾಗಿ
ಚಿಂತೆ ಚಿಂತಿಸಲಾದ ಮಹಾಂತಯೋಗಿ. ।೧೬।

ಚಿಂತೆ ಘನವಾಗಲಿಕ್ಕೆ
ಎಂತಯ್ಯಯೆನಲು ತಾ
ನಂತರಂತರವಾಗಿ ಹೋಯಿತಲ್ಲಾ!
ಪಂಥ ಪಕ್ಷವು ಮೀರೆ
ಕಂತು ಹೇಯವು ತೋರೆ
ಚಿಂತೆ ಚಿಂತಾರತ್ನ ಮಹಾಂತಯೋಗಿ. ।೧೭।

ಬಿಂದು ರೂಪಾಗಿ ನಾ
ಬಂದೆ ಯೋನಿಯೊಳಿಂದು
ಸಂದೇಹದೊಳಗೆ ಬೆರಗಾಯಿತಲ್ಲಾ!
ಅಂದವಳಿದಿರ್ದಲ್ಲಿ
ಮುಂದೆ ಸುಜ್ಞಾನವಾಯಿತು
ಬಂದ ಶ್ರೀಗುರುರಾಯ ಮಹಾಂತಯೋಗಿ. ।೧೮।

ಹಲವು ಗುರುಮುಖದಿಂದೆ
ಹಲವು ಮಂತ್ರವ ಕೇಳಿ
ಹಲವು ಯೋಗ ಸಾಧನವಾಯಿತಲ್ಲಾ!
ಹಲವು ಮತದೊಳಗ್ಹೊಕ್ಕು
ಹಲವು ಸಿದ್ಧಿಯ ಪಡೆದು
ಹಲವು ಮಹತ್ವ ಆದಾತ ಮಹಾಂತಯೋಗಿ. ।೧೯।

ಹಲವು ಮಹತ್ವದಲ್ಲಿ
ಹಲವು ಪೂಜೆಯಗೊಂಡು
ಹಲವರಿಗೆ ಪೂಜಿಸುವದಾಯಿತಲ್ಲಾ!
ಹಲವು ಮತದೊಳಗೊಂದು
ಸುಲಭ ಶಿವಮತವಿರಲು
ಚಲುವ ಅಷ್ಟಾವರಣದ ಮಹಾಂತಯೋಗಿ. ।೨೦।

ಶಿವನ ಅಷ್ಟಾವರಣವೇ
ಶಿವಪದವಿಯೆನಿಸಿತ್ತು
ಶಿವಶರಣೆಂಬುವದೆರಡಾಯಿತಲ್ಲಾ!
ಶಿವಪದವಿಯೆಂಬುವದು
ಭವದ ಮಲಕಿನ ಕೀಲು
ಶಿವನ ನಿಜತತ್ವ ಆದ ಮಹಾಂತಯೋಗಿ. ।೨೧।

ನಿಜತತ್ವಯೆಂಬುವದು
ಅಜಹರಿಗೆ ಅಳವಡದು
ಈ ಜನರ ಗಜಬಿಜಿಗೆ ಬೆರಗಾಯಿತಲ್ಲಾ!
ಮಜರೆ ಮಹಾಜ್ಞಾನಕ್ಕೆ
ತ್ರಿಜಗ ತನ್ನೊಳಗಾಗಿ
ನಿಜಶರಣ ತಾನಾದ ಮಹಾಂತಯೋಗಿ. ।೨೨।

ಶರಣನಾಚರಣೆಯು
ಮೆರೆಯುವ ಮಹಾನುಭಾವ

ಅರಿದು ಹೇಳುವದು ಕೇಳುವದು ಆಯಿತಲ್ಲಾ!
ಪರಿಪರಿಯ ನುಡಿಗಳು
ಪರಿಪರಿಯ ನಡೆಗಳು
ನಿರಹಂಕಾರದೊಳಿರ್ದ ಮಹಾಂತಯೋಗಿ. । ೨೩ ।

ನಿರಹಂಕಾರದಲ್ಲಿ
ಅರವು ವಿಕಸನವಾಯಿತು
ಅರುವಿಗೆ ಆರುವು ಮೇಲಾಯಿತಲ್ಲಾ!
ಅರವು ಅಡಗಿದ ಬಳಿಕ
ಕುರುಹು ಕಾಣದೇ ಹೋಯಿತು
ಉರಿಯುಂಡ ಕರ್ಪುರವೋ ಮಹಾಂತಯೋಗಿ. । ೨೪ ।

ಬಯಲ ನೆನವಿನೊಳಾದ
ಬಯಲುಬ್ರಹ್ಮಾಂಡದೊಳು
ಬಯಲೇ ಪಿಂಡಾಂಡಮಯವಾಯಿತಲ್ಲಾ!
ಬಯಲಬ್ರಹ್ಮವ ಬೀರಿ
ಬಯಲ ಮಡಿವಾಳ ಸಾರಿ
ಬಯಲೇ ನಿರ್ಬಯಲಾದ ಮಹಾಂತಯೋಗಿ. । ೨೫ ।
॥ ೪೯ ॥

ಮಹಾಬಯಲಸ್ಥಲ :

೯೭೨

ಸುಳ್ಳು ಸುಳ್ಳು ನಿರ್ಬಯಲ ನಿರುಪಮ ನಿರಾವರಣ
ನಿರ್ಮಾಯ ನಿರ್ಲಯ ನಿಷ್ಕಲ–ಇವು ಆರು ಸುಳ್ಳೆನಿಸಿತ್ತು.
ನಿರ್ಭಾವ ನಿರ್ಜೀವ ನಿರ್ದೇಹ ನಿಜ್ಯಾತ ನಿರಂಜನ
ನಿರಾಲಂಬ–ಇವು ಆರು ಸತ್ತೆನಿಸಿತ್ತು.
ಸುರಾಳ ನಿರಾಳ ಅಣು ರೇಣು ಮಹಾ ಮಹತ್ವ
ಇವು ಆರು ಚಿತ್ತೆನಿಸಿತ್ತು.
ನಿಷ್ಕಾಮ ನಿರ್ಮೋಹ ನಿರ್ಲೋಭ ನಿರ್ಮದ
ನಿರ್ಲೇಪ ನಿಶ್ಚಿಂತ–ಇವು ಆರು ಆನಂದವೆನಿಸಿತ್ತು.
ನಿರಾಶ ನಿರ್ಗುಣ ನಿಷ್ಕರ್ಮ ನಿರ್ಭಯ
ನಿರ್ಲಜ್ಜ ನಿಃಶಬ್ದ–ಇವು ಆರು ನಿತ್ಯವೆನಿಸಿತ್ತು.
ಚಿನ್ನಾದ ಚಿದ್ಬಿಂದು ಚಿತ್ಕಳೆ ಚಿದ್ರೂಪ ಚಿನ್ಮಯ
ಚಿತ್ಪ್ರಕಾಶ–ಇವು ಆರು ಪರಿಪೂರ್ಣವೆನಿಸಿತ್ತು.
ಪರವಸ್ತು ಘನವಸ್ತು ನಿಜವಸ್ತು ಮಹಾಂತ ಸ್ವಯಂಭು

ಅಖಂಡ–ಇವು ಆರು ಅವಿರಳಪರಂಜ್ಯೋತಿಯೆನಿಸಿತ್ತು,
ಈ ಆರಾರು ಮೂವತ್ತಾರು ಮಹಾತತ್ವಯುಕ್ತವಾಗಿ
ತಾನೆ ತಾನಾದ ಅವಿರಳಪರಂಜ್ಯೋತಿಯೆನಿಸಿದ
ಪರಬ್ರಹ್ಮವೆಂಬ ಮಹಾಬಯಲೊಳಗೆ ತೋರಿಯಡಗಿದ
ಸ್ಥೂಲ ಸೂಕ್ಷ್ಮ ಕಾರಣ ಮಹಾಕಾರಣ ಶೂನ್ಯ
ನಿಶ್ಶೂನ್ಯ–ಇವು ಆರರ ವಿವರ :
ನಾದ ಬಿಂದು ಕಳೆ–ಒಂದೇ ಮೂರು, ಮೂರು ಒಂದೆ.
ಇವು ಮೂರು ಒಂದಾದ ಒಡಲಿಂಗೆ
ಶಿವ ಜಗ ಗುರು ಶಿಷ್ಯ ಮಹಾಂತ ಮುಕ್ತಿ–ಇವು ಆರು.
ಈ ಆರು ಮುಖದಿಂದೊಪ್ಪುವ ಚಿದ್ಬೈಲಮೂರ್ತಿಯು ತಾನೆ
ಶಿವ–ಶಕ್ತಿ, ಅಂಗ–ಲಿಂಗ, ನಾನು–ನೀನು
ಎಂಬ ತನ್ನ ತಾನೇ ಒಂದೇ ಎರಡಾದ,
ಎರಡು ಒಂದಾದ ವಿನೋದವೇನೆಂಬೆ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೦ ॥

೯೭೩

ಆ ಚಿದ್ಬೈಲಮೂರ್ತಿ ತಾನಾದ ಶಿವನ
ಸ್ಥೂಲಕಾಯವೆಂಬ ಬಹಿರಾವರ್ತದಿಂದ
ಆವರ್ತ ಕಠೋರ ಮಾಯಾ ತಾರಕ
ಚಂದ್ರ ಸೂರ್ಯ ಆತ್ಮ ಆಕಾಶ ವಾಯು
ಅಗ್ನಿ ಅಪ್ಪು ಪೃಥ್ವಿ–ಇವು ಹನ್ನೆರಡು
ಪ್ರಳಯೋತ್ಪತ್ತಿ ಪ್ರಳಯಸ್ಥಿತಿ ಪ್ರಳಯ ಪ್ರಳಯ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೧ ॥

೯೭೪

ಪರಶಿವನ ಸೂಕ್ಷ್ಮಕಾಯವಾದ ಜಗದ ಅಸುವೆನಿಸಿದ
ಬೀಜ ವೃಕ್ಷ ಫಲ ರಸ ವೀರ್ಯ ಪಿಂಡ
ಪ್ರಾಣ ಮನ ಎಚ್ಚರ ನೆನಹು ಮೋಹ ಆಶೆ
–ಇವು ಹನ್ನೆರಡು ಸಾವೋತ್ಪತ್ತ್ಯ, ಸಾವೇ ಸ್ಥಿತಿ, ಸಾವೇ ಸಾವೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೨ ॥

೯೭೫

ಪರಶಿವನ ಕಾರಣಕಾಯವಾದ ಗುರುವಿನ ಹೃದಯವೆನಿಸಿದ
ನವವರ್ಣ ನವಭಕ್ತಿ ನವಶಕ್ತಿ ನವಚಕ್ರ ನವಲಿಂಗ ನವಅಂಗ
ನವನಾದ ನವಸ್ಥಾನ ನವವರ್ಣ ನವಮಂತ್ರ ನವಮುಖ ನವತೃಪ್ತಿ

–ಇವು ಹನ್ನೆರಡು ಬಯಲುತ್ಪತ್ಯ, ಬಯಲು ಸ್ಥಿತಿ, ಬಯಲೇ ಬಯಲೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೩ ॥

೯೭೬

ಪರಶಿವನ ಮಹಾಕಾರಣಕಾಯವಾದ ಶಿಷ್ಯನ ಮನವೆನಿಸಿದ
ಸರ್ವೇಂದ್ರಿ ಸರ್ವಕರಣ ಸರ್ವನಾಮಕಾಮ
ಸರ್ವಮೋಹ ಸರ್ವ ಆಶೆ ಸರ್ವಸುಖ ಸರ್ವದುಃಖ
ಸರ್ವಪಾಪ ಸರ್ವಪುಣ್ಯ ಸರ್ವಚಿಂತೆ ಸರ್ವಗುಣ
ಸರ್ವಾದಿ ಸರ್ವವ್ಯಸನಂಗಳು– ಇವು ಹನ್ನೆರಡು
ಮರವೋತ್ಪತ್ತಿ, ಮರವೇ ಸ್ಥಿತಿ, ಮರವೇ ಮರವೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೪ ॥

೯೭೭

ಪರಶಿವನ ಶೂನ್ಯಕಾಯವಾದ ಮಂತ್ರಜ್ಞಾನವೆನಿಸಿದ
ಅರವು ಮಹದರವು ನಿಜಜ್ಞಾನ ಬ್ರಹ್ಮಜ್ಞಾನ
ಅಖಂಡಜ್ಞಾನ ಮಹಾಜ್ಞಾನ ಆತ್ಮಜ್ಞಾನ ತತ್ವಜ್ಞಾನ
ಶೃತಿಜ್ಞಾನ ಸಮ್ಯಜ್ಞಾನ ಮತಿಜ್ಞಾನ ಮನೋಜ್ಞಾನ
–ಇವು ಹನ್ನೆರಡು ಬೆರಗುತ್ಪತ್ಯ, ಬೆರಗು ಸ್ಥಿತಿ, ಬೆರಗೇ ಬೆರಗೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೫ ॥

೯೭೮

ಪರಶಿವನ ನಿಶ್ಶೂನ್ಯಕಾಯವಾದ ಮುಕ್ತಿನಿರ್ಭಾವವೆನಿಸಿದ
ನಿಃಕಳಂಕ ನಿಃಶಂಖ ನಿಃಕಾಮ ನಿಸ್ಸೀಮ ನಿರಾಭಾವ ನಿರಾಕಾರ
ನಿರ್ಭೇದ್ಯ ನಿರ್ವೇದ್ಯ ನಿಸ್ಸಾರ ನಿರಾಧಾರ ನಿಃಕಲ ನಿರುಪಮ
–ಇವು ಹನ್ನೆರಡು ನಿರ್ಬಯಲುತ್ಪತ್ಯ, ನಿರ್ಬೈಲ ಸ್ಥಿತಿ,
ನಿರ್ಬಯಲೆ ನಿರ್ಬಯಲೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೬ ॥

೯೭೯

ಪರಶಿವನ ಷಟ್‌ಕಾಯದೊಳಗೆ ತೋರಿದಾ
ಆರಾರು ಆರು ಹನ್ನೆರಡು ನೂರಾಯೆಂಟು ತತ್ವವಾಯಿತು.
ಈ ನೂರಾಯೆಂಟರೊಳಗೆ ಸಹಸ್ರ ಲಕ್ಷ ಕೋಟಿ ಶಂಖ
ಪದ್ಮ ಅರ್ಬುದ ಅನಂತ ಅಗಣಿತ ಅಗಮ್ಯ ಅಗೋಚರ
ಅಪ್ರಮಾಣಿತ ಅತೀತ ಅಣೋರಣೀಯಾನ್
ಮಹತೋ ಮಹೀಯಾನ್ ಏನೋ ಎನೋ ಎನಿಸಿದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೫೭ ॥

೯೮೦

ಆ ಪರಶಿವನೇ ತಾನೇ ಆದ ಆತ್ಮನೋರ್ವಗೆ
ಕರ್ಮ ಎರಡು, ಮೂರು ಗುಣ, ಕರಣ ನಾಲ್ಕು,
ಇಂದ್ರಿಯ ಐದು, ವರ್ಗ ಆರು, ವ್ಯಸನ ಏಳು, ಮದ ಎಂಟು,
ನಾಳ ಒಂಬತ್ತು, ವಾಯು ಹತ್ತು, ಎಪ್ಪತ್ತೆರಡು ಸಾವಿರ ನಾಡಿ,
ಅರ್ಥವತ್ತಾರುಕೋಟಿ ಗುಣ, ಆರುವರೆಕೋಟಿ ರೋಮ–
ಇವು ಮೊದಲಾದ ಅನಂತ ತತ್ವಯುಕ್ತವೆನಿಸಿದ
ತೊಂಬತ್ತಾರು ಅಂಗುಲ ದೇಹದೊಳಗೆ ನಿರ್ದೇಹಿಯಾಗಿ,
ಕರ್ಮ ಎರಡರೊಳಗೆ ದುಷ್ಕರ್ಮಮಾಡುವದೆಂತೆನೆ :
ಜಾರ ಚೋರ ಹುಸಿ ಹಾಸ್ಯ ಡಂಭಕ ಜೀವಹಿಂಸಾ ಪರಪೀಡಾ
ಕ್ಷುದ್ರ ಧೂರ್ತ ಕ್ರೋಧಿ ವಿಕಾರಿ ಪರದ್ರವ್ಯಾಪಹಾರಕ
ಅಹಂಕಾರ ಅಜ್ಞಾನ ಅನಾಚಾರ ಪಂಚಪಾತಕ ವಿಶ್ವಾಸಘಾತಕ
ಇವು ಮೊದಲಾದ ಅನಂತ ದುರ್ಗುಣದಿಂದ ತನ್ನ ತಾ ಮರೆತು
ತಾ ಮಾಡಿದ ದುಷ್ಕರ್ಮದಿಂದೆ ಪಾಪಹತ್ತಿ, ದುಃಖಗೊಂಡು
ಯಮನೊಳಗಾಗಿ ನರಕ ಉಂಡು ಎಂಬತ್ತುನಾಲ್ಕುಲಕ್ಷ
ಜೀವರಾಶಿಯೋನಿಯಲ್ಲಿ ಅನಂತಕಾಲ ತಿರುತಿರುಗಿ ಬಳಲುವದು.
ಆ ಬಳಲುವ ದುಷ್ಕರ್ಮವೇ ಕಾಲೋಚಿತಕ್ಕೆ ಸತ್ಕರ್ಮವಾಯಿತು.
ಅದು ಎಂತಾಯಿತೆಂದರೆ :
ಚೋರರಿಗೆ ಪರದ್ರವ್ಯಾಪಹಾರ ವಿಯೋಗದಲ್ಲಿ,
ದೇಗುಲ ದೀಪದಕುಡಿ ಕಡಿದಂತೆ :
ಆ ಸತ್ಕರ್ಮ ಮಾಡುವದೆಂತೆನೆ :
ದಯ, ಧರ್ಮ, ನಯ, ನೀತಿ
ಶಾಂತಿ, ದಾಂತಿ, ಕ್ಷಮೆ, ದಮೆ, ಭಕ್ತಿ, ಜ್ಞಾನ,
ವೈರಾಗ್ಯ, ನಿರಹಂಕಾರ, ನಿರಾಶ, ಅಷ್ಟಾಂಗಯೋಗ,
ಅಷ್ಟವಿಧಾರ್ಚನೆ, ಅಷ್ಟಾವರಣನಿಷ್ಠೆ –
ಇವು ಮೊದಲಾದ ಅನಂತ ಸುಗುಣದಿಂದೆ
ಪುಣ್ಯವೊದಗಿ ಸುಖಗೊಂಡು ಇಂದ್ರನೊಳಗಾಗಿ ಸ್ವರ್ಗ ಅನುಭವಿಸಿ
ಅಥವಾ ಬಹು ಸತ್ಕರ್ಮವಾದಡೆ
ಸದಾಶಿವನ ಚೌಪದ ಬಹುಪದದೊಳಗಾಗಿ
ಕೈಲಾಸಕ್ಕೆ ಹೋಗಿ ಸತ್ಕರ್ಮದಿಂದ ಒದಗಿದ
ಪುಣ್ಯದ ಫಲವನ್ನು ಅನುಭವಿಸಿ ಮರಳಿ
ಎಂಬತ್ನಾಲ್ಕುಲಕ್ಷ ಜೀವರಾಶಿ ಯೋನಿಯ ದ್ವಾರದಲ್ಲಿ
ಅನಂತಕಾಲ ತಿರುತಿರುಗಿ ಅಷ್ಟಭೋಗಸುಖದೊಳಗೆ ತೊಳಲುವದು.
ಆ ತೊಳಲುವ ಸತ್ಕರ್ಮವೇ ಕಾಲೋಚಿತಕ್ಕೆ ದುಷ್ಕರ್ಮವಾಗುವದು.

ಅದೆಂತೆನೆ :
ಶಿವಗಡ ಬಿದ್ದು ಗಂಧರ್ವ ಕರಿನಾಯಿ ಆದಂತೆ
'ಅತಿದಾನಾದ್ ಬಲೇರ್ಬಂಧಃ' ಎಂಬ ನೀತಿ ಉಂಟಾಗಿ,
ಇದಕ್ಕೆ ದುಷ್ಟಮಾರಿ ಚೌಡಾಪೂರ ವಿರೂಪಾಕ್ಷಿಗೆ
ಜಂಗಮದಾಸೋಹದಲ್ಲಿ ಜಂಗಮದೋಷ ಘಟಿಸಿದಂತೆ.
ಅದುಕಾರಣ ಸತ್ಕರ್ಮಕ್ಕೆ ಬೀಜ ದುಷ್ಕರ್ಮ,
ದುಷ್ಕರ್ಮಕ್ಕೆ ಬೀಜ ಸತ್ಕರ್ಮ.
ಹೀಗಾದ ಮೇಲೆ ಸತ್ಕರ್ಮವೇ ದುಷ್ಕರ್ಮ, ದುಷ್ಕರ್ಮವೇ ಸತ್ಕರ್ಮ,
ಪಾಪವೇ ಪುಣ್ಯ ಪುಣ್ಯವೇ ಪಾಪ, ಸುಖವೇ ದುಃಖ ದುಃಖವೇ ಸುಖ,
ಇವು ಎರಡರೊಳಗೆ ಹೆಚ್ಚು ಕಡಿಮೆ ಎಂಬುದೇನೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೫೮ ||

೯೮೧

ಆ ಪರಶಿವನೊಳಗಿರ್ದ ಜಗದಾತ್ಮನಲ್ಲಿ ತೋರುವ
ಸತ್ಕರ್ಮ ದುಷ್ಕರ್ಮಕ್ಕೆ ಅಂಜಿ
ಶಿವಧೋ ಶಿವಧೋ ಎಂದು ಮೊರೆಯಿಡಲು,
ಶಿವ ಸಾಧುರಮುಖದಿಂದಲ್ಲಿ ಬಂದು
ಗುರುವಿನ ಪಿಡಿಯೆಂದು ಹೇಳಲು,
ಗುರುವೇ ಗುರುವೇ ಎಂದು ಮೊರೆಯಿಟ್ಟು
ಗುರುವಿನ ಬಯಸುವ ಚಿದ್ಭ್ರಮೆ ಘಟ್ಟಿಗೊಂಡು
ಮುಂದೆ ನಿಂದಿರಲು, ಆ ಮುಂದೆ ನಿಂತ ಗುರುವಿನ ಪ್ರಾರ್ಥಿಸಲು,
ಆ ಶ್ರೀಗುರು ಆ ಶಿಷ್ಯನ ತನ್ನ ಕರುಣಜಲದಿಂದ ಮೈದೊಳೆದು,
ವಿಭೂತಿಪಟ್ಟವ ಕಟ್ಟಿ, ರುದ್ರಾಕ್ಷಿಯ ಅಲಂಕರಿಸಿ,
ಪಂಚಾಚಾರ್ಯರ ಸಾಕ್ಷಿಯಮಾಡಿ, ಶಿಕ್ಷಿಸಿ, ದೀಕ್ಷೆಯನೆಸಗಿ,
ಮೋಕ್ಷದ ಹಣ್ಣಿನ ಬಯಕೆಗೆ ಬೀಜವಿದೆಯೆಂದು ಲಿಂಗವ ಕೊಟ್ಟು,
ಜಂಗಮವ ಬೆರೆಸಿ, ಪಾದೋದಕವ ತರಳಿಸಿ,
ಶಿವಪ್ರಸಾದವರಳಿಸಿ, ಮಂತ್ರಕಾಯವ ಮಾಡಿ,
ಮುಕ್ತಿಪಕ್ವಗೈ ಎಂದು ಹೇಳಿ ಶಬ್ದಮುಗ್ಧವಾಗಲು,
ಆ ಶಬ್ದಮುಗ್ಧವಾದ ಗುರುವಿನ ಹೃದಯವ ತಿಳಿಯದೇ,
ತಾನ್ಯಾರೆಂಬುದನ್ನು ಅರಿಯದೆ, ಗುರುವಿನ ಹಾಡಿ ಹಾಡಿ,
ವಿಭೂತಿಯ ಪೂಸಿ ಪೂಸಿ, ರುದ್ರಾಕ್ಷಿಯ ಧರಿಸಿ ಧರಿಸಿ,
ಲಿಂಗವ ನೋಡಿ ನೋಡಿ, ಜಂಗಮದ ಆರಾಧನೆಯ ಮಾಡಿ ಮಾಡಿ,
ಪಾದೋದಕವ ಕುಡಿದು ಕುಡಿದು, ಪ್ರಸಾದವನುಂಡುಂಡು,
ಮಂತ್ರವನ್ನೋದೋದಿ, ಮಹತ್ವವ ಭ್ರಮಿಸಿ,

ಮುಕ್ತಿಯ ಬಯಸಿ ಬಯಸಿ, ಕಿಸಬಾಯಿ ಆಗಿ ಆಗಿ ಹಸಗೆಟ್ಟು
ಮುನ್ನಿಗಿಂ ಮಿಗಿಲಾಗಿ, ಭವಭವದಲ್ಲಿ ಮುಸಿಮುಣ್ಣಾದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೫೯ ||

೯೮೨

ಆ ಪರಶಿವನ ಗರ್ಭದಲ್ಲಿರ್ದ ಬ್ರಹ್ಮಾಂಡದೊಳಗೆ
ಪಿಂಡಾಂಡವಾದ ಪುಣ್ಯಾತ್ಮರು,
ಬಿಂದುರೂಪಾಗಿ ಬಂದ ಸೂತಕ ಕಂಡು ಸಂದೇಹಗೊಂಡು,
ಚಂದವಳಿದು, ಹಿಂದೆ ಬಂದಾ ಯೋನಿಯ ಕಿಸುಕುಳ
ಮೂತ್ರದಕುಣಿಗೆ ಬೀಳಬಾರದೆಂದು ಹೇಯ ಹುಟ್ಟಿ
ಸ್ತ್ರೀ ಭೋಗವ ಬಿಟ್ಟು, ವೈರಾಗ್ಯ ತಲೆಗೇರಿ,
ಅನ್ನ ವಸ್ತ್ರವ ಕಳೆದು ಊರೊಳಗಿರಬಾರದೆಂದು
ದೇಶ ಸಂಚಾರ ಮಾಡಿ, ಕಾಶಿ, ಕೇದಾರ, ರಾಮೇಶ್ವರ,
ಶ್ರೀಶೈಲ, ಉಳವಿ, ಹಂಪಿ, ಗೋಕರ್ಣ
ಮೊದಲಾದ ಅನಂತ ತೀರ್ಥವ ಮಿಂದು,
ಸಾಯಬಾರದ ಅಂಗಸಿದ್ಧಿ, ಅಲಗುನೋಯಿಸದ ಘಾಟಿಕಾಸಿದ್ಧಿ,
ಹೇಳಿದ್ದಾಗುವ ವಾಕ್ಯಸಿದ್ಧಿ, ಹೆಸರುಹೇಳುವ ಬೆನಕನಸಿದ್ಧಿ,
ರೋಗಕಳೆಯುವ ಮೂಲಿಕಿಸಿದ್ಧಿ,
ಬೆರಗುಮಾಡುವ ಬೇತಾಳಸಿದ್ಧಿ, ಅಗ್ನಿಸ್ತಂಭನ,
ಜಲಸ್ತಂಭನ, ಗಗನಕ್ಕೆ ಹಾರುವ ಯೋಗಸಿದ್ಧಿ,
ದೂರದೃಷ್ಟಿ, ದೂರಶ್ರವಣ, ಸರ್ವದೃಷ್ಟಿ,
ಉಂಡೂಟ, ಕಂಡ ಕನಸು, ಮನೋಬಯಕೆ, ಹಿಂದಿನ ಖೂನ, ಕನಸಸಾಕ್ಷಿ,
ಇಂದ್ರಜಾಲ, ಮಹೇಂದ್ರಜಾಲ, ಸುವರ್ಣಜನನ,
ಬಂಗಾಳಿ, ಮರಣಯೋಗ, ಪರಕಾಯಪ್ರವೇಶ, ರಾಜಯೋಗ,
ರಾಜವಶ, ಜನವಶ, ಸ್ತ್ರೀವಶ, ಭಸ್ಮಸಿದ್ಧಿ, ಅಂಜನಸಿದ್ಧಿ,
ಮೋಹನ, ವೈರಿಸ್ತಂಭನ, ವಾಯುಸ್ತಂಭನ, ಭೂತ, ಪ್ರೇತ,
ಪಿಶಾಚಿ, ಬ್ರಹ್ಮರಾಕ್ಷಸ, ಜಟ್ಟಿಂಗ, ಹಿರೋಡ್ಯಾ, ಯಲ್ಲಮ್ಮಾ
ಪೋತಮ್ಮಾ, ಚಂಡಿಚಾಮುಂಡ್ಯಾದಿಗಳ ಮಾತನಾಡಿಸುವ
ಮಂತ್ರಸಿದ್ಧಿ, ಹುಲಿ, ಹಲ್ಲಿ, ಕತ್ತಿ, ನರಿ, ಕಾಗಿ, ಹಾಲ್ಹಕ್ಕಿ
ಮೊದಲಾದ ಮೃಗಪಕ್ಷಿಯ ಮಾತು ತಿಳಿಯುವ ಯಂತ್ರತಂತ್ರಸಿದ್ಧಿ,
ಮಲಮೂತ್ರವನು ಬಿಡದ ಅಂತರಪಚನ
ಅದೃಶ್ಯ ಅನಂತ ಆಹಾರ ಜೀವಸ್ತಂಭನ, ದೇವ ಪ್ರತ್ಯಕ್ಷ ಸಂಜೀವನ,
ಬಂಧವಿಮೋಚನ, ದೃಷ್ಟಿ ಆಗಮನ, ಇಷ್ಟದಾಯಕ ಮನೋಗಮನ
ಮೊದಲಾದ ಅನಂತ ಸಿದ್ಧಿಗಳಿಗಾಶೆ ಮಾಡಿ

ಮಣ್ಣುಗಾಣದೇ ಹೋದರು ಅನಂತರು.
ಅದು ಅಂತಿರಲಿ, ಫಲಪದವಿ ಪಡೆವೆವೆಂದು ಹಳ್ಳ, ಕೊಳ್ಳ, ನದಿತೀರ,
ಅಡವಿ ಅರಣ್ಯ ಗುಡ್ಡ ಗಿರಿ, ಗವಿ ವಟವೃಕ್ಷ, ಸಂಗಮ,
ಮಠ ಮಾನ್ಯ ಮೊದಲಾದ ಸುಸ್ಥಳದಲ್ಲಿ ಕುಳಿತು
ನಿದ್ರೆ ಆಹಾರ ತೊರೆದು, ಆಸನವ ಬಲಿದು, ಮೌನ ಮುದ್ರೆಯ ಹಿಡಿದು,
ವಾತ, ಅಂಬು, ಪರ್ಣ, ಕಲ್ಲು, ಹಣ್ಣು, ಬೂದಿ,
ಹುಲ್ಲಿನ ರಸ, ನೆಲ, ಬೇರು, ಗಡ್ಡಿ ಮೊದಲಾದ ಆಹಾರವ ಕೊಂಡು,
ಮೈಗೆ ಹುತ್ತೇರಿ, ಜಡಿಯಲ್ಲಿ ಆಲವ ಬೆಳೆದು,
ಗಡ್ಡದೊಳು ಗೀಜಗವು ಮನಿ ಮಾಡಿರಲು,
ಮನವಳಿಯದೆ, ಘನವ ತಿಳಿಯದೆ, ತನುವ ಉಳಿಯದೆ,
ಪಂಚೇಂದ್ರಿಯ ಮಿಂಚು ತೊಳಿಯದೆ, ಹಳೆಹಂಚಾದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೦||

೯೮೩

ಆ ಪರಶಿವನ ಅಷ್ಟಾಂಗದಿಂದಾದ ಬ್ರಹ್ಮಾಂಡದ
ಸ್ಥಿರ ಚರ ಪ್ರಾಣಿಗಳ ಲಯವ ನೋಡಿ ಚಿಂತೆಯೊಳಗಾಗಿ,
ಕಂತುಹರನ ಧ್ಯಾನವ ಮಾಡಲು, ಆ ಹರ ಗುರುರೂಪವ ತಾಳ್ದು ಬಂದು,
ತನ್ನ ಚಿಂತಿಸಿದ ಸುಜ್ಞಾನಿಗಳಿಗೆ,
ಮನವನೊಬ್ಬುಳಿಗೊಳಿಸುವುದಕ್ಕೆ ಕಾರಣವೆಂದು ಹೇಳಿದ
ಷಣ್ಮುಖಿ, ಶಾಂಭವಿ, ಖೇಚರಿ, ಭೂಚರಿ,
ಸಾಚರಿ, ಕುರಂಗ, ಪಾಲೋತಕ, ಹಠ, ಲಯ, ಲಂಬಿಕ,
ಮೊದಲಾದ ಅನಂತ ಮುದ್ರೆಗಳ ಸಾಧಿಸಿ,
ಆ ಮುದ್ರೆ ಸಾಧನದಲ್ಲಿ ಕಂಡ, ಮಾಯ, ಛಾಯ,
ಅಭ್ರಛಾಯ, ಪುರುಷಛಾಯ, ಮಿಂಚಿನ ಛಾಯ,
ಬಳ್ಳಿಮಿರುಪಿನ ಛಾಯ, ಆರು ವರ್ಣದ ಛಾಯ,
ಮೃತ್ಯುವಿನ ಛಾಯ, ಜೀವ ಜಪ ಮರಣ ಚಿನ್ನ
ಕನಸಸಂಭ್ರಮ, ಕುಂಡಲಿನೋಟ, ಘೋಷಲಂಪಟ,
ಮಾನಸಪೂಜೆ, ಬೈಲವಾಣೆ, ಪಶ್ಚಿಮಕೋಣೆ,
ಆತ್ಮಭೆಟ್ಟಿ, ಮಂತ್ರಪಾತ, ಒಳಬೆಳಗು, ಹೊರಬೆಳಗು
ಪರಿಪರಿಯ ಬೆರಗುಗಳ ತಿಳಿದು, ಇದೇ ನಿಜಬ್ರಹ್ಮವೆಂದು ಹೆಮ್ಮೈಸಿ,
ಆಸೆವೊಡಿಯದೆ, ಕ್ಲೇಶ ಕಡಿಯದೆ,
ಘಾಶಿಯಾಗಿ ಹೇಸಕಿಯೊಳಗೆ ಮುಳಿಗಿ ಮುಂದುಗಾಣದೇ ಹೋದರು
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೧ ||

೯೮೪

ಆ ಪರಶಿವನ ಮೂಲಮಂತ್ರಸ್ವರೂಪವಾದ
ಭುವನಬ್ರಹ್ಮಾಂಡದ, ಸಕಲಜೀವಿಗಳ ವಿಸ್ತಾರವ ಕಂಡು,
ತೋರಿ ಅಡಗುವ ಪರಿಗೆ ಸಂಸಾರಮಿಥ್ಯವೆಂದು
ಸಜ್ಜನಗುಣದಲ್ಲಿ ಕೂಡಿ, ಸತ್ಪುರುಷರ ಸಂಗವಮಾಡಿ,
ಶಾಸ್ತ್ರಾಗಮ ಶಿವಪುರಾಣ, ಶಿವಾಚಾರದಲ್ಲಿ ಮನವಿಟ್ಟು
ತತ್ ತ್ವಂ ಅಸಿಯೆಂಬೋ ವಾಕ್ಯಕ್ಕೆ ಚಿತ್ತವೆಳಸಿ
ವಸ್ತು ತಿಳಿಯಬೇಕೆಂದು ತತ್ವಜ್ಞಾನಿಗಳ ಹುಡುಕುವ
ಶ್ರುತಿಜ್ಞಾನಿಗಳಿಗೆ, ಆ ವಸ್ತುವೇ ಗುರುವಾಗಿ,
ತತ್ತ್ವೋಪದೇಶವ ಹೇಳಿ, ತತ್ವ ಮಂತ್ರ ವಿವರವ ತಿಳಿಸಲು,
ಆ ತತ್ವ ಮಂತ್ರ ವಿವರವ ತನ್ನೊಳಗೆ ಲಕ್ಷವಿಟ್ಟು ನೋಡೆ
ಆತ್ಮಜ್ಞಾನ ಅನುಮಿಷವಾಯಿತ್ತು.
ಆ ಆತ್ಮಜ್ಞಾನ ಅನುಮಿಷದೃಷ್ಟಿ, ಆ ಆತ್ಮಾನಾತ್ಮವ ಶೋಧಿಸಿತ್ತು.
ಆ ಶೋಧನೆ ಮಹಾಜ್ಞಾನ ಬೆಳಗಲು,
ಆ ಬೆಳಗಿನೊಳಗೆ ಮೂಲಪ್ರಣವದ
ಒಡಲೊಳಗಿನ ಆರು ಆಕೃತಿಗಳೆ ಆರು ಬೀಜಪ್ರಣವಗಳು,
ಆ ಆರು ಪ್ರಣವಗಳೇ ಆ ಪರಶಿವನ ಆರು ಮುಖಗಳು,
ಆ ಆರು ಮುಖಗಳಿಗೆ ಆರು ತತ್ವಗಳು,
ಆರ್ಕಾರು ಮೂವತ್ತಾರುತತ್ವವು.
ಮೂವತ್ತಾರುತತ್ವಗಳಿಗೆ ಬ್ರಹ್ಮಾಂಡ,
ಆ ಬ್ರಹ್ಮಾಂಡವೇ ಹನ್ನೆರಡು ಭೂತ,
ಹನ್ನೆರಡು ಭೂತಗಳೇ ಪಿಂಡಾಂಡ.
ಆ ಪಿಂಡಾಂಡದಲ್ಲಿ ಹನ್ನೆರಡು ಜ್ಞಾನ, ಹನ್ನೆರಡು ಸ್ಥಾನ, ಹನ್ನೆರಡು ಚಕ್ರ,
ಹನ್ನೆರಡು ಅಂಗ, ಹನ್ನೆರಡು ಲಿಂಗ, ಹನ್ನೆರಡು ಭಕ್ತಿ
ಹನ್ನೆರಡು ಶಕ್ತಿ, ಹನ್ನೆರಡು ಮಂತ್ರ, ಹನ್ನೆರಡು ಹಸ್ತ,
ಹನ್ನೆರಡು ಮುಖ, ಹನ್ನೆರಡು ಪದಾರ್ಥ, ಹನ್ನೆರಡು ಪ್ರಸಾದ,
ಹನ್ನೆರಡು ತೃಪ್ತಿ–ಇವು ಮೊದಲಾದ ಸತ್ಕರ್ಮದೊಳಾಗದ
ಸರ್ವಸುಗುಣಗಳು, ಸರ್ವದುರ್ಗುಣಗಳು,
ಸರ್ವವೂ ಮೂಲಪ್ರಣವವೆಂದು ತಿಳಿದು.
ಸರ್ವವೂ ಮೂಲಪ್ರಣವವೇ ಶಿವ, ಆ ಮೂಲಪ್ರಣವವೇ ಅಷ್ಟಾವರಣ.
ಆ ಮೂಲಪ್ರಣವವೇ ಸಕಲಪ್ರಾಣಿಗಳು,
ಆ ಮೂಲಪ್ರಣವವೇ ನಾನು, ಸರ್ವವೂ ಮೂಲಪ್ರಣವವೆಂದು
ಇಲ್ಲೇನು, ಅಲ್ಲೇನು, ಎಲ್ಲೇನು, ಹಿಂಗೇನು,
ಹಾಂಗೇನು, ಹ್ಯಾಂಗೇನು, ಇಪ್ಪಂಗಿರು ಸಿದ್ಧೇಶನೆಂಬುವವ ತಿಳಿದು.

ತಿಳಿಯದೇ ನರಕದ ಕೇರಿಗೆ ಕಿರಿಕುಲದ ಸೂಕರ ಹೋದಂತೆ,
ಹಸಿಯ ತೊಗಲಿನ ವಸರುವ ತೂತಿನ ಹಳೇ ಘಾಯಿಯ ಬಿರಿಕಿನೊಳಗೆ,
ಸರಕನೇ ಎದ್ದು ಜರಕನೇ ಜಾರಿ ಸಿಗಬಿದ್ದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೬೨ ॥

೯೮೫

ಆ ಪರಶಿವನ ಮಾಯಾಸ್ವರೂಪವಾದ ಈ ಲೋಕದ ಜನರಿಗೆ
ಪೂರ್ವಪುಣ್ಯವೊದಗಿ, ಸಂಸಾರ ಹೇಯವಾಗಿ,
ಗುರುಕಾರುಣ್ಯವ ಪಡೆದು, ಆತ್ಮಜ್ಞಾನ ತಿಳಿಯಲಿಕ್ಕೆ,
ಮನಗೊಟ್ಟು, ತತ್ವವ ಶೋಧಿಸಿ, ಪುರಾತನ ವಚನ ಹಾಡಿಕೊಂಡು
ಅನುಭವಿಯಾಗಿ, ನಾನೇ ಅನುಭಾವಿ ನಾನೇ ಪ್ರಭು,
ನಾನೇ ಪರಬ್ರಹ್ಮವ ಬಲ್ಲ ಪರಮಜ್ಞಾನಿಯೆಂದು,
ಬಸವಾದಿ ಪೂರ್ವಪ್ರಮಥರ ಪುರಾತರ ಮಹಾಗಣಂಗಳ ಜರಿದು,
ಈ ಭುವನದಲ್ಲಿ ಇನ್ನ್ಯಾರು ನಿಜವನರಿತವರಿಲ್ಲೆಂದು ಅಹಂಕರಿಸಿ,
ನಾವು ಮಹಾಜ್ಞಾನಿಗಳು, ನಾವು ಕೇವಲ ಶಿವಾಂಶಿಕರು,
ನಮ್ಮನ್ನಾರು ಅರಿಯರು,
ನಮ್ಮ ಬಲ್ಲವರು ಪುಣ್ಯವಂತರು, ನಮ್ಮನ್ನರಿಯದವರು ಪಾಪಿಷ್ಠರು.
ನಾವು ಮಹತ್ವ ಉಳ್ಳವರು, ನಾವು ಮಕ್ಕಳ ಕೊಡುವೆವು,
ರೋಗ ಕಳೆಯುವೆವು, ಬ್ರಹ್ಮಹತ್ಯಾದಿ ಪಿಶಾಚಿಯ ಸೋಂಕು ಬಿಡಿಸುವೆವು
ಎಂದು ವಿಭೂತಿ ಮಂತ್ರಿಸಿಕೊಟ್ಟು,
ಅವರ ಮನೆಯಲ್ಲಿ ಶಿವಪೂಜೆಯ ಪಸಾರವನಿಳಿಯಿಟ್ಟು,
ಆ ರೋಗದವರನ್ನು ಮುಂದೆ ಕೂಡ್ರಿಸಿಕೊಂಡು,
ತಾ ಕೂತು ಕಣ್ಣು ಮುಚ್ಚಿ, ಒಳಗೆ ಬೆಳಗವ ಕಂಡು,
ಕಣ್ದೆರೆದು, ಬಿರಿಗಣ್ಣಿನಿಂದ ನೋಡ್ತ ಹಡ್ತ ಹುಡ್ತ ಮಾಡಿ
ಪರಿಣಾಮವಾಗಲೆಂದು ಹೇಳಲು, ಅದು ರಿಣಾ ತೀರಿಹೋದರೆ,
ನಮ್ಮ ಮಹತ್ವ ಎಂಥಾದ್ದು, ಹಿಂದೆ ಇಂಥಾ ಮಹತ್ವ ಬಳಹ ಮಾಡೀವಿಯೆಂದು
ಅಲ್ಲಲ್ಲಿ ಹೆಸರು ಹೇಳಿಕೊಳ್ಳಬೇಕು. ಅದು ಹೋಗದಿದ್ದರೆ–
ಇವರ ವಿಶ್ವಾಸ ಘಟ್ಟಿಲ್ಲೆಂದು, ಏನರೆ ನೆವ ಕೊಳ್ಳಬೇಕು.
ಕೊಟ್ಟರೆ ಹೊಗಳಬೇಕು, ಕೊಡದಿದ್ದರೆ ಬೊಗಳಬೇಕು.
ಅವರಿಂದ ಆ ಹಣವು ತನಗೆ ಬಾರದಿದ್ದರೆ
ಅವರ ಅರ್ಥವ ಕಳೆಯಬೇಕೆಂಬ ಯೋಚನೆಬೇಕು.
ಅಥವಾ ಫಣ್ಯಾಚಾರದಲ್ಲಿ ಅವರಿಂದ ಅರ್ಥವ ಸೆಳೆತಂದು
ಹಿಂದೆ ತಾ ಬಿಟ್ಟು, ಪೂರ್ವಪ್ರಪಂಚದವರಿಗೆ ಕೊಟ್ಟು
ಈ ವಿಷಯಾತುರಕ್ಕೆ ವಾಯು ತಪ್ಪಿ ನಡೆದು

ಇದು ಪ್ರಭುವಿನಪ್ಪಣೆಯೆಂದು ಹಾಡಿದ್ದೇ ಹಾಡುವ
ಕಿಸಬಾಯಿದಾಸನ್ಹಾಂಗೆ ಹಾದಿದ್ದೇ ಹಾಡಿಕೊಳ್ಳುತ್ತ
ಕ್ರೀಯ ನಿಃಕ್ರಿಯವಾಗಿ ಸತ್ತ ಕತ್ತಿಯ ಎಲವು ತಂದು
ತಿಪ್ಪಿಯಲ್ಲಿ ಬಚ್ಚಿಟ್ಟು ಸುತ್ತುವ ತಲೆಹುಳುಕ
ಹುಚ್ಚುನಾಯಿಯಂತೆ, ಉಚ್ಚಿಯಾ ಪುಚ್ಚಿಗೆ ಮೆಚ್ಚನಿಟ್ಟ
ನಿಚ್ಚ ಕಚ್ಚಿಗಡಕರಿಗೆ ತಮ್ಮ ನಿಜದೆಚ್ಚರ ಇನ್ನೆಲ್ಲಿಹದೋ ?
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೩ ||

೯೮೬

ಆ ಪರಶಿವನ ಚಿದ್ವಿಲಾಸದಿಂದಾದ ಇಹದೊಳಗೆ
ನರನಾಗಿ ಅರುವುಹಿಡಿದು ಕುರುಹುಕಂಡವಂಗೆ ಗರ್ವವುಂಟೆ ?
ಅರುವು ಪಿಡಿಯದೆ ಕುರುಹುಗಾಣದೆ
ಬರಿಯ ಬಾಯಿಲೆ ಬ್ರಹ್ಮವ ನುಡಿದರೆ ಬ್ರಹ್ಮನಾಗಬಲ್ಲರೆ ?
ಬ್ರಹ್ಮನಾದ ಮೇಲೆ ಇಮ್ಮನ ಎಲ್ಲಿಹದೊ ?
ತಾನು ಅದ್ವೈತನಾದ ಮೇಲೆ ದ್ವೈತವನಾಚರಿಸುವದುಂಟೆ ?
ತಾನೇ ನಿಜ ಸರ್ವವೂ ಸುಳ್ಳೆಂಬುದುಂಟೆ ?
ಅಹುದು ಅಲ್ಲ ಎಂಬುವುದುಂಟೆ ?
ಗುರುವ ಹಿಂದುಗಳೆದು, ಕಟ್ಟಿದಾ ಲಿಂಗವ ಬಿಟ್ಟು,
ಜಂಗಮವ ಜರಿಯಲುಂಟೆ ?
ಅಖಂಡವ ತಿಳಿದು ಆ ಅಖಂಡವು ತಾನಾಗದೆ
ಭಂಗಿ ಮುಕ್ಕಿದವನಂತೆ, ಅಂಗ ಬತ್ತಲೆಯಾಗಿ,
ಮಂಗಮತಿಗೂಡಿ ಸಂಗವ ಸಂದು,
ಒಂದಾಗದೆ ಭಂಗಾಗಿ ಹೋದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೪ ||

೯೮೭

ಆ ಪರಶಿವನ ಚಿತ್ತ ಹೆತ್ತ ಮರ್ತ್ಯದ ಮಾನವರೊಳಗೆ
ಮಹಾಜ್ಞಾನ ಜನಿಸಿ ಆತ್ಮಜ್ಞಾನವ ಪಡೆದು,
ಆ ಅಖಂಡ ಜ್ಞಾನವ ಮೀರಿ ಬ್ರಹ್ಮ ತಾನಾದರೆ
ಭವ ಶಿವ ಎಂಬೋದೆರಡಿಲ್ಲದಿದ್ದರಾಯಿತು.
ನಾ ತಿಳದೆ ನೀ ತಿಳಿ ಎಂಬುವದು ಹೋದರೆ ಶಬ್ದಮುಗ್ದ.
ಚೋರ ತಗದಿಟ್ಟ ದ್ರವ್ಯವ ಮತ್ತೊಬ್ಬಚೋರ ಒಯ್ದಂತೆ ಇರಬೇಕು.
ಸರ್ವವು ಒಂದಾದ ಮೇಲೆ ಹಲವು ಮಾತ್ಯಾಕೆ ?
ತಾ ತಿಳಿದ ವ್ಯಾಲೆ ಸುಮ್ಮನಿರಲ್ಯಾಕೆ ?
ಪ್ರೇಮವಿದ್ದರೆ ಕಾಮಬಿಡುವದ್ಯಾಕೆ ?

ಕಾಮುವಿಲ್ಲದಿದ್ದರೆ ಪ್ರೇಮವಿಡುವದ್ಯಾಕೆ ?
ಇವು ಇಲ್ಲದಾತಗೆ ಮೌನಮುದ್ರೆಯ ಮಾಡಿ
ಯೋಚನೆ ಗೊಡವೆ ಯಾಕೆ ?
ಜ್ಞಾನ ಹಾಸ್ಯಾದ ನಾಚಿಕೆ ಸಾಲದೆ ?
ಮೂಕರಾದೇವೆಂದು ಜೋಕೆಯಲ್ಲಿರುತ
ಬೇಕಾದ ಕಾಲಕ್ಕೆ ತಾ ಕೈಲೆ ತೋರಿಸುವ ಇಂತಹ ಅನೇಕ ಕಳ್ಳಮೂಳರು
ಲಂಡ್ಯೇನ್ಹಳ್ಳವಗೂಡಿ ಹೋದರು,
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೬೫ ॥

೯೮೮

ಆ ಪರಶಿವ ತಾನೇ ತಾನಾದ, ಲೀಲಾವೇಷದಲ್ಲಿ ಮೇಲಾದ.
ತಾನೇ ಶಿವ, ನಾನೇ ಶಿಷ್ಯ, ನೀನೇ ಗುರುವು, ಏನು ಮುಕ್ತಿ ?
ಈ ಚಾಪಲ್ಯದೊಳಗೆ ನೀ ಹೇಳಿದ್ಹಾಂಗೆ ನಾ ಕೇಳಿದೆನಾಗಿ
ಒಂದೇ ಒಂದೆಂಬೋ ನಿಜಜ್ಞಾನ ಸಾಧಿಸುತ್ತ,
ಆ ನಿಜಜ್ಞಾನದಿಂದೆ ನೋಡಲು,
ಆವರ್ತದಿ ಬೀಜಮಧ್ಯ ಸಾವು ಅಂತ್ಯವಾಗಿ,
ಸರ್ವವು ಸರ್ವಮಯವೆನಿಸಿತ್ತು.
ಮತ್ತೆ ಕಾಮ ಮನ್ಮಥನಲ್ಲಿ, ಕ್ರೋಧ ಯಮನಲ್ಲಿ
ಲೋಭ ಕುಬೇರನಲ್ಲಿ, ಮೋಹ ಇಂದ್ರನಲ್ಲಿ,
ಮದ ಬ್ರಹ್ಮನಲ್ಲಿ, ಮತ್ಸರ ವರುಣನಲ್ಲಿ,
ಮತ್ತೆ ಭಕ್ತಿ ಬಸವಣ್ಣನಲ್ಲಿ, ವೈರಾಗ್ಯ ಮಡಿವಾಳನಲ್ಲಿ,
ಶಾಂತಿ ಮರುಳಶಂಕರದೇವರಲ್ಲಿ, ನಿಜ ಅಜಗಣ್ಣನಲ್ಲಿ
ಜ್ಞಾನ ಚೆನ್ನಬಸವಣ್ಣನಲ್ಲಿ; ಅರುಹು ಪ್ರಭುವಿನಲ್ಲಿ, ಕುರುಹು ಗೊಲ್ಲಾಳನಲ್ಲಿ,
ಮತ್ತೆ ಸುಖ ಸ್ವರ್ಗದಲ್ಲಿ, ದುಃಖ ನರಕದಲ್ಲಿ, ಪುಣ್ಯ ಸತ್ಕರ್ಮದಲ್ಲಿ
ಪಾಪ ದುಷ್ಕರ್ಮದಲ್ಲಿ, ಜೀವಾತ್ಮ ಪರಮಾತ್ಮನಲ್ಲಿ, ಪರಮಾತ್ಮ ಮೊದಲಲ್ಲೆ,
ಮತ್ತೆ ಹಲವು ಮಲದಲ್ಲಿ
ನಾ ಶಿಷ್ಯನಲ್ಲೇ, ನೀ ಗುರುವಿನಲ್ಲೇ, ತಾ ಶಿವನಲ್ಲೇ,
ಮುಕ್ತಿಯಲ್ಲೇ, ಅಲ್ಲೇನೋ, ಇಲ್ಲೇನೋ ಎಲ್ಲೇನೋ ಎಂತೇನೋ ?
ನಾನೇನೋ ನೀನೇನೋ, ತಾನೇನೋ ಏನೇನೋ ?
ಇದೇ ನಿಜವೆಂಬ ಅರುವು ಅಡಗಿದುದು ಬೆರಗು.
ಈ ಬೆರಗು ಹೋದುದೇ ನಿಬ್ಬೆರಗು.
ನಿಬ್ಬೆರಗು ಎಂಬುದೇ ಬಯಲು ;
ಆ ಬಯಲು ಬಯಲಾದದ್ದೇ ನಿರ್ಬಯಲು.
ಇದಲ್ಲದೆ ನಿಜವು ತಿಳಿದಿದ್ದು ;

ಆ ನಿಜವು ತಾನಾಗದಿರ್ದರೆ ಆ ಮನುಜರು ಮುಂದೇನಾದರು ?
ಗಜವಿಜಿಗೆ ಹೋತ್ಹೋಯಿತು, ಚದುರರಾದವರೆಲ್ಲಾ ಬದಿರಾಗಿ ಹೋದರು.
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೬ ||

೯೮

ಆ ಪರಶಿವನ ನಿಜಸ್ವರೂಪವೇ ಬ್ರಹ್ಮಾಂಡವಾಗಿ,
ಪಿಂಡಾಂಡವಾಗಿ, ಕರಣಂಗಳಾಗಿ, ಕರ್ಮಂಗಳಾಗಿ,
ಸೃಷ್ಟಿ ಸ್ಥಿತಿ ಲಯಂಗಳಾಗಿ, ನೋವು ಸಾವುಗಳಾಗಿ,
ತಾನೇ ಇದ್ದದ್ದು, ಸರ್ವವು ತಾನೆಂಬುದು ತಾನೇ ಮರೆತು,
ಶಿಶುವು ತಾನಾಡುವ ಆಟದಲ್ಲಿ, ಕಲ್ಲಿಗೆ ಕಾಲ ತಗಲಿಸಿಕೊಂಡು ಅಳುವಂತೆ,
ವಿಷಯದಿಚ್ಛೆಯಲ್ಲಿ ನೊಂದು ಶೋಕಿಸುತ್ತಿರಲು,
ಆ ಶಿಶುವಿಗೆ ತಂದಿ ಬಂದು ಕಣ್ಣೀರೊರಸಿ,
ಆ ಕಲ್ಲತಗಲಿದ ಕಾಲ್ನೋವಿಗೆ ಔಷಧಿಯ ಮಾಡಿ,
ತನ್ನ ಹೆಂಡತಿಯ ಕರೆದು, ಮಗನ ಸಮಾಧಾನಮಾಡೆಂದು ಹೇಳಲು,
ಆ ತಾಯಿಯೆತ್ತಿಕೊಂಡು,
ಕಣ್ಣು, ಮೂಗು, ಕಿವಿ, ಬಾಯಿ, ಮೈ ಧೂಳವನ್ನೆಲ್ಲಾ
ತಾ ಹೊದ್ದ ಮೇಲ್‌ಸೆರಗಿಲೊರಸಿ ಮೊಲೆಯುಣಿಸಿ,
ತೊಟ್ಟಿಲೊಳು ಹಾಸಿ ಮಲಗಿಸಿ ಹೊಚ್ಚಿ
ಹೆಂಗ ಮಂಗಲ ನುಡಿ, ನಮ್ಮಪ್ಪ ಅರಸ ಭೀಮಾರಿ ಭೀ ಭೀ ಭೀ
ಅಳುಳುಳುಳುಳುಳೆಂದು ಹಾಡುತ್ತಿರಲು,
ಆ ಶಿಶುವು ಆ ಔಷಧದಿಂದೆ ನೋವು ಹೋಗಿ,
ತಾಯಿಯ ಮೊಲೆಹಾಲಿನಿಂದೆ ಹಸಿವು ಅಡಗಿ,
ಆ ಜೋಗುಳಹಾಡಿಗೆ ಸೊಂಪುದೋರಿ ಸುಮ್ಮನಾಗಿ,
ತೊಟ್ಟಿಲ ತೂಗುವುದರೊಳಗೆ ಜೋಕಬಂದು,
ಸುಖನಿದ್ರೆಯೊಳ್ ಮೈಮರೆದಿರಲು,
ಮಾಯೆಸರ್ಪನು ಬಂದು ಕಚ್ಚಿ ಕಾಣಿಸಿಕೊಳ್ಳದೆ ಹೋಗಲು,
ಆ ತಾಯಿ ತಂದಿ ಉಂಡು ಮಂಚದಮ್ಯಾಲೆ,
ರತಿಸಂಭೋಗಸುಖನಿದ್ರೆಯಲ್ಲಿರೆ,
ಮಾಳಿಗೆ ಬಿದ್ದು ಮರಣವಾಗಲು, ಆ ತಾಯಿ ತಂದಿಯು ಮಗ
ಈ ಮೂವರು ಮಾಳಿಗೆ ಬಿದ್ದು ಮರಣವಾದರೆಂಬುದಾಯಿತ್ತಲ್ಲದೆ,
ಆ ಶಿಶುವಿನ ಸಾವು ಆರು ಅರಿಯರು.
ಇದರ ಹಾಂಗೆ ತನ್ನ ವಿಷಯದಿಚ್ಛೆಗೆ ಓಡ್ಯಾಡಿ
ಕಾಲನ ಬಾಧೆಗೆ ಬಿದ್ದು ಭವದುಃಖದೊಳಗಿರುವ ನರರಿಗೆ
ತಾನೇ ಗುರುವಾಗಿ ಬಂದು, ಸಾನಂದಸಿದ್ಧರಾಮನು

ಹೀನ ನರಕಿಗಳ ತಗೆದಂತೆ, ಆ ಶಿಷ್ಯನ ಕೈಹಿಡಿದೆತ್ತಿ
ಸರ್ವಕರಣಗಳ ಶುದ್ಧಗೊಳಿಸಿ, ಶಿಕ್ಷೋಪದೇಶವಮಾಡಿ,
ತನ್ನ ಚಿತ್‌ಶಕ್ತಿಯ ಕರಸಂಜ್ಞೆ ನುಡಿನೋಟದಿಂದೆ
ತೋರಿ ಹೇಳಿ ಕಾಣಿಸಿಕೊಡಲು,
ಆ ಚಿತ್‌ಶಕ್ತಿ ಹತಿಗೊಂಡು ನಿತ್ಯತ್ವದ ನುಡಿ ಮನದ ಮೈಲಿಗೆಯ ತೊಳೆದು
ತನ್ನ ಮೇಲುಮುಸುಕಿದ ಮಹಾಜ್ಞಾನದ ಬೆಳಗಿನಲ್ಲಿ
ಸರ್ವ ಅವಯವಂಗಳ ಕಸರು ಕಳೆದು,
ಆತ್ಮಜ್ಞಾನದೊಳಗೆ ಅಖಂಡಜ್ಞಾನದಲ್ಲಿರಿಸಿ, ಬ್ರಹ್ಮಜ್ಞಾನವನಾಚ್ಛಾದಿಸಿ,
ನಿಜಜ್ಞಾನದಲ್ಲಿ ಲೋಲ್ಯಾಡಿ, ಅರುವಿನ ಹರುಷದಲ್ಲಿ
ಹಿಂದಿಂದು ಹೇಯವಾಗೆ
ಮುಂದಿಂದು ಹಿತವಚನ ಮುಂದೆ ಅಲ್ಲಲ್ಲಾ,
ಸರ್ವವು ಸುಳ್ಳು ಸುಳ್ಳೆಂಬ ಮಹದರುವಿನ ಅನುಭವದ
ಶಿವೋಹಂ ಶಿವೋಹಂ ಶಿವೋಹಂ, ಸೋಹಂ, ಸೋಹಂ, ಸೋಹಂ,
ನಮೋ ನಮೋ, ಓಂ ಓಂ ಓಂ ಓಂ ಓಂ ಓಂ ಓಂ ಓಂ ಓಂ ಓಂ
ಏಂ ಏಂ ಏಂ ಏಂ ಏಂ ಎಂಬ ಮಹಾನಾದದೊಳಗೆ
ಆ ಕಾಲನ ಬಾಧೆ ಹೋಗಿ, ಭವದುಃಖ ಹಿಂಗಿ,
ಚಿತ್ತಚಿನ್ಮಯ ಸವಿಗೊಂಡು ನಿತ್ಯ ತೃಪ್ತನಾಗಿ,
ನಿಜಲೀಲಾನುಭವದ ಶಬ್ದಕ್ಕೆ ಮುಗ್ಧನಾಗಿ,
ಆತ್ಮಜ್ಞಾನದ ನಲಿಗಿನೊಳಗೆ ಲೋಲಗೊಂಡು,
ಎಚ್ಚರಡಗಿ ಅಚ್ಚಸುಖದಲ್ಲಿ ಸಮರಸವಾಗಿರಲು,
ಸಾವು ಬಂದು ಸಾವು ಸತ್ತು ಸಾವು ಸಾವಾಗಲು
ಆ ಶರಣನ ಅಂಗ, ಮನ, ಭಾವ, ಆತ್ಮಸಂಗವೊಂದಾಗಿರೆ
ಶ್ವಾಸ ಸುಳುಹುಗಳೆಲ್ಲಾ ನಿಂದು, ಚಿತ್ತ ಸತ್ತು ಸ್ವಸ್ಥವಾಗಲು,
ನಿಜಶರಣನ ಅರುವು ಲಿಂಗದಲ್ಲಿ ಪರವಶರಾಗಿಹರೆಂಬುದು ಬಲ್ಲರಲ್ಲದೆ
ಅರುವು ಮರೆಗೊಂಡಿರ್ಪ ನಿರ್ಬೈಲ ಆರೂ ಅರಿಯರೋ.
ಆ ಶರಣ ತನ್ನರುವು ತಾನರಿಯ,
ಸತ್ತ ಸುದ್ದಿ ಸತ್ತವ ಅರಿಯ, ಬದುಕಿದವ ಬಲ್ಲ.
ಇದೇ ನಿಜಮುಕ್ತಿ; ಇದನರಿಯದೆ, ತತ್ವವನೋದಿ
ಗಾಳಿಗೊದರುವ ಒಡಕುಮಡಕಿಯ ಸ್ವರವ
ಕಡಿಮಿಯಾದ ನಾದವನು ಆಲಿಸಿ,
ನಾಹಂಬ್ರಹ್ಮವ ನುಡಿದು, ಕೋಹಂಬ್ರಹ್ಮವ ಬೆರೆತು,
ಮುಂದೆ ಸೋಹಂ ಬ್ರಹ್ಮವ ಹುಡುಕದೆ, ದಾಸೋಹಂಬ್ರಹ್ಮವ ಕೂಡದೆ,
ನಮಗೆ ಸಾವು ಇಲ್ಲಾ, ನಮ್ಮ ದೇಹ ಬೈಲು ಮಾಡುವೆವೆಂದು
ಅದು ತಪ್ಪಲಿಕ್ಕೆ ಪಂಚತತ್ವದೇಹವು,

ಪಂಚತತ್ವಕ್ಕೆ ಕೂಡಿಸುವೆವು ಎಂಬುವರು.
ಅದು ಹಾಂಗಿರಲು, ಆ ದೇಹ ಬಯಲುವಾದರೇನು ?
ಆ ಬಯಲಿಗೆ ಸಾವು ಇಲ್ಲವು.
ತಾವು ಮಾಡಿದರೆ ಆಗುವುದೆ ? ತಾನೇ ಆಗಲರಿಯದು.
ಎಷ್ಟು ನಿಜ ತಿಳಿದರೇನೋ ? ಅಷ್ಟು ತಾವಾಗದೇ,
ಭ್ರಷ್ಟರಾಗಿ ಹೋದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೭ ||

೯೯೦

ಆ ಪರಶಿವನ ನಿರ್ಬಯಲವೇ ಮಹಾಬಯಲು,
ಚಿದ್ಬಯಲು, ಬಯಲು ಮೂರಾದರೂ ಒಂದೇ.
ಚಿನ್ನಾದ ಚಿದ್ಬಿಂದು ಚಿತ್ಕಳೆ, ನಾದ, ಬಿಂದು, ಕಳೆ ಆರಾದರೂ ಒಂದೇ.
ಆರು ಮೂರು ಒಂಬತ್ತಾದರೂ ಒಂದೇ.
ಒಂದು ಒಂಬತ್ತಾಗಿ, ಆ ನಿರ್ಬಯಲು ತಾನೆ ಹಲವಾಗಿತ್ತು
ಈ ಹಲವಾದರೂ ನಿರ್ಬೈಲೊಂದೇ, ಒಂದೇ ಎಂದರೆ ಒಂದೂ ಇಲ್ಲಾ.
ನಿರ್ಬೈಲಿಗೆ ನಾಮ ಉಂಟೇ ? ರೂಪ ಉಂಟೇ ? ಕ್ರೀಯ ಉಂಟೇ ?
ನಿರ್ಬೈಲೇ ನಿರ್ಬೈಲೆಂಬುದು ಇದು ಎಲ್ಲಿ ಇದೇ ನಿರ್ಬೈಲು.
ಮತ್ತೆ ತಾ ನಿರ್ಬೈಲ ರೂಪಾದರೂ, ಆ ರೂಪ ತಾ ನಿರ್ಬೈಲಲ್ಲವೇ ?
ತಾ ಕೂಡಲಿಕ್ಕೆ ಠಾವು ಬ್ಯಾರುಂಟೇ ?
ಗಂಧ ರುಚಿ ರೂಪ ಸ್ಪರ್ಶ ಶಬ್ದ ತೃಪ್ತಿ ಇವು ತನ್ನ ತಾನಲ್ಲವೇ ?
ಇದ್ದದ್ದು ತಾನೇ ಇಲ್ಲದ್ದು ತಾನೇ, ಹ್ಯಾಂಗಾದರೂ ತಾನೇ ನಿರ್ಬೈಲು.
ಇದನರಿಯದೇ ಪೂರ್ವಪುಣ್ಯದಿಂದೆ ಮಾನವ ಜನ್ಮವ ತಾಳಿ,
ಅಜ್ಞಾನವಳಿದು ಸುಜ್ಞಾನಿಯಾಗಿ, ಸುಜ್ಞಾನದಿಂದ ಸಾಧುರ ಸಂಗವ ಮಾಡಿ,
ಗುರುಕರುಣವ ಪಡೆದು ಲಿಂಗವ ಪೂಜಿಸಿ, ಜಂಗಮಾರಾಧನೆಯ ಮಾಡಿ,
ಪಾದೋದಕ ಸಲ್ಲಿಸಿ, ಪ್ರಸಾದವನುಂಡು, ವಿಭೂತಿಯ ಧರಿಸಿ,
ರುದ್ರಾಕ್ಷಿಯ ಶೃಂಗರಿಸಿ, ಮಂತ್ರವನೋದಿ, ಯಂತ್ರವ ಕಟ್ಟಿ,
ತಂತ್ರವ ತಿಳಿದು, ಸ್ವತಂತ್ರಸಿದ್ಧಲಿಂಗನಾದ ಮೇಲೆ
ತನ್ನೊಳಗೆ ತಾನೇ ವಿಚಾರಿಸಿ, ಮತ ಒಂದಾದ ಮತಿಜ್ಞಾನ,
ಸ್ತುತಿ ನಿಂದ್ಯ ಒಂದಾದ ತತ್ವಜ್ಞಾನ, ಸರ್ವವೂ ಒಂದಾದ ಸಮ್ಯಜ್ಞಾನ,
ಅಂಗ ಒಂದಾದ ತತ್ವಜ್ಞಾನ, ಆ ಪ್ರಾಣ ಒಂದಾದ ಆತ್ಮಜ್ಞಾನ,
ಕತ್ತಲೆ ಬೆಳಗು ಒಂದಾದ ಮಹಾಜ್ಞಾನ, ನಿಸ್ಸೀಮವಾದ ಅಖಂಡಜ್ಞಾನ,
ಶಬ್ದಮುಗ್ಧವಾದುದ್ದೇ ಸ್ವಯಂಭುಬ್ರಹ್ಮಜ್ಞಾನ,
ಅರವಾದದ್ದು ಅರವು, ಮರವಾದದ್ದು ಮರವು.
ಈ ಮರವಾದದ್ದು ಮರವಾಗದೆ ಮರವು ಮರಳಿ ಅರವಾಗಿ,

ಎಚ್ಚರಗೊಂಡು ಇಚ್ಛೆ ಉಳಿದರೆ ಅದೇ ಭವಮರವು,
ಮರವಾಗಿ ಮರವು ಮರವಾದರೆ, ಸಾವಿಗೆ ಸಾವಾಗಿ ಸಾವು ಸತ್ತಿತ್ತು,
ಮರವಿನ ಮರವೇ ಸಾವಿನ ಸಾವು; ಸಾವೆಂಬುದೇ ಮಾಯೆ.
ಮಾಯೆಯೆಂಬುದೇ ಮರಗಿ, ಮರಗಿಯೆಂಬುದೇ ದುರಗಿ,
ದುರಗಿಯೆಂಬುದೇ ಶಕ್ತಿ, ಶಕ್ತಿಯೆಂಬುದೇ ಅಂಗ, ಅಂಗವೆಂಬುದೇ ಲಿಂಗ,
ಲಿಂಗವೆಂಬುದೇ ಮನ, ಮನವೆಂಬುದೇ ಘನ,
ಘನವೆಂಬುದೇ ಗುರು, ಗುರುವೆಂಬುದೇ ಪರ,
ಪರವೆಂಬುದೇ ತಾನು, ತಾನುಯೆಂಬುದೇ ಬೈಲು,
ಬೈಲೆಂಬುದೇ ಮುಕ್ತಿ ಮುಕ್ತಿಯೆಂಬುದೇ ಏನೋ
ಏನೋ ಎಂಬುದೇ ಮಾತು, ಮಾತುಯೆಂಬುದೇ ವಚನ,
ವಚನಯೆಂಬುದೇ ಅಕ್ಷರ, ಅಕ್ಷರಯೆಂಬುದೇ ಮಂತ್ರ,
ಮಂತ್ರಯೆಂಬುದೇ ಪ್ರಣವ, ಪ್ರಣವಯೆಂಬುದೇ ನಾದ,
ನಾದಯೆಂಬುದೇನಾದುದೇ ಹೇಳಲಿಕ್ಕೆ ನಿರ್ಬೈಲು.
ನಿರ್ಬೈಲೇ ಸುಳ್ಳು, ಈ ಸುಳ್ಳು ಖರೇ ಮಾಡದೆ
ಹರಿ ಅಜ ಇಂದ್ರಾದಿ ಮನು ಮುನಿ ನರ ನಾಗ ಸುರ ಸಿದ್ಧ ಸಾಧ್ಯರು,
ರುದ್ರ ಈಶ್ವರ ಸದಾಶಿವ ಮಹಾದೇವರು
ಮತ್ತೆ ಮಾದೇವರು, ಅಷ್ಟಾಂಗಯೋಗಿಗಳು,
ಅಷ್ಟಾವರಣ ನಿಷ್ಠೆಯುಳ್ಳವರು, ಮಹಾನುಭಾವಿಗಳು,
ನಿಜಜ್ಞಾನಿಗಳು, ಮಹಾ ಅರವಿಗಳು, ಸುಳ್ಳು ಸುಳ್ಳು ಮಾಡಿ,
ಸುಳ್ಳು ಬ್ಯಾರೆ, ಖರೆಬ್ಯಾರೆ, ಬ್ರಹ್ಮವು ಬ್ಯಾರೆ, ಹಮ್ಮು ಬ್ಯಾರೆ,
ಬ್ರಹ್ಮಾಂಡ ಬ್ಯಾರೆ, ಪಿಂಡಾಂಡ ಬ್ಯಾರೆ, ಕಾಯ ಬ್ಯಾರೆ, ಕರಣ ಬ್ಯಾರೆ,
ಆತ್ಮ ಬ್ಯಾರೆ, ಪರಮಾತ್ಮ ಬ್ಯಾರೆ, ಭವ ಬ್ಯಾರೆ, ಶಿವ ಬ್ಯಾರೆ,
ಬೆಳಗು ಬ್ಯಾರೆ, ಕತ್ತಲು ಬ್ಯಾರೆ, ಪುಣ್ಯ ಬ್ಯಾರೆ, ಪಾಪ ಬ್ಯಾರೆ,
ಸತ್ಕರ್ಮ ಬ್ಯಾರೆ, ದುಷ್ಕರ್ಮ ಬ್ಯಾರೆ, ಅಜ್ಞಾನ ಬ್ಯಾರೆ, ಸುಜ್ಞಾನ ಬ್ಯಾರೆ,
ಹೆಣ್ಣು ಬ್ಯಾರೆ, ಗಂಡು ಬ್ಯಾರೆ, ಸ್ವರ್ಗ ಬ್ಯಾರೆ, ನರಕ ಬ್ಯಾರೆ,
ಸಾವು ಬ್ಯಾರೆ, ಜೀವ ಬ್ಯಾರೆ,
ಗುರು ಬ್ಯಾರೆ, ಶಿಷ್ಯ ಬ್ಯಾರೆ, ಮಹಾಂತ ಬ್ಯಾರೆ, ಮಡಿವಾಳ ಬ್ಯಾರೆ,
ಮೃತ್ಯು ಬ್ಯಾರೆ, ಮಾತು ಬ್ಯಾರೆ, ಭಕ್ತಿ ಬ್ಯಾರೆ, ಮುಕ್ತಿ ಬ್ಯಾರೆ,
ನಾವು ಬ್ಯಾರೆ, ನೀವು ಬ್ಯಾರೆ, ತಾ ಬ್ಯಾರೆ ಬ್ಯಾರೆಯೆಂದು
ತಾ ಬ್ಯಾರ್ಯಾಗಿ ಸುಳ್ಳು ಖರೇ ಮಾಡದ, ತುಪ್ಪ ಹಾಲುವ ಮಾಡದೇ
ಹಾಲು ತುಪ್ಪವ ಮಾಡಿದಂತೆ ತಾವು ಸುಳ್ಳಾಗದೆ
ಸುಳ್ಳು ಸುಳ್ಳೆಂದು ಸುಳ್ಳು ಜೊಳ್ಳಾದರೋ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೬೮ ||

ನಿರ್ಬಯಲಸ್ಥಲ :

೯೯೧

ತಾರಕಾಕೃತಿಯ ನಕಾರಪ್ರಣವದ ಆಧಾರಚಕ್ರದೊಳು
ಕೆಂಪುಬಣ್ಣವಿರ್ಪುದು.
ದಂಡಕಾಕೃತಿಯ ಮಕಾರಪ್ರಣವದ ಸ್ವಾದಿಷ್ಠಾನಚಕ್ರದೊಳು
ನೀಲವರ್ಣವಿರ್ಪುದು.
ಕುಂಡಲಾಕೃತಿಯ ಶಿಕಾರಪ್ರಣವದ ಮಣಿಪೂರಚಕ್ರದೊಳು
ಕುಂಕುಮವರ್ಣವಿರ್ಪುದು.
ಅರ್ಧಚಂದ್ರಾಕೃತಿಯ ಯಕಾರಪ್ರಣವದ ಅನಾಹತಚಕ್ರದೊಳು
ಪೀತವರ್ಣವಿರ್ಪುದು.
ದರ್ಪಣಾಕೃತಿಯ ಯಕಾರಪ್ರಣವದ  ವಿಶುದ್ಧಿಚಕ್ರದೊಳು
ಶ್ವೇತವರ್ಣವಿರ್ಪುದು.
ಜ್ಯೋತಿರಾಕೃತಿಯ ಓಂಕಾರಪ್ರಣವದ ಆಜ್ಞಾಚಕ್ರದೊಳು
ಮಾಣಿಕ್ಯವರ್ಣವಿರ್ಪುದು.
ಮತ್ತಂ, ಪೃಥ್ವಿತತ್ವಯುಕ್ತನಾದ ಸದ್ಭಕ್ತನೆಂಬ ಅಂಗನ
ಸುಚಿತ್ತಹಸ್ತದೊಳು ಆಚಾರಲಿಂಗವಿರ್ಪುದು.
ಅಪ್ಪು ತತ್ವಯುಕ್ತವಾದ ಮಹೇಶನೆಂಬ ಅಂಗನ
ಸುಬುದ್ಧಿಹಸ್ತದೊಳು ಗುರುಲಿಂಗವಿರ್ಪುದು.
ತೇಜತತ್ವಯುಕ್ತನಾದ ಪ್ರಸಾದಿಯೆಂಬ ಅಂಗನ
ನಿರಹಂಕಾರಹಸ್ತದೊಳು ಶಿವಲಿಂಗವಿರ್ಪುದು.
ವಾಯುತತ್ವಯುಕ್ತನಾದ ಪ್ರಾಣಲಿಂಗಿಯೆಂಬ ಅಂಗನ
ಸೂರ್ಯಹಸ್ತದೊಳು ಜಂಗಮಲಿಂಗವಿರ್ಪುದು.
ಆಕಾಶತತ್ವಯುಕ್ತನಾದ ಶರಣನೆಂಬ ಅಂಗನ
ಸುಜ್ಞಾನಹಸ್ತದೊಳು ಪ್ರಸಾದಲಿಂಗವಿರ್ಪುದು.
ಆತ್ಮತತ್ವಯುಕ್ತನಾದ ಐಕ್ಯನೆಂಬ ಅಂಗನ
ಸದ್ಭಾವಹಸ್ತದೊಳು ಮಹಾಲಿಂಗವಿರ್ಪುದು.
ಮತ್ತಂ, ಘ್ರಾಣವೆಂಬಮುಖದ ಕ್ರಿಯಾಶಕ್ತಿಯ
ಶ್ರದ್ಧಾಭಕ್ತಿಯೊಳು ಸುಗಂಧಪದಾರ್ಥವಿರ್ಪುದು.
ಜಿಹ್ವೆಯೆಂಬಮುಖದ ಜ್ಞಾನಶಕ್ತಿಯ
ನೈಷ್ಠಿಕಾಭಕ್ತಿಯೊಳು ಸಾರಸಪದಾರ್ಥವಿರ್ಪುದು.
ನೇತ್ರವೆಂಬಮುಖದ ಇಚ್ಛಾಶಕ್ತಿಯ
ಸಾವಧಾನಭಕ್ತಿಯೊಳು ಸಾರೂಪಪದಾರ್ಥವಿರ್ಪುದು.
ತ್ವಗೇಂದ್ರಿಯೆಂಬಮುಖದ ಆದಿಶಕ್ತಿಯ

ಅನುಭಾವಭಕ್ತಿಯೊಳು ಸುಸ್ವರೂಪಪದಾರ್ಥವಿರ್ಪುದು.
ಶ್ರೋತ್ರೇಂದ್ರಿಯಮುಖದ ಪರಶಕ್ತಿಯ
ಆನಂದವೆಂಬಭಕ್ತಿಯೊಳು ಸುಶಬ್ದಪದಾರ್ಥವಿರ್ಪುದು.
ಹೃದಯೇಂದ್ರಿಯಮುಖದ ಚಿತ್‌ಶಕ್ತಿಯ
ಸಮರಸಭಕ್ತಿಯೊಳು ಸುತೃಪ್ತಿಯಿರ್ಪುದು.
ಇಂತೀ ಎಪ್ಪತ್ತೆರಡುಮುಖದಿ ನಿನ್ನ ಪೂಜಿಸಿ,
ನಿನ್ನ ಹಾಡ್ಯಾಡಿ, ನಿನ್ನ ಧ್ಯಾನಿಸಿ, ನಿನ್ನ ಚಿಂತಿಸಿ,
ನಿನ್ನೊಳು ಕೂಡುತ, ನೀನಾರೆಂದು ಹವಣಿಸಿ
ಅಂತರಂಗದಿ ಪೊಕ್ಕು ನೋಡೆ ನೀನಲ್ಲದೆ
ನಾನೇ ಆದ ಪರಿ ಇದೇನು ಚೋದ್ಯವೊ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ ? || ೬೯ ||

ಗಾಳಿಪೂಜಿ :

೯೯೨

ಅತತತತತ ಮಹೀಂದ್ರಜಾಲಿ
ಜ್ಯಾಜ್ಯಾಜ್ಯಾಜ್ಯಾಜ್ಯಾ ಮಲನಾಡಚವಡಿ,
ಛೀ ಕುರುಬರ ಪಿಡ್ಡಿ, ಛೀ ಹಲಗಿಸಕಿ ನಾಗಿ,
ಗುಲು ಗುಲು ಗುಲು ಗುಲುಪುತ್ತ ಬಾ ಮತ್ತ ಬಾ
ಅಹಾ ಉಪ್ ಮಂತ್ರ ಗಾಳಿ ಚೀಲ್ದಾಗಿಂದ ಬಾ
ಕಿವಿಯೊಳಗೆ ಹೋಗು ಬಾಯೊಳಗಿಂದ ಬಾ
ಮೂಗಿನೊಳಗ ಹೋಗು ಕಣ್ಣೊಳಗಿಂದ ಬಾ
ತಲೆಯೊಳಗೆ ಹೋಗು ಬೆನ್ನೊಳಗಿಂದ ಬಾ
ಮೈಯೊಳಗೆ ಹೋಗು ಅಂಗಾಲೊಳಗಿಂದ ಬಾ
ಅಂಗೈಯೊಳಗೆ ಹೋಗು ಗಾಳಿಗೆ ಗಾಳಿ ಧೂಳಿಗೆ ಧೂಳಿ
ಬೈಲಿಗೆ ಬೈಲು ನಿರ್ಬೈಲು ಮಹಾಂತಯೋಗಿ
ಗಾಳಿಪೂಜಿ ಸುಡುಗಾಡಲಿಂದ ಬಂದೆವಯ್ಯಾ
ಶಂಕರಪ್ರಿಯ ಚನ್ನಕದಂಬಲಿಂಗ ಮಹಾಂತಯೋಗಿ. || ೭೦ ||

ಪರಿಶಿಷ್ಟ :

೯೯೩

ಸ್ಥೂಲತನುವಿನೊಳು ಪರವೆಂಬ ಸಂಜ್ಞದಿ
ಹೆಣ್ಣುದುಂಬಿಯ ನಾದಪುಟ್ಟಿ ಅದರಿಂದ ಋಗ್ವೇದವಾಯಿತು.
ಸೂಕ್ಷ್ಮತನುವಿನೊಳು ಗೂಢವೆಂಬ ಸಂಜ್ಞದಿ
ವೀಣಾನಾದ ಪುಟ್ಟಿ ಯಜುರ್ವೇದವಾಯಿತು.
ಕಾರಣತನುವಿನೊಳು ಶರೀರಸ್ಥಲವೆಂಬ ಸಂಜ್ಞದಿ

ಘಂಟಾನಾದ ಪುಟ್ಟಿ ಸಾಮವೇದವಾಯಿತು.
ನಿರ್ಮಲತನುವಿನೊಳು ಲಿಂಗಕ್ಷೇತ್ರವೆಂಬ ಸಂಜ್ಞದಿ
ಭೇರೀನಾದ ಪುಟ್ಟಿ ಅಥರ್ವಣವೇದವಾಯಿತು.
ಆನಂದತನುವಿನೊಳು ಅನಾದಿಯೆಂಬ ಸಂಜ್ಞದಿ
ಮೇಘನಾದ ಪುಟ್ಟಿ ಅಜಪವೇದವೆನಿಸಿತು.
ಶುದ್ಧತನುವಿನೊಳು ಮಹಾಸಂಜ್ಞದಿ
ಪ್ರಣವನಾದ ಪುಟ್ಟಿ ಗಾಯತ್ರಿವೇದವೆನಿಸಿತು.
ಆರು ತನುವಿಲೆ ಆರು ಸಂಜ್ಞ, ಆರು ಸಂಜ್ಞದಿ ಆರು ನಾದ,
ಆ ಆರು ನಾದಕ್ಕೆ ಆರು ವೇದವಾಗಿ ಮೆರೆದ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೦ ॥

೯೯೪

ಭೂಮಿ ಜಲ ಅಗ್ನಿ ಗಾಳಿ ಆಕಾಶ ಇವು ಮೊದಲಾದ
ಪಂಚಕದಿಂದುದಿಸಿದುದೆ ಬ್ರಹ್ಮಾಂಡವೆನಿಸಿತ್ತು.
ಅದರ ಸೂತ್ರವಿಡಿದು ಬಂದದ್ದೇ ಪಿಂಡಾಂಡವೆನಿಸಿತ್ತು.
ರವಿ ಚಂದ್ರ ಆತ್ಮದಿ ಅಂಗವೆನಿಸಿತ್ತು.
ಪಿಂಡಾಂಡದಿ ತೋರುವ ಕಾಯವೇ ಗುರುವಾಗಿ, ಪ್ರಾಣವೆ ಲಿಂಗವಾಗಿ,
ಜ್ಞಾನವೆ ಜಂಗಮವಾಗಿ, ಮುಂದೆ ಕಾಯದೊಳು ಕಾಂಬ
ಅರುವಿನ ಬೆಳಗೆ ವಿಭೂತಿ, ಅರುವಿನ ಕರಣವೇ ಪಾದೋದಕ,
ಅರುವಿನ ಆನಂದವೇ ಪ್ರಸಾದ, ಅರುವಿನ ಕೃಪೆಯೇ ರುದ್ರಾಕ್ಷಿ,
ಅರುವು ತಾನೇ ಆಗು ಮೆರೆದುದೇ ಮಂತ್ರ
ಇಂತು ಪಿಂಡಾಂಡಪಂಚಕ ಅಷ್ಟತನು ಒಳಗೊಂಡು
ಕಾಂಬುದೊಂದೀ ಪರಿಯ
ಅಷ್ಟಾವರಣವಾದ ಶ್ರೇಷ್ಠಗುರುವೆ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೧ ॥

೯೯೫

ಒಂದೇ ಆಗಿರ್ದ ಪರಶಿವನು ಮೂರಾಗಿ
ಮೂರರಿಂದೆ ಪೂಜೆಗೊಂಡು ಎರಡಾಗಿ
ಮೂರು ಎರಡು ಭೇದವಿಲ್ಲದೆ ಒಂದಾಗಿ ತೋರಿದಿರಿ.
ಅದೆಂತೆಂದೊಡೆ : ಅಖಂಡ ಪರಶಿವನ ಭೇದಿಸಿ ಕಾಂಬಲು
ತೋರಿದ ನಾದವೇ ಗುರುವಾಗಿ, ಬಿಂದುವೆ ಲಿಂಗವಾಗಿ,
ಕಳೆಯೇ ಜಂಗಮವಾಗಿ, ಸುಜಲವೆ ಪಾದೋದಕವಾಗಿ,
ತಿಳಿಯೇ ಪ್ರಸಾದವಾಗಿ,
ಕಾಣಿಸುವ ಸುಪ್ರಕಾಶದ ತೇಜಪುಂಜವೆ ಶ್ರೀವಿಭೂತಿಯಾಗಿ,

ಸೂರ್ಯ ಚಂದ್ರಾದಿಗಳೆ ರುದ್ರಾಕ್ಷಿಮಣಿಯಾಗಿ,
ಪಿಂಡಬ್ರಹ್ಮಾಂಡಕೊಂದೆ ಎನಿಸಿದ ಓಂಕಾರವೆ
ಸರ್ವಮಂತ್ರಗಳ ಶ್ರೇಷ್ಠ ಆದಿಮಂತ್ರವೆನಿಸಿ,
ಬ್ರಹ್ಮಾಂಡ ಅಷ್ಟಾವರಣದ ಇನ್ನೊಂದು ಪರಿಯಾಗಿ ತೋರಿ,
ಹಲವು ಪರಿಯಲಿ ಲೀಲೆಯಾಗಿ ಮೆರೆದ
ಹಲವು ಹಲವಲ್ಲದೆ ಹಲವು ಒಂದಾಗಿ, ಒಂದೆ ತಾನಾದ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೩ ॥

೯೯೬

ಸದ್‌ಭಕ್ತನ ಸತ್ಕ್ರಿಯವೆ ಗುರುವೆನಿಸಿ,
ಮಂಗಳ ಅಂಗಪೀಠದ ಮುಹೂರ್ತಗೊಂಡ ಹರರೂಪವೇ ಲಿಂಗವೆನಿಸಿ,
ಲಿಂಗನ ಪೂಜಿಸುವ ಸದಾಚಾರವೇ ಜಂಗಮವೆನಿಸಿ,
ಪಾದ್ಯದಲ್ಲಿ ಪಾದೋದಕವಾಗಿ, ಜಿಹ್ವೆಯಲ್ಲಿ ಪ್ರಸಾದವಾಗಿ,
ಲಲಾಟದಲ್ಲಿ ವಿಭೂತಿಧಾರಣವಾಗಿ,
ಉರ, ಸಿರ, ಕಂಠದಲ್ಲಿ ಶಿವಾಕ್ಷಮಣಿಯೆನಿಸಿ,
ಶ್ರೋತ್ರದಲ್ಲಿ ಮಂತ್ರವಾಗಿ
ಇಂತು ಇವು ಬಾಹ್ಯ ಅಷ್ಟಾವರಣದ ಕ್ರಮವೆನಿಸಿತ್ತು,
ಇನ್ನು ಅಂತರಂಗದಿ ಆತ್ಮನ ಅರುವೆ ಗುರುವೆನಿಸಿತ್ತು,
ಪ್ರಾಣವೆ ಲಿಂಗವಾಗಿ ತೋರಿತ್ತು,
ಪರಿಪೂರ್ಣ ಪರವಸ್ತುವಿನ ಜ್ಞಾನವೆ ಜಂಗಮವೆನಿಸಿತ್ತು,
ಜಿಹ್ವಾಗ್ರವೇ ಪಾದೋದಕವಾಗಿ, ನಾಶಿಕವೆ ಪ್ರಸಾದವಾಗಿ,
ತ್ವಕ್ಕಿನಲ್ಲಿ ಶ್ರೀವಿಭೂತಿ, ನೇತ್ರದಲ್ಲಿ ಪರಾಕ್ಷಮಣಿ,
ಕರ್ಣದ್ವಾರದೊಳು ಮೊಳಗುವ ಮಂತ್ರದಿಂದೆ
ಕೂಡಿಕೊಂಡ ಈ ಪರಿಯೇ ಅಂತರಾತ್ಮಷ್ಟಾವರಣವೆನಿಸಿತು.
ನೀನೊಂದು ಇದ್ದು ಇಂತುಪರಿಯಲ್ಲಿ
ಪೂಜೆ ಪೂಜಕ ಪೂಜ್ಯನೆನಿಸಿ ಮೆರೆದಿಯಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೪ ॥

೯೯೭

ಸತ್ಯವೇ ಗುರುವಾಗಿ ತೋರಿತು, ಚಿತ್ತವೆ ಲಿಂಗವಾಗಿ ತೋರಿತು,
ಆನಂದವೆ ಜಂಗಮವಾಗಿ ತೋರಿತು,
ನಿತ್ಯವೆ ಪಾದೋದಕವಾಗಿ ತೋರಿತು,
ಪರಿಪೂರ್ಣವೆ ಪ್ರಸಾದವಾಗಿ ತೋರಿತು,
ಅಖಂಡತ್ವವೇ ಶಿವಾಕ್ಷಮಣಿ ಎನಿಸಿ ತೋರಿತು.
ಆ ಪರಬ್ರಹ್ಮವೇ ತಾನಾದ ವಿನೋದವು ಮಂತ್ರವೆನಿಸಿತ್ತು,

ಮತ್ತೆ ತನ್ನ ನಾಮವೆ ಪಂಚಾಕ್ಷರಿ, ತನ್ನ ಸ್ಥಲವೇ ಷಡಕ್ಷರಿ,
ತನ್ನ ರೂಪ ದೇಹ ನೋಟ ನೆನಹು ಸರ್ವವೂ ಪರಶಿವರೂಪ.
ಆನಿ ಬೆಳವಲಹಣ್ಣು ನುಂಗಿದಾ ಪರಿಯಂತೆ,
ಒಡೆದರೆ ಏನೂ ಇಲ್ಲ ಬೈಲೇ ಬೈಲು,
ಅದರಂತೆ ಕೇಳೋದು ಬೈಲು, ಹೇಳೋದು, ಬೈಲು,
ಹೌದು ಎಂಬುವದದು ಬೈಲು, ಅಲ್ಲವೆಂಬುದದು ಬೈಲು;
ಬೈಲಿಗೆ ಬೈಲು ನಿರ್ಬೈಲು.
ಕಾಡಕಿಚ್ಚಿನ ಕೈಯ ಮೆದಿಯ ಕೊಯಿಸಿದರೆ
ಹಿಂದೆ ಮೆದಿ ಇಲ್ಲಾ, ಮುಂದೆ ನಿಲುವು ಇಲ್ಲಾ,
ವಾಯದ ರಾಸಿಗೆ ಮರಣದ ಕೊಳಗ, ಅಳ್ಯೋದು ನೆರಳುವದು ಬೈಲು.
ಅಳತೆಗೆ ಹೋಗದು, ಹೊಯ್ತಕ್ಕೆ ಸಿಗದು.
ರವಿಯಂತೆ ಬದ್ಧವಿಲ್ಲಾ, ಪರಿಪೂರ್ಣ ಪರಂಜ್ಯೋತಿ ಬೈಲು.
ಇಂತು ಪರಿಯಲ್ಲಿ ನೂರೆಂಟು ಪರಿಪರಿಯ ಅಷ್ಟಾವರಣದ
ವಚನವಾಗಿ ಸುಳ್ಳೆ ಸುಳ್ಳೆನಿಸಿ ಸಾರಿದಿ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೭೫ ||

೯೯೮

ಶ್ರೀಗುರುಬಸವದೇವರು ತರುಣ ಬಾರೆಂದು
ಅಂದದಿ ಕರೆದು ಕರುಣಾಜಲದಿ ಮೈದೊಳೆದು,
ಶಿರದಿ ಮೇಲೆ ಪ್ರಸನ್ನ ಪರುಷಹಸ್ತವನಿಟ್ಟು,
ಶಿಕ್ಷಿಸಿ ದೀಕ್ಷೆಯನೆಸಗಿ ಕರ್ಣದೊಳು
ಮಹಾಮಂತ್ರವನೂದಿ ಸದಾಚಾರ ಪೇಳ್ದನೆಂತೆನೆ :
ಗಂಧಪ್ರಸಾದದ ನಿವೃತ್ತಿಕಲೆಯ
ಕರ್ತೃಸಾದಾಖ್ಯದೊಳು ಸತ್ ಲಕ್ಷಣವೆನಿಸಿತ್ತು,
ರಸಪ್ರಸಾದದ ಪ್ರತಿಷ್ಠಾಕಲೆಯ
ಕರ್ಮಸಾದಾಖ್ಯದೊಳು ಚಿತ್ ಲಕ್ಷಣವೆನಿಸಿತ್ತು,
ರೂಪಪ್ರಸಾದದ ವಿದ್ಯಾಕಲೆಯ
ಮೂರ್ತಿಸಾದಾಖ್ಯದೊಳು ಆನಂದ ಲಕ್ಷಣವೆನಿಸಿತ್ತು,
ಸ್ಪರೂಪಪ್ರಸಾದದ ಶಾಂತಿಕಲೆಯ
ಅಮೂರ್ತಿಸಾದಾಖ್ಯದೊಳು ನಿತ್ಯ ಲಕ್ಷಣವೆನಿಸಿತ್ತು,
ಶಬ್ದಪ್ರಸಾದದ ಶಾಂತ್ಯತೀತಕಲೆಯ
ಶಿವಸಾದಾಖ್ಯದೊಳು ಪರಿಪೂರ್ಣ ಲಕ್ಷಣವೆನಿಸಿತ್ತು,
ತೃಪ್ತಿಪ್ರಸಾದದ ಶಾಂತ್ಯತೀತೋತ್ತರಕಲೆಯ
ಮಹಾಸಾದಾಖ್ಯದೊಳು ಅಖಂಡವೆಂಬ ಲಕ್ಷಣವೆನಿಸಿತ್ತು,

ಇಂತು ಗುರುನಿರೂಪವ ಕೈಕೊಂಡು ನಿನ್ನ ಭೇದಿಸಿ
ನಿನ್ನ ಸಾಧಿಸಿ ನಿನ್ನ ಶೋಧಿಸಿ ನಿನ್ನ ಅರಿದಾ
ಬೆಡಗಿನ ಬೆಳಗದೊಳು ನನ್ನ ಮರೆದೆನಯ್ಯ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೬ ॥

೯೯೯

ಬ್ರಹ್ಮನೆಂಬ ಪೂಜಾರಿಗೆ ಬ್ರಹ್ಮನೇ ಅಧಿದೈವನಾಗಿ
ಪೂರ್ವದಿಕ್ಕಿನೊಳು ಭಕ್ತಸ್ಥಲವೆನಿಸಿತ್ತು.
ವಿಷ್ಣುನೆಂಬ ಪೂಜಾರಿಗೆ ವಿಷ್ಣುವೆ ಅಧಿದೈವನಾಗಿ
ಪಶ್ಚಿಮದಿಕ್ಕಿನೊಳು ಮಹೇಶ್ವರಸ್ಥಲವೆನಿಸಿತ್ತು.
ರುದ್ರನೆಂಬ ಪೂಜಾರಿಗೆ ರುದ್ರನೇ ಅಧಿದೈವನಾಗಿ
ದಕ್ಷಿಣದಿಕ್ಕಿನೊಳು ಪ್ರಸಾದಿಸ್ಥಲವೆನಿಸಿತ್ತು.
ಈಶ್ವರನೆಂಬ ಪೂಜಾರಿಗೆ ಈಶ್ವರನೇ ಅಧಿದೈವನಾಗಿ
ಉತ್ತರದಿಕ್ಕಿನೊಳು ಪ್ರಾಣಲಿಂಗಿಸ್ಥಲವೆನಿಸಿತ್ತು.
ಸದಾಶಿವನೆಂಬ ಪೂಜಾರಿಗೆ ಸದಾಶಿವನೇ ಅಧಿದೈವನಾಗಿ
ಊರ್ಧ್ವದಿಕ್ಕಿನೊಳು ಶರಣಸ್ಥಲವೆನಿಸಿತ್ತು.
ಮಹಾದೇವನೆಂಬ ಪೂಜಾರಿಗೆ ಮಹಾದೇವನೇ ಅಧಿದೈವನಾಗಿ
ಪಾತಾಳದಿಕ್ಕಿನೊಳು ಐಕ್ಯಸ್ಥಲವೆನಿಸಿತ್ತು.
ಇಂತು ತತ್ವವನೆ ಅರಿತು ನನ್ನ ನಾ ಮರೆತು
ನಿನ್ನೊಳು ಬೆರೆತೆನಾಗಿ ನೀ ನಾನೆಂಬ ಉಭಯ
ಭೇದವನಳಿಸಿ ಸಂದಿಲ್ಲದೆ ಒಂದಾಗಿ ತೋರ್ದ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೭೭ ॥

**ಭಾವನಿರ್ಬಯಲಸ್ಥಲ :**

ಶರಣಾರ್ಥಿ :

೧೦೦೦

ಜಯ ಜಯ ನಿರುಪಮ ನಿರವಯ ನಿಷ್ಕಲ
ಜಯ ಜಯ ನಿಶ್ಚಲ ನಿರ್ಮಲ ನಿರ್ಗುಣ
ಜಯ ಜಯ ಪರಮ ನಿರಂಜನ ಸದ್ಗುರು ಮಹಾಂತ ಶರಣಾರ್ಥಿ. । ಪಲ್ಲ ।

ಸುಳ್ಳೆ ನಿರ್ಬೈಲೆನಿಸಿ ಮೆರೆದಿ
ಸುಳ್ಳೆ ಮಹಾಬೈಲಾಗಿ ತೋರಿದಿ
ಸುಳ್ಳೆ ಚಿದ್ಬೈಲವಾಗಿ ಸಾರಿದಿ ಸುಳ್ಳೆ ಪರಬ್ರಹ್ಮಾ
ಸುಳ್ಳೆ ಪರಶಿವ ಚಿತ್ತಭಿತ್ತಿಯು
ಸುಳ್ಳೆ ಇಚ್ಛೆಯ ನೆನವಕೊನರಿಸಿ

ಸುಳ್ಳೆ ಮನಘನವೃಕ್ಷ ಮಾಡಿದಿ ಮಹಾಂತ ಶರಣಾರ್ಥಿ. ।೧।

ಸುಳ್ಳೆ ನೆಲ ಜಲ ಅಗ್ನಿ ವಾಯು
ಸುಳ್ಳೆ ಗಗನಾತ್ಮಾರ್ಕ ಚಂದ್ರಮ
ಸುಳ್ಳೆ ತಾರಕ ಕಠೋರ ಮಹಾಮಹತ್ವಣುವಿಗಣು ಮಾಯೆ
ಸುಳ್ಳೆ ಬೀಜದ ಸಸಿಯ ಫಲರಸ
ಸುಳ್ಳೆ ಶೋಣಿತ ಶುಕ್ಲ ಶರೀರ
ಸುಳ್ಳೆ ಹಮ್ಮು ಮತ್ತಾಶೆ ಮಾಡಿದೆ ಮಹಾಂತ ಶರಣಾರ್ಥಿ. ।೨।

ಸುಳ್ಳೆ ತ್ರಿಜಗ ಸಚರಾಚರಗಳು
ಸುಳ್ಳೆ ತನ್ನನು ತಾನೆ ಎಂಬುದು
ಸುಳ್ಳೆ ಕುಲ ಛಲ ಸುಳ್ಳೆ ಮತಿ ತತಿ ಸುಳ್ಳೆ ವ್ರತಶೀಲಾ
ಸುಳ್ಳೆ ತಾ ಸತ್ಕರ್ಮ ಸದ್ಗುಣ
ಸುಳ್ಳೆ ತಾ ದುಷ್ಕರ್ಮ ದುರ್ಗುಣ
ಸುಳ್ಳೆ ಸರ್ವವ್ಯಾಪಾರ ಮಾಡಿದೆ ಮಹಾಂತ ಶರಣಾರ್ಥಿ. ।೩।

ಸುಳ್ಳೆ ಕಾಮ ಶೀಮ ನೇಮವು
ಸುಳ್ಳೆ ಭೋಗ ತ್ಯಾಗ ಯೋಗವು
ಸುಳ್ಳೆ ಜಪ ತಪ ಧ್ಯಾನ ಮೌನವು ಸುಳ್ಳೆ ಪದಫಲವು
ಸುಳ್ಳೆ ಇಹಪರ ಪಾಪ ಪುಣ್ಯವು
ಸುಳ್ಳೆ ಸ್ವರ್ಗ ನರಕ ಸುಖ ದುಃಖ
ಸುಳ್ಳೆ ನೋವು ಸಾವು ಮಾಡಿದೆ ಮಹಾಂತ ಶರಣಾರ್ಥಿ. ।೪।

ಸುಳ್ಳೆ ಭಾವದ ಭ್ರಮಿಗೆ ಭವಭವ
ಸುಳ್ಳೆ ತಾ ತಿರುತಿರುಗಿ ಬಳಲುತೆ
ಸುಳ್ಳೆ ಉತ್ಪತ್ತಿ ಸ್ಥಿತಿ ಲಯಂಗಳಾಗಿ ಮಣ್ಣಾಯಿತು
ಸುಳ್ಳೆ ತಾ ಮಹಾಮೇರು ಮಹತ್ವವು
ಸುಳ್ಳೆ ಈ ಮಾಯಾ ಗಮನವು
ಸುಳ್ಳೆ ಶರಣರ ಐಕ್ಯ ಮಾಡಿದಿ ಮಹಾಂತ ಶರಣಾರ್ಥಿ ।೫।

ಸುಳ್ಳೆ ಅಷ್ಟಾವರಣದರ್ಚನೆ
ಸುಳ್ಳೆ ತಾ ಅಷ್ಟಾಂಗಯೋಗವು
ಸುಳ್ಳೆ ಬೆಳಗಿನ ಬೆಳಗು ಅದ್ವೈತಾದಿ ನಿಜಮುಕ್ತಿ
ಸುಳ್ಳೆ ಖರೇ ಮಾಡಿ ಸಲೆ ಕಾಡಿದಿ
ಸುಳ್ಳೆ ಸುಳ್ಳೆನಿಸುತ್ತೆ ಹಬ್ಬಿದಿ
ಸುಳ್ಳೆ ಆಟವನಾಡಿ ಮರೆಯುವ ಮಹಾಂತ ಶರಣಾರ್ಥಿ. ।೬।

ಸುಳ್ಳೆ ತಾ ಶಿವ ಸುಳ್ಳೆ ನೀ ಗುರು
ಸುಳ್ಳೆ ನಾ ಶಿಷ್ಯಾಗಿ ಈ ಭವಕರ
ಸುಳ್ಳೆ ಲಿಂಗವ ಕಂಡು ಜಂಗಮತೀರ್ಥಪ್ರಸಾದ
ಸುಳ್ಳೆ ಭಸ್ಮ ಶಿವೇಕ್ಷಮಣಿ ಮಂತ್ರ
ಸುಳ್ಳೆ ಅನುಗೊಳಿಸ್ಯಾತ್ಮ ತತ್ವವ
ಸುಳ್ಳೆ ಧ್ಯಾನವ ಹುಡುಕಿ ಮಾಡಿದಿ ಮಹಾಂತ ಶರಣಾರ್ಥಿ । ೭ ।

ಸುಳ್ಳೆ ಹುಡುಕಿ ನಾ ನನ್ನ ಮರೆದೆ
ಸುಳ್ಳೆ ಹುಡುಕಿ ನಾ ನಿನ್ನ ಅರಿದೆ
ಸುಳ್ಳೆ ಹುಡುಕಿ ಮುಕ್ತಿ ಮೆರೆದೆನು ಸುಳ್ಳೆ ತಾನಾಯಿತು
ಸುಳ್ಳೆ ಬಂದಿತು ಸುಳ್ಳೆ ನಿಂದಿತು
ಸುಳ್ಳೆ ಹೊಂದಿತು ಸುಳ್ಳೆ ಹೋಯಿತು
ಸುಳ್ಳೆ ಖರೆ ಮಾಡಿಸದೆ ಕಾಡಿದಿ ಮಹಾಂತ ಶರಣಾರ್ಥಿ । ೮ ।

ಸುಳ್ಳೆ ಇಪ್ಪತ್ತೈದು ನಿಜಪದ
ಸುಳ್ಳೆ ಹತ್ತೊಂಬತ್ತು ವಚನಗಳು
ಸುಳ್ಳೆ ಈ ಪರಿವರ್ಧಿನೊಂಬತ್ತೆಂದೆನು ಹಾಡು
ಸುಳ್ಳೆ ಹಾಡುವದಾಯ್ತು ಹಾಡು
ಸುಳ್ಳೆ ಹದಿನೇಳ್ನೂರೈವತ್ತು ಸರ್ವಕೆ
ಸುಳ್ಳೆ ತಿಳಿದರೆಡುಳ್ಳೆ ಮಾಡಿದಿ ಮಹಾಂತ ಶರಣಾರ್ಥಿ । ೯ ।

॥ ೨೮ ॥

■■

## ಮುದ್ವೀರಸ್ವಾಮಿಯ ಶಾಂಭವೀನಿರ್ಣಯದ ವಚನ

೧೦೦೧

ಕಂಗಳ ಮುಂದಣ ಬಯಲಿನೊಳಗೊಂದು
ಪ್ರಕಾಶಾನ್ವಿತವಾದ ಮಹಾಚೋದ್ಯತರವಾದ ಗಗನಕೋಶವುಂಟು.
ಅಲ್ಲೊಂದು ದಿವ್ಯತರವಾದ ಕಮಲವುಂಟು.
ಆ ಕಮಲದ ಮಧ್ಯದಲ್ಲಿ ಆಣವತ್ರಯಾನ್ವಿತವಾದ
ಮಹತ್ಕರ್ಣಿಕೆಯುಂಟು.
ಮತ್ತದರಗ್ರದಂತರ್ವರ್ಣತ್ರಯಂಗಳೊಳಗೆ
ನೀಲವಿದ್ರುಮರತ್ನ ಚಂದ್ರಪ್ರಕಾಶ ದಿವ್ಯಸಿಂಹಾಸನದ ಮೇಲೆ
ಬೆಳಗುತ್ತಿರ್ಪ ಶಿವಲಿಂಗವನನುಸಂಧಾನಿಸಿ
ಪೂಜಿಸುವ ಕ್ರಮವೆಂತೆಂದೊಡೆ :
ಶ್ರೀಗುರುಕರುಣಕಟಾಕ್ಷವೀಕ್ಷಣಬಲದಿಂದ
ಕಲ್ಮಷ ಕಂಟಕಾದಿಗಳಂ ತೊಲಗಿಸಿ,
ಶಿವಲೋಕದ ಮಾರ್ಗವಿಡಿದು ಹೋಗಿ,
ಆ ಶಿವಲೋಕದ ಸಮೀಪಕ್ಕೆ ಸೇರಿ,
ಪರೀಕ್ಷೆಯ ಮಾಡಿ ನೋಡಲು,
ಆ ಶಿವಲೋಕದ ಬಹಿರಾವರಣದಲ್ಲಿ
ಮೂವತ್ತೆರಡು ಬಹಿರ್ಮುಖರು ಸಂಸ್ಥಿತರಾದ ವಿವರ :
ಈಶಾನ್ಯ ಪರ್ಜನ್ಯ ಜಯಂತ ಮಹೇಂದ್ರ

ಆದಿತ್ಯ ಸತ್ಯ ಭೃಂಷ ಅಂತರಿಕ್ಷ ಅಗ್ನಿ
ವಿಮಾಷ ಥತ ಗೃಹಕ್ಷತ ಯಮ ಗಂಧರ್ವ
ಭೃಂಗುರಾಜ ಮೃಗ ನಿರುತಿ ದೌವಾರಿಕ ಸುಗ್ರೀವ
ಪುಷ್ಪದತ್ತ ವರುಣ ಅಸುರ ಶೇಷ ಋಭು ವಾಯು
ನಾಗ ಮುಖ ಪಲಾಟಕ ಸೋಮ ಭೂತ ಅದಿತ ದಿತರೆಂಬುವರೇ
ಮೂತ್ತೆರಡು ವಸ್ತುದೇವತೆಯರ ಒಡಂಬಡಿಸಿಕೊಂಡು
ಅವರಿಂದೊಳಗಿರ್ಪ ಸೂರ್ಯವೀಥಿಯೆನಿಸುವ
ತೃತೀಯವರ್ಣದ ಮೂವತ್ತೆರಡುದಳದಲ್ಲಿ
ಎಂಟು ಶೂನ್ಯದಳಗಳನುಳಿದು,
ಮಿಕ್ಕ ಇಪ್ಪತ್ತುನಾಲ್ಕುದಳಗಳಲ್ಲಿರುವ
ಇಪ್ಪತ್ತುನಾಲ್ಕು ವಿಕಲಾಕ್ಷರಂಗಳೇ
ಅಷ್ಟವಿಧೇಶ್ವರರು, ಅಷ್ಟದಿಕ್ಪಾಲಕರು, ಅಷ್ಟವಸುಗಳಾದ ವಿವರ :
ಕ ಕಾರವೆ ಅನಂತ, ಖ ಕಾರವೆ ಇಂದ್ರ,
ಗಕಾರವೆ ಧರ, ಘಕಾರವೆ ಸೂಕ್ಷ್ಮ, ಓಂಕಾರವೆ ಅಗ್ನಿ,
ಚಕಾರವೆ ಧ್ರುವ, ಛಕಾರವೆ ಶಿವೋತ್ತಮ,
ಜಕಾರವೆ ಯಮ, ಝಕಾರವೆ ಸೋಮ,
ಞಕಾರವೆ ಏಕನೇತ್ರ, ಟಕಾರವೆ ನಿರುತಿ,
ಠಕಾರವೆ ಆಪು, ಡಕಾರವೆ ರುದ್ರ, ಢಕಾರವೆ ವರುಣ,
ಣಕಾರವೆ ಅನಿಲ, ತಕಾರವೆ ತ್ರಿಮೂರ್ತಿ,
ಥಕಾರವೆ ವಾಯು, ದಕಾರವೆ ಅನಲ,
ಧಕಾರವೆ ಶ್ರೀಕಂಠ, ನಕಾರವೆ ಕುಬೇರ,
ಪಕಾರವೆ ಪ್ರತ್ಯೂಷ, ಫಕಾರವೆ ಶಿಖಂಡಿ,
ಬಕಾರವೆ ಈಶಾನ, ಬಕಾರವೆ ಪ್ರಭಾಸ.
ಇಂತೀ [ಅಷ್ಟ] ವಿಧೇಶ್ವರಾದಿಗಳಿಗಭಿವಂದಿಸಿ,
ಅದರಿಂದೊಳಗಿರ್ಪ ಚಂದ್ರವೀಥಿಯೆನಿಪ
ದ್ವಿತೀಯಾವರಣದ ಷೋಡಶದಳದಲ್ಲಿರುವ
ಷೋಡಶ ಸ್ವರಾಕ್ಷರಂಗಳೆ ಷೋಡಷರುದ್ರರಾದ ವಿವರ :
ಅಕಾರವೆ ಉಮೇಶ್ವರ, ಆಕಾರವೆ ಭವ,
ಇಕಾರವೆ ಚಂಡೇಶ್ವರ, ಈಕಾರವೆ ಶರ್ವ,
ಉಕಾರವೆ ನಂದಿಕೇಶ್ವರ, ಊಕಾರವೆ ರುದ್ರ,
ಋಕಾರವೆ ಮಹಾಕಾಳ, ೠಕಾರವೆ ಉಗ್ರ,
ಲೃಕಾರವೆ ಭೃಂಗಿರೀಟಿ, ಲೄಕಾರವೆ ಭೀಮ,
ಏಕಾರವೆ ಗಣೇಶ್ವರ, ಐಕಾರವೆ ಈಶಾನ,
ಓಕಾರವೆ ವೃಷಭೇಶ್ವರ, ಔಕಾರವೆ ಪಶುಪತಿ,

ಅಂ ಎಂಬುದೆ ಷಣ್ಮುಖಿ, ಅಃ ಎಂಬುದೆ ಮಹಾದೇವನು.
ಇಂತಪ್ಪ ಷೋಡಶರುದ್ರರಿಗೆ ಸಾಷ್ಟಾಂಗವೆರಗಿ ಬಿನ್ನವಿಸಿಕೊಂಡು,
ಅದರಿಂದೊಳಗಿರ್ಪ ಅಗ್ನಿವೀಥಿಯೆನಿಸುವ ಪ್ರಥಮಾವರಣ
ಅಷ್ಟದಳಗಳಲ್ಲಿರ್ಪ ಅಷ್ಟವ್ಯಾಪಕಾಕ್ಷರಂಗಳೆ
ಅಷ್ಟಶಕ್ತಿಯರಾದ ವಿವರ :
ಸಕಾರವೆ ಉಮೆ, ಷಕಾರವೆ ಜ್ಯೇಷ್ಠೆ,
ಶಕಾರವೆ ರೌದ್ರೆ, ವಕಾರವೆ ಕಾಳೆ,
ಲಕಾರವೆ ಬಾಲೆ, ರಕಾರವೆ ಬಲಪ್ರಮಥಿನಿ,
ಯಕಾರವೆ ಸರ್ವಭೂತದಮನೆ, ಮಕಾರವೆ ಮನೋನ್ಮನಿ.
ಇಂತಪ್ಪ ಶಿವಶಕ್ತಿಯರ ಪಾದಪದ್ಮಂಗಳಿಗೆ ಸಷ್ಟಾಂಗವೆರಗಿ,
ಪೊಡಮಟ್ಟು ಅದರಿಂದೊಳಗಿರ್ಪ ಅತಿರಹಸ್ಯವಾದ
ಮೂವತ್ತೆರಡು ಕ್ಲೇಶಂಗಳಿಗಾಶ್ರಯವಾದ
ಶಾಂತಿಬಿಂದುಮಯವಾದ ಅಂತರ್ಮಂಡಲದ
ಚತುರ್ದಳದಲ್ಲಿರುವ ಚತುರಕ್ಷರಂಗಳೇ
ಚತುಃಶಕ್ತಿಯರಾದ ವಿವರ :
ಸಂ ಎಂಬುದೆ ಅಂಬಿಕೆ, ಅಂ ಎಂಬುದೆ ಗಣಾನಿ,
ಡಿಂ ಎಂಬುದೆ ಈಶ್ವರಿ, ಕ್ಷುಂ ಎಂಬುದೇ ಉಮೆ.
ಇಂತಪ್ಪ ಪರಶಕ್ತಿಯರ ಪಾದಾರವಿಂದವನು
ಅನೇಕ ಪ್ರಕಾರದಿಂ ಸ್ತುತಿಮಾಡಿ ಬೇಡಿಕೊಂಡು
ಅವರಪ್ಪಣೆವಿಡಿದು ಒಳಪೊಕ್ಕು,
ಅಲ್ಲಿ ಕದಂಬಗೋಳಕಾಕಾರ ಸ್ಫುರಶಕ್ತಿದೀಧಿಕಾಯೆಂದುಂಟಾಗಿ
ರಹಸ್ಯಕ್ಕೆ ರಹಸ್ಯವಾದ ಷಡಧ್ವಜನ್ಮಭೂಮಿಯಾದ
ಶಕ್ತಿಶಿರೋಗ್ರದಲ್ಲಿ ಪಂಚಾಕಾಶ ಷಟ್ತಾರಕ
ತ್ರಿವಿಧಲಿಂಗಾಂಗಗಳೆ ಕಕಾರವಾದ ಪರಬ್ರಹ್ಮದ ನೆಲೆಯನರಿಯುವುದೇ
ಮುದ್ವೀರಪ್ರಿಯ ಸಂಗಮೇಶ್ವರನಲ್ಲಿ ಬೆರೆವಂಥ
ನಿಜಯೋಗ ಕಾಣಿರೊ. ॥ ೧ ॥

■■

# ಮುಮ್ಮಡಿ ಕಾರ್ಯೇಂದ್ರನ ವೇದಸಂಜೀವಿನಿ

## ಒಂದನೆಯ ಅಧ್ಯಾಯ

ಶ್ರೀಮತ್ಕೈಲಾಸಪರ್ವತದಲ್ಲಿ ಪ್ರಣವಸಿಂಹಾಸನಾರೂಢನಾಗಿ ಪರಮಗಣ ತಿಂತಿಣಿಗೆ ಪರತತ್ವೋಪದೇಶನಿರೂಪಣ ಸುಖಾನುಭವಪರಮಾನಂದ ಪರಿತುಷ್ಟ ಮೂರ್ತಿಯಾಗಿರ್ಪ ಶಿವನು ತನ್ನಡಿಗಳ್ಗೆ ಅಭಿನಮಿಸಿ ಬಿನ್ನವಿಸಲು ಜ್ಜುಗಿಸಿದ ನಾರದನ ಭಾವಮಂ ಕಂಡು, ಕಾರುಣ್ಯಪಯೋರಾಶಿಯೇ ಮೇರೆವರಿ ದುಕ್ಕುವಂತೆ ದರಹಸಿತವದನದಿಂ ಪ್ರಸನ್ನನಾಗಿರ್ಪಾಗಳಾದೇವನಂ ನಾರದಂ ನೋಡಿ, ಕೊಂಡಾಡಿ ಪಾಡಿಯಾಡಿ ನಲಿದಾಡಿ ಪರಮಾನಂದರಸದೊಳೋ ಲಾಡಿ, ತನ್ನ ಮನಕ್ಕೆ ತಾನೆ ಸಮಾಧಾನಮಂ ಮಾಡಿ, ಸಲಿಗೆಗಂಜುವೆನೆಂದ ಭಯವಂ ಬೇಡಿ, 'ಬಿನ್ನಹ ಜೀಯಾ ! ಚಿತ್ತಾವಧಾನ ! ಮರ್ತ್ಯಲೋಕದಲ್ಲಿ ಕಲಿದೋಷದಿಂ ಮಿಥ್ಯಾದಿ ನಾನಾ ದೋಷಂಗಳಧಿಕಮಾಗಿ ಧರ್ಮವಳಿದು, ಅಧರ್ಮವೇ ಅರಸಾಗಿ, ಗುರ್ದುಣಂಗಳೇ ಪರಿವಾರಮಾಗಾಳುತ್ತಾ, ಉಸುರಲ ಸಾಧ್ಯ ಮಾಗಿರ್ಪ ದುಷ್ಕೃತ್ಯಕ್ಕಂಜಿ, ಪೃಥ್ವಿಯ ತೇಜಂ ಮಸುಳಿ ನೀರಸ ಮಾಗಿರ್ಪುದು. ಶಿವಭಕ್ತಿಯು ಗಜಶಿರದೊಳಗಿರ್ಪ ಮೌಕ್ತಿಕದಂತೆಯೂ ಶಿಲೆ ಯೊಳಗಿರ್ಪ ರತ್ನದಂತೆಯೂ ಇರ್ಪುದಂ ಕಂಡು ಭಯಭ್ರಾಂತನಾಗಿ ನಿನ್ನಡಿಗೆ ಬಿನ್ನವಿಸ ಬಂದೆನು ದೇವಾ, ನೀಂ ದಯೆಯಿಂ ಮರ್ತ್ಯಲೋಕದಲ್ಲಿ ಶಿವಭಕ್ತಿಯನು ದ್ಧರಿಸ ದಿರ್ದೊಡೆ,–ದೇವತೆಗಳ ದೀಪನವಡಗಿ, ಪಂಚಭೂತಂಗಳ ವಿಪರೀತ ಕೃತ್ಯಂಗಳುಡುಗವು' ಎಂದು ಬಿನ್ನೈಸಲಾ ಮಹಾಮುನಿಗೆ ಪರಶಿವನು ದರಹಸಿತಲಸಿತಪರಮಾನಂದಪ್ರಸಾದವಾಕ್ಯಂಗಳಿಂ ನಿರೂಪಿಸಿದನದೆಂತೆಂ

ದೊಡೆ: 'ಎಲೆ ಮಹಾಮುನಿಯೇ! ಆದಿಯಲ್ಲಿ ನನ್ನ ತತ್ಪುರುಷಮುಖದಿಂ ರೇವಣಸಿದ್ಧೇಶ್ವರನೆಂಬ ಮಹಾ ಮೂರ್ತಿಯುದ್ಭವಿಸಿ ಮರ್ತ್ಯಲೋಕವಂ ಪಾವನವಂ ಮಾಡಿದನು. ಆ ಮೇಲೆ ನನ್ನ ಅಘೋರಮುಖದಲ್ಲಿ ಮರುಳ ಸಿದ್ಧೇಶ್ವರನುದಿಸಿ ಜೀವರ ಪಾಪವ ನುಡುಗಿದನು. ನನ್ನ ಸದ್ಯೋಜಾತ ಮುಖದಲ್ಲಿ ಏಕೋರಾಮೇಶ್ವರನೊಗೆದು ಧರೆಯಂ ಶುಚಿಮಾಡಿದನು. ನನ್ನ ವಾಮದೇವಮುಖದಲ್ಲಿ ಪಂಡಿತಾರಾಧ್ಯನು ಜನಿಸಿ ಜಗತ್ತಿನ ವಿಪತ್ತಂ ಪರಿಹರಿಸಿದನು. ಈಗ ನನ್ನ ಈಶಾನಮುಖದಲ್ಲಿ ಮಹಾಲಿಂಗ ಮೂರ್ತಿಯಾಗಿ, ಮಹತತ್ತ್ವದಧಿಪತಿಯಾಗಿ, ಸ್ಥೂಲಗಣೇಶ್ವರಾ ಹ್ವಯದಿಂ ಮೂರ್ತಿಗೊಂಡು, ನಿನ್ನಿಷ್ಟವಂ ತುಷ್ಟಿಬಡಿಸುವೆನೆಂಬನಿತರೊಳು ಪರಮಾನಂದವೇ ಮೂರ್ತಿ ಗೊಂಡಂತೆ, ಕಾರುಣ್ಯರಸವನೆ ಕರುವಿಟ್ಟೆರೆದು ನೆಲೆಸಿದಂತೆ, ಪರತತ್ವವೇ ಘಟ್ಟಿಗೊಂಡು ಸಾಕಾರಮಾಗಿರ್ಪಂತೆ, ಶಿವಭಕ್ತಿಸತಿಯ ಮುತ್ತೈದೆತನದ ಮೂಲ್ಯವೇ ಮೊಳೆತು ಸಾವಯವಮಾಗಿ ಮೂರ್ತಿ ಗೊಂಡಂತೆ, ಶಿವಭಕ್ತರ ಸಂತೋಷಸಮುದ್ರವಂ ಪೆರ್ಚಿಸಲೊಗೆದ ಷೋಡಶಕಳಾಧರನಂತೆ, ಭವ ರೋಗದ ಬೇಗೆಯಿಂ ತನುಗಳ ನೀಗಿ, ಮರಣವೇದನೆಯಿಂ ತೂಗಿ ಕೋಟಲೆ ಗೊಳುತ್ತಿರ್ಪ ಜನರ ತಾಪಮಂ ತಣ್ಣನೆ ಮಾಳ್ಪ ಸಂಜೀವನವೇ ಜೀವನವಾಂತು ನಿಂದಂತಿರ್ಪ ಸ್ಥೂಲಗಣೇಶ್ವರನಂ ನೋಡಿ, ಮುಂಡಾಡಿ, ಆ ಮಹಿಮನ ಮಹಿಮೆಯಂ ಕೊಂಡಾಡಿ, ಎಲೆ ಮಹಾಪುರುಷ, ನೀಂ ದಯೆಯಿಂ ಮರ್ತ್ಯಲೋಕದಲ್ಲಿ ಶಿವಭಕ್ತಿಯನುದ್ಧರಿಸಿ, ನಿನ್ನ ವಿಲಾಸ ಸ್ಪರ್ಶನದಿಂ ಜೀವರ ಭವತಾಪವಂ ಪರಿಹರಿಸಿ ಆದರಿಸಬೇಕೆಂದು ಸುರಲು, ಆ ಪರಶಿವನ ಮಾತಂ ಕೇಳಿ, ಮನದಲ್ಲಿ ಭಯಮಂ ತಾಳಿ, ಸಾಷ್ಟಾಂಗಪ್ರಣಾಮವಂ ಮಾಡಿ, ಮುಕುಳಿತಕರಾಂಬುಜದಿಂದೆದ್ದು ಕೊಂಡಾಡಿ, ನೀನು ನಾನೆಂಬ ಭಿನ್ನ ಭಾವವರತು, ನನ್ನ ನಾನು ಮರೆತು, ಮಹಕ್ಕೆ ಮಹವಾಗಿರ್ಪ ನನಗೆ ಮರ್ತ್ಯಲೋಕದ ಮಾಯಾಹೇಯಕಾಯವನಾಂತು ಆಯಾಸವಂಗೊಳುತಿರ್ಪ ಜೀವೋಪದೇಶವು ತನಗೆ ಸಾಧ್ಯವಪ್ಪುದೆಂತು, ಅದಕೆನ್ನ ಮನಸ್ಸೊಡಂಬಡ ದೆಂದುಸಿರ್ದ ಸ್ಥೂಲಗಣೇಶ್ವರನ ಮುಖವಂ ನೋಡಿ, ನೀಂ ಕರುಣಿ ಸದಿರ್ದೊಡೆ ಜೀವರ ಕೋಟಲೆಯಡಗದು, ಉಳಿದವರಿಂ ಕಲಿದೋಷ ಸಾಧ್ಯಮಾಗದು, ಆದುದರಿಂದ ನೀನೇ ಮರ್ತ್ಯಲೋಕದಲ್ಲಿ ಪ್ರಕಾಶಿಸಿ, ಪರಿಶುದ್ಧಮಾಗಿರ್ಪ ಮಾಸ್ತಿಯ ವಂಶದಲ್ಲಿ ಮನುಷ್ಯರೂಪದಿಂ ಜನಿಸಲು, ನಾನೇ ನಿನಗೆ ಮಹಾಲಿಂಗರೂಪದಲ್ಲಿ ಪ್ರಸನ್ನನಾಗಿ, ನಿನ್ನ ಶರೀರವನೆಡೆಬಿಡದೆ ಎಂದಿ ನಂತಭೇದಮಾಗಿ ನಿನ್ನ ಮಹಿಮೆಯಂ ಪ್ರಕಟ ಮಾಡಿ, ಅವರ ಭವಬಂಧನಮಂ ಬಿಡಿಸುವೆನಂಜಬೇಡವೆಂದಭಯಕರಮಂ ಶಿರದೊಳಿಟ್ಟಾ ಘ್ರಾಣಿಸಿ ಅಪ್ಪಣೆಯಂ ಕೊಡಲು; ತದನುಮತದಿಂ ಮರ್ತ್ಯಕ್ಕೆ ಬಂದು, ಶಿವನಿರೂಪಿತ ವಂಶಗುಣಮಣಿದೀಪಿಕಾನಿಭಪ್ರಕಾಶಮಾಗಿರ್ಪ ಕೆಂಪಮಹೀಧ ರಾಪ್ಪಯ ಛಾಯಾನುಗುಣ್ಯವರ್ತಿ ನಿರ್ಮಲಕೀರ್ತಿಯಾಗಿರ್ಪ ತತ್ಸತಿ

ಮಹಾಸತಿಯ ನಿರ್ಮಲಗರ್ಭಪಯಃಪಾರಾವಾರದೊಳ್ ನಿಷ್ಕಳಂಕ ಚಂದ್ರನಂತೊಗೆದು, ಷೋಡಶಕಳಾಪರಿಪೂರ್ಣವಾಗಿರ್ಪ ಷೋಡಶಸಂವತ್ಸರ ದಲ್ಲಿ ಜಗಕ್ಕಚ್ಚರಿಯಾಗಿ, ಈಶಾನಮುಖದಿಂ ತೇಜೋರೂಪದಿಂದ ಬಂದು ಉತ್ತರ ಹಸ್ತಪ್ರಸನ್ನವಾಗಿರ್ಪ ಜ್ಯೋತಿರ್ಲಿಂಗಮಂ ಕಂಡು ಸಂತೋಷಮಂ ಗೊಂಡು, ಮೊದಲ ಪರಿಯ ನೆನಕೊಂಡು, ತಲ್ಲಿಂಗಮಂ ಧರಿಸಿ, ಧರೆಯೊಳನೇಕ ಪವಾಡಂಗಳಂ ತೋರಿ, ಮೀರಿ, ಜೀವರ ಮನಸ್ಸಂಶಯಂಗಳಂ ಕೆಡಿಸಿ, ಬಿಡಿಸಿ, ಕಲಿದೋಷಮಂ ಮೆಟ್ಟಿ ಕುಟ್ಟಿ ಕೆಟ್ಟೋಡುವಂತೆ ಮಾಡಿ, ದೊಡ್ಡದೇಶಿ ಕಾಹ್ವಯದಿಂ ವೀರಶೈವ ಮತೋದ್ಧರಣಂ ಮಾಡಿ, ಶಿವಭಕ್ತಿಲತೆ ಪಲ್ಲವಿಸಿ ಫಲಿಸುವಂತೆ ಸರಿಮಸಗಿ ಸಕಲಜಗಕ್ಕಾನಂದಮಂ ಪೆರ್ಚಿಸಿ, ನಾರದಾದಿ ಮುನಿಗಳಂ ಸಲಿಸಿ, ಪರಮಾನಂದಮೂರ್ತಿಯಾಗಿರ್ದಾ ಗುರುನಿಜಕರಜಾತ ಮಾಸ್ತಿವಂಶಪರಂಪರೆಯಲ್ಲಿ ಪ್ರಕಾಶಿಸುತ್ತಿರ್ಪ ಮಾನದಿಂದೊಪ್ಪುತ್ತಿರ್ಪ ಇಮ್ಮಡಿ ಕಾರ್ಯಭೂವರನ ಭಾರ್ಯೆಯಪ್ಪ ಕುಪ್ಪಮಾಂಬಾಹ್ವಯ ಸತಿಯ ಪೂತಗರ್ಭದೊಳೊಗೆದು, ಮುಮ್ಮಡಿ ಕಾರ್ಯೇಂದ್ರಾಖ್ಯೆಯಿಂ ವಿಖ್ಯಾತನಾಗಿರ್ಪೆ ನಗೆ ಕನಸಿನಲ್ಲಿ ಬಂದು ಮನಸ್ಸಂತುಷ್ಟಿಯಂ ಮಾಡಿ, ಅಕ್ಷಯಮೋಕ್ಷಪ್ರದಮಪ್ಪ ದೀಕ್ಷೆಯಂ ಕೊಟ್ಟು, ಪರತತ್ತ್ವೋಪದೇಶಮಂ ಪಾಲಿಸಿ, ದಯೆಯಿಂ ಲಾಲಿಸಿ, ತನ್ಮಹಿಮೆ ಪ್ರಕಟನವಾಗುವಂತು ಜೀವರ ಭವಪಾಪಮಂ ನೀಗುವಂತು ಪರತತ್ತ್ವವಚನ ಷೋಡಶೋತ್ತರಶತಮಂ ರಚಿಸೆಂದು ನಿರೂಪಿಸಲಾ ದೇಶಿಕನಾಜ್ಞೆಯಂ ಶಿರಸಾವಹಿಸಿ, ತದ್ಧಾರಣಾ ಸಾಮರ್ಥ್ಯದಿಂ ಮಿಸುಕದಿಂತು ಸಿರ್ದನಿದ ರೋಳೇನಾನುಂ ತಪ್ಪಿರ್ದೊಡೆ ನನ್ನ ಹೃತ್ಕಮಲಕರ್ಣಿಕಾಮಧ್ಯ ಸುಜ್ಞಾನಪೀಠಮಂ ಹೊದ್ದಿದಾ ಗುರುವರನೆ ತಿದ್ದಿ ಪರಿಶುದ್ಧನಂ ಮಾಡಿ ಸಲಹವೇಳ್ಕೆಂದುಂ ಹಾರೈಸುವೆಂ.

೧೦೦೨

ನಿಷ್ಕಳಂಕಾತ್ಮನು ನಿಜಪ್ರಕೃತಿವಶದಿಂ
ಮನ ನೆನಹು ಭಾವದೆ ತ್ರಿವಿಧಸ್ವರೂಪವಾಯಿತ್ತು,
ಆ ಮನವೊಗ್ಗಿದುದೆ ನೆನಹಿಗೆ ಬಂದಿತ್ತು,
ಅದೇ ಭಾವದಲ್ಲಿ ತೋರಿತ್ತು; ಅದೇ ಪ್ರಾಣವಾಯಿತ್ತು;
ಅದೇ ಚೈತನ್ಯಸ್ವರೂಪಮಾಗಿ ತನುವನೆಳದಾಡಿತ್ತು,
ಅದಕ್ಕೆ ವಾಯುವೇ ಅಂಗವಾಗಿ ಕರ್ಮಾಧೀನಮೆನಿಸಿ,
ತಾನೆಂಬಹಂಕಾರದಿಂ ತನ್ನ ತಾ ಮರೆತು ತೊಳಲಿಬಳಲುತ್ತಿರಲು,
ಅನೇಕಜನ್ಮ ಸಂಚಿತಕರ್ಮ ಸವೆದು,
ಗುರುಕರುಣ ನೆಲೆಗೊಂಡಲ್ಲಿ ಗಗನಾಂಗಿಯಾಗಿ,
ಆ ಮನಕ್ಕೆ ತಾನೇ ಆಧಾರಮಾಗಿ, ತಾನೇ ಪರಮನಾಗಿ,
ತಾನೇ ಪ್ರಸನ್ನಮಾಗಿರ್ದ ಮಹಾಜ್ಞಾನಶಕ್ತಿಯಂ ಕಂಡದರೊಳಗೆ ಕೂಡಿ,

ಸಾಧಕಕ್ಕೊಳಗಾದ ಮನವೇ ಘನವಾಯಿತ್ತು,
ಆ ಘನವೇ ಲಿಂಗವಾಯಿತ್ತು, ಆ ಲಿಂಗವೇ ಪ್ರಾಣವಾಯಿತ್ತು,
ಆ ಪ್ರಾಣವೇ ಪರಮಾತ್ಮಸ್ವರೂಪವಾಗಿ
ತತ್ತ್ವಮಸಿಪದದಿಂದತತ್ತ್ವಹಮ್ಮನಳಿದು ಸುಮ್ಮನೆಯಾದುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ. ॥ ೧ ॥

೧೦೦೩

ಪ್ರಣವಸ್ವರೂಪವಾದ ಪರಬ್ರಹ್ಮವೇ
ತಾನು ತನ್ನ ನಿಜಲೀಲಾನಿಮಿತ್ತ ತ್ರಿವರ್ಣರೂಪಕವಾಗಿ,
ಅದೇ ಹರಿಹರಬ್ರಹ್ಮಸ್ವರೂಪವಾಗಿ,
ಹರಿಯೇ ಶರೀರವಾಗಿ, ಹರನೇ ಜೀವವಾಗಿ, ಬ್ರಹ್ಮನೇ ಮನಸ್ಸಾಗಿ,
ಆ ಬ್ರಹ್ಮಸ್ವರೂಪವಾದ ಕಲೆಯೇ ಶರೀರಕ್ಕೆ ಶಕ್ತಿಯಾಗಿ,
ಆ ಶರೀರಸ್ವರೂಪವಾದ ಬಿಂದುವೇ ಪ್ರಾಣಕ್ಕೆ ಶಕ್ತಿಯಾಗಿ,
ಆ ಪ್ರಾಣಸ್ವರೂಪವಾದ ನಾದವೇ ಮನಶ್ಶಕ್ತಿಯಾಗಿ,
ಆ ಪ್ರಾಣಕ್ಕೆ ನಾಸಿಕವೇ ಸ್ಥಾನವಾಗಿ,
ಮನಸ್ಸಿಗೆ ಜಿಹ್ವೆಯೇ ಸ್ಥಾನವಾಗಿ,
ಶರೀರಕ್ಕೆ ನೇತ್ರವೇ ಸ್ಥಾನವಾಗಿ,
ತನು ಸ್ಪರುಶನಸ್ವರೂಪು, ಮನಸ್ಸು ಶಬ್ದಸ್ವರೂಪು, ಪ್ರಾಣ ಆತ್ಮಸ್ವರೂಪು.
ಈ ತನು ಮನಃಪ್ರಾಣಂಗಳಿಂದೊಗೆದ ಆತ್ಮಾದಿ ಷಡ್ಭೂತಂಗಳಿಗೆ
ಆತ್ಮಾದಿ ಷಡ್ಭೂತವೇ ಕಾರಣವಾಗಿ,
ಜೀವನದಲ್ಲಿ ಹುಟ್ಟಿದ ಸತ್ವಗುಣವು ಶರೀರವನಾವರಿಸಿ,
ಆ ಜೀವನಿಗೆ ತಾನೇ ಸ್ಥಿತಿಕರ್ತೃವಾಯಿತ್ತು,
ಶರೀರದಲ್ಲಿ ಹುಟ್ಟಿದ ತಮೋಗುಣವು ಜೀವನನಾವರಿಸಿ,
ಆ ಶರೀರಕ್ಕೆ ತಾನೇ ಸಂಹಾರಕರ್ತೃವಾಯಿತ್ತು,
ಆ ಶರೀರ ಜೀವಸಂಗದಿಂದೊಗೆದ ಅಹಂಕಾರಸ್ವರೂಪವಾದ
ರಜೋಗುಣವು ಮನವುನಾವರಿಸಿ,
ಈ ಎರಡಕ್ಕೂ ತಾನೇ ಸೃಷ್ಟಿಕರ್ತೃವಾಯಿತ್ತು,
ಆ ನಾದವೇ ವಾಗ್ದೇವಿಯಾಗಿ, ಬಿಂದುವೇ ಮಹಾದೇವಿಯಾಗಿ,
ಕಳೆಯೇ ಮಹಾಲಕ್ಷ್ಮಿಯಾಗಿ,
ಈ ತನು ಮನಃಪ್ರಾಣಂಗಳನು ಮರುಳುಮಾಡಿತ್ತು,
ಜಾಗ್ರತ್ಸ್ವಪ್ನಸುಷುಪ್ತ್ಯಾದ್ಯವಸ್ಥೆಗಳೊಳಗೆ ಹೊಂದಿಸಿ,
ಮುಂದುಗಾಣಲೀಯದೆ, ಸೃಷ್ಟಿಸ್ಥಿತಿಸಂಹಾರಂಗಳಲ್ಲಿ ತೊಳಲಿಬಳಲಿಸುತ್ತಿರಲು,
ಆ ಕಳೆಯಲ್ಲಿ ಕೂಡಿ ಶರೀರವು ಉಬ್ಬುತ್ತಾ,
ಆ ನಾದದಲ್ಲಿ ಕೂಡಿ ಮನಸ್ಸು ಕೊಬ್ಬುತ್ತಾ,

ಆ ಶಕ್ತಿಯಲ್ಲಿ ಕೂಡಿ ಪ್ರಾಣ ಬೆಬ್ಬನೆ ಬೆರೆವುತ್ತಾ,
ಭವಭವದೊಳು ತೊಳಲುತ್ತಿರಲು,
ಗುರುಕಟಾಕ್ಷದಿಂ ಕರ್ಮವು ಸವೆದು ಧರ್ಮವು ನೆಲೆಗೊಳ್ಳಲು,
ಆ ಮೇಲೆ ಮಹಾಜ್ಞಾನಶಕ್ತಿಯಾಯಿತ್ತು
ಆ ಬಿಂದುವೇ ಆನಂದಶಕ್ತಿಯಾಯಿತ್ತು
ಆ ಕಳೆಯೇ ನಿಜಶಕ್ತಿಯಾಯಿತ್ತು
ಇಂತು ಸತ್ಯಜ್ಞಾನಾನಂದಸ್ವರೂಪವಾದ ಶಕ್ತಿಮಹಿಮೆಯಿಂದ
ಶರೀರವೇ ವಿಷ್ಣುವಾಗಲು,
ಅಲ್ಲಿ ಶ್ರೀಗುರುಸ್ವರೂಪವಾದ ಇಷ್ಟಲಿಂಗವು ಸಾಧ್ಯವಾಯಿತ್ತು,
ಆ ಪ್ರಾಣವೇ ರುದ್ರಸ್ವರೂಪವಾಗಲು,
ಜಂಗಮಮೂರ್ತಿಯಾದ ಪ್ರಾಣಲಿಂಗವು ಸಾಧ್ಯವಾಯಿತ್ತು,
ಮನಸ್ಸೇ ಬ್ರಹ್ಮಸ್ವರೂಪವಾಗಲು,
ಲಿಂಗಾಕಾರವಾದ ಭಾವಲಿಂಗವು ಸಾಧ್ಯವಾಯಿತ್ತು,
ಆ ಲಿಂಗಗಳೇ ಆತ್ಮಾದಿ ಷಡ್ಭೂತಂಗಳಲ್ಲಿ
ಆಚಾರಾದಿ ಮಹಾಲಿಂಗಂಗಳಾದವು.
ಆ ಶಕ್ತಿಗಳೇ ಕ್ರಿಯಾದಿ ಶಕ್ತಿಯರಾದರು.
ಆ ಶಕ್ತಿಮುಖದಲ್ಲಿ ತಮ್ಮಲ್ಲಿ ಹುಟ್ಟಿದ ನಾನಾವಿಷಯ ಪದಾರ್ಥಂಗಳನ್ನು
ಆಯಾ ಲಿಂಗಂಗಳಿಗರ್ಪಿಸಿ,
ತತ್ಸುಖಾನುಭವದೊಳೋಲಾಡುತ್ತಿರಲು,
ಆ ಶಕ್ತಿಗಳೇ ಲಿಂಗಶಕ್ತಿಗಳಾಗಿ,
ತಾವೇ ಆಯಾ ಲಿಂಗಸ್ವರೂಪ ಶರೀರ ಪ್ರಾಣ ಮನೋಭಾವಂಗಳಳಿದು,
ಲಿಂಗಭಾವ ನೆಲೆಗೊಂಡಲ್ಲಿ, ಸತ್ವರಜಸ್ತಮೋಗುಣಗಳು
ಜ್ಯೋತಿಯೊಳಗಡಗಿದ ಕತ್ತಲೆಯಂತೆ,
ತಮ್ಮ ನಿಜದಲ್ಲಿ ತಾವೇ ಲೀನವಾದವು.
ಬಿಂದು, ಶರೀರದೊಳಗೆ ನಿಂದು ಆನಂದರೂಪವಾಯಿತ್ತು,
ನಾದವು ಪ್ರಾಣದೊಳಗೆ ಬೆರೆದು ನಿಶ್ಶಬ್ದನಿರೂಪವಾದ ಜ್ಞಾನವಾಯಿತ್ತು,
ಕಳೆ ಮನದೊಳಗ ಬೆರದು, ಪರಬ್ರಹ್ಮಸ್ವರೂಪವಾಗಿ ನಿಜವಾಯಿತ್ತು.
ಆ ಆನಂದವೇ ಇಷ್ಟಲಿಂಗರೂಪವಾಗಿ,
ಜ್ಞಾನವೇ ಪ್ರಾಣಲಿಂಗಸ್ವರೂಪವಾಗಿ,
ಆ ನಿಜವೇ ಭಾವಲಿಂಗಮೂರ್ತಿಯಾಗಲು,
ಆ ಕರ್ಮ ಧರ್ಮ ವರ್ಮಂಗಳಡಗಿದವು.
ಆತ್ಮಾದಿ ಷಡ್ಭೂತಂಗಳು ಆಚಾರಾದಿ ಮಹಾಲಿಂಗಂಗಳೊಳಗೆ ಲೀನವಾಗಲು,
ಆ ಆರುಲಿಂಗಂಗಳೇ ಈ ಮೂರುಲಿಂಗಂಗಳೊಳಗೆ ಬೆರೆದು,
ಇಷ್ಟವೇ ಪ್ರಾಣವಾಗಿ, ಭಾವಸಂಗದೊಳಗೆ ಪರವಶವಾಗಿ,

ತಾನುತಾನೆಯಾಗಿ, ತನ್ನಿಂದನ್ಯವೇನೂ ಇಲ್ಲದೆ ನಿಬ್ಬೆರಗಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨ ॥

೧೦೦೪

ಅಂಗದೊಳಗಿರ್ಪ ಶಕ್ತಿಯಾತ್ಮಸಂಗದಿಂ ಪ್ರಕಾಶವಾಗಿ,
ಆ ಶರೀರಕ್ಕೂ ತನಗೂ ಭೇದಮೆನಿಸಿಕೊಳ್ಳಲು,
ಅಲ್ಲಿ ಕರ್ಮವು ಉತ್ಪನ್ನವಾಗಿ,
ಆ ಕರ್ಮಮುಖದಿಂ ಪ್ರಪಂಚವನವಗ್ರಹಿಸಲೋಸುಗ
ಸೃಷ್ಟಿಸ್ಥಿತಿಸಂಹಾರಂಗಳೆಸಗೆ,
ಆ ಶರೀರವು ವ್ಯಯವನೆಯ್ದಿ, ಪೃಥ್ವಿಯ ಚರಿಸುವಂದದಲಿ
ಲಿಂಗದಲ್ಲಿರ್ಪ ಶಿವನಿಂದ ತತ್ವಪ್ರಕಾಶವಾಗಿ,
ಮನಸ್ಸಿನಲ್ಲಿ ಭೇದತೋರದೆ ಕೂಡಿದಲ್ಲಿ, ಜ್ಞಾನಮುತ್ಪನ್ನವಾಯಿತ್ತು
ಜ್ಞಾನಮುಖದಿಂ ಮನ ಮಹವನವಗ್ರಹಿಸಿ,
ಸತ್ತುಚಿತ್ತಾನಂದದಿಂ ಸಾಧಿಸುತ್ತಿರಲು, ಮನವಳಿದು ಲಿಂಗಮಪ್ಪುದು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೩ ॥

೧೦೦೫

ಮಾನಸಸರೋವರ ಚತುಸ್ಸೋಪಾನವೀಧಿಗಳಿಂ ತುಂಬಿರ್ಪ
ಧೀವರ್ಣದ ರಸದಿಂ ಬೆಂಬಿಡದೆ ತಳದಲ್ಲಿರ್ಪ ನೆಲನೆಲ್ಲಂ ಕೆಸರಾಗೆ,
ಅದನೆ ಆಧಾರವಾಗಿ ಬೆಳೆದು ನಾನಾ ದಳಂಗಳಿಂ ತೋರ್ಪ
ಕಮಲಂಗಳಿಂ ಸಿಕ್ಕುಬಿದ್ದಿರ್ಪ ಬಿಸಗಳಿಂ
ದೋಷಾಕರೋದಯಕ್ಕೆ ನವಕುಮುದಂಗಳಿಂ ಬಯಸುತ್ತಿರ್ಪ
ಶೈವಾಲಂಗಳಿಂ ಬೀಳುವ ಭೃಂಗಂಗಳ ಮೇಳದಿಂದೊಪ್ಪುವ ತತ್ಸರೋವರವ
ಪಲವರ್ಣದೊಂದು ಹಂಸನಾಶ್ರಯಿಸಿ,
ಅದನೆ ತನಗಾಧಾರಮಂ ಮಾಡಿಕೊಂಡು,
ಫಲಪುಷ್ಪಯುತಮಾದ ವಸಂತಕಾಲದಲ್ಲಿ ಪೃಥ್ವಿಗೆ ಬಂದು,
ಗೂಡಮಾಡಿಕೊಂಡು, ನೀರಕ್ಷೀರಂಗಳಭೇದಮಂ ಪುಟ್ಟಿಸಿ,
ನೀರಂ ಬಿಟ್ಟು ಕ್ಷೀರಮಂ ಕೊಂಡು,
ವರ್ಷಾಕಾಲಗರ್ಜನೆಯಂ ಕೇಳಿ, ಪೃಥ್ವಿಯೊಳಗಿರ್ಪ ಗೂಡಂ ಬಿಟ್ಟು,
ತಿರಿಗಿ ಮುನ್ನಿನ ಸರೋವರಮಂ ಸೇರುತ್ತಂ,
ಮತ್ತಂ , ಪೃಥ್ವಿಯಗೂಡಂ ಸಾರುತ್ತಂ, ಪಕ್ಷದ್ವಯಂಗಳಿಂ ಚರಿಸುತ್ತಿರಲಾ
ಹಂಸನಮೇಲೆ ಕರುಣದಿಂ ಬ್ರಹ್ಮನು ಪ್ರಸನ್ನನಾಗಿ
ನಿಜವಾಹನವಂ ಮಾಡಿಕೊಳ್ಳಲು,
ಆ ಬ್ರಹ್ಮಧಾರಣಾಶಕ್ತಿಯಿಂ ಹಂಸಂ ಪಲವರ್ಣಮಳಿದೇಕರ್ಣವಾಗಿ,
ಸತ್ಯಲೋಕದಲ್ಲಿ ಸಂಚರಿಸುತ್ತಾ

ಆಕಾಶದಲ್ಲಿ ತೋರ್ಪ ಸುವರ್ಣನದೀಪ್ರವಾಹಮತಿನಿರ್ಮಲವಾಗಿ
ಘಾತದಲ್ಲಿರ್ಪ ಅನಿಮೇಷಸಂಚಾರಂಗಳು ಸ್ವಚ್ಛ ಜೀವನದಲ್ಲಿ ಕಾಣುತ್ತಿರಲು,
ಅಲ್ಲಿ ನಲಿವುತ್ತಾ ಕೆಲಿವುತ್ತಾ ಅನೇಕ ವರ್ಣಾತ್ಮಕವಾದ
ಸಹಸ್ರಪತ್ರಕಮಲದ ನಡುನೆತ್ತಿಯಲ್ಲಿ ತೋರ್ಪ
ಅರ್ಕಪ್ರಕಾಶದಿಂ ವಿಕಸಿತವಾಗಿರಲಲ್ಲಿ ಸಂಚರಿಸುತ್ತಾ,
ಮಾನಸಸರೋವರದ ವಾಂಛೆಯಂ ಬಿಟ್ಟು,
ತನ್ಮಧ್ಯಕರ್ನಿಕಾ ಮಕರಂದಪಾನಮಂ ಮಾಡಿದಾಕ್ಷಣವೇ ಪಕ್ಷಂಗಳುದುರಿ,
ತನ್ನನೇರಿಕೊಂಡಿರ್ಪ ಬ್ರಹ್ಮನಂ ತಾನೇ ನುಂಗಿ
ಹಂಸಮೇ ಲಿಂಗವಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೪ ॥

೧೦೦೬

ದೀಕ್ಷಿತನು ಯಜನಾರ್ಥಿಯಾಗಿ, ಭೂಶುದ್ಧಿಯಂ ಮಾಡಿ,
ಯೂಪಸ್ತಂಭವಂ ಪ್ರತಿಷ್ಠೆಯಂ ಮಾಡಿ, ಋತ್ವಿಜರಂ ಕೂಡಿ,
ಮಹಾಘೋರಾಟವಿಯಲ್ಲಿ ಕಳಪುಲ್ಲಂ ತಿಂದು ಕೊಳಕುನೀರಂ ಕುಡಿದು
ಅಧೋಮುಖಗಳಾಗಿ ಸಂಚರಿಸುವ ಪಶುಸಮೂಹಗಳೊಳೊಂದು
ಸಲಕ್ಷಣವಾದ ಪಶುವಂ ಪಿಡಿದು,
ಯೂಪಸ್ತಂಭದಲ್ಲಿ ಹರಿಯದ ಹಗ್ಗದಲ್ಲಿ ಕಟ್ಟಿ,
ಅತಿಖಾತಮಪ್ಪ ಯಜ್ಞಕುಂಡವಂ ಚೆನ್ನಾಗಿ ಸಮೆದು,
ಒಣಗಿಯೊಣಗದ ಕಾಷ್ಠಂಗಳಿಂದಗ್ನಿಯ ಹೊತ್ತಿಸಿ,
ಅತಿಸುಗಂಧವಾದ ಘೃತಮಂ ಮಂತ್ರಘೋಷದಿಂದಾಹುತಿಗೊಡುತ್ತಿರೆ,
ಅಗ್ನಿಯು ಪಟುವಾಗಿ, ನಿಜವಾಸನಾಧೂಪದಿಂ ಸಕಲದೇವತೆಗಳಂ ತೃಪ್ತಿಬಡಿಸಿ
ಋತ್ವಿಕ್ಕುಗಳನೊಳಕೊಂಡು ದೀಕ್ಷಿತನಂ ಮೀರಿ,
ಪಾಶಮಂ ದಹಿಸಿ, ಕಂಭದಲ್ಲಿ ಬೆರೆದು ಪರಮಶಾಂತಿಯನೆಯ್ದಿದ ತಾನೇ
ಸೋಮಯಾಜಿಯಾಯಿತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೫ ॥

೧೦೦೭

ಏಕವಾಗಿರ್ಪ ಬೀಜಮಧ್ಯದಲ್ಲಿರಿಸಿ ಅಂಕುರಿಸೆ,
ಆ ಬೀಜ ಭಿನ್ನವಾಗಿ ತೋರ್ಪಂದದಿಂ ಏಕಮೇವನದ್ವಿತೀಯವಾಗಿ,
ಬ್ರಹ್ಮನಲ್ಲಿ ಮನಸ್ಸು ಅಂಕುರಿಸೆ,
ಶಿವಭಕ್ತಿಸ್ವರೂಪವಾಗಿ ಉತ್ತರಭಾಗಮೇ ಶಕ್ತಿಯಾಯಿತ್ತು,
ದಕ್ಷಿಣಭಾಗಮೇ ಶಿವನಾಯಿತ್ತು,
ಶಕ್ತಿಯಿಂದ ಪೂರ್ವಭಾಗದಲ್ಲಿ ಕರ್ಮವುತ್ಪನ್ನವಾಯಿತ್ತು,
ಶಿವನಿಂದ ಪಶ್ಚಿಮಭಾಗದಲ್ಲಿ ಧರ್ಮವುತ್ಪನ್ನವಾಯಿತ್ತು,

ಆ ಕರ್ಮೇಂದ್ರಿಯಂಗಳೈದು ಶಕ್ತಿಮುಖ
ಧರ್ಮೇಂದ್ರಿಯಂಗಳೈದು ಶಿವಮುಖ
ಶಕ್ತಿಸ್ವರೂಪಮಾದ ಉತ್ತರಹಸ್ತವು ಕರ್ಮೇಂದ್ರಿಯಂಗಳಿಗೆ
ತಾನೇ ಕಾರಣಮಾಯಿತ್ತು.
ಶಿವಸ್ವರೂಪಮಾದ ದಕ್ಷಿಣಹಸ್ತವು ಧರ್ಮೇಂದ್ರಿಯಂಗಳಿಗೆ
ತಾನೇ ಕಾರಣಮಾಯಿತ್ತು.
ಧರ್ಮೇಂದ್ರಿಯಂಗಳಲ್ಲಿ ನಾದಹುಟ್ಟಿತ್ತು.
ಕರ್ಮೇಂದ್ರಿಯಂಗಳಿಂದ ಬಿಂದುಹುಟ್ಟಿತ್ತು.
ಬಿಂದುವೇ ಅಧೋಮುಖವಾಗಿ, ನಾದ ಊರ್ಧ್ವಮುಖವಾಗಿ,
ಮಧ್ಯವೊಗೆದ ಮನಸ್ಸಿನಲ್ಲಿ ಕಳೆಯೇ ಪ್ರಕಾಶಮಾಯಿತ್ತು.
ಶಿವಶಕ್ತಿಗಳಿಗೆ ಬುದ್ಧಿಯೇ ಕಾರಣಮಾದಂದದಿ
ನಾದಬಿಂದುಗಳಿಗೆ ಕಳೆಯೇ ಕಾರಣಮಾಯಿತ್ತು.
ಕರ್ಮಮುಖದಿಂ ಬಿಂದುವಂ ಸಾಧಿಸಲು, ಆನಂದಸಾಧ್ಯಮಾಯಿತ್ತು.
ಧರ್ಮಮುಖದಿಂ ನಾದವಂ ಸಾಧಿಸಲು, ಜ್ಞಾನಸಾಧ್ಯಮಾಯಿತ್ತು.
ಕಳಾಯುಕ್ತಮಾದ ಮನಸ್ಸಿನಲ್ಲಿ ನಿಜಮಾಯಿತ್ತು.
ಆನಂದಸ್ವರೂಪಮಾದ ಶಕ್ತಿ ಶಿವನೊಳಗೆ ಬೆರೆದು
ಸಾಕಾರವ ನಿರಾಕಾರವ ಮಾಡುತ್ತಿರಲು,
ಜ್ಞಾನಸ್ವರೂಪನಾದ ಶಿವನು ಶಕ್ತಿಯೊಳಗೆ ಬೆರೆದು
ನಿರಾಕಾರವ ಸಾಕಾರವ ಮಾಡುತ್ತಿರಲು,
ಆ ನಿರಾಕಾರಸ್ವರೂಪನಾದ ಶಿವನೇ
ಆನಂದಶಕ್ತಿಯ ಸಂಗದಿಂ ಬಿಂದುರೂಪಮಾದ ಲಿಂಗಮಾದನು.
ಸಾಕಾರಸ್ವರೂಪಮಾದ ಶಕ್ತಿ ಜ್ಞಾನರೂಪಮಾದ ಶಿವಸಂಗದಿಂ
ನಾದಾಕಾರಮಾದ ನಿರಾಕಾರಮಂತ್ರಶಕ್ತಿಯಾಯಿತ್ತು.
ಪ್ರಾಣಸ್ವರೂಪಮಾದ ಲಿಂಗಕ್ಕೆ
ಮಂತ್ರಸ್ವರೂಪಮಾದ ಶರೀರವೇ ಶಕ್ತಿಯಾಯಿತ್ತು.
ಲಿಂಗದಲ್ಲಿ ಹುಟ್ಟಿದ ಇಂದ್ರಿಯಸುಖ
ಶರೀರದಲ್ಲಿ ಹುಟ್ಟಿದ ವಿಷಯಸುಖಂಗಳು ಲಿಂಗದಲ್ಲಿ ಬೆರೆದು,
ಲಿಂಗಾಂಗಗಳೆರಡು ಮನಸ್ಸಿನಲ್ಲಿ ಶಂಕಿಸುತ್ತಿರಲು, ಲಿಂಗವೇ ಅಂಗವಾಯಿತ್ತು.
ಲಿಂಗಾಂಗಮೆಂಬ ಭೇದಮೆ ತನಗಸಾಧ್ಯಮಾದೊಡೆ,
ಮನಸ್ಸು ಲಿಂಗದಲ್ಲಿ ಲೀನಮಾಯಿತ್ತು.
ಅಂಗದ ಕರ್ಮವಳಿಯಿತ್ತು ಲಿಂಗದ ಜ್ಞಾನವು ಮೆರೆಯಿತ್ತು.
ಮನವಳಿಯೆ ನಿಜಮಾಯಿತ್ತು.
ಅಂಗದಲ್ಲಿರ್ಪ ಬಿಂದು ಲಿಂಗದಲ್ಲಿ ನಿಶ್ಚೈತನ್ಯಮಾಗಿ,
ಲಿಂಗದೊಳಗಿರ್ಪ ನಾದ ಅಂಗದಲ್ಲಿ ನಿಶ್ಶಬ್ದಮಾಗಿ,

ಮನದಲ್ಲಿರ್ಪ ಕಳೆ ಲಿಂಗಾಂಗಲಿಂಗಸಮರಸವಾಗಿ,
ನಿದ್ರೆಯಲ್ಲಿ ಸ್ವಪ್ನಂ, ಸ್ವಪ್ನದಲ್ಲಿರ್ಪ ನಿಜಂ,
ಜಾಗ್ರದಲ್ಲಿ ಮಿಥ್ಯವಾಗಿತೋರ್ಪಂತೆ,
ನಿನ್ನ ಲೀಲಾಜಡತ್ವದಲ್ಲಿ ತೋರ್ಪ ಸಕಲಪ್ರಪಂಚವೆಲ್ಲವು
ತನ್ನ ನಿಜದಲ್ಲಿ ಮಿಥ್ಯವಾಗಿ, ತಾನೇ ನಿಜವಾಗಿ,
ತನ್ನಿಂದನ್ಯವೇನೂ ಇಲ್ಲದೆ ಇರ್ಪುದೇ ಶಿವತತ್ವ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೬ ॥

೧೦೦೮

ಆದಿಯಲ್ಲಿ ಪ್ರಣವಸ್ವರೂಪವಾದ ಪರಮಾತ್ಮನು
ಅಕಾರ ಉಕಾರ ಮಕಾರವೆಂಬ ಅಕ್ಷರತ್ರಯಸ್ವರೂಪವಾಗಿ,
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ;
ಬಿಂದುವೇ ಶರೀರವಾಗಿ, ನಾದವೇ ಪ್ರಾಣವಾಗಿ, ಕಳೆಯೇ ಮನವಾಗಿ ;
ಬಿಂದುಮಯವಾದ ಶರೀರದಲ್ಲಿ ರೂಪು
ನಾದಮಯವಾದ ಪ್ರಾಣದಲ್ಲಿ ನಾಮ
ಕಳಾಮಯವಾದ ಮನದಲ್ಲಿ ಕ್ರಿಯೆ
ಇಂತು ನಾಮ–ರೂಪ–ಕ್ರಿಯಾಯುಕ್ತವಾದ ಪುರುಷನ
ಶರೀರದಲ್ಲಿ ಭಕ್ತಿ, ಪ್ರಾಣದಲ್ಲಿ ಜ್ಞಾನ, ಮನದಲ್ಲಿ ವೈರಾಗ್ಯ ನೆಲೆಗೊಂಡಲ್ಲಿ,
ಬಿಂದುವಿನಲ್ಲಿ ಆಚಾರಲಿಂಗಸಂಬಂಧವಾಯಿತ್ತು,
ಕಳೆಯಲ್ಲಿ ಶಿವಲಿಂಗಸಂಬಂಧವಾಯಿತ್ತು,
ಆಚಾರದಿಂದ ಪೂತವಾದ ಶರೀರವೇ ಜಂಗಮಲಿಂಗವಾಯಿತ್ತು.
ಗುರುಮಂತ್ರದಿಂದ ಪೂತವಾದ ಪ್ರಾಣವೇ ಪ್ರಸಾದಲಿಂಗವಾಯಿತ್ತು,
ಶಿವಧ್ಯಾನದಿಂದ ಪೂತವಾದ ಪ್ರಾಣವೇ ಪ್ರಸಾದಲಿಂಗವಾಯಿತ್ತು.
ಬಿಂದುವಿನಲ್ಲಿ ಕ್ರಿಯಾಶಕ್ತಿ ನೆಲೆಗೊಂಡಲ್ಲಿ,
ಆ ಬಿಂದುವೇ ಆದಿಶಕ್ತಿಮಯವಾಯಿತ್ತು,
ನಾದದಲ್ಲಿ ಮಂತ್ರಶಕ್ತಿ ನೆಲೆಗೊಂಡಲ್ಲಿ,
ಆ ನಾದವೇ ಪರಾಶಕ್ತಿಯಾಯಿತ್ತು,
ಕಳೆಯಲ್ಲಿ ಇಚ್ಛಾಶಕ್ತಿ ನೆಲೆಗೊಂಡಲ್ಲಿ,
ಆ ಕಳೆಯೇ ಜ್ಞಾನಶಕ್ತಿಯಾಯಿತ್ತು,
ಇಂತು ಶರೀರವೋ ಜಂಗಮದಿಂದ ಪವಿತ್ರವಾಗಿ,
ಪ್ರಾಣವು ಗುರುವಿನಿಂದ ಪವಿತ್ರವಾಗಿ,
ಮನವು ಲಿಂಗದಿಂದ ಪರಿಶುದ್ಧವಾಗಿರ್ದ ಶಿವಶರಣನು
ಇದ್ದುದೇ ಕೈಲಾಸ, ಅನುಭವಿಸಿದುದೆಲ್ಲಾ ಲಿಂಗಭೋಗ, ಐಕ್ಯವೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭ ॥

೧೧೦೯

ಬೀಜದೊಳಗಿಹ ವೃಕ್ಷಫಲವ ಸವಿಯಬಹುದೆ ?
ಬಿಂದುವಿನಲ್ಲಿರ್ಪ ಸತಿಯಸಂಗಭೋಗವು ಸಂಘಟಿಸುವುದೆ ?
ಮಳೆವನಿಯೊಳಿರ್ಪ ಹುರುಮಂಜಿಮುತ್ತುಗಳಂ
ಸರಗೊಳಿಸಿ ಕೊರಳೊಳು ಧರಿಸಬಹುದೆ ?
ಹಾಲೊಳಗಿರ್ಪ ತುಪ್ಪವು ಅರಸಿದರೆ ಸಿಕ್ಕುವುದೆ ?
ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ ?
ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೆ ?
ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನಮಂ ಮಾಡಿಕೊಂಡು,
ತದನುಭವಸುಖದೊಳೋಲಾಡುವುದು
ಅತಿಚತುರನಾದ ಶಿವಶರಣಂಗಲ್ಲದುಳಿದರ್ಗುಂಟೆ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮ ॥

೧೧೧೦

ಹಗಲಿದ್ದಲ್ಲಿ ಕತ್ತಲೆಯಿರ್ಪುದೆ ?
ಕತ್ತಲೆಯಿದ್ದಲ್ಲಿ ಹಗಲಿರ್ಪುದೆ ?
ಜಾಗ್ರವಿದ್ದಲ್ಲಿ ಸ್ವಪ್ನವಿರ್ಪುದೆ ?
ದುಃಖವಿದ್ದಲ್ಲಿ ಆನಂದವಿರ್ಪುದೆ ?
ನೀನು ಪ್ರಸನ್ನಮಾದಲ್ಲಿ ನಾನಿರ್ಪೆನೆ ?
ನಾನು ಪ್ರಸನ್ನಮಾದಲ್ಲಿ ನೀನಿರ್ಪೆಯಾ ?
ನೀನಿದ್ದಲ್ಲಿ ನಾನಿಲ್ಲ ನಾನಿದ್ದಲ್ಲಿ ನೀನಿಲ್ಲ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೯ ॥

೧೧೧೧

ಪರಮಾತ್ಮನು ಸ್ವಲೀಲಾನಿಮಿತ್ತ ಸಾಕಾರಸ್ವರೂಪನಾಗಿ,
ಪಂಚವಕ್ತ್ರ ದಶಭುಜಂಗಳನು ಧರಿಸಿ,
ತನ್ನ ನಿಜಧರ್ಮವನೆ ತನಗಾಧಾರಮಪ್ಪ ವಾಹನಮಂ ಮಾಡಿಕೊಂಡು,
ಪಂಚಮುಖಂಗಳಲ್ಲಿ ಪಂಚಭೂತಂಗಳಂ ಸೃಷ್ಟಿಸಿ,
ಅವನೇ ಬಂದು ಬ್ರಹ್ಮಾಂಡವಂ ಮಾಡಿಕೊಂಡು,
ತನ್ನ ಲೀಲಾಶಕ್ತಿಯ ಸಂಗದಿಂದ ಅನಂತಕೋಟಿ ಜೀವಂಗಳಂ ಸೃಷ್ಟಿಸಿ,
ತನ್ನ ಗೂಢಮಪ್ಪ ಮನೋಭಂಡಾರವಂ ತೆಗೆದು,
ಆ ಜೀವಂಗಳಿಗದನೇ ಜೀವನವಂ ಮಾಡಿ,
ಈ ಬ್ರಹ್ಮಾಂಡವೆಂಬ ತನ್ನ ಪಟ್ಟಣಕ್ಕೂ ಈ ಜೀವಜಾಲಕ್ಕೂ
ನಿಜಮನೋಭಂಡಾರವನೆ ಆಧಾರಮಂ ಮಾಡಿ,
ತಾನೇ ಸೇವ್ಯನಾಗಿ, ಜೀವಂಗಳೇ ಸೇವಕರಾಗಿ ಕ್ರೀಡಿಸುತ್ತಿರಲಾ

ಪರಮಾತ್ಮನಿಂದ ಸಲಿಗೆವಡೆದ ಕೆಲವು ಜೀವಂಗಳು ಅಹಂಕರಿಸಿ,
ಆ ಪರಶಿವನಲ್ಲಿರ್ಪ ಮನೋಭಂಡಾರದಲ್ಲಿ
ತಮ್ಮ ಶಕ್ತಿಗೆ ತಕ್ಕಷ್ಟು ಸತ್ಕರಿಸಿಕೊಂಡು,
ತದ್ಪಂಚನಾಮನದಿಂ ಪಂಚಭೂತಂಗಳನ್ನು ಸಾಧಿಸಿ,
ಅದರಿಂದ ಒಂದು ಪಿಂಡಾಂಡವೆಂಬ ಪಟ್ಟಣಮಂ ಮಾಡಿಕೊಂಡು,
ಇಂದ್ರಿಯಂಗಳೆಂಬ ಕೊತ್ತಲಂಗಳಂ ನಿರ್ಮಿಸಿ,
ನವದ್ವಾರಂಗಳೆಂಬ ಹುಲಿಮುಖಂಗಳಿಂದ
ಅಜ್ಞಾನವೆಂಬತಿ ಘಾತಮಾದಗಳಂ ಕಲ್ಪಿಸಿ, ಆಶೆಯೆಂಬಾಳ್ವೇರಿಯಂ ಸೃಜಿಸಿ,
ತನ್ಮಧ್ಯದಲ್ಲಿ ಅಂತರಂಗವೆಂಬುದೊಂದು ಅರಮನೆಯಂ ಕಟ್ಟಿ,
ಅಲ್ಲಿದ್ದುಕೊಂಡು, ಜೀವನು ತನ್ನ ಮನೋವಂಚನಾಭಂಡಾರವಂ ವೆಚ್ಚಿಸುತ್ತಾ,
ವಿಷಯಂಗಳೆಂಬ ಮನ್ನೆಯರಂ ಸಂಪಾದಿಸಿ,
ನಿಜಪುರದ್ವಾರಂಗಳಲ್ಲಿ ಕಾಹನಿಟ್ಟು,
ಅಂತಃಕರಣಚತುಷ್ಟಯವೆಂಬ ಶಿರಃಪ್ರಧಾನರಂ ಸಂಪಾದಿಸಿ,
ತನ್ಮಂತ್ರಾಲೋಚನೆಯಿಂ ಸಾಮ, ಭೇದ, ದಾನ, ದಂಡವೆಂಬ
ಕರಿ, ತುರಗ, ರಥ, ಪದಾತಿಗಳಂ ಕೂಡಲಿಟ್ಟು,
ಕರ್ಮವೆಂಬ ಸೇನಾನಿಗೆ ಪಟ್ಟಮಂ ಕಟ್ಟಿ,
ತನ್ನಲ್ಲಿರ್ಪ ನಾನಾ ದಳಂಗಳಂ ಸೇನಾಪತಿಯ ವಶಮಂ ಮಾಡಿ,
ನಾದ ಬಿಂದು ಕಳೆಗಳೆಂಬ ಶಕ್ತಿಗಳಂ ಪರಿಣಯಮಾಗಿ,
ಜಾಗ್ರತ್ಸ್ವಪ್ನಸುಷುಪ್ತಿಗಳೆಂಬರಮನೆಗಳೊಳಗೆ ಕಳೆಯ ನಾದದಲ್ಲಿ ಕೆಲವುತ್ತಂ,
ಬಿಂದುವಿನಲ್ಲಿ ಫಲಿಸಿ ಫಲಸುಖಂಗಳನನುಭವಿಸುತಿರ್ಪ
ಜೀವನೆಂಬರಸಿನನುಮತವಿಡಿದು,
ಕರ್ಮಸೇನಾನಿಯು ಸಕಲದಳಂಗಳೊಳಗೆ ಕೂಡಿ,
ವಿಷಯಂಗಳೆಂಬ ಮನ್ನೆಯರಂ ಮುಂದುಮಾಡಿಕೊಂಡು,
ಪ್ರಪಂಚವೆಂಬ ರಾಜ್ಯವಂ ಸಾಧಿಸಿ,
ತದ್ರಾಜ್ಯದಲ್ಲಿ ಬಂದ ಪುತ್ರ ಮಿತ್ರ ಕಳತ್ರ ಧನ ಧಾನ್ಯ
ವಸ್ತುವಾಹನಾಲಂಕಾರಾದಿಗಳನ್ನು
ಕಾಯಪುರಕ್ಕೆ ತಂದು, ಜೀವನೆಂಬರಸಿಗೆ ಒಪ್ಪಯಿಸುತ್ತಿರಲು,
ಜೀವನು ಸಂತೋಷಿಸಿ, ತಾನು ಸಂಪಾದಿಸಿದ ಸಕಲದ್ರವ್ಯವನ್ನು
ತನ್ನ ಮೂಲಮನೋಭಂಡಾರದಲ್ಲಿ ಬೆರಸಿ, ಬಚ್ಚಿಟ್ಟು, ಅಹಂಕರಿಸಿ,
ಸಕಲಕ್ಕೂ ತಾನೇ ಕರ್ತೃವೆಂದು ಬೆರತು, ಪರಮಾತ್ಮನಂ ಮರೆತು,
ಸೇವ್ಯಸೇವಕರೆಂಬ ವಿವೇಕವರತು, ಅಧರ್ಮ ವಾಹನಾರೂಢನಾಗಿ,
ತನ್ನ ತಾನರಿಯದೆ, ಕಾಮವಶನಾಗಿ ಸಂಚರಿಸುತಿರ್ಪ
ಈ ಜೀವನ ಅಹಂಕಾರಮಂ ಸಂಹರಿಸುವ ನಿಮಿತ್ತವಾಗಿ
ಪರಮಾತ್ಮನು ಕಾಲನೆಂಬ ಸುಬೇದಾರನಂ ಸೃಷ್ಟಿಸಿ,

ವ್ಯಾಧಿಪೀಡನಗಳೆಂಬ ಬಲಂಗಳಂ ಕೂಡಲಿಟ್ಟು,
ದುಃಖವೆಂಬ ಸಾಮಗ್ರಿಯಂ ಒದಗಿಸಿಕೊಟ್ಟು,
ಕ್ರೋಧವೆಂದು ಮನೆಯಾಳಿಂಗೆ ತಮೋಗುಣಂಗಳೆಂಬ
ಬಲುಗಾರರಂ ಕೂಡಿಕೊಟ್ಟು,
ಈ ಕಾಯಪುರಮಂ ಸಾಧಿಸೆಂದು ಕಳುಹಲು,
ಆ ಸದಾಶಿವನಾಜ್ಞಾಶಕ್ತಿಯಿಂದ ಕಾಲಸುಭೇದಾರನು
ಸಕಲ ಬಲಸಮೇತವಾಗಿ ಬಂದು,
ಕಾಯಪುರಕ್ಕೆ ಸಲುವ ಪ್ರಪಂಚರಾಜ್ಯವಂ ನೆರೆಸೂರೆಮಾಡಲು,
ಕರಣಂಗಳೆಂಬ ಪ್ರಜೆಗಳು ಕೆಟ್ಟೋಡಿಬಂದು,
ಜೀವನೆಂಬ ಅರಸಿಗೆ ಮೊರೆಯಿಡಲು, ಅದಂ ಕೇಳಿ,
ಆಗ್ರಹಪಟ್ಟು, ಕರ್ಮಸೇನಾನಿಗೆ ನಿರೂಪಿಸಲು,
ತತ್ಸೇನಾನಿಯು ಕಾಯಪುರದಲ್ಲಿರ್ಪ ಸಕಲದಳ ಸಮೇತವಾಗಿ ಬಂದು
ಕಾಲಸುಬೇದಾರನೊಡನೆ ಯುದ್ಧವಂ ಮಾಡಿ, ಜಯಿಸಲಾರದೆ ವಿಮುಖನಾಗಿ
ಉಪಭೋಗಾದಿ ಸಕಲ ಸುಖಂಗಳಂ ಕೋಳುಕೊಟ್ಟು
ಬಂದು ಕೋಟೆಯಂ ಹೊಗಲು,
ಜೀವನು ಪಶ್ಚಾತ್ತಾಪದಿಂ ಸಂಶಯಯುಕ್ತನಾಗಿ ಕಳವಳಿಸುತ್ತಿರಲು,
ಆ ಕಾಲಸುಬೇದಾರನು ಕಾಯಪುರಮಂ ಒತ್ತರಿಸಿ ಮುತ್ತಿಗೆಯಂ ಹಾಕಿ,
ವಿಷಯಮನ್ನೆಯರಂ ಹಸಗೆಡಿಸಿ ಕೊಂದು,
ಕರ್ಮವಂ ನಿರ್ಮೂಲವಂ ಮಾಡಿ,
ಅಂತರಂಗ ಮನೆಯಂ ಕೊಳ್ಳೆಯವಂ ಮಾಡಿ,
ನಾದಬಿಂದುಕಳಾಶಕ್ತಿಯಂ ಸೆರೆವಿಡಿದು,
ಕಾಯಪುರಮಂ ಕಟ್ಟಿಕೊಳ್ಳಲು, ಜೀವನು ಭಯಭ್ರಾಂತನಾಗಿ,
ಆ ಮೂಲಮನೋಭಂಡಾರಮಾತ್ರಮಂ ಕೊಂಡು,
ತತ್ಪುರಮಂ ಬಿಟ್ಟು, ಅನೇಕ ಯಾತನೆಪಟ್ಟು ಓಡಿ,
ಮರಳಿಮರಳಿ ಜೀವನು ಪುರಂಗಳಂ ಸಂಪಾದಿಸಲು,
ತತ್ಸಂಪಾದಿತಪುರಂಗಳಂ ಕಾಲನು ಸಾಧಿಸುತ್ತಿರಲು,
ಜೀವನು ಅಹಂಕಾರವಳಿದು, ಆಸ್ಪದವಿಲ್ಲದೆ,
ತನಗೆ ಕರ್ತೃವಾರೆಂಬುದಂ ಕಾಣದೆ,
ವಿಚಾರಪಟ್ಟು, ದುಃಖಿಸುತಿರ್ಪ ಜೀವನಿಗೆ
ಕರುಣದಿಂ ಪರಮಾತ್ಮನು ಜ್ಞಾನದೃಷ್ಟಿಯಂ ಕೊಡಲು,
ತದ್ಬಲದಿಂ ಶಿವನೇ ಕರ್ತೃ ತಾನೇ ಭೃತ್ಯನೆಂಬುದಂ ತಿಳಿದು,
ಶಿವಧ್ಯಾನಪರಾಯಣನಾಗಿ,
ಶಿವಧಾರಣ ಧರ್ಮಪದಮಂ ಪಿಡಿದು ಪಲುಗುತ್ತಿರಲು,
ತದ್ಧರ್ಮಮೇ ಗುರುರೂಪವಾಗಿ,

ತನ್ನಲ್ಲಿರ್ಪ ಶಿವನಂ ಜೀವಂಗೆ ತೋರಿಸಲು,
ಜೀವಂ ಹಿಗ್ಗಿ, ತಾನು ಸಂಪಾದಿಸಿದ ಪುರವನೆ ಶಿವಪುರಮಂ ಮಾಡಿ,
ಧರ್ಮಾದಿ ಸಕಲವಿಷಯಬಲಂಗಳಂ ಶಿವನ ವಶಮಂ ಮಾಡಿ,
ಆ ಪಟ್ಟಣದೊಳಯಿಂಕೆ ಬಿಜಯಂಗೈಸಿಕೊಂಡು ಹೋಗಿ,
ಅಂತರಂಗದ ಅರಮನೆಯೊಳಗೆ ಜ್ಞಾನಸಿಂಹಾಸನದ ಮೇಲೆ ಕುಳ್ಳಿರಿಸಿ,
ಪಟ್ಟಮಂ ಕಟ್ಟಿ, ತನ್ನ ಸರ್ವಸ್ವಮಂ ಶಿವನಿಗೆ ಸಮರ್ಪಿಸಿ,
ತಾನು ಸತ್ಕರಿಸಿಕೊಂಡುಬಂದ ಮನೋಭಂಡಾರಮಂ ಶಿವನಡಿಯಂ ಸೇರಿಸಲು,
ಸದಾಶಿವನು ಪ್ರಸನ್ನಮುಖನಾಗಿ, ದಯೆಯಿಂ ಪರಿಗ್ರಹಿಸಿ,
ಜೀವನನು ಸಜ್ಜೀವನನಮಾಡಿ ಕೂಡಿಕೊಂಡುದೆ ಲಿಂಗೈಕ್ಯ ಕಾಣಾ ।
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೧ ॥

೧೧೧೨

ಲಿಂಗವನಾಚರಿಸುವ ಅಂಗವೇ ಸ್ಥೂಲದಲ್ಲಿ ಗುರುಲಿಂಗವಾಗಿ,
ಲಿಂಗದಲ್ಲಿ ಸುಖಿಸುವ ಅಂಗವೇ ಸೂಕ್ಷ್ಮದಲ್ಲಿ ಜಂಗಮವಾಗಿ,
ಲಿಂಗವಂ ಪ್ರಸನ್ನಮಾಡಿಕೊಂಬ ಅಂಗವೇ ಕಾರಣದಲ್ಲಿ ಮಹಾಲಿಂಗಮಾಗಿ,
ಲಿಂಗದಲ್ಲಿ ಕ್ರಿಯಾಶಕ್ತಿ ಕೂಡಲು, ಅಂಗದಲ್ಲಿ ಮಂತ್ರಶಕ್ತಿ ಕೂಡಿತ್ತು.
ಲಿಂಗದಲ್ಲಿ ಇಚ್ಛಾಶಕ್ತಿ ನೆರೆಯಲು, ಅಂಗದಲ್ಲಿ ಆದಿಶಕ್ತಿ ನೆರೆಯಿತ್ತು.
ಲಿಂಗದಲ್ಲಿ ಪರಾಶಕ್ತಿ ಬೆರೆಯಲು, ಅಂಗದಲ್ಲಿ ಜ್ಞಾನಶಕ್ತಿ ಬೆರೆಯಿತ್ತು.
ಸ್ಥೂಲದಲ್ಲಿ ಅಂಗಲಿಂಗವೇಕಮಾಗಲು, ಮಂತ್ರಕ್ರಿಯೆಗಳೊಂದಾಯಿತ್ತು.
ಸೂಕ್ಷ್ಮದಲ್ಲಿ ಲಿಂಗಾಂಗವೇಕವಾಗಲು, ವಿವಿಧೇಚ್ಛೆಯೊಂದಾಯಿತ್ತು
ಕಾರಣದಲ್ಲಿ ಲಿಂಗಾಂಗವೇಕವಾಗಲು, ಪರಜ್ಞಾನವೇಕವಾಯಿತ್ತು
ಲಿಂಗಾಚಾರವೇ ಇಷ್ಟವಾಗಿ, ಲಿಂಗಸುಖವೇ ಪ್ರಾಣವಾಗಿ,
ಲಿಂಗಪ್ರಸಾದವೇ ಭಾವವಾಗಿ, ಪ್ರಸಾದದಲ್ಲಿ ಮನಪರವಶಮಾಗಿ,
ಶಿವಸುಖದಲ್ಲಿ ಪ್ರಾಣಪರವಶಮಾಗಿ,
ಶಿವಾಚಾರದಲ್ಲಿ ಲಿಂಗಪರವಶವಾದುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ ॥ ೧೧ ॥

## ಎರಡನೆಯ ಅಧ್ಯಾಯ

೧೧೧೩

ಗುರುವು ಮನದಲ್ಲಿ ಮಂತ್ರವನ್ನೂ, ತನುವಿನಲ್ಲಿ ಲಿಂಗವನ್ನೂ ಸ್ಥಾಪಿಸಿ,
ಕರುಣರಸವನೆರೆಯಲಾಮಂತ್ರವು ಜಿಹ್ವೆಯಲ್ಲಂಕುರಿಸಿ,
ಶರೀರವನಾವರಿಸಲಾ ಶರೀರದ ಭೂತತ್ವವಳಿದು,
ಮಂತ್ರವೇ ಶರೀರವಾಯಿತ್ತು,
ಲಿಂಗವು ನೇತ್ರದಲ್ಲಂಕುರಿಸಿ, ಮನಮುನಾವರಿಸಿ,

ಮನದ ಅಹಂಕಾರವಂ ತೊಲಗಿಸಿ, ಆ ಮನವೇ ಲಿಂಗವಾಯಿತ್ತು.
ಮಂತ್ರವೇ ತನುವಾಗಿ ಮನವೇ ಲಿಂಗವಾದಲ್ಲಿ,
ನಾಮಮಧ್ಯದಲ್ಲಿ ಪುರುಷನಿರ್ಪಂತೆ
ಮಂತ್ರಮಧ್ಯದಲ್ಲಿ ಲಿಂಗವಿರ್ಪುದು ಸಹಜಮಾಯಿತ್ತು.
ತನುಮನೋಮಧ್ಯದಲ್ಲಿರ್ಪ ಪ್ರಾಣಲಿಂಗವು ಮಂತ್ರದಲ್ಲಿ ಲೀನವಾಯಿತ್ತು.
ಮಂತ್ರದಲ್ಲಿ ಜಾಗ್ರ ಲಿಂಗದಲ್ಲಿ ಸುಷುಪ್ತಿ ನೆಲೆಗೊಂಡು,
ಪ್ರಪಂಚವೆಲ್ಲಾ ಸ್ವಪ್ನಸ್ವರೂಪವಾಗಿ,
ಮಂತ್ರದಲ್ಲಿ ಜ್ಞಾನವು, ಲಿಂಗದಲ್ಲಿ ಆನಂದವು, ಈ ಎರಡರ ಸಂಗವೇ ನಿಜವು,
ನಿಜವೇ ತಾನಾಗಿ, ತನ್ನಿಂದನ್ಯವೇನೂ ಇಲ್ಲದುದೆ
ಕೇವಲ ಕೈವಲ್ಯವೆನಿಸುವುದು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೨ ||

೧೧೧೪

ಇಂದ್ರಿಯಸ್ವರೂಪವಾದ ತನುವೇ ಜಾಗ್ರವು,
ವಿಷಯಸ್ವರೂಪವಾದ ಮನವೇ ಸ್ವಪ್ನವು,
ಅನುಭವಸ್ವರೂಪವಾದ ಜೀವನಲ್ಲಿ ಸುಷುಪ್ತಿಯು.
ಪಾಪವೆಂಬ ಪಂಕದಲ್ಲಿ ಹುಟ್ಟಿ ಆಸೆಯೆಂಬ ಬಿಸದೊಳಗೆ ಕೂಡಿ
ಅಷ್ಟಭೂತಂಗಳೆಂಬಷ್ಟದಳಂಗಳಿಂ ಚಿತ್ತವೆಂಬ ಮೇರುವಿನಿಂ
ಯುಕುತವಾಗಿರ್ಪ ಹೃತ್ಕಮಲದಲ್ಲಿ ಜೀವನು ಸುಷುಪ್ತಿಯಂ ಹೊಂದಿ,
ತನುವಿನ ಜಾಗ್ರವು ಮನದ ಸ್ವಪ್ನವಲ್ಲದೆ,
ತನ್ನ ನಿಜವೆಲ್ಲವೂ ಸುಷುಪ್ತಿಯಂ ಹೊಂದಿ ತನು ಸೋಂಕಿದಲ್ಲಿ ತಿಳುವುತ್ತಂ,
ಮರಳಿ ನಿದ್ರಾರೂಪದಿಂ ಮರವುತ್ತಲಿರ್ಪ ಜೀವನ ಪರಿಯ ನೋಡಾ.
ಇಂತು ಭವಭವಂಗಳಲ್ಲಿ ತೊಳಲುವ ಜೀವಂಗೆ ಗುರುಸಂಸ್ಕಾರದಿ
ಲಿಂಗವೆಂಬ ಪೂರ್ವಾಚಲದಲ್ಲಿ ಜ್ಞಾನಾರ್ಕೋದಯವಾಗಿ,
ಭಾವವೆಂಬ ಮೋಹ ಬಯಲಲ್ಲಿ ಗಮಿಸುತ್ತಿರಲು,
ಹೃತ್ಕಮಲಂ ವಿಕಸಿತವಾಗಿ ಆನಂದಮಕರಂದದೊಡನೆ ಕೂಡಿ,
ಗುರುಮಂತ್ರಮಲಯಾನಿಲನು ನಿಜವಾಸನೆವಿಡಿದು ಬೀಸುತ್ತಿರಲು,
ಜೀವ ಸುಷುಪ್ತಿಭ್ರಾಂತಿಯಳಿದು, ಪರಮಜಾಗ್ರತ್ಸ್ವರೂಪನಪ್ಪ
ಪರಮಾತ್ಮನಾಗಿ,
ತನುವಿನ ಜಾಗ್ರ, ಮನದ ಸ್ವಪ್ನಗಳಳಿದು,
ಪರಮನ ಮಧ್ಯಾವಸ್ಥೆಯಲ್ಲಿ ಲೀನವಾಗಲು,
ಅಷ್ಟಭೂತಂಗಳುಂ ಅಷ್ಟಾವರಣಂಗಳಾದವದೆಂತೆಂದೊಡೆ :
ಪೃಥ್ವಿಯೇ ಭಸ್ಮವು, ಜಲವೇ ಪಾದೋದಕವು,
ಅಗ್ನಿಯೇ ರುದ್ರಾಕ್ಷವು, ವಾಯುವೇ ಪ್ರಸಾದವು,

ಆಕಾಶವೇ ಮಂತ್ರವು, ಅಹಂಕಾರವೇ ಲಿಂಗವು,
ಮಹವೇ ಗುರುವು, ಚಿತ್ತವೇ ಜಂಗಮವು,
ನಿಜವು ಪ್ರಸನ್ನಮಾಗಿ ಮನವೇ ವೃಷಭೇಶ್ವರನಾಗಿ
ತನುವೇ ಕೈಲಾಸಪರ್ವತಮಾಗಿ ಸಕಲ ಗುಣಂಗಳೇ ಶಿವಗಣಂಗಳಾಗಿ;
ಸಕಲಜನ್ಮಕರ್ಮಪ್ರಪಂಚಪರದೊಳಡಗಿತ್ತೆಂತೆಂದೊಡೆ
ಕಾಲದಲ್ಲಿ ಬ್ರಹ್ಮಾಂಡಂಗಳಡಗಿ ರೂಪುದೋರದಿರ್ಪಂತೆ,
ಚಿದಾಕಾಶದಲ್ಲಿ ಲೀನಮಾಗೆ, ತಾನೇ ಶಿವನಾಗಿ,
ಅಭೇದ ಬ್ರಹ್ಮವಾಯಿತ್ತೆಂತೆಂದೊಡೆ :
ವಸ್ತುಸ್ವರೂಪಮಾದ ಸುವರ್ಣವ ಕಾಸಿ, ಕರಗಿಸಿ ; ಉಳಿದ ನಿಜಮಂ ತೆಗೆದು,
ಬೆಳುಗಾರ ಮಿಕ್ಕಿ, ಮಹದೊಳಗೆ ಬೆರಸಿ, ಎರಡನ್ನೂ ಒಂದುಮಾಡಿ,
ತಾನದರೊಳಗೆ ಬೆರೆದು ಭೇದದೋರದಿರ್ಪಂತೆ,
ಮನಸ್ಸು ಜೀವ ಪರಮರನೊಂದುಮಾಡಿ, ತಾನದರೊಳಗೆ ಬೆರೆದು,
ಭೇದದೋರದಿರ್ಪುದೆ ಲಿಂಗೈಕ್ಯ ಕಾಣಾ.
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೩ ॥

೧೦೧೪

ರುಚಿಯಲ್ಲಿ ಸಂಹಾರ, ಸ್ಪರುಶನದಲ್ಲಿ ಸೃಷ್ಟಿ, ರೂಪಿನಲ್ಲಿ ಸ್ಥಿತಿ,
ಇಂತು ಸಂಹಾರಕ್ಕೆ ನಾದವೇ ಮೂಲವು,
ಸೃಷ್ಟಿಗೆ ಬಿಂದುವೇ ಮೂಲವು, ಸ್ಥಿತಿಗೆ ಕಳೆಯೇ ಮೂಲವು.
ಸೃಷ್ಟಿಗೆ ಪೃಥ್ವಿಯೇ ಆಧಾರಮಾಯಿತ್ತು;
ಸ್ಥಿತಿಗೆ ಆತ್ಮನೇ ಆಧಾರಮಾಯಿತ್ತು.
ಸೃಷ್ಟಿಮೂಲಮಪ್ಪ ಸ್ಪರುಶನದಲ್ಲಿ ಆನಂದವೂ
ಸಂಹಾರಮೂಲಮಪ್ಪ ರುಚಿಯಲ್ಲಿ ಜ್ಞಾನವೂ
ಸ್ಥಿತಿಮೂಲಮಪ್ಪ ರೂಪಿನಲ್ಲಿ ನಿಜವೂ ನೆಲೆಗೊಂಡು,
ಸೃಷ್ಟಿಯೆ ಸ್ಥಿತಿಹೇತುವಾಗಿ, ಸ್ಥಿತಿಯೇ ಸಂಹಾರಹೇತುವಾಗಿ,
ಸಂಹಾರವೇ ಸೃಷ್ಟಿಹೇತುವಾಗಿ,
ರುಚಿಗೆ ಅಗ್ನಿಯೂ, ಸ್ಪರುಶನಕ್ಕೆ ಜಲವೂ, ರೂಪಿಗೆ ಪೃಥ್ವಿಯೂ ಕಾರಣಮಾಗಿ,
ಇಂತು ಅವಸ್ಥ್ರಮಾಗಿ ತಿರುಗುತ್ತಿರ್ಪ ಪರಶಿವನಾಜ್ಞಾಚಕ್ರವನ್ನು
ಗುರುಮುಖದಿಂದ ವಿಚಾರಿಸಿ ತಿಳಿದ ಮಹಾಪುರುಷನು
ಈ ಚಕ್ರಕ್ಕೆ ತಗಲಿರ್ಪ ಮನವೆಂಬ ಕೀಲನ್ನು
ಗುರುಪಿತ್ತಲಿಂಗವೆಂಬ ಪರಶುವಿನಿಂ ಭಾವವೆಂಬ ಹಸ್ತದಲ್ಲಿ ಪಿಡಿದು ಖಂಡಿಸಲು,
ಆ ಚಕ್ರದ ಚಲನೆ ನಿಂದಿತ್ತು,
ಸ್ಪರ್ಶನದಲ್ಲಿರ್ಪ ಆನಂದರಸಮಂಗದಲ್ಲಿ ಕೂಡಿ,
ಸಂಹಾರಾಗ್ನಿಯಂ ನಂದಿಸಿತ್ತು.

ಆ ಸಂಹಾರದೊಳಗಿರ್ಪ ಜ್ಞಾನಾಗ್ನಿಯು ಲಿಂಗದೊಳಗೆ ಬೆರದು,
ಸೃಷ್ಟಿಸ್ಥಿತಿರೂಪವಾದ ಪೃಥ್ವಿ ಅಪ್ಪುಗಳಂ ಸಂಹರಿಸಿತ್ತು,
ಸ್ಥಿತಿಯಲ್ಲಿರ್ಪ ನಿಜಲಿಂಗದಲ್ಲಿ ನಿಜವಾಯಿತ್ತು.
ಇಂತು ಆ ಚಕ್ರವಳಿಯೆ, ಆತ್ಮಭ್ರಮೆಯಳಿದು,
ಆತ್ಮವೇ ಲಿಂಗವಾಗಿ, ಆಕಾಶವೇ ಅಂಗವಾಗಿ,
ವಾಯುವೇ ಆ ಎರಡರ ಸಂಗದಲ್ಲಿ ಬೆರದು
ಭೇದದೋರದಿರ್ಪುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೪ ||

೧೦೧೬

ಪ್ರಜೆಗಳ ಅಲೆಯ ದೊರೆಯು ಒರ್ಚುವನಲ್ಲದೆ,
ದೊರೆಯ ಅಲೆಯ ಪ್ರಜೆಗಳೊರ್ಚುವರೇನಯ್ಯಾ ?
ಮಕ್ಕಳಲೆಯ ತಾಯಿಯೊರ್ಚುವಳಲ್ಲದೆ,
ತಾಯ ಅಲೆಯ ಮಕ್ಕಳೊರ್ಚುವರೇನಯ್ಯಾ ?
ನನ್ನಲೆಯ ನೀನೊರ್ಚಬೇಕಲ್ಲದೆ,
ನಿನ್ನಲೆಯ ನಾನೊರ್ಚುವುದೇನಯ್ಯಾ ?
ತಮದೊಳಗಣ ಜಾಗ್ರವು ನೀನು,
ಜಾಗ್ರದೊಳಗಣ ತಮವು ನಾನು.
ನನಗೆ ನೀನು ಬಾಹ್ಯನೂ ನಿನಗೆ ನಾನು ಬಾಹ್ಯನೂ ಆಗಿರ್ದೊಡೆ,
ನಾನೆಂತು ಸುಖಿಸುವೆ ? ನೀನೆಂತು ಪರಿಗ್ರಹಿಸುವೆ ?
ನನ್ನೊಳಗೆ ನೀನೂ ನಿನ್ನೊಳಗೆ ನಾನೂ ಇರ್ದಲ್ಲದೆ,
ನಿನ್ನ ನನ್ನ ಸಂಬಂಧಸಕೀಲವು ಸಂಘಟಿಸುವುದೇ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ ? || ೧೫ ||

೧೦೧೭

ಪೃಥ್ವಿಯಲ್ಲಿ ಜನನವೂ, ಆಕಾಶದಲ್ಲಿ ಮರಣವೂ,
ಧರೆಯಲ್ಲಿ ಸಂತೋಷವೂ, ಗಗನದಲ್ಲಿ ದುಃಖವೂ,
ಇಳೆಯಲ್ಲಿ ಅಹಂಕಾರವೂ, ಬಯಲಲ್ಲಿ ಜ್ಞಾನವೂ,
ಬಯಲಲ್ಲಿ ಧರ್ಮವೂ, ಧರಣಿಯಲ್ಲಿ ಕರ್ಮವೂ,
ಆಕಾಶದಲ್ಲಿ ಭಕ್ತಿಯೂ, ಧರಣಿಯಲ್ಲಿ ಶಕ್ತಿಯೂ,
ಭೂಮಿಯಲ್ಲಿ ಜಾಗ್ರವೂ, ಆಕಾಶದಲ್ಲಿ ಸುಷುಪ್ತಿಯೂ,
ಅಲ್ಲಿ ನೀನೂ ಇಲ್ಲಿ ನಾನೂ ಇರಲಾಗಿ,
ನೀನೆಂತು ನನಗೊಲಿದೆ ? ನಾನೆಂತು ನಿನ್ನ ಕೂಡುವೆ ?
ಬಯಲಲ್ಲಿರ್ಪ ಗುಣಗಳಂ ನಾನು ಕೊಂಡು,
ಪೃಥ್ವಿಯಲ್ಲಿರ್ಪ ಗುಣಂಗಳಂ ನಿನಗೆ ಕೊಟ್ಟು,

ಅಲ್ಲಿ ಬಂದ ನಿರ್ವಾಣಸುಖಲಾಭವನ್ನು ಪಡೆದರೆ
ನೀನು ಮೆಚ್ಚುವೆ ನಾನು ಬದುಕುವೆ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೬ ||

೧೧೧೮

ಕಳಾಯುಕ್ತವಾಗಿ ರೂಪುಳ್ಳ ಹೆಣ್ಣನು ಲಿಂಗಕ್ಕೆ ಕೊಟ್ಟು,
ಬಿಂದುಯುಕ್ತವಾಗಿ ರುಚಿಯುಳ್ಳ ಮಣ್ಣನು ಗುರುವಿಗೆ ಕೊಟ್ಟು,
ನಾದಯುಕ್ತವಾಗಿ ತೃಪ್ತಿಯುಳ್ಳ ಹೊನ್ನನು ಜಂಗಮಕ್ಕೆ ಕೊಟ್ಟು,
ಕರಿಯು ನುಂಗಿದ ಕಪಿತ್ಥಫಲದಂತೆ,
ಹೊರಗೆ ಸಾಕಾರವಾಗಿಯೂ,
ಒಳಗೆ ನಿರಾಕಾರವಾಗಿಯೂ ಇರ್ಪುದೇ ಭಕ್ತಿಯು ;
ಉಳಿದುದೆಲ್ಲಾ ಅಭಕ್ತಿಯು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೭ ||

೧೧೧೯

ಗುರುವೇ, ನಿನ್ನ ಕರದಲ್ಲೆನ್ನಂ ಪುಟ್ಟಿಸಿ,
ಮಂತ್ರವೆಂಬ ಜನನಿಯ ವಿವೇಕವೆಂಬ ಸ್ತನಗಳೊಳ್ ತುಂಬಿರ್ಪ
ಅನುಭವಾಮೃತರಸವನೆರೆದು, ಆಚಾರಕ್ಷೇತ್ರದಲ್ಲಿ ಬೆಳೆಸುತ್ತಿರಲು,
ಅನೇಕ ಕಳೆಗಳಿಂ ಕೂಡಿದ ದಿವ್ಯಜ್ಞಾನವೆಂಬ ಯೌವನಂ ಪ್ರಾದುರ್ಭವಿಸಿ,
ಸತ್ಕರ್ಮವಾಸನೆಯಿಂ ಪೋಷಿತನಾಗಿರ್ಪೆನಗೆ ಮಹಾಲಿಂಗವೊಲಿದು,
ನಿನ್ನ ಭಾವದಲ್ಲಿ ಬಂದು, ಹೃದಯದಲ್ಲಿ ನಿಂದು ಕೇಳಲು,
ನೀನು ಆ ಲಿಂಗಕ್ಕೆ ಮಂಗಳಸೂತ್ರಮಂ ಕಟ್ಟಿ,
ಕಲಶಕನ್ನಡಿಗಳನ್ನಿಕ್ಕಿ ಪಾಣಿಗ್ರಹಣಮಂ ಮಾಡಿ ಕೊಟ್ಟಬಳಿಕ,
ರತಿಯನನುಭವಿಸಿ, ಲಿಂಗಸುಖವಂ ತನಗೀವುತ್ತಿರ್ಪನಯ್ಯಾ.
ಆ ಮೇಲೆ ತನ್ನ ಮನದ ಹೆದರಿಕೆಯಂ ಬಿಡಿಸಿ,
ಅಂತರಂಗಕ್ಕೆ ಕರೆದುಕೊಂಡುಬಂದು,
ನಿಜಪ್ರಸಾದ ರಸದಂಬುಲವಿತ್ತು
ತನ್ನೊಡನೆ ಕೂಡುವ ಚಾತುರ್ಯಮಾರ್ಗಂಗಳಂ ಕಲಿಸುತ್ತ
ಆ ಲಿಂಗಂ ತಾನೇ ತನಗೆ ಗುರುವಾದನಯ್ಯಾ.
ಆ ಮೇಲೆ ಭಾವದಲ್ಲಿ ನನ್ನ ಕೂಡಣ ಚಲ್ಲಾಟದಿಂದ ಸಂಚರಿಸುತ್ತಾ,
ತಾನೇ ಜಂಗಮವಾದನಯ್ಯಾ.
ತನ್ನ ಭಾವದಲ್ಲಿರ್ಪ ಇಂದ್ರಿಯವಿಷಯಂಗಳೆಲ್ಲಾ
ಪುಣ್ಯಕ್ಷೇತ್ರಂಗಳಾದವಯ್ಯಾ.
ಶರೀರವೇ ವಿಶ್ವವಾಯಿತ್ತಯ್ಯಾ, ತಾನೇ ವಿಶ್ವನಾಥನಯ್ಯಾ.
ಪಂಚಭೂತಂಗಳೇ ಪಂಚಕೋಶವಾಯಿತ್ತಯ್ಯಾ.

ಆ ಲಿಂಗಾನಂದವೇ ಭಾಗೀರಥಿಯಾಯಿತ್ತಯ್ಯಾ.
ಆ ಲಿಂಗದೊಳಗಣ ವಿನಯವೇ ಸರಸ್ವತಿಯಾಗಿ,
ಆ ಲಿಂಗದ ಕರುಣವೇ ಯಮುನೆಯಾಗಿ,
ತನ್ನ ಶರೀರವೆಂಬ ದಿವ್ಯ ಕಾಶೀಕ್ಷೇತ್ರದಲ್ಲಿ
ಹೃದಯವೆಂಬ ತ್ರಿವೇಣೀ ಮಣಿಕರ್ಣಿಕಾಸ್ಥಾನದಲ್ಲಿ ನೆಲಸಿ,
ಸಕಲ ಗುಣಂಗಳೆಂಬ ಪುರುಷ ಋಷಿಗಳಿಂದ ಅರ್ಚಿಸಿಕೊಳ್ಳುತ್ತಾ
ನಮ್ಮೊಳಗೆ ನಲಿದಾಡುತ್ತಿರ್ದನಯ್ಯಾ.
ತನ್ನ ನಿಜಮತದಿಂ ವಿಶ್ವಸ್ವರೂಪ ಕಾಶೀಕ್ಷೇತ್ರವನು ರಕ್ಷಿಸುತಿರ್ಪ
ಅನ್ನಪೂರ್ಣಾಭವಾನಿಗೂ ತನಗೂ ಮತ್ಸರಮಂ ಬಿಡಿಸಿ,
ತನಗೆ ಅನ್ನಪೂರ್ಣಭವಾನಿಯೇ ಆಸ್ಪದವಾಗಿ,
ಆ ಅನ್ನಪೂರ್ಣೆಗೆ ತಾನೇ ಆಸ್ಪದವಾಗಿರ್ಪಂತನುಕೂಲವಿಟ್ಟು
ನಡಿಸಿದನಯ್ಯಾ.
ಇಂತಪ್ಪ ದಿವ್ಯಕ್ಷೇತ್ರದಲ್ಲಿ ನಿಶ್ಚಿಂತವಾಗಿ
ಆ ಪರಮನೊಳಗೆ ಅಂತರಂಗದರಮನೆಯಲ್ಲಿ
ನಿರ್ವಾಣರತಿಸುಖವನನುಭವಿಸುತ್ತಾ ಆ ಲಿಂಗದಲ್ಲಿ ಲೀನವಾಗಿ
ಪುನರಾವೃತ್ತಿರಹಿತ
ಶಾಶ್ವತ ಪರಮಾನಂದರತಿಸುಖದೊಳೋಲಾಡುತ್ತಿರ್ದೆನಯ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೮ ॥

೧೦೨೦

ಗುರುವೇ, ನೀನು ನನ್ನ ಲಿಂಗಕ್ಕೆ ಮಂಗಳಸೂತ್ರವಂ ಕಟ್ಟಿ ಕೊಟ್ಟಂದಿಂದ
ಅನ್ಯವನರಿಯದೆ, ಆ ಲಿಂಗದಲ್ಲೇ ನಡೆವುತ್ತಿರ್ಪೆನು,
ಆ ಲಿಂಗದಲ್ಲೇ ನುಡಿವುತ್ತಿರ್ಪೆನು,
ಆ ಲಿಂಗದ ನಟನೆಯಂ ನೆನವುತ್ತಿರ್ಪೆನು,
ಆ ಲಿಂಗದ ಮಹಿಮೆಯನೆ ಪಾಡುತ್ತಿರ್ಪೆನು,
ಆ ಲಿಂಗವನೆ ಬೇಡುತ್ತಿರ್ಪೆನು. ಆ ಲಿಂಗವನೆ ಕಾಡುತ್ತಿರ್ಪೆನು.
ಆ ಲಿಂಗವನೆ ಕೊಸರುತ್ತಿರ್ಪೆನು, ಆ ಲಿಂಗವನೆ ಅರಸುತ್ತಿರ್ಪೆನು,
ಆ ಲಿಂಗವನೆ ಬೆರಸುತ್ತಿರ್ಪೆನು, ಆ ಲಿಂಗವಲ್ಲದೆ ಮತ್ತಾರನೂ ಕಾಣೆನು,
ಮತ್ತಾರಮಾತನೂ ಕೇಳೆನು, ಮತ್ತಾರನೂ ಮುಟ್ಟೆನು, ಮತ್ತಾರನೂ ತಟ್ಟೆನು.
ಲಿಂಗವು ನಾನು ಇಬ್ಬರೂ ಇಲ್ಲದ ಕಾರಣ
ಎಲ್ಲವೂ ನನಗೆ ಏಕಾಂತಸ್ಥಾನವಾಯಿತ್ತು.
ಎಲ್ಲೆಲ್ಲಿಯೂ ಯಾವಾಗಲೂ ಎಡೆವಿಡದೆ ಲಿಂಗದಲ್ಲೇ ರಮಿಸುತಿರ್ದೆನು.
ಲಿಂಗದಲ್ಲೇ ಕಾಲವ ಕ್ರಮಿಸುತ್ತಿರ್ದೆನು
ಲಿಂಗದಲ್ಲೇ ಎನ್ನಂಗಗುಣಂಗಳಂ ಕ್ಷಮಿಸುತ್ತಿರ್ದೆನು

ಲಿಂಗದೊಳಗೆ ನನ್ನ, ನನ್ನೊಳು ಲಿಂಗದ ಚಲ್ಲಾಟವಲ್ಲದೆ,
ಬೇರೊಂದು ವಸ್ತುವೆನಗೆ ತೋರಲಿಲ್ಲ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೯ ||

೧೦೨೧

ಪೃಥ್ವಿಗೆ ಮೈಯೆಲ್ಲಾ ಯೋನಿ, ಜಲಕ್ಕೆ ಶರೀರವೆಲ್ಲಾ ಕಾಲು,
ಅಗ್ನಿಗೆ ಶರೀರವೆಲ್ಲಾ ಬಾಯಿ, ವಾಯುವಿಗೆ ತನುವೆಲ್ಲಾ ಮೂಗು,
ಆಕಾಶಕ್ಕೆ ಕಾಯವೆಲ್ಲಾ ಹೊಟ್ಟೆ, ಆತ್ಮನಿಗೆ ಮೈಯೆಲ್ಲಾ ಕಣ್ಣು
ಪೃಥ್ವಿಗೆ ಘ್ರಾಣವೇ ಇಂದ್ರಿಯ, ಗಂಧವೇ ವಿಷಯ.
ಜಲಕ್ಕೆ ಜಿಹ್ವೆಯೇ ಇಂದ್ರಿಯ, ರುಚಿಯೇ ವಿಷಯ.
ಅಗ್ನಿಗೆ ನೇತ್ರವೇ ಇಂದ್ರಿಯ, ರೂಪೇ ವಿಷಯ.
ವಾಯುವಿಗೆ ತ್ವಕ್ಕೇ ಇಂದ್ರಿಯ, ಸ್ಪರ್ಶನವೇ ವಿಷಯ.
ಆಕಾಶಕ್ಕೆ ಶ್ರೋತ್ರವೇ ಇಂದ್ರಿಯ, ಶಬ್ದವೇ ವಿಷಯ.
ಆತ್ಮನಿಗೆ ಮನಸ್ಸೇ ಇಂದ್ರಿಯ, ಭಾವವೇ ವಿಷಯ.
ಪೃಥ್ವಿಯಲ್ಲಿರ್ಪ ಗಂಧಕ್ಕೆ ಘ್ರಾಣೇಂದ್ರಿಯವೇ ಕಾರಣವಾಯಿತ್ತು.
ಜಲದೊಳಗಿರ್ಪ ರುಚಿಗೆ ಜಿಹ್ವೇಂದ್ರಿಯದಲ್ಲಿರ್ಪ ಅಗ್ನಿಯೇ ಕಾರಣವಾಯಿತ್ತು
ಅಗ್ನಿಯಲ್ಲಿರ್ಪ ರೂಪಿಗೆ ನೇತ್ರೇಂದ್ರಿಯದಲ್ಲಿರ್ಪ ಜಲಮೆ ಕಾರಣವಾಯಿತ್ತು.
ವಾಯುವಿನೊಳಗಿರ್ಪ ಸ್ಪರುಶನಕ್ಕೆ
ತ್ವಗೀಂದ್ರಿಯದಲ್ಲಿರ್ಪ ಪೃಥ್ವಿಯೇ ಕಾರಣವಾಯಿತ್ತು.
ಆಕಾಶದಲ್ಲಿರ್ಪ ಶಬ್ದಕ್ಕೆ ಶ್ರೋತ್ರೇಂದ್ರಿಯದಲ್ಲಿರ್ಪ ಆತ್ಮನೇ
ಕಾರಣವಾಯಿತ್ತು.
ಆತ್ಮನಲ್ಲಿರ್ಪ ಭಾವಕ್ಕೆ ಹೃದಯೇಂದ್ರಿಯದಲ್ಲಿರ್ಪ
ಆಕಾಶಮೇ ಕಾರಣವಾಯಿತ್ತು.
ಇಂತಪ್ಪ ಭಾವದಲ್ಲಿ ಜ್ಞಾನಶಕ್ತಿ ಹುಟ್ಟಲು, ಮನವೇ ಮಹಾಲಿಂಗವಾಯಿತ್ತು.
ಶಬ್ದದಲ್ಲಿ ಪರಾಶಕ್ತಿ ಹುಟ್ಟಲು, ಶ್ರೋತ್ರವೇ ಪ್ರಸಾದಲಿಂಗವಾಯಿತ್ತು.
ಸ್ಪರ್ಶನದಲ್ಲಿ ಆದಿಶಕ್ತಿ ಹುಟ್ಟಲು, ಘ್ರಾಣವೇ ಆಚಾರಲಿಂಗವಾಯಿತ್ತು.
ಗ್ರಹಿಸುವುದೇ ಜ್ಞಾನೇಂದ್ರಿಯವಾಯಿತ್ತು;
ಬಿಡುವುದೇ ಕರ್ಮೇಂದ್ರಿಯವಾಯಿತ್ತು.
ಇಂತಪ್ಪ ಇಂದ್ರಿಯಂಗಳೆಲ್ಲಾ ಲಿಂಗಸ್ವರೂಪಗಳಾಗಿ,
ವಿಷಯಂಗಳೇ ಶಕ್ತಿಸ್ವರೂಪವಾದ ಮಹಾಪುರುಷನಸ್ವರೂಪಿನಲ್ಲಿ
ಇಷ್ಟಲಿಂಗವು ನೆಲೆಗೊಂಡಲ್ಲಿ, ಆ ಲಿಂಗದ ಮೋಹವೇ
ಪ್ರಾಣಲಿಂಗವಾಯಿತ್ತು,
ಆ ಲಿಂಗದ ವಿಚಾರವೇ ಭಾವಲಿಂಗವಾಯಿತ್ತು.
ಭೂತಂಗಳೇ ಲಿಂಗಕ್ಕೆ ಅಂತರಂಗಂಗಳಾದವು.

ಅಲ್ಲಲ್ಲಿರ್ಪ ಲಿಂಗಂಗಳೇ ಭೂತಂಗಳಿಗೆ ಚೈತನ್ಯವಾದ ಪ್ರಾಣಂಗಳಾಗಿ,
ಆ ಲಿಂಗಂಗಳೇ ಶರಣನಂಗಂಗಳಾಗಿ, ಲಿಂಗಂಗಳೇ ಶಿವನಾಗಿ,
ಶರಣನೇ ಸತಿ ಲಿಂಗವೇ ಪತಿಯಾಗಿ,
ಇಬ್ಬರ ಸಮರಸಭಾವವೇ ಪರಮಾನಂದರತಿಸುಖವಾಗಿ,
ಆ ಸುಖದಲ್ಲಿ ಎರಡಂ ಏಕವಾಗಿ ಭೇದದೋರದೆ
ನಿಶ್ಶಬ್ದಬ್ರಹ್ಮವಾಗಿರ್ಪುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೦ ॥

೧೦೨೨

ಗಣನಾತೀತನಪ್ಪ ಪರಮೇಶ್ವರನು ಲೀಲಾನಿಮಿತ್ತ ಗಣನೆಗೆ ಬಂದಲ್ಲಿ
ವಿಷಮಗಣನೆಯೇ ಶಿವನಾಯಿತ್ತು, ಸಮಗಣನೆಯೇ ಶಕ್ತಿಯಾಯಿತ್ತು.
ಅವೇ ಇಂದ್ರಿಯಂಗಳಲ್ಲಿ ಬೆರೆದು, ನಾಲ್ವತ್ತೈದು ತತ್ವಂಗಳಾಯಿತ್ತು.
ಆ ಶಿವಶಕ್ತಿಗಳ ಹೆಚ್ಚಿಗೆಯಲ್ಲಿ ಒಂದು ಶೂನ್ಯವು ಹುಟ್ಟಿ,
ತಚ್ಛೂನ್ಯದಲ್ಲಿ ಬೆರದ ಶಿವಶಕ್ತಿಗಳೇ ಅನಂತಗುಣಿತಂಗಳಾಗಿ ಹೆಚ್ಚುತ್ತಿರಲು,
ಅಲ್ಲಿ ಕಾಲ ಕರ್ಮ ಸೃಷ್ಟಿ ಸ್ಥಿತಿ ಸಂಹಾರಾದಿ ಪ್ರಪಂಚಂಗಳುದಿಸಿ,
ಅಲ್ಲಿಯೇ ತೋರುತ್ತಾ ಅಡಗುತ್ತಾ ತೊಳಲುತಿರ್ಪುವು ನೋಡಾ.
ಇಂತಪ್ಪ ಪರಮಾತ್ಮನ ಲೀಲಾಶಕ್ತಿಯನ್ನು ಗುರುಮುಖದಿಂದ ತಿಳಿದ ಮಹಿಮನು
ಶೂನ್ಯವಶೂನ್ಯಮಾಡಲು, ಶಿವಶಕ್ತಿಸ್ವರೂಪವಾದ ಗಣನೆ ನಿಂದಿತ್ತು.
ಅಂತಪ್ಪ ಇಂದ್ರಿಯವಿಷಯಸ್ವರೂಪವಾದ ಗಣನೆಯನ್ನು
ತದ್ಗಣನೆಯಿಂದ ಕಳೆಯಲು, ಉಳಿದ ನಿಜಂ ತಾನೊಂದೇ ನಿಂದಲ್ಲಿ
ತಾನೇ ಪರಮಾತ್ಮನಾಯಿತ್ತು.
ಇಂತಪ್ಪ ಸಕೀಲವು ತನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೧ ॥

೧೦೨೩

ಪೃಥ್ವಿಯೇ ಬಹಿರಂಗ, ಆಕಾಶವೇ ಅಂತರಂಗ,
ಆ ಅಂತರಂಗಮಪ್ಪ ಆಕಾಶದಲ್ಲಿ ನೀನಿರ್ಪೆ,
ಬಹಿರಂಗಮಪ್ಪ ಪೃಥ್ವಿಯಲ್ಲಿ ನಾನಿರ್ಪೆನು.
ಅಂತರಂಗಜ್ಞಾನವು ನಿನಗೆ, ಬಹಿರ್ಜ್ಞಾನವೆನಗೆ.
ನೀನು ಅಂತರಂಗದಲ್ಲಿ ಆನಂದಿಸುತ್ತಿರುವೆ,
ನಾನು ಬಹಿರಂಗದಲ್ಲಿ ಆನಂದಿಸುತ್ತಿರ್ಪೆನು.
ನಿನಗೆ ಅಂತರಂಗಮೇ ನಿಜವಾಗಿರ್ಪುದು,
ಎನಗೆ ಬಹಿರಂಗಮೇ ನಿಜವಾಗಿರ್ಪುದು.
ನೀನು ಅಂತರಂಗದಲ್ಲಿ ನಡವುತಿರ್ಪೆ
ನಾನು ಬಹಿರಂಗದಲ್ಲಿ ನಡವುತಿರ್ಪೆನು.

ಅಂತರಂಗದಲ್ಲಿ ನೋಟವು ನಿನಗೆ, ಬಹಿರಂಗದಲ್ಲಿ ನೋಟವೆನಗೆ.
ನಿನ್ನ ಸತ್ಯವೆನ್ನ ಬಹಿರಂಗವನಾವರಿಸಿ, ನನ್ನಂ ಮೋಹಿಸುತ್ತಿರ್ಪುದು.
ನನ್ನ ಮನವು ನಿನ್ನ ಅಂತರಂಗವನಾವರಿಸಿ,
ನಿನಗೆ ಆಗ್ರಹವಂ ಪುಟ್ಟಿಸುತ್ತಿಹುದು.
ನಿನಗೆ ಅಂತಶ್ಶಕ್ತಿಯಾದ ಕಾರಣ ನನ್ನ ತಮಸ್ಸನ್ನು ನಿನ್ನ ಕೈವಶಮಾಡಿಕೊಂಡು,
ಆದರಿಂದಲೇ ನನ್ನಂ ಸಂಹರಿಸುತ್ತಿರುವೆ.
ನನಗೆ ಶಕ್ತಿಬಾಹ್ಯವಾದಕಾರಣ ನಿನ್ನ ಸತ್ವಗುಣವಂ ನಾನು ಪರಿಗ್ರಹಿಸಲಾರದೆ,
ಲಯವನೈಯ್ದುತ್ತಿರ್ಪ ಸಕೀಲವನ್ನು ನಿನ್ನಿಂದ ನಾನು ತಿಳಿದಲ್ಲಿ,
ಬಹಿರಂಗದಲ್ಲಿರ್ಪ ಸತ್ವಗುಣವಂ ನಿನ್ನಿಂದ ನಾನು ಕಂಡಲ್ಲಿ,
ನಿನಗೆ ಅಂತರಂಗವಾಗಿರ್ಪವನು ನಾನೆಂದು ನೀನು ಕಂಡಿರಯ್ಯಾ.
ಬಹಿರಂಗದಲ್ಲಿ ನೀನು ಎನಗೆ ಆಧಾರವಾದಲ್ಲಿ,
ಅಂತರಂಗದಲ್ಲಿ ನಿನಗೆ ನಾನೇ ಆಧಾರವಾದೆನಯ್ಯಾ.
ಬಹಿರಂಗದಲ್ಲಿ ನೀನೆನಗೆ ಶಕ್ತಿಯಾದಲ್ಲಿ,
ಅಂತರಂಗದಲ್ಲಿ ನಿನಗೆ ನಾನೇ ಶಕ್ತಿಯಾದೆನಯ್ಯಾ.
ತಮೋಗುಣವಂ ಪಿಡಿದು ನನ್ನಂ ನೀನಾಡಿಸಿದೊಡೆ,
ಸತ್ವಗುಣವಂ ಪಿಡಿದು ನಿನ್ನಂ ನಾನಾಡಿಸುತ್ತಿರ್ಪೆನಯ್ಯಾ.
ಕರ್ಪುರವಪ್ಪಿದುರಿಯಾದೆ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೨ ॥

## ಮೂರನೆಯ ಅಧ್ಯಾಯ

### ೧೦೨೪

ಜಿಹ್ವೆಯಲ್ಲಿ ಮೃತ್ಯುವೂ, ನೇತ್ರದಲ್ಲಿ ಕಾಲನೂ ಇರಲು,
ನಾಸಿಕದಲ್ಲಿರ್ಪ ಪ್ರಾಣನಿಗೆ ಬದುಕುಂಟೇನಯ್ಯಾ ?
ನೇತ್ರದಲ್ಲಿ ಉನ್ಮೀಲನ ನಿಮಿಲನವೇ ಕಾಲಸ್ವರೂಪವಾಯಿತ್ತು,
ಜಿಹ್ವೆಯ ಲಂಪಟವೇ ಮೃತ್ಯುಸ್ವರೂಪವಾಯಿತ್ತು,
ಮೃತ್ಯುಸ್ವರೂಪವಾದ ಜಿಹ್ವೆಯಲ್ಲಿ ಸಕಲವನ್ನೂ ಸಂಹರಿಸಿ,
ನರಕಕ್ಕೆ ಹಾಕುತ್ತಿರಲು, ತತ್ಸಂಹಾರದಲ್ಲಿ ಅನೇಕ ವ್ಯಾಧಿಪೀಡೆಗಳುದ್ಭವಿಸಿ,
ಕಾಲನಲ್ಲಿ ಜೀವನಂ ಕಾಡಿ ಕಂಗೆಡಿಸಿ ಸಂಹರಿಸಿ,
ಮೃತ್ಯುವಿಗೆ ತುತ್ತುಮಾಡಿಕೊಡುತ್ತಿರ್ದನಯ್ಯಾ.
ಇಂತು ಕಾಲಮೃತ್ಯುಗಳ ಬಾಧೆಯಲ್ಲಿ
ಕಳವಳಿಸಿ ಸತ್ತು ಹುಟ್ಟುತ್ತಿರುವ ನನಗೆ
ಮಹಾಗುರುವೇ ನೀನು ಅಂಜಬೇಡವೆಂದು
ಅಭಯಕರಮಂ ನನ್ನ ಶಿರದಮೇಲಿಟ್ಟು,
ಕರ್ಣದಲ್ಲಿ ಮಂತ್ರೋಪದೇಶಮಂ ಮಾಡಿ,

ಕರದಲ್ಲಿ ಮಹಾಲಿಂಗಮಂ ಕೊಟ್ಟು, ರಕ್ಷಿಸಿದಲ್ಲಿ,
ಆ ಕಾಲಸಂಹಾರಕನಪ್ಪ ಲಿಂಗಮಂ ನೋಡಿ,
ಕಂಗಳಲ್ಲಿರ್ಪ ಕಾಲನಂ ಜೈಸಿದೆನಯ್ಯಾ.
ನೀನು ಉಪದೇಶವಿತ್ತ ಆ ಶಿವಮಂತ್ರವಂ ಜಪಿಸಿ ಜಪಿಸಿ,
ಜಿಹ್ವೆಯಲ್ಲಿರ್ಪ ಮೃತ್ಯುವಂ ಜಯಿಸಿದೆನಯ್ಯಾ.
ಕಾಲಮೃತ್ಯುಗಳಂ ಜಯಿಸಲು, ವ್ಯಾಧಿಪೀಡೆಗಳು ಲಯವಾದವಯ್ಯಾ,
ನರಕವು ಹಾಳಾಯಿತಯ್ಯಾ.
ಜೀವನು ಭಯಭ್ರಾಂತಿಗಳನಳಿದು, ಪರಮಶಾಂತಿಯಂ ಹೊಂದಿ,
ಲಿಂಗಾನಂದದೊಳಗೆ ಲೀನನಾದೆನಯ್ಯಾ ನಿನ್ನದಯೆಯಿಂ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೨೩ ||

೧೦೨೫

ನಿನ್ನ ಕಂಗಳಭ್ರಮೆಯೇ ಕಾಲರೂಪವಾಗಿ
ನನ್ನಂ ಭವಭವಂಗಳಲ್ಲಿ ತೊಳಲಿಸಿ ಬಳಲಿಸುತ್ತಿತ್ತಯ್ಯಾ.
ನಿನ್ನಾನಂದಾಶ್ರುವೇ ದೇವತೆಗಳಿಗೆ ಅಮೃತವಾಗಿ,
ಮನುಷ್ಯರಿಗೆ ಜೀವನವಾಗಿ ರಕ್ಷಿಸುತ್ತಿತ್ತಯ್ಯಾ.
ನಿನ್ನ ಕಂಗಳ ಕೋಪಾಗ್ನಿಯೇ ಸಂಹರಿಸುತ್ತಿತ್ತಯ್ಯಾ,
ನಿನ್ನ ಕಂಗಳ ಭಾವವೇ ಪಲತೆರವಾಗಿ ಸೃಷ್ಟಿಸುತ್ತಿತ್ತಯ್ಯಾ.
ಇಂತಪ್ಪ ನಿನ್ನ ಕಂಗಳ ವಿಕಾಸವನ್ನು ಕಡೆಹಾಯ್ದು
ನಿನ್ನ ಕೂಡುವ ಪರಿಯೆಂತಯ್ಯಾ.
ಆದರೆ, ಸ್ಥೂಲದಲ್ಲಿ ನಿನ್ನಲ್ಲಿರ್ಪ ಸಕಲವಿಚಿತ್ರವನ್ನು ಸೂಕ್ಷ್ಮದಲ್ಲಿ ನಿನ್ನಲ್ಲಿಟ್ಟು,
ನೀನು ನನ್ನಂ ಸೃಷ್ಟಿಸಿ, ನನಗೆ ನೀನೇ ಆಧಾರವಾಗಿ,
ನಿನಗೆ ನಾನೇ ಆಧಾರವಾಗಿ, ನಿನ್ನ ನೋಟವೂ,
ನನ್ನ ನೋಟವೂ ಏಕವಾಗಲು,
ಪ್ರಪಂಚವು ಕಾಣಬರುತ್ತಿರಲಾಗಾ ವಿಚಿತ್ರವನ್ನು
ನನ್ನಲ್ಲಿ ನಾನೇ ತಿಳಿದುನೋಡಿ,
ನಿನ್ನ ಭ್ರೂಮಧ್ಯದಲ್ಲಿರ್ಪ ಲಲಾಟಾಕ್ಷಿಯೇ
ನನ್ನ ಭ್ರೂಮಧ್ಯದಲ್ಲಿ ಜ್ಞಾನಾಕ್ಷಿಯಾಗಿರ್ಪುದೆಂದು ತಿಳಿದು,
ಅದಂ ಮುಚ್ಚಿರ್ಪ ತಾಮಸವೆಂಬ ಕಪ್ಪನ್ನು ಭಾವಹಸ್ತದಲ್ಲಿ
ಮೆಲ್ಲಮೆಲ್ಲಗೆ ಸಾಧಿಸಿ ತೆಗೆಯಲು,
ಆ ಕಂಗಳಲ್ಲಿರ್ಪ ಭ್ರಮೆಯಳಿದು, ಜ್ಞಾನಾಗ್ನಿಯು ಪ್ರಕಾಶವಾಗಿ,
ಕಾಲ ಕಾಮ ಸೃಷ್ಟಿ, ಸ್ಥಿತಿ ಸಂಹಾರ ಸಂಸಾರಪ್ರಪಂಚ
ಶರೀರಾದಿ ಸಕಲ ಭಿನ್ನಗುಣಂಗಳನ್ನು ದಹಿಸಿ,
ಆ ಅಗ್ನಿಯು ನನ್ನಲ್ಲಿಯೇ ಪರಮಶಾಂತಿಯಂ

ಪೊಂದಿದಲ್ಲಿ ನಾನೇ ನೀನಾದೆನಯ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೪ ॥

೧೦೨೬

ವಿರಾಡ್ರೂಪನಾದ ಗುರುವೇ
ನೀನು ನಿನ್ನ ಬ್ರಹ್ಮಾಂಡಸ್ವರೂಪವನೆನ್ನ
ಪಿಂಡಾಂಡಸ್ವರೂಪವಂ ಮಾಡಿ, ನನ್ನಂ ನಿರ್ಮಿಸಿದಲ್ಲಿ,
ನಿನ್ನ ನಾಭಿಯಿಂದ ಕೆಳಗೆ ಶೂದ್ರತ್ವವೂ, ಗರ್ಭದಲ್ಲಿ ವೈಶ್ಯತ್ವವೂ,
ಭುಜದಲ್ಲಿ ಕ್ಷತ್ರಿಯತ್ವವೂ, ಮುಖದಲ್ಲಿ ಬ್ರಾಹ್ಮಣತ್ವವೂ
ನೆಲೆಗೊಂಡಿತೆಂತೆಂದೊಡೆ :
ನಾಭಿಯಿಂದ ಕೆಳಗೆ ಪಾದಂಗಳಾಧಾರನಾಗಿ,
ಊರುಗಳ ಮಧ್ಯದಲ್ಲಿ ಬೀಜದ ಮೂಡೆಗಳನ್ನಿಟ್ಟುಕೊಂಡು,
ನೇಗಿಲ ಮೊನೆಯಲ್ಲಿ ಭೂಮಿಯನುತ್ತು ಬಿತ್ತಿ
ತಾನೇ ಸೃಷ್ಟಿಸಿದ ಫಲಂಗಳಿಂದ
ತನಗೂ ಸಕಲ ಜಗಕ್ಕೂ ಆಧಾರವಾಡುತ್ತಿರ್ಪುದೇ ಶೂದ್ರತ್ವವು.
ಕ್ಷತ್ರಿಯಮುಖದಲ್ಲಿ ಬಂದ ಸಕಲ ಪದಾರ್ಥಗಳನ್ನು ತಾನು ಕೊಂಡು,
ಸಕಲ ಜಗಕ್ಕೂ ಅವರವರಿಗೆ ಬೇಕಾದ ವಸ್ತುಗಳನ್ನೇ ಕೊಡುತ್ತಾ,
ಅದರಲ್ಲಿ ಬಂದ ಸುಖಲಾಭವನ್ನು ಪಡೆಯುತ್ತಾ
ಮಾರದೆ ನಿಂತ ಕೆಟ್ಟ ವಸ್ತುವನ್ನು
ಅಧೋಮುಖದಲ್ಲಿ ಕೆಡವುತ್ತಿರ್ಪುದೆ ವೈಶ್ಯತ್ವವು.
ಭುಜದಲ್ಲಿ ಸಕಲ ಪದಾರ್ಥಂಗಳನ್ನು ಶಕ್ತಿಯಿಂದ ಸಂಹರಿಸಿ ತಂದು
ಅಗ್ನಿಮುಖದಿಂ ಬ್ರಾಹ್ಮಣರಿಗೆ ಕೊಡುತ್ತಾ
ಬ್ರಾಹ್ಮಣರ ಮುಖದಿಂ ಸಕಲ ಜಗತ್ತನ್ನು ರಕ್ಷಿಸುತ್ತಾ
ಸಕಲಲೋಕವಂ ಪೂತವಂ ಮಾಡುತ್ತಾ
ದಕ್ಷಿಣಮುಖದಲ್ಲಿ ಬ್ರಾಹ್ಮಣರನ್ನೂ, ಉತ್ತರಮುಖದಲ್ಲಿ ಶೂದ್ರರನ್ನೂ
ರಕ್ಷಿಸುತ್ತಿರ್ಪುದೇ ಕ್ಷತ್ರಿಯತ್ವವು.
ಮುಖದಲ್ಲಿ ವೇದವು ಮಂತ್ರಕ್ಕೆ ತಾನೇ ಮೂಲವಾಗಿ
ಕ್ಷತ್ರಿಯಮುಖದಿಂದ ಕೊಂಡು,
ಸಕಲ ಪದಾರ್ಥಂಗಳನ್ನು ಮಂತ್ರಯುಕ್ತವಾಗಿ
ಹೃದಯಕುಂಡದಲ್ಲಿರ್ಪ ಅಗ್ನಿಮುಖಕ್ಕೆ ಆಹುತಿಯಂ ಕೊಟ್ಟು,
ತನ್ಮುಖದಲ್ಲಿ ಭೂತಂಗಳನ್ನು ತೃಪ್ತಿಬಡಿಸಿ,
ದೇವತೆಗಳನ್ನು ತೃಪ್ತಿಬಡಿಸುವುದೇ ಬ್ರಾಹ್ಮಣತ್ವವು.
ಅಂತಪ್ಪ ಬ್ರಾಹ್ಮಣಸ್ವರೂಪವೇ ಶಿವನು ಎಂತೆಂದೊಡೆ :
ಪಂಚೇಂದ್ರಿಯಂಗಳೇ ಪಂಚಮುಖಂಗಳಾಗಿ

ಸಕಲವನ್ನೂ ಸಂಹರಿಸುತ್ತಿರ್ಪುದಾದ ಕಾರಣ.
ಭುಜದಲ್ಲಿರ್ಪ ಕ್ಷತ್ರಿಯತ್ವವೇ ವಿಷ್ಣುವು.
ಅದೆಂತೆಂದೊಡೆ :
ಭಿನ್ನವಂ ಸಂಹರಿಸುತ್ತಾ, ನಿಜವಂ ರಕ್ಷಿಸುತ್ತಾ,
ಶಕ್ತಿಗೆ ತಾನೇ ಆಧಾರವಾಗಿ, ತನಗೆ ಶಕ್ತಿಯೇ ಆಧಾರವಾಗಿ,
ಶಕ್ತಿಗೂ ತನಗೂ ಭೇದವಿಲ್ಲದಿರ್ಪುದೇ ವಿಷ್ಣುತ್ವವು.
ತನ್ನ ಗರ್ಭದಲ್ಲಿ ಸಕಲವನ್ನೂ ಇಂಬಿಟ್ಟು, ತನ್ನ ಗರ್ಭದಿಂದ
ಸಕಲವನ್ನೂ ಸೃಷ್ಟಿಸುತ್ತಾ,
ಗಮನಾಗಮನ ಸೃಷ್ಟಿ ನರಕಂಗಳೆಂಬ ಚತುರ್ಮುಖಗಳುಳ್ಳುದೇ ಬ್ರಹ್ಮತ್ವವು.
ನಾಭಿಯಿಂದ ಕೆಳಗೆ ಇಂದ್ರತ್ವವೆಂತೆಂದೊಡೆ :
ಸಕಲ ಭೋಗಕ್ಕೂ ತಾನೇ ಕರ್ತೃವಾಗಿ, ಶರೀರವೆಲ್ಲಾ ಯೋನಿರೂಪವಾಗಿ,
ಅಷ್ಟಭೋಗಂಗಳೆಂಬ ಅಷ್ಟದಿಕ್ಕುಗಳನ್ನು ಪಾಲಿಸುತ್ತಾ,
ಆ ಬ್ರಾಹ್ಮಣರು ಅಗ್ನಿಗೆ ಆಹುತಿಗೊಟ್ಟ ಹವಿಸ್ಸನ್ನೇ
ಬಿಂದುರೂಪಮಂ ಮಾಡಿ ಪೃಥ್ವಿಯಲ್ಲಿ ವರ್ಷಿಸುತ್ತಾ,
ಸಕಲ ಗುಣರೂಪಮಾದ ದೇವತರುವು ತನ್ನನಾಶ್ರಯಿಸುತ್ತಿರಲು,
ಅವೆಲ್ಲಕ್ಕೂ ತಾನೇ ಕರ್ತೃವಾಗಿಹುದೇ ಇಂದ್ರತ್ವವು.
ಇಂತಪ್ಪ ಬ್ರಹ್ಮಾಂಡಕ್ಕೂ ಪಿಂಡಾಂಡಕ್ಕೂ ಭೇದದೋರದೆ ಇರಲಾಗಿ,
ನಿನಗೂ ನನಗೂ ಭೇದವುಂಟೇನಯ್ಯಾ ?
ಏನೆಂದೊಡೆ, ನೀನು ಮಹವಾಗಿ ನಾನು ಸ್ವಲ್ಪವಾಗಿರ್ಪುದು
ಕೊರತೆಯಲ್ಲದೆ, ನಾನು ಮಹವಾದಲ್ಲಿ ನಾನೇ ನೀನಪ್ಪೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೫ ॥

೧೦೨೭

ಸಪ್ತಧಾತುಗಳೆಂಬ ಸಪ್ತಪ್ರಕಾರಂಗಳಿಂದಲೂ
ಶಿರವೆಂಬ ಗೋಪುರದಿಂದಲೂ ಭುಜಗಳೆಂಬ ನಂದಿಯ ಧ್ವಜಂಗಳಿಂದಲೂ
ಇಂದ್ರಿಯಮಾರ್ಗಂಗಳೆಂಬ ದ್ವಾರಗಳಿಂದಲೂ
ಉನ್ಮೀಲನ ನಿಮಿಲನಂಗಳೆಂಬ ಕವಾಟಂಗಳಿಂದಲೂ
ಉಪೇತವಾದ ಕಾಯವೆಂಬ ಶಿವಾಲಯದಲ್ಲಿ
ಮನವೆಂಬ ಗರ್ಭಗೃಹದೊಳಗೆ
ಜ್ಞಾನಪೀಠದಲ್ಲಿ ಅಷ್ಟಾವರಣವೆಂಬಷ್ಟಬಂಧನದಿಂ
ಭಾವಲಿಂಗದೊಳಗಿಂಬಿಟ್ಟು, ಆನಂದಜಲದಿಂದಭಿಷೇಕವಂ ಮಾಡಿ,
ಅಂಗದೇಶದಲ್ಲಿ ಬೆರದ ಸುವಾಸನೆವಿಡಿದ
ನಾನಾಗುಣಂಗಳೆಂಬ ದಿವ್ಯ ಕುಸುಮಂಗಳಂ ತಂದು ಸಮರ್ಪಿಸಿ,
ವೈರಾಗ್ಯವೆಂಬ ಶಿಲೆಯೊಳಗೆ ದೇಹಧರ್ಮವೆಂಬ ಗಂಧವ ಕೊರಡಂ ತೇದು,
ಅದರ ಸಮೇತ ದಿವ್ಯವಾಸನೆವಿಡಿದ ಪರಮಶಾಂತಿಯೆಂಬ ಗಂಧವನ್ನು

ಶಿವಮಂತ್ರವೆಂಬ ಅಕ್ಷತೆಯೊಳಗೆ ಕೂಡಿಸಿ ಸಮರ್ಪಿಸಿ,
ಸ್ವಭಾವವಾಸನೆಯುಳ್ಳ ಕರಣಂಗಳೆಂಬ ಪಲತೆರದ ಧೂಪಂಗಳಂ ತಂದು,
ಜ್ಞಾನಾಗ್ನಿಯಲ್ಲಿ ಹಾಕಿ, ಧೂಪವಾಸನೆಯಂ ಸಮರ್ಪಿಸಿ,
ತತ್ವವೆಂಬ ಬತ್ತಿಯನ್ನು ನಿಜಸುಖತೈಲದೊಳಗೆ ಬೆರಸಿ,
ವೇದಾರ್ಥವೆಂಬ ಪಾತ್ರೆಯೊಳಗಿಟ್ಟು,
ಸ್ವಯಂಪ್ರಕಾಶವಾದ ಜ್ಯೋತಿಯನ್ನು ಹೊತ್ತಿಸಿ, ಮಂಗಳಾರತಿಯಂ ಬೆಳಗಿ,
ನಿರುಪಾಧಿಕ ಮಹಾಪ್ರಣವ ಘೋಷವೆಂಬ ಘಂಟೆಯಂ ಧ್ವನಿಗೈದು,
ಭಕ್ತಿಯೆಂಬ ನೇಪಥ್ಯಮಂ ಕಟ್ಟಿ,
ಅರಿವೆಂಬ ಪಾತ್ರೆಯಲ್ಲಿ ಜ್ಞಾನಾಗ್ನಿಯಲ್ಲಿ ಪರಿಪಕ್ವವಾದ
ವಿಷಯಪದಾರ್ಥಂಗಳನಿಟ್ಟು,
ಬಿಂದುಕಳೆಗಳೆಂಬ ಘೃತಸೂಪಂಗಳಿಂ ಪ್ರಕಾಶಿಸುತ್ತಿರ್ಪ
ತಾನೆಂಬ ನಿಜಪ್ರಸಾದವನ್ನು ಧ್ಯಾನಹಸ್ತದಿಂ
ಪಿಡಿದು ಆತ್ಮಲಿಂಗಕ್ಕೆ ಸಮರ್ಪಿಸಲು,
ಸದಾಶಿವನು ಪ್ರಸನ್ನನಾಗಿ ಸಕಲ ಗಣತಿಂತಿಣಿಯೊಡನೆ ಕೂಡಿ,
ನಿಜಶಕ್ತಿಯಿಂ ಯುಕ್ತನಾಗಿ ಆರೋಗಣೆಯಂ ಮಾಡಿ,
ತೃಪ್ತಿಸ್ಥಾನದೊಳಗಿಂಬಿಟ್ಟುದೇ ಲಿಂಗೈಕ್ಯವು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೬ ॥

೧೦೨೮

ನಿನ್ನ ಕಂಗಳಲ್ಲಿ ಕಾಲಮೃತ್ಯುಗಳುದಿಸಿದವಯ್ಯಾ.
ಅವರಲ್ಲಿ ನಾನಾ ವ್ಯಾಧಿಗಳು ಪುಟ್ಟಿದವಯ್ಯಾ.
ನಿನ್ನ ಶಕ್ತಿಯಲ್ಲಿ ಕಾಮರತಿಗಳು ಹುಟ್ಟಿದವಯ್ಯಾ.
ಅವುಗಳಲ್ಲಿ ಮಾಯಾಪ್ರಪಂಚಗಳು ಹುಟ್ಟಿದವಯ್ಯಾ.
ಇವೆಲ್ಲವೂ ಸ್ಥೂಲಸೂಕ್ಷ್ಮಂಗಳನಾವರಿಸಿ,
ಆ ಮಾಯೆಯು ನಿರಾಕಾರವಾಗಿರ್ಪ ಮನವಂ ಕರಗಿಸಿ,
ತದ್ಬಿಂದುವಿನಿಂದ ಪೃಥ್ವೀಮುಖದಲ್ಲಿ
ಸಾಕಾರವಮಾಡಿ ತೋರುತಿರ್ದವಯ್ಯಾ.
ವ್ಯಾಧಿಗಳು ತನುವಂ ಕರಗಿಸಿ ಆಕಾಶಮುಖದಲ್ಲಿ
ನಿರಾಕಾರವಂ ಮಾಡಿ ಆಡುತ್ತಿರ್ದವಯ್ಯಾ.
ಪ್ರಪಂಚಯುಕ್ತವಾದ ಕಾಮಸಹಿತವಾಗಿ ಮುಂದೆ ಶಕ್ತಿಯೂ
ವ್ಯಾಧಿಯುಕ್ತವಾದ ಕಾಮಸಹಿತವಾಗಿ ಹಿಂದೆ ನೀನೂ
ಮಧ್ಯಸ್ಥನಾದ ನನ್ನನ್ನೊತ್ತರಿಸಿ ಚೆಲ್ಲಾಟವಾಡುತ್ತಿರ್ದಿರಯ್ಯಾ.
ಗಂಡಹೆಂಡಿರ ಜಗಳದಲ್ಲಿ ಕೂಸುಬಡವಾಯಿತ್ತೆಂಬ

ನ್ಯಾಯವೆನಗೆ ತಪ್ಪದಾಯಿತ್ತಯ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೭ ॥

೧೦೨೯

ಕರ್ಣದಲ್ಲಿ ಲಯವಂ ಹೊಂದಿ, ಜಿಹ್ವೆಯಲ್ಲಿ ಸೃಷ್ಟಿಯಪ್ಪ ನಾದವೇ
ಸೂಕ್ಷ್ಮಮನೋರೂಪವಾಗಿಹುದು.
ಜಿಹ್ವೆಯಲ್ಲಿ ಲಯವನ್ನು ಹೊಂದಿ, ಗುಹ್ಯೆಯಲ್ಲಿ ಸೃಷ್ಟಿಯಪ್ಪ ಬಿಂದುವೇ
ಸ್ಥೂಲಶರೀರರೂಪವಾಗಿಹುದು.
ಬಿಂದುವಿನ ಲಯಕ್ಕೂ ನಾದದ ಸೃಷ್ಟಿಗೂ ಜಿಹ್ವೆಯೇ
ಕಾರಣಕಳಾರೂಪವಾಗಿಹುದು.
ನಾದದಲ್ಲಿ ಕೂಡಿ ಭಾವದಲ್ಲಿ ಪ್ರಕಾಶವಾಗಿ
ಬ್ರಹ್ಮಯೋನಿಯಲ್ಲಿ ಬಿಟ್ಟ ದಿವ್ಯತೇಜಸ್ಸೇ ಶರೀರವಾಗಿ
ತೋರುತ್ತಿರ್ಪುದೇ ಪರಮನು.
ಬಿಂದುವಿನಲ್ಲಿ ಕೂಡಿ ಲಿಂಗಮುಖದಲ್ಲಿ ಪ್ರಕಾಶವಾಗಿ
ಕರ್ಮಯೋನಿಯಲ್ಲಿ ಬಿಟ್ಟ ತೇಜಸ್ಸೇ
ಶರೀರವಾಗಿ ತೋರುವನೇ ಜೀವಾತ್ಮನು.
ಇಂತಪ್ಪ ಬಿಂದುವನ್ನು ಕರ್ಮಕಾರಣವಾದ ಸ್ವಸ್ತ್ರೀಗರ್ಭದಲ್ಲಿ ಬಿಟ್ಟು,
ಆ ಸತ್ಸಂತಾನದಿಂದ ಸ್ವರ್ಗಾದಿ ಭೋಗಂಗಳಂ ಪಡೆವಂದದಿ,
ಜ್ಞಾನಕಾರಣವಪ್ಪ ಪುರುಷನು ಗರ್ಭದಲ್ಲಿ ವಿವೇಕವೆಂಬ ಪುತ್ರನಂ ಪಡೆದು,
ಅದರಿಂದ ಮೋಕ್ಷಸಾಧನೆಯಂ ಮಾಡಿಕೊಂಬನೇ ಪರಮನು.
ಇಂತಪ್ಪ ಸೂಕ್ಷ್ಮಶರೀರಿಯಾದ ನಾದಮಧ್ಯದಲ್ಲಿರ್ಪ ನಿನಗೂ,
ಸ್ಥೂಲಶರೀರಿಯಾದ ಬಿಂದುಮಧ್ಯದಲ್ಲಿರ್ಪ ನನಗೂ,
ಜಿಹ್ವಾರೂಪವಪ್ಪ ಮಹಾಗುರುವಿನಕರುಣದಿಂ ಸಂಬಂಧವಾಗಿ,
ಪಾಣಿಗ್ರಹಣಮಂ ಮಾಡಿಕೊಟ್ಟಬಳಿಕ ನೀನೇ ಪತಿ ನಾನೇ ಸತಿಯಾಗಿ,
ನಿನ್ನ ಪರಮಾನಂದರತಿಸುಖದಲ್ಲಿ ನಾನು ಲೀನನಾದಲ್ಲಿ,
ನನ್ನ ಸಂಬಂಧವಪ್ಪ ಸ್ಥೂಲದೇಹವೆಲ್ಲಾ
ನಿನ್ನ ಸಂಬಂಧವಪ್ಪ ಸೂಕ್ಷ್ಮದಲ್ಲಿ ಲೀನವಪ್ಪುದೇ ಕೈವಲ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೮ ॥

೧೦೩೦

ಕರಣಂಗಳೇ ಸ್ಥೂಲರೂಪದ ಶರೀರವಾಗಿ,
ತತ್ಸಂಬಂಧವಾದ ವಿಷಯಂಗಳೇ ಕಾರಣಸ್ವರೂಪವಾದ ಮನವಾಗಿ.
ಇಂತಪ್ಪ ಶರೀರದಲ್ಲಿ ಧಾತುಗಳೂ, ಮನದಲ್ಲಿ ಗುಣಂಗಳೂ ಹುಟ್ಟಿ,
ಧಾತುಗಳು ಗುಣಂಗಳನವಗ್ರಹಿಸಿ, ಗುಣಂಗಳು ಧಾತುಗಳನವಗ್ರಹಿಸಿ,
ಧಾತುಗುಣಂಗಳು ಗುಣಧಾತುಗಳೆಂಬ ನಾಲ್ಕುಭೇದವಡದು.

ಅಂತಃಕರಣಚತುಷ್ಟಯವೆನಿಪ ಸೂಕ್ಷ್ಮಶರೀರದಲ್ಲಿ ಜೀವನು ನೆಲಸಿ,
ಕರಣನಿಕರಂಗಳಿಗೆ ತಾನೇ ಕರ್ತೃವಾಗಿ ಕರಣದಲ್ಲಿ
ಕೂಡಿದಕಾರಣವೇ ಬಾಲ್ಯವಾಗಿ,
ಕಾರಣದಲ್ಲಿ ಕೂಡಿದಕಾರಣವೇ ವಯಸ್ಸಾಗಿ,
ಈ ಎರಡರ ನಷ್ಟವೇ ವಾರ್ಧಕ್ಯವಾಗಿ,
ಅಂತಪ್ಪ ವಾರ್ಧಕ್ಯದಲ್ಲಿ ಧಾತುಗುಣಂಗಳಂ ಬಿಟ್ಟು ಗುಣಧಾತುಗಳನನುಸರಿಸಿ,
ಕರಣಂಗಳಂ ಬಿಟ್ಟು ಕಾರಣಂಗಳೊಳಗೆ ಕೂಡಿ,
ಅಗ್ನಿಮುಖದಲ್ಲಿ ಲಯವನ್ನೈದಿ ಪೋದಲ್ಲಿ,
ಮರಳಿ ಸೃಷ್ಟಿಯಪ್ಪ ಪರಿಯೆಂತೆಂದೊಡೆ :
ಆ ಕಾರಣವಿಷಯಂಗಳೆಲ್ಲಾ ಜಲಮುಖದಲ್ಲಿ ದ್ರವಿಸಿ,
ಆ ಗುಣಂಗಳಿರ್ಪ ಧಾತುಗಳು ಪ್ರಕಟಮಾಗಿ ತದ್ವಾಸನೆವಿಡಿದು,
ಬಿಂದುಮುಖದಲ್ಲಿ ಶರೀರಿಯಾಗಿ ತೋರುತಿರ್ಪುದೇ ಸೃಷ್ಟಿಯು.
ಇಂತಪ್ಪ ಸೃಷ್ಟಿ ಸಂಹಾರಂಗಳಿಗೆ ತಾನೇ ಕರ್ತೃವಾಗಿ,
ವಿಷಯಂಗಳಿಂದ ಆ ಮನವನ್ನೂ,
ಇಂದ್ರಿಯಂಗಳಿಂದ ತನುವನ್ನೂ ರಕ್ಷಿಸುತ್ತಾ,
ಅಂತಪ್ಪ ನಾದಬಿಂದುಗಳಿಗೆ ತಾನೇ ಕಳಾಸ್ವರೂಪಮಾಗಿರ್ಪ ಜೀವನು
ಅಗ್ನಿಮುಖದಲ್ಲಿ ಲಯವನ್ನೂ,
ಜಲಮುಖದಲ್ಲಿ ಸೃಷ್ಟಿಯನ್ನೂ ಹೊಂದುತ್ತಿರ್ಪ
ಕೋಟಲೆಯಂ ಕಳೆವುದಕ್ಕುಪಾಯಮಂ ಕಾಣದೆ,
ಭವಭವಂಗಳಲ್ಲಿ ಕಳವಳಿಸಿ ಬಳಲುತ್ತಿರಲಾ ಜೀವನಿಗೆ ಪ್ರಸನ್ನವಾಗಿ,
ನಾದರೂಪಮಾದ ಭಾವಲಿಂಗಮಂ ಮನದೊಳಗೆ,
ಬಿಂದುರೂಪಮಾದಿಷ್ಟಲಿಂಗಮಂ ಶರೀರದೊಳಗೆ,
ಗುಣಧಾತುಗಳಲ್ಲಿ ಭಾವಸೆಜ್ಜೆಗಳೊಳಿಟ್ಟು ಧರಿಸಲು,
ಜೀವನು ತಾನು ಇಚ್ಛಾಶಕ್ತಿಯೊಳಗೆ ಕೂಡಿ,
ಕರಣಂಗಳಲ್ಲಿಹ ಕ್ರಿಯಾಶಕ್ತಿಯನ್ನು ಇಷ್ಟಲಿಂಗಕ್ಕೆಕೊಟ್ಟು,
ಕಾರಣದಲ್ಲಿರ್ಪ ಕ್ರಿಯಾಶಕ್ತಿಯನ್ನು ಭಾವಲಿಂಗದೊಳಗೆ ಬೆರಸಿ,
ಆಯಾ ಶಕ್ತಿಮುಖಂಗಳಲ್ಲಿ ಆ ಲಿಂಗಂಗಳಂ ಪ್ರಸನ್ನವಂ ಮಾಡಿಕೊಳ್ಳಲು,
ಇಷ್ಟಲಿಂಗಮುಖದಲ್ಲಿ ಪರಿಶುದ್ಧವಾದ ಬಿಂದುಪ್ರಸಾದವನ್ನು ತನುಮುಖದಲ್ಲಿ ಸೇರಿಸಲು,
ಧಾತುರೂಪಮಾಗಿ ಧಾತುವಿನೊಳಗಿರ್ಪ ತಮಸ್ಸನ್ನು ಕೆಡಿಸಲು,
ಅಗ್ನಿಮುಖದಲ್ಲಿ ಬರ್ಪ ಲಯವಡಗಿತ್ತು,
ಭಾವಲಿಂಗಮುಖದಲ್ಲಿ ಪರಿಶುದ್ಧಮಪ್ಪ ಶಬ್ದಪ್ರಸಾದವನ್ನು
ಮನೋಮುಖದಲ್ಲಿ ಸೇವಿಸಲು, ಅವೇ ಗುಣಸ್ವರೂಪಮಾಗಿ,

ಗುಣದೊಳಗಿರ್ಪ ತಮಸ್ಸಂ ಕೆಡಿಸಲು,
ಜೀವನಂ ಪರಿವೇಷ್ಟಿಸಿರ್ಪ ಸೂಕ್ಷ್ಮಶರೀರವೇ ತೇಜೋರೂಪಮಾಯಿತ್ತು.
ತದಾಧಾರಮಪ್ಪ ಸ್ಥೂಲಶರೀರವೇ ವಿಶ್ವವಾಯಿತ್ತು.
ತತ್ಕಾರಣಮಪ್ಪ ಕಾರಣಶರೀರವೇ ಪ್ರಾಜ್ಞವಾಯಿತ್ತು.
ಅಂತಪ್ಪ ಕಾರಣದಲ್ಲಿರ್ಪ ಭಾವಲಿಂಗವು ಶರೀರದಲ್ಲಿರ್ಪ ಇಷ್ಟಲಿಂಗವು
ಎಂಬ ಸುವರ್ಣವಸ್ತುಗಳನ್ನು ಧ್ಯಾನಹಸ್ತದಲ್ಲಿ ಗ್ರಹಿಸಿ,
ಹೃದಯಕುಂಡದಲ್ಲಿ ಅಷ್ಟದಳಕರ್ಣಿಕೆಯೆಂಬ ಮೂಸೆಯೊಳಗಿಟ್ಟು,
ಕರ್ಮಸಮಿಧೆಯಲ್ಲಿ ಜ್ಞಾನಾಗ್ನಿಯನ್ನು ಹೊತ್ತಿಸಿ,
ತಾನೆಂಬ ಬೆಳುಗಾರದಿಂ ಕರಗಿಸಲು, ಎರಡೂ ಒಂದಾಗಿ,
ಅಲ್ಲಿರ್ಪ ಕಳಂಕವೆಲ್ಲಾ ಜ್ಞಾನಾಗ್ನಿಮುಖದಲ್ಲಿ
ಲಯವಂ ಪೊಂದಿ ಘಟ್ಟಿಗೊಂಡಲ್ಲಿ,
ಆ ಬೆಳುಗಾರವದರೊಳಗೆ ಬೆರೆದು ಕಾಣಬಾರದಿರ್ಪಂತೆ,
ಅಹಂಭಾವವು ಲಿಂಗದೊಳಗಡಗಿ,
ಭೇದದೋರದಿರ್ಪುದೆ ಪ್ರಾಣಲಿಂಗಸ್ಥಲವು.
ಇಂತಪ್ಪ ಸುಖವನ್ನು ನನಗೆ ಸಿದ್ಧಿಯಪ್ಪಂತೆಮಾಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೨೯ ॥

೧೦೩೧

ಸ್ಥೂಲಶರೀರವೇ ಬಹಿರಂಗವು, ಸೂಕ್ಷ್ಮಶರೀರವೇ ಅಂತರಂಗವು.
ಜೀವನು ಉದಯದಲ್ಲಿ ಬಹಿರಂಗಕರ್ಮವ್ಯಾಪಾರದಲ್ಲಿ ಸಂಚರಿಸುತ್ತಿರ್ಪನು.
ಅಸ್ತಮಾನದಲ್ಲಿ ಅಂತರಂಗದ ಅರಮನೆಯಂ ಸೇರಿ
ಅಂತಃಕರ್ಮ ವ್ಯಾಪಾರದಲ್ಲಿದ್ದು
ಬಹಿಃಕರ್ಮವ್ಯಾಪಾರ ಸಮಾಪ್ತಿಗಾಗಿ ಅಂತರಂಗಮಂ ಬಿಟ್ಟು,
ಬಹಿರಂಗಮಪ್ಪ ಸ್ಥೂಲಶರೀರದಲ್ಲಿ ಪ್ರವೇಶಿಸುತ್ತಿರಲು.
ಅಗತ ನಿರ್ಗತಂಗಳೇ ಭವವೆನಿಸುತ್ತಿರ್ಪುದು.
ತದ್ವ್ಯಾಪಾರಕೋಟಲೆಗಳೆ ಸುಖದುಃಖಗಳೆನಿಸುತ್ತಿರ್ಪವು.
ಇದಕೆ ಇಚ್ಛೆಯೇ ಕಾರಣವಾಗಿಹುದು.
ಅಂತಪ್ಪ ಇಚ್ಛೆಯೇ ಜ್ಞಾನಸ್ವರೂಪವಾಗಿ, ಜೀವನು ನೇತ್ರಸ್ವರೂಪವಾದಲ್ಲಿ
ಅಂತರಂಗದ ಮನೆಯಲ್ಲಿ ಭಾವಪರ್ಯಂಕದಲ್ಲಿ
ಸುಮನಶ್ಶಯ್ಯಾಮೋದಭರಶುಚಿವಿರಚಿತಶಯನದಲ್ಲಿ ತಜ್ಞಾನಶಕ್ತಿಯೊಳಗೆ
ನಿರ್ವಾಣರತಿಸುಖಾನಂದದೊಳಗೆ ಕ್ರೀಡಿಸುತ್ತಿರ್ಪುದೇ
ಲಿಂಗೈಕ್ಯಾಶ್ರಯಪದವೆನಿಸಿರ್ಪುದು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೩೦ ॥

೧೦೩೨

ಪಶ್ಚಿಮದಲ್ಲಿರ್ಪ ಪೃಥ್ವಿಯೇ ಶರೀರವು,
ಉತ್ತರದಲ್ಲಿರ್ಪ ಜಲವೇ ಅನುಭವವು,
ಪೂರ್ವದಲ್ಲಿರ್ಪ ವಾಯುವೇ ತಾನಾಗಿರ್ಪುದೇ ಜೀವವು,
ದಕ್ಷಿಣದಲ್ಲಿರ್ಪ ಅಗ್ನಿಯೇ ಶರೀರವು,
ಮಧ್ಯದಲ್ಲಿರ್ಪ ಆಕಾಶವೇ ಅನುಭವವು,
ತದಂತರ್ನಿಷ್ಠವಪ್ಪವಪ್ಪ ಆತ್ಮವೇ ನಿಜವಾಗಿರ್ಪುದೇ ಪರಮನು.
ಜೀವರೂಪಮಪ್ಪ ಭಗವತ್ಪೀಠದಲ್ಲಿ
ಪರಮಸ್ವರೂಪಮಪ್ಪ ಲಿಂಗವಂ ಪ್ರತಿಷ್ಠೆಯಂ ಮಾಡಲು,
ತದ್ವಾಯುರೂಪಮಪ್ಪ ಜೀವನು ತೇಜೋಮುಖದಲ್ಲಿ
ಉತ್ತರದಲ್ಲಿರ್ಪ ರಸವಂ ಪರಿಗ್ರಹಿಸಿ, ಪಿಂಡಾಕಾರಮಂ ಮಾಡಿ,
ಪಶ್ಚಿಮದಲ್ಲಿ ಸೃಷ್ಟಿಸಿ, ತತ್ಪೃಥ್ವಿಯಲ್ಲಿ ಶರೀರಾನುಭವಗಳನನುಭವಿಸುತ್ತಿರಲು,
ಜೀವನ ಶರೀರಮಪ್ಪ ಪರಮನ ಶರೀರಮಪ್ಪ ತೇಜಸ್ಸನ್ನೊಳಕೊಂಡು,
ಜೀವಾನುಭವಮಪ್ಪ ಜಲವು ಪರಮಾನುಭವಮಪ್ಪ ಆಕಾಶವನವಗ್ರಹಿಸಿ,
ಜೀವರೂಪಮಪ್ಪ ವಾಯುವು ಪರಮರೂಪಮಪ್ಪ ಆತ್ಮನನೊಳಕೊಂಡು,
ಒಳಗೆ ಶಿವನೂ ಹೊರಗೆ ಜೀವನೂ ಕ್ರೀಡಿಸಿದಲ್ಲಿ,
ತಮೋರೂಪಮಪ್ಪ ಜೀವನು ಸತ್ವರೂಪಮಪ್ಪ
ಪರಮನ ತೇಜಸ್ಸನ್ನವಗ್ರಹಿಸಿ,
ನಿಜಾಂತರ್ರಜೋಮುಖದಿಂ ಬಂಧಿಸಿ ಸೃಷ್ಟಿಸಿದಲ್ಲಿ
ತದ್ರಜೋಮೂರ್ತಿಯೇ ಸೃಷ್ಟಿಕರ್ತೃವಾಯಿತ್ತು.
ಇಂತಪ್ಪ ಸೃಷ್ಟಿ ಸ್ಥಿತಿ ಸಂಹಾರಕರ್ತೃಗಳ ಶಕ್ತಿಮೂಲಮಪ್ಪ
ಜೀವನನಳಲಿಸಿ ಕಾಡುವುದೇ ಭವವು.
ಇಂತಪ್ಪ ಭವದಲ್ಲಿ ಕೋಟಲೆಗೊಳುತ್ತಿರ್ಪ ಜೀವನಿಗೆ
ದಕ್ಷಿಣದಲ್ಲಿರ್ಪ ಗುರುವು ಉತ್ತರಶಕ್ತಿಮುಖದಲ್ಲಿ ಪ್ರಸನ್ನನಾಗಿ,
ಒಳಗಿರ್ಪ ತನ್ನ ನಿಜಲಿಂಗಮೂರ್ತಿಯಂ ಹೊರಗೆ ತಂದು ತೋರಲು,
ಒಳಹೊರಗೆ ಏಕಮಾಯಿತ್ತು.
ನಡುವಿರ್ಪ ಛಾಯೆ ಮಾಯವಾಯಿತ್ತಾಗಿ,
ಪೃಥ್ವಿಯು ಅಗ್ನಿಯೊಳೈಕ್ಯಮಾಗಿ, ಜಲವಾಕಾಶದೊಳಗೆ ಲೀನವಾಗಿ,
ಜೀವನು ಆತ್ಮನೊಳಗೆ ಬೆರದು ಭೇದದೋರದಿರ್ಪುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೩೧ ॥

೧೦೩೩

ವರ್ತಮಾನವೇ ಸ್ಥೂಲವು, ಭೂತಕಾಲವೇ ಸೂಕ್ಷ್ಮವು,
ಭವಿಷ್ಯತ್ಕಾಲವೇ ಕಾರಣವು,

ಇಂತಪ್ಪ ಕಾರಣದಲ್ಲಿ ತಮಸ್ಸೂ,
ವರ್ತಮಾನದಲ್ಲಿ ಸತ್ವವೂ, ಭೂತದಲ್ಲಿ ರಜಸ್ಸೂ,
ಅಂತಪ್ಪ ತಮೋರೂಪವಾದ ಭವಿಷ್ಯತ್ತಿನಲ್ಲಿ ಜೀವನೂ ಇದಿರೇರುತ್ತಿರಲು,
ರಜೋರೂಪವಾದ ಭೂತದಲ್ಲಿ ಮನಸ್ಸು ಇಳಿದುಹೋಗಿ,
ಭೂತದಲ್ಲಿರ್ಪ ಕಾಮನವಶವಾಯಿತ್ತು.
ಜೀವನಿದಿರೇರಿ ಭವಿಷ್ಯದಲ್ಲಿರ್ಪ ಕಾಲವಶವಾದಲ್ಲಿ,
ಸತ್ವವಳಿದು ಶರೀರ ಲಯವಾಯಿತ್ತು.
ಉತ್ತರ ದಕ್ಷಿಣಮುಖವಾಗಿ ಯಾತನೆಬಡುತ್ತಿರ್ಪ ಮನೋಜೀವಗಳು
ಕರ್ಮಾನುಬಂಧದಿಂ ಪೂರ್ವಭೋಗವನನುಸರಿಸಿ ಕೂಡಿ,
ತತ್ಸಂಗಮತ್ವದಿಂ ದ್ರವಿಸುತ್ತಿರ್ಪ ಬಿಂದುವಂ ಹೊಂದಿ,
ಪಶ್ಚಿಮದಲ್ಲಿ ಶರೀರಿಯಾಗಿ ವ್ಯವಹರಿಸುತ್ತಿರ್ಪುದೇ ಭವವು,
ಇಂತಪ್ಪ ವರ್ತಮಾನಕಾಲವನ್ನು ಇಂದ್ರಿಯಂಗಳಿಂದ ತಿಳಿದು.
ಭೂತಕಾಲವನ್ನು ಮನಸ್ಸಿನಿಂದ ತಿಳಿದು,
ಭವಿಷ್ಯತ್ಕಾಲವನ್ನು ಭಾವದಿಂದ ತಿಳಿದು,
ಪುರುಷನು ಭೂತಪದಾರ್ಥವಂ ನಾಶಮಾಡದೆ,
ಭವಿಷ್ಯತ್ಪದಾರ್ಥದೊಳಗೆ ಹೊಂದಿ, ತಾನನುಭವಿಸುತ್ತಿರ್ಪಲ್ಲಿ,
ಆ ಭವಿಷ್ಯತ್ತೇ ವರ್ತಮಾನವಾಗಿ,
ಆ ವರ್ತಮಾನವೇ ಭವಿಷ್ಯದೊಳಗೆ ಬೆರದು ಭೇದದೋರದಿರ್ಪಲ್ಲಿ,
ಭೂತಜ್ಞಾನವಳಿದು ಮನಸ್ಸು ನಾಶವಾಯಿತ್ತು.
ವರ್ತಮಾನಜ್ಞಾನವಳಿದಲ್ಲಿ ಶರೀರೋಪಾಧಿಯು ನಷ್ಟವಾಯಿತ್ತು.
ಭವಿಷ್ಯತ್‌ಜ್ಞಾನವು ನಷ್ಟವಾದಲ್ಲಿ ಜೀವನು ಭ್ರಾಂತಿಯಂ ಬಿಟ್ಟು,
ತಾನೇ ಅಖಂಡಪರಿಪೂರ್ಣವಸ್ತುವಾಗಿರ್ಪುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೇ. || ೩೨ ||

೧೦೩೪

ಸೂರ್ಯನೇ ತೀರ್ಥವು, ಚಂದ್ರನೇ ಪ್ರಸಾದವು,
ತೀರ್ಥವೇ ಬಿಂದುರೂಪವಾಗಿಹುದು,
ಪ್ರಸಾದವೇ ಕಳಾರೂಪವಾಗಿಹುದು.
ತೀರ್ಥವೇ ಕರ್ಮಕರ್ತೃವು, ಪ್ರಸಾದವೇ ಜ್ಞಾನಕರ್ತೃವು,
ತೀರ್ಥದಲ್ಲಿ ಶುಚಿಯು, ಪ್ರಸಾದದಲ್ಲಿ ತೃಪ್ತಿಯು,
ತೀರ್ಥದಲ್ಲಿರ್ಪ ದೀಪನವನ್ನೂ
ಪ್ರಸಾದದಲ್ಲಿರ್ಪ ಕಳಂಕವನ್ನೂ ಲಿಂಗದಲ್ಲಿ ತಿಳಿದು,
ತೀರ್ಥದಲ್ಲಿರ್ಪ ಶುಚಿಯಿಂದ ಪ್ರಸಾದದಲ್ಲಿರ್ಪ ಕಳಂಕವಂ ಕೆಡಿಸಿ,
ಪ್ರಸಾದದಲ್ಲಿರ್ಪ ತೃಪ್ತಿಯಿಂದ ತೀರ್ಥದಲ್ಲಿರ್ಪ ದೀಪನವನ್ನು ಕೆಡಿಸಿ,

ಜ್ಞಾನದಲ್ಲಿ ಪರಿಪಕ್ವಮಾದ ಪ್ರಸಾದವನ್ನೂ
ಕರ್ಮದಲ್ಲಿ ಪರಿಪಕ್ವಮಾದ ತೀರ್ಥವನ್ನೂ
ತನ್ನೊಳಗೆ ತಾನು ತಿಳಿದು ಸೇವಿಸಬಲ್ಲಡೆ ತಾನೇ ಶಿವನಪ್ಪನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೩೩ ||

೧೦೩೫

ಆಕಾಶವೇ ಸೂಕ್ಷ್ಮವು, ಪೃಥ್ವಿಯೇ ಸ್ಥೂಲವು,
ಪೃಥ್ವಿಯಲ್ಲಿ ಮನುಷ್ಯರಿಹರು, ಆಕಾಶದಲ್ಲಿ ದೇವತೆಗಳಿಹರು.
ಮನುಷ್ಯರಿಗೆ ತಮೋ ರೂಪಮಾದ ರಾತ್ರಿಯೇ
ದೇವತೆಗಳಿಗೆ ಸತ್ವರೂಪಮಪ್ಪ ದಿವವೇ
ಅಹಸ್ಸಾಗಿ, ಅದರಲ್ಲಿ ಸಂಚರಿಸುತ್ತಿಹರು.
ದಿವದಲ್ಲಿ ಪೃಥ್ವಿಯು ಪ್ರತ್ಯಕ್ಷಮಾಗಿಹುದು,
ರಾತ್ರಿಯಲ್ಲಿ ಆಕಾಶವು ಪ್ರತ್ಯಕ್ಷಮಾಗಿಹುದು.
ಮನುಷ್ಯರಿಗೆ ದೇವಲೋಕವು ಉದ್ದವಾಗಿ,
ದೇವತೆಗಳಿಗೆ ಮನುಷ್ಯಲೋಕವು ಉದ್ದವಾಗಿರ್ಪುದರಿಂದ
ಮನುಷ್ಯರಿಗೆ ಸೂರ್ಯಮಂಡಲವು ಉನ್ನತಮಾಗಿ,
ಆ ಸೂರ್ಯನಿಂದ ಬಂದ ಜ್ಞಾನವೇ ಭೂಮಿಯಲ್ಲಿ ಕರ್ಮವಶಮಾಗಿ,
ಮನುಷ್ಯರಿಗೆ ಬಿಂದುರೂಪದಲ್ಲಿ ಫಲಿಸಿ, ಅದೇ ಜೀವನಮಾಯಿತ್ತು,
ದೇವತೆಗಳಿಗೆ ಚಂದ್ರಮಂಡಲವು ಉನ್ನತಮಾಗಿ,
ಆ ಚಂದ್ರಕಿರಣದಿಂದ ಬಂದ ಅಮೃತವು ಆಕಾಶದಲ್ಲಿ ವ್ಯಾಪಿಸಿ,
ಜ್ಞಾನಮುಖದಲ್ಲಿ ಸದ್ಯಃಫಲವಾಗಿರ್ಪ ಕಳೆಯೇ
ದೇವತೆಗಳಿಗೆ ಜೀವನಮಾಯಿತ್ತು,
ದೇವತೆಗಳಿಗೆ ಶಾಸ್ತ್ರವೇ ಸಿದ್ಧಾಂತಮಾಯಿತ್ತು,
ಮನುಷ್ಯರಿಗೆ ಜ್ಯೋತಿಷ್ಯವೇ ಸಿದ್ಧಾಂತಮಾಯಿತ್ತು.
ದೇವತೆಗಳಿಗೆ ಕಾಲದಲ್ಲಿ ಕರ್ಮವು ಸವೆದುದೇ ಮರಣವು.
ಮನುಷ್ಯರು ಮರಣಾಂತದಲ್ಲಿ ಬ್ರಹ್ಮಾಂಡದಲ್ಲಿರ್ಪ ನರಕವನನುಭವಿಸಿ,
ಪಾತಾಳಲೋಕದಲ್ಲಿ ಕಳಾಮುಖದಲ್ಲಿ ಹೋಗಿ
ದೇವಲೋಕದಲ್ಲಿ ಜನಿಸುತ್ತಿಹರು.
ದೇವತೆಗಳು ಮರಣಾಂತದಲ್ಲಿ ಪಿಂಡಾಂಡ ನರಕವನನುಭವಿಸಿ,
ಸೂಕ್ಷ್ಮ ತ್ರಿಕೋಣಸ್ವರೂಪಮಪ್ಪ ಪಾತಾಳದಲ್ಲಿ
ಬಿಂದುಮುಖದಲ್ಲಿ ಜನಿಸುತ್ತಿಹರು.
ದೇವತೆಗಳೇ ಸತ್ವಸ್ವರೂಪರು, ಮನುಷ್ಯರು ತಮಸ್ಸ್ವರೂಪರು,
ಮನುಷ್ಯರೂಪಾದ ತಮಸ್ಸನ್ನು ದೇವತೆಗಳು ಆಚರಿಸುತ್ತಿಹರು,
ದೇವತಾರೂಪಮಾದ ಸತ್ವವನ್ನು ಮನುಷ್ಯರು ಆಚರಿಸುತ್ತಿರಲು,

ಈ ಮನುಷ್ಯರು ಆಚರಿಸುವ ಸತ್ವವೇ
ಸತ್ವರೂಪವಾದ ದೇವಲೋಕವಂ ಹೊಂದಿಸುತ್ತದೆ.
ದೇವತೆಗಳು ಆಚರಿಸುವ ತಮಸ್ಸೇ
ತಮೋರೂಪವಾದ ಮರ್ತ್ಯಲೋಕವಂ ಹೊಂದಿಸುತ್ತಿರ್ಪ
ಯಾತಾಯಾತವೇ ಭವವೆನಿಸಿಕೊಂಡಿತ್ತು.
ಇಂತಪ್ಪ ವಿವೇಕವನ್ನು ಗುರುಮುಖದಿಂದ ತಿಳಿದ ಮಹಾಪುರುಷನು
ಸ್ಥೂಲವನ್ನು ಕರ್ಮದಿಂದ ಪರಿಶುದ್ಧಿಮಾಡಿ,
ಸೂಕ್ಷ್ಮವನ್ನು ಜ್ಞಾನದಿಂ ಪರಿಶುದ್ಧವಂ ಮಾಡಿ,
ಎರಡಕ್ಕೂ ಮಧ್ಯದಲ್ಲಿ ತನ್ನ ನಿಜಸ್ವರೂಪವಾಗಿರ್ಪ
ಶಬ್ದಪ್ರಕಾಶಮಪ್ಪ ಆ ಭಾವದಲ್ಲಿ ಬೆರದು,
ಆ ಭಾವದಿಂದಲೇ ಈ ಸ್ಥೂಲ ಸೂಕ್ಷ್ಮಂಗಳಂ ಭೇದಿಸಿ,
ಆ ಭೇದಿಸುವುದಕ್ಕೆ ಇದೇ ಕಾರಣವಾಗಿ, ಆ ಭಾವವು ಬಲಿದುಬರಲು,
ಸ್ಥೂಲಸೂಕ್ಷ್ಮಂಗಳಳಿದು ಭಾವದೊಳಗೆ ಲೀನವಾಗಲು,
ಸ್ವರ್ಗನರಕಂಗಳಳಿದು ಭಾವಸ್ವರೂಪಮಾಗಿರ್ಪುದೇ ನಿಜವು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೩೪ ||

೧೦೩೬

ಶರೀರವೇ ಸ್ಥೂಲವು, ಮನಸ್ಸೇ ಸೂಕ್ಷ್ಮವು,
ಇಂದ್ರಿಯಂಗಳೇ ಶರೀರವು, ವಿಷಯಂಗಳೇ ಮನಸ್ಸು,
ಮನಸ್ಸಿನಲ್ಲಿ ಧರ್ಮವು, ಕರ್ಮಮೂಲದಲ್ಲಿ ಬಿಂದುವು,
ಧರ್ಮಮೂಲದಲ್ಲಿ ಜ್ಞಾನವು, ಕರ್ಮಕರ್ತೃವೇ ಇಷ್ಟವು,
ಧರ್ಮಕರ್ತೃವೇ ಪ್ರಾಣವು, ಕರ್ಮಕರ್ತೃವೇ ಸಗುಣವು,
ಧರ್ಮಕರ್ತೃವೇ ನಿರ್ಗುಣವು, ಕರ್ಮಕರ್ತೃವಿಗೆ ಪೃಥ್ವಿಯೇ ಸ್ಥಾನವು,
ಕರ್ಮಕ್ಕೆ ಜಲವೇ ಸ್ಥಾನವು, ಧರ್ಮಕರ್ತೃವಿಗೆ ಅಗ್ನಿಯೇ ಸ್ಥಾನವು,
ಧರ್ಮಕ್ಕೆ ವಾಯುವೇ ಸ್ಥಾನವು,
ಕರ್ಮಕರ್ತೃವಿನಲ್ಲಿ ರೂಪು, ಧರ್ಮಕರ್ತೃವಿನಲ್ಲಿ ರುಚಿಯು,
ಧರ್ಮಕರ್ತೃ ಶಿವನು, ಕರ್ಮಕರ್ತೃ ಶೈವವು,
ಮನದೊಳಗೆ ಜೀವನು ಲಿಂಗವಂ ಗ್ರಹಿಸಿದಲ್ಲಿ,
ಶರೀರದೊಳಗೆಕೂಡಿ ಲಿಂಗವು ಜೀವನಂ ಗ್ರಹಿಸಿತ್ತು.
ಶರೀರಸುಖವೇ ಮನದಲ್ಲಿ ಪರಿಣಾಮವಾದಂತೆ,
ಇಷ್ಟಮೂರ್ತಿಯೇ ಪ್ರಾಣದಲ್ಲಿ ಸಾಧ್ಯವಾಯಿತ್ತು.
ಇದೇ ಸ್ಥೂಲವು, ಅದೇ ಸೂಕ್ಷ್ಮವು.
ಇವೆರಡರ ಭೇದಕ್ಕೆ ಭಾವವು ತಾನೊಂದೇ ಕಾರಣಮಾಯಿತ್ತು.
ಅಂತಪ್ಪ ಸಹಸ್ರದಳರೂಪಮಪ್ಪ

ಭಾವದಲ್ಲಿ ಇಷ್ಟಪ್ರಾಣಂಗಳೇಕಮಾದಲ್ಲಿ,
ಆಕಾಶವಾದ ಪ್ರಾಣವೇ ಆತ್ಮಸ್ವರೂಪವಾದ
ನಿರ್ಮಲ ಲಿಂಗವಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೩೫ ||

## ನಾಲ್ಕನೆಯ ಅಧ್ಯಾಯ

೧೦೩೭

ಚಂದ್ರಮಂಡಲಮಧ್ಯಸ್ಥನೇ ಶಿವನು,
ಸೂರ್ಯಮಂಡಲಮಧ್ಯಸ್ಥನೇ ವಿಷ್ಣುವು,
ತಮೋರೂಪಮಪ್ಪ ಸೂರ್ಯನೇ ಗರುಡನು,
ಅದಕ್ಕೆ ದ್ವೈತಾದ್ವೈತಕರ್ಮಗಳೇ ಪಕ್ಷಗಳು,
ಸತ್ವರೂಪಮಪ್ಪ ಚಂದ್ರನೇ ವೃಷಭವು,
ಅಂತಃಕರಣಚತುಷ್ಟಯಂಗಳೇ ಪಾದಂಗಳು.
ಗರುಡನು ರಜೋರೂಪಮಪ್ಪ ಪಾದಂಗಳಲ್ಲಿ ಗ್ರಹಿಸುತ್ತಿರ್ಪನು.
ನಂದೀಶ್ವರನು ತಮೋರೂಪಮಪ್ಪ ಶೃಂಗಂಗಳಿಂದ ಸಂಹರಿಸುತ್ತಿರ್ಪನು.
ಅದಕ್ಕೆ ಚಂದ್ರಮಂಡಲದಲ್ಲಿರ್ಪ ಕಾಳಿಯೂ,
ಸೂರ್ಯಮಂಡಲದಲ್ಲಿರ್ಪ ಲಕ್ಷ್ಮಿಯೂ ಪ್ರತ್ಯಕ್ಷವು.
ಆ ಚಂಪ್ರನು ವಿಷ್ಣುರೂಪಮಪ್ಪ ರಾತ್ರಿಯಲ್ಲಿ ಭೇದದಿಂ ವರ್ತಿಸುತ್ತಿಹನು.
ಶಿವಸ್ವರೂಪಮಾದ ಅಹಸ್ಸಿನಲ್ಲಿ ಸೂರ್ಯನು ಅಭೇದದಿಂ ವರ್ತಿಸುತ್ತಿಹನು.
ಅಂತಪ್ಪ ಜಾಗ್ರದಲ್ಲಿ ತಮೋರೂಪಮಪ್ಪ ಬಾಹ್ಯಕರ್ಮವನಾಚರಿಸುತ್ತಿಹರು.
ರಾತ್ರಿಯಲ್ಲಿ ಸತ್ಯಸ್ವರೂಪಮಪ್ಪ ಶರೀರಧರ್ಮವನಾಚರಿಸುತ್ತಿಹರು.
ಧರ್ಮಮುಖದಲ್ಲಿ ಸತ್ಯವಂ ಬಿಡುತ್ತಿಹರು,
ಕರ್ಮಮುಖದಲ್ಲಿ ತಮಸ್ಸಂ ಬಿಡುತ್ತಿಹರು.
ಆ ಸತ್ವವಂ ಬಿಡಿಸುವ ಭಕ್ತಿಯೇ ಶಿವಸ್ವರೂಪು,
ತಮಸ್ಸಂ ಬಿಡಿಸುವ ಜ್ಞಾನವೇ ವಿಷ್ಣುಸ್ವರೂಪು.
ಅಂತಪ್ಪ ಭಕ್ತಿಯ ಬಹಿರ್ಮೂರ್ತಿಯಪ್ಪ ಶಿವನಲ್ಲಿ ಸೇರಿ,
ಅಂತಪ್ಪ ಜ್ಞಾನದ ಅಂತರ್ಮೂರ್ತಿಯಪ್ಪ ವಿಷ್ಣುವಿನಲ್ಲಿ ಸೇರಿ,
ಬಹಿರಂತರ ಶಿವಶಕ್ತಿಸಂಗಮದಲ್ಲಿ ನಿಜಾನಂದಸುಖವು ಪ್ರಕಾಶವಾಯಿತ್ತು,
ಜ್ಞಾನದಲ್ಲಿ ಜೀವನು ಕೂಡಿ ಅಭೇದವಾಯಿತ್ತು,
ಭಕ್ತಿಯಲ್ಲಿ ಶರೀರವು ಕೂಡಿ ಭಿನ್ನಚತುರ್ವಿಧ ಫಲಪದವಿಗಳಾಯಿತ್ತು.
ಮೋಕ್ಷದಲ್ಲಿ ಶಿವಭಕ್ತರು ನಿರ್ವಾಣಶಕ್ತಿಸುಖಂಗಳನನುಭವಿಸುತ್ತಿರ್ಪರು,
ಫಲಪದವಿಗಳಲ್ಲಿ ವಿಷ್ಣುಭಕ್ತರು ಅಲಂಕೃತ
ಶಿವಗುಣಸುಖಗಳನನುಭವಿಸುತ್ತಿರ್ಪರು.
ವಿಷ್ಣುಗುಣರೂಪಮಪ್ಪ ಪರಲೋಕಕ್ಕೆ ಶಿವನೇ ಅಧಿಪತಿಯಾಗಿಹನು.

ಮನುಷ್ಯರೆಲ್ಲಾ ವಿಷ್ಣುಭಕ್ತರು, ದೇವತೆಗಳೆಲ್ಲಾ ಶಿವಭಕ್ತರು.
ವಿರಕ್ತರಾಗಿರ್ದು ಶಕ್ತಿಯುತರಾಗಬಾರದು,
ಅನಾಯಾಸದಲ್ಲಿ ಶಕ್ತ್ಯೈಶ್ವರ್ಯಸುಖಗಳು ಬಂದರೆ
ಲಿಂಗಮುಖವಾದ ಜಂಗಮಕ್ಕೆ ನೀಡಬೇಕು.
ಕರ್ಮವೇ ವಿಷ್ಣುವು, ಧರ್ಮವೇ ಶಿವನು.
ಕರ್ಮಹೀನರು ನರಕವನ್ನನುಭವಿಸುತ್ತಿಹರು.
ವಿಷ್ಣುಭಕ್ತನು ಮನುಷ್ಯರಿಂದ ಪೂಜ್ಯನಪ್ಪ ಮಹಾರಾಜನಾಗಿ ಹುಟ್ಟುವನು.
ಶಿವಭಕ್ತನು ದೇವತೆಗಳಿಂದ ಪೂಜ್ಯನಪ್ಪ
ಸದ್ಗುಣೈಶ್ವರ್ಯಸಂಪನ್ನನಾಗಿ ಹುಟ್ಟುವನು.
ಇಂತೀ ಬಿನ್ನವಿಸಿರ್ಪ ಸ್ಥೂಲಸೂಕ್ಷ್ಮಮಪ್ಪ ಶಿವಭಕ್ತಿಭೇದವನ್ನು
ಕಾರಣಭಾವದಲ್ಲಿ ಭೇದಿಸಿ, ಒಂದೊಂದಾಗಿ ಸಿಕ್ಕುಬಿಡಿಸಿ,
ಆಯಾ ವಸ್ತುಗಳ ಸಂಬಂಧವನ್ನರಿತು ತೆಗೆದು, ಸಂಬಂಧವಸ್ತುಗಳಲ್ಲಿ ಬೆರಸಿ,
ಇದು ಶಕ್ತಿ ಇದು ಶಿವನು ಎಂಬುದನ್ನು ವಿರ್ಪಾಟುಮಾಡಿ,
ಶಿವನೇ ಪ್ರಾಣಮಾಗಿ, ಶಕ್ತಿಯೇ ಶರೀರವಾಗಿ,
ಕಾರಣ ಭಾವದಲ್ಲಿ ಎರಡೂ ಏಕಮಾದಲ್ಲಿ
ರಜೋರೂಪಮಪ್ಪ ಮನವಳಿದು,
ತಮೋರೂಪಮಪ್ಪ ಶಕ್ತಿಯು ಸರ್ವಸ್ವರೂಪಮಪ್ಪ ಶಿವನೊಳಗೆ
ಲೀನಮಾಯಿತ್ತು.
ಅದೆಂತೆಂದೊಡೆ :
ಸ್ವಪ್ನವಳಿದು ಸುಷುಪ್ತಿಯು ಜಾಗ್ರದೊಳಗೆ
ಬಿಂದುಭೇದದೋರದಿರ್ಪಂದದಿ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೩೬ ॥

೧೦೩೮

ಒಳಗೆ ಪಾಪವೂ ಹೊರಗೆ ಧರ್ಮವೂ ಮನುಷ್ಯರಿಗೆ,
ಹೊರಗೆ ಪಾಪವೂ ಒಳಗೆ ಧರ್ಮವು ದೇವತೆಗಳಿಗೆ.
ದೇವತೆಗಳು ಬಾಹ್ಯತಮರಾದುದರಿಂದ ಆ ತಮಸ್ಸೇ ಅಶುಚಿಯಾಗಲಾಗಿ,
ಅಶುಚಿಯಲ್ಲಿ ಕಾರಣರೂಪನಾದ ಪರಮಾತ್ಮನು.
ಸತ್ಕರ್ಮದಲ್ಲಿ ಭಜಿಸುವುದಕ್ಕೆ ಯೋಗ್ಯವಲ್ಲವಾಯಿತ್ತು.
ಈ ಮನುಷ್ಯರು ಅಂತಸ್ತಮರೂ ಬಹಿಶ್ಶುಚಿಗಳೂ ಆಗಲಾಗಿ,
ಆ ಕಾರಣರೂಪನಾದ ಶಿವನಲ್ಲಿ ಬಾಹ್ಯಕ್ರಿಯೆಗೆ ಯೋಗ್ಯವಲ್ಲದೆ
ಅಂತಃಕ್ರಿಯೆಗೆ ಯೋಗ್ಯವಲ್ಲವಾಯಿತ್ತು.
ಆದರಂದ ಬಾಹ್ಯರಸಮುಳ್ಳ ಕಾಷ್ಠವೇ ದೇವತೆಗಳು,
ಅಂತರ್ರಸಮುಳ್ಳ ಕಾಷ್ಠವೇ ಮನುಜರು.

ಇಂತಪ್ಪ ಕಾಷ್ಠಭಾವದಲ್ಲಿ ಸುಷುಪ್ತಿಯಂ ಹೊಂದಿರ್ಪ
ಜ್ಞಾನಾಗ್ನಿಯೇ ಕಾರಣಶರೀರವು ;
ಅದು ಪರಮಪವಿತ್ರವಾಗಿಹುದು.
ಅಂತಪ್ಪ ಕಾರಣಕಲಾಶರೀರವಾಗಿರ್ಪ ಶಿವನು
ಮಹಾಗುರುಪ್ರಯೋಗಾಂತರದಿಂ ಶರೀರವೆಂಬ ಕಾಷ್ಠದಲ್ಲಿ ಹೊತ್ತಿಸಲು,
ಆ ಕಾಷ್ಠವನೆಡೆವಿಡದೆ ಪ್ರಕಾಶವಾಗಿದ್ದಲ್ಲಿ,
ಆ ಕಾಷ್ಠದೊಳಗಿರ್ಪ ರಸವಾರಿ, ದಿವ್ಯತೇಜಸ್ಸು ಕಾಷ್ಠದೊಳಗೆ ಪ್ರಕಾಶವಾಗಿ,
ಆ ಅಗ್ನಿಯೇ ಕಾಷ್ಠದೊಳಹೊರಗೆ ತಾನೆಯಾಗಿರ್ದಲ್ಲಿ,
ಹೊರಗಿರ್ದ ಅಗ್ನಿಯನ್ನು ಪರಿಸಮಾಪ್ತಿಯಂ ಮಾಡಿ,
ತದಗ್ನಿಯನ್ನು ಭಾವದಲ್ಲಿ ವೇದಿಸಹೋದರೆ,
ಅಗ್ನಿಯು ವೇದಿಸಿತಲ್ಲದೆ ಕಾಷ್ಠವು ವೇದಿಸಿತೇನಯ್ಯಾ ?
ಅಗ್ನಿಯಾರಿದ ಕಾಷ್ಠವೇ ಅಪವಿತ್ರವು.
ಆದುದರಿಂದ ಕಾಷ್ಠಕ್ಕೆ ಹೊತ್ತಿಸಿದ ಅಗ್ನಿಯನ್ನು ಆ ಕಾಷ್ಠದೊಳಗಿರ್ಪ ರಸವಾರದನ್ನಕ್ಕ ಭಿನ್ನಿಸಲಾಗದು.
ಸತ್ಕ್ರಿಯಾಮುಖದಿಂ ಭಿನ್ನಿಸದಿರ್ದಲ್ಲಿ,
ಆ ಕಾಷ್ಠದೊಳಗಿರ್ಪ ರಸವಾರುವುದೇನಯ್ಯಾ ?
ಆ ರಸವಾರಿದಲ್ಲಿ ಬಯಲಪ್ಪುದೇನಚ್ಚರಿಯಯ್ಯಾ.
ಅದಲ್ಲದೆ ಕಾಷ್ಠದೊಳಗಣ ಅಗ್ನಿಯು ಕಾಷ್ಠವಂ ಹತ್ತಿದಲ್ಲಿ,
ಕಾಷ್ಠವಂ ಸೇರಿದ ಕಾಷ್ಠವೆಲ್ಲಾ ಬಯಲಪ್ಪುದಲ್ಲದೆ ಶಿಲೆಬಯಲಪ್ಪುದೇನಯ್ಯಾ ?
ಶಿಲೆಯೊಳಗಿರ್ಪ ಅಗ್ನಿಯು ಕಾಷ್ಠವಂ ಹತ್ತಿದಲ್ಲಿ,
ಕಾಷ್ಠವು ಬಯಲಪ್ಪುದಲ್ಲದೆ ಶಿಲೆಬಯಲಪ್ಪುದೇನಯ್ಯಾ ?
ಶಿಲೆಯೊಳಗಿರ್ಪ ಅಗ್ನಿಯು ಕಾಷ್ಠವಂ ಹತ್ತಿದಲ್ಲಿ,
ಕಾಷ್ಠವು ಬಯಲಪ್ಪುದಲ್ಲದೆ ಶಿಲೆಬಯಲಪ್ಪುದೇನಯ್ಯಾ ?
ಅಂತಪ್ಪ ಗುರುವಜ್ಞಾನಿಯಾಗಿ ಶಿಷ್ಯನು ಜ್ಞಾನಿಯಾದುದೇ ಶಿಲಾಕಾಷ್ಠನ್ಯಾಯವು.
ಗುರುವು ಜ್ಞಾನಿಯಾಗಿ ಶಿಷ್ಯನು ಅಜ್ಞಾನಿಯಾದುದೇ ಕಾಷ್ಠಶಿಲಾನ್ಯಾಯವು.
ಈರ್ವರೂ ಅಜ್ಞಾನಿಗಳಾದುದೇ ಶಿಲಾ ಶಿಲಾನ್ಯಾಯವು.
ಇಬ್ಬರೂ ಜ್ಞಾನಿಗಳಾದುದೇ ಕಾಷ್ಠ ಕಾಷ್ಠನ್ಯಾಯವಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೩೭ ॥

೧೧೦೪

ವಟಮೂಲವಾಸಿಯಪ್ಪ ಗುರುವು
ಮಂತ್ರಶಕ್ತಿಯನಂಗದಲ್ಲಿ ಧರಿಸಲು
ತತ್ಕೃಪಾಬಿಂದುವೇ ಮೂರ್ತಿಗೊಂಡಂತೆ,
ಕರಕಮಲದಲ್ಲಿ ಪ್ರಾದುರ್ಭವಿಸಿದ ಶರಣನು

ತತ್ಪ್ರಸಾದವಾಕ್ಯಾಮೃತವನುಂಡು ಬೆಳೆದು,
ನಿಜವಾಸನೆಯಿಂ ಸ್ವಭಾವ ಯೌವನ ಪ್ರಾರಂಭದಲ್ಲಿ ತನುವೇ ಘನವಾಗಿ,
ಪರಮಪವಿತ್ರತ್ವದಿಂ ಪ್ರಕಾಶಿಸುತ್ತಿರಲು,
ಚಿದಂಬರಮಂ ದೆಶೆವಿಡಿದುಟ್ಟು, ತತ್ವದ ತೊಡವೆಗಳಂ ತೊಟ್ಟು,
ಸರ್ವಾಲಂಕಾರಶೋಭಿನಿಯಾಗಿರ್ಪ ಭಕ್ತಿಸುತೆಯಂ ದೇಶಿಕಂ ನೋಡಿ,
ತದ್ಘಟಫಲಾನುಭವಕಾರಣ ಜಂಗಮರೂಪಮಾಗಿ,
ಆದಿಶಕ್ತಿಸಂಗದಿಂ ಪ್ರಕಾಶಿಸುತ್ತಿರ್ಪ ಮಹತ್ವದದಲ್ಲಿ
ಸ್ವಪ್ರಕಾಶಮೇ ಮೂರ್ತಿಗೊಂಡು ಜನಿಸಿ,
ಭಾವದಲ್ಲಿ ಬೆಳೆದು ತುರ್ಯ ಯೌವನದಲ್ಲಿ ಪರಮಸತ್ವಧೌತಾಂಬರವನುಟ್ಟು,
ಅಹೀನಾಭರಣನಾಗಿರ್ಪ ಲಿಂಗಮಂ ಪ್ರಾರ್ಥಿಸಿ,
ವರದಕ್ಷಿಣೆಯನಿತ್ತು, ಬಿಜಯಂಗೈದ ದೇಶಿಕಾರ್ಯನು
ಲಿಂಗಮೂರ್ತಿಯಪ್ಪ ಜಾಮಾತೃವಿನ ಪಾದಗಳನ್ನರ್ಚಿಸಿ,
ಬಿಂದುಮಧ್ಯದಲ್ಲಿ ನಾದರೂಪನಾಗಿರ್ದ ಲಿಂಗಕ್ಕೆ,
ನಾದಮಧ್ಯದಲ್ಲಿ ಬಿಂದುರೂಪಮಾಗಿರ್ಪ ಭಕ್ತಿಸುತೆಯಂ
ವಿಧ್ಯುಕ್ತವಾಗಿ ಧಾರೆಯನ್ನೆರೆದು, ಪಾಣಿಗ್ರಹಣಮಂ ಮಾಡಿಕೊಡಲು,
ಆ ಶರಣನೇ ಸತಿ ಲಿಂಗವೇ ಪತಿಯಾಗಿ,
ಈರ್ವರಿಗೂ ಯೌವನಕಲೆಗಳೊಂದಾಗಿ,
ಪರಮಾನಂದರತಿಕ್ರೀಡಾ ಪತಿವ್ರತಾಚರಣೆಯೇ ಕರಣಮಾಗಿರಲಾಶರಣನು
ಉಭಯಕುಲದ ಹಿರಿಯರಿಗೂ ಆತಿಥ್ಯಾದಿಸತ್ಕಾರಮಂ ಮಾಡುತ್ತಾ,
ಉಭಯಕುಲಂಗಳಂ ಸ್ವಧರ್ಮಂಗಳಿಂ ಪರಿಶುದ್ಧಮಂ ಮಾಡುತ್ತಾ,
ಪತಿಯ ಸ್ವಭಾವವನ್ನು ನಿಜಭಾವದಿಂದ ತಿಳಿದು,
ತದನುಕೂಲಕರ್ಮಂಗಳನೆಸಗುತ್ತಾ,
ಸರ್ವಮಂಗಳರೂಪಮಾಗಿ ಅಕಲ್ಮಷಾಂತಃಕರಣದಿಂದಾಚರಿಸುತ್ತಿರಲು,
ಪತಿಯು ಪ್ರಸನ್ನನಾಗಿ, ಅಂತರಂಗದಲ್ಲಿ ನಿರ್ವಾಣರತಿಸುಖದಲ್ಲಿ ಕ್ರೀಡಿಸಿ,
ವೈರಾಗ್ಯವೆಂಬ ಪುತ್ರನಂ ಪಡೆದು, ಅವಂಗೆ ಮೋಕ್ಷಸಾಮ್ರಾಜ್ಯಪಟ್ಟವಂ ಕಟ್ಟಿ,
ತಾವಿಬ್ಬರೊಂದಾಗಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೩೮ ||

೧೦೪೦

ಶಿವಬಿಂದುವೇ ಚಂದ್ರಸ್ವರೂಪು. ಶಕ್ತಿಬಿಂದುವೇ ಸೂರ್ಯಸ್ವರೂಪು.
ಇವು ಶ್ವೇತರಕ್ತವರ್ಣಂಗಳಾಗಿಹವು.
ಅದೆಂತೆಂದೊಡೆ :
ವರ್ಷಕ್ಕೊಂದೊಂದು ಕಳೆಯ ಲೆಕ್ಕದಲ್ಲಿ ಷೋಡಶಕಳಾಪರಿಪೂರ್ಣವಾದಲ್ಲಿ
ಪುರುಷಂಗೆ ಯೌವನೋದಯವಾಗಿತ್ತು,

ಸ್ತ್ರೀಗೆ ವರ್ಷಕ್ಕೊಂದೊಂದಾಗಿ ದ್ವಾದಶಮೂರ್ತಿಗಳೇಕವಾದಲ್ಲಿ
ದ್ವಾದಶಸಂವತ್ಸರದಲ್ಲಿ ಯೌವನೋದಯವಾಯಿತ್ತು.
ಸ್ತ್ರೀಯಲ್ಲಿ ಹನ್ನೆರಡುಕಳೆಗಳೂ, ಪುರುಷನಲ್ಲಿ ಹದಿನೈದು ಕಳೆಗಳೂ ಕೂಡಿ,
ಈ ಇಪ್ಪತ್ತೆಂಟು ಕಳೆಗಳೇ ಇಪ್ಪತ್ತೆಂಟು ಮಹಾನಕ್ಷತ್ರಂಗಳಾದವು.
ಈ ಎರಡರ ಸಂಗವೇ ಅಮಾವಾಸ್ಯೆಯಾಯಿತ್ತು.
ಸ್ತ್ರೀಗೆ ಶರೀರವೇ ಸೂರ್ಯಸ್ವರೂಪು, ಮನಸ್ಸೇ ಚಂದ್ರಸ್ವರೂಪು.
ಪುರುಷನಿಗೆ ಶರೀರವೇ ಚಂದ್ರಸ್ವರೂಪು, ಮನಸ್ಸೇ ಸೂರ್ಯಸ್ವರೂಪು.
ಸೂರ್ಯಮಂಡಲವು ಕೆಳಗಾಗಿಯೂ, ಚಂದ್ರಮಂಡಲವು ಮೇಲಾಗಿಯೂ
ಇರ್ಪ ದೇವಲೋಕವೇ ಸ್ತ್ರೀ.
ಚಂದ್ರಮಂಡಲವು ಕೆಳಗೂ, ಸೂರ್ಯಮಂಡಲವು ಮೇಲಾಗಿಯೂ
ಇರ್ಪ ಮರ್ತ್ಯಲೋಕವೇ ಪುರುಷನು.
ಈ ಎರಡಕ್ಕೂ ಪಾತಾಳಲೋಕದಲ್ಲಿ ಸಂಬಂಧವುಂಟಾಗಿ ಸೃಷ್ಟಿಯೂ,
ಮರ್ತ್ಯಲೋಕದಲ್ಲಿ ಸ್ಥಿತಿಯೂ, ದೇವಲೋಕದಲ್ಲಿ ಸಂಹಾರವೂ
ಆಗುತ್ತಿರ್ಪ ವಿಚಾರವನ್ನು ಗುರೂಪದೇಶದಿಂದ ತಿಳಿದು,
ಆ ಗುರುಕರುಣದಿಂ ದೇವಲೋಕದೊಳಿರ್ಪ ಜಾಗ್ರವನ್ನೂ
ಮರ್ತ್ಯಲೋಕದಲ್ಲಿರ್ಪ ಸ್ವಪ್ನವನ್ನೂ
ಪಾತಾಳಲೋಕದಲ್ಲಿರ್ಪ ಸುಷುಪ್ತಿಯನ್ನೂ
ಮೀರಿದ ತೂರ್ಯಾತೀತಲಿಂಗಮಂ ಪಡೆದು,
ಮರ್ತ್ಯಲೋಕದ ಸತ್ಕರ್ಮಂಗಳಿಂ ಸ್ವರ್ಗಲೋಕದ ಭೋಗವನ್ನೂ
ಪಾತಾಳಲೋಕದಾನಂದವನ್ನೂ ನಿರಹಂಭಾವದಿಂದರಿದರ್ಪಿಸಿ,
ತಲ್ಲಿಂಗಪ್ರಸಾದೋಪಭೋಗಿಯಾದ ಶರಣನೇ
ನಿರ್ಲೇಪನಾಗಿ ನಿಜಾನಂದನಿಶ್ಚಿಂತಸುಖದೊಳಾಡುತ್ತಿರ್ಪನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೩೯ ||

೧೦೪೧

ಎಲ್ಲಾ ಮಹಿಮೆಯೂ ತನ್ನಲ್ಲುಳ್ಳ ಮಹಾಸತ್ತೇ ನಿಜವು.
ಅದು ಸಾಕಾರಕ್ಕೆ ಬಪ್ಪಲ್ಲಿ, ಆ ನಿಜವೇ ಜ್ಞಾನರೂಪವಾದಲ್ಲಿ
ಆ ಮಹಿಮೆಯೇ ಸತ್ವರೂಪವಾಯಿತ್ತು,
ಆ ಜ್ಞಾನರೂಪನಾದ ಶಿವನು ಸತ್ವಸ್ವರೂಪವಾದ
ಮಹಾಶಕ್ತಿಯೊಳಗೆ ಕೂಡಿದಲ್ಲಿ,
ಅಹಂಕಾರವೆಂಬ ರಜೋಮೂರ್ತಿಯುತ್ಪನ್ನವಾಯಿತ್ತು.
ಅಹಂಕಾರದಲ್ಲಿ ಕಾಮಾದ್ಯರಿಷಡ್ವರ್ಗಂಗಳುದಿಸಿ
ಬಹುವಿಧಕರ್ಮಗಳಂ ಸೃಷ್ಟಿಸಲು,
ಆ ಕರ್ಮಂಗಳಿಂ ಅಜ್ಞಾನ ಕೆಡುತ್ತಿರಲು,

ಶಿಲಾಬದ್ಧ ಪುರುಷರತ್ನದೋಪಾದಿಯಲ್ಲಿ ಹೊದ್ದಿ ಹೊದ್ದದೆ
ಭೇದಿಸಿ ತಿಳಿದಲ್ಲಿ ತನ್ನ ನಿಜಮಹಿಮೆಯೇ ಪ್ರಕಾಶಮಾಗಿ,
ಸಕಲಕ್ಕೂ ತಾನೇ ಲಯಕರ್ತೃವಾಗಿ
ಚ್ಯುತಿಯಿಲ್ಲದಿರ್ಪ ಮಹಾಜ್ಞಾನವೇ ಶಿವನು,
ಆ ಸತ್ವವೇ ವಿಷ್ಣುವು, ಅಹಂಕಾರವೇ ಬ್ರಹ್ಮನು.
ಸತ್ವರೂಪಿಯಾದ ವಿಷ್ಣುವು ಶರೀರ ಕರ್ತೃವೂ,
ಜ್ಞಾನಸ್ವರೂಪನಾದ ಶಿವನು ಜೀವಕರ್ತೃವೂ,
ಅಹಂಕಾರರೂಪನಾದ ಬ್ರಹ್ಮನು ಕರ್ಮಕರ್ತೃವೂ ಆಗಿಹನು.
ಅಹಂಕಾರವು ನಷ್ಟವಾದಲ್ಲಿ ಕರ್ಮಲಯವೂ
ಸತ್ವವು ನಷ್ಟವಾದಲ್ಲಿ ಶರೀರಲಯವೂ
ಜ್ಞಾನವಧಿಕವಾದಲ್ಲಿ ಜೀವನಿಗೆ ಲಯವೂ ಆಗುವುದು.
ಅಂತಪ್ಪ ಜೀವನ ಲಯವೇ ಮೋಕ್ಷವು,
ಅಂತಪ್ಪ ಮೋಕ್ಷಸ್ಥಾನದಲ್ಲಿರ್ಪ ದಿವ್ಯಜ್ಞಾನವೇ
ಮಹಾಗುರು ದಕ್ಷಿಣಾಮೂರ್ತಿಸ್ವರೂಪವಾಗಿ,
ಅಂತಪ್ಪ ಮೂರ್ತಿಯ ಹೃದಯಸ್ಥಾನದಲ್ಲಿ ಬೆಳೆದ ಚಿನ್ನಾದವೇ ಪ್ರಣವವು.
ಅಂತಪ್ಪ ಪ್ರಣವವೇ ಮೂಲವಾಗಿ,
ಪಂಚಾಕ್ಷರಗಳೆಂಬ ಪಂಚಶಾಖೆಗಳಿಂದಲೂ ಪರ್ಣಫಲಂಗಳಿಂದಲೂ ಕೂಡಿದ
ವೇದವೆಂಬ ಮಹಾವಟವೃಕ್ಷದ ಮೂಲಮಪ್ಪ
ಪ್ರಣವದಲ್ಲಿ ಪ್ರಕಾಶಿಸುತ್ತಿರ್ಪ ಹೃತ್ಕೋಟರದಲ್ಲಿ
ದಿವ್ಯ ವಾಸನೆವಿಡಿದ ಅಷ್ಟದಳಕರ್ಣಿಕಾ ಮಂಗಳಪೀಠದಲ್ಲಿ
ಯೋಗಾಸನಾಸೀನನಾಗೊಪ್ಪುವ ಮಹಾಗುರುವು.
ತನ್ನ ನಿಜಮಹಾತ್ಮ್ಯ ಪ್ರಕಟನನಿಮಿತ್ತವಾಗಿ ಸಕಲ ಪ್ರಪಂಚಗಳಂ ಸೃಷ್ಟಿಸಿ,
ತನ್ನ ಪಂಚಮಮುಖದಲ್ಲಿ ತಾನು ಈಶಾನ್ಯರೂಪನಾಗಿ,
ಉಳಿದ ನಾಲ್ಕುಮುಖಂಗಳೇ ಚತುರಾಚಾರ್ಯಸ್ವರೂಪನಾಗಿ,
ನಾಲ್ಕಾಶ್ರಮಂಗಳಲ್ಲಿ ನಾಲ್ಕುರೂಪದಲ್ಲಿ ಜೀವರ ದುಃಖಂಗಳನ್ನು ಕಳೆದು,
ಉಪದೇಶಿಸುತ್ತಾ ಅದರಲ್ಲಿ ಪರಿಪಕ್ವವಾದ ಪದಾರ್ಥವನ್ನು
ತಾನು ಪರಿಗ್ರಹಿಸುತ್ತಾ,
ತದ್ವಟಮೂಲವಾಸಿಯಾಗಿರ್ಪ ಮಹಾಗುರುವೇ ಶಿವನು,
ಆ ವಟಪರ್ಣವಾಸಿಯಾಗಿರ್ಪವನೇ ವಿಷ್ಣುವು,
ಆ ವಟಫಲವಳಿತರಸವೆಂಬ ಜಲಪ್ರಳಯದಲ್ಲಿ
ತೇಲುತ್ತಾ ಮುಳುಗುತ್ತಾ ಇರ್ಪವನೇ ಬ್ರಹ್ಮನು.
ಮಹಾವಟವೃಕ್ಷಮೂಲದಲ್ಲಿ ಉಪದೇಶಕರ್ತೃವಾಗಿರ್ಪ
ಮಹಾಗುರುವಿನ ವಾಕ್ಯವೇ ಮಂತ್ರವು.
ಲೀಲಾಸಮಾಪ್ತಿಕಾಲದಲ್ಲಿ ಪ್ರಪಂಚಕಾಮಸಂಹಾರ ಭಸ್ಮವೇ ಭಸ್ಮವು.

ಅಂತಪ್ಪ ಪ್ರಪಂಚವನ್ನು ತನ್ನ ಲಲಾಟದಲ್ಲಿರ್ಪ
ದಿವ್ಯಜ್ಞಾನದೃಷ್ಟಿಯಿಂದ ನೋಡುತ್ತಿರಲು,
ತನ್ನೇತ್ರಾನಂದಕಣಗಳೇ ರುದ್ರಾಕ್ಷಮಣಿರೂಪವಾಗಿ,
ಆ ಸದಾಶಿವನಿಗೆ ಆಭರಣವಾಯಿತ್ತು.
ಅಂತಪ್ಪ ಮಹಾಪ್ರಪಂಚವನ್ನು ಕೆಡಿಸುವ ನಟನೆಯಿಂದ
ತಾನೇ ಜಂಗಮಮೂರ್ತಿಯಾಗಿ ಮಹಾನಾಟ್ಯವನ್ನೆಸಗುತ್ತಿರಲಾಗ,
ದಕ್ಷಿಣಪಾದಾಂಗುಷ್ಠಾಗ್ರದಲ್ಲಿ ಶಿರದಲ್ಲಿರ್ಪ ಗಂಗೆ ತುಳುಕಿಬಿದ್ದು
ಧಾರಾರೂಪವಾಗಿ ಪ್ರವಹಿಸುತ್ತಿರಲದೇ ಪಾದೋದಕವಾಯಿತ್ತು.
ಅಂತಪ್ಪ ಪಾದೋದಕದಿಂದ ಪೂತವಾಗಿ ಲಲಾಟಾಗ್ನಿಯಿಂದ ತಪ್ತವಾಗಿ,
ಪರಿಪಕ್ವಕ್ಕೆ ಬಂದು ದಿವ್ಯರುಚಿಯಿಂ ಕೂಡಿ,
ನಿಜವಾಸನೆವಿಡಿದಿರ್ಪ ಈ ಪ್ರಪಂಚವೆಂಬ ಮಹಾಪ್ರಸಾದವನ್ನು
ಕೃಪಾಕರದಲ್ಲಿ ಪರಿಗ್ರಹಿಸಿಕೊಂಬುದೇ ಮಹಾಪ್ರಸಾದವು.
ಇಂತಪ್ಪ ಪ್ರಸಾದಭೋಗದಿಂ ತೃಪ್ತಿಬಡೆದು,
ಆ ತೃಪ್ತಿಸ್ಥಾನದಲ್ಲಿ ಪರಮಾನಂದ ಮಹಾಲಿಂಗಸ್ವರೂಪವಾಗಿ,
ಎಲ್ಲಕ್ಕೂ ತಾನೇ ಮೂಲವಾಗಿರ್ಪ ಆ ಲಿಂಗವನ್ನು ಧರಿಸಿದ ಶಿವಭಕ್ತನಿಗೆ
ಅಷ್ಟಮೂರ್ತಿಸ್ವರೂಪನಾದ ಶಿವನೇ
ಆವರಣರೂಪನಾಗಿರುವಕಾರಣ ಅವನೇ ಪರಮಪವಿತ್ರನು.
ಆ ಭಕ್ತನಿಗೆ ಮಂತ್ರ, ಭಸ್ಮ, ರುದ್ರಾಕ್ಷ,
ಪಾದೋದಕ, ಪ್ರಸಾದಗಳೈದೂ ಐದು ಮುಖಂಗಳು.
ಗುರು, ಲಿಂಗ, ಜಂಗಮ ಈ ಮೂರೂ ಮೂರಂಗಗಳು
ಇಂತಪ್ಪ ಭಕ್ತನು ಗುರುವಿನಲ್ಲಿ ಜಾಗ್ರವನ್ನೂ, ಜಂಗಮನಲ್ಲಿ ಸ್ವಪ್ನವನ್ನೂ,
ಲಿಂಗದಲ್ಲಿ ಪರಮಾನಂದಸುಷುಪ್ತಿಯನ್ನೂ ಹೊಂದಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೪೦ ॥

೧೦೪೨

ಬಾಲ್ಯವೇ ಬ್ರಹ್ಮಸ್ವರೂಪು, ಯೌವನವೇ ವಿಷ್ಣುಸ್ವರೂಪು,
ವಾರ್ಧಕ್ಯವೇ ಮಹೇಶ್ವರಸ್ವರೂಪು.
ಬಾಲ್ಯದಲ್ಲಿ ಗುರುವೆಂಬ ಆರಂಭಗಾರನು
ತನ್ನಲ್ಲಿ ಬಿತ್ತಿದ ವಿದ್ಯಾಬೀಜಂಗಳು ಯೌವನದಲ್ಲಿ ಬೆಳೆದು ಪಲ್ಲವಿಸಿ,
ವಾರ್ಧಕ್ಯದಲ್ಲಿ ಫಲಿಸಿ ಪರಿಪಕ್ವವಾಗಿ,
ಶರೀರಾಂತ್ಯದಲ್ಲಿ ಅನುಭವಕ್ಕೆ ಬರುತ್ತಿರ್ಪುದಾದಕಾರಣ,
ಬಾಲ್ಯದಲ್ಲಿ ಹರಿತವರ್ಣ, ಯೌವನದಲ್ಲಿ ಶ್ಯಾಮವರ್ಣ,
ವಾರ್ಧಕ್ಯದಲ್ಲಿ ಪಾಂಡುವರ್ಣವಪ್ಪುದರಿಂ,
ಬಾಲ್ಯ ಯೌವನ ವಾರ್ಧಕ್ಯಂಗಳು ತ್ರಿಮೂರ್ತಿಸ್ವರೂಪವಾಯಿತ್ತು.

ಬಾಲ್ಯದಲ್ಲಿ ಕಾಲಮಧಿಕವಾಯಿತ್ತು,
ಯೌವನದಲ್ಲಿ ಕಾಮಮಧಿಕವಾಯಿತ್ತು,
ಮಹೇಶ್ವರರೂಪವಾದ ವಾರ್ಧಕ್ಯದಲ್ಲಿ ಲಯವನ್ನೆಯ್ದುತ್ತಿರ್ಪವಾದಕಾರಣ
ಬ್ರಹ್ಮವಿಷ್ಣುಗಳು ಲಯವನ್ನೆಯ್ದುತ್ತಿಹುದು ನಿಶ್ಚಯವಾಯಿತ್ತು,
ಬಾಲ್ಯವು ಪಾಪಪುಣ್ಯರಹಿತವಾಗಿಹುದು,
ಕಾಮೋಪಲಾಲನ ಪಾಪೋತ್ಕೃಷ್ಟಮಪ್ಪ ಯೌವನವೇ ವಿಷ್ಣುವಾದುದರಿಂದ
ತದರ್ಚನೆಯೇ ಪ್ರಾಪಂಚಿಕವಾಗಿಹುದು.
ಪುಣ್ಯೋತ್ಕೃಷ್ಟಮಪ್ಪ ವಾರ್ಧಕ್ಯವೇ ಶಿವನಾದುದರಿಂದ
ತದರ್ಚನೇಯೇ ಜ್ಞಾನಸ್ವರೂಪವಾಗಿ ಮೋಕ್ಷಸಾಧನವಹುದು.
ಇಂತಪ್ಪ ಬಾಲ್ಯ ಯೌವನ ವಾರ್ಧಕ್ಯಗಳನ್ನು
ಜಾಗ್ರತ್ಸ್ವಪ್ನ ಸುಷುಪ್ತಿಗಳಲ್ಲಿ ಜೀವನು ಅನುಭವಿಸುತ್ತಾ,
ತನ್ನ ನೈಜಸ್ವರೂಪಮಪ್ಪ ತೂರ್ಯಾವಸ್ಥೆಯಲ್ಲಿ ಲಯವಂ ಹೊಂದುತ್ತಾ,
ಅವಸ್ಥಾತ್ರಯಂಗಳನ್ನು ಅನುಭವಿಸುತ್ತಿರ್ಪನು.
ಅವಸ್ಥಾಕ್ರಮವೆಂತೆಂದೊಡೆ :
ಪೃಥ್ವಿಯ ಸೃಷ್ಟಿಯೇ ಸ್ವಪ್ನವು, ಜಲದ ಸ್ಥಿತಿಯೇ ಜಾಗ್ರವು,
ಅಗ್ನಿಯ ಸಂಹಾರವೇ ಸುಷುಪ್ತಿಯು,
ವಾಯುವಿನ ತೂರ್ಯವೇ ಜೀವಂಗೆ ಮರಣವು, ಇದೇ ತೂರ್ಯವಾಯಿತ್ತು,
ಇಂತಪ್ಪ ಜೀವನು ಗುರುಕರುಣದಿಂ ಆಕಾಶದ ತೂರ್ಯಾತೀತವನೊಂದಿ,
ಲಿಂಗವೇ ಪತಿ ತಾನೇ ಸತಿಯಾಗಿ, ತದಾತ್ಮನಲ್ಲಿ ಬೆರೆದು,
ಭೇದದೋರದಿರ್ಪುದೇ ಲಿಂಗೈಕ್ಯಾವಸ್ಥೆಯು.
ಇಂತಪ್ಪ ಲಿಂಗೈಕ್ಯಾವಸ್ಥೆಯು
ವಾಙ್ಮನಕ್ಕಗೋಚರವಭೇದ್ಯವಸಾಧ್ಯಮೆನಗೂ ಪೊಗಳಲಳವಲ್ಲ,
ಲಿಂಗ ತಾನೇ ಬಲ್ಲ ಕಾಣಾ, ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ.
|| ೪೧ ||

೧೦೪೩

ಜ್ಞಾನವೇ ಮೂಲವಾಗಿ, ಆನಂದವೇ ಪರಿಪಕ್ವಫಲವಾಗಿಯೂ ಇರ್ಪ
ಸತ್ಯವೆಂಬ ವೃಕ್ಷವು ಮನವೆಂಬ ನೆಲದೊಳಗೆ ಬೇರಂ ಬಿಟ್ಟು,
ಭಾವವೆಂಬ ಆಕಾಶವನ್ನವಗ್ರಹಿಸಿರಲು,
ಆ ವೃಕ್ಷಮೂಲದಲ್ಲಿರ್ಪ ಶಿವನಿಗೆ ನಿವೇದನಾರ್ಥವಾಗಿ,
ಶರಣನು ವಿವೇಕಶಾಖೆಯನ್ನೇರಿ, ತತ್ವಪಲ್ಲಿಯ ಮರೆಯಲ್ಲಿ ತಾಂ ನಿಂದು,
ಕಾಣಿಸದೆ, ತದಾನಂದಫಲವಂ ಶಿವಾರ್ಪಿತಕ್ಕೆ ಸ್ಪರ್ಶನ ಮಾಡಿದನಿತರೊಳು,
ಆದ್ಯಂತಂಗಳಳಿದು, ಅರ್ಪಣಾನ್ವಿತವಿಶಾಖಾಕಲಿತವಾಗಿ

ಸ್ಥಾಣುವಾಗಿರ್ಪ ವಿಚಿತ್ರಮುಂ ಕಂಡೆ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೨ ||

೧೦೪೪

ಭಕ್ತಿಯೆಂಬ ಪಾಲನ್ನು ಮನದಲ್ಲಿ ಹೆಪ್ಪುಗೊಟ್ಟು,
ಅದರಿಂ ಘಟ್ಟಿಗೊಂಡ ದೃಢಿಮ ದಧಿಯನ್ನು ಶರೀರಮೆಂಬ ಭಾಂಡದಲ್ಲಿ ತುಂಬಿ,
ತತ್ವವೆಂಬ ಮಂತುಗೋಲಿನಿಂದ ಮಥಿಸಲು,
ಲಿಂಗವೆಂಬ ನವನೀತವು ಕಾಣಿಸಲಾಗಿ ಅದಂ ಪರಿಗ್ರಹಿಸಿ,
ಜ್ಞಾನಾಗ್ನಿಯಲ್ಲಿ ಪಕ್ವವಂ ಮಾಡಲು,
ನಿಜವಾಸನೆಯಿಂ ಪ್ರಕಾಶಿಸುತ್ತಿಹ ತದ್ಘೃತಸೇವನಾಬಲದಿಂದ
ಆತ್ಮನೇ ಲಿಂಗಮಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೩ ||

೧೦೪೫

ಗೊಲ್ಲರಹಳ್ಳಿಯಲ್ಲಿ ಭೂವಲ್ಲಭನಿದ್ದರೆ,
ಅಲ್ಲಿನ ಜನರು ಅವಂಗೆ ಕುರಿಯಹಾಲಂ ಕರೆದುಕೊಟ್ಟು,
ನೀಚೋಚ್ಚವರಿಯದ ಮಾತುಗಳನಾಡಿ ನಗಿಸುವರಲ್ಲದೆ,
ರಾಜೋಪಚಾರವಂ ಮಾಡಬಲ್ಲರೇನಯ್ಯಾ ?
ಅಂತು ಜ್ಞಾನಿಯೆಂದರಿತು ನನ್ನ ಹೃದಯದಲ್ಲಿ ನೀಂ ನೆಲಸಿದಲ್ಲಿ,
ನನ್ನಲ್ಲಿಹ ತಮೋಗುಣಗಳಿಂ ಪೂಜಿಸಿ,
ಅಪಶಬ್ದಗಳಿಂ ಸ್ತುತಿಸುವೆನಲ್ಲದೆ,
ನಿಜಭಾವದಿಂದರ್ಚಿಸಿ, ನೈಘಂಟುಕಶಬ್ದಂಗಳಿಂ ಸ್ತುತಿಸಬಲ್ಲೆನೇನಯ್ಯಾ ?
ಇಂತು ನಾನು ಮಾಡುತ್ತಿರ್ಪ ಅಪಚಾರಂಗಳಂ
ನೀನುಪಚಾರಂಗಳಾಗಿ ಕೈಕೊಳ್ಳದಿರ್ದೊಡೆ,
ನಿನ್ನ ಪರಮದಯಾಮಹಿಮೆ ಪ್ರಕಟಮಪ್ಪುದೇನಯ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ ? || ೪೪ ||

೧೦೪೬

ಮನಸ್ಸೇ ಅಂತಃಕರಣವಾಗಿಯೂ ಶರೀರವೇ ಕರಣವಾಗಿಯೂ
ಪ್ರಪಂಚವೇ ಉಪಕರಣವಾಗಿಯೂ ಇರ್ಪ ಜೀವನು,
ಉಪಕರಣದಲ್ಲಿರ್ಪ ಕಳೆಯನ್ನೂ ಕರಣದಲ್ಲಿರ್ಪ ಬಿಂದುವನ್ನೂ
ಅಂತಃಕರಣದಲ್ಲಿರ್ಪ ನಾದವನ್ನೂ ಮಿಥ್ಯದಲ್ಲಿ ವೆಚ್ಚಿಸಿ,
ತದ್ದುಃಖಾನುಭವಕ್ಕೆ ತಾಂ ಕಾರಣವಾಗಿರಲಾ ಜೀವಂಗೆ,
ಪಂಚವಿಂಶತಿತತ್ವರೂಪವಾದ ಉಪಕರಣಂಗಳೇ ಸ್ಥೂಲವೂ
ಸಪ್ತಧಾತುದಶೇಂದ್ರಿಯರೂಪವಾದ ಕರಣವೇ ಸೂಕ್ಷ್ಮವೂ

ಅಹಂಕಾರಜ್ಞಾನರೂಪವಾದ ಅಂತಃಕರಣವೇ ಕಾರಣವೂ ಆಗಿ,
ಕರಣಕ್ಕುಪಹತಿ ಬಂದರೆ ಉಪಕರಣಂಗಳಂ ಬಿಟ್ಟು,
ಆಯಾ ಕರ್ಮವಾಸನೆಯಂ ಭಾವದಲ್ಲಿ ಗ್ರಹಿಸಿ,
ಮರಳಿ ಸಂಪಾದಿಸೆನು ಎಂಬ ಭ್ರಮೆಯಿಂ
ಕುದಿದುಕೋಟಲೆಗೊಂಡು ತೊಳಲುತ್ತಿರ್ಪುದೇ ಭವವು.
ಇಂತಪ್ಪ ಭವಕೋಟಲೆಗೆ ಹೇಸಿ, ಮಹಾಗುರುವಿನ ಮರೆಹೊಕ್ಕು,
ಆ ಗುರುವಿತ್ತ ಮಹಾಲಿಂಗದಿಂ ಇಂತಪ್ಪ ಕರಣಂಗಳಂ ಶುದ್ಧಿಮಾಡಿ,
ಅಲ್ಲಿರ್ಪ ನಾದ ಬಿಂದು ಕಳೆಗಳಂ ತಲ್ಲಿಂಗಮುಖಮಂ ಮಾಡಿ,
ಅಲ್ಲಿ ಬಂದ ಸುಖವನ್ನು ಲಿಂಗಕ್ಕರ್ಪಿಸಿ,
ತತ್ಪ್ರಸಾದಾನುಭವ ಪ್ರವರ್ಧನಮಾಗುತ್ತಿರಲು,
ನಾಹಂ ಕೋಹಂ ಸೋಹಂ ಭ್ರಮೆಗಳಡಗಿ,
ಸ್ಥೂಲ ಸೂಕ್ಷ್ಮ ಕಾರಣ ತನುತ್ರಯಂಗಳುಡುಗಿ,
ಲಿಂಗವೇ ಅಂಗವಾಗಿ, ಲಿಂಗೋಪಭೋಗಿಯಾಗಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೫ ||

೧೦೪೭

ಸತ್ವಸ್ವರೂಪನಾದ ಶಿವನೇ ವಿಷ್ಣುಗುಣವು.
ಅಂತಪ್ಪ ಸತ್ವಸ್ವರೂಪನಾದ ಶಿವನಂ ಹೃದಯದಲ್ಲಿ ಧರಿಸಿರ್ಪುದರಿಂದ
ವಿಷ್ಣುವು ಸಂರಕ್ಷಣಕರ್ತೃವಾದನು.
ತಮಸ್ವರೂಪನಾದ ವಿಷ್ಣುವನ್ನು ಹೃದಯದಲ್ಲಿ ಧರಿಸಿರ್ಪುದರಿಂದ
ಶಿವನೇ ಸಂಹಾರಕರ್ತೃವಾದನು.
ಅದೆಂತೆಂದೊಡೆ :
ಪುರುಷಧ್ಯಾನದಲ್ಲಿರ್ಪ ಪತಿವ್ರತಾಸ್ತ್ರೀಗೆ
ಅದೇ ಸ್ವಧರ್ಮವಾಗಿ ಮೋಕ್ಷ ಕಾರಣಮಾಯಿತ್ತು.
ಅಂತಪ್ಪ ಸ್ತ್ರೀಯಳ ಧ್ಯಾನದಲ್ಲಿರ್ಪ ಪುರುಷನಿಗೆ
ಅದೇ ಸ್ವಧರ್ಮವಾಗಿ ಪ್ರಪಂಚಕಾರಣಮಾಯಿತ್ತು.
ಇಂತಪ್ಪ ಸತ್ವವೇ ಅಮೃತವು, ತಮಸ್ಸೇ ವಿಷವು.
ಅಮೃತವೇ ಸಕಲರಿಗೂ ಸೇವನಾಯೋಗ್ಯಮಾಗಿ ರಕ್ಷಿಸುತ್ತಿರ್ಪುದು,
ವಿಷವೇ ಸಂಹಾರಕಾರಣಮಾಗಿರ್ಪುದು.
ಅಮೃತವೇ ಎಲ್ಲರಿಗೂ ಅಕ್ಕುದಲ್ಲದೆ,
ವಿಷವಹ್ನಿಯೊಬ್ಬನಿಗಲ್ಲದೆ ಎಲ್ಲರಿಗೂ ಅಕ್ಕುದೇನಯ್ಯಾ ?
ವಿಷಾಹಾರಿಯು ನೀನು ಅಮೃತಾಹಾರಿಯು ನಾನು ಆದುದರಿಂದ
ನನ್ನಲ್ಲಿರ್ಪ ತಮಸ್ಸೆಂಬ ವಿಷವನ್ನು ನೀಂ ಕೊಂಡು,
ನೀನೆಂಬ ಪರಮಾಮೃತವನೆನಗೆ ದಯಪಾಲಿಸಿದರೆ,

ನಾನು ನಿನ್ನ ದಯೆಯಿಂ ನಿತ್ಯನಾಗಿರ್ಪೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೪೬ ॥

೧೦೪೮

ರಜೋಗುಣದಿಂದ ಶಕ್ತಿಲಯವು,
ತಮೋಗುಣದಿಂದ ಯುಕ್ತಿಲಯವು,
ಸತ್ವಗುಣದಿಂದ ರಕ್ತಿಲಯವು.
ಅಂತಪ್ಪ ರಜೋಗುಣವೇ ಪೃಥ್ವಿಯು,
ತಮೋಗುಣವೇ ವಾಯುವು,
ಪೃಥ್ವಿಯಲ್ಲಿ ಅಗ್ನಿಯು ಹುಟ್ಟಿ,
ತಮೋರೂಪವಾದ ವಾಯುಜಲಗಳು ಪೃಥ್ವಿಯಗ್ನಿಗಳಲ್ಲಿ ಕೂಡಲು
ರಜೋಗುಣವು ಹೆಚ್ಚುತ್ತಿಹುದು.
ಅಂತಪ್ಪ ಅಗ್ನಿ ವಾಯುಗಳೇಕವಾಗಿ, ಪೃಥ್ವೀಜಲಗಳೇಕವಾದಲ್ಲಿ,
ಈ ಪೃಥ್ವಿಯೇ ಮನುಷ್ಯರಿಗೆ ಆಧಾರವಾಯಿತ್ತು,
ವಾಯುವೇ ದೇವತೆಗಳಿಗೆ ಆಧಾರವಾಯಿತ್ತು
ಇವೆಲ್ಲಕ್ಕೂ ಸತ್ವಸ್ವರೂಪವಾದ ಆಕಾಶವೇ ಕಾರಣವಾಯಿತ್ತು.
ಮನುಷ್ಯರು ರಜೋರೂಪವಾದ ಪೃಥ್ವಿಯನಾಶ್ರಯಿಸಿದರಾದಕಾರಣ
ಸ್ವಲ್ಪಕಾಲ ಬಾಳುತ್ತಿರ್ಪರು.
ದೇವತೆಗಳು ತಮೋರೂಪವಾದ ವಾಯುವನಾಶ್ರಯಿಸಿದ ಕಾರಣ
ದೀರ್ಘಕಾಲ ಬಾಳುತ್ತಿರ್ಪರು.
ಸುಷುಪ್ತಿಯು ಸ್ವಪ್ನದೋಪಾದಿಯಲ್ಲಿ ತೋರುತ್ತಿರ್ಪುದರಿಂದ
ಈ ರಜಸ್ಸಿನಲ್ಲಿ ಕಾಮನೂ ತಮಸ್ಸಿನಲ್ಲಿ ಕಾಲನೂ ತತ್ತದ್ಗುಣಾಧಿದೇವತೆಗಳಾಗಿ,
ಕಾಮನು ಸೃಷ್ಟಿಸಿದ್ದನ್ನು ಕಾಲನು ಸಂಹರಿಸುತ್ತಾ,
ಕಾಲನು ಸಂಹರಿಸಿದ್ದನ್ನು ಕಾಮನು ಸೃಷ್ಟಿಸುತ್ತಾ,
ಜೀವನನ್ನು ಭವಕ್ಕೆ ತಂದು ಕೋಟಲೆಗೊಳಿಸುತ್ತಿರ್ಪರು.
ಇಂತಪ್ಪ ರಜೋರೂಪವಾದ ಪೃಥ್ವಿಯಲ್ಲಿ
ತಮೋರೂಪವಾದ ಜಲವು ಬೆರೆಯಲು,
ಈ ಎರಡೂ ತಮೋರೂಪವಾದ ಸ್ಥೂಲಶರೀರವಾಯಿತ್ತು.
ತಮೋರೂಪವಾದ ವಾಯುವಿನಲ್ಲಿ ರಜೋರೂಪವಾದ ಅಗ್ನಿಯು
ಬೆರೆಯಲು,
ಇವೆರಡೂ ಸೂಕ್ಷ್ಮಶರೀರವಾಯಿತ್ತು.
ಸತ್ವಸ್ವರೂಪವಾದ ಆಕಾಶವೇ ಕಾರಣಶರೀರವು.
ಇಂತಪ್ಪ ಪಂಚಭೌತಿಕವಾದ ತನುತ್ರಯಂಗಳಲ್ಲಿ
ಆತ್ಮನು ಆಯಾ ಗುಣಂಗಳಲ್ಲಿ ಬದ್ಧನಾಗಿ,

ಸುಖದುಃಖಾನುಭವಕ್ಕೆ ಕಾರಣವಾಗಿರ್ಪನು.
ಅದೆಂತೆಂದೊಡೆ :
ತಮೋರೂಪವಾದ ಸೂಕ್ಷ್ಮಶರೀರದಲ್ಲಿ ಅಂತರಾತ್ಮನಾಗಿ,
ರಜೋರೂಪವಾದ ಸ್ಥೂಲಶರೀರದಲ್ಲಿ ಜೀವಾತ್ಮನಾಗಿ,
ಸತ್ವಸ್ವರೂಪವಾದ ಕಾರಣಶರೀರದಲ್ಲಿ ಪರಮಾತ್ಮನಾಗಿ ಪ್ರಕಾಶಿಸುತ್ತಿರ್ಪನು.
ಇಂತಪ್ಪ ರಜೋಲಹರಿಯ ಸುರತಾನಂದ,
ತಮೋಲಹರಿಯ ನಿದ್ರಾನಂದ, ಸತ್ವಲಹರಿಯ ಜ್ಞಾನಾನಂದ.
ಅಂತಪ್ಪ ಜ್ಞಾನಾನಂದಲಹರಿಯಲ್ಲಿ ಪರಿಣಾಮಿಸಿ ಪರವಶನಾಗಿರ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೭ ||

೧೦೪೯

ವಸಂತಕಾಲವೇ ಸೂಕ್ಷ್ಮಶರೀರವು,
ವರ್ಷಾಕಾಲವೇ ಸ್ಥೂಲಶರೀರವು,
ಹೇಮಂತಕಾಲವೇ ಕಾರಣಶರೀರವು,
ಆಕಾಶಾತ್ಮಗಳು ನಿರ್ಮಲವಾಗಿ ಕಾಣಪಟ್ಟುದರಿಂದ
ವಸಂತಕಾಲವೇ ಬ್ರಹ್ಮಸ್ವರೂಪಾಗಿ
ರಜೋಗುಣಪ್ರಾಬಲ್ಯಮಾಗಿಹುದು.
ವರ್ಷಾಕಾಲವೇ ವಿಷ್ಣುರೂಪಾಗಿ,
ತಮೋರೂಪಾಗಿ ಸತ್ವಗುಣಪ್ರಧಾನವಾಗಿಹುದು.
ಹೇಮಂತಕಾಲವೇ ಶಿವಸ್ವರೂಪು ಸತ್ವಸ್ವರೂಪವಾಗಿ
ತಮೋಗುಣಪ್ರಧಾನಮಾಗಿಹುದು.
ವಸಂತಕಾಲದಲ್ಲಿ ಸೃಷ್ಟಿಯೂ ವರ್ಷಾಕಾಲದಲ್ಲಿ ಸ್ಥಿತಿಯೂ
ಹೇಮಂತದಲ್ಲಿ ಸಂಹಾರವೂ ಆಗುವಕಾರಣ,
ವಸಂತದಲ್ಲಿ ಸೂರ್ಯಪ್ರಕಾಶವು ; ವರ್ಷಾಕಾಲದಲ್ಲಿ ಸೂರ್ಯಚಂದ್ರಮರು
ಅಪ್ರಕಾಶರಾಗಿ ಜಡಸ್ವರೂಪವಾದ ಮೇಘೋದಯದಿಂದ ತಮಸ್ಸು
ಪ್ರಬಲಮಾಗಿರ್ಪುದರಿಂದ ತಾಮಸಪ್ರಧಾನಮಾಯಿತ್ತು,
ಇಂತಪ್ಪ ಕಾಲತ್ರಯಂಗಳೇ ಜೀವನ ಪರಿಭವಕ್ಕೆ
ಕಾರಣಭೂತಗಳಾಗಿರ್ಪುದನರಿತು,
ವಸಂತದಲ್ಲಿ ಇಷ್ಟದೇವತಾಪೂಜೆಯನ್ನೂ
ಹೇಮಂತಕಾಲದಲ್ಲಿ ಭಾವಲಿಂಗಪೂಜೆಯನ್ನೂ
ವರ್ಷಾಕಾಲದಲ್ಲಿ ಪ್ರಾಣಲಿಂಗಪೂಜೆಯನ್ನೂ ಮಾಡಿ,
ಈ ಕಾಲತ್ರಯಂಗಳಂ ಮರತು ಲಿಂಗತ್ರಯಂಗಳೊಳಗೆ ಬೆರದು,
ಇಷ್ಟಪ್ರಾಣಭಾವಸ್ವರೂಪನಾದ ಸದಾಶಿವನಿಗೆ

ಗುಣತ್ರಯಂಗಳೊಳಗೆ ಕೂಡಿದ ತನುತ್ರಯಂಗಳನೊಪ್ಪಿಸಿ,
ಜೀವನು ಕರ್ಮಮುಕ್ತನ್ನಾಗಿ, ತಲ್ಲಿಂಗಾನಂದದಲ್ಲಿ ನಾಹಂಭಾವಮುಡುಗಿ,
ಲಿಂಗದೊಳಗಡಗಿರ್ಪುದೇ ಕೇವಲ ಕೈವಲ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೮ ||

೧೦೫೦

ಬ್ರಹ್ಮಾಂಡವೇ ಸ್ಥಾವರವು, ಪಿಂಡಾಂಡವೇ ಜಂಗಮವು,
ಸದ್ರೂಪಮಾದ ಬ್ರಹ್ಮಾಂಡದೊಳಗಿರ್ಪ
ಪಂಚಾಶತ್ಕೋಟಿ ವಿಸ್ತೀರ್ಣಮಾಗಿರ್ಪ ಪೃಥ್ವಿಯಲ್ಲಿ
ಲವಣಸಮುದ್ರಮಧ್ಯದಲ್ಲಿರ್ಪ ಕರ್ಮಭೂಮಿಯನ್ನು
ಮನುಷ್ಯರು ಶುದ್ಧಿಯಂ ಮಾಡಿ,
ಬಿಂದುಬೀಜವನ್ನು ವಸಂತಕಾಲದಲ್ಲಿ ಬಿತ್ತಿ, ವರ್ಷಾಕಾಲದಲ್ಲಿ ಬೆಳೆದು,
ಹೇಮಂತಕಾಲದಲ್ಲಿ ಕೂಡಿಟ್ಟು, ತದ್ರಾಜ್ಯಾಧಿಪತಿಯ ಭಾಗವನ್ನಾತಂಗೆ ಕೊಟ್ಟು,
ಉಳಿದುದನ್ನು ಪುತ್ರ ಮಿತ್ರ ಕಳತ್ರರೊಡನೆ ತಾನನುಭವಿಸುತ್ತಿರ್ಪುದಂದದಿ,
ಚಿದ್ರೂಪವಾದ ಅನಂತಕೋಟಿ ಪಿಂಡಾಂಡಗಳಲ್ಲಿ
ಕರ್ಮಕರ್ತೃವಾದ ಮನುಷ್ಯನ ಶರೀರದ ಹೃದಯಮೆಂಬಾಕಾಶಮಧ್ಯದಲ್ಲಿರ್ಪ
ಕಲ್ಮಷಂಗಳಂ ಕಳೆದು ಶೋಧಿಸಿ,
ನಾದಬೀಜಮಂ ಜ್ಞಾನಾಗ್ನಿಯ ಹದದಲ್ಲಿ ಬಾಲ್ಯದಲ್ಲಿ ಬಿತ್ತಿ
ಯೌವನದಲ್ಲಿ ಬೆಳೆಸಿ, ವಾರ್ಧಕ್ಯದಲ್ಲಿ ಕೂಡಲಿಟ್ಟು,
ತತ್ಪದಾರ್ಥವನು ತನ್ಮನೋನಾಥನಪ್ಪ ಶಿವನಿಗೆ ಕೊಟ್ಟು,
ಉಳಿದ ತನ್ಮಂತ್ರಪದಾರ್ಥವನ್ನು ಮಂತ್ರಸ್ವರೂಪಿಗಳಪ್ಪಾ ದೇವತೆಗಳು
ತಾವನುಭವಿಸುತ್ತಿರ್ಪರು.
ಈ ಪಿಂಡಾಂಡ ಬ್ರಹ್ಮಾಂಡಗಳಿಗೆ ಜಿಹ್ವೆಯೇ ಆನಂದಕಾರಣಕಳಾರೂಪವಾಗಿ,
ಬ್ರಹ್ಮಾಂಡದಲ್ಲಿರ್ಪ ಬಿಂದುವಸ್ತುವಿನಿಂದ ಪಿಂಡಾಂಡಮಂ ರಕ್ಷಿಸಿ,
ಪಿಂಡಾಂಡದಲ್ಲಿ ಹುಟ್ಟಿದ ನಾನಾ ವಸ್ತುವಿನಿಂದ ಬ್ರಹ್ಮಾಂಡಮಂ ರಕ್ಷಿಸಿ,
ಮನುಷ್ಯರನ್ನು ದೇವತೆಗಳನ್ನಾಗಿಮಾಡಿ, ದೇವತೆಗಳಂ ಮನುಷ್ಯರಂ ಮಾಡಿ.
ಯಾತಾಯಾತನೆಗಳಲ್ಲಿ ಪಿಂಡಾಂಡನರಕವನ್ನು ದೇವತೆಗಳನುಭವಿಸಲು,
ಬ್ರಹ್ಮಾಂಡನರಕವನ್ನು ಮನುಷ್ಯರನುಭವಿಸಿ ದುಃಖಿಸುತ್ತಾ,
ತತ್ಸುಖಾನುಭವಗಳಲ್ಲಿ ನಲಿವುತ್ತಿರ್ಪುದೆಲ್ಲಾ
ಭ್ರಾಮಕವೆಂದು ತಿಳಿದ ಮಹಾಪುರುಷನಿಗೆ
ಬ್ರಹ್ಮಾಂಡವೂ ಪಿಂಡಾಂಡವೂ ಏಕಮಾಯಿತ್ತು.
ದೇವಮನುಷ್ಯರ ಶರೀರದಲ್ಲಿರ್ಪ ಶಿವಶರಣರ ಪಾದಸೇವೆಯಲ್ಲಿ
ನಾನು ಪರಿಶುದ್ಧನಾಗಿ ಪರಿಣಾಮಿಸುವಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೪೯ ||

೧೦೫೧

ಶಬ್ದಮಧ್ಯದಲ್ಲಿರ್ಪ ಅರ್ಥವೇ ಜೀವನು,
ತಮೋರೂಪಮಾಗಿಹನು.
ಜ್ಞಾನಮಧ್ಯದಲ್ಲಿರ್ಪ ಅರ್ಥವೇ ಪರಮನು,
ಸತ್ವರೂಪಮಾಗಿಹನು.
ಜ್ಞಾನಶರೀರದಲ್ಲಿರ್ಪ ಪರಮಾರ್ಥಭಾವವೆಂಬ ಹಸ್ತದಲ್ಲಿ
ಬುದ್ಧಿಯೆಂಬ ತ್ರಿಗುಣಾತ್ಮಕಮಪ್ಪ ಮುನ್ಮೊನೆಯಲಗಂ ಪಿಡಿದು,
ಆ ಶಬ್ದಶರೀರಮಂ ಭೇದಿಸಿ, ತನ್ಮಧ್ಯದಲ್ಲಿರ್ಪ ಅರ್ಥವನ್ನು
ಆ ಜ್ಞಾನವು ಗ್ರಹಿಸಿದಲ್ಲಿ,
ಜ್ಞಾನಾರ್ಥದೊಳಗೆ ಬೆರದು, ಎರಡೂ ಒಂದಾಗಿ,
ಆ ಅರ್ಥವೇ ಸತ್ಯವಾಗಿ ಆನಂದಮಯಮಪ್ಪುದು.
ಜ್ಞಾನವು ಗ್ರಹಿಸದೇ ಬಿಟ್ಟರೆ ಶಬ್ದಾರ್ಥವೇ ದುರರ್ಥಮಾಗಿ,
ಸೃಷ್ಟಿಸ್ಥಿತಿಸಂಹಾರಂಗಳಲ್ಲಿ ಕೋಟಲೆಗೊಳುತ್ತಿರ್ಪುದೇ ಜೀವನು,
ಅದೇ ಪರಮನು.
ತತ್ಪರಿಗ್ರಹವೇ ಐಕ್ಯಮಾದಲ್ಲಿ, ಎರಡೂ ಒಂದೇ ಆಗಿರ್ಪುದು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೦ ||

೧೦೫೨

''ತಿಷ್ಠತೀತಿ ಸ್ಥಾಣುಃ'' ಎಂಬ ಅರ್ಥದಿಂದ
ಸತ್ತೆಂಬ ನಿಜತತ್ವವೇ ಸ್ಥಾಣುರೂಪಮಾದ ಶಿವನು.
ಅಂತಪ್ಪ ಪರಶಿವನ ಸ್ವಭಾವದಲ್ಲಿ ನಿಜಕ್ರೀಡಾಪ್ರಕೃತಿಯು ಉತ್ಪನ್ನಮಾಗಿ,
ಪರಶಿವತತ್ವಮಂ ತನ್ನ ಶಕ್ತಿಗೆ ತಕ್ಕಂತೆ ಗ್ರಹಿಸಲು,
ಆ ಪ್ರಕೃತಿಘಟಬಂಧದಿಂ ಭಿನ್ನವಾಗಿ ತೋರುತ್ತಿರ್ಪ ತತ್ತತ್ವವೇ
ಚಿದ್ರೂಪಮಪ್ಪ ಜೀವಕೋಟಿಗಳಾಯಿತ್ತು.
ಅದೆಂತೆಂದೊಡೆ :
ಮನದಲ್ಲಿ ಹುಟ್ಟಿದ ಕಾಮವು ಆ ಮನವನ್ನೇ ಗ್ರಹಿಸಿ, ಕರ್ಮಕ್ಕೆ ತಂದು,
ಮುಖದಲ್ಲಿ ಆ ಮನೋರೂಪಮಪ್ಪ ತದ್ಗುಣಂಗಳೇ ಅನೇಕವಾಗುದಿಸಿ,
ಆ ಕಾಲದಲ್ಲಿ ಸೃಷ್ಟಿಸ್ಥಿತಿಸಂಹಾರಸುಖದುಃಖಂಗಳಿಗೊಳಗಾಗಿ
ಆ ನಾಮವಳಿಯಲು, ಉಳಿದ ಮನವೊಂದೇ ಆಗಿರ್ಪಂತೆ,
ಲೀಲಾಶಕ್ತಿವಶದಿಂ ಪರಶಿವತತ್ವದಲ್ಲಿ ತತ್ಪರೂಪಮಪ್ಪ
ಅನಂತಕೋಟಿ ಜೀವಂಗಳು ಬಹುವಿಧಮಾಗಿ ತೋರಿದಲ್ಲಿ, ಜಡಮಯನಾಗಿ,
ಅವಿದ್ಯಾರೂಪಮಪ್ಪ ಶರೀರವಸ್ತ್ರಂಗಳು ಸೃಷ್ಟಿಸುತ್ತಿರಲೀ ಜೀವಂಗಳು
ವಸ್ತ್ರಧಾರಣಕಾರಣ ಪರಶಿವನಿಂದಾ ಕೊಂಡು
ಜ್ಞಾನಜೀವಿತಾರ್ಥವನ್ನು ಆ ಕಾಮನಿಗೆ ಕೊಟ್ಟು,

ಅವನಿಂದಾ ಶರೀರವಸ್ತ್ರಮಂ ತರಿಸಿಕೊಂಡು, ಧರಿಸುತ್ತಾ
ತನ್ನನುಭವದಿಂದಲೇ ಬಾಲ್ಯ ಯೌವನ ಕೌಮಾರ
ವಾರ್ಧಕ್ಯಗಳೆಂಬವಸ್ಥೆಗಳಿಂದ ಮಲಿನವಾಗಿ,
ಕಾಲನೆಂಬ ರಜಕನ ಕರಘೂತದಿಂ ಜೀರ್ಣವಾಗಿಪೋದ ವಸ್ತ್ರಮಂ ಕಂಡು ದುಃಖಪಟ್ಟು, ತಿರಿಗಿ ಸಂಧಿಸುವ ಕೋಟಲೆಯೇ ಭವವು.
ಇಂತಪ್ಪ ಭವಕ್ಕೊಳಪಟ್ಟ ಎಲ್ಲಾ ಜೀವರು
ಸ್ಥೂಲ ಸೂಕ್ಷ್ಮ ಕಾರಣಶರೀರಗಳೆಂಬ ವಸ್ತ್ರಗಳಂ ಧರಿಸಿಹರು.
ನೀನು ಶರೀರವೆಂಬ ವಸ್ತ್ರವ ಧರಿಸಿಬಿಡುವ
ಕೋಟಲೆಯನೊಲ್ಲದೆ ದಿಗಂಬರನಾಗಿರ್ಪೆ.
ಅಬ್ಧಿಗಂಭೀರತ್ವವೇ ನಿರ್ವಾಣ, ನಿರ್ವಾಣವೇ ಮುಕ್ತಿ,
ಅಂತಪ್ಪ ನಿರ್ವಾಣಸುಖದೊಳಗೆ ನನ್ನಂ ಕೂಡಿಸಿ,
ಜನ್ಮವಸ್ತ್ರಧಾರಣಜಾಡ್ಯಮಂ ಬಿಡಿಸಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೫೧ ॥

೧೦೫೩

ಕಾಯವೆಂಬ ಪುರವನಾಳುವ ಜೀವನೆಂಬರಸು
ನಿಜಬಲದಿಂ ಕರ್ಮವೆಂಬ ರಾಜ್ಯದಲ್ಲಿ ಸಂಪಾದಿಸಿದ
ಸುಕೃತ ದುಷ್ಕೃತಂಗಳೆಂಬ ದ್ರವ್ಯವನ್ನು ಮನವೆಂಬ ಬೊಕ್ಕಸದೊಳಗಿಟ್ಟು,
ಅಲ್ಲಿಂದ ಶಬ್ದಚಾರಮುಖದಿಂದ ನರಕಾದಿ ಯಾತನೆಗಳನ್ನೂ
ಸ್ವರ್ಗಾದಿ ಭೋಗಂಗಳನ್ನೂ ಅನುಭವಿಸುತ್ತಿರ್ಪ ಕೋಟಲೆಗಲಸಿ,
ವೇದಾಂತಸಮುದ್ರದಲ್ಲಿ ಮುಳುಗಿ,
ಅಲ್ಲಿರ್ಪ ಜ್ಞಾನವೆಂಬ ಮುಕ್ತಾರತ್ನಮಂ ಕೊಂಡು,
ಪರತತ್ವದೇಶದಲ್ಲಿ ಪರಿಣಾಮಿಸುತ್ತಿರ್ಪ
ಗುರುವೆಂಬ ಮಹಾರಾಜಂಗೆ ಕಾಣಿಕೆಯಂ ಕೊಟ್ಟು,
ಅನಂತಬ್ರಹ್ಮಾಂಡಂಗಳಂ ತುಂಬಿ, ತಾನನುಭವಿಸಿ,
ಲಿಂಗವೆಂಬಕ್ಷಯನಿಧಾನಮಂ ಪಡೆದು, ಅದನ್ನು ಮನೋಭಂಡಾರದೊಳಿಟ್ಟು,
ಅತಿಜಾಗರೂಕತೆಯಿಂ ತಾನೇ ಕಾಪಾಡುತ್ತಿರಲು,
ಕತಪಯಕಾಲಕ್ಕೆ ಕಾಲದೂತರು ಬಂದು, ಅಂಗಪುರಭಂಗವಂ ಮಾಡಲು,
ತತ್ಪುರವಾಸಿಗಳಾದ ರುದ್ರರು ಕಾಲದೂತರಂ ತರಿದು,
ಯಮನಂ ಪರಿದು, ಲಿಂಗವಿಧಾನಬಲದಿಂ
ಮೋಕ್ಷಸಾಮ್ರಾಜ್ಯಮಂ ಸಂಪಾದಿಸುತ್ತಾ
ಬಾಳುವ ನಿತ್ಯಸುಖವನ್ನು ನನಗೆ ಕೊಟ್ಟು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೫೨ ॥

ಐದನೆಯ ಅಧ್ಯಾಯ

೧೦೫೪

ಅಗ್ನಿಯಲ್ಲಿ ಕಾಣಿಸುವ ಛಾಯೆಯು ನಿರಾಕಾರ ತಮೋರೂಪುಳ್ಳದ್ದು,
ಜಲದಲ್ಲಿ ಕಾಣಿಸುವ ಛಾಯೆಯು ಸಾಕಾರಸತ್ವಸ್ವರೂಪುಳ್ಳದ್ದು,
ಅಗ್ನಿಯಲ್ಲಿ ರೂಪುಮಾತ್ರವೇ,
ಜಲದಲ್ಲಿ ರೂಪುರುಚಿಗಳೆರಡೂ ಪ್ರತ್ಯಕ್ಷಮಾಗಿಹವು.
ಸಾಕಾರಛಾಯೆ ನಿಜವಾಗಿ, ಹಾವಭಾವವಿಲಾಸವಿಭ್ರಮ ಕಾರಣವಾಗಿಹುದು.
ನಿರಾಕಾರಛಾಯೆ ಜಡವಾಗಿ ವೈರಭಿನ್ನವಾಗಿಹುದು.
ಗುರುದತ್ತಲಿಂಗದಿಂದ ತನ್ನ ನಿಜಭಾವಮಂ ತಿಳಿದು,
ಲಿಂಗವೂ ತಾನೂ ಏಕಮೆಂಬ ಭಾವವು ಬಲಿದು
ಭಿನ್ನಭ್ರಮೆಯಳಿದು ಮನಂಗೊಂಡಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೩ ||

೧೦೫೫

ಪೃಥ್ವಿಯೇ ಸ್ಥಾವರ, ಜಲವೇ ಜಂಗಮು,
ಅಗ್ನಿಯೇ ಸ್ಥಾವರ, ವಾಯುವೇ ಜಂಗಮು.
ಆಕಾಶವೇ ಸ್ಥಾವರ, ಜೀವನೇ ಜಂಗಮು.
ಪೃಥ್ವಿಯೇ ಸ್ಥೂಲ, ಜಲವೇ ಸೂಕ್ಷ್ಮ
ಅಗ್ನಿಯೇ ಸ್ಥೂಲ, ವಾಯುವೇ ಸೂಕ್ಷ್ಮ
ಆಕಾಶವೇ ಸ್ಥೂಲ, ಆತ್ಮನೇ ಸೂಕ್ಷ್ಮ
ಸ್ಥೂಲವಸ್ತುಗಳಿಗೆ ಸೂಕ್ಷ್ಮವಸ್ತುಗಳೇ ಪ್ರಾಣವಾಗಿಹವು.
ತತ್ಸಂಗಂಗಳಿಂ ಬಿಂದುಕಳಾನಾದಗಳು ಸೃಷ್ಟಿಯಾಗುತ್ತಿಹವು.
ಸ್ಥೂಲವಸ್ತುಗಳು ಆ ಸೂಕ್ಷ್ಮವಸ್ತುಗಳಲ್ಲೇ
ಸೃಷ್ಟಿ ಸ್ಥಿತಿ ಸಂಹಾರಂಗಳಂ ಹೊಂದುತ್ತಿಹವು.
ಪೃಥಿವ್ಯಾದಿ ಪಂಚಭೂತಂಗಳೇ ಘ್ರಾಣಾದಿ ಪಂಚೇಂದ್ರಿಯಂಗಳಾಗಿ,
ಆಯಾ ಗುಣಂಗಳಂ ಗ್ರಹಿಸುವಂತೆ ಆತ್ಮನಿಗೆ ಮನಸ್ಸೇ ಇಂದ್ರಿಯವಾಗಿ,
ಆತ್ಮನ ಗುಣವಂ ತಾನೇ ಗ್ರಹಿಸುತ್ತಿರ್ಪುದು.
ಪರಮಾತ್ಮನಿಗೆ ಭಾವೇಂದ್ರಿಯವಾಗಿ,
ಆ ಪರಮನ ಗುಣವಂ ತಾನೇ ಗ್ರಹಿಸುತ್ತಿರ್ಪುದು.
ಮುಖಂಗಳಾವುವೆಂದೊಡೆ :
ಘ್ರಾಣಕ್ಕೆ ವಾಯುವೇ ಮುಖ, ಜಿಹ್ವೆಗೆ ಅಗ್ನಿಯೇ ಮುಖ,
ನೇತ್ರಕ್ಕೆ ಜಲವೇ ಮುಖ, ತ್ವಕ್ಕಿಗೆ ಪೃಥ್ವಿಯೇ ಮುಖ,
ಶ್ರೋತ್ರಕ್ಕಾತ್ಮವೇ ಮುಖ, ಮನಸ್ಸಿಗೆ ಚಿದಾಕಾಶವೆ ಮುಖ,
ಭಾವಕ್ಕೆ ನಿಜವೇ ಮುಖವಾದಲ್ಲಿ

ಪಂಚೇಂದ್ರಿಯಂಗಳು ಪಂಚಭೂತಗುಣಂಗಳಂ ಗ್ರಹಿಸುವಂತೆ,
ಮನಸ್ಸು ಆತ್ಮಗುಣವನ್ನು ಜ್ಞಾನಮುಖದಿಂ ಗ್ರಹಿಸಿ,
ಗುರುದತ್ತಲಿಂಗವೂ ಆತ್ಮನೂ ಏಕವೆಂದು ತಿಳಿದು,
ತೂರ‍್ಯಭಾವದಲ್ಲಿ ಸ್ವಭಾವವಾಗಿ,
ನಿಜಾನಂದ ತೂರ‍್ಯಾತೀತದಲ್ಲಿ ಎರಕವೆರದಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೪ ||

೧೦೫೬

ಜೀವಪಶುಗಳಂ ಕೊಲ್ವ ಕಾಲವ್ಯಾಘ್ರನಂ ಸಂಹರಿಸಿ,
ತತ್ವರೂಪಮಪ್ಪ ವಿಚಿತ್ರವರ್ಣಮಪ್ಪ ದಿಗ್ವಸನಮುಳ್ಳುದರಿಂ
ವ್ಯಾಘ್ರಚರ್ಮಾಂಬರಧಾರಿಯಾದೆ.
ನಿನ್ನ ಶಿರಸ್ಸಿನ ಮೇಲೆ ಕರ್ಮಕೇಶಂಗಳಿಲ್ಲದೆ
ನವಗ್ರಹಸ್ವರೂಪ ಪುಷ್ಪಗಳಿಂ ಪರಿಶೋಭಿಯಾಗಿರುವುದರಿಂದ
ಗಗನಕೇಶಿಯಾದೆ.
ಅಸ್ಥಿರೂಪಮಾದುದೇ ವಜ್ರವು, ಆ ವಜ್ರವೇ ಪುರುಷರತ್ನವು,
ಅದು ಚ್ಯುತಿಯಿಲ್ಲದ್ದು,
ರತ್ನಂಗಳೆಂಬ ಅವಯವಂಗ್ಳಳಿಗೆ ಶಿರೋರೂಪಮಾಗಿಹುದು,
ಅದೇ ನಿರ್ಮಲಸ್ವರೂಪಮಪ್ಪ ಜ್ಞಾನವೆಂಬ ಭಾವವು.
ಅಂತಪ್ಪ ನಿರ್ಮಲಜ್ಞಾನದಿಂ ಶೋಭಿಸಲ್ಪಟ್ಟುದರಿಂ ಅಸ್ಥಿಮಾಲಾಧರನಾದೆ.
ಶೇಷನೇ ಮತಿಸ್ವರೂಪ, ಆ ಮತಿಯೇ ವಿವೇಕವು,
ಅದಕ್ಕೆ ಭಾವವೇ ಶಿರಸ್ಸು,
ಆ ಭಾವಸಹಸ್ರಮುಖದಲ್ಲಿ ಶೋಭಿಸುತ್ತಿರ್ಪ ಜ್ಞಾನರತ್ನಂಗಳಿಂ
ಮನವೆಂಬ ಪೃಥ್ವಿಗಾಧಾರಮಾಗಿರ್ಪ
ವಿವೇಕಸರ್ಪಪ್ರಕಾಶದಿಂದೊಪ್ಪುತಿರ್ಪುದರಿಂ ನಾಗಾಭರಣನಾದೆ.
ಪೃಥಿವ್ಯಾದಿ ಪಂಚಭೂತಂಗಳಿಗೊಡೆಯನಾದುದರಿಂದ ಭೂತಪತಿಯಾದೆ.
ಕಾಲನಿಂ ಕೋಟಲೆಗೊಳುತಿರ್ಪ ಜೀವಂಗಳ ಮೇಲೆ ದಯೆಯಿಂ
ಕಾಲಂಗೆ ಕಾಲರೂಪಮಾದ ನಿನ್ನ ಪ್ರಳಯಕಾಲದಲ್ಲಿ
ಸಕಲಪ್ರಂಪಚಮಂ ಸುಜ್ಞಾನಾಗ್ನಿಯಲ್ಲಿ ದಹಿಸಿ ತದ್ಭಸ್ಮಮಂ ಧರಿಸಿ,
ಪ್ರಾಣಿಗಳ ಭವತಾಪಮಂ ತಣ್ಣನೆಮಾಡಿ,
ತತ್ಪ್ರಪಂಚಸಂಹಾರಾಸ್ಥಾನವಾಸಿಯಾಗಿರ್ಪುದರಿಂ ಭಸ್ಮಧಾರಿಯೂ,
ನಾಲ್ಕು ವೇದಂಗಳು ನಾಲ್ಕುಪಾದಂಗಳಾಗಿ, ಬ್ರಹ್ಮಮುಖದಲ್ಲಿ ಗಮಿಸುತಿರ್ಪ
ನಿರ್ಮಲಧರ್ಮರಥಾರೂಢನಾಗಿರ್ಪುದರಿಂದ ನಂದಿವಾಹನಾರೂಢನಾದೆ.
ಇಂತಪ್ಪ ನಿನ್ನ ಸುಮಂಗಳ ಸ್ವರೂಪಮಂ ನಾನರಿಯದೆ,
ಅಮಂಗಲಗಳನ್ನೇ ಭಾವಿಸಿ, ಅಪರಾಧಿಯಾಗಿರ್ಪೆನ್ನ ದುರ್ಗುಣಂಗಳಂ

ನಿನ್ನಾಗ್ರಹವೆಂಬ ಚಿದಗ್ನಿಯಿಂ ದಹಿಸಿ,
ಕೋಪಾಂತದಲ್ಲಿ ಬಪ್ಪ ಪರಮಶಾಂತಿಯೊಳು ನನ್ನನಿಟ್ಟು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೫ ||

೧೦೫೭

ಸೂಕ್ಷ್ಮದಿಂದಲೇ ಸ್ಥೂಲಮುದಿಸಿ,
ಆ ಸೂಕ್ಷ್ಮವು ಕಾಣಿಸದೆ ಸ್ಥೂಲವು ಕಾಣಿಸುತ್ತಿರ್ಪುದು.
ಸ್ಥೂಲಶರೀರಯಾತನೆ ಬಿಡಿಸಿದಲ್ಲಿ, ಆ ಸ್ಥೂಲಮಂ ಬಿಟ್ಟು
ಸೂಕ್ಷ್ಮಗೋಚರವಾಗಿರ್ಪ ಲಯಂ ತಾನೇ ಗೋಚರವಾಗಿ,
ತಾನೇ ಪುನಃ ಸೃಷ್ಟಿಕಾರಣವಾಗಿರ್ಪುದೆಂತೆಂದೊಡೆ :
ಬೀಜದಿಂದಲೇ ಪೈರು ಪುಟ್ಟಿ, ಆ ಬೀಜಂ ಕಾಣಿಸದೆ ಪೈರೇ ಕಾಣಿಸಿ,
ಆ ಪೈರಂ ಕೊಯ್ದು ತುಳಿದು ಒಕ್ಕಿದಲ್ಲಿ
ಆ ಪೈರಂ ಬಿಟ್ಟು, ಬೀಜವು ಪ್ರತ್ಯಕ್ಷವಾಗಿ, ಫಲಯಾತನೆಗೊಳಗಾಗಿ,
ಪುನಸ್ಸೃಷ್ಟಿಕಾರಣವಾಗಿರ್ಪಂದದಿ,
ಸ್ಥೂಲದೊಳಗೆ ಸೂಕ್ಷ್ಮವೂ, ಸೂಕ್ಷ್ಮದೊಳಗೆ ಸ್ಥೂಲವೂ ಅಡಗಿ,
ಬಂದು ಕಾಣಿಸಲೊಂದು ಕಾಣಿಸದಿರ್ಪ ಈ ದಂದುಗವಂ ಬಿಡಿಸಿ,
ಸಲಹುವೆಯೋ ಎಂಬೀ ಸಂದೇಹದಿಂ ಹಿಂದುಮುಂದು ತಿಳಿಯದೆ
ಮಂದಮತಿಯಾಗಿರ್ಪೆನ್ನ ಬಂಧನವಂ ಬಿಡಿಸಿ,
ನಿನ್ನಡಿಕೆಂದಾವರೆಯೊಳು ಸಂಬಂಧಿಸುವುದೆಂದಿಗೆ ಹೇಳಾ,
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೬ ||

೧೦೫೮

ಕೇವಲ ಸದ್ರೂಪಮಾದ ನಿಷ್ಕಳಶಿವತತ್ವವು
ತನ್ನೊಳ್ತಾನೇ ಪ್ರಕಾಶಿಸುತ್ತಿರ್ಪುದರಿಂ ಪರಮಾತ್ಮನೆಂಬ ಸಂಜ್ಞೆಯಿಂ
ತನ್ನ ನಿಜಮಹಾತ್ಮ್ಯ ಪ್ರಕಟನೆಗೋಸುಗ
ತಾನೇ ಆತ್ಮನಾಗಿ, ಆತ್ಮನೇ ಆಕಾಶವಾಗಿ, ಆಕಾಶವೇ ವಾಯುವಾಗಿ,
ವಾಯುವೇ ಅಗ್ನಿಯಾಗಿ, ಅಗ್ನಿಯೇ ಜಲವಾಗಿ,
ಆ ಜಲವೇ ಪೃಥ್ವೀರೂಪವಾಗಿ ಘಟ್ಟಿಗೊಂಡು
ಆ ಪೃಥ್ವಿಗೆ ಜಲವೇ ಕಾರಣವಾಗಿ, ಆ ಜಲಕಗ್ನಿಯೇ ಕಾರಣವಾಗಿ.
ಆ ಅಗ್ನಿಗೆ ವಾಯುವೇ ಕಾರಣವಾಗಿ,
ಆ ವಾಯುವಿಗೆ ಆಕಾಶವೇ ಕಾರಣವಾಗಿ,
ಆ ಆಕಾಶಕ್ಕಾತ್ಮನೇ ಕಾರಣವಾಗಿ, ಆ ಆತ್ಮನಿಗೆ ಪರಮಾತ್ಮನೇ ಕಾರಣವಾಗಿ,
ಒಂದಕ್ಕೊಂದು ತಮ್ಮಲ್ಲಿಯೇ ತಾವು
ಸೃಷ್ಟಿ ಸ್ಥಿತಿ ಸಂಹಾರಂಗಳಿಗೆ ಕಾರಣವಾಗಿರ್ಪ,
ಆತ್ಮಾದಿ ಷಡ್ಭೂತಂಗಳಿಗೆ ತಾನೇ ಚೈತನ್ಯಸ್ವರೂಪವಾಗಿರ್ಪ ಪರಮನು

ಆತ್ಮಸಂಗದಿಂ ಜೀವಕೋಟಿಗಳಂ ಸೃಷ್ಟಿಸಿ,
ಕರ್ಮಕ್ಕೆ ಕಾರಣಮುಂ ಮಾಡಿ ಕ್ರೀಡಿಸುತ್ತಿರ್ದನದೆಂತೆಂದೊಡೆ :
ಜಲವು ತಾನೇ ಪೃಥ್ವಿಸ್ವರೂಪವಾಗಿ ಬಲಿದು,
ಆ ಪೃಥ್ವಿಯನ್ನೇ ತನಗಾಧಾರವಂ ಮಾಡಿಕೊಂಡು,
ತಾನೇ ಪೃಥ್ವಿಗೆ ಆಧಾರವಾಗಿ,
ಪೃಥ್ವಿಯಂ ಪರಿವೇಷ್ಟಿಸಿರ್ಪ ಜಲವೇ ಪತಿಯಾಗಿ,
ಪೃಥ್ವಿಯಲ್ಲಿ ಪರಿವ ಜಲವೇ ಸತಿಯಾಗಿರ್ಪ ಆ ಜಲಬಂಧದಿಂ
ಕುಡ್ಯ ಸೌಧ ಗೃಹಾದಿ ನಾನಾಸ್ವರೂಪಂಗಳಾಗಿ ನಿಂತು,
ತನ್ನಲ್ಲಿರ್ಪ ಜಲವಾರಿಹೋಗಲು, ಆ ಸೃಷ್ಟಿಶಕ್ತಿಯಿಂ ತಾಂ ಘಟ್ಟಿಗೊಂಡು,
ಜೀವರಿಗೆ ಜಲಹಿಂಸೆಯಂ ನಿವಾರಣವಾಡುತ್ತಾ,
ಆ ಜಲದಿಂದಲ್ಲೇ ತಾನು ಲಯವನ್ನೈದುತ್ತಿರ್ದಂದದಿ,
ಆ ಪರಮಾತ್ಮನೇ ಆತ್ಮನಂ ಸುತ್ತಿ, ಆತ್ಮನಲ್ಲೇ ಸುಳಿದು,
ತಾನೇ ಶಿವಶಕ್ತಿಸ್ವರೂಪವಾಗಿ, ತನ್ನಿಂದ ಬದ್ಧವಾಗಿರ್ಪ ಆತ್ಮಪದಾರ್ಥದಲ್ಲಿ
ಜೀವಜಾಲಂಗಳಂ ಸೃಷ್ಟಿಸಿ,
ಪೃಥ್ವಿಯಲ್ಲಿ ಬೆಳೆದ ಬೆಳೆಯನ್ನು ಗೃಹದಲ್ಲಿ ತುಂಬಿ,
ಶರೀರದಿಂದ ಅನುಭವಿಸುವಂದದಿ
ಆತ್ಮನಿಂದ ಬೆಳೆದ ಕರ್ಮದ ಬೆಳಸನ್ನು ಜೀವಂಗಳಲ್ಲಿ ತುಂಬಿ,
ತದನುಭವಕ್ಕೆ ತಾನೇ ಕಾರಣವಾಗಿ,
ನಿಜಮಾಹಾತ್ಮ್ಯ ಪ್ರಕಟನಮಂ ಮಾಡಿಯಾಡುತಿರ್ಪಭವನೆ
ನಿನ್ನ ಸಂಬಂಧವಾಗಿರ್ಪುದಂ ಭಾವದಲ್ಲಿ ತಿಳಿದುನೋಡಿದಲ್ಲಿ,
ಎಲ್ಲವೂ ನೀನಾಗಿರ್ಪೆಯಲ್ಲದೆ, ಪೆರತೊಂದುಂಟೇನಯಾ?
ನಿನ್ನ ಕ್ರೀಡಾನಿಮಿತ್ತ ನಾನೆಂಬ ಬರಿಯಭ್ರಮೆಯಂ ಸೃಷ್ಟಿಸಿ,
ಕಷ್ಟಬಡಿಪುದೊಳ್ಳಿತ್ತೇನಯ್ಯಾ?
ಅರಿತವನ ಮುಂದೆ ಇಂದ್ರಜಾಲವಂ ಮಾಡಲು ಪರಿಶೋಭಿಸಬಲ್ಲುದೆ?
ನಿನ್ನ ಮಾಯೆಯೆನಗೆ ಮನೋರಥವಾಗಬಲ್ಲುದೆ?
ಬೇರ ಬಲ್ಲವಂಗೆ ಎಲೆಯಂ ತೋರಹೋದರೆ, ಅಪಹಾಸ್ಯಕಾರಣವಾಗಿಹುದು.
ಇದನರಿತು ನನ್ನಂ ಕಾಡದಿರು ಕಂಡ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೫೭ ||

೧೦೫೮

ನೀರು ತನ್ನೊಳಗಿರುವ ಮಲಿನವಂ ಧರೆಗೆಹತ್ತಿಸಿ ತಾನಾರಿಪೋದಡೆ
ನೀರೊಳಗಿದ್ದು ಅಗಸನೊಗೆದಂತೆ,
ಪ್ರಪಂಚವು ತನ್ನೊಳಗಿರ್ದ ಮಲಿನವಂ ನನಗೆ ಹತ್ತಿಸಿ
ತಾನು ಬಯಲಾಗಿಪೋದಡೆ,

ಆ ಪ್ರಪಂಚದೊಳಗಿರ್ದ ನನ್ನಂ ಕಾಲನು ಕೊಲ್ಲುತ್ತಿರ್ಪನಯ್ಯಾ.
ನಿನಗನುಭವರೂಪಮಾದ ನಾನೆಂಬ ದಿವ್ಯದುಕೂಲವನ್ನು ಹೊದ್ದು,
ಮಾಸಿ, ಒಗೆದು, ಹರಿದುಬಿಡದೆ, ನಿನ್ನ ಪರತತ್ವವೆಂಬ ಭಂಡಾರದಲ್ಲಿ
ಜ್ಞಾನವೆಂಬ ಪೆಟ್ಟಿಗೆಯೊಳಗೆ ಗಳಿಗೆವಡೆಯದಂತೆ,
ಪುರಾತನಕವಳಿಗೆಯೊಳಗೆ ನನ್ನನಿಟ್ಟು ರಕ್ಷಿಸು ಕಂಡ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೫೮ ॥

೧೦೬೦

ಭಂಡಾರದೊಳಗಿರ್ಪ ಸುವರ್ಣವೇ ಪ್ರಾಣಲಿಂಗವಾಗಿ,
ಆಭರಣರೂಪಮಾದ ಸುವರ್ಣವೇ ಇಷ್ಟಲಿಂಗರೂಪಮಾಗಿ
ಸಕಲಪ್ರಪಂಚದಲ್ಲೆಲ್ಲಾ ತಾನೇ ತುಂಬಿ,
ತನ್ನ ಮಹಿಮೆಯಿಂದಲ್ಲೇ ಸಕಲಪ್ರಪಂಚವನಾಡಿಸುವ
ಸುವರ್ಣವೇ ಭಾವಲಿಂಗಮಾಗಿ,
ಪ್ರಪಂಚದಲ್ಲೆಲ್ಲಾ ತುಂಬಿರ್ಪಲ್ಲಿ ಮಹಾಲಿಂಗಮಾಗಿ,
ಅದೇ ಆದಾಯಮುಖದಲ್ಲಿ ಒಮ್ಮುಖಕ್ಕೆ ಬಂದು
ತನಗಿದಿರಿಟ್ಟಲ್ಲಿ ಪ್ರಸಾದಲಿಂಗಮಾಗಿ,
ತನ್ನ ಸಂಸಾರಮುಖದಲ್ಲಿ ಸಂಚರಿಸುತ್ತಾ
ತನಗೆ ಸೇವನಾಯೋಗ್ಯಮಾದಲ್ಲಿ ಜಂಗಮಲಿಂಗಮಾಗಿ,
ಮುಂದೆ ತನ್ನ ಸಂರಕ್ಷಣಕಾರಣ ಕೋಶಭರಿತಮಾದಲ್ಲಿ ಶಿವಲಿಂಗಮಾಗಿ,
ಅದೇ ಅಲಂಕಾರಮುಖದಲ್ಲಿ ದೊಡ್ಡಿತಾದಲ್ಲಿ ಗುರುಲಿಂಗಮಾಗಿ,
ಈ ವಿಧದಲ್ಲೆಲ್ಲವು ತದಾಚರಣೆವಿಡಿದಿರ್ಪುದರಿಂ
ಒಂದು ಸುವರ್ಣವೇ ಹಲವು ರೂಪಮಾಗಿ
ಪ್ರಪಂಚ ಸೃಷ್ಟಿ, ಸ್ಥಿತಿ ಸಂಹಾರಕ್ಕೂ ಬ್ರಹ್ಮಾಂಡಕ್ಕೂ
ತಾನೇ ಕಾರಣಮಾಗಿರ್ಪಂತೆ,
ಒಂದು ಲಿಂಗವೇ ಹಲವು ರೂಪಾಗಿ,
ಭಕ್ತನ ಸೃಷ್ಟಿ, ಸ್ಥಿತಿ ಸಂಹಾರಕ್ಕೂ ಪಿಂಡಾಂಡಕ್ಕೂ ತಾನೇ ಕಾರಣವಾಗಿರ್ಪುದು.
ಪ್ರಪಂಚಕ್ಕೆ ತಾನು ಚೇತನಮಾಗಿ ಪ್ರಪಂಚವನಾಡಿಸುತ್ತಾ,
ಆ ಪ್ರಪಂಚಕ್ಕೆ ತಾನೇ ಸುಖಪ್ರದನಾಗಿರ್ಪಂತೆ,
ಲಿಂಗವು ನಿರ್ಗುಣಮಾದರೂ ಗುಣರೂಪಮಾದ ಭಕ್ತನಿಗೆ
ತಾನು ಗುಣಮಾಗಿ, ಭಕ್ತಸುಖಪ್ರದಮಾಗಿರ್ಪುದು.
ಸುವರ್ಣದಿಂ ಸುವರ್ಣವೇ ಜೀವನಮಾಗಿರ್ಪ ಅಧಿಕಬಲಮುಂ ಸಂಪಾದಿಸಿ,
ಆ ಬಲದಿಂದ ಶತ್ರುಸಂಹಾರಮಂ ಮಾಡಿ, ರಾಜ್ಯವನ್ನು ಸಂಪಾದಿಸಿ,
ಅದೆಲ್ಲಕ್ಕೂ ತಾನೇ ಕರ್ತೃವಾಗಿ ತನ್ನಧೀನಮಾಗಿರ್ಪ
ಆ ರಾಜ್ಯಾದಿಭೋಗವಂ ತಾನನುಭವಿಸುತ್ತಾ ನಿಶ್ಚಿಂತನಾಗಿ,

ಐಶ್ವರ್ಯಕ್ಕೂ ತನಗೂ ಅಭೇದರೂಪವಾಗಿರ್ಪ ಅರಸಿನಂತೆ,
ಲಿಂಗದಿಂ ಲಿಂಗವೇ ಜೀವಿತವಾಗಿರ್ಪ ನಿಜಬಲವಂ ಸಂಪಾದಿಸಿ,
ತದ್ಬಲದಿಂ ತಮೋಗುಣ ಶತ್ರುಸಂಹಾರವಂ ಮಾಡಿ,
ಮನೋರಾಜ್ಯಮಂ ಸಾಧಿಸಿ, ಎಲ್ಲಕ್ಕೂ ತಾನೇ ಕರ್ತೃವಾಗಿ,
ತನ್ನಧೀನವಾಗಿರ್ಪ ಮನೋಮುಖದಿಂದ ಬಂದ ಸುಖವನ್ನು
ಉಪಾಧಿಯಿಲ್ಲದೆ ನಿಶ್ಚಿಂತವಾಗನುಭವಿಸುತ್ತಾ,
ದೀಪಪ್ರಭೆಯೋಪಾದಿಯಲ್ಲಿ ಲಿಂಗಕ್ಕೂ ತನಗೂ ಭೇದವಿಲ್ಲದೆ,
ಐಶ್ವರ್ಯವಂತನು ತನ್ನ ಮುನ್ನಿನ ಗುಣವಳಿದು
ಐಶ್ವರ್ಯಗುಣವೇ ನಿಜಮುಖ್ಯಗುಣವಾಗಿ ಸಂಚರಿಸುತ್ತಿರ್ಪಂತೆ,
ಲಿಂಗವಂತನು ತನ್ನ ಪೂರ್ವದ ಗುಣವಳಿದು
ಲಿಂಗದಗುಣಮೆ ನಿಜಗುಣವಾಗಿರ್ಪುದೇ ಲಿಂಗೈಕ್ಯವು.
ಇಂತಪ್ಪ ಸಕೀಲವೆನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೇ. || ೫೯ ||

೧೦೬೧

ಪುರುಷನ ವೀರ್ಯವೇ ಸ್ತ್ರೀಗೆ ಶಕ್ತಿಯಾಗಿ,
ತದ್ಧಾರಣಬಲದಿಂ ಅದೇ ಸಾಕಾರವಾಗಿ ಸೃಷ್ಟಿಯಾದಲ್ಲಿ,
ಆ ಶಿಶುವನು ರಕ್ಷಿಸುವುದಕ್ಕೆ ಆ ಸತಿಯೇ ಕಾರಣವಾಗಿರ್ಪಂತೆ,
ಸದಾಶಿವನ ವೀರ್ಯರೂಪಸುವರ್ಣವೇ ವಿಷ್ಣುವಿಗೆ ಶಕ್ತಿಯಾಗಿ,
ತದ್ಧಾರಣಬಲದಿಂದ ತದ್ರೂಪವಾಗಿರ್ಪ ರಜೋಗುಣಮೂರ್ತಿಯಾದ
ಬ್ರಹ್ಮಾದಿಸಕಲಪಂಚಮಂ ಸೃಷ್ಟಿಸಿ,
ತದ್ರಕ್ಷಣಕ್ಕೆ ತಾನೇ ಕಾರಣವಾಗಿರ್ಪನು.
ಇಂತಪ್ಪ ಶಿವಶಕ್ತಿಗಳ ಮಹಿಮೆಯಂ ನಾನೆಂಬ
ರಜೋಗುಣವೇ ಮರೆಗೊಂಡಿರ್ಪುದು.
ತತ್ಸಂಗಕ್ಕೂ ತಾನೇ ಉಪಾಧಿಕಾರಣವಾಗಿರ್ಪ ಭೇದಮಂ
ಗುರುಮುಖದಿಂದ ತಿಳಿದು ನೋಡಿದಲ್ಲಿ,
ಅವರಿಬ್ಬರ ಕ್ರೀಡೆಯನ್ನು ನೋಡಿ ನಾನಿಲ್ಲವಾದೆನು,
ನಾನಿಲ್ಲವಾದಲ್ಲಿ ಅವೆರಡೂ ಒಂದೆಯಾಯಿತ್ತು,
ದರ್ಪಣವಿಲ್ಲವಾದಲ್ಲಿ ಬಿಂಬ ಪ್ರತಿಬಿಂಬಗಳೇಕವಾದಂತೆ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೇ. || ೬೦ ||

೧೦೬೨

ನಿಜಮಹಾತ್ಮ್ಯಪ್ರಕಟನ ಪ್ರಪಂಚ ಕ್ರೀಡಾಕಾರಣವಾದ
ನಾನೆಂಬುಪಾಧಿಯಂ ಪ್ರಪಂಚಮುಖದಲ್ಲೇ ಕಲ್ಪಿಸಿ,
ನನ್ನಲ್ಲಿ ತೋರುತ್ತಿರ್ಪ ಪ್ರಪಂಚದಿಂ ನಿಜಾಲಂಕಾರಶೋಭಿಯಾಗಿ

ನನ್ನಲ್ಲುದಿಸಿದ ಪಾಪಮಲಿನಮಂ ಕಾಲರೂಪವಾಗಿ ಸಂಹರಿಸಿ,
ಪ್ರಪಂಚಪ್ರಕಟನಮಂ ಮಾಡುತಿರ್ಪೆಯಾಗಿ,
ನಿನ್ನ ಮಹಿಮೆಯಂ ಜಡರೂಪವಾಗಿರ್ಪ ನಾನೆಂತು ಬಲ್ಲೆನಯ್ಯಾ?
ನೀನೇ ಸಂಹಾರಕರ್ತೃವಾಗಿ, ಶಕ್ತಿಯೇ ರಕ್ಷಣಕರ್ತೃವಾಗಿ,
ನಾನೇ ಸೃಷ್ಟಿಕರ್ತೃವಾಗಿರ್ಪೆನಯ್ಯಾ.
ನನ್ನಲ್ಲಿ ಬಾಹ್ಯನೈರ್ಮಲ್ಯವಂ ಅಂತರಂಗದಲ್ಲಿ ಪ್ರಕಾಶವಂ ಮಾಡಿ, ತೋರಿದಲ್ಲಿ
ನನ್ನಲ್ಲಿರ್ಪ ಮಾಯೆ ನನ್ನಲ್ಲಿಯೇ ಅಡಗಿ,
ನಾನು ನಿರ್ಮಲಸ್ವರೂಪನಾಗಿ, ನನ್ನಲ್ಲಿ ನಾನೇ ಪ್ರಕಾಶಿಸುತ್ತಿರ್ಪೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೧ ||

೧೦೬೩

ಜಂಗಮಫಲವೆಲ್ಲವೂ ದೇವತೆಗಳಾಹಾರವು;
ಸ್ಥಾವರಫಲವೆಲ್ಲವೂ ಮನುಷ್ಯರಾಹಾರವು.
ಅದೆಂತೆಂದೊಡೆ :
ದೇವತಾಬಿಂದುವಿನಲ್ಲಿ ಮನುಷ್ಯಕೃತ್ಯದಿಂದುದ್ಭವಿಸುವುದೆಲ್ಲ ಸ್ಥಾವರವು;
ಮನುಷ್ಯ ಬಿಂದುವಿನಲ್ಲಿ ದೇವತಾಕೃತ್ಯದಿಂದುದ್ಭವಿಸುವುದೆಲ್ಲ ಜಂಗಮವು.
ಮನುಷ್ಯರು ಶೂದ್ರಮುಖದಿಂ ಕೊಂಬುತಿರ್ಪರು.
ದೇವತೆಗಳು ಬ್ರಾಹ್ಮಣಮುಖದಿಂ ಕೊಂಬುತಿರ್ಪರು.
ಪೃಥ್ವಿಯಲ್ಲಿ ಎಂಬತ್ತುನಾಲ್ಕುಲಕ್ಷವಿಧ ಜಂಗಮಗಳು ಹೇಗೋ
ದೇವತೆಗಳಲ್ಲಿಯೂ ಹಾಗೆ.
ದೇವತೆಗಳು ತಮ್ಮ ಕರ್ಮಫಲವು ತೀರಿದೊಡೆ,
ತದ್ದೋಷ ಕರ್ಮಾನುಸಾರವಾಗಿ ಪಂಚಾಶಲ್ಲಕ್ಷ ದೇಹಗಳೊಂದಂ ಹೊಂದಿ
ಆಯಾ ಆಹಾರಂಗಳಂ ಭುಂಜಿಸುತ್ತಾ,
ತದಾನುಗುಣ್ಯವಾಗಿ ಕ್ರೀಡಿಸುತ್ತಿರ್ಪಂದದಿ,
ಮನುಷ್ಯನು ಇಹಲೋಕಕರ್ಮವು ತೀರಿದಲ್ಲಿ
ಆ ಕರ್ಮಫಲಕ್ಕೆ ತಕ್ಕ ಮರಣವಂ ಹೊಂದಿ,
ದೇವತಾ ಪಿಶಾಚಾಂತಮಾದ ದೇಹಗಳೊಳೊಂದು ದೇಹವನ್ನೆತ್ತಿ
ಸುಖದುಃಖಂಗಳನನುಭವಿಸುತ್ತಾ, ತನ್ನ ಅಧಿಕಾರಕ್ಕೆ ದೇವತೆಯನ್ನು ಗ್ರಹಿಸಿ,
ಆ ದೇವತಾಮುಖದಿಂ ಆಹಾರಂಗಳಂ ಗ್ರಹಿಸುವಂತೆ,
ಆ ದೇವತೆಗಳು ತಮ್ಮ ಅಧಿಕಾರಕ್ಕನುಗುಣವಾಗಿ ಮನುಷ್ಯರಂ ಗ್ರಹಿಸಿ,
ಆ ಮನುಷ್ಯಮುಖದಿಂ ಆಹಾರಂಗಳಂ ಕೊಂಬುತಿರ್ಪರು.
ದೇವತೆಗಳಿಗೆ ಮಂತ್ರದಿಂದಾವಾಹನೋಚ್ಚಾಟನೆಗಳು,
ಮನುಷ್ಯರಿಗೆ ತಂತ್ರದಿಂದಾವಾಹನೋಚ್ಚಾಟನೆಗಳು.
ಮನುಷ್ಯರಿಗೆ ತಂತ್ರದಿಂ ಕೂಡಿದ ಮಂತ್ರವು.

ದೇವತೆಗಳಿಗೆ ಮಂತ್ರದಿಂ ಕೂಡಿದ ತಂತ್ರವು,
ಇಂತು ಮನುಷ್ಯರೂಪದಿಂದ ಸತ್ತು,
ದೇವತಾರೂಪದಿಂ ಹುಟ್ಟುತ್ತಿರ್ಪ ದಂದುಗವಂ ಬಿಡಿಸಿ,
ನಿನ್ನಲ್ಲಿ ಸತ್ತು ಹುಟ್ಟುತ್ತಿರ್ಪ ನಿಜಸುಖವಂ ಕೊಟ್ಟು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೨ ||

೧೦೬೪

ಘ್ರಾಣಜಿಹ್ವಾತ್ವಕ್ಶ್ರೋತ್ರಮಾನಸಾದಿ ವಿಷಯೇಂದ್ರಿಗಳಲ್ಲಿ
ಪೃಥ್ವಿವ್ಯಪ್ತೇಜೋವಾಯ್ವಾಕಾಶಾತ್ಮಾದಿ ಷಡ್ಭೂತಂಗಳು
ವಿಪರೀತಸಂಬಂಧಂಗಳಾಗಿ ತೋರುತ್ತಿರ್ಪವೆಂತೆಂದೊಡೆ:
ಮನಸ್ಸಿನ ವಿಷಯದಲ್ಲಿ ಪೃಥ್ವಿಯು ಸೃಷ್ಟಿಕಾರಣವಾಗಿಹುದು.
ಶ್ರೋತ್ರವಿಷಯದಲ್ಲಿ ಜಲವು ಸಂರಕ್ಷಣಕಾರಣವಾಗಿ ಶುಚಿಯಾಗಿಹುದು.
ತ್ವಗ್ವಿಷಯದಲ್ಲಗ್ನಿಯು ಸಂಹಾರಕಾರಣವಾಗಿಹುದು.
ನೇತ್ರವಿಷಯದಲ್ಲಿ ವಾಯುವು ಚಂಚಲಕಾರಣವಾಗಿಹುದು.
ಜಿಹ್ವಾವಿಷಯದಲ್ಲಾಕಾಶವು ಶಬ್ದಕಾರಣವಾಗಿಹುದು.
ನಾಸಿಕ ವಿಷಯದಲ್ಲಾತ್ಮನು ಚೈತನ್ಯಕಾರಣವಾಗಿಹನು.
ವಾಯುವಿನೊಳಗೆ ಬೆರೆದ ಆತ್ಮನೇ ಜೀವನು ;
ಆತ್ಮನೊಳಗೆ ಬೆರೆದ ವಾಯುವೆ ಮನಸ್ಸು.
ಪಂಚಭೂತರೂಪವಾದ ಶರೀರಕ್ಕೆ ಜೀವನು ಕರ್ತನಾದಂದದಿ
ಪಂಚಭೂತಗುಣಗ್ರಾಹಿಗಳಾದ ಇಂದ್ರಿಯಂಗಳಿಗೆ ಮನಸ್ಸೇ ಕರ್ತೃವಾಗಿ,
ಆ ಇಂದ್ರಿಯಂಗಳು ಹೋದಲ್ಲಿಗೆ ಶರೀರವು ಹೋಗುವಂದದಿ,
ಆ ಮನಸ್ಸೇ ಜೀವನಾಗಿ, ಆ ಮನಸ್ಸು ಹೋದಲ್ಲಿಗೆ ಜೀವನು ಹೋಗುತ್ತಿಹನು.
ಅಂತಪ್ಪ ವಾಯುಸಂಗವಳಿದಲ್ಲಿ ಜೀವಮನಸ್ಸುಗಳೆಂಬ ಮಿಥ್ಯಾಕಲ್ಪನೆಯಳಿದು,
ಆತ್ಮನೇ ನಿಜಸ್ವರೂಪವಾದ ಪರಮಾತ್ಮನಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೩ ||

ಆರನೆಯ ಅಧ್ಯಾಯ

೧೦೬೫

ಸತ್ಯವೇ ಪರಮನು, ಜ್ಞಾನವೇ ಜೀವನು, ಆನಂದವೇ ಶರೀರವು.
ಅದೆಂತೆಂದೊಡೆ:
ಶರೀರಾದಿ ಸಕಲಪ್ರಪಂಚಕ್ಕೂ ಜ್ಞಾನವೇ ಮೂಲವಾಗಿರ್ಪುದು.
ಆನಂದಮುಖದೊಳ್ ಬಿಂದು ಜನಿಸಿ,
ಆ ಬಿಂದುವೇ ಪೃಥ್ವೀರೂಪದಲ್ಲಿ ಘನೀಭವಿಸಿ,
ಪಿಂಡಾಕಾರವಾಗಿ ಶರೀರಮಪ್ಪಂತೆ,

ಜ್ಞಾನಮುಖದಲ್ಲಿ ವಾಯುವು ಜನಿಸಿ,
ತೇಜೋರೂಪದಲ್ಲಿ ಘನೀಭವಿಸಿ, ಜೀವನಾಗಿರ್ಪುದು.
ನಿಜದಲ್ಲಾತ್ಮನು ಜನಿಸಿ, ಆಕಾಶರೂಪದಲ್ಲಿ ಘನೀಭವಿಸಿ ಪರಮನಾಗಿರ್ಪನು.
ಆನಂದಬಿಂದುಮುಖದಿಂದ ಅಹಂಕಾರವು ಜನಿಸಿ,
ಜ್ಞಾನವಾಯುಗಳ ಸಂಗದಿಂ ಮನವು ಪುಟ್ಟಿತ್ತು,
ನಿಜಾತ್ಮಗಳ ಸಂಗದಿಂ ಭಾವವು ಹುಟ್ಟಿತ್ತು,
ತತ್ಸಾಧ್ಯಕ್ಕವೇ ಸಾಧನಗಳಾಗಿರ್ಪುದರಿಂ
ಇವೇ ಕರಣಂಗಳಾಗಿ, ಅವೇ ಕಾರಣಂಗಳಾಗಿರ್ಪವು.
ಪೃಥ್ವವೀಬೀಜಗಳಸಂಗದಿಂದ ಬೀಜಮಧ್ಯದಲ್ಲಿ ವೃಕ್ಷವು ಜನಿಸಿತ್ತು,
ವೃಕ್ಷವು ಬಲಿದಲ್ಲಿ ಬೀಜವು ನಷ್ಟವಾಗಿ,
ತದಗ್ರದಲ್ಲಿರ್ಪ ಫಲಮಧ್ಯದಲ್ಲಿ ಅನೇಕಮುಖವಾಗಿ ತೋರುತ್ತಿರ್ಪಂತೆ,
ಜ್ಞಾನವಾಯುಗಳಸಂಗದಿಂ ಜ್ಞಾನಮಧ್ಯದಲ್ಲಿ ಮನಸ್ಸು ಹುಟ್ಟಿ,
ಅದು ಬಲಿದಲ್ಲಿ, ಆ ಮೂಲಜ್ಞಾನವಳಿದು,
ತತ್ಫಲರೂಪವಾದ ಇಂದ್ರಿಯಮಧ್ಯದಲ್ಲಿ ತೋರುತ್ತಿರ್ಪುದು.
ಜಲವು ಆ ಬೀಜವಂ ಭೇದಿಸಿ, ತನ್ಮಧ್ಯದಲ್ಲಿ ವೃಕ್ಷವಂ ನಿರ್ಮಿಸುವಂತೆ,
ಮನಸ್ಸೇ ಜಾಗ್ರತ್ಸ್ವರೂಪದಲ್ಲಿ ಜ್ಞಾನಭಿನ್ನವಂ ಮಾಡಿ,
ತನ್ಮಧ್ಯದಲ್ಲಾನಂದವಂ ನಿರ್ಮಿಸುತ್ತಿರ್ಪುದು.
ಆನಂದವು ನಿರಾಕಾರವೂ ಬಿಂದುವು ಸಾಕಾರವೂ ಆದುದರಿಂದ
ಆನಂದವಂ ಬಿಂದುವು ಬಂಧಿಸಿರ್ಪಂತೆ, ವಾಯುವು ಜ್ಞಾನವಂ ಬಂಧಿಸಿರ್ಪುದು.
ಆನಂದವು ಜ್ಞಾನದೊಳ್ಬೆರೆದಲ್ಲಿ ಶರೀರವು ಜೀವನೊಳೈಕ್ಯಮಾಯಿತ್ತು,
ಆ ಜ್ಞಾನವು ನಿಜದೊಳ್ಬೆರೆದಲ್ಲಿ ಜೀವನು ಪರಮನೊಳೈಕ್ಯವಾಯಿತ್ತು,
ನಿಜಾನಂದ ಶಿವಶಕ್ತಿಗಳೇಕಮಾದಲ್ಲಿ ಜ್ಞಾನವದರೊಳಗೆ ಬೆರೆದು,
ಭೇದವಡಗಿ ಅವೆರಡರ ಸಂಯೋಗ ವಿಯೋಗಕ್ಕೆ ತಾನೇ ಕಾರಣವಾಗಿ,
ನಿಜಾನಂದವೇ ತೋರುತ್ತಾ, ತಾನೊಪ್ಪುತ್ತಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೬೪ ॥

೧೦೬೭

ವಾಚಾತೀತವೂ ಮನೋತೀತವೂ ಭಾವಾತೀತವೂ ಆದ ಮಹಾಲಿಂಗವು
ಸತ್ಯಜ್ಞಾನಾನಂದಸ್ವರೂಪಮಾದಲ್ಲಿ,
ಸತ್ಯವೇ ಭಕ್ತ, ಜ್ಞಾನವೇ ಗುರು,
ಆನಂದವೇ ಜಂಗಮಸ್ವರೂಪವಾಗಿ ನಟಿಸುತಿರ್ಪ ಮಹಾಲಿಂಗವು
ತನ್ನ ಲೀಲೆಗೋಸುಗ ಆನಂದವನ್ನು ಮರೆವಿಡಿದು,
ಅದರಲ್ಲಿಯೇ ದುಃಖಸ್ವರೂಪವಾಗಿ ಮಹಾರುದ್ರನಂ ಸೃಜಿಸಿ,
ಜ್ಞಾನಮಂ ಮರೆವಿಡಿದು, ಅದರಲ್ಲಿಯೇ ಅಜ್ಞಾನವೆಂಬ ವಿಷ್ಣುವಂ ಕಲ್ಪಿಸಿ,

ಸತ್ಯವಂ ಮರೆವಿಡಿದು, ಅದರಲ್ಲಿ ಮಿಥ್ಯೆಯೆಂಬ ಬ್ರಹ್ಮನಂ ಕಲ್ಪಿಸಲು,
ಸರ್ಗ ಸ್ಥಿತಿ ಸಂಹಾರಂಗಳಿಗಿದೇ ಕಾರಣವಾಗಿ,
ಆ ರುದ್ರನಲ್ಲಿ ಜಾಗ್ರವೂ, ವಿಷ್ಣುವಿನಲ್ಲಿ ಸುಷುಪ್ತಿಯೂ,
ಬ್ರಹ್ಮನಲ್ಲಿ ಸ್ವಪ್ನವೂ ಉತ್ಪನ್ನಮಾಗಿ,
ಆ ಜಾಗ್ರದಲ್ಲಿ ತೇಜವೂ, ಸುಷುಪ್ತಿಯಲ್ಲಿ ವಾಯ್ವಾಕಾಶಂಗಳೂ,
ಸ್ವಪ್ನದಲ್ಲಿ ಪೃಥ್ವಿಯಪ್ಪುಗಳೂ ಆಗಿ,
ಅವುಗಳೇ ಒಂದಕ್ಕೊಂದಾವರಣಂಗಳಾಗಿರ್ಪ
ಈ ಪ್ರಪಂಚದಲ್ಲಿ ಕ್ರೀಡಾನಿಮಿತ್ತವಾಗಿ ಜೀವಪರಮರೂಪುಗಳಂ ಧರಿಸಿ,
ಇದಕ್ಕೆ ಹೊರಗಾಗಿ, ತಾನು ಪರಮರೂಪದಲ್ಲಿ ನಿಂದು,
ತನ್ನೊಳ್ತಾನೆ ಕಲ್ಪಿಸಿದ ಜೀವಕೋಟಿಗಳನ್ನು ಇದಕ್ಕೊಳಗುಮಾಡಲು,
ಅವೆಲ್ಲವೂ ಒಂದಕ್ಕೊಂದು ಸುತ್ತಿ ಮುತ್ತಿ
ಮಿಥ್ಯೆಯೇ ಸ್ಥೂಲಮಾಗಿ, ಅಜ್ಞಾನವೇ ಸೂಕ್ಷ್ಮವಾಗಿ, ದುಃಖವೇ ಕಾರಣವಾಗಿ,
ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥೆಗಳನನುಭವಿಸುತ್ತಾ,
ನಿಜವಂ ಮರತು ನಿಜಾವಸ್ಥೆಯಂ ತೊರೆದು,
ತ್ರಿಮೂರ್ತಿಗಳ ಬಲೆಗೆ ಸಿಕ್ಕಿ ದಾಂಟಲಾರದೆ,
ಕೋಟಲೆಗೊಳುತ್ತಿರ್ಪುದಂ ನೋಡಿ ನೋಡಿ,
ಆನಂದಿಸುತ್ತಿರ್ಪನೆಂತೆಂದೊಡೆ:
ಮದ್ದಂ ಮೆಲುವಾತಂಗದೇ ಸಾಧಕವಾಗಿ, ಆ ಲಹರಿಯೊಳಗೆ ಕೂಡಿ,
ನಿಜಾವಸ್ಥೆಯಂ ತೊರೆದು, ತದವಸ್ಥೆಯೊಳು ಬದ್ಧನಾಗಿ,
ಆ ಲಹರಿಯಳಿದಲ್ಲಿ ಮರಣವೇ ಕಾರಣವಾಗಿ,
ತಿರಿಗಿ ಶರೀರಮಂ ಪೊಂದಿ, ಅವಸ್ಥಾತ್ರಯಂಗಳನನುಭವಿಸುತ್ತಿರ್ಪುದಂ ನೋಡಿ,
ಪರಮಾನಂದಿಸುತ್ತಿರ್ಪನು.
ಇಂತಪ್ಪ ಭ್ರಮೆಯಂ ಕಳೆದು,
ತನ್ನ ನಿಜಸ್ವರೂಪಮಪ್ಪ ತೂರ್ಯಾವಸ್ಥೆಯಂ ಹೊಂದುವನೆಂದೊಡೆ,
ಹೊಂದತೀರದೆ ಸ್ವಲ್ಪಕಾಲವೇ ಮಹತ್ಕಾಲಮಾಗಿ,
ಪೃಥಿವ್ಯಪ್ತೇಜೋವಾಯ್ವಾಕಾಶಾದಿ ಪಂಚಭೂತಂಗಳು ದಾಂಟಲಾರದೆ,
ಆ ಪಂಚಭೂತಗುಣಂಗಳಂ ಪಂಚೇಂದ್ರಿಯಮುಖಗಳಿಂದ
ತನ್ನಂತಃಕರಣದಿಂ ಕೊಂಡುಂಡು, ಭಾವವಂ ಮುಟ್ಟಲೊಲ್ಲದೆ,
ಪಂಚೇಂದ್ರಿಯಂಗಳಲ್ಲಿರ್ಪ ಬ್ರಹ್ಮನ,
ಅಂತಃಕರಣದಲ್ಲಿರ್ಪ ವಿಷ್ಣುವಿನ,
ಭಾವದಲ್ಲಿರ್ಪ ರುದ್ರನ ಕಾಟದಲ್ಲಿ ಕೋಟಲೆಗೊಳುತ್ತಿರ್ಪುದಂ
ತಪ್ಪಿಸುವುದಕ್ಕುಪಾಯಮಂ ಕಾಣದಿರ್ಪ ಜೀವನಿಗೆ
ತಾನೇ ದಯೆಯಿಂ ಗುರುರೂಪನಾಗಿ ಬಂದು,
ತನ್ನ ನಿಜವನ್ನೇ ಇದಿರಿಟ್ಟು, ತೋರಿದಲ್ಲಿ,

ಆ ವಸ್ತುವಂ ನೋಡಿ ನೋಡಿ, ತನ್ನ ಅಂತರಂಗದಲ್ಲಿರ್ಪ ಅಜ್ಞಾನವು ಹರಿದು,
ಅಲ್ಲೊಂದು ಸೂಕ್ಷ್ಮದ್ವಾರವು ಕಾಣಿಸಲಲ್ಲಿ
ಪ್ರವೇಶಿಸಲೆಸದಿರ್ಪ ಅನೇಕ ದುರ್ಗುಣಗಳಿಗಂಜದೆ
''ಆತ್ಮಾನಮಾತ್ಮನಾವೇತ್ತಿ'' ಎಂಬ ಶ್ರುತಿವಚನದಿಂ
ತನ್ನಿಂದುತ್ಪನ್ನಮಾದ ಪಂಚಭೂತಗಳಲ್ಲಿ ತಾನೇ ಕಾರಣಭೂತಮಾಗಿ ಕೂಡಲು,
ಆ ಗುಣಂಗಳು ಆತ್ಮಸ್ವರೂಪವಾಗಿ, ಆತ್ಮನಿಂದಲೇ ಉದ್ಭವಿಸಿ,
ಆತ್ಮನಿಗೆ ಸುಖವನ್ನೂ ವಾಯುರೂಪಮಾದ ಜೀವನಿಗೆ ದುಃಖವನ್ನೂ
ಉಂಟುಮಾಡುತ್ತಿರ್ಪವೆಂತೆಂದೊಡೆ :
ಅರಸಿನಲ್ಲಿ ಹುಟ್ಟಿದ ಗ್ರಹವು ಅರಸಿಂಗೆ ಸುಖಮಂ
ಪರರಿಗೆ ದುಃಖಮಂ ಮಾಡುವಂದದಿ,
ಆದಿಯಲ್ಲಾಕಾಶಾತ್ಮಸಂಗದಿಂ ಜ್ಞಾನವು ಹುಟ್ಟಿ,
ಅದು ಅಭೇದಮಾಗಿರ್ಪ ಆಕಾಶಾತ್ಮಂಗಳಲ್ಲಿ
ಇದಾಕಾಶವಿದಾತ್ಮವೆಂಬ ಭೇದಮಂ ಪುಟ್ಟಿಸಿ,
ಜೀವರ ಸೃಷ್ಟಿ ಸ್ಥಿತಿ ಸಂಹಾರಂಗಳಿಗೆ ಕಾರಣಮಾಯಿತ್ತು.
ಉಳಿದ ನಾಲ್ಕು ಭೂತಂಗಳಲ್ಲಂತಃಕರಣಚತುಷ್ಟಯಂಗಳು ಹುಟ್ಟಿ,
ಅವೇ ನಾಲ್ಕುಮುಖಂಗಳಾಗಿ,
ಜ್ಞಾನವು ಮಧ್ಯಮುಖವಾಗಿ,
ತದ್ಬಲದಿಂ ಅಹಂ ಬ್ರಹ್ಮವೆಂದಹಂಕರಿಸುತ್ತಿರ್ಪ ಬ್ರಹ್ಮನಂ ನೋಡಿ,
ಆತ್ಮರೂಪಮಾದ ಶಿವನು ಭಾವಹಸ್ತದಲ್ಲಿ
ಅಂತಃಕರಣಮಧ್ಯದಲ್ಲಿರ್ಪ ಜ್ಞಾನವೆಂಬ ಬ್ರಹ್ಮಕಪಾಲವಂ ಪರಿಗ್ರಹಿಸಲು,
ಉಳಿದ ನಾಲ್ಕು ಶಿರಸ್ಸುಗಳಿಂ ಸೃಷ್ಟಿಕರ್ತನಾದ ಬ್ರಹ್ಮನು
ಸಂಹಾರರೂಪಮಾದ ಜ್ಞಾನಮುಖದಲ್ಲಿ
ಸಕಲ ಪದಾರ್ಥಗಳನ್ನು ಪರಿಗ್ರಹಿಸುತ್ತಿರ್ಪನು.
ಅಂತಪ್ಪ ಆತ್ಮರೂಪಮಾದ ಶಿವನೊಳಗೆ ಆಕಾಶಮೆಂತೈಕ್ಯಮಪ್ಪುದೆಂದೊಡೆ :
ಆಕಾಶವೂ ವಾಯುರೂಪು.
ಭಸ್ತ್ರಿಯಲ್ಲಿ ಪ್ರವೇಶಿಸಿರ್ಪ ವಾಯುವಿನಿಂದ ಆಕಾಶಮಧಿಕಮಾಗಲು.
ವಾಯುವಡಗಲಾಕಾಶವೂ ಕೂಡ ಅಡಗುವಂದದಿ,
ಅಂತಪ್ಪ ವಾಯುವೇ ಜೀವನು,
ಆ ಜೀವನಿಗವಸಾನಸ್ಥಾನವೇ ಆತ್ಮನು,
ಆ ಆತ್ಮನಲ್ಲಿ ಕೂಡಿ ತನ್ನ ಮುನ್ನಿನ ವಾಯುರೂಪಮಳಿದಲ್ಲಿ,
ಅದಕಿಂತ ಮೊದಲೇ ಆಕಾಶವಳಿವುತ್ತಿರ್ಪುದು.
ಅಂತಪ್ಪ ಆತ್ಮಸ್ವರೂಪವೆಂತೆಂದೊಡೆ :
ಆತ್ಮವಂ ವಿಚಾರಿಸಿ ಆತ್ಮಸ್ವರೂಪವನರಿದ ಜೀವನು ತಾನಾತ್ಮನಾಗುತ್ತಿರಲು
ಆತ್ಮಸ್ವರೂಪಮಿಂತೆಂದು ಮರಳಿಯೋರ್ವರೊಳುಸುರುವುದೆಂತಯ್ಯಾ !

ಸತ್ತವನು ಬಂದು ತನ್ನ ವೃತ್ತಾಂತವಂ ಹೇಳಬಲ್ಲನೆ?
ಉರಿಯೊಳ್ಕೂಡಿದ ಕರ್ಪುರವು ಉರಿಯಪ್ಪುದಲ್ಲದೆ ಕರ್ಪುರವಪ್ಪುದೆ?
ಅಂತಪ್ಪ ಅಭೇದಾನಂದ ಪರಮಾತ್ಮಸಂಗದೊಳೇಕಮಾಗಿರ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೫ ||

೧೧೬೭

ಪೃಥ್ವಿಯಪ್ಪುಗಳಿಂದ ಸ್ಥೂಲ ಶರೀರವು,
ಅಗ್ನಿವಾಯುಗಳಿಂದ ಸೂಕ್ಷ್ಮಶರೀರವು,
ಆಕಾಶಾತ್ಮಗಳಿಂದ ಕಾರಣಶರೀರವು.
ಸ್ಥೂಲಶರೀರದಲ್ಲಿ ಜೀವನು ವಾಯುರೂಪಿಯಾಗಿಹನು,
ಸೂಕ್ಷ್ಮಶರೀರದಲ್ಲಾಕಾಶರೂಪಾಗಿಹನು,
ಕಾರಣಶರೀರದಲ್ಲಿ ಸ್ವಯಂಪ್ರಕಾಶಮಾಗಿಹನು.
ಸ್ಥೂಲಶರೀರವು ಪೂರ್ವಮುಖವಾಗಿ,
ಸ್ವಲ್ಪಕಾಲ ಸ್ವಲ್ಪಸುಖ ಸ್ವಲ್ಪದುಃಖಗಳನನುಭವಿಸುತ್ತಿಹುದು.
ಕಾರಣಶರೀರವು ಪಶ್ಚಿಮಮುಖವಾಗಿ
ಸುಖದುಃಖಕಾಲಂಗಳಿಲ್ಲದೆ ನಿಜಸುಖವನನುಭವಿಸುತ್ತಿಹುದು.
ಸ್ಥೂಲಶರೀರವು ಕ್ರಿಯಾಜನ್ಯಮಾದುದು,
ಸೂಕ್ಷ್ಮಶರೀರವು ಕರ್ಮಜನ್ಯಮಾದುದು.
ಕಾರಣಶರೀರವು ಜ್ಞಾನಜನ್ಯಮಾದುದು.
ಅಂತಪ್ಪ ಕ್ರಿಯಾಜನ್ಯವೇ ಕರ್ಮ, ಕರ್ಮಜನ್ಯವೇ ಜ್ಞಾನ.
ಇಂತು ನಾಲ್ಕುದಿಕ್ಕುಗಳಲ್ಲಿ ನಾಲ್ಕುಬಗೆಯಾಗಿರ್ಪ
ನನ್ನ ಸ್ಥೂಲಸೂಕ್ಷ್ಮಕಾರಣಂಗಳ ನಡುವೆ
ಪ್ರಕಾಶಿಸುತ್ತಿರ್ಪ ಮಹಾಲಿಂಗವೇ ನೀನು.
ನಾನು ಸುತ್ತಿ ಬಪ್ಪ ತಾವೆಲ್ಲವಂ ನೀನು ಒತ್ತಿಲೆ ತೋರುತಿರ್ಪೆ.
ಒತ್ತಲಿರ್ಪ ನಿನ್ನಂ ಕಾಣದೆ ಸುತ್ತಿ ಬಳಲುತ್ತಿರ್ಪ ಕೋಟಲೆಗಲಸಿ,
ಗುರುವೇ, ನಿನ್ನ ಕರುಣದಿಂ ಪಶ್ಚಿಮಭಾಗವಂ ಸೇರಿ ನೋಡಿದಲ್ಲಿ,
ಕರತಲಾಮಲಕದಂತೆ ನೀನು ನನಗೆ ಪ್ರಸನ್ನನಾದೆಯಯ್ಯಾ.
ನಿನ್ನ ದಿವ್ಯ ಮಂಗಲಮೂರ್ತಿಯನು
ಕರ್ಮರಹಿತ ಜ್ಞಾನದೃಷ್ಟಿಯಿಂ ನೋಡಿ ನೋಡಿ,
ನಿಜಸುಖದೊಳೋಲಾಡಿಯಾಡಿ,
ನಿನ್ನ ಸಮರಸಸುಖಾನಂದದೊಳು ಬೆರದು ಮರದಿರ್ಪುದೇ ನಿರ್ವಾಣವು.
ಅಂತಪ್ಪ ಕೈವಲ್ಯಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೬ ||

೧೦೬೮

ಪೂರ್ವ ದಕ್ಷಿಣೋತ್ತರದ ಪಶ್ಚಿಮದೇಶಗಳೊಳು
ಆ ಪಶ್ಚಿಮವೇ ಪ್ರಮಥಲೋಕ ;
ಅಲ್ಲಿರ್ಪರೆಲ್ಲಾ ತುರ್ಯಾವಸ್ಥೆಯಲ್ಲಿರ್ಪ ಶಿವಶರಣರು.
ಮುಂದೆ ಮೂರುದಿಕ್ಕುಗಳು ಸ್ವರ್ಗ ಮರ್ತ್ಯ ಪಾತಾಳ
ಸತ್ವರಜಸ್ತಮೋರೂಪಗಳಾದ
ಜಾಗ್ರತ್ಸ್ವಪ್ನ ಸುಷುಪ್ತಿಗಳೊಳಗೆ ಕೂಡಿಹವು.
ಅದಕ್ಕೆ ಬ್ರಹ್ಮ ವಿಷ್ಣು ರುದ್ರಾದಿಗಳಾಗಿ,
ಸೃಷ್ಟಿ ಸ್ಥಿತಿ ಸಂಹಾರಗಳಂ ಮಾಡುತ್ತಿಹರು.
ಪೂರ್ವದಿಗ್ಭರಿತಮಾದ ಮರ್ತ್ಯದಲ್ಲಿರ್ಪ ಶರೀರಕ್ಕೆ
ಜೀವನು ವಾಯವ್ಯದಲ್ಲಿ ವಾಯುರೂಪಾಗಿಹನು,
ನೈರುತ್ಯದಲ್ಲಿ ಪಿಶಾಚರೂಪಮಾಗಿಹನು,
ಅಗ್ನೇಯದಲ್ಲಿ ತೇಜೋರೂಪಮಾಗಿಹನು.
ಪ್ರಮಥರಿಗೆ ಪ್ರಾಣವೇ ಶಿವನಾದುದರಿಂದ,
ಶಿವಭಕ್ತರಿಗೆ ಲಿಂಗವೇ ಪ್ರಾಣವಾಯಿತ್ತು
ಅಂತಪ್ಪ ಈಶ್ವರಸ್ವರೂಪಮಾದ ಲಿಂಗವೇ ಇಷ್ಟ,
ಮಧ್ಯದಲ್ಲಿ ತೋರುತ್ತಿರ್ಪ ಸದಾಶಿವನೇ ಪ್ರಾಣ,
ಊರ್ಧ್ವದಲ್ಲಿರ್ಪ ತುರ್ಯಾತೀತ ಪರಮತೃಪ್ತಿಸ್ವರೂಪಮಾದ
ಉಪಮಾತೀತನೇ ಭಾವ.
ಕೇವಲನಿಷ್ಕಲಸ್ವರೂಪಮಾದ ಉಪಮಾತೀತಭಾವವು
ಸಕಲನಿಷ್ಕಲಸ್ವರೂಪಮಾದ ರುಚ್ಯನುಭವದಿಂ ಭೋಗಲಿಂಗಮಾಗಲು,
ಹೃದಯದಲ್ಲಿರ್ಪ ಸದಾಶಿವನೇ ಪ್ರಾಣ,
ಸಕಲತತ್ವರೂಪಮಾಗಿ ರೂಪಾನುಭವಕಾರಣಮಾಗಿ
ಈಶಾನ್ಯದಿಕ್ಕಿನಲ್ಲಿ ತೋರ್ಪ ಉತ್ತರಾಗ್ರಸ್ಥಿತಮಾದ
ಸಾಕಾರಮೂರ್ತಿಯೇ ಇಷ್ಟ. ಇಂತೀ ಇಷ್ಟಲಿಂಗದ ಕ್ರಿಯಾಪೂಜೆಯಿಂ
ಮರ್ತ್ಯದಲ್ಲಿ ಸೃಷ್ಟಿಹೇತುವಾದ ರುದ್ರನಂ ಜಯಿಸಿ,
ಸೃಷ್ಟಿ ಸ್ಥಿತಿ ಸಂಹಾರಕೋಟಲೆಯಂ ಕಳೆದು,
ತುರ್ಯಾವಸ್ಥೆಯಲ್ಲಿ ಇಷ್ಟರೂಪಮಾಗಿ ಪ್ರಸನ್ನನಾದ ನಿನ್ನಂ ನೋಡಿ, ಮೋಹಿಸಿ,
ತುರ್ಯಾತೀತದಲ್ಲಿ ಪ್ರಾಣಲಿಂಗಮಾಗಿರ್ಪ ನಿನ್ನೊಳಗೆ ನಾನು ಕೂಡಿ, ಭೋಗಿಸಿ,
ಭಾವಲಿಂಗಮಾಗಿರ್ಪ ನೀನೇ ನಿಜಸುಖವನಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೇ. ॥ ೬೭ ॥

೧೦೬೯

ಪೂರ್ವಪಶ್ಚಿಮ ದಕ್ಷಿಣೋತ್ತರಗಳಲ್ಲಿ ಕೋಟಲೆಗೊಳುತ್ತಿರ್ಪ
ಸೃಷ್ಟಿ ಸ್ಥಿತಿ ಸಂಹಾರಂಗಳಿಗಲಸಿ,

ಪಶ್ಚಿಮದಲ್ಲಿ ಸೇರಿ, ಆಚಾರವಿಡಿದು ಭಕ್ತನಾದಲ್ಲಿ
ಶಿವನು ಆತನಿಗೆ ಈಶಾನ್ಯದಲ್ಲಿ ಆತ್ಮಭಾವದಿಂ ಪ್ರಕಾಶಿಸುತ್ತಿರ್ಪನು.
ಆತನು ಉತ್ತರದಲ್ಲಿ ಮಹೇಶ್ವರರೂಪದಿಂ
ಗುರುಲಿಂಗವಂ ಪೂಜಿಸಲು,
ಅಗ್ನೇಯದಲ್ಲಿ ಶಿವನು ಸತ್ವಸ್ವರೂಪಮಪ್ಪ ದೇವತಾಮೂರ್ತಿಯಾಗಿ
ಪೂಜಾಯೋಗ್ಯಮಾಗಿಹನು.
ಆತನು ದಕ್ಷಿಣದಲ್ಲಿ ಪ್ರಸಾದರೂಪಿಯಾಗಿ ಶಿವಲಿಂಗಪೂಜೆಯಂ ಮಾಡುವಲ್ಲಿ,
ಶಿವನು ನೈರುತ್ಯದಲ್ಲಿ ಗ್ರಹಸ್ವರೂಪನಾಗಿ, ಆತನ ಮನಸ್ಸಂ ಗ್ರಹಿಸಿ,
ಆತನ ಸುಖದುಃಖಗಳಿಗೆ ಕಾರಣಮಾಗನುಭವಿಸುತ್ತಿಹನು.
ಆತನು ಪೂರ್ವದಿಕ್ಕಿನಲ್ಲಿ ಜಂಗಮಲಿಂಗವಂ ಪೂಜಿಸಿದಲ್ಲಿ
ವಾಯವ್ಯದಲ್ಲಿ ಶಿವನು ಆತನಪ್ರಾಣವೇ ತಾನಾಗಿ,
ಆತನನ್ನು ಪ್ರಾಣಲಿಂಗಿಯಂ ಮಾಡಿ,
ಆತನೇ ತಾನೆಂದಭಿಮಾನಿಸಿಹನು.
ಆತನು ಮಧ್ಯದಲ್ಲಿ ಮಂತ್ರಸ್ವರೂಪಮಾದ ಪ್ರಸಾದಲಿಂಗವಂ ಪೂಜಿಸುವಲ್ಲಿ,
ಹೃದಯಮಧ್ಯದಲ್ಲಿ ಪ್ರಸನ್ನನಾಗಿ ಪ್ರಕಾಶಿಸಿ
ತಾನೇ ಪತಿ ಆ ಶರಣನೇ ಸತಿಯಾಗಿ,
ಅಂತರಂಗದ ಭೋಗದಲ್ಲಿ ಆನಂದಿಸುತ್ತಿಹನು.
ಆತನು ಪಂಚಲಿಂಗಂಗಳಂ ಪೂಜಿಸುತ್ತಿರ್ಪಲ್ಲಿ,
ತಾನು ಸರ್ವತೋಮುಖನಾಗಿ ಹೃದಯದಲ್ಲಿ ಮಹಾಲಿಂಗಮೆನಿಸಿ,
ಆತನೇ ತಾನಾಗಿ, ಸಮರಸಭಾವದಲ್ಲಿ ಐಕ್ಯನಂ ಮಾಡಿ, ತಾನು ತಾನೇ ಆಗಿರ್ಪ ಈ
ಷಟ್ಸ್ಥಲಲಿಂಗಭೋಗವೆನಗೆ
ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೬೮ ||

೧೦೭೦

ಪೃಥಿವ್ಯಪ್ತೇಜೋವಾಯ್ವಾಕಾಶಂಗಳೈದು
ಶರೀರಮಹದಹಂಕಾರ ಪ್ರಕೃತಿಗಳೊಳಗೆ ಸೇರಲು,
ಮಹತ್ತೇ ಜೀವ ಪರಮರಾಗಿ, ಪ್ರಕೃತಿಯೇ ಮನ ಬುದ್ಧಿಗಳಾಗಿ,
ಅಹಂಕಾರವೇ ಚಿದಹಂಕಾರವಾಗಲು,
ಮನ ಬುದ್ಧಿ ಚಿತ್ತಹಂಕಾರಂಗಳೇ ಅಂತಃಕರಣಗಳು,
ತದನುಭವಕರ್ತನೇ ಜೀವನು,
ತತ್ಸಾಕ್ಷಿಕಾರಣಮಾಗಿರ್ಪನೇ ಪರಮನು.
ಮನ ಬುದ್ಧಿಗಳು ಉತ್ಕೃಷ್ಟ ಕಾರ್ಯವನೆಸಗುತ್ತಿರ್ಪುದರಿಂ ಅಹಂಕಾರಮೆನಿಸಿತ್ತು,
ಜೀವಪರಮರೆಲ್ಲಕ್ಕೂ ತಾವೇ ಕಾರಣರಾಗಿ,

ತಮಗಿಂತಲೂ ದೊಡ್ಡಿತ್ತಾದ ವಸ್ತು ಮತ್ತೊಂದಿಲ್ಲದಿರ್ಪುದರಿಂ ಮಹತ್ತಾಗಿತ್ತು.
ಆ ಮಹತ್ತೇ ಆತ್ಮನು, ಆದುದರಿಂ ಜೀವಾತ್ಮನೇ ಶಿವನು,
ಮನ ಬುದ್ಧಿಗಳೇ ವಿಷ್ಣುವು, ಚಿದಹಂಕಾರಗಳೇ ಬ್ರಹ್ಮನು.
ಆ ಚಿದಹಂಕಾರಗಳೆರಡೂ ಮನ ಬುದ್ಧಿಗಳಿಗೆ ಶಕ್ತಿಯಾಗಿಹವು,
ಆ ಮನಬುದ್ಧಿಗಳೆರಡೂ ಜೀವಪರಮರಿಗೆ ಶಕ್ತಿಯಾಗಿಹವು,
ಆ ಜೀವಪರಮರೇ ಚಿದಹಂಕರಾಗಳಿಗೆ ಶಕ್ತಿಯಾಗಿಹವು,
ಜೀವನೇ ಸಗುಣ, ಪರಮನೇ ನಿರ್ಗುಣ,
ಬುದ್ಧಿಯೇ ಸಗುಣ, ಮನವೇ ನಿರ್ಗುಣ,
ಜ್ಞಾನವೇ ಸಗುಣ, ಅಹಂಕಾರವೇ ನಿರ್ಗುಣ,
ನಿರ್ಗುಣಂಗಳಲ್ಲಿ ಸಗುಣಂಗಳು ಸೃಷ್ಟಿ ಸ್ಥಿತಿ ಸಂಹಾರಗಳಂ ಹೊಂದುತ್ತಿರ್ಪವು,
ಸಗುಣ ನಿರ್ಗುಣಗಳಿಂ ಸತ್ಕೃತ್ಯ ದುಷ್ಕೃತ್ಯರೂಪಂಗಳಾಗಿಹವು.
ಆ ದುಷ್ಕೃತ್ಯವು ನಿಜವಂ ಹೊಂದದೇ ಇಹುದು.
ಸತ್ಕೃತ್ಯವು ನಿಜವಂ ಹೊಂದಿ ಹೊಂದದೇ ಇಹುದು.
ದುಷ್ಕೃತ್ಯದಿಂ ನಿಜ ಸಾಧ್ಯಮಲ್ಲ, ಸಕ್ಕೃತ್ಯದಿಂ ನಿಜವು ಸಾಧ್ಯಮಪ್ಪುದು,
ಸಾಧ್ಯಮಾದಲ್ಲಿ ನಿಜವೇ ತಾನಾಗಿಹುದು.
ಅಂತಃಕರಣಂಗಳು ಜೀವಪರಮರ ಭೇದಾಭೇದಂಗಳಿಗೆ
ತಾವು ಸಾಧನಭೂತಂಗಳಾಗಿಹವು;
ಸಾಧ್ಯವಾದಲ್ಲಿ ಸಾಧನದ್ರವ್ಯಂಗಳು ಅಪ್ರಯೋಜಕವಾಗಿರ್ಪಂದದಿ
ಜೀವಪರಮರೇಕಮಾದಲ್ಲಿ ಅಂತಃಕರಣದೋಷಂಗಳು
ಅಪ್ರಯೋಜಕಂಗಳಾಗಿ ಮಿಥ್ಯಾಭೂತಂಗಳಾಗಿಹವು.
ಅಂತಪ್ಪ ಜೀವಪರಮರಸಂಗವೇ ಮೋಕ್ಷವು.
ಅಂತಪ್ಪ ನಿಜಾನಂದ ನಿರ್ವಾಣಸುಖವೆನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೬೯ ॥

೧೦೭೧

ಪೃಥ್ವಿಯೇ ಶೂದ್ರನು, ಜಲವೇ ವೈಶ್ಯನು,
ಅಗ್ನಿಯೇ ಕ್ಷತ್ರಿಯನು, ವಾಯುವೇ ಬ್ರಾಹ್ಮಣನು.
ಸ್ಥೂಲಶರೀರವೇ ಶೂದ್ರನು, ಸೂಕ್ಷ್ಮಶರೀರವೇ ವೈಶ್ಯನು,
ಕಾರಣಶರೀರವೇ ಕ್ಷತ್ರಿಯನು, ಜೀವನೇ ಬ್ರಾಹ್ಮಣನು.
ಬ್ರಾಹ್ಮಣರಿಗೆ ಋಗ್ವೇದವು, ಕ್ಷತ್ರಿಯರಿಗೆ ಯಜುರ್ವೇದವು,
ವೈಶ್ಯರಿಗೆ ಸಾಮವೇದವು, ಶೂದ್ರರಿಗೆ ಅಥರ್ವಣವೇದವು.
ಶೂದ್ರರಿಗೆ ಧರ್ಮವು, ವೈಶ್ಯರಿಗೆ ಅರ್ಥವು,
ಕ್ಷತ್ರಿಯರಿಗೆ ಕಾಮವು, ಬ್ರಾಹ್ಮಣರಿಗೆ ಮೋಕ್ಷವು,
ಬ್ರಾಹ್ಮಣರಿಗೆ ಪೀತವರ್ಣವು, ಕ್ಷತ್ರಿಯರಿಗೆ ಅರುಣವರ್ಣವು,

ವೈಶ್ಯರಿಗೆ ಶ್ಯಾಮವರ್ಣವು, ಶೂದ್ರರಿಗೆ ನೀಲವರ್ಣವು.
ಬ್ರಾಹ್ಮಣರಿಗೆ ಸಾಮವು, ಕ್ಷತ್ರಿಯರಿಗೆ ಭೇದವು,
ವೈಶ್ಯರಿಗೆ ದಾನವು, ಶೂದ್ರರಿಗೆ ದಂಡವು.
ಬ್ರಾಹ್ಮಣರಿಗೆ ಇಂದ್ರನಧಿದೇವತೆಯು,
ಕ್ಷತ್ರಿಯರಿಗೆ ಕಾಲನಧಿದೇವತೆಯು,
ಶೂದ್ರರು ಭಕ್ತರನ್ನೂ, ವೈಶ್ಯರು ಗುರುವನ್ನೂ,
ಕ್ಷತ್ರಿಯರು ಲಿಂಗವನ್ನೂ, ಬ್ರಾಹ್ಮಣರು ಅತಿಥಿಗಳನ್ನೂ ಪೂಜಿಸಿಬೇಕು.
ಶಿವಭಕ್ತನೇ ಬ್ರಾಹ್ಮಣನು, ವಿಷ್ಣುಭಕ್ತನೇ ಕ್ಷತ್ರಿಯನು,
ನಿಜವಸ್ತುವು ಉತ್ಕೃಷ್ಟತ್ವವಂ ಹೊಂದಿದಲ್ಲಿ ಶ್ರೇಷ್ಠವಪ್ಪುದು;
ಉತ್ಕೃಷ್ಟ-ವಸ್ತುವು ನಿಜವಂ ಹೊಂದಿದಲ್ಲಿ ಅದೇ ಪರತತ್ವವು.
ಇಂತಪ್ಪ ಜಾತಿಧರ್ಮಂಗಳನ್ನು ತನ್ನಲ್ಲಿ ತಾನೇ ತಿಳಿದು ಭಕ್ತನಾಗಿ,
ಶೂದ್ರತ್ವಮಂ ಕಳೆದು ಮಾಹೇಶ್ವರನಾಗಿ,
ವೈಶ್ಯತ್ವಮಂ ಕಳೆದು ಪ್ರಸಾದಿಯಾದಿ,
ಕ್ಷತ್ರಿಯತ್ವಮಂ ಕಳೆದು ಪ್ರಾಣಲಿಂಗಿಯಾಗಿ,
ಬ್ರಹ್ಮತ್ವಮಂ ಪಡೆದು ಅಜಾತಮಾಗಿ,
ಆಕಾಶರೂಪವಾಗಿ, ಶುದ್ಧಸ್ಫಟಿಕಸಂಕಾಶಮಪ್ಪ
ಪ್ರಸಾದಲಿಂಗದಲ್ಲಿ ಪರಿಣಾಮಿಸುತ್ತಾ,
ಲಿಂಗವೇ ಪತಿ ತಾನೇ ಸತಿಯಾಗಿರ್ಪನೇ ಶರಣನು.
ಈ ಸತಿಪತಿನ್ಯಾಯವಳಿದು ವರ್ಣಾತೀತನೂ ವಾಗತೀತನೂ ಆಗಿ,
ತಾನುತಾನಾಗಿರ್ಪುದೇ ಐಕ್ಯವು.
ಇಂತಪ್ಪ ಕೇವಲನಿರ್ವಾಣಲಿಂಗೈಕ್ಯಪದವೆನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೦ ॥

೧೦೭೨

ಗೋಳಕಾಕಾರಮಾದ ಮಹಾಲಿಂಗವೇ ಬೀಜ,
ಅದು ಸಕಲಪ್ರಪಂಚಗಳನ್ನು ತನ್ನೊಳಗಿಟ್ಟುಕೊಂಡು,
ಸಕಲಕ್ಕೂ ತಾನೇ ಕಾರಣವಾಗಿಹುದು.
ಅಂತಪ್ಪ ಮಹಾಲಿಂಗವು ಗುರುತಂತ್ರದಿಂ
ಭಕ್ತಕ್ಷೇತ್ರದಲ್ಲಿ ತಾನೊಂದೆರಡಾದಲ್ಲಿ
ಶಿವಶಕ್ತಿಸ್ವರೂಪವಾದ ವರ್ಣಶಾಖೆಗಳು ಅಭೇದಮಾಗಂಕುರಿಸಿ,
ಪರ್ಣದಿಂದ ಶಾಖೆಯು ಬಲಿದು, ಶಾಖೆಯಿಂದ ಪರ್ಣವು ಬಲಿದು,
ಅಂತಪ್ಪ ಶಾಖಾರೂಪವಾದ ಮುಖಂಗಳಿಂದೊಪ್ಪುತಿರ್ಪ ವೃಕ್ಷವೇ ರುದ್ರನು.
ಆ ಪರ್ಣವೇ ವಿಷ್ಣು, ಫಲವೇ ಬ್ರಹ್ಮ
ಪುಷ್ಪವೇ ಪೃಥ್ವಿ, ಫಲವೇ ಜಲ,

ನನೆಯೇ ಅಗ್ನಿ, ಪರ್ಣವೇ ವಾಯು,
ಆ ವೃಕ್ಷವೇ ಆಕಾಶ, ಬೀಜವೇ ಆತ್ಮ
ಅಂತಪ್ಪ ಬೀಜಕ್ಕೆ ನಿಂದಲ್ಲಿ ಫಲವರ್ಣಶಾಖೆಗಳು ವರ್ಧಿಸಿ,
ಸುಖವಂ ಕೊಡುತಿರ್ಪವು.
ಲಿಂಗಾರ್ಚನೆಯಂ ಮಾಡಿದಲ್ಲಿ,
ಸಕಲ ದೇವತೆಗಳು ತೃಪ್ತರಾಗಿ ವರ್ಧಿಸುತಿರ್ಪರಾದ ಕಾರಣ,
ವೀರಶೈವಮತದಲ್ಲಿ ಆತ್ಮಸ್ವರೂಪಮಾದ ಬೀಜ
ಒಂದೆರಡಾದುದೇ ಇಷ್ಟ, ಪ್ರಾಣಗಳು.
ಫಲಮಧ್ಯದಲ್ಲನಂತರೂಪಮಾಗಿ ಸಕಲ ಪ್ರಪಂಚವಂ ತನ್ನೊಳಗಿಟ್ಟುಕೊಂಡು
ತನ್ನನು ತಿಳಿದು ಸೃಷ್ಟಿಗೆ ತಾನೇ ಕಾರಣಮಾಗಿ,
ಪರಮಾನಂದಮಹೀರುಹವು ಫಲಿಸಿ ತೃಪ್ತಿರೂಪಮಾಗಿ
ಆ ಪ್ರಪಂಚಕ್ಕೆ ತಾನೇ ಕಾರಣಮಾಗಿ,
ಮಿಕ್ಕವೆಲ್ಲಾ ಮಿಥ್ಯವಾಗಿ ತೋರುತ್ತಿರ್ಪುದೇ ಭಾವಲಿಂಗವು.
ಅಂತಪ್ಪ ಭಾವಲಿಂಗಸಂಗದಲ್ಲಿ ನಿಸ್ಸಂಗ ನಿರ್ಭಾವಮಾದ
ನಿತ್ಯಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೧ ॥

೧೦೭೩

ಅಖಂಡಕಾಲಾತೀತಮಾದ ಮಹಾಲಿಂಗವೇ
ಆದಿಶಕ್ತಿಯ ಸಂಗದಿಂ ಸೋಮನಾದುದರಿಂ
ಆದಿತ್ಯನೇ ಶಕ್ತಿಯು, ಸೋಮನೇ ಶಿವನು.
ಆದಿತ್ಯ ಸೋಮರಿಂದುದಯಿಸಿದ ಶನಿಯೇ ವಿಷ್ಣುವು, ಶುಕ್ರನೇ ಲಕ್ಷ್ಮಿಯು.
ಆ ಶನಿ ಶುಕ್ರರಿಂದುದಿಸಿದ ಬೃಹಸ್ಪತಿಯೇ ಬ್ರಹ್ಮನು,
ಅದಕೆ ಬುಧನೇ ಶಕ್ತಿ;
ಆ ಬೃಹಸ್ಪತಿ ಬುಧರಿಂದುದಿಸಿದ ಪ್ರಪಂಚವೇ ಮಂಗಳ,
ಸೋಮನೇ ಬ್ರಾಹ್ಮಣನು, ಅದಕೆ ಕ್ಷತ್ರಿಯ ಶಕ್ತಿ;
ಶನಿಯೇ ಕ್ಷತ್ರಿಯನು, ಅದಕೆ ವೈಶ್ಯಶಕ್ತಿ;
ಬೃಹಸ್ಪತಿಯೇ ವೈಶ್ಯನು, ಅದಕೆ ಬ್ರಾಹ್ಮಣಶಕ್ತಿ;
ಅಂಗಾರಕನೇ ಶೂದ್ರನು, ಅದಕೆ ಆತ್ಮಶಕ್ತಿ
ಇಂತು ಕೃಷ್ಯಾದಿಕರ್ಮಂಗಳಿಗೆ ಕಾರಣಮಾಗಿಹ ಸೋಮನೇ
ಸಪ್ತವಾರಂಗಳೊಳು ಅಂಶವಾದೊಡೆ,
ಆದಿತ್ಯನಲ್ಲಿ ಶನಿರೂಪಮಾಗಿ ತಾನೇ ಜನಿಸುತ್ತಿಹನು.
ಈ ಪ್ರಕಾರದಲ್ಲಿ ಸಪ್ತವಾರಂಗಳು ಒಂದಕ್ಕೊಂದು ಕಾರಣಮಾಗಿಹವು.
ಸೋಮಾದಿತ್ಯ ಶನಿ ಶುಕ್ರಾಂಗಾರಕರು ಉಪಾಸನಾದಿ

ಪೂಜಾಯೋಗ್ಯರಾಗಿಹರು.
ಬೃಹಸ್ಪತಿ ಬುಧರು ಬ್ರಹ್ಮಸರಸ್ವತೀ ಸ್ವರೂಪಿಗಳಾದುದರಿಂದ
ಉಪಾಸನಾಕರ್ಮಯೋಗ್ಯರಲ್ಲದಿಹರು.
ಪರಮಶಾಂತಿಮಯನಾದ ಶಿವನು ಉಗ್ರಸ್ವರೂಪವಾದ
ಆದಿಶಕ್ತಿಯಂ ಕೂಡಿದುದರಿಂ ತಮೋಗುಣಸ್ವರೂಪಿಯಾಗಿಹನು,
ಉಗ್ರಸ್ವರೂಪಮಾದ ವಿಷ್ಣುವು ಶಾಂತಶುಕ್ಲಸ್ವರೂಪಮಾದ
ಲಕ್ಷ್ಮಿಯೊಳಗೆ ಕೂಡಿದುದರಿಂ ಸತ್ವಗುಣಸ್ವರೂಪಿಯಾಗಿಹನು,
ಹೀಗೆ ಈ ಈರ್ವರು ಸಂಸಾರಯುಕ್ತರಾಗಿರಲು,
ಈ ಪ್ರಪಂಚದಲ್ಲಿ ಸಂಸಾರಬದ್ಧನಾದ ನಾನು
ನಿಜವಾಸನೆಯಲ್ಲಿ ಸಂಚರಿಸಬಲ್ಲೆನೇನಯ್ಯಾ?
ಮಿಥ್ಯೆಯಲ್ಲಿ ನನ್ನಂ ಕೂಡಿ ಸತ್ಯಪ್ರಕಟನವಂ ಮಾಡಲಿಲ್ಲೆಂದು
ನನ್ನಂ ಸಾಧಿಸುವುದು ನಿನಗೆ ಯೋಗ್ಯವೆ ?
ನಿನ್ನಂತೆ ನನ್ನಂ ನೋಡದಿರ್ದೊಡೆ
''ಆತ್ಮವತ್ಸರ್ವಭೂತಾನಿ'' ಎಂಬ ಶ್ರುತ್ಯರ್ಥಕ್ಕೆ ಹಾನಿ ಬಾರದಿರ್ಪುದೆ?
ಶ್ರುತಿಯಬದ್ಧದಲ್ಲಿ ಕರ್ಮಕ್ಕೆ ಹಾನಿಯಪ್ಪುದು,
ಕರ್ಮನಾಶವೇ ಸಂಸಾರಕಾರಣವು.
ಇದನರಿತು ನನ್ನ ಮಿಥ್ಯಾದುರ್ಗುಣಂಗಳಂ ವಿಚಾರಿಸದೆ
ನನ್ನಂ ಪರಿಗ್ರಹಿಸಿ ಕೂಡಿದೊಡೆ, ನಿನ್ನ ಸರ್ವಜ್ಞತ್ವವು ಸಾರ್ಥಕಮಾಗಿ
ನಿನ್ನ ಕ್ರೀಡೆಗೆ ಕೇಡುಬಾರದು ಕಂಡ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭ ॥

೧೦೭೪

ಶರೀರವೇ ಹೇಯದಮೊಟ್ಟೆ, ದುರ್ಗಂಧವೇ ನೈಜ,
ಸುಗಂಧವೆಲ್ಲಾ ಆರೋಪಿತವಲ್ಲದೆ ನಿಜವಲ್ಲವಾಗಿ ಹೇಯವೇ ನೈಜ.
ಮನಸ್ಸೇ ದುಃಖದಮೊಟ್ಟೆ, ಆ ದುಃಖವೇ ನೈಜ, ಸುಖವೇ ಆರೋಪಿತ,
ಶರೀರದಲ್ಲಿರ್ಪ ಹೇಯವು ಪ್ರಬಲಗಳಾದ
ವ್ಯಾಧಿಪೀಡೆಗಳನನುಭವಿಸುತ್ತಿರಲು,
ಅದೇ ಜೀವನಿಗಿಹಲೋಕದಯಾತನೆಯಾಯಿತ್ತು,
ದುಃಖದಮೊಟ್ಟೆಯಾಗಿರ್ಪ ಮನಸ್ಸನ್ನು ದುರ್ಗುಣಂಗಳು ಬಂದು
ಅನುಭವಿಸುತ್ತಿರಲದೇ ಜೀವನಿಗೆ ಪರಲೋಕಮಾಯಿತ್ತು.
ಇಂತಪ್ಪ ಶರೀರದಲ್ಲಿ ಬಿಂದುವನ್ನೂ ಮನದಲ್ಲಿ ನಾದವನ್ನೂ
ಇಹಪರಕೃತ್ಯಂಗಳಿಗೆ ಸಾಧಕಭೂತಮಾಗಿ ಪರಮಾತ್ಮನಿಟ್ಟಿರ್ಪನು.
ಅಂತಪ್ಪ ಬಿಂದುವೇ ಆನಂದಸ್ವರೂಪು, ನಾದವೇ ಜ್ಞಾನಸ್ವರೂಪು,
ಆ ಆನಂದಬಿಂದುವು ಶರೀರಕ್ಕೆ ಕಾರಣಮಾಗಿಹುದು,

ಈ ನಾದಬಿಂದುಗಳ ಉತ್ತರಮಾರ್ಗವೇ ಮನಶ್ಶರೀರಗಳಿಗೆ ಸುಖ,
ನಿಜಪ್ರಕಟವಂ ಮಾಡುತ್ತಿರ್ಪುದು.
ದಕ್ಷಿಣಮಾರ್ಗವೇ ದುಃಖ, ಮಿಥ್ಯಾಪ್ರಕಟವಂ ಮಾಡುತ್ತಿಹುದು.
ಇವೆರಡರ ಸಂಬಂಧವಿಲ್ಲದ ವಸ್ತುವಿಗೆ
ಕೋಟಲೆಗೊಂಡು ಕುದಿವುತ್ತಿರ್ಪ ಜೀವನ ಪರಿಯ ನೋಡಾ!
ಜೀವನಿಗೆ ನಿಜವೇ ಭಾವ, ಆ ಭಾವದಲ್ಲಿರ್ಪುದು ಕಳಾಪದಾರ್ಥವು,
ಆ ಕಳಾಮಯವಾಗಿರ್ಪುದು ಸತ್ಯವು.
ಅಂತಪ್ಪ ಸತ್ಯವಂ ಹಿಡಿದು ಈ ಮಿಥ್ಯಾರೂಪವಾದ
ಸ್ಥೂಲ ಸೂಕ್ಷ್ಮಂಗಳಂ ಬಿಟ್ಟಲ್ಲಿ,
ಜೀವನೇ ಪರಮನಪ್ಪನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೩ ॥

೧೦೭೫

ದಕ್ಷಿಣದಲ್ಲಿರ್ಪ ಯಮನೇ ವಿಷ್ಣುವು;
ಉತ್ತರದಲ್ಲಿರ್ಪ ಕುಬೇರನೇ ಲಕ್ಷ್ಮಿಯು.
ಪಶ್ಚಿಮದಲ್ಲಿರ್ಪ ವರುಣನೇ ವಿಷ್ಣುವು;
ಪೂರ್ವದಲ್ಲಿರ್ಪ ಇಂದ್ರನೇ ಲಕ್ಷ್ಮಿಯು.
ಈಶಾನ್ಯದಲ್ಲಿರ್ಪ ಈಶಾನನೇ ಶಿವನು;
ನೈರುತ್ಯದಲ್ಲಿರ್ಪ ನೈರುತಿಯೇ ಶಕ್ತಿಯು.
ಅಗ್ನೆಯಲ್ಲಿರ್ಪ ಅಗ್ನಿಯೇ ಶಿವನು ;
ವಾಯುವ್ಯದಲ್ಲಿರ್ಪ ವಾಯುವೇ ಶಕ್ತಿಯು.
ಇವು ನಿಜನಾಮಸಂಬಂಧಗಳಾಗಿಹವು.
ಅವು ಭಿನ್ನನಾಮಸಂಬಂಧಗಳಾಗಿ ಸಾಕಾರ ನಿರಾಕಾರಮೂರ್ತಿಗಳಾಗಿಹವು.
ಶಿವನು ಸಾಕಾರದಲ್ಲಿ ಸಂಹರಿಸಿ, ನಿರಾಕಾರದಲ್ಲಿ ರಕ್ಷಿಸುತ್ತಿಹನು.
ವಿಷ್ಣುವು ಸಾಕಾರದಲ್ಲಿ ರಕ್ಷಿಸಿ, ನಿರಾಕಾರದಲ್ಲಿ ಸಂಹರಿಸುತ್ತಿಹನು.
ಕೆಳಗೆ, ಬಿಂದುಮುಖದಲ್ಲಿ ಸೃಷ್ಟಿಸುವನೇ ಬ್ರಹ್ಮನು,
ಮೇಲೆ, ನಾದ ಮುಖದಲ್ಲಿ ಸೃಷ್ಟಿಸುತ್ತಿರ್ಪಳೇ ಸರಸ್ವತಿಯು.
ಅಷ್ಟದಳಕಮಲದ ಮೂಲವೇ ಬ್ರಹ್ಮನು,
ಅದರಗ್ರದಲ್ಲಿ ತೋರುವ ವಾಸನೆಯೇ ಸರಸ್ವತಿಯು.
ಆ ಕಮಲದ ಹೃದಯವೇ ಮೇರುವು,
ಆ ಮೇರುಮಧ್ಯದಲ್ಲಿರ್ಪುದೇ ಮಹಾಲಿಂಗವು.
ಅಲ್ಲಿರ್ಪ ಮಹಾಲಿಂಗವಂ ಗುರುವು ಬಾಹ್ಯಕ್ಕೆ ತಂದಿದಿರಿಟ್ಟಲ್ಲಿ,
ಸ್ಫಟಿಕಭಾಂಡದಲ್ಲೊಳಗಿರ್ಪ ವಸ್ತುವೇ ಹೊರಗೆ,
ಹೊರಗಿರ್ಪ ವಸ್ತುವೇ ಒಳಗೆ ತೋರಿ,

ಆ ಭಾಂಡವು ತನ್ನ ನಿಜಗುಣವನಳಿದು
ವಸ್ತುವು ಗುಣರೂಪವಾಗಿ ತೋರ್ಪಂದದಿ,
ಇಷ್ಟಪ್ರಾಣಗಳೇಕವಾದಲ್ಲಿ, ಶರೀರವು ತನ್ನ ಮುನ್ನಿನ ಗುಣವನಳಿದು,
ಅಗ್ನಿಸ್ವರೂಪವಾದಿಷ್ಟಲಿಂಗದಲ್ಲಿ ಐಕ್ಯವಾದುದರಿಂ
ದಹನಕ್ಕಯೋಗ್ಯಮಾಯಿತ್ತು.
ನಿರಾಕಾರವಾದ ಪ್ರಾಣವು ಈಶಾನ್ಯಸ್ವರೂಪವಾದ
ಪ್ರಾಣಲಿಂಗದಲ್ಲಿ ಲೀನವಾದುದರಿಂ
ಕರ್ಮಸಂಸ್ಕಾರಯೋಗ್ಯಮಲ್ಲಮಾಯಿತ್ತು.
ಆದುದರಿಂದಾ ಶಿವಭಕ್ತನಿಗೆ ದಹನಸಂಸ್ಕಾರಮಿಲ್ಲಮಾಯಿತ್ತು.
ಇಂತಪ್ಪ ಸಾಕಾರ ನಿರಾಕಾರ ಶಿವಶಕ್ತಿಸ್ವರೂಪಗಳೆಲ್ಲವೂ
ಭಾವದಲ್ಲೊಂದೇ ಆಗಿ ಪರಿಪೂರ್ಣತೃಪ್ತಿಯಲ್ಲಿ ನಿಜಸ್ವಭಾವಮಾಯಿತ್ತು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೪ ॥

೧೦೭೬

ಸೃಷ್ಟಿಹೇತುವಾದ ಸಂಸಾರವೇ ಪೃಥ್ವಿಯು,
ತದ್ರಕ್ಷಣಹೇತುವಾದುದೇ ಜಲವು,
ಇವೆರಡನ್ನೂ ಸಂಬಂಧಿಸಿ, ಏಕವಾಗಿ ಘನೀಭವಿಸುವಂತೆ ಮಾಡಿ,
ತತ್ಸಂಹಾರಕ್ಕೆ ತಾನೇ ಕಾರಣಮಾಗಿರ್ಪ ಮನಸ್ಸೇ ಅಗ್ನಿಯು.
ಆ ಮನಸ್ಸನ್ನು ಪ್ರಕಾಶಗೊಳಿಸಿ ಅದರೊಳಗೆ ಕೂಡಿ
ಅಭೇದಮಾಗಿರ್ಪ ಜೀವನೇ ವಾಯುವು,
ಅಗ್ನಿಯು ಪೃಥ್ವಿಯೊಳಗೆ ಬದ್ಧಮಾಗಿರ್ಪಂತೆ,
ಮನವು ಸಂಸಾರಬದ್ಧಮಾಗಿರ್ಪುದು.
ವಾಯುವು ಜಲದೊಳಗೆ ಬದ್ಧಮಾಗಿರ್ಪಂತೆ,
ಜೀವನು ಶರೀರದಲ್ಲಿ ಬದ್ಧಮಾಗಿರ್ಪನು.
ಜೀವನು ತಾನು ಸಂಸಾರದೊಳ್ಕೂಡಿ ಸ್ಥೂಲವಾಗಿಯೂ
ಮನದೊಳ್ಕೂಡಿ ಸೂಕ್ಷ್ಮವಾಗಿಯೂ ಇರ್ಪನು.
ಸಂಸಾರ ಶರೀರ ಮನೋಜೀವಗಳಿಗಾಧಾರಮಾಗಿರ್ಪ ಕರ್ಮವೇ ಆಕಾಶವು,
ಆ ಕರ್ಮವನಾವರಿಸಿರ್ಪ ಮಹಾಮೋಹವೆಂಬ ಸುಷುಪ್ತಿಯ
ಒಳಹೊರಗೆ ಪ್ರಕಾಶಿಸುತ್ತಿರ್ಪ ಜಾಗ್ರತ್ಸ್ವಪ್ನಜ್ಞಾನಂಗಳೇ ಚಂದ್ರಸೂರ್ಯರು.
ಮನಸ್ಸೆಂಬ ಅಗ್ನಿಯು ಜೀವಾನಿಲನಿಂ ಪಟುವಾಗಿ ಸಂಸಾರಶರೀರಂಗಳಂ ಕೆಡಿಸಿ,
ಕರ್ಮವೆಂಬಾಕಾಶದೊಳಗೆ ಜೀವಾನಿಲನಿಂ ಕೂಡಿ
ಧೂಮರೂಪವಾಗಿ ಶರೀರಸಂಸಾರಗಳೆಂಬ ಮೇಘಜಲವರ್ಷವಂ ನಿರ್ಮಿಸಿ,
ಜೀವನಿಗವಕಾಶವಂ ಮಾಡಿಕೊಟ್ಟು, ತಾನಲ್ಲಿಯೇ ಬದ್ಧನಾಗಿ,
ಜೀವನಿಂದ ಪ್ರಕಾಶಮಾಗುತ್ತಿರ್ಪುದು.

ಇಂತಪ್ಪ ಕರ್ಮವೆಂಬಾಕಾಶಕ್ಕೆ ಜೀವನೆಂಬ ವಾಯುವೇ ಕಾರಣವು.
ಇವು ಒಂದಕ್ಕೊಂದು ಕಾರಣವಾಗಿ,
ಒಂದಕ್ಕೊಂದು ಸೃಷ್ಟಿ ಸ್ಥಿತಿ ಸಂಹಾರಹೇತುಗಳಾಗಿ
ತೋರುತ್ತಾ ಅಡಗುತ್ತಾ ಬಳಲುತ್ತಾ ತೊಳಲುತ್ತಿರ್ಪ
ಭವರೋಗದಲ್ಲಿ ಜೂಗುತ್ತಿರ್ಪ ಬಂಧನದ
ಈ ದಂದುಗವಿನ್ನೆಂದಿಗೆ ಪೋಪುದು ಎಂದು
ಮುಂದುಗಾಣದೆ ಇರ್ಪೆನ್ನ ತಾಪವಂ ನೀಂ ದಯೆಯಿಂ ತಣ್ಣನೆ ಮಾಳ್ಪೊಡೆ,
ಸತ್ಯಜ್ಞಾನಾನಂದಮೂರ್ತಿಯಾದ ಪರಮಾತ್ಮನೇ
ಗುರು ಲಿಂಗ ಜಂಗಮ ಸ್ವರೂಪಿಯಾಗಿ,
ಜ್ಞಾನದಿಂದ ನಿಜವೂ ನಿಜದಿಂದಾನಂದವೂ ಪ್ರಕಾಶವಾಗಿರ್ಪಂತೆ,
ಗುರುವಿನಿಂದ ಲಿಂಗವಂ ಲಿಂಗದಿಂದ ಜಂಗಮವಂ ಕಂಡೆನು.
ಅಂತಪ್ಪಾ ನಿಜಾತ್ಮಲಿಂಗವನು ಕರ್ಮವೆಂಬ ಆಕಾಶದಲ್ಲಿ ಬೆರಸಲು,
ಅದೇ ಕಾರಣವಾಯಿತ್ತು.
ಆ ಕರ್ಮವೆಂಬ ಶಕ್ತಿಯು ಲಿಂಗವೆಂಬ ಶಿವನೊಳಗೆ ಕೂಡಲು,
ಲಿಂಗತೇಜಸ್ಸಿನಿಂ ಕರ್ಮಗರ್ಭದಲ್ಲಿ ಜೀವನಿಗೆ
ಪುನರ್ಭವವಾದುದರಿಂ ಪ್ರಾಣಲಿಂಗವಾಯಿತ್ತು.
ಅದೆಂತೆಂದೊಡೆ :
ಲಿಂಗವೆಂಬ ಮಹಾಲಿಂಗದಿಂ ಜನಿಸಿದ ಕರ್ಮವೇ ಪ್ರಸಾದಲಿಂಗವು,
ಆ ಕರ್ಮದಿಂ ಜನಿಸಿದ ಜೀವನೇ ಜಂಗಮಲಿಂಗವು,
ಅಂತಪ್ಪ ಲಿಂಗದಿಂದುದಿಸಿದ ಮನಸ್ಸೇ ಶಿವಲಿಂಗವು,
ಅಂತಪ್ಪ ಮನಸ್ಸಿನಿಂದ ಪರಿಶುದ್ಧವಾಗಿರ್ಪ ಶರೀರವೇ ಗುರುಲಿಂಗವು.
ಅಂತಪ್ಪ ಗುರುಲಿಂಗವಾಗಿರ್ಪ
ಶರೀರದಿಂದನುಭವಿಸುತ್ತಿರ್ಪ ಸಂಸಾರವೇ ಆಚಾರಲಿಂಗವು.
ಇಂತು ಸಂಸಾರಶರೀರಂಗಳಿಗೆ ಇಷ್ಟಲಿಂಗವೇ ಕಾರಣವೂ
ಮನೋಜೀವರಿಗೆ ಪ್ರಾಣಲಿಂಗವೇ ಕಾರಣವೂ ಆಗಿ,
ಕರ್ಮಲಿಂಗಂಗಳಿಗೆ ಭಾವಲಿಂಗಂಗಳೇ ಕಾರಣವಾಗಿ,
ಕಾರಣವೇ ಐಕ್ಯಸ್ಥಾನವಾದುದರಿಂ ಸಂಸಾರ ಶರೀರಂಗಳು ಇಷ್ಟಲಿಂಗದೊಳಗೂ
ಮನೋಜೀವಂಗಳು ಪ್ರಾಣಲಿಂಗದೊಳಗೂ ಐಕ್ಯವಂ ಹೊಂದಿದವು.
ಕರ್ಮಲಿಂಗಂಗಳು ಭಾವಲಿಂಗದೊಳಗೈಕ್ಯವಾಗಿ,
ಪ್ರಾಣವು ಭಾವದೊಳಗೆ ಬೆರೆದು,
ಭೇದವಡಗಿ ತಾನು ತಾನಾಗಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೭೫ ||

## ಏಳನೆಯ ಅಧ್ಯಾಯ

೧೦೭೭

ಪೃಥಿವ್ಯಪ್ತೇಜೋವಾಯ್ವಾಕಾಶಂಗಳಲ್ಲಿ
ಪೃಥಿವ್ಯಪ್ತೇಜಸ್ಸುಗಳು ಸಾಕಾರಗಳೂ ವಾಯ್ವಾಕಾಶಂಗಳು ನಿರಾಕಾರಗಳೂ ಆಗಿ,
ಸ್ಥೂಲ ಸೂಕ್ಷ್ಮ ಕಾರಣಂಗಳಾಗಿಹವು.
ಪೃಥ್ವಿಯಲ್ಲೈದು ಗುಣಗಳೂ ಜಲದಲ್ಲಿ ನಾಲ್ಕು ಗುಣಗಳೂ
ಅಗ್ನಿಯಲ್ಲಿ ಮೂರು ಗುಣಗಳೂ ವಾಯುವಿನಲ್ಲೆರಡು ಗುಣಗಳೂ ಇರ್ಪವು.
ಆಕಾಶದಲ್ಲೊಂದು ಗುಣವಿರ್ಪುದು.
ಆತ್ಮನು ನಿರ್ಗುಣವಾಗಿ ಸಕಲಗುಣಂಗಳಿಗೂ ತಾನು ಕಾರಣವಾಗಿಹನು.
ಅದೆಂತೆಂದೊಡೆ :
ನಿರ್ಗುಣವಾದ ಬಿಂದುಪದಾರ್ಥವು ಸಗುಣರೂಪವಾದ ಮನುಷ್ಯರಿಗೆ
ತಾನು ಕಾರಣವಾಗಿರ್ಪಂದದಿ ಆತ್ಮನಿಹನು.
ಪಂಚವರ್ಣಂಗಳು ಸತ್ವರಜಸ್ತಮೋಗುಣಂಗಳು.
ನಾದ ಬಿಂದು ಕಲೆಗಳು ಬಾಲ್ಯ ಯೌವನ ಕೌಮಾರ ವಾರ್ಧಕ್ಯಂಗಳು.
ಇವೆಲ್ಲವೂ ಪ್ರಪಂಚಕ್ಕೆ ಗುಣಂಗಳಲ್ಲದೆ ಆತ್ಮನ ಗುಣವಲ್ಲ.
ಅಂತಪ್ಪ ಆತ್ಮನೇ ಶಿವನು, ಆಕಾಶವೇ ವಿಷ್ಣು, ವಾಯುವೇ ಬ್ರಹ್ಮನು.
ಸಾಕಾರದಲ್ಲಿ ಅಗ್ನಿಯೇ ರುದ್ರನು, ಜಲವೇ ವಿಷ್ಣು, ಪೃಥ್ವಿಯೇ ಬ್ರಹ್ಮನು.
ಇವು ಒಂದಕ್ಕೊಂದು ಸೃಷ್ಟಿ, ಸ್ಥಿತಿ ಸಂಹಾರಹೇತುಗಳಾಗಿ,
ಎಲ್ಲವೂ ಆತ್ಮನಲ್ಲಿ ಲಯವನೈದುತ್ತಿಹವು.
ಅಂತಪ್ಪ ಆತ್ಮಸ್ವರೂಪವೆಂತೆಂದೊಡೆ :
ದೃಷ್ಟಿಗೋಚರವಲ್ಲ, ಒಂದು ವಸ್ತುವಿನಲ್ಲಿ ಸಾಮ್ಯಗೋಚರವಲ್ಲ,
ಅದಾವುದೆಂದೊಡೆ :
ವಾಯ್ವಾಕಾಶಾತ್ಮಸ್ವರೂಪಿಗಳಾದ ತ್ರಿಮೂರ್ತಿಗಳು.
ವಾಯುರೂಪವಾದ ಬ್ರಹ್ಮನೇ ಲಕ್ಷ್ಮಿಯು,
ಆಕಾಶರೂಪವಾದ ವಿಷ್ಣುವೇ ಮಹಾದೇವಿಯು,
ಆತ್ಮರೂಪವಾದ ಶಿವನೇ ಶಾರದೆಯು.
ವಾಯುರೂಪವಾದ ಬ್ರಹ್ಮನು ಆತ್ಮರೂಪವಾದ ಶಾರದೆಯನ್ನು ಕೂಡಿಹನು.
ಆಕಾಶರೂಪವಾದ ವಿಷ್ಣುವು ವಾಯುರೂಪವಾದ ಲಕ್ಷ್ಮಿಯಂ ಕೂಡಿಹನು.
ಆತ್ಮರೂಪವಾದ ಶಿವನು ಆಕಾಶರೂಪವಾದ ಮಹಾದೇವಿಯಂ ಕೂಡಿಹನು.
ಆತ್ಮನೇ ವಿವೇಕವೆಂದು ತಿಳಿವುದು,
ವಿವೇಕವೇ ಸತ್ಯಜ್ಞಾನಾನಂದಸ್ವರೂಪು,
ವಿವೇಕದಿಂದ ಸಕಲಪ್ರಪಂಚವೆಲ್ಲಾ ಮಿಥ್ಯೆಯಾಗಿಹುದು.
ಅಂತಪ್ಪ ಸಕಲಪ್ರಪಂಚವೆಲ್ಲವೂ ಮಿಥ್ಯವೆಂದು ತಿಳಿದು

ಆ ಪ್ರಪಂಚದಲ್ಲಿ ಹೊಂದಿರ್ಪ ವಿವೇಕವೇ ಮುಕ್ತಿಯು, ಆ ಮುಕ್ತಿಯೇ ಶಿವನು.
ಅಂತಪ್ಪ ವಿವೇಕದಲ್ಲಿ ನಾಹಂಭಾವವಡಗಿ,
ಅಂತಪ್ಪ ವಿವೇಕವೇ ಮಹಾಲಿಂಗವು,
ಅಂತಪ್ಪ ವಿವೇಕಮಿರ್ದಲ್ಲಿ, ಪಾಪಗಳು ಹೊಂದದೇ ಇಹವು.
ಅದುಕಾರಣ,
ತಾನು ತಾನಾಗಿರ್ಪ ನಿಜಾನಂದಸುಖದೊಳೋಲಾಡುತಿರ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೬ ॥

೧೦೭೮

ಪಂಚಭೂತಂಗಳಂ ಮೀರಿರ್ಪ ಆತ್ಮರಾರೆಂದು ತಿಳಿವುದಂತೆಂದೊಡೆ :
ಸಾಮ್ಯವಸ್ತುವಿನಿಂದ ಗೋಚರಮಲ್ಲಮಾಗಿ
ತನ್ನಲ್ಲಿ ತಾನೇ ತಿಳಿಯಬೇಕು.
ಧೈರ್ಯವಂ ತಾಳಿ, ವೈರಾಗ್ಯವೆಂಬ ಖಡ್ಗವಂ ಪಿಡಿದು,
ಆ ಸೂಕ್ಷ್ಮ ಮಾರ್ಗದಲ್ಲಿ ನಿಶ್ಶಂಕೆಯಿಂ ತಾನೊಬ್ಬನೇ ಪ್ರವೇಶಿಸಿ,
ಭಾವವೆಂಬ ಮಹಾಬಯಲೊಳಗೆ ಗಮಿಸುತ್ತಾ,
ಮಿಥ್ಯಾಪ್ರಪಂಚನಡಗಿಸಿ, ನಿಜವಂ ಹೊಂದಿ,
ತತ್ವಾಮೃತವಂ ಪೀರಿ, ನಲಿವುತ್ತಿರ್ಪ ಪ್ರಮಥಗಣಂಗಳಂ
ನೋಡಿ ಪಾಡಿ ಮಣಿದು ಕುಣಿದು ತತ್ಪ್ರಸಾದಾಮೃತವಂ ಸವಿದು,
ಮಹಾತೃಪ್ತಿಸ್ಥಾನದಲ್ಲಿ ಸ್ವಪ್ನದಲ್ಲಿ ತಾನು ಪಟ್ಟ ಭ್ರಮೆಯು
ಜಾಗ್ರದಲ್ಲಿ ತನಗೆ ಅಪಹಾಸ್ಯಮಪ್ಪಂತೆ,
ತನ್ನಲ್ಲಿ ತಾನೇ ಲಯಿಸುತ್ತಾ, ಮಹಾಲಿಂಗವೇ ನಾನಾಗಿರ್ಪ ಸುಖವಂ
ಕಾಲವಿಳಂಬವನೆಸಗದೆ ನನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೭ ॥

೧೦೭೯

ಜೀವನಿಗೆ ಮನಸ್ಸೇ ಪ್ರಥಮವೇಷ.
ಆ ಮನವಂ ಹಿಡಿದು ಸಕಲಗುಣಂಗಳೂ ಅಕ್ಷಯಗಳಾಗಿ
ಒಂದಕೊಂದಾವರಿಸಿಕೊಂಡಿಹವು.
ಅದೆಂತೆಂದೊಡೆ :
ಜೀವನು ಶರೀರೋಪಾಧಿಯಿಂದ ಗಂಧವಸ್ತ್ರಾಭರಣ ಸಂಸಾರ
ಗೃಹಕ್ಷೇತ್ರಾದ್ಯಾವರಣಂಗಳಿಂದಲೂ
ನಾನಾವಿಧ ಭ್ರಾಮಕದಿಂದಲೂ ಬದ್ಧನಾಗಿ,
ಆ ಶರೀರವಂ ಬಿಡಲಾರದೆ, ಆ ಶರೀರವೇ ತಾನಾಗಿ ವ್ಯವಹರಿಸುತ್ತಾ,
ಹಲವು ಗುಣಗಳಿಂ ಬದ್ಧನಾಗಿ,
ಆ ಸೂಕ್ಷ್ಮ ಶರೀರದಿಂ ಸ್ವರ್ಗಾದಿ ಭೋಗಂಗಳನ್ನೂ

ನರಕಾದಿ ಯಾತನೆಗಳನ್ನೂ ಅನುಭವಿಸುತ್ತಿರ್ಪನು.
ಮಾನಸಾದಿ ಕಾರಣಂಗಳಿಂ ಬದ್ಧನಾಗಿರ್ಪನೇ ಜೀವನು,
ಅದಕ್ಕೆ ಹೊರಗಾಗಿರ್ಪನೇ ಪರಮನು.
ಅದೆಂತೆಂದೊಡೆ :
ದರ್ಪಣದಲ್ಲಿ ಬದ್ಧವಾಗಿರ್ಪ ನಿಜಛಾಯೆಯಂದದಿ
ಆ ದರ್ಪಣವೇ ಮನಸ್ಸು, ಆ ಛಾಯೆಯೇ ಜೀವನು,
ಆ ಛಾಯೆಯಿಂ ತನ್ನ ನಿಜಮಂ ವಿಚಾರಿಸುತಿರ್ಪುದೇ ಭಾವವು.
ಭಾವದಲ್ಲಿ ಬದ್ಧನಾಗಿರ್ಪನೇ ಪರಮನು,
ಸಾಕಾರಮನದಲ್ಲಿ ನಿರಾಕಾರಮಾಗಿರ್ಪನೇ ಜೀವನು,
ನಿರಾಕಾರಭಾವದಲ್ಲಿ ಸಾಕಾರಮಾಗಿರ್ಪನೇ ಪರಮನು.
ಇಂತು ಅನಂತಗಳಾಗಿರ್ಪ ಮಾನಸಾದ್ಯುಪಾಧಿಗಳಲ್ಲಿ
ಒಂದು ವಸ್ತುವೇ ನಾನಾಮುಖದಲ್ಲಿ ಅನಂತಗಳಾಗಿ ಉಪಾಧಿಯಂತಿರ್ದು,
ಉಪಾಧಿಯುಪಾಧಿಯೊಳಗೆ ಕೂಡಿ ಪ್ರತಿಫಲಿಸಿ,
ಛಾಯೆಯಿಂ ಛಾಯೆಯು ಪ್ರತಿಫಲಿಸಿ ಗಣನೆಗೆ ಸಾಧ್ಯವಾಗದೆ
ಕರತಲಾಮಲಕಮಾಗಿರ್ಪ ನಿನ್ನ ನಿಜಲೀಲಾ ನಟನೆಯಂ
ನಾನೆಂತು ಬಣ್ಣಿಸುವೆನಯ್ಯಾ.
ನಿನ್ನ ನಿಜಪ್ರಕಟನೆಯು ನನ್ನಿಂದಲ್ಲದೆ ಅನ್ಯರಿಂ ಸಾಧ್ಯಮಲ್ಲಮಾಗಿ,
ನಿನಗಿಂತ ಶಿವಭಕ್ತರೇ ಅಧಿಕರಯ್ಯಾ.
ನಿನ್ನಿಂದಲಾದುಪಾಧಿಯು ನಿನ್ನ ಕಾರಣದಿಂದಲೇ ಪರಿಹೃತಮಾದಲ್ಲಿ
ನಾನೆಂಬಹಂಕಾರಮಳಿದು ನೀನು ನೀನಾದಲ್ಲಿ,
ನಿನ್ನೊಳಗಿಪ್ಪ ಮತ್ಸರವು ಮುನ್ನವೆ ಅಳಿದು,
ಉನ್ನತಸುಖದೊಳೋಲಾಡುತ್ತಿರ್ಪೆನಯ್ಯಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೮ ॥

೧೮೮೦

ಇಂದ್ರಿಯಂಗಳಲ್ಲಿ ಸುಷುಪ್ತಿಜ್ಞಾನವು,
ಮನದಲ್ಲಿ ಸ್ವಪ್ನಜ್ಞಾನವು, ಭಾವದಲ್ಲಿ ಜಾಗ್ರಜ್ಞಾನವು.
ಸುಷುಪ್ತಿಯಂ ಹೊಂದಿದಲ್ಲಿ ಜಾಗ್ರವು ಸ್ವಪ್ನವಾಗಿರ್ಪಂತೆ,
ಜ್ಞಾನೇಂದ್ರಿಯಂಗಳಂ ಹೊಂದಿದಲ್ಲಿ ಭಾವವೇ ಮನಸ್ಸಾಗಿರ್ಪುದು.
ಜಾಗ್ರವಂ ಹೊಂದಿದಲ್ಲಿ ಸ್ವಪ್ನಸುಷುಪ್ತಿಗಳಿಲ್ಲದಿರ್ಪಂತೆ,
ಭಾವಜ್ಞಾನಮುದಯಮಾದಲ್ಲಿ ಮನಸ್ಸಿನಿಂದಿಂದ್ರಿಯಂಗಳಳಿದು,
ನಿಶ್ಚಿಂತಮಾಗಿರ್ಪುದೇ ಕಾರಣವು.
ಇಂತಪ್ಪ ಜಾಗ್ರತ್ಸ್ವಪ್ನ ಸುಷುಪ್ತಿಜ್ಞಾನಂಗಳನ್ನು ಹೊಂದಿ
ಮಹಾಲಿಂಗವು ತಾಂ ತ್ರಿಮೂರ್ತಿಸ್ವರೂಪಮಂ ಧರಿಸಿ ಕ್ರೀಡಿಸುತ್ತಿರ್ಪುದು,

ಜಾಗ್ರದಲ್ಲಿ ನಡೆಸುತ್ತಿರ್ಪುದೇ ರುದ್ರಮೂರ್ತಿಯು,
ಸುಷುಪ್ತಿಯೋಗದಲ್ಲಿ ಆನಂದಿಸುತ್ತಿರ್ಪುದೇ ವಿಷ್ಣುಮೂರ್ತಿಯು,
ಸ್ವಪ್ನದಲ್ಲಿ ಪ್ರಪಂಚಮಂ ಸೃಷ್ಟಿಸುತ್ತಿರ್ಪುದೇ ಬ್ರಹ್ಮಮೂರ್ತಿಯು.
ಆ ಸ್ವಪ್ನವಂ ರಕ್ಷಿಸುತ್ತಿರ್ಪುದೇ ಸುಷುಪ್ತಿಯು,
ಆ ಸ್ವಪ್ನವಂ ಸಂಹರಿಸುತ್ತಿರ್ಪುದೇ ಜಾಗ್ರವು,
ಆ ಸ್ವಪ್ನವಂ ಸೃಷ್ಟಿಸುವುದೇ ಸ್ವಪ್ನವು.
ಸ್ವಪ್ನದಲ್ಲಿರ್ಪವರಿಗೆ ಜಾಗ್ರವು ತಿಳಿಯದಿರ್ಪಂತೆ,
ಪ್ರಪಂಚದಲ್ಲಿರ್ಪವರಿಗೆ ಪರಮನು ತಿಳಿಯದಿರ್ಪನು.
ಸ್ವಪ್ನ ಸುಷುಪ್ತಿಗಳ್ತನ್ನಧೀನಮಾಗಿರ್ಪವು.
ಜಾಗ್ರವು ತನ್ನಂ ಮೀರಿರುವುದರಿಂ ಮರಣದಲ್ಲಿ ಸ್ವಾತಂತ್ರ್ಯಮಿಲ್ಲಮಾಯಿತ್ತು.
ಇಂತಪ್ಪ ಅವಸ್ಥಾತ್ರಯಂಗಳಲ್ಲಿ ಹೊಂದಿರ್ಪ ಜ್ಞಾನತ್ರಯಂಗಳಂ ಮೀರಿ,
ಜ್ಞಾನ ತೂರ್ಯಾವಸ್ಥೆಯಂ ಹೊಂದಿದಲ್ಲಿ,
ಮಹಾಲಿಂಗನಾದ ನೀನೊಬ್ಬನಲ್ಲದೆ ಮತ್ತಾರೂ ಇಲ್ಲದೆ,
ನೀನೇ ನೀನಾಗಿರ್ಪ ನಿಜಸುಖವಮೆನಗಿತ್ತುಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೭೯ ॥

೧೦೮೧

ಸತ್ಯಸ್ವರೂಪಮಾದ ಬಸವೇಶ್ವರನೇ ಭಕ್ತನು,
ಜ್ಞಾನಸ್ವರೂಪಮಾದ ಚನ್ನಬಸವೇಶ್ವರನೇ ಗುರುವು,
ಆನಂದಸ್ವರೂಪಮಾದ ಅಲ್ಲಮಪ್ರಭುವೇ ಜಂಗಮ.
ಇಂತಪ್ಪ ಗುರು ಜಂಗಮ ಭಕ್ತರೆಂಬ ಮಹಾನದಿಗಳು ತ್ರಿಪಥಗಾಮಿನಿಗಳಾಗಿ,
ಮಚ್ಛರೀರವೆಂಬ ಕಾಶೀಕ್ಷೇತ್ರದಲ್ಲಿ ಪರಿದು ಪವಿತ್ರಮಂ ಮಾಡಿ,
ನನ್ನ ಹೃದಯವೆಂಬ ಮಣಿಕರ್ಣಿಕಾಸ್ಥಾನದೊಳ್ಮೂರೊಂದಾಗಿ ಕೂಡಲು,
ಸತ್ಯವೇ ಕಂಠ, ಜ್ಞಾನವೇ ಗೋಮುಖ, ಆನಂದವೇ ಗೋಳಾಕಾರಮಾಗಿರ್ಪ
ಮಹಾಲಿಂಗವೆಂಬ ತ್ರಿವೇಣೀಸಂಗಮದಲ್ಲಿ ನಾಂ ಮುಳುಗಿ.
ನಿರ್ವಾಣದಲ್ಲಿ ಮುನ್ನಿನಂತಿದ್ದೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೦ ॥

೧೦೮೨

ಪಶುಗಳು ಆಹಾರ ಮೈಥುನ ನಿದ್ರೆಗಳನ್ನು
ಕಂಡಲ್ಲಿ, ಬಂದಲ್ಲಿ, ಅನುಭವಿಸುತ್ತಿರ್ಪುದರಿಂ
ಪರಲೋಕದಲ್ಲಿ ಸುಖದುಃಖಾನುಭವಗಳಿಲ್ಲದೆ, ಕಾಮಲೇಪವಿಲ್ಲದೆ,
ಮನುಷ್ಯಜನ್ಮದಲ್ಲಿ ಮಾಡಿದ ಕರ್ಮಾನುಭವನಿಮಿತ್ತಮಾಗಿ,
ಮರಳಿ ಮರಳಿ ತಿರ್ಯಗ್ರೂಪಮಾಗಿ ಜನಿಸಿ,
ಆ ಕರ್ಮಾನುಭವವು ತೀರಲು, ಮನುಷ್ಯಜನ್ಮವನೆತ್ತಿ

ಆಹಾರಾದಿ ಸಕಲಪದಾರ್ಥಂಗಳಂ ದೊರಕಿದಲ್ಲನುಭವಿಸದೆ,
ರಾಗ ಲೋಭಯುಕ್ತಗಳಾಗಿ, ತಮ್ಮ ಮಂದಿರಕ್ಕೆ ತಂದು,
ಪುತ್ರ ಮಿತ್ರ ಕಳತ್ರಯುಕ್ತವಾಗನುಭವಿಸಿ,
ಮಿಕ್ಕುದಂ ಕೂಡಲಿಕ್ಕುದರಿಂ ಇಹದಲ್ಲಿ ಮಾಡಿದ
ಕರ್ಮವಂ ಪರದಲ್ಲನುಭವಿಸಬೇಕಾಯಿತ್ತು.
ಆದುದರಿಂದಂದಿಗೆ ದೊರೆತ ಪದಾರ್ಥವನಂದೇ ಅನುಭವಿಸಿ,
ಲೋಭರಾಗಾಭಿಮಾನವಿಲ್ಲದಾತಂಗೆ ಕರ್ಮಲೇಪವಿಲ್ಲ,
ಮನುಷ್ಯರಲ್ಲಿ ಕರ್ಮಲೇಪವಿಲ್ಲದಾತನೇ ವಿರಕ್ತನು, ಆತನೇ ಜೀವನ್ಮುಕ್ತನು.
ಅಂತಪ್ಪ ನಿರ್ಲೇಪಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೧ ॥

೧೦೮೩

ಪೃಥ್ವಿಯು ಜಲದಿಂದಲೇ ಪೂತವಾಗಿ,
ಅದರಿಂದಲೇ ಪೆರ್ಚಿ, ಅದರಿಂದಲೇ ಲಯವಂ ಹೊಂದುವುದು.
ಅಗ್ನಿಯು ವಾಯುವಿನಿಂದಲೇ ಶುಚಿಯಾಗಿ, ಅದರಿಂದಲೇ ಪೆರ್ಚಿ,
ಅದರಿಂದಲೇ ಲಯವಂ ಹೊಂದುವುದು.
ಆಕಾಶವು ಆತ್ಮನಿಂದಲೇ ಶುದ್ಧವಾಗಿ, ಅದರಿಂದಲೇ ಪೆರ್ಚಿ,
ಅದರಿಂದಲೇ ಲಯವಂ ಹೊಂದುವುದು.
ಆಕಾಶರೂಪವಾದ ಸಕಲಗುಣಂಗಳು ಆತ್ಮನಿಂದಲೇ ಪೆರ್ಚಿ,
ಆತ್ಮನಿಂದಲೇ ಪವಿತ್ರವಾಗಿ, ಆತ್ಮನಿಂದಲೇ ಲಯವಂ ಹೊಂದುವಲ್ಲಿ;
ಪೃಥ್ವಿಯು ಲಯವಪ್ಪಲ್ಲಿ ಕರ್ಮವು ನಷ್ಟವಪ್ಪಂತೆ,
ಅಂತಪ್ಪ ಪೃಥ್ವೀನಷ್ಟವೇ ಬ್ರಹ್ಮನ ಲಯವು,
ಅಗ್ನಿನಷ್ಟವೇ ರುದ್ರನ ಲಯವು, ಆಕಾಶನಷ್ಟವೇ ವಿಷ್ಣುವಿನ ಲಯವು,
ಅಂತಪ್ಪ ವಿಷ್ಣುವಿನ ಮಾಯೆಯನಳಿದ ನಿರ್ಮಲಾತ್ಮನೇ ಮಹಾಲಿಂಗವು,
ಅಂತಪ್ಪ ಮಹಾಲಿಂಗದಲ್ಲಿ ಜೀವಮೂಲ ದೇಹಮೂಲಗಳಾಗಿರ್ಪ
ಜಲವಾಯುಗಳ ಸುಳುವಡಗಿ,
ನಾಹಂಭ್ರಮೆಯುಡುಗಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೨ ॥

೧೦೮೪

ಐಶ್ವರ್ಯದಿಂದ ಶರೀರವು ಪ್ರಕಾಶಿಸುತ್ತಿರ್ಪುದು,
ಮನಸ್ಸಿನಿಂದ ಜೀವನು ಪ್ರಕಾಶಿಸುತ್ತಿರ್ಪನು,
ಶರೀರದ ಸುಖದುಃಖಂಗಳಿಗೆ ಐಶ್ವರ್ಯವೇ ಕಾರಣವಾಗಿರ್ಪಂತೆ,
ಜೀವನ ಸುಖದುಃಖಕ್ಕೆ ಮನಸ್ಸೇ ಕಾರಣವಾಗಿರ್ಪುದು.

ಅರ್ಥವಂ ಪ್ರಪಂಚಮುಖದಲ್ಲಿ ವೆಚ್ಚಿಸಿ,
ಅರ್ಥಕ್ಕೆ ತಕ್ಕ ಉಪಾಂಗವಂ ಸಂಪಾದಿಸಿ,
ತದುಪಭೋಗಯುಕ್ತಮಾಗಿರ್ಪ ಶರೀರದಂತೆ
ಮನಸ್ಸನ್ನು ಕರ್ಮಮುಖದಲ್ಲಿ ವೆಚ್ಚಿಸಿ,
ಆ ಮನಸ್ಸನ್ನಟ್ಟಿ, ಸೂಕ್ಷ್ಮ ಶರೀರವಂ ಸಂಪಾದಿಸುತ್ತಾ,
ಅದರಲ್ಲಿ ಜೀವನನುಭವಿಸುತ್ತಿಹನು.
ಪ್ರಾಣವು ಶರೀರದಲ್ಲಿ ಬದ್ಧಮಾಗಿರ್ಪುದು,
ಅರ್ಥದಲ್ಲಿ ಮನಸ್ಸು ಬದ್ಧಮಾಗಿಹುದು,
ಜಡರೂಪಮಾದೈಶ್ವರ್ಯವು ಶರೀರವಂ ಹೊಂದಿ.
ತಾನು ಚೈತನ್ಯರೂಪಮಾಗಿ ಸಕಲಪದಾರ್ಥಗಳನ್ನು
ಶರೀರಮುಖಕ್ಕೊದಗಿಸಿಕೊಡುವಂತೆ
ಜಡರೂಪಮಾದ ಮನಸ್ಸು ಜೀವನಂ ಹೊಂದಿದಲ್ಲಿ,
ಆ ಜೀವನಿಗೂ ಪರಮಚೈತನ್ಯವಿತ್ತು, ತಾನು ಚೈತನ್ಯರೂಪಮಾಗಿ
ಸಂಚರಿಸುತ್ತಾ
ಅನುಭವಯೋಗ್ಯವಾದ ಪದಾರ್ಥಂಗಳನ್ನು ಜೀವನಿಗೆ
ಸಂಪಾದಿಸಿಕೊಡುತ್ತಿರ್ಪುದು.
ಸಕಲಪ್ರಪಂಚವು ಅರ್ಥವಿದ್ದಲ್ಲಿ ಸೇರಿ,
ಆ ಅರ್ಥವನ್ನೇ ಜೀವನವಂ ಮಾಡಿಕೊಂಡಿರ್ಪಂತೆ,
ಸಕಲಗುಣಂಗಳು ಮನಸ್ಸನ್ನೇ ಸೇರಿ,
ಆ ಮನಸ್ಸನ್ನೇ ಜೀವನವಂ ಮಾಡಿಹನು.
ಆ ಅರ್ಥವುಳ್ಳ ಪುರುಷನು ಸಕಲರಿಗೂ ತಾನು ಪ್ರಭುವಾಗಿರ್ಪಂತೆ,
ಮನಸ್ಸುಳ್ಳ ಜೀವನು ಸಕಲಗುಣಂಗಳಿಗೂ ತಾನೇ ಸ್ವಾಮಿಯಾಗಿರ್ಪನು.
ಹೊನ್ನಿನಿಂದ ಹೆಣ್ಣನ್ನೂ ಹೆಣ್ಣಿನಿಂದ ಮಣ್ಣನ್ನೂ ಸಾಧಿಸಿ,
ಆ ಹೆಣ್ಣು ಮಣ್ಣುಗಳಿಂದ ಹೊನ್ನಂ ಸಾಧಿಸುವಂತೆ,
ಮನದಿಂದ ಅಹಂಬುದ್ಧಿಯು, ಅಹಂಬುದ್ಧಿಯಿಂ ಮನಸ್ಸು ಸಾಧ್ಯಮಪ್ಪುದು.
ಐಶ್ವರ್ಯವಿಲ್ಲದೆ ಶರೀರಮೋಕ್ಷ, ಮನಸ್ಸಿಲ್ಲದೆ ಜೀವನ್ಮುಕ್ತಿ.
ಇಂತಪ್ಪ ವಿಚಿತ್ರವನ್ನು ಗುರುಮುಖದಿಂದ ತಿಳಿದ ಮಹಾಪುರುಷನು
ಜಂಗಮರೂಪಿಯಾದ ನಿನಗೆ ಇಂದ್ರಿಯಮುಖದಲ್ಲರ್ಥವನ್ನು ಸಮರ್ಪಿಸಿ,
ಲಿಂಗರೂಪಿಯಾದ ನಿನಗೆ ಭಾವಮುಖದಲ್ಲಿ ಮನಸ್ಸನ್ನು ಸಮರ್ಪಿಸಿದಲ್ಲಿ,
ಆ ಲಿಂಗವೇ ಪ್ರಾಣಮಪ್ಪುದು.
ಅರ್ಥವಂಚನೆಯೂ ಮನೋವಂಚನೆಯೂ
ಲಿಂಗಜಂಗಮಮುಖದಲ್ಲಿ ಲಯಮಪ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೮೩. ||

೧೦೮೫

ಆತ್ಮಧರ್ಮವೇ ತಮಸ್ಸು, ಆತ್ಮನು ಜಡವಾಗಿರ್ಪನು.
ಆತ್ಮನು ತಮೋವಶನಾದಲ್ಲಿ ಪ್ರಪಂಚವು ಉತ್ಪನ್ನವಾಗಿರ್ಪುದು.
ತಮಸ್ಸು ಆತ್ಮನೂ ಪ್ರಾಣವು ಶಬ್ದವೂ ಆದಲ್ಲಿ
ನಿಜವು ಪ್ರಕಾಶವಾಗಿ ಪ್ರಪಂಚವು ನಷ್ಟವಾಗಿರ್ಪುದು.
ಜೀವಧರ್ಮವಾಗಿರ್ದ ನಿದ್ರೆಯು ಜೀವನಂ ಬಂಧಿಸಿದಲ್ಲಿ
ಅನೇಕ ಸ್ವಪ್ನಂಗಳುದಿಸಿ ಜೀವಾನುಭವಕಾರಣವಾಗಿಹುದು.
ಆ ಜೀವನಲ್ಲಿ ನಿದ್ರೆಯು ಲೀನವಾದಲ್ಲಿ
ಸ್ವಪ್ನವಳಿದು ಜಾಗ್ರದೊಳಗೆ ಬೆರೆವಂತೆ,
ತಮೋಧರ್ಮವಾಗಿರ್ಪ ಪ್ರಪಂಚವು ಪರಮನಂ ಭ್ರಮಿಸುತ್ತಿರ್ಪುದು.
ಹಗಲಿರುಳು ಜಾಗ್ರತ್ಸುಷುಪ್ತಿಗಳು ಹೇಗೋ ಹಾಗೆ
ನಿಜಪ್ರಪಂಚಗಳು ಪರಮನ ಸಹಚರಗಳಾಗಿರ್ಪವು.
ಜೀವಪರಮರಿಗೆ ಸ್ಥೂಲಸೂಕ್ಷ್ಮ ಮಾತ್ರ ಭೇದವಲ್ಲದೆ,
ಕೆರೆಯ ನೀರೂ ಹರವಿಯ ನೀರೂ ಕೂಡಿದಲ್ಲಿ ಏಕವಾಗುವಂತೆ
ವಸ್ತು ಒಂದೇ ಆಗಿರ್ಪುದು:
ಭಿನ್ನಿಸಿದಲ್ಲಿ ನೀಚೋಚ್ಚಗಳು ಕಾಣುತಿರ್ಪವು, ಅವೇ ಸುಖದುಃಖಂಗಳು.
ಅಂತಪ್ಪ ಭೇದವಂ ತೊಲಗಿಸಿ ನನ್ನನ್ನು ನಿನ್ನೊಳಗೇಕವಾಗಿ ಕೂಡಲಿಟ್ಟು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೮೪ ||

೧೦೮೬

ಆಕಾಶವಿಷಯಕ್ಕೆ ವಾಯುವೇ ಪ್ರಕಾಶಕಾರಣವು,
ಆ ವಾಯುವಿಷಯಕ್ಕೆ ತೇಜಸ್ಸೇ ಪ್ರಕಾಶಕಾರಣವು,
ಆ ಅಗ್ನಿ ವಿಷಯಕ್ಕೆ ಜಲವೇ ಪ್ರಕಾಶಕಾರಣವು,
ಆ ಜಲವಿಷಯಕ್ಕೆ ಪೃಥ್ವಿಯೇ ಪ್ರಕಾಶಕಾರಣವು,
ಆ ಪೃಥ್ವೀವಿಷಯಕ್ಕಾತ್ಮನೇ ಪ್ರಕಾಶಕಾರಣವು,
ಆ ಆತ್ಮನು ಎಲ್ಲಕ್ಕೂ ಪ್ರಕಾಶಕಾರಣನೂ ಆಧಾರಭೂತನೂ ಆಗಿರ್ಪನು.
ಆತನು ವಾಸನೆವಿಡಿದಲ್ಲಿ ಜೀವನಹನು, ವಾಸನೆಯಳಿದಲ್ಲಿ ಪರಮನಹನು,
ಜಪಸ್ಫಟಿಕನ್ಯಾಯದಂತಾ ವಾಸನೆಯ ಫಲ ಕಾರಣ,
ಆ ಫಲವೇ ಸೃಷ್ಟಿ ಸ್ಥಿತಿ ಸಂಹಾರಕಾರಣವು,
ಅದೇ ಸುಖದುಃಖಾನುಭವಕಾರಣವಾದ ಭವವೆನಿಸಿಕೊಂಬುದು,
ಬೀಜದಲ್ಲಿ ವಾಸನೆಯಡಗಿಪ್ಪಂತೆ ಜೀವನಲ್ಲಿ ವಾಸನೆಯಡಗಿ,
ಕಾಲಕರ್ಮದಿಂದ ಪ್ರಕಾಶವಾಗಿರ್ಪುದು.
ಅಖಂಡವಾಯೂಪಾಧಿಯಿಂದ ಅಕ್ಷರರೂಪವಾಗಿ,
ಅಕ್ಷರಂಗಳೊಳಗೆ ಕೂಡಿ, ನಾನಾರ್ಥಂಗಳನ್ನೀವುತ್ತಾ,

ಶರೀರಂಗಳಳಿದರೆ ಭವಿಷ್ಯಚ್ಛರೀರಂಗಳಂ ಹೊಂದಿ,
ತತ್ತದರ್ಥಕ್ರಿಯಾನುಗುಣವಾಗಿ ಪ್ರವರ್ತಿಸುವಂತೆ,
ಆತ್ಮನು ವಾಸನೆವಿಡಿದು, ಖಂಡಿತ ಜೀವರೂಪದಲ್ಲಿ ಶರೀರಬದ್ಧನಾಗಿ,
ಒಂದಂ ಬಿಟ್ಟೊಂದಂ ಹಿಡಿದು, ಶರೀರೋಪಾಧಿಯಂ ಬಿಡದಿರ್ಪುದೇ ಭವವು.
ಇಂತಪ್ಪ ಪ್ರಪಂಚವಾಸನೆವಿಡಿದ ಜೀವನಿಗೆ
ಪ್ರಪಂಚದ ಕೂಡ ಅಲ್ಲದೆ ಮೋಕ್ಷವಿಲ್ಲ.
ಸದಾಶಿವಾತ್ಮ ಪಂಚಾಕ್ಷರಮಂತ್ರವೆಲ್ಲ ಆ ಶಿವಸ್ವರೂಪವಾಗಿ ತೋರ್ಪಂತೆ,
ಲಿಂಗಾತ್ಮವಾದ ಜೀವನ ಭಾವದಲ್ಲೆಲ್ಲ ಲಿಂಗವೇ ಕಾಣುತ್ತಿರ್ಪುದು.
ಮಂತ್ರದಲ್ಲಿ ಶಿವನೂ ಶಿವನಲ್ಲಿ ಮಂತ್ರವೂ ಅಡಗಿಪ್ಪಂತೆ,
ಲಿಂಗದಲ್ಲಿ ಭಕ್ತನೂ, ಭಕ್ತನಲ್ಲಿ ಲಿಂಗವೂ ಅಡಗಿಪ್ಪುದು.
ಅರ್ಥವಂ ತಿಳಿದಾನಂದಿಸುವಾಗಕ್ಷರವಂ ಮರೆವಂತೆ,
ಲಿಂಗವಂ ತಿಳಿದಾನಂದಿಸಿ ತನ್ನಂ ಮರೆದಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೫ ॥

### ಎಂಟನೆಯ ಅಧ್ಯಾಯ

೧೦೮೭

ಜಾಗ್ರದೊಳಗೆ ನಾಲ್ಕರಲ್ಲೊಂದು ಪಾಲು ಸುಷುಪ್ತಿಯು,
ಸುಷುಪ್ತಿಯಲ್ಲಿ ನಾಲ್ಕರಲ್ಲೊಂದುಪಾಲು ಸ್ವಪ್ನವು.
ಅದೆಂತೆಂದೊಡೆ :
ಚಂದ್ರ ಸೂರ್ಯರಿಲ್ಲದ ದಿವಸಂಗಳೇ ಸುಷುಪ್ತಿಕಾಲ ಪ್ರಮಾಣವೂ,
ಆ ಕತ್ತಲೆಯೊಳಗಿರ್ಪ ನಕ್ಷತ್ರಪ್ರಕಾಶವೇ ಸ್ವಪ್ನಪ್ರಮಾಣವೂ ಆಗಿ,
ನಾಲ್ಕರಲ್ಲೊಂದುಪಾಲನ್ನು ಕತ್ತಲೆಯು ಜೈಸುತ್ತಿರ್ಪುದು.
ಜಾಗ್ರತ್ಸ್ವರೂಪರಾದ ಚಂದ್ರ ಸೂರ್ಯರು
ನಕ್ಷತ್ರಮಾರ್ಗವನ್ನನುಸರಿಸಿ ತಿರುಗುತ್ತಿರ್ಪಂತೆ,
ಜೀವನು ಜಾಗ್ರದಲ್ಲಿ ಸ್ವಪ್ನಮಾರ್ಗವನನುಸರಿಸಿ ತಿರುಗುತ್ತಿರ್ಪುದರಿಂ
ಜಾಗ್ರದೊಳಗಣ ಸ್ವಪ್ನವೇ ಸಾಕಾರವು,
ಸುಷುಪ್ತಿಯೊಳಗಣ ಸ್ವಪ್ನವೇ ನಿರಾಕಾರವು,
ನಿರಾಕಾರ ಸ್ವಪ್ನದಲ್ಲಿ ಮನಸ್ಸು ಸಾಕಾರವಾಗಿ ತಿರುಗುತ್ತಿರ್ಪುದು,
ಸಾಕಾರಸ್ವಪ್ನದಲ್ಲಿ ಶರೀರಾಕಾರವಾಗಿ ತಿರುಗುತ್ತಿರ್ಪುದು,
ಸ್ವಪ್ನವಿಲ್ಲದ ಜಾಗ್ರ ಸುಷುಪ್ತಿಗಳೇ ಕಾಲಾತೀತವಾಗಿ,
ಪರಮಾನಂದರೂಪವಾಗೊಂದಕ್ಕೊಂದು ಹೊಂದದೇ ಇಹವು,
ಅವೇ ಶಿವಶಕ್ತಿಸ್ವರೂಪಗಳು.
ತದ್ವಿಯೋಗದಲ್ಲಿ ಬೀಜವೊಡೆದುಮೂಡಿ ಪ್ರಕಾಶಿಸುವ ವೃಕ್ಷದಂತಿರ್ಪುದೇ
ತೂರ್ಯಾವಸ್ಥೆಯು,
ಅಂತಪ್ಪ ಜಾಗ್ರತ್ಸ್ವಪ್ನ ಸುಷುಪ್ತಿಗಳನಳಿದ ತೂರ್ಯವೇ ನಿಜವು,

ನಿಜವೇ ತಾನು, ತನ್ನಂ ತಾನರಿವುದೇ ಮೋಕ್ಷವು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೬ ॥

೧೦೮೮

ಸ್ಥಾವರದಲ್ಲಿ ಜೀವನು ಜಲರೂಪದಿಂ ಪಾದವನಾಶ್ರಯಿಸಿಹನು.
ಜಂಗಮದಲ್ಲಿ ವಾಯುರೂಪನಾಗಿ ಶಿರಸ್ಸನ್ನಾಶ್ರಯಿಸಿಹನು.
ಶಿರಸ್ಸಿನಿಂ ಅಧೋಮುಖಕ್ಕಿಳಿದು,
ಸರ್ವಾಂಗವಂ ವ್ಯಾಪಿಸಿ, ಅಧಃಫಲಪ್ರದನಾಗಿಹನು.
ಜಲರೂಪವಾದ ಜೀವನಿಗೆ ಅನಲಾದಿ ತ್ರಿಭೂತಂಗಳು
ಆತ್ಮಛಾಯೆಗೆ ಮರೆಯಾಗಿರ್ಪುದರಿಂ ಜಡಭಾವದಿಂ ಸುಷುಪ್ತಿ
ರೂಪವಾಯಿತ್ತು.
ವಾಯುರೂಪವಾದ ಪ್ರಾಣನಿಗೆ ಆಕಾಶಭೂತವೊಂದೇ
ಆತ್ಮಛಾಯೆಗೆ ಮರೆಯಾಗಿರ್ಪುದರಿಂ ಜ್ಞಾನಾಜ್ಞಾನಮಿಶ್ರವಾಗಿ
ಸುಖದುಃಖಕ್ಕೆ ಕಾರಣವಾಯಿತ್ತು.
ಆದುದರಿಂ ಜೀವಪ್ರಾಣವೆಂಬೆರಡು ಶಬ್ದಗಳು ಜೀವಾತ್ಮನಪ್ರಕಾಶಗಳಾಯಿತ್ತು.
ಇಂತು ಜೀವನು ಪಂಚಭೂತಂಗಳ ಮಧ್ಯದಲ್ಲಿ ಬದ್ಧನಾಗಿ,
ಸ್ಥಾವರದಲ್ಲಿ ಸುಷುಪ್ತಿರೂಪನಾಗಿ, ಜಂಗಮದಲ್ಲಿ ಸ್ವಪ್ನರೂಪವಾಗಿರ್ಪನು
ಆತ್ಮನು ಪಂಚಭೂತಂಗಳಂ ಮೆಟ್ಟಿ
''ಅತ್ಯತಿಷ್ಠದ್ದಶಾಂಗುಲಂ'' ಎಂಬ ನಾಮದಿಂ ಪ್ರಕಾಶಿಸುತ್ತಿರ್ಪನು.
ಅದೆಂತೆಂದೊಡೆ :
ಅಂಗುಲವೆಂದರೆ ಪ್ರಮಾಣವು.
ಪಂಚಭೂತಗಳೈದೂ ಐದು ಪ್ರಮಾಣವುಳ್ಳದ್ದಾಯಿತ್ತು.
ಈ ಪಂಚಭೂತಂಗಳಿಂದ ಎರಡರಷ್ಟು ಆಧಿಕ್ಯವಾಗಿ,
ಈ ಪಂಚಭೂತಗಳೊಳಗೆ ತಾನು ದಶಸ್ಥಾನವಾಗಿ,
ಶೂನ್ಯಕಳೆಯಿಂ ಕೂಡಿ, ಷೋಡಶಕಳಾಪರಿಪೂರ್ಣನಾಗಿಹನು.
ಐದು ಬಿಟ್ಟಲ್ಲಿ ಏಕಮೇವಾದ್ವಿತೀಯಂ ಬ್ರಹ್ಮವಾಗಿ ಕೂಡಿದಲ್ಲಿ
ವಿರಾಡ್ರೂಪನಾಗಿ, ಅತ್ಯತಿಷ್ಠದ್ದಶಾಂಗುಲವೆನಿಸಿ,
ಸಕಲನಿಷ್ಕಲತತ್ವಮೂರ್ತಿಯಾಗಿರ್ಪ ಪರಮಾತ್ಮನಿಗೂ ನನಗೂ
ಮರೆಯಾಗಿರ್ಪ ಆಕಾಶರೂಪ ಮಾಯಾಛಾಯಾತಮಸ್ಸನ್ನು
ಆತ್ಮಜ್ಞಾನ ತೇಜಃಪ್ರಕಾಶದಿಂ ತೊಲಗಿಸಿದಲ್ಲಿ, ನೀನೇ ನಾನಾಗಿರ್ಪೆನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೮೭ ॥

೧೦೮೯

ಜೀವನು ತನಗೆ ರುದ್ರಸ್ವರೂಪವಾದ
ಅಗ್ನಿಯು ಆದಿಯಲ್ಲಿ ಪ್ರಸನ್ನವಾದಲ್ಲಿ

ತಚ್ಛಕ್ತಿಯಿಂ ಪೃಥಿವೀ ಅಪ್ಪುಗಳಂ ಸಂಪರಿಸಿ,
ಅವುಗಳಲ್ಲಿರ್ಪ ಸಾರವಸ್ತುಗಳಿಂದ
ಸ್ವಸ್ಥಾನವಮಾಗಿರ್ಪ ಶರೀರಮಂ ಪೋಷಿಸುತ್ತಾ,
ಪ್ರಪಂಚಹೇತುವಾಗಿರ್ಪ ಸೃಷ್ಟಿ ಸ್ಥಿತಿ ಸಂಹಾರಂಗಳನೆಸಗುತ್ತಾ,
ಅಹಂಕರಿಸುತ್ತಿರ್ಪುದಲ್ಲದೆ,
ಆ ಮಹಾರುದ್ರನಿಂ ತನಗೆ ಬಂದಧಿಕಾರಮಂ ನೆನೆಯದೆ,
ವಿಷ್ಣು ಬ್ರಹ್ಮರ ಬಲೆಗೆ ಸಿಕ್ಕಿ, ಅಪಥ್ಯಾದಿದೋಷಂಗಳನೆಸಗಿದಲ್ಲಿ,
ಆ ಮಹಾರುದ್ರನ ದಯೆಯು ತಪ್ಪಿ,
ಆ ದೋಷಗಳು ಧಾತುಗಳಂ ಪ್ರವೇಶಿಸಲು,
ತನಗೆ ಪದಾರ್ಥಂಗಳಂ ಸಂಹರಿಸುವುದಕ್ಕೂ ಶರೀರವಂ ರಕ್ಷಿಸುವುದಕ್ಕೂ
ಅಧಿಕಾರವು ತಪ್ಪಿ, ಕಾಯವಂ ಬಿಟ್ಟು, ಹೊರಟು,
ಆ ಮಹಾರುದ್ರನ ಆಗ್ರಹಮುಖದಲ್ಲಿ ಯಾತನೆಬಡುತ್ತಾ,
ಮಾಯಾರೂಪವಾದ ಆಕಾಶದಲ್ಲಿ ತೊಳಲುತ್ತಾ,
ತಾನೇ ಪಿಶಾಚರೂಪಮಾಗಿ ತೊಳಲುತ್ತಿರ್ಪನೆಂತೆಂದೊಡೆ :
ಯಾವುದಕ್ಕೂ ಅಧಿಕಾರವಿಲ್ಲದ ಮನುಷ್ಯನು
ತನಗೆ ಬೇಕಾದ ಸ್ವಲ್ಪ ಪದಾರ್ಥವನಾದರೂ ಒಬ್ಬರಂ ಹಿಡಿದು ಬಿಡದೆ
ಕಾಡಿ ಬೇಡಿ ಆಗ್ರಹ ನಿಗ್ರಹಂಗಳಿಗೊಳಗಾಗಿ,
ತನಗೊಳಗಾಗದವರಂ ಬಾಧಿಸಿ,
ಅತಿಪ್ರಯಾಸದಲ್ಲಿ ಸ್ವಲ್ಪ ಪದಾರ್ಥವಂ ಕೊಂಡು, ಅನುಭವಿಸುತ್ತಿರ್ಪಂತೆ,
ಈ ಜೀವನು ಪಿಶಾಚತ್ವದಲ್ಲಿ ಭಿನ್ನ ಜೀವರಂ ಗ್ರಹಿಸಿ,
ಅತಿದುಃಖವನ್ನೂ ಸ್ವಲ್ಪ ಸುಖವನ್ನೂ ಅನುಭವಿಸುತ್ತಿರ್ಪನು.
ಆ ಮಹಾರುದ್ರನ ಕೃಪೆಯೊದಗಿದಲ್ಲಿ,
ಶರೀರಾದಿ ಸಕಲಪ್ರಪಂಚಸುಖಗಳನನುಭವಿಸಿ,
ಅವೆಲ್ಲಕ್ಕೂ ತಾನೇ ಕರ್ತನೆಂದಹಂಕರಿಸುತ್ತಾ ಭವಕೋಟಲೆಗಲಸಿ,
ತನ್ನ ಮಿಥ್ಯಾಹಂಕಾರಮಂ ಬಿಟ್ಟು,
ಎಲ್ಲವೂ ಪರಶಿವನಲೀಲೆಯಲ್ಲದೆ ತಾನಸ್ವತಂತ್ರನೆಂಬುದಂ
ಪರತತ್ವವಿಚಾರದಿಂ ತಿಳಿದಲ್ಲಿ,
ತಾನು ಮಾಡಿದ ಕರ್ಮವೆಲ್ಲಾ ಸದಾಶಿವನಿಗರ್ಪಿತವಮಾಯಿತ್ತು,
ತಾಂ ನಿರ್ಲೇಪನಾದನು, ಸದಾಶಿವನು ತೃಪ್ತನಾದಲ್ಲಿ
ಜೀವನ್ಮುಕ್ತನಾದನು ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೭೮ ||

೧೮೦

ಮನುಷ್ಯರಿಗೆ ಅಂತರಗ್ನಿಯು. ದೇವತೆಗಳಿಗೆ ಬಹಿರಗ್ನಿಯು.
ಅದೆಂತೆಂದೊಡೆ :

ಮನುಷ್ಯರು ತಮ್ಮ ಜಠರಾಗ್ನಿಗೆ ಆಹುತಿಯಂ ಕೊಟ್ಟಲ್ಲಿ,
ಧಾತುವರ್ಧನವಾಗಿ ಜೀವನು ತೃಪ್ತಿಪಡುವನು.
ದೇವತೆಗಳು ಬಾಹ್ಯಾಗ್ನಿಯಲ್ಲಿ
ಶುಚಿಯೂ ರುಚಿಯೂ ಆಗಿರ್ಪ ಅಮೃತವನ್ನು ಆಹುತಿಯಂ ಕೊಟ್ಟಲ್ಲಿ,
ಅದರಿಂದ ಬ್ರಹ್ಮಾಂಡದಲ್ಲಿ ಧಾತುವರ್ಧನವಾಗಿ,
ದೇವತಾಶ್ರೇಷ್ಠನಾದ ಪರಮಾತ್ಮನು ತೃಪ್ತಿಬಡುತ್ತಿರ್ಪನು.
ದುರಾಹಾರವಾದರೂ ಅಗ್ನಿಮಾಂದ್ಯವಾದರೂ
ಶರೀರದಲ್ಲಿ ವ್ಯಾಧಿಯು ಉಲ್ಬಣವಾಗುವಂತೆ,
ತಮೋದ್ರವ್ಯವಾದರೂ ಅಗ್ನಿಪ್ರಕಾಶವಾಗದಿದ್ದರೂ ನ್ಯೂನಾತಿರಿಕ್ತವಾದರೂ,
ಅದರಿಂದ ರಾಕ್ಷಸರು ವರ್ಧಿಸಿ ಬ್ರಹ್ಮಾಂಡವನೆ ಕೆಡಿಸುತ್ತಿಹರು.
ಅಂತರಗ್ನಿಗೂ ಬಹಿರಗ್ನಿಗೂ ಸ್ವಾಹಾಮುಖದಲ್ಲಿ ಆಹುತಿಯಂ ಕೊಡಬೇಕು.
ಏನು ಕಾರಣ ಸ್ವಾಹಾಮುಖದಲ್ಲಿ ಆಹುತಿಯಂ ಕೊಡಬೇಕೆಂದರೆ,
ತಾನು ಸಂಹರಿಸುವುದೇ ಅಗ್ನಿಗುಣವು,
ಆ ಗುಣವೇ ಆತನಿಗೆ ಶಕ್ತಿಯಾಗಿರ್ಪುದು.
ಅದೆಂತೆಂದರೆ :
ಸದಾಶಿವನ ಸಂಹಾರಗುಣವೇ ಆ ಶಿವನಿಗೆ ಶಕ್ತಿಯಾಗಿರ್ಪಂತೆಯೂ
ವಿಷ್ಣುವಿನ ರಕ್ಷಣಗುಣವೇ ಆತನಿಗೈಶ್ವರ್ಯಶಕ್ತಿಯಾಗಿರ್ಪಂತೆಯೂ
ಬ್ರಹ್ಮನ ಸೃಷ್ಟಿಗುಣವೇ ಆತನಿಗೆ ವಿವೇಕಶಕ್ತಿಯಾಗಿರ್ಪಂತೆಯೂ
ಅಗ್ನಿಯ ಸ್ವಾಹಾಗುಣವೇ ಅಗ್ನಿಗೆ ಶಕ್ತಿಯಾಗಿರ್ಪುದು.
ಸದಾಶಿವನ ಸಂಹಾರಶಕ್ತಿಯಂ ಸ್ಮರಿಸಿ,
ಮಂತ್ರಂಗಳಿಂದುಪಶಾಂತಿಯಂ ಮಾಡುತಿರ್ಪಂತೆ,
ಸಕಲದೇವತಾಸ್ವರೂಪಮಾದ ಅಗ್ನಿಯ ಗುಣವಂ ಸ್ಮರಿಸಿ
ಆಹುತಿಯಂ ಕೊಡುತಿರ್ಪರು.
ಇಂತಪ್ಪ ಹವಿರಾದಿ ಸಕಲ ಕರ್ಮಗಳನ್ನು ಜ್ಞಾನಮುಖದಲ್ಲಿ ತಿಳಿದು
ಭಾವಜ್ಞನಾಗಾಚರಿಸಿದಲ್ಲಿ ದೇವತಾಪ್ರೀತಿಯಪ್ಪುದು.
ಜ್ಞಾನವಿಲ್ಲದೆ ಮಹಾದಿವ್ಯಜ್ಞಾನಿಪುರುಷರಿಂ ಪ್ರತ್ಯಕ್ಷೋಪದೇಶವಿಲ್ಲದೆ,
ಕೆಲವು ಗ್ರಂಥಂಗಳಂ ನೋಡಿ, ಮಂತ್ರಂಗಳಂ ಕಲಿತು,
ಆ ಪ್ರಕಾರಮಾಡಿದಲ್ಲಿ ಘೋರನರಕವನನುಭವಿಸುವರು.
ಅಂತಪ್ಪ ಜ್ಞಾನಯುಕ್ತವಾದ ಕರ್ಮವಂ ನನಗುಪದೇಶಿಸಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೮೯ ||

೧೯೦

ಶಿವನೇ ಪುರುಷನು, ವಿಷ್ಣುವೇ ಶಕ್ತಿಯು.
ಅದೆಂತೆಂದೊಡೆ :
ಸೃಷ್ಟಿ–ಸ್ಥಿತಿನಿಮಿತ್ತಭೂತಳಾದ ಸ್ತ್ರೀಯಲ್ಲಿ ಕಾಮವು ಉತ್ಪನ್ನವಾದಲ್ಲಿ

ಆ ಕಾಮೋಪಸಂಹಾರಕನೇ ಪುರುಷನು,
ಆ ಕಾಮಸಂಹಾರವೇ ದಾಂಪತ್ಯಸುಖವು,
ಅದೇ ಪ್ರಪಂಚಸೃಷ್ಟಿಯು,
ಆ ಸೃಷ್ಟಿಯೇ ಶಿವಶಕ್ತಿಸ್ವರೂಪವಾದ ಸ್ತ್ರೀಪುರುಷರು.
ಸ್ಥೂಲಕ್ಕೆ ಸ್ಥೂಲವಾಗಿರ್ಪನೇ ಶಿವನು,
ಸೂಕ್ಷ್ಮಕ್ಕೆ ಸೂಕ್ಷ್ಮವಾಗಿರ್ಪುದೇ ಶಕ್ತಿಯು, ಮಿಥ್ಯವೇ ಬ್ರಹ್ಮನು.
ಅದೆಂತೆಂದೊಡೆ :
ಸ್ವಕೀಯಾನುಭವಯೋಗ್ಯಮಾದುದೆಲ್ಲ ಸೂಕ್ಷ್ಮ, ಅದೇ ರಕ್ಷಣಕರ್ತೃ,
ತತೋಧಿಕವಾದುದೆಲ್ಲ ಸ್ಥೂಲ, ಅದೇ ಸಂಹಾರಕರ್ತೃ,
ಇಲ್ಲದುದೆಲ್ಲ ಮಿಥ್ಯಾ, ಅದೇ ಸೃಷ್ಟಿಕರ್ತೃ,
ಜಗತ್ಸೃಷ್ಟಿಕಾಲದಲ್ಲಿ ಮಹಾಶಕ್ತಿಯೊಳ್ಮಹಾಕಾಮವನ್ನು ಹುಟ್ಟಿಸಿ,
ವಿರಾಡ್ರೂಪದಲ್ಲಿ ಶಿವಶಕ್ತಿಗಳೇಕವಾಗಿ,
ಕ್ರೀಡಿಸುತ್ತಿರ್ಪುದೇ ಸ್ಥೂಲಶರೀರವು.
ಅಂತಪ್ಪ ಶಿವಶಕ್ತಿಗಳೇ ಸ್ತ್ರೀಪುರುಷರೂಪವಾಗಿ,
ಸೃಷ್ಟಿಸ್ಥಿತಿಸಂಹಾರಗಳೆಂಬ ಮಿಥ್ಯಾಪ್ರಭೆಯಲ್ಲಿ
ತಿರುಗುತ್ತಿರ್ಪ ಪ್ರಪಂಚವೇ ಸೂಕ್ಷ್ಮಶರೀರವು.
ಆ ಮಿಥ್ಯೆಯೇ ಪೀಠವಾಗಿ, ಆ ಶಕ್ತಿಯೇ ಪಾಣಿಬಟ್ಟಲಾಗಿ,
ಆ ಶಕ್ತಿಮಧ್ಯದಲ್ಲಿ ಪ್ರಕಾಶಿಸುತ್ತಿರ್ಪ ಮಹಾಲಿಂಗವೇ ಕಾರಣಶರೀರವು.
ಇಂತು ಸ್ಥೂಲ ಸೂಕ್ಷ್ಮ ಕಾರಣರೂಪದಲ್ಲಿ ಕ್ರೀಡಿಸುತ್ತಿರ್ಪ
ನಿನ್ನ ಮಹಾನಟನೆಯಂ ಕಾಣದಿರುವ ಕಷ್ಟಮಲ್ಲದೆ
ನೀನು ನಾನೆಂಬ ಭೇದಮುಂಟೇ ?
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೯೦ ॥

೧೯೨

ಅಖಂಡಪರಿಪೂರ್ಣವಾಗಿ ಸಕಲವೂ ತಾನೇ ಆಗಿರ್ಪ ಸದಾಶಿವನು,
ಸಕಲ ಸುಖದುಃಖಾದ್ಯನುಭವಂಗಳನನುಭವಿಸುತ್ತಾ,
ನಿತ್ಯಾನಂದಮಯನಾಗಿರ್ಪನದೆಂತೆಂದೊಡೆ :
ಸ್ತ್ರೀವಂಶಗತನಾದವಂಗೆ ನಖಕ್ಷತ, ದಂತಕ್ಷತ, ತಾಡನ, ಅರ್ಥವ್ಯಯಾದಿ
ಸಕಲ ಸುಖ ದುಃಖಂಗಳು ಸುಖರೂಪವಾಗಿ ತೋರುತ್ತಿರ್ಪಂತೆ.
ಮಹಾದೇವಿಯೊಡನೆ ಕ್ರೀಡಿಸುತ್ತಿರ್ಪ ಶಿವನಿಗೆ
ಸಕಲಸುಖದುಃಖಂಗಳಾನಂದಜನಕವಾಗಿರ್ಪವು.
ಜೀವಾಂಶಗಳಾಗಿರ್ಪ ಗುಣಂಗಳು ಆ
ಜೀವಸ್ವರೂಪಸ್ವಭಾವವನರಿಯದಿರ್ಪಂತೆ,
ನಿನ್ನ ಮಹಿಮೆಯಂ ಕಿಂಚಿತಜ್ಞನಾದ ನಾನೆತ್ತ ಬಲ್ಲೆನು ?

ಮನವಂ ಜಯಿಸಬಲ್ಲ ಸರ್ವಜ್ಞನಾದ ಜೀವನು
ಗುಣಂಗಳು ಮಾಡಿದ ದುಷ್ಕರ್ಮಂಗಳಂ ಹೊಂದದೆ
ಸ್ವಸ್ವರೂಪದಲ್ಲಿ ಪ್ರಕಾಶಿಸುತ್ತಿರ್ಪಂತೆ,
ಬ್ರಹ್ಮಾದಿ ಸಕಲಪ್ರಪಂಚವಂ ಸಂಹರಿಸಲು ಶಕ್ತನಾದುದರಿಂ
ಜೀವರು ಮಾಡಿದ ದುಷ್ಕರ್ಮಂಗಳು ನಿನ್ನಂ ಹೊಂದದೆ,
ಸಕಲವೂ ನೀನೆಯಾಗಿರ್ಪ ನಿನ್ನ ಮಹಿಮೆಯು
ನನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೯೧ ||

೧೯೩

ಹ ಶಬ್ದಕ್ಕೆ ಹರಣಾರ್ಥವು, ಸ ಶಬ್ದಕ್ಕೆ ಯೋಗಾರ್ಥವು ಇರುವದು.
ಆದುದರಿಂ ಸಂಹಾರಮೂರ್ತಿಯಾದ ರುದ್ರನೇ ಹ ಶಬ್ದ,
ವಿಶ್ವಮೂರ್ತಿಯಾದ ವಿಷ್ಣುವೇ ಸ ಶಬ್ದ,
ಅವೆರಡು ಶಿವಶಕ್ತಿಗಳಾಗಿಹವು.
ಒಂದು ಕೂಡಿಸುತ್ತಿಹುದು, ಒಂದು ಅಗಲಿಸುತ್ತಿಹುದು,
ಎರಡೂ ಕೂಡಿ ಹಸವಾಗಿಹುದು.
ಹಸ ಹಸನೇ ಎಂಬ ಧಾತುವಿನಿಂ, ಹಸ ಎಂದರೆ ಕ್ರೀಡೆ,
ಅವೆರಡರ ಕ್ರೀಡಾಮಧ್ಯದಲ್ಲೊಂದು ಮಿಥ್ಯಾಬಿಂದುವು ಜನಿಸಿತ್ತು,
ಅದು ಒಂದರಲ್ಲಿ ಕೂಡಿದಲ್ಲದೆ ಕಾರ್ಯಕಾರಿಯಾಗದೆ
ಉಚ್ಚಾರಣೆಗೆ ಯೋಗ್ಯವಲ್ಲದಿಹುದು.
ದಶಸ್ಥಾನವೇ ತಾನಾಗಿ ಲೆಕ್ಕಗಳಂ ಸೃಷ್ಟಿಸುತ್ತಿರ್ಪುದರಿಂ
ಬಿಂದುನಾಮವಾದುದರಿಂದದೇ ಸೃಷ್ಟಿಕರ್ತೃವಾಗಿ
ಉತ್ತರಮುಖದಲ್ಲಿ ವ್ಯರ್ಥವಾಗಿ ದಕ್ಷಿಣಮುಖದಲ್ಲರ್ಥವಂ ಕೊಡುತ್ತಿರ್ಪುದರಿಂ
ಹಕಾರದೊಡನೆ ಕೂಡಿ, ಹಂ ಎಂಬುದಾಗಿ,
ರಜೋಮೂರ್ತಿಯಲ್ಲಿ ವಿರಮಿಸಿ ತ್ರಿಮೂರ್ತ್ಯಾತ್ಮಕವಾದ
ಪರಬ್ರಹ್ಮವೇ ತಾನೆಂದಹಂಕರಿಸುತ್ತಿರ್ಪುದಾದುದರಿಂ
ಹಂಸ ಶಬ್ದಕ್ಕಾ ಮೂರ್ತ್ಯಾತ್ಮಕವೇ ಅರ್ಥವು.
ಸೂರ್ಯನು ತ್ರಿಮೂರ್ತ್ಯಾತ್ಮಕನಾದುದರಿಂ
ಹಂಸವೆಂಬ ನಾಮವಂ ಹೊಂದಿದನು.
ತ್ರಿಗುಣಾತ್ಮಕನಾದುದರಿಂ ಜೀವನಿಗೆ ಹಂಸ ಎಂಬ ನಾಮವಾಯಿತ್ತು.
ಪೂರಕವೇ ಹಕಾರ, ರೇಚಕವೇ ಸಕಾರ, ಕುಂಭಕವೇ ಬಿಂದು.
ಇಂತಪ್ಪ ನಿಜಸ್ವರೂಪವಾದ ಹಂಸ ಶಬ್ದವನ್ನು
ನಾಸಿಕಾಗ್ರದಲ್ಲಿ ವಾಯುರೂಪಿಯಾದ ಜೀವನು ನಡೆಸುತ್ತಿರ್ಪನು.
ಪೂರಕವು ಆತ್ಮಚಕ್ರವಂ ಭ್ರಮಿಸಿ ಶರೀರವಂ ಸಂಹರಿಸುತ್ತಿರ್ಪುದು,

ರೇಚಕವು ವಿಸರ್ಜನೆಯಂ ಮಾಡಿ ಶರೀರವಂ ರಕ್ಷಿಸುತ್ತಿರ್ಪುದು,
ಕುಂಭಕವು ನಾನಾಗುಣಂಗಳಂ ಸೃಷ್ಟಿಸುತ್ತಿರ್ಪುದು.
ರೇಚಕವು ನಾಸಿಕವಂ ವಿಕಸನಗೊಳಿಸುತ್ತಿರ್ಪುದರಿಂ,
ಪೂರಕವು ಮುಕುಳಿತವನ್ನಾಗಿ ಮಾಡುತ್ತಿರ್ಪುದರಿಂ,
ಆ ರೇಚಕವೇ ವಿಷ್ಣುಸ್ವರೂಪು ಪೂರಕವೇ ಶಿವಸ್ವರೂಪು.
ರೇಚಕವಂ ಬಿಟ್ಟು ಪೂರಕವಂ ಸಾಧಿಸಿದ ಪುರುಷನೇ
ಮಹಾಯೋಗಿಯಾಗಿ ತಾನೇ ಬ್ರಹ್ಮಸ್ವರೂಪಿಯಾಗುವನು.
ನಿನ್ನಂ ಸಾಧಿಸಿದವರು ನಿನ್ನಂತಪ್ಪರು.
ನಿನ್ನನ್ನೇ ಪೂಜಿಸಿ ನಿನ್ನನ್ನೇ ಸಾಧಿಸುತ್ತಿರ್ಪ ಮಹಿಮರು
ನಿನ್ನಂತಪ್ಪುದೇನಚ್ಚರಿಯೇ?
ಇಂತಪ್ಪ ನಿಜಾನಂದಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ‖ ೬೨ ‖

೧೦೯೪

ಗುರುವೇ ಪರಬ್ರಹ್ಮವು.
ಅದೆಂತೆಂದೊಡೆ:
ಲಲಾಟದಲ್ಲಿರ್ಪ ಆತ್ಮನಂ ಭಸ್ಮತೇಜೋಮುಖದಿಂ ಕರಗ್ರಸ್ತವಂ ಮಾಡಿ,
ಹಸ್ತಮಸ್ತಕಸಂಗದಿಂ ಬ್ರಹ್ಮಸ್ಥಾನದಲ್ಲಿ ಭಾವಮಧ್ಯದಲ್ಲಿಂಬಿಟ್ಟು
ಆ ವಸ್ತುವೇ ಶಿವನೆಂದು ಕರ್ಣೋಪದೇಶಮಂ ಮಾಡಿ,
ಆ ವಸ್ತು ಹ್ಯಾಂಗಿರ್ಪುದೆಂದರೆ ಹೀಂಗಿರ್ಪುದೆಂದು
ಸಾಕಾರಮೂರ್ತಿಯಾದ ಲಿಂಗಮಂ ಕರದಲ್ಲಿ ಕೊಟ್ಟು,
ಒಳಗಿರ್ಪ ಮಂತ್ರವೂ ಹೊರಗಿರ್ಪ ಲಿಂಗವೂ
ಭಾವದಲ್ಲೊಂದೆಯಾಗಿ ಪ್ರಕಾಶಿಸುವಂತೆ ಮಾಡಿ,
ಅಂತಃಕರ್ಮವು ಮಂತ್ರದಿಂ, ಬಾಹ್ಯಕರ್ಮವು ಲಿಂಗದಿಂ
ಪೂತವಾಗಿರ್ಪ ವಾಸನೆಯಳಿದು, ಲಿಂಗಪ್ರಸಾದೋಪಭೋಗದಿಂ
ಕರಣಂಗಳೆಲ್ಲಾ ಲಿಂಗದಕಿರಣಂಗಳಾಗಿ ಲಿಂಗಾನುಭವಸುಖದಿಂ
ತನ್ನಂ ಮರೆತು ಲಿಂಗವೇ ತಾನಾಗಿರ್ಪವನೇ ಜಂಗಮವು.
ಲಿಂಗಯಂತ್ರದಲ್ಲಿ ಮಂತ್ರ ಬೀಜಾಕ್ಷರವನಿಂಬಿಟ್ಟು,
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂ ಪೂಜಿಸುತ್ತಿರ್ಪಾತನೇ ಭಕ್ತನು.
ಗುರುವೆಂಬ ಪರಬ್ರಹ್ಮದಲ್ಲಿ ಜಂಗಮ ಲಿಂಗ ಭಕ್ತರೆಂಬ
ಮೂರು ಮೂರ್ತಿಗಳುತ್ಪನ್ನರಾಗಿ,
ಭಕ್ತನು ಕರ್ಮವಂ ಸೃಷ್ಟಿಸುತ್ತಿರ್ಪನು,
ಲಿಂಗವು ತತ್ಕರ್ಮವಂ ರಕ್ಷಿಸುತ್ತಿರ್ಪುದು,
ಜಂಗಮವು ಆ ಸತ್ಕರ್ಮಮುಖದಿಂ ಬಂದ ಪದಾರ್ಥಗಳನ್ನು

ಉಪಭೋಗವ್ಯಾಜದಿಂ ಸಂಹರಿಸುತ್ತಿರ್ಪನು.
ಸೃಷ್ಟಿಕರ್ತೃವೇ ಸ್ಥೂಲವೂ ಸ್ಥಿತಿಕರ್ತೃವೇ ಸೂಕ್ಷ್ಮವೂ
ಸಂಹಾರಕರ್ತೃವೇ ಕಾರಣವೂ ಆದುದರಿಂದ,
ಸ್ಥೂಲಕ್ಕೆ ಸೂಕ್ಷ್ಮವೇ ಚೈತನ್ಯವು,
ಸೂಕ್ಷ್ಮಕ್ಕೆ ಕಾರಣವೇ ಚೈತನ್ಯವು,
ಆ ಕಾರಣವಿದ್ದಂತಿರ್ಪುದು.
ಸಕಲಶರೀರಕ್ಕೂ ಶಿರಸ್ಸೇ ಕಾರಣಮಾಗಿರ್ಪಂತೆ,
ಲಿಂಗಭಕ್ತರಿಗೆ ಜಂಗಮವೇ ಕಾರಣಮಾಗಿ,
ಜಂಗಮೋಪಭೋಗದಿಂ ಲಿಂಗವು ತೃಪ್ತಿಗೊಳ್ಳುತ್ತಿರ್ಪುದಾದುದರಿಂದ
ಜಂಗಮಪೂಜೆಯೇ ಸಕಲಕ್ಕೂ ಕಾರಣಮಾಯಿತ್ತು.
ಕಾರಣಶರೀರವಂ ಹೊಂದುವದೇ ಸೂಕ್ಷ್ಮವು,
ಅದೇ ಸ್ವರೂಪಜ್ಞಾನವು, ಅದೇ ಅಭೇದವು,
ಅಂತಪ್ಪ ಜಂಗಮನ ಸೇವೆ ಎನಗೆ ಸಾಧ್ಯಮಪ್ಪಂತೆ ಮಾಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೯೩ ||

೧೯೫

ಹೃದಯದಲ್ಲಕ್ಷರಂಗಳಿರ್ಪಂತೆ ಆತ್ಮನಲ್ಲಿ ಪ್ರಪಂಚಮಿರ್ಪುದು,
ಆತ್ಮನಲ್ಲಾಕಾಶವು ಪುಟ್ಟಿ ಆತ್ಮನಲ್ಲಿಯೇ ಅಡಗುವಂತೆ,
ಹೃದಯದಲ್ಲಕ್ಷರಂಗಳು ಪುಟ್ಟಿ, ಹೃದಯದಲ್ಲಡಗುತ್ತಿರ್ಪವು.
ಸ್ವಕೀಯರೂಪಂಗಳಾದ ಅಕ್ಷರಂಗಳಂ
ಜಿಹ್ವಾಮುಖದಲ್ಲಿ ಸೃಷ್ಟಿಸಿ, ಶ್ರೋತ್ರಮುಖದಲ್ಲಿ ರಕ್ಷಿಸಿ,
ತಾನೇ ಉಪಸಂಹಾರವಂ ಮಾಡಿ, ಎಲ್ಲಕ್ಕೂ ತಾನೇ ಕಾರಣಮಾಗಿರ್ಪಂತೆ.
ಪ್ರಪಂಚಕ್ಕೆ ಪರಮನೇ ಕಾರಣಮಾಗಿರ್ಪನು.
ಅಕ್ಷರಂಗಳನೊಡೆದು ಅದರಲ್ಲಿದ್ದರ್ಥವಂ ವಿಚಾರಿಸಿ,
ನಿಸ್ಸಂದೇಹಪದಾರ್ಥವಂ ಗ್ರಹಿಸಿ, ಸಂಶಯಪದಾರ್ಥವಂ ಮಥಿಸಿ,
ಶಬ್ದಮುಖಕ್ಕೆ ಹಾಕುವಂತೆ,
ಶಿವನು ಮುಕ್ತರಂ ಗ್ರಹಿಸಿ ಪ್ರಕೃತಿಯುಕ್ತರಂ ಭವದಲ್ಲಿ ಬೀಳಿಸುತ್ತಿರ್ಪನು.
ಹೃದಯವು ಶಬ್ದಮುಖದಲ್ಲಿ ಭಾವಜ್ಞರಿಗೆ ತೋರುತ್ತಿರ್ಪಂತೆ.
ಪ್ರಪಂಚಮುಖದಲ್ಲಿ ಪರಮನು ದಿವ್ಯಜ್ಞಾನಿಗಳಿಗೆ ತೋರುತ್ತಿರ್ಪನು.
ವಾಕ್ಯದಲ್ಲಿರ್ಪ ಜ್ಯೋತಿಯು ಹೃದಯದಲ್ಲಿರ್ಪ ತಮಸ್ಸಂ ಕೆಡಿಸಿದಲ್ಲಿ;
ಆ ವಾಕ್ಯವೂ ಹೃದಯವೂ ಏಕಮಾಗಿ ಪ್ರಕಾಶಿಸುತ್ತಿರ್ಪಂತೆ,
ಶಿವಜ್ಞಾನಿಗಳಲ್ಲಿರ್ಪ ಮನಸ್ಸು ಶಿವನಲ್ಲಿ ಲಯವಾದಲ್ಲಿ;
ಸಕಲಪ್ರಪಂಚವೂ ಶಿವಸ್ವರೂಪಮಾಗಿ, ಎಲ್ಲವೂ ಒಂದೆಯಾಗಿರ್ಪುದು.
ಆ ವಾಕ್ಯದಲ್ಲಿ ಪ್ರಪಂಚವು ಶಬ್ದವಾಗಿರ್ಪಂತೆ,

ಹೃದಯದಲ್ಲಿ ಪರಮನು ಬದ್ಧನಾಗಿರ್ಪನು.
ವಾಕ್ಯದಿಂದ ಕರ್ಮವು ಹುಟ್ಟುತ್ತಿಹುದು.
ಆ ಕರ್ಮಕ್ಕೆ ಪ್ರಪಂಚವೇ ಕಾರಣವಾಗಿರ್ಪಂತೆ,
ಹೃದಯದಲ್ಲಿ ಜ್ಞಾನವು ಪುಟ್ಟುತ್ತಿರ್ಪುದು.
ಆ ಜ್ಞಾನಕ್ಕೆ ಶಿವನೇ ಕಾರಣವಾಗಿರ್ಪನು.
ದುಷ್ಕರ್ಮದಿಂ ಪ್ರಪಂಚಮುಖದಲ್ಲಿ ಯಾತನೆಬಡುತ್ತಿರ್ಪಂತೆ,
ಅಜ್ಞಾನದಿಂದಾತ್ಮಮುಖದಲ್ಲಿ ಯಾತನೆಬಡುತ್ತಿರ್ಪನು.
ಸತ್ಕರ್ಮದಿಂ ಬಾಹ್ಯಪ್ರಪಂಚದಲ್ಲಿ ಸಕಲೈಶ್ವರ್ಯಗಳನನುಭವಿಸುತ್ತಿರ್ಪಂತೆ,
ಸುಜ್ಞಾನದಿಂ ಹೃದಯಂಗಮವಾಗಿರ್ಪ
ಶಿವಾನಂದಸುಖವನನುಭವಿಸುತ್ತಿರ್ಪನು.
ತಮಸ್ಸನ್ನಳಿದ ಪ್ರಪಂಚವೂ ಪರಮನೂ ಏಕವಾಗಿರ್ಪಂತೆ,
ಸಂಶಯವಳಿದಲ್ಲಿ ಕರ್ಮಜ್ಞಾನಗಳೊಂದೇ ಆಗಿ ತೋರುತ್ತಿರ್ಪುದು.
ಅಂತಪ್ಪ ಕರ್ಮಕರ್ತೃವಾಗಿ ಮಂತ್ರಚೈತನ್ಯವಾಗಿರ್ಪುದೇ ಇಷ್ಟಲಿಂಗವು,
ಜ್ಞಾನಕರ್ತೃವಾಗಿ ಹೃದಯವೇ ಚೈತನ್ಯವಾಗಿರ್ಪುದೇ ಪ್ರಾಣಲಿಂಗವು.
ಇಂತಪ್ಪ ಇಷ್ಟ ಪ್ರಾಣ ಕರ್ಮ ಜ್ಞಾನ ಪ್ರಪಂಚಪರಮರೆಂಬ
ಭೇದಬುದ್ಧಿಯಳಿದು,
ಭಾವದಲ್ಲೊಂದೇ ಅಖಂಡಜ್ಯೋತಿಯಾಗಿ ಪ್ರಕಾಶಿಸುತ್ತಿರ್ಪ
ಅಭೇದಾನಂದ ನಿರ್ವಾಣಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೯೪ ॥

೧೦೯೬

ಪೂರ್ವಾದಿಯಾಗಿ ವಾಯವ್ಯಪರ್ಯಂತವೂ ಸ್ವರ್ಗವು,
ಆಗ್ನ್ಯಾದಿಯಾಗಿ ವರುಣದಿಕ್ಪರ್ಯಂತವೂ ಪಾತಾಳವು,
ಅದೇ ಉತ್ತರ, ಇದೇ ದಕ್ಷಿಣವೆನಿಸಿರ್ಪುದು.
ಮಧ್ಯದೊಳಿರ್ಪ ಮೇರುವಂ ಪರಿವೇಷ್ಟಿಸಿರ್ಪ
ಭೂಮಿಯೇ ಮರ್ತ್ಯಲೋಕವು.
ಇಂತಪ್ಪ ಸ್ವರ್ಗಪಾತಾಳಂಗಳಲ್ಲಿಂದ್ರ ಯಮರು ಕರ್ತೃಗಳಾಗಿ
ಸುಖದುಃಖಂಗಳಿಗೆ ಕಾರಣವಾಗಿಹರು.
ಮರ್ತ್ಯದಲ್ಲಿ ಜೀವರೇ ಕರ್ತೃಗಳಾಗಿ ಸ್ವತಂತ್ರರಾಗಿ ಕರ್ಮಗಳಂ ಮಾಡಿ
ಪುಣ್ಯಪಾಪಂಗಳಂ ಸಂಪಾದಿಸಿ,
ಉತ್ತರದಕ್ಷಿಣಗಳಲ್ಲಿ ಸುಖದುಃಖಗಳನನುಭವಿಸುತ್ತಿರ್ಪರು
ಅದೆಂತೆಂದೊಡೆ :
ಈ ಮರ್ತ್ಯದಲ್ಲಿರ್ಪ ಅನೇಕ ಲಕ್ಷ ಭೇದವಡೆದ ಜೀವಜಾಲಂಗಳೊಳಗೆ
ಮನುಷ್ಯಜನ್ಮವು ಸಂಪಾದ್ಯಕರ್ಮಕಾರಣವಾಗಿರ್ಪುದು.

ಸತ್ಕರ್ಮಸವೆದ ಹೀನವೂ ದುಷ್ಕರ್ಮಸವೆದ ಶ್ರೇಷ್ಠವೂ
ಮನುಷ್ಯಶರೀರಮಪ್ಪುದು.
ಇಂತಪ್ಪ ಸಂಧಿಕಾಲದಲ್ಲತಿಸೂಕ್ಷ್ಮವಾಗಿರ್ಪ ಮನುಷ್ಯಜನ್ಮದಲ್ಲಿ
ಜೀವನು ಸ್ವತಂತ್ರನಾಗಿರುತ್ತಿರಲು,
ಶತ್ರುರೂಪರಾದ ಯಮದೂತರೂ ಮಿತ್ರರೂಪರಾದ ದೇವದೂತರೂ
ದಕ್ಷಿಣೋತ್ತರಪಾರ್ಶ್ವಂಗಳಲ್ಲಿ ಒಬ್ಬೊಬ್ಬರಿಗಿಬ್ಬಿಬ್ಬರಾಗಿದ್ದುಕೊಂಡು,
ಜೀವರು ಮಾಡಿದ ಸತ್ಕರ್ಮ ದುಷ್ಕರ್ಮಗಳಿಗನುಭವನೀಯ
ಕಾರಣರಾಗಿರಲೀ ಸ್ವತಂತ್ರರೂಪವಾದ ಮನುಷ್ಯಶರೀರವು
ಪೂರ್ವಕರ್ಮದ ಕೂಡ ಲಯವಾದಲ್ಲಿ,
ಈ ಮನುಷ್ಯಜನ್ಮದಲ್ಲಿ ಮಾಡಿದ ಸತ್ಕರ್ಮ ದುಷ್ಕರ್ಮಂಗಳು
ಅನುಭವಕಾರಣವಾದುದರಿಂ ಆ ಸತ್ಕರ್ಮಂಗಳಿಂ
ಕೂಡಿ ಶರೀರವಂ ಬಿಟ್ಟಲ್ಲಿ,
ಯಾವ ಕರ್ಮವು ಸ್ವಲ್ಪವೋ ಆ ಕರ್ಮವೇ ಜೀವನಿಗೆ ಮುಂದಾಗಿ,
ಅನುಭವಶರೀರವಾಗಿ, ಜೀವನು ಆ ಶರೀರವಂ ಪ್ರವೇಶಿಸಿದಲ್ಲಿ
ಅದು ದೇವಶರೀರಮಾದರೆ,
ಅದನ್ನು ದೇವದೂತರು ಅಪ್ರದಕ್ಷಿಣಮಾಗಿ ದೇವಲೋಕಕ್ಕೆ
ಕೊಂಡುಹೋಗಲು,
ಆ ಸುಖಾನುಭವದಿಂದ ಆ ಶರೀರವು ಸವೆದು,
ದುಷ್ಕರ್ಮಮಯವಾದ ಪ್ರೇತಶರೀರವನಾಂತಲ್ಲಿ
ವಾಯವ್ಯಕ್ಕೆ ಕೊಂಡುಹೋಗಿ ವರುಣದಿಕ್ಕಿನಲ್ಲಿ
ಮುಂದಾಗಿಬಂದು ಕಾದಿರ್ಪ ಯಮದೂತರ ವಶಕ್ಕೆ ಕೊಟ್ಟಲ್ಲಿ
ಆ ದುಷ್ಕರ್ಮವು ತೀರುವವರೆಗೂ ಯಮಯಾತನೆಗಳನನುಭವಿಸಿ,
ಆ ದುಷ್ಕರ್ಮಶೇಷದಿಂದ ಮರ್ತ್ಯಲೋಕದಲ್ಲಿ
ಹೀನಜನ್ಮಗಳನೆತ್ತುತ್ತಾ ಇಹನು.
ಪ್ರೇತಶರೀರವಂ ಮುಂದಾಗಿ ಪ್ರವೇಶಿಸಿದಲ್ಲಿ
ಯಮದೂತರು ಪ್ರದಕ್ಷಿಣಮಾರ್ಗದಲ್ಲಿ ಯಮಲೋಕಕ್ಕೆ ಕೊಂಡುಹೋಗಲು,
ಯಾತನೆಗಳಿಂದಾಶರೀರವು ಸವೆದು,
ಸತ್ಕರ್ಮಮಯಮಾದ ದೇವಶರೀರವನಾಂತಲ್ಲಿ
ವರುಣದಿಕ್ಕಿಗೆ ಕೊಂಡುಹೋಗಿ,
ಮುಂದಾಗಿ ಬಂದು ಕಾದಿರ್ಪ ದೇವದೂತನ ವಶಕ್ಕೆ ಕೊಟ್ಟಲ್ಲಿ
ಆ ಶರೀರವು ದೇವಲೋಕವಂ ಸೇರಿ ಸಕಲ ಸುಖಂಗಳನನುಭವಿಸಿ,
ಮರ್ತ್ಯಲೋಕದೊಳಗೆ ದಿವ್ಯಶರೀರಂಗಳನೆತ್ತುತ್ತಿಹನು.
ಇವೆರಡೂ ತೀರದಲ್ಲಿ ಕರ್ಮಭೂಮಿಯಲ್ಲಿ ಮನುಷ್ಯಶರೀರವನೆತ್ತುತ್ತಲೇ
ದೇವದೂತ ಯಮದೂತರು ಬಂದು ಕಾವುತ್ತಿಹರು.

ಅಪ್ರದಕ್ಷಿಣನಿಗೆ ಸತ್ಕರ್ಮವೇ ಸೂಕ್ಷ್ಮಶರೀರವಾಗಿ,
ದುಷ್ಕರ್ಮವೇ ಕಾರಣಶರೀರವಾಗಿಹುದು.
ಪ್ರದಕ್ಷಿಣನಿಗೆ ದುಷ್ಕರ್ಮವೇ ಸೂಕ್ಷ್ಮಶರೀರವಾಗಿಹುದು.
ಅನುಭವಿಸಿಬಿಟ್ಟುದೇ ಕಾರಣವು, ಅನುಭವಿಸುವುದೇ ಸ್ಥೂಲವು,
ಅನುಭವಿಸತಕ್ಕುದೇ ಸೂಕ್ಷ್ಮವು.
ಇಂತು ಒಂದಕ್ಕೊಂದು ಸ್ಥೂಲ ಸೂಕ್ಷ್ಮ ಕಾರಣಂಗಳಾಗಿ,
ಭೂತಭವಿಷ್ಯದ್ವರ್ತಮಾನ ಕಾಲಂಗಳೊಳಗೆ ಕೂಡಿ,
ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಜೀವನಿಗೆ ಭವರೂಪವಾಗಿರ್ಪವು.
ಇಂತು ಪ್ರದಕ್ಷಿಣಾಪ್ರದಕ್ಷಿಣವಾಗಿ
ದೇವಯಮದೂತರೊಡನೆ ಕೂಡಿ ತಿರುಗುತ್ತಿರ್ಪ ಜೀವಗಳಿಗೂ
ಸ್ವರ್ಗ ನರಕಂಗಳಲ್ಲಿ ಸುಖದುಃಖಗಳನನುಭವಿಸುತ್ತಿರ್ಪ ಜೀವಗಳಿಗೂ
ಮರ್ತ್ಯದಲ್ಲಿ ಸೃಷ್ಟಿ ಸ್ಥಿತಿ ಸಂಹಾರಂಗಳಂ ಹೊಂದುತ್ತಿರ್ಪ ಜೀವಗಳಿಗೂ
ನಿಲುಕಡೆಯಿಲ್ಲದೆ ಇರುವುದು.
ಇಂತಪ್ಪ ಸ್ವರ್ಗ ಮರ್ತ್ಯ ಪಾತಾಳಂಗಳಿಗೆ
ಉತ್ತರಾಯಣವಾಗಿ ದಿನರೂಪವಾಗಿ,
ದಕ್ಷಿಣಾಯನವಾಗಿ ಆಕಾಶಮಾರ್ಗದಲ್ಲಿ ನಕ್ಷತ್ರಯುಕ್ತವಾಗಿ ಭ್ರಮಿಸುತ್ತಾ,
ಆಯಾ ಲೋಕಂಗಳಿಗೆ ಆಯಾ ಕಾಲಂಗಳಂ ಸೃಷ್ಟಿಸುತ್ತಿರ್ಪನೇ ಸೂರ್ಯನು.
ಇಂತು ಪ್ರಥಮದಲ್ಲಿ ಸುಖವೂ,
ಅಂತ್ಯದಲ್ಲಿ ದುಃಖವೂ ಉಳ್ಳ ಅಪ್ರದಕ್ಷಿಣವೇ ಶಕ್ತಿಯು.
ಪ್ರಥಮದಲ್ಲಿ ದುಃಖವೂ ಅಂತ್ಯದಲ್ಲಿ ಸುಖವೂ ಉಳ್ಳ ಪ್ರದಕ್ಷಿಣವೇ ಶಿವನು.
ಇಂತಪ್ಪ ಶಿವಶಕ್ತ್ಯಾತ್ಮಕವೇ ಸಕಲ ಪ್ರಪಂಚವು.
ಅಂತಪ್ಪ ಪ್ರಥಮಾನಂದವುಳ್ಳ ಶಕ್ತಿರೂಪವಾದ
ಪ್ರಪಂಚಸುಖವನ್ನು ಶಿವನಿಗರ್ಪಿಸಿ,
ಅತ್ಯಾನಂದಜನಕಂಗಳಾದ ವ್ರತ ಪೂಜಾದಿಗಳನ್ನಾಚರಿಸುತ್ತಾ,
ಯಮದೂತ ದೇವದೂತರ ಬಲೆಗೆ ಸಿಕ್ಕದೆ,
ಮಧ್ಯದಲ್ಲಿರ್ಪ ಸೂರ್ಯಮಂಡಲವಂ ಭೇದಿಸಿ ತನ್ಮಾರ್ಗದಲ್ಲಿ ಗಮಿಸಿ,
ತದುಪರಿ ಪ್ರಕಾಶಿಸುತ್ತಿರ್ಪ ಮುಕ್ತಿಸತಿಯಸಂಗದಲ್ಲಿ
ಪರವಶವಾಗಿರ್ಪುದೇ ಮೋಕ್ಷವು ; ಶಿವನೇ ತಾನಪ್ಪನು.
ಇಂತಪ್ಪ ಸತ್ಕರ್ಮಂಗಳನರಿದರ್ಪಿಸುತ್ತಾ ಚರಿಸುವಂತೆನ್ನಂ ಮಾಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೯೫ ॥

## ಒಂಬತ್ತನೆಯ ಅಧ್ಯಾಯ

೧೯೭೭

ಆಧಾರಾದಿ ಷಟ್ಚಕ್ರಂಗಳ ವಿವರಮೆಂತೆಂದೊಡೆ :
ಆಚಾರಕ್ಕಾಶ್ರಮಂಗಳೇ ಆಧಾರವು,
ಅದು ಬ್ರಹ್ಮಚರ್ಯಾದಿ ಚತುರ್ದಳಂಗಳಿಂದೊಪ್ಪುತ್ತಿಹುದು.
ತದಾಚಾರಸೇವಕನೇ ಭಕ್ತನು.
ಶ್ರದ್ಧೆಯೇ ಚೈತನ್ಯವು, ಚಿತ್ತವೇ ಹಸ್ತ
ಚಿತ್ತವೆಂದರೆ ನಿಯಮಜ್ಞಪ್ತಿಜ್ಞಾನ,
ಆಶ್ರಮಂಗಳಿಗೆ ಪೃಥ್ವಿಯೇ ಮೂಲ,
ಇವಕ್ಕೆ ಪ್ರಾಣವೇ ಆಧಾರವಾಗಿ ನಾಸಿಕವನನುಸರಿಸಿರ್ಪುದು.
ಗುದವೇ ಸ್ಥಾನ, ಇದಕ್ಕೆ ವಾಸಾಂತವೇ ಬೀಜವು.
ಗುರುವಿಗೆ ಷಟ್ಕರ್ಮಗಳೇ ಸ್ವಾಧಿಷ್ಠಾನವು,
ಯಜನಾದಿ ಷಡ್ದಳಂಗಳಿಂದೊಪ್ಪುತ್ತಿಹುದು, ಬಾದಿಲಾಂತವೇ ಬೀಜ,
ತದ್ಗುರುಸೇವಕನೇ ಮಾಹೇಶ್ವರನು
ನಿಷ್ಠೆಯೇ ಚೈತನ್ಯವು, ಬುದ್ಧಿಯೇ ಹಸ್ತವು,
ಕರ್ಮಕ್ಕೆ ಜಲವೇ ಮೂಲವಾದುದರಿಂದ
ಉಪದೇಶಕರ್ತೃವಾದುದರಿಂ ಜಿಹ್ವೆಯನನುಭವಿಸುತ್ತಿರ್ಪುದು.
ಪಾತ್ರಾಪಾತ್ರ ವಿವೇಕಪರಿಶುದ್ಧಿಯಿಂ ಗುಹ್ಯವೇ ಸ್ಥಾನವಾಯಿತ್ತು
ಶಿವನಿಗೆ ದಶೇಂದ್ರಿಯಂಗಳೇ ಮಣಿಪೂರಕ,
ಡಾದಿಫಾಂತವಾದ ಬೀಜದಿಂ ಶ್ರೋತ್ರಾದಿ
ದಶದಳಂಗಳಿಂದೊಪ್ಪುತ್ತಿರ್ಪುದು,
ತಚ್ಛಿವಪೂಜಕನೇ ಪ್ರಸಾದಿಯು.
ವಿದ್ಯೆಯೇ ಚೈತನ್ಯವು, ಅಹಂಕಾರವೇ ಹಸ್ತವು,
ಇಂದ್ರಿಯಂಗಳಿಗಗ್ನಿಯೇ ಮೂಲ,
ದಿಙ್ಮುಖದಿಂ ಬಂದ ಸಕಲಪದಾರ್ಥಗಳನ್ನು
ಇಂದ್ರಿಯಮುಖಂಗಳಲ್ಲಿ ಪೂಜಿಸುತ್ತಿರ್ಪುದರಿಂ
ನೇತ್ರವನನುಸರಿಸುತ್ತಿರ್ಪುದು.
ಇದಕ್ಕೆ ಉದರವೇ ಸ್ಥಾನ,
ತತ್ಪೂರಣವೇ ಮಣಿಪೂರಕ,
ಮಣಿಪೂರಕವೆಂದರೆ ತೇಜೋಭರಿತ.
ತೇಜಸ್ಸೆಂದರೆ ಕಳಾಪದಾರ್ಥ, ಕಳೆಯೆಂದರೆ ರುಚಿ,
ಭರಿತವೆಂದರೆ ಅನುಭವ, ರುಚ್ಯನುಭವವೇ ಮಣಿಪೂರಕವು.
ಜಂಗಮಕ್ಕೆ ದ್ವಾದಶಭಾವಂಗಳೇ ಅನಾಹತವು,

ತನ್ವಾದಿ ದ್ವಾದಶಭಾವಂಗಳೇ ದಳಂಗಳು,
ಕಠಾಂತವೇ ಬೀಜ, ತಜ್ಜಂಗಮಪೂಜಕನೇ ಪ್ರಾಣಲಿಂಗಿಯು.
ಅನುಭವವೇ ಚೈತನ್ನವು, ಮನವೇ ಹಸ್ತ
ಪ್ರಾಣವಾಯುವೇ ಮೂಲ,
ದ್ವಾದಶಭಾವಂಗಳು ಅನುಭವವಾದುದರಿಂದ ತ್ವಕ್ಕನ್ನನುಸರಿಸಿರ್ಪುದು.
ಇದಕ್ಕೆ ಮನೋನಿಗ್ರಹದಿಂ ಹೃದಯವೇ ಸ್ಥಾನವು,
ಉಪದೇಶತತ್ವವೇ ಪ್ರಸಾದವು,
ಆ ಪ್ರಸಾದಕ್ಕೆ ಷೋಡಶಪದಾರ್ಥವೇ ವಿಶುದ್ಧಿ,
ಪ್ರಮಾಣ ಪ್ರಮೇಯಾದಿ ಷೋಡಶಭೇದಂಗಳೇ ದಳಂಗಳು,
ಅಕಾರಾದಿ ಷೋಡಶಸ್ವರಂಗಳೇ ಬೀಜ,
ತತ್ಪ್ರಸಾದಸೇವಕನೇ ಶರಣನು.
ಆನಂದವೇ ಚೈತನ್ಯವು, ಜ್ಞಾನವೇ ಹಸ್ತವು, ಅಕಾರವೇ ಮೂಲ,
ಶಬ್ದಮುಖದಿಂ ತತ್ವವಂ ಗ್ರಹಿಸುತ್ತಿರ್ಪುದರಿಂ ಶ್ರೋತ್ರವನನುಸರಿಸಿರ್ಪುದು.
ತಚ್ಛಬ್ದಂಗಳಿಗೆ ಕಂಠವೇ ಸ್ಥಾನವು,
ಆ ಪರತತ್ವದಿಂ ಪರಿಶುದ್ಧವಾಗಿರ್ಪುದೇ ವಿಶುದ್ಧವು,
ಮಹಾಪ್ರಕಾಶಕ್ಕೆ ಇಷ್ಟಪ್ರಾಣಂಗಳೇ ಆಜ್ಞೇಯವು,
ಬಹಿರಂತರ್ವ್ಯಾಪಕಂಗಳೇ ದಳಂಗಳು, ಅದಕ್ಕೆ ಹಂ ಕ್ಷವೇ ಬೀಜ,
ತದನುಸಂಧಾನಿಯೇ ಐಕ್ಯನು.
ಸಮರಸವೇ ಚೈತನ್ಯವು, ಭಾವವೇ ಹಸ್ತವು, ಆತ್ಮವೇ ಮೂಲ,
ವಿವೇಕಮುಖದಿಂದಾಚರಿಸುತ್ತಿರ್ಪುದರಿಂ ಮನವನನುಸರಿಸಿರ್ಪುದು.
ಇದಕ್ಕೆ ಲಲಾಟವೇ ಸ್ಥಾನ,
ನಮಸ್ಕಾರ ಭಸ್ಮಧಾರಣ ಕ್ರಿಯೆಗಳಿಗೆ ಕಾರಣವಾಗಿರ್ಪುದರಿಂದಲೂ
ಬೀಜಾಕ್ಷರಂಗಳಿಗೆ ಸ್ಥಾನವಾಗಿರ್ಪುದರಿಂದಲೂ ಲಲಾಟವೇ ಕಾರಣವು.
ಅಲ್ಲಿ ಮಹಾಪ್ರಕಾಶವಾಗಿರ್ಪ ಆತ್ಮನನ್ನು
ಚೆನ್ನಾಗಿ ತಿಳಿಯತಕ್ಕದ್ದೇ ಆಜ್ಞೇಯವು,
ಆ ಮಹದಲ್ಲಿ ಚಿಚ್ಛಕ್ತಿ ಬೆರೆಯಲು,
ಆಗ್ನೇಯದಲ್ಲಿ ಇಷ್ಟಪ್ರಾಣಂಗಳೆಂಬ ದ್ವಿದಳಂಗಳು ಪ್ರಕಾಶವಾದವು.
ಪ್ರಸಾದದೊಳ್ಪರಾಶಕ್ತಿ ಬೆರೆಯಲು,
ಷೋಡಶಪದಾರ್ಥಂಗಳೆಂಬ ಷೋಡಶದಳಂಗಳು ವಿಕಸನವಾದವು.
ಸ್ಥಾಣುವಾಗಿರ್ಪ ಶಿವನು ಆದಿಶಕ್ತಿಯೊಳಗೆ ಕೂಡಿ ಜಂಗಮರೂಪಾದಲ್ಲಿ
ದ್ವಾದಶಭಾವಂಗಳೆಂಬ ದ್ವಾದಶದಳಂಗಳು ಪರಿಶುದ್ಧವಾದವು.
ಇಚ್ಛಾಶಕ್ತಿ ಶಿವನೊಳಗೆ ನೆರೆಯಲು,
ದಶೇಂದ್ರಿಯಂಗಳೆಂಬ ದಶದಳಂಗಳು ಪೂರ್ಣವಾದವು.
ಮಂತ್ರಶಕ್ತಿ ಗುರುವಿನಲ್ಲಿ ನೆರೆಯಲು ಷಟ್ಕರ್ಮಂಗಳು ಚೇತನವಾದವು.

ಕ್ರಿಯಾಶಕ್ತಿ ಆಚಾರದೊಳಗೆ ಬೆರೆಯಲು,
ಆಶ್ರಮಧರ್ಮಂಗಳು ಸಾಂಗವಾಯಿತ್ತು.
ಇಂತಪ್ಪ ಆಶ್ರಮಧರ್ಮಕ್ಕೆ ಕರ್ಮವೇ ಕಾರಣವು,
ಆ ಕರ್ಮಕ್ಕೆ ಇಂದ್ರಿಯಂಗಳೇ ಕಾರಣವು,
ಆ ಇಂದ್ರಿಯಂಗಳಿಗೆ ಭಾವವೇ ಕಾರಣವು,
ಆ ಭಾವಕ್ಕೆ ತತ್ವವೇ ಕಾರಣವು,
ಆ ತತ್ವಕ್ಕೆ ಮಹಾಪ್ರಕಾಶವೇ ಕಾರಣವು,
ಆ ಮಹಾಪ್ರಕಾಶಕ್ಕೆ ತತ್ವವೇ ಮೂಲವು,
ಆ ತತ್ವಕ್ಕೆ ಜಂಗಮವೇ ಮೂಲವು,
ಆ ಜಂಗಮಕ್ಕೆ ಲಿಂಗವೇ ಮೂಲವು,
ಲಿಂಗಕ್ಕೆ ಗುರುವೇ ಮೂಲವು,
ಅಂತಪ್ಪ ಗುರುವಿಗೆ ಆಚಾರವೇ ಮೂಲವು.
ಆಚಾರಕ್ಕೆ ನಿವೃತ್ತಿಯೇ ಕಳೆ, ಗುರುವಿಗೆ ಪ್ರತಿಷ್ಠೆಯೇ ಕಳೆ,
ಲಿಂಗಕ್ಕೆ ವಿದ್ಯೆಯೇ ಕಳೆ,
ಜಂಗಮಕ್ಕೆ ಶಾಂತಿಯೇ ಕಳೆ, ಪ್ರಸಾದಕ್ಕೆ ಶಾಂತ್ಯತೀತವೇ ಕಳೆ.
ಮಹಕ್ಕೆ ಉತ್ತರವೇ ಕಳೆ.
ಪೃಥ್ವೀಮೂಲವಾದ ಆಧಾರವೇ ಪಶ್ಚಿಮ,
ಜಲಮೂಲವಾದ ಸ್ವಾಧಿಷ್ಠಾನವೇ ಉತ್ತರ,
ತೇಜೋಮೂಲವಾದ ಮಣಿಪೂರಕವೇ ದಕ್ಷಿಣ,
ವಾಯುಮೂಲವಾದ ಅನಾಹತವೇ ಪೂರ್ವ,
ಸಕಲದಿಕ್ಕುಗಳಲ್ಲಿರ್ಪ ಸಕಲಚಕ್ರಂಗಳಂ ವ್ಯಾಪಿಸಿ
ಆಕಾಶಮೂಲವಾಗಿ ಆಕಾಶದಂತೆ ವಿಶುದ್ಧವಾಗಿರ್ಪುದೇ ವಿಶುದ್ಧಿಚಕ್ರವು.
ಪೃಥ್ವೀಜಲಗಳೆರಡು ಸೃಷ್ಟಿ,
ಅಗ್ನಿವಾಯುಗಳೆರಡು ಸ್ಥಿತಿ, ಆಕಾಶವೇ ಸಂಹಾರ.
ಇಂತಪ್ಪ ಸೃಷ್ಟಿ ಸ್ಥಿತಿ ಸಂಹಾರಂಗಳಂ ಮೀರಿರ್ಪ ಆತ್ಮನೇ
ಹೃದಯಮಧ್ಯದೊಳಾಗ್ನೇಯದಲ್ಲಿ ಮಹವಾಗಿ ಪ್ರಕಾಶಿಸುತ್ತಿರ್ಪನು.
ಅದೇ ತೂರ್ಯ, ಮಿಕ್ಕವೆಲ್ಲಾ ಅವಸ್ಥಾತ್ರಯಂಗಳಾಗಿರ್ಪವು.
ಪೂರ್ವಪಶ್ಚಿಮ ಚಕ್ರಂಗಳಲ್ಲಿ ಪೂರ್ವಪಶ್ಚಿಮರೂಪವಾಗಿ
ಆದ್ಯಂತಗಳನನುಸರಿಸಿರ್ಪ ಕಠಾಂತ ವಶಾಂತಗಳೇ ಬೀಜಗಳಾದವು.
ಮೊದಲನನುಸರಿಸಿರ್ಪುದೇ ದಕ್ಷಿಣವೂ,
ಕಡೆಯನನುಸರಿಸಿರ್ಪುದೇ ಉತ್ತರವೂ
ಆದುದರಿಂ ದಕ್ಷಿಣೋತ್ತರಂಗಳಲ್ಲಿರ್ಪ ಮಣಿಪೂರಕ ಸ್ವಾಧಿಷ್ಠಾನಂಗಳಿಗೆ
ಡಫಾಂತ ಬಾಲಾಂತವೇ ಬೀಜಂಗಳಾಗಿರ್ಪವು
ದಿಕ್ಕುಗಳಲ್ಲಿ ಕೋಣಗಳು ವ್ಯಾಪ್ತವಾಗಿರ್ಪಂತೆ,

ವ್ಯಂಜನಂಗಳಲ್ಲಿ ಸ್ವರಂಗಳು ವ್ಯಾಪ್ತವಾಗಿರ್ಪುದರಿಂ,
ವಿಶುದ್ಧಕ್ಕೆ ಷೋಡಶಸ್ವರಂಗಳೇ ಬೀಜಂಗಳಾಗಿರ್ಪವು.
ಅಂತ್ಯಕ್ಕೂ ಅಂತ್ಯವಾಗಿ ಅಮೃತಾರ್ಥವಂ ಕೊಡುತ್ತಾ
ಪ್ರಪಂಚಾಕ್ಷರ ಪ್ರವಾಹಂಗಳಲ್ಲಿ ತಾನಿದಿರೇರಿ ಅಂತರ್ಮುಖವಾಗಿ
ಪವಿತ್ರಮಯವಾಗಿ ಸಕಲಮಂತ್ರಬೀಜಮಯವಾಗಿರ್ಪ
ಹಂ ಕ್ಷಕಾರವೇ ಆಗ್ನೇಯ ಬೀಜಮಾಯಿತ್ತು.
ಅಕ್ಷರಂಗಳು ಹೃದಯಮಧ್ಯದಲ್ಲಿ ಚಕ್ರಂಗಳನನುಸರಿಸಿ
ಜಿಹ್ವಾಮುಖದಲ್ಲಿ ಸೃಷ್ಟಿಗೆ ಬರುವಹಾಂಗೆ
ಪಂಚಭೂತಂಗಳನನುಸರಿಸಿ ಪಂಚವರ್ಗಗಳಾಗಿ,
ಸಪ್ತವರ್ಣಂಗಳು ಸಪ್ತಧಾತುಗಳಾಗಿ,
ಷೋಡಶಸ್ವರಂಗಳು ಅವಯವಂಗಳಾಗಿ,
ಆ ಹಂ ಕ್ಷ ವೇ ಜೀವಪರಮರಾಗಿ, ಸಕಾರವು ಚೈತನ್ಯರೂಪವಾಗಿರ್ಪುದು.
ಹೃದಯವೇ ಪಿಂಡಾಂಡ ಜಿಹ್ವೆಯೇ ಬ್ರಹ್ಮಾಂಡ,
ಪಿಂಡಾಂಡದೊಳ್ಪಂಚಭೂತಂಗಳು ಸಮಾನವಾಗಿರ್ಪಂತೆ,
ಜಿಹ್ವೆಯಲ್ಲಿ ಪಂಚವರ್ಣಗಳು ಸಮಾನವಾಗಿರ್ಪವು.
ಇಂತಪ್ಪ ಮೂರ್ತಿಯೇ ನಾದಪುರುಷನು,
ಇವಂಗೆ ಪ್ರಣವವೇ ಶಿಖೆಯೂ ಶಿವಾಯಾಕ್ಷರತ್ರಯಂಗಳೇ ಉಪವೀತವೂ
ನಮವೇ ದಂಡ ಕಮಂಡಲುಗಳೂ ಆಗಿರ್ಪವು.
ಇಂತು ಪ್ರಣವಪಂಚಾಕ್ಷರಿಯುಕ್ತವಾದ ನಾದಪುರುಷನೇ ಪರಿಶುದ್ಧವಾಗಿ,
ಬ್ರಹ್ಮಸ್ವರೂಪವಾದ ವೇದಪುರುಷನಾಗಿ,
ತನುಮನೋಭಾವಗಳಲ್ಲಿ ಸಂಚರಿಸುತ್ತಿಹನು.
ಆಧಾರದಲ್ಲಾಚಾರರೂಪವಾಗಿರ್ಪ ಆಶ್ರಮವೇ
ಅನಾಹತದಲ್ಲಿ ಜಂಗಮಪ್ರಕಾಶವಂ ಮಾಡಿತ್ತು.
ಸ್ವಾಧಿಷ್ಠಾನದಲ್ಲಿ ಗುರುರೂಪವಾದ ಕರ್ಮವೇ
ಮಣಿಪೂರಕದಲ್ಲಿ ಲಿಂಗಪ್ರಕಾಶವಂ ಮಾಡಿತ್ತು.
ವಿಶುದ್ಧದಲ್ಲಿ ಪ್ರಸಾದರೂಪವಾದ ತತ್ವವೇ
ಆಗ್ನೇಯದಲ್ಲಿ ಮಹಾಪ್ರಕಾಶವಂ ಮಾಡಿತ್ತು.
ಇಷ್ಟಪ್ರಾಣಮಧ್ಯದಲ್ಲಿರ್ಪ ಮಹವೇ ಸಹಸ್ರಮುಖವಾಗಿ ತೋರುತ್ತಿರ್ಪ
ಭಾವಮಧ್ಯದಲ್ಲಿ ಪೂರ್ವಪ್ರಕಾಶವಾಗಿ, ಎಲ್ಲವೂ ಒಂದೆಯಾಗಿ,
ತಾನೂ ಹೊಂದಿರ್ಪುದರಿಂ ಸಹಸ್ರದಳ–
ಕಮಲಮಧ್ಯದಲ್ಲಿರ್ಪ ಭಾವಲಿಂಗವಾಯಿತ್ತು.
ಉನ್ಮೀಲನಾಕ್ಷಿಗಳಿಂ ನಾಸಿಕಾಗ್ರವನ್ನೀಕ್ಷಿಸಿದಲ್ಲಿ ಬ್ರಹ್ಮಸ್ಥಾನ ಗೋಚರವಾಗಿ,
ಅಲ್ಲಿ ಭಾವಸಹಸ್ರಭೇದವಾಗಿ ಬ್ರಹ್ಮವಂ ವಿಚಾರಿಸುವುದರಿಂ
ಸಹಸ್ರದಳಕಮಲಕ್ಕೆ ಶಿರಸ್ಸೇ ಸ್ಥಾನಮಾಯಿತ್ತು.

ಹೃದಯಮಧ್ಯಕ್ಕೂ ಬ್ರಹ್ಮಸ್ಥಾನಕ್ಕೂ ಏಕಮಾಗಿ
ಜ್ಯೋತಿರ್ಮಯವಾಗಿ ಪ್ರಕಾಶಿಸುತ್ತಾ ತತ್ವದಿಂ
ತೋರುವ ಮಹಪ್ರಕಾಶವನ್ನು
ಭಾವಹಸ್ತದಲ್ಲಿ ಗ್ರಹಿಸಿ ಭಾವಪೂಜೆಯಂ ಮಾಡುತ್ತಿರ್ಪುದೇ ಭಾವಲಿಂಗವು.
ಶಿವನನ್ನು ಜ್ಞಾನಹಸ್ತದಲ್ಲಿ ಗ್ರಹಿಸಿ,
ಹೃತ್ಕಮಲಮಧ್ಯದಲ್ಲಿ ಜಂಗಮರೂಪದಲ್ಲಿ
ಧ್ಯಾನಪೂಜೆಯಂ ಮಾಡುತ್ತಿರ್ಪುದೇ ಪ್ರಾಣಲಿಂಗವು.
ಆಚಾರವಿಡಿದು ಗುರುಮುಖದಲ್ಲಿ ಗ್ರಹಿಸಿ,
ಕರ್ಮಪೂಜಯಂ ಮಾಡುತ್ತಿರ್ಪುದೇ ಇಷ್ಟಲಿಂಗವು.
ಇಂತಪ್ಪ ಇಷ್ಟಲಿಂಗವಂ ಪೂಜಿಸುವ ಸ್ಥೂಲವೇ ವಿಶ್ವ,
ಪ್ರಾಣಲಿಂಗವಂ ಪೂಜಿಸುವ ಸೂಕ್ಷ್ಮಶರೀರವೇ ತೈಜಸ,
ಭಾವಲಿಂಗವಂ ಪೂಜಿಸುವ ಕಾರಣಶರೀರವೇ ಪ್ರಾಜ್ಞ,
ಪ್ರಾಜ್ಞಕ್ಕೆ ಯೋಗವೇ ಮುಖ,
ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವುದು.
ತೈಜಸಕ್ಕೆ ಭೋಗವೇ ಮುಖ,
ಈ ಮುಖದಲ್ಲಾ ಲಿಂಗಕ್ಕರ್ಪಣವಾಗುತ್ತಿಹುದು.
ವಿಶ್ವಕ್ಕೆ ತ್ಯಾಗವೇ ಮುಖ, ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವುದು.
ಆಚಾರ ಗುರು ಶಿವಚರಶೇಷಮಹಸ್ವರೂಪಮಾದ ಇಷ್ಟಲಿಂಗವೇ
ಪ್ರಾಣಲಿಂಗವಾಗಿ ಒಳಗೂ ಹೊರಗೂ ತಾನೇ ಪ್ರಕಾಶಿಸಿ
ಭಾವದಲ್ಲೆಲ್ಲವೂ ಒಂದೆಯಾಗಿ ತೋರುತ್ತಿರ್ಪ
ಪರಿಪೂರ್ಣಾನಂದಮಯ ನಿರ್ವಾಣಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೯೬ ||

೧೮೯೮

ಆಧಾರದಲ್ಲಿ ಆಚಾರಲಿಂಗಕ್ಕೆ ಗೃಹಸ್ಥದಳವೇ ಸ್ಥಾನವು,
ಸ್ವಾಧಿಷ್ಠಾನದಲ್ಲಿ ಗುರುಲಿಂಗಕ್ಕೆ ಅಧ್ಯಾಪನದಳವೇ ಸ್ಥಾನವು,
ಮಣಿಪೂರಕದಲ್ಲಿ ಶಿವಲಿಂಗಕ್ಕೆ ನೇತ್ರದಳವೇ ಸ್ಥಾನವು.
ಇದು ರೂಪನಿಷ್ಠಮಾಗಿರ್ಪುದರಿಂ
ಅಂತಪ್ಪ ರೂಪವೇ ಸದ್ರೂಪಮಾದ ಶಕ್ತಿಯು,
ಅಂತಪ್ಪ ಸದ್ರೂಪಸಂಸರ್ಗದಿಂ ತಮೋಮಧ್ಯದಲ್ಲಿದ್ದು ಗ್ರಹಿಸುವುದರಿಂ
ನೇತ್ರಮಧ್ಯದಲ್ಲಿರ್ಪ ನೀಲಿಮಕ್ಕೆ ತಾರಕವೆಂದು ಹೆಸರು,
ಅದೇ ಶಿವನಿರುವ ಸ್ಥಾನಮಾದುದರಿಂ
ನೇತ್ರೇಂದ್ರಿಯವೇ ಪ್ರಧಾನಮಾಯಿತ್ತು,
ಆ ಈಶ್ವರನ ನಿಜಸ್ಥಾನವೇ ತಾರಕವು.

ಅನಾಹತದಲ್ಲಿ ಜಂಗಮಲಿಂಗಕ್ಕೆ ತನುದಳವೇ ಸ್ಥಾನವು,
ವಿಶುದ್ಧದಲ್ಲಿ ಪ್ರಸಾದಲಿಂಗಕ್ಕೆ ಪ್ರಮಾಣದಳವೇ ಸ್ಥಾನವು,
ಆಜ್ಞೇಯದಲ್ಲಿ ಮಹಾಲಿಂಗಕ್ಕೆ ಪ್ರಾಣದಳವೇ ಸ್ಥಾನವು.
ಪ್ರಾಣದಲ್ಲಿ ಹಂಕಾರವೇ ಬೀಜವು,
ಪ್ರಮಾಣದಲ್ಲಿ ಅಕಾರವೇ ಬೀಜವು,
ತನುವಿನಲ್ಲಿ ಕಕಾರವೇ ಬೀಜವು,
ನೇತ್ರದಲ್ಲಿ 'ಣ'ಕಾರವೇ ಬೀಜವು,
ಅಧ್ಯಾಪನದಲ್ಲಿ ಯಕಾರವೇ ಬೀಜವು,
ಗೃಹಸ್ಥದಲ್ಲಿ ವಕಾರವೇ ಬೀಜವು.
ವಿಶುದ್ಧಾಜ್ಞೇಯಗಳಲ್ಲಿರ್ಪ 'ಅಹಂ'ಕಾರಗಳೇ ಕಾರಣ,
ಅದು ವಿಪರೀತಿಸಿ ಅನಾಹತಮಣಿಪೂರಕಗಳಲ್ಲಿರ್ಪ 'ಕಣ'ವೇ ಸೂಕ್ಷ್ಮ,
ಸ್ವಾಧಿಷ್ಠಾನಾಧಾರಗಳಲ್ಲಿರ್ಪ 'ಯಶ'ವೇ ಸ್ಥೂಲ.
ಕಾರಣರೂಪವಾದ 'ಅಹಂ'ಕಾರವೇ ಜೀವನು,
ಶೋಭನರೂಪವಾಗಿ ಅವಧಿಯಿಲ್ಲದೆ ಗಮಿಸುತ್ತಿರ್ಪ 'ಕಣ'ವೇ ಬಿಂದು,
ಗೃಹಸ್ಥಸ್ಥಾನದಲ್ಲಿ ಆಚಾರಮುಖದಲ್ಲಿ ದೊಡ್ಡಿತ್ತಾಗಿಹುದೇ ಯಶ,
ಮಹದ್ಬೀಜವೇ ಪ್ರಾಣ, ಅದಕ್ಕೆ ಪ್ರಾಣವೇ ತನು,
ಆ ತನುವಿಗೆ ನೇತ್ರವೇ ಪ್ರಧಾನ, ಅದಕ್ಕುಪದೇಶವೇ ಪರಿಶುದ್ಧಿ,
ಗೃಹಸ್ಥಧರ್ಮವೇ ಆ ಶರೀರಕ್ಕೆ ಪ್ರಕಾಶವು.
ಅಹಂಕಾರರೂಪವಾದ ಜೀವನಿಗೆ
ಇಷ್ಟರೂಪವಾದ 'ಕ್ಷ' ಕಾರವೇ ಸಂಹಾರ,
ಆ 'ಹ'ಕಾರರೂಪವಾದ ಪ್ರಾಣಕ್ಕೆ
ವಿಸರ್ಗರೂಪವಾದ ನಿಗ್ರಹಸ್ಥಾನವೇ ಸಂಹಾರ,
'ಶ'ಕಾರರೂಪವಾದ ತನುವಿಗೆ 'ಠ'ಕಾರರೂಪವಾದ ವ್ಯಯವೇ ಸಂಹಾರ,
'ಣ'ಕಾರರೂಪವಾದ ನೇತ್ರಕ್ಕೆ
'ಪ'ಕಾರರೂಪವಾದ ಗೋಪ್ಯವೇ ಸಂಹಾರ,
'ಯ'ಕಾರರೂಪವಾದ ಅಧ್ಯಾಪನೆಗೆ
'ಲ'ಕಾರರೂಪವಾದ ಪರಿಗ್ರಹವೇ ಸಂಹಾರ,
'ಶ'ಕಾರರೂಪವಾದ ಗೃಹಸ್ಥಕ್ಕೆ
'ಸ'ಕಾರರೂಪವಾದ ಸಂನ್ಯಾಸವೇ ಸಂಹಾರ.
ಅಂತಪ್ಪ ಸಂನ್ಯಾಸವೇ ತೂರ್ಯ,
ಅಂತಪ್ಪ ತೂರ್ಯದಲ್ಲಿ ಜೀವನ್ಮುಕ್ತಿಯಪ್ಪ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೇ. ॥ ೯೭ ॥

೧೦೯೯

ಪೃಥ್ವೀಚಕ್ರಕ್ಕೆ ಶರೀರವೇ ಪೂರ್ವ,
ಶರೀರದೊಳಗಣ ಪೃಥ್ವಿಯೇ ಪಶ್ಚಿಮ,
ಜಿಹ್ವೆಯಲ್ಲಿ ಕೊಂಬ ಆಹಾರಾದಿಪೃಥ್ವಿಯೇ ಉತ್ತರ,
ಅಧೋಮುಖದಲ್ಲಿ ವಿಸರ್ಜನರೂಪವಾದ ಪುತ್ರಾದಿಪೃಥ್ವಿಯೇ ದಕ್ಷಿಣ,
ಪೂರ್ವರೂಪವಾದ ಶರೀರಕ್ಕೂ ದಕ್ಷಿಣರೂಪವಾದ ಪುತ್ರಾದಿಗಳಿಗೂ
ಸಂಧಿಕಾಲವಾಗಿರ್ಪ ಅರ್ಥಾದಿಪೃಥ್ವಿಯೇ ಆಗ್ನೇಯ,
ಪುತ್ರಾದಿ ದಕ್ಷಿಣಪೃಥ್ವಿಗೂ ಧಾತುರೂಪವಾದ ಅಂತಃಪಶ್ಚಿಮಪೃಥ್ವಿಗೂ
ಸಂಧಿಕಾಲವಾಗಿರ್ಪ ಮಲವಿಸರ್ಜನರೂಪವಾದ ಪೃಥ್ವಿಯೇ ನೈರುತ್ಯ,
ಆ ಶರೀರದೊಳಗಣ ಪೃಥ್ವಿಗೂ ಆಹಾರರೂಪವಾದ
ಜಿಹ್ವೆಯಲ್ಲಿರ್ಪ ಉತ್ತರಪೃಥ್ವಿಗೂ
ಸಂಧಿಕಾಲದಲ್ಲಿ ಪರಮಪವಿತ್ರವಾಗಿ ಪರಿಪಕ್ವಮಯವಾಗಿ
ಪ್ರಸಾದರೂಪವಾದ ಅನ್ನಾದಿ ಭೋಜನಕ್ರಿಯೆಯೆಂಬ ಪೃಥ್ವಿಯೇ ಈಶಾನ್ಯ.
ಜಲಚಕ್ರಕ್ಕೆ ಗುಹ್ಯಜಲವೇ ಪೂರ್ವ, ಶರೀರಜಲವೇ ದಕ್ಷಿಣ,
ಜಿಹ್ವಾಜಲವೇ ಪಶ್ಚಿಮ, ನೇತ್ರಜಲವೇ ಉತ್ತರ,
ಗುಹ್ಯದಲ್ಲಿರ್ಪ ಪೂರ್ವಜಲಕ್ಕೂ ಶರೀರದಲ್ಲಿರ್ಪ ದಕ್ಷಿಣಜಲಕ್ಕೂ
ಸಂಧಿಕಾಲದಲ್ಲಿರ್ಪ ಬಿಂದುಜಲವೇ ಆಗ್ನೇಯ,
ಶರೀರದಲ್ಲಿರ್ಪ ದಕ್ಷಿಣಜಲಕ್ಕೂ ಜಿಹ್ವೆಯಲ್ಲಿರ್ಪ ಪಶ್ಚಿಮಜಲಕ್ಕೂ
ಸಂಧಿಯಲ್ಲಿರ್ಪ ವಾತ ಪಿತ್ತ ಶ್ಲೇಷ್ಮಜಲವೇ ನೈರುತ್ಯ,
ಜಿಹ್ವೆಯಲ್ಲಿರ್ಪ ಪಶ್ಚಿಮಜಲಕ್ಕೂ ನೇತ್ರದಲ್ಲಿರ್ಪ ಉತ್ತರಜಲಕ್ಕೂ
ಸಂಧಿಯಲ್ಲಿರ್ಪ ಉಚ್ಛ್ವಾಸವಾಯುಮುಖದಲ್ಲಿ
ದ್ರವಿಸುತ್ತಿರ್ಪ ಜಲವೇ ವಾಯವ್ಯಜಲ,
ನೇತ್ರದಲ್ಲಿರ್ಪ ಜಲಕ್ಕೂ ಗುಹ್ಯದಲ್ಲಿರ್ಪ ಜಲಕ್ಕೂ ಸಂಧಿಯಲ್ಲಿ
ಮನೋಮುಖದಲ್ಲಿ ದ್ರವಿಸುತ್ತಿರ್ಪ ಮೋಹಜಲವೇ ಈಶಾನ್ಯಜಲ.
ಅಗ್ನಿಚಕ್ರಕ್ಕೆ ಗುಹ್ಯದಲಿರ್ಪ ತೇಜೋರೂಪವಾದ ಅಗ್ನಿಯೇ ಪೂರ್ವ,
ಉದರದಲ್ಲಿರ್ಪ ಅಗ್ನಿಯೇ ದಕ್ಷಿಣ, ನೇತ್ರದಲ್ಲಿರ್ಪ ಅಗ್ನಿಯೇ ಪಶ್ಚಿಮ,
ಹಸ್ತದಲ್ಲಿರ್ಪ ಸಂಹಾರಾಗ್ನಿಯೇ ಉತ್ತರ,
ಗುಹ್ಯದಲ್ಲಿರ್ಪ ಪೂರ್ವಾಗ್ನಿಗೂ ಉದರದಲ್ಲಿರ್ಪ ದಕ್ಷಿಣಾಗ್ನಿಗೂ
ಸಂಧಿಯಲ್ಲಿ ಬೀಜಸ್ಥಾನದಲ್ಲಿರ್ಪ ಕಾಮಾಗ್ನಿಯೇ ಆಗ್ನೇಯಾಗ್ನಿ,
ಉದರದಲ್ಲಿರ್ಪ ಅಗ್ನಿಗೂ ನೇತ್ರದಲ್ಲಿರ್ಪ ಪಶ್ಚಿಮಾಗ್ನಿಗೂ
ಸಂಧಿಯಲ್ಲಿರ್ಪ ಕ್ರೋಧ ಮತ್ಸರ ರೂಪವಾಗಿರ್ಪ
ತಾಮಸಾಗ್ನಿಯೇ ನೈರುತ್ಯಾಗ್ನಿ,
ನೇತ್ರದಲ್ಲಿರ್ಪ ಅಗ್ನಿಗೂ ಹಸ್ತದಲ್ಲಿರ್ಪ ಉತ್ತರಾಗ್ನಿಗೂ
ಸಂಧಿಯಲ್ಲಿ ವಸ್ತುಗ್ರಹಣಚಲನೋದ್ರೇಕಾಗ್ನಿಯೇ ವಾಯುವ್ಯಾಗ್ನಿ,

ಆ ಹಸ್ತಕ್ಕೂ ಗುಹ್ಯಕ್ಕೂ ಸಂಧಿಯಲ್ಲಿ
ಧರ್ಮಪ್ರಜಾಸೃಷ್ಟಿನಿಮಿತ್ತ ಪಾಣಿಗ್ರಹಣಮಪ್ಪಲ್ಲಿ
ಸಾಕ್ಷಿರೂಪವಾದ ಹೋಮಾಗ್ನಿಯೇ ಈಶಾನ್ಯಾಗ್ನಿ.
ವಾಯುಚಕ್ರಕ್ಕೆ ನಾಸಿಕಚಕ್ರದಲ್ಲಿರ್ಪ ಪ್ರಾಣವಾಯುವೇ ಪೂರ್ವವಾಯು,
ಹೃದಯವೇ ಪಶ್ಚಿಮ,
ಚಲನಾತ್ಮಕವಾದ ಚೈತನ್ಯವಾಯುಮುಖವಿಕಸನವೇ ಉತ್ತರವಾಯು,
ಗಂಧವಿಸರ್ಜನೆಯೇ ದಕ್ಷಿಣವಾಯು,
ನಾಸಿಕದಲ್ಲಿರ್ಪ ಪೂರ್ವವಾಯುವಿಗೂ ಗಂಧದಲ್ಲಿರ್ಪ ದಕ್ಷಿಣವಾಯುವಿಗೂ
ಸಂಧಿಯಲ್ಲಿರ್ಪ ಗಂಧವಾಯುವೇ ಆಗ್ನೇಯವಾಯು,
ಗುದದಲ್ಲಿರ್ಪ ವಾಯುವಿಗೂ ಹೃದಯದಲ್ಲಿರ್ಪ ಪಶ್ಚಿಮವಾಯುವಿಗೂ
ಸಂಧಿಯಲ್ಲಿ ಆದ್ಯನಾದಿವ್ಯಾಧಿಗಳಂ ಕಲ್ಪಿಸಿ ದೀಪನಾಗ್ನಿಯಲ್ಲಿ ಕೂಡಿಸಿ
ಅನಂತಮಲವಂ ಮಾಡಿ ಅಧೋಮುಖದಲ್ಲಿ ಕೆಡವುತ್ತಿರ್ಪ
ತಾಮಸವಾಯುವೇ ನೈರುತ್ಯವಾಯು,
ಹೃದಯವಾಯುವಿಗೂ ವದನದಲ್ಲಿರ್ಪ ಉತ್ತರವಾಯುವಿಗೂ
ಸಂಧಿಯಲ್ಲಿರ್ಪ ಕಂಠದಲ್ಲಿ ಹಸನ ರೋದನ ಗರ್ಜನಾದಿಗಳಂ ಮಾಡುತ್ತಿರ್ಪ
ವಾಯುವೇ ವಾಯವ್ಯವಾಯು,
ವದನದಲ್ಲಿರ್ಪ ವಾಯುವಿಗೂ ನಾಸಿಕದಲ್ಲಿರ್ಪ ವಾಯುವಿಗೂ
ಸಂಧಿಯಲ್ಲಿರ್ಪ ಅಕ್ಷರಾತ್ಮಕವಾಯುವೇ ಈಶಾನ್ಯ.
ಆಕಾಶಚಕ್ರಕ್ಕೆ ಶ್ರೋತ್ರದಲ್ಲಿರ್ಪ ಆಕಾಶವೇ ಪೂರ್ವ,
ಶರೀರದಲ್ಲಿರ್ಪ ಆಕಾಶವೇ ಪಶ್ಚಿಮ,
ಪಾದದಲ್ಲಿರ್ಪ ಆಕಾಶವೇ ದಕ್ಷಿಣ, ಜಿಹ್ವೆಯಲ್ಲಿರ್ಪ ಆಕಾಶವೇ ಉತ್ತರ,
ಶ್ರೋತ್ರದಲ್ಲಿರ್ಪ ಪೂರ್ವಾಕಾಶಕ್ಕೂ ಪಾದದಲ್ಲಿರ್ಪ ದಕ್ಷಿಣಾಕಾಶಕ್ಕೂ
ಕಿವಿಯಲ್ಲಿ ಪಾದದಲ್ಲಿ ಗಮಿಸುತ್ತಿರ್ಪಲ್ಲಿ
ಮುಂದೆ ಗಮಿಸುತ್ತಿರ್ಪಾಕಾಶವೇ ಆಗ್ನೇಯಾಕಾಶ,
ಪಾದದಲ್ಲಿರ್ಪ ಆಕಾಶಕ್ಕೂ ಶರೀರದಲ್ಲಿರ್ಪ ಪಶ್ಚಿಮಾಕಾಶಕ್ಕೂ
ಸಂಧಿಯಲ್ಲಿ ಮಲಮೂತ್ರ ವಿಸರ್ಜನಾಕಾಶವೇ ನೈರುತ್ಯಾಕಾಶ,
ಆ ಶರೀರದೊಳಗಿರ್ಪ ಆಕಾಶಕ್ಕೂ ಜಿಹ್ವೆಯಲ್ಲಿರ್ಪ ಉತ್ತರಾಕಾಶಕ್ಕೂ
ಸಂಧಿಯಲ್ಲಿ ಗುಣಗ್ರಹಣವಂ ಮಾಡುತ್ತಿರ್ಪ ಹೃದಯವೇ ವಾಯವ್ಯಾಕಾಶ,
ಜಿಹ್ವೆಯಲ್ಲಿರ್ಪ ಆಕಾಶಕ್ಕೂ ಶ್ರೋತ್ರದಲ್ಲಿರ್ಪ ಆಕಾಶಕ್ಕೂ
ಸಂಧಿಯಲ್ಲಿ ಗುರುವು ಮುಖದಿಂದುಪದೇಶಿಸಲು,
ಶಿಷ್ಯನು ಕರ್ಣಮುಖದಲ್ಲಿ ಗ್ರಹಿಸಲು,
ತನ್ಮಂತ್ರಮಧ್ಯದಲ್ಲಿ ಪ್ರಕಾಶಿಸುತ್ತಿರ್ಪ ಆಕಾಶವೇ ಈಶಾನ್ಯಾಕಾಶ.
ಆತ್ಮಚಕ್ರಕ್ಕೆ ವಾಸನಾಜ್ಞಾನವೇ ಪಶ್ಚಿಮ, ರುಚಿಜ್ಞಾನವೇ ಉತ್ತರ,
ಸ್ಪರ್ಶಜ್ಞಾನವೇ ಪೂರ್ವ, ರೂಪಜ್ಞಾನವೇ ದಕ್ಷಿಣ.

ಸ್ಪರ್ಶನರೂಪವಮಾದ ಪೂರ್ವಜ್ಞಾನವೇ ಜೀವನು,
ರೂಪಜ್ಞತ್ವಮುಳ್ಳ ದಕ್ಷಿಣಜ್ಞಾನವೇ ಶರೀರ.
ಸ್ಪರ್ಶನದಲ್ಲಿ ಜೀವನು ವ್ಯಾಪ್ತನಾದಂತೆ
ರೂಪಜ್ಞಾನದಲ್ಲಿ ಶರೀರವು ವ್ಯಾಪ್ತವ್ಮಾಗಿರ್ಪುದರಿಂ
ರೂಪಜ್ಞಾನತ್ವವೇ ಶರೀರ, ಸ್ಪರ್ಶನಜ್ಞಾನತ್ವವೇ ಜೀವ.
ತತ್ಸಂಧಿಯಲ್ಲಿ ತೇಜೋವಾಯುರೂಪವಮಾಗಿರ್ಪ
ಮನೋಜ್ಞಾನತ್ವವೇ ಆಗ್ನೇಯಾತ್ಮನು.
ಮನೋಜ್ಞಾನಕ್ಕೂ ಪಶ್ಚಿಮದಲ್ಲಿರ್ಪ ವಾಸನಾಜ್ಞಾನಕ್ಕೂ
ಸಂಧಿಯಲ್ಲಿ ಜನ್ಮಾಂತರವಾಸನಾಜ್ಞಾನವೇ ಪರೋಕ್ಷಜ್ಞಾನ,
ರೂಪಜ್ಞಾನವೇ ಪ್ರತ್ಯಕ್ಷಜ್ಞಾನ.
ಈ ಎರಡರ ಮಧ್ಯದಲ್ಲಿ ಭಾವಜ್ಞತ್ವಮಿರ್ಪುದು.
ಜಾಗ್ರತ್ಸ್ವಪ್ನಗಳ ಮಧ್ಯದಲ್ಲಿ ಸುಷುಪ್ತಿಯು ಇರ್ಪಂತೆ
ಸುಷುಪ್ತಿಗೆ ತನ್ನಲ್ಲಿರ್ಪ ಸ್ವಪ್ನವೇ ಪ್ರತ್ಯಕ್ಷವಮಾಗಿ
ತನಗೆ ಬಾಹ್ಯವಮಾಗಿರ್ಪ ಜಾಗ್ರವು ಪ್ರತ್ಯಕ್ಷವಮಾಗಿಹುದು.
ಅಂತು ಭಾವಜ್ಞತ್ವಕ್ಕೆ ರೂಪಜ್ಞಾನಪ್ರತ್ಯಕ್ಷವಮಾಗಿ
ವಾಸನಾಜ್ಞಾನಕ್ಕೆ ತಾನೇ ಮರೆಯಾಗಿರ್ಪುದರಿಂ
ಆ ಭಾವಜ್ಞಾನವೇ ನೈರುತ್ಯಾತ್ಮನು.
ಆ ವಾಸನಾಜ್ಞಾನಕ್ಕೂ ಉತ್ತರದಲ್ಲಿರ್ಪ ರುಚಿಜ್ಞಾನಕ್ಕೂ
ಸಂಧಿಯಲ್ಲಿ ರುಚಿಯೆಂದರೆ ಅನುಭವಪದಾರ್ಥ, ತಜ್ಞಾನವೇ ರುಚಿಜ್ಞಾನ.
ವಾಸನಾಜ್ಞಾನವೇ ಪರೋಕ್ಷಜ್ಞಾನ, ಅದೇ ಭೂತಜ್ಞಾನ,
ಆ ರುಚಿಜ್ಞಾನವೇ ಭವಿಷ್ಯಜ್ಞಾನ.
ಅಂತಪ್ಪ ಭೂತಭವಿಷ್ಯತ್ತುಗಳ ಮಧ್ಯದಲ್ಲಿ
ವಾಯುರೂಪವಮಾದ ಶಬ್ದಮುಖದಲ್ಲಿ ತಿಳಿವುತ್ತಿರ್ಪ
ಶಬ್ದಜ್ಞಾನವೇ ವಾಯವ್ಯಾತ್ಮನು.
ರುಚಿಜ್ಞಾನಕ್ಕೂ ಸ್ಪರ್ಶನಜ್ಞಾನಕ್ಕೂ ಮಧ್ಯದಲ್ಲಿ
ಜೀವನು ರುಚಿಗಳನನುಭವಿಸುವ ಸಂಧಿಯಲ್ಲಿರ್ಪ
ಶಿವಜ್ಞಾನಮಧ್ಯದಲ್ಲಿರುವನೇ ಈಶಾನ್ಯಾತ್ಮನು.
ಜ್ಞಾನಾನಂದಮೂರ್ತಿಯೇ ಕರಕಮಲದಲ್ಲಿ ಇಷ್ಟಲಿಂಗವಮಾಗಿ,
ಆ ಶಿವಜ್ಞಾನವೇ ಹೃತ್ಕಮಲಮಧ್ಯದಲ್ಲಿ
ರುಚ್ಯನುಭವಸಂಧಿಯಲ್ಲಿ ಪ್ರಾಣಲಿಂಗವಮಾಗಿ,
ಪ್ರತ್ಯಕ್ಷ ಪರೋಕ್ಷಂಗಳಿಗೆ ತಾನೇ ಕಾರಣವಾಗಿ,
ಆ ಶಿವಜ್ಞಾನಂಗಳು ಭಾವದಲ್ಲೊಂದೇ ಆಗಿ ಪ್ರಕಾಶಿಸಿದಲ್ಲಿ
ಭಾವದಲ್ಲಿರ್ಪ ತಾಮಸವಳಿದು, ಪ್ರತ್ಯಕ್ಷ ಪರೋಕ್ಷಂಗಳೊಂದೇ ಆಗಿ,
ಪರೋಕ್ಷಜ್ಞಾನದಲ್ಲಿ ಪ್ರತ್ಯಕ್ಷಭಾವಂಗಳಳಿದು,

ಭೂತಭವಿಷ್ಯಂಗಳೊಂದೇ ಆಗಿ ಅಖಂಡಮಯವಾಗಿ
ಎಲ್ಲವೂ ಒಂದೆಯಾಗಿರ್ಪುದೇ ಆಗ್ನೇಯ.
ಅದಕ್ಕೆ ಇಷ್ಟಪ್ರಾಣಂಗಳೆಂಬೆರಡು ದಳಂಗಳು.
ವಿಶುದ್ಧದಲ್ಲಿ ಪ್ರಮಾಣಕ್ಕೆ ಪೂರ್ವಾತ್ಮನಾದ ಜೀವನೇ ಸ್ಥಾನ,
ಸಂಶಯಕ್ಕೆ ಆಗ್ನೇಯಾತ್ಮವಾದ ಮನವೇ ಸ್ಥಾನ,
ದೃಷ್ಟಾಂತಕ್ಕೆ ದಕ್ಷಿಣಾತ್ಮಕವಾದ ಶರೀರವೇ ಸ್ಥಾನ,
ಅವಯವಕ್ಕೆ ನೈರುತ್ಯವಾದ ಭಾವವೇ ಸ್ಥಾನ,
ನಿರ್ಣಯಕ್ಕೆ ಪಶ್ಚಿಮಾತ್ಮಕವಾದ ಶಬ್ದಜ್ಞಾನವೇ ಸ್ಥಾನ,
ಜಲ್ಪಕ್ಕೆ ವಾಯುವ್ಯಾತ್ಮವಾದ ಶಬ್ದಜ್ಞಾನವೇ ಸ್ಥಾನ,
ಹೇತ್ವಭಾವಕ್ಕೆ ರುಚಿಜ್ಞತ್ವವೇ ಸ್ಥಾನ.
ಜಾತಿಯೆಂದರೆ ಪದಾರ್ಥನಿಷ್ಠಧರ್ಮ.
ಆ ಧರ್ಮಕ್ಕೆ ಈಶಾನ್ಯಾತ್ಮನಾದ ಶಿವನೇ ಸ್ಥಾನ,
ಪ್ರಮೇಯಕ್ಕೆ ಶ್ರೋತ್ರದಲ್ಲಿರ್ಪ ವಿಶುದ್ಧರೂಪಮಾದ
ಪೂರ್ವಾಕಾಶವೇ ಸ್ಥಾನ,
ಪ್ರಯೋಜನಕ್ಕೆ ಧಾವತೀರೂಪಮಾದ ಆಗ್ನೇಯಾಕಾಶವೇ ಸ್ಥಾನ,
ಸಿದ್ಧಾಂತಕ್ಕೆ ಪದದಲ್ಲಿರ್ಪ ದಕ್ಷಿಣಾಕಾಶವೇ ಸ್ಥಾನ,
ತರ್ಕಕ್ಕೆ ಮಲವಿಸರ್ಜನರೂಪವಾದ ನೈರುತ್ಯಾಕಾಶವೇ ಸ್ಥಾನ,
ಛಲಕ್ಕೆ ಜಿಹ್ವೆಯಲ್ಲಿ ವಾಗ್ರೂಪಮಾಗಿರ್ಪ ಉತ್ತರಾಕಾಶವೇ ಸ್ಥಾನ,
ನಿಗ್ರಹಕ್ಕೆ ಉಪದೇಶಮಧ್ಯದಲ್ಲಿರ್ಪ ಈಶಾನ್ಯಾಕಾಶವೇ ಸ್ಥಾನ.
ಇಂತು ಆತ್ಮಾಕಾಶವಾಗಿರ್ಪ ಷೋಡಶದಳಂಗಳಿಂ
ಪ್ರಕಾಶಿಸುತ್ತಿರ್ಪುದೇ ವಿಶುದ್ಧಿಚಕ್ರವು.
ತದ್ಬೀಜಮಾಗಿರ್ಪ ಷೋಡಶಸ್ವರಂಗಳಲ್ಲಿ
ಹ್ರಸ್ವಸ್ವರಂಗಳೆಲ್ಲವೂ ಆತ್ಮಚಕ್ರಬೀಜ
ದೀರ್ಘಸ್ವರಂಗಳೆಲ್ಲವೂ ಆಕಾಶಚಕ್ರಬೀಜ,
ಮುಕುಳನವೇ ಹ್ರಸ್ವ ; ಅದು ಆತ್ಮರೂಪಮಾದ
ಸಂಹಾರಮಯಮಾಗಿಹುದು.
ವಿಕಸನವೇ ದೀರ್ಘ; ಅದು ಮಿಥ್ಯಾರೂಪಮಾದ ಸೃಷ್ಟಿಮಯಮಾಗಿಹುದು.
ಇಂತಪ್ಪ ಆತ್ಮಾಕಾಶಚಕ್ರಗಳೆರಡೂ ಏಕಾಕಾರಮಾಗಿರ್ಪುದೇ ವಿಶುದ್ಧಿಚಕ್ರವು.
ಅನಾಹತದಲ್ಲಿ ತನುವಿಗೆ ಪೂರ್ವರೂಪಮಾದ ವಾಯುವೇ ಸ್ಥಾನ,
ನಿಧನಕ್ಕೆ ವಾಸನಾಗ್ರಹಣರೂಪಮಾದ ಆಗ್ನೇಯವಾಯುವೇ ಸ್ಥಾನ,
ಸಹಜವೆಂದರೆ ಪ್ರಕೃತಿ, ಆ ಸಹಜಕ್ಕೆ ದಕ್ಷಿಣರೂಪಮಾದ
ವಿಸರ್ಜನವಾಯುವೇ ಸ್ಥಾನ,
ಸೂಹೃತಿಗೆ ನೈರುತ್ಯರೂಪಮಾದ ಗರ್ಭವಾಯುವೇ ಸ್ಥಾನ,
ಸುತಕ್ಕೆ ಪಶ್ಚಿಮದಲ್ಲಿರ್ಪ ಹೃದಯವಾಯುವೇ ಸ್ಥಾನ,

ರಿಪುವಿಗೆ ಕಂಠದಲ್ಲಿ ವಾಯವ್ಯರೂಪಮಾಗಿರ್ಪ
ಉತ್ಕೃಷ್ಟಘೋಷವಾಯುವೇ ಸ್ಥಾನ,
ಜಾಯಕ್ಕೆ ಉತ್ತರದಲ್ಲಿರ್ಪ ಜಿಹ್ವಾಚಲನವಾಯುವೇ ಸ್ಥಾನವಾಯಿತ್ತು.
ನಾದವಿಸರ್ಜನಸ್ಥಾನವೇ ಜಿಹ್ವಾಚಲನ,
ಬಿಂದುವಿಸರ್ಜನಸ್ಥಾನವೇ ಜಾಯೆ,
ಜಾಯೆಯಿಂದಾದ ಸುತಾದಿ ರೂಪಗಳಿಗೆ
ಜಿಹ್ವಾವಾಯುವಿನಿಂದಾದ ನಾಮವೇ ಕ್ರಿಯಾಸಂಬಂಧವಪ್ಪುದರಿಂದಲೂ
ಪತಿವಾಕ್ಯವನನುಸರಿಸುವುದೇ ಸತಿಗೆ ಧರ್ಮವಾದುದರಿಂದಲೂ
ಜಾಯಿಗೆ ಜಿಹ್ವಾವಾಯುವೇ ಸ್ಥಾನವಾಯಿತ್ತು.
ನಿಧನಕ್ಕೆ ಜಿಹ್ವಾವಾಯುವಿಗೂ ನಾಸಿಕಾವಾಯುವಿಗೂ ಸಂಧಿಯಲ್ಲಿ
ಕ್ಷಯರಹಿತವಪ್ಪ ಅಕ್ಷರವಾಯುವೇ ಸ್ಥಾನವಾಯಿತ್ತು.
ಪೂರ್ವದಲ್ಲಿರ್ಪ ಅನಾಹತಚಕ್ರದಲ್ಲಿ
ಪಶ್ಚಿಮದಲ್ಲಿರ್ಪ ಪೃಥ್ವೀಚಕ್ರದ ನಾಲ್ಕುದಳಂಗಳು ಕೂಡಿರ್ಪುದರಿಂ
ಅನಾಹತನಲ್ಲಿ ಹನ್ನೆರಡು ದಳಗಳಾದವು.
ಅನಾಹತದಲ್ಲಿ ಬೆರೆದ ನಾಲ್ಕು ದಳಂಗಳಾವುವೆಂದರೆ :
ಶರೀರರೂಪಮಾದ ಪೂರ್ವಪೃಥ್ವಿಗೂ
ಪುತ್ರಾದಿರೂಪಮಾದ ದಕ್ಷಿಣಪೃಥ್ವಿಗೂ
ಮಧ್ಯದಲ್ಲಿರ್ಪ ಧನರೂಪಮಾದ ಆಗ್ನೇಯಪೃಥ್ವಿಯೇ
ಧರ್ಮಸ್ಥಾನಮಾಯಿತ್ತು.
ಪುತ್ರಾದಿದಕ್ಷಿಣಪೃಥ್ವಿಗೂ ಧಾತುರೂಪಮಾದ ಅಂತಃಪಶ್ಚಿಮಪೃಥ್ವಿಗೂ
ಸಂಧಿಕಾಲಮಾಗಿರ್ಪ ನೈರುತ್ಯಪೃಥ್ವಿಯೇ ಕರ್ಮಸ್ಥಾನಮಾಯಿತ್ತು.
ಶೌಚವೇ ಕರ್ಮಕ್ಕೆ ಆದಿಯಾದುದರಿಂದ
ಆ ಶರೀರದೊಳಗಿರ್ಪ ಪೃಥ್ವಿಗೂ ಜಿಹ್ವೆಯಲ್ಲಿರ್ಪ ಆಹಾರೋತ್ತರಪೃಥ್ವಿಗೂ
ಸಂಧಿಯಲ್ಲಿರ್ಪ ವಾಯವ್ಯಪೃಥ್ವಿಯೇ ಲಯಸ್ಥಾನಮಾಯಿತ್ತು.
ಆ ಜಿಹ್ವೆಯಲ್ಲಿರ್ಪ ಪೃಥ್ವಿಗೂ ಶರೀರದಲ್ಲಿರ್ಪ ಪೃಥ್ವಿಗೂ
ಸಂಧಿಯಲ್ಲಿರ್ಪ ಅನ್ನರೂಪಮಾದ ಈಶಾನ್ಯಪೃಥ್ವಿಯೇ
ವ್ಯಯಸ್ಥಾನಮಾಯಿತ್ತು.
ಇಂತು ಭಾವರೂಪಮಾದ ದ್ವಾದಶದಳಗಳುಳ್ಳುದೇ ಅನಾಹತಚಕ್ರವು.
ಮಣಿಪೂರಕಚಕ್ರದಲ್ಲಿ ಪೂರ್ವರೂಪಮಾದ ಅಗ್ನಿಯೇ ಸ್ಥಾನವು,
ಅದು ಆದಿಯಲ್ಲಿ ಶ್ರೋತ್ರವಿಷಯದಿಂದುತ್ಪನ್ನಮಾಗುತ್ತಿರ್ಪುದರಿಂ
ಅದಕ್ಕೆ ಶ್ರೋತ್ರವೇ ಸ್ಥಾನಮಾಯಿತ್ತು.
ಗುಹ್ಯೆಯಲ್ಲಿರ್ಪ ಅಗ್ನಿಗೂ ಉದರದಲ್ಲಿರ್ಪ ದಕ್ಷಿಣಾಗ್ನಿಗೂ
ಸಂಧಿಯಲ್ಲಿ ಬೀಜಸ್ಥಾನವಾಗಿ ಪ್ರಕಾಶಿಸುತ್ತಿರ್ಪ
ಕಾಮರೂಪಮಾದ ಆಗ್ನೇಯಾಗ್ನಿಗೆ ತ್ವಕ್ಕೇ ಸ್ಥಾನಮಾಯಿತ್ತು.

ಉದರದಲ್ಲಿರ್ಪ ದಕ್ಷಿಣಾಗ್ನಿಯು ರೂಪವಾಗಿಹುದು.
ದೀಪನವೆಂದರೆ ವಾಂಛೆ,
ಅಂತಪ್ಪ ವಾಂಛೆಯು ನೇತ್ರಮೂಲಕವಾದುದರಿಂದಲೂ
ರೂಪಕ್ಕೆ ನೇತ್ರವೇ ಕಾರಣವಾದುದರಿಂದಲೂ
ರೂಪವಾಗಿರ್ಪ ಆಹಾರದಿಂದಾ ದೀಪನವೇ
ನೇತ್ರದಲ್ಲಿರ್ಪ ಪಶ್ಚಿಮಾಗ್ನಿಯಾಗಿ
ನಾಸಿಕಾಗ್ರದಲ್ಲೇಕವಾಗಿ ಕೂಡುತ್ತಿರ್ಪುದರಿಂದ
ನಾಸಿಕಾಗ್ರದಲ್ಲಿರ್ಪ ಸಮದೃಷ್ಟಿಯು ಸಕಲಯೋಗಕ್ಕೂ
ಕಾರಣವಾಗಿರ್ಪುದರಿಂ
ನೇತ್ರಾಗ್ನಿಗೆ ನಾಸಿಕವೇ ಸ್ಥಾನವಾಯಿತ್ತು.
ಪಾಣಿಗೂ ಗುಹ್ಯಕ್ಕೂ ಸಂಧಿಕಾಲವಾಗಿರ್ಪ ಸ್ವಸ್ತ್ರೀ ವಿವಾಹಸಾಕ್ಷಿಕವಾದ
ಈಶಾನ್ಯಹೋಮಾಗ್ನಿಗೂ ಜಾಯಾಪಾದವೇ ಸ್ಥಾನವಾಯಿತ್ತು,
ಲಾಜಾಹೋಮಕಾಲದಲ್ಲಿ ಜಾಯಾಪಾದದಿಂದಗ್ನಿ ಸಿದ್ಧವಾಗುತ್ತಿರ್ಪುದರಿಂ
ಆ ಹೋಮಾಗ್ನಿಯನ್ನು ಪಾದದಲ್ಲಿ ತಂದು
ಶಿಲೆಯಲ್ಲಿ ಆವಾಹನೆಯಂ ಮಾಡುತ್ತಿರ್ಪುದರಿಂ
ಈಶ್ವರರೂಪವಾದ ಅಗ್ನಿಗೂ ಗಿರಿಜಾರೂಪವಾದ ಶಿಲೆಗೂ
ಆ ಪಾದವೇ ಕಾರಣವಾಗಿರ್ಪುದರಿಂ
ಈಶಾನ್ಯಾಗ್ನಿಗೆ ಪಾದವೇ ಸ್ಥಾನವಾಯಿತ್ತು.
ಈ ಮಣಿಪೂರಕದಶದಳಗಳಲ್ಲಿ ಅಗ್ನಿದಳಗಳೆಂಟು, ಜಲದಳಗಳೆರಡು,
ಗುಹ್ಯದಲ್ಲಿರ್ಪ ಪೂರ್ವಜಲಕ್ಕೂ ಗುಹ್ಯದಳವೇ ಸ್ಥಾನವಾಯಿತ್ತು,
ಗುಹ್ಯದಲ್ಲಿರ್ಪ ಪೂರ್ವಜಲಕ್ಕೂ ಶರೀರದಲ್ಲಿರ್ಪ ದಕ್ಷಿಣಜಲಕ್ಕೂ
ಸಂಧಿಯಲ್ಲಿರ್ಪ ಆಗ್ನೇಯಬಿಂದುಜಲಕ್ಕೂ ಗುದವೇ ಸ್ಥಾನವಾಯಿತ್ತು,
ಆ ಬಿಂದುವು ಗುದಸ್ಥಾನದಲ್ಲಿ ನಿಂತು
ಗುಹ್ಯಮುಖದಲ್ಲಿ ನಿವೃತ್ತಿಯಾಗುತ್ತಿರ್ಪುದರಿಂ
ಆ ಬಿಂದುವಿಗೆ ಗುದವೇ ಸ್ಥಾನವಾಯಿತ್ತು.
ಇಂತಪ್ಪ ದಶದಳಂಗಳುಳ್ಳುದೇ ಮಣಿಪೂರಕ.
ಸ್ವಾಧಿಷ್ಠಾನದಲ್ಲಿ ಯಜನಕ್ಕೆ ಕರ್ಮಾಯಾಸದಿಂದುತ್ಪನ್ನವಾಗುವ
ಪೂರ್ವಜಲವೇ ಸ್ಥಾನವಾಯಿತ್ತು,
ಯಾಜನಕ್ಕೆ ಶರೀರದಲ್ಲಿರ್ಪ ದಕ್ಷಿಣಜಲಕ್ಕೂ
ಜಿಹ್ವೆಯಲ್ಲಿರ್ಪ ಪಶ್ಚಿಮಜಲಕ್ಕೂ
ಮಧ್ಯದಲ್ಲಿರ್ಪ ಜಲವೇ ಸ್ಥಾನವಾಯಿತ್ತು,
ಜಿಹ್ವೆಯಲ್ಲಿರ್ಪ ಪಶ್ಚಿಮಜಲವೇ ಅಧ್ಯಯನಸ್ಥಾನವಾಯಿತ್ತು,
ಜಿಹ್ವೆಯಲ್ಲಿರ್ಪ ಜಲಕ್ಕೂ ನೇತ್ರದಲ್ಲಿರ್ಪ ಉತ್ತರಜಲಕ್ಕೂ ಮಧ್ಯದಲ್ಲಿ
ನಾಸಿಕದಲ್ಲಿ ವಾಸನಾಮುಖದಿಂ ದ್ರವಿಸುತ್ತಿರ್ಪ

ವಾಯವ್ಯಜಲವೇ ಅಧ್ಯಾಪನಸ್ಥಾನಮಾಯಿತ್ತು,
ನೇತ್ರದಲ್ಲಿರ್ಪ ಆನಂದಜಲವೇ ದಾನಕ್ಕೆ ಸ್ಥಾನಮಾಯಿತ್ತು,
ನೇತ್ರದಲ್ಲಿರ್ಪ ಜಲಕ್ಕೂ ಗುಹ್ಯೆಯಲ್ಲಿರ್ಪ ಜಲಕ್ಕೂ ಮಧ್ಯದಲ್ಲಿ
ಮನೋಮುಖದಲ್ಲಿ ದ್ರವಿಸುತ್ತಿರ್ಪ ಮೋಹಜಲವೇ
ಪ್ರತಿಗ್ರಹಸ್ಥಾನಮಾಯಿತ್ತು,
ಇಂತಪ್ಪ ಆರುದಳಂಗಳುಳ್ಳುದೇ ಸ್ವಾಧಿಷ್ಠಾನಚಕ್ರವು,
ಆಧಾರದಲ್ಲಿ ಬ್ರಹ್ಮಚರ್ಯಕ್ಕೆ ತನುವೇ ಸ್ಥಾನಮಾಯಿತ್ತು,
ಬ್ರಹ್ಮಚರ್ಯವೆಂದರೆ ಕರ್ಮ.
''ಶರೀರಮಾದ್ಯಂ ಖಲು ಧರ್ಮಸಾಧನಂ'' ಎಂದಿರುವುದರಿಂದ
ಆ ಕರ್ಮಮೂಲವೇ ಶರೀರಮಾದುದರಿಂದದಕ್ಕೆ
ದೇಹವೇ ಸ್ಥಾನಮಾಯಿತ್ತು,
ಪುತ್ರಾದಿ ದಕ್ಷಿಣಪೃಥ್ವಿಯೇ ಗೃಹಸ್ಥಸ್ಥಾನಮಾಯಿತ್ತು,
ಶರೀರದೊಳಗೆ ಮಾಂಸಾದಿಧಾತುರೂಪಮಾಗಿರ್ಪ
ಪಶ್ಚಿಮಪೃಥ್ವಿಯೇ ವಾನಪ್ರಸ್ಥಮಾಯಿತ್ತು,
ಜಿಹ್ವೆಯಲ್ಲಿರ್ಪ ಉತ್ತರಪೃಥ್ವಿಯೇ ಪರಿಶುದ್ಧಮಾಗಿ
ಶಿವಪ್ರಸಾದಕಾರಣಮಾಗಿರ್ಪುದು.
ಜಿಹ್ವೆಯಲ್ಲಿರ್ಪ ಅನ್ನವೇ ದೀಪನಹರಣವೂ ತೃಪ್ತಿಕಾರಣವೂ
ಜ್ಞಾನಾನಂದಕಾರಣವೂ ಆಗಿರ್ಪುದು.
ಅಂತಪ್ಪ ಅನ್ನವೇ ಕೇವಲ ಸತ್ವಸ್ವರೂಪಮಾಗಿ
ರಕ್ಷಣರೂಪಮಾದುದರಿಂದಾ ಸತ್ವವು ಸ್ಥಾನಮಾಗಿರ್ಪುದೇ ಸಂನ್ಯಾಸವು,
ಇಂತಪ್ಪ ಚತುರ್ದಳಂಗಳಿಂದೊಪ್ಪುತ್ತಿರ್ಪುದೇ ಆಧಾರಚಕ್ರವು.
ಪೃಥ್ವಿಗೆ ಈಶಾನ್ಯರೂಪಮಾಗಿರ್ಪ ಅನ್ನವೇ
ಆಧಾರಚಕ್ರದಲ್ಲಿ ಆಚಾರಲಿಂಗಮಾಯಿತ್ತು,
ಆ ಅನ್ನವೇ ಪ್ರಾಣಮಾಗಿರ್ಪುದರಿಂ ನಾಸಿಕವನನುಸರಿಸುತ್ತಿರ್ಪುದು.
ಜಲಕ್ಕೆ ಈಶಾನ್ಯಮಾಗಿರ್ಪ ದಯಾರಸವೇ
ಸ್ವಾಧಿಷ್ಠಾನದಲ್ಲಿ ಗುರುಲಿಂಗಮಾಯಿತ್ತು,
ಅದು ಜಿಹ್ವಾಮುಖದಿಂ ರಕ್ಷಿಸುತ್ತಿರ್ಪುದರಿಂ ಜಿಹ್ವೆಯನನುಸರಿಸುತ್ತಿರ್ಪುದು.
ಅಗ್ನಿಗೆ ಈಶಾನ್ಯವಾದ ಹೋಮಾಗ್ನಿಯೇ
ಮಣಿಪೂರಕದಲ್ಲಿ ಶಿವಲಿಂಗಮಾಯಿತ್ತು,
ಅದು ಯಾವಜ್ಜೀವವೂ ಅಗ್ನಿಗಿಂತಲೂ ಭಿನ್ನಮಾಗದೆ ಪ್ರಕಾಶಿಸುತ್ತಿರುವುದರಿಂ
ತೇಜೋಮಯವಾದ ನೇತ್ರವನನುಸರಿಸುತ್ತಿರ್ಪುದು.
ವಾಯುವಿಗೆ ಈಶಾನ್ಯರೂಪಮಾದ ಅಕ್ಷರಮಯಮಾದ
ಮಂತ್ರವಾಯುವೇ ಅನಾಹತದಲ್ಲಿ ಜಂಗಮಲಿಂಗಮಾಯಿತ್ತು,
ಅದು ಕ್ಷಯವಿಲ್ಲದ್ದು ; ಆ ಮಂತ್ರವು ಶರೀರವನ್ನು ಪವಿತ್ರವಂ ಮಾಡಲು,

ಶರೀರ ಪೂರ್ವವಾಸನೆಯಳಿದು ಮಂತ್ರಮಯವಾಗಿರ್ಪುದರಿಂ
ತ್ವಕ್ಕನ್ನನುಸರಿಸಿರ್ಪುದು.
ಆಕಾಶಕ್ಕೆ ಈಶಾನ್ಯಮಾದ ಉಪದೇಶಾಕಾಶವೇ
ವಿಶುದ್ಧದಲ್ಲಿ ಪ್ರಸಾದಲಿಂಗವಾಯಿತ್ತು.
ಅದು ಪರತತ್ತ್ವಮಯವಾಗಿರ್ಪುದರಿಂ ಶ್ರೋತ್ರವನನುಸರಿಸಿರ್ಪುದು.
ಆತ್ಮನಿಗೆ ಈಶಾನ್ಯದಲ್ಲಿರ್ಪ ಶಿವಜ್ಞಾನವೇ
ಆಗ್ನೇಯದಲ್ಲಿ ಮಹಾಲಿಂಗವಾಯಿತ್ತು.
ಅದು ಮನದೊಳ್ಕೂಡಿ ಪಂಚೇಂದ್ರಿಯಂಗಳಿಗೂ ಮನಸ್ಸೇ
ಚೈತನ್ಯಮಾಗಿರ್ಪಂತೆ,
ಪಂಚಲಿಂಗಂಗಳಿಗೆ ತಾನೇ ಚೈತನ್ಯಮಾಗಿ ದೃಷ್ಟವಶದಿಂದುದಿಸಿದ ಕಾರಣ
ಆ ದೃಷ್ಟಕಾರಣವಾದ ಲಲಾಟವನನುಸರಿಸಿರ್ಪುದು.
ಆ ಶಿವಜ್ಞಾನದಿಂ ಗುರುಮುಖದಿಂದುದಿಸಿದ
ಕರ್ಮಯೋಗ್ಯಮಾದುದೇ ಇಷ್ಟಲಿಂಗವು.
ಆತ್ಮತೇಜಸ್ಸನ್ನೇ ಬಹಿಷ್ಕರಿಸಿ ಹೋಮಾಗ್ನಿಯಂ ಪ್ರಬಲವಂ ಮಾಡಿ
ಇಷ್ಟಲಿಂಗಪ್ರಸಾದಸಾಮಗ್ರಿಯನಾಹುತಿಗೊಟ್ಟು,
ಆ ತೇಜಸ್ಸನ್ನಾತ್ಮಸಮಾರೋಪಣೆಯಂ ಮಾಡಿ,
ತದ್ಯಜನಶೇಷಮಾಗಿರ್ಪ ರುಚಿಮಯದಿವ್ಯತೇಜಸ್ಸೇ
ಶಿವಧ್ಯಾನರೂಪಮಾದ ಪ್ರಾಣಲಿಂಗಾನುಭವವು.
ಆ ಶಿವಧ್ಯಾನದಿಂದ ಗುರೂಪದೇಶಸಿದ್ಧಮಾಗಿರ್ಪ
ಮಹಪ್ರಕಾಶವೇ ಪ್ರಾಣಲಿಂಗವು.
ತೃಪ್ತಿರೂಪಮಾದ ತತ್ವಾನುಭಾವವೇ
ನಿಜಾನುಭವಮಾಗಿರ್ಪುದೇ ಭಾವಲಿಂಗವು.
ಗುರುದತ್ತವಾದಿಷ್ಟಲಿಂಗದಿಂ ಶರೀರವು ಪೂತಮಾಗಿ,
ಜಂಗಮದತ್ತ ಶಿವಧ್ಯಾನತೇಜಸ್ಸಿನಿಂ ಪ್ರಾಣವು ಪವಿತ್ರಮಾಗಿ
ಮಹಾಚಿದ್ರೂಪಮಾದ ಶಿವಜ್ಞಾನನಿಮಿತ್ತಸಿದ್ಧಿಯಿಂ
ಭಾವವು ಪರಿಶುದ್ಧಮಾಗಿ,
ಆ ಶರೀರವೇ ಇಷ್ಟಲಿಂಗಕರಣಮಾಗಿಯೂ
ಪ್ರಾಣವೇ ಧ್ಯಾನಕರಣಮಾಗಿಯೂ
ಭಾವವೇ ಸಿದ್ಧಿಕರಣಮಾಗಿಯೂ
ಆ ಕರಣಂಗಳ್ಗೆ ಶಕ್ತಿಯಾಗಿಯೂ ಇರ್ಪುದರಿಂದಾ
ಲಿಂಗವೇ ಪತಿ ತಾನೇ ಸತಿಯಾಗಿರ್ಪುದರಿಂದೆರಡರಸಂಗವೇ
ಪರಮಾನಂದಮಯಮಾಗಿರ್ಪುದೇ ಪರಿಣಾಮವು.
ಅಂತಪ್ಪ ಲಿಂಗಸಂಗಪರಮಾನಂದರಸದಿಂ
ಪರವಶನಾಗುವಂತೆನ್ನಂ ಮಾಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೯೮ ||

೧೧೦೦

ಹಕಾರವೇ ಶಿವನು, ಬಿಂದುವೇ ಪ್ರಕೃತಿಯು,
ಇವು ಮಿಥ್ಯಾಮಿಥ್ಯಗಳಾಗಿಹವು.
ಮಿಥ್ಯಾಪ್ರಕೃತಿಯೊಳಗೆ ಕೂಡಿದ ಶಿವನೇ ಹಮ್ಮಾಯಿತ್ತು,
ನಿಶ್ಚೇಷ್ಟಿತವಾದ ಬ್ರಹ್ಮದಲ್ಲಿ ಕಾಲವಶಾದ್ವಿಕಾಸಮುಕುಳನಗಳಾಗುತ್ತಿರ್ಪುದರಿಂ
ಬಿಂದುವಿನ ವಾಸನೆಯೇ ಆ ಪರಮಾತ್ಮಸಂಗದಿಂ ಪ್ರಪಂಚಸೃಷ್ಟಿಕರ್ತೃವಾಗಿ,
ವಿಕಸನವೇ ಸ್ಥಿತಿಕರ್ತೃವಾಗಿ, ಮುಕುಳನವೇ ಸಂಹಾರಕರ್ತೃವಾಗಿ,
ಈ ಸೃಷ್ಟಿ, ಸ್ಥಿತಿ ಸಂಹಾರಗಳಿಗಾ ಬಿಂದುವೇ ಕಾರಣವಾಗಿ,
ಆ ಬ್ರಹ್ಮವೆ ಬಿಂದುರೂಪಪಾದ ಕಾರಣಕ್ಕೆ ತಾಂ ಕಾರಣವಾಗಿ,
ಆ ಬಿಂದು ಕಾರಣಪ್ರಕೃತಿಯುಕ್ತವಾಗಿ ಎಡೆಬಿಡದಿರ್ಪುದರಿಂ
ತಾನೇ ಹಂ ಆಯಿತ್ತು.
ಹಕಾರದಲ್ಲಿ ಕಕಾರವೂ, ಬಿಂದುವಿನಲ್ಲಿ ಸಕಾರವೂ
ಪ್ರಪಂಚ ಸೃಷ್ಟಿಸ್ಥಿತಿಸಂಹಾರನಿಮಿತ್ತವಾಗುತ್ಪನ್ನವಾಗುತ್ತಿರ್ಪುದರಿಂ
'ಕಸಯೋರ್ಯೋಗೇ ಕ್ಷ' ಎಂದಾಯಿತ್ತು.
ಹ ಎಂಬುದೇ ಲಿಂಗವು, ಅಕಾರ ಸಕಾರಯೋಗದಲ್ಲಿ
ಸಕಾರವೇ ಹಕಾರವಾಯಿತ್ತು.
ಆ ಪ್ರಕೃತಿಯೊಳ್ಪುಟ್ಟಿದ ಸಕಾರವೇ ಸ್ತ್ರೀಲಿಂಗವಾದುದರಿಂ ಶಕ್ತಿಯಾಯಿತ್ತು.
ಹಕಾರದಲ್ಲಿ ಹುಟ್ಟಿದ ಸಕಾರವೇ ಪುಲ್ಲಿಂಗವಾಯಿತ್ತು.
ಮಧ್ಯದಲ್ಲಿರ್ಪ ಹಂ ಎಂಬ ಪರಬ್ರಹ್ಮದಿಂ
ಭೂತಭವಿಷ್ಯಂಗಳಲ್ಲಿ ಪ್ರಕಾಶವಾಯಿತ್ತು.
ಆ ಭೂತಗಳಲ್ಲಿರ್ಪ ಸಕಾರದೊಳಗೆ ಕೂಡಿ ಸೋಹಂ ಆಯಿತ್ತು,
ಆ ಭವಿಷ್ಯದೊಳಗಿರ್ಪ ಕಕಾರದೊಳಗೆ ಕೂಡಿ ಕೋಹಂ ಆಯಿತ್ತು,
ಅದೇ ಭಿನ್ನವು ಇದೇ ಅಭಿನ್ನವು.
ಭಿನ್ನವೇ ಇಷ್ಟಲಿಂಗವು, ಅಭಿನ್ನವೇ ಪ್ರಾಣಲಿಂಗವು.
ಭಿನ್ನಾಭಿನ್ನಗಳ ಮಧ್ಯದಲ್ಲಿ ಪ್ರಕಾಶಿಸಿ ಇಷ್ಟಪ್ರಾಣಂಗಳಿಗೆ
ಚೈತನ್ಯವಾದ ಹಮ್ಮೇ ಭಾವಲಿಂಗವು.
ಮಹದಹಮ್ಮಿನಲ್ಲಿ ನನ್ನ ಹಮ್ಮುಡುಗಿ ಸುಮ್ಮನೆ
ಇರ್ಪಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೯೯ ॥

## ಹತ್ತನೆಯ ಅಧ್ಯಾಯ

೧೧೦೧

ಚಿದ್ರೂಪವಾದ ಮಹವೆಂದರೆ ಮಹಾಜ್ಞಾನವೆಂದರ್ಥ.
ಸರ್ವಜ್ಞನಾಮವುಳ್ಳ, ಅಖಂಡಪರಿಪೂರ್ಣಜ್ಞಾನವೇ ಆತ್ಮನು,

ಅವಂ ನಿಜಭಾವದಲ್ಲಿರ್ಪನು, ಆತ್ಮನೇ ಪರಶಿವನೆಂದು ತಿಳಿವುದು.
ತದಾತ್ಮಾನುಭವವೇ ತತ್ವವು, ಆತ್ಮನಿಂ ಭಿನ್ನಿಸಿದ
ತತ್ವಶೇಷವೇ ಪರರೂಪವಾದ ಪ್ರಸಾದವು.
ಅದು ಅನುಭವಿಸಿದಲ್ಲಿ ಒಳಗೆ ಪ್ರಕಾಶಿಸುತ್ತಿರ್ಪುದು,
ಸಾಧಿಸಿದಲ್ಲಿ ಹೊರಗೆ ಕಾಣಿಸುತ್ತಿರ್ಪುದು.
ಆಕಾಶಮಯ ಪರಪ್ರಸಾದವೆಂದೊಡೆ ಉತ್ಕೃಷ್ಟವಾಗಿ ಕಾಣಿಸುವುದೆಂದರ್ಥ.
ಅದು ಜ್ಞಾನಿಗೆ ಬಹಿರಂಗದಲ್ಲಿ ಮಲಿನವಾಗಿಯೂ
ಅಂತರಂಗದಲ್ಲಿ ನಿರ್ಮಲವಾಗಿಯೂ ಇರ್ಪುದು.
ಅಂತಪ್ಪ ಆತ್ಮಶೇಷವೇ ಆದಿಜಂಗಮವು.
ನಿರ್ಮಲಾತ್ಮನು ಸಾಕಾರಕ್ಕೆ ಬಪ್ಪಲ್ಲಿ ಚಲನವೇ ಆದಿಶಕ್ತಿಯಾದುದರಿಂ
ಆದಿಶಕ್ತಿಯುಕ್ತವೇ ಜಂಗಮವಾಯಿತ್ತು.
ಆದಿಜಂಗಮವೇ ವಾಯು, ಅದರ ಚಲನವೇ ಇಚ್ಛಾರೂಪವಾದಲ್ಲಿ
ಇಚ್ಛಾಕ್ಷೋಭನವೇ ಅಗ್ನಿಯಾದುದರಿಂ
ಇಚ್ಛಾರೂಪವಾದ ಶಿವನು ಆಯಿತ್ತು.
ಅದೇ ಜೀವೋಪದೇಶವಾಂಛೆಯಿಂ ಮಂತ್ರರೂಪವಾದ ಗುರುವಾಯಿತ್ತು.
'ಮನನಾ ತ್ರಾಯತ ಇತಿ ಮಂತ್ರಃ' ಎಂಬ ವ್ಯುತ್ಪತ್ತಿಯಿಂ ದೊಡ್ಡಿತ್ತಾಗಿ
ಜನರಂ ರಕ್ಷಿಸುವಂಥಾದ್ದೇ ಗುರುಮಂತ್ರವು.
ಆ ಮಂತ್ರವೇ ಕ್ರಿಯೆಯಾದುದರಿಂ ಕ್ರಿಯಾರೂಪವುಳ್ಳ ಆಚಾರವಾಯಿತ್ತು.
ಕ್ರಿಯೆಯೊಳಗೆ ಕೂಡಿ ರಾಜಿಸುತ್ತಿರ್ಪುದೇ
ಪೃಥ್ವಿಯಾದುದರಿಂ ಕ್ರಿಯಾಚಾರವಾಯಿತ್ತು.
ಆದುದರಿಂ ಮಹಾಜ್ಞಾನವೇ ಆತ್ಮನು,
ತದನುಭವತತ್ವವೇ ಪಂಚಭೂತರೂಪವಾದ ಶಕ್ತಿಯು,
ಪಂಚಭೂತಾಂಶವೇ ಶರೀರವು, ಅಕ್ಷಾಂಶವೇ ಜೀವನು.
ಜೀವನಿಗೆ ಮಹತ್ವದಲ್ಲಿ ಆತ್ಮನೊಳೈಕ್ಯವು,
ಶರೀರವು ಜೀರ್ಣವಾದಲ್ಲಿ ಭೂತದೊಳೈಕ್ಯವು,
ಶರೀರಮೋಕ್ಷಕ್ಕಿಂತಲೂ ದುಃಖವಿಲ್ಲ, ಜೀವನ್ಮುಕ್ತಿಗಿಂತಲೂ ಸುಖವಿಲ್ಲ,
ಪ್ರಪಂಚವೆಲ್ಲ ಆತ್ಮಶೇಷವಾದುದರಿಂ ಹೇಯರೂಪವಾದ
ದುಃಖವಾಯಿತ್ತು.
ಅದೇ ಶಿವನ ಪ್ರಸಾದವೆಂದು ತಿಳಿದು,
ಅದನ್ನು ಶಿವಾರ್ಪಣಮುಖದಲ್ಲಿ ಸೇವಿಸಬಲ್ಲಾತನೇ ಜೀವನ್ಮುಕ್ತನು.
ಅಂತಪ್ಪ ಜೀವನ್ಮುಕ್ತಿಯನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೦ ॥

೧೧೦೨

ಭಾವವೆಂಬುದು ಸತ್ವಪದಾರ್ಥವು.
'ಅಸಮನ್ತಾನ್ಮನ್ಯತೇ ಇತ್ಯಾತ್ಮಾ' ಎಂಬ ವ್ಯುತ್ಪತ್ತಿಯಿಂ
ಚೆನ್ನಾಗಿ ಪ್ರಕಾಶಿಸುತ್ತಿರ್ಪುದೇ ಆತ್ಮನು.
ಪ್ರಕಾಶವೆಂದರೆ ಮಹಾಜ್ಞಾನ, ಅದು ನಿಜವಂ ಹೊಂದಿರ್ಪುದು.
ಭಾ ಎಂದರೆ ಪ್ರಕಾಶ, ವ ಎಂದರೆ ವಹಿಸುವುದು,
ಆ ಪ್ರಕಾಶಾತ್ಮನಂ ವಹಿಸುವುದೇ ಭಾವವಾಯಿತ್ತು
ಆತ್ಮನು ಅನಾದಿಸಂಸಾರವೇ ತಾನಾಗಿರ್ಪುದರಿಂದಲೂ
ದಿವ್ಯಜ್ಞಾನಪ್ರಕಾಶದಿಂ ಸಕಲರನ್ನು ರಕ್ಷಿಸುತ್ತಿರ್ಪುದರಿಂದಲೂ
'ಭಯಾದವತೀತಿ ಭಾವಃ' ಎಂಬ ವ್ಯುತ್ಪತ್ತಿಯಿಂ ಭಾವವಾಯಿತ್ತು.
ವಿಭುವಾದ ಆತ್ಮನ ಕರ್ಮಕ್ಕೆ ತಾನು ಸಂಬಂಧವಾದುದರಿಂ
ಭಾವವೇ ಕ್ರಿಯಾರೂಪು.
ಜ್ಞಾನರೂಪಿಯಾದ ಶಿವನು ಅಕಾರದೊಳ್ಕೂಡಿ ಆತ್ಮನೆನಿಸಿರ್ಪುದರಿಂ
ಅಕಾರವೆಲ್ಲವೂ ಶಕ್ತಿ, ತಾನೊಬ್ಬನೇ ಶಿವನಾದುದರಿಂ,
ಅಂತಪ್ಪ ಅಕಾರರೂಪವಾಗಿ ಭಾವಸಂಬಂಧವಾಗಿರ್ಪುದೇ ಭಾವವು,
ಅಂತಪ್ಪ ಆದಿಶಕ್ತಿಸಂಗದಿಂ ಸಾಕಾರರೂಪಿಯಾದ ಶಿವನೇ ಇಷ್ಟಲಿಂಗವು,
ಅಂತಪ್ಪ ಶಿವಸಂಗದಿಂ ಸಾಕಾರರೂಪವಾದ ಭಾವವೇ ಕ್ರಿಯೆ,
ಆ ಕ್ರಿಯಾರೂಪವಾದ ಭಕ್ತನೇ ಶಕ್ತಿರೂಪಿಯಾದುದರಿಂ
ಲಿಂಗವೇ ಪತಿ, ಶರಣನೇ ಸತಿ, ಈರ್ವರ ಸಮರಸಾನಂದವೇ ಮೋಕ್ಷ.
ಇಂತಪ್ಪ ಸತ್ಯಜ್ಞಾನಾನಂದವೇ ಶಿವಶರಣರ ಸಂಗ,
ಅದೇ ಏಕಮೇವಾದ್ವಿತೀಯಂ ಬ್ರಹ್ಮವು.
ಅಂತಪ್ಪ ಬ್ರಹ್ಮಾನಂದಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೧ ॥

೧೧೦೩

ಸತ್ತೆಂದರೆ ಸತ್ತೇ, ಚಿತ್ತೆಂದರೆ ಚೇತನ,
ಆನಂದವೆಂದರೆ ಸಮ್ಯಕ್ಪ್ರಕಾಶ,
ಆ ಸದ್ಧರ್ಮವೇ ಸತ್ವ, ಆ ಸತ್ವವೇ ರಕ್ಷಣಕಾರಣವಾಗಿಹುದು,
ಚಿತ್ತೇ ಸಂಹಾರಕಾರಣವಾಗಿಹುದು.
ರಜಸ್ಸೆಂದರೆ ರಾಗ, ರಾಗವೆಂದರೆ ಆನಂದ.
ಆ ರಜಸ್ಸೇ ಕ್ರೀಡೆಯಲ್ಲಿಗಮಿಸುತ್ತಿರ್ಪುದರಿಂ ಸೃಷ್ಟಿಕಾರಣವಾಯಿತ್ತು.
ಸಚ್ಚಿತ್ಸಂಗವೇ ಆನಂದವಾದುದರಿಂ
ಸ್ವತಂತ್ರಧರ್ಮವಿಲ್ಲದೆ ಭಾವಪರವಾಯಿತ್ತು.
ಸತ್ತೇ ಶಕ್ತಿಯು, ಚಿತ್ತೇ ಶಿವನು, ಈ ಎರಡರ ಸಂಗವೇ ಆನಂದವು,

ಸತ್ತೇ ಭಕ್ತಿಯು, ಚಿತ್ತೇ ಜ್ಞಾನವು, ಇವೆರಡರಸಂಗವೇ ಮುಕ್ತಿಯು,
ಆ ಮುಕ್ತಿಯೇ ಆನಂದವು.
ಸದ್ಭಕ್ತಿಕರಣವೇ ಕಾಯ, ಜ್ಞಾನಕರಣವೇ ಚೇತಸ್ಸು,
ಮುಕ್ತ್ಯಾನಂದಕರಣವೇ ಭಾವವು.
ಸತ್ತುಸ್ಥೂಲವಾಗಿಹುದು, ಚಿತ್ತುಸೂಕ್ಷ್ಮವಾಗಿಹುದು,
ಆನಂದವು, ಕಾರಣವಾಗಿಹುದು.
ಈ ಆನಂದವು ಕರಮಾರ್ಗದಲ್ಲಿ ಮುಕ್ತಿರೂಪವಾಗಿಹುದು,
ದಕ್ಷಿಣಮಾರ್ಗದಲ್ಲಿ ಸೃಷ್ಟಿರೂಪವಾಗಿಹುದು.
ಆ ಸೃಷ್ಟಿಕಾರಣವೆಂತೆಂದೊಡೆ :
ಸತ್ತಿನಲ್ಲಿ ಕಾಮವೂ ಚಿತ್ತದಲ್ಲಿ ಕ್ರೋಧವೂ
ಆನಂದದಲ್ಲಿ ಮೋಹವೂ
ಸತ್ತಿನಲ್ಲಿ ಲೋಭವೂ ಚಿತ್ತಿನಲ್ಲಿ ಮದವೂ
ಆನಂದದಲ್ಲಿ ಮತ್ಸರವೂ ಇರ್ಪುದು.
ಸತ್ತೇ ಬಿಂದುರೂಪು, ಚಿತ್ತೇ ನಾದರೂಪು, ಆನಂದವೇ ಕಳಾರೂಪು.
ಕಾಮಮೋಹಗಳಿಂ ಸತ್ಕರ್ಮವೇ ದುಷ್ಕರ್ಮವಾಯಿತ್ತು,
ಕ್ರೂರ ಮದವೇ ಚಿದ್‌ಜ್ಞಾನವಾಯಿತ್ತು,
ಲೋಭಮತ್ಸರಗಳಿಂ ನಿರುಪಾಧಿಕಮೋಕ್ಷಾನಂದವೇ
ಸೋಪಾಧಿಕ ಪ್ರಪಂಚಾನಂದವಾಗಿ ದುಃಖಹೇತುವಾಯಿತ್ತು.
ಮದ ಬಿಂದುವರ್ತಿಯಲ್ಲಿ ಅಖಂಡನಿರುಪಾಧಿಕಚಿಜ್ಜ್ಯೋತಿಯೊಡನೆ
ಸೋಪಾಧಿಕವಾಗಿ ಕೂಡಿ ವಿಕಾರವಾಗಿರ್ಪುದೇ ಜೀವನು,
ನಿತ್ಯ ಭಾಸ್ವರಮಯವಾಗಿರ್ಪುದೇ ಶಿವನು.
ಅದರ ಸುಖವೇ ತನ್ನ ಸುಖವಾಗಿ, ಅದರ ದುಃಖವೇ ತನ್ನ ದುಃಖವಾಗಿ,
ಅದರ ಮೇಳನವೇ ತನ್ನ ಮೇಳನವಾಗಿ,
ಅದರ ಪ್ರಕಾಶವೇ ತನ್ನ ಪ್ರಕಾಶವಾಗಿ,
ಸ್ಥೂಲ ಸೂಕ್ಷ್ಮ ಕಾರಣವೆಂಬುಪಾಧಿಯೊಳಗೆ ಕೂಡಿ,
ಅದನು ಬಿಡದೆ, ಉಪಾಧಿಯು ಇದ್ದಂತಿರ್ಪುದೇ ಭವವು.
ಇದಕ್ಕೆ ಪರಿಹಾರವೆಂತೆಂದೊಡೆ :
ಚಿತ್ತುಜ್ಞಾನಮಧ್ಯದಲ್ಲಿರ್ಪ ಮನೋಮಲಿನವನ್ನು
ಸತ್ಪರೂಪವಾದ ಭಕ್ತಿಯಿಂ ಪರಿಹರಿಸಿದಲ್ಲಿ;
ಆ ಚಿತ್ಪ್ರಭೆಯಿಂ ಜ್ಞಾನಪ್ರಕಾಶವಾದಲ್ಲಿ,
ಆ ಜ್ಞಾನದಿಂ ಸತ್ತಿನಲ್ಲಿರ್ಪ ಕಾಮಾಹಂಗಳಳಿದು, ಶರೀರವು ಪೂತವಾದಲ್ಲಿ;
ಸದ್ಭಕ್ತಿಯು ಪ್ರಕಾಶವಾಗಿ, ಕ್ರೋಧಮದಂಗಳಳಿದು,
ಲೋಭಮತ್ಸರಂಗಳಳಿದು, ಭಕ್ತಿಜ್ಞಾನಗಳಿಂ ಭಾವವು ಶುದ್ಧವಾದಲ್ಲಿ
ಈ ಭಕ್ತಿಯಿಂದ ಲೋಭವಳಿದುದು.

ಆ ಜ್ಞಾನದಿಂದಾ ಮತ್ಸರವಳಿದು,
ಸ್ವಸ್ವರೂಪವು ಪ್ರಕಾಶವಾಗಿ, ಶಿವಧ್ಯಾನಪರಾಯಣನಾಗಿರ್ಪಲ್ಲಿ;
ಸದ್ರೂಪವಾದ ಗುರುವು ಚಿದ್ರೂಪವಾದ ಲಿಂಗವಂ
ಆನಂದರೂಪವಾದ ಜಂಗಮಮುಖದಲ್ಲಿ ಸಾಕಾರಕ್ಕೆ ತಂದು ಕೊಟ್ಟಲ್ಲಿ;
ಆ ಸತ್ತೇ ಇಷ್ಟವಾಗಿ, ತನ್ಮಹಿಮೆಯೇ ಆನಂದಭಾವವಾಗಿ,
ಸದ್ಭಕ್ತಿ ಕ್ರಿಯಾಮುಖದಿಂ ಶರೀರವು ಸವೆದು,
ಚಿದ್‌ಜ್ಞಾನೇಚ್ಛಾಮುಖದಿಂ ಮನಸ್ಸಳಿದು,
ಸಚ್ಚಿತ್ಪ್ರಕಾಶವಾದ ಇಷ್ಟಪ್ರಾಣಂಗಳು ಭಕ್ತಿಜ್ಞಾನಂಗಳನೊಳಕೊಂಡು,
ಆನಂದಮಯವಾದ ಭಾವದಲ್ಲಿ ಒಂದೆಯಾಗಿ,
ಆ ಮೋಕ್ಷಾನಂದದಲ್ಲಿ ಭಾವಂ ನಿರ್ಭಾವವಾಗಿರ್ಪುದೇ ಲಿಂಗೈಕ್ಯವು.
ಅಂತಪ್ಪ ಮೋಕ್ಷಾನಂದಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೨ ॥

೧೧೦೪

ಸತ್ತೇ ಬಿಂದುರೂಪವಾದ ಶರೀರವು,
ಚಿತ್ತೇ ನಾದರೂಪವಾದ ಪ್ರಾಣವು,
ಆನಂದವೇ ಕಳಾರೂಪವಾದ ಮನಸ್ಸು,
ನಾದರೂಪವಾದ ಚಿತ್ತಿಗೆ ಸತ್ತೇ ಶಕ್ತಿಯು,
ಬಿಂದುರೂಪವಾದ ಶಕ್ತಿಗೆ ಆನಂದವೇ ಶಕ್ತಿಯು,
ಕಳಾರೂಪವಾದ ಆನಂದಕ್ಕೆ ಜ್ಞಾನವೇ ಶಕ್ತಿಯು,
ಆನಂದಮಿಲ್ಲದ ಶರೀರವು ವ್ಯರ್ಥವು,
ಜ್ಞಾನಮಿಲ್ಲದ ಮನಸ್ಸು ವ್ಯರ್ಥವು.
ಈ ಶರೀರಕ್ಕೆ ಬಿಂದುಮೂಲ, ಆ ಜೀವನಿಗೆ ನಾದವೇ ಮೂಲ,
ಮನಸ್ಸಿಗೆ ಕಳೆಯೇ ಮೂಲ.
ಬಿಂದುರೂಪವಾದುದೇ ಸ್ಥೂಲಶರೀರವು,
ನಾದರೂಪವಾದುದೇ ಸೂಕ್ಷ್ಮಶರೀರವು,
ಕಳಾರೂಪವಾದುದೇ ಕಾರಣಶರೀರವು.
ಆನಂದಭಕ್ತಿಸಂಗದಿಂ ಬಿಂದುವರ್ತಿಸಿ ಕ್ರಿಯಾಶಕ್ತಿಸಂಗದಿಂ
ಭಿನ್ನರೂಪವಾದ ಸ್ವಸ್ತ್ರೀಗರ್ಭದಲ್ಲಿ ಬಿದ್ದಲ್ಲಿ
ಆ ಬಿಂದುವನವಗ್ರಹಸಿ, ಆ ಸ್ತ್ರೀರೇತಸ್ಸೇ ಘನೀಭವಿಸಿ ಪಿಂಡರೂಪವಾಗಿ,
ಅನೇಕ ಯಾತನೆಬಟ್ಟು, ಪೃಥ್ವಿಯಲ್ಲಿ ಸ್ಥೂಲರೂಪವಾಗಿ ಜನಿಸುತ್ತಿಹುದು.
ಆನಂದವು ಕ್ರಿಯಾರೂಪವಾದಂತೆ,
ಸತ್ತೇ ಮಂತ್ರರೂಪವಾಗಿಹುದು.
ಆ ಸತ್ತೇ ತ್ವಕ್ಕಿನ ಸಂಗದಿಂ ಚಿದ್ರೂಪವಾದ ನಾದವನನುವರ್ತಿಸಿ

ಸ್ವಶರೀರದಲ್ಲಿ ಜಿಹ್ವಾಮುಖದಲ್ಲಿ ಚೆಲ್ಲಿಸಲು
ಸ್ವಕೀಯಕರ್ಮ ಆನಂದವಂ ಗ್ರಹಿಸಿ
ಘನೀಭವಿಸಿ ತನ್ನಲ್ಲಿಯೇ ಸೂಕ್ಷ್ಮಶರೀರವು ಬೆಳಗುವುದು.
ಸೂಕ್ಷ್ಮಶರೀರವು ಸ್ಥೂಲಶರೀರವಂ ಬಿಟ್ಟು, ವೇದನೆಬಟ್ಟು, ಪೋಪುದು.
ಇಹಲೋಕದ ಸುಖದುಃಖಂಗಳಿಗೆ ಸ್ಥೂಲಶರೀರವು ಕಾರಣವಾಗಿರ್ಪಂತೆ,
ಪರಲೋಕದ ಸುಖದುಃಖಂಗಳಿಗೆ ಸೂಕ್ಷ್ಮಶರೀರವು ಕಾರಣವಾಗಿರ್ಪುದು.
ಬ್ರಾಹ್ಮಣಾದಿಯಾಗಿ ಚಂಡಾಲಪರ್ಯಂತವಾದ ಮನುಷ್ಯರು ಬಿಂದುರೂಪು,
ಇಂದ್ರಾದಿಯಾಗಿ ಪಿಶಾಚ ಪರ್ಯಂತವಾದ ದೇವತೆಗಳು ನಾದರೂಪು,
ಇವೆರಡಕ್ಕೂ ಜ್ಞಾನಯುಕ್ತವಾದ ಮನಸ್ಸು ಕಾರಣವಾಗಿಹುದು.
ಮನುಷ್ಯರು ನಾದಕರ್ಮದಿಂ ಬದ್ಧವಾಗಿಹರು,
ದೇವತೆಗಳು ಬಿಂದುಕರ್ಮದಿಂ ಬದ್ಧವಾಗಿಹರು.
ಕಾರಣ ಶರೀರದಲ್ಲಿ ನಿದ್ರೆಯೆ ಕಾರಣವಾಗಿರ್ಪುದರಿಂ
ಮನುಷ್ಯರಿಗೆ ಆಹಾರವೇ ಕಾರಣವೂ
ದೇವತೆಗಳಿಗೆ ಮೈಥುನವೇ ಕಾರಣವೂ ಆಗಿಹುದು.
ದೇವತೆಗಳು ಮಂತ್ರಪ್ರಸನ್ನರು, ಮನುಷ್ಯರು ತಂತ್ರಪ್ರಸನ್ನರು.
ದೇವತೆಗಳಿಗೆ ಶಬ್ದದಲ್ಲಿರ್ಪ ಅರ್ಥವೇ ಜೀವನವೂ
ಭೂಷಣವೂ ಆಗಿಹುದು,
ಮನುಷ್ಯರಿಗೆ ಬಿಂದುವಿನಲ್ಲಿರ್ಪ ಅರ್ಥವೇ
ಭೂಷಣವೂ ಜೀವನವೂ ಆಗಿಹುದು.
ಬಿಂದುರೂಪಾದ ಅರ್ಥವು ಆನಂದಮಯವಾಗಿರ್ಪುದು,
ಶಬ್ದದಲ್ಲಿರ್ಪ ಅರ್ಥವು ಸತ್ಯರೂಪವಾಗಿಹುದು,
ಕಳೆಯಲ್ಲಿರ್ಪ ಅರ್ಥವು ಜ್ಞಾನಸ್ವರೂಪವಾಗಿಹುದು.
ಸತ್ಯಮುಳ್ಳ ಪುರುಷನು ದೇವತಾಶ್ರೇಷ್ಠನು,
ಜ್ಞಾನಮುಳ್ಳ ಪುರುಷನೇ ಪ್ರಮಥಶ್ರೇಷ್ಠನು,
ಜ್ಞಾನಾನಂದಸಂಗದಿಂ ಕಾರಣಕಳಾರೂಪವಾದ ಮನಸ್ಸು ಲಯವಾದಲ್ಲಿ;
ಸ್ಥೂಲ ಸೂಕ್ಷ್ಮ ಸಂಬಂಧಗಳಳಿದು,
ಸದಾನಂದವೇ ಸ್ಥೂಲವಾಗಿ, ಸಚ್ಚಿತ್ಪ್ರಕಾಶವೇ ಸೂಕ್ಷ್ಮವಾಗಿ,
ಜ್ಞಾನಾನಂದವೇ ಕಾರಣವಾಗಿ,
ಶರೀರ ಜೀವ ಮನಸ್ಸೆಂಬ ಮಿಥ್ಯಾಭ್ರಮೆಯು ನಷ್ಟವಾಗಿ,
ಸತ್ಯಜ್ಞಾನಾನಂದರೂಪವೇ ಮಹಾಲಿಂಗವಾಗಿ,
ಇಂತಪ್ಪ ಮಹಾಲಿಂಗದಲ್ಲಿ ತಾನೆಂಬ
ಮಿಥ್ಯಾಭ್ರಮೆಯಳಿದಿರ್ಪುದೇ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೩ ॥

೧೧೦೫

ಚಿತ್ತೇ ಶಿವನು, ಸತ್ತೇ ವಿಷ್ಣುವು ಎಂಬುದರಲ್ಲಿ ಪ್ರಮಾಣವೇನೆಂದರೆ :
ಚಿತ್ತೇ ಜ್ಞಾನರೂಪು, ಸತ್ತೇ ಅಸ್ತಿರೂಪು.
ಅಸ್ತಿತ್ವದಿಂ ಜ್ಞಾನವೃದ್ಧಿಯಪ್ಪುದಲ್ಲದೆ ಲಯವಾಗದು,
ಆ ಜ್ಞಾನದಿಂ ಬಾಹ್ಯಾಸ್ತಿತ್ವಮೆಲ್ಲ ನಷ್ಟಮಪ್ಪುದು,
ನಿಜಾಸ್ತಿತ್ವವು ನಷ್ಟಮಾಗದಿರ್ಪುದರಿಂ ಪಲವಿಧ ಮನಂಗಳುತ್ಪನ್ನಮಾಗುವವು,
'ಚಿತೀ ಸಂಜ್ಞಾನೇ' ಎಂಬ ಧಾತುವಿನಿಂ ಸುಜ್ಞಾನಮಾತ್ರವೇ ಶಿವನಲ್ಲದೆ,
ಮಿಕ್ಕುದೆಲ್ಲ ಮಿಥ್ಯೆಯು.
ಮಿಥ್ಯೆಯಂ ಸಂಹರಿಸುವುದೇ ಧರ್ಮವೆಂದುದು ಕಾಪಾಲಮತವು.
ಆ ಸುಜ್ಞಾನದಲ್ಲಿರ್ಪ ಅಸ್ತಿತ್ವವೇ ಬ್ರಹ್ಮ
ಅದೇ ವಿಷ್ಣು, ಅದರಿಂ ಸಕಲಪ್ರಪಂಚವೂ ಉಂಟಾಗಿ,
ಅದಕ್ಕೆ ಅಸ್ತಿತ್ವವೇ ಉಂಟಾಗಿ ವಿಭುವಾಗಿ,
ಇಲ್ಲವೆಂಬುದು ಮಿಥ್ಯಾಭ್ರಮೆಯಾಗಿ,
ಎಲ್ಲವೂ ಇದ್ದಂತಿರ್ಪುದೇ ವೈಷ್ಣವಮತವು.
ಚಿತ್ತಿನಲ್ಲಿ ಸಂಹಾರತಮಸ್ಸು ಸ್ವಪ್ರಕಾಶದಿಂದುಂಟಾಗಿ,
ಆ ತಮಸ್ಸಿನಿಂದಿಲ್ಲಮಾಗಿ ಕ್ಷಣೇ ಕ್ಷಣೇ
ಪ್ರಪಂಚವುಂಟಿಲ್ಲಮಾಗುತ್ತಿರ್ಪುದೆಂಬುದೇ ಸಾಂಖ್ಯಮತವು.
ಕರ್ಮದಿಂ ಭಿನ್ನಗಳಾದ ಜಾತಿಧರ್ಮವರ್ಣಾಶ್ರಮಂಗಳನರಿತು
ದೇವತಾಪ್ರೀತಿಯಂ ಮಾಡುತ್ತಾ,
ದೇವತಾಮುಖದಿಂ ಸಚ್ಚಿದಾನಂದರೂಪಮಾದ ಪರಮಾತ್ಮನಂ ತೃಪ್ತಿಗೊಳಿಸಿ,
ಚತುರ್ವಿಧಫಲಂಗಳಂ ಹೊಂದಿರ್ಪುದೇ ತ್ರಯಿಮತವು.
ಯಮನಿಯಮಾದ್ಯಷ್ಟಯೋಗಗಳಿಂದ ಸದ್ರೂಪಮಾದ ಶರೀರದಲ್ಲಿ
ಚಿದ್ರೂಪಮಾದ ಪ್ರಾಣವಾಯುವನ್ನು ಮೂಲಾಧಾರದಿಂ
ಬ್ರಹ್ಮಸ್ಥಾನದವರೆಗೂ ಬಂಧಿಸಿ,
ಆ ಬ್ರಹ್ಮಸ್ಥಾನದಲ್ಲಿ ಚಿತ್ತು ಕೂಡೆ
ಪರಮಾನಂದಮಯಮಾಗಿರ್ಪುದೇ ಯೋಗಮತವು.
ಆ ಚಿನ್ಮಧ್ಯದಲ್ಲಿ ಸುತ್ತಿರ್ಪುದರಿಂ ಆ ಸದಾಶಿವನ ಗರ್ಭದಲ್ಲಿ
ಸಕಲಪ್ರಪಂಚಮಿರ್ಪುದೆಂಬುದೇ ನಿಜವು,
ಆ ಚಿತ್ತಿನ ನಿಜವೇ ಸತ್ತಲ್ಲದೆ, ಸತ್ತು ಬೇರೆ ಪದಾರ್ಥವಲ್ಲ,
ತನ್ನಲ್ಲಿ ಹುಟ್ಟಿದ ಗುಣವು ತನ್ನಲ್ಲಿಯೇ ಪ್ರಕಾಶಮಾಗಿ,
ತನ್ನಲ್ಲಿಯೇ ಅಡಗುತ್ತಿರ್ಪುದರಿಂದ ಅದು ತನ್ನ ಸ್ವಭಾವವಲ್ಲದೆ,
ಭಿನ್ನವಲ್ಲವೆಂಬುದೇ ಅದ್ವೈತಮತವು.
ಆ ಸತ್ತೇ ಸಕಲಪ್ರಪಂಚವು, ಚಿತ್ತೇ ಜ್ಞಾನವು,
ಚಿದ್ರೂಪಮಾಗಿರ್ಪವೇ ಇಂದ್ರಿಯಂಗಳು,

ಸದ್ರೂಪವಾಗಿರ್ಪುವೇ ವಿಷಯಂಗಳು.
ಸದನುಭವಕ್ಕೆ ಚಿತ್ತೇ ಕಾರಣವಾಗಿರ್ಪಂತೆ,
ಆ ವಿಷಯಂಗಳಿಗೆ ಇಂದ್ರಿಯಜ್ಞಾನವೇ ಕಾರಣವಾಗಿರ್ಪುದು.
ಅವೆರಡರ ಸಂಗವೇ ಆನಂದವು,
ಅಂತಪ್ಪ ಚಿದಾನಂದವಿಗ್ರಹವೇ ಮಹಾಲಿಂಗವು.
ಅಂತಪ್ಪ ಮಹಾಲಿಂಗವು ಮಾನಸಾದಿಯಾದ
ಷಡಿಂದ್ರಿಯಂಗಳೊಳ್ಚಿದಾನಂದಮೂರ್ತಿಯಾಗಿ,
ಆಚಾರಾದಿ ಲಿಂಗಂಗಳೆನಿಸಿ,
ಆ ವಿಷಯಮುಖದಿಂ ನಾಮ ರೂಪು ಕ್ರಿಯಗಳಲ್ಲಿ ಬಂದು,
ಆ ವಿಷಯವೇ ಇಷ್ಟವಾಗಿ, ತದ್‌ಜ್ಞಾನವೇ ಪ್ರಾಣವಾಗಿ,
ಎರಡೂ ಏಕವಾಗಿರ್ಪ ಆನಂದವೇ ಭಾವವಾಗಿ,
ಸಕಲಸುಖವೂ ಲಿಂಗಸುಖವಾಗಿ, ಅಂಗಭೋಗವೆಂಬ
ಮಿಥ್ಯಾಭ್ರಮೆಯಳಿದು,
ಲಿಂಗಭೋಗವೇ ನಿಜವಾಗಿ, ತಾನೆಂಬ ತಮೋಬಂಧವು
ಅಖಂಡಿತಜ್ಞಾನಚಿತ್ಪ್ರಕಾಶದಿಂ ಖಂಡಿತವಾಗಿ,
ತನ್ನಂ ಮರೆತು ಲಿಂಗವನರಿದಿರ್ಪುದೇ ವೀರಶೈವಮತವು.
ಅಂತಪ್ಪ ವೀರಶೈವಮತಮಹಿಮೆಯಲ್ಲಿ ಹೊಂದಿ
ಹೊಂದದಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೪ ॥

೧೧೦೬

ಚಿತ್ತಿಗೆ ಸತ್ತೇ ತಮೋಗುಣವು,
ಸತ್ತಿಗೆ ಚಿತ್ತೇ ಸತ್ವಗುಣವು.
ಅದೆಂತೆಂದೊಡೆ :
ಚಿತ್ತೆಂದರೆ ಪ್ರಕಾಶವು, ಸತ್ತೆಂದರೆ ಅಸ್ತಿತ್ವವು,
ಅದರಿಂದುಂಟಾದ ವಸ್ತುವೇ ಪ್ರಕಾಶಕ್ಕೆ ಮರೆಯಾಗಿ
ಛಾಯಾಮಾಯಾ ಹೇತುವಾಗಿರ್ಪುದರಿಂ
ಆ ಚಿತ್ತಿಗೆ ಆ ಸತ್ತೇ ತಮೋಗುಣವಾಯಿತ್ತು.
ಅದರಿಂದುಂಟಾದ ವಸ್ತುವೇ ಚಿತ್ಪ್ರಭೆಯಾಗಿ
ಪ್ರಕಾಶಿಸುತ್ತಿರ್ಪುದರಿಂದಾ ಸತ್ತಿಗೆ ಚಿತ್ತೇ ಸತ್ವಗುಣವಾಯಿತ್ತು.
ಈ ಶಿವಶಕ್ತಿಗಳ ಕ್ರೀಡಾನಂದವೇ ರಜೋಗುಣವಾಗಿ,
ಅದೇ ಸೃಷ್ಟಿಕರ್ತೃವಾಗಿ, ಕರ್ಮಕಾರಣವಾಗಿ,
ಆ ಕರ್ಮಮುಖದಲ್ಲುತ್ಪನ್ನವಾಗುವ ವಸ್ತುಗಳೂ ತಾನೆಯಾಗಿ,
ಸಕಲಪ್ರಪಂಚವೂ ಆ ಶಿವಶಕ್ತಿಗಳ ನಟನೆಯಲ್ಲದೆ ಭಿನ್ನವಿಲ್ಲವಾಯಿತ್ತು.

ವಿಚಾರಿಸಲು ವಸ್ತು ಒಂದೇ, ಆ ವಸ್ತುವಿನ ಗುಣವೇ ಶಕ್ತಿಯಾಯಿತ್ತು
ಪುರುಷನ ಗುಣಾನುವರ್ತಿಯೇ ಸ್ತ್ರೀಯಾಗಿ,
ತನ್ಮುಖದಲ್ಲಿ ಸಂಸಾರಪ್ರಪಂಚವೆಲ್ಲವೂ ಉತ್ಪನ್ನವಾಗುವಂತೆ,
ಚಿತ್ತಿನ ಗುಣವಾದ ಸತ್ತಿನಿಂದ ಸಕಲಪ್ರಪಂಚವು ಉತ್ಪನ್ನಮಾಗುತ್ತಿರ್ಪುದು.
ನಿನ್ನ ಗುಣಕ್ಕೆ ನೀನೇ ಗುಣವಾದುದರಿಂ
ಸಕಲಕ್ಕೂ ಕಾರಣಪದಾರ್ಥವು ನೀನೆಯಾಗಿ,
ಮಹಾಸಂಸಾರಿಯಾಗಿ ಭವನೆನಿಸಿರ್ಪ ನೀನು
'ಆತ್ಮಾ ವೈ ಪುತ್ರನಾಮಾಸಿ' ಎಂಬ ಶ್ರುತಿ ಪ್ರಮಾಣದಿಂ
ನೀನೇ ನಾನಾಗಿ ಜನಿಸಿರ್ಪುದನರಿತು,
ವಿಚಾರಿಸಿ ಪೊರೆಯದಿದ್ದರೆ ಮತ್ತಾರೆನಗೆ ದಿಕ್ಕು ?
ಆದರಿಂ ನಿನಗೆ ಮೊರೆಯಿಡುತಿರ್ಪೆನು, ನೀನೇ ನೋಡಿ ಕೂಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೦೫ ॥

೧೧೦೭

ಪ್ರಪಂಚವೆಂಬ ಮಹಾಕಮಲವು
ಸತ್ವರೂಪವಾದ ಜಾಗ್ರದಲ್ಲಿ ವಿಕಾಸವನ್ನೂ
ತಮೋರೂಪವಾದ ಸುಷುಪ್ತಿಯಲ್ಲಿ ಮುಕುಳನವನ್ನೂ ಹೊಂದುತಿರ್ಪುದು.
ಸತ್ವರೂಪವಾದ ಚಿತ್ತಿಗೆ ಕಮಲವೇ ಗುಣವು,
ತಮೋರೂಪವಾದ ಸತ್ತಿಗೆ ಸತ್ವವೇ ಗುಣವು.
ಪ್ರಪಂಚಕಮಲವೇ ಸದ್ರೂಪು, ತದ್ವಾಸನೆಯೇ ಆನಂದರೂಪು,
ತದನುಭವಕರ್ತೃವೇ ಚಿದ್ರೂಪು.
ಇಂತಪ್ಪ ಕಮಲವು ಚಿದನುಭವ ನಿಮಿತ್ತ ದಿವಸದಲ್ಲಿ ವಿಕಸಿತಮಾಗಿ,
ರಾತ್ರಿಯಲ್ಲಿ ಮುಕುಳಿತಮಾಗಿರ್ಪುದು.
ಮುಕುಳನವು ಅಪವಿತ್ರವೂ
ಅತಿವಿಕಸನವು ಪೂಜಾಯೋಗ್ಯಮಲ್ಲದುದೂ ಆದುದರಿಂದ
ಈಷದ್ವಿಕಸನರೂಪ ಸಂಧಿಕಾಲವೇ ಪೂಜಾಯೋಗ್ಯವಾಯಿತ್ತು,
ಹೃದಯಾದಿ ಇಂದ್ರಿಯಂಗಳೆಂಬ ಕಮಲಂಗಳು
ನಿದ್ರೆಯಲ್ಲಿ ಮುಕುಳಿತಗಳಾಗಿಯೂ
ಜಾಗ್ರದಲ್ಲಿ ವಿಕಸಿತಗಳಾಗಿಯೂ ಇರುತಿರ್ಪುದರಿಂದ,
ಆ ಪ್ರಬೋಧಕಾಲವೇ ಪೂಜಾಯೋಗ್ಯವಾಯಿತ್ತು,
ಅಂತಪ್ಪ ಕಾಲದಲ್ಲಿ ಸುವಾಸನಾಭರಿತಗಳಾದ
ಇಂದ್ರಿಯಕಮಲಗಳಲ್ಲಿ ಪ್ರಪಂಚವಿಚಾರ ಮಲಿನಗುಣಗಳೆಂಬ
ಭ್ರಮರಂಗಳು ಮುಟ್ಟುವುದಕ್ಕೆ ಮುನ್ನವೇ
ಆಚಾರಾದಿಲಿಂಗಂಗಳಂ ಚಿತ್ತಾದಿ ಭಾವಹಸ್ತಂಗಳಿಂದಿರಿಸಿ,

ಶಿವಾರ್ಪಣಸುಖದಿಂ ದ್ರವಿಸುತ್ತಿರ್ಪ ನಿರ್ಮಲಾನಂದ ಜಲದಿಂದಭಿಷೇಕಿಸಿ,
ಆಯಾಲಿಂಗಂಗಳಿಗಾಯಾ ಪದಾರ್ಥಂಗಳಿಂದ
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡಿ,
ಆ ಶಿವಪ್ರಸಾದವೇ ತಾನಾಗಿ,
ಆ ಶಿವಪ್ರಸಾದಾನುಭಾವದೊಳಗೆ ಸಮರಸವಾಗಿರ್ಪಾತನೆ ಪ್ರಸಾದಿಯು.
ಅಂತಪ್ಪ ಪುರುಷನೇ ಸತ್ಕರ್ಮಯೋಗ್ಯನು.
ಆತನು ಶಿವನಿರ್ಮಾಲ್ಯವು ಹೇಗೆ ನಮಸ್ಕಾರಯೋಗ್ಯವಾಗಿ
ಪವಿತ್ರವಾಗಿರ್ಪುದೊ ಹಾಗೆ ಪವಿತ್ರಮಾಗಿರ್ಪನು.
ಆದುದರಿಂದಾಯಾ ಕಾಲಂಗಳಲ್ಲಾಯಾ ಸ್ಥಾನಂಗಳಲ್ಲಾಯಾ
ಲಿಂಗಂಗಳಿಗಾಯಾ ವಿಷಯಪದಾರ್ಥಂಗಳಂ
ಸಾವಧಾನಮಾರ್ಗದಿಂದರ್ಪಿಸಿ,
ತತ್ಪ್ರಸಾದಾನುಭವಸುಖದೊಳಗೆ ಪರವಶನಾಗಿ
ನನ್ನಂ ಮರೆತು ನಿನ್ನನ್ನರಿತಿರ್ಪಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. || ೧೦೬ ||

೧೧೦೮

ನಾಸಿಕದಲ್ಲಿ ಸಂಚರಿಸುತಿರ್ಪ
ಪ್ರಾಣವಾಯುವಿನ ಗಮನಾಗಮನವೇ ಶಕ್ತಿಸ್ವರೂಪು,
ಅದೇ ರೇಚಕಪೂರಕಗಳಾಗಿರ್ಪುದು.
ಇವೆರಡರ ಸಂಗವೇ ಕುಂಭಕವು.
ಅದರ ಸಂಗದಲ್ಲುತ್ಪನ್ನಮಾದ ಮನಸ್ಸೇ ಸೃಷ್ಟಿಕರ್ತೃವಾದುದರಿಂ
ಭ್ರೂಮಧ್ಯವೇ ಸ್ಥಾನವಾಯಿತ್ತು,
ಅದಕ್ಕೆ ಪೂರಕವೇ ನಿಗ್ರಹಕರ್ತೃವೂ
ರೇಚಕವೇ ಸ್ಥಿತಿಕರ್ತೃವೂ ಆದುದರಿಂದ
ತತ್ಸಂಗದಲ್ಲಿ ತತ್ತದ್ವಿಷಯಗ್ರಹಣರೂಪಗಳಾದ
ಪಂಚಜ್ಞಾನಂಗಳು ಪಂಚಲಿಂಗಂಗಳಾಗಿರ್ಪುವು.
ಈ ಪಂಚಜ್ಞಾನಂಗಳು ಮನಸ್ಸಿನಲ್ಲಿ ಒಂದೆಯಾಗಿ
ಪ್ರಕಾಶಿಸುತ್ತಿರ್ಪುದರಿಂದಾ ಮನವೇ ಮಹವೆನಿಸಿಕೊಂಡಿತ್ತು,
ಅಂತಪ್ಪ ಮಹಾಜ್ಞಾನಕ್ಕೆ ತಾನಂಗಮಾಗಿರ್ಪ ಮನವೇ
ಮಹಾಲಿಂಗವಾಯಿತ್ತು,
ಅಂಗಕ್ಕೆ ಪ್ರಾಣವೇ ಚೈತನ್ಯವಾದಂತೆ,
ಇಂದ್ರಿಯಂಗಳಿಗೆ ಮನಸ್ಸೇ ಚೈತನ್ಯವು.
ಲಿಂಗಂಗಳಿಗೆ ಮಹಿಮೆಯೇ ಚೈತನ್ಯವು.
ಅಂತಪ್ಪ ಮಹಿಮೆಯುಳ್ಳ ಮನವೇ ಮಹಾಲಿಂಗವು.

ಅಂತಪ್ಪ ಮಹಾಲಿಂಗಧಾರಣಶಕ್ತಿಯುಳ್ಳ ಪುರುಷನೇ ಶಿವಭಕ್ತನು.
ಆ ಲಿಂಗವಂ ಪ್ರಪಂಚಸುಕ್ಷೇತ್ರದಲ್ಲಿಟ್ಟು,
ನಿಯಮಪೂರ್ವಕವಾಗಿ ಪೂಜಿಸುತಿರ್ಪಾತನೇ ದೇವತಾಪುರುಷನು.
ಅದನಪವಿತ್ರಸ್ಥಾನದಲ್ಲಿಟ್ಟು
ತನ್ನ ಭೋಗವನನುಭವಿಸುತ್ತಿರ್ಪಾತನೇ ಪತಿತನು, ಅವನೇ ಭವಿಯು.
ಒಳಗೂ ಹೊರಗೂ ಲಿಂಗರೂಪಮಾಗಿ ಪರಿಣಾಮಿಸಿ
ಆ ಲಿಂಗಮಧ್ಯದಲ್ಲಿರ್ಪ ತನ್ನಂಗಭೋಗವೇ ಲಿಂಗಭೋಗವಾಗಿ
ನಾಹಂಭ್ರಮೆಯಳಿದಿರ್ಪಾತನೆ ಲಿಂಗೈಕ್ಯನು.
ಅಂತಪ್ಪ ಲಿಂಗೈಕ್ಯಾನಂದಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೧೭ ॥

೧೧೮

'ತತ್ತ್ವಮಸಿ' ಎಂದರೆ ಅದೇ ನೀನಾಗುತ್ತಿ ಎಂಬರ್ಥವು.
ಅದೆಂಬುದೆ ನಿಜವು, ಆಗುವುದೆಂಬುದೇ ಸಿದ್ಧಿಯು,
ಆ ಸಿದ್ಧಿಯೇ ಆನಂದವು.
ಪೃಥಿವ್ಯಾದಿ ಪಂಚಭೂತಂಗಳು ತತ್ವಸ್ವರೂಪವಾಗಿಯೂ
ಪಂಚಬ್ರಹ್ಮಮಯವಾಗಿಯೂ ಇರ್ಪುದರಿಂದಾ
ತತ್ವವೇ ತಾನಾಗುತ್ತಿದ್ದೇನೆಂಬುದರ್ಥ.
ಅಂತಪ್ಪ ಪಂಚತತ್ವಗಳು ರಸಪೂರಿತ ಘಟನೆಗಳೋಪಾದಿಯದಲ್ಲಿ
ಕರ್ಮಪೂರಿತ ಶರೀರಂಗಳಾಗಲಾ ಕರ್ಮಮಧ್ಯದಲ್ಲಿ
ಛಾಯೆಯು ಪ್ರಕಾಶಿಸಲದೇ ತಾನೆಂಬುದೇ ಸತ್ವಗುಣವು,
ಆ ಬ್ರಹ್ಮವೇ ತಾನೆಂಬುದೇ ತಮೋಗುಣವು.
ಆ ಒಂದು ವಸ್ತುವೇ ಎರಡರಲ್ಲಿ ಭಿನ್ನವಾಗಿ
ಆ ಬ್ರಹ್ಮವನೆ ಪ್ರಪಂಚಕ್ಕೆ ತರುತ್ತಾ
ಆ ಜೀವನನ್ನು ಮೋಕ್ಷದೊಳ್ಪೊಂದಿಸುತ್ತಿರ್ಪುದರಿಂ
ತಾನೇ ಕಾರಣವಾಯಿತ್ತು.
ತತ್ವಪ್ರಕಾಶಮಾದೊಡೆ ಛಾಯಾಪ್ರಕಾಶವು,
ಛಾಯಾಪ್ರಕಾಶವೇ ಶಿವಾಲಂಕಾರವು,
ಅಲಂಕಾರಸಮಾಪ್ತಿಯೇ ತತ್ವಮೋಚನವು,
ತತ್ವಮೋಚನೆಯೇ ಛಾಯಾಮೋಕ್ಷವು,
ಛಾಯಾಮೋಕ್ಷವೇ ಲಿಂಗೈಕ್ಯವು.
ಅಂತಪ್ಪ ಲಿಂಗೈಕ್ಯಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೧೮ ॥

೧೧೧೦

ಆದಿಬಿಂದುವೇ ಶೂನ್ಯವಾದುದರಿಂ ಸಂಹಾರರೂಪವಾಯಿತ್ತು,
ಇದು ಜೀವನ ಆದಿಮಧ್ಯಾವಸಾನಗಳನಾಶ್ರೈಸಿರ್ಪುದರಿಂ ಹಂ ಆಯಿತ್ತು,
ವಿಸರ್ಜನರೂಪವಾದ ಹಕಾರವು ನಿಜಶೂನ್ಯದೊಳ್ಪ್ರತಿಫಲಿಸಲು
ತದ್ರೂಪವಾದ ಸಕಾರವಾಯಿತ್ತು,
ಸಂಹಾರರೂಪವಾದ ಬಿಂದುವೆಂಬ ದರ್ಪಣದಲ್ಲಿ
ಸೃಷ್ಟಿಸ್ಥಿತಿರೂಪವಾದ ಮಾಯಾಛಾಯೆಯೇ ಜೀವನವಾಯಿತ್ತು,
ಛಾಯಾಜನಿತವೇ ಭಾವವಾಯಿತ್ತು,
ಆ ಭಾವವೇ ಜೀವನಿಷ್ಠ ಧರ್ಮವು.
ಅದು ಪ್ರತಿವಸ್ತುವಂ ಪ್ರಕಾಶಪಡಿಸುತ್ತಿರ್ಪುದು,
ಸೃಷ್ಟಿಸ್ಥಿತಿರೂಪವಾದ ಪ್ರತಿವಸ್ತುವಿನಿಂ
ಸಂಹಾರದಲ್ಲಿ ತಾನುದಿಸಿ ಪ್ರತಿಯಳಿಯಲು,
ತನ್ನ ಜನ್ಮಸ್ಥಾನದಲ್ಲಿ ತಾಂ ಲಯಮಪ್ಪುದೇ ಮೋಕ್ಷವು.
ಆ ಹಮ್ಮೋ ತಾನೆಂಬಹಂಕಾರವು,
ಅಲ್ಲಿ ತೋರುತ್ತಿರ್ಪ ಛಾಯಾಜೀವನೇ ತನ್ನದೆಂಬಲ್ಲಿ,
ತತ್ಸಂಧಿಕಾಲದಲ್ಲಿ ತೋರ್ಪ ಮಮತ್ವವೇ ಮನವು,
ಆ ಜೀವನ ಕಾರ್ಯಕ್ಕದೇ ಕಾರಣವಾಗಿರ್ಪುದು,
ಅದು ಜೀವನಿಷ್ಠಧರ್ಮವಾದ ಭಾವದೊಳಗೆ ಕೂಡಿ
ಪಾತ್ರಾಪಾತ್ರಗಳಂ ವಿಚಾರಿಸುತ್ತಿರ್ಪುದೇ ಬುದ್ಧಿಯು,
ಆ ವಸ್ತುವಂ ತಿಳಿವ ವಿವೇಕವೇ ಚಿತ್ತವು,
ಈ ಮನೋಬುದ್ಧಿ ಚಿತ್ತಾಹಂಕಾರಗಳೇ ಜೀವನ ಅಂತಃಕರಣಂಗಳು.
ನಾದರೂಪಿಯಾದ ಜೀವನು ಅಕ್ಷರಸ್ವರೂಪಿಯಾದುದರಿಂ
ಮಂತ್ರದಿಂ ಪರಿಶುದ್ಧನಾಗಿ, ಕ್ರಿಯಾಮುಖದಲ್ಲಿ ಕರ್ಮಕ್ಕೆ ಬಂದು,
ಜ್ಞಾನಮುಖದಲ್ಲಿ ಮಹದರ್ಥಕ್ಕೆ ಕಾರಣನಾಗಿಹನು.
ಅವನು ಆ ಜ್ಞಾನಭಾವದೊಳ್ಕೂಡಿ, ಅಕ್ಷರವಂ ಮಹತ್ತಾಗಿ ಪ್ರಕಾಶಿಸಿ,
ಆ ಅಕ್ಷರವಂ ಬಿಟ್ಟು, ಅದರರ್ಥವಂ ಭಾವಮುಖದಲ್ಲಿ ಕೊಂಡು,
ಗೂಢವಾಗಿ ಮಿಥ್ಯಾರೂಪವಾಗಿರ್ಪ ಅರ್ಥವಂ ಪ್ರಕಾಶಿಸಿ,
ನಿಜಸಿದ್ಧಾಂತವಂ ಮಾಡಿ, ಸಂಶಯಮುಖದಲ್ಲಿ ಪುನರಾಗಮನಕ್ಕೆ ಬಾರದೆ,
ನಿಜವಾಗಿ ಪರಮಾನಂದದೊಳಗೆ ಹೊಂದಿ,
ಪ್ರಕಾಶಿಸಿ ಸಕಾರವೆಂಬ ಛಾಯಾಯೋಗವನಳಿಯಲು,
ಉಳಿದ ಪದಾರ್ಥವೇ ಮುಕ್ತಿಯು.
ಅಂತಪ್ಪ ಮುಕ್ತಿಸಾಮ್ರಾಜ್ಯಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ. ॥ ೧೯ ॥

ಶ್ರೀಮತ್ಪರಶಿವೇಶಾನಮುಖಸಂಜಾತ ಸ್ಥೂಲಗಣೇಶ್ವರರೂಪ ಶ್ರೀ ಮಹಾ ಘನ ದೊಡ್ಡದೇಶಿಕಾರ್ಯಕರಕಂಜೋದ್ಭವ ಮಾಸ್ತಿ ಸತ್ಕುಲಪ್ರದೀಪ ಇಮ್ಮಡಿ ಕಾರ್ಯಭೂಪತಿಭಾರ್ಯಾ ಕುಪ್ಪಮಾಂಬಾ ಗರ್ಭಾಬ್ಧಿಸುಧಾಕರಾಯಮಾನ ಮುಮ್ಮಡಿ ಕಾರ್ಯಕ್ಷಿತೀಂದ್ರ ವಿರಚಿತಮಾದ ರೇವಣಸಿದ್ಧೇಶ್ವರ ಮರುಳ ಸಿದ್ಧೇಶ್ವರೈಕೋರಾಮ ಪಂಡಿತಾರ್ಯಾಲ್ಲಮಪ್ರಭು ಚೆನ್ನಬಸವೇಶ್ವರಾದಿ ಪೂಜ್ಯ ಪಾದ ವಿರಚಿತ ಸಕಲಗ್ರಂಥ ಸಾರಭೂತಮಾದ ವೀರಶೈವಸಿದ್ಧಾಂತರೂಪ ವೇದಸಂಜೀವಿನಿ ಯಲ್ಲಿ, ಹತ್ತನೇ ಅಧ್ಯಾಯವು ಮುಗಿದುದು.

## ಹನ್ನೊಂದನೆಯ ಅಧ್ಯಾಯ

೧೧೧೧

ಸೃಷ್ಟಿ ಕರ್ತುವಾದ ಸ್ತ್ರೀತ್ವಾಧಿದೇವತೆಯಾದಾತನೆ ಬ್ರಹ್ಮನು.
ಸ್ಥಿತಿಕರ್ತುವಾದ ಪುರುಷಾಧಿದೇವತೆಯಾದ ಆದಿಪುರುಷನೆ ವಿಷ್ಣು.
ಇಂತಪ್ಪ ಸ್ತ್ರೀ ಪುರುಷವೇತ್ತಿಗಳುಭಯಪಾರ್ಶ್ವಂಗಳ ಉಳ್ಳ ಲಿಂಗವೇ ನಪುಂಸಕ.
ಪುಂಸ್ತ್ವ ಸ್ತ್ರೀ ಸುಖವನರಿಯದು, ಸ್ತ್ರೀತ್ವ ಪುಂಸುಖವನರಿಯದು.
ಇಂತಪ್ಪ ಸ್ತ್ರೀ ಪುರುಷ ಸುಖ ತಾನೆಯಾಗನುಭವಿಸುವುದೇ ಲಿಂಗ.
ಸ್ತ್ರೀ ಪುರುಷರಲ್ಲಿರ್ಪ ಸೃಷ್ಟಿ ಸ್ಥಿತಿ ಕರ್ತೃತ್ವ ತಾನೆಯಾಗಿ,
ನಪುಂಸಕನಾಗಿ, ಸ್ತ್ರೀ ಪುರುಷ ಸುಖವನನುಭವಿಸುತ್ತ
ತಾ ತೋರದೆ, ತನ್ನ ಸಂಹಾರಕೃತ್ಯವ ತೋರಿಸುತ್ತ
ಸ್ತ್ರೀ ಪುಂ ಭಾವವೆಲ್ಲವನ್ನು ತಿಳಿವುತ್ತಿರ್ಪುದರಿಂ
ಸರ್ವಜ್ಞತ್ವದ ಪ್ರಕಟವ ಮಾಡುತ್ತಿರ್ಪುದೆ ಮಹಾಲಿಂಗ.
ಪುರುಷಯಂತ್ರ ಕರ್ತುವಾಗಿಹುದೆ ಲಿಂಗ;
ಸ್ತ್ರೀಯಂತ್ರ ಕರ್ತುವಾಗಿಹುದೆ ಪುರುಷನು.
ಕರ್ಮಕರ್ತುವೆ ಬ್ರಹ್ಮನು, ಜ್ಞಾನಕರ್ತುವೆ ವಿಷ್ಣು
ಈ ಉಭಯ ಕರ್ತೃತ್ವವೇ ಲಿಂಗ.
ಪರಮಾತ್ಮನ ನಾಲ್ಕು ಮುಖವೆ ಬ್ರಹ್ಮನು,
ಐದನೆಯ ಮುಖವೆ ವಿಷ್ಣು ,ಇಂತು ಐದು ಮುಖದಲ್ಲಿ ಸಾಕಾರವ ತೋರಿ,
ಆ ಸಾಕಾರದ ಸೃಷ್ಟಿ ಸ್ಥಿತಿಯೂ ತಾನೆಯಾಗಿ ತೋರಿ
ಅಂತರ್ಮುಖದಲ್ಲಿ ಸರ್ವಜ್ಞನಾಗಿ,
ಅಂತರ್ಮುಖದಲ್ಲಿ ತಾನು ಹೇಗೆ ಗೂಢವೋ
ತನ್ನ ಸಂಹಾರ ಕೃತ್ಯವ ಹಾಗೇ ಗೂಢವ ಮಾಡಿ ತೋರುತಿರ್ಪಾತನೆ ಮಹಾಲಿಂಗ.
ಶರೀರದಲ್ಲಿ ಸ್ತ್ರೀಪುರುಷ ಭೇದ ಕಾಣಿಸುತ್ತಿಹುದು.
ಜೀವನಲ್ಲಿ ಅಭೇದವಾಗಿ, ಒಂದೇಯಾಗಿಯಿಹುದರಿಂ ಅದೇ ನಪುಂಸಕ.
ತದ್ಧರ್ಮ ಮನಸ್ಸಿನಲ್ಲಿ ಕಾಣಿಸುತ್ತಿಹುದು,
ಇದೇ ಸಂಸಾರ, ಅದೇ ವಿರಕ್ತಿ

ಸದ್ಯೋಜಾತ ವಾಮದೇವಾಘೋರ ತತ್ಪುರುಷ ರೂಪವಾಗಿರ್ಪ
ಪೃಥ್ವಿಯಪ್ಪು ತೇಜೋವಾಯುಗಳೆ ಬ್ರಹ್ಮಸ್ವರೂಪು.
ಈಶಾನರೂಪವಾದ ಆಕಾಶವೆ ವಿಷ್ಣುಸ್ವರೂಪು.
'ವಿಷ್ಣುರ್ ವ್ಯಾಪ್ತಾ' ಯೆಂಬ ಧಾತ್ವರ್ಥಮುಳ್ಳುದೆ ವಿಷ್ಣುಶಬ್ದಮಾದುದರಿಂ
ವಿಷ್ಣುಮಯವೇ ಆಕಾಶ; ಈ ಪಂಚಬ್ರಹ್ಮವೆ ಜಗತ್ತು,
ಅಂತಪ್ಪ ಜಗತ್ತಿಗೆ ಚೈತನ್ಯವಾಗಿ
ಅಂತರ್ಯಾಮಿಯಾಗಿರ್ಪ ಆತ್ಮನೆ ಸದಾಶಿವನು.
ಕರಣೇಂದ್ರಿಯದಲ್ಲಿ ಭಾವರೂಪವಾಗಿ
ಜ್ಞಾನೇಂದ್ರಿಯದಲ್ಲಿ ನೇತ್ರರೂಪವಾಗಿ, ಕರ್ಮೇಂದ್ರಿಯದಲ್ಲಿ ಗುಹ್ಯರೂಪವಾಗಿ,
ಆದಿ ಮಧ್ಯಾವಸಾನಗಳಲ್ಲಿ
ಉತ್ತಮೇಂದ್ರಿಯರೂಪನಾಗಿರ್ಪಾತನೆ ವಿಷ್ಣು;
ಮಿಕ್ಕಿನಿಂದ್ರಿಯಂಗಳೆ ಬ್ರಹ್ಮವು.
ಆ ಗುಹ್ಯೇಂದ್ರಿಯದಲ್ಲಿ ಆನಂದ ಬಿಂದುರೂಪವಾಗಿ
ನೇತ್ರೇಂದ್ರಿಯದಲ್ಲಿ ಜ್ಞಾನಕಳಾರೂಪವಾಗಿ
ಭಾವೇಂದ್ರಿಯದಲ್ಲಿ ನಿಜನಾದರೂಪವಾಗಿ
ಸತ್ಯಜ್ಞಾನಾನಂದ ಮಹಿಮೆಯಂ ಪ್ರಕಟವಂ ಮಾಡುತ್ತ
ಜೀವಾತ್ಮನಾಗಿ ಹೃದಯದಲ್ಲಿರ್ದು ಸೃಷ್ಟಿಸುತ್ತ
ಅಂತರಾತ್ಮನಾಗಿ ಲಲಾಟದಲ್ಲಿರ್ದು ನೋಡಿ ರಕ್ಷಿಸುತ್ತ
ಪರಮಾತ್ಮನಾಗಿ ಭಾವಬ್ರಹ್ಮಸ್ಥಾನದಲ್ಲಿರ್ದು
ತಮೋ ಮುಖದಲ್ಲಿ ಸಂಹರಿಸುತ್ತಿರ್ಪಾತನೆ ಪರಮಾತ್ಮನು.
ಇಂತಪ್ಪ ಭೇದತ್ರಯವುಳ್ಳ ಅಖಂಡಾತ್ಮನೆ ಶಿವನು.
ಎಲ್ಲದು ಉಳ್ಳುದೆ ಪೃಥ್ವಿ;
ಕೇವಲವುಳ್ಳುದೆ ಜಲ;
ಧೂಮ ಮಾತ್ರಮುಳ್ಳುದೆ ಅಗ್ನಿ.
ತಾ ನಿರಾಕಾರವಾಗಿ, ತನ್ನ ಗುಣವ ಸಾಕಾರವಾಗಿ
ತೋರುತಿರ್ಪುದೆ ವಾಯು.
ತಾ ಸಾಕಾರವಾಗಿ ತನ್ನ ಗುಣವ ಸಾಕಾರ ನಿರಾಕಾರವಾಗಿ
ತೋರುವುದೆ ಆಕಾಶ.
ತಾನ್ಕೇವಲವು ನಿರಾಕಾರವಾಗಿ
ತನ್ನ ಗುಣವು ನಿರಾಕಾರವಾಗಿ
ತನ್ನಲ್ಲಿ ಮತ್ತೊಂದುಯೇನೂ ಇಲ್ಲದೆ
ಪೃಥ್ವಿಗೆ ಹೊರಗೆ ಏನೂ ಏನಿಲ್ಲವೋ
ಹಾಗೆ ಆತ್ಮನ ಒಳಗೆ ಏನೂ ಇಲ್ಲ,
ತನ್ನೊಳಗೆ ಏನೂ ಇಲ್ಲದೆ

ತನ್ನ ಹೊರಗೆ ಎಲ್ಲ ಉಂಟಾಗಿರ್ಪುದೆ ಲಿಂಗವೆಂದರಿದು
ಸಂದಣಿಯೊಳಗಿರ್ಪ ಭವದಂದುಗಕಲಸಿ
ಯಾರೂ ಇಲ್ಲದೆ ಅಭೇದ್ಯವಾಗಿ
ನಿರ್ಭಯವಾಗಿರ್ಪ ನಿನ್ನ ಹೃದಯ ಮಧ್ಯದಲ್ಲಿ
ನನ್ನನಿಟ್ಟು ಕಾಲ ಕಾಮರ ಭಯ ಕಳದುಳುಹಿ ಸಲಹು ಕಂಡಾ
ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೇ. ॥ ೧ ॥

೧೧೧೨

ಚತುರ್ಯುಗಂಗಳು ಪುಂಗವ ರೂಪಾಗಿರ್ಪ
ಧರ್ಮಪದಂಗಳನಾಶ್ರಯಿಸಿರ್ಪುದರಿಂ
ಇವೆಲ್ಲಕ್ಕೂ ಧರ್ಮವೇ ಕಾರಣವಾಯಿತ್ತು.
ಆದಿಯಲ್ಲಿ ಧರ್ಮಯುಗದಲ್ಲಿ ಕರ್ಮ ಪುಟ್ಟಿ
ಕರ್ಮವಿರಿವಿಗೊಳುತಿರ್ಪುದೆ ಅಧರ್ಮವಾಗಿ
ಅದಕ್ಕೆ ತಾವುಗೊಟ್ಟು ಧರ್ಮಪಾದವನೆತ್ತುತ್ತಿರಲು
ಅದೇ ಯುಗ ಪ್ರಮಾಣವಾಗಿ ಧರ್ಮದೊಳಗೆ ಕೂಡಿ
ಕಾಲನಷ್ಟವಾಗುತ್ತಿರ್ಪುದರಿಂ
ಆದಿ ಯುಗಂಗಳಧಿಕವಾಗಿ
ಅಂತ್ಯಯುಗಂಗಳು ಸ್ವಲ್ಪವಾಯಿತ್ತು.
ಧರ್ಮಾಧರ್ಮ ವ್ಯತ್ಯಯವೆ
ಚತುರ್ಯುಗದಲ್ಲಿ ಚತುರ್ವರ್ಣಾತ್ಮಕವಾಗಿ
ಚತುರ್ವಿಧ ಪುರುಷಾರ್ಥಂಗಳೆ
ಚತುರ್ವಿಧ ಪುರುಷರಾಗಿರ್ಪರು.
ಧರ್ಮವೇ ಶೂದ್ರ, ಅರ್ಥವೇ ವೈಶ್ಯ,
ಕಾಮವೆ ಕ್ಷತ್ರಿಯ, ಮೋಕ್ಷವೆ ಬ್ರಾಹ್ಮಣನಾಯಿತ್ತು.
ಬ್ರಹ್ಮಾಂಡಮಯವಾಗಿರ್ಪ ಮಹಾಯುಗದಲ್ಲಿ
ಪಿಂಡಾಂಡಮಯವಾಗಿರ್ಪ
ಪುರುಷಾಯುಃ ಪ್ರಮಾಣವು ಧರ್ಮವ
ಯುಗಂಗಳು ಆಶ್ರೈಸಿದಂತೆ,
ಯುಗಂಗಳನಾಯುಷ್ಯಗಳಾಶ್ರೈಸಿ
ಸ್ವಲ್ಪ ಮಾಗುತ್ತಿರ್ಪುದು.
ಅದೆಂತೆಂದಡೆ :
ಬ್ರಹ್ಮಾಂಡ ಪುರುಷನ ಜೀವನೆ ಜೀವನಾಗಿ,
ದೇವತೆಗಳೆ ಕರಣಂಗಳಾಗಿರ್ಪರು.
ಅಂತಪ್ಪ ಬ್ರಹ್ಮಾಂಡವೆ ಪಿಂಡಾಂಡವಾಗಿ,

ಆ ಸ್ಥೂಲವೆ ಸೂಕ್ಷ್ಮವಾಗಿರ್ಪುದರಿಂ
ಬಾರ್ಹಸ್ಪತ್ಯಮಾನವೆ ಆಯು ನಿರ್ಣಯಕಾಲವಾಯಿತ್ತು.
'ಶತಾಯುಃ ಪುರುಷಶ್ಯತೇಂದ್ರಿಯ'ಯೆಂಬ ಶ್ರುತಿಯಿಂ
ಅಧರ್ಮ ಪದವೆ ಪುರುಷ ರೂಪವಾಗಿರ್ಪುದರಿಂ
ಅರ್ಧವುವನಾಶ್ರೈಸಿ ಚತುರ್ಯುಗಂಗಳಲ್ಲಿ
ಆಯುಃ ಪ್ರಮಾಣವಾಯಿತ್ತು.
ಅದರಿಂ ಬಾರ್ಹಸ್ಪತ್ಯಮಾನ ಬ್ರಹ್ಮಾಂಡದಲ್ಲಿ
ನಾಲ್ಕು ಲಕ್ಷವು ಮೂವತ್ತೆರಡು ಸಾವಿರಕ್ಕೂ
ಪಿಂಡಾಂಡದಲ್ಲಿ ನೂರುವರ್ಷಕ್ಕೂ
ಸಂಬಂಧವಾದುದೆಂತೆಂದಡೆ :
ಜೀವನ ಬ್ರಹ್ಮಾಂಡ ಭ್ರಮಣ ಚಕ್ರಗತಿ
ಮುನ್ನೂರರುವತ್ತಾದಡೆ, ಪ್ರಾಗ್ಗತಿ ಐದು ಘಳಿಗೆಯೆಂದರೇರುತಿರ್ಪುದರಿಂ
ಆ ವರುಷಕ್ಕೂ ಐದು ಘಳಿಗೆ ರಾಶಿ ಒಂದೆಯಾಯಿತ್ತು.
ನಾಲ್ಕು ಸಾವಿರದ ಮುನ್ನೂರಿಪ್ಪತ್ತೈದು ಘಳಿಗೆಗಳೆ
ಒಂದು ವರುಷಮಪ್ಪಂತೆ ನೂರುವರುಷವನ್ನು
ನಾಲ್ಕು ಸಾವಿರ ಮುನ್ನೂರಿಪ್ಪತ್ತರಲ್ಲಿ ಹೆಚ್ಚಿಸಲು
ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ವರುಷವಾಯಿತ್ತು.
ಅದೇ ಧರ್ಮಪುರುಷ ಪ್ರಮಾಣವಾಯಿತ್ತು.
ಕೃತಯುಗದಲ್ಲಿ ನಾಲ್ಕು, ತ್ರೇತೆಯಲ್ಲಿ ಮೂರು,
ದ್ವಾಪರದಲ್ಲಿ ಎರಡು, ಕಲಿಯುಗದಲ್ಲಿ ಒಂದು
ಇಂತು ಚತುರ್ವಿಧ ಪುರುಷತ್ವವೆ
ದಶವಿಧ ಧರ್ಮ ಪುರುಷವಾಗಿ,
ಎಲ್ಲವು ಸಹಸ್ರ ಪುರು[ಷ] ಒಂದೆಯಾಗಿ ಪರಿಣಾಮಿಸಿ
ಹತ್ತೊಂದಾಗಿ, ಒಂದು ಹತ್ತಾಗಿರ್ಪುದೆ ಆಯುಃಪ್ರಮಾಣ.
ಈ ಒಂದು ಹತ್ತಾಗಿರ್ಪನೆ ವಿಷ್ಣು,
ಹತ್ತೊಂದಾಗಿರ್ಪನೆ ಶಿವನು,
ಇವು ನಾಲ್ಕಾಗಿರ್ಪನೆ ಬ್ರಹ್ಮನು.
ಇಂತಪ್ಪ ತ್ರಿಮೂರ್ತ್ಯಾತ್ಮಕಮಾಗಿರ್ಪ ಆಯುವೆ ಪ್ರಾಣಲಿಂಗ.
ಇಂತಪ್ಪ ಸಹಸ್ರಾಯುವೆ ಸಹಸ್ರ ಮುಖದಲ್ಲಿ ಹೆಚ್ಚುತ್ತಿರಲು
ಅದೇ ಬ್ರಹ್ಮಗೊಂದು ದಿವಸವಾಯಿತ್ತು.
ಜೀವನು ಒಂದು ಮಹಾಯುಗಕ್ಕೆ
ಸಾವಿರ ವರುಷ ಪುರುಷ ಜನ್ಮವೆತ್ತುತ್ತಿಹನು.
ಅದರಿಂ ಶತಾಯುವು ಬದುಕಿದ ಆ ಪುರುಷನಿಗೆ
ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ವರುಷಪರಿಯಂತವು

ಪುನಃ ಮನುಷ್ಯ ಜನ್ಮವಿಲ್ಲ.
ಅರ್ಧಾಯುಷ್ಯದಲ್ಲಿ ಮಡಿದ ಪುರುಷನು,
ಕಡಿಮೆ ಆಯುಷ್ಯವನನುಭವಿಸುವ ನಿಮಿತ್ಯ ಮನುಷ್ಯ ಜನ್ಮವನೆತ್ತುವನು.
ಆದಿಕಾಲಂಗಳಿಂದ ಅಂತ್ಯಕಾಲ ಅಧರ್ಮಮಯವಾಗಿರ್ಪುದರಿಂ
ಸ್ವಲ್ಪಾಯುಷ್ಯದಲ್ಲಿ ಮಡಿದವನು
ಅಂತ್ಯಕಾಲಂಗಳಲ್ಲಿ ಜನ್ಮವೆತ್ತುತ್ತಿರ್ಪುದರಿಂ
ಸ್ವಲ್ಪಾಯುಷ್ಯವೆ ಹೀನವಾಯಿತ್ತು.
ಮೊದಲ ಜನ್ಮದಲ್ಲೆ ಕಾಲ ಸವೆದು
ಈ ಜನ್ಮದಲ್ಲಿ ಸ್ವಲ್ಪ ಕಾಲ ಬಾಳುತ್ತಿಪ್ಪ ಪುರುಷನಿಗೆ
ಧರ್ಮವಾಸನೆಯೇ ಸಾಕ್ಷಿ.
ಈ ಜನ್ಮ ದುಷ್ಕರ್ಮದಿಂದಲೇ ಅರ್ಧಾಯುಷ್ಯವಾಗಿ
ಮುಂದೆ ಹೀನ ಜನ್ಮವನೆತ್ತುತ್ತಿರ್ಪಾತನಿಗೆ
ಅಧರ್ಮವಾಸನೆಯೇ ಸಾಕ್ಷಿ.
ಇಂತಪ್ಪ ಧರ್ಮಾಧರ್ಮ ವಾಸನೆಗೂಡಿ
ಕರ್ಮ ಸಂಪಾದಿತ ಮನುಷ್ಯಜನ್ಮದಲ್ಲಿ
ದಶಲಕ್ಷ ವರುಷ ಜನಿಸುತ್ತಿರಲು
ಆ ಬ್ರಹ್ಮ ಚಕ್ರದಲ್ಲಿ ಅಹಸ್ಸಂ ಸಮೆದು
ಬ್ರಹ್ಮದ ಸುಷುಪ್ತಿ ಚಕ್ರ ಮುಖದಲ್ಲಿ ಬೀಳುತ್ತ
ಅಲ್ಲಿ ದಶಲಕ್ಷ ವರುಷ ಪ್ರೇತಪುರುಷರಾಗಿ
ಸ್ವಪ್ನಚಕ್ರದಲ್ಲಿ ಗಮಿಸುತ್ತಿಪ್ಪವು.
ಆ ಬ್ರಹ್ಮನ ಜಾಗ್ರದಲ್ಲಿ ಪುನಃ ಪ್ರಪಂಚ ಚಕ್ರಕ್ಕೆ ಬೀಳುತ್ತಿರ್ಪವು
ಇಂತು ಜೀವಂಗಳು ಬ್ರಹ್ಮನ ಜಾಗ್ರ ಸ್ವಪ್ನಂಗಳಲ್ಲಿ
ಇಪ್ಪತ್ತು ಲಕ್ಷ ವರುಷ ಜನ್ಮವೆತ್ತುತ್ತಿರ್ಪುದೆ
ಬ್ರಹ್ಮಗೊಂದು ದಿವಸ.
ಅಂಥ ದಿವಸಂಗಳು ಮೂವತ್ತಾರು ಸಾವಿರವಾದಲ್ಲಿ
ಬ್ರಹ್ಮಂಗದೆ ಪರಮಾಯು.
ಆ ಬ್ರಹ್ಮನ ಪರಮಾಯುವೆ ವಿಷ್ಣುವಿಗೊಂದು ಸ್ವಪ್ನ.
ಅಂತಪ್ಪ ಸ್ವಪ್ನಂಗಳನಂತಮುಳ್ಳ ವಿಷ್ಣುವಿನ ಪರಮಾಯುವೆ
ರುದ್ರನಿಗೆ ಗನಿಮಿಷ.
ಇಂತು ಅಂತರ ಮಹದಂತರಗಳಲ್ಲಿ
ಪಿಪೀಲಿಕಾ ಬ್ರಹ್ಮಪರಿಯಂತವು ಭ್ರಮಿಸುತ್ತಿರ್ಪ
ಚಕ್ರಗಳಿಗವಧಿಯಿಲ್ಲದಿರ್ಪುದರಿಂ
ಬೀಜ ವೃಕ್ಷ ನ್ಯಾಯದಂತೆ ಕಲಮಲಕ ಜ್ಞಾನವಾಗಿ
ಒಂದೂ ತಿಳಿಯದೆ ತರ್ಕಮುಖಕ್ಕೆ ಬಿದ್ದಳಿವ ಜೀವನಿಗೆ

ಮೋಕ್ಷವೆಲ್ಲಿಯದು.
ತ್ರಾಸಿನಂದದಿ ಸುನೀತವಾಗಿರ್ಪ ಚಕ್ರಂಗಳು
ಅಧರ್ಮ ಪಿಂಡವಾದರು
ಧರ್ಮದಿಂ ಲಕ್ಷಣ ತೀಕ್ಷ್ಣವಾದರೂ ತನ್ನ ಪ್ರಪಂಚ ಲೀಲೆ
ನಷ್ಟವಪ್ಪುದೆಂಬುದರಿಂ
ತನ್ನ ಸಮೀಪದಲ್ಲಿರ್ಪ ನಿಜ ಮಹಿಮಾ ಪುರುಷರ
ತತ್ಕಾರ್ಯಕ್ಕೆ ಪ್ರಯೋಗಿಸಲು
ಭ್ರಮಾಯುಕ್ತನಾದ ಜೀವನಿಗೆ
ತಾವು ಜೀವ ರೂಪದಲ್ಲೆ ಸಾಕ್ಷ್ಯಪ ಸಾಕ್ಷ್ಯಗಳ ತೋರಿಸಿ
ಆ ಚಕ್ರಗತಿಗಳು ನ್ಯೂನಾಧಿಕ್ಯಂಗಳಾಗದಂತೆ
ಧರ್ಮಾಧರ್ಮಂಗಳ ಸಮಗೊಳಿಸಿ,
ತಾವು ಬಂದ ಮಣಿಹಗಳ ತೀರಿಸಿ
ತಿರಿಗಿ ಮಹಾಲಿಂಗದಲ್ಲಿ ಬೆರೆವ
ಮಹಾಪುರುಷರಿಗಲ್ಲದೆ ಉಳಿದವರ್ಗುಂಟೆ ?
ಅಂತಪ್ಪ ಪರಮ ಮಂಗಳಮಯ
ದಿವ್ಯ ಪುರುಷರ ಚರಣ ಸೇವೆಯಿಂದ
ನಾನು ಪರಿಶುದ್ಧನಪ್ಪಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡ ದೇಶ ಕಾರ್ಯ ಪ್ರಭುವೆ ॥ ೨ ॥

೧೧೧೩

ಜ್ಞಾನಪಂಚೇಂದ್ರಿಯ, ಕರ್ಮಪಂಚೇಂದ್ರಿಯಂಗಳಲ್ಲಿ
ಜ್ಞಾನೇಂದ್ರಿಯ ಮೂರಕ್ಕೆ ದ್ವೈಧೀಭಾವ,
ಎರಡಕ್ಕೆ ಏಕತ್ವ.
ಕರ್ಮೇಂದ್ರಿಯಂಗಳಲ್ಲಿ
ಎರಡಕ್ಕೆ ದ್ವೈದೀ ಭಾವ, ನೂರಕ್ಕೆ ಏಕತ್ವವಾದ
ಪರಿಯೆಂತೆಂದಡೆ :
ಜ್ಞಾನವೇ ಸೂಕ್ಷ್ಮ ಕರ್ಮವೆ ಸ್ಥೂಲ,
ಸ್ಥೂಲ ಕಾರಣವಾಗಿರ್ಪುದೆ ಅಗ್ನಿ, ವಾಯುವುಗಳಾದುದರಿಂ
ತ್ವಗ್ರಸನಗಳು ಕರ್ಮೇಂದ್ರಿಯಬದ್ಧಮಾಗಿ
ತತ್ಕಾರಣಮಾಗಿರ್ಪುದರಿಂ ಏಕತ್ವಮಾಯಿತ್ತು.
ಪಾಣಿ ಪಾದಗಳು ಜ್ಞಾನೇಂದ್ರಿಯಬದ್ಧಮಾಗಿ
ತತ್ಕಾರಣಮಾಗಿರ್ಪುದರಿಂ ದ್ವಿವಿಧ ಮಾಯಿತ್ತೆಂದಡೆ
ಕರ್ಮೇಂದ್ರಿಯದಲ್ಲಿ ಗುದವೆ ಪೃಥ್ವಿಮೂಲ,
ಗುಹ್ಯವೆ ಜಲಮೂಲ, ಕರ್ಮೇಂದ್ರಿಯ ಬದ್ಧವಾದ

ಜಿಹ್ವೆಯೇ ಅಗ್ನಿಮೂಲ, ತ್ವಗುವೆ ವಾಯುಮೂಲ,
ವಾಕ್ಕೇ ಆಕಾಶಮೂಲ.
ಜ್ಞಾನೇಂದ್ರಿಯಂಗಳಲ್ಲಿ ಶ್ರೋತ್ರವೆ ಆಕಾಶ ಮೂಲ,
ಘ್ರಾಣವೆ ವಾಯುಮೂಲ, ನೇತ್ರವೆ ತೇಜಮೂಲ,
ಆ ಜ್ಞಾನೇಂದ್ರಿಯ ಬದ್ಧವಾದ ಪಾಣಿಯೆ ಜಲಮೂಲ,
ಪಾದವೆ ಪೃಥ್ವಿಮೂಲವಾದುದರಿಂ
ಪೃಥ್ವಿಯಪ್ಪುರೂಪಮಾದ ಪಾದ ಪಾಣಿಗಳು
ಜೀವಬದ್ಧವಾದ ಶರೀರದೋಪಾದಿಯಲ್ಲಿ
ಶ್ರೋತ್ರ ನೇತ್ರಂಗಳನನುಸರಿಸಿ ದ್ವೈದೀಭಾವಮಾಯಿತ್ತು.
ವಾಯುವಗ್ನಿಮೂಲವಾದ ತಗ್ಜಿಂಹೆಗಳು
ಶರೀರಬದ್ಧಮಾದ ಜೀವನೋಪಾದಿಯಲ್ಲಿ
ಕರ್ಮೇಂದ್ರಿಯಬದ್ಧಮಾಗಿ, ಗುದಗುಹ್ಯ ಕಾರಣಮಾಗಿ
ಏಕತ್ವಮಾಯಿತ್ತು.
ಜ್ಞಾನೇಂದ್ರಿಯಕ್ಕೆ ವಾಸನಾಮೂಲವಾದ
ವಾಯುವೆ ಕಾರಣವಾಯಿತ್ತು.
ಕರ್ಮೇಂದ್ರಿಯಕ್ಕೆ ವಾಕ್ಯಮೂಲಮಾದ
ಆಕಾಶವೆ ಕಾರಣಮಾಯಿತ್ತು;
ಇಂತಪ್ಪ ಸ್ಥೂಲರೂಪವಾದ ಕರ್ಮೇಂದ್ರಿಯಂಗಳೇಕತ್ವ.
ಸೂಕ್ಷ್ಮರೂಪಮಾದ ಜ್ಞಾನೇಂದ್ರಿಯಂಗಳು
ದ್ವಿತ್ವಮಾದಕಾರಣಮೆಂತೆಂದಡೆ :
ಸ್ಥೂಲಶರೀರ ಮರ್ತ್ಯದಲ್ಲಿ
ಸುಖದುಃಖಂಗಳ ತಾನೇಕತ್ವವಾಗನುಭವಿಸುವುದರಿಂ
ಸೂಕ್ಷ್ಮಶರೀರ ಸ್ವರ್ಗ ನರಕಂಗಳಲ್ಲಿ
ಪಾಪ ಪುಣ್ಯಂಗಳ ದ್ವೈದೀ ಭಾವಮಾಗನುಭವಿಸುತ್ತಿರ್ಪುದರಿಂ
ಕರ್ಮಕ್ಕೆ ಏಕತ್ವವೂ, ಜ್ಞಾನಕ್ಕೆ ದ್ವೈದೀ ಭಾವಮಾಂಯಿತ್ತು
ಜ್ಞಾನೇಂದ್ರಿಯಂಗಳೆಂಟು ಭೇದಮಾಗಿ
ಕರ್ಮೇಂದ್ರಿಯಗಳೇಳುಭೇದವಾದುದರಿಂ
ಕೂಡಾ ಹದಿನೈದು ಕಳೆಯಾಯಿತ್ತು;
ಹದಿನಾರನೆಯ ಕಳೆಯ ಸದಾಶಿವನು ಧರಿಸಿರ್ಪುದರಿಂ
ಆ ಕಳೆ ಗೂಢಮಾಗಿ ಕಾರಣವ ಹೊಂದುತಿರ್ಪುದು.
ಸ್ತ್ರೀಗಳಿಗೆ ಗುಹ್ಯವೇ ದ್ವೈದೀಭಾವವ ಹೊಂದಿರ್ಪುದರಿಂ
ಷೋಡಶ ಕಳೆಯಾಯಿತ್ತು
ಆ ಸ್ತ್ರೀಯ ಹದಿನಾರನೆಯ ಕಳೆಯೆ
ಸೃಷ್ಟಿಧಾರಣಾಶಕ್ತಿಯುಳ್ಳುದು.

ಅದೇ ಅಧೋಮುಖವಾದುದರಿಂ
ಪ್ರಪಂಚಮೂಲ ಪುರುಷನ ಹೊಂದಿ,
ಹದಿನಾರನೆಯ ಕಳೆಯೆ ಸಂಹಾರಧಾರಣಶಕ್ತಿಯುಳ್ಳ ಜ್ಞಾನಾಕ್ಷಿ.
ಅದು ಊರ್ಧ್ವಮುಖವಾಗಿರ್ಪುದರಿಂ ಪರಮಮೂಲ.
ಇದು ನಿರಾಕಾರವ ಗ್ರಹಿಸಿ ಸಾಕಾರಮಾಡುತ್ತಿರ್ಪುದು.
ಅದು ಸಾಕಾರವ ಗ್ರಹಿಸಿ ನಿರಾಕಾರವ ಮಾಡುತ್ತಿರ್ಪುದು.
ಇದು ಸೂತಕಮಯ, ಅದು ಶುಚಿಮಯ.
ಇದು ಶರೀರಮೂಲವಾಗಿ ಕರ್ಮವನನುಸರಿಸಿರ್ಪುದು.
ಅದು ಮನೋಮೂಲವಾಗಿ ವಾಕ್ಕನನುಸರಿಸಿರ್ಪುದು.
ಇಂತಪ್ಪ ಮನೋವಾಕ್ಕಾಯ ಕರ್ಮಂಗಳಿಗೆ
ಕರ್ಮದಲ್ಲಿ ಭಕ್ತಿ, ಶರೀರದಲ್ಲಿ ಶಕ್ತಿ,
ವಾಕ್ಯದಲ್ಲಿ ಯುಕ್ತಿ, ಮನದಲ್ಲಿ ಮುಕ್ತಿಯುಳ್ಳ
ಮಹಾಪುರುಷನೆ ಮಹಾಲಿಂಗವೆ ನಿನಗೆ
ಪರಮ ಪ್ರಸಾದಾನುಭವಮಾದ ಭುಕ್ತಿಯಾಗುತ್ತಿರ್ಪನು.
ಅಂತಪ್ಪ ಲಿಂಗಾನುಭಾವಮುಳ್ಳ ಮಹಾಪುರುಷನೆ ವಿರಕ್ತನು.
ಆತನೆ ಮಹ [ತ್ತ]ತ್ವದಲ್ಲಿ ಸಂಚರಿಸುವ ಜಂಗಮ.
ಅಂತಪ್ಪ ಜಂಗಮ ಪೂಜೆಯಿಂ ಕಾರಣರೂಪವಾದ
ಸಂಸಾರ ಶುದ್ಧಿಯಾಗಿ, ಗುರುವಿನಿಂ ಶರೀರ ಶುದ್ಧಿಯಾಗಿ,
ಲಿಂಗದಿಂ ಪ್ರಾಣಶುದ್ಧಿಯಾಗಿ, ಆ ಲಿಂಗ ಪ್ರಾಣಂಗಳಿಗೆ
ವಾಸನಾ ರಸನಂಗಳೆ ಸಂಬಂಧ ಕಾರಣವಾಗಿ,
ಗುರು ಶರೀರಂಗಳಿಗೆ ರೂಪ ಸ್ಪರ್ಶನಂಗಳೆ ಸಂಬಂಧಂಗಳಾಗಿ,
ಜಂಗಮ ಸಂಸಾರಂಗಳಿಗೆ ತತ್ವಜ್ಞಾನಂಗಳೆ ಸಂಬಂಧವಾಗಿ,
ಜಂಗಮವೇ ಸಂಸಾರವಾಗಿ, ಶರೀರವೆ ಗುರುವಾಗಿ,
ಲಿಂಗವೆ ಪ್ರಾಣವಾಗಿ, ಜಂಗಮದಲ್ಲಿ ಹೊಂದಿ
ಸಂಸಾರವ ಮರತು, ಗುರುಸೇವೆಯಿಂ ಶರೀರ ಮರತು
ಲಿಂಗದಲ್ಲಿ ನೆರೆದು ತನ್ನ ತಾ ಮರದಿರ್ಪುದೆ ಲಿಂಗೈಕ್ಯ
ಅಂತಪ್ಪ ನಿತ್ಯಾನಂದ ಲಿಂಗೈಕ್ಯ ಸುಖವನೆನಗಿತ್ತು ಸಲಹಾ
ಮಹಾಘನದೊಡ್ಡ ದೇಶಿಕಾರ್ಯ ಪ್ರಭುವೆ || ೩ ||

೧೧೧೪

ವಾಕ್ಪಾಣಿಪಾದ ಗುದ ಗುಹ್ಯಗಳೈದು
ಸ್ಥೂಲಜ್ಞಾನ ಪಂಚೇಂದ್ರಿಯ.
ಘ್ರಾಣ ಜಿಹ್ವೆ ನೇತ್ರ ತ್ವಕ್ ಶ್ರೋತ್ರಂಗಳೈದು
ಸೂಕ್ಷ್ಮ ಜ್ಞಾನ ಪಂಚೇಂದ್ರಿಯ.
ಚಿತ್ತ ಬುದ್ಧಿ ಅಹಂಕಾರ ಮನೋಭಾವಂಗಳೈದು

ಕಾರಣ [೧][ಜ್ಞಾನ][೧] ಪಂಚೇಂದ್ರಿಯ.
ಕರ್ಮೇಂದ್ರಿಯ ಮಧ್ಯವಾದ ಹೃದಯದಲ್ಲಿರ್ದು
ಕರ್ಮೋಪಭೋಗಿಯಾಗಿ ವಾಯುರೂಪದಲ್ಲಿ
ಶರೀರಧಾರಿಯಾಗಿ, ಆಕಾಶ ಶರೀರಕ್ಕೆ
ಸಕಲ ಪದಾರ್ಥಂಗಳನ್ನು ಹಂಚಿಕೊಡುತ್ತ
ಕರ್ಮೇಂದ್ರಿಯ ಮುಖದಲ್ಲಿ ಸೃಷ್ಟಿಕರ್ತುವಾಗಿ
ಹೃತ್ಕಮಲದಳಂಗಳಲ್ಲಿ ಭ್ರಮಿಸುತ್ತ
ತ್ವಜ್ಞ್ನಾಷ್ಟಸ್ಪರಿಶನದಲ್ಲಿ ಶರೀರ ಕರ್ತುವಾಗಿರ್ಪನೆ ಜೀವಾತ್ಮನು.
ಜ್ಞಾನೇಂದ್ರಿಯ ಮಧ್ಯಮಾಗಿರ್ಪ ಲಲಾಟದಲ್ಲಿರ್ದು
ಸೂಕ್ಷ್ಮಶರೀರಕ್ಕೆ ಕರ್ತುವಾಗಿ, ಜ್ಞಾನೋಪಭೋಗಿಯಾಗಿ
ಜ್ಞಾನೇಂದ್ರಿಯ ಚೈತನ್ಯನಾಗಿ, ಗ್ರಹಣಮುಖದಿಂ ರಕ್ಷಣ್ಯಕರ್ತುವಾಗಿ
ಮನೋನಿಷ್ಟ ಸಕಲ ವಿಷಯ ರೂಪನಾಗಿ,
ಸೂಕ್ಷ್ಮಕರ್ತುವಾಗಿ, ಅದೃಷ್ಟಾನುಸಾರಿಯಾಗಿರ್ಪನೆ ಅಂತರಾತ್ಮನು.
ಭಾವೇಂದ್ರಿಯ ಮಧ್ಯದಲ್ಲಿ ಭಾವನಿಷ್ಟನಾಗಿ,
ಭಾವೇಂದ್ರಿಯ ಮಧ್ಯದಲ್ಲಿರ್ಪ ಬ್ರಹ್ಮಸ್ಥಾನ ನಿವಾಸಿಯಾಗಿ.
ಕಾರಣ ಚೈತನ್ಯನಾಗಿ, ಕರ್ಮಮುಖದಲ್ಲಿ ಬಿಂದುಮೂಲವಾಗಿ,
ಶರೀರವ ಸೃಷ್ಟಿಸಲು,
ಜ್ಞಾನಮುಖದಲ್ಲಿ ಬಿಂದುಮಯ ಶರೀರವ ರಕ್ಷಿಸಲು,
ಭಾವಮುಖದಲ್ಲಿ ಈ ಬಿಂದು ನಿಗ್ರಹದಿಂ
ಶರೀರವ ಸಂಹರಿಸುತಿರ್ಪುದರಿಂ ಸಂಹಾರಕರ್ತುವಾಗಿ,
ಭಾವವೊಂದರಲ್ಲಿರ್ಪಾತನೆ ಪರಮಾತ್ಮನು.
ಉತ್ಕೃಷ್ಟಾತ್ಮನೆ ಪರಮಾತ್ಮನು.
ಮಧ್ಯಮಾತ್ಮನೆ ಅಂತರಾತ್ಮನು.
ಅಧಮಾತ್ಮನೆ ಜೀವಾತ್ಮನು.
ಕಮ ಪಂಚೇಂದ್ರಿಯ–
ಘ್ರಾಣ ಜಿಹ್ವೆ ನೇತ್ರ [ಕರ್ಣ] ತ್ವಗು.
ಅಂತಪ್ಪ ತ್ವಗುವನನುಸರಿಸಿ
ಕರ್ಮೇಂದ್ರಿಯಾದಿ ನವಮಸ್ಥಾನದಲ್ಲಿಪ್ಪಾತನೆ [ಜೀವಾತ್ಮನು]
ಜ್ಞಾನಪಂಚೇಂದ್ರಿಯ–
ಚಿತ್ತ [ಜ್ಞಾನ] ಬುದ್ಧಿ ಅಹಂಕಾರ ಮನದಲ್ಲಿರ್ದು
ಜ್ಞಾನೇಂದ್ರಿಯಾದಿ ನವಮಸ್ಥಾನದಲ್ಲಿರ್ಪಾತನೆ ಅಂತರಾತ್ಮನು.
ಭಾವವೊಂದರಲ್ಲಿ ಏಕಮೇವಾದ್ವಿತೀಯನಾಗಿರ್ಪನೆ ಪರಮಾತ್ಮನು.

---

೧–೧ ಭಾವ (ಮೂ)

ಏಕತ್ವವಾಗಿರ್ಪ ಪರಮನಲ್ಲಿ
ನವಮತ್ವಂಗಳಾಗಿರ್ಪ ಜೀವಾತ್ಮಾಂತರಾತ್ಮಗಳೆರಡೂ
ಶೂನ್ಯಗಳಾಗಿ, ಪರಮನಿಂ ಪ್ರಮಾಣಂಗಳಾಗಿ,
ಶತರೂಪವಾಗಿ, ಆ ನೂರು ಕೂಡಾ
ಪರಮಾಯುಷ್ಯಮೆನಿಸಿರ್ಪುದು.
ಶರೀರದೊಳಗೆ ಕಾಪಾಡುತಿರ್ಪಾತನೆ ಜೀವಾತ್ಮನು.
ಶರೀರದ ಹೊರಗೆ ಕಾಪಾಡುತಿರ್ಪಾತನೆ ಅಂತರಾತ್ಮನು.
ಒಳ ಹೊರಗೆರಡಕ್ಕೂ ಸಾಕ್ಷಿ ಕಾರಣನಾಗಿರ್ಪಾತನೆ ಪರಮಾತ್ಮನು.
ಪ್ರಪಂಚವ ಜಾಗ್ರವ ಹೊಂದಿಸುತಿರ್ಪಾತನೆ ಜೀವಾತ್ಮನು.
ಸ್ವಪ್ನವ ಹೊಂದಿಸುತಿರ್ಪಾತನೆ ಅಂತರಾತ್ಮನು.
ಸುಷುಪ್ತಿಯ ಹೊಂದಿಸುತಿರ್ಪಾತನೆ ಪರಮಾತ್ಮನು.
ಜೀವಾತ್ಮನನಾವರಿಸಿರ್ಪ ಬಿಂದು
ಇಪ್ಪತ್ತೈದು ಭೇದಮಾಗಿರ್ಪುದು.
ಅಂತರಾತ್ಮನನಾವರಿಸಿರ್ಪ ನಾದ
ಐವತ್ತು ಭೇದಮಾಗಿರ್ಪುದು.
ಪರಮಾತ್ಮನನಾವರಿಸಿರ್ಪ ಕಳೆ
ನೂರು ಭೇದಮಾಗಿರ್ಪುದು.
ಕಳೆಯೆಂದರೆ–ಕಾಲವೆಂಬುದರ್ಥ.
ಜೀವಾತ್ಮನು ತ್ವಕ್ಕಿನಲ್ಲಿರ್ದು ನಾಸಿಕದಲ್ಲಿ ಸಂಚರಿಸುತಿರ್ಪನು.
ಅಂತರಾತ್ಮನು ಮನಸ್ಸಿನಲ್ಲಿರ್ದು ಚಿತ್ತದಲ್ಲಿ ಸಂಚರಿಸುತಿರ್ಪನು.
ಪರಮಾತ್ಮನು ಬ್ರಹ್ಮಸ್ಥಾನದಲ್ಲಿರ್ದು ಭಾವದಲ್ಲಿ ಸಂಚರಿಸುತಿರ್ಪನು
ಇಂತು ಸ್ಪರ್ಶನದಲ್ಲಿರ್ಪ ಜೀವನಿಗೂ
ಸ್ಪರ್ಶನದಲ್ಲಿಯಿಪ್ಪ ಇಷ್ಟಲಿಂಗಕ್ಕೂ ಕರ್ಮವೆ ಸಂಬಂಧ ಕಾರಣ.
ಮನದಲ್ಲಿರ್ಪ ಅಂತರಾತ್ಮನಿಗೂ, ಧ್ಯಾನದಲ್ಲಿಪ್ಪ ಆತ್ಮಲಿಂಗಕ್ಕೂ
ಜ್ಞಾನವೆ ಸಂಬಂಧ ಕಾರಣ.
ಭಾವದಲ್ಲಿಪ್ಪ ಪರಮಾತ್ಮನಿಗೂ
ಆ ಭಾವದಲ್ಲಿರ್ಪ ಭಾವಲಿಂಗಕ್ಕೂ
ಭಾವವೇ ಸಂಬಂಧ ಕಾರಣ.
ಕರ್ಮ ಜ್ಞಾನ ಭಾವಂಗಳಿಂ
ಇಷ್ಟ ಪ್ರಾಣ ಭಾವಲಿಂಗಂಗಳಲ್ಲಿ
ಸ್ಥೂಲ ಸೂಕ್ಷ್ಮ ಕಾರಣವಾದ
ಜೀವಾತ್ಮ ಅಂತರಾತ್ಮ ಪರಮಾತ್ಮಂಗಳು
ಬೆರದು ಭೇದದೋರದಿರ್ಪುದೆ ಲಿಂಗೈಕ್ಯ.
ಅಂತಪ್ಪ ಲಿಂಗೈಕ್ಯಾನಂದ ಸಕೀಲ ಸಾವಧಾನ ಸುಖ

ಎನಗೆ ಸಾಧ್ಯಮಪ್ಪಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೪ ॥

೧೧೧೫

ಪೃಥ್ವಿಯನನುಸರಿಸಿರ್ಪ ಚಿತ್ತೇ ಪಶ್ಚಿಮ;
ಜಲವನನುಸರಿಸಿರ್ಪ ಬುದ್ಧಿಯೇ ಉತ್ತರ;
ವಾಯುವನನುಸರಿಸಿರ್ಪ ಮನವೇ ಪೂರ್ವ;
ಅಗ್ನಿಯನನುಸರಿಸಿರ್ಪಹಂಕಾರವೇ ದಕ್ಷಿಣ.
ಅಂತಪ್ಪ ಅಹಂಕಾರದಲ್ಲಿ ಧರ್ಮ ಪುಟ್ಟಿ,
ವಾಯವ್ಯವ ಸೇರಿತು.
ಬುದ್ಧಿಯಲ್ಲಿ ಅರ್ಥಪುಟ್ಟಿ, ಆಗ್ನೇಯವಸೇರಿತು.
ಮನದಲ್ಲಿ ಕಾಮಪುಟ್ಟಿ ನೈರುತ್ಯವ ಸೇರಿತು.
ಚಿತ್ತದಲ್ಲಿ ಮೋಕ್ಷಪುಟ್ಟಿ ಈಶಾನ್ಯವ ಸೇರಿತು.
ಅಹಂಕಾರಜನ್ಯ ಧರ್ಮವೇ
ವಾಯವ್ಯದಲ್ಲಿ ವಾಯುರೂಪವಾದ ಜೀವವಾಯಿತ್ತು.
ಬುದ್ಧಿಜನ್ಯವಾದ ಆಗ್ನೇಯದಲ್ಲಿ
ತೇಜೋರೂಪವಾದ ಸತ್ವಗುಣವಾಯಿತ್ತು.
ಚಿತ್ತಜನ್ಯವಾದ ಮೋಕ್ಷವೇ ಈಶಾನ್ಯದಲ್ಲಿ
ಆತ್ಮರೂಪವಾದ ಶಿವನಾಯಿತ್ತು.
ಮನೋಜನ್ಯವಾದ ಕಾಮವೆ
ನೈರುತ್ಯದಲ್ಲಿ ಘೋರರೂಪವಾದ ತಮವಾಯಿತ್ತು.
ವಾಯವ್ಯದಲ್ಲಿ ಇರ್ಪ ಜೀವನೇ ಜಂಗಮರೂಪು;
ಈಶಾನ್ಯದಲ್ಲಿರ್ಪ ಶಿವನೆ ಸ್ಥಾವರರೂಪು.
ಆ ಸ್ಥಾವರರೂಪವಾದ ಶಿವನಿಗೆ
ನೈರುತ್ಯದಲ್ಲಿರ್ಪ ತಮಸ್ಸೇ ಗುಣ.
ವಾಯುರೂಪವಾದ ಜೀವನಿಗೆ
ಆಗ್ನೇಯದಲ್ಲಿರ್ಪ ತೇಜಸ್ಸೇ ಗುಣ.
ತೇಜಸ್ತಿಮಿರಂಗಳೆ ಗುಣಂಗಳಾಗಿ
ಜಂಗಮ ಸ್ಥಾವರಂಗಳೆ ಜೀವಪರಮರಾದರು.
ಸ್ಥಾವರಕ್ಕೆ ಸತ್ವವೆ ಪವಿತ್ರ ರೂಪು;
ಜಂಗಮಕ್ಕೆ ತಮಸ್ಸೇ ಅಪವಿತ್ರರೂಪು.
ಆ ಪರಮನು ತಮಸ್ಸಿನಲ್ಲಿ ಕೂಡಿ ಜೀವನಾಗುತ್ತಿರ್ಪನು;
ಆ ಜೀವನು ಸತ್ವದಲ್ಲಿ ಕೂಡಿ ಪರಮನಾಗುತ್ತಿರ್ಪನು.
ಇಂತಪ್ಪ ಅಷ್ಟದಳ ಕರ್ಣಿಕೆಯಲ್ಲಿ
ಪೂರ್ವದಳದಲ್ಲಿ ಮನೋಗತವಾಗಿರ್ಪುದೆ 'ಕಾ'

ನೈರುತ್ಯದಲ್ಲಿ ತಮೋಗತಮಾಗಿರ್ಪುದೆ 'ಮ'
ದಕ್ಷಿಣದಲ್ಲಿ ಅಹಂಕಾರಗತಮಾಗಿರ್ಪುದೆ 'ಧ'
ವಾಯವ್ಯದಲ್ಲಿ ಜೀವಗತಮಾಗಿರ್ಪುದೆ 'ರ್ಮ',
ಉತ್ತರದಲ್ಲಿ ಬುದ್ಧಿಗತಮಾಗಿರ್ಪುದೆ 'ಅ'
ಆಗ್ನೇಯದಲ್ಲಿ ಸತ್ವಗತಮಾಗಿರ್ಪುದೆ 'ರ್ಥ'
ಪಶ್ಚಿಮದಲ್ಲಿ ಚಿತ್ತಗತಮಾಗಿರ್ಪುದೆ 'ಮೋ'
ಈಶಾನ್ಯದಲ್ಲಿ ಶಿವಗತಮಾಗಿರ್ಪುದೆ 'ಕ್ಷ'
ದಕ್ಷಿಣಾದಿಯಾಗಿ ನೈರುತ್ಯಾಂತಮಾಗಿರ್ಪುದೆ ಅಪ್ರದಕ್ಷಿಣ.
ದಕ್ಷಿಣಾದ್ಯ ಪ್ರದಕ್ಷಿಣದಲ್ಲಿರ್ಪ ಧರ್ಥ ಕಾಕ್ಷ ಅಮ ಮೋರ್ಮ
ಎಂಬ ಬೀಜಾಕ್ಷರಂಗಳಿಗೆ ಅರ್ಥವೆಂತೆಂದಡೆ :
'ಧರ್ಥ' ಧರಿಸಲ್ಪಟ್ಟಂಥಾ, ವಾಂಛೆಯುಳ್ಳ
'ಕಾಕ್ಷ' ಕುಚ್ಛಿತೇಂದ್ರಿಯಂಗಳ
'ಅಮ' ತಮಸ್ಸಿನ, 'ರಮಾ' ಕ್ರೀಡೆಯೆ, 'ಉಮಾ' ಶಕ್ತಿ
ಇದೆ ಅಪ್ರದಕ್ಷಿಣ ಶಕ್ತಿ
ಉತ್ತರಾದಿ ವಾಯುವ್ಯಾಂತವಾದ ಪ್ರದಕ್ಷಿಣದಲ್ಲಿರ್ಪ
'ಅಕ್ಷ' 'ಕಾರ್ಥ' 'ಧಮ' 'ಮೋರ್ಮ' ಎಂಬ
ಬೀಜಾಕ್ಷರಂಗಳಿಗೆ ಅರ್ಥವೆಂದರೆ
'ಅಕ್ಷ' ಜಪ್ಯಮಾದ 'ಕಾರ್ಥ' ಬ್ರಹ್ಮಾರ್ಥವ
'ಧಮ' ಘೋಷವೇ ಶಿವಮಂತ್ರ.
ಅಂತಪ್ಪ ಶಿವಮಂತ್ರಮಯಮಾದ
ಪ್ರದಕ್ಷಣ ಮಹಾಜಪವೇ 'ಮೋರ್ಮ' ಮೋಕ್ಷಲಕ್ಷ್ಮಿ
ಅದೇ ಶಕ್ತಿ
'ರ್ಮ' ಎಂಬ ಕಡೆಯಲ್ಲೂ 'ರ್ಥ' ಎಂಬ ಕಡೆಯಲ್ಲೂ
'ಜಾ' ಣಾದಿ ಕಾಕಾರಾಗಮ
ಪ್ರದಕ್ಷಿಣ ವಾಯವ್ಯದಲ್ಲಿರ್ಪ ಜೀವನಲ್ಲಿ ಮುಕ್ತಿ
ಅಪ್ರದಕ್ಷಿಣ ನೈರುತ್ಯದಲ್ಲಿರ್ಪ ನರಕರೂಪಮಾದ ಶರೀರದಲ್ಲಿ ಶಕ್ತಿ
ಭಿನ್ನ ಶರೀರ ಮೋಕ್ಷವೆ ಅಪವಿತ್ರ ದುಃಖರೂಪವಾದ ನರಕ,
ಜೀವನ್ಮುಕ್ತಿಯೆ ಪವಿತ್ರ ಸುಖಮಯವಾದ ಅಭೇದ ಲಿಂಗೈಕ್ಯ.
ಅಂತಪ್ಪ ಲಿಂಗೈಕ್ಯ ನಿರವಧಿಕ ನಿಜಾನಂದ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೫ ॥

೧೧೧೬

ಈಶಾನ್ಯ ಕರಕಮಲ ಕೈಲಾಸ ಸ್ಥಾಯಿಯಾಗಿರ್ಪ
ಲಿಂಗಮೆಂಬ ಬ್ರಹ್ಮ ಮಂತ್ರದಿಂದಾವಾಹನಕ್ಕೆ ಬಂದು

ವಾಸನೆಯಲ್ಲುಪಸಂಹಾರವಾಗಿರ್ಪುದು.
ಆ ವಾಸನೆಯೇ ಜ್ಞಾನರೂಪವಾಗುತ್ತಿರ್ಪುದೆಂತೆಂದಡೆ :
ಪೂರ್ವ ಕರ್ಮವಾಸನೆಯು ಇಹದಲ್ಲಿ
ಜ್ಞಾನರೂಪಮಪ್ಪಂತೆ
ಆ ಲಿಂಗಕ್ಕೆ ಸ್ಪರ್ಶನದಲ್ಲಿ ಆವಾಹನ,
ನೇತ್ರದಲ್ಲಿ ಉಪಸಂಹಾರ
ಶ್ರೋತ್ರದಲ್ಲಿ ಆವಾಹನ, ಮನದಲ್ಲಿ ಉಪಸಂಹಾರ.
ಮಂತ್ರಮುಖದಲ್ಲಿ ಕೂಡಿ
ವಾಸನಾಮುಖದಲ್ಲಿ ಹೃದಯದಲ್ಲಿ ಪ್ರಕಾಶಿಸುತ್ತಿರ್ಪುದೆ ಪ್ರಾಣಲಿಂಗ.
ಸ್ಪರ್ಶನ ಕ್ರಿಯಾ ಮುಖದಲ್ಲಿ ಕೂಡಿ
ನೇತ್ರವಿಷಯವಾಗಿ ಕಣ್ಣಿನಲ್ಲಿ ಕಟ್ಟಿದಂತಿರ್ಪುದೆ ಇಷ್ಟಲಿಂಗ.
ಶ್ರೋತ್ರ ವಿಷಯದಲ್ಲಿ ಕೇಳಿ
ಆ ಲಿಂಗದ ಮನದಲ್ಲಿ ವಿಚಾರಿಸುತ್ತಿರ್ಪುದೇ ಭಾವಲಿಂಗ.
ಮಂತ್ರವಾಸನೆಯುಳ್ಳುದೆ ಗುರು,
ಕ್ರಿಯಾರೂಪುಳ್ಳುದೆ ಲಿಂಗ,
ತತ್ವವಿಚಾರಮುಳ್ಳುದೆ ಜಂಗಮು.
ಗುರುಮಂತ್ರದಲ್ಲಿ ಹುಟ್ಟಿ ಆಚಾರ ಹೊಂದಿರ್ಪುದೆ ಪ್ರಾಣಲಿಂಗ.
ಜಂಗಮಕರ್ಮದಲ್ಲಿ ಹುಟ್ಟಿ ಶಿವನಲ್ಲಿ ಹೊಂದಿರ್ಪುದೆ ಇಷ್ಟಲಿಂಗ.
ಪ್ರಸಾದದಲ್ಲಿ ಹುಟ್ಟಿ ಮಹದಲ್ಲಿ ಹೊಂದಿರ್ಪುದೆ ಭಾವಲಿಂಗ.
ಆಚಾರವಾಸನೆಯಲ್ಲಿ ನಿಜಮಹದ್ವಿಚಾರದಲ್ಲಿ
ಜ್ಞಾನಕ್ರಿಯಾ ರೂಪದಲ್ಲಿ ಆನಂದ.
ಇಂತಪ್ಪ ಜ್ಞಾನಾನಂದದಿಂ ನಿಜವಾಸನೆಯನೆ
ಜೀವನನುಭವಿಸುತ್ತಿರ್ಪುದರಿಂ
ವಾಸನೆಯೇ ಸತ್ಯಮಾಯಿತ್ತು.
ಇಂತೊಂದು ಲಿಂಗವೆ ಇಷ್ಟದಿ ನವಪ್ರಕಾರದಲ್ಲಿ ಹೆಚ್ಚಿ,
ಆ ಲಿಂಗದೊಳಗೆ ಬೆರದಲ್ಲಿ
ಆ ಒಂಬತ್ತು ಶೂನ್ಯವಾಗಿ, ಒಂದು ನಿಜವಾಗಿ,
ಆ ಒಂಬತ್ತಕ್ಕೆ ಆ ಒಂದೆ ಚೈತನ್ಯವಾಗಿ,
ಆ ಒಂದಕ್ಕೆ ಆ ಒಂಬತ್ತೆ ಆಧಿಕ್ಯವಾಗಿ,
ಆ ಒಂಬತ್ತರೊಳಗೆ ಬೆರದು
ಒಂದು ಹತ್ತಾಗಿರ್ಪುದೆಂತೆಂದಡೆ;
ಆ ಲಿಂಗವೆ ತನ್ನ ಇಷ್ಟ ಪದಾರ್ಥದೊಳಗೆ ಬೆರದಲ್ಲಿ [ಅದೆ] ಇಷ್ಟಲಿಂಗ.
ಜೀವನೊಳಗೆ ಸಂಬಂಧಿಸಿದಲ್ಲಿ ಅದೆ ಪ್ರಾಣಲಿಂಗ.
ಭಾವದೊಳಗೆ ಕೂಡಿದಲ್ಲಿ ಅದೆ ಭಾವಲಿಂಗ.

ವಾಸನಾಮುಖದಲ್ಲಿ ಕೂಡಿದಲ್ಲಿ ಅದೆ ಆಚಾರಲಿಂಗ.
ಮಂತ್ರರುಚಿಯಲ್ಲಿ ಸಂಬಂಧಿಸಿದಲ್ಲಿ ಅದೆ ಗುರುಲಿಂಗ.
ರೂಪಿನಲ್ಲಿ ವೇದಿಸಿದಲ್ಲಿ ಅದೇ ಶಿವಲಿಂಗ.
ಸ್ಪರ್ಶನದಲ್ಲಿ ಪ್ರಸನ್ನವಾದಲ್ಲಿ ಅದೆ ಜಂಗಮಲಿಂಗ.
ಶಬ್ದದೊಳಗೆ ನೆರದಲ್ಲಿ ಅದೆ ಪ್ರಸಾದಲಿಂಗ.
ಮನದಲ್ಲಿ ಸಮರಸವಾದಲ್ಲಿ ಅದೆ ಮಹಾಲಿಂಗ.
ಇಂತಪ್ಪ ಲಿಂಗವೆ ಸಕಲ ಪ್ರಪಂಚದಲ್ಲಿ
ತಾನೊಂಬತ್ತು ಬಗೆಯಾಗಿ ತೋರಿ,
ಆ ಒಂಬತ್ತು ಶೂನ್ಯವಾಗಿ, ಆ ಒಂದೇ ನಿಜವಾಗಿ,
ದಶಾಧಿಕ್ಯದಿಂದನಂತಂಗಳಾಗಿ ತೋರುತ್ತಿರ್ಪ
ಮಹತ್ತು ಮಹವಾಗಿರ್ಪ ಲಿಂಗಮಹಿಮೆಯಿಂ
ಇಷ್ಟದಲ್ಲಿ ಸ್ಥೂಲವಡಗಿ, ಪ್ರಾಣದಲ್ಲಿ ಸೂಕ್ಷ್ಮವಡಗಿ,
ಭಾವದಲ್ಲಿ ಕಾರಣವಡಗಿ
ಸೃಷ್ಟಿ ಸ್ಥಿತಿ ಸಂಹಾರಂಗಳುಡುಗಿ,
ಪುಷ್ಪವಾಸನೆಯೂ ತಿಲತೈಲವೂ ಬೆರದು
ಅಭೇದ ಪ್ರಕಾಶವಾಗಿ ಮರಳುದಲೆಯಿಲ್ಲದಿರ್ಪಂತೆ,
ಲಿಂಗವಾಸನೆಯೊಳಗೆ ಅಂಗಕಳೆಯಾಗಿರ್ಪತೆ
ಜೀವನು ಬೆರದು ಭೇದದೋರದಿರ್ಪುದೆ ಲಿಂಗೈಕ್ಯ ಕಾಣಾ
ಮಹಾಘನ ದೊಡ್ಡ ದೇಶಿಕಾರ್ಯಪ್ರಭುವೆ. ॥ ೬ ॥

೧೧೧೭

ಪರಮಾತ್ಮನಿಗೆ ಆದಿಯಲ್ಲಿ
ಶಿವನೆಂಬ ನಾಮ ನಿಜವಾದುದೆಂತೆಂದಡೆ :
ಶವ ಶಬ್ದಕ್ಕೆ ಪೃಷೋದರಾದಿಯಿಂದಿತ್ವ ಬಂದರೆ ಶಿವಶಬ್ದ.
ಶವವೆಂದರೆ ನಿಶ್ಚೈತನ್ಯ.
ನಿಜಚೇತನವೆ ಪರಮನವಗ್ರಹಿಸಿದಲ್ಲಿ
ಪ್ರಪಂಚರೂಪವಾದ ಪ್ರಕೃತಿ.
ನಿಶ್ಚೇತನವಾಗುತಿರ್ಪುದೆ ಶವ.
ಇಂತು ನಿಶ್ಚೇತನವಾಗಿರ್ಪ ಪ್ರಪಂಚದಲ್ಲಿ
ಪರಮನು ಹೊಂದಿದಲ್ಲಿ ಆ ಶವವೇ ಶಿವವಾಯಿತ್ತು.
ದರಿದ್ರನಿಗೆ ಧನ ಸಿಕ್ಕಿದರು, ಹೋದ ಒಡವೆ ಕೈಸಾರ್ದರು
ಅದೇ ದಿವ್ಯಮಂಗಳ ಶೋಭನವಾದುದರಿಂ
ಆ ಶಿವ ಶಬ್ದ ಶೋಭನಾರ್ಥವ ಕೊಡುತ್ತಿಹುದು.
ಅದರಿಂ ಪರಮನಿಗೆ ಶಿವನೆಂಬುದನಾದಿ ನಾಮ.

ಪ್ರಪಂಚವೆಲ್ಲವು ಕೂಡಿ ಶಿವನಾದಂತೆ,
ಪ್ರಜೆಯೆಲ್ಲವು ಕೂಡಿ ದೊರೆಯಾದಂತೆ,
ಶಬ್ದವೆಲ್ಲವು ಕೂಡಿ 'ಓ' ಎಂಬ ನಾಮವಾಯಿತ್ತು.
ಅದು 'ನಮ'ವೆಂಬ ಅನುಸ್ವಾರದೊಳಗೆ ಕೂಡಿ ಮಹಾಪ್ರಣವವಾಯಿತ್ತು.
ಆ ಪ್ರಣವವನನುಸರಿಸುವುದೆ ಅನುಸ್ವಾರ.
ಆ ಪ್ರಣವರೂಪವಾದ ಪರಮನ
ಆ ನಮಸ್ಕಾರವನನುಸರಿಸುತ್ತಿರ್ಪುದರಿಂ
ನಡುದೊಳಗೆ ಕೂಡಿದ 'ಓ'ಕಾರವೇ ಪ್ರಣವ.
ಆ ಪ್ರಣವಕ್ಕೆ ಉತ್ಕೃಷ್ಟವಸ್ತುವಿಗೆ ನಮಸ್ಕಾರವೆಂಬುದರ್ಥ.
ಆ ಪ್ರಣವವೆ– 'ಓಂ' ಎಂದರೆ ನಾನೆಂಬುದರ್ಥ.
'ಬಹುಳಂ ಛಂದಸಿತಿ' ಹಕಾರ ಲೋಪಮಾದುದರಿಂದ 'ಹಂ' ಎಂದರ್ಥವ
ಕೊಡುತ್ತಿರ್ಪುದರಿಂ ಆದಿಯಲ್ಲಿ ಸಾಕಾರರೂಪವಾದ ವಸ್ತು
ಪ್ರಣವ ಮುಖದಿ ನಾನುಯೆಂದು
ಸಾಕಾರದಿಂ ಶಿವನೆಂಬ ನಾಮವನುಚ್ಚರಿಸುತ್ತಿರ್ಪುದರಿಂ
ನಾನೆ ಶಿವನೆಂಬುದರ್ಥ.
ಆ ಮಹಾ ಘೋಷನಮಸ್ಕಾರಯೋಗ್ಯಕ್ಕೆ
ಸಾಕಾರಮಾದಲ್ಲಿ ಶಿವನೆಂಬ ನಾಮ.
ಅಂಥ ಶಿವನಿಗೋಸ್ಕರ ಉತ್ಕೃಷ್ಟ ಘೋಷದಿಂ
ನಮಸ್ಕರಿಸುವುದೇ ಪ್ರಣವ.
ಪಂಚಾಕ್ಷರಿಮಂತ್ರ ತಾನೆ ಪ್ರಣವಮಾದಲ್ಲಿ
ಪ್ರಣವಕ್ಕೆ ನಿಜವೆ ಅರ್ಥ.
ನಿಜ ಶೋಭನ ಮಹಿಮೆಯನ್ನು ಸ್ವಕೀಯ ವಾಕ್ಯ ಪ್ರಕಟನದಿಂದ
ತಿಳಿಸುತ್ತಿರ್ಪುದರಿಂ ವೇದಂಗಳು ಹುಟ್ಟಿದವು.
'ವೇತ್ತೀತಿ ವೇದಾ'ಯೆಂಬುದರ್ಥ.
ಅಂತಪ್ಪ ಅನಾದಿ ಮೂರ್ತಿ ಸಂಹಾರಸ್ಥಾನದಲ್ಲಿ
ಪೂರ್ವಸಂಹಾರ ಶೇಷರೂಪವಾದುದರಿಂ
ಆ ಸಂಹಾರವೆ ಆ ಕಾಲರುದ್ರನಿಗೆ ವಿಭೂತಿಯಾಯಿತ್ತು.
ಆ ಶಿವನಿಗೆ ಸಂಹಾರಶಕ್ತಿಯನೀವ ಮಹಿಮೆಯುಳ್ಳುದೆ ಭಸ್ಮ
ಗೋವೆಂದರೆ ಭೂಮಿ.
ಆ ಭೂಮಿ ಸಂಹಾರ ಮಲವೆ ಭಸ್ಮ.
ಅಂತಪ್ಪ ಭಸ್ಮಕ್ಕೆ ಕಾರಣವಾಗಿ
ಪ್ರಪಂಚ ಸಂಹಾರರೂಪಮಾಗಿ
ಸಂಹಾರವೊಂದೆ ಮುಖಮಾಗಿರ್ಪ
ಲಲಾಟಾಕ್ಷಿಯೇ ರುದ್ರಾಕ್ಷಿ.

ಅಂತಪ್ಪ ಭಸ್ಮ ರುದ್ರಾಕ್ಷಿಗಳಿಂ ಪೂರ್ವವಾಸನೆಯಳಿದು
ಪ್ರಣವ ಶಿವಮಂತ್ರದಿಂ ತಾನೆ ಶಿವನಾಗಿರ್ಪ
ಕೇವಲ ಕೈವಲ್ಯ ಮಂಗಳಮಯ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೆ. || ೭ ||

೧೧೧೮

ಪರಬ್ರಹ್ಮ ಸೃಷ್ಟಿರೂಪವಾಗಿ ಜನಿಸುವುದಲ್ಲ
ಸಂಹಾರರೂಪಮಾಗಿ ಲಯವಪ್ಪುದಲ್ಲ
ಸ್ಥಿತಿರೂಪಮಾಗಿರ್ಪುದು.
ಅದರಿಂ ವಿಷ್ಣುವೆ ಪರಬ್ರಹ್ಮವೆಂಬ
ವೈಷ್ಣವ ಕುಜ ಖಂಡ[ನ]ಪರಶು ಮಹಿಮೆಯಂ ಪೇಳ್ವೆನೆಂತೆಂದಡೆ :
ಮನಸ್ಸಿಗೆ ಸತ್ವವೆ ಗುಣವಾಯಿತ್ತು.
ಆ ಸತ್ವಕ್ಕೆ ತಮಸ್ಸೇ ಗುಣಮಾಗಿರ್ಪುದರಿಂ
ಶಿವನೆ ಸತ್ವಮಯವಾದ ಶುದ್ಧ ಸ್ಪಟಿಕ ಸಂಕಾಶದಿಂ
ವಿಶ್ವ ನಟನೆಯಿಂ ನಟಿಸುತ್ತಿರ್ಪುದರಿಂ
ಶಿವನೆ ಸತ್ವ ಸ್ವರೂಪು ; ವಿಷ್ಣುವೆ ತಮೋ ರೂಪು.
ಆ ತಮಸ್ಸೇ ಮಿಥ್ಯ ; ಸತ್ವವೇ ನಿಜ.
ಆ ಸತ್ಯ ಮಿಥ್ಯಂಗಳೆರಡೆಯಲ್ಲದೆ
ಬೇರೆ ಮತ್ತೊಂದಿಲ್ಲದೆ ಒಂದನೊಂದನಾಶ್ರಯಿಸಿ
ಒಂದಕೊಂದು ಗುಣವಾಗಿ,
ಅದಕ್ಕದೆ ದೇಹ ಪ್ರಾಣಗಳಾಗಿ
ಪ್ರಕೃತಿ ಪರಮರಾಗಿರ್ಪುದರಿಂ
ಆ ವಿಷ್ಣುವಿಗೆ ಶಿವನೆ ಗುಣ,
ಆ ಶಿವನಿಗೆ ವಿಷ್ಣುವೆ ಗುಣಮಾದುದರಿಂ
ಶಿವನೇ ತಮೋಗುಣಮಾದ
ವಿಷ್ಣುವೆ ಸತ್ವಗುಣಮಾದನೆಂತೆಂದಡೆ :
ಸತ್ವ ಮೂರ್ತಿಯಾದ ಪುರುಷನಂ
ತಮೋರೂಪಮಾದ ಸ್ತ್ರೀಸಂಗದಿಂ ಹೀನನಾಗಿರ್ಪಂತೆ
ಆ ಸ್ತ್ರೀ ಪುರುಷಸಂಗದಿಂ ಮಂಗಳಮಯ ಪತಿವ್ರತಾ ಮಹಿಮೆಯುಳ್ಳಂತೆ
ಆ ತಥ್ಯ ಮಿಥ್ಯಂಗಳೆ ಹರ ಹರಿ ರೂಪಂಗಳಾಗಿಹವು.
ಅದರಿಂ ಉಂಟಾಗಿರ್ಪ ವಸ್ತುವೊಂದೆ ಶಿವನು.
ಇಲ್ಲಮಾಗಿರ್ಪ ಪ್ರಕೃತಿಯೆ ವಿಷ್ಣು.
ಈ ತಥ್ಯ ಮಿಥ್ಯ ಸಂಗದಿಂ
ಉಂಟಿಲ್ಲಮಾಗಿರ್ಪ ಸಕಲ ಪ್ರಪಂಚವೆ ಬ್ರಹ್ಮ ಪುರುಷನು.

ತಾ ಸಕಲಕ್ಕೂ ಕರ್ತನಾಗಿರ್ದು ಲೀಲಾಬದ್ಧತ್ವದಿಂ
ಅರ್ಧ ಸತಿಯು ಅರ್ಧ ಸುತನಾಗಿ
ಸ್ವಪ್ರಕಾಶ ನಷ್ಟಮಾಗಿ ಅಸ್ವತಂತ್ರನಾಗಿರ್ಪಂತೆ
ನಿಜಮಾಗಿರ್ಪ ವರ್ತಮಾನ ಭೂತ ಭವಿಷ್ಯಂಗಳಿಂ
ಕಾಣಿಸದಿರ್ಪಂತೆ, ಸ್ಥಿತಿ ವಿಷಮ ವಿಭಾಗದ ಮಧ್ಯದಲ್ಲಿ
ವರ್ತಮಾನವಾಗಿ, ಸ್ಥಿತಿ ರೂಪವಾಗಿ ನಿಲ್ಲುವ ವಸ್ತುವೊಂದು
ಸಮಗಣನಾ ವಿಭಾಗದಲ್ಲಿ ನಿಲ್ಲುವುದು ಶೂನ್ಯ.
ಅದೇ ಶಿವಶಕ್ತಿ ಸ್ವರೂಪು.
ಎರಡೂ ಕೂಡಿದಲ್ಲಿ ದಶಸ್ಥಾನವಾಗಿ ಹೆಚ್ಚುತಿರ್ಪುದು.
ಆ ಶೂನ್ಯರೂಪಮಾದ ಒಂಬತ್ತು ಆ ಶೂನ್ಯ ಮುಖದಲ್ಲೇ ಹೆಚ್ಚಿ ಎರಗುತ್ತಿರ್ಪುದು.
ಹೆಚ್ಚು ಕುಂದಿಲ್ಲದೆ ಒಂದಾಗಿರ್ಪ ನಿಜ ಸತ್ವವೆ ಶಿವನು
ಕಾಲತ್ರಯಂಗಳಲ್ಲಿ ಉದಯಾಸ್ತಮಾನ ಕಾಲಂಗಳೆ
ಬ್ರಹ್ಮವಿಷ್ಣು ರೂಪಮಾಗಿ, ಮಧ್ಯಕಾಲವೆ ಮಹೇಶ್ವರ ರೂಪಮಾಗಿರ್ಪಂತೆ,
ಸ್ಥಿತಿರೂಪಮಾದ ಶಿವನು, ಸೃಷ್ಟಿ ಸಂಹಾರರೂಪಮಾದ
ಬ್ರಹ್ಮವಿಷ್ಣುವಿನೊಳಗೆ ಕೂಡಿ ಪಂಚವಕ್ತ್ರನಾದ.
ತನ್ನ ನಾಲ್ಕು ಮುಖವೆ ಬ್ರಹ್ಮನಾಗಿ,
ಒಂದು ಮುಖವೆ ವಿಷ್ಣುವಾಗಿ, ಮೋಕ್ಷಮಯವಾದ
ಅಂತರ್ಮುಖವೆ ತಾನಾಗಿ ದೇಹದ ಮರೆಯಲ್ಲಿ ಪ್ರಕಾಶಿಸುತಿರ್ಪ ಜೀವನಂತೆ,
ಬ್ರಹ್ಮವಿಷ್ಣುಗಳೆಂಬ ಮಿಥ್ಯಾ ಪ್ರಕೃತಿಯ ಮರೆಯಲ್ಲಿ
ಪ್ರಕೃತಿ ಚೇತನನಾಗಿರ್ಪಾತನೆ ಶಿವನು.
ಉಂಟಾದುದಿಲ್ಲ ಮಾಡುತಿರ್ಪುದೆ ಸಂಹಾರ,
ಇಲ್ಲದದುಂಟು ಮಾಡುತಿರ್ಪುದೆ ಸೃಷ್ಟಿ,
ಇದ್ದಂತಿರ್ಪುದೆ ಸ್ಥಿತಿ.
ಸ್ಥಿತಿಯೇ ಸತ್ವ, ಆ ಸತ್ವಕ್ಕೆ ಸಂಹಾರವೆ ಶಕ್ತಿ,
ಆ ಸಂಹಾರವೇ ತಾಮಸ, ಆ ತಾಮಸಕ್ಕೆ ಸೃಷ್ಟಿಯೇ ಶಕ್ತಿ,
ಆ ಸೃಷ್ಟಿಯೇ ಅಹಂಕಾರ, ಅದಕ್ಕೆ ಸತ್ವವೇ ಶಕ್ತಿ,
ಶಿವನಿಗೆ ಮಹಾದೇವಿ ರೂಪಮಾದ ವಿಷ್ಣುವೆ ಶಕ್ತಿಯಾದಂತೆ,
ಆ ವಿಷ್ಣುವಿಗೆ ಐಶ್ವರ್ಯರೂಪಮಾದ ಬ್ರಹ್ಮನೆ ಶಕ್ತಿಯಾದಂತೆ,
ಆ ಬ್ರಹ್ಮನಿಗೆ ವಿವೇಕರೂಪಮಾದ ಶಿವನೆ ಶಕ್ತಿ.
ಐಶ್ವರ್ಯ ಶಕ್ತಿಗಳಿಗೆ ಲಯಮಲ್ಲದೆ
ವಿವೇಕಕ್ಕೆ ಲಯಮಿಲ್ಲದಿರ್ಪುದರಿಂ
ಸ್ಥಿತಿಯೇ ಶಿವನಾಯಿತ್ತು.
ಆ ಪ್ರಕೃತಿ ಮುಖದಲ್ಲಿ ಪ್ರಕಾಶಿಸುತ್ತಿರ್ಪ
ಸ್ವಧರ್ಮಮುಳ್ಳ ಪರಮಾತ್ಮನ ಕಿರಣಂಗಳೆ

ಆ ಪ್ರಕೃತಿ ಬದ್ಧದಿಂ ಪ್ರಕೃತಿಮಯವಾದ,
ಸೃಷ್ಟಿ ಸಂಹಾರ ರೂಪವಾದ ಶರೀರದಲ್ಲಿ
ಸ್ಥಿತಿರೂಪಮಾದ ಜೀವರಾಗಿರ್ಪವು.
ಸ್ವಭಾವಗುಣಮುಳ್ಳ ತೇಜೋರೂಪಮಾದ ಸೂರ್ಯಕಿರಣಂಗಳೆ
ಉದಕ ಮುಖದಲ್ಲಿ ಪ್ರಕಾಶಿಸಿ,
ಜಡರೂಪಮಾಗಿ ಭಿನ್ನಮುಖದಲ್ಲಿ ವರ್ಷಧಾರೆಗಳಾಗಿ,
ಅಪವಿತ್ರಮಾಗಿ, ಪೃಥ್ವಿಮುಖದಲ್ಲಿ ಬಹುತ್ವವೇಕತ್ವಮಾಗಿ,
ಪ್ರವಹಿಸುವಲ್ಲಿ ಪವಿತ್ರಮೆನಿಸಿ ಮತ್ತೆ
ಆ ಸೂರ್ಯ ಕಿರಣಂಗಳಿಂ ಲಯವ ಹೊಂದುತ್ತಿರ್ಪಂತೆ,
ಜೀವನು ಶರೀರಧಾರಿಯಾಗಿ ಸೂರ್ಯಕಿರಣಂಗಳೆಂತಂತೆ
ಸತ್ವ ಸ್ವರೂಪನಾದ ಸಂಹಾರ ಕರ್ತನಾದ
ಶಿವನಿಂದಲೆ ಲಯಮಪ್ಪವು.
ಮನೋವಿಕಾರ ಮನದಿಂದಲೇ,
ಸೃಷ್ಟಿ ಸ್ಥಿತಿ ಸಂಹಾರಂಗಳಾಗುತ್ತಿರ್ಪಂತೆ,
ಆ ಪರಮಾತ್ಮಸ್ವರೂಪಮಾದ ತದ್ವಿಕಾರಮಾಗಿರ್ಪ ಜೀವಂಗಳು
ಆ ಪರಮಾತ್ಮನಿಂದಲೇ ಸೃಷ್ಟಿ ಸ್ಥಿತಿ ಸಂಹಾರಂಗಳಾಗುತ್ತಿರ್ಪವು.
ಒಂದು ಬಾಗಿಲಲ್ಲಿ ಹೊರಟು, ಅನಂತ ಮುಖಗಳಲ್ಲಿ ಸಂಚರಿಸಿ,
ತಿರಿಗಿ ಬಂದ ಬಾಗಿಲೊಳಗೆ ಹೊಕ್ಕು ನಿಜಸ್ಥಾನವ ಸೇರುತ್ತಿರ್ಪಂತೆ,
ಸಂಹಾರರೂಪಮಾದ ತಮೋಮುಖದಲ್ಲಿ ಹೊರಟು
ಅನಂತ ಮುಖದಲ್ಲಿ ಸಂಚರಿಸಿ ಬಳಲಿ ಬಾಯಾರಿ
ತಿರಿಗಿ ಸಂಹಾರ ಮುಖದಲ್ಲೆ ನಿಜವ ಹೊಂದುತ್ತಿರ್ಪುದರಿಂ
ಜೀವನ ಸಂಹಾರ ಮೋಕ್ಷ ಅಂತಪ್ಪ ಸ್ವಪ್ರಕಾಶ ಪರಮಾನಂದ
ಮಂಗಳಮಯ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೆ. ||೮||

೧೧೧೯

ಸೃಷ್ಟಿ ಕರ್ತುವೇ ಸ್ತ್ರೀ, ಸ್ಥಿತಿ ಕರ್ತನೇ ಪುರುಷನು,
ಎರಡರ ಸಂಗವೇ ಸಂಹಾರಕರ್ತನು.
ಆ ಎರಡೂ ಏಕಮಾಗಿರ್ಪುದೆ ದಂಪತಿತ್ವ.
ಅದೇ ವಿಧ್ಯುಕ್ತಮಾದ ಮಂಗಳಮಯ ಕಲ್ಯಾಣ.
ಅದೆ ಶಿವ ಸ್ವರೂಪಮಾದುದರಿಂ
ವಿವಾಹ ಪ್ರತಿಷ್ಠೆಯೆ ಲಿಂಗಪ್ರತಿಷ್ಠಾಫಲ.
ಆ ಫಲ ಅಕ್ಷಯರೂಪಮಾಗಿ
ಪ್ರಪಂಚದಲ್ಲಿ ಅವಧಿರಹಿತಮಾಗಿ ಪೆಚ್ಚುತಿರ್ಪುದು.

ಅಂತಪ್ಪ ಸ್ತ್ರೀ ಸೃಷ್ಟಿಕಾರಣಮಲ್ಲದೆ
ಸೃಷ್ಟಿಯೇ ತಾನಲ್ಲದಂತೆ,
ಪುರುಷನು ಸ್ಥಿತಿಕಾರಣನಲ್ಲದೆ
ಸ್ಥಿತಿಯೇ ತಾನಲ್ಲದಂತೆ,
ದಂಪತಿಗಳು ವ್ಯಯಕಾರಣರಲ್ಲದೆ
ವ್ಯಯವೇ ತಾನಲ್ಲದಂತೆ,
ಸೃಷ್ಟಿ ಸ್ಥಿತಿ ಸಂಹಾರ ಕರ್ತರು
ತದ್ಗುಣಕಾರಣರಲ್ಲದೆ
ಆ ಗುಣಗಳೇ ತಾವಲ್ಲ.
ದೇವನು ಕಲ್ಪಿತ ಸ್ಥಿತಿಯ ಸಂಹರಿಸುವನಲ್ಲದೆ
ನಿಜವ ಸಂಹರಿಸುವನಲ್ಲ.
ವಿಷ್ಣುವು ಸಂಹಾರ ಕಲ್ಪಿತಗಳ ರಕ್ಷಿಸುವನಲ್ಲದೆ
ನಿಜವ ರಕ್ಷಿಸುವನಲ್ಲ.
ಬ್ರಹ್ಮನು ಸಂಹಾರ ಸ್ಥಿತಿಯ ಸೃಷ್ಟಿಸುವನಲ್ಲದೆ
ನಿಜವ ಸೃಷ್ಟಿಸುವನಲ್ಲ
ಅದರಿಂ ಲಯವಾಗದುದೆ ಸತ್ಯ,
ಸ್ಥಿತಿಯಾಗದುದೆ ಮಿಥ್ಯಮಾಯಿತು.
ಅಗ್ನಿಯೆ ದಾಹಕ ಗುಣ ನಿಜದಲ್ಲಿ ಶಾಂತಿಯ ಹೊಂದಿರ್ಪಂತೆ,
ಈಶ್ವರ ಸಂಹಾರ ಗುಣ ಸತ್ಯದಲ್ಲಿ ಶಾಂತಿಯ ಹೊಂದಿರ್ಪುದು.
ಸಹಜಮಾಗಿರ್ಪುದರಿಂ ಮಿಥ್ಯಾಮಯದಿಂ
ನಿನ್ನ ಸಂಹಾರ ಮುಖದಲ್ಲಿ ಸಿಕ್ಕಿ ಸಾವ
ಕೋಟಲೆಯ ಬಿಡಿಸಿ ಸತ್ಯಮಯನಾಗಿ
ನಿನ್ನ ಪರಮ ಶಾಂತಿಯೊಳಗೆ ಬೆರದು
ಭೇದದೋರದಿರ್ಪಂತೆ ಮಾಡಿ ಕೂಡಿ ಸಲಹಾ
ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೆ. || ೯ ||

೧೧೨೦

ಕಾಮವೆಂತು ಗುಹ್ಯದಲ್ಲಿ ಚಲನವೋ
ಕ್ರೋಧವಂತು ಜಿಹ್ವೆಯಲ್ಲಿ ಚಲನ.
ಸ್ಖಾಲಿತ್ಯದಲ್ಲಿ ಅಪವಿತ್ರವಾದ ಶರೀರಮೆಂತು ಸ್ನಾನಯೋಗ್ಯವೋ
ಕ್ರೋಧ ಸ್ಖಲನಕಾಲದಲ್ಲಿ ಸೂಕ್ಷ್ಮ ಶರೀರ ಮಂತ್ರ[ಸ್ನಾನ]ಯೋಗ್ಯ.
ಇಂತು ಕಾಮ ಕ್ರೋಧಾದಿ ಷಡ್ವರ್ಗಂಗಳು
ಸಕಲ ಗುಣಂಗಳು ಬೇರೆ ಬೇರೆ ತಂದು
ರೂಪ ಭಾವಂಗಳನ್ನು ಶರೀರಮುಖದಲ್ಲಿ ತೋರುತ್ತ

ಜೀವನನಾವರಿಸಿರ್ಪವೆಂತೆಂದರೆ :
ಲಹರಿಯ ಕೊಂಡಲ್ಲಿ ಪಿಶಾಚ ಗ್ರಹಣದಲ್ಲಿ
ರೋಗೋಲ್ಬಣದಲ್ಲಿ ತಲ್ಲಕ್ಷಣಂಗಳು
ತೃಟಿ ಕಾಲವು ಎಡೆಬಿಡದೆ ಆಚ್ಛಾದಿಸಿರ್ದುದರಿಂ
ಆ ವಸ್ತುವಿನಲ್ಲಿ ನಿಜ ಪ್ರಕಾಶ ಕಾಣಿಸದೆ
ಆವರಣ ಮುಖದಿಂ ಭಿನ್ನ ಜೀವನಾಗಿರ್ಪುದು.
ಅಂತಪ್ಪ ಜೀವನ ಕರಣವೆ ಮನ.
ಆ ಮನದಲ್ಲಿ ಹುಟ್ಟಿ ಜೀವನಲ್ಲಿ ಹೊಂದಿ
ಸ್ವ ಪ್ರಕಾಶ ವಿವೇಕದಲ್ಲಿ ಲಯವ ಹೊಂದುತಿರ್ಪುದು.
ಅದರಿಂ ಮನೋ ಲಯಕ್ಕೆ ಆವರಣ ನಷ್ಟ.
ಆವರಣ ನಷ್ಟವೆ ಸ್ವ [ಪ್ರ]ಕಾಶ.
ಅಂತು ಸ್ವಪ್ರಕಾಶ ಮನೋಗುಣಂಗಳಿಂ
ನಷ್ಟವಾಗಿ ಕಾಣಿಸದೆ ಲಹರಿ ಮೈಯ್ಯುಂಡ ಪುರುಷನು
ಆ ಲಹರಿಯಿಳಿದು ಸ್ವಭಾವವಾಗಿರ್ಪುದೆ ವೇದನೆಯಾಗಿರ್ಪಂತೆ,
ಆವರಣವೆ ಅನುಭವವಾಗಿರ್ಪ ಜೀವನು
ಆವರಣ ಲಯಮಪ್ಪ ತೂರ್ಯಾವಸ್ಥೆಯೆ
ಮರಣವೇದನೆಯಾಗಿರ್ಪುದು.
ಅದು ತನ್ನ ಸ್ವಭಾವವೆಂದು ತಿಳಿದು
ನಿಜವ ಹೊಂದದೆ ಆವರಣ ಮುಖದಲ್ಲಿ ಬೀಳುತಿರ್ಪ
ಭವವನನುಭವಿಸುತ್ತಿರ್ಪುದು.
ಅಂತು ಪರಮನೆ ತನ್ನಿಂದಲೆ ಸೃಷ್ಟಿಸ್ಥಿತಿಗಳಧಿಕವಾಗಿ
ಅವೆ ತನಗೆ ಆವರಣಂಗಳಾಗಿ ಇರ್ಪವು.
ಶಕ್ತಿರಹಿತವಾದ ಬಾಲ್ಯದಲ್ಲಿ ಶರೀರ ಪವಿತ್ರವಾಗಿರ್ಪಂತೆ
ಆ ಶಕ್ತಿ ಬಲಿಯೆ ಶರೀರ ಮಪವಿತ್ರವಾಗಿ,
ಕರ್ಮಮುಖದಲ್ಲಿ ಬೀಳುತ್ತಿರ್ಪುದರಿಂ
ಆ ಶಕ್ತಿಯಪವಿತ್ರ, ಆ ಶಿವನೆ ಪವಿತ್ರ.
ಆವರಣರೂಪವಾದ ಸಾಕಾರದಲ್ಲಿ
ಶಕ್ತಿಯದಲ್ಲದೆ ನಿರಾಕಾರದಲ್ಲಿ ತಾನೊಬ್ಬನೆ.
ಸಾಕಾರದಲ್ಲಿ ತಾನೈದು ಬಗೆಯಾಗಿ,
ತಾ ಧರಿಸಿರ್ಪ ಶಕ್ತಿ ಮೂರು ಬಗೆಯಾಗಿ,
ಸೃಷ್ಟಿ ಸ್ಥಿತಿ ಸಂಹಾರವುಳ್ಳ ಮುಮ್ಮೊನೆಯುಳ್ಳ ಶಕ್ತಿಯಂ
ಪರಿಗ್ರಹಿಸಿ ತಾ ಚೈತನ್ಯರೂಪನಾಗಿ
ಆ ಶಿವನು ಪರಿಗ್ರಹಿಸಿದಲ್ಲಿ ಚೈತನ್ಯವಾಗಿ
ಬಿಟ್ಟಲ್ಲಿ ಜಡವಾಗಿ ಆ ವಸ್ತುವಿನ ಆಧೀನವಾಗಿರ್ಪುದು.

ಅಂತಪ್ಪ ಸೃಷ್ಟಿ ಸ್ಥಿತಿ ಸಂಹಾರ ಶಕ್ತಿಯುಳ್ಳ ಶಿವನೆ ಪರಬ್ರಹ್ಮ.
ತನ್ನ ಶಕ್ತಿ ಮೂರು ಭೇದವಾಗಿ
ತಾನೈದು ಭೇದವಾಗಿರ್ಪುದೆ ಅಷ್ಟಮೂರ್ತಿತ್ವದಳರೂಪವಾಗಿಹುದು
ನಿರಾಕಾರ ವಿಕಸನವೆ ಸಾಕಾರ
ಸಂಕುಚಿತವೆ ನಿರಾಕಾರ ತಾಂ
ನಿರಾಕಾರಮಹಲ್ಲಿ ಸೃಷ್ಟಿ ಸಂಹಾರರೂಪವಾದ
ಐಶ್ವರ್ಯ ಶಕ್ತಿಗಳು ಮಿಥ್ಯವಾಗಿ
ಆ ವಿವೇಕ ಶಕ್ತಿ ತಾನೆ ಶಿವನಾಗಿರ್ಪುದು.
ಸರಸ್ವತಿಯೆ ಶಿವನಸ್ವರೂಪವೆಂತೊ,
ಅಂತು ರುದ್ರನೆ ಪರಬ್ರಹ್ಮವೆಂಬುದು ನಿಜ.
ವಿವೇಕವೆ ಶಿವನು, ಶಿವನೆ ವಿವೇಕವಾಗಿರ್ಪುದರಿಂ
ಸರ್ವಜ್ಞನೆ ಶಿವನಾದನು.
ವಿವೇಕವೆಂದರೆ ವಿವಿಚ್ಯ ಜ್ಞಾನ.
ಆ ವಿವೇಕದಿಂದಲೇ ಸಕಲವು ಸೃಷ್ಟಿ ಸ್ಥಿತಿ ಸಂಹಾರಗಳಾಗಿರ್ಪವು.
ಆ ವಿವೇಕವೆ ಬ್ರಹ್ಮ ಅಗ್ನಿಯುಪಾಧಿಯ ಹೊಂದಿ
ಅ[ದ]ರಕೊಡ್ಡಿ ಪ್ರಕಾಶಿಸುತ್ತಿರ್ಪಂತೆ
ವಿವೇಕ ಕರ್ಮವ ಹೊಂದಿ ಜೀವರೂಪವಾಗಿ
ಅದರ ಕೊಡ್ಡಿ ಪ್ರಕಾಶಿಸುತ್ತಿಹುದು.
ಆ ಜಡರೂಪವಾದ ಕರ್ಮದಲ್ಲಿ
ಚೈತನ್ಯರೂಪವಾಗಿ ತಾನು ಪ್ರಕಾಶಿಸುತ್ತಿರ್ಪುದರಿಂ
ಸರ್ವಗತನೆಂಬುದು ಸಹಜವಾಯಿತ್ತು
ಆವರಣವಳಿದಲ್ಲಿ ಉಪಾಧಿಯಳಿದ ತೇಜಸ್ಸು
ಸೂರ್ಯನೊಳೈಕ್ಯವಪ್ಪಂತೆ,
ಉಪಾಧಿಯಳಿದ ವಿವೇಕ ಶಿವನೊಳಗೆ ಐಕ್ಯವಪ್ಪಲ್ಲಿ
ಭೇದವಿಲ್ಲದೆ, ಲಯವಿಲ್ಲದೆ ಮಹಪ್ರಕಾಶದಲ್ಲಿ ಬೆರದು
ಪ್ರಕಾಶಿಸುತ್ತ ಪುನಃ ಕರ್ಮಕ್ಕೆ ಬಾರದೆ
ಮಹದಲ್ಲೆ ಪ್ರಕಾಶಿಸುತ್ತಿರ್ಪುದೆ ಮೋಕ್ಷವಾದುದರಿಂ
ಸೃಷ್ಟಿ ಸಂಹಾರಂಗಳೆ ತಂತು
ಭೇದಾ ಭೇದಂಗಳೆರಡೂ ಮಿಥ್ಯ.
ಈ ವರ್ತಮಾನಕಾಲದಲ್ಲೆ ಭೂತ ಭವಿಷ್ಯಂಗಳು ಹುಟ್ಟಿ
ಆ ವರ್ತಮಾನವ ಮರೆಗೊಂಡಿಪ್ಪಂತೆ,
ಈ ನಿಜದಲ್ಲೆ ದ್ವೈತಾದ್ವೈತಂಗಳು ಪುಟ್ಟಿ
ಆ ನಿಜಸುಖವ ಮರೆಗೊಂಡಿರ್ಪುದು.
ಅದರಿಂ ವಿವೇಕವೆ ಬ್ರಹ್ಮವಾದುದರಿಂ

ವಿವೇಕವೆ ಜಡರೂಪಮಾದ
ಸೃಷ್ಟಿಮುಖಕಾದಿಯಾಗಿರ್ಪ ಸ್ಫಾಲಿತ್ಯ ಕಾರಣಮಾದ
ಮನದೊಳಗೆ ಕೂಡಿದ ಜ್ಞಾನದಂತೆ
ವಿವೇಕ ಸಾಕಾರೂಪಮಾದ ಸ್ವರೂಪಮಾಗಿ,
ಆದಿ ವರ್ಣವಾಗಿಪ್ಪ ಆಕಾರದೊಳಗೆ ಕೂಡಿ
ಆ ವಿವೇಕವೆ ಅವಿವೇಕಮಾಯಿತ್ತು.
ಅದರಿಂ ಆತ್ಮನಾತ್ಮವೆಂಬ ಶ್ರುತಿವಚನದಿಂ
ಆ ವಿವೇಕವೆ ಆತ್ಮಮಾಗಿರ್ಪುದು, ಅನಾತ್ಮವಾಗಿರ್ಪುದು.
ಗರ್ಭದಲ್ಲಿರ್ಪ ಶಿಶುವು ಕೇವಲವು
ಜಾತಿಸ್ಮರಾದಿತ್ವಾದಿ ವಿವೇಕಮುಂಟಾಗಿರ್ದು
ಭೂಪತನದಲ್ಲಿ ಅಮಂಗಲ ರೋದನ ರೂಪಮಾದ
ಅಕಾರದೊಳಗೆ ಕೂಡಿ ಅವಿವೇಕಿಯಾಗಿಪ್ಪಂತೆ,
ಸಾಕಾರಮಾದಲ್ಲಿ ರುಧಿರದೊಳಗೆ ಕೂಡಿ
ಪಂಚಭೂತ ರೂಪಮಾದ ರುದ್ರನಾಗಿರ್ಪನು.
ನಿರಾಕಾರದಲ್ಲಿ ನಿರುಪಾಧಿಕ ಮಂಗಳಾತ್ಮ ವಿವೇಕಮಾಗಿರ್ಪನು.
ಆತ್ಮ ವಿವೇಕವೆ ಶಿವನಾಗಿರ್ಪುದರಿಂ
ಆತ್ಮ ವಿವೇಕಮುಳ್ಳ ಪುರುಷರ ಶಿವನೆಂದು ತಿಳಿಯಬೇಕು.
ಅಂತಪ್ಪ ವಿವೇಕದಿಂ ಭಾವವನೇಕಮುಖದಿಂ
ಜನಿಸುತ್ತಿರ್ಪುದು ; ಆ ಭಾವದಿಂ ವಿವೇಕಮಧಿಕಮಾಗಿರ್ಪಂತೆ,
ಆ ಶಿವನಲ್ಲಿ ಪ್ರಪಂಚ ಅನೇಕ ಮುಖದಲ್ಲಿ ಜನಿಸುತ್ತಿರ್ಪುದು
ಆ ಪ್ರಪಂಚ ಮುಖದಲ್ಲಿ ಶಿರಮಹಿಮೆಯೆ.
ಅಧಿಕಮಾಗಿರ್ಪ ಮಹಿಮೆಯ ಸ್ವಭಾವಲೀಲೆ.
ಆ ಸ್ವಭಾವಲೀಲೆಯೇ ಆತ್ಮವಿವೇಕ.
ಆತ್ಮವಿವೇಕಮುಳ್ಳ ಪುರುಷನೆ ಶಿವಸ್ವರೂಪು.
ಅಂತಪ್ಪ ಶರಣರ ಚರಣಕಮಲಂಗಳ ಪರಿಮಳದಲ್ಲಿ
ಪರವಶನಾಗಿರ್ಪಂತೆ ಮಾಡಿ ಸಲಹಾ
ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೆ. || ೧೦ ||

೧೧೨೧

ಗುರುವಿನ ಹಸ್ತವು ಜಂಗಮದ ಪಾದಾಂಗುಷ್ಠವು
ಘಾತಮೆಂತೆಂದಡೆ :
ಗುರುವಿನ ಹಸ್ತ ಕರ್ಮಮೂಲಮಾದುದರಿಂ
ಇಷ್ಟ ಸಾಧ್ಯಮಪ್ಪುದು.
ಜಂಗಮಪಾದ ಜ್ಞಾನ ಮೂಲಮೆಂತೆಂದಡೆ :
ತೀರ್ಥಯಾತ್ರೆಗೆ ಜ್ಞಾನವೇ ಮೂಲ

ಅದಕ್ಕೆ ಪಾದವೆ ಕರಣವಾಗಿಹುದು.
ಆ ಪಾದಕ್ಕೆ ಉಂಗುಷ್ಠವೆ ಆಧಾರವಾದುದರಿಂ
ಪರಮ ಪವಿತ್ರ.
ಅಲ್ಲಿ ಪ್ರಾಣಲಿಂಗ ಜನನ.
ಗುರುಹಸ್ತೋದ್ಭೂತೇಷ್ಟಲಿಂಗವೇ ಪೃಥ್ವಿರೂಪು.
ಜಂಗಮ ಪಾದೋದ್ಭವ ಪ್ರಾಣಲಿಂಗವೆ ಜಲರೂಪು.
ಆ ಪೃಥ್ವಿ ಲಿಂಗಕ್ಕೆ ಆ ತೀರ್ಥಲಿಂಗವೆ ಪ್ರಾಣರೂಪು.
ಆ ಇಷ್ಟ ಪ್ರಾಣಲಿಂಗಗಳೆರಡು ಏಕಮಾದಲ್ಲಿ
ತೇಜೋರೂಪಮಾಗಿ, ಭಾವನಾಯೋಗ್ಯವಾಗಿ
ಲಿಂಗಮೆಂದು ಭಾವಿಸಲ್ಪಟ್ಟುದರಿಂ ಭಾವಲಿಂಗಮಾಯಿತ್ತು.
ಅಂತಪ್ಪ ತೇಜೋಲಿಂಗ ಸಂಗದಿಂ
ನನ್ನ ಶರೀರಾದಿ ಕರ್ಮ ಕಾಷ್ಠತ್ರಯಂಗಳು ಭಸ್ಮಮಾದುದರಿಂ
ಶಿವಭಕ್ತಶರೀರ ಪುನರ್ದಹನ ಯೋಗ್ಯಮಲ್ಲಮಾಯಿತ್ತು.
ನಾನೆಂಬ ಭಸ್ಮ ನಿನಗೆ ಲೇಪನವಾಗಿರ್ಪುದೆ ಲಿಂಗೈಕ್ಯ.
ಅಂತಪ್ಪ ಲಿಂಗೈಕ್ಯ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೧೧ ॥

೧೧೨

ಕೇವಲ ವಿವಿಚ್ಚ ಜ್ಞಾನವೇ ಶಿವನು.
ಆ ಶಿವನೆ ಪ್ರಪಂಚ ಸಂಹಾರಮೂರ್ತಿ.
ಆ ಶಿವನು ಪ್ರಪಂಚವ ಸಂಹರಿಸಿದಲ್ಲಿ
ಶೇಷ ವಸ್ತು ತದ್ಭಾವವೇ ಘಟವಳಿದಲ್ಲಿ
ಘಟಭಾವವುಳಿದಂತೆ ಮೊದಲಿಂದಲೂ
ಸಂಹಾರ ಮುಖದಲ್ಲಿ ಅಳಿಯದೆ ಉಳಿದಿಪ್ಪುದರಿಂ
ಆ ಭಾವವೆ ಆದಿಶೇಷಮಾಯಿತ್ತು.
ಆ ವಿವೇಕಕ್ಕೆ ಆ ಭಾವವೆ ಅಲಂಕಾರಮಾದುದರಿಂ
ಶಿವನಿಗೆ ಅದೆ ಆಭರಣಮಾಯಿತ್ತು.
ಸಕಲಸಂಹಾರ ಪ್ರಪಂಚಕ್ಕೂ ಆ ಭಾವ ತಾನೆ ಆಧಾರಮಾಯಿತ್ತು.
ಅದು ವಿಷ್ಣುವಿಗೆ ಶಯ್ಯೆಮಾಗಿರ್ಪುದೆಂತೆಂದಡೆ :
ವಿಷ್ಣುವೆಂದರೆ ವ್ಯಾಪಿಸಲ್ಪಟ್ಟಂಥ ಸ್ವಕರ್ಮ.
ಅದಕ್ಕೆ ಪ್ರಕೃತಿಯೆಂಬ ನಾಮ–
ಉತ್ಕೃಷ್ಟಮಾಗಿ ಮಾಡಲ್ಪಟ್ಟುದುಯೆಂಬುದರ್ಥ.
ಅದು ಪ್ರಪಂಚ ರಕ್ಷಣ ಕಾರಣಮಾಗಿರ್ಪುದರಿಂ
ಪ್ರಪಂಚಮೂಲವೆ ಪ್ರಕೃತಿ, ಪ್ರಪಂಚಲಯಮಾದಲ್ಲಿ

ಪ್ರಪಂಚ ಕರ್ಮದಲ್ಲಿ ಭಾವದಲ್ಲಿ ಸುಷುಪ್ತಿಯ ಹೊಂದಿರ್ಪುದರಿಂ
ಆ ಶೇಷನಲ್ಲಿ ವಿಷ್ಣು ಶಯನಮಾಗಿರ್ಪುದರಿಂ
ಸಾಕಾರದಲ್ಲಿ ಕರ್ಮ, ನಿರಾಕಾರದಲ್ಲಿ ಭಾವ,
ಎರಡಕ್ಕೂ ಭೇದಮಿಲ್ಲದೆ ವಿಷ್ಣುವ್ಯಾಪಕತ್ವವೂ
ಶೀಲಸ್ವಭಾವವೂ ಏಕಮಾಗಿರ್ಪುದು.
ಭಾವಮುಖದಲ್ಲಿ ಪ್ರಕೃತಿಯುಕ್ತವಾದ
ಸಕಲ ವಿಷಯಂಗಳು ವ್ಯಾಪಿಸಿರ್ಪುದರಿಂ
ಶೇಷಮುಖವೇ ವಿಷಾನ್ವಿತವಾಯಿತ್ತು.
ಶೇಷ ಕ್ಷಣವೆ ಭಾವ ; ಭಾವ ವ್ಯವಹಾರ ಅವ್ಯವಹಾರದಲ್ಲಿ
ಪ್ರಕಾಶಿಸುತ್ತಿರ್ದ ಜ್ಞಾನವೇ ಶಿರೋರತ್ನ.
ಅದು ಅಚೇತನವಚೇತನ ಮಾಡುತಿರ್ಪುದು.
ಆ ಈಶ್ವರ ಭಾವದಲ್ಲಿ ಪರವಶಮಾಗಿರ್ಪ ಪ್ರಕೃತಿ
ತದ್ವಿಚಾರ ಜ್ಞಾನದಿ ಚೇತನಮಾಗಿ
ಕರ್ಮ ರೂಪದಲ್ಲಿ ಪ್ರಪಂಚಮುಖದಲ್ಲಿ
ಪ್ರವಹಿಸುವಲ್ಲಿ ಕಾಲೋಚಿತ ಕರ್ಮ, ಭಿನ್ನ ಕರ್ಮ,
ಉತ್ಕೃಷ್ಟ ಕರ್ಮ ಈ ಮೂರರ್ಥಮುಳ್ಳುದೆ ಪ್ರಕೃತಿ.
ಅದು ಸೃಷ್ಟಿ, ಸ್ಥಿತಿ ಸಂಹಾರರೂಪಮಾಗಿರ್ಪುದು.
ಅದರಿಂ ವಿವೇಕವೇ ಶಿವನು, ಪ್ರಕೃತಿಯೇ ವಿಷ್ಣು
ಅದರಿಂ ಪ್ರಕೃತಿಯೇ ಕರ್ಮ, ವಿವೇಕವೇ ಜ್ಞಾನ,
ಆ ಕರ್ಮಮುಖದಲ್ಲಿ ಹುಟ್ಟುತ್ತಿರ್ಪ ಕಾರ್ಯವೇ ಬ್ರಹ್ಮನು.
ಅದು ಸಾಮ, ದಾನ, ಭೇದ ದಂಡಂಗಳೆಂಬ
ಚತುರ್ಮುಖಗಳಿಂದೊಪ್ಪುತಿಹುದು.
ಆ ಕಾರ್ಯಮುಖದಲ್ಲಿ ಹುಟ್ಟುತ್ತಿರ್ಪ
ಪ್ರಪಂಚವೇ ವಿಶ್ವಪ್ರಪಂಚ.
ಆ ಕಾರ್ಯಕ್ಕೆ ವಿವೇಕವೇ ಶಕ್ತಿಯಾಗಿಹುದು.
ಅದು ವಿವೇಕಕ್ಕೆ ಪ್ರಕೃತಿಯೆ ಶಕ್ತಿಯಾಗಿಹುದು.
ಆ ಪ್ರಕೃತಿಗೆ ಕಾರ್ಯವೇ ಶಕ್ತಿಯಾಗಿಹುದು.
ಆ ಕಾರ್ಯ ಪ್ರಪಂಚವ ಸೃಷ್ಟಿಸುತ್ತಿಹುದು,
ಆ ಕರ್ಮ ಪ್ರಪಂಚವ ರಕ್ಷಿಸುತ್ತಿಹುದು.
ವಿವೇಕ ಇದೆಲ್ಲವನ್ನು ಭಾವದಲ್ಲಿ ಉಪಸಂಹಾರವ ಮಾಡಿದಲ್ಲಿ
ಕಾರ್ಯಕ್ಕೆ ಮೃತಿ, ಕರ್ಮಕ್ಕೆ ಮೂರ್ಛೆ,
ಜ್ಞಾನ ಒಂದೇ ಚೇತನಮಾಗಿಹುದು.
ಅಂತಪ್ಪ ಆದಿ ಭಾವವೇ ಶೇಷನು.
ಅದಕ್ಕೆ ಗರುಡನು ಪಗೆಯಾಗಿರ್ಪುದೆಂತೆಂದಡೆ :

ಗಾರುಡ ಮೂಲವೆ ಗರುಡನು ;
ಗಾರುಡವೆಂದರೆ ಪ್ರಪಂಚ.
ತನ್ಮೂಲವಾಗಿರ್ಪ ಮಿಥ್ಯವೇ ಗರುಡನು.
ಅದು ಪ್ರಕೃತಿಗೆ ಆಧಾರವಾಗಿ
ವಿವೇಕ ಭಾವ ಸಂಹರಿಸುತ್ತಿಹುದು.
ಪ್ರಕೃತಿಯುಕ್ತಭಾವ ಸಂಹರಿಸಲಾರದು.
ಈ ಪ್ರಕೃತಿಯುಕ್ತದಲ್ಲಿ ಭಾವವನಂತವಾಗಿ
ಸಕಲ ಪ್ರಪಂಚವನ್ನು ಬಳಸಿರ್ಪುದರಿಂ
ಕುಂಡಲಿಯಾಯಿತ್ತು.
ಅದು ವಿವೇಕ ಮುಖದಲ್ಲಿ ಒಂದೆಯಾಗಿ
ಜ್ಞಾನಲಿಂಗಕ್ಕೆ ಭಾವವೆ ಆಭರಣವಾಗಿ
ಆನಂದ ಕಳೆಯೆ ನಿಜವಾಗಿರ್ಪುದೆ ಮೋಕ್ಷ.
ಅಂತಪ್ಪ ಕೈವಲ್ಯ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೧೨ ॥

೧೧೨೩

ಘಟ ಮುದಿಸುತಲೆ ಘಟಮುತ್ಪನ್ನವಾಗುವಂತೆ,
ಸಾಕಾರ ಶರೀರಮುದಿಸುತಲೇ ನಿರಾಕಾರಸ್ವಪ್ನಮುತ್ಪನ್ನಮಾಗಿ,
ಬೀಜ ವೃಕ್ಷನ್ಯಾಯದಂತೆ
ಆದ್ಯಂತಂಗಳು ತಿಳಿಯದೆ
ಒಂದಕ್ಕೊಂದು ಕಾರಣವಾಗಿರ್ಪುದರಿಂ
ಸಾಕಾರದಲ್ಲಿ ಶರೀರವೇ ಜಾಗ್ರವಾಗಿ, ಭಾವವೇ ಸ್ವಪ್ನವಾಗಿ ಇಹುದು.
ನಿರಾಕಾರದಲ್ಲಿ ಭಾವವೇ ಜಾಗ್ರವಾಗಿ
ಸಾಕಾರಶರೀರವೇ ಸ್ವಪ್ನವಾಗಿ ಇಹುದು.
ತಮಸ್ಸಿನಲ್ಲಿ ಸ್ವಪ್ನ ಶರೀರ ಕಾಣಿಸುತ್ತಿಹುದು.
ಜಾಗ್ರದಲ್ಲಿ ಸ್ಥೂಲಶರೀರ ಕಾಣಿಸುತ್ತಿಹುದೆಂತೆಂದಡೆ :
ರಾತ್ರಿಯಲ್ಲಿ ಆಕಾಶವೂ ದಿವದಲ್ಲಿ ಪೃಥ್ವಿಯೂ ಕಾಣಿಸುತ್ತಿಪ್ಪಂತೆ.
ಆ ಸ್ವಪ್ನ ಶರೀರಕ್ಕೂ ಈ ಸ್ಥೂಲ ಶರೀರಕ್ಕೂ
ನಾದ ಬಿಂದು ಕಳಾ ವ್ಯವಹಾರಂಗಳಲ್ಲಿ
ಸಂಬಂಧವಾಗುತ್ತಿರ್ಪುದೆಂತೆಂದಡೆ :
ಸಾಕಾರವಾದ ಇಂದ್ರಿಯಂಗಳಿಗೂ
ನಿರಾಕಾರವಾದ ಮನಸ್ಸಿಗೂ ಸಂಬಂಧವಾಗಿರ್ಪಂತೆ.
ಆ ಮನಸ್ಸಿಗೆ ಸುಖದುಃಖಂಗಳು
ಇಂದ್ರಿಯ ಮುಖಂಗಳಿಂದಡಸಿದಲ್ಲಿ

ಈ ಇಂದ್ರಿಯಂಗಳು ದ್ರವಿಸಿ, ಕಂಪಿಸಿ
ಘೋಷಿಸಿ, ನಶಿಸಿ, ಪ್ರಕಾಶಿಸಿ
ಅಹಂಕರಿಸುತ್ತಿರ್ಪಂತೆ.
ಆ ಭಾವಮಯವಾದ ಸ್ವಪ್ನ ಶರೀರದಲ್ಲಿ
ಈ ಶರೀರಕರ್ಮದಿಂದಲೇ ತೋರುವ
ಸುಖ ದುಃಖಂಗಳು ಈ ಶರೀರಕ್ಕೆ ಸಂಬಂಧಮಾಗಿಹವು.
ಜನನದಲ್ಲಿ ಸ್ಥೂಲಶರೀರವೇ ತಥ್ಯ,
ಮರಣದಲ್ಲಿ ಸ್ವಪ್ನ ಶರೀರವೇ ತಥ್ಯ,
ಈ ಸ್ಥೂಲ ಶರೀರ ಕರ್ಮ ಇಂದ್ರಿಯ ಮುಖಂಗಳಲ್ಲಿ
ಆ ಭಾವಶರೀರಕ್ಕೆ ಲೇಪನಮಾಗುತ್ತಿರ್ಪಲ್ಲಿ
ಅದು ಸ್ಥೂಲಮಾದಲ್ಲಿ, ಇದು ಲಯಮಪ್ಪುದು.
ಇಂದ್ರಿಯಂಗಳು ಈ ಶರೀರದಲ್ಲಿ ಸಾಕಾರಮಾಗಿ
ಆ ಶರೀರದಲ್ಲಿ ನಿರಾಕಾರಮಾಗಿ ಹೊಂದಿರ್ಪವು.
ಇಂದ್ರಿಯ ಸಂಬಂಧಮಾದ ವಿಷಯ ವ್ಯಾಪಾರಂಗಳು
ಮನಸ್ಸಹೊಂದಿ ಅನುಭವಕ್ಕೆ ಬರುತ್ತಿರ್ಪಂತೆ
ಶರೀರಸಂಬಂಧವಾದ ಪುತ್ರ ಕರ್ಮಂಗಳು
ಪರದಲ್ಲಿ ಸ್ವಪ್ನರೂಪಮಾದ ಕಾರಣ
ಶರೀರಕ್ಕೆ ಅನುಭವನೀಯಮಾಗಿ ಇಹುದು.
ಆಕಾಶದಲ್ಲಿ ಇರ್ಪ ಸೂರ್ಯಪ್ರಭೆಯಿಂ
ಪೃಥ್ವಿ ಪ್ರಕಾಶಮಾಗಿರ್ಪಲ್ಲಿ
ಅದೇ ಪೃಥ್ವಿಯಲ್ಲಿರ್ಪ ರಸಪಾನಂಗಳಂ ಮಾಡಿ
ಅದೇ ಜಡಮಯಮಾದ ಮೇಘಮಾದಲ್ಲಿ
ಪೃಥ್ವಿ ಆಕಾಶಂಗಳೊಂದಕ್ಕೊಂದು ಕಾಣಿಸದಿರ್ಪಂತೆ
ಭಾವ ಶರೀರವ ಹೊಂದಿ ತೇಜೋಮಯವಾಗಿ
ಭ್ರಮಿಸುತಿರ್ಪ ಜೀವನ ಪ್ರಕಾಶದಲ್ಲಿ
ಜಾಗ್ರ ಸ್ವಪ್ನಂಗಳೊಂದೆಯಾಗಿಪ್ಪವು.
ಈ ಶರೀರದಲ್ಲಿ ಇಪ್ಪ ಅಶನಾದಿ ರಸಂಗಳ
ಆ ತೇಜಸ್ಸು ಕೊಂಡಲ್ಲಿ ಅದೆ ಜಡರೂಪವಾದ ತಮಸ್ಸಾಗಿ
ಜೀವನ ಸ್ಥೂಲ ಕಾಣಿಸದೆ ಜೀವನು
ಕಾರಣದಲ್ಲೆ ವರ್ತಿಸುತ್ತಿಹನು.
ಆ ಮೇಲೆ ವ್ಯಾನವಾಯುಮುಖದಿಂ
ಶರೀರಕೂಪಂಗಳಲ್ಲಿ ಆ ರಸವು ವಿಸರ್ಜನದಲ್ಲಿ
ಆವರಣವಳಿದು ಜಾಗ್ರಮಾಗುತ್ತಿರ್ಪುದು.
ಅಂತಪ್ಪ ಸುಷುಪ್ತಿಯ ಹೊಂದಿರ್ಪ ಜೀವನಿಗೆ

ಉಪಾಧಿಯಿಂ ಜಾಗ್ರಮುದ್ಭವಿಸುವದೆಂತೆಂದಡೆ :
ಪೃಥ್ವಿರೂಪವಾದ ವಾಸನೆಯಿಂ ಜಾಗ್ರಮುದಿಸದು,
ವಾಯುರೂಪವಾದ ಸ್ಪರ್ಶನದಿಂದಲು
ಆಕಾಶರೂಪವಾದ ಶಬ್ದದಿಂದಲು
ಮುಗುಲು ಹರಿದು ಜಾಗ್ರಮುದಿಸುತ್ತಿರ್ಪುದು.
ಶರೀರದಲ್ಲಿ ಸಾಕಾರರೂಪವಾದ ಇಷ್ಟಲಿಂಗ,
ಕಾರಣದಲ್ಲಿ ವಿವೇಕರೂಪವಾದ ಭಾವಲಿಂಗ,
ಸೂಕ್ಷ್ಮದಲ್ಲಿ ಮಂತ್ರರೂಪವಾದ ಪ್ರಾಣಲಿಂಗ,
ಭಜಿಸಿದಲ್ಲಿ, ಆ ಸೂಕ್ಷ್ಮದಲ್ಲಿರ್ಪ ತಮಸ್ಸೆಂತಳಿವುದೆಂದಡೆ :
ವಿಷಯರೂಪವಾದ ತಮಸ್ಸು
ಮಂತ್ರದಿಂದೆಂತಳಿವುದೊ ಅಂತಳಿದಲ್ಲಿ
ಸಾಕಾರ ನಿರಾಕಾರಂಗಳೊಂದೆಯಾಗಿ,
ಜನನ ಮರಣ ಭ್ರಾಂತಿಯಡಗಿ
ಇದ್ದಂತಿರ್ಪ ಸ್ಥಿತಿಯೆ ಮಹಾಲಿಂಗ.
ಅಂತಪ್ಪ ಮಹಾಲಿಂಗವೆ ನಾನಾಗಿರ್ಪ
ನಿಜಾನಂದ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೧೩ ॥

೧೧೪

ಜಾಗ್ರ ಶರೀರದಲ್ಲಿ ರಜಸ್ಸು
ಭಾವಸ್ವಪ್ನದಲ್ಲಿ ತಮಸ್ಸು
ಸೂಕ್ಷ್ಮ ಸುಷುಪ್ತಿಯಲ್ಲಿ ಸತ್ವಹೊಂದಿ
ತ್ರಿಮೂರ್ತಿ ಭೇದದೊಲಿರ್ಪುದು.
ಆ ಸುಷುಪ್ತಿಯ ಮಹಿಮೆಯಿಂ
ಆ ಸಾಕಾರ ನಿರಾಕಾರವಲ್ಲದೆ, ದ್ವೈತಾದ್ವೈತವಲ್ಲದೆ,
ಭೂತ ಭವಿಷ್ಯತ್ತಲ್ಲದೆ,
ಜನನ ಮರಣಮಲ್ಲದೆ ವಿಶಿಷ್ಟರೂಪವಾಗಿ,
ಕೇವಲ ಪ್ರತ್ಯಕ್ಷವಾಗಿ, ಅಖಂಡಮಯವಾಗಿರ್ಪ ವಸ್ತುವ
ತತ್ಪ್ರಕೃತಿರೂಪವಾದ ತಮಸ್ಸು ಮಧ್ಯ ಜನಿಸಿ,
ಭಿನ್ನಿಸಿದಲ್ಲಿ, ದ್ವೈತಾದ್ವೈತ ಸಾಕಾರ ನಿರಾಕಾರಂಗಳೆಂಬ
ಭೇದಂಗಳುದಿಸಿ, ತನ್ಮಧ್ಯ ಆ ಬೀಜ ಮಧ್ಯದಲ್ಲಿ
ಪಲ್ಲವಿಸಿದ ವೃಕ್ಷದಂತೆ, ತಮಸ್ಸು ಪಲ್ಲವಿಸಿದಲ್ಲಿ
ಆ ತಾಮಸಾಗ್ರದಲ್ಲಿ ಅಖಂಡರೂಪವಾಗಿ
ಅನಂತ ರೂಪಿನಲ್ಲಿ ಫಲಮಧ್ಯದಲ್ಲಿ ಕ್ರೀಡಿಸಿ

ಆ ವೃಕ್ಷವಳಿದು ನಿಂತ ಬೀಜವೇ ಅನ್ನ,
ಅನ್ನವೇ ಪ್ರಾಣರೂಪವಾಗಿ
'ಅನ್ನಂ ಚ ಬ್ರಹ್ಮ ಅಹಂ ಚ ಬ್ರಹ್ಮ'ವೆಂಬ ಶ್ರುತಿವಚನದಿಂ
ಅಖಂಡಮಯವಾದ ವಿಶಿಷ್ಟ ಶಿವನೆ ಮಹಾಲಿಂಗ.
ಅಂತಪ್ಪ ಲಿಂಗೈಕ್ಯ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. || ೧೪ ||

೧೧೨೫

ಆತ್ಮಾಂಶವೆ ಚೈತನ್ಯ
ಅಂತಃಕರಣಾದಿ ಸಕಲ ಲೋಕದ್ವಿಕಾರ.
ಆ ಚೈತನ್ಯದಿಂ ಶಕ್ತಿ ಪ್ರಕಟನವಾದಂತೆ
ಆತ್ಮನಿಂದಾಕಾಶ ಪ್ರಕಟನಮಪ್ಪುದು.
ಆ ಶಕ್ತಿಯಿಂ ಕರ್ಮಮುತ್ಪನ್ನಮಪ್ಪಂತೆ
ಆಕಾಶದಿಂ ವಾಯುವುತ್ಪನ್ನಮಪ್ಪುದು.
ಆ ಕರ್ಮದಿಂ ಧರ್ಮ ಜನಿಸುವಂತೆ,
ವಾಯುವಿಂದಗ್ನಿ ಜನಿಸುತ್ತಿಪ್ಪುದು.
ಆ ಧರ್ಮದಿಂ ಫಲಮುದಿಸುವಂತೆ
ಅಗ್ನಿಯಿಂ ಜಲಮುದಿಸುತ್ತಿಪ್ಪುದು.
ಆ ಫಲದಿಂದನುಭವ ಪ್ರತ್ಯಕ್ಷಮಾದಂತೆ
ಜಲದಿಂ ಪೃಥ್ವಿ ಪ್ರತ್ಯಕ್ಷಮಪ್ಪುದು.
ಆ ಅನುಭವದಲ್ಲಿ ಸುಖದುಃಖಂಗಳುದ್ಭವಿಸುವಂತೆ
ಪೃಥ್ವಿಯಲ್ಲಿ ಸ್ಥಾವರ ಜಂಗಮಂಗಳುದ್ಭವಿಸುವವು.
ಆ ಸುಖದುಃಖಂಗಳಲ್ಲಿ ಸ್ವರ್ಗ ನರಕಂಗಳುತ್ಪನ್ನಮಪ್ಪಂತೆ
ಆ ಸ್ಥಾವರ ಜಂಗಮಂಗಳಲ್ಲಿ
ಆಹಾರ ಮೈಥುನಂಗಳುತ್ಪನ್ನಮಪ್ಪವು.
ಅವೇ ಆವಾಹನ ವಿಸರ್ಜನ.
ಅಂತಪ್ಪ ಆವಾಹನ ವಿಸರ್ಜನೆಯೇ
ಹಂಸರೂಪವಾದ ಚೈತನ್ಯ.
ಅಂತಪ್ಪ ಚೈತನ್ಯರೂಪವಾದ ಶಿವನು
ಸ್ವಶಕ್ತಿಪ್ರಕಟನ ನಿಮಿತ್ಯ
ಆಹಾರಮುಖಕ್ಕೆ ಪ್ರಪಂಚವ ಸಂವಹರಿಸುತ್ತಿರ್ಪಂತೆ,
ಆಕಾಶ ಪ್ರಕಟನ ನಿಮಿತ್ಯ
ಆತ್ಮನು ಪ್ರಪಂಚವ ಸಂಹರಿಸುತ್ತಿರ್ಪನು.
ಜೀವನು ಸ್ವಧರ್ಮವನಾಶ್ರಯಿಸಿ ತೊಳಲುತ್ತಿರ್ಪಂತೆ

ಆತ್ಮನು ತೇಜೋಧರ್ಮವನಾಶ್ರಯಿಸಿ
ವ್ಯವಹರಿಸುತ್ತಿರ್ಪನು.
ಆ ಧರ್ಮಪದ ವಿಕ್ಷೇಪಣೆಯೇ ಕಾಲ,
ಆ ಕಾಲವೇ ಸಂಹಾರ ಹೇತು.
ಅಂತಪ್ಪ ಧರ್ಮವೇ ಬಸವ ನಾಮಾಂಕಿತಮುಳ್ಳ
ಮಹಾಗುರು.
ಅಂತಪ್ಪ ಮಹಾಗುರುವಿನ ಪಾದವಿಡಿದು
ಸೃಷ್ಟಿ ರಜೋರೂಪಮಾಗಿರ್ಪ
ಲಲಾಟಬೀಜಾಕ್ಷರಂಗಳನೊರಸಿ ಕೆಡಿಸಿ
ಆ ಪಾದವ ನನ್ನ ಹೃದಯದಲ್ಲಿ ಬರೆದು ಪಟಲಮಾಡಿದಲ್ಲಿ
ಆ ಕಾಲವಳಿದು ಕಾಲಾತೀತನಪ್ಪುದೆ ನಿಜ.
ಅಂತಪ್ಪ ಸುಖವನೆನಗಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ. ॥ ೧೫ ॥

೧೧೨೬

'ಶತಮಾನಃ ಪುರುಷಃ ಶತೇಂದ್ರಿಯ' ಎಂಬ
ಶ್ರುತಿವಚನದಿಂ ನೂರು ಸಂಖ್ಯೆಯುಳ್ಳ
ಆ ವಿರಾಟ್ಪುರುಷನು
ಅನುಭವಕಾರಣಮಾದ ವಯೋರೂಪವಾದ
ಷೋಡಶ ಸಂಖ್ಯೆಯೇ ತಾನಾಗಿ
ಉಳಿದ ಚೌರಾಸೀತಿ ಸಂಖ್ಯೆಯೇ ಪಂಚಭೂತಂಗಳೆಂಬ
ಪಂಚಶೂನ್ಯಂಗಳೊಳಗೆ ಕೂಡಿ
ಚೌರಾಶೀತಿ ಲಕ್ಷ ಭೇದಂಗಳಾದ
ಜೀವಜಾಲಂಗಳಾಗಿ ಉಳಿದಂಶವೆ ಪರಮನಾಗಿ,
ಆ ಜೀವಜಾಲಂಗಳಿಗೆ ಆ ಪರಮವೆ ಕಾರಣಮಾಗಿರ್ಪುದು.
ಪಂಚಶೂನ್ಯಂಗಳಾದ್ಯಂತಂಗಳಲ್ಲಿರ್ಪ
ಚೌರಾಶೀತಿ ಲೆಕ್ಕದಲ್ಲಿ ಎಂಬತ್ತುಲಕ್ಷ ಜೀವಂಗಳು
ಆದಿಯಾಗಿರ್ಪಲ್ಲಿ
ಚಾತುರ್ಲಕ್ಷ ಭೇದವಡೆದ ಮನುಷ್ಯ ಜೀವಂಗಳ
ಕಡೆಯಾಗಿಪ್ಪವೆಂತೆಂದರೆ :
ಸಕಲ ಜನ್ಮಂಗಳಿಗೂ ಮನುಷ್ಯನೇ ಕಡೆ.
ಈ ಮನುಷ್ಯಜನ್ಮದಲ್ಲಿ ಮಾಡಿದ ಕರ್ಮದಿಂ
ಸಕಲ ಜನ್ಮಂಗಳನೆತ್ತಿ ಅನುಭವಿಸುತ್ತಿರ್ಪುದರಿಂ
ಅದೇ ಆದಿ ಇದೇ ಅಂತ್ಯಮಾಯಿತ್ತು

ಮಧ್ಯೆ ಇರ್ಪ ಪಂಚಭೂತಂಗಳೆಂಬ
ಪಂಚ ಶೂನ್ಯಂಗಳಳಿಯಲು
ಎಂಬತ್ತುನಾಲ್ಕು ಹದಿನಾರರೊಳಗೆ ಕೂಡಿ ನೂರಾಯಿತ್ತು.
ಸೃಷ್ಟಿ ಸ್ಥಿತಿಗಳೆಂಬ ಮಿಥ್ಯ ಶೂನ್ಯಂಗಳೊಳಗೆ ಕೂಡಿದ
ಸಂಹಾರವೊಂದೆ ನಿಜವಾಯಿತ್ತು.
ಆ ನೂರ ಹತ್ತರಿಂದ ಕಳೆಯೆ ನಿಂತುದು ಹತ್ತಾಯಿತ್ತು
ಹತ್ತ ಒಂದರಿಂದ ಕಳೆಯೆ ನಿಂತವಸ್ತು ಒಂದೆಯಾಯಿತ್ತು.
ಅದ ಕಳೆವುದಕ್ಕೆ ಒಂದು ವಸ್ತು ಇಲ್ಲದಿರ್ಪುದರಿಂ
ಕೂಡತಕ್ಕವಸ್ತುವಲ್ಲದೆ ಕಳೆಯತಕ್ಕ ವಸ್ತುವಲ್ಲವಾಯಿತ್ತು.
ಕೂಡುವುದೆಲ್ಲ ಮಿಥ್ಯವಾಗಿ
ಕಳೆವುದಕ್ಕೆ ಬೇರೊಂದು ವಸ್ತುವಿಲ್ಲದಿರ್ಪುದರಿಂ
ತಾನೊಂದೆ ನಿಜವಾಯಿತ್ತು.
ಆ ನಿಜವೊಂದೆ ಉಂಟಾದುದು
ಮಿಕ್ಕುದಿಲ್ಲವಾದುದರಿಂ
ಆ ತಥ್ಯಮಿಥ್ಯಗಳೆರಡೂ ನಿತ್ಯವಾಯಿತ್ತು.
ಆ ಸತ್ಯದಿಂ ಕಾಣಬರುತ್ತಿರ್ಪುದೆ ಮಿಥ್ಯ.
ಆ ಮಿಥ್ಯದಿಂ ಪ್ರಕಾಶಿಸುತ್ತಿರ್ಪುದೆ ಸತ್ಯ.
ಒಂದರ ಗುಣವನೊಂದು ಪ್ರಕಾಶವಮಾಡುತ್ತಿರ್ಪುದರಿಂ
ಅವಕ್ಕವೆ ಗುಣಂಗಳಾಯಿತ್ತು.
ಅಂತಪ್ಪ ಸತ್ಯವೆ ನಿಜ.
ನಿಜದಲ್ಲಿ ಪ್ರಕಾಶಮಾಗಿರ್ಪುದೆ ಜ್ಞಾನ.
ಸತ್ಯ ಜ್ಞಾನಸಂಗದಲ್ಲಿ ಪರಿಪೂರ್ಣಮಾಗಿ
ಪ್ರಕಾಶಿಸುತ್ತಿರ್ಪುದೆ ಆನಂದ.
ಅಂತಪ್ಪ ಸಚ್ಚಿದಾನಂದಮಯನಾಗಿ
ಮೂರು ಮೂಲೆಯುಳ್ಳ ಒಂದು ವಸ್ತು ತಾನಾಗಿರ್ಪ ಬ್ರಹ್ಮ
ತನ್ನ ಮಹಿಮಾಪ್ರಕಟನ ನಿಮಿತ್ಯ
ತನ್ನಲ್ಲಿಯೇ ಭಿನ್ನಮಾಗಿರ್ಪ.
ನಿಜ ಛಾಯಾಮಿಥ್ಯ ಮಾಯಾ ಸಂಗಮಾದಲ್ಲಿ
ಸತ್ಯ ಮಿಥ್ಯದೊಳಗೆ ಕೂಡಿ
ಉಂಟಾಗಿಯಿಲ್ಲಮಾಗುತ್ತಿರ್ಪ ಶರೀರವಾಯಿತ್ತು.
ಜ್ಞಾನ ಮಿಥ್ಯದೊಳಗೆ ಕೂಡಲು
ಜ್ಞಾನ ಜ್ಞಾನರೂಪವಮಾದ ಜೀವವಾಯಿತ್ತು.
ಆನಂದ ಮಿಥ್ಯದೊಳಗೆ ಕೂಡಲು
ಸುಖದುಃಖಕಾರಣಮಾದ ಮನಸ್ಸಾಯಿತ್ತು.

ಇಂತಪ್ಪ ಮಿಥ್ಯದೊಳಗೆ ಕೂಡಿ
ಆ ಬ್ರಹ್ಮವೇ ಚಿದ್ರೂಪವಮಾದನಂತಗಳಾಗಿ ಹೆಚ್ಚಿ
ಆ ಮಿಥ್ಯಾಕ್ರೀಡೆಗಳನನುಭವಿಸುತ್ತಿರ್ಪ
ಮಿಥ್ಯಾಭವವನ್ನು ಉಪಸಂಹರಿಸಿ ಕಳದು
ಆ ಮಿಥ್ಯವ ಮಿಥ್ಯವ ಮಾಡುವುದಕ್ಕೆ
ತಾನೆ ಕಾರಣವಾಗಿ ನಿಂತ
ಅಖಂಡ ಸತ್ಯಜ್ಞಾನಾನಂದ ಪದಾರ್ಥ
ತಾನೊಂದೆಯಾಗಿರ್ಪ ಮಹಾಲಿಂಗವೇ ಇಷ್ಟವಮಾದಲ್ಲಿ
ಶರೀರ ಮಿಥ್ಯ ಕಳೆದು
ಲಿಂಗದೊಳಗೆ ಬೆರೆದ ತನುವೆ ಸತ್ತಾಯಿತ್ತು.
ಆ ಲಿಂಗವೆ ಪ್ರಾಣಲಿಂಗಮಾದಲ್ಲಿ
ಆ ಪ್ರಾಣದ ಮಿಥ್ಯವಳಿದು
ಆ ಲಿಂಗದೊಳಗೆ ಲೀನವಮಾದ
ಜ್ಞಾನವೇ ಚಿತ್ತಾಯಿತ್ತು.
ಎರಡರ ಸಂಗದಿಂದುದಿಸಿದ
ಆನಂದ ಮಹಿಮೆಯೆ ಭಾವಲಿಂಗವಮಾದಲ್ಲಿ
ಮನಸ್ಸಿನ ಮಿಥ್ಯವಳಿದು
ಆ ಭಾವಲಿಂಗದಲ್ಲಿ ಬೆರೆದ ಮನವೆ
ಆನಂದರೂಪಮಾಯಿತ್ತು.
ಇಂತಪ್ಪ ಸಚ್ಚಿದಾನಂದ ಮೂರ್ತಿಯಾದ
ಗುರುರೂಪಮಾದ ಮಹಾಲಿಂಗಕ್ಕೆ
ಅಷ್ಟೋತ್ತರ ಶತವಚನಂಗಳೆಂಬ
ಸುವಾಸನೆವಿಡಿದಷ್ಟೋತ್ತರ ಶತದಳಂಗಳಿಂ
ಸುವಾಕ್ಯಂಗಳೆಂಬ ಕೇಸರಂಗಳಂ
ಪಂಚಾಕ್ಷರಿ ಬೀಜಂಗಳಿಂ ಪ್ರಕಾಶಿಸುತ್ತಿಪ್ಪ
ಪ್ರಣವ ಕರ್ಣಿಕೆಯಿಂ ವಿರಾಜಿಸುತ್ತಿರ್ಪ
ಚಿನ್ನದ ಪುಂಡರೀಕ ಭಕ್ತಿರಸ ಪೂರಿತಮಾಗಿರ್ಪ
ಹೃದಯ ಸರಸಿಯೊಳು ವಿವೇಕ ಬಿಸದೊಳಗೆ ಕೂಡಿ ಬೆಳದು
ಮಹಾಗುರೂಪದೇಶವೆಂಬ ಭಾಸ್ಕರೋದಯದಿಂ
ಜಿಹ್ವಾಮುಖದಲ್ಲಿ ವಿಕಸನಮಾಗಿ
ಜಗದ್ಭರಿತಮಾದ ದಿವ್ಯವಾಸನೆಯಿಂ
ಮೀಸಲಳಿಯದ ಪರಮ ಪವಿತ್ರಮಾಗಿರ್ಪ
ದಿವ್ಯ ಕಮಲಮಂ ಮಹಾಲಿಂಗಕರ್ಪಿಸಿ
ತತ್ಕರ್ಣಿಕಾಮಧ್ಯದಲ್ಲಿ ಭಾವಹಸ್ತದಲ್ಲಿ

ತಲ್ಲಿಂಗಮಂ ತಂದು ಪ್ರತಿಷ್ಠೆಯಂ ಮಾಡಿ
ತದ್ವಚನಸಾಮೃತ ರಸದಿಂದಭಿಷೇಕಮಂ ಮಾಡಿ
ತತ್ ಜ್ಞಾನಾಗ್ನಿಯಿಂ ಮಿಥ್ಯಾಗುಣಂಗಳಂ ದಹಿಸಿ
ಆ ಸತ್ವಸ್ವರೂಪಮಾಗಿರ್ಪ ಭಸ್ಮವಂ ಧರಿಸಿ
ತನ್ಮಹಿಮಾವರ್ಣನೀಯಮಾಗಿರ್ಪಾಭರಣಂಗಳಿಂದಲಂಕರಿಸಿ
ಸತ್ಕೀರ್ತಿಯೆಂಬ ವಸ್ತ್ರಮಂ ಸಮರ್ಪಿಸಿ
ವೈರಾಗ್ಯ ಧರ್ಮವುಳ್ಳ ಹೃದಯವೆಂಬ ಶಿಲೆಯೊಳಗೆ
ವಚನಮೆಂಬ ಸುಗಂಧದ ಕೊರಡಂ ಭಕ್ತಿರಸಯುಕ್ತಮಾಗಿ ತೆಯ್ದು
ಅಲ್ಲಿ ಲಭ್ಯಮಾದ ಪರಮ ಶಾಂತಿಯೆಂಬ ಗಂಧಮಂ ಸಮರ್ಪಿಸಿ
ತದ್ಬೀಜ ರೂಪಮಾಗಿರ್ಪ ತತ್ವವೆಂಬಕ್ಷತೆಯನಿಟ್ಟು
ಮನವೆಂಬ ಕಾಷ್ಠದಲ್ಲಿ ಹೊತ್ತಿರ್ಪ ಜ್ಞಾನಾಗ್ನಿಯಲ್ಲಿ
ಪಲವಿಧ ಗುಣಂಗಳೆಂಬ ದಶಾಂಗಧೂಪಮಂ ಬೆಳಗಿ
ಊರ್ಧ್ವಮುಖಮಾಗಿರ್ಪ ತದ್ವಾಸನಾ ಧೂಪ ಧೂಮಮಂ ಸಮರ್ಪಿಸಿ
ತದ್ವಚನ ಮುಖದಲ್ಲಿ ಸಕಲವು ಅಖಂಡಮಯಮಾಗಿ
ಪ್ರಕಾಶಿಸುತ್ತಿರ್ಪ ಚಿಜ್ಯೋತಿ ನೀಲಾಂಜನಮಂ
ಮಂಗಳಮಯಮಾಗಿ ಬೆಳಗಿ,
ವದನವೆಂಬ ಘಂಟೆಯಲ್ಲಿ ನಾಲಗೆಯೆಂಬ ಕುಡುಹನು
ಮೂಲಾಧಾರಮಾರುತನ ಮೊದಲನು
ಭಾವದಲ್ಲಿ ಪಿಡಿದು ನುಡಿಸಿ
ತನ್ಮುಖದಲ್ಲಿ ಪ್ರಕಾಶಮಾನಮಾಗಿ ಜಗದ್ಭರಿತಮಾದ
ವಚನಾಘೋಷಂಗಳೆಂಬ ಘಂಟಾನಾದಮಂ ಸಮರ್ಪಿಸಿ
ವಚನಾರ್ಥಂಗಳೆಂಬ ಪಲವಿಧ ಶುಚಿರುಚಿಗಳುಳ್ಳ ಪದಾರ್ಥಂಗಳಿಂ
ತನ್ಮಧ್ಯದಲ್ಲಿ ಪ್ರಕಾಶಿಸುತ್ತಿರ್ಪ ಪರಮಾನಂದಾಮೃತವನು
ತೃಪ್ತಿ ಪಾತ್ರೆಯಲ್ಲಿಟ್ಟು ನೈವೇದ್ಯಮಂ ಸಮರ್ಪಿಸಿ
ನಿರ್ಮಳ ಭಕ್ತಿ ರಸವೆಂಬ ಶುದ್ಧೋದಕಮಂ ನಿವೇದಿಸಿ
ತನುಮನಃಪ್ರಾಣಂಗಳೆಂಬ ತಾಂಬೂಲಮಂ
ಸತ್ಯ ಜ್ಞಾನಾನಂದ ರೂಪಮಾದ ಮಹಾಶಿವಲಿಂಗಮುಖದಲ್ಲಿ
ಸಮರಸಾನುರಾಗದಿಂ ಪ್ರಕಾಶಮಾಗಿರ್ಪ
ದಿವ್ಯತಾಂಬೂಲಮಂ ಸಮರ್ಪಿಸಿ
ಲಿಂಗದೊಳಗುಪಭೋಗಿಸುತ್ತಿರ್ಪ
ಅಷ್ಟ ಭೋಗಂಗಳೆ ಅಷ್ಟ ವಿಧಾರ್ಚನಂಗಳಾಗಿ
ಆ ಲಿಂಗದೊಳಗೆ ಬೆರದು ಭೇದದೋರದಿರ್ಪ
ಷೋಡಶ ಕಳೆಗಳೆ ಷೋಡಶೋಪಚಾರವಾಗಿ
ತಲ್ಲಿಂಗ ಸಂಗವೆ ರತಿಯಾಗಿ

ಎರಡೂ ಏಕಮಾಗಿರ್ಪ ನಿರ್ವಾಣ ಸುಖಮೆ ಪರಮಸುಖಮಾಗಿ
ನೀನು ನಾನೆಂಬ ಭೇದವಳಿದು
ಎರಡೂ ಒಂದಾಗಿ ಅಭೇದಾನಂದದಲ್ಲಿ
ಬೇರೆವಾಂಛೆ ಇಲ್ಲಮಾಗಿ, ನೀನಲ್ಲದೆ ನಾನೇನೂವಲ್ಲೆ
ಇವ ಬರದೋದಿ ಕೇಳಿ ಅರ್ಥವಂ ಮಾಡಿ ಆನಂದಿಸುವ
ತದೀಯ ಭಕ್ತರ ವಾಂಛಿತವಂ ಸಲಿಸಿ
ಮಿಥ್ಯಾಭ್ರಮೆಯಂ ನಿವೃತ್ತಿಯಂ ಮಾಡಿ
ಪುನರಾವೃತ್ತಿರಹಿತ ಶಾಶ್ವತ ದಿವ್ಯಮಂಗಳಮಯ
ನಿಜಾನಂದ ಸುಖವನಿತ್ತು ಸಲಹಾ
ಮಹಾಘನ ದೊಡ್ಡದೇಶಿಕಾರ್ಯ ಪ್ರಭುವೆ ॥ ೧೬ ॥

****

೧೧೧೮

ವಾಸನೆಯಿಲ್ಲದೆ ಬೇರೆ ವಿ
ಕಾಶಿಸುತ್ತೆಲ್ಲರೊಳಗಿಪ್ಪ ಗಂಧಗ್ರಹಣೋ
ಲ್ಲಾಸಸುಮಮಧ್ಯ ಚಿನ್ಮಹಿ
ಮಾಶಿವನೀ ವಚನಕೀವುದತಿಮಂಗಳಮಂ ॥

ಇತಿ ಶ್ರೀ ಭಗವತ್ಪಾಣಿನಿ ವ್ಯಾಸ ಗೌತಮ ಪ್ರಣೀತ ಪದವಾಕ್ಯ ಪ್ರಮಾಣ ಪಾರಾವಾರ ಪಾರಂಗತ ಮಹೇಶ್ವರೇಶಾನುಮುಖ ಪ್ರಾದುರ್ಭೂತ ಸ್ಥೂಲಗಣೇಶ್ವರ ಸ್ವರೂಪ ಮಹಾಘನ ದೊಡ್ಡದೇಶಿಕಾರ್ಯ ಗುರು ಕರಕಮಲ ಸಂಜನಿತ ಮಾಸ್ತಿಸತ್ಕುಲದೀಪ ವೀರಶೈವಮತ ಪ್ರವರ್ತಕಿಮ್ಮಡಿ ಕಾರ್ಯ ಭೂವರ ಭಾರ್ಯ ಕುಪ್ಪಮಾಂಬಾ ಗರ್ಭಸಂಭೂತ ವೀರಶೈವ ಮತಸ್ಥಾಪನಾಚಾರ್ಯವರ್ಯ ಮುಮ್ಮಡಿ ಕರಿಯಕ್ಷೀತೀಂದ್ರ ವಿರಚಿತೇ ರೇವಣ ಸಿದ್ಧೇಶ್ವರ ಮರುಳಸಿದ್ಧೇಶ್ವರೈಕೋರಾಮೇಶ್ವರ ಪಂಡಿತಾರಾಧ್ಯಲ್ಲಮಪ್ರಭು ಚೆನ್ನ ಬಸವೇಶ್ವರಾದಿ ಮಹಾಪುರಾತನ ರಚಿತ ನಿಖಿಲನಿಗಮಾಗಮ ತತ್ವಸಿದ್ಧಾಂತ ರೂಪ ವೀರಶೈವಮತೋದ್ಧಾರಕ ಸಕಲಪುರಾತನ ಗ್ರಂಥಸಾರಭೂತ ಸಿದ್ಧಾಂತ ತತ್ವನಿರ್ಣಯ ವೇದಸಂಜೀವಿನಿಗ್ರಂಥೇ ಏಕಾದಶೋಧ್ಯಾಯಃ.

ಏವಂ ಶ್ರೀ ವೀರಶೈವ ಪ್ರತಿಪಾದಕಂ ಮಹಾಶಾಸ್ತ್ರ ವೇದಸಂಜೀವನಿ ಗ್ರಂಥ ಪರಿಸಮಾಪ್ತಿನ್. ಕುರ್ವನ್ ಮುಮ್ಮಡಿ ಕರಿಯಕ್ಷಿತೀಂದ್ರ ಶ್ರೀಮನ್ಮಂಗಳಮಯ ಜ್ಞಾನರೂಪೇಣ ಪಂಚಾಕ್ಷರಮಂತ್ರಮಯ ಶಿವನ್ನಮಸ್ಕರೋತಿ.

■■

# ಅನುಬಂಧ

# ವಚನಗಳ ಅಕಾರಾದಿ

## ಬಾಲಸಂಗಯ್ಯನ ಸಕಲಾಗಮ ಶಿಖಾಮಣಿ


ಅ

ಅಂಗಾಲ ಕಣ್ಣವರು – ೫೮೪
ಅಂಥ ಬ್ರಹ್ಮಾಂಡವ – ೪
ಅಂಥ ಬ್ರಹ್ಮಾಂಡವ – ೫
ಅಂಥ ಬ್ರಹ್ಮಾಂಡವ – ೬
ಅಂಥ ಬ್ರಹ್ಮಾಂಡವ – ೭
ಅಂಥ ಬ್ರಹ್ಮಾಂಡವ – ೮
ಅಂಥ ಬ್ರಹ್ಮಾಂಡವ – ೯
ಅಂಥ ಬ್ರಹ್ಮಾಂಡವ – ೧೦
ಅಂಥ ಬ್ರಹ್ಮಾಂಡವ – ೧೧
ಅಂಥ ಬ್ರಹ್ಮಾಂಡವ – ೧೨
ಅಂಥ ಬ್ರಹ್ಮಾಂಡವ – ೧೩
ಅಂಥ ಬ್ರಹ್ಮಾಂಡವ – ೧೪
ಅಂಥ ಬ್ರಹ್ಮಾಂಡವ – ೧೫
ಅಂಥ ಬ್ರಹ್ಮಾಂಡವ – ೧೬
ಅಂಥ ಬ್ರಹ್ಮಾಂಡವ – ೧೭
ಅಂಥ ಬ್ರಹ್ಮಾಂಡವ – ೧೮
ಅಂಥ ಬ್ರಹ್ಮಾಂಡವ – ೧೯
ಅಂಥ ಬ್ರಹ್ಮಾಂಡವ – ೨೦
ಅಂಥ ಬ್ರಹ್ಮಾಂಡವ – ೨೧
ಅಂಥ ಬ್ರಹ್ಮಾಂಡವ – ೨೨
ಅಂಥ ಬ್ರಹ್ಮಾಂಡವ – ೨೩
ಅಂಥ ಬ್ರಹ್ಮಾಂಡವ – ೨೪
ಅಂಥ ಬ್ರಹ್ಮಾಂಡವ – ೨೫
ಅಂಥ ಬ್ರಹ್ಮಾಂಡವ – ೨೬
ಅಂಥ ಬ್ರಹ್ಮಾಂಡವ – ೨೭
ಅಂಥ ಬ್ರಹ್ಮಾಂಡವ – ೨೮
ಅಂಥ ಬ್ರಹ್ಮಾಂಡವ – ೨೯
ಅಂಥ ಬ್ರಹ್ಮಾಂಡವ – ೩೦
ಅಂಥ ಬ್ರಹ್ಮಾಂಡವ – ೩೧
ಅಂಥ ಬ್ರಹ್ಮಾಂಡವ – ೩೨
ಅಂಥ ಬ್ರಹ್ಮಾಂಡವ – ೩೩
ಅಂಥ ಬ್ರಹ್ಮಾಂಡವ – ೩೪
ಅಂಥ ಬ್ರಹ್ಮಾಂಡವ – ೩೫
ಅಂಥ ಬ್ರಹ್ಮಾಂಡವ – ೩೬
ಅಂಥ ಬ್ರಹ್ಮಾಂಡವ – ೩೭
ಅಂಥ ಬ್ರಹ್ಮಾಂಡವ – ೩೮
ಅಂಥ ಬ್ರಹ್ಮಾಂಡವ – ೩೯
ಅಂಥ ಬ್ರಹ್ಮಾಂಡವ – ೪೦
ಅಂಥ ಬ್ರಹ್ಮಾಂಡವ – ೪೧
ಅಂಥ ಬ್ರಹ್ಮಾಂಡವ – ೪೨
ಅಂಥ ಬ್ರಹ್ಮಾಂಡವ – ೪೩
ಅಂಥ ಬ್ರಹ್ಮಾಂಡವ – ೪೪
ಅಂಥ ಬ್ರಹ್ಮಾಂಡವ – ೪೫
ಅಂಥ ಬ್ರಹ್ಮಾಂಡವ – ೪೬
ಅಂಥ ಬ್ರಹ್ಮಾಂಡವ – ೪೭
ಅಂಥ ಬ್ರಹ್ಮಾಂಡವ – ೪೮
ಅಂಥ ಬ್ರಹ್ಮಾಂಡವ – ೪೯
ಅಂಥ ಬ್ರಹ್ಮಾಂಡವ – ೫೦
ಅಂಥ ಬ್ರಹ್ಮಾಂಡವ – ೫೧
ಅಂಥ ಬ್ರಹ್ಮಾಂಡವ – ೫೨
ಅಂಥ ಬ್ರಹ್ಮಾಂಡವ – ೫೩
ಅಂಥ ಬ್ರಹ್ಮಾಂಡವ – ೫೪
ಅಂಥ ಬ್ರಹ್ಮಾಂಡವ – ೫೫
ಅಂಥ ಬ್ರಹ್ಮಾಂಡವ – ೫೬
ಅಂಥ ಬ್ರಹ್ಮಾಂಡವ – ೫೭
ಅಂಥ ಬ್ರಹ್ಮಾಂಡವ – ೫೮
ಅಂಥ ಬ್ರಹ್ಮಾಂಡವ – ೫೯

ಅಂಥ ಬ್ರಹ್ಮಾಂಡವ – ೬೦
ಅಂಥ ಬ್ರಹ್ಮಾಂಡವ – ೬೧
ಅಂಥ ಬ್ರಹ್ಮಾಂಡವ – ೬೨
ಅಂಥ ಬ್ರಹ್ಮಾಂಡವ – ೬೩
ಅಂಥ ಬ್ರಹ್ಮಾಂಡವ – ೬೪
ಅಂಥ ಬ್ರಹ್ಮಾಂಡವ – ೬೫
ಅಂಥ ಬ್ರಹ್ಮಾಂಡವ – ೬೬
ಅಂಥ ಬ್ರಹ್ಮಾಂಡವ – ೬೭
ಅಂಥ ಬ್ರಹ್ಮಾಂಡವ – ೬೮
ಅಂಥ ಬ್ರಹ್ಮಾಂಡವ – ೬೯
ಅಂಥ ಬ್ರಹ್ಮಾಂಡವ – ೭೦
ಅಂಥ ಬ್ರಹ್ಮಾಂಡವ – ೭೧
ಅಂಥ ಬ್ರಹ್ಮಾಂಡವ – ೭೨
ಅಂಥ ಬ್ರಹ್ಮಾಂಡವ – ೭೩
ಅಂಥ ಬ್ರಹ್ಮಾಂಡವ – ೭೪
ಅಂಥ ಬ್ರಹ್ಮಾಂಡವ – ೭೫
ಅಂಥ ಬ್ರಹ್ಮಾಂಡವ – ೭೬
ಅಂಥ ಬ್ರಹ್ಮಾಂಡವ – ೭೭
ಅಂಥ ಬ್ರಹ್ಮಾಂಡವ – ೭೮
ಅಂಥ ಬ್ರಹ್ಮಾಂಡವ – ೭೯
ಅಂಥ ಬ್ರಹ್ಮಾಂಡವ – ೮೦
ಅಂಥ ಬ್ರಹ್ಮಾಂಡವ – ೮೧
ಅಂಥ ಬ್ರಹ್ಮಾಂಡವ – ೮೨
ಅಂಥ ಬ್ರಹ್ಮಾಂಡವ – ೮೩
ಅಂಥ ಬ್ರಹ್ಮಾಂಡವ – ೮೪
ಅಂಥ ಬ್ರಹ್ಮಾಂಡವ – ೮೫
ಅಂಥ ಬ್ರಹ್ಮಾಂಡವ – ೮೬
ಅಂಥ ಬ್ರಹ್ಮಾಂಡವ – ೮೭
ಅಂಥ ಬ್ರಹ್ಮಾಂಡವ – ೮೮
ಅಂಥ ಬ್ರಹ್ಮಾಂಡವ – ೮೯
ಅಂಥ ಬ್ರಹ್ಮಾಂಡವ – ೯೦
ಅಂಥ ಬ್ರಹ್ಮಾಂಡವ – ೯೧
ಅಂಥ ಬ್ರಹ್ಮಾಂಡವ – ೯೨
ಅಂಥ ಬ್ರಹ್ಮಾಂಡವ – ೯೩
ಅಂಥ ಬ್ರಹ್ಮಾಂಡವ – ೯೪
ಅಂಥ ಬ್ರಹ್ಮಾಂಡವ – ೯೫
ಅಂಥ ಬ್ರಹ್ಮಾಂಡವ – ೯೬
ಅಂಥ ಬ್ರಹ್ಮಾಂಡವ – ೯೭
ಅಂಥ ಬ್ರಹ್ಮಾಂಡವ – ೯೮
ಅಂಥ ಬ್ರಹ್ಮಾಂಡವ – ೯೯
ಅಂಥ ಬ್ರಹ್ಮಾಂಡವ – ೧೦೦
ಅಂಥ ಬ್ರಹ್ಮಾಂಡವ – ೧೦೧
ಅಂಥ ಬ್ರಹ್ಮಾಂಡವ – ೧೦೨
ಅಂಥ ಬ್ರಹ್ಮಾಂಡವ – ೧೦೩
ಅಂಥ ಬ್ರಹ್ಮಾಂಡವ – ೧೦೪
ಅಂಥ ಬ್ರಹ್ಮಾಂಡವ – ೧೦೫
ಅಂಥ ಬ್ರಹ್ಮಾಂಡವ – ೧೦೬
ಅಂಥ ಬ್ರಹ್ಮಾಂಡವ – ೧೦೭
ಅಂಥ ಬ್ರಹ್ಮಾಂಡವ – ೧೦೮
ಅಂಥ ಬ್ರಹ್ಮಾಂಡವ – ೧೦೯
ಅಂಥ ಬ್ರಹ್ಮಾಂಡವ – ೧೧೦
ಅಂಥ ಬ್ರಹ್ಮಾಂಡವ – ೧೧೧
ಅಂಥ ಬ್ರಹ್ಮಾಂಡವ – ೧೧೨
ಅಂಥ ಬ್ರಹ್ಮಾಂಡವ – ೧೧೩
ಅಂಥ ಬ್ರಹ್ಮಾಂಡವ – ೧೧೪
ಅಂಥ ಬ್ರಹ್ಮಾಂಡವ – ೧೧೫
ಅಂಥ ಬ್ರಹ್ಮಾಂಡವ – ೧೧೬
ಅಂಥ ಬ್ರಹ್ಮಾಂಡವ – ೧೧೭
ಅಂಥ ಬ್ರಹ್ಮಾಂಡವ – ೧೧೮
ಅಂಥ ಬ್ರಹ್ಮಾಂಡವ – ೧೧೯
ಅಂಥ ಬ್ರಹ್ಮಾಂಡವ – ೧೨೦
ಅಂಥ ಬ್ರಹ್ಮಾಂಡವ – ೧೨೧
ಅಂಥ ಬ್ರಹ್ಮಾಂಡವ – ೧೨೨
ಅಂಥ ಬ್ರಹ್ಮಾಂಡವ – ೧೨೩
ಅಂಥ ಬ್ರಹ್ಮಾಂಡವ – ೧೨೪
ಅಂಥ ಬ್ರಹ್ಮಾಂಡವ – ೧೨೫
ಅಂಥ ಬ್ರಹ್ಮಾಂಡವ – ೧೨೬
ಅಂಥ ಬ್ರಹ್ಮಾಂಡವ – ೧೨೭

ಅಂಥ ಬ್ರಹ್ಮಾಂಡವ – ೧೨೮
ಅಂಥ ಬ್ರಹ್ಮಾಂಡವ – ೧೨೯
ಅಂಥ ಬ್ರಹ್ಮಾಂಡವ – ೧೩೦
ಅಂಥ ಬ್ರಹ್ಮಾಂಡವ – ೧೩೧
ಅಂಥ ಬ್ರಹ್ಮಾಂಡವ – ೧೩೨
ಅಂಥ ಬ್ರಹ್ಮಾಂಡವ – ೧೩೩
ಅಂಥ ಬ್ರಹ್ಮಾಂಡವ – ೧೩೪
ಅಂಥ ಬ್ರಹ್ಮಾಂಡವ – ೧೩೫
ಅಂಥ ಬ್ರಹ್ಮಾಂಡವ – ೧೩೬
ಅಂಥ ಬ್ರಹ್ಮಾಂಡವ – ೧೩೭
ಅಂಥ ಬ್ರಹ್ಮಾಂಡವ – ೧೩೮
ಅಂಥ ಬ್ರಹ್ಮಾಂಡವ – ೧೩೯
ಅಂಥ ಬ್ರಹ್ಮಾಂಡವ – ೧೪೦
ಅಂಥ ಬ್ರಹ್ಮಾಂಡವ – ೧೪೧
ಅಂಥ ಬ್ರಹ್ಮಾಂಡವ – ೧೪೨
ಅಂಥ ಬ್ರಹ್ಮಾಂಡವ – ೧೪೩
ಅಂಥ ಬ್ರಹ್ಮಾಂಡವ – ೧೪೪
ಅಂಥ ಬ್ರಹ್ಮಾಂಡವ – ೧೪೫
ಅಂಥ ಬ್ರಹ್ಮಾಂಡವ – ೧೪೬
ಅಂಥ ಬ್ರಹ್ಮಾಂಡವ – ೧೪೭
ಅಂಥ ಬ್ರಹ್ಮಾಂಡವ – ೧೪೮
ಅಂಥ ಬ್ರಹ್ಮಾಂಡವ – ೧೪೯
ಅಂಥ ಬ್ರಹ್ಮಾಂಡವ – ೧೫೦
ಅಂಥ ಬ್ರಹ್ಮಾಂಡವ – ೧೫೧
ಅಂಥ ಬ್ರಹ್ಮಾಂಡವ – ೧೫೨
ಅಂಥ ಬ್ರಹ್ಮಾಂಡವ – ೧೫೩
ಅಂಥ ಬ್ರಹ್ಮಾಂಡವ – ೧೫೪
ಅಂಥ ಬ್ರಹ್ಮಾಂಡವ – ೧೫೫
ಅಂಥ ಬ್ರಹ್ಮಾಂಡವ – ೧೫೬
ಅಂಥ ಬ್ರಹ್ಮಾಂಡವ – ೧೫೭
ಅಂಥ ಬ್ರಹ್ಮಾಂಡವ – ೧೫೮
ಅಂಥ ಬ್ರಹ್ಮಾಂಡವ – ೧೫೯
ಅಂಥ ಬ್ರಹ್ಮಾಂಡವ – ೧೬೦
ಅಂಥ ಬ್ರಹ್ಮಾಂಡವ – ೧೬೧
ಅಂಥ ಬ್ರಹ್ಮಾಂಡರ್ವ – ೧೬೨
ಅಂಥ ಬ್ರಹ್ಮಾಂಡವ – ೧೬೩
ಅಂಥ ಬ್ರಹ್ಮಾಂಡವ – ೧೬೪
ಅಂಥ ಬ್ರಹ್ಮಾಂಡವ – ೧೬೫
ಅಂಥ ಬ್ರಹ್ಮಾಂಡವ – ೧೬೬
ಅಂಥ ಬ್ರಹ್ಮಾಂಡವ – ೧೬೭
ಅಂಥ ಬ್ರಹ್ಮಾಂಡವ – ೧೬೮
ಅಂಥ ಬ್ರಹ್ಮಾಂಡವ – ೧೬೯
ಅಂಥ ಬ್ರಹ್ಮಾಂಡವ – ೧೭೦
ಅಂಥ ಬ್ರಹ್ಮಾಂಡವ – ೧೭೧
ಅಂಥ ಬ್ರಹ್ಮಾಂಡವ – ೧೭೨
ಅಂಥ ಬ್ರಹ್ಮಾಂಡವ – ೧೭೩
ಅಂಥ ಬ್ರಹ್ಮಾಂಡವ – ೧೭೪
ಅಂಥ ಬ್ರಹ್ಮಾಂಡವ – ೧೭೫
ಅಂಥ ಬ್ರಹ್ಮಾಂಡವ – ೧೭೬
ಅಂಥ ಬ್ರಹ್ಮಾಂಡವ – ೧೭೭
ಅಂಥ ಬ್ರಹ್ಮಾಂಡವ – ೧೭೮
ಅಂಥ ಬ್ರಹ್ಮಾಂಡವ – ೧೭೯
ಅಂಥ ಬ್ರಹ್ಮಾಂಡವ – ೧೮೦
ಅಂಥ ಬ್ರಹ್ಮಾಂಡವ – ೧೮೧
ಅಂಥ ಬ್ರಹ್ಮಾಂಡವ – ೧೮೨
ಅಂಥ ಬ್ರಹ್ಮಾಂಡವ – ೧೮೩
ಅಂಥ ಬ್ರಹ್ಮಾಂಡವ – ೧೮೪
ಅಂಥ ಬ್ರಹ್ಮಾಂಡವ – ೧೮೫
ಅಂಥ ಬ್ರಹ್ಮಾಂಡವ – ೧೮೬
ಅಂಥ ಬ್ರಹ್ಮಾಂಡವ – ೧೮೭
ಅಂಥ ಬ್ರಹ್ಮಾಂಡವ – ೧೮೮
ಅಂಥ ಬ್ರಹ್ಮಾಂಡವ – ೧೮೯
ಅಂಥ ಬ್ರಹ್ಮಾಂಡವ – ೧೯೦
ಅಂಥ ಬ್ರಹ್ಮಾಂಡವ – ೧೯೧
ಅಂಥ ಬ್ರಹ್ಮಾಂಡವ – ೧೯೨
ಅಂಥ ಬ್ರಹ್ಮಾಂಡವ – ೧೯೩
ಅಂಥ ಬ್ರಹ್ಮಾಂಡವ – ೧೯೪
ಅಂಥ ಬ್ರಹ್ಮಾಂಡವ – ೧೯೫

ಅಂಥ ಬ್ರಹ್ಮಾಂಡವ – ೧೯೬
ಅಂಥ ಬ್ರಹ್ಮಾಂಡವ – ೧೯೭
ಅಂಥ ಬ್ರಹ್ಮಾಂಡವ – ೧೯೮
ಅಂಥ ಬ್ರಹ್ಮಾಂಡವ – ೧೯೯
ಅಂಥ ಬ್ರಹ್ಮಾಂಡವ – ೨೦೦
ಅಂಥ ಬ್ರಹ್ಮಾಂಡವ – ೨೦೧
ಅಂಥ ಬ್ರಹ್ಮಾಂಡವ – ೨೦೨
ಅಂಥ ಬ್ರಹ್ಮಾಂಡವ – ೨೦೩
ಅಂಥ ಬ್ರಹ್ಮಾಂಡವ – ೨೦೪
ಅಂಥ ಬ್ರಹ್ಮಾಂಡವ – ೨೦೫
ಅಂಥ ಬ್ರಹ್ಮಾಂಡವ – ೨೦೬
ಅಂಥ ಬ್ರಹ್ಮಾಂಡವ – ೨೦೭
ಅಂಥ ಬ್ರಹ್ಮಾಂಡವ – ೨೦೮
ಅಂಥ ಬ್ರಹ್ಮಾಂಡವ – ೨೦೯
ಅಂಥ ಬ್ರಹ್ಮಾಂಡವ – ೨೧೦
ಅಂಥ ಬ್ರಹ್ಮಾಂಡವ – ೨೧೧
ಅಂಥ ಬ್ರಹ್ಮಾಂಡವ – ೨೧೨
ಅಂಥ ಬ್ರಹ್ಮಾಂಡವ – ೨೧೩
ಅಂಥ ಬ್ರಹ್ಮಾಂಡವ – ೨೧೪
ಅಂಥ ಬ್ರಹ್ಮಾಂಡವ – ೨೧೫
ಅಂಥ ಬ್ರಹ್ಮಾಂಡವ – ೨೧೬
ಅಂಥ ಬ್ರಹ್ಮಾಂಡವ – ೨೧೭
ಅಂಥ ಬ್ರಹ್ಮಾಂಡವ – ೨೧೮
ಅಂಥ ಬ್ರಹ್ಮಾಂಡವ – ೨೧೯
ಅಂಥ ಬ್ರಹ್ಮಾಂಡವ – ೨೨೦
ಅಂಥ ಬ್ರಹ್ಮಾಂಡವ – ೨೨೧
ಅಂಥ ಬ್ರಹ್ಮಾಂಡವ – ೨೨೨
ಅಂಥ ಬ್ರಹ್ಮಾಂಡವ – ೨೨೩
ಅಂಥ ಬ್ರಹ್ಮಾಂಡವ – ೨೨೪
ಅಂದು ಮೊದಲಾಗಿ – ೮೮೯
ಅಂಧಕಾರವಾಗಿಹ – ೮೮೮
ಅಕಾರ ಉಕಾರ – ೭೭೭
ಅಕಾರ ಉಕಾರ – ೭೭೮
ಅಕಾರ ಉಕಾರ – ೭೮೪
ಅಕಾರ ಉಕಾರ – ೭೮೮
ಅಕಾರದಲ್ಲಿ – ೪೪೭
ಅಕಾರವೆಂಬ – ೬೯೩
ಅಕಾರವೆಂಬೆಸೆ – ೮೦೯
ಅಖಂಡಜ್ಯೋತಿ – ೫೦೨
ಅಖಂಡಜ್ಯೋತಿ – ೫೦೪
ಅಖಂಡ ಜ್ಯೋತಿರ್ಮಯ – ೫೦೬
ಅಖಂಡ ಜ್ಯೋತಿರ್ಮಯ – ೫೨೧
ಅಖಂಡ ಜ್ಯೋತಿರ್ಮಯ – ೭೧೪
ಅಖಂಡ ಮಹಾತತ್ವ – ೪೩೧
ಅಗ್ನಿ ಮಂಡಲ – ೨೭೫
ಅಗ್ನಿಯ ಅಂಗವಾದ – ೫೨೫
ಅಚಲ ತತ್ವದಲ್ಲಿ – ೪೩೨
ಅತಳಲೋಕ ಸುತಳ – ೫೮೭
ಅದಂಥಾದಿಂಥಾದೆಂದು – ೬೮೬
ಅದೆ ಇದೆಂಬ – ೮೪೮
ಅದೊಂದು ನಾಡಿ – ೨೭೨
ಅನಂತಕೋಟಿ – ೩೯೫
ಅನಂತಕೋಟಿ ಇಂದ್ರಾದಿ – ೫೯೨
ಅನಂತಕೋಟಿ ತತ್ವ – ೭೩೨
ಅನಂತಕೋಟಿ ಬ್ರಹ್ಮರ – ೩೨೭
ಅನಂತಕೋಟಿ ಸೂರ್ಯ – ೩೭೬
ಅನಂತಕೋಟಿ ಸೂರ್ಯ – ೮೫೧
ಅನಲಾಂಗವಾದ – ೫೧೫
ಅನಾದಿ ಗಣೇಶ್ವರನ – ೮೬೨
ಅನಾದಿ ಸದಾಶಿವ ತತ್ವ – ೫೭೬
ಅನಾಶ್ರಿತವೆಂಬ – ೭೨೧
ಅನಾಹತಚಕ್ರ – ೪೬೬
ಅನೇಕ ವೇದಾಗಮ – ೮೧೩
ಅಪ್ಪುವೆ ಅಂಗವಾದ – ೫೧೪
ಅಪ್ಪುವೆ ಅಂಗವಾದ – ೫೨೪
ಅಯ್ಯಾ ಆತ್ಮಯೋಗಿ – ೮೮೧
ಅಯ್ಯಾ ಎನ್ನ ಮನವ – ೮೬೮
ಅರಿದಾತ ದುಃಖ – ೭೯೪

ಅಲ್ಲಿಂದ ಮೇಲೆ — ೪೯೩
ಅಲ್ಲಿಂದ ಮೇಲೆ — ೪೯೪
ಅಲ್ಲಿಂದ ಮೇಲೆ — ೪೯೫
ಅಲ್ಲಿಂದ ಮೇಲೆ — ೪೯೬
ಅಲ್ಲಿಂದ ಮೇಲೆ — ೪೯೭
ಅಲ್ಲಿಂದ ಮೇಲೆ — ೭೦೮
ಅಲ್ಲಿಂದ ಮೇಲೆ — ೭೦೯
ಅಲ್ಲಿಂದ ಮೇಲೆ — ೭೧೦
ಅಲ್ಲಿಂದ ಮೇಲೆ — ೭೧೧
ಅಲ್ಲಿಂದ ಮೇಲೆ — ೭೧೨
ಅವನು ಅವಳು — ೬೮೫
ಅವಸ್ಥೆಗಳಿಪ್ಪತ್ತು — ೬೮೪
ಅವಾಚ್ಯತತ್ವ — ೮೯೫
ಅವಾಚ್ಯ ಪ್ರಣವದ — ೩೮೫
ಅವಾಚ್ಯ ಪ್ರಣವ — ೩೮೯
ಅಸಂಖ್ಯಾತ ಆದಿ — ೩೯೮

ಆ

ಆ ಅಖಂಡ ಗೋಳ — ೪೬೧
ಆ ಅಖಂಡ ಜ್ಯೋತಿ — ೪೦೬
ಆ ಅಖಂಡ ಜ್ಯೋತಿ — ೪೫೬
ಆ ಅಖಂಡ ಜ್ಯೋತಿ — ೪೬೯
ಆ ಅಖಂಡ ಜ್ಯೋತಿ — ೪೭೫
ಆ ಅಖಂಡ ಜ್ಯೋತಿ — ೪೭೯
ಆ ಅಖಂಡ ಜ್ಯೋತಿ — ೪೮೩
ಆ ಅಖಂಡ ಜ್ಯೋತಿ — ೪೮೫
ಆ ಅಖಂಡ ಜ್ಯೋತಿ — ೪೮೭
ಆ ಅಖಂಡ ಜ್ಯೋತಿ — ೪೮೮
ಆ ಅಖಂಡ ಜ್ಯೋತಿ — ೫೦೩
ಆ ಅಖಂಡ ಜ್ಯೋತಿ — ೫೦೯
ಆ ಅಖಂಡ ಜ್ಯೋತಿ — ೫೧೯
ಆ ಅಖಂಡ ಜ್ಯೋತಿ — ೭೧೬
ಆ ಅಖಂಡ ಮಹಾ — ೨೨೬
ಆ ಅಖಂಡ ಮಹಾ — ೨೨೭
ಆ ಅಖಂಡ ಮಹಾ — ೩೨೩
ಆ ಅಖಂಡ ಮಹಾ — ೪೦೨
ಆ ಅಖಂಡ ಮಹಾ — ೬೧೪
ಆ ಅಖಂಡ ಮಹಾ — ೬೧೫
ಆ ಅಖಂಡ ಮಹಾ — ೬೧೬
ಆ ಅಖಂಡ ಮಹಾ — ೬೧೭
ಆ ಅಖಂಡ ಮಹಾ — ೬೧೮
ಆ ಅಖಂಡ ಮಹಾ — ೬೧೯
ಆ ಅನಾಹತ ಚಕ್ರದ — ೨೯೯
ಆ ಅರ್ಬುದ ದಳ — ೪೧೬
ಆ ಆಜ್ಞಾಚಕ್ರದ — ೩೦೧
ಆ ಆದಿ ಉಕಾರ — ೪೯೯
ಆ ಆದಿ ಪ್ರಣವದ — ೨೨೯
ಆ ಆದಿ ಪ್ರಣವದ — ೩೯೯
ಆ ಇಷ್ಟ ಪ್ರಾಣ — ೫೦೦
ಆ ಏಕದಳಪದ್ಮ — ೪೨೦
ಆ ಐಕ್ಯನಲ್ಲಿಯ — ೫೬೧
ಆ ಐಕ್ಯನಲ್ಲಿಯ — ೫೬೨
ಆ ಐಕ್ಯನಲ್ಲಿಯ — ೫೬೩
ಆ ಐಕ್ಯನಲ್ಲಿಯ — ೫೬೪
ಆ ಐಕ್ಯನಲ್ಲಿಯ — ೫೬೫
ಆ ಕಲಾ ಪ್ರಣವದ — ೩೮೬
ಆಕಾಶ ಚೈತನ್ಯ — ೭೨೪
ಆಕಾಶವೇ ಅಂಗವಾದ — ೫೨೭
ಆ ಕೋಟಿದಳ ಪದ್ಮ — ೪೧೭
ಆ ಕ್ಷಿತಿದಳ ಪದ್ಮ — ೪೧೧
ಆ ಕ್ಷೋಣಿದಳ — ೪೧೨
ಆ ಖರ್ವದಳ ಪದ್ಮ — ೪೧೫
ಆಚಾರಲಿಂಗದಲ್ಲಿ — ೪೭೦
ಆ ಚೈತನ್ಯ ಬೀಜ — ೨೫೨
ಆಜ್ಞಾಚಕ್ರದಲ್ಲಿಹ — ೪೬೮
ಆಣವ ಮಾಯಾ — ೭೮೨
ಆಣವ ಮಾಯಾ — ೭೮೯
ಆಣವ ಮಾಯಾ — ೮೩೩

ಆ ತೀರ್ಥ ಸೂರ್ಯ — ೮೭೬
ಆತ್ಮತತ್ವ ಇಪ್ಪತ್ತೈದು — ೮೧೯
ಆತ್ಮನೆ ಅಂಗವಾದ — ೫೧೮
ಆತ್ಮನೆ ಅಂಗವಾದ — ೫೨೮
ಆ ತ್ರಿದಳ ಪದ್ಮ — ೪೨೧
ಆ ತ್ರಿವಿಂಶ ಚತುರ್ದಳ — ೪೨೪
ಆ ತ್ರಿಸಹಸ್ರದಳ — ೪೧೯
ಆ ದಶದಳಪದ್ಮ — ೪೨೮
ಆದಿ ಅಕಾರದಲ್ಲಿ — ೩೯೩
ಆದಿ ಅಕಾರ — ೪೦೦
ಆದಿ ಅನಾದಿಯಿಲ್ಲ — ೫೮೨
ಆದಿ ಮಕಾರ ಪ್ರಣವ — ೬೦೯
ಆದಿಮೂಲ ಅನಾದಿ — ೩೭೪
ಆದಿಮೂಲ ಅನಾದಿ — ೩೮೨
ಆದಿ ರುದ್ರ ಆದಿ ಈಶ್ವರ — ೩೯೨
ಆ ದ್ವಾದಶದಳ — ೪೨೭
ಆ ದ್ವಿದಳಪದ್ಮ — ೪೨೫
ಆಧಾರ ಚಕ್ರದಲ್ಲಿ — ೪೯೧
ಆಧಾರ ಚಕ್ರದಲ್ಲಿಹ — ೪೬೩
ಆಧಾರ ಸ್ವಾಧಿಷ್ಠಾನ — ೬೦೩
ಆ ಧ್ಯಾನವನೆಚ್ಚಲರಿಯದೆ— ೩೬೧
ಆ ಪದ್ಮದಳ ಪದ್ಮ — ೪೧೩
ಆ ಪರತತ್ವದ — ೬೪೬
ಆ ಪರಮ ಭೋಗಿಯ — ೬೮೩
ಆ ಪ್ರಣವದ ಜ್ಯೋತಿ — ೭೦೧
ಆ ಪ್ರಸಾದಿಯಲ್ಲಿಯ — ೫೪೩
ಆ ಪ್ರಸಾದಿಯಲ್ಲಿಯ — ೫೪೪
ಆ ಪ್ರಸಾದಿಯಲ್ಲಿಯ — ೫೪೫
ಆ ಪ್ರಸಾದಿಯಲ್ಲಿಯ — ೫೪೬
ಆ ಪ್ರಾಣಲಿಂಗಿಯಲ್ಲಿಯ — ೫೪೯
ಆ ಪ್ರಾಣಲಿಂಗಿಯಲ್ಲಿಯ — ೫೫೦
ಆ ಪ್ರಾಣಲಿಂಗಿಯಲ್ಲಿಯ — ೫೫೧
ಆ ಪ್ರಾಣಲಿಂಗಿಯಲ್ಲಿಯ — ೫೫೨
ಆ ಪೃಥ್ವಿ ಅಪ್ಪು — ೨೪೪
ಆ ಮಕಾರ ಪ್ರಣವಕ್ಕೆ — ೬೧೦
ಆ ಮಹಾಕ್ಷಿತಿದಳ — ೪೧೦
ಆ ಮಹಾಖರ್ವದಳ — ೪೧೪
ಆ ಮಹಾಸದಾಶಿವ — ೨೪೦
ಆ ಮಹಾಸದಾಶಿವ — ೨೪೩
ಆ ಮಾಹೇಶ್ವರನಲ್ಲಿಯ — ೫೩೬
ಆ ಮಾಹೇಶ್ವರನಲ್ಲಿಯ — ೫೩೭
ಆ ಮಾಹೇಶ್ವರನಲ್ಲಿಯ — ೫೩೮
ಆ ಮಾಹೇಶ್ವರನಲ್ಲಿಯ — ೫೩೯
ಆ ಮಾಹೇಶ್ವರನಲ್ಲಿಯ — ೫೪೦
ಆರು ಬೀಜವ ಮೀರಿ — ೮೮೬
ಆ ಲಕ್ಷದಳ ಪದ್ಮ — ೪೧೮
ಆ ವಾಯುವಿಶಾಲ — ೨೮೪
ಆ ವಿಶುದ್ಧಿಚಕ್ರದ — ೩೦೦
ಆವುದೊಂದು ರೂಪ — ೮೩೬
ಆ ವ್ಯೋಮಾತೀತ — ೮೦೪
ಆ ಶತದಳಪದ್ಮ — ೪೨೩
ಆ ಶರಣನಲ್ಲಿಯ — ೫೫೫
ಆ ಶರಣನಲ್ಲಿಯ — ೫೫೬
ಆ ಶರಣನಲ್ಲಿಯ — ೫೫೭
ಆ ಶರಣನಲ್ಲಿಯ — ೫೫೮
ಆ ಶಿವತತ್ವದ — ೬೩೦
ಆ ಷಡುದಳಪದ್ಮ — ೪೨೯
ಆ ಷೋಡಶದಳ — ೪೨೬
ಆ ಸದ್ಗುರುಸ್ವಾಮಿಯ — ೭೮೩
ಆ ಸದ್ಗುರುಸ್ವಾಮಿಯ — ೩೧೦
ಆ ಸಹಸ್ರದಳ — ೩೦೨
ಆ ಸಹಸ್ರದಳ — ೪೨೨
ಆ ಹೃದಯಾಕಾಶದಲ್ಲಿ — ೫೭೨


ಇ


ಇಂತಪ್ಪ ನಾನಾ ಸುಖ — ೨೭೦
ಇಂತೀ ನಾನಾ ಮುಖ — ೩೧೪
ಇಂದ್ರ ಇಂದ್ರರೆಂಬುವ — ೯೧೧

ಇಂದ್ರಪದ ಬ್ರಹ್ಮಪದ — ೩೯೦
ಇಡಾಪಿಂಗಳ ಸುಷುಮ್ನ — ೫೯೫
ಇಡೆಯಲ್ಲಿ ಸುಳಿವ — ೫೯೬
ಇದಕ್ಕೆ ಈಶ್ವರ — ೪೪೫
ಇದಕ್ಕೆ ಓಂಕಾರೋ — ೬೧೧
ಇದಕ್ಕೆ ಪ್ರಣವೋಪನಿಷತ್ತು — ೨೩೦
ಇದಕ್ಕೆ ಪ್ರಣವೋಪನಿಷದ — ೪೦೧
ಇದಕ್ಕೆ ಪ್ರಳಯಕಾಲ — ೬೯೬
ಇದಕ್ಕೆ ಮಹದೋಂಕಾ — ೨೩೪
ಇದಕ್ಕೆ ಮಹದೋಂಕಾರೋ — ೨೩೨
ಇನ್ನು ಅಂಗದ ತಾಮಸ — ೭೬೯
ಇನ್ನು ಅಂಗತ್ರಯ — ೩೪೪
ಇನ್ನು ಅಂತರಾತ್ಮ — ೯೦೬
ಇನ್ನು ಅಖಂಡಜ್ಯೋತಿ — ೭೪೯
ಇನ್ನು ಅಖಂಡಪರಿಪೂರ್ಣ — ೨೩೮
ಇನ್ನು ಅಖಂಡಮಹಾ — ೨೩೫
ಇನ್ನು ಅಗ್ನಿಧಾರಣ — ೨೮೮
ಇನ್ನು ಅತಿಸೂಕ್ಷ್ಮ — ೪೫೦
ಇನ್ನು ಅತಿಸೂಕ್ಷ್ಮ — ೪೫೧
ಇನ್ನು ಅಮೃತಧಾರಣ — ೨೯೩
ಇನ್ನು ಅಷ್ಟನಾದ — ೭೫೮
ಇನ್ನು ಅಷ್ಟನಾದದ — ೪೮೨
ಇನ್ನು ಆ ಅಕಾರ — ೩೩೮
ಇನ್ನು ಆ ಅಖಂಡ — ೪೦೪
ಇನ್ನು ಆ ಅಖಂಡ — ೪೪೬
ಇನ್ನು ಆ ಅಖಂಡ — ೬೧೨
ಇನ್ನು ಆ ಆತ್ಮನು — ೨೬೯
ಇನ್ನು ಆ ಆದಿ — ೨೩೧
ಇನ್ನು ಆ ಆದಿ — ೨೩೩
ಇನ್ನು ಆ ಐಕ್ಯನಲ್ಲಿ — ೫೪೯
ಇನ್ನು ಆ ಐಕ್ಯನಲ್ಲಿ — ೫೬೦
ಇನ್ನು ಆದಿಮೂಲ — ೨೨೫
ಇನ್ನು ಆಧಾರ — ೨೯೬
ಇನ್ನು ಆ ಪಿಂಡ — ೨೬೮
ಇನ್ನು ಆ ಪ್ರಣವಮುದ — ೪೫೪
ಇನ್ನು ಆ ಪ್ರಣವದ — ೪೪೮
ಇನ್ನು ಆ ಪ್ರಣವದ — ೪೪೯
ಇನ್ನು ಆ ಪ್ರಸಾದಿ — ೫೪೨
ಇನ್ನು ಆಯುಷ್ಯ — ೨೫೦
ಇನ್ನು ಆ ಲಿಂಗ — ೪೦೩
ಇನ್ನು ಆ ಶುಕ್ಲ — ೨೫೧
ಇನ್ನು ಇನ್ನೂರ — ೭೦೨
ಇನ್ನು ಇನ್ನೂರ — ೭೦೩
ಇನ್ನು ಇಷ್ಟ ಪ್ರಾಣ — ೩೪೭
ಇನ್ನು ಇಷ್ಟ ಪ್ರಾಣ — ೪೯೮
ಇನ್ನು ಇಷ್ಟಲಿಂಗ — ೩೪೯
ಇನ್ನು ಋಗ್ವೇದ — ೪೮೯
ಇನ್ನು ಋಗ್ವೇದ — ೭೬೧
ಇನ್ನು ಐವತ್ತೆರಡು — ೪೫೨
ಇನ್ನು ಐವತ್ತೆರಡು — ೭೦೦
ಇನ್ನು ಕರಣಾರ್ಪಣ — ೫೩೦
ಇನ್ನು ಕಾಲಭೇದಂಗಳ — ೨೪೮
ಇನ್ನು ಕೆಳಗಾದವಸ್ಥೆಯ — ೬೬೯
ಇನ್ನು ಕೇವಲಾವಸ್ಥೆಯ — ೬೭೯
ಇನ್ನು ಗುರುಕರುಣ — ೩೨೮
ಇನ್ನು ಗುರುತಾಮಸ — ೭೬೬
ಇನ್ನು ಗುರುಪೂಜಾ — ೩೫೫
ಇನ್ನು ಗುರುಲಿಂಗ — ೩೫೧
ಇನ್ನು ಜಂಗಮ — ೩೬೨
ಇನ್ನು ಜಂಗಮ — ೭೭೦
ಇನ್ನು ಜ್ಞಾನಾವಸ್ಥೆ — ೬೮೭
ಇನ್ನು ತೊಂಬತ್ತುನಾಲ್ಕು — ೬೯೯
ಇನ್ನು ದ್ವಿದಶ ಕಮಲ — ೭೪೬
ಇನ್ನು ನಕ್ಷತ್ರ ನವ — ೨೬೬
ಇನ್ನು ನವಶಕ್ತಿ — ೪೭೮
ಇನ್ನು ನವಶಕ್ತಿಗಳ — ೭೫೬
ಇನ್ನು ನವಷಡ್ವಿಧ — ೪೮೦
ಇನ್ನು ನಾಡಿಧಾರಣ — ೨೭೧

| | | | | | |
|---|---|---|---|---|---|
| ಇನ್ನು ನಿರಂಜನ | – | ೬೫೨ | ಇನ್ನು ಮೇಲಾದ | – | ೬೭೪ |
| ಇನ್ನು ನಿರಂಜನ | – | ೬೫೩ | ಇನ್ನು ರುದ್ರಾಕ್ಷಿಸ್ಥಲ | – | ೩೩೫ |
| ಇನ್ನು ನಿರಂಜನಾತೀತ | – | ೨೨೮ | ಇನ್ನು ಲಿಂಗ ಗರ್ಭ | – | ೨೩೭ |
| ಇನ್ನು ನಿರಂಜನಾತೀತ | – | ೬೫೫ | ಇನ್ನು ಲಿಂಗದ | – | ೭೬೯ |
| ಇನ್ನು ನಿರಂಜನಾವಸ್ಥೆ | – | ೬೯೦ | ಇನ್ನು ಲಿಂಗಧಾರಣ | – | ೩೩೦ |
| ಇನ್ನು ನಿರ್ಮಲಾವಸ್ಥೆಯ | – | ೬೮೧ | ಇನ್ನು ಲಿಂಗಧಾರಣ | – | ೩೩೬ |
| ಇನ್ನು ನಿರಾಧಾರ | – | ೩೦೩ | ಇನ್ನು ಲಿಂಗೋತ್ಪತ್ಯ | – | ೨೩೬ |
| ಇನ್ನು ನಿರಾಮಯ | – | ೬೩೯ | ಇನ್ನು ಲಿಂಗೋದಕ | – | ೩೬೪ |
| ಇನ್ನು ನಿರಾಳವಸ್ಥೆ | – | ೬೮೯ | ಇನ್ನು ವರ್ಣಭೇದ | – | ೨೪೯ |
| ಇನ್ನು ನಿರಾಳಷಡುಚಕ್ರ | – | ೬೩೭ | ಇನ್ನು ವಾಯುಧಾರಣೆ | – | ೨೭೯ |
| ಇನ್ನು ಪಂಚಾಕ್ಷರ | – | ೭೨೦ | ಇನ್ನು ವಿಂಶತಿ | – | ೭೪೭ |
| ಇನ್ನು ಪಂಚಾಕ್ಷರ | – | ೭೪೮ | ಇನ್ನು ವಿಂಶತಿ | – | ೭೫೭ |
| ಇನ್ನು ಪಂಚಾಕ್ಷರಿ | – | ೩೩೭ | ಇನ್ನು ವಿಭೂತಿ | – | ೩೩೨ |
| ಇನ್ನು ಪಿಂಡ | – | ೨೪೫ | ಇನ್ನು ವಿಭೂತಿ | – | ೩೩೩ |
| ಇನ್ನು ಪ್ರಣವದ | – | ೫೦೧ | ಇನ್ನು ವಿಶ್ವಾಧಿಕ | – | ೨೪೧ |
| ಇನ್ನು ಪ್ರಥಮ | – | ೩೫೨ | ಇನ್ನು ಶರಣನಲ್ಲಿಯ | – | ೫೫೩ |
| ಇನ್ನು ಪ್ರಥಮ | – | ೩೬೩ | ಇನ್ನು ಶರಣನಲ್ಲಿಯ | – | ೫೫೪ |
| ಇನ್ನು ಪ್ರಸಾದಿಯ | – | ೫೪೧ | ಇನ್ನು ಶಿವಾವಸ್ಥೆ | – | ೬೮೮ |
| ಇನ್ನು ಪ್ರಸೂತಿಕಾಲ | – | ೨೫೮ | ಇನ್ನು ಶುದ್ಧಾವಸ್ಥೆಯ | – | ೬೮೦ |
| ಇನ್ನು ಪ್ರಾಣಲಿಂಗಿ | – | ೫೪೭ | ಇನ್ನು ಷಟ್‌ಕಲೆ | – | ೭೦೬ |
| ಇನ್ನು ಪ್ರಾಣಲಿಂಗಿ | – | ೫೪೮ | ಇನ್ನು ಷಟ್ಸ್ಥಲ | – | ೩೬೫ |
| ಇನ್ನು ಪ್ರೇರಕಾವಸ್ಥೆ | – | ೬೬೩ | ಇನ್ನು ಷಟ್ಸ್ಥಲ | – | ೬೧೩ |
| ಇನ್ನು ಬೀಜಾಕ್ಷರ | – | ೪೫೩ | ಇನ್ನು ಷಡಂಗ | – | ೬೨೨ |
| ಇನ್ನು ಬ್ರಹ್ಮಾಂಡ | – | ೨೪೨ | ಇನ್ನು ಷಡಂಗ | – | ೭೩೦ |
| ಇನ್ನು ಭಕ್ತ | – | ೭೩೯ | ಇನ್ನು ಷಡಧ್ವದುತ್ಪತ್ಯ | – | ೯೧೩ |
| ಇನ್ನು ಭಕ್ತನ | – | ೭೬೩ | ಇನ್ನು ಷಡಧ್ವನ್ಯಾಸ | – | ೭೦೭ |
| ಇನ್ನು ಭೂತನಾಯಕ | – | ೨೬೭ | ಇನ್ನು ಷಡುಶಕ್ತಿ | – | ೭೩೬ |
| ಇನ್ನು ಮಧ್ಯಾವಸ್ಥೆ | – | ೬೬೪ | ಇನ್ನು ಷಡ್ವಿಧ | – | ೪೫೭ |
| ಇನ್ನು ಮಹೇಶ್ವರ | – | ೫೩೫ | ಇನ್ನು ಷಡ್ವಿಧ | – | ೪೫೯ |
| ಇನ್ನು ಮಾಯಾವಿಡಂಬನ | – | ೩೨೪ | ಇನ್ನು ಷಡ್ವಿಧ | – | ೪೬೨ |
| ಇನ್ನು ಮುಂದೆ | – | ೬೮೨ | ಇನ್ನು ಷಡ್ವಿಧ | – | ೪೭೪ |
| ಇನ್ನು ಮುಂದೆ | – | ೭೯೩ | ಇನ್ನು ಷಡ್ವಿಧ | – | ೪೭೬ |
| ಇನ್ನು ಮೂವತ್ತಾರು | – | ೭೦೪ | ಇನ್ನು ಷಡ್ವಿಧ | – | ೪೮೪ |
| ಇನ್ನು ಮೂವತ್ತಾರು | – | ೬೨೨ | ಇನ್ನು ಷಡ್ವಿಧ | – | ೪೮೬ |

ಇನ್ನು ಷಡ್ವಿಧ – ೭೪೦
ಇನ್ನು ಷಡ್ವಿಧ – ೭೪೧
ಇನ್ನು ಷಡ್ವಿಧ – ೭೪೨
ಇನ್ನು ಷಡ್ವಿಧ – ೭೪೩
ಇನ್ನು ಷಡ್ವಿಧ – ೭೫೦
ಇನ್ನು ಷಡ್ವಿಧ – ೭೫೧
ಇನ್ನು ಷಡ್ವಿಧ – ೭೫೨
ಇನ್ನು ಷಡ್ವಿಧ – ೭೫೩
ಇನ್ನು ಷಡ್ವಿಧ – ೭೫೪
ಇನ್ನು ಷಡ್ವಿಧ – ೭೫೫
ಇನ್ನು ಷಡ್ವಿಧ – ೭೫೯
ಇನ್ನು ಷಡ್ವಿಧ – ೭೬೦
ಇನ್ನು ಷಡ್ವಿಧ ಲಿಂಗ – ೯೦೯
ಇನ್ನು ಸಕಲತತ್ವ – ೭೦೫
ಇನ್ನು ಸಪ್ತಕುಲ – ೨೬೨
ಇನ್ನು ಸಪ್ತದ್ವೀಪ – ೨೬೩
ಇನ್ನು ಸಪ್ತಸಮುದ್ರ – ೨೬೪
ಇನ್ನು ಸಪ್ತಸಮುದ್ರ – ೨೬೫
ಇನ್ನು ಸಹಸ್ರಾಕ್ಷರ – ೯೦೫
ಇನ್ನು ಸ್ತ್ರೀ ಪುರುಷ – ೨೪೭
ಇನ್ನು ಸ್ತ್ರೀಯರುಗಳಿಂದ – ೨೪೬
ಇನ್ನು ಹೃದಯಾಂಗದಲ್ಲಿ – ೫೬೯
ಇನ್ನೂರ ಇಪ್ಪತ್ತನಾಲ್ಕು – ೨
ಇನ್ನೂರ ಇಪ್ಪತ್ತುನಾಲ್ಕು – ೩
ಇನ್ನೊಂದು ಪ್ರಕಾರದ – ೩೪೨
ಇನ್ನೊಂದು ಪ್ರಕಾರದ – ೩೪೩
ಇನ್ನೊಂದು ಪ್ರಕಾರದ – ೪೦೭
ಇನ್ನೊಂದು ಪ್ರಕಾರದ – ೪೬೦
ಇನ್ನೊಂದು ಪ್ರಕಾರದ – ೪೭೧
ಇನ್ನೊಂದು ಪ್ರಕಾರದ – ೫೦೭
ಇನ್ನೊಂದು ಪ್ರಕಾರದ – ೫೧೦
ಇನ್ನೊಂದು ಪ್ರಕಾರದ – ೫೧೨
ಇಷ್ಟಲಿಂಗಕ್ಕೆ ರೂಪಾಗಿ – ೩೫೦
ಇಷ್ಟಲಿಂಗ ಪ್ರಾಣಲಿಂಗ – ೩೪೧

ಈ

ಈ ಐವತ್ತೆರಡಕ್ಷರವ – ೪೫೫
ಈ ಮಂತ್ರಾಧ್ವ – ೭೧೩
ಈ ಮೂವತ್ತಾರು – ೫೬೬
ಈ ವಚನಾನುಭಾವ – ೭೯೨
ಈಶಾನಮುಖದಲ್ಲಿ – ೭೧೫
ಈಶಾನಮುಖದಲ್ಲಿ – ೬೯೮
ಈ ಷಡ್ವಿಧ – ೯೧೪

ಉ, ಊ, ಋ

ಉಕಾರದೊಳಗೆ ಉಕಾರ – ೭೭೯
ಉಕಾರದೊಳಗೆ ಉಕಾರ – ೭೮೫
ಉತ್ತರ ದಕ್ಷಿಣ – ೮೭೩
ಉತ್ತರ ದಕ್ಷಿಣ ಪೂರ್ವ – ೮೭೪
ಉಪ್ಪು ಉದಕವ – ೩೪೮
ಉರಿಯಬೀಜದ – ೮೪೯
ಊರ್ಧ್ವಮುಖ – ೮೨೭
ಊನವಾಗಿಹ ದೇಹವ – ೭೯೯
ಋಗ್ವೇದ ಯಜುರ್ವೇದ – ೫೮೮

ಎ, ಏ, ಐ

ಎಂಟೆರಡೆಂಟೆರಡೆಂಬರು – ೮೫೬
ಎಂಬತ್ತೆಂಟುಕೋಟಿ – ೨೮೦
ಎಡಬಲನ ತಡೆದು – ೮೪೧
ಎನ್ನ ದೇಹವೆಂಬ – ೩೦೫
ಎನ್ನ ಮನಬುದ್ಧಿ – ೭೯೦
ಎಲ್ಲಾ ನಾಡಿಗಳೂ – ೨೭೬
ಏಕರಾತ್ರಿಗೆ ಹಾಲಿಗೆ – ೨೫೩
ಏಕೋರುದ್ರ – ೫೯೧
ಏನು ಏನೂ ಎನಲಿಲ್ಲ – ೩೭೮
ಏನೂ ಏನೂ ಎನಲಿಲ್ಲ – ೪೭೭
ಏನು ಏನೂ ಎನಲಿಲ್ಲದ – ೩೯೧
ಏನು ಏನೂ ಎನಲಿಲ್ಲದ – ೩೯೪
ಏನು ಏನೂ ಎನಲಿಲ್ಲದ – ೩೯೬

ಏನು ಏನೂ ಎನಲಿಲ್ಲದ – ೮೫೫
ಏನು ಏನೂ ಎನಲಿಲ್ಲದ – ೮೯೮
ಏನು ಏನೂ ಎನಲಿಲ್ಲದ – ೯೦೭
ಏಳು ಸುತ್ತಿನ ಕೋಟೆ – ೮೪೪
ಐವತ್ತೆರಡು ಅಕ್ಷರಕ್ಕೆ – ೩೩೯

ಒ, ಓ, ಕ

ಒಂದಾದೆನೆಂಬ ಅಣ್ಣಗಳು – ೮೪೫
ಒಂದೆಂಬೆನೆ ಎರಡಾಗಿ – ೮೪೬
ಓಂಕಾರದ ಪೀಠದ – ೩೦೮
ಓಂಕಾರವೆಂಬ ಭಾವಿ – ೮೯೧
ಓಂಕಾರವೇ ಪೀಠ – ೩೦೭
ಕಖಗಘಙ ಚಛಜಝ – ೭೧೯
ಕಣ್ಣಿಲ್ಲದಂಧಕ ಕಾಲಿಲ್ಲದ – ೮೩೧
ಕಣ್ಣಿಲ್ಲದೆ ನೋಡಿ – ೮೬೩
ಕರ್ಮ ಭಾವವು – ೮೦೮
ಕಲ್ಲದೇವರು – ೫೯೭
ಕಾಯಜೀವದ – ೭೯೭
ಕಾಯಾರ್ಪಣ – ೫೨೯
ಕಾಲಾಗ್ನಿಯನೆಬ್ಬಿಸಿ – ೨೮೯
ಕಾಲಿಲ್ಲದ ಗುರುವಿಂಗೆ – ೮೩೫
ಕಾಲು ಕೈ ನಡುವೆಲ್ಲ – ೨೭೩
ಕುಂಡಲಿಶಕ್ತಿಯ – ೮೨೩
ಕುರುಹು ಕೆಟ್ಟು – ೮೨೨
ಕೋಣನ ಬಸುರಲ್ಲಿ – ೮೩೨
ಕೃತಯುಗದಲ್ಲಿ – ೩೩೧
ಕ್ಷುತ್ಪಿಪಾಸೆ ಶೋಕ – ೩೭೦

ಗ, ಘ

ಗಂಗಾಧರ ಗೌರೀಶ – ೫೯೯
ಗಂಧ ರಸ ರೂಪು – ೬೨೪
ಗಂಧ ರಸ ರೂಪು – ೭೩೨
ಗಣೇಶ್ವರಿಯೆಂಬ – ೮೬೯
ಗುಕಾರವೇ ನಿರ್ಗುಣಾತ್ಮನು – ೭೬೭
ಗುಣತ್ರಯ ಮನ – ೭೨೩
ಗುದ ಘ್ರಾಣ ಚಿತ್ತ – ೭೨೯
ಗುದಸ್ಥಾನದಲ್ಲಿ – ೪೦೮
ಗುದಸ್ಥಾನದಲ್ಲಿ – ೪೯೨
ಗುರುಕರುಣದಿಂದ – ೩೨೯
ಗುರುಕರುಣವಿಲ್ಲದೆ – ೮೧೨
ಗುರುಲಿಂಗಜಂಗಮ – ೭೭೩
ಗುಹ್ಯ ಜಿಹ್ವೆ – ೭೨೮
ಘನಕ್ಕೆ ಘನವಾದ – ೩೭೯
ಘ್ರಾಣ ಜಿಹ್ವೆ – ೬೨೬
ಘ್ರಾಣ ಜಿಹ್ವೆ ನೇತ್ರ – ೭೩೪
ಘ್ರಾಣ ಪೃಥ್ವಿಯಾಶ್ರಯ – ೫೨೦

ಚ

ಚಿತ್ಕಲಾಪ್ರಣವ – ೩೮೭
ಚಿಚ್ಛಕ್ತಿ ಪರಾಶಕ್ತಿ – ೬೨೧
ಚಿತ್ತ ಬುದ್ಧಿ – ೬೨೫
ಚಿತ್ತ ಬುದ್ಧಿ – ೭೩೩
ಚಿತ್ಸ್ವರೂಪವಾಗಿ – ೮೭೫
ಚಿನ್ನಾದ ಚಿದ್ಬಿಂದು – ೩೮೦

ಜ

ಜಂಬುಕ ಹದಿನಾಲ್ಕು – ೮೪೨
ಜಗತ್ ಸೃಷ್ಟ್ಯಾರ್ಥ – ೬೨೮
ಜಟೆಯಾಗಲಿ, – ೭೭೨
ಜಾಗ್ರದಲ್ಲಿಯ ಜಾಗ್ರ – ೬೬೭
ಜಾಗ್ರದಲ್ಲಿಯ ಸುಷುಪ್ತಿ – ೬೬೫
ಜಾಗ್ರದಲ್ಲಿಯ ಸ್ವಪ್ನ – ೬೬೬
ಜಾಗ್ರ ಸ್ವಪ್ನ – ೮೦೧
ಜೀವ ಕರಣ ದೇಹ – ೮೦೦
ಜೀವನೆಂಬ ಶಿವಾಲಯ – ೩೦೪
ಜ್ಞಾತೃ ಜ್ಞಾನ – ೩೧೯
ಜ್ಞಾನ ಜಾಗ್ರ – ೯೦೨
ಜ್ಞಾನಸ್ವರೂಪ – ೨೯೫
ಜ್ಞಾನೇಂದ್ರಿಯವೆಂಬ – ೫೭೦

ತ

ತತ್ವಮೂರರಾದಿ — ೮೯೨
ತತ್ವಾತ್ಮ ತತ್ವದಲ್ಲಿ — ೪೪೪
ತನ್ನಸರಿಯದೆ — ೭೯೫
ತನ್ನನುಭೂತಿಯಲ್ಲಿ — ೮೦೭
ತನ್ನಲ್ಲಿ ಅನಂತ — ೫೮೦
ತಾನೆಂಬ ಅರಿವ — ೭೯೮
ತಾನೆ ಇಷ್ಟಲಿಂಗ — ೫೭೮
ತಾನೆ ಗುರುತತ್ವ — ೫೮೧
ತಾನೇ ಚಿತ್ಪ್ರಕಾಶ — ೬೦೮
ತಾನೆ ಚಿನ್ನಾದ — ೬೦೭
ತಾನೆ ಭಕ್ತ — ೫೭೭
ತಾನೆ ಭಕ್ತ — ೫೭೯
ತಾನೆ ಶಿವಪ್ರಣವ — ೯೨೦
ತಾನೊಂದು ಕಾಲದಲ್ಲಿ — ೮೭೭
ತಾನೊಂದು ಕಾಲದಲ್ಲಿ — ೮೭೮
ತಾನೊಂದು ಕಾಲದಲ್ಲಿ — ೮೭೯
ತಾನೊಂದು ಕಾಲದಲ್ಲಿ — ೮೮೦
ತಿಲದೊಳಗಣ — ೨೭೮
ತಿಲದೊಳಗಣ — ೮೦೬
ತೂರ್ಯವಡಗಿ — ೮೦೨
ತೂರ್ಯವಾವುದು — ೬೭೨
ತೂರ್ಯಾತೀತ — ೬೭೩
ತ್ರಿಕಲೆ ದ್ವಾದಶ — ೨೯೪
ತ್ರಿಪುರಂಗಳ — ೮೩೯
ತ್ರಿಪುರಂಗಳ — ೮೯೩
ತ್ರಿಮಾಸಕ್ಕೆ — ೨೫೫

ದ, ನ

ದಾಸಿಯಸಂಗವುಳ್ಳ — ೯೧೫
ದೇಹ ಪ್ರಾಣ — ೮೩೦
ದೇಹವಳಿದು — ೮೧೪
ದ್ವಿದಶಚಕ್ರ — ೭೬೨
ನಕಾರದೊಳಗೆ — ೮೮೩
ನಕಾರವೆ ಆಚಾರ — ೫೭೫
ನಕಾರವೆ ರುಧಿರ — ೫೭೪
ನವಮಾಸಕ್ಕೆ — ೨೫೭
ನಾಡಿಗಳು ಚರಿಸುವ — ೨೭೭
ನಾಡಿಧಾರಣ — ೩೦೯
ನಾದಬಿಂದುಕಲಾತೀತ — ೮೭೨
ನಾದಬಿಂದುಗಳಿಗಿಂಬಾಗಿ — ೬೭೫
ನಾದ ಬಿಂದುವ ನುಂಗಿ — ೩೧೬
ನಾದ ಬಿಂದು — ೬೭೬
ನಾದ ಬಿಂದು — ೬೭೭
ನಾದವ ಬಿಂದು — ೮೫೮
ನಾದವೆಂಬ ಕೆರೆ — ೮೩೪
ನಾಮರೂಪಕ್ರಿಯಾ — ೫೬೭
ನಾಮರೂಪು ಕ್ರಿಯಾ — ೭೯೧
ನಾಸಿಕದ ತುದಿ — ೬೦೦
ನಿಶ್ಶಿಬ್ದವೆಂಬ — ೪೮೧
ನಿರ್ಗುಣತತ್ವ — ೪೩೯
ನಿರ್ಮಲ ಜಾಗ್ರ — ೯೦೦
ನಿರಂಜನ ಜಾಗ್ರದಲ್ಲಿ — ೮೮೨
ನಿರಂಜನ ತತ್ವ — ೪೩೩
ನಿರಂಜನ ಪ್ರಣವದುತ್ಪತ್ಯ — ೯೧೨
ನಿರಂಜನ ಪ್ರಣವದ — ೯೦೪
ನಿರಂಜನ ಪ್ರಣವ — ೩೧೭
ನಿರಂಜನ ಪ್ರಣವ — ೮೯೬
ನಿರಂಜನ ಪ್ರಣವದ — ೩೮೧
ನಿರಂಜನಾತೀತ — ೬೫೪
ನಿರಂಜನಾತೀತ — ೬೫೬
ನಿರಂಜನಾತೀತ — ೬೫೭
ನಿರಂಜನಾತೀತ — ೬೫೮
ನಿರಂಜನಾತೀತ — ೬೫೯
ನಿರಂಜನಾತೀತ — ೬೬೦
ನಿರಂಜನಾತೀತ — ೬೬೨
ನಿರಾಮಯ ಐಕ್ಯ — ೬೪೪
ನಿರಾಮಯತತ್ವ — ೪೩೫

ನಿರಾಮಯದೊಳು – ೬೯೨
ನಿರಾಮಯದೊಳು – ೬೯೪
ನಿರಾಮಯದೊಳು – ೮೨೪
ನಿರಾಮಯದೊಳು – ೮೨೫
ನಿರಾಮಯಪ್ರಸಾದಿ – ೬೪೧
ನಿರಾಮಯಪ್ರಾಣ ಲಿಂಗಿ – ೬೪೨
ನಿರಾಮಯ ಭಕ್ತ – ೬೩೮
ನಿರಾಮಯ ಮಹೇಶ್ವರ – ೬೪೦
ನಿರಾಮಯವೆಂಬ – ೮೨೮
ನಿರಾಮಯ ಶರಣ – ೬೪೩
ನಿರಾಮಯಾತೀತ – ೮೧೫
ನಿರಾಮಯಾತೀತ – ೮೧೭
ನಿರಾಳ ಅಷ್ಟದಳ – ೮೨೬
ನಿರಾಳ ಅಷ್ಟದಳ – ೮೨೬
ನಿರಾಳ ಜಾಗ್ರ – ೪೯೯
ನಿರಾಳ ತತ್ವ – ೪೩೪
ನಿರಾಳದಷ್ಟದಳದ – ೬೯೫
ನಿರಾಳ ನಿರಂಜನ – ೩೭೭
ನಿರಾಳ ಷಡುಚಕ್ರ – ೬೩೬
ನಿವೃತ್ತಿಕಲೆ – ೫೯೪
ನಿಶ್ಯಬ್ದವೆಂಬ – ೬೨೦
ನಿಷ್ಕಳತತ್ವ – ೪೩೮

ಪ

ಪಂಚಮುಖ – ೨೩೯
ಪಂಚಮುಖ – ೪೦೫
ಪಂಚವಿಂಶತಿ – ೨೫೪
ಪಂಚಾಕ್ಷರಿ – ೯೦೯
ಪದ್ಮವೊಂದು – ೮೪೩
ಪರತತ್ತ್ವದ – ೬೪೫
ಪರತತ್ತ್ವದ – ೬೪೭
ಪರತತ್ತ್ವದ – ೬೪೮
ಪರತತ್ವದ – ೬೪೯
ಪರತತ್ತ್ವದ – ೬೫೦
ಪರತತ್ತ್ವದ – ೬೫೧
ಪರತತ್ತ್ವದಲ್ಲಿ – ೪೪೨
ಪರದಲ್ಲಿ – ೨೯೧
ಪರಧನ ಪರಸ್ತ್ರೀ – ೮೮೫
ಪರಬ್ರಹ್ಮಸ್ವರೂಪ – ೭೩೮
ಪರಬ್ರಹ್ಮಸ್ವರೂಪವಾಗಿಹ – ೮೫೦
ಪರಶಿವತತ್ವ – ೪೩೭
ಪರಸ್ತ್ರೀ ಪರಧನ – ೩೬೬
ಪರಸ್ತ್ರೀ ಪರಾರ್ಥ – ೮೮೪
ಪರಾಪರತತ್ವ – ೪೩೦
ಪರಾಪರವಿಲ್ಲದಂದು – ೩೭೫
ಪರಾಪರವಾಗಿಹ – ೪೯೯
ಪಸರ ಪಸರ – ೯೧೭
ಪಾಣಿ ತ್ವಕ್ಕು ಮನ – ೭೨೬
ಪಾದ ನೇತ್ರ – ೭೨೭
ಪಾಯು ಗುಹ್ಯ – ೬೨೭
ಪಾಯು ಗುಹ್ಯ – ೭೩೫
ಪಿಂಗಳನಾಳದಲ್ಲಿ – ೬೦೨
ಪಿಂಗಳನಾಳವ – ೨೯೧
ಪೃಥ್ವಿ ಅಪ್ಪು ತೇಜ – ೩೧೮
ಪೃಥ್ವಿ ಅಪ್ಪು ತೇಜ – ೫೮೬
ಪೃಥ್ವಿ ಅಪ್ಪು ತೇಜ – ೬೦೧
ಪೃಥ್ವಿ ಅಪ್ಪು ತೇಜ – ೬೨೩
ಪೃಥ್ವಿ ಅಪ್ಪು ತೇಜ – ೭೩೧
ಪೃಥ್ವಿ ಅಪ್ಪು ತೇಜ – ೭೪೪
ಪೃಥ್ವಿ ಅಪ್ಪು ತೇಜ – ೯೦೮
ಪೃಥ್ವಿ ಭೂತದಲ್ಲಿ – ೫೦೮
ಪೃಥ್ವಿಯಲ್ಲಿ ಗಂಧ – ೫೨೨
ಪೃಥ್ವಿಯೆಂಬ ಮಹಾಭೂತ – ೫೦೫
ಪೃಥ್ವಿಯೆಂಬ ಮಹಾಭೂತ – ೫೧೧
ಪೃಥ್ವಿಯೇ ಅಂಗವಾದ – ೫೧೩
ಪ್ರಾಣವೇ ಲಿಂಗ – ೩೬೮
ಪ್ರೇರಕಾವಸ್ಥೆ – ೬೬೨

ಬ, ಭ

ಬಣ್ಣವಿಲ್ಲದ ಪಕ್ಷಿ – ೮೮೭
ಬಿಂದುವಾಗಿದ್ದು – ೮೧೦
ಬಿಂದುವೇ ಪೀಠ – ೩೦೬
ಬೀಜದ ವೃಕ್ಷ – ೮೫೭
ಬೀಜವಿಲ್ಲದೆ ಅಂಕುರ – ೮೪೭
ಬ್ರಹ್ಮಚಕ್ರದ – ೬೦೪
ಬ್ರಹ್ಮಚಾರಿಯಾಗಿಹ – ೩೫೬
ಬ್ರಹ್ಮ ದೇವರಲ್ಲ – ೫೯೮
ಬ್ರಹ್ಮಲೋಕ – ೫೮೩
ಬ್ರಹ್ಮ ವಿಷ್ಣ್ವಾದಿಗಳು – ೫೮೫
ಬ್ರಹ್ಮ ವಿಷ್ಣು – ೩೮೩
ಭಕಾರವೇ – ೭೬೪
ಭಕ್ತನಲ್ಲಿಯ ಐಕ್ಯ – ೫೩೪
ಭಕ್ತನಲ್ಲಿಯ ಪ್ರಸಾದಿಗೆ – ೫೩೧
ಭಕ್ತನಲ್ಲಿಯ ಪ್ರಾಣಲಿಂಗಿಗೆ – ೫೩೨
ಭಕ್ತನಲ್ಲಿಯ ಶರಣ – ೫೩೩
ಭಕ್ತನೆಂಬೆರಡಕ್ಷರ – ೭೬೫
ಭಾನುಕಿರಣಂಗಳು – ೨೭೪
ಭಾವಲಿಂಗದಲ್ಲಿ – ೩೪೫
ಭಾವಲಿಂಗದಲ್ಲಿ – ೩೪೬
ಭೂಚರಿಯಮುದ್ರೆ – ೬೦೬
ಭೂಮಿಯೆ ಅಂಗ – ೫೨೩
ಭ್ರಮರನು ಚತುರ್ದಳ – ೮೨೧

ಮ

ಮಂತ್ರ ಹನ್ನೊಂದ – ೭೮೧
ಮಂತ್ರ ಹನ್ನೊಂದು – ೭೮೭
ಮಕಾರದೊಳಗೆ – ೭೮೦
ಮಕಾರದೊಳಗೆ – ೭೮೬
ಮಣಿಪೂರಕ ಚಕ್ರ – ೪೬೫
ಮಣಿಪೂರಕ ಚಕ್ರದ – ೨೯೮
ಮತ್ತಂ ಆ ಪ್ರಣವದ – ೬೯೭
ಮತ್ತಂ ಆ ಶಿಷ್ಯನ – ೩೧೨
ಮತ್ತಂ ಆ ಶಿಷ್ಯನ – ೩೧೩
ಮತ್ತಂ ಆ ಶಿಷ್ಯನು – ೩೧೧
ಮತ್ತಂ ಆ ಶಿಷ್ಯನು – ೩೧೫
ಮತ್ತಂ ಆ ಶಿಷ್ಯನು – ೩೭೨
ಮರ್ತ್ಯಲೋಕದ – ೫೯೦
ಮನವ ಸಕಲೇಂದ್ರಿಯ – ೩೫೯
ಮನುಮುನಿಯತಿ – ೩೨೫
ಮನುಮುನಿಯತಿ – ೩೨೬
ಮಹಾತತ್ವದಲ್ಲಿ – ೪೩೬
ಮಹಾವಾಯುವ – ೨೯೦
ಮಹಾವಾಯುವವ – ೮೪೦
ಮುಂದೆ ಅನಂತಕೋಟಿ – ೨೮೭
ಮುಂದೆ ಹೇಳಿದ – ೬೬೮
ಮೂರುಲೋಕವ – ೮೬೭
ಮೂಲಾಧಾರವ – ೨೯೨
ಮೂರವಸ್ಥೆಯ – ೭೯೬
ಮೇರುಗಿರಿ ಶಿಖರ – ೮೭೦
ಮೇರುಗಿರಿ ಶಿಖರ – ೮೭೧

ರ

ರುಧಿರದಲ್ಲಿ – ೫೭೩
ರೂಪಿಲ್ಲದ ಪುಸ್ತಕ – ೮೯೦
ರೂಪಿಲ್ಲದವನ – ೮೧೮
ರೂಪಿಲ್ಲದೆ ಇಹುದು – ೮೨೯
ರೇಚಕ ಪೂರಕ – ೨೮೩
ರೇಚಿಸಿ ರೇಚಿಸಿ – ೨೮೨

ಲ

ಲಿಂಗವೇ ಪತಿಯಾಗಿ – ೩೬೯
ಲಿಂಗ ಪ್ರಸಾದವ – ೩೬೭
ಲಿಂಗವೆಂಬುದು – ೪೯೦

ವ

ವಜ್ರಾಸನ – ೩೫೭
ವಶಷಸ ಎಂಬ – ೭೧೮

ವಾಕ್ ಶ್ರೋತ್ರ — ೭೨೫
ವಾಗಾದಿಗಳೈದು — ೮೦೩
ವಾಯುವೆ ಅಂಗ — ೫೧೬
ವಾಯುವೆ ಅಂಗ — ೫೨೬
ವಿಶ್ವಾತ್ಮ ತತ್ವ — ೪೪೧
ವಿಶುದ್ಧಿ ಚಕ್ರ — ೪೬೭
ವೇದಾಂತತತ್ವ — ೯೧೦
ವೇದಾಗಮಪುರಾಣ — ೮೧೧
ವ್ಯೋಮವೆ ಅಂಗ — ೫೧೭
ವ್ಯೋಮವ್ಯಾಪಿ — ೭೧೭

ಶ, ಷ, ಸ,

ಶರಣನ ಸ್ವಾನುಭಾವ — ೮೬೪
ಶರಣನು ಸ್ವಾನುಭಾವದಲ್ಲಿ — ೮೬೫
ಶರಣ ಸತ್ತು — ೮೬೬
ಶಬ್ದ ಸ್ಪರ್ಶ — ೩೨೩
ಶಾಂತ್ಯತೀತೋತ್ತರ — ೪೭೨
ಶಾಂತ್ಯತೀತೋತ್ತರ — ೩೮೪
ಶಿವಜಾಗ್ರ — ೯೦೧
ಶಿವತತ್ವವಿಲ್ಲದಂದು — ೯೦೩
ಶಿವನು ಐದಕ್ಷರ — ೮೩೭
ಶಿವನು ಐದಕ್ಷರವು — ೮೩೮
ಶಿವತತ್ವದ — ೬೨೯
ಶಿವತತ್ವದ — ೬೩೧
ಶಿವತತ್ವದ — ೬೩೨
ಶಿವತತ್ವದ — ೬೩೩
ಶಿವತತ್ವದ — ೬೩೪
ಶಿವತತ್ವದ — ೬೩೫
ಶಿವತತ್ವವೈದು — ೬೭೮
ಶ್ರೀಗುರುಲಿಂಗ — ೩೬೦
ಶ್ರೀಗುರುವಿನ — ೩೫೪
ಶ್ರುತಿವಿಧಿಸಿದ — ೩೩೪
ಶ್ರೀಮನ್ನಿರಾಳ — ೧
ಶ್ರೋತ್ರ ತ್ವಕ್ಕು — ೫೭೧
ಶ್ರೋತ್ರ ತ್ವಕ್ಕು — ೫೯೩
ಶ್ರೋತ್ರದ್ವಾರಂಗಳೆರಡು — ೬೯೧
ಶ್ಲೋಕದೊಳಗಣ — ೮೦೫
ಷಟ್‌ಸ್ಥಲಬ್ರಹ್ಮ — ೮೨೦
ಷಷ್ಠಿಮಾಸಕ್ಕೆ — ೨೫೬
ಸಂಸಾರವೆಂಬ ಸಾಗರ — ೩೨೦
ಸಂಸಾರವೆಂಬ ಅರಣ್ಯ — ೩೨೧
ಸಕಲತತ್ವವಿಲ್ಲದಂದು — ೮೯೭
ಸಕಲವೇದಾಗಮ — ೨೮೫
ಸಕಲಾಗಮ — ೮೯೪
ಸಚ್ಚಿದಾನಂದ — ೩೪೦
ಸಚ್ಚಿದಾನಂದ — ೩೮೮
ಸದ್ಯೋಜಾತ — ೪೫೮
ಸರ್ಪನ ಬಾಯಲ್ಲಿ — ೮೫೯
ಸರ್ಪನ ಹೆಸರ — ೮೬೧
ಸಪ್ತಕೋಟಿ ಮಹಾ — ೩೯೭
ಸಪ್ತಕೋಟಿ ಮಹಾ — ೫೮೯
ಸಪ್ತ ಧಾತುಗಳಿಂದ — ೨೬೧
ಸಮತೆ ಸಮಾಧಾನ — ೮೫೨
ಸರ್ವಾತ್ಮತತ್ವ — ೪೪೦
ಸರ್ವೇಂದ್ರಿಯಂಗಳಿಗೆ — ೩೫೮
ಸಾದಾಖ್ಯ ಉತ್ಪತ್ಯ — ೪೭೩
ಸುಕುರ್ಮದಿಂದ — ೨೫೯
ಸುಷುಪ್ತಿಯಾವುದು — ೬೭೧
ಸೂರ್ಯನ ಗ್ರಹಣದಂತೆ — ೩೨೨
ಸೊಂಬರಿಪರು — ೮೫೩
ಸೊಂಬರಿಪರು ನಿರಾಳ — ೮೫೪
ಸ್ವಪ್ನವಾವುದು — ೬೭೦
ಸ್ವಯಾತ್ಮತತ್ವದಲ್ಲಿ — ೪೪೩
ಸ್ವಾಧಿಷ್ಠಾನಚಕ್ರ — ೪೬೪
ಸ್ವಾಧಿಷ್ಠಾನಚಕ್ರದ — ೭೪೫
ಸ್ವಾಧಿಷ್ಠಾನಚಕ್ರದ — ೨೯೭
ಸ್ಥೂಲಕಾಯ ಶರೀರ — ೨೬೦
ಸ್ಥೂಲತನುವಿನಲ್ಲಿ — ೫೬೮

ಹ

ಹೀಂಗೆ ಅರಿದು – ೩೫೩
ಹೀಗೆಂದು ಆ ಶಿಷ್ಯಂಗೆ – ೩೭೧
ಹುಸಿ ವರ್ಣವಾಗಿ – ೮೬೦
ಹೆಣ್ಣೆಂಬ ಭೂತವ – ೯೧೬
ಹೆಣ್ಣೆಂಬನೆ ಹೆಣ್ಣಲ್ಲ – ೮೧೬
ಹೊನ್ನ ಬಿಟ್ಟಡೆ – ೭೭೫
ಹೊನ್ನ ಬಿಟ್ಟರೇನು – ೭೭೬
ಹೊನ್ನ ಬಿಡದೆ – ೭೭೪
ಹೊನ್ನು ಹೆಣ್ಣು ಮಣ್ಣು – ೯೧೮
ಹೊನ್ನು ಹೆಣ್ಣು ಮಣ್ಣೆಂಬ – ೭೬೮
ಹೊನ್ನು ಹೆಣ್ಣು ಮಣ್ಣೆಂಬ – ೭೭೧
ಹೋಹ ವಾಯುವಂ – ೨೮೬
ಹೃದಯ ಕಮಲ – ೬೦೫

## ಮಡಿವಾಳಪ್ಪನ ನಿಜಲೀಲಾಮೃತ ವಚನ

ಅ, ಆ

ಅಂತಾದ ಕೈಲಾಸ – ೯೬೨
ಅಜ್ಞಾನವಳಿದು – ೯೪೨
ಅತತತತ – ೯೯೨
ಅದೇ ಅದೇ ಎಂಬಲ್ಲಿ – ೯೬೦
ಅನ್ಯವಿಲ್ಲದ ಅರ್ಚನ – ೯೪೮
ಅರವು ತೋರಿಕೆ – ೯೨೪
ಆಗ ಆದುದು (ಸ್ವಪ) – ೯೫೧
ಆ ಗುರು ಶಿಷ್ಯ – ೯೬೬
ಆ ಚಿದ್ಬೈಲಮೂರ್ತಿ – ೯೭೩
ಆ ಪರಶಿವ ತಾನೆ – ೯೮೮
ಆ ಪರಶಿವನ ಗರ್ಭದಲ್ಲಿರ್ದ – ೯೮೨
ಆ ಪರಶಿವನ ಅಷ್ಟಾಂಗ – ೯೮೩
ಆ ಪರಶಿವನ ಮೂಲ – ೯೮೪
ಆ ಪರಶಿವನ ಮಾಯಾ – ೯೮೫
ಆ ಪರಶಿವನ ಚಿದ್ವಿಲಾಸ – ೯೮೬
ಆ ಪರಶಿವನ ಚಿತ್ತ – ೯೮೭
ಆ ಪರಶಿವನ ನಿಜ – ೯೮೯
ಆ ಪರಶಿವನ ನಿರ್ಭಯವೇ – ೯೯೦
ಆ ಪರಶಿವನೇ ತಾನೇ – ೯೮೦
ಆ ಪರಶಿವನೊಳಗಿರ್ದ – ೯೮೧
ಆಸೆ ಇಲ್ಲ – ೯೪೩

ಇ, ಈ

ಇಲ್ಲ ಇಲ್ಲೆಂಬೊ – ೯೫೦
ಈ ಪೊಡವಿಯ – ೯೬೩
ಈ ಭುವನದಲ್ಲಿ – ೯೫೬

ಒ,

ಒಂದೇ ಆಗಿರ್ದ – ೯೯೫
ಒಂದು ಮರವ – ೯೫೩
ಒಂದು ರಾಷ್ಟ್ರದಲ್ಲಿ – ೯೫೫

ಕ, ಗ, ಘ

ಕಸ್ತೂರಿಮೃಗವು – ೯೫೪
ಕೊಡಲಿ ಪಿಡಿಯ – ೯೫೭
ಗುರು ಶಿಷ್ಯ – ೯೬೫
ಗುರು ಶಿಷ್ಯರೆಂಬಲ್ಲಿ – ೯೩೦
ಘನಲಿಂಗ ಅತೀತ – ೯೪೦

ಚ, ಜ

ಚಿತ್ತೆಂಬೊ ಬಿತ್ತು – ೯೬೮
ಚಿತ್ಪ್ರಕಾಶವು ತಾನೆ – ೯೩೨
ಜಯ ಜಯ ನಿರುಪಮ(ಸ್ವವ) – ೧೦೦೦

ತ, ದ, ನ

ತಂದೆಯ ವಿಕಾರದಿಂದ – ೯೩೬
ತನ್ನ ತಾನರಿಯದ – ೯೨೮
ತನ್ನ ವಿನೋದಕ್ಕೆ – ೯೪೯
ತಾರಕಾಕೃತಿಯ – ೯೯೧
ತಾನೆ ಅಖಂಡ – ೯೩೧

ತಾನೆ ಎರಡಾಗಿ — ೯೪೨
ದಯಾ ಧರ್ಮ — ೯೩೮
ನನ್ನ ಕಾಲು — ೯೫೯
ನಿಃಕಳ ನಿರುಪಮ — ೯೬೨
ನಿರ್ಬಯಲು (ಸ್ವವ) — ೯೨೧
ನಿರ್ಬಯಲು ಮಹಾ — ೯೩೫
ನಿರಂಜನ ತನಗೆ — ೯೭೯

ಪ

ಪರಶಿವನ ಕಾರಣ — ೯೨೫
ಪರಶಿವನ ನಿಶ್ಶೂನ್ಯ — ೯೨೮
ಪರಶಿವನ ಮಹಾ — ೯೨೬
ಪರಶಿವನ ಶೂನ್ಯ — ೯೨೨
ಪರಶಿವನ ಷಟ್‌ಕಾಯ — ೯೨೯
ಪರಶಿವನ ಸೂಕ್ಷ್ಮ — ೯೨೪
ಪುಣ್ಯ ವಿಷ್ಣು — ೯೩೨

ಬ, ಭ, ಮ

ಬಂದದ್ದು ಅತಿಗಳೆಯದೆ — ೯೪೧
ಬಂದು ಬಂದದ್ದರಿಯದೆ — ೯೩೪
ಬೈಲ ಬ್ರಹ್ಮವು (ಸ್ವವ) — ೯೫೭
ಬ್ರಹ್ಮನೆಂಬ ಪೂಜಾರಿಗೆ — ೯೯೯
ಭಕ್ತ ಮಹೇಶ — ೯೪೫
ಭೂಮಿ ಜಲ ಅಗ್ನಿ — ೯೯೪
ಮಾಯ ಛಾಯ — ೯೭೬
ಮಾಯೆ ಹುಟ್ಟಿ — ೯೬೯
ಮೊದಲೇ ಭಕ್ತ — ೯೩೯

ರ

ರೂಪ ತೋರಿಕೆಯೇನೂ — ೯೭೩
ರೂಪಾದ ಮೇಲೆ — ೯೨೦

ಶ, ಸ

ಶಿವ ಜೀವರಿಲ್ಲದಂದು — ೯೭೨
ಶ್ರೀಗುರು ಬಸವದೇವರು — ೯೯೮
ಶ್ರೀಮತ್ ಸಚ್ಚಿದಾನಂದ — ೯೬೧
ಸತ್ಯವೇ ಗುರುವಾಗಿ — ೯೯೨
ಸತ್ಯ ಸದಾಚಾರ — ೯೪೬
ಸದ್‌ಭಕ್ತನ — ೯೯೨
ಸಾವುಯಿಲ್ಲಾ -- ೯೪೪
ಸುಖಿಯಾಗಿ ಸುಖ — ೯೩೩
ಸುಳ್ಳಪ್ಪನ ಮಗ — ೯೫೮
ಸುಳ್ಳು ಸುಳ್ಳು — ೯೨೭
ಸ್ಥೂಲತನುವಿನೊಳು — ೯೯೩

ಹ

ಹಲವು ಲೀಲೆಯೊಳಗೆ — ೯೬೪
ಹೃದಯ ತೇರಿಕೆಯೇನೂ — ೯೭೫


## ಮುಮ್ಮಡಿ ಕಾರ್ಯೇಂದ್ರನ ವೇದಸಂಜೀವಿನಿ


ಅ, ಆ

ಅಂಗದೊಳಗಿರ್ಪ ಶಕ್ತಿ — ೧೦೦೪
ಅಖಂಡ ಕಾಲಾತೀತ — ೧೦೨೩
ಅಖಂಡ ಪರಿಪೂರ್ಣ — ೧೦೯೭
ಅಗ್ನಿಯಲ್ಲಿ ಕಾಣಿಸುವ — ೧೦೫೪
ಆಕಾಶ ವಿಷಯಕ್ಕೆ — ೧೦೮೬
ಆಕಾಶವೇ ಸೂಕ್ಷ್ಮವು — ೧೦೩೫
ಆತ್ಮಧರ್ಮವೇ — ೧೦೮೫
ಆದಿ ಬಿಂದುವೇ — ೧೧೧೦
ಆದಿಯಲ್ಲಿ ಪ್ರಣವ — ೧೦೦೮
ಆಧಾರದಲ್ಲಿ ಆಚಾರಲಿಂಗ — ೧೦೯೮
ಆಧಾರಾದಿ ಷಟ್ಚಕ್ರಂಗಳ — ೧೦೯೨

ಇ

ಇಂದ್ರಿಯಂಗಳಲ್ಲಿ — ೧೦೮೦
ಇಂದ್ರಿಯಸ್ವರೂಪ — ೧೦೧೪

ಎ, ಏ, ಐ, ಒ

ಎಲ್ಲಾ ಮಹಿಮೆಯೂ — ೧೦೪೧
ಏಕಮಾಗಿರ್ಪ — ೧೦೦೨

ಐಶ್ವರ್ಯದಿಂದ – ೧೦೮೪
ಒಳಗೆ ಪಾಪವು – ೧೦೩೮

ಕ, ಗ, ಘ

ಕರಣಂಗಳೇ ಸ್ಥೂಲ – ೧೦೩೦
ಕರ್ಣದಲ್ಲಿ ಲಯವಂ – ೧೦೨೯
ಕಳಾಯುಕ್ತವಾಗಿ – ೧೦೧೮
ಕಾಯವೆಂಬ ಪುರವ – ೧೦೫೩
ಕೇವಲ ಸದ್ರೂಪ – ೧೦೫೮
ಗಣಾತೀತನಪ್ಪ – ೧೦೨೨
ಗುರುವು ಮನದಲ್ಲಿ – ೧೦೧೩
ಗುರುವೆ ನಿನ್ನ – ೧೦೧೯
ಗುರುವೆ ನೀನು – ೧೦೨೦
ಗುರುವೆ ಪರಬ್ರಹ್ಮ – ೧೦೯೪
ಗೊಲ್ಲರಹಳ್ಳಿಯಲ್ಲಿ – ೨೦೪೫
ಗೋಳಕಾಕಾರ – ೧೦೭೨
ಘ್ರಾಣಜಿಹ್ವಾ – ೧೦೬೪

ಚ, ಜ

ಚಂದ್ರ ಮಂಡಲ – ೧೦೩೭
ಚಿತ್ತಿಗೆ ಸತ್ತೇ – ೧೧೦೬
ಚಿತ್ತೇ ಶಿವನು – ೧೧೦೫
ಚಿದ್ರೂಪವಾದ – ೧೧೦೧
ಜಂಗಮ ಫಲ – ೧೦೬೩
ಜಾಗ್ರದೊಳಗೆ – ೧೦೮೭
ಜಿಹ್ವೆಯಲ್ಲಿ ಮೃತ್ಯು – ೧೦೨೪
ಜೀವನಿಗೆ ಮನಸ್ಸೇ – ೧೦೭೯
ಜೀವನು ತನಗೆ – ೨೦೮೯
ಜೀವ ಪಶುಗಳಂ – ೧೦೫೬
ಜ್ಞಾನವೇ ಮೂಲ – ೧೦೪೩

ತ, ದ, ನ

ತತ್ತ್ವಮಸಿ ಎಂದರೆ – ೧೧೦೯
ತಿಷ್ಠತೀತಿಸ್ಥಾಣು – ೧೦೫೨
ದಕ್ಷಿಣದಲ್ಲಿರ್ಪ – ೧೦೭೫
ದೀಕ್ಷಿತನು ಯಜನಾರ್ಥಿ – ೧೦೦೬
ನಾಸಿಕದಲ್ಲಿ ಸಂಚರಿಸು – ೧೧೦೮
ನಿಜಮಹಾತ್ಮ್ಯ – ೧೦೬೨
ನಿನ್ನ ಕಂಗಳಲ್ಲಿ – ೨೦೨೮
ನಿನ್ನ ಕಂಗಳ ಭ್ರಮೆ – ೧೦೨೫
ನಿಷ್ಕಳಂಕಾತ್ಮನು – ೧೦೦೨
ನೀರು ತನ್ನೊಳಗಿರುವ – ೨೦೫೯

ಪ

ಪಂಚಭೂತಂಗಳಂ – ೧೦೭೮
ಪರಮಾತ್ಮನು ಸ್ವಲೀಲಾ – ೧೦೧೧
ಪಶುಗಳು ಆಹಾರ – ೧೦೮೨
ಪಶ್ಚಿಮದಲ್ಲಿರ್ಪ – ೧೦೩೨
ಪುರುಷನ ವೀರ್ಯವೇ – ೧೦೬೧
ಪೂರ್ವದಕ್ಷಿಣೋತ್ತರದ – ೧೦೬೮
ಪೂರ್ವಪಶ್ಚಿಮ – ೧೦೬೯
ಪೂರ್ವಾದಿಯಾಗಿ – ೧೦೯೬
ಪೃಥ್ವಿಗೆ ಮೈಯೆಲ್ಲ – ೧೦೨೧
ಪೃಥ್ವಿಯಲ್ಲಿ ಜನನವೂ – ೧೦೧೭
ಪೃಥ್ವಿಯಪ್ಪುಗಳಿಂದ – ೧೦೬೭
ಪೃಥ್ವಿಯು ಜಲದಿಂದ – ೧೦೮೩
ಪೃಥ್ವಿಯೇ ಬಹಿರಂಗ – ೧೦೨೩
ಪೃಥ್ವಿಯೇ ಶೂದ್ರನು – ೧೦೭೧
ಪೃಥ್ವಿಯೇ ಸ್ಥಾವರ – ೧೦೫೫
ಪೃಥ್ವ್ಯಪ್ತೇಜೋ – ೧೦೭೦
ಪೃಥ್ವ್ಯಪ್ತೇಜೋ – ೧೦೭೭
ಪೃಥ್ವಿಚಕ್ರಕ್ಕೆ – ೧೦೯೯
ಪ್ರಜೆಗಳ ಅಳಿಯು – ೧೦೧೬
ಪ್ರಣವಸ್ವರೂಪ – ೧೦೦೩
ಪ್ರಪಂಚವೆಂಬ – ೧೧೦೭

ಬ, ಭ, ಮ

ಬಾಲ್ಯವೇ ಬ್ರಹ್ಮ – ೧೦೪೨
ಬೀಜದೊಳಗಿಹ – ೧೦೦೯
ಬ್ರಹ್ಮಾಂಡವೇ ಸ್ಥಾವರ – ೧೦೫೦

ಭಂಡಾರದೊಳಗಿರ್ಪ – ೧೦೬೦
ಭಕ್ತಿಯೆಂಬ ಪಾಲನ್ನು – ೧೦೪೪
ಭಾವವೆಂಬುದು – ೧೧೦೨
ಮನಸ್ಸೇ ಅಂತಃಕರಣ – ೧೦೪೬
ಮನುಷ್ಯರಿಗೆ ಅಂತರ – ೧೦೯೦
ಮಾನಸ ಸರೋವರ – ೧೦೦೫

ರ, ಲ, ವ

ರಜೋಗುಣದಿಂದ – ೧೦೪೮
ರುಚಿಯಲ್ಲಿ ಸಂಹಾರ – ೧೦೧೫
ಲಿಂಗವನಾಚರಿಸುವ – ೧೦೧೨
ವಟಮೂಲವಾಸಿ – ೧೦೩೯
ವರ್ತಮಾನವೇ – ೧೦೩೩
ವಸಂತಕಾಲವೇ – ೧೦೪೯
ವಾಚಾತೀತವೂ – ೧೦೬೬
ವಿರಾಡ್ರೂಪನಾದ – ೧೦೨೬

ಶ, ಸ

ಶಬ್ದಮಧ್ಯದಲ್ಲಿರ್ಪ – ೧೦೫೧
ಶರೀರವೇ ಸ್ಥೂಲವು – ೧೦೩೬
ಶರೀರವೇ ಹೇಯದ – ೧೦೭೪
ಶಿವನೇ ಪುರುಷನು – ೧೦೯೧
ಶಿವಬಿಂದುವೇ – ೧೦೪೦
ಸತ್ಯವೇ ಪರಮನು – ೧೦೬೫
ಸತ್ಯಸ್ವರೂಪಮಾದ – ೧೦೮೧
ಸತ್ವಸ್ವರೂಪನಾದ – ೧೦೪೭
ಸತ್ತೆಂದರೆ ಸತ್ತೇ – ೧೧೦೩
ಸತ್ತೇ ಬಿಂದುರೂಪ – ೧೧೦೪
ಸಪ್ತ ಧಾತುಗಳೆಂಬ – ೧೦೨೭
ಸೂರ್ಯನೇ ತೀರ್ಥವು – ೧೦೩೪
ಸೂಕ್ಷ್ಮದಿಂದಲೇ ಸ್ಥೂಲ – ೧೦೫೭
ಸೃಷ್ಟಿ ಹೇತುವಾದ – ೧೦೭೬
ಸ್ಥಾವರದಲ್ಲಿ ಜೀವನು – ೧೦೮೮
ಸ್ಥೂಲ ಶರೀರವೇ – ೧೦೩೧

ಹ

ಹಕಾರವೇ ಶಿವನು – ೧೧೦೦
ಹಗಲಿದ್ದಲ್ಲಿ ಕತ್ತಲೆ – ೧೦೧೦
ಹ ಶಬ್ದಕ್ಕೆ ಹರಣಾರ್ಥ – ೧೦೯೩
ಹೃದಯದಲ್ಲಕ್ಷರ – ೧೦೯೫

ಅ, ಆ

ಅಂಕುರ– ಮೊಳಕೆ
ಅಂತಕ– ಯಮ
ಅಂತಕಾಂತಕ– ಯಮನಿಗೆ ಯಮನಾದವನು, ಶಿವ
ಅಂಧಕ– ಕುರುಡ
ಅಗ್ಗವಣೆ– ಪೂಜೆಯ ನೀರು
ಅತಿಗಳೆ– ಕಡೆಗಣಿಸು, ತ್ಯಜಿಸು.
ಅನಲ– ಬೆಂಕಿ
ಅನಿಲ– ಗಾಳಿ
ಅನಿಮೇಷ– ಅನಿಮಿಷ, ದೇವತೆ
ಅಪ್ಪು– ನೀರು
ಅಪ್ರದರ್ಶನ– ತೋರದಿರುವುದು, ಕಾಣದಿರುವುದು.
ಅಬದ್ಧ– ತಪ್ಪು, ಸುಳ್ಳು
ಅರ್ಬುದ– ಹತ್ತುಕೋಟಿ
ಅಮಳೋಕ್ಯ– ಗಂಟಲು
ಅಲೆ– ತೊಂದರೆ, ಪೀಡೆ
ಅವಗ್ರಹಿಸು– ಹಿಡಿ
ಅಸ್ತಿ– ಅಸ್ಥಿ, ಎಲುಬು, ಮೂಳೆ
ಅಹಸ್– ಅಹರ್, ಹಗಲು, ಬೆಳಕು
ಅಹಿಕುಂಡಲಿ– ಸರ್ಪಗಳ ಕಿವಿಯಾಭರಣ
ಆರಂಭಗಾರ– ಒಕ್ಕಲಿಗ
ಆರೋಗಣೆ– ಊಟ
ಆಲಯ– ಮನೆ

ಇ, ಈ

ಇಂಬು– ಎಡೆ, ಆಶ್ರಯ
ಇಕ್ಷು– ಕಬ್ಬು
ಇರುಳು– ರಾತ್ರಿ
ಈಷದ್ವಿಕಸನ– ಅರ್ಧ ಅರಳಿದ

ಉ, ಊ

ಉಚ್ಚಿಯ ಪುಚ್ಚಿ– ಯೋನಿ
ಉಚ್ಛಿಷ್ಟ– ಶೇಷ, ಉಂಡು ಉಳಿದ ಎಂಜಲು
ಉದರ– ಹೊಟ್ಟೆ
ಉದುಂಬರ– ಔದುಂಬರ, ಅಶ್ವತ್ಥವೃಕ್ಷ
ಉದ್ದಂಡವೃತ್ತಿ– ದರ್ಪ, ಅಹಂಕಾರ
ಉದ್ಭಿಜ– ಭೂಮಿಯಿಂದ ಹುಟ್ಟುವ ಮರ ಬಳ್ಳಿ ಧಾನ್ಯ ಇತ್ಯಾದಿ
ಉನ್ಮನಿ– ಮಾನಸಿಕಸ್ತರ, ಬ್ರಹ್ಮರಂಧ್ರ ಪ್ರದೇಶದ ಮೇಲುಭಾಗ
ಉನ್ಮೀಲನ– ತೆರೆಯುವಿಕೆ
ಉಪಹತಿ– ಕೇಡು. ತೊಂದರೆ
ಉಪೇತ– ಕೂಡಿದ, ಸಂಬಂಧಿಸಿದ
ಉಮರಾವತ– ಸರದಾರ
ಉಳುವಿಡು– ಅಪೂರ್ಣಮಾಡು, ಉಳಿಸಿಹೋಗು
ಊನ– ಕುಂದು, ಕೊರತೆ, ಬೇನೆ.

ಒ

ಒಡ್ಡಾದ– ಆಧಾರವಾದ.
ಒಬ್ಬುಳಿ– ಗುಂಪು

ಕ, ಖ

ಕಂಧರ– ಕೊರಳು
ಕಂಬೆಚ್ಚು– ತಂತಿಮಾಡಲು ಅಕ್ಕಸಾಲಿಗರು ಬಳಸುವ ಉಪಕರಣ.
ಕರ್ಕಾಟಕ– ಮೊಸಳೆ
ಕಕ್ಷ– ಕಂಕುಳು, ಬಗಲು
ಕಠಾಂತ– ಕದಿಂದ ಠದವರೆಗೆ
ಕಚ್ಚೆಗಡಕ– ವ್ಯಭಿಚಾರಿ
ಕರ್ಣ– ಕಿವಿ

ಕರ್ಣಿಕೆ–ಕಿವಿಯಾಭರಣ
ಕಡೆಗಾಣು–ದಾಟು, ಮೋಕ್ಷಹೊಂದು
ಕತಿಪಯ–ಕೆಲವು, ಹಲವು
ಕದಳಿ–ಬಾಳೆ
ಕಪಿ–ಮಂಗ
ಕಪಿತ್ಥ–ಬೆಳವಲಹಣ್ಣು
ಕಮಠ–ಆಮೆ
ಕರಣ–ಇಂದ್ರಿಯ
ಕರತಲಾಮಲಕ–ಅಂಗೈನೆಲ್ಲಿ, ಸುಲಭಗೋಚರ
ಕರಪೂತ–ಕೈಯಿಂದ ಅಪ್ಪಳಿಸಿದ
ಕರಮಾರ್ಗ–ಉನ್ನತಮಾರ್ಗ
ಕರಿ–ಆನೆ
ಕವಳಿಗೆ–ಪೆಟ್ಟಿಗೆ
ಕಶ್ಚ–ಒಂದು ಬಗೆಯ ಸರ್ಪ
ಕಳಪುಲ್ಲು–ಬತ್ತದ ಹುಲ್ಲು
ಕಿಸಬಾಯಿ–ಒಂದು ಬೈಗುಳ ವಿಶೇಷ, ತೆರೆದಬಾಯಿ
ಕಿಸುಕುಳ–ಕ್ಷುದ್ರ, ಹೇಯವಾದ,ಹೇಸಿಕೆ
ಕುಕ್ಕುಟಾಂಡ–ಕೋಳಿತತ್ತಿ
ಕುಡ್ಯ–ಗೋಡೆ
ಕುರುಹು–ಗುರುತು, ಚಿಹ್ನೆ
ಕುಳಿಕ–ವಿಷಸರ್ಪ
ಕೂರ್ಪದ್ವಯ–ಎರಡು ಹುಬ್ಬು
ಕೂರ್ಮ–ಆಮೆ
ಕೆಡೆಮೆಟ್ಟು–ಕೆಳಕ್ಕೆಹಾಕಿ ತುಳಿ, ಮೆಟ್ಟಿ ತುಳಿ
ಕ್ಲೇಶ–ತೊಂದರೆ, ದುಃಖ, ನೋವು.
ಕೈಗೊಳಿಸು–ಕೊಡು
ಕೊರಜ–ಕೊರವ, ಅಲೆಮಾರಿ ಜನಾಂಗ
ಕೊಸರು–ಬಿಡಿಸಿಕೊ, ಬೇರ್ಪಡಿಸು
ಕೋಟಲೆ–ತೊಂದರೆ, ಹಿಂಸೆ
ಕೋಡು–ಶಿಖರ, ತುದಿ
ಕೋಳುಕೊಟ್ಟು–ಮಾರಿ, ವಿಕ್ರಯಿಸಿ
ಕೌಂಸಾಳ–ಕಂಚಿನತಾಳ,
ಕೌಪ–ಲಂಗೋಟಿ
ಕೃಷ್ಣವರ್ಣ–ನೀಲಿಬಣ್ಣ, ಕಪ್ಪುಬಣ್ಣ
ಕ್ಷಯ–ನಾಶ
ಕ್ಷೀರ–ಹಾಲು
ಖಟ್ವಾಂಗ–ಶಿವನ ಕೈಯಲ್ಲಿರುವ ಎಲುವಿನ ಗದೆಯಾಕಾರದ ಆಯುಧ
ಖರ್ವ–ಒಂದುಸಾವಿರ ಕೋಟಿ
ಖೂನ–ಕೂನ, ಗುರುತು, ಪರಿಚಯ

ಗ, ಘ

ಗಡಹ–ಬಾಗಿಲ, ದ್ವಾರ
ಗುರ್ತ–ಗುರುತು, ಪರಿಚಯ
ಗೋಮಯ –ಆಕಳ ಸಗಣೆ
ಘ್ರಾಣ–ಮೂಗು
ಘೃತ–ತುಪ್ಪ

ಚ, ಛ

ಚಕ್ರವಾಳ–ಚಕೋರಪಕ್ಷಿ
ಚಕ್ಷು–ಕಣ್ಣು
ಚಿಪ್ಪಜ–ಋಷಿಯ ಹೆಸರು
ಚಿಳುಕಜ–ಋಷಿಯ ಹೆಸರು
ಚೇತಸ್ಸು–ಚೇತನ, ಜೀವ
ಚೋಹ–ಚೋಷ್ಯ, ಹೀರಿಕೊಳ್ಳುವ ಪದಾರ್ಥ
ಛತ್ತೀಸ–ಮೂವತ್ತಾರು
ಛಾಯೆ–ಮಾಯ

ಜ

ಜಂಬುಕ–ನರಿ
ಜರಕನೆ ಜಾರಿ–ಒಮ್ಮೆಲೆ ಜರೆದು
ಜರಾಯುಜ–ಗರ್ಭಕೋಶದಿಂದ ಹುಟ್ಟಿದ
ಜಲ್ಪ–ಮಾತು, ಹೇಳಿಕೆ
ಜಾತಿಸ್ಮರತ್ವ–ಪೂರ್ವಜನ್ಮಸ್ಮರಣೆ

ಜಾನುದ್ವಯ–ಎರಡು ಮೊಣಕಾಲು
ಜಾಮಾತೃ–ಅಳಿಯ
ಜಾಯೆ (ಜಾಯಾ)–ಹೆಂಡತಿ
ಜಿಹ್ವೆ–ನಾಲಗೆ
ಜೀನಸು–ಫಲ, ಧಾನ್ಯ
ಜೂಗು–ತೂಗಾಡು
ಜೋಕ–ತೂಕಡಿಕೆ

ಡ, ತ

ಡಾದಿಫಾಂತ–ಡ ದಿಂದ ಫ ದವರೆಗೆ
ತಂಡಜ–ಒಂದು ಯುಗದ ಹೆಸರು
ತಗುಳು–ಓಡಿಸು, ಬೆದರಿಸು
ತದುಪರಿ–ಆಮೇಲೆ, ಅನಂತರ
ತಳ್ಳಿ–ತಂಟೆ
ತಿರ್ಯಕ್–ಪಶು, ಪಕ್ಷಿ ಮುಂತಾದ ಪ್ರಾಣಿ ವರ್ಗ
ತಿಲ–ಎಳ್ಳು
ತೀವು–ತುಂಬು
ತೇಜ–ಅಗ್ನಿ
ತೈಲ–ಎಣ್ಣೆ
ತ್ರಯ–ಮೂರು
ತೃಷ್ಣೆ–ನೀರಡಿಕೆ, ಬಯಕೆ
ತ್ವಕ್ಕು–ಚರ್ಮ

ದ, ಧ

ದಂದುಗ–ಭವಬಾಧೆ, ತೊಂದರೆ
ದಗ್ಧ–ಸುಟ್ಟ
ದರ್ಪಣ–ಕನ್ನಡಿ
ದರಹಸಿತ–ಮುಗುಳುನಗೆ
ದಶ–ಹತ್ತು
ದಿಟ–ಸತ್ಯ
ದಿಗ್ವಸನ–ದಿಕ್ಕೆಂಬ ಬಟ್ಟೆ
ದೀಪನ–ಬೆಳಗಿಸು
ದುಕೂಲ–ನಯವಾದ ರೇಶ್ಮೆಯ ಬಟ್ಟೆ
ದ್ರುಮ–ಮರ, ಸಂಸಾರವೃಕ್ಷ
ದೃಢಿಮ–ಪೌಷ್ಟಿಕ, ಶಕ್ತಿಯುತ
ದ್ವಾದಶ–ಹನ್ನೆರಡು
ಧಾವತಿ–ಶ್ರಮ, ಕಷ್ಟ
ಧೀವರ್ಣ–ಜ್ಞಾನವರ್ಣ
ಧೂಮ್ರ–ಹೊಗೆ
ಧೌತಾಂಬರ–ಶುಭ್ರಬಟ್ಟೆ, ಸಂಯಮವೆಂಬ ಬಟ್ಟೆ

ನ

ನಚ್ಚಿಸು–ಮೆಚ್ಚಿಸು
ನಲಗು–ಸುಖ, ಸಂತೋಷ
ನವಣೆಯಮರ್ಯಾದೆ–ಅಲ್ಪ, ಕಡಿಮೆ, ಕಿಂಚಿತ್ ಪ್ರಮಾಣ.
ನಾಗಸ್ವರ–ಶಹನಾಯಿ ಆಕಾರದ ಚಿಕ್ಕ ಊದುವ ವಾದ್ಯ
ನಾಭಿ–ಹೊಕ್ಕುಳ
ನಾಸಿಕ–ಮೂಗು
ನಿಕ್ಷೇಪ–ಹುಗಿದಿಟ್ಟ ಧನ
ನಿಜವಾಸನೆ–ಸಾತ್ವಿಕಮಾರ್ಗ, ಸದಾಚಾರ
ನಿಟಿಲ–ಹಣೆ
ನಿರ್ಭಿನ್ನ–ಭಿನ್ನವಾಗದ, ಅಖಂಡ
ನಿರ್ಮಾಲ್ಯ–ಪೂಜೆಮಾಡಿ ತೆಗೆದು ಹಾಕಿದ ಹೂವು
ನಿಮೀಲನ–ಎವೆ ಮುಚ್ಚುವುದು
ನಿವೃತ್ತಿ–ಬಿಡುಗಡೆ, ಮೋಕ್ಷ
ನೀಲಿಮ–ಕಪ್ಪುಮಿಶ್ರಿತ ನೀಲಛಾಯೆ
ನೆಗಳ್ದ–ಉದ್ಭವಿಸಿದ, ಹೊರಹೊಮ್ಮಿದ
ನೇಣು–ಹಗ್ಗ
ನೇತ್ರ–ಕಣ್ಣು
ನ್ಯಾಸ–ಇರುವಿಕೆ

ಪ

ಪಂಚವಿಂಶತಿ–ಇಪ್ಪತ್ತೈದು

ಪಚ್ಚಳೆ–ತ್ರಿವಳಿ, ಹೊಟ್ಟೆಯ ಒಂದುಭಾಗ
ಪಣ್ಯಾಚಾರ–ದುರ್ಮಾರ್ಗ
ಪದ್ಮ–ನೂರುಕೋಟಿ
ಪಯ–ಹಾಲು
ಪವನ–ಗಾಳಿ
ಪರಿವೇಷ್ಟಿಸು–ಸುತ್ತುವರಿ
ಪರಿಹೃತ–ಪರಿಹರಿಸಲ್ಪಟ್ಟ
ಪಲವಿಧ–ಹಲವು ರೀತಿ
ಪವನಾಶನ–ಗಾಳಿಯೇ ಆಹಾರವಾಗುಳ್ಳ
ಪರ್ಯಂಕ–ಪಲ್ಲಕ್ಕಿ, ಮಂಚ
ಪಸರ–ಸಂತೆಯೊಳಗಿನ ಅಂಗಡಿ
ಪಸಾರ–ಬೆಳಕು
ಪಾಣಿ–ಕೈ
ಪಾವಕ–ಬೆಂಕಿ
ಪೀತವರ್ಣ–ಹಳದಿ ಬಣ್ಣ
ಪುಲ್ಲೆ–ಜಿಂಕೆ
ಪೂತ–ಪವಿತ್ರವಾದ
ಪ್ರಕ್ಷಾಲಿಸು–ತೊಳೆ
ಪ್ರತಿಗ್ರಹ–ಸ್ವೀಕಾರ
ಪ್ರಳಾಪ–ದುಃಖ
ಪ್ರಾಕೃತ–ಸಾಮಾನ್ಯ, ಸಹಜವಾದ

ಬ, ಭ

ಬಟು–ವೊಗ್ಗು
ಬದಿರ–ಬಧಿರ, ಕಿವುಡ
ಬಲುಗಾರ–ಬಲವುಳ್ಳವ
ಬಳ್ಳಿಮಿರುಪು–ಬಳ್ಳಿಯಂತೆ ಹೊಳೆಯುವ
ಬಾದಿಲಾಂತ–ಬಕಾರದಿಂದ ಲಕಾರದವರೆಗೆ
ಬಾಹು–ತೋಳು
ಬಿಜಯಂಗೈ–ನಡೆದುಬರು, ದಯಮಾಡಿಸು
ಬಿತ್ತು–ಬೀಜ
ಬಿಸ–ಕಮಲದ ನಾಳ
ಬುದ್ಬುದಾಕಾರ–ನೊರೆಯಾಕಾರ
ಬೆಳುಪಾರ–ಅಕ್ಕಸಾಲಿಗರು ಬಂಗಾರ ಶುದ್ಧಿಗಾಗಿ ಬಳಸುವ ಒಂದು ರಸಾಯನ
ಬೊಡ್ಡಿ–ಗಿಡದ ಬುಡ
ಭಕ್ಷ–ಆಹಾರ
ಭವ–ಸಂಸಾರ
ಭಸ್ತ್ರಿ–ತಿದಿ, ಕಮ್ಮಾರ ಹವೆಹಾಕಲು ಉಪಯೋಗಿಸುವ ಚರ್ಮದ ಚೀಲ
ಭಾವಪರ್ಯಂಕ– ಭಾವವೆಂಬ ಮಂಚ, ಮನಪೀಠ
ಭುಂಜಿಸು–ಊಟಮಾಡು
ಭ್ರಮರ–ದುಂಬಿ

ಮ,

ಮಂಡೂಕ–ಕಪ್ಪೆ
ಮಂತುಗೋಲು–ಕಡೆಗೋಲು
ಮಚ್ಚಿ–ಮೆಚ್ಚಿಕೊಂಡು
ಮಜರೆ–ಮಝರೆ, ಕೊಂಡಾಟದ ಒಂದು ಉದ್ಗಾರ, ಮಾತು
ಮಜ್ಜನ–ಸ್ನಾನ, ಅಭಿಷೇಕ
ಮಲಕು–ಗಂಟು
ಮಸಿಮಣ್ಣಾಗು–ಹಾಳಾಗು, ನಾಶವಾಗು
ಮಸ್ತಕ–ತಲೆ, ಹಣೆ
ಮತ್ಸ್ಯ–ಮೀನು
ಮಾಕೋಟ–ಮಹಾಕೂಟ ಕ್ಷೇತ್ರ
ಮಾರುತ–ಗಾಳಿ
ಮುಕುಳಿತ–ಮುಗಿದ
ಮುಕುಳಿಕರ–ಮುಗಿದ ಕೈ
ಮೂಗ–ಮೂಕ, ಬಾಯಿಯಿಲ್ಲದವ
ಮೂಡೆ–ಮೂಟೆ, ಗಂಟು
ಮೂತ್ರದ ಕುಣಿ–ಯೋನಿ

ಮೆದಿ–ಹುಲ್ಲಿನ ಸಿವುಡು
ಮೋಟ–ಮುಂಡ, ಅವಯವಹೀನ

ಯ, ರ, ಲ,

ಯಜನ–ಯಜ್ಞಮಾಡುವುದು
ರಜಕ–ಅಗಸ
ರುಧಿರ–ರಕ್ತ
ರೇಣು– ಕಣ, ಧೂಳು
ರೋಮ–ಕೂದಲು
ರೋಮಜ–ಒಬ್ಬ ಋಷಿಯ ಹೆಸರು
ಲಂಬಿಕಾಸ್ಥಾನ– ಅಂಗುಳ, ಗಂಟಲಿನ ಒಂದು ಭಾಗ
ಲಬ್ಧ–ಹೊಂದಿದ, ಪ್ರಾಪ್ತವಾದ
ಲಯ–ನಾಶ
ಲಲಾಟ–ಹಣೆ
ಲಾಜಾ–ಬತ್ತದ ಅರಳು
ಲಾಜಾಹೋಮ–ವಿವಾಹ ಕಾಲದಲ್ಲಿ ಮದುಮಕ್ಕಳು ಬತ್ತದ ಅರಳುಗಳಿಂದ ಮಾಡುವ ಹೋಮ
ಲೇಹ್ಯ–ನೆಕ್ಕುವ ಪದಾರ್ಥ

ವ,

ವಕ್ತ್ರ–ಮುಖ
ವಜೀರ–ಆಡಳಿತದ ಮುಖ್ಯಸ್ಥ, ಪ್ರಧಾನ
ವಟ–ಆಲದ ಮರ
ವದನ–ಮುಖ
ವಳಯಾಕೃತ–ವರ್ತುಲಾಕಾರವಾದ
ವಾಂಛೆ–ಇಚ್ಛೆ, ಬಯಕೆ
ವಾಕು–ಮಾತು
ವಾಘೆ–ಕಡಿವಾಣ
ವಾರ್ಧಕ್ಯ–ಮುಪ್ಪು
ವಾಯು–ಗಾಳಿ
ವಾರಿ–ನೀರು
ವಿಕಸಿತ–ಅರಳಿದ
ವಿದ್ರುಮ–ಹವಳ
ವೇದಿಸು–ಪ್ರಕಟವಾಗು
ವೈಕೃತ–ವಿಕೃತ
ವ್ಯಯ–ಖರ್ಚು, ಸವೆ, ಕ್ಷೀಣವಾಗು
ವ್ಯಾಘ್ರ–ಹುಲಿ
ವ್ಯೋಮ–ಆಕಾಶ

ಶ, ಷ, ಸ,

ಶಂಖವಾಲ–ಸರ್ಪರಾಜ, ಕಾಳಿಂಗಸರ್ಪ
ಶಾಖೆ–ಟೊಂಗೆ
ಶಿರ–ತಲೆ
ಶಿಲೆ–ಕಲ್ಲು
ಶುಕ್ಲ–ವೀರ್ಯ, ಬಿಳಿರೇತಸ್ಸು
ಶೇಷ–ಉಳಿದುದು
ಶ್ರೋಣಿತ–ಕೆಂಪುರಕ್ತ, ಹೆಂಗಸಿನರಕ್ತ
ಶೌಚ–ಶುದ್ಧ, ಮಲರಹಿತ
ಶ್ವೇತ–ಬಿಳಿ
ಶ್ರೋತ್ರ–ಕಿವಿ
ಷಡ್ದಳ–ಆರುದಳ
ಷೋಡಶ–ಹದಿನಾರು
ಸಂಯುಕ್ತ–ಕೂಡಿದ, ಒಂದಾದ
ಸಪ್ತ–ಏಳು
ಸರಕನೆ–ಬೇಗನೆ, ಥಟ್ಟನೆ
ಸಹಸ್ರ–ಸಾವಿರ
ಸಾಧನದ್ರವ್ಯ–ಸಾಧನ ಸಾಮಗ್ರಿ
ಸುಕೃತ–ಪುಣ್ಯ
ಸುರಂಜನ–ಲೀಲೆ
ಸೂಹೃತಿ–ಒಳ್ಳೆಯ ಹೃದಯ
ಸೊಂಬರಿ–ಸೋಮಾರಿ, ಮಂದಮತಿ
ಸ್ವೇದಜ–ಬೆವರಿನಿಂದ ಹುಟ್ಟಿದ

ಹ,

ಹಡ್ತಮುಡ್ತಮಾಡಿ–ಮನಕ್ಕೆ ಬಂದಂತೆ ಬಾಯಿಮಾಡಿ
ಹತಿಗೊಂಡು–ಸತ್ತು
ಹಲ್ಲಣ–ಕುದುರೆಯ ಜೀನು, ಥಡಿ

ಹಸ್ತ–ಅಂಗೈ
ಹಾನ್ಯಾದ–ಹಾನಿಯಾದ, ನಷ್ಟಹೊಂದಿದ
ಹುಲ್ಲೆ–ಜಿಂಕೆ
ಹೆಡಕು–ಕುತ್ತಿಗೆ, ಭುಜ
ಹೆಡಗುಡಿಯ ಕಟ್ಟು–ಹೆಡಮುರಿಗೆ ಕಟ್ಟು
ಹೇತು–ಕಾರಣ
ಹೊಯ್ತು–ಬಡಿತ
ಹೋರು–ಕಾದಾಡು
ಹೃತ್ಕೋಟೆ–ಹೃದಯ ಕವಾಟ

■■

# ಆಕರ ಗ್ರಂಥಗಳು


**ಅದ್ವೈತಾನಂದದ ವಚನಗಳು**
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೩ (ಪ್ರ. ಆ)

**ಚಿದೈಶ್ವರ್ಯ ಚಿದಾಭರಣ-ಗುರುಸಿದ್ಧದೇವ**
ಸಂ: ಪಿ. ಎಂ. ಗಿರಿರಾಜು
ಪ್ರ: ಶರಣಸಂತಾನ ಪ್ರಕಾಶನ, ಮೈಸೂರು
೧೯೮೫ (ಪ್ರ. ಆ)

**ಜ್ಞಾನಷಟ್‌ಸ್ಥಲಸಾರ-ಗುರುಶಂಕರಸ್ವಾಮಿಗಳು**
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೨ (ಪ್ರ. ಆ)

**ಬಾಲಸಂಗಯ್ಯನ ವಚನಗಳು-ಬಾಲಸಂಗಯ್ಯ**
ಸಂ: ಡಾ. ಎಂ. ಎಸ್. ಸುಂಕಾಪುರ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೬ (ಪ್ರ. ಆ)

**ಭಿಕ್ಷದ ಸಂಗಯ್ಯನ ವಚನಗಳು-ಭಿಕ್ಷದ ಸಂಗಯ್ಯ**
ಹೇಮಕೂಟ (ಪತ್ರಿಕೆ) ೧-೧೦, (೧೯೭೬)
ಕೊಟ್ಟೂರೇಶ್ವರಮಠ, ಹೊಸಪೇಟೆ
ಮತ್ತು
ಕ.ವಿ.ವಿ. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ

**ಮುದ್ವೀರಸ್ವಾಮಿಯ ಶಾಂಭವಿನಿರ್ಣಯದ ವಚನ-ಮುದ್ವೀರಸ್ವಾಮಿ**
(ಇದು 'ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು'-
ಈ ಕೃತಿಯ ಒಂದು ಭಾಗ)
ಸಂ: ಡಾ. ವೀರಣ್ಣ ರಾಜೂರ
ಪ್ರ. ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೬ (ಪ್ರ. ಆ)

ವೇದಸಂಜೀವಿನಿ-ಮುಮ್ಮಡಿ ಕಾರ್ಯೇಂದ್ರ
ಸಂ: ಮೈಸೂರು ಹೊಸಮಠದ ಚರಮೂರ್ತಿ ಶ್ರೀಬಸವಲಿಂಗಸ್ವಾಮಿಗಳು
ಮು: ಜಿಟಿಎ ಪ್ರೆಸ್, ಮೈಸೂರು
೧೯೦೯ (ಪ್ರ. ಆ.)

ಶಿಖಾರತ್ನ ಪ್ರಕಾಶವು-ಕೂಡಲಸಂಗಮಾವಧೂತ
ಮು: ಬಳ್ಳಾರಿಯ ಚಿತ್ರಲಿಪಿ ಶಾರದಾ ಮುದ್ರಾಕ್ಷರ ಶಾಲೆ
೧೮೮೩ (ಪ್ರ. ಆ.)

ಸಕಲಾಗಮ ಶಿಖಾಮಣಿ-ಅಪ್ರಮಾಣದೇವ
ಕವಿವಿ. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ
ಬೆಂಗಳೂರ ವಿಶ್ವವಿದ್ಯಾಲಯದ ಹಸ್ತಪ್ರತಿ
ಗುಲಬರ್ಗಾ ವಿಶ್ವವಿದ್ಯಾಲಯದ ಹಸ್ತಪ್ರತಿ

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6